

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದು-ವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



**Thanks Anima shree**

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ
ಪ್ರಧಾನ ಸಂಪಾದಕ
ಡಾ.ಬಿ.ಎಸ್. ಪ್ರಣತಾರ್ತಿಹರನ್



# ಸಂಕೇತಿ : ಅಭಿನಂದನ

**ಸಂಪಾದಕರು**
**ಪೂಮಗಾಮೆ ಗೋಪಿ**

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು

sanketi E-lib-3 Web : 6-6-2018

## SANKETI : ABHINANDANA

*Editor*
**Poomagame Gopi (S. Nagesh)**
Government Arts College
Hassan - 573 201

*Published by*
**Samudaya Adhyayana Kendra Charitable Trust (R.)**
3059, 4th 'A' Cross, Gokulam Park Road
Gokulam, Mysore - 570 002

Pages: xxviii + 388 + colour pages 32
First Edition: 2005

Price: Rs.500/-

## *ಸಂಕೇತಿ: ಅಭಿನಂದನ*

*ಸಂಪಾದಕ*
**ಪೂಮಗಾಮೆ ಗೋಪಿ (ಎಸ್.ನಾಗೇಶ್)**
*ಸರ್ಕಾರಿ ಕಲಾ ಕಾಲೇಜು*
*ಹಾಸನ - ೫೭೩ ೨೦೧*

*ಪ್ರಕಾಶಕರು*
**ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)**
*೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ,*
*ಗೋಕುಲಂ, ಮೈಸೂರು - ೫೭೦ ೦೦೨*

ಪುಟಗಳು : xxviii + 388 + ಬಣ್ಣದ ಪುಟಗಳು 32
ಮುದ್ರಣ : ೨೦೦೫

ಬೆಲೆ ರೂ : ೫೦೦ /-

*ಡಿಟಿಪಿ : ಸರಸು ಗ್ರಾಫಿಕ್ಸ್, ಮೈಸೂರು.*

*ಮುದ್ರಕರು :*
ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
೧೧೭/೨, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮
ದೂರವಾಣಿ : ೨೬೬೧೩೧೨೩, ೨೬೬೧೮೭೫೨

***ಸಂಕೇತಿ ಅಧ್ಯಯನ ಯೋಜನೆ***
***ಸಂಪುಟ - ೩***

# ಅರ್ಪಣೆ

ಶ್ರೀಮತಿ ಗಂಗಮ್ಮ

ಹಾಗೂ

ವಿದ್ವಾನ್ ಶ್ರೀ ಕೆ.ಜಿ. ಸುಬ್ರಹ್ಮಣ್ಯ ಶಾಸ್ತ್ರೀ

ಅವರ ದಿವ್ಯಸ್ಮರಣೆಗೆ

# ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ ' ಎಂದು ಕರೆಯಲಾಗಿದೆ. ಅಮೆರಿಕದಲ್ಲಿ ನೆಲೆಸಿರುವ **ಡಾ.ಆರ್.ಎಸ್.ಚಂದ್ರಶೇಖರಮೂರ್ತಿ** ಅವರು ಅಧ್ಯಕ್ಷರಾಗಿ ಹಾಗೂ **ಶ್ರೀ ನಟೇಶ್ ಮಗ್ಗೆ** ಅವರು ನಿರ್ದೇಶಕರಾಗಿ ಈ ಯೋಜನೆಯನ್ನು ಮುನ್ನಡೆಸುತ್ತಿದ್ದಾರೆ. ಅವರಿಗೂ, ಪ್ರಕಟಣ ಸಮಿತಿಯ ಇತರ ಸದಸ್ಯರಿಗೂ, ಗ್ರಂಥಕರ್ತರಿಗೂ, ಸಂಬಂಧಿಸಿದ ಸಮಸ್ತರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ 'ದ ಸಂಪುಟಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ, ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

* * *

ಇದೀಗ ಓದುಗರ ಮುಂದಿರುವುದು ಈಗಾಗಲೇ ಸಾರ್ವಜನಿಕರು ಕೆಲ ಗಣ್ಯರಿಗೆ ಸಮರ್ಪಿಸಿರುವ ಅಭಿನಂದನ ಗ್ರಂಥಗಳ ಸಂಕಲನ. ಅವನ್ನು ಸಿದ್ಧಪಡಿಸಿದ, ಮತ್ತೆ ಬಳಸಿಕೊಳ್ಳಲು ಕೇಂದ್ರಕ್ಕೆ ಅನುಮತಿ ಇತ್ತ ಎಲ್ಲ ಸಹೃದಯರಿಗೆ ವಂದನೆಗಳು.

ಜಗತ್ತಿನಲ್ಲಿ ಸಜ್ಜನರಿದ್ದಾರೆ ; ಸಮಾಜಕ್ಕಾಗಿ ತಮ್ಮ ಬದುಕನ್ನು ಮೀಸಲಿಟ್ಟವರಿದ್ದಾರೆ ; 'ಸಂತೋಷಂ ಜನಯೇತ್ ಪ್ರಾಜ್ಞಃ ' ಎಂಬ ಸದಾಶಯವನ್ನು ಸಾಕಾರಗೊಳಿಸುತ್ತಿರುವವರೂ ಇದ್ದಾರೆ. ಅವರೆಲ್ಲ ಹೀಗೆ ಬಾಳಿಯೇ ಬದುಕಿಗೆ ಅರ್ಥ ತುಂಬಿದ್ದಾರೆ ; ಅವರಲ್ಲಿ ಅನೇಕರು ಅತಿಗಣ್ಯರಾಗಿಯೂ ಪ್ರಕಾಶಿಸಿದ್ದಾರೆ.

ಗುಣಗ್ರಹಣ ಮಾಡುವ ಸಜ್ಜನರೂ ಜಗತ್ತಿನಲ್ಲಿದ್ದಾರೆ ; ಅವರಲ್ಲಿ ಅನೇಕರು ಗುಣೈಕಗ್ರಾಹಿಗಳೇ ಆಗಿದ್ದಾರೆ; ಅಂಥವರಲ್ಲಿ ಕೆಲವರಾದರೂ ತಮಗಾದ ಸಂತೋಷವನ್ನು, ತಮ್ಮ ಮೆಚ್ಚುಗೆಯನ್ನು, ಕೃತಜ್ಞತೆಯನ್ನು ಆಡಿ ತೋಡಿಕೊಳ್ಳುತ್ತಾರೆ ; ಅವರ ಪೈಕಿ ಕೆಲವರಿಗಾದರೂ ಅದನ್ನು ಬರಹಕ್ಕೆ ಇಳಿಸಿದಲ್ಲದೆ ನಿರಾಳವಾಗುವುದಿಲ್ಲ; ಅಪೂರ್ವ ಸಂದರ್ಭಗಳಲ್ಲಿ, ಅಲ್ಪಸಂಖ್ಯಾತರಾದ *ಈ* ರಸಜ್ಞರು ಮತ್ತು ಕೃತಜ್ಞರು ಸಮಾರಂಭವನ್ನೇರ್ಪಡಿಸಿ ಹಿರಿಯ ಸಾಧಕರನ್ನು ಹಾಡಿ, ಹೊಗಳಿ, ಅಭಿನಂದನ ಗ್ರಂಥಗಳನ್ನೂ ಅರ್ಪಿಸಿ ಸಮಾಧಾನ ತಾಳುತ್ತಾರೆ.

'ಅಭಿನಂದನ ' ಎಂದರೆ ಕೊಂಡಾಟ, ಪ್ರಶಂಸೆ, ಗೌರವ ತೋರಿಸುವುದು, ಸಂತೋಷ ಸೂಚನೆ, laudation, congratulation, felicitation. Felicitation ಎಂದರೆ 'an expression of good wishes'. ಅದರ ಮೂಲದ felicity ಎಂದರೆ happiness, delight, a blessing, a happy event, elegance or aptness of wording or expression. ಇಂಥ 'ಅಭಿನಂದನ ' ಸಾಹಿತ್ಯವು ಕನ್ನಡದಲ್ಲಿ ವಿಪುಲವಾಗಿ, ವಿಶಿಷ್ಟವಾಗಿ ಬೆಳೆದಿದೆ. ದೇ.ಜ.ಗೌ. ಅವರು 'ಗಂಗೋತ್ರಿ'ಯ (೧೯೭೦) ಸಂಪಾದಕೀಯದಲ್ಲಿ ಹೇಳಿರುವ ಮಾತನ್ನು ಇಲ್ಲಿ ಉಲ್ಲೇಖಿಸಬಹುದು, "ಅಭಿನಂದನ ಸಾಹಿತ್ಯ ಕನ್ನಡದ ವಿಶಿಷ್ಟ ರೂಪವೆಂದೇ ಹೇಳಬಹುದು. ಅದು ಹೊರಗಡೆಯಿಂದ ಆಮದಾದುದಲ್ಲ. ಇಂಡಿಯಾ ದೇಶದ ಯಾವ ಭಾಷೆಯಲ್ಲಿಯೂ ಅದು ಇಷ್ಟು ಸಮೃದ್ಧವಾಗಿ ಬೆಳೆದಿಲ್ಲ. ಒಂದು ಭಾಷೆಯ ಜನ ತನ್ನ ಸಾಹಿತಿಗಳ ಶಕ್ತಿ-ಸಾಮರ್ಥ್ಯ, ಸಾಧನೆ-ಸಿದ್ಧಿಗಳನ್ನು ಮೆಚ್ಚುವ, ಗೌರವಿಸುವ ವಿಧಾನವಿದು. ಒಬ್ಬ ಸಾಹಿತಿ ದೇಶದ ಅಮೂಲ್ಯ ಆಸ್ತಿ, ಸಂಸ್ಕೃತಿಯ ಕಣ್ಣು, ಸಮಾಜದ ತಲೆ, ರಾಷ್ಟ್ರದ ಅಗ್ರನಾಯಕ ಎಂಬ ಭಾವನೆ ಅಭಿನಂದನ ವಿಧಾನದಲ್ಲಿ ವ್ಯಕ್ತಗೊಳ್ಳುತ್ತದೆ. ಇದು ಜನ ತಮ್ಮ ಹೆಮ್ಮೆಯ ಕವಿಗೆ ತೋರುವ ಕೃತಜ್ಞತೆ". *ಈ* ಮಾತುಗಳಲ್ಲಿನ ಸದಾಶಯವು ಎಲ್ಲ ರೀತಿಯ ಅಭಿನಂದಿತರಿಗೂ ಸಲ್ಲುತ್ತದೆ. ದೇಜಗೌ ಅವರೇ ಮುಂದುವರಿದು ಹೇಳಿರುವ ಮಾತು ಇದು : "ಸಾಮಾನ್ಯವಾಗಿ *ಈ* ಗೌರವ ಕವಿಗಣಕ್ಕೆ ಮೀಸಲಾದದ್ದು. ಆಗೊಮ್ಮೆ, *ಈ*ಗೊಮ್ಮೆ ಸಾಹಿತ್ಯೇತರ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ನಾಡಿನ ಹಿರಿಯರಿಗೂ ಇಂಥ ಗೌರವ ಸಂದದ್ದುಂಟು. ಏನೇ ಆಗಲಿ ಜನತೆಯ ಕಲಾಭಿರುಚಿ, ಸಂಸ್ಕೃತಿಯ ಪ್ರಜ್ಞೆ ಮತ್ತು ಉದಾರಾಕಾಂಕ್ಷೆ ಇದರಿಂದ ವ್ಯಕ್ತವಾಗುತ್ತದೆ. "

ಹೀಗೆ ಜನಮನ್ನಣೆಗೆ ಒಳಗಾಗುವವರು ಅಪರೂಪದ ಸಾಧಕರೇ ಸರಿ. *ಈ* ಸಂಕಲನದಲ್ಲಿ ಅಭಿನಂದಿತರಾದ ಆರು ಹಿರಿಯರೂ ಸಾಹಿತ್ಯೇತರ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದವರೇ ಆಗಿದ್ದಾರೆ. ಅವರಲ್ಲಿ ಪ್ರವಚನ ಚಕ್ರವರ್ತಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ಜನ್ಮಶತಮಾನೋತ್ಸವದ ಸಂದರ್ಭಕ್ಕೆ ಸರಿಯಾಗಿ *ಈ* ಅಭಿನಂದನಗ್ರಂಥ ಹೊರಬರುತ್ತಿರುವುದು ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ.

"ಕನ್ನಡದ ಜನ ಅಭಿಮಾನ ಕೃಪಣರು ಅಂತ ಒಂದು ಕಾಲಕ್ಕೆ ಗಾಢವಾಗಿ ಅನ್ನಿಸಿದ್ದ ನನಗೆ *ಈ* ಅನ್ನಿಸಿಕೆ ಕ್ರಮೇಣ ಇಲ್ಲವಾಗುತ್ತಿದೆ. ಒಂದು ಧ್ಯೇಯ ಸಾಧನೆಗೆ ತನ್ನ ಬದುಕನ್ನು ಪಣವಾಗಿಟ್ಟ ವ್ಯಕ್ತಿಯ ಬಗ್ಗೆ ನಮ್ಮ ಜನ ಎಷ್ಟು ಉದಾತ್ತವಾಗಿಯೂ ನಡೆದುಕೊಳ್ಳಬಲ್ಲರೆಂಬುದಕ್ಕೆ *ಈ* 'ಅಂತಃಕರಣ'ವೇ ಸಾಕ್ಷಿ". ಶ್ರೀಕೃಷ್ಣ ಆಲನಹಳ್ಳಿ ಅವರ (ಸಂಪಾದಕರು: 'ಅಂತಃಕರಣ': ದೇಜಗೌ ಅಭಿನಂದನ ಗ್ರಂಥ) *ಈ* ಮಾತನ್ನು ಪುಷ್ಟೀಕರಿಸುವಂತೆ ಐದು ಅಭಿನಂದನ ಗ್ರಂಥಗಳು ಇಲ್ಲಿವೆ.

ಸಂಕೇತಿ ಅಧ್ಯಯನ ಯೋಜನೆಯ ಉದ್ದೇಶಗಳಲ್ಲಿ ಮಾಹಿತಿಯ ಕ್ರೋಡೀಕರಣವೂ ಒಂದು. ಸಂಕೇತಿ ಅಧ್ಯಯನಕ್ಕೆ ಆಧಾರ ಪಾಠ್ಯಗಳನ್ನು ಒದಗಿಸುವುದು ಅದರ ಪ್ರಮುಖ ಗುರಿ. ಹಾಗಾಗಿ, ಮೂಲ ಅಭಿನಂದನ ಗ್ರಂಥಗಳಲ್ಲಿದ್ದ ಲೇಖನಗಳ ಪೈಕಿ, ವ್ಯಕ್ತಿ ಮತ್ತು ಸಾಧನೆಗಳಿಗೆ ಸಂಬಂಧಿಸಿದವನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಆಸಕ್ತರ ಅವಗಾಹನೆಗಾಗಿ ಮೂಲಗ್ರಂಥಗಳ ಪರಿವಿಡಿಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಬಿಡಿಬಿಡಿಯಾಗಿ ಪ್ರಕಟವಾಗಿದ್ದ ಅಭಿನಂದನಗ್ರಂಥಗಳು ಆಯಾ ಮಹನೀಯರನ್ನು ಕುರಿತಂತೆ ಅಂದಂದಿನವರೆಗಿನ ಸಾಧನೆಸಿದ್ಧಿಗಳನ್ನು ಒಳಗೊಂಡಿದ್ದುವವೆಂಬುದು ಸಹಜವೇ. *ಈ* ಮಹಾಸಂಪುಟದಲ್ಲಿ ತರುವಾಯದ ವರ್ಷಗಳಲ್ಲಿ ಆ ಮಹನೀಯರು ಗೈದ ವಿಶಿಷ್ಟ ಸಾಧನೆಗಳನ್ನು

ಜೋಡಿಸಿಕೊಡುವ ಸಾರ್ಥಕ ಯತ್ನವೊಂದನ್ನು ಮಾಡಲಾಗಿದೆ. ಅನುಬಂಧವು ವೈವಿಧ್ಯಪೂರ್ಣವಾದ ಪೂರಕ ಮಾಹಿತಿಯನ್ನೊಳಗೊಂಡಿದ್ದು, ಆ ಮೂಲಕ ಪಾಠ್ಯಭಾಗವು ಹೆಚ್ಚು ಅರ್ಥಪೂರ್ಣವಾಗಿದೆ. ಇಲ್ಲಿ ವರ್ತಮಾನ, ಪ್ರಶಸ್ತಿ, ಅಭಿಪ್ರಾಯ ಇಂಥ ಭಾಗಗಳು ಕೇವಲ ಪ್ರಾತಿನಿಧಿಕವಾಗಿ ಬಂದಿವೆ. ಒಂದು ವಸ್ತುಸ್ಥಿತಿಯ ಸ್ವರೂಪದರ್ಶನವಷ್ಟೇ ಅವುಗಳ ಉದ್ದೇಶವೂ ಆಗಿದೆ.

*ಈ* ಮಾದರಿಯ ವ್ಯಕ್ತಿ-ಪರಿಚಯ ಲೇಖನಗಳ ಸಂಗ್ರಹಗಳ ಬಗೆಗೆ ಏಳಬಹುದಾದ ಆಕ್ಷೇಪವೆಂದರೆ ಪುನರಾವರ್ತನೆ, ಜಾಳುತನ, ಏಕತಾನತೆ, ಉತ್ಪ್ರೇಕ್ಷೆ-ಇಂಥವು. ಅನುಭವವು (ಮೌನವು) ಮಾತಿಗೆ ಇಳಿದಾಗಲೋ ಮಾತು ಬರಹವಾದಾಗಲೋ ಅದು ಉತ್ಪ್ರೇಕ್ಷೆಯಾಗುತ್ತದೆ, ಅದನ್ನು ಮೀರಿದ ವಿ(ಶೇಷ)ಕೃತಿಯೂ ಆಗುತ್ತದೆ. 'ಗಂಭೀರ ' ಎಂದು ಉದ್ದೇಶಿಸಿದ ವಿಮರ್ಶಾತ್ಮಕ ಸಾಹಿತ್ಯಕ್ಕೂ *ಈ* 'ದೋಷ ' ತಪ್ಪಿದ್ದಲ್ಲ. ಆದರೆ ತಮ್ಮ ಸಂತೋಷ, ಹಿಗ್ಗು, ಸಂಭ್ರಮ, ಕೃತಜ್ಞತೆ, ಮೆಚ್ಚುಗೆಯನ್ನು ಸ್ವಚ್ಛಂದವಾಗಿ ತೋಡಿಕೊಂಡು ಕೃತಾರ್ಥರಾಗುವ - ಆ ಮೂಲಕ ಒಳ್ಳೆಯದನ್ನು ಆರಾಧಿಸುವ ಮತ್ತು ಅದನ್ನು ಮುಂದಿನ ಪೀಳಿಗೆಗೆ ಸ್ಫೂರ್ತಿಯ ಆಕರವಾಗಿ ಮಾಡಿಕೊಳ್ಳುವ ಉದ್ದೇಶದಿಂದಲೇ ಹೊರಟವರಿಗೆ *ಈ* 'ದೋಷ 'ವೇ ಗುಣವಾಗುತ್ತದೆ. ಅವರವರ ಮನದಂತೆ ದೃಷ್ಟಿಯೂ ಬೇರೆ . ಅಂತೆಯೇ ಒಂದೇ ಸದ್ಗುಣವನ್ನು ಹತ್ತು ಮಂದಿ ಹಲವು ರೀತಿ ಸ್ವಯಂಪ್ರೇರಣೆಯಿಂದ ಸ್ತುತಿಸುತ್ತಾರೆಂದರೆ ಅದಕ್ಕೊಂದು ಗುರುತ್ವವೂ ಲಭ್ಯವಾದಂತೆಯೇ. ಕೇವಲ ಪರೀಕ್ಷಕದೃಷ್ಟಿಯಿಂದ ಹೊರಗಿನವರಾಗಿ ನೋಡುವವರಿಗೆ ಯಾವುದು ಏಕತಾನವೋ, ಸಹಜ ಸಹೃದಯನಿಗೆ ಅದೇ ಧ್ಯಾನಯೋಗದ ಮಾಧ್ಯಮವಾಗುತ್ತದೆ; ಪುನರಾವರ್ತನೆಯೇ ಆತನಿಗೆ ಪೋಷಣೆ ನೀಡುತ್ತದೆ.

ಇಲ್ಲಿ ರೂಪಿತವಾಗಿರುವುದು ಜೀವನ ಚರಿತ್ರೆಯಲ್ಲ, ಬದಲಿಗೆ ಬಾಳಿನ ಆಶಯಚಿತ್ರ. ಇಲ್ಲಿ ಬದುಕಿನ ಪೂರ್ಣವಿವರವಿಲ್ಲ; ಬದಲಿಗೆ ಒಂದು ಬಾಳಿನ ಒಂದೋ ಹಲವೋ ಆದರ್ಶಗಳ ಗುಣಗಾನವಿದೆ ; ಅದು ಸಂಭ್ರಮ, ಉಲ್ಲಾಸ, ಕೊನೆಗೆ ಆರಾಧನೆಯ ಪ್ರಭಾವಲಯವನ್ನು ಒಡಮೂಡಿಸಿಕೊಂಡಿದೆ. ಇಲ್ಲಿರುವುದು ದತ್ತಾಂಶಗಳ ವೈಭವವಲ್ಲ, ಒಂದೇ ಗುರಿಗಾಗಿ ಮಾಡಿದ ತಪಸ್ಸಿನ ಪ್ರಭಾವಲಯ.

ಇಲ್ಲಿ ಅಭಿನಂದಿತರಾದವರಲ್ಲಿ ಪುರೋಹಿತರಿದ್ದಾರೆ, ಸಮಾಜಸೇವಕರಿದ್ದಾರೆ, ಕಲಾವಿದರಿದ್ದಾರೆ; ವೈದಿಕರೂ ಕೈಗಾರಿಕೋದ್ಯಮಿಗಳೂ ಅಧ್ಯಾಪಕರೂ ಸಂಘಟಕರೂ ಕೃಷಿಕರೂ ಅವರಲ್ಲಿ ಸೇರಿದ್ದಾರೆ; ಕಲಾರಾಧನೆಗಾಗಿ ತಮ್ಮ ಧನ ಕನಕವನ್ನು ಸೂರೆ ಮಾಡಿದವರು, ಪ್ರಯೋಗಶೀಲರು, ಬಹುಮುಖ ಪ್ರತಿಭಾಸಂಪನ್ನರು, ತ್ಯಾಗಶೀಲರು, ಸಾಮಾಜಿಕ ಕಳಕಳಿ ಉಳ್ಳವರು, ಸರಳರು, ಬಹುಜನಪ್ರಿಯರು, ದಾನಿಗಳು, ಸೇವಾವ್ರತಿಗಳು, ಲೋಕ ಹಿತಚಿಂತಕರು, ಸಾಹಸಿಗಳು, ಸಾಹಿತಿಗಳು ಇಲ್ಲಿ ಅನಾವರಣಗೊಂಡಿದ್ದಾರೆ. ಹೀಗೆ ಅನಾವರಣ ಮಾಡಿರುವವರಾದರೂ ಕರ್ನಾಟಕದ ಉದ್ದಗಲಕ್ಕೆ ಹರಡಿದ ಕನ್ನಡ ಬಂಧುಗಳು, ಸಜ್ಜನರು.

ಮೇಲುನೋಟಕ್ಕೆ ಇದು ಕೇವಲ ಸಿದ್ಧಗ್ರಂಥಗಳ ಸಂಚಯದಂತೆ ಕಂಡರೂ ಸ್ವರೂಪದಲ್ಲೂ, ವಿವರದಲ್ಲೂ, ಪರಿಣಾಮ ಮತ್ತು ಪ್ರಯೋಜನದಲ್ಲೂ *ಈ* ಸಂಪುಟಕ್ಕೊಂದು ಸ್ವತಂತ್ರ ಅಸ್ತಿತ್ವವಿದೆ; ಅದನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಮೂಲಗ್ರಂಥಗಳ ಸಂಪಾದಕರೂ, ಅಭಿನಂದಿತರೂ, ಲೇಖಕರೂ ಅವರ ಇಷ್ಟಮಿತ್ರರೂ, ಬಂಧುಗಳೂ, ಪುಸ್ತಕ ಪೋಷಕರೂ ನಮಗೆ ಸಹಕಾರ ನೀಡಿದ್ದಾರೆ. ಸಂಪಾದಕರಾದ ಪೂಮಗಾಮೆ ಗೋಪಿ ಅವರ ಶ್ರದ್ಧಾಪೂರ್ಣ ಪರಿಶ್ರಮದಿಂದ ಆಕರ ಸಾಮಗ್ರಿಯೂ ಆಗುವಂತೆ ಪ್ರಕೃತ ಸಂಪುಟವು ಪ್ರಕಾಶಗೊಳ್ಳುತ್ತಿದೆ. ಸಂಬಂಧಿಸಿದ ಎಲ್ಲರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

*ಮಕರ ಸಂಕ್ರಾಂತಿ* *ಪ್ರಣತಾರ್ತಿಹರನ್*

*೧೪ ಜನವರಿ, ೨೦೦೫*

# ಓದಿದ ಮೇಲೆ

ತಮ್ಮ ತಮ್ಮ ಸಾಧನ ಕ್ಷೇತ್ರದಲ್ಲಿ ಅಪ್ರತಿಮ ಹಂತವನ್ನು ತಲುಪಿ ಮಾಗಿದ ವ್ಯಕ್ತಿಗಳು ಜನಮಾನಸದಿಂದ ಮರೆಯಾಗಿ ಹೋದವರೆಷ್ಟೋ. ಅವರು ಪಟ್ಟ ಶ್ರಮ, ಗಳಿಸಿದ ಪರಾಕಾಷ್ಠತೆಗಳೂ ಅವರೊಂದಿಗೆ ಅವರ ಹಾದಿಯನ್ನೇ ಹಿಡಿದವಲ್ಲ? ಕಾವ್ಯ, ಸಾಹಿತ್ಯ ಮತ್ತು ಬಾಳಿಕೆ ಬರಬಲ್ಲ ಕಲಾ ಪ್ರಕಾರಗಳಲ್ಲಿ ಶ್ರಮಿಸಿದವರು ತಮ್ಮ ಪರಿಚಯವನ್ನು ಅಷ್ಟಿಷ್ಟು ಉಳಿಸಿ ಹೋಗುತ್ತಾರೇನೋ. ಹಾಗೆ ಪುರಾವೆ ಉಳಿಸದೆ ತಮ್ಮ ಸಮಕಾಲೀನ ಪ್ರಪಂಚದಲ್ಲಿ ಚೈತನ್ಯಶೀಲರಾಗಿ ಅಪಾರ ಜನಮನ್ನಣೆಗೂ ಪಾತ್ರರಾದವರು ತಮ್ಮ ನಿರ್ಗಮನದನಂತರ ಪ್ರಸ್ತುತರಾಗಿ ಉಳಿಯುದಿರುವುದು ಕಾಲದ ಅಣಕಿಸುವಿಕೆಯೇ ಸರಿ. ಅವರ ಸಮಕಾಲೀನರಿಗೆ, ಹೆಚ್ಚೆಂದರೆ ಅವರ ಕಿರಿಯ ತಲೆಮಾರಿನವರಿಗೆ ಅವರ ಸಾಧನಾಶ್ರೀಯ ಪ್ರಭಾವವೂ ಮುಂದೆ ಮಸುಕಾದ ನೆನಪಿನ ಭಾಗವಾದೀತು, ಕ್ರಮೇಣ ಅಳಿಸಿಯೂ ಹೋದೀತು.

ಅಂತಹ ಹಲವಾರು ದಿಗ್‌ದಂತಿಗಳ ಸಾಧನಾ ವೃತ್ತಾಂತವು ಸಮುದಾಯದ ನೆನಪಿನಿಂದ ಹಾರಿಹೋಗುವ ಅಥವಾ ಆರಿಹೋಗುವ ಮುನ್ನ ಅದನ್ನು ದಾಖಲಿಸಿಡುವ ಒಂದು ಶ್ಲಾಘನೀಯ ಯತ್ನವನ್ನು ಈ 'ಸಂಕೇತಿ: ಅಭಿನಂದನ 'ದಲ್ಲಿ ಕಾಣಬಹುದು. ಮುಂದಿನ ಪೀಳಿಗೆಯವರಿಗೆ ತಮ್ಮ ಹಿರಿಯರ ಸಾಧನೆಯ ಪರಿಚಯ ಇದರಿಂದಲಾದರೂ ಮುಂದೊಮ್ಮೆ ಆದೀತೆಂಬ ಕಳಕಳಿಯೇ ಈ ಗ್ರಂಥಸರಣಿಯ ಮೂಲೋದ್ದೇಶವೆನಿಸುತ್ತದೆ. ಹಾಗಿದ್ದಲ್ಲಿ ಇದರ ಸಂಪಾದಕಮಂಡಳಿಯ ಶ್ರಮ ಸಾರ್ಥಕವಾಯಿತೆನ್ನಬಹುದು. ಈ ಜತನದ ದಾಖಲಿಸುವಿಕೆಯೂ ಆ ಹಿರಿಯರ ಕಾರ್ಯಸಿದ್ಧಿಯ ಮಟ್ಟಕ್ಕೇ ಏರಿ ನಿಲ್ಲಬಲ್ಲಂತಹ ಯತ್ನವೇ ಸರಿ. ಕಳೆದ ನೂರು ವರ್ಷಗಳಿಗಿಂತ ಹಿಂದಿನ ಹಿರಿಯರ ಸಾಮಾಜಿಕ ಕೊಡುಗೆ ಮತ್ತು ವೈಯಕ್ತಿಕ ಸಾಧನೆಗಳಿಗೆ ಈ ಸೌಲಭ್ಯ ಸಿಕ್ಕಲಿಲ್ಲವಲ್ಲಾ ಎಂಬುದು ಶಾಶ್ವತ ಕೊರಗಿನ ಸಂಗತಿಯಾಗುತ್ತದೆ. ಇತಿಹಾಸಪ್ರಜ್ಞೆಯ ಕೊರತೆಯೂ ಇದಕ್ಕೆ ಕಾರಣವಿರಬಹುದು. ಅದೇನಿದ್ದರೂ ಈಗ ಕೈಗೊಂಡ ಈ ಪ್ರಕಟಣ ಕ್ರಮ ಶ್ಲಾಘನೀಯವಾದುದು.

ಶ್ರೀ ಲಕ್ಷ್ಮೀಕೇಶವಶಾಸ್ತ್ರಿಯವರ 'ಪ್ರವಚನ ಚಕ್ರವರ್ತಿ ' ಅಭಿನಂದನ ಗ್ರಂಥವು ಅನ್ವರ್ಥವಾದುದು. ಅವರ ಪಾಂಡಿತ್ಯದ, ವಾಗ್ವಿಶೇಷದ ಕುರಿತು ಅದರಲ್ಲಿ ತಮ್ಮ ನೆನಪನ್ನು ಮಥನ ಮಾಡಿದ ಅಗ್ರಣಿ ಲೇಖಕರೆಲ್ಲಾ ಮುಂದಿನ ಪೀಳಿಗೆಗೆ "ಇಂತಹ ಒಬ್ಬ ವರ್ಣರಂಜಿತ ವಾಕ್ಪಟು ಸಂದುಹೋದ" ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ, ಚಿತ್ತಚಿತ್ರಣ ಮಾಡಿದ್ದಾರೆ. ಅವರ ಪ್ರವಚನ ಪ್ರವಾಹದ ಧ್ವನಿಸುರುಳಿಗಳೇನೋ ಬಿಡುಗಡೆಗೊಂಡು ಕೇಳುಗರಿಗೆ ಕರ್ಣಾನಂದಕರ, ವಿದ್ವದಾನಂದಕರ ಹಾಗೂ ದಿವ್ಯಾನಂದಕರವಾದವು.

ಅವರ ಭಾವಾಭಿನಯವೂ ಪ್ರವಚನ ಕಾಲದಲ್ಲಿ ನೋಟಕರ ಕಣ್ಣರಳಿಸಿ, ತಲೆದೂಗಿಸಿ, ಹೃನ್ಮನಗಳಿಗೆ ತಂಪೆರೆದು, ಕವಿಸಮಯಕ್ಕೆ ಒದಗಣೆಯಾಗಿ ಬಂದದ್ದನ್ನು (ಅವರ ಪ್ರವಚನ ದೃಶ್ಯಪಟುತ್ವವನ್ನು ನೋಡದ) ಭಾವೀ ಪೀಳಿಗೆಯವರಿಗಾಗಿ ದೃಶ್ಯ ಮುದ್ರಣವನ್ನು ಮಾಡಿದ್ದರೆ, ಇನ್ನಷ್ಟು ಸೊಗಡು ದೊರಕುತ್ತಿತ್ತೇನೋ ಎನಿಸುತ್ತದೆ. ಈ ಅಪ್ರತಿಮ ಕಥನ ವ್ಯಾಖ್ಯಾನ ಚತುರತೆಗೆ ಜನ್ಮಜಾತ ಸುಳಿವು ನೀಡಬಲ್ಲ ಅವರ ಜನ್ಮಕುಂಡಲಿಯೂ ಈ ಗ್ರಂಥದೊಳಿದ್ದಲ್ಲಿ ಅದು ಹೆಚ್ಚು ಪರಿಪೂರ್ಣವಾಗುತ್ತಿತ್ತೇನೋ ಎಂದು ಅನ್ನಿಸುತ್ತದೆ. ಶ್ರೀಯುತರ ವೈಯಕ್ತಿಕ ವಿಚಾರ ಲಹರಿಗಳ, ಆದ್ಯತೆಗಳ, ಜೀವನದ ಒಳನೋಟಗಳ ಚಿತ್ರಣ ನೀಡಬಲ್ಲ ಒಂದು ಸಂದರ್ಶನ ನಡೆಸಿ, ಪ್ರಶ್ನೋತ್ತರವಾಗಿಸಿದ್ದರೆ ಇನ್ನಷ್ಟು ಕಳೆಕಟ್ಟುತ್ತಿತ್ತೇನೋ.

ಶ್ರೀ ನರಸಿಂಹಮೂರ್ತಿಯವರ 'ನಿಗಮ ಕೌಮುದಿ ' ಅಭಿನಂದನಾ ಗ್ರಂಥವು ಒಂದು ಕಿರೀಟಗ್ರಂಥ. ವೈದಿಕ ಪರಂಪರೆಯ ನಿಷ್ಠ ಕರ್ಮಠನಾಗಿ ಬದುಕಿನ ಸಾರ್ಥಕತೆಯನ್ನು ಕಂಡುಂಡವರೊಬ್ಬರು, ಅಷ್ಟೇ ಉದಾರಶೀಲರಾಗಿಯೂ ಬದುಕನ್ನು ಮೌಲ್ಯಭರಿತವಾಗಿ

ಕಾಣಬಲ್ಲವರಿದ್ದರೆಂಬುದಕ್ಕೆ ಇದೊಂದು ನಿಜಗನ್ನಡಿ. *ಈ* ನಿಗರ್ವಿ ಸಾಧಕನ ಕುರಿತು ಅವರ ಸಂಸರ್ಗಕ್ಕೆ ಬಂದವರು ಲೇಖಿಸಿದ ಪ್ರಬಂಧಗಳೆಲ್ಲಾ *ಈ* ಅಂಶಕ್ಕೆ ಪುಷ್ಟಿಕೊಡುತ್ತವೆ. ಅವರೊಂದಿಗೆ ನಡೆಸಿದ ಸಂದರ್ಶನವು ಅವರ ವ್ಯಕ್ತಿತ್ವವನ್ನು ಮತ್ತಷ್ಟು ಹೊರಗೆಡಹುತ್ತದೆ.

'ಜ್ಯೋತಿಶ್ರೀ ' ಅಭಿನಂದನ ಗ್ರಂಥವು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರು ಅಲ್ಪಕಾಲದಲ್ಲಿ ವಿಶೇಷ ಸಾಧನೆ ಮಾಡಿದ ಪವಾಡದ ವರದಿಯಂತಿದೆ. ಶ್ರೀಯುತರು ಕ್ರಮಿಸುತ್ತಿರುವ ಸಾಧನಮಾರ್ಗವು ಇನ್ನೂ ಬಹಳ ಇರುವುದರಿಂದ ವಯೋಮಾನದಲ್ಲಿ ಇನ್ನೂ ಸಾಪೇಕ್ಷವಾಗಿ ಕಿರಿಯವರಾದ ಇವರ ಕುರಿತಾದ *ಈ* ಗ್ರಂಥವನ್ನು ಭಾಗ-೧ ಎಂದು ನಮೂದಿಸಿದ್ದರೆ ಹೆಚ್ಚು ಸೂಕ್ತವೆನಿಸುತ್ತಿತ್ತೆನಿಸುತ್ತದೆ. ಮುಂದಿನ ಭಾಗಗಳನ್ನು ಪ್ರತೀಕ್ಷೆ ಮಾಡುವ ಅವಕಾಶ ಹೆಚ್ಚುತ್ತಿತ್ತು. ಸ್ವತಃ ಶ್ರೀ ಬಿ.ಎನ್.ವಿ.ಯವರ ನಿಜ ಪಥಸಂಚಲನಕ್ಕೆ ಇನ್ನಷ್ಟು ಪುಷ್ಟಿ ದೊರಕುತ್ತಿತ್ತು.

ಶ್ರೀ ವೆಂಕಟಕೃಷ್ಣ ಅವಧಾನಿಯವರ ಅಭಿನಂದನ ಗ್ರಂಥವು 'ಶತಮಾನಂ ಭವತಿ' ಎಂಬ ಹಾರೈಕೆಯನ್ನೇ ತಲೆಬರಹವಾಗಿಸಿಕೊಂಡದ್ದು ವಿಶೇಷ. ಅದು ಹಾಗಾಗಬೇಕು ಕೂಡ ಎಂದು ಯಾರಿಗೂ ಅನ್ನಿಸದೇ ಇರುವುದಿಲ್ಲ. ಗಾತ್ರದಲ್ಲಿ ಚಿಕ್ಕದಾದರೂ *ಈ* ಗ್ರಂಥವು ಶ್ರೀಯುತರ ಜೀವನಶ್ರದ್ಧೆಗೆ ಕನ್ನಡಿ ಹಿಡಿಯುತ್ತದೆ.

'ತುಂಗ-ಭದ್ರ' ಎಂಬ ದ್ವಿ-ಸಮಾಸದ ಹೆಸರು ಹೊತ್ತ ಅಭಿನಂದನ ಗ್ರಂಥವು ಶ್ರೀ ಮಾರ್ಕಂಡೇಯ ಅವಧಾನಿಗಳನ್ನೂ ಶ್ರೀ ಎಚ್.ಆರ್. ಕೇಶವಮೂರ್ತಿಗಳನ್ನೂ ಯುಗಳವಾಗಿಯೇ ಕಂಡು ಅನ್ವರ್ಥವಾಗಿದೆ. ಒಬ್ಬರು ಕವಿಯ ಭಾಷೆಗೆ ಧ್ವನಿಯನ್ನಿತ್ತು ಮೋಹಜಾಲ ಬೀಸಿದರೆ, ಮತ್ತೊಬ್ಬರು ಕವಿಯ ಧ್ವನಿಗೆ ಅರ್ಥವಂತಿಕೆಯ ಬುದ್ಧಿಪಾಕವನ್ನು ಬಡಿಸಿದವರು. *ಈ* ದ್ವಂದ್ವಚಿತ್ರಣ ಅಪ್ರತಿಮವಾಗಿ ಮೂಡಿ ಬಂದಿದೆ.

*ಈ* ಎಲ್ಲಾ ಪುರುಷ ಶ್ರೇಷ್ಠರ ಅಭಿನಂದನೆಯ ಗ್ರಂಥಗಳಲ್ಲಿ ಅವರವರ ಕುಟುಂಬಜೀವನದ ಬೇರುಗಳನ್ನು ವಂಶವೃಕ್ಷ ಚಿತ್ರಣದ ಮೂಲಕ ಪರಿಚಯ ಮಾಡಲೆತ್ನಿಸಲಾಗಿದೆ. *ಈ*ವರೆಗೆ ಪ್ರಕಟಗೊಂಡ ಇಂತಹ ಕೆಲವೇ ಕೆಲವು ಗ್ರಂಥಗಳನ್ನೇ ಸಂಪುಟವಾಗಿಸುವ *ಈ* ಯತ್ನ ಮೆಚ್ಚುವಂತಹುದು. ಅಷ್ಟೇನು, ಇನ್ನುಳಿದ, ಇನ್ನೂ ಗ್ರಂಥರೂಪಕ್ಕೆ ಇಳಿಸಲಾಗದ ಹಿರಿಯ ಚೇತನಗಳ ಕುರಿತೂ ಗ್ರಂಥಜನನಕ್ಕೆ ಇದು ಒತ್ತಾಯದ ಕಾರಣವಾದೀತು. ಅಂತಹ ಪುರುಷ ಸಾಧಕರೊಂದಿಗೆ, ಸಮುದಾಯದ ಸ್ತ್ರೀ ಸಾಧಕಿಯರ ಅಭಿನಂದನ ಗ್ರಂಥವೂ ಹೊರಬಂದೀತು ಎಂದು ನಿರೀಕ್ಷಿಸಬಹುದೇನೋ.

'ಸಂಕೇತಿ ಅಧ್ಯಯನ ' ಸಂಪುಟ ೧ ಮತ್ತು ೨ ಕುರಿತು ಓದುಗರ ಮನಮುಟ್ಟಿದ ವಿಮರ್ಶೆಯು *ಈ* ಎಲ್ಲಾ ಸಂಪುಟಗಳ ಗುಣವಿಮರ್ಶೆಯಂತೆಯೇ ಇದೆ. ಅಷ್ಟೇನು, ಮುಂದಿನ ಸಂಪುಟಗಳ ಗುಣ-ಗಾತ್ರಗಳನ್ನು ಅವು ಮುಂಗಂಡಿದ್ದವೇ ಎಂದು ಸಂಶಯ ತಾಳಬೇಕಾಗುತ್ತದೆ.

*ಈ* ಎಲ್ಲಾ ಸಂಪುಟಗಳ ಸಂಪಾದನೆ ಮತ್ತು ಪ್ರಕಟಣೆಯಲ್ಲಿ ತೋರಿಸಿದ ಶ್ರದ್ಧೆ, ಒಪ್ಪ, ಓರಣ, ಮುಂದಿನ ಇಂತಹ ಪ್ರಕಟಣೆಗಳಿಗೆ ಮಾದರಿಯಾಗಬೇಕು ಎಂದು ಹಿಂಜರಿಯದೆ ಶಿಫಾರಸು ಮಾಡಬಹುದು. ಶ್ರೀ ಪ್ರಣತಾರ್ತಿಹರನ್ ಸಾರಥ್ಯದಲ್ಲಿ ಮುಂದಿನ ಸಂಪುಟಗಳ ಪ್ರಕಟಣೆಯ ಕುರಿತೂ ಆಸೆ ತಾಳುವಂತಾಗುತ್ತದೆ.

ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ
೧೪.೧.೨೦೦೫

**ಪ್ರೊ. ವಿ. ನರಹರಿ**
ಪ್ರಾಂಶುಪಾಲರು

# ಕೃತಜ್ಞತೆಗಳು

- ಮುನ್ನುಡಿಯನ್ನು ಬರೆದುಕೊಟ್ಟು ಹರಸಿರುವ ವಿದ್ವಾಂಸ, ಸಾಹಿತಿ, ಕಲಾವಿದರಾದ ಪ್ರೊ. ವಿ. ನರಹರಿ ಅವರಿಗೆ

- ಪುಸ್ತಕವನ್ನು ಅವಲೋಕಿಸಿ ಮಾರ್ಗದರ್ಶನ ನೀಡಿ ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟು ಹರಸಿರುವ ವಿದ್ವಾಂಸರೂ ಲೇಖಕರೂ ಆದ ಡಾ. ಕೆ. ಅನಂತರಾಮು ಅವರಿಗೆ

- ಹಿರಿದಾಗಿ ಬಾಳಿ ಅಭಿನಂದನೆಗೆ ಒಪ್ಪಿಗೆ ಕೊಟ್ಟ ವೇ. ಬ್ರ. ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳು,

  ವೇ. ಬ್ರ. ಶ್ರೀ ನರಸಿಂಹಮೂರ್ತಿ ಶಾಸ್ತ್ರಿಗಳು, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿಗಳು, ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು, ವೇ. ಬ್ರ. ಶ್ರೀ ಎಚ್.ಆರ್. ಕೇಶವ ಮೂರ್ತಿಗಳು ಮತ್ತು ಅವರ ಬಂಧುವರ್ಗದವರಿಗೆ

- ತಾವು ಸಂಪಾದಿಸಿದ ಕೃತಿಗಳನ್ನು ಬಳಸಿಕೊಳ್ಳಲು ಅನುಮತಿ ಇತ್ತು ಎಲ್ಲ ರೀತಿಯಲ್ಲೂ ಸಹಕರಿಸಿದ ಶ್ರೀಯುತರುಗಳಾದ ಎಚ್.ಆರ್.ಕೇಶವಮೂರ್ತಿ, ಎಲ್.ವಿ.ಸೀತಾರಾಂ, ಪ್ರೊ.ಎಚ್.ಎಸ್. ಲಕ್ಷ್ಮೀನಾರಾಯಣಭಟ್ಟ, ರಾಜಾರಾಮಮೂರ್ತಿ, ಅವರಿಗೆ

- ಎಲ್ಲ ಲೇಖಕ ಮಹನೀಯರಿಗೆ ; 'ಸಂಕೇತಿ ಸಂಗಮ ', 'ಸಂಕೇತಿ ವಾರ್ತಾ ', 'ಗಮಕ ಸಂಪದ ' ಪತ್ರಿಕೆಗಳಿಗೆ

- ಅಭಯಹಸ್ತ ನೀಡಿ ಸದಾ ಬೆಂಗಾವಲಾಗಿರುವ, ಆತ್ಮೀಯರಾದ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರಿಗೆ

- ಅಗತ್ಯವಾದ ಛಾಯಾಚಿತ್ರ ಮತ್ತಿತರ ಹೆಚ್ಚಿನ ಮಾಹಿತಿಗಳನ್ನೊದಗಿಸಿಕೊಟ್ಟ ಶ್ರೀಯುತರುಗಳಾದ

  ಪ್ರೊ. ಎಲ್.ಎಂ.ಎಲ್.ಶಾಸ್ತ್ರಿ, ಎಲ್.ಜಿ.ಅನಂತ್, ರಘುಪತಿ ಶಾಸ್ತ್ರಿ, ಚನ್ನಕೇಶವ ಶಾಸ್ತ್ರಿ, ಸತೀಶ್, ನರಸಿಂಹನ್, ಶ್ರೀನಿವಾಸಮೂರ್ತಿ, ಶಿವಸ್ವಾಮಿ, ಗೋಪಾಲಾವಧಾನಿ, ಪ್ರೊ. ಎಂ.ಎನ್. ಚಂದ್ರಶೇಖರ್ ಮತ್ತು ಮತ್ತೂರ್‌ಜೀ ಅವರಿಗೆ

- ವೇ. ಬ್ರ. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ಅಪರೂಪದ ಕೆಲವು ಛಾಯಾಚಿತ್ರಗಳನ್ನೂ ವರದಿಗಳನ್ನೂ ಒದಗಿಸಿಕೊಟ್ಟ ಶ್ರೀ ವೈ.ಕೆ. ಮೋಹನ್, ೨೪೯, 'ಜಾನಕಿ ', ೩ನೆ ಸಿ ಅಡ್ಡರಸ್ತೆ, ೨ನೇ ಬ್ಲಾಕ್, ೩ನೇ ಸ್ಟೇಜ್, ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯, ದೂ:೨೩೨೨೦೮೮೦ ಅವರಿಗೆ

- ಸಲಹೆ ಸೂಚನೆಗಳನ್ನಿತ್ತು - ಕರಡು ತಿದ್ದಿ ಕೊಟ್ಟು - ಮಾರ್ಗದರ್ಶನ ನೀಡಿದ ವೇ. ಬ್ರ. ಶ್ರೀ ಅಶ್ವತ್ಥನಾರಾಯಣ ಅವಧಾನಿ, ಡಾ. ಟಿ.ವಿ. ಸತ್ಯನಾರಾಯಣ, ವಿದ್ವಾನ್ ಎಚ್.ವಿ. ನಾಗರಾಜರಾವ್, ಡಾ.ಎ.ಎಸ್.ವೇಣುಗೋಪಾಲ ರಾವ್, ಪ್ರೊ. ದಕ್ಷಿಣಾಮೂರ್ತಿ, ಪ್ರೊ. ಎಲ್.ಎಂ.ಎಲ್.ಶಾಸ್ತ್ರಿ, ಶ್ರೀ ರಾಜಾರಾಮಮೂರ್ತಿ, ಶ್ರೀ ಬಿ.ವಿ.ವೆಂಕಟನಾರಾಯಣ, ಡಾ. ಎಂ.ಎಸ್.ವಿಜಯ, ಶ್ರೀ ಬಿ.ಕೆ.ವಿಶ್ವನಾಥರಾವ್, ಡಾ. ಬಿ.ಎಸ್. ನರಹರಿ ಮತ್ತು ಪ್ರೊ. ಎಂ.ಎನ್.ಚಂದ್ರಶೇಖರ್ ಅವರಿಗೆ

- ಗ್ರಂಥಗಳ ಬಗೆಗೆ ತಮ್ಮ ಅಮೂಲ್ಯ ಅಭಿಪ್ರಾಯ ತಿಳಿಸಿರುವ ಎಲ್ಲ ಸಹೃದಯ ಬಂಧುಗಳಿಗೆ ; ಸಹಕಾರವಿತ್ತ ಪ್ರೊ. ಸೋಮಶೇಖರ ದೇಸಾಯಿ, ಹಾಸನ ಮತ್ತು ಪ್ರೊ. ಕೆ.ವಿ. ಕೃಷ್ಣೇಗೌಡ, ಮಂಡ್ಯ ಅವರಿಗೆ

- ಸಹಕಾರ ಇತ್ತು ಸಹಕರಿಸಿದ, ಕಾಲೇಜು ಶಿಕ್ಷಣ ನಿರ್ದೇಶನಾಲಯದ ಆಯುಕ್ತರಾದ ಶ್ರೀಮತಿ ಜಯಂತಿ ಅವರು, ನಿರ್ದೇಶಕರಾದ ಪ್ರೊ. ಕೆ.ವಿ. ಕೋದಂಡರಾಮಯ್ಯ ಅವರು, ಹೆಚ್ಚುವರಿ ನಿರ್ದೇಶಕರಾದ ಪ್ರೊ. ಕಮಲಮ್ಮ ಅವರು, ಜಂಟಿ ನಿರ್ದೇಶಕರಾದ ಪ್ರೊ. ವಿ.ಬಿ. ಮಠದ್, ಡಾ. ಎನ್.ಎನ್. ಪುಟ್ಟಸ್ವಾಮಿ, ಪ್ರೊ. ಟಿ.ಹೆಚ್. *ಈ*ರಣ್ಣ ಹಾಗೂ ಪ್ರೊ. ಶ್ರೀಹರಿ ಅವರಿಗೆ ; ಹಾಸನದ ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಹೆಚ್.ಎನ್.ರೂಪರಾಜ್ ಚಂದನ್ ಅವರಿಗೆ ; ಕಾಲೇಜಿನ ಎಲ್ಲ ಸಹೋದ್ಯೋಗಿ ಮಿತ್ರರಿಗೆ.

  ಉದಾರವಾಗಿ ಧನಸಹಾಯ ಮಾಡಿ ಪುಸ್ತಕ ಬೆಳಕು ಕಾಣಲು ನೆರವಾದ ಶ್ರೀಮತಿ ಕೆ. ಕೆ.ವಿಜಯಲಕ್ಷ್ಮಿ, ಡಾ.ಆರ್.ಎಸ್.ಚಂದ್ರಶೇಖರಮೂರ್ತಿ (ಪ್ರಾಯೋಜಕರು); ಶ್ರೀಮತಿ ಎಚ್.ಎನ್. ಅನಸೂಯಮ್ಮ, ಶ್ರೀ ವೈ.ಎನ್.ಸತ್ಯನಾರಾಯಣ (ಮಹಾಪೋಷಕರು), ಶ್ರೀಮತಿ ವಾಣಿ, ಪ್ರೊ. ಎಂ.ಎನ್.ಚಂದ್ರಶೇಖರ್, ಶ್ರೀಮತಿ ಎಸ್.ಮೀರಾ, ಶ್ರೀ ಶ್ರೀಧರ್, ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ಕೆ.ವಿ. ನಾಗರಾಜ್, ಶ್ರೀಮತಿ ಸಂಪತ್‌ಲಕ್ಷ್ಮಿ, ಶ್ರೀ ಸಿ.ಆರ್. ನಾಗರಾಜ್, ಶ್ರೀಮತಿ ವೀಣಾ ಎನ್, ಶ್ರೀ ನಾರಾಯಣ ಸುಬ್ಬರಾವ್, ಶ್ರೀಮತಿ ಪೂರ್ಣಿಮಾ, ಶ್ರೀ ಐ.ಎನ್. ವೆಂಕಟಸುಬ್ಬರಾವ್, ಶ್ರೀಮತಿ ಜಯಶ್ರೀ ಶಾಸ್ತ್ರಿ, ಶ್ರೀಹನಸೋಗೆ ಎಸ್. ಶಾಸ್ತ್ರಿ, ಶ್ರೀಮತಿ ಪಂಕಜ, ಪ್ರೊ. ಕೆ.ಎಸ್. ಕೃಷ್ಣಮೂರ್ತಿ, ಶ್ರೀಮತಿ ನಿರಂಜಿನಿ, ಶ್ರೀ ಕೆ.ಎಸ್. ಬಾಲಚಂದ್ರ, ಶ್ರೀಮತಿ ವಾಸಂತಿ, ಶ್ರೀ ಜಿ. ಮಯೂರಸಿಂಹ, ಶ್ರೀಮತಿ ಗೀತಾ, ಶ್ರೀ ಕೆ.ವಿ. ನಟೇಶ್, ಟಿ.ಬಿ.ಎಸ್. ವಠಾರ ಟ್ರಸ್ಟ್ (ರಿ.) (ಪೋಷಕರು) ಅವರಿಗೆ

- ನನ್ನ *ಈ* ಕೆಲಸದಲ್ಲಿ ಹರಸುತ್ತಾ ನಗುಮೊಗದಿ ಪ್ರೋತ್ಸಾಹ ನೀಡಿದ ತಂದೆ ಶ್ರೀನಿವಾಸಮೂರ್ತಿಯವರು, ತಾಯಿ ಪದ್ಮರಿಗೆ ಹಾಗೂ ಪತ್ನಿ ವಿದ್ಯಾನಾಗೇಶ್ ಮತ್ತು ಚಿ. ಭರತ್‌ಗೆ

- ಸಮುದಾಯ ಅಧ್ಯಯನ ಕೇಂದ್ರದ ಲೇಖಕ, ಸಂಶೋಧಕರ ಬಳಗಕ್ಕೆ ಮತ್ತು ಪದಾಧಿಕಾರಿಗಳಿಗೆ

- ಅಂದವಾಗಿ ಮತ್ತು ಶೀಘ್ರವಾಗಿ ಅಕ್ಷರ ವಿನ್ಯಾಸ ಮಾಡಿದ ಮೈಸೂರಿನ ಸರಸು ಗ್ರಾಫಿಕ್ಸ್ ಅವರಿಗೆ

- ಅಂದವಾಗಿ ಚಿತ್ರಗಳನ್ನು ಅಳವಡಿಸಿದ ಬೆಂಗಳೂರಿನ ಫ್ರೆಂಡ್ಸ್ ಕಾಮ್ ಟೆಕ್ ಅವರಿಗೆ

- ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಲಕ್ಷ್ಮೀಮುದ್ರಣಾಲಯದವರಿಗೆ

- ಸದಾ ಜತೆಗಿದ್ದು, ಜತೆಗೆ ದುಡಿದು, ಕೈಹಿಡಿದು ಮುನ್ನಡೆಸಿ ಪ್ರೋತ್ಸಾಹಿಸಿದ ಪ್ರಧಾನ ಸಂಪಾದಕರಾದ ಡಾ.ಬಿ.ಎಸ್.ಪ್ರಣತಾರ್ತಿಹರನ್ ಅವರಿಗೆ.

***ಮಕರ ಸಂಕ್ರಾಂತಿ*** ***ಪೂಮಗಾಮೆ ಗೋಪಿ***

***೧೪ನೇ ಜನವರಿ ೨೦೦೫***

# ಪರಿವಿಡಿ



## ಸಂಕೇತಿ : ಅಭಿನಂದನ

### 1. ಪ್ರವಚನ ಚಕ್ರವರ್ತಿ

## 2. ನಿಗಮ ಕೌಮುದಿ



## 3. ಜ್ಯೋತಿಶ್ರೀ

## 4. ಶತಮಾನಂ ಭವತಿ



## 5. ತುಂಗ ಭದ್ರ

## ಸಂಕೇತಿ ಅಭಿನಂದನ : ಅನುಬಂಧ



## ಚಿತ್ರಗಳು

### 1. ಪ್ರವಚನ ಚಕ್ರವರ್ತಿ


## 2. ನಿಗಮ ಕೌಮುದಿ

## 3. ಜ್ಯೋತಿಶ್ರೀ

## 4. ಶತಮಾನಂ ಭವತಿ

## 5. ತುಂಗ ಭದ್ರ

# ಸಂಕೇತಿ : ಅಭಿನಂದನ




# ಪ್ರವಚನ ಚಕ್ರವರ್ತಿ

ಶ್ರೀ ಲಕ್ಷ್ಮೀಕೇಶವ ಶಾಸ್ತ್ರೀ ಅಭಿನಂದನ

*ಪ್ರಧಾನ ಸಂಪಾದಕರು*

**ಎಚ್.ಆರ್.ಕೇಶವಮೂರ್ತಿ**

# ಪ್ರವಚನ ಚಕ್ರವರ್ತಿ

**ವ್ಯಾಖ್ಯಾನ ವಾಚಸ್ಪತಿ**
**ಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳ**
**ಅಭಿನಂದನಾ ಗ್ರಂಥ**

*ಪ್ರಧಾನ ಸಂಪಾದಕರು*
**ಎಚ್.ಆರ್.ಕೇಶವಮೂರ್ತಿ**

*ಸಹಸಂಪಾದಕರು*
**ಕೇಶವ**
**ರಾಜಾರಾಮುಮೂರ್ತಿ**

*ಸಲಹೆಗಾರರು*
**ಪ್ರೊ.ಎಲ್.ಎಂ.ಎಲ್. ಶಾಸ್ತ್ರಿ**

**ಗಮಕ ಕಲಾ ಪರಿಷತ್**
**ಗಮಕಗ್ರಾಮ ಹೊಸಹಳ್ಳಿ - 577 202, ಶಿವಮೊಗ್ಗ ತಾಲ್ಲೂಕು**

**Pravachana Chakravarthi:** Vyakhyana Vachaspathi Sri Mattur Lakshmikeshava Shastry Felicitation Volume: Edited by the Board of Editors on behalf of Gamaka Kala Parishat, Hosahalli, Shimoga Taluk; Published by Gamaka Kala Parishat, Hosahalli - 577 202, 1986, PP.XIV + 174



ಬೆಲೆ ರೂ.20-00

*ಮುದ್ರಕರು :* (1) **ಎಂ.ಸಿ.ಬಿ. ಪ್ರಿಂಟರ್ಸ್,** ಬೆಂಗಳೂರು-18

(2) **ಸಂಕೇತ** (ಮುದ್ರಕರು - ಪ್ರಕಾಶಕರು), ಎನ್.ಟಿ.ರಸ್ತೆ , ಶಿವಮೊಗ್ಗ

*ಪ್ರಕಾಶಕರು :* **ಎಚ್.ರಾಮಣ್ಣ,** ಅಧ್ಯಕ್ಷರು
ಸಮಗ್ರ ಕುಮಾರವ್ಯಾಸ ಭಾರತ ಪ್ರವಚನ ಸಮಿತಿ,
ಗಮಕ ಕಲಾ ಪರಿಷತ್, ಹೊಸಹಳ್ಳಿ- 577 202, ಶಿವಮೊಗ್ಗ ತಾಲ್ಲೂಕು

# ನಮ್ಮ ಮಾತು

ಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳಿಗೆ ಎಂಬತ್ತು ವರ್ಷ ತುಂಬಿದ ಸಂದರ್ಭದಲ್ಲಿ ಅವರಿಗೆ ಸನ್ಮಾನ ಮಾಡಿ ಸಂಭಾವನಾಗ್ರಂಥವನ್ನರ್ಪಿಸಬೇಕೆಂಬ ನಮ್ಮ ಆಸೆ ಇದೀಗ ಸಫಲವಾಗಿದೆ. ಐವತ್ತು ವರ್ಷಗಳಿಂದ ಕಾವ್ಯವ್ಯಾಖ್ಯಾನ ಮಾಡುತ್ತ, ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಾವಿರಾರು ಕಾರ್ಯಕ್ರಮ ನಡೆಸಿ ರಸಿಕರನ್ನು ಸಂತೋಷಗೊಳಿಸುತ್ತ ಬಂದಿರುವ ಹಿರಿಯರು ಶ್ರೀ ಶಾಸ್ತ್ರಿಗಳು. ಪರಿಪೂರ್ಣವಾದ ಕಾವ್ಯ ಶಾಸ್ತ್ರ ವೇದ ಪುರಾಣಗಳ ವಿದ್ವತ್ತು ಅವರ ವ್ಯಾಖ್ಯಾನ ಕಲೆಯ ಮೆರುಗು. ಕಾವ್ಯರಸಪಾನದ ಜತೆಗೆ ಹಲವು ಹನ್ನೊಂದು ಧರ್ಮಸಂಗತಿಗಳ ನಿರೂಪಣೆಯೊಂದಿಗೆ ಧರ್ಮಜಾಗೃತಿಯುಂಟುಮಾಡುತ್ತ ಬಂದವರು. ಈ ಶತಮಾನದಲ್ಲಿ ಗಮಕಕಲೆಗೆ ಪುನರ್ಜನ್ಮವನ್ನಿತ್ತವರು. ವ್ಯಾಖ್ಯಾನಕಲೆಯಲ್ಲಿ ಸಮನಿಲ್ಲದಂತೆ ಮೆರೆದ ಸವ್ಯಸಾಚಿ. ಅವರಿಗೆ ನಾವು ನೀಡುತ್ತಿರುವ ಸನ್ಮಾನ ಕರ್ನಾಟಕದ ಎಲ್ಲ ಭಾಗದ ಬಹುಜನತೆ ಆದರದಿಂದ ನಿರೀಕ್ಷಿಸುವ ಸತ್ಕ್ರಿಯೆ.

ಈ ಸಂಭಾವನಾಗ್ರಂಥ ಕುಮಾರವ್ಯಾಸ, ಲಕ್ಷ್ಮೀಶ ಕವಿಗಳ ಆಳವಾದ ಅಧ್ಯಯನಗಳನ್ನೊಳಗೊಂಡ ಲೇಖನಗಳಿಂದ ಕೂಡಿ, ಎಲ್ಲ ಮನೆಗಳಲ್ಲೂ ಸಂಗ್ರಹಯೋಗ್ಯವನ್ನಾಗಿ ಮಾಡಬೇಕೆಂಬ ಆಸೆ ನಮ್ಮದಾಗಿತ್ತು. ಅದಕ್ಕಾಗಿ ನಾಡಿನ ಬಹಳಷ್ಟು ವಿದ್ವಾಂಸರಿಗೆ ಬೇಡಿಕೆ ಸಲ್ಲಿಸಿದೆವು. ಪ್ರತಿಕ್ರಿಯೆ ನಮಗೆ ತೃಪ್ತಿನೀಡುವಷ್ಟಲ್ಲವಾದರೂ ತೀರ ನಿರಾಶಾದಾಯಕವಾಗಿರಲಿಲ್ಲ. ಇಲ್ಲಿ ಕವಿಯ ವ್ಯಕ್ತಿತ್ವ ಹಾಗೂ ವ್ಯಾಖ್ಯಾನವೈಖರಿ ಕುರಿತ ಹದಿನಾರು ಲೇಖನಗಳಿವೆ, ವ್ಯಕ್ತಿ ಕುರಿತ ಸ್ತುತಿಪದ್ಯಗಳು ಐದು ಇವೆ, ಗಮಕ ಕಲೆ ಕುರಿತ ಏಳು ವಿದ್ವತ್ ಲೇಖನಗಳಿವೆ. ಕುಮಾರವ್ಯಾಸನನ್ನು ಕುರಿತ ಮೂರು ಲೇಖನಗಳು, ಲಕ್ಷ್ಮೀಶನನ್ನು ಕುರಿತ ಒಂದು ಲೇಖನ ಮಾತ್ರ ನೀಡುತ್ತಿದ್ದೇವೆ.

ವ್ಯಾಖ್ಯಾನದ ಸೊಗಸನ್ನು ಜನತೆ ನೂರ್ಕಾಲ ಸವಿಯುವಂತೆ ಅವರಿಂದ ಕುಮಾರವ್ಯಾಸನ ಕೃತಿಯ ಪೂರ್ಣವ್ಯಾಖ್ಯಾನ ಮಾಡಿಸಿ ಧ್ವನಿಮುದ್ರಿಸಿಕೊಂಡು ಈಗಾಗಲೇ ನಾಡಿಗೆ ಬಿಡುಗಡೆ ಮಾಡಿದ್ದೇವೆ. ಈ ಸಂಭಾವನಾಗ್ರಂಥ ಮೇಲಿನ ಸಾಹಸದ ಕೆಲಸಕ್ಕೆ ಪೂರಕವಾಗಿದೆ. (ಒಟ್ಟು ೯೦ ನಿಮಿಷಗಳ ೧೩೫ ಕ್ಯಾಸೆಟ್‌ಗಳಾಗಿವೆ. ಕೊಳ್ಳಲು ಪ್ರತಿಕ್ಯಾಸೆಟ್‌ಗೆ ರೆಕಾರ್ಡಿಂಗ್ ಬಾಬ್ತು ಆರು ರೂ. ಗಳನ್ನು ಕ್ಯಾಸೆಟ್ ಬೆಲೆಯ ಜೊತೆಗೆ ಕೊಡಬೇಕಾಗುತ್ತದೆ. ಕೊಳ್ಳುವವರಿಗೆ ಒಟ್ಟು ೧೩೫ ಕ್ಯಾಸೆಟ್ ಬಾಬ್ತು ಧ್ವನಿಮುದ್ರಣ ಸೇರಿಸಿ ೫,೫೦೦/- ರೂ.ಗಳಾಗುತ್ತವೆ. ಆಸಕ್ತಿಯುಳ್ಳವರು 'ಕಾರ್ಯದರ್ಶಿ, ಗಮಕಕಲಾ ಪರಿಷತ್, ಹೊಸಹಳ್ಳಿ' ಅಥವಾ 'ಸಂಕೇತ ಮುದ್ರಣಾಲಯ, ಹೊಸಹಳ್ಳಿ, ಶಿವಮೊಗ್ಗ' ಇವರನ್ನು ಸಂಪರ್ಕಿಸಬಹುದು.)

ಮತ್ತೂರು - ಹೊಸಹಳ್ಳಿಯಲ್ಲಿ ಗಮಕಕಲೆ ಜೀವಂತವಾಗಿ ಅರ್ಧಶತಮಾನದಿಂದ ಬೆಳೆಯುತ್ತ ಬಂದಿದೆ. ಈ ಎರಡು ಹಳ್ಳಿಗಳ ಕೊಡುಗೆ ಶ್ರೀ ಶಾಸ್ತ್ರಿಗಳು. ಅವರಿಗೆ ನೀಡಿರುವ ಸನ್ಮಾನ ನಮ್ಮೆರಡು ಊರಿಗೆ ನಾವು ಕೊಟ್ಟುಕೊಳ್ಳುತ್ತಿರುವ ನ್ಯಾಯವಾದ ಗೌರವದ ಸಲುವಳಿಯಾಗಿದೆ.

ಶಾಸ್ತ್ರಿಗಳು ಒಂದು ಕಾಲಕ್ಕೆ ನಮ್ಮೆರಡು ಊರಿನ ಎಲ್ಲರಿಗಿಂತ ಹೆಚ್ಚಿನ ಶ್ರೀಮಂತರಾಗಿದ್ದವರು. ವ್ಯಾಖ್ಯಾನದ ಗೀಳಿಗೆ ಬಿದ್ದು ಸರ್ವಸ್ವವನ್ನೂ ಕಳೆದುಕೊಂಡು ಈಗ ಎಲ್ಲರಿಗಿಂತ ಬಡವರಾಗಿರುವವರು, ಪುರಂದರದಾಸರ ಬದುಕನ್ನು ನೆನಪಿಗೆ ತರುತ್ತಿರುವವರು. ಇಂದು ಅವರಿಗೆ ಉಳಿದಿರುವ ಸಂಪತ್ತು **ಪ್ರವಚನ ಚಕ್ರವರ್ತಿ** ಎಂದು ರಸಿಕರು ಕೊಟ್ಟಿರುವ ಬಿರುದು ಮಾತ್ರ. ಇಂತಹ **ಅಭಿನವ ಬಾಣಭಟ್ಟ**ರನ್ನು ಲೌಕಿಕವಾಗಿ (ಆರ್ಥಿಕವಾಗಿ) ಸುಖವಾಗಿ ನೋಡಿಕೊಳ್ಳಬೇಕಾದ್ದು ನಾಡಿನ ಜನತೆಯ ಹಾಗೂ ಸರ್ಕಾರದ ಕರ್ತವ್ಯವಾಗಿದೆ ಎಂಬುದನ್ನಿಲ್ಲಿ ನೆನಪಿಸಬೇಕಾಗಿದೆ.

**ನಮ್ಮ ಹೃತ್ಪೂರ್ವಕ ಕೃತಜ್ಞತೆ-** ಲೇಖನಗಳನ್ನು ಸಕಾಲದಲ್ಲಿ ಬರೆದುಕೊಟ್ಟು ಉಪಕರಿಸಿದ ರಸಿಕ ವಿದ್ವಾಂಸರಿಗೆ, ಪೂರ್ಣ ವ್ಯಕ್ತಿಚಿತ್ರ ನೀಡಿ ನಮ್ಮ ಪರವಾಗಿ ಮೊದಲ ಲೇಖನ ಬರೆದುಕೊಟ್ಟ ಶ್ರೀ ರಾ.ಗಣೇಶಶರ್ಮಾ ಅವರಿಗೆ, ಸೂಕ್ತವಾದ ಭಾವಚಿತ್ರಗಳನ್ನು ಹೊಂದಿಸಿಕೊಟ್ಟ ಶ್ರೀ ವೈ.ಕೆ.ಮೋಹನ್ ಅವರಿಗೆ, ಸುಂದರವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಎಂ.ಸಿ.ಬಿ. ಪ್ರಿಂಟರ್ಸ್ ಮತ್ತು ಶಿವಮೊಗ್ಗೆಯ ಸಂಕೇತ ಮುದ್ರಣಾಲಯದವರಿಗೆ, ಬೆಂಗಳೂರಿನಲ್ಲಿ ಮುದ್ರಣದ ಪೂರ್ಣ ಹೊಣೆಹೊತ್ತು ಸಹಕಾರ ನೀಡಿದ ಶ್ರೀ ಕೆ.ಶೇಷಾದ್ರಿಯವರಿಗೆ, ಕ್ಯಾಸೆಟ್ ಮುದ್ರಣಕ್ಕಾಗಿ ಖರ್ಚಾದ ಸುಮಾರು ೧೫,೦೦೦ ರೂ.ಗಳನ್ನು ಕ್ಯಾಸೆಟ್ ಹಾಗೂ ಹಣದ ರೂಪದಲ್ಲಿ ಹೊಂದಿಸಿಕೊಟ್ಟ ನೂರಾರು ವ್ಯಕ್ತಿಗಳಿಗೆ ಮತ್ತು ಪ್ರತ್ಯಕ್ಷ- ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ಸಲ್ಲುತ್ತದೆ.


*ಎಚ್.ಆರ್. ಕೇಶವಮೂರ್ತಿ*
*ಪ್ರಧಾನ ಸಂಪಾದಕರು*

# ೧. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು

*ರಾ. ಗಣೇಶಶರ್ಮಾ*

***ಸಾಕೆಣಿಸದಿರು ಶುಕರೂಪನಲ್ಲವೆ ?***

ವ್ಯಾಖ್ಯಾನಲೋಕದಲ್ಲಿ ಈಗಾಗಲೇ ಯಶಸ್ಸಿನ ಪಾರಮ್ಯವನ್ನು ಕಂಡಿರುವ ಪೂಜ್ಯರಾದ ಲಕ್ಷ್ಮೀಕೇಶವಶಾಸ್ತ್ರಿಗಳವರು ನಿಜಕ್ಕೂ ಲಕ್ಷಕ್ಕೋರ್ವರೆಂದು ಯಾರಿಗಾದರೂ ಅನಿಸದಿರದು. ಹೇಗೆ ಕಾಳಿದಾಸ ಕನಿಷ್ಠಕಾಧಿಷ್ಠಿತನೋ, ಹೇಗೆ ಕನ್ನಡಕ್ಕೋರ್ವನೇ ಕುಮಾರವ್ಯಾಸನೋ, ಹಾಗೆಯೇ ವ್ಯಾಖ್ಯಾನಕಾರರ ನಡುವೆ ಪೂಜ್ಯ ಶಾಸ್ತ್ರಿಗಳವರು ಅದ್ವಿತೀಯರು. ಹತ್ತುಸಾವಿರಕ್ಕೊಬ್ಬ ವಕ್ತೃ ಹುಟ್ಟುವನಂತೆ. ಯಥಾರ್ಥ ವ್ಯಾಖ್ಯಾನಕಾರನು ಸಹ ಅಷ್ಟೇ ದುರ್ಲಭ. ವರಕಥಾಪೀಯೂಷ ಸಾರವೂ, ಕೌತುಕಾಮೃತ ರಸದ ಕಡುಗಡಲೂ ಆದ ಮಹಾಭಾರತದ ಕಾವ್ಯವನ್ನು ಕನ್ನಡದ ಕುಲಕೋಟಿಗೆ ಕೃಪೆಗೈದ ನಾರಣಪ್ಪ ಮಹಾಕವಿ ತನ್ನನ್ನೇ ತಾನು 'ಸಾಕೆಣಿಸದಿರು ಶುಕರೂಪನಲ್ಲವೆ' ಎಂದು ಚಪ್ಪರಿಸಿಕೊಂಡಿರುವುದು ಆತನ ಕಾವ್ಯಾರಾಧಕರಿಗೆ ಲೇಶವೂ ಅತ್ಯುಕ್ತಿಯೆನಿಸದು. ಈ ಮಹಾಕವಿಯ ಅಗ್ಗಳಿಕೆ-ಹೆಗ್ಗಳಿಕೆಗಳನ್ನು ಪಂಡಿತಪಾಮರರೆಲ್ಲರಿಗೆ ಏಕಪ್ರಕಾರವಾಗಿ ಅಂದಗೊಡುವಂತೆ ಅನುವಾದಿಸುವುದು ಸುಲಭವೇನು? ಅವನಿಗೆ ಎಂಟೆದೆಬೇಕು. ಕುಂಟದೆ, ಕದಲದೆ ಈ ಅಮರಕವಿಯ ಪ್ರತಾಪವನ್ನೂ ಅವನ ಓಜಃಪೂರ್ಣ ರಚನೆಯ ಮಹಿಮೆಯನ್ನೂ ಡಂಗೂರ ಹೊಡೆಯುವ ದಿಟ್ಟತನ ಬೇಕು. ನಿಗಮ ಶತವಿದರೊಂದೊರೆಗೆ ನೆರೆಬಾರದೆಂದ ಮಹಾಮಹಿಮನ ರಸದೊರೆಯನ್ನು ನಿಖಿಲ ಜನತತಿಯ ಕರ್ಣಪೂರಗಳಲ್ಲಿ ತುಂಬಿ ಅವರನೋಲಗಿಸುವ ಅಗಾಧ ಸಾಮರ್ಥ್ಯದ ಊರ್ಜೆ, ಪ್ರಗಾಢ ಸಾಧನೆಯ ತಪಃಫಲ, ಇವರನ್ನು ಬಿಟ್ಟರೆ ಬೇರಿಲ್ಲವೆಂಬ ನಿರ್ದ್ವಂದ್ವವಾದ ವ್ಯಕ್ತಿತ್ವ ಬೇಕು. ಈ ಮಹಾಭಾರತದ ಒಂದೊಂದು ದನಿಯ ಸವಿ ಇಂತಿದೆಯೆಂದು ಬಿತ್ತರಿಸುವ ಜಾಣ್ಮೆ, ಒಂದೊಂದು ಪ್ರಸಂಗದ ಮಹಿಮೆಯನ್ನೂ ಪ್ರತ್ಯಕ್ಷಗೊಳಿಸಿ ತೋರುವ ಮೇಲ್ಮೆ ಇರಬೇಕು. ಈ ಕಾವ್ಯದ ಒಂದೊಂದು ಮಾತು, ಒಂದೊಂದು ಅಕ್ಷರ, ಒಂದೊಂದು ತುಣುಕು ಸಹ ಕರತಲಾಮಲಕದಂತೆ ಸ್ಫುಟಗೊಂಡು ತೋರುವ ಸಂಜಯನ ದೃಕ್‌ಶಕ್ತಿ- ಕಂಡ ದೃಶ್ಯವನ್ನು ಬಣ್ಣಿಸಿ ಹೇಳುವ ವಾಕ್‌ಶಕ್ತಿ ಬೇಕು. ಮೂಲಕಾವ್ಯ ಮತ್ತು ಕೃತಿಕಾರನ ಹಿಂದೆ ಸಮರಸವಾಗಿ ಓಡುವ ಭಕ್ತಿ ನಿಷ್ಠೆಗಳು ಬೇಕು. ಇಂತಿಷ್ಟು ಗುಣಗಳೂ, ಇಂತಿಷ್ಟು ವೈಶಿಷ್ಟ್ಯಗಳೂ ನಾಡು ನುಡಿಯ ಭಾಗ್ಯೋದಯದಿಂದ ಓರ್ವನಲ್ಲಿ ಎರಕಗೊಂಡು ಪುರಾಣಿಕನ ಆಕಾರದಲ್ಲಿ ಸಾಕಾರಗೊಳ್ಳುತ್ತಿವೆ. ಈ ಗುಣವೈಶಿಷ್ಟ್ಯಗಳ ಅವತರಣಿಕೆ ಅಶೇಷ ಅನುಪಾತದಿಂದ ಶಾಸ್ತ್ರಿಗಳವರ ಆಕೃತಿಯಲ್ಲಿ-ಪ್ರಕೃತಿಯಲ್ಲಿ ಎದ್ದು ಮೂಡಿವೆ. ವ್ಯಾಸಪೀಠಕ್ಕೆ ಅಳತೆ ಕೊಟ್ಟು ಮಾಡಿಸಿದಂತಹ ಕಮನೀಯ ಗಾತ್ರ. ತೇಜಃಪುಂಜವಾದ ದರಹಸಿತ ಮೊಗ. ಅದರಲ್ಲಿ ಮೂಡಿದ ವಿಲಕ್ಷಣವಾದ ಚದುರ ನೇತ್ರದ್ವಯ ('ಅಭಾಲಲೋಚನಶ್ಶಂಭುಃ' ಎಂದು ಜ್ಞಾಪಿಸಬಹುದಲ್ಲವೆ?). ನೆತ್ತಿಯ ಹರವು ತನ್ನ ಎಲ್ಲೆಯನ್ನು ಮೀರಿ ಖಲ್ವಾಟಶಿರದಲ್ಲಿ ಪಸರಿಸುತ್ತ ಹೋಗಿದೆ. ತುಸು ಗರುಡ ಮೂಗಿನ ಚೂಪು- ಮಾತಿನ ಗಾರುಡಿಕೆಯನ್ನು ಬಿಂಬಿಸುವಂತೆ. ವಿಶಾಲವಾಗಿ ಶಾರದೆಗೂ ಸಿರಿಗೂ ಎಡೆಗೊಟ್ಟ ಎದೆ. ದುಂಡಾದ ತೋಳುಗಳು ಜಾನುಗಳವರೆಗೆ ಇಳಿಬಿದ್ದಿಲ್ಲವಾದರೂ



*1. ನಮಿಸಿ ನಾರಾಯಣನ . . .*

ಆಜಾನುಬಾಹುತ್ವದ ಕಲ್ಪನೆಗೆ ಪುಟಗೊಡುತ್ತವೆ. ಹೊಟ್ಟೆ ತುಸು ದೊಡ್ಡದಾದರೂ ದಾಮೋದರತ್ವವನ್ನು ತುಂಬಿಕೊಂಡಂತೆ. ನಡಿಗೆ, ನುಡಿಕೆಗಳಲ್ಲಿ ನಯವಾದ ಗಾಂಭೀರ್ಯ, ಯಾರನ್ನೂ ಚುಂಬಕದಂತೆ ಬಳಿಗೆಳೆದುಕೊಳ್ಳುವ ಅಪ್ರಮೇಯವಾದ ದೇಹಯಷ್ಟಿ. ಇಂತು ಸರ್ವಾಂಗಗಳಲ್ಲಿ ಪುರಾಣಿಕನ ಪೂರ್ವಲಕ್ಷಣಗಳು-ಪೂರ್ಣ ಲಕ್ಷಣಗಳ ಏಕತ್ರಿತ ಸಮಾವೇಶದಿಂದ ದೇದೀಪ್ಯಮಾನರಾದ ಶಾಸ್ತ್ರಿಗಳು ಅರುಣಾದಿತ್ಯಪಾಟಲವಾದ ಶರೀರವರ್ಣದಿಂದ ಕಂಗೊಳಿಸುತ್ತ ವ್ಯಾಸ, ಶುಕ, ನಾರಾಣಪ್ಪ- ಈ ಮೂವರ ಅಂಶಗಳನ್ನು ಹೊತ್ತು ಶ್ರೋತೃಗಳ ಮುಂದೆ ತಮ್ಮ ಪುರಾಣಿಕನ ರೂಪವನ್ನು ಪೂರ್ಣವಾಗಿ ಬೀರುವರು.

### *ತೇಭ್ಯೋ ಮಹದ್ಭ್ಯೋ ನಮಃ*

ಮಹತ್ತು ಎಂಬುದು ಯಾವುದು- ಯಾರಿಗೆ ಏತರಿಂದ ಸಿಗುತ್ತದೆ- ಇದು ಅತ್ಯಂತ ನಿಗೂಢ ಹಾಗೂ ಜಟಿಲ ಪ್ರಶ್ನೆ. ನಮ್ಮ ಹಾರೈಕೆಗಳು ಬೆಳೆದು- ಸ್ವರ್ಗದಿಂದ ಹೂಮಳೆಯಾಗಿ - ನಮ್ಮ ಮೇಲೆಯೇ ಕರೆಯುತ್ತವೆ ಎನ್ನಬಹುದೇ? ಈ ಹೂಮಳೆ ಯಾರ ಮೇಲೆ ಕರೆದರೆ ಆತ ಮಹತ್ತನ್ನು ಪಡೆಯುತ್ತಾನೆ- ಮಹಾತ್ಮನಾಗುತ್ತಾನೆ? ಈ ಲಾಭವು ಪ್ರಕೃತಿಯಲ್ಲಿ ಅದೃಶ್ಯವಾಗಿ ನಡೆವ ವ್ಯಾಪಾರ. ಆದ್ದರಿಂದ ನಾವು ಇದನ್ನು ದೈವಿಕವೆನ್ನುತ್ತೇವೆ. ಇದರ ಪ್ರಾಪ್ತಿಗಾಗಿ ದೇವತೆಗಳನ್ನು ಆರಾಧಿಸುತ್ತೇವೆ. ದೇವತೆಗಳು ಎಂದರೆ ಉದಾರ ಗುಣಗಳು - ಉದಾತ್ತ ಧ್ಯೇಯಗಳು. ಆಹಾರ, ನಿದ್ರಾ, ಭಯ, ಮೈಥುನವೆಂಬ ಪ್ರಾಣಿಮಾತ್ರಕ್ಕೆ ಸಹಜವಾದ ಗುಣಗಳಿಗೆ ಭಿನ್ನವಾಗಿ, ವಾಸನೆಯ ಜಾಡು ಹಿಡಿದು ತೊಳಲಾಡುವ ಜನ್ಮಗಳಿಗೆ ಹೊರತಾಗಿ - **'ಮೃತ್ಯೋರ್ಮಾ ಅಮೃತಂ ಗಮಯ'** - ಎಂದು ದೇವತೆಗಳಲ್ಲಿ ಮೊರೆಯಿಟ್ಟು, ವಿಶ್ವಾತ್ಮನಲ್ಲಿ ಐಕ್ಯಗೊಳ್ಳಬೇಕೆಂಬ ಹಿರಿಯ ಗುರಿಯಿಟ್ಟು, ಮೆಟ್ಟಿಲು-ಮೆಟ್ಟಿಲಾಗಿ ಐಂದ್ರಪದ, ವೈಕುಂಠಪದ, ಕೈಲಾಸಪದ ಮತ್ತು ಪರಮಪದಗಳನ್ನು ಸೇರಿ ಶಾಶ್ವತವಾಗಿ ಸುಖಿಸಲಿಚ್ಛಿಸುತ್ತೇವೆ. ಅದಕ್ಕೆ ತಕ್ಕಂತೆ ನಮ್ಮನ್ನು ಇಲ್ಲಿ (ಭೂಲೋಕದಲ್ಲಿ) ಸಲ್ಲಿಸಿಕೊಂಡು, ಅಲ್ಲಿಗೂ (ಪರಕ್ಕೆ) ಸಲ್ಲುವಂತೆ ಅಣಿ ಮಾಡಿಕೊಳ್ಳಬೇಕಾದ್ದು ನಮ್ಮ ಯತ್ನಕ್ಕೆ ಸೇರಿದುದು. ಇದೇ ಪುರುಷಪ್ರಯತ್ನ. ಈ ಲೋಕದಲ್ಲಿ ನಮ್ಮನ್ನು ನಾವು ತೆತ್ತುಕೊಂಡಾಗ ಮೇಲಕ್ಕೆ ಹೋಗಲು ಮಹತ್ತನ್ನು ಪಡೆಯಲು ಸಾಧ್ಯ. 'ತ್ಯಾಗಾಯ ಸಂಭೃತಾರ್ಥಾನಾಮ್' ಎಂಬಂತೆ ತನ್ನನ್ನೂ, ತನ್ನದನ್ನೂ ತೆತ್ತುಕೊಳ್ಳಲು ಸಂಭೃತಿ, ಧೃತಿ, ಸತ್ತ್ವಸಾಮರ್ಥ್ಯ ಬೇಕು. 'ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾಃ' ಸತ್ತ್ವಸಂಪನ್ನರಿಗೆ ಮಾತ್ರ ಮೇಲೇರಲು ಸಾಧ್ಯ. ದೈವೀಕೃಪೆಯನ್ನು ಹಾರೈಸಿಕೊಳ್ಳುತ್ತ (ಹಿಂದೆ ಹೇಳಿದಂತೆ ಹಿರಿಯ ಗುರಿಯನ್ನು ಆರಾಧಿಸುತ್ತ) ಮಾನವ ತನ್ನ ಸ್ವಾಧ್ಯಾಯ, ಚಿಂತನ, ಮನನಗಳಲ್ಲಿ ಏಕಾಗ್ರನಾಗಿ ಜ್ಞಾನವಾರ್ಜಿಸಿ, ಆರ್ಜಿಸಿದ ಜ್ಞಾನವನ್ನು 'ಬಹುಜನಹಿತಾಯ' ಎಂಬ ಹಿರಿಯ ಗುರಿಯೆಡೆಗೆ ವಿನಿಯೋಗಿಸಿ ತಾನು, ತನಗೆಂಬುದನ್ನು ಕೀಳುಗೆಡವಿದಾಗ ಮಾತ್ರ ಅಲ್ಪತ್ವ ಅಳಿದು ಬಹುಳನಾಗಬಲ್ಲ; ತುಚ್ಛತೆಯನ್ನು ಮೆಟ್ಟಿ ಉಚ್ಚನಾಗಿ ನಿಲ್ಲಬಲ್ಲ.

ಈ ಮಾತಿಗೆ ಪ್ರಾಸಂಗಿಕವಾಗಿ ಶಾಸ್ತ್ರಿಗಳ ಬಗ್ಗೆ ಬಿತ್ತರಿಸುವಲ್ಲಿ ಹಿರಿಯ ಗುರಿಯಾರಾಧನೆ, 'ಬಹುಜನಹಿತಾಯ' ಎಂಬ ಬದುಕಿಗೆ ತಮ್ಮನ್ನೂ- ತಮ್ಮದನ್ನೂ ತೆತ್ತುಕೊಳ್ಳುವ ತ್ಯಾಗ ಬುದ್ಧಿ ಇವರಿಗೆ ಜನ್ಮಾಯತ್ತ. ಇಂದಿನ ಈ ಗರಿಮೆಯನ್ನು ಗಳಿಸಲು ಪೂಜ್ಯ ಶಾಸ್ತ್ರಿಗಳವರು ತಮ್ಮನ್ನೂ ತಮ್ಮದನ್ನೂ ನಿಶ್ಶೇಷವಾಗಿ ತೆತ್ತುಕೊಂಡು ಸಫಲ ವ್ಯಾಖ್ಯಾನಕಾರನ ಗುರುಪೀಠವನ್ನು ಅಲಂಕರಿಸಿದ್ದಾರೆ. ತಮ್ಮ ಜೀವನದುದ್ದಕ್ಕೂ ಇದಕ್ಕಾಗಿ ಅವರು ಮಾಡಿದ ಸಾಧನೆ, ನಡೆಸಿದ ಹೋರಾಟ, ಅಪರಿಮಿತ. ಈ ಸಾಧನೆಗಳು, ಹೋರಾಟಗಳು ಬಹಿರ್ಮುಖವಾದುವಲ್ಲ. ಯಾರೊಂದಿಗೂ ಸೆಡ್ಡು ಹೊಡೆದು ಮಾಡಿದುವಲ್ಲ. ಯಾರನ್ನೂ ಕೆಳಕ್ಕೆ ಕೆಡವಿ ಬೆನ್ನು ಮಣ್ಣು ಮಾಡಬೇಕೆಂಬ ದುರಾಗ್ರಹದಿಂದ ಕೂಡಿದುವಲ್ಲ. ನಯ, ವಿನಯ, ಮಧುರೋಕ್ತಿ, ಜನಗಳ ಮುಂದೆ ತಮ್ಮ ಪಾಂಡಿತ್ಯ-ವೈದಗ್ಧ್ಯಗಳನ್ನು ಮೆರೆಯಬೇಕೆಂಬ ಅಹಂಭಾವದ ಲವಲೇಶವಿಲ್ಲದ ಸರಳ ವರ್ತನೆ, ಓರ್ವ ಎಳೆಯನ ಮನವನ್ನೂ ನೋಯಿಸದಂತಹ ಕರುಣೆಯ ಸ್ವಭಾವ, ತಮ್ಮ ಹಿರಿಮೆಯನ್ನು ಬಚ್ಚಿಟ್ಟುಕೊಂಡು ಅನ್ಯರ ಗುಣಲೇಶವನ್ನು ಹಿರಿದುಮಾಡಿ ನೋಡುವ ಪರವೋದಾರ ಮನೋಭಾವ- ಇಂಥ ಸದ್ಗುಣಗಳ ಪರಿಪಾಕಕ್ಕೆ ತಮ್ಮ ಹೃದಯವನ್ನು ಪಾತ್ರಗೊಳಿಸಿಕೊಳ್ಳಲು ಸತತವಾದ ಅಂತರ್ಮುಖ ಸಾಧನೆ. ಇಂಥ ಹಿರಿಯ ಗುಣಗಳ ದೆಸೆಯಿಂದ ಶಾಸ್ತ್ರಿಗಳವರು ಮಹತ್ತನ್ನು ಪಡೆದು ವ್ಯಾಖ್ಯಾನಲೋಕದ ತಾರೆಯಾಗಿ ಮಿನುಗುತ್ತಿದ್ದಾರೆ.

### *ಆವಿರ್ಭೂತಮಪಾಂ ಮಧ್ಯೇ ಪಾರಿಜಾತಮಿವಾಪರಮ್*

ಸಹ್ಯಾದ್ರಿಯ ವಿಸ್ತಾರದ ಮಧ್ಯೆ ಚಿಮ್ಮಿ ಕಳಸ, ಕಾಂಡ್ಯ, ಶೃಂಗೇರಿ, ತೀರ್ಥಹಳ್ಳಿ ಮೊದಲಾದೆಡೆಗಳನ್ನು ತೀರ್ಥಗೊಳಿಸಿ ಮತ್ತೂರು ಹೊಸಹಳ್ಳಿ ಎಂಬ ಅಕ್ಕ-ತಂಗಿ ಗ್ರಾಮಗಳ ಎಡಬಲದಲ್ಲಿ ತುಂಗೆ ಉತ್ತುಂಗೆಯಾಗಿ ಪ್ರವಹಿಸುತ್ತ ಮುಂದಿನ ಕೂಡಲಿ ಕ್ಷೇತ್ರದಲ್ಲಿ ತಂಗಿಯಾದ ಭದ್ರೆಯೊಂದಿಗೆ ಕೂಡಿದ್ದಾಳೆ. ಈ ತುಂಗೆಯ

ತಡಿಯಲ್ಲಿನ ಮತ್ತೂರು - ಹೊಸಹಳ್ಳಿ ಗ್ರಾಮಗಳು, ವೇದವಿದ್ಯಾ ಸಂಪನ್ನರಾದ, ಶಿವಪೂಜಾನುಷ್ಠಾನತತ್ಪರರಾದ, ಸಾತ್ತ್ವಿಕ ಬ್ರಾಹ್ಮಣರ ತಾಣ. ಆರ್ಯ ಸಂಸ್ಕೃತಿ, ಸನಾತನ ಧರ್ಮಾಚಾರಗಳ ತೌರೂರಾದ *ಈ* ಅವಳಿ ಗ್ರಾಮಗಳ ದಿವಿಬುವಿ ಸದಾ ವೇದನಾದದ ಉದ್ಘೋಷದಿಂದ ಮೊರೆಯುತ್ತಿತ್ತು. ಅನೇಕ ಯಜ್ಞಯಾಗಗಳ ಹೋಮಧೂಮದಿಂದ ವಿನೀತವಾದ ವಾತಾವರಣ ತಪೋವನದ ನೆನಪನ್ನು ತರುತ್ತಿತ್ತು. ವೇದಶಾಸ್ತ್ರಗಳ ಪಠನ ಪಾಠನ, ದೇವತಾರಾಧನೆಯ ಗಂಟೆ ಶಂಖಗಳ ನಿರ್ಘೋಷಗಳಿಂದ ಇದರ ದಶದಿಶೆಗಳೂ ಪ್ರಣವಸ್ವರವನ್ನು ಮೀಟುತ್ತಿದ್ದವು. ಇಲ್ಲಿಯ ಸಾತ್ತ್ವಿಕ ಜನರ ಜೀವನಕ್ಕೆ ಆಸರೆ ಅಡಕೆ ಮರಗಳ ತೋಪು. ಇಲ್ಲಿನ ಪರಿಶ್ರಮ ಪ್ರಿಯರಾದ ದೃಢಕಾಯ ದ್ವಿಜರ ಗುದ್ದಲಿ ಪಿಕಾಸಿ ಕೆಲಸದಿಂದ ಉದುರುತ್ತಿದ್ದ ಘರ್ಮಬಿಂದು, *ಈ* ಕೆಲಸದೊಂದಿಗೆ ಶಿಷ್ಯರಿಗೆ ಹೇಳಿ ಕೊಡುವ ವೇದಮಂತ್ರಗಳ ಪದಪಾಠದ ಉಗ್ಗಡಿಸುವ ಧ್ವನಿಗಳಿಗೆ ಮೂಕಸಾಕ್ಷಿಗಳಾಗಿ ಮುಗಿಲ ಕಡೆ ಮೈಚಾಚಿ ಬೆಳೆದು ನಿಂತ *ಈ* ಅಡಕೆ ಮರಗಳು- ಇಲ್ಲಿನ ಪೂರ್ವಜರ ಜಯಧ್ವಜಗಳಂತೆ ಹಸಿರುಚಪ್ಪರವನ್ನು ಹಾಸಿವೆ. ಪಟ್ಟಣ ಮತ್ತು ಆಧುನಿಕ ಆಕರ್ಷಣೆ - ವಿಕರ್ಷಣೆಗಳ ಮಾಯಾಜಾಲಕ್ಕೆ ದೂರವಾಗಿ, ಪಾಪ ಪುಣ್ಯಗಳಿಗಂಜುತ್ತ, ದಾನ, ಧರ್ಮ, ಅತಿಥಿಸತ್ಕಾರ ಮುಂತಾದ ಸದ್ಗೃಹಸ್ಥ ಧರ್ಮದಲ್ಲಿ ನಿರತರಾಗಿ ಇಲ್ಲಿಯ ಮುಗ್ಧ ಜನ ಅಲ್ಪತೃಪ್ತಿಯಿಂದ ಸಂತುಷ್ಟರು. ತಾಯಿ ತುಂಗೆಯ ಎಡಬದಿಗೆ ಹೊಸಹಳ್ಳಿ- ಬಲತಡಿಯಲ್ಲಿ ಮತ್ತೂರು. *ಈ* ಊರಿನ ಚನ್ನಪ್ಪಾವಧಾನಿಗಳೆಂಬ ಹಿರಿಯರು ವೇದವಿದ್ವಾಂಸರು, ಊರಿನ ಅಗ್ರಗಣ್ಯರು, ಸಾಹುಕಾರರು. ಅಮಾವಾಸ್ಯೆಯಂದು ತಮ್ಮ ಶರೀರಾವಸಾನವಾಗುವುದೆಂದು ಮನೋಯೋಗದಿಂದರಿತು ಅದರ ಹಿಂದಿನ ದಶಮಿಯಂದು ಸಂಸಾರವನ್ನು ತ್ಯಜಿಸಿ, ಪ್ರೇಷೋಚ್ಚಾರವನ್ನು ಪಠಿಸಿ, ಸಂನ್ಯಾಸವನ್ನು ಸ್ವೀಕರಿಸಿದ ಕಾಲಜ್ಞಾನಿ. ಅವರ ಧರ್ಮಪತ್ನಿ ಸತಿ ಸಾವಿತ್ರಿಯಂಥ ಸಾವಿತ್ರಮ್ಮ. *ಈ* ದಂಪತಿಗಳಿಗೆ ಸೀಮಂತಪುತ್ರನಾಗಿ ಪೂಜ್ಯ ಶಾಸ್ತ್ರಿಗಳು ವಿಶ್ವಾವಸು ಸಂವತ್ಸರದ ಚೈತ್ರ ಕೃಷ್ಣ ಪಂಚಮಿಯಂದು ಅವತರಿಸಿದರು. ಅವರು ಹುಟ್ಟಿದಾಗ ದೇವದುಂದುಭಿ ಮೊಳಗಿರಬೇಕು. ದೇವಗಣ ತಮ್ಮೊಂದು ಕುಡಿ ಭೂಲೋಕದಲ್ಲಿ ಮೊಳೆಯಿತೆಂದು ಆಹ್ಲಾದದಿಂದ ಹೂಮಳೆಯನ್ನು ಚೆಲ್ಲಿರಬೇಕು. ಸಿದ್ಧಯಕ್ಷ ಕಿನ್ನರರು ಉಲ್ಲಾಸದಿಂದ ನರ್ತಿಸಿರಬಹುದು. ಇಲ್ಲಂತೂ ವಸಂತಕಾಲವೆಂದು ಬೇರೆ ಹೇಳಬೇಕಾಗಿಲ್ಲ. ಆಮ್ರಮಂಜರಿಗಳ ಮುಂದೆ ಹಿಂಡು ಹಿಂಡು ದುಂಬಿಗಳ ಝೇಂಕಾರ, ಕೋಗಿಲೆಗಳ ಸವಿಯಿಂಚರ, ತಳಿರು ಚಿಗುರುಗಳ ಬುಗ್ಗೆ ಹರಿಸಿ ಚೆಲುವು ಬೀರುವ ಪ್ರಕೃತಿ ದಕ್ಷಿಣ ಮಂದಾನಿಲದ ಸುಖಸ್ಪರ್ಶದಿಂದ ರೋಮಾಂಚಿತ. ಯುಗಾದಿಯ ಬೋಣಿಗೆ ಮಳೆಯು ನೆಲವನ್ನು ಸಿಂಪಡಿಸಿದೆ. *ಈ* ಸುಂದರ ಸನ್ನಾಹದೊಂದಿಗೆ ಶಾಸ್ತ್ರಿಗಳ ಆವಿರ್ಭಾವ.

***ಬೆಳೆವ ಸಿರಿ ಮೊಳೆಯಲ್ಲಿ***

ಚೊಚ್ಚಲ ಮಗನಾದ್ದರಿಂದ ಪೂಜ್ಯ ಶಾಸ್ತ್ರಿಗಳಿಗೆ ಮಾತಾಪಿತೃಗಳ ಅಕ್ಕರೆ ಯಥೇಚ್ಛವಾಗಿ ದೊರಕಿತ್ತು. ಬಾಯಿಪಾಠ, ಬಾಲ್ಯಪಾಠಗಳೆಲ್ಲ ತಂದೆತಾಯಿಗಳಿಂದ. ಪ್ರಾಥಮಿಕ ವಿದ್ಯಾಭ್ಯಾಸ ಎರಡೂ ಗ್ರಾಮಗಳಿಗೆ ಗುರುಗಳೆನಿಸಿದ್ದ ವೇ. ಬ್ರ. ಶ್ರೀ ಚಿಂತಾಮಣಿ ಅವಧಾನಿಗಳು ಮತ್ತು ವೇ. ಬ್ರ. ಶ್ರೀ ಚನ್ನಕೇಶವ ಶಾಸ್ತ್ರಿಗಳಿಂದ. ಓರ್ವರು ಕನ್ನಡದ ಗುರುಗಳು, ಮತ್ತೋರ್ವರು ಸಂಸ್ಕೃತ ಗುರುಗಳು. *ಈ ಈರ್ವರು* ಗುರುಗಳು ಆ ಕಾಲದಲ್ಲಿ ಎರಡು ಧ್ರುವತಾರೆಗಳಂತೆ. ಪೂಜ್ಯ ಶಾಸ್ತ್ರಿಗಳವರ ಇಂದಿನ ಖ್ಯಾತಿವೆತ್ತ ಸುಘಟಿತವ್ಯಕ್ತಿತ್ವ- *ಈ* ಇಬ್ಬರು ಗುರುಗಳ ಮಾರ್ಗದರ್ಶನದಿಂದ ರೂಪಗೊಂಡುದು. ವೇ.ಚನ್ನಕೇಶವಶಾಸ್ತ್ರಿಗಳು ವೇದ ವೇದಾಂಗಗಳು, ಶಾಸ್ತ್ರಪುರಾಣಗಳು - ಕಾವ್ಯೇತಿಹಾಸಗಳಲ್ಲಿ ಪ್ರಕಾಂಡ ಪಂಡಿತರು. ಭಗವಾನ್ ವೇದವ್ಯಾಸರ ಪುರಾಣಗಳನ್ನು ವ್ಯಾಖ್ಯಾನಿಸುತ್ತಿದ್ದ ಮಹನೀಯರು. ಇಂಥ ಗುರುಗಳ ಛಾತ್ರವೃತ್ತಿಯ ಛತ್ರಚ್ಛಾಯೆಯಲ್ಲಿ ಪೂಜ್ಯ ಶಾಸ್ತ್ರಿಗಳ ವಿದ್ಯಾಧ್ಯಯನ ಅತಿ ಚಿಕ್ಕ ವಯಸ್ಸಿನಲ್ಲೇ. ಕಾವ್ಯ ಸಾಹಿತ್ಯಗಳ ಮೇಲಣ ಅನುರಾಗ ಶಾಸ್ತ್ರಿಗಳಿಗೆ ಅಂಕುರಿಸಿದ್ದು ಸಹ *ಈ* ಗುರುಗಳ ಪ್ರಭಾವಶಾಲೀ ವರ್ಚಸ್ಸಿನಿಂದ. *'ಸುರಧೇನುವಿನ ಮರಿಯು ಬರೆ ತಾಯಿ ಕಾಣುತಲಿ ಹರುಷಾಶ್ರುಜಲದಿ ತೊರೆದು ಮೊಲೆಯೂಡಿಸುವ ತೆರ ಜ್ಞಾನ ಗುರುವಿನುಪದೇಶ'* - ಎಂಬಂತೆ ಶಿಷ್ಯವತ್ಸಲರಾದ ಇಂತಹ ಸದ್ಗುರುಗಳ ಕೃಪೆ, ಪ್ರಕೃತಿದತ್ತವಾಗಿ ಬಂದ ಪ್ರತಿಭೆ, ನೈಸರ್ಗಿಕ ಸಂಸ್ಕಾರ, ಸುಲಕ್ಷಣ ಶರೀರಸಂಪತ್ತು ಮುಂತಾದ ಗುಣಲಕ್ಷಣಗಳ ಪೂರ್ವಸಿದ್ಧತೆಯನ್ನು ಪಡೆದು ಕೇವಲ ಹದಿನಾಲ್ಕು, ಹದಿನೈದರ ಹರೆಯದಲ್ಲೇ ಸಂಸ್ಕೃತಭಾಷೆಯ ಸುಭಾಷಿತತ್ರಿಶತೀ, ಕುಮಾರಸಂಭವ, ಪಂಚತಂತ್ರ, ವಿಕ್ರಮೋರ್ವಶೀಯ ಮುಂತಾದ ಕಾವ್ಯನಾಟಕಗಳನ್ನು ಊರಿನ ಸಹೃದಯ ಮಿತ್ರ, ಶ್ರೋತೃವೃಂದದ ಮುಂದೆ ಬಣ್ಣಿಸುತ್ತ ಅನುವಾದಿಸುವ ಕಲೆಯನ್ನು ಅಭ್ಯಾಸ ಮಾಡಿದರು. ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯಲ್ಲಿ ಒಂದು ವರ್ಷಕಾಲ ಮಾತ್ರ ಕಾವ್ಯನಾಟಕಗಳ ಅಧ್ಯಯನ. ಅಷ್ಟರಲ್ಲಿ ಅವರ ಪೂಜ್ಯ ಪಿತೃಪಾದರ ಅಂತ್ಯಕಾಲ ಸಮೀಪಿಸಿದ್ದರಿಂದ ಅಧ್ಯಯನವನ್ನು ತೊರೆದು ಅವರು ಊರಿಗೆ

ಮರಳಬೇಕಾಯಿತು. ಸಂನ್ಯಾಸವನ್ನು ಸ್ವೀಕರಿಸಿ ಪಿತೃವರ್ಯರು ಬ್ರಹ್ಮೀಭೂತರಾದ ಮೇಲೆ ಶಾಸ್ತ್ರಿಗಳು ಒಂದು ವರ್ಷಕಾಲ ತಮ್ಮ ಮನೆಯಲ್ಲಿ ಆನಂದ ರಾಮಾಯಣ, ವಾಲ್ಮೀಕಿ ರಾಮಾಯಣಗಳನ್ನು ತಮ್ಮ ಪಿತೃವರ್ಯರ ಪ್ರೀತ್ಯರ್ಥವಾಗಿ ತಾವೇ ವಾಚಿಸಿಕೊಂಡು ಅನುವಾದಿಸುತ್ತಿದ್ದರು. ಪುರಾಣಗಳು, ಕಾವ್ಯಸಾಹಿತ್ಯಗಳನ್ನು ವ್ಯಾಖ್ಯೆಸಿ ಬಣ್ಣಿಸಿ ಹೇಳುವ ಅವರ ಆಸ್ಥೆ, ದಿನದಿಂದ ದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ವರ್ಧಿಸಿತು. ಸಂಸ್ಕೃತ ಕಾವ್ಯಗಳನ್ನು ಅನುವಾದಿಸಿ ಹೇಳುವಂತೆ ಗದುಗಿನ ಭಾರತ, ಜೈಮಿನಿಭಾರತ, ತೊರವೆ ರಾಮಾಯಣ, ನಳಚರಿತ್ರೆ, ಪ್ರಹ್ಲಾದಚರಿತೆ ಮುಂತಾದ ಕನ್ನಡ ಕಾವ್ಯಗಳನ್ನು ಅನುವಾದಿಸಬೇಕೆಂಬ ಆಕಾಂಕ್ಷೆ ಶಾಸ್ತ್ರಿಗಳವರ ಮನದಲ್ಲಿ ಮೊಳೆಯಿತು. ಇದಕ್ಕೂ ಮೂಲಪ್ರೇರಣೆ ಅವರ ಇಬ್ಬರು ಗುರುಗಳಿಂದ ಮತ್ತು ಇದೇ ಸಂದರ್ಭದಲ್ಲಿ ಮತ್ತೂರಿಗೆ ಆಗಮಿಸಿ ಕಾವ್ಯವಾಚನವನ್ನು ಮಾಡಿದ ಶ್ರೀ ಬಿಂದೂರಾಯರಿಂದ. ಈ ಬಿಂದುಮಾತ್ರ ಪ್ರೇರಣೆ ಅವರ ಹೃದಯದಲ್ಲಿ ಬೇರುಬಿಟ್ಟು ಬಲಿಯಿತು. ಕನ್ನಡ ಕಾವ್ಯಗಳ ಭಾಮಿನೀ, ವಾರ್ಧಕಷಟ್ಪದಿಗಳು ಸಂಸ್ಕೃತದ ಅನುಷ್ಟುಪ್‌ನಂತೆ ಮೊಟಕಲ್ಲ. ದೀರ್ಘವಾದ ಈ ಪದ್ಯಗಳನ್ನು ತಾವೇ ವಾಚಿಸಿಕೊಂಡು ಅನುವಾದಿಸುವುದು ಆಯಾಸಕರ. ಆದ್ದರಿಂದ ಅವರು ತಮ್ಮ ಬಾಲ್ಯದ ಸಹಪಾಠಿಗಳು ಶ್ರೀ ರಾಮಶಾಸ್ತ್ರಿಗಳವರನ್ನು ಕಾವ್ಯವಾಚನಕ್ಕೆ ಅಣಿಗೊಳಿಸಿದರು. ಶ್ರೀ ರಾಮಶಾಸ್ತ್ರಿಗಳಿಗೆ ಇಂಪಾದ ಕಂಠಶ್ರೀ ಇತ್ತು. ಈ ಗಾಯಕ ಗೆಳೆಯರ ವಾಚನ, ಶಾಸ್ತ್ರಿಗಳವರ ವ್ಯಾಖ್ಯಾನ. ಒಂದು ಏಕಾದಶಿ - ಊರಿನ ಹಿರಿಯರ ಮುಂದೆ- ಅವರ ಕಾರ್ಯಕ್ರಮಕ್ಕೆ ಓಂ ನಾಮ. ಹಿರಿಯರಿಂದ ಸಾಧುವಾದ ಮೆಚ್ಚುಗೆ. ಮತ್ತೊಂದು ಶಿವರಾತ್ರಿಯಂದು ಮತ್ತೊಂದು ಕಾರ್ಯಕ್ರಮ- ಈ ಪರಿಪಾಠ ಊರಿನ ಹಿರಿಯರ ಪ್ರೋತ್ಸಾಹ ಪಡೆದು ಮುಂದುವರಿಯಿತು. ಮನೆಯಲ್ಲಿ ಮಗಳ ಮದುವೆ - ಒಂದು ಭಾರತ ಕಾರ್ಯಕ್ರಮ; ಮಗನ ಉಪನಯನ- ಒಂದು ಭಾರತ ಕಾರ್ಯಕ್ರಮ- ಹೀಗೆ ಯಾರ ಮನೆಯಲ್ಲಿಯಾದರೂ ಒಂದು ಶುಭಕಾರ್ಯ ನಡೆದರೆ ಅದಕ್ಕೆ ಮಂಗಳರೂಪದಲ್ಲಿ ಭಾರತ - ಕಾರ್ಯಕ್ರಮದಿಂದ ಸಮಾಪನೆ. ಬರಬರುತ್ತಾ ರಾಮಶಾಸ್ತ್ರಿಗಳವರ ವಾಚನದ ಸೊಬಗು ಮತ್ತು ಲಕ್ಷ್ಮೀಕೇಶವಶಾಸ್ತ್ರಿಗಳವರ ವ್ಯಾಖ್ಯಾನದ ವೈಖರಿ ಊರಿನಲ್ಲಿ ಮನೆಮಾತಾಯಿತು. ಮನದಲ್ಲಿ ಮನೆಮಾಡಿತು. ಶ್ರೋತೃಗಳ ಶ್ರವಣಪುಟಕ್ಕೆ ಅಮೃತದ ಧಾರೆಯಾಯಿತು.

### *ಯದ್ಭಾವಂ ತದ್ಭವತಿ*

ಬಾಲ್ಯದ ಒಂದಾನೊಂದು ಸಂದಿಗ್ಧ ಕಾಲದಲ್ಲಿ ಎಳೆಯ ಮನ ಗರಿಗೆದರಿ ಸುಂದರ ಭವಿಷ್ಯದ ಕಡೆ ಹಾರಬಯಸುತ್ತದೆ. ಅದಕ್ಕೆ ತಕ್ಕಂತೆ ಮನದಲ್ಲಿ ಭಾವನೆಗಳು ಮೊಳೆತು ಬಲಿಯುತ್ತವೆ. ಬಲಿತ ಭಾವ ಸಂಕಲ್ಪಕ್ಕೆ ಪ್ರೇರಣೆ. ಸಂಕಲ್ಪ ದೃಢವಾಗಿ, ಮಾನವನನ್ನು ಕಾರ್ಯಕ್ಷೇತ್ರಕ್ಕೆ ಧುಮುಕಿಸುತ್ತದೆ.

ಶಾಸ್ತ್ರಿಗಳ ಲಕ್ಷ್ಯವು ಸಾರ್ಥಕ ಅನುವಾದಕನಾಗುವತ್ತ, ಸಮರ್ಥವ್ಯಾಖ್ಯಾನಕಾರನಾಗುವತ್ತ. ಇದಕ್ಕಾಗಿ ಅವರು ಮೂಲಭಾರತ, ನಾರಣಪ್ಪನ ಭಾರತ, ಮೂಲ ರಾಮಾಯಣ, ತೊರವೆ ರಾಮಾಯಣವನ್ನು ಒಟ್ಟಾಗಿ ಅಧ್ಯಯನ ನಡೆಸಿದರು. ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಗಂಟೆಗಟ್ಟಲೆ ಸಿದ್ಧತೆ ಮಾಡಿಕೊಳ್ಳುವರು. ಒಂದು ಪುಸ್ತಕವನ್ನಿಟ್ಟುಕೊಂಡು ಉಪಯುಕ್ತ ವಿಷಯಗಳನ್ನು ಸಂಗ್ರಹಿಸಿ ಬರೆದುಕೊಳ್ಳುವರು. ಎಲ್ಲಿ ಮೂಲ ಶ್ಲೋಕಗಳನ್ನು ಉದ್ಧರಿಸಬೇಕು- ಎಲ್ಲಿ ಉಪಕತೆಗಳನ್ನು ಹೇಳಬೇಕು, ಮತ್ತೆಲ್ಲಿ ದೃಷ್ಟಾಂತಗಳನ್ನೀಯಬೇಕು- ಶ್ರೋತೃಗಳಿಗೆ ಬೇಸರವಾಗದಂತೆ ಹಾಸ್ಯಚಟಾಕಿಗಳನ್ನು ಎಲ್ಲಿ ಹಾರಿಸಬೇಕು - ನೀತಿಶ್ಲೋಕಗಳನ್ನು ಎಲ್ಲಿ ಹೇಳಬೇಕು- ಹೀಗೆ ಕಾರ್ಯಕ್ರಮ ಆದ್ಯೋಪಾಂತವಾಗಿ- ಸಾಂಗೋಪಾಂಗವಾಗಿ ಚರಿತಾರ್ಥತೆಯನ್ನು ಪಡೆವಂತೆ - ಸಫಲವಾಗುವಂತೆ ಯೋಜಿಸಿ- ಪೂರ್ಣ ಸಿದ್ಧತೆ ಮಾಡಿಕೊಳ್ಳುವರು.

ಆ ಕಾಲದಲ್ಲಿ ಶಿವಮೊಗ್ಗೆಗೆ ಆಗಮಿಸುತ್ತಿದ್ದ ವರದಾಚಾರ್ಯರ ನಾಟಕ ಮಂಡಳಿ, ಗುಬ್ಬಿ ಕಂಪನಿ, ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ ಮುಂತಾದ ನಾಟಕ ಮಂಡಳಿಗಳ ಪೌರಾಣಿಕ ನಾಟಕಗಳಲ್ಲಿ ಬರುವ ಪಾತ್ರಗಳ ನಾಟ್ಯಗಾನಗಳನ್ನು ತಮ್ಮ ಕಾರ್ಯಕ್ರಮದಲ್ಲಿ ಪ್ರಭಾವಶಾಲಿಯಾಗಿ ಅಳವಡಿಸಿಕೊಂಡು ಕಾವ್ಯವಾಚನ ವ್ಯಾಖ್ಯಾನದ ತಮ್ಮ ಕಾರ್ಯಕ್ರಮವನ್ನು ಒಂದು ನಾಟ್ಯರೂಪಕದಂತೆ ನೂತನ ರೀತಿಯಲ್ಲಿ ನಿರೂಪಿಸತೊಡಗಿದರು. ಈ ಕಾರ್ಯಕ್ರಮ ಕಳೆಗೊಡುತ್ತ ಬಂತು. ಶ್ರೋತೃಗಳು ಇದನ್ನು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಕಾವ್ಯದಲ್ಲಿ ಬರುವ ರಸಕ್ಕೆ ತಕ್ಕಂತೆ ರಾಗಗಳನ್ನಳವಡಿಸಿಕೊಂಡು ರಾಮಶಾಸ್ತ್ರಿಗಳವರು ಉಬ್ಬುತ್ತ ಪದ್ಯಗಳನ್ನು ವಾಚಿಸುವರು. ಆ ರಾಗರಸಕ್ಕೆ ಉಬ್ಬುತ್ತ ಲಕ್ಷ್ಮೀಕೇಶವಶಾಸ್ತ್ರಿಗಳವರು ತಮ್ಮ ಧ್ವನಿಯನ್ನು ಏರಿಸಿ, ಕುಗ್ಗಿಸಿ, ಮೃದುಗೊಳಿಸಿ, ಕರ್ಕಶಗೊಳಿಸಿ ಕೈಗಳನ್ನು ಬೀಸುತ್ತಾ ಅದರ ಅರ್ಥವನ್ನು ವರ್ಣಿಸುವರು. ಕೇಳುವ ಮಂದಿ ಇವರಿಬ್ಬರ ಉಬ್ಬಿಗೆ ತಮ್ಮ ಹರ್ಷದುಬ್ಬರದಿಂದ ಇಂಬುಗೊಟ್ಟು ದೇಹವನ್ನೆಲ್ಲ ಕಿವಿ ಮಾಡಿಕೊಂಡು ಕುತೂಹಲದಿಂದ ಕೇಳುವರು. ಇಂತು ಪೂಜ್ಯ

ಲಕ್ಷ್ಮೀಕೇಶವಶಾಸ್ತ್ರಿಗಳು ಶ್ರೋತೃಗಳ ಅಂತಶ್ಚಕ್ಷುವಿನ ಮುಂದೆ ಭಾರತರಾಮಾಯಣಗಳಲ್ಲಿ ಬರುವ ಎಲ್ಲ ಪಾತ್ರಗಳನ್ನೂ ಅನುರೂಪರಾಗಿ ಬಿಂಬಿಸುತ್ತ ಸಫಲ, ಸಾರ್ಥಕ ವ್ಯಾಖ್ಯಾನಕಾರರಾಗಿ ವಿಜೃಂಭಿಸಿದರು.

### *ವಕ್ತಾರಃ ಕಿಂ ಕರಿಷ್ಯಂತಿ ಯತ್ರ ಶ್ರೋತಾ ನ ವಿದ್ಯತೇ*


ಕೇಳುವವನೊಬ್ಬನಿಲ್ಲದಿದ್ದರೆ ಹೇಳುವವರೇಸು ಜನರಿದ್ದೇನು? ಈ ಮರ್ಮವನ್ನರಿತ ಪೂಜ್ಯ ಶಾಸ್ತ್ರಿಗಳವರು ಶ್ರೋತೃವೃಂದದ ರುಚಿಯನ್ನೂ, ರಸಿಕತೆಯನ್ನೂ ಪರಿಷ್ಕರಿಸುವ ಸಲುವಾಗಿ ಊರವರ ಸಹಕಾರದಿಂದ **ಮತ್ತೂರು-ಹೊಸಹಳ್ಳಿ ಕರ್ನಾಟಕ ಸಂಘ** ಎಂಬ ಕನ್ನಡ ಸಂಘವೊಂದನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ ತ.ಸು. ಶಾಮರಾಯರು, ಎಂ.ಆರ್.ಶ್ರೀನಿವಾಸಮೂರ್ತಿ, ಮಾಸ್ತಿಯವರು, ಎಸ್.ವಿ.ಪರಮೇಶ್ವರಭಟ್ಟರು, ವಿ.ಸೀ. ಮುಂತಾದ ವಿದ್ವನ್ಮಣಿಗಳನ್ನು ಕರೆಸಿ ಅವರಿಂದ ಉಪನ್ಯಾಸಗಳನ್ನೂ, ಸೋಸಲೆ ರಾಮದಾಸರು, ಭದ್ರಗಿರಿ ಅಚ್ಯುತದಾಸರು, ವೇಣುಗೋಪಾಲದಾಸರು- ಇಂಥ ಭಕ್ತಮಣಿಗಳ ಹರಿಕಥಾಕಾಲಕ್ಷೇಪವನ್ನೂ, ಸಾಮಗ, ತೆಕ್ಕಟ್ಟೆ ಬಾಬು ಮುಂತಾದ ಯಕ್ಷಕಲಾ ಪ್ರವೀಣರಿಂದ 'ಪ್ರಸಂಗ'ಗಳನ್ನೂ ಏರ್ಪಡಿಸಿ, ಊರಿನ ಜನರಲ್ಲಿ ಸರ್ವತೋಮುಖವಾದ ಸಾಹಿತ್ಯಿಕ, ಸಾಂಸ್ಕೃತಿಕ ರುಚಿಯನ್ನು ಊರ್ಜಿತಗೊಳಿಸಿದರು. ಊರಿನ ಎಳೆಯರಿಗೂ, ಹುಡುಗರಿಗೂ ಸಂಸ್ಕೃತಪಾಠವನ್ನು ಹೇಳಿಕೊಡುತ್ತ, ಅವರನ್ನು ಆಡಿಸುತ್ತ, ಓಡಿಸುತ್ತ ವಿನೋದಗಳಿಂದ ಅವರನ್ನು ನಗಿಸುತ್ತ ಊರ ಹುಡುಗರ ಅಕ್ಕರೆಯ ಗುರುವಾಗಿ ಅವರ ಪ್ರೀತಿಪಾತ್ರರಾದರು. ಕರ್ನಾಟಕಸಂಘದ ಆಶ್ರಯದಲ್ಲಿ ಒಂದು ಗ್ರಂಥಾಲಯ- ಶಾರದಾ ಪುಸ್ತಕ ಭಂಡಾರ. ಇದರಲ್ಲಿಸಂಸ್ಕೃತದ ಉದ್ಗ್ರಂಥಗಳು, ಕನ್ನಡ ಉಚ್ಚಕೋಟಿಯ ಕತೆ, ಕಾದಂಬರಿ, ನಾಟಕಗಳು ಇದ್ದವು. **ಪ್ರಬುದ್ಧಕರ್ನಾಟಕ** ಎಂಬ ಸಾಹಿತ್ಯದ ಮಾಸಪತ್ರಿಕೆ, **ಅಧ್ಯಾತ್ಮಪ್ರಕಾಶ** ಎಂಬ ವೇದಾಂತ ಪತ್ರಿಕೆ, ಕೊರವಂಜಿ ಮುಂತಾದ ಪತ್ರಿಕೆಗಳ ಸಂಚಿಕೆಗಳು ಬರುತ್ತಿದ್ದವು. ಪೂಜ್ಯ ಶಾಸ್ತ್ರಿಗಳು ಇಂಥ ಪುಸ್ತಕಗಳನ್ನು ತಾವೂ ಓದಿ ಅದರಲ್ಲಿರುವ ಸ್ವಾರಸ್ಯಕರವಾದ ವಿಷಯಗಳನ್ನು ತಮ್ಮ ಜಾಣಮಾತಿನಿಂದ ಮತ್ತೊಬ್ಬರಿಗೂ ವರ್ಣಿಸಿ ಹೇಳಿ ಅವರೂ ಅದನ್ನು ಓದುವಂತೆ ಪ್ರೇರೇಪಿಸುವರು. ಈ ರೀತಿಯಲ್ಲಿ ಜನಗಳ ಅಭಿರುಚಿಯನ್ನು ಬೆಳೆಸಿ ಅದರೊಂದಿಗೆ ತಾವೂ ಮೇಲ್ಮಟ್ಟಕ್ಕೆ ಬಂದರು. ಅವರ ಕೀರ್ತಿಯ ಮೊಗ್ಗೆ ಬಿರಿದು ಊರಲ್ಲೆಲ್ಲ ಅದರ ಕಂಪನ್ನು ಸೂಸಿತಲ್ಲದೆ, ಗಾಳಿಯಲ್ಲಿ ತೇಲುತ್ತ ಹತ್ತಿರದ ಶಿವಮೊಗ್ಗ, ಭದ್ರಾವತಿ ಪಟ್ಟಣಗಳಿಗೆ ಸಹ ತನ್ನ ಸುಗಂಧವನ್ನು ಕೊಂಡೊಯ್ದಿತು. ಹೈಸ್ಕೂಲು-ಕಾಲೇಜು ಅಧ್ಯಾಪಕರ ಮನೆಗಳಲ್ಲಿ, ಪೋಲೀಸ್ ಆಫೀಸರ್ - ಜಿಲ್ಲಾಧಿಕಾರಿಗಳ ಬಂಗಲೆಗಳಲ್ಲಿ, ದೇವಾಲಯ ಪ್ರಾಂಗಣಗಳ ಚಪ್ಪರದಲ್ಲಿ, ಅವರ ಕಾವ್ಯವಾಚನ - ವ್ಯಾಖ್ಯಾನದ ಕಾರ್ಯಕ್ರಮಗಳು ಅದ್ದೂರಿಯಿಂದ ನಡೆಯತೊಡಗಿದವು. ಅವರ ಖ್ಯಾತಿ ಊರಿಂದ ಊರಿಗೆ, ಜಿಲ್ಲೆಯಿಂದ ಜಿಲ್ಲೆಗೆ ಪಸರಿಸಿತು.

### *ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ*

'ಶ್ರೀ ಚಾಮುಂಡೇಶ್ವರೀ ನಾಟಕ ಕಂಪನಿ'ಯಲ್ಲಿ ಮೈಸೂರು ಬಳಿಯ **ಕುಪ್ಪಹಳ್ಳಿ ಗ್ರಾಮದ ವೆಂಕಟೇಶಯ್ಯ**ನವರೆಂಬ ಓರ್ವ ನಟ ರಾಜಾಪಾರ್ಟು ಮಾಡುತ್ತಿದ್ದರು. ಒಳ್ಳೆಯ ಆಯಕಟ್ಟು, ತೇಜಃಪುಂಜ ಮುಖದಲ್ಲಿ ಹುಲಿಮೀಸೆ, ಮೇಘ ನಿರ್ಘೋಷದಂತಹ ದೃಢವಾದ ತುಂಬು ಶಾರೀರದ ಗಂಡುದನಿ. ನಾಟಕದ ಕಂದ - ಸೀಸಕಗಳೊಂದಿಗೆ ಲಕ್ಷ್ಮೀಶನ ವಾರ್ಧಕ ಷಟ್ಪದಿಗಳನ್ನು ಗಮಕಪೂರ್ಣವಾದ ನಾಟಕೀಯ ಗತ್ತಿನಲ್ಲಿ ಬಹು ಹೃದಯಂಗಮವಾಗಿ ವಾಚಿಸುವರು. ನಾಟಕ ಕಂಪನಿಯು ದುರ್ಭಾಗ್ಯದಿಂದ ನಿಂತುಹೋದ ಪ್ರಯುಕ್ತ ಅವರು ಮತ್ತೂರಿಗೆ ವಾಸ್ತವ್ಯಕ್ಕಾಗಿ ಆಗಮಿಸಿದರು. ಶಾಸ್ತ್ರಿಗಳ ಪಕ್ಷದಿಂದ ಇದೊಂದು ಕರ್ಮ ಧರ್ಮ ಸಂಯೋಗ. ಶ್ರೀ ರಾಮ ಶಾಸ್ತ್ರಿಗಳು ಮತ್ತು ಶ್ರೀ ವೆಂಕಟೇಶಯ್ಯನವರ ದ್ವಂದ್ವ ವಾಚನದೊಂದಿಗೆ ಪೂಜ್ಯ ಶಾಸ್ತ್ರಿಗಳ ಅಪೂರ್ವ ವ್ಯಾಖ್ಯಾನ. ಈ ಮೂವರಿಂದ ಮುಪ್ಪುರಿಗೊಂಡ ಕಾವ್ಯವಾಚನ-ವ್ಯಾಖ್ಯಾನ ಕಾರ್ಯಕ್ರಮ ದಿಗ್ವಿಜಯವನ್ನು ಪಡೆಯತೊಡಗಿತು. ಶಿವಮೊಗ್ಗ ನಗರದ **ತಿಮ್ಮಪ್ಪನ ಕೊಪ್ಪ**ಲಿನಲ್ಲಿ ಸಾವಿರಾರು ಜನ ಕುಳಿತು ಕೇಳಬಹುದಾದ ವಿಶಾಲವಾದ ಚಪ್ಪರದಲ್ಲಿ ಅವರ ಕಾರ್ಯಕ್ರಮ ತಿಂಗಳುಗಟ್ಟಲೆ ನಡೆಯಿತು. ಆ ಕಾರ್ಯಕ್ರಮದ ವ್ಯವಸ್ಥಾಪಕ ಈಗ ಸ್ವರ್ಗೀಯರಾಗಿರುವ ಧೀರೇಂದ್ರಾಚಾರ್. ಮೂವರೂ ಅನುಭವ ಪಟುಗಳಾದ ಮಧ್ಯವಯಸ್ಸಿನ ಕಲಾವಿದರು. ಶ್ರೀ ರಾಮಶಾಸ್ತ್ರಿಗಳು ತಮ್ಮ ಸಹಜವಾದ ಕಲೆಗಾರಿಕೆಯಿಂದ ಪದ್ಯಗಳನ್ನು ವಾಚಿಸುವರು. ಶ್ರೀ ವೆಂಕಟೇಶಯ್ಯನವರು ನಾಟಕದ ಅನುಭವ, ಶಾಸ್ತ್ರೀಯ ಸಂಗೀತದ ಮೇಲಿನ ಹತೋಟಿ, ಗಮಕಪೂರ್ಣವಾದ ಗತ್ತುಗಾರಿಕೆಗಳಿಂದ ಪದಗಳನ್ನು ಬಿಡಿಸಿ ಬಿಡಿಸಿ ಆಳಾಪಿಸುವರು. ಅವರಿಬ್ಬರ ಸಾಂಗತ್ಯಕ್ಕೆ ಕುಂದಣವಿಟ್ಟಂತೆ ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳು ತಮ್ಮ ಗಹನವಾದ ಜ್ಞಾನದ ಗಣಿಯಿಂದ ಒಂದೊಂದು ಉಪಮೆ, ಒಂದೊಂದು ದೃಷ್ಟಾಂತ, ಒಂದೊಂದು ಲೋಕೋಕ್ತಿಗಳನ್ನೆತ್ತಿ ಪದ್ಯದ ಅರ್ಥಕ್ಕೆ ಪ್ರಕಾಶವೀಯುತ್ತ

ಹಾವಭಾವಗಳೊಂದಿಗೆ ಬಿತ್ತರಿಸುವರು. ಕೇಳುವ ಜನ ನಿಶ್ಚೇಷ್ಟ! ನಿರ್ವಿಕಲ್ಪ! ಮಂತ್ರಮುಗ್ಧ! ಈ ಮೂವರ ಮಹೇಂದ್ರಜಾಲದಲ್ಲಿ ಸಮ್ಮುದಿತ; ಸಮ್ಮೋಹಿತ! ಸಾವಿರಾರು ಮಂದಿ ಹತ್ತಿರದಿಂದ, ದೂರದಿಂದ ಪ್ರತಿ ದಿನ ತಪ್ಪದೆ ಬಂದು ಇವರ ಕಾರ್ಯಕ್ರಮವನ್ನು ಆಲಿಸಿದರು, ಅಭಿನಂದಿಸಿದರು. ಭದ್ರಾವತಿ, ತರೀಕೆರೆ, ಬೀರೂರು, ಅರಸೀಕೆರೆ, ತಿಪಟೂರು, ಬೆಂಗಳೂರು, ಮೈಸೂರು, ಹಾಸನ ಈ ಎಲ್ಲ ಕಡೆಯಿಂದ ಅವರಿಗೆ ಕರೆ ಬರತೊಡಗಿತು. ಕಾವೇರಿಯಿಂದ ಗೋದಾವರಿಯವರೆಗೆ, ಬೆಂಗಳೂರಿನಿಂದ ಮಂಗಳೂರವರೆಗೆ, ಧಾರವಾರದಿಂದ ಕಾರವಾರದವರೆಗೆ ಅವರ ಯಶೋವಲಯ ವ್ಯಾಪಿಸಿತು. ಅನೇಕ ಕನ್ನಡಸಂಘಗಳ ಆಶ್ರಯದಲ್ಲಿ, ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ, ಗಣಪತಿ ಉತ್ಸವ, ರಾಮೋತ್ಸವ, ನವರಾತ್ರಿಯ ಉತ್ಸವ ಮತ್ತು ಶಂಕರಜಯಂತ್ಯುತ್ಸವ ಮುಂತಾದ ಸಮಾರಂಭಗಳಲ್ಲಿ, ರೇಡಿಯೋಗಳಲ್ಲಿ ಅವರ ಕಾರ್ಯಕ್ರಮಕ್ಕೆ ಒಲುಮೆ, ಬಲುಮೆ, ಹಿರಿಮೆಗಳು ದೊರಕಿದವು. ವಿಧಾನಸೌಧದ ಶಿಲ್ಪಿ, ಕನ್ನಡ ಪ್ರಾಚೀನ ಕಾವ್ಯ ಸಾಹಿತ್ಯಗಳ ಪುನರುದ್ಧಾರಕ್ಕೆ ಮೂಲ ಕಾರಣ, ಕರ್ನಾಟಕದ ಅಂದಿನ ಮಾನ್ಯ ಮುಖ್ಯ ಸಚಿವ- ಇಂದು ಸತ್ತು ಸ್ವರ್ಗದಲ್ಲಿರುವ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ರಾಜ್ಯಾದ್ಯಂತ '**ಸಂಸ್ಕೃತಿಪ್ರಸಾರಯೋಜನೆ**'ಯೆಂಬ ಕಾರ್ಯಕ್ರಮವನ್ನು ಹಾಕಿಕೊಂಡು, ಹಳ್ಳಿಹಳ್ಳಿಗಳಲ್ಲಿ ನಾಡಿನ ಮೂಲೆಮೂಲೆಗಳಲ್ಲಿ ಕನ್ನಡದ ಹಿರಿಯ ವಿದ್ವಾಂಸರ ಉಪನ್ಯಾಸಗಳು, ಕಲಾವಿದರಿಂದ ನಾಟಕ ರೂಪಕಗಳು, ಹರಿಕಥೆ - ಶಿವಕಥೆಗಳು, ಕಾವ್ಯವಾಚನ - ವ್ಯಾಖ್ಯಾನಗಳು ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳನ್ನೇರ್ಪಡಿಸಿ ಕಲಾವಿದರುಗಳಿಗೆ ಸರ್ಕಾರದ ವತಿಯಿಂದ ಸಂಭಾವನೆಯನ್ನು ಗೊತ್ತುಪಡಿಸಿದರು. ಈ ಯೋಜನೆಯಲ್ಲಿ ನಮ್ಮ ಪೂಜ್ಯ ಶಾಸ್ತ್ರಿಗಳವರಿಗೆ ಸಹ ಸದವಕಾಶ ದೊರಕಿತು. ಈ ಮಾಧ್ಯಮದಿಂದಲೂ ಪೂಜ್ಯ ಶಾಸ್ತ್ರಿಗಳವರ ವ್ಯಾಖ್ಯಾನದ ಖ್ಯಾತಿ ನಾಡಿನಾದ್ಯಂತ ಹರಡಿತು.

ಈ ಮಧ್ಯೆ ಅವರ ನೆಚ್ಚಿನ ಓದುಗ, ಬಾಲ್ಯದ ಕೂಡಾಡಿ, ಅವರ ಇಂಗಿತವರಿತು ಪದ್ಯಗಳನ್ನು ಅವರ ಮನೋಭಾವಕ್ಕೆ ಪುಷ್ಟಿಕೊಡುವಂತೆ ವಾಚಿಸುತ್ತಿದ್ದ ಶ್ರೀ ರಾಮಶಾಸ್ತ್ರಿಗಳು ಅವರನ್ನಗಲಿ ಗೋಲೋಕವನ್ನು ಸೇರಿದರು. ಅವರ ವಿರಹದಿಂದ ಶಾಸ್ತ್ರಿಗಳ ಕಾರ್ಯಕ್ರಮ, ಸಾರಥಿಯಿಲ್ಲದ ಕರ್ಣನ ರಥದಂತೆ ವೈಧುರ್ಯದಲ್ಲಿ ಕೆಲ ಕಾಲ ತೊಳಲಾಡಿತು. ಆದರೆ ಶಾಸ್ತ್ರಿಗಳ ವ್ಯಾಖ್ಯಾನಕಲೆ ಸರ್ವತಂತ್ರ ಸ್ವತಂತ್ರ; ಸ್ವಯಂಭೂಕಲೆ. ವಾಚಕ ಅವರಿಗೆ ನೆಪ ಮಾತ್ರ. ಬೆಚ್ಚದೆ, ಬಸವಳಿಯದೆ ತಮ್ಮೀ ವಿಶಿಷ್ಟವಾದ ವಿಭೂತಿಯನ್ನು ಕೆಲಕಾಲ ಊರಿನ ಉದಯೋನ್ಮುಖ ಕಲಾವಿದರುಗಳ ವಾಚನದೊಂದಿಗೆ, ಕಡೆಗೆ ನವಜಾತ ಕಲಾವಿದರುಗಳ ವಾಚನದೊಂದಿಗೆ ಸಹ ಅವರು ಕುಗ್ಗದೆ ಕಾಪಿಟ್ಟುಕೊಂಡು ಬಂದರು. ದೂರದೂರದ ಕಾರ್ಯಕ್ರಮಗಳಲ್ಲಿ ಶ್ರೀ ವೆಂಕಟೇಶಯ್ಯನವರ ಸಹಕಾರ ಇತ್ತೇ ಇತ್ತು. ಆದರೂ ವಯೋಮಾನದ ದುರ್ಬಲತೆಯಿಂದ ವೆಂಕಟೇಶಯ್ಯನವರು ಸಹವಾಚನದಿಂದ ನಿವೃತ್ತರಾದ ಮೇಲೆ ಅವರ ಶಿಷ್ಯ ಹೊಸಹಳ್ಳಿಯ ಎಚ್.ಆರ್. ಕೇಶವಮೂರ್ತಿ ಎಂಬ ತರುಣ ವಾಚನಕಲಾವಿದನ ಸಾಹಚರ್ಯದಲ್ಲಿ ಪೂಜ್ಯಶಾಸ್ತ್ರಿಗಳು ನೂರಾರು ಕಾರ್ಯಕ್ರಮಗಳನ್ನು ಜರುಗಿಸಿದ್ದಾರೆ. ಶಾರೀರದ ಇಂಪು, ಕಂಪು, ಸೊಂಪುಗಳಿಂದ ರಾಗದ ಮಂದ್ರ, ಮಧ್ಯ ತಾರಗಳಲ್ಲಿ ಲೀಲಾಜಾಲವಾಗಿ ಸಂಚರಿಸಿ ಶ್ರೋತೃಗಳನ್ನು ಮೋಹಿಸಬಲ್ಲ ಶ್ರೀ ಕೇಶವ ಮೂರ್ತಿಗಳು ಸ್ವರ್ಗೀಯ ವೇ. ಬ್ರ. ಶ್ರೀ ರಾಮಸ್ವಾಮಿಶಾಸ್ತ್ರಿಗಳ ವರಪುತ್ರ. ಇವರ ಪಿತೃವರ್ಯರಿಗೆ ವೇದ ವೇದಾಂತ, ಕಾವ್ಯ



*2. (ಎಚ್.ಆರ್. ರಾಮಶಾಸ್ತ್ರಿಗಳೊಂದಿಗೆ) ಕೇಳು ಜನಮೇಜಯ ಧರಿತ್ರೀಪಾಲ . . .*

ಸಾಹಿತ್ಯಗಳ ಪರಿಣತಿಯಿದ್ದುದಲ್ಲದೆ ನುಣುಪಾದ ಕೊರಲದನಿ ಸಹ ಇತ್ತು. ಅನೇಕ ಸಂಸ್ಕೃತ ಪುರಾಣಗಳನ್ನು ಅವರು ಇಂಪಾಗಿ ವಾಚಿಸಿಕೊಂಡು ಹೇಳಿರುವರು. ಪೂಜ್ಯ ಲಕ್ಷ್ಮೀಕೇಶವ ಶಾಸ್ತ್ರಿಗಳೊಂದಿಗೆ ಸಹ ಆರಂಭದಲ್ಲಿ ಕೆಲಕಾಲ ವಾಚನದ ಸಾಹಚರ್ಯವಿತ್ತಿದ್ದರು. ಅಂಥವರ ಮಗನಾದ ಕೇಶವಮೂರ್ತಿಗಳು ಆನುವಂಶಿಕವಾಗಿ ಬಂದ ಸಂಗೀತದ ಅಭಿಜ್ಞತೆ, ಕಂಠಶ್ರೀಯ ನುಣುಪು ಹಾಗೂ ಸಾಹಿತ್ಯದ ನಿರ್ದಿಷ್ಟ ಜ್ಞಾನಗಳಿಂದ, ಮೇಲಾಗಿ ಶ್ರೀ ವೆಂಕಟೇಶಯ್ಯನವರ ನೆಚ್ಚಿನ ಶಿಷ್ಯನಾಗಿ ಸಂಪಾದಿಸಿದ ಗಮಕಕಲೆಯ ಪ್ರೌಢಿಮೆಗಳಿಂದ, ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳಿಗೆ ಅಭೂತಪೂರ್ವವಾದ ಸಹಕಾರವಿತ್ತು ಶಾಸ್ತ್ರಿಗಳ ವ್ಯಾಖ್ಯಾನವೈಖರಿಗೆ ಮುಕುಟವಿಟ್ಟಿದ್ದಾರೆ. ತಾವೂ ಉನ್ನತವಾದ ಯಶಸ್ಸನ್ನು ಪಡೆದು ಕೃತಾರ್ಥರಾಗಿದ್ದಾರೆ. ವಯೋಮಾನ ಜ್ಞಾನಮಾನಗಳಲ್ಲಿ ಶಾಸ್ತ್ರಿಗಳಿಗೆ ಚಿರಂಜೀವರಾದರೂ ಅವರ ಸರಳವಾದ ಪ್ರೋತ್ಸಾಹ ಮತ್ತು ಸ್ವಯಂ ಪ್ರತಿಭೆಯಿಂದ ಶ್ರೀ ಕೇಶವಮೂರ್ತಿಗಳು ಪೂಜ್ಯ ಶಾಸ್ತ್ರಿಗಳ ಹೆಗಲಿಗೆ ಹೆಗಲಿತ್ತು ದುಡಿದಿದ್ದಾರೆ. ಪೂಜ್ಯಶಾಸ್ತ್ರಿಗಳ ಸಹವಾಸ ಸ್ಪರ್ಶಶಿಲೆಯಂತೆ. ಕವಿವರ್ಯ ನಾರಣಪ್ಪನ ಬಗೆಗೆ- 'ಈತನ ಹೆಸರು ಹೇಳಿದವರಿಗೆ ಸಹ ಶಬ್ದದಾರಿದ್ರ್ಯ ಬಾರದು' ಎಂಬ ಪ್ರಶಂಸೆಯಿರುವಂತೆ ಪೂಜ್ಯರಾದ ಶಾಸ್ತ್ರಿಗಳ ಸಾಹಚರ್ಯವೊಂದೇ ಸಾಕು, ಎಂತಹ ಪಾಮರನನ್ನಾದರೂ ಪಾವನಗೊಳಿಸಬಲ್ಲುದು. ಶ್ರೀ ಕೇಶವಮೂರ್ತಿಗಳ ಬಗ್ಗೆ ಹೇಳಲೇನಿದೆ? ಪೂರ್ವಾರ್ಜಿತ ಪಾಥೇಯ ಸ್ವಯಂಸಾಧನೆ ಮೇಲೆ ಚಿನ್ನಕ್ಕೆ ಪರಿಮಳವಿತ್ತಂತೆ ಪೂಜ್ಯ ಶಾಸ್ತ್ರಿಗಳ ಸಹವಾಸ. ಇವರ ಕಾವ್ಯವಾಚನ ಕರ್ನಾಟಕದಲ್ಲಿ ಒಂದು ವಿಶಿಷ್ಟ ಪರಂಪರೆಯನ್ನೇ ಹರಡಿದೆ.

**ವಾಲ್ಮೀಕಿಗೀತರಘುಪುಂಗವಸಚ್ಚರಿತ್ರೈಃ ತೃಪ್ತಿಂ ಕರೋಮಿ ಕಥಮಪ್ಯಧುನಾ ಬುಧಾನಾಮ್** ಎಂದು ಚಂಪೂಕವಿ ಚರಿತಾರ್ಥತೆಯನ್ನು ಪಡೆದಂತೆ ಪೂಜ್ಯರಾದ ಲಕ್ಷ್ಮೀಕೇಶವಶಾಸ್ತ್ರಿಗಳು ಸಹ ಕುಮಾರವ್ಯಾಸನ ಹಾಡಿನಿಂದ ಸ್ಫೂರ್ತಿಗೊಂಡು ಕರ್ನಾಟಕದ ರಸಿಕ ಜನತೆಗೆ ತಮ್ಮ ವ್ಯಾಖ್ಯಾನಕೌಶಲ್ಯದ ರಸದೌತಣವಿಕ್ಕಿ ತಾವೂ ರಸರಾಜರಾಗಿ 'ರಸೋ ವೈ ಸಃ' ಎಂಬ ಧನ್ಯತೆಯನ್ನು ಪಡೆದಿದ್ದಾರೆ. ಶೃಂಗಾರ, ವೀರ, ಕರುಣ ಮುಂತಾದ ಯಾವುದೇ ರಸವನ್ನು ತಮ್ಮ ಹಾವಭಾವಗಳಲ್ಲಿ, ತಮ್ಮ ಕಣ್ಮನಗಳಲ್ಲಿ, ಮೈಯಿನ ಒಂದೊಂದು ರೋಮ, ಒಂದೊಂದು ತಂತುವಿನಲ್ಲಿ, ಸಮಾವೇಶಗೊಳಿಸಿಕೊಂಡು ಅದರ ಪರಿಪಾಕದ ಅಮೃತಕುಂಭವನ್ನು ಶ್ರೋತೃವೃಂದದಲ್ಲಿ ಉಣಬಡಿಸಿದ್ದಾರೆ. ತಾಯಿ ಮಗನನ್ನು ರಮಿಸಿ ಉಣಿಸುವಂತೆ-ಅವನುಂಡುದನ್ನು ಕಂಡು ಆನಂದಿಸುವಂತೆ ಶ್ರೋತೃಗಳೊಂದಿಗೆ ಸ್ಪಂದಿಸಿದ್ದಾರೆ. ಭಾರತವೊಂದೇ ಅಲ್ಲ, ತೊರವೆ ರಾಮಾಯಣ, ಹರಿಶ್ಚಂದ್ರಕಾವ್ಯ, ಜೈಮಿನಿ, ರಾಮಾಯಣದರ್ಶನ ಇತ್ಯಾದಿ ಪುರಾತನ, ವಿನೂತನ ಕನ್ನಡ ಕಾವ್ಯಗಳನ್ನು ಭೇದವಿಲ್ಲದೆ ಆಯಾ ಕವಿ ಹೃದಯಗಳೊಂದಿಗೆ ಅನುಕಂಪನಗೊಂಡು ಹಿಂದಿನ ಸಾಂಸ್ಕೃತಿಕ, ಸಾಹಿತ್ಯಿಕ ಪೀಳಿಗೆಯ ಹಿರಿಮೆ-ಗರಿಮೆಗಳನ್ನು, ಕೇಳುವ ಹಿರಿ-ಕಿರಿಯರ ಮುಂದೆ ಅರ್ಘ್ಯದಂತೆ ಚೆಲ್ಲುತ್ತ ಆ ಹಿರಿಮೆಯ ಸಂವಾಹಕರಾಗಿ ತಮ್ಮ ಬಾಳುವೆಯನ್ನು ಗಂಧತೇಯ್ದಂತೆ ತೇಯ್ದಿದ್ದಾರೆ. ಈ ಪರಿಪಾಟಿಯನ್ನು ಬೆಳೆಸಿಕೊಂಡು ಹೋಗುವಂತೆ ಪ್ರತ್ಯಕ್ಷ-ಪರೋಕ್ಷಗಳಿಂದ ಪ್ರೇರಣೆಯಿತ್ತಿದ್ದಾರೆ. ಇತ್ತೀಚೆಗೆ ಮತ್ತೂರು -ಹೊಸಹಳ್ಳಿ ಗ್ರಾಮಗಳಲ್ಲಿ ಕಂಡುಬರುವ ಗಮಕ ಕಲಾವಿದರು, ಗಮಕ ತರಗತಿಗಳು - ಉದಯೋನ್ಮುಖ ವ್ಯಾಖ್ಯಾನಕಾರರು - ಶಾಸ್ತ್ರಿಗಳವರ ಈ ಪ್ರೇರಣೆಗೆ ಜೀವಂತ ಸಾಕ್ಷಿ. ತಾನೊಬ್ಬನೇ ಪರಮಪದವನ್ನು ಕಂಡರೆ ಸಾಲದು, ತನ್ನ ಕೂಡ ನಾಡ ಜನಕೋಟಿಯೂ ಈ ಪದವಿಯ ಪಾರಮ್ಯವನ್ನು ಪಡೆಯಲೆಂಬುದು ಶಾಸ್ತ್ರಿಗಳವರ ಸದಿಚ್ಛೆ- ಸದಾಶಯ. ಜಂಗಮನ ಸಾರ್ಥಕತೆ ಶಿವದಲ್ಲಿ, ಶಿವನಲ್ಲಿ. ಶಿವತತ್ತ್ವವನ್ನು ಕಂಡು, ಶಿವತತ್ತ್ವವನ್ನುಂಡು, ಶಿವತತ್ತ್ವವನ್ನುಣಿಸಿ-ಎಲ್ಲರಲ್ಲಿ ತಾನು- ತನ್ನಲ್ಲಿ ಎಲ್ಲರೂ, ಶಿವಮಯವಾಗಬೇಕೆಂಬ ವಿರಾಟ್‌ಭಾವದ ಸಾಕ್ಷಾತ್ ಮಂಗಳಮಯ ಮೂರ್ತಿ ಪೂಜ್ಯ ಶಾಸ್ತ್ರಿಗಳವರದು. ಇಂದಿನ ಪರಮಾಣುಯುಗದ ಪರಿಭ್ರಮೆಯಲ್ಲಿ ಸಂಭ್ರಾಂತಮಾನವ ತನ್ನ ಚಿತ್ತಶಾಂತಿಯನ್ನು ಕಳೆದುಕೊಂಡು ಭೌತಿಕಸುಖವೆಂಬ ಭೂತದ ಬೆನ್ನಹತ್ತಿ, ವಿಶ್ವಭ್ರಾತೃತ್ವದ ಸೌಹಾರ್ದವನ್ನು ಗಾಳಿಯಲ್ಲಿ ಈಡಾಡಿ - ದ್ವೇಷ ಅಸೂಯೆಗಳಿಗೆ ಮನತೆತ್ತು ಅನೇಕಾನೇಕ ಪರಮಾಣು ಬಾಂಬ್, ಜಲಜನಕದ ಬಾಂಬ್ ಮುಂತಾದ ಮಾರಣಹೋಮಕ್ಕೆ ಬೇಕಾದ ಹವ್ಯಕವ್ಯಗಳನ್ನು ಅಣಿಮಾಡಿಕೊಂಡು ಸ್ವಾಹಾಕಾರದ ಉದ್ಘಾನಕ್ಕಾಗಿ ಕಾಯುತ್ತಿದ್ದಾನೆ. ಪಾಂಡವ ಕೌರವ ಸೇನೆ ಇಡಿಯ ವಿಶ್ವವನ್ನೇ ರಣರಂಗವನ್ನಾಗಿ ಮಾಡಿಕೊಂಡು ಸಿದ್ಧವಾಗಿ - ಯುದ್ಧಸನ್ನದ್ಧವಾಗಿ ನಿಂತಿದೆ. ಹದಿನೆಂಟು ಅಕ್ಷೌಹಿಣಿಯ ಬದಲು ನೂರೆಂಟು ಅಕ್ಷೌಹಿಣಿ ವಿಶ್ವದ ಜನತೆ ದಿಕ್ಕು ತೋಚದೆ ಕಂಗಾಲಾಗಿ ತತ್ತರಿಸುತ್ತ ನಿಂತು ನೋಡುತ್ತಿದೆ. ಮಹಾ ವಿನಾಶದ ತಾಂಡವಲೀಲೆಯಿಂದ ಇಡಿಯ ಜಗತ್ತೇ ಉರಿದು ಒಂದು ಮಹಾ ಶ್ಮಶಾನವಾದೀತೆಂಬ ಭೀತಿ ಎಲ್ಲರನ್ನೂ ಮುಸುಕಿದೆ. ಮೃತ್ಯುವಿನ ಕರಾಳ ಛಾಯೆ ಮೂಲೆಮೂಲೆಯಲ್ಲಿ ಅವ್ಯಕ್ತ ಆತಂಕವನ್ನು ಬೀರುತ್ತಿದೆ. ತನ್ನ ಗೋರಿಯನ್ನು ತಾನೇ ತೋಡಿಕೊಂಡು ಅದರಲ್ಲಿ ಬೀಳಲಾರದೆ - ಸಾಯಲಾರದೆ ಅವಶವಾಗಿ 'ಅವಧರಿಸು ಜೀಯ, ಅವತರಿಸು ಪ್ರಭು!' - ಎಂದು ಆರ್ತಸ್ವರದಿಂದ ಅರಚುತ್ತಿದೆ. ಇಂಥ

ಪ್ರಕ್ಷುಬ್ಧತೆಯ ಕಾರಿರುಳಲ್ಲಿ ವಿನಾಶದ ಅಂಧತಮಸ್ಸಿನ ಮಹಾಕೂಪ ಬಾಯ್ದೆರೆದುಕೊಂಡಿರುವಾಗ - ಇದೇ ವಿಶ್ವದ ಯಾವುದೋ ಒಂದು ಮೂಲೆಯಿಂದ ಗಾಳಿಯಲ್ಲಿ ತೇಲಿಬರುವ- 'ಅರುಹಬಾರದು ಮುಂದೆ ಬಹ ದಿನ ಬಿರಿಸು ನೀನೆಚ್ಚೆತ್ತು ನಡೆ ಮೈಮರೆಯದಿರು ನಿನ್ನಾತ್ಮಜರ ವೈರಾನುಬಂಧದಲಿ ಬರಿದಹುದು ಬ್ರಹ್ಮಾಂಡ ನೀನದನರಿಯೆ' - ಎಂಬ 'ಋಷಿವಾಣಿ'ಯ ಆತ್ಮವನ್ನು ಹೊಕ್ಕು - 'ಲೋ ಪಾಪಿ, ಧೃತರಾಷ್ಟ್ರ! ನೀನಾದರೂ ಹೇಳೋ ನಿನ್ನ ಮಕ್ಕಳಿಗೆ! *ಈ* ದಾಯಾದಿ ಮತ್ಸರ ಒಳ್ಳೇದಲ್ಲ ಕಣೋ! *ಈ* ಜಗತ್ತಿನಲ್ಲಿ ಭೂಮಿ ಯಾರಿಗೆ ಒಲಿದಿದ್ದಾಳೋ? ಯಾರಿಗೂ ಸ್ಥಿರ ಅಲ್ಲ ಕಣೋ! ಹೊಡೆದಾಡಬೇಡ್ರೋ! ಸರ್ವನಾಶ ಆಗಿಬಿಡುತ್ತೆ ಕಣೋ!' ಎಂದು ವಿದುರ ಹೇಳಿದ ಮಾತನ್ನು ನಮ್ಮನಿಮ್ಮಂತಹ ಇಡಿಯ ವಿಶ್ವದಲ್ಲಿ ತುಂಬಿ ತುಳುಕಾಡುತ್ತಿರುವ ಧೃತರಾಷ್ಟ್ರರಿಗೆ, ಒರಲಿ ಒರಲಿ ಕ್ಷೀಣತರವಾಗುತ್ತ ಬರುತ್ತಿರುವ ಶಾಸ್ತ್ರಿಗಳವರ ಧ್ವನಿ ಇಕೋ *ಈ* ನಾದಗರ್ಜಿತ ನಭೋಮಂಡಲದಲ್ಲಿ ಕರಗಿ ವಿಲೀನವಾಗುತ್ತಿದೆ. 'ಊರ್ಧ್ವಬಾಹುರ್ವಿರೌಮಿ' - ಎಂದು ಪ್ರಪಂಚಕ್ಕೆ ಶಾಂತಿ ಸಂದೇಶವನ್ನು ಸಾರುವ ಎತ್ತಿದ ಕೈಗಳೆರಡೂ ಬಳಲಿ ಕುಸಿಯುತ್ತಿವೆ. ಊರ್ಧ್ವವೀರ್ಯದ ಪ್ರಾಣಶಕ್ತಿ ಕುಗ್ಗುತ್ತಿದೆ- ಕುಂಟುತ್ತಿದೆ.

'ಸಂಜೆಯ ಸೂರ್ಯ ಪಶ್ಚಿಮದಲ್ಲೇ ಮುಳುಗುವನು. ಬಾಲ ಸೂರ್ಯ ಪೂರ್ವದಲ್ಲೇ ಉದಯಿಸಲು ಸಾಧ್ಯ' - ಎಂಬ ಶಾಶ್ವತ ಸತ್ಯದ ನಂದಾದೀಪವನ್ನು ಬೆಳಗಿರಿ. 'ಸಂಜೆಯ ಸೂರ್ಯ ಜಗತ್ತಿನ ನಿದ್ದೆಯಲ್ಲಿ ಪರಿಣಮಿಸಿದರೆ ಉದಯಾದಿತ್ಯ ಜಗದ ಜಾಗೃತಿ- ವಿಶ್ವ ವ್ಯಾಪಾರಗಳ ಪ್ರೇರಣೆಗೆ ನಾಂದೀಮುಖನಾಗುವ'ನೆಂಬುದನ್ನು ಸಹ ಡಂಗುರ ಹೊಡೆಯಿರಿ.

**ಮಂತ್ರಪುಷ್ಪ**

ಆರಂಭದಲ್ಲಿ ಮತ್ತೂರು ಹೊಸಹಳ್ಳಿ *ಈ* ಎರಡು ಗ್ರಾಮಗಳು ಅಕ್ಕತಂಗಿಯರಂತೆ ಎಂದು ಹೇಳಿದೆ. ಅದನ್ನೇ ಎತ್ತಿ ತೋರುವ ಸಲುವಾಗಿ ತುಂಗಾನದಿಯಲ್ಲಿ ಹೊಸಹಳ್ಳಿಯ ಎದುರಿಗೆ ಅಕ್ಕತಂಗಿ ಕಲ್ಲು ಎಂಬ ಎರಡು ಬಂಡೆಗಳಿವೆ. ಅದರ ಪಕ್ಕದಲ್ಲಿ ಅಕ್ಕತಂಗಿ ಊರಿಗೆ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ ಊರಿನ ತರುಣರು ನದಿಯ ಬಂಡೆಗಳನ್ನು ಒಡೆದು ಒಂದು 'ಪಾದ ಸೇತು' (ಕಾಲು ಹೊಳೆ ಎಂದು ಅಲ್ಲಿನ ಬಳಕೆ)ವನ್ನು ನಿರ್ಮಿಸಿದ್ದಾರೆ. ಎರಡು ಊರಿನ ಜನರಿಗೂ ಯಾತಾಯಾತಕ್ಕೆ ಇದೊಂದು ಬೇಸಿಗೆಯ ಮಾಧ್ಯಮ (ಬೆಸುಗೆಯ ಎಂದರೇ ಹೆಚ್ಚು ಹಿತ). ಪೂಜ್ಯ ಶಾಸ್ತ್ರಿಗಳವರ ಮಾತೃಶ್ರೀಯವರು ಹೊಸಹಳ್ಳಿಯ ಸಾವಿತ್ರಕ್ಕ. ಶಾಸ್ತ್ರಿಗಳವರ ತಂಗಿ ಅನ್ನಪೂರ್ಣಮ್ಮ ಹೆಸರಿಗೆ ಶೋಭಿಸುವಂತೆ ಸ್ವನಾಮಧನ್ಯೆ, ಹೊಸಹಳ್ಳಿಯ ಸಾಹುಕಾರ್ ಸುಬ್ರಾಯಶಾಸ್ತ್ರಿಗಳವರ ಧರ್ಮಪತ್ನಿ. ಪೂಜ್ಯ ಶಾಸ್ತ್ರಿಗಳವರ ಮಾತೃತೀರ್ಥ ಹೊಸಹಳ್ಳಿಯಿಂದ ಹರಿದು ಬಂದುದು ಎಂದು *ಈ* ಮೊದಲೇ ಹೇಳಿದೆ. *ಈ* ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ಪೂಜ್ಯಶಾಸ್ತ್ರಿಗಳವರ ತಂಗಿಯನ್ನು 'ಅನ್ನಪೂರ್ಣೆ'ಯಾಗಿ ಹೊಸಹಳ್ಳಿಗೆ ಕಾಣಿಕೆಯಿತ್ತಿದೆ. *ಈ* ಕಾಣಿಕೆಗೆ ಪ್ರತಿಯಾಗಿ *ಈ*ಗ ಹೊಸಹಳ್ಳಿ *ಈ* ಎರಡು ಊರುಗಳ ಪಾರಸ್ಪರಿಕ ಅನುಭಾವದಿಂದ ಪುಳಕಗೊಂಡು ಪೂಜ್ಯ ಶಾಸ್ತ್ರಿಗಳವರಿಗೆ ಒಂದು ಪುಷ್ಪಾಂಜಲಿಯಿತ್ತಿದೆ. ಇತ್ತೀಚೆಗೆ ಸುಮಾರು ಎಂಟು ತಿಂಗಳ ಕಾಲ ನಡೆದ ಪೂಜ್ಯ ಶಾಸ್ತ್ರಿಗಳ ಮತ್ತು ಎಚ್.ಆರ್. ಕೇಶವಮೂರ್ತಿಗಳ ಸಮಗ್ರ ಕುಮಾರವ್ಯಾಸ ಭಾರತದ ವಾಚನ ವ್ಯಾಖ್ಯಾನಗಳ ಧ್ವನಿ ಮುದ್ರಿಕೆಯು- ತಮ್ಮ ಆಯುವಿನ ಅಶೀತಿಯನ್ನು ವೇದವ್ಯಾಸ ಕುಮಾರವ್ಯಾಸರ ಅಮರ ಕೃತಿಗಳ ಅಗ್ರದೌತ್ಯಕ್ಕಾಗಿ ನವೆಸಿ ಸವೆಸಿ ಜರೆಯುಂಡ *ಈ* ಅಜರನಿಗೆ ವಾಲ್ಮೀಕಿಯ ರಾಮಾಯಣ -ತೊರವೆ ರಾಮಾಯಣ- ಯಾವ ರಾಮಾಯಣವಾದರೇನು?-ಕಾವ್ಯಾಲಾಪ ತಾನೆ- ಯಾವ ರಾಮ ಯಾವ ನಾಮವಾದರೇನು?- ರಾಮನೆಲ್ಲ ನಾಮವೇ- ನಾಮವೆಲ್ಲ ರಾಮನೇ - ಎಂಬ ಅಭಿನ್ನತತ್ತ್ವದ ಅನುಭವವೀಂಟಿ ಆಂಜನೇಯನ ಚಿರಜೀವತ್ವವನ್ನು ಅರೆದು ನುಂಗಿದ ಆ ಅನಂತನಿಗೆ, ಭಾರತ ರಾಮಾಯಣಗಳೆರಡರ *ಈ* ಪರಿಪೂರ್ಣ ದಿವ್ಯಭಾಂಡೋದರನಿಗೆ, ಕನ್ನಡ ನಾಡಿನ ದಿಗ್ದೆಸೆಗಳಲ್ಲೆಲ್ಲ ಕುಮಾರವ್ಯಾಸನ ಕ್ಷೀರಕ್ಕೆ ತಮ್ಮ ತನಿಬೆಲ್ಲವಿಕ್ಕಿದ ಮಾತಿನ ಸವಿವೆರಸಿ ಕೇಳುವ ಸುಜನರಿಗೆ ಅರವಟ್ಟಿಗೆಯಿಟ್ಟು ಪಾನ ಮಾಡಿಸಿದ *ಈ* ವ್ಯಾಖ್ಯಾನಪಾನೀಯಧಾರಕ ಧುರಂಧರನಿಗೆ, ತಮ್ಮ ಜಾಗೃತಿ, ಸ್ವಪ್ನ ಸುಷುಪ್ತಿಗಳಲ್ಲಿ ಕೇವಲ 'ಭಾರತ, ಭಾರತ' ಎಂದು ನಾಮಸ್ಮರಣೆ ಮಾಡುತ್ತ ಅದನ್ನೇ ಮಣಿಗಳಾಗಿ ಕೋದು ಅಂಥ ಮಣಿಮಾಲೆಯನ್ನೇ ಹಿಡಿದು ಅನವರತ ಜಪಿಸುವ *ಈ* ಸಿದ್ಧತಪಸ್ವಿಗೆ - *ಈ* ಧ್ವನಿಮುದ್ರಿಕೆ ಅಸೀಮ ಭಕ್ತಿ ಪುರಸ್ಸರವಾದ ಪುಷ್ಪಾಂಜಲಿ.

ಇದು ದೃಶ್ಯಾದೃಶ್ಯ ಜಗತ್ತು. ಪೂಜ್ಯ ಶಾಸ್ತ್ರಿಗಳವರ ಮುಖಪದ್ಮ ನಮ್ಮೆಲ್ಲರ ಭಾಗ್ಯೋತ್ಕರ್ಷದಿಂದ ಮಸುಕಾಗಿಯಾದರೂ ಕಾಣುತ್ತಿದೆ. ಅವರ ಮಧುರವಾಣಿ ಕೋಟರದಲ್ಲಿ ಅವರೋಹಿಸುತ್ತ- ಕ್ಷೀಣಿಸಿಯಾದರೂ ಕೇಳಿಬರುತ್ತಿದೆ. ಆದರೆ ಅನಂತ ಕಾಲಗರ್ಭದಲ್ಲಿ *ಈ* ದೃಶ್ಯ ಶ್ರವಣಗಳು ಅಸ್ತಂಗತವಾಗಿ ಅಡಗಿ ಹೋದಾಗ ಅಂದು - ನಮ್ಮ ದೇಶಿಗತನಕ್ಕೆ ಎಣೆಯುಂಟೆ? ಹೊಸಹಳ್ಳಿಯ ದೂರದರ್ಶೀ ತರುಣವೃಂದ *ಈ* ಧ್ವನಿಮುದ್ರಿಕೆಯನ್ನು ಆಪದ್ಬಂಧುವಿನಂತೆ ಕಾಪಿರಿಸಿಕೊಂಡುದು ಅತೀವ ಶ್ಲಾಘ್ಯ.

# ೨. ಅಭಿನಂದನಮ್

*ವಿದ್ವಾನ್ ಎಸ್. ನರಸಿಂಹಮೂರ್ತಿ*

ಶ್ರೀತುಂಗಾತಟಿನೀತಟೇಽಸ್ತಿ ಮಹತೋ ಮತ್ತೂರಭಿಖ್ಯೋಽಭಿತೋ
ವಿದ್ವದ್ಭಿಸ್ಸಷಡಂಗವೇದನಿಪುಣೈರಾಢ್ಯೋಽಗ್ರಹಾರೋ ಮಹಾನ್ |
ತದ್ವಾಸೀ ಕವಿಪುಂಗವಸ್ಸುಮಧುರವ್ಯಾಖ್ಯಾಕಲಾಕೋವಿದೋ
ಲಕ್ಷ್ಮೀಕೇಶವಶಾಸ್ತ್ರಿನಾಮವಿಬುಧೋ ರಾರಾಜತೇ ಸಾಂಪ್ರತಮ್ || ೧


ಭಾರತಾದಿಮಹಾಕಾವ್ಯಗಣಾನಾಂ ಬಹುಧೈವ ಸಃ |
ವ್ಯಾಖ್ಯಾನಮಕರೋಚ್ಚಾಭೂದ್ಬುಧೈರಪ್ಯಭಿನಂದಿತಃ || ೨

ಸೋಽಪೂರ್ವೋವರವಾಗ್ವಿಲಾಸವಿಭವೋ ಯಸ್ಮಿನ್ಸಮಾಕರ್ಣಿತೇ
ನಿಸ್ತಬ್ಧಾಶ್ಶಿಶವೋ ಭವನ್ತಿ ಕಿಮುತ ಪ್ರಾಜ್ಞೋ ಜನೋ ನನ್ದತಿ |
ವಾಣೀ ನೃತ್ಯತಿ ಮೋದತೇ ಸುರಗುರುಶ್ಶೇಷಶ್ಶಿರಃಕಂಪಯ-
ತ್ಯುದ್ದಾಮಾ ಪರಿಷತ್ಸುಧೀಗಣಯುತಾ ಮೋದಾನ್ನರೀನೃತ್ಯತೇ || ೩

ಸೋಽಸ್ಮಿನ್ಸರ್ವಕಲಾಸು ಕೋವಿದತಮೈರ್ಗರ್ಭೀಕೃತೇ ನಿರ್ಭರಂ
ಶ್ರೀಕರ್ಣಾಟಕಮಂಡಲೇ ಬಹುತರಂ ವ್ಯಾಖ್ಯಾವಚಃ ಖ್ಯಾಪಯನ್|
ತತ್ತದ್ಗ್ರಾಮಪುರಪ್ರಧಾನನಗರಕ್ಷೇತ್ರಸ್ಥವಿದ್ವನ್ನೃಣಾಂ
ಕರ್ಣಾನನ್ದಮಮನ್ದಮಾವಿರತನೋದ್ವಾಗ್ವೈಖರೀಸಂಪದಾ || ೪

ಜೀಯಾತ್ಸೋಽಯಂ ಪರಂ ಭಾಗ್ಯಂ ದೇಶಸ್ಯಾಸ್ಯಮಹೀಯಸಃ |
ಕರ್ಣಾಟಕಸ್ಯ ಜೀವ್ಯಾಚ್ಚ ಚಿರಂ ಕಾಲಮಿತೋಽಪ್ಯಸೌ || ೫





*3. ಶ್ರೀಮತಿ ರತ್ನಮ್ಮನವರು ಮತ್ತು ವೇ. ಬ್ರ. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು*

## ೩. ಶುಭಾಶಂಸೆ

*ವಿದ್ವಾನ್ ಎಚ್. ಎಂ. ತಿಮ್ಮಪ್ಪ*

ಪರಮ ಪಾವನ ಪುಣ್ಯವೆನಿಪಾ ಹರಿವ ತುಂಗಾನದಿಯ ತೀರದೊ
ಳಿರುವ ಮತ್ತೂರದುವೆ ಸಂಸ್ಕೃತ ವೇದ ಲೌಕಿಕದ
ಗರುವಿಕೆಗೆ ಸಿರಿದಾಣವಲ್ಲಿಯೆ ವರಕುಮಾರರು ಜನ್ಮ ತಳೆದರು
ಹಿರಿಯ ಚನ್ನಪ್ಪಾವಧಾನಿಗಳನ್ನಪೂರ್ಣೆಯರ ೧

ಹಲವು ಜನ ವ್ಯಾಖ್ಯಾನಕಾರರ ಬಳಗದೊಳು ತಾವೊಬ್ಬರೆನಿಸದೆ
ಲಲಿತ ವಾಕ್ಚಾತುರ್ಯದಿಂ ಶ್ರೋತೃಗಳ ಹೃನ್ಮನವ
ಪಲವುತೆರದೊಳು ಮುಟ್ಟುವಂದದಿ ಪುಳಕಗೊಳಿಸುತ ಜಾಣತನದಲಿ
ಸಲಲಿತಾರ್ಥವ ನೀಡಿ ಯೆಲ್ಲರ ಮೆಚ್ಚಪಡೆದರಲಾ ೨

ಪಾತ್ರ ಪೋಷಣೆಗೈಯುತಾ ಕಥೆ ಪಾತ್ರಗಳು ಕಣ್ಮುಂದೆ ಕುಣಿಯುವ
ಸೂತ್ರದಿಂ ವ್ಯಾಖ್ಯಾನ ಮಾಡುತ ಗಮಕ ವಾಚನಕೆ
ಶ್ರೋತೃಮನರಂಜಿಸುವ ಕಲೆಯೊಳು ಪಾತ್ರವಾಗ್ಮಿಯ ದೂಣೆಯೆನಿಸದೆ
ಪಾತ್ರಧರಿಸಿಯೆ ತೋರಿಮೆರೆದರು ತಾವೆ ಧನ್ಯರಲಾ ೩

ಬಿರುದು ಹೊಗಳಿಕೆ ಕೀರ್ತಿಯಾಸೆಯನಿರಿಸಿಕೊಳ್ಳದೆ ಗಮಕ ವಾಚನ
ಕರಿವವೋಲ್ ವ್ಯಾಖ್ಯಾನಗೈದರು ಮೂಲೆ ಮೂಲೆಯಲಿ
ದೊರೆವಡೆದ ವಾಗ್ಮಿಗಳ ಸಾಲಲಿ ಮೆರೆದರುನ್ನತ ಪ್ರತಿಭೆದೋರುತ
ಹರಿದು ಬಂದಿಹ ವರಪರಂಪರೆಯುಳಿಸಿ ಬೆಳೆಸಿದರು ೪

ವರ ಸದಾಚಾರರು ಸುಶೀಲರು ಸರಸವಾಗ್ಮಿ ಸುಸಂಸ್ಕೃತರು ತಾ
ಹಿರಿಯ ಲಕ್ಷ್ಮೀಕೇಶವಾಖ್ಯರು ಅವರಿಗನುದಿನವು
ಸಿರಿಯೊಡೆಯನೊಲಿದೀಗೆ ಸುಖವನು ಸಿರಿಯನಾಯುವನತಿ ಮುದವ ನೆಂ
ದೆರಗಿ ಸಂಪ್ರಾರ್ಥಿಪನು ವಿನಯದಿ ಕಲಸಿ ತಿರುಮಲನು ೫

# ೪. ಅಪೂರ್ವಪ್ರತಿಭೆಯ ವ್ಯಾಖ್ಯಾನಕಾರರು

*ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್*

ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿ ಗ್ರಾಮದ ಕನ್ನಡ ಅಭಿಮಾನಿಗಳೂ ಕಾವ್ಯಪ್ರೇಮಿಗಳೂ ಕುಮಾರವ್ಯಾಸ ಭಾರತದ ಗಮಕ ವ್ಯಾಖ್ಯಾನ ಸಪ್ತಾಹವನ್ನು ಕಳೆದ ಕೆಲವು ವರುಷಗಳಿಂದ ನಡೆಸುತ್ತಿದ್ದು, ಈ ಬಾರಿ ಒಂದು ವಿಶೇಷವಾದ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡಿದ್ದಾರೆ. ಅದು ಏನೆಂದರೆ ಕುಮಾರವ್ಯಾಸ ಭಾರತವನ್ನು ಪೂರ್ಣವಾಗಿ ಗಮಕ ಮಾಡಿಸಿ ವ್ಯಾಖ್ಯಾನಿಸಿ ಅದನ್ನು ಧ್ವನಿಮುದ್ರಣ ಮಾಡಿಸುವುದು. ಈ ಸಂಸ್ಥೆಯವರು ಮಾಡುತ್ತಿರುವ ಅತ್ಯಂತ ಉಪಯುಕ್ತವಾದ ಆನಂದದಾಯಕವಾದ ನಾಡುನುಡಿ ಸಂಸ್ಕೃತಿಯ ಸೇವೆ ಇದು ಎಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆ. ಈ ಗೊಂದಲದ, ಹೋರಾಟದ, ಸದ್ದುಗದ್ದಲ ಅಪಸ್ವರದ ಮಧ್ಯದಲ್ಲಿ ಇಂಥ ಒಂದು ಶಾಶ್ವತವಾದ ಉಲ್ಲಾಸವನ್ನು ಒದಗಿಸುವ, ಸಂತೋಷವನ್ನು ಹಂಚುವ ಒಂದು ಯೋಜನೆ ಅವರಿಗೆ ಹೊಳೆದುದಕ್ಕೆ ನನಗೆ ಪರಮಾನಂದವೂ, ಪರಮಾಶ್ಚರ್ಯವೂ ಆಗಿದೆ. ಅವರು ಕೈಗೊಂಡಿರುವ ಕಾರ್ಯ, ಕನ್ನಡಿಗರೆಲ್ಲರಿಗೂ ಹಿತವೂ ಆಪ್ಯಾಯಮಾನವೂ ಶ್ರೇಯಸ್ಕರವೂ ಆದ ಕಾರ್ಯವೆಂದು ನಾನು ಸಾರಿಸಾರಿ ಹೇಳಬಲ್ಲೆ.

ಕುಮಾರವ್ಯಾಸನು ಅಚ್ಚಗನ್ನಡದ ಕೆಚ್ಚೆದೆಯ ವರಪುತ್ರ. ಕನ್ನಡ ಕಲಿತನ, ಕನ್ನಡ ತೇಜಸ್ಸು ವೀರ ಶೌರ್ಯಗಳ ಮಾತಿನ ಮೋಡಿಗಾರ. ನವರಸಗಳ ವೀಣಾವಾದನ ಝೇಂಕಾರಗಳ ಗಂಭೀರನಿನಾದವೇ, ಕುಮಾರವ್ಯಾಸ ಭಾರತ. ಅದೇ ಕನ್ನಡಿಗರ ಭಾರತ. ವ್ಯಾಸರ ಹೆಸರನ್ನೇ ಕೇಳದ ಹಳ್ಳಿಹಳ್ಳಿಗಳವರೆಲ್ಲ ಕುಮಾರವ್ಯಾಸನ, ಗದುಗಿನ ನಾರಣಪ್ಪನ ಹೆಸರನ್ನು ಕೇಳಿದ್ದಾರೆ. ಇಂಥ ಕವಿಯ ಕಾವ್ಯದ ಧ್ವನಿಮುದ್ರಿಕೆಯನ್ನು ಮಾಡಿಸುವುದರಿಂದ ಈಗಾಗಲೇ ಜನಪ್ರಿಯವಾಗಿರುವ ಕಾವ್ಯ ಇನ್ನೂ ಹೆಚ್ಚು ಜನಪ್ರಿಯವಾಗುವುದು. ಹೊಸಹಳ್ಳಿ ಗಮಕ ಕಲಾ ಪರಿಷತ್ತು ಈ ಕಾರ್ಯವನ್ನು ಮಾಡಿ ಋಷಿಋಣ, ದೇವಋಣ, ಸಮಾಜಋಣ ಎಲ್ಲವನ್ನೂ ತೀರಿಸಿದೆ.

ಕಾವ್ಯದ ಆನಂದಕ್ಕೆ ತಕ್ಕ ಮಿತಿಯಲ್ಲಿ-ಗಮಕವು ಸಹಾಯಕವಾಗುತ್ತದೆ. ಕೆಲವು ದಶಕಗಳಿಂದ ಕಾವ್ಯಗಳ ಆಸ್ವಾದನೆಗೆ - ಷಟ್ಪದಿ ಮುಖ್ಯವಾಗಿ ಮತ್ತು ಈಚೆಗೆ ಚಂಪೂ ಸಹ ಸಹಾಯ ಮಾಡುತ್ತಿವೆ. ತಕ್ಕ ರಾಗ, ಧ್ವನಿಯಲ್ಲಿ ಏರು ಇಳಿತ ಮನೋಭಾವಗಳನ್ನು ಸೂಚಿಸುವ ಧಾಟಿ, ಪದಗಳ ಮೇಲೆ ಒತ್ತಡ ಇವುಗಳೆಲ್ಲದರಿಂದ ಕಾವ್ಯಾಸ್ವಾದ ಮತ್ತು ರಸಗ್ರಹಣಕ್ಕೆ ಸಹಾಯವಾಗುತ್ತದೆ. ಗಮಕವನ್ನು ಯಾವಾಗಿನಿಂದ ಕಾವ್ಯಕ್ಕೆ ಸಹಾಯಕವಾಗಿ ಪಡೆದರು ಎಂಬುದಕ್ಕೆ ನಿಖರವಾದ ದಾಖಲೆ ಇಲ್ಲ. ರಾಜರ ಆಸ್ಥಾನದಲ್ಲಿ ಕವಿ-ಗಾಯಕ-ವಾದಿ-ವಾಗ್ಮಿ-ಗಮಕಿಗಳು ಇದ್ದರೆಂಬ ನುಡಿ ಇದೆ. ಆಸ್ಥಾನದಲ್ಲಿ ಗಮಕವಿದ್ದಿರಬೇಕೆಂದು ಊಹಿಸಲು ಅವಕಾಶವಿದೆ. ಯಾಕೆಂದರೆ ಹಿಂದಲ ಕಾಲದಲ್ಲಿ ಕವಿಗಳಿಗೆಲ್ಲ- ರಾಜರ ಆಸ್ಥಾನ ಅಥವಾ ಶ್ರೀಮಂತರ ಆಸ್ಥಾನವೇ ಪೋಷಕಸ್ಥಾನವಾಗಿದ್ದಿತು. ಕವಿಯು ಏಕಾಂತದಲ್ಲಿ ಏಕಾಗ್ರವಾಗಿ ಕಾವ್ಯವನ್ನು ರಚಿಸಿ ರಾಜರಿಗೆ ಸಮರ್ಪಿಸುತ್ತಿದ್ದನು. ಆದರೆ ಅದನ್ನು ಓದಲು ರಾಜಕಾರಣದ ಹೊರೆ ಹೊತ್ತ ರಾಜನಿಗೆ ಅವಕಾಶ ಇರುತ್ತಿರಲಿಲ್ಲ. ಆದುದರಿಂದ ಯಾವನಾದರೂ ಉತ್ತಮ ಗಮಕಿ ಅದನ್ನು ಆಸ್ಥಾನದಲ್ಲಿ ಓದುತ್ತಿದ್ದನು. ಹಾಗೆ ಓದಿದ ಕಾವ್ಯಗಳಲ್ಲಿನ ಶ್ಲೇಷೆ, ಅಲಂಕಾರಗಳು, ಗೂಢಾರ್ಥಗಳು, ಶಬ್ದಾಲಂಕಾರಗಳು ಇವುಗಳನ್ನೆಲ್ಲ ಕವಿಯೇ ಆಗಲಿ ಅಥವಾ ವ್ಯಾಖ್ಯಾನಕಾರನಾಗಲಿ ವಿವರಿಸುತ್ತಿದ್ದಿರಬೇಕು. ಹೀಗೆ ನೋಡುವುದಾದರೆ ಗಮಕಕ್ಕೆ ತಕ್ಕಷ್ಟು ದೀರ್ಘಕಾಲದ ಇತಿಹಾಸವೂ ಇದ್ದಿರಬಹುದೇನೋ. ಪಂಪ ರನ್ನರು ಸಹ ತಮ್ಮ ಪೋಷಕ ರಾಜಪುರುಷನಿಗೆ ತಮ್ಮ ಕಾವ್ಯಗಳನ್ನು ಗಮಕಿಗಳ ವಾಚನಗಳ ಮೂಲಕವೇ ಅರ್ಪಿಸಿರಬೇಕು. ನಮಗೆ ತಿಳಿದಿರುವಂತೆ ಕರ್ನಾಟಕದಲ್ಲಿ ನೂರು ನೂರ ಇಪ್ಪತ್ತೈದು ವರುಷಗಳಿಂದಲೂ ಗಮಕವು ವ್ಯವಸ್ಥಿತ ರೀತಿಯಲ್ಲಿ ಪ್ರಚಾರದಲ್ಲಿದೆ. ಈ ಶತಮಾನದ ಪ್ರಾರಂಭಕ್ಕಿಂತ ಹಿಂದೆಯೇ ಮೈಸೂರು ಆಸ್ಥಾನದಲ್ಲಿ ಗಮಕಿಗಳು ಇದ್ದರೆಂದು ಗೊತ್ತಾಗಿದೆ. ಮಹಾ ವಿದ್ವಾನ್ ಅಭಿನವ ಕಾಳಿದಾಸ ಬಿರುದಾಂಕಿತರಾದ ಬಸವಪ್ಪಶಾಸ್ತ್ರಿಗಳು ತಮ್ಮ ಕಾವ್ಯಗಳನ್ನು ತಾವೇ ಅತಿ ಮನೋಹರವಾಗಿ ವಾಚಿಸುತ್ತಿದ್ದರಂತೆ.

ಈಗ ಹೊಸಹಳ್ಳಿಯಲ್ಲಿ ಕುಮಾರವ್ಯಾಸ ಭಾರತವನ್ನು ಧ್ವನಿಮುದ್ರಿಸಿಕೊಳ್ಳುತ್ತಿರುವ ತಂಡದಲ್ಲಿ, ಗಮಕಿಗಳಾಗಿರುವ ಗಮಕ ಕಲಾ ಕೋಕಿಲ ಎಚ್.ಆರ್. ಕೇಶವಮೂರ್ತಿ ಮತ್ತು ವ್ಯಾಖ್ಯಾನ ವಾಚಸ್ಪತಿ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳು ಪಾಲುಗೊಳ್ಳುವವರಿದ್ದಾರೆ. ಇದೊಂದು ಅತ್ಯುತ್ತಮವಾದ ಜೋಡಿ ಅಥವಾ ಸಮ್ಮಿಳನವೆಂಬುದು ಅವರ ಕಂಠಶ್ರೀಯ ಸುಖವನ್ನು ಅನುಭವಿಸಿರುವ ನಮಗೆಲ್ಲ ಗೊತ್ತು. ಇದೇ ಸಂದರ್ಭದಲ್ಲಿ ಶಾಸ್ತ್ರಿಗಳ ಎಂಬತ್ತನೆಯ


ವರುಷದ ಸಮಾರಂಭವೂ ಸೇರಿರುವುದು ತುಂಬ ಸಂತೋಷದ ಸಂಗತಿ. ಈ ಸಂದರ್ಭವನ್ನು ಹೊಸಹಳ್ಳಿಯ ಮಹಾಜನರು ಶಾಸ್ತ್ರಿಗಳನ್ನು ಗೌರವಿಸಲು ಆರಿಸಿಕೊಂಡಿರುವುದು, ಅವರ ರಸಿಕತೆಯನ್ನೂ, ಕೃತಜ್ಞತಾಭಾವವನ್ನೂ ಸೂಚಿಸುತ್ತದೆ.

ಶ್ರೀಮಾನ್ ಲಕ್ಷ್ಮೀಕೇಶವಶಾಸ್ತ್ರಿಗಳ ಶಕ್ತಿ, ವಿದ್ವತ್ತು, ಸಜ್ಜನಿಕೆಯನ್ನು ಕುರಿತು ನಾನು ಹೆಚ್ಚಿಗೆ ಹೇಳಬೇಕಾದುದಿಲ್ಲ. ಅವರ ಹೆಸರನ್ನು ತಿಳಿಯದಿರುವ ಕನ್ನಡಿಗರು, ಅದರಲ್ಲಿಯೂ ಗಮಕ ಮತ್ತು ವ್ಯಾಖ್ಯಾನ ಕ್ಷೇತ್ರದಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ನಾನು ಶಾಸ್ತ್ರಿಗಳನ್ನು ಬಹುಕಾಲದಿಂದ ಸಮೀಪದಿಂದಲೇ ಬಲ್ಲೆ. ಅದಕ್ಕೂ ಹಿಂದೆ ಅವರ ಕೀರ್ತಿ ಕಿವಿಯ ಮೇಲೆ ಬಿದ್ದಿದ್ದಿತು. ಶಾಸ್ತ್ರಿಗಳು ಒಳ್ಳೆ ಸಂಭಾವಿತರು, ಸುಸಂಸ್ಕೃತರು, ಮಕ್ಕಳಂತೆ ಸುಕೋಮಲ ಅಕೃತ್ರಿಮ ಸ್ವಭಾವವುಳ್ಳವರು. ಅವರು ಸಂಸ್ಕೃತ - ಕನ್ನಡ ಎರಡು ಭಾಷೆಗಳಲ್ಲಿಯೂ ಪರಿಣತರು. ಹಳೆಯ ಸಂಸ್ಕೃತಿಯಲ್ಲಿ ಬೆಳೆದು, ವೇದ, ಉಪನಿಷತ್ತು, ಪುರಾಣಗಳು, ರಾಮಾಯಣ, ಭಾರತ, ಜಾನಪದ, ಕಥೆ, ಗಾದೆ ಎಲ್ಲವುಗಳಲ್ಲಿಯೂ ಪರಿಶ್ರಮವುಳ್ಳವರು. ಕಾವ್ಯಗಳಿಗೆ ವ್ಯಾಖ್ಯಾನ ಮಾಡುವುದನ್ನು ಅವರು ಹವ್ಯಾಸವಾಗಿ ಇಟ್ಟುಕೊಂಡಿದ್ದಾರೆ. ಅದು ಹವ್ಯಾಸವಾದರೂ ಅವರು ಅದನ್ನು ಅತ್ಯಂತ ಶ್ರದ್ಧೆ, ಕರ್ತವ್ಯನಿಷ್ಠೆ, ಪರೋಪಕಾರ ಬುದ್ಧಿ ಮತ್ತು ವಿಚಕ್ಷಣತೆಯಿಂದ ಮಾಡುತ್ತಿದ್ದಾರೆ. ಜೀವಮಾನವೆಲ್ಲ ಮಾಡಿದ್ದಾರೆ. ಅವರು ಜಾನಪದ ಪ್ರೇಮಿ ಮತ್ತು ವಿದ್ವಾಂಸರು ಸಹ.

ಗಮಕದಿಂದ ಹೇಗೆ ಕಾವ್ಯವನ್ನು ರಂಜನೀಯವಾಗಿಯೂ ಹೃದ್ಯವಾಗಿಯೂ ಮಾಡಬಹುದೋ ಹಾಗೆಯೇ ವ್ಯಾಖ್ಯಾನದಿಂದಲೂ ಮಾಡಬಹುದು. ವ್ಯಾಖ್ಯಾನದಲ್ಲಿಯೂ ಎರಡು ಬಗೆಗಳುಂಟು. ಕೆಲವು ಶ್ರೋತೃಗಳಿಗೆ ಕಾವ್ಯದ -ಪದ್ಯಗಳ ಅರ್ಥವನ್ನಷ್ಟೇ ಹೇಳಿದರೆ ಸಾಕು. ಇನ್ನು ಕೆಲವರಿಗೆ ಕವಿಯ ಆಶಯ, ಕಾವ್ಯದಲ್ಲಿಯ ಸ್ವಾರಸ್ಯ ಇವನ್ನು ಹೇಳಬೇಕು. ಇನ್ನು ಕೆಲವರಿಗೆ ಲೋಕನೀತಿ, ಸಂದರ್ಭಕ್ಕೆ ತಕ್ಕಂತೆ ವಿಶೇಷ ವಿಷಯಗಳು, ಅಪೂರ್ವವಾದ ಕಥೆಗಳು, ಆ ಸಂದರ್ಭದಲ್ಲಿ ಬೇರೊಬ್ಬ ಕವಿ ಹೇಗೆ ಹೇಳಿದ್ದಾನೆ ಮುಂತಾದುವನ್ನೆಲ್ಲ ಕೇಳುವ ಕುತೂಹಲವಿರುತ್ತದೆ. ಗಮಕಿಯ ವಾಚನವನ್ನು ಕೇಳಿ ಸುಖಿಸಿದರಷ್ಟೇ ಸಾಲದು. ಜತೆಗೆ ವ್ಯಾಖ್ಯಾನಕಾರನ ಚಾತುರ್ಯ, ವಾಕ್ ವೈಖರಿ, ಅವರ ಬಹುಶ್ರುತತ್ವ, ಬಹುವಾಚಕತ್ವ ಇವುಗಳನ್ನೂ ಕೇಳುವ ಕುತೂಹಲವಿರುತ್ತದೆ. ಶ್ರೋತೃವಿನ ಕಿವಿ ಗಮಕಿಯನ್ನು ಅನುಸರಿಸಿ ಅದರಲ್ಲಿ ರಂಜಿಸಿ ವ್ಯಾಖ್ಯಾತನ ವಿವರಗಳಲ್ಲೂ ರಂಜಿಸುತ್ತದೆ. ವ್ಯಾಖ್ಯಾತನು ಕವಿಯ ಆಶಯವನ್ನು ಹಿಡಿದು ಅದಕ್ಕೆ ಸಂಬಂಧಪಟ್ಟಂತೆಯೇ ಹೇಳಬೇಕು. ಆದರೆ ಒಂದು ಪದ್ಯವನ್ನು ಗಮಕಿ ಓದಿದಾಗ ವಾಚಕನ ಮನಸ್ಸಿನಲ್ಲಿ ಏಳಬಹುದಾದ ಎಲ್ಲ ಸಂಶಯಗಳಿಗೂ ವ್ಯಾಖ್ಯಾತೃ ವಿವರಣೆಯನ್ನು ಕೊಡಬೇಕು. ಗಮಕ ತುಂಬ ಸ್ವಾರಸ್ಯವಾಗಿದ್ದರೆ ಶ್ರೋತೃ ಅದನ್ನು ಕೇಳಿದಾಗ ಅದರ ಸಂಗೀತಮಾಧುರ್ಯಕ್ಕೆ ಸೋತು ತಲ್ಲೀನನಾಗಿ, ಅರ್ಥಕ್ಕೆ ವ್ಯಾಖ್ಯಾತೃವನ್ನೇ ಅವಲಂಬಿಸುತ್ತಾನೆ. ಪ್ರತಿಯೊಂದು ಪದ್ಯದಲ್ಲಿಯೂ ಇರುವ ಅರ್ಥ ಸ್ವಾರಸ್ಯಗಳನ್ನಲ್ಲದೆ ಏನೇನು ವಿಶೇಷಾರ್ಥಗಳು, ನೀತಿ, ಲೋಕರೂಢಿ, ಇವುಗಳನ್ನೆಲ್ಲ ವ್ಯಾಖ್ಯಾತೃ ಹೇಳಲೇಬೇಕಾಗುತ್ತದೆ. ಗಮಕಿಗಿಂತ ಅವನು ಸ್ವಲ್ಪ ಹೆಚ್ಚು ವಿಶಾಲ ಕ್ಷೇತ್ರದಲ್ಲಿ ವಿಹರಿಸಬೇಕಾಗುತ್ತದೆ. ಅವನಿಗೆ ಸ್ವಾತಂತ್ರ್ಯವೂ ಹೆಚ್ಚು. ಅವನು ಬಹಳ ಮಟ್ಟಿಗೆ ಪ್ರತ್ಯುತ್ಪನ್ನಮತಿಯಾಗಿರಬೇಕು. ವಿಶಾಲ ವ್ಯಾಸಂಗಿಯಾಗಿರಬೇಕು. ಸಮಯಕ್ಕೆ ಸರಿಯಾಗಿ ಸಂಗತಿಗಳು, ಮಾತುಗಳು, ಗಾದೆ, ಒಗಟೆ, ಹೋಲಿಕೆ, ಪ್ರತಿಮೆ, ಪದಪುಂಜಗಳು ತಾವೇ ತಾವಾಗಿ ಬಾಯಿಂದ ನುಗ್ಗಿ ಬರುತ್ತಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಅವನ ವಾಗ್ವೈಖರಿ ಲವಲವಿಕೆಯುಳ್ಳುದೂ, ಉಲ್ಲಾಸಪೂರಿತವೂ, ಮಿಂಚಿನಂತೆ ಹೊಳೆಯುವುದೂ, ಆಕರ್ಷಕಪೂರಿತವೂ ಆಗಿರಬೇಕು. ಉಚಿತವಾದ ಎಡೆಯಲ್ಲಿ ಮಿತವೂ, ಗಂಭೀರವೂ ಆದ ಹಾಸ್ಯವಿರಬೇಕು.

ಕಾವ್ಯವಾಚಕನಿಗೆ ವ್ಯಾಖ್ಯಾತೃ ಆವಶ್ಯಕವೇ? ಹೌದು, ಎಂದು ನನ್ನ ಅಭಿಪ್ರಾಯ. ಕಾವ್ಯಕ್ಕೆ ಗಮಕಿ ಬೇಕಾದರೆ, ಗಮಕಿಗೆ ವ್ಯಾಖ್ಯಾನಕಾರನೂ ಬೇಕು. ಗಮಕಿ ಮಿತವಾಗಿ, ಹಿತವಾಗಿ ಸಂಗೀತವನ್ನು ಬೆರೆಸಬೇಕು. ಕಾವ್ಯಾಲಾಪವು ವಿರಾಮವಾಗಿ ಆತುರ ಕಾತುರವಿಲ್ಲದ ರೀತಿಯಲ್ಲಿ ಸಾಗಬೇಕು. ಆತುರ ಯಾವ ಕಾರ್ಯಕ್ಕೂ ಸಲ್ಲ. ಆತುರ ಒಂದು ಹಿಂಸೆ. ಕೊನೆಮುಟ್ಟಿಸಿಬಿಡಬೇಕು ಎಂದು ಓಡಿಸಿಕೊಂಡು ಹೋಗುವುದಕ್ಕೆ- ಕಾವ್ಯವು ಪತ್ತೇದಾರಿ ಕಾದಂಬರಿಯಲ್ಲ. ಗಮಕಿ ಒಂದೇ ಓಟದಲ್ಲಿ ಕಾವ್ಯವನ್ನು ಓದುತ್ತ ಹೋದರೆ ಅವನಿಗೆ ಆಯಾಸವೂ ಆಗುತ್ತದೆ. ವ್ಯಾಖ್ಯಾತೃ ಎಂಬ ತಂಗುದಾಣ ಅವನಿಗೆ ದೊರಕಿದರೆ, ಅವನ ಕಂಠಶ್ರೀ ಮತ್ತಷ್ಟು ಮಧುರವೂ, ಚೈತನ್ಯಪೂರಿತವೂ ಆಗುತ್ತದೆ.

ಶ್ರೀಮಾನ್ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನವನ್ನು ನಾನು ಬಹು ವರುಷಗಳಿಂದ ಕೇಳಿದ್ದೇನೆ. ಅವರು ವ್ಯಾಖ್ಯಾನವನ್ನು ತುಂಬ ರಮಣೀಯವಾಗಿಯೂ, ಅರ್ಥವತ್ತಾಗಿಯೂ ಮಾಡುತ್ತಾರೆ. ಗಮಕಿಗೂ, ಕಾವ್ಯಾನಂದಕ್ಕೂ ಅವರು ಪೋಷಕರಾಗುತ್ತಾರೆಯೇ ಹೊರತು ತಡೆಯಾಗುವುದಿಲ್ಲ. ಅವರ ವ್ಯಾಖ್ಯಾನದಲ್ಲಿ ಒಂದು



4. ದೇವ, ಸೇರದು ಸಂಧಿ, ಸಂಗರವೆಮಗೆ ಸೇರುವುದು . . .

ಲವಲವಿಕೆ ತುಂಬಿರುತ್ತದೆ. ಅವರು ಕಾವ್ಯಕ್ಕೆ ಒಂದು ಗೆಲುವನ್ನೂ ಕಳೆಯನ್ನೂ ತುಂಬುತ್ತಾರೆ. ಅವರು ವ್ಯಾಖ್ಯಾತೃವಾದರೂ, ಕಾವ್ಯವನ್ನು ಸಹ ಕಂಠಪಾಠ ಮಾಡಿದ್ದಾರೆ. ಸಂಸ್ಕೃತ ರಾಮಾಯಣ, ಭಾರತಗಳ ಬಹುಭಾಗಗಳು ಸಹ ಅವರಿಗೆ ಕಂಠಪಾಠವೇ ಆಗಿವೆ. ಧರ್ಮಶಾಸ್ತ್ರ, ಭಗವದ್ಗೀತೆ, ಉಪನಿಷತ್ತು, ಭರ್ತೃಹರಿ, ವೇದಭಾಗಗಳು, ಕಥೆಗಳು ಇವುಗಳನ್ನೆಲ್ಲ ಉಚಿತ ರೀತಿಯಲ್ಲಿ -ಪಾಯಸದಲ್ಲಿ ದೊರಕುವ ದ್ರಾಕ್ಷಿ, ಬಾದಾಮಿ, ಕೊಬ್ಬರಿಗಳಂತೆ ಬಡಿಸುತ್ತಾರೆ. ಅವರ ವ್ಯಾಖ್ಯಾನದಲ್ಲಿ ವೈವಿಧ್ಯವೂ ಉಂಟು. ಒಂದೇ ಪದ್ಯಕ್ಕೆ ಅನೇಕ ಬಾರಿ ವ್ಯಾಖ್ಯಾನ ಮಾಡಿದರೂ ಕೆಲವು ಹೊಸ ಅಂಶಗಳನ್ನು ತರುತ್ತಾರೆ. ಮೂಲವನ್ನು ಬಿಟ್ಟು ದೀರ್ಘವಾದ ಕಥೆ, ವೃತ್ತಾಂತಗಳಿಂದ ಅವು ಸ್ವಾರಸ್ಯವಾಗಿದ್ದರೂ ಕಾಡು ಮೇಯುವುದಿಲ್ಲ. ಅವರಿಗೆ ಕರತಲಾಮಲಕವಾಗಿರುವ ಶ್ಲೋಕಗಳೂ, ನೀತಿವಾಕ್ಯಗಳೂ, ಅನುಭವಾಮೃತಗಳೂ ಅವರ ವ್ಯಾಖ್ಯಾನದಲ್ಲಿರುತ್ತವೆ. ಪ್ರತಿಸಲವೂ ನಾನು ಏನಾದರೂ ಒಂದು ಹೊಸ ವಿಷಯವನ್ನು, ನೀತಿಯನ್ನು, ವ್ಯವಹಾರ ನೈಪುಣ್ಯವನ್ನು ಗ್ರಹಿಸಿದ್ದೇನೆ. ಒಂದು ಸಂದರ್ಭದಲ್ಲಿ ನಮ್ಮ ಊರಿನಲ್ಲಿ ಗಮಕಿ ಸಿಕ್ಕದಿದ್ದಾಗ ಅವರೇ ಗಮಕಿಯೂ, ವ್ಯಾಖ್ಯಾತೃವೂ ಆಗಿ 'ಬಕಾಸುರವಧೆ'ಯನ್ನು ನಡೆಸಿದರು. ಭೀಮ, ಬಕಾಸುರರ ಸಂವಾದ - ಭೀಮನು ತಿಂದ ದಧಿಕ್ಷೀರಾನ್ನ, ಕಡಬು, ಕಜ್ಜಾಯ, ಉಂಡೆಗಳ ಸ್ವಾರಸ್ಯ- ಇವುಗಳಿಂದ ರುದ್ರವೂ ಮನೋಹರವೂ ಆದ, ಆಬಾಲವೃದ್ಧರಿಗೂ ಪ್ರಿಯವಾದ, ಒಂದು ವಾತಾವರಣವನ್ನು ಸೃಷ್ಟಿಸಿದರು. ಕನ್ನಡ ಕವಿಗಳು ಮೂಲದಿಂದ ಮಾಡಿರುವ ಬದಲಾವಣೆ, ಅದರಿಂದ ಕಾವ್ಯಕ್ಕೆ ಬಂದಿರುವ ಪ್ರಾದೇಶಿಕತೆ ಇವನ್ನು ಬೊಟ್ಟು ಮಾಡಿ ತೋರಿಸುತ್ತಾರೆ. ಅವರ ವ್ಯಾಖ್ಯಾನಗಳಿಂದ ನವರಸಗಳ ಅನುಭವ ಸ್ಪಂದನವು ಶ್ರೋತೃಗಳ ಕಾವ್ಯ ಮನೋಧರ್ಮ ಸಂವೇದನೆಗೆ ಅನುಗುಣವಾಗಿ ಉಂಟಾಗಿಯೇ ಆಗುತ್ತದೆ. ಅವರಿಂದ ನಾನು ಅನೇಕ ವಿಷಯಗಳನ್ನು ಕಲಿತಿದ್ದೇನೆ, ಸಂಗ್ರಹಿಸಿದ್ದೇನೆ. ಅವರ ಮಗ ಶ್ರೀ ರಘುಪತಿಶಾಸ್ತ್ರಿಗಳೂ ತಂದೆಗೆ ಅರ್ಹನಾದ ಮಗನೇ ಆಗಿದ್ದಾರೆ. ಅವರು ಸಹ ದೀರ್ಘವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಶ್ರೋತೃಗಳನ್ನು ಆಕರ್ಷಿಸಿ, ನಾಡು - ನುಡಿ - ಸಂಸ್ಕೃತಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಶಾಸ್ತ್ರಿಗಳು ಜೀವಮಾನವೆಲ್ಲ ಶಿವಮೊಗ್ಗಜಿಲ್ಲೆಯ ಹಳ್ಳಿಯಲ್ಲಿ ವಾಸಿಸಿದವರು. ಜನಪದ ಜೀವನ ಸಂಸ್ಕೃತಿಯನ್ನು ಪೂರ್ಣವಾಗಿ ಮೈಗೂಡಿಸಿಕೊಂಡಿದ್ದಾರೆ. ಮಲೆನಾಡಿನವರಂತೆ ಅತಿಥಿಸತ್ಕಾರ ಪರಾಯಣರು.

ಈ ಕುಮಾರವ್ಯಾಸ ಭಾರತದ ಧ್ವನಿಮುದ್ರಣ ಸಮಾರಂಭದ ಸಂದರ್ಭದಲ್ಲಿ ಶಾಸ್ತ್ರಿಗಳ ಗೌರವಾರ್ಥವಾಗಿ ಒಂದು ಸಂಸ್ಮರಣ ಗ್ರಂಥವನ್ನು ಸಮಿತಿಯು ತರಲು ನಿಶ್ಚಯಿಸಿರುವುದು ಸಂತೋಷದ ಸಂಗತಿ. ಇದು ಶಾಸ್ತ್ರಿಗಳಿಗೆ ಎಂಬತ್ತು ತುಂಬಿದ ವರುಷವು ಸಹ. ಸ್ವಭಾವದಿಂದ ಅನಾಸಕ್ತರೂ, ನಿರಭಿಲಾಷಿಗಳೂ ಆದ ಶಾಸ್ತ್ರಿಗಳಿಗೆ ಇದಾವುದರಲ್ಲಿಯೂ ಉತ್ಸಾಹವಿಲ್ಲದಿದ್ದರೂ- ಅವರ ಪ್ರವಚನಗಳಿಂದ ಸನ್ಮಾರ್ಗಪ್ರೇರಣೆಯನ್ನು ಹೊಂದಿದ ನಾವು - ಕನ್ನಡಿಗರೆಲ್ಲರ ಪರವಾಗಿ ಈ ಗ್ರಂಥವನ್ನು ಪ್ರಕಟಿಸುವುದು ಮತ್ತು ಈ ಉತ್ಸವವನ್ನು ಸಂಭ್ರಮದಿಂದ ಆಚರಿಸುವುದು ನಮ್ಮ ಕರ್ತವ್ಯವಾಗಿದೆ. ದೇವರ ದಯದಿಂದ ಶ್ರೀಮಾನ್ ಶಾಸ್ತ್ರಿಗಳು ಸಂಯಮ ಜೀವಿಯಾಗಿ ಈ ಜ್ಞಾನಯಜ್ಞವನ್ನು ನಿಷ್ಕಾಮಕರ್ಮವಾಗಿ ಇಷ್ಟು ವರುಷಗಳೂ ನಡೆಸಿಕೊಂಡು ಬಂದಿದ್ದಾರೆ. ಪರಮಾತ್ಮನು ಅವರಿಗೆ ದೀರ್ಘಾಯುವನ್ನು ಕರುಣಿಸಲಿ. ಈ ಎಲ್ಲ ಕಾರ್ಯಗಳಿಂದ ನಿಮ್ಮ ಸಮಿತಿ ಸಹ ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರವಾಗಿದೆ. ನಿಮ್ಮ ಈ ಎಲ್ಲ ಉತ್ಸವ ಕಾರ್ಯಗಳೂ ಅತ್ಯುತ್ತಮವಾಗಿ ನೆರವೇರಲೆಂದು ಹಾರೈಸುತ್ತೇನೆ.

# ೫. ವ್ಯಾಖ್ಯಾನ ವಾಚಸ್ಪತಿ

*ಮತ್ತೂರು ಕೃಷ್ಣಮೂರ್ತಿ*

ಕುಮಾರವ್ಯಾಸನ ಮಹಾಕೃತಿ ಭಾರತವನ್ನು ಜನಪ್ರಿಯಗೊಳಿಸಿರುವ ಗಮಕಿಗಳು ಹಲವು ಮಂದಿ ಇದ್ದಾರೆ- ಭಾರತದ ಬಿಂದೂರಾಯರು, ಮೈಸೂರಿನ ಸಂಪತ್ಕುಮಾರಾಚಾರ್ಯರು ಮೊದಲಾದವರು. ಆದರೆ ನಾರಣಪ್ಪನ ಕವಿತೆಗೆ ಕಿರೀಟವನ್ನಿಡುವಂತೆ ವ್ಯಾಖ್ಯಾನ ಮಾಡಿ ಕನ್ನಡನಾಡಿನಾದ್ಯಂತ ಆ ಮಹಾಕವಿಯ ಹೆಸರು ಬೆಳಗುವಂತೆ ಮಾಡಿರುವವರ ಪೈಕಿ ಮತ್ತೂರಿನ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ಮೊದಲಿಗರು ಎಂದರೆ ತಪ್ಪಾಗಲಿಕ್ಕಿಲ್ಲ. ಕುಮಾರವ್ಯಾಸ ಭಾರತವಾಚನಕ್ಕೆ ವ್ಯಾಖ್ಯಾನವು ಬೇಕೆ ಎಂದು ಕೇಳುತ್ತಿದ್ದ ಜನ ಇದ್ದರು ಹಿಂದೆ. ಆದರೆ ಈಗ ವ್ಯಾಖ್ಯಾನವಿಲ್ಲದಿದ್ದರೆ ಹೇಗೆ? ಎಂದು ಕೇಳುತ್ತಾರೆ! ಇದಕ್ಕೆ ಶಾಸ್ತ್ರಿಗಳೇ ಕಾರಣ.

ನಲವತ್ತು-ಐವತ್ತು ವರ್ಷಗಳ ಹಿಂದಿನ ಮಾತು. ಆಗ ನನಗೆ ಎಂಟು-ಒಂಬತ್ತು ವರ್ಷ. ನಮ್ಮ ಊರು ಮತ್ತೂರಿನಲ್ಲಿ ಐವತ್ತು-ಅರುವತ್ತು ಒಕ್ಕಲು - ಪಕ್ಕದ ಹಳ್ಳಿ ಹೊಸಹಳ್ಳಿಯಲ್ಲಿ ಮೂವತ್ತು-ನಲವತ್ತು ಒಕ್ಕಲು. ನಮ್ಮಂಥ ಹುಡುಗರಿಗೆ ಇದ್ದಿದ್ದ ಏಕಮಾತ್ರ ಮನರಂಜನಾ ಕಾರ್ಯಕ್ರಮವೆಂದರೆ ಕುಮಾರವ್ಯಾಸ ಭಾರತ, ಹರಿಶ್ಚಂದ್ರಕಾವ್ಯ, ತೊರವೆ ರಾಮಾಯಣ ಇವುಗಳ ವಾಚನ-ವ್ಯಾಖ್ಯಾನ ಕೇಳುವುದು. ರಾತ್ರಿ ಒಂಬತ್ತಕ್ಕೆ ಶುರುವಾದರೆ ಮಧ್ಯರಾತ್ರಿ ಕಳೆದು ಎರಡು-ಮೂರು ಗಂಟೆ ಆಗುತ್ತಿತ್ತು ಮುಗಿಯುವ ವೇಳೆಗೆ. ಬಕಾಸುರ-ಕೀಚಕ-ಭೀಮ-ದ್ರೌಪದಿ--ಅರ್ಜುನ--ಭೀಷ್ಮ-- ಶಿಶುಪಾಲ -- ಜರಾಸಂಧ-- ಕೃಷ್ಣ -- ವಿದುರ -- ಧೃತರಾಷ್ಟ್ರ -- ಯುಧಿಷ್ಠಿರ -- ಕರ್ಣ-- ಶಕುನಿ -- ನಳ --ಹರಿಶ್ಚಂದ್ರ-- ನಕ್ಷತ್ರಿಕ -- ಇನ್ನೂ ಹಲವಾರು ಪಾತ್ರಗಳು ನಮ್ಮ ಎದುರಿಗೆ ಬಂದು ಅಭಿನಯಿಸುತ್ತಿದ್ದರೆಂದರೆ ಅತ್ಯುಕ್ತಿಯಾಗದು. ಹೊಸಹಳ್ಳಿಯ ರಾಮಸ್ವಾಮಿಶಾಸ್ತ್ರಿಗಳು, ಮತ್ತೂರು ರಾಮಶಾಸ್ತ್ರಿಗಳು, ಚಾ.ಸುಬ್ರಾಯ ಶಾಸ್ತ್ರಿಗಳು, ಸೂರ್ಯನಾರಾಯಣ ಅವಧಾನಿಗಳು ವಾಚನ ಮಾಡುವುದು; ಲಕ್ಷ್ಮೀಕೇಶವಶಾಸ್ತ್ರಿಗಳು ವ್ಯಾಖ್ಯಾನ ಮಾಡುವುದು. ಸ್ವಲ್ಪ ಒರಟು ಮಾತಿನಲ್ಲಿ ಹೇಳುವುದಾದರೆ ಶಾಸ್ತ್ರಿಗಳ ಮೇಲೆ 'ಭೂತ ಬರುವಂತೆ' ಆ ಪಾತ್ರಗಳು ಬಂದು ಮಾತಾಡುತ್ತಿದ್ದವು ಎನ್ನಬಹುದು!! ಶಕುನಿಯ ಮಾತಾಡುವಾಗ ವಂಚಕತನ, ದ್ರೌಪದಿಯ ಮಾತಾಡುವಾಗ ಕ್ಷಾತ್ರತುಂಬಿದ ಲಜ್ಜಾಭರಿತ ಮಾತು, ಕೃಷ್ಣನ ಮಾತಾಡುವಾಗ ಗಾಂಭೀರ್ಯ, ಯುಧಿಷ್ಠಿರನ ಮಾತಾಡುವಾಗ ಆ ಹಿರಿತನ, ಅರ್ಜುನನು ಸುಭದ್ರೆಯ ಕೈಹಿಡಿಯುವಾಗ ಆಡುವ ಮಾತಿನಲ್ಲಿನ ಪ್ರೇಮಜ್ವರ, ಭೀಷ್ಮರ ಮಾತಿನ ಜೋರು, ಯಾವುದಿರಲಿ - ಶಾಸ್ತ್ರಿಗಳು ಅವರವರೇ ಆಗಿ ವ್ಯಾಖ್ಯಾನ ಮಾಡುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ನನಗೆ ಹದಿನೈದು-ಹದಿನಾರು ತುಂಬಿದ ಮೇಲೆ ರಾಮಾಯಣ - ಭಾರತವನ್ನು ಮೊದಲಿನಿಂದ ಕೊನೆಯವರೆಗೆ ಓದಿದಾಗ ಪಾತ್ರಗಳು ಪಕ್ಕದಲ್ಲಿ ನಿಂತಂತೆ ಭಾಸವಾಗುತ್ತಿತ್ತು. ಇದಕ್ಕೆ ಶಾಸ್ತ್ರಿಗಳೇ ಕಾರಣ.

ಇಂದು ಕನ್ನಡನಾಡಿನಲ್ಲಿ ಹಲವರು ಈ ವಾಚನ ವ್ಯಾಖ್ಯಾನ ಪರಂಪರೆಯನ್ನು ಅನುಸರಿಸುತ್ತಿದ್ದಾರೆ. ವ್ಯಾಖ್ಯಾನವೆಂದರೆ ಬರಿಯ ಪದಶಃ ಅರ್ಥವಲ್ಲ; ಪ್ರತಿ ಮಾತಿನ, ಸನ್ನಿವೇಶದ ವಿವರಣೆ ಕೊಡುವಾಗ ಹಿನ್ನೆಲೆಯ ಸಮೇತ ಕೊಡಬೇಕು. ಹಾಗಿಲ್ಲದೆ ಕನ್ನಡ ಭಾಷೆಯ ಪರಿಚಯ ಕಿಂಚಿತ್ತು ಇದ್ದು, ನಿಘಂಟಿನಲ್ಲಿ ನೋಡಿ ಪದಗಳಿಗೆ ಅರ್ಥ ತಿಳಿದುಕೊಂಡು, ನಾರಣಪ್ಪನ ಕಾವ್ಯಕ್ಕೆ ವ್ಯಾಖ್ಯಾನಮಾಡಲು ಹೊರಟರೆ ಅದು ಕವಿಗೆ ಮಾಡಿದ ಅಪಚಾರವಾಗುತ್ತದೆ. ಆತನ ಕಾವ್ಯ ಸಾಮಾನ್ಯದ್ದಲ್ಲ. ನನಗೆ ನೆನಪಿರುವಂತೆ, ಬೆಂಗಳೂರಿನಲ್ಲಿ ಒಂದು ಕಡೆ ಗೆಳೆಯ ಹೊಸಹಳ್ಳಿ ರಾಮಶಾಸ್ತ್ರಿ ವಾಚನಮಾಡಿ ನಾ ವ್ಯಾಖ್ಯಾನ ಮಾಡಿದಾಗ, ಉದ್ಯೋಗಪರ್ವದಲ್ಲಿ ಬರುವ 'ಕೃಷ್ಣ ಸಾರಥ್ಯ' ಕಥಾಭಾಗದಲ್ಲಿ ೧೫೦ ನಿಮಿಷದ ಕಾರ್ಯಕ್ರಮದಲ್ಲಿ ಮೂರು ಪದ್ಯಗಳಿಗೆ ಸಹ ಸರಿಯಾಗಿ ವ್ಯಾಖ್ಯಾನ ಮಾಡಿ ಮುಗಿಸಲು ನನ್ನಿಂದಾಗಲಿಲ್ಲ! ಕುಮಾರವ್ಯಾಸನ ಒಂದೊಂದು ಪದ್ಯವೂ 'ಸಮುದ್ರ'; ಆಳಕ್ಕೆ ಹೋದ ಹೋದಷ್ಟು ಬೆಲೆಬಾಳುವ ಮುತ್ತುಗಳು ಸಿಗುತ್ತವೆ. 'ಧರಣೀನಾರಿ ಅರಿಗೊಲಿದಳು, ಆರೊಡನೆ ಉರಿ ಹಾಯ್ದಳು?' ಎಂದು ಕೃಷ್ಣ ಕೇಳುವ ಮಾತಿಗೆ ಸಾವಿರ ಪುಟದ ವ್ಯಾಖ್ಯಾನ ಮಾಡಬಹುದು. ಬರಿಯ ಕವಿತೆಯನ್ನು ಓದಿದರೋ, ಕೇಳಿದರೋ ಹೇಗೆ ಸಾಕು? ಬರಿಯ ವಾಚನ ಕೇಳಿದರೆ, ಸಮುದ್ರದ ಮೇಲೆ ಈಜಿಕೊಂಡು ಹೋಗಿ ಆಳದಲ್ಲಿನ ಮುತ್ತುಗಳನ್ನು ಕಂಡೆ ಎನ್ನುವಂತೆ ಆಗುತ್ತದೆ! ವ್ಯಾಖ್ಯಾನವು ಅಗತ್ಯ; ಮಹಾಕೃತಿಗಳಿಗೆ ಭಾಷ್ಯವಿದ್ದಂತೆ, ಕಾವ್ಯವಾಚನಕ್ಕೆ ವ್ಯಾಖ್ಯಾನ.

ನಾರಣಪ್ಪ, ಪಾತ್ರಸೃಷ್ಟಿ ಮಾಡುವುದರಲ್ಲಿ ಅದ್ವಿತೀಯ. ಪಾತ್ರಗಳನ್ನು ನಿರೂಪಿಸಲು ಗಮಕಿಗೆ ಬರಿಯ ಸಂಗೀತಜ್ಞಾನ - ರಾಗಜ್ಞಾನವಿದ್ದರೆ ಸಾಲದು. ಪಾತ್ರಗಳ ಮಾತಿಗೆ ತಕ್ಕ ರಾಗವನ್ನು ಅಳವಡಿಸಿಕೊಂಡು, ರಸತುಂಬಿ ಓದುವ ಸಾಮರ್ಥ್ಯವಿರಬೇಕು. ಈ ಅದ್ಭುತ ಶಕ್ತಿ ಇರುವವರಲ್ಲಿ ಹೊಸಹಳ್ಳಿಯ ಕೇಶವಮೂರ್ತಿಗಳಂತಹವರು

ಮತ್ತೊಬ್ಬರನ್ನು ಇನ್ನೂ ಕಾಣಬೇಕಾಗಿದೆ! ಶಾಸ್ತ್ರಿಗಳು ವ್ಯಾಖ್ಯಾನ ಮಾಡುವಾಗ, ಪಾತ್ರಗಳು ಅವರ 'ಮೈಮೇಲೆ' ಬಂದರೆ, ಕೇಶವಮೂರ್ತಿಗಳಿಗೆ 'ನಾರಣಪ್ಪ'ನೇ ಮೈಮೇಲೆ ಬಂದಂತೆ ಕಾಣುತ್ತದೆ.



5. ವೇದಪಾರಾಯಣದ ಫಲ . . .

ಅವರಿಬ್ಬರೂ ಕನ್ನಡಕಾವ್ಯಶ್ರೀಗೆ ಮಾಡುತ್ತಿರುವ ಸೇವೆ ಅನ್ಯಾದೃಶ. ಅವರ ಮೇಲ್ಪಂಕ್ತಿಯಲ್ಲಿ ನೂರಾರು-ಸಾವಿರಾರು ಗಮಕಿಗಳೂ ವ್ಯಾಖ್ಯಾನಕಾರರೂ ಮುಂದೆ ಬರಬೇಕು, ಬರುತ್ತಿದ್ದಾರೆ. ಮತ್ತೂರು ಹೊಸಹಳ್ಳಿಯಲ್ಲಿ ಶಾಸ್ತ್ರಿಗಳ ಪ್ರಭಾವ ದಿಂದಲೋ ಎಂಬಂತೆ, ಜನಪ್ರಿಯರಾಗಿರುವ ಮತ್ತೊಬ್ಬರೆಂದರೆ ಮಾರ್ಕಂಡೇಯ ಅವಧಾನಿಗಳು. ಇನ್ನೂ ಹಲವಾರು 'ತರುಣ ಜೋಡಿಗಳು' ಬೆಳಕಿಗೆ ಬರುತ್ತಿರುವುದು ಸಂತೋಷದ ಸಂಗತಿ. ಆದರೆ ಇದೆಲ್ಲಕ್ಕೂ ನಮ್ಮ ಹಿಂದಿನವರಾದ ಪ್ರಾರಂಭದಲ್ಲಿ ಹೇಳಿರುವ ಆ ಮಹನೀಯರೇ ಕಾರಣ. ಪಂಪ-ರನ್ನರು, ರಾಘವಾಂಕ-ನಾರಣಪ್ಪರು, ಬಸವ-ಸರ್ವಜ್ಞರು ಮೊದಲಾದ ನಮ್ಮ ಕರ್ನಾಟಕದ ವರಕವಿಗಳೆಲ್ಲರ ಕೃತಿಗಳನ್ನೂ ಗಮಕವಾಚನ-ವ್ಯಾಖ್ಯಾನ ಕಾರ್ಯಕ್ರಮಗಳ ಮೂಲಕ ನಾಡಿನಾದ್ಯಂತ ಘೋಷಿಸಬೇಕು. ಅದುವೆ ಆ ಮಹನೀಯರಿಗೆ ನಾವು ಅರ್ಪಿಸುವ ಕಾಣಿಕೆ.

ಈ ವಿಶೇಷ ಸಂದರ್ಭದಲ್ಲಿ ವ್ಯಾಖ್ಯಾನವಾಚಸ್ಪತಿಗಳ ಪಾದಗಳಿಗೆ ಸಾಷ್ಟಾಂಗ ಪ್ರಣಾಮಗಳನ್ನರ್ಪಿಸುವ, ಗೆಳೆಯ ಕೇಶವಮೂರ್ತಿಗೆ ಒಲವಿನ ಮಳೆಗರೆಯುವ, ಅವಕಾಶ ಕಲ್ಪಿಸಿದ ಗದುಗಿನ ವೀರನಾರಾಯಣನಿಗೆ ಅನಂತಾನಂತ ವಂದನೆಗಳು.

## ೬. ಗಮಕಿಗಳ ಅಭಿಮಾನಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು

*ಎಂ. ರಾಘವೇಂದ್ರರಾವ್*

ನಾನು ಬೆಂಗಳೂರಿನಲ್ಲಿ ಹಿಂದಕ್ಕೆ ವಿದ್ಯಾ ಇಲಾಖೆಯ ಸಂಸ್ಕೃತ ಇನ್ಸ್‌ಪೆಕ್ಟರ್ ಅವರ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾಗ, ಅವರ ಹೆಸರು ನನ್ನ ಗಮನಕ್ಕೆ ಬಂದಿತ್ತು. ಆಗ ಅವರು ಶಿವಮೊಗ್ಗ ತಾಲ್ಲೂಕ್, ಮತ್ತೂರಿನ ಸಂಸ್ಕೃತ ಪಾಠಶಾಲೆಯ ಅಧ್ಯಕ್ಷರಾಗಿದ್ದರು. ಇದಾದ ಅನಂತರ ಒಮ್ಮೆ ನಾನು ದಿನಪತ್ರಿಕೆಯಲ್ಲಿ ಒಂದು ಸುದ್ದಿಯನ್ನು ಓದಿದಾಗ, ಮತ್ತೂರಿನ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ಒಬ್ಬ ಸಮರ್ಥ ಪ್ರವಚನಕಾರರೆಂಬ ಸಂಗತಿಯು ತಿಳಿದುಬಂತು! ಶ್ರೀ ಶಾಸ್ತ್ರಿಗಳು ಯಾವುದೋ ಕೆಲಸಕ್ಕಾಗಿ ನಮ್ಮ ಕಛೇರಿಗೆ ಬಂದರು. ಆ ಕಛೇರಿಯು ಆಗ ಶಂಕರಮಠದ ರಸ್ತೆಯಲ್ಲಿ ಇದ್ದಿತು. ಅವರು ತಮ್ಮ ಪರಿಚಯವನ್ನು ಹೇಳಿಕೊಂಡ ಕೂಡಲೇ ನಾನು ಅವರನ್ನು "ನೀವು ಗಮಕವಾಚನಕ್ಕೆ ವ್ಯಾಖ್ಯಾನವನ್ನು ಬಿತ್ತರಿಸುವ ಲಕ್ಷ್ಮೀಕೇಶವಶಾಸ್ತ್ರಿಗಳೇ ಇರಬೇಕಲ್ಲವೆ?" ಎಂದು ಕೇಳಿದಾಗ, ಅದಕ್ಕೆ ನಗುತ್ತಾ "ಹೌದು" ಎಂದರು. ಅದಾದ ತರುವಾಯ ನಾನೂ ಒಬ್ಬ ಗಮಕಿಯೆಂಬ ವಿಷಯವೂ ಅವರಿಗೆ ತಿಳಿಯಿತು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ಸಮಿತಿಯ ವ್ಯವಸ್ಥಾಪಕನೆಂಬುದೂ ತಿಳಿದು ಬಹಳ ಸಂತೋಷಪಟ್ಟರು. ಅವರು ಆಗ, "ನಮ್ಮೂರಿನಲ್ಲಿಯೂ ಗಮಕ ತರಗತಿ ನಡೆಯುತ್ತಿದೆ, ಒಮ್ಮೆ ನೀವು ಆ ಕಡೆ ದಯಮಾಡಿಸಬೇಕು" ಎಂದು ಆಮಂತ್ರಣವಿತ್ತರು. ಅದಕ್ಕೆ ನಾನು, "ಈ ವಿಷಯ ನನಗೆ ಚನ್ನಾಗಿ ಗೊತ್ತಿದೆ; ಸಾಧ್ಯವಾದಾಗ ಆ ಕಡೆ ಬರಲು ಪ್ರಯತ್ನಿಸುತ್ತೇನೆ" ಎಂದು ಉತ್ತರಿಸಿದೆ. ಹೀಗೆ ಅವರ ನನ್ನ ಮೊದಲ ಪರಿಚಯವಾಯಿತು.

ಒಮ್ಮೆ ಶಾಸ್ತ್ರಿಗಳು ಬೆಂಗಳೂರಿಗೆ ಬಂದರು. ಅವರ ಜತೆಯಲ್ಲಿ

ಅವರ ಊರಿನವರೇ ಆಗಿದ್ದ ಗಮಕಿ ಶ್ರೀ ಎಂ. ರಾಮಶಾಸ್ತ್ರಿಗಳೂ ಬಂದಿದ್ದರು. ನಾನು ಆಗ ಕರಣಿಕರ ಪಾಠಶಾಲೆಯ ಆವರಣದ ಮನೆಯೊಂದರಲ್ಲಿ ವಾಸಿಸುತ್ತಿದ್ದೆ. ಅವರಿಬ್ಬರೂ ನನ್ನಲ್ಲಿಗೆ ಬಂದು, ಅವರ ಒಂದು ಕಾರ್ಯಕ್ರಮವು ಕರಣಿಕರ ಪಾಠಶಾಲೆಯಲ್ಲೇ ಇದೆಯೆಂದೂ ನಾನು ಬರಬೇಕೆಂದೂ ಆಹ್ವಾನಿಸಿದರು. ಕಾರ್ಯಕ್ರಮದ ದಿನ ನಾನು ಅಲ್ಲಿ ಭಾಗಿಯಾಗಿದ್ದೆ. ಶ್ರೀ ಶಾಸ್ತ್ರಿಗಳ ಪ್ರವಚನದ ವಾಗ್ವಿಲಾಸವನ್ನು ಕೇಳಿ ಬಹಳ ಆನಂದಪಟ್ಟೆನು. ಶ್ರೀ ರಾಮಶಾಸ್ತ್ರಿಗಳ ವಾಚನವೂ ಅತ್ಯಂತ ಹಿತವಾಗಿತ್ತು. ಅವರು ಒಬ್ಬ ಸಹೃದಯೀ ಸಜ್ಜನರು. ಮಾರನೆಯ ದಿನ ನನ್ನ ವಾಚನವನ್ನು ಕೇಳಲು ಅಪೇಕ್ಷಿಸಿದ್ದ ಶಾಸ್ತ್ರಿಗಳು ನನ್ನ ವಾಚನಕ್ಕೆ ವ್ಯಾಖ್ಯಾನವನ್ನು ನೀಡಿದರು. ಸಭಿಕರೆಲ್ಲರೂ ಈ ಕಾರ್ಯಕ್ರಮವನ್ನು ಕೇಳಿ ಬಹಳ ಆನಂದಪಟ್ಟರು.

ಮುಂದೆ ಶ್ರೀ ಶಾಸ್ತ್ರಿಗಳು ಬೆಂಗಳೂರಿಗೆ ಬಂದಾಗಲೆಲ್ಲಾ ಹೇಗೋ ಅವಕಾಶ ಮಾಡಿಕೊಂಡು ಬಂದು, ಒಂದು ಸಲವಾದರೂ ನನ್ನನ್ನು ಕಂಡು ಮಾತನಾಡದೆ ಹೋಗುತ್ತಿರಲಿಲ್ಲ. ಹೀಗೆ ಅವರು ಅತ್ಯಂತ ಸುಲಭರೂ, ಸರಸಿಗಳೂ, ಸಜ್ಜನಿಕೆಯುಳ್ಳವರೂ ಆಗಿದ್ದಾರೆ.

ಗಮಕ ವಿದ್ವಾನ್ ಶ್ರೀ ಕೆ.ಎಸ್. ವೆಂಕಟೇಶಯ್ಯನವರು ನನಗೆ ಪರಮ ಆಪ್ತಸ್ನೇಹಿತರು. ಅವರು ಶಿವಮೊಗ್ಗ ತಾಲ್ಲೂಕಿನ ಹೊಸಹಳ್ಳಿ-ಮತ್ತೂರು ಈ ಸ್ಥಳಗಳಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿದ್ದರು. ಒಂದು ವರ್ಷ, ನಾನು ಮತ್ತು ಆಗಿನ ಕನ್ನಡ ಸಾಹಿತ್ಯ ಪರಿಷತ್ತಿನ ಗೌ. ಕಾರ್ಯದರ್ಶಿಗಳಾಗಿದ್ದ ಡಾ. ಕೆ.ಎಂ.ಕೃಷ್ಣರಾಯರು ಆ ಊರಿಗೆ ಪರೀಕ್ಷಕರಾಗಿ ಹೋದ ಸಂದರ್ಭ. ಸಂಜೆಯ ವೇಳೆಗೆ ಶಿವಮೊಗ್ಗದಲ್ಲಿ ಬಸ್ಸಿನಿಂದ ಇಳಿಯುತ್ತಿದ್ದಂತೆಯೇ, ನಮಗೆ ಅಭೂತಪೂರ್ವ ಸ್ವಾಗತವೇ ಕಾದಿತ್ತು. ಸುಮಾರು ಐದಾರು ಮಂದಿ ನಮ್ಮನ್ನು ಬರಮಾಡಿಕೊಳ್ಳಲು ಬಂದು ಕಾದಿದ್ದರು. ನಾವೆಲ್ಲರೂ ಒಂದು ಟೆಂಪೋವಿನಲ್ಲಿ ಕುಳಿತು ಹೊಸಹಳ್ಳಿಯನ್ನು ಸೇರಿದೆವು. ಆ ವೇಳೆಗಾಗಲೇ ಕತ್ತಲು ಆವರಿಸಿತ್ತು. ಅವರ ಊರಿನ ಮುಂದೆ, ಊರಿನ ಜನರೇ ಬಂದು ನಮಗಾಗಿ ಕಾದು ನಿಂತಿದ್ದರು. ಅನಂತರ ಗಮಕಿ ಶ್ರೀ ಸೂರ್ಯನಾರಾಯಣ ಅವರ ಮನೆಯಲ್ಲಿ ನಮಗೆ ಬಿಡಾರವಾಯಿತು. ಆದರಾತಿಥ್ಯಗಳು ನಡೆದವು. ಊಟೋಪಚಾರ ವಾಯಿತು. ಇನ್ನೇನು ನಾವು ಮಲಗುವ ಗುಂಗಿನಲ್ಲಿದ್ದಾಗ, ಶ್ರೀ ಶಾಸ್ತ್ರಿಗಳು ಮತ್ತು ಶ್ರೀ ವೆಂಕಟೇಶಯ್ಯನವರು ಬಂದು, "ನಾಳೆ ಪರೀಕ್ಷೆಯಿದೆ. ಆದರೆ ಈಗ ಈ ಹಿಂದಿನ ವರ್ಷಗಳಲ್ಲಿ ಗಮಕವನ್ನು ಅಭ್ಯಾಸ ಮಾಡಿದ್ದ ಕೆಲವರು ತಮ್ಮ ಮುಂದೆ ವಾಚನ ಮಾಡಲು ಇಷ್ಟಪಟ್ಟಿದ್ದಾರೆ. ನಾಳೆಗೆ ಅವರ ಕಾರ್ಯಕ್ರಮಕ್ಕೆ ಅವಕಾಶವಿಲ್ಲದ ಕಾರಣ, ತಮಗೆ ಇಂದೇ ತೊಂದರೆ ಕೊಡಬೇಕಾಗಿದೆ, ದಯವಿಟ್ಟು ಬರಬೇಕು" ಎಂದು ತಿಳಿಸಿದರು. ನಾವು ಒಪ್ಪಿ ಬೇರೊಂದು ಮನೆಗೆ ಹೋದೆವು. ಆ ಮನೆಯ ಒಳಭಾಗದಲ್ಲಿ ಒಂದು ದೊಡ್ಡ ಸಭಾಂಗಣವೇ ಸಜ್ಜಾಗಿದ್ದಿತು. ಸುಮಾರು ಹತ್ತು-ಹನ್ನೆರಡು ಮಂದಿ ಯುವಕ - ಯುವತಿಯರು ಉತ್ಸಾಹದಿಂದ ವಾಚನ ಮಾಡಲು ಸಿದ್ಧವಾಗಿದ್ದರು! ಕಾರ್ಯಕ್ರಮ ಪ್ರಾರಂಭವಾದಾಗ ರಾತ್ರಿ ಹತ್ತು ಗಂಟೆ. ಮುಗಿದಾಗ ಹನ್ನೆರಡು ಗಂಟೆಗೂ ಮೀರಿತ್ತು. ನಮಗೆ ಆ ಯುವ ಕಲಾವಿದರ ವಾಚನದ ಸೊಗಸಿನಲ್ಲಿ ವೇಳೆಯಾದುದೇ ತಿಳಿಯಲಿಲ್ಲ! ಅಥವಾ ಬೇಸರವೂ ಆಗಲಿಲ್ಲ. ಅಲ್ಲಿ ನಮಗೆ ಕಂಡುಬಂದ ವೈಶಿಷ್ಟ್ಯವೆಂದರೆ, ಸುಮಾರು ಮೂರು ಜನ ದಂಪತಿಗಳು ಕುಳಿತು ವಾಚನ ಮಾಡಿದ್ದು! ಆ ವಾತಾವರಣವನ್ನು ನೋಡಿದ ನಮಗೆ, ಅಲ್ಲಿ ಶ್ರೀ ಶಾಸ್ತ್ರಿಗಳಂತಹ ಗಮಕ ಕಲಾಭಿಮಾನಿಗಳ ಪ್ರೋತ್ಸಾಹವು ಈ ತರುಣರಿಗೆ ಎಷ್ಟರಮಟ್ಟಿಗೆ ಪ್ರಭಾವವನ್ನು ಬೀರಿತ್ತೆಂಬುದು ಮನವರಿಕೆಯಾಯಿತು. ಒಟ್ಟಿನಲ್ಲಿ ಆ ಊರಿನ ಜನರ ಮೊದಲ ಪರಿಚಯದಿಂದಲೇ, ನನಗೆ ಹೊಸಹಳ್ಳಿ ಮತ್ತು ಮತ್ತೂರು



***6. ಶ್ರೋತೃಗಳತ್ತ ಒಂದು ನೋಟ***

ಈ ಎರಡು ಗ್ರಾಮಗಳು ಶಾಸ್ತ್ರಾಧ್ಯಯನ, ವೇದಪಾರಾಯಣ, ಸಂಗೀತಾಭ್ಯಾಸ, ಸಾಹಿತ್ಯಪ್ರವೃತ್ತಿ ಮತ್ತು ಗಮಕ ಕಲೆ ಇವುಗಳಿಗೆ ತವರು ಮನೆಯಾಗಿರುವಂತೆ ಭಾಸವಾಯಿತು. ನಾವು ಆ ಊರಿನಿಂದ ಮಾರನೇ ದಿನ ಅಲ್ಲಿಯ ಪರೀಕ್ಷೆಯನ್ನು ಮುಗಿಸಿಕೊಂಡು ಶಿವಮೊಗ್ಗೆಗೆ ಹಿಂದಿರುಗಿದೆವು.

ಶಿವಮೊಗ್ಗದಲ್ಲಿಯೂ ಆ ಸಂಜೆ ಶ್ರೀ ಶಾಸ್ತ್ರಿಗಳು ಅಲ್ಲಿ ವಾಸಿಸುತ್ತಿದ್ದ ತಮ್ಮ ಶಿವಮೊಗ್ಗ ಶಾಖೆಯ ಮನೆಯಲ್ಲಿ ನಮ್ಮನ್ನು ಕಟ್ಟಿಹಾಕಿ, ಆದರಿಸಿ, ಬೆಂಗಳೂರಿಗೆ ಹೊರಡಲು ಸಹಕರಿಸಿ ಬೀಳ್ಕೊಟ್ಟರು. ಅವರ ಜತೆಯಲ್ಲಿ ನಾವು ಕಳೆದ ಕಾಲವು ತನ್ನದೇ ಆದ ಒಂದು ಕಾವ್ಯಲೋಕವನ್ನು ಸೃಷ್ಟಿಸಿತ್ತು! ಅಂತು ನಾವು ಶ್ರೀ ಶಾಸ್ತ್ರಿಗಳ ಸವಿನುಡಿಗಳ ಉಪಚಾರದ ಲಹರಿಯನ್ನು ಮೆಲುಕು ಹಾಕುತ್ತಾ ಬೆಂಗಳೂರಿಗೆ ಹಿಂದಿರುಗಿದೆವು.

ಶ್ರೀ ಕುಮಾರವ್ಯಾಸ ಮಹಾಕವಿಯ ಜಯಂತಿಯ ಉತ್ಸವವು ಅವನ ಹುಟ್ಟೂರಾದ ಕೋಳಿವಾಡದಲ್ಲಿ ನಡೆಯುವುದೆಂಬ ಸುದ್ದಿಯನ್ನು ಕೇಳಿದ್ದ ನನಗೆ, ಒಮ್ಮೆ ಆ ಊರಿಗೆ ಮತ್ತು ಗದಗಿಗೆ ಹೋಗಿ ಆ ಮಹಾಕವಿಯ ಜನ್ಮಸ್ಥಳವನ್ನೂ ಶ್ರೀವೀರನಾರಾಯಣಸ್ವಾಮಿಯ ದರ್ಶನವನ್ನೂ ಮಾಡಬೇಕೆಂಬ ಅಪೇಕ್ಷೆಯಾಯಿತು. ಇದಕ್ಕೂ ಮೊದಲು ಹಿಂದೆ 'ಸೊಲ್ಲಾಪುರ'ದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಿಂದ ಹಿಂದಿರುಗಿ ಬರುವಾಗ, ರಾತ್ರಿ ಸರಿಹೊತ್ತಿನಲ್ಲಿ ಗದಗಿನ ರೈಲ್ವೆ ನಿಲ್ದಾಣದಲ್ಲಿ ಇಳಿದು, ಟಾಂಗಾ ಗಾಡಿಯನ್ನು ಗೊತ್ತು ಮಾಡಿಕೊಂಡು, ನಾನೂ ಎಂಟು-ಹತ್ತು ಮಂದಿ ಸ್ನೇಹಿತರೂ ಶ್ರೀವೀರನಾರಾಯಣಸ್ವಾಮಿಯ ಗುಡಿಗೆ ಹೋಗಿ, ಮಲಗಿದ್ದ ಅರ್ಚಕರನ್ನು ಎಬ್ಬಿಸಿ, ಗುಡಿಯ ಬಾಗಿಲನ್ನು ತೆಗೆಸಿ, ದೇವರ ದರ್ಶನವನ್ನು ಪಡೆದು ಬಂದಿದ್ದೆವು. ಈ ಚಿತ್ರ ಮತ್ತೆ ನನ್ನ ಕಣ್ಣಿಗೆ ಕಟ್ಟಿದಂತಾಯಿತು. ಆದರೆ ನಾನೊಬ್ಬನೇ ಅಲ್ಲಿಗೆ ಹೋಗಲು ಇಷ್ಟಪಡಲಿಲ್ಲ. ನನ್ನ ಮಿತ್ರ- ಗಮಕಿಗಳಿಗೂ, ಮಿತ್ರ- ಸಾಹಿತಿಗಳಿಗೂ ಹಾಗೂ ಮಿತ್ರ- ಪ್ರವಚನಕಾರರಿಗೂ ಪತ್ರಗಳನ್ನು ಬರೆದು, ನಾವು ಸುಮಾರು ಮೂವತ್ತೈದು-ನಲವತ್ತು ಮಂದಿ ಗಮಕಕಲಾ ಪ್ರೇಮಿಗಳು ನಮ್ಮ ಸ್ವಂತ ಖರ್ಚಿನ ಮೇಲೆ ಒಂದು ಬಸ್ಸನ್ನು ಗೊತ್ತು ಮಾಡಿಕೊಂಡು ಒಂದು ವಾರದ ಕಾಲದ ಪ್ರವಾಸವನ್ನು ಗೊತ್ತುಪಡಿಸಿ ಹೊರಟೆವು. ಬೆಂಗಳೂರಿನಿಂದ ದಾವಣಗೆರೆ, ಹರಿಹರ, ಕಾಗಿನೆಲೆ, ಹುಬ್ಬಳ್ಳಿಯ ಮಾರ್ಗವಾಗಿ ಕೋಳಿವಾಡ; ಮತ್ತೆ ಗದಗ್, ಕೊಪ್ಪಳ, ಹೊಸಪೇಟೆ, ಹಂಪೆ, ಬಳ್ಳಾರಿ ಮತ್ತು ಮಂತ್ರಾಲಯ ಮಾರ್ಗವಾಗಿ ಬೆಂಗಳೂರಿಗೆ ಹಿಂದಿರುಗುವ ಈ ಪ್ರವಾಸದ ಅವಧಿಯಲ್ಲಿ ಕಾವ್ಯವಾಚನ, ವ್ಯಾಖ್ಯಾನ, ಕನ್ನಡ ಕವಿಗಳ ಬಗ್ಗೆ ಉಪನ್ಯಾಸ, ದಾಸರಪದಗಳ ಗಾಯನ, ಸ್ತೋತ್ರ, ಸಾಮೂಹಿಕ ಭಜನೆ ಮುಂತಾದ ಕಾರ್ಯಕ್ರಮಗಳು ಪ್ರತಿ ಊರಿನಲ್ಲಿಯೂ ತಪ್ಪದೆ ಮೂರು-ನಾಲ್ಕು ಗಂಟೆಗಳ ಕಾಲ ನಡೆದವು. ಗಮಕ-ವಾಚನಗಳಿಗೆ ವ್ಯಾಖ್ಯಾನ ಮಾಡಿದ ವಿದ್ವಾಂಸರಲ್ಲಿ ಶ್ರೀ ಶಾಸ್ತ್ರಿಗಳದು ಸಿಂಹಪಾಲು. ಅನಂತರ ಪಂಡಿತ ಶ್ರೀ ಅನಂತರಾಮಯ್ಯನವರದು, ಅನಂತರ ಶ್ರೀ ದಿಬ್ಬೂರು ಶ್ರೀನಿವಾಸರಾಯರದು- ಹೀಗಿತ್ತು. ಶ್ರೀ ಶಾಸ್ತ್ರಿಗಳು ನಮ್ಮನ್ನು ಹರಿಹರದಲ್ಲಿ ಸೇರಿಕೊಂಡರು.

ಕೋಳಿವಾಡದಲ್ಲಿ ನಡೆದ 'ಶ್ರೀ ಕುಮಾರವ್ಯಾಸ ಜಯಂತಿ'ಯ ಉತ್ಸವದಲ್ಲಿ ಧಾರವಾಡದ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಡಾ.ಕೆ.ಕೃಷ್ಣಮೂರ್ತಿ ಅವರು ಮುಖ್ಯ ಅತಿಥಿಗಳಾಗಿದ್ದರು. ಧಾರವಾಡದ ಪೂಜ್ಯ ಶ್ರೀ ಬಾಲಚಂದ್ರಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಅವರೆಲ್ಲರೂ ಶ್ರೀ ಶಾಸ್ತ್ರಿಗಳ ವ್ಯಾಖ್ಯಾನದ ವೈಖರಿಯನ್ನು ಆಲಿಸಿ ಆನಂದತುಂದಿಲರಾದರು. ಕೋಳಿವಾಡದ ಜನತೆಯೇ ಅವರ ಅರ್ಥಗಾರಿಕೆಗೆ ತಲೆದೂಗಿತು. ಮಾರನೆಯ ದಿನ ಕೋಳಿವಾಡದಿಂದ ಗದಗಿಗೆ ಪ್ರಯಾಣ ಮಾಡಿದೆವು. ಅಲ್ಲಿ ಶ್ರೀಕುಮಾರವ್ಯಾಸ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿಯು ಸಹ ಶ್ರೀ ಶಾಸ್ತ್ರಿಗಳ ಸಹಜ, ಸರಸ, ಸರಳ, ಸುಂದರ ಪ್ರವಚನವು ಸಭಿಕರನ್ನೆಲ್ಲಾ ಮೆಚ್ಚಿಸಿತು. ದೇವಸ್ಥಾನದ ಗರ್ಭಗುಡಿಯಲ್ಲಿ ಬೆಳಗ್ಗೆ ಶ್ರೀವೀರನಾರಾಯಣ ದೇವರ ಸನ್ನಿಧಿಯಲ್ಲಿ ಏಕಾಂತರೀತಿಯಿಂದ ನಮ್ಮ ಪ್ರತಿಯೊಬ್ಬ ಸ್ನೇಹಿತರಿಂದಲೂ ನಡೆದ ದೇವರ ಕೈಂಕರ್ಯರೂಪವಾದ ಕಲಾಸೇವೆಯಲ್ಲೂ, ಶ್ರೀ ಶಾಸ್ತ್ರಿಗಳು ತಮ್ಮ ಪಾರಾಯಣದ ಸೇವೆಯನ್ನು ಸಲ್ಲಿಸಿದರು. ಒಟ್ಟಿನಲ್ಲಿ ಈ ಪ್ರವಾಸವು ನಮಗೆ ಮೊದಲಿಂದ ಕಡೆಯವರೆಗೆ ಆನಂದದಾಯಕವಾಗಿತ್ತು.

ಶಿವಮೊಗ್ಗಾದಲ್ಲಿ ನಡೆದ ಸಾಹಿತ್ಯಸಮ್ಮೇಳನದ ಸಂದರ್ಭದಲ್ಲಿ ನಾನು ಶಾಸ್ತ್ರಿಗಳನ್ನು ಸಂಧಿಸಿದ್ದೆ. ನನ್ನನ್ನು ಅವರು ಆದರದಿಂದ ಅವರ ಸಮೀಪದ ಬಂಧುಗಳೊಬ್ಬರ ಮನೆಗೆ ಕರೆದುಕೊಂಡು ಹೋಗಿ ಬಹಳವಾಗಿ ಉಪಚರಿಸಿದರು. ಇಲ್ಲಿ ಉಪಚಾರವೆಂದರೆ ಊಟ, ತಿಂಡಿಗಳ ಪ್ರದರ್ಶನವಲ್ಲ. ಅವರ ಹಿತವಾದ ನುಡಿಗಳ ಔತಣ. ಅವರೊಬ್ಬ ಪ್ರಸಿದ್ಧ ವಾಗ್ಮಿಗಳು.

ಇತ್ತೀಚೆಗೆ ಹೊಸಹಳ್ಳಿಯ ಗಮಕಕಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಸದಸ್ಯರು ನನ್ನನ್ನು ಸನ್ಮಾನಿಸಲು ಕರೆದಿದ್ದ ಸಂದರ್ಭದಲ್ಲಿ ಶ್ರೀ ಶಾಸ್ತ್ರಿಗಳೊಡನೆ ಕಾಲವನ್ನು ಸದ್ವಿನಿಯೋಗ ಮಾಡುವ ಒಂದೆರಡು ದಿನಗಳ ಅವಕಾಶ ನನಗೆ ಲಭಿಸಿತ್ತು. ಅವರ ಮನೆತನವೇ

ಗಮಕಕಲೆಯ ವಾಚನ ಪ್ರವಚನಗಳಿಗೆ ಪ್ರಸಿದ್ಧವಾಗಿದೆಯೆಂದರೆ ಅದುಉತ್ಪ್ರೇಕ್ಷೆಯಲ್ಲ! ಅವರ ಹಿರಿಯ ಮಗ ಶ್ರೀಯುತ ಎಂ.ಎಲ್.ಚನ್ನಕೇಶವ ಶಾಸ್ತ್ರಿ ಅವರು ಒಳ್ಳೆಯ ಗಮಕ ಕಲಾವಿದರು ಮತ್ತು ವ್ಯಾಖ್ಯಾನಕಾರರು.

ಶ್ರೀ ಶಾಸ್ತ್ರಿಗಳ ವ್ಯಾಖ್ಯಾನದ ಕೆಲವು ಘಟ್ಟಗಳನ್ನು ನಾನು ಕೇಳಿದ್ದೇನೆ. ಅವರ ಮಾತಿನ ಮೋಡಿಯು ಗಮಕಿಯ ಕಲಾತ್ಮಕವಾದ ವಾಚನದ ವೈಭವವನ್ನು ಸಹ ಮರೆಸುವಂತಹುದು! ಯುದ್ಧಪ್ರಸಂಗದಲ್ಲಿ, ಹಾಸ್ಯಪ್ರಸಂಗದಲ್ಲಿ, ದುಃಖಪ್ರಸಂಗದಲ್ಲಿ, ಶೃಂಗಾರ ಸನ್ನಿವೇಶಗಳಲ್ಲಿ ಅವರು ವ್ಯಾಖ್ಯಾನ ಮಾಡುವ ರೀತಿ, ಅವರ ಹಾವ-ಭಾವ-ಅಭಿನಯಗಳು ಎಂತಹ ವಿದ್ವಾಂಸರನ್ನೂ ಮೆಚ್ಚಿಸುವಂಥಾದ್ದು. ಅಲ್ಲದೆ, ಅದನ್ನು ಆಲಿಸುವ ಕಾವ್ಯಪ್ರೇಮಿಗಳಿಗೆ, ಯುವ ಕಲಾವಿದರಿಗೆ ರೋಮಾಂಚನದ ಅನುಭವವನ್ನು ತಂದು ಕೊಡತಕ್ಕಂಥಾದ್ದು. ಹೀಗೆ, **ವ್ಯಾಖ್ಯಾನ ವಾಚಸ್ಪತಿ** ಎಂದು ಬಿರುದಾಂಕಿತರಾದ, ಕರ್ನಾಟಕದ ಬಹುತೇಕ ಎಲ್ಲಾ ಕಾವ್ಯಪ್ರಿಯರ ವಿಶ್ವಾಸವನ್ನೂ, ಮನ್ನಣೆಯನ್ನೂ ಗಳಿಸಿರತಕ್ಕ, ಎಂಬತ್ತರ ಪ್ರಾಯದ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳಿಗೆ, ಅವರ ಅಭಿನಂದನಾ ಸಮಾರಂಭದಲ್ಲಿ ಸಮರ್ಪಿಸಲಿರುವ ಸಂಭಾವನಾ ಗ್ರಂಥಕ್ಕೆ, ನನ್ನ ವಿಶ್ವಾಸ-ಗೌರವ ಸೂಚಕವಾದ *ಈ* ಪರಿಚಯಾತ್ಮಕ ಲೇಖನದ ಕಾಣಿಕೆಯನ್ನು ಅರ್ಪಿಸಲು ಸಂತೋಷಿಸುತ್ತೇನೆ.

## ೭. ವ್ಯಾಖ್ಯಾನವಾಚಸ್ಪತಿ, ಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳವರ ಪ್ರವಚನಕೌಶಲ್ಯ

*ವಿದ್ಯಾಭೂಷಣ, ವ್ಯಾಖ್ಯಾನ ಕೇಸರಿ, ಬಸವಾನಿ ರಾಮಶರ್ಮಾ*

ತಮ್ಮ ಮಾತಿನ ಮೋಡಿಯಿಂದ ದ್ವಾಪರಯುಗವನ್ನು ಕಣ್ಣೆದುರಿಗೆ ನಿಲ್ಲಿಸುವ ಕಲಾವಿದರಾದ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳವರ ಹೆಸರನ್ನು ಕೇಳದ ಕನ್ನಡಿಗರಿಲ್ಲ. ಮಿಂಚಿನ ಗೊಂಚಲಂತೆ ಮನಸ್ಸಿಗೆ ಬೆಳಕು ನೀಡುವ ಅವರ ಅಸಾಧಾರಣ ವಾಗ್ವೈಭವವನ್ನು ಮೆಚ್ಚದ ರಸಿಕರಿಲ್ಲ. ರಾಷ್ಟ್ರಕವಿ ಕುವೆಂಪುರವರು "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿವುದು" ಎಂದಿರುವುದನ್ನು ಸ್ವಲ್ಪ ಬದಲಿಸಿ "*ಶಾಸ್ತ್ರಿಗಳು ಹೇಳಿದರೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿವುದು* " ಎಂದು ಹೇಳಿದರೆ ಶಾಸ್ತ್ರಿಗಳ ಮಾತುಗಾರಿಕೆಯ ಚಿತ್ರ ಸ್ವಲ್ಪವಾದರೂ ಸ್ಪಷ್ಟವಾಗುತ್ತದೆ. ಅವರು ಉತ್ಸಾಹದಿಂದ ಹೇಳತೊಡಗಿದರೆಂದರೆ ಭೀಮ-ದುರ್ಯೋಧನರು, ರಾಮ-ರಾವಣರು ನಮ್ಮೆದುರಿಗೆ ನಿಲ್ಲುತ್ತಾರೆ. ಶ್ರೀಕೃಷ್ಣ-ಕರ್ಣ-ಭೀಷ್ಮರೂ ನಮ್ಮ ಮುಂದೆ ಸುಳಿಯುತ್ತಾರೆ. ನಾವು ಕಥೆಯಲ್ಲಿ ತಲ್ಲೀನರಾಗಿ ಪರವಶರಾಗುತ್ತೇವೆ, ಆನಂದಭರಿತರಾಗುತ್ತೇವೆ. ಶ್ರೋತೃಗಳಿಗೆ ಅಮೃತಧಾರೆಯಂತಿರುವ ಅವರ ಮಾತಿನಿಂದ ನಾಟಕ ನೋಡುವ ಅನುಭವವೇ ಉಂಟಾಗುತ್ತದೆ. ಕೇಳುವವರ ಹೃದಯದಲ್ಲಿ ಆನಂದಲಹರಿಯೇಳುತ್ತದೆ. ಕಾವ್ಯದ ಭಾವಕ್ಕೆ ತಕ್ಕಂತೆ ಬದಲಾಗುವ ಅವರ ವಾಗ್ಧೋರಣೆಯು ಅನ್ಯಾದೃಶವಾದುದು. ಸಂದರ್ಭೋಚಿತವಾಗಿ ಅವರು 'ಬಕಾಸುರ ಬಂದ' ಎಂದು ಗರ್ಜಿಸಿದಾಗ ಗಾಬರಿಗೊಂಡು ಮೇಲೆದ್ದವರುಂಟು. ಅವರ 'ಕರ್ಣಾವಸಾನ'ದಲ್ಲಿ ಕಣ್ಣೀರು ಮಿಡಿಯದ ಸಹೃದಯರಿಲ್ಲ. ಶಾಸ್ತ್ರಿಗಳು ವೇಷ ಕಟ್ಟದೇ, ಬಣ್ಣ ಬಳಿಯದೇ, ಕುಳಿತು ಕಥೆ ಕೇಳುವವರನ್ನು ಎದ್ದು ಕುಣಿಯುವಂತೆ ಮಾಡಬಲ್ಲರೆಂಬುದೇ ಅವರ ಕಥನಕಲೆಯ ವೈಶಿಷ್ಟ್ಯವೆನಿಸಿದೆ.

ಕನ್ನಡ ನಾಡಿನಲ್ಲಿ - ಒಬ್ಬ ಗಮಕಿಗಳು ಕುಳಿತು ಕುಮಾರವ್ಯಾಸಭಾರತ ರಾಮಾಯಣ ಮುಂತಾದ ಕಾವ್ಯಗಳನ್ನು ಓದುವ, ಪಕ್ಕದಲ್ಲಿ ಇನ್ನೊಬ್ಬ ಪ್ರವಚನಕಾರರು ಅರ್ಥವಿವರಣೆ ನೀಡುವ - ಕಲಾವಿದರ ಜೋಡಿಯಿಂದ ನಡೆಯುವ ಪ್ರವಚನಕಲೆಗೆ ಆದ್ಯಪ್ರವರ್ತಕರು ಶ್ರೀ ಶಾಸ್ತ್ರಿಗಳು. ಕಳೆದ ಅರ್ಧಶತಮಾನ ಕಾಲದಿಂದ ಒಂದೇ ಸಮನೆ ಅವರು ಸಮಗ್ರ ಕನ್ನಡನಾಡಿನಲ್ಲಿ ಸಂಚರಿಸಿ ಕುಮಾರವ್ಯಾಸ ಭಾರತ, ಜೈಮಿನಿಭಾರತ, ಪಂಪಭಾರತ, ಹರಿಶ್ಚಂದ್ರ ಕಾವ್ಯ, ತೊರವೆ ರಾಮಾಯಣ, ಗಿರಿಜಾಕಲ್ಯಾಣ, ಶಾಕುಂತಲ ನಾಟಕ, ರಾಜಶೇಖರ ವಿಲಾಸ, ಶ್ರೀಮದ್ರಾಮಾಯಣ, ಶ್ರೀ ಭಾಗವತ, ಶ್ರೀ ಶಂಕರ ವಿಜಯ- ಮುಂತಾದ ಕಾವ್ಯಪ್ರವಚನ ಕೈಗೊಂಡು ಕನ್ನಡ ನಾಡು-ನುಡಿಗೆ ಅನುಪಮ ಸೇವೆ ಸಲ್ಲಿಸಿ ಅಪಾರ ಕೀರ್ತಿಶಾಲಿಗಳಾಗಿದ್ದಾರೆ. ವೇದ, ಶಾಸ್ತ್ರ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಪ್ರಕಾಂಡ ಪಂಡಿತರಾದ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ನಾಡಿನ ಗಣ್ಯ ವಿದ್ವಾಂಸರಾಗಿದ್ದಾರೆ. ಸತತ ಐವತ್ತು ವರ್ಷಗಳ ಕಾವ್ಯ ಚಿಂತನ-ಮಂಥನ, ಕಾವ್ಯಪ್ರವಚನ ಅನುಭವದಿಂದ ಶ್ರೀ ಶಾಸ್ತ್ರಿಗಳು

ಜ್ಞಾನಭಂಡಾರ, ಜ್ಞಾನನಿಧಿಯೆನಿಸಿದ್ದಾರೆ. ವಿದೇಶಗಳಲ್ಲಾಗಿದ್ದರೆ ಪ್ರಾಯಶಃ ಇಷ್ಟು ಹೊತ್ತಿಗೆ ಅವರ ಅದ್ವಿತೀಯ ಪ್ರತಿಭೆಗೆ, ಆದರ್ಶ ವಾಕ್-ಸರಣಿಗೆ, ಎಷ್ಟೋ ಡಾಕ್ಟರೇಟ್ ಪ್ರಶಸ್ತಿಗಳು ದೊರಕಿರುತ್ತಿದ್ದುವು ಎಂಬುದರಲ್ಲಿ ಸಂಶಯವಿರದು.

ಅವರು ಹಿಂದಿನಿಂದ ಕಾವ್ಯಪ್ರವಚನ ನಡೆಸಿಕೊಂಡು ಬರುತ್ತಿರುವ ಘಟ್ಟದಲ್ಲಿ ೧೯೩೭ರಲ್ಲಿ ಶಿವಮೊಗ್ಗ 'ಕರ್ಣಾಟಕ ಸಂಘ'ದ ವಾರ್ಷಿಕೋತ್ಸವದಲ್ಲಿ ಅವರು ನಡೆಸಿದ ಭಾರತಪ್ರವಚನವು ಪಥ ಪ್ರದರ್ಶಕ ಚರಿತ್ರಾರ್ಹ ಪ್ರವಚನವೆನಿಸಿತು. ಅಂದು ಕನ್ನಡ ಸಾಹಿತ್ಯದ ಅಶ್ವಿನೀದೇವತೆಗಳಲ್ಲೊಬ್ಬರಾದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಮತ್ತು ಖ್ಯಾತ ಶ್ರೀ ಭಾರತ ಬಿಂದೂರಾಯರ ದಿವ್ಯಸಮ್ಮುಖದಲ್ಲಿ ಅವರ ಪ್ರವಚನ ನಡೆಯಿತು. ಭಾರತ ಪ್ರವಚನ ಕೇಳಿ ತಲೆದೂಗಿದ ಶ್ರೀ ವೆಂಕಣ್ಣಯ್ಯನವರು ಹರ್ಷಭರಿತರಾಗಿ, "ಶಾಸ್ತ್ರಿಗಳೇ, ನಿಮ್ಮ ಪ್ರವಚನ ತುಂಬಾ ಸೊಗಸಾಗಿದೆ. ಧೈರ್ಯದಿಂದ ಕನ್ನಡನಾಡಿನಾದ್ಯಂತ ನೀವು ವ್ಯಾಖ್ಯಾನ ಮಾಡಬೇಕು. ಈ ಪ್ರವಚನಕಲೆಯನ್ನು ನೀವು ಬೆಳೆಸಿ ಪ್ರಸಾರ ಮಾಡಬೇಕು. ಕನ್ನಡತಾಯಿ ನಿಮ್ಮನ್ನು ಹರಸಿದ್ದಾಳೆ" ಎಂದು ಆಶೀರ್ವದಿಸಿದರು. ಆಮೇಲಂತೂ ಅವರ ಉತ್ಸಾಹಕ್ಕೆ ಪಾರವೇ ಉಳಿಯಲಿಲ್ಲ. ನಾಡಿನ ಮೂಲೆ-ಮೂಲೆಗೂ ಧಾವಿಸಿ,



*7. ಸನ್ನಿವೇಶವೊಂದರ ವಿವರಣೆ*

ಭಾರತ ಮುಂತಾದ ಕಾವ್ಯಪ್ರವಚನ ನಡೆಸುತ್ತಲೇ ಇದ್ದಾರೆ.

ಅವರು ಅರ್ಥವಿವರಣೆ ನೀಡುವ ಧಾಟಿ ತುಂಬಾ ವಿಶಿಷ್ಟವಾದುದು. ಅಷ್ಟೇ ಸ್ವತಂತ್ರವಾದುದು. ಅವರ ವ್ಯಾಖ್ಯಾನವೆಂದರೆ 'ಮಕ್ಕೀಕಾಮಕ್ಕಿ' ಅನುವಾದವಲ್ಲ. ಅವರ ಅರ್ಥವಿವರಣೆ ತೀರ ಹೊಚ್ಚ ಹೊಸಬಗೆಯ ರಸಪೂರ್ಣ ವಿವರಣೆ, ಸತ್ತ್ವಪೂರ್ಣ ನಿರೂಪಣೆ. ಭಾಷೆಯ ಶಕ್ತಿಯನ್ನು ಪರಿಣಾಮಕಾರಿಯಾಗಿ ಶ್ರೋತೃಗಳ ಮೇಲೆ ಉತ್ಸಾಹದಾಯಕ ರೀತಿಯಲ್ಲಿ ಬಳಸಿಕೊಳ್ಳುವ, ಅವರ ಶೈಲಿ ನವೀನ ಶೈಲಿ. ಆಡುಮಾತಿನ ಸೊಬಗನ್ನು ಹರಡುವ ಆಕರ್ಷಕವಾದ ಮಾತುಗಾರಿಕೆ, ಸೆಳೆಮಿಂಚಿನಂತೆ ಮಿನುಗಿ ಮಾಯವಾಗುವ ಹಾಸ್ಯೋಕ್ತಿ, ನಗೆಬುಗ್ಗೆಯನ್ನೆಬ್ಬಿಸುವ ಸಂಸ್ಕೃತ ಸುಭಾಷಿತಗಳು, ಗಾದೆ ಮಾತುಗಳು, ಮಧ್ಯೆ ಮಧ್ಯೆ ಕಥೆ-ಉಪಕಥೆಗಳು. ಶಾಸ್ತ್ರಿಗಳ ವಾಗ್ವೈಖರಿಯಿಂದ ಕಾವ್ಯದ ಸಂದೇಶಕ್ಕೆ ಒಂದು ಹೊಸ ಅರ್ಥ, ಒಂದು ಹೊಸ ಮೆರುಗು ಬರುತ್ತದೆ. ಕೇಳುವವರ ಮನಸ್ಸಿಗೆ ಒಂದು ಹೊಸ ಬೆಳಕು- ಹೊಸ ಭಾವ- ಹೊಸ ಸಂವೇದನೆ ಮೂಡುತ್ತದೆ. ಒಟ್ಟಿನಲ್ಲಿ ಶಾಸ್ತ್ರಿಗಳ ವ್ಯಾಖ್ಯಾನವೆಂದರೆ ಶಾರದೆಯ ಸಮ್ಮೋಹನಾಸ್ತ್ರವೇ!

ಶ್ರೀ ಶಾಸ್ತ್ರಿಗಳವರು ಕವಿ ಮುದ್ದಣನ ಶಿಷ್ಯರು. ಅವರ ಗುರಿ ಸಂಪಾದನೆಯಲ್ಲ-ಕಾವ್ಯ ಪ್ರಚಾರವೇ ಮುಖ್ಯ. ಕಾವ್ಯ-ಕಥಾ ಪ್ರವಚನದಿಂದ ಜನ-ಮನವನ್ನು ರಂಜಿಸುವುದೇ ಅವರ ಗುರಿ. ಆದುದರಿಂದ ಅವರು ಕನ್ನಡನಾಡಿನಾದ್ಯಂತ ಅರಮನೆ-ಗುರುಮನೆಗಳು, ಶಾಲೆ-ಕಾಲೇಜುಗಳು, ಗಣೇಶೋತ್ಸವ-ರಾಮೋತ್ಸವಗಳು, ನೂರಾರು ಗ್ರಾಮಪಂಚಾಯಿತಿಗಳು, ಮೈಸೂರು ಸಂಸ್ಕೃತ ಪಾಠಶಾಲೆ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಇತರ ಸಂಘ-ಸಂಸ್ಥೆಗಳು ಎಲ್ಲೆಂದರಲ್ಲಿ, ಕರೆದಲ್ಲಿಗೆ ಹೋಗಿ, ಅನೇಕ ಸಂದರ್ಭಗಳಲ್ಲಿ ಸ್ವಂತ ವೆಚ್ಚದಿಂದಲೇ ಪ್ರಯಾಣ ಮಾಡಿ, ದೇಶದ ಉದ್ದಗಲಕ್ಕೂ ಕಾವ್ಯಗಂಗೆಯನ್ನು ಹರಿಸುತ್ತಿದ್ದಾರೆ. ಕೀರ್ತಿಶೇಷರಾದ ಶ್ರೇಷ್ಠನ್ಯಾಯಮೂರ್ತಿ ಶ್ರೀ ಎಚ್.ಹೊಂಬೇಗೌಡರವರು ಪ್ರತಿವರ್ಷ ಬೇಸಿಗೆಯಲ್ಲಿ ಕೆಮ್ಮಣ್ಣುಗುಂಡಿಯ ಗಿರಿಧಾಮಕ್ಕೆ ಅವರನ್ನು ಬರಮಾಡಿಕೊಂಡು ಅವರ ಪ್ರವಚನವನ್ನು ಕೇಳಿ ಹರ್ಷಿಸುತ್ತಿದ್ದರು. ಇಂದು ಶಾಸ್ತ್ರಿಗಳಿಗೆ ಕನ್ನಡನಾಡಿನ ಅಭಿಮಾನಿಗಳ ಸಂಪತ್ತಿನ ಜತೆಗೆ ಶಿಷ್ಯ-ಸಂಪತ್ತಿಯೂ ಅಪಾರವಾಗಿದೆ. ಇಂದು ಅವರ ನೂರಾರು ಜನ ಶಿಷ್ಯರು ಖ್ಯಾತನಾಮರಾಗಿ ದೇಶದ ನಾನಾಭಾಗಗಳಲ್ಲಿ ಕಾವ್ಯವಾಚನ ನಡೆಸುತ್ತಿದ್ದಾರೆ, ಪ್ರವಚನಕಲೆಯನ್ನು ಬೆಳಗಿಸುತ್ತಿದ್ದಾರೆ. ಕೋಲಗುರು ದ್ರೋಣಾಚಾರ್ಯರಂತೆಯೇ ಶ್ರೀ ಶಾಸ್ತ್ರಿಗಳಿಗೆ ಶಿಷ್ಯವೃಂದದ ಜತೆಗೆ,

ಏಕಲವ್ಯನಂಥ ನೂರಾರು ಜನ ಪರೋಕ್ಷ ಶಿಷ್ಯರಿರುವುದು ಹೆಮ್ಮೆಯ ಸಂಗತಿಯಾಗಿದೆ.

ಮತ್ತೂರು-ಹೊಸಹಳ್ಳಿ ಅವಳಿ ಗ್ರಾಮಗಳ ಪ್ರತಿ ಮನೆಯಿಂದಲೂ ಇಂದು ಕಾವ್ಯನಿನಾದವು ಹೊರಹೊಮ್ಮುತ್ತಿರುವುದಕ್ಕೆ ಶ್ರೀ ಶಾಸ್ತ್ರಿಗಳ ದೀರ್ಘ ಕಾಲದ ಕಾವ್ಯಪ್ರವಚನವೇ ಮೂಲ ಪ್ರೇರಕಶಕ್ತಿಯಾಗಿದೆ ಎಂಬುದನ್ನು ಅರಿತವರೆಲ್ಲರೂ ಅವರ ಸಾಹಿತ್ಯಸೇವೆಯನ್ನು ಕೊಂಡಾಡದಿರರು. ಜನಪ್ರಿಯ ವ್ಯಾಖ್ಯಾನಕಾರರಾದ ಶ್ರೀ ಶಾಸ್ತ್ರಿಗಳವರು ಹೋದಹೋದೆಡೆಯಲ್ಲೆಲ್ಲಾ ಅವರ ಪ್ರವಚನ ಕೇಳಿ ಹರ್ಷಿಸಿದ ಸಹೃದಯರು ಅವರನ್ನು ವಿಶೇಷವಾಗಿ ಗೌರವಿಸುತ್ತಿದ್ದಾರೆ. ಅವರಿಗೆ ಬಂದಿರುವ ಮಾನಪತ್ರಗಳಿಗೆ ಲೆಕ್ಕವಿಲ್ಲ. ಶ್ರೀ ಶ್ರೀ ಜಗದ್ಗುರು ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರೂ, ಶ್ರೀ ಜಗದ್ಗುರು ದ್ವಾರಕಾಧೀಶರು ಮುಂತಾದ ಮಠಾಧೀಶ್ವರರೂ, ಕರ್ನಾಟಕ ಸಂಘ, ಸಾಹಿತ್ಯ ಸಂಘ, ಶ್ರೀ ರಾಮ ಸೇವಾ ಸಮಿತಿ - ಮುಂತಾದ ಸಂಘಸಂಸ್ಥೆಗಳವರೂ, ಶ್ರೇಷ್ಠನ್ಯಾಯಮೂರ್ತಿ ಶ್ರೀ ಎಚ್.ಹೊಂಬೇಗೌಡರೂ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಶ್ರೀ ಕೋ. ಚೆನ್ನಬಸಪ್ಪನವರು ಮುಂತಾದ ಗಣ್ಯರೂ ಇವರಿಗೆ **ಸಾಹಿತ್ಯವಾರಿಧಿ, ಭಾರತಕಥಾವಾರಿಧಿ, ಪ್ರವಚನ ಶಿರೋಮಣಿ, ಪ್ರವಚನಪ್ರವೀಣ** ಮುಂತಾದ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿದ್ದಾರೆ. ಸುಮಾರು ೧೯೫೬ರಲ್ಲಿ ಶಿವಮೊಗ್ಗೆಯಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಕೆಂಗಲ್ ಹನುಮಂತಯ್ಯನವರು ಶಾಸ್ತ್ರಿಗಳ ಪ್ರವಚನವನ್ನು ಕೇಳಿ ಹರ್ಷಿಸಿ ಪ್ರಶಂಸಿಸಿದ್ದನ್ನೂ, ಶಿವಮೊಗ್ಗೆಯ 'ಲಕ್ಷ-ಮೋದಕ ಹವನ' ಸಮಾರಂಭದಲ್ಲಿ ಶ್ರೀ ಶ್ರೀ ಜಗದ್ಗುರು ಶೃಂಗೇರಿ ಶಾರದಾ ಪೀಠಾಧೀಶ್ವರರು ಶ್ರೀ ಶಾಸ್ತ್ರಿಗಳ ವಾಗ್ವಿಲಾಸವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಲಂಡನ್ನಿನ ಭಾರತೀಯ ವಿದ್ಯಾಭವನದ ರಿಜಿಸ್ಟ್ರಾರ್ ಮಾನ್ಯ ಮತ್ತೂರು ಕೃಷ್ಣಮೂರ್ತಿಗಳವರ ಸಮರ್ಥ ನೇತೃತ್ವದಲ್ಲಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ಮತ್ತು ಗಮಕ ಕಲಾನಿಧಿ ಶ್ರೀ ಟಿ. ರಾಮಶಾಸ್ತ್ರಿಗಳ ಗೌರವಾರ್ಥವಾಗಿ ಮತ್ತೂರಲ್ಲಿ ನಡೆದ ಅಭೂತಪೂರ್ವ ಸನ್ಮಾನ ಸಮಾರಂಭವನ್ನು ನೆನಪಿಸಿಕೊಳ್ಳಬಹುದಾಗಿದೆ.

ಆದರೂ ನಾಡಿನ ಸಾಹಿತ್ಯರಂಗ - ಪ್ರವಚನರಂಗದ ಅಮೂಲ್ಯ ಆಸ್ತಿಯೆನಿಸಿರುವ ಶಾಸ್ತ್ರಿಗಳ ಕಡೆಗೆ ಈವರೆಗೂ ಸರ್ಕಾರದ ಗಮನ ಹರಿಯದಿರುವುದು ಆಶ್ಚರ್ಯದ ಸಂಗತಿಯೇ. ಸರಕಾರ, ವಿಶ್ವವಿದ್ಯಾಲಯಗಳು, ಸಾಹಿತ್ಯ ಪರಿಷತ್ತು, ಸಾಹಿತ್ಯ ಸಮ್ಮೇಳನ ಮುಂತಾದ ಸಂಸ್ಥೆಗಳು ಅಸಾಧಾರಣ ಪ್ರತಿಭೆ-ಪಾಂಡಿತ್ಯವನ್ನು ಹೊಂದಿ ದೀರ್ಘಕಾಲ ಸೇವೆ ಸಲ್ಲಿಸಿದ ಇಂತಹ ಗಣ್ಯ ವಿದ್ವಾಂಸರನ್ನು ಗೌರವಿಸಿದರೆ ಅದು ಸಾಹಿತ್ಯಕ್ಕೇ ಸಂದ ಗೌರವವೆನಿಸುತ್ತದೆ. ಜತೆಗೆ ಅರ್ಹರನ್ನು ಗೌರವಿಸಿದ ಕೀರ್ತಿಯು ಈ ಸಂಸ್ಥೆಗಳಿಗೆ ಲಭಿಸುತ್ತದೆ. ಹಿರಿಯ ಸಂಘ-ಸಂಸ್ಥೆಗಳು ಇತ್ತ ಗಮನ ಹರಿಸಬೇಕು.

**ಭಾರತಕಥಾವಾರಿಧಿ** ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳವರು ತಮ್ಮ ಈ ಎಂಬತ್ತರ ನವತಾರುಣ್ಯದಲ್ಲಿ ಕೈಗೊಂಡಿರುವ ನೂತನ ಸಾಹಸವು ಸರ್ವರನ್ನೂ ಅಚ್ಚರಿಗೊಳಿಸುತ್ತದೆ. ಹೊಸಹಳ್ಳಿಯ ಪ್ರಸಿದ್ಧ 'ಗಮಕ ಕಲಾ ಪರಿಷತ್'ನ ಆಶ್ರಯದಲ್ಲಿ ಈ ವಿಜಯದಶಮಿಯ ಮೊದಲ್ಗೊಂಡು, ಕಳೆದ ಐದು ತಿಂಗಳಿಂದ ಶ್ರೀ ಶಾಸ್ತ್ರಿಗಳವರು ಸ್ಥಳೀಯ ಗಮಕ ಕಲಾ ಪರಿಷತ್‌ನ ಅಧ್ಯಕ್ಷರೂ, ನಾಡಿನ ಶ್ರೇಷ್ಠ ಗಮಕಿಗಳೂ ಆದ ವಿದ್ವಾನ್ ಎಚ್.ಆರ್. ಕೇಶವಮೂರ್ತಿಗಳವರ ಸುಶ್ರಾವ್ಯ ವಾಚನದೊಂದಿಗೆ 'ಸಮಗ್ರ ಕುಮಾರವ್ಯಾಸ ಭಾರತ ವಾಚನ-ಪ್ರವಚನ ಧ್ವನಿಮುದ್ರಣ' (ಕ್ಯಾಸೆಟ್) ನಡೆಸಿ ಪೂರೈಸಿರುವುದು ಕನ್ನಡಿಗರೆಲ್ಲರಿಗೂ ಅಭಿಮಾನಾಸ್ಪದವಾಗಿದೆ. ತಮ್ಮ ಈ ವಿನೂತನ ಸಾಹಸದಿಂದ ಹದಿನೆಂಟರ ಹರೆಯದವರನ್ನೂ ನಾಚಿಸುವ ರೀತಿಯಲ್ಲಿ, ತಮ್ಮ ಎಂಬತ್ತರ ಹರೆಯದಲ್ಲಿಯೂ ತಮ್ಮ ಸ್ವಭಾವಸಹಜ ಸಿಂಹವಾಣಿಯಿಂದ ಮೊಳಗಿಸಿರುವ ನವರಸಾಮೃತ ಭಾರತಕಥೆಯನ್ನು ಸದಾ ಕೇಳುವ ಭಾಗ್ಯ ಕನ್ನಡಿಗರ ಪಾಲಿಗೆ ಒದಗಿ ಬಂದಿದೆ. ಇದಕ್ಕಾಗಿ ವ್ಯಾಖ್ಯಾನ ವಾಚಸ್ಪತಿ, ಭಾರತಕಥಾವಾರಿಧಿ, ಸಾಹಿತ್ಯಭೂಷಣ ಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಮರ್ಪಿಸೋಣ.

ಸಮಗ್ರ ಕುಮಾರವ್ಯಾಸ ಭಾರತ ಧ್ವನಿಮುದ್ರಣದಂಥ ಮಹಾಸಾಹಸ ಕಾರ್ಯಕ್ಕೆ ಹಲವು ಮುಖದ ಸಹಕಾರ ಬೇಕು. ಅಪಾರ ಶ್ರಮ ಮತ್ತು ವೆಚ್ಚದ ಈ ಕಾರ್ಯವು ಜಯಪ್ರದವಾಗಲು, ಮುಕ್ತ ಹಸ್ತದಿಂದ ಸಹಕಾರ ನೀಡಿದ ಗ್ರಾಮದ ರಸಿಕವೃಂದಕ್ಕೆ ಸಹೃದಯರ ಧನ್ಯವಾದಗಳು ಸಲ್ಲುತ್ತವೆ. ಅನೇಕವರ್ಷಗಳಿಂದ ಗಮಕಕಲಾ ಶಿಕ್ಷಣ ನೀಡುತ್ತಾ, ಪ್ರತಿ ವರ್ಷ ಗಮಕಸಪ್ತಾಹವನ್ನು ಯಶಸ್ವಿಯಾಗಿ ನಡೆಸುತ್ತಿರುವುದರ ಜತೆಗೆ ಸಮಗ್ರ ಕುಮಾರವ್ಯಾಸ ಭಾರತ ಧ್ವನಿಮುದ್ರಣ ಸಾಹಸವನ್ನೂ ಕೈಗೊಂಡ ಶ್ರೀ ಶಾಸ್ತ್ರಿಗಳಿಗೆ ಅಭಿನಂದನಾಗ್ರಂಥ ಸಮರ್ಪಣೆಯೊಂದಿಗೆ ಗೌರವಾರ್ಪಣೆ ಮಾಡುತ್ತಿರುವ ಹೊಸಹಳ್ಳಿಯ ಗಮಕಕಲಾ ಪರಿಷತ್ತಿಗೆ ಸಹೃದಯರ ಹಾರ್ದಿಕ ಅಭಿನಂದನೆಯು ಸಲ್ಲುತ್ತದೆ. ಈ ಪರಿಷತ್ತಿನ ಮೂಲಕ ಇನ್ನೂ ಹೆಚ್ಚಿನ ಸಾಹಿತ್ಯಸೇವೆಯನ್ನು ನಿರೀಕ್ಷಿಸೋಣ.

# ೮. ಕುಮಾರವ್ಯಾಸನ ಪುನರವತಾರ

*ಡಾ. ನಂದಕುಮಾರ್*

ಕುಮಾರವ್ಯಾಸನ ಭಾಷೆಯ ಘಮವಿದು ಅವರಿವರುಲಿಯಲ್ಲ
ಗದುಗಿನ ವೀರನ ಭಾವದ ಜಾಲಕೆ ಸಿಕ್ಕಿದರುಳಿವಿಲ್ಲ

ವ್ಯಾಸರ ಮನವನೆ ಬಿಚ್ಚಿಟ್ಟಿದೆ ಇದರಲಿ ಕನ್ನಡ ನುಡಿಯಲ್ಲಿ
ಕೃಷ್ಣನ ಹೃದಯಕೆ ಧಾಳಿಯನಿಕ್ಕಿದೆ ಭಕ್ತಿಯ ಬಲದಲ್ಲಿ
ಭೀಷ್ಮರ ಮುಕ್ತಿಗೆ ಶರಗಂಗೆಯ ಜಲ ಕೃಷ್ಣನ ಇದಿರಲ್ಲಿ
ಭೀಮನ ಮನ ಗೋಳಿಟ್ಟಿದೆ ಅಯ್ಯೋ! ಕೃಷ್ಣೆಯ ವ್ಯಥೆಯಲ್ಲಿ

ಕಡುಗಲಿ ಪಾರ್ಥನ ಶರಸಂಧಾನಕೆ ನಿಲ್ಲುವರಾರಿದಿರು?
ಕರ್ಣನ ಸರ್ವವು ಹಾ! ಮಣ್ಣಾಗಲು ಅಳೆ ನಾನೆನ್ನದಿರು
ಕುಮಾರವ್ಯಾಸನ ರೂಪಕ ಮೋಡಿಗೆ ಸಿಲುಕದರಾರಿಹರು?
ಭಾವಾವೇಶದ ಮಾರ್ಹೊಳೆಸುಳಿಯಲಿ ಉಳಿದೀತೇ ಉಸಿರು!

ಶಾಂತಾನಂತನು ಸಂಯಮಿ ಧರ್ಮನು ಬರುತಿಹ ನೋಡಲ್ಲಿ
ಛಲಗಾರನು ಚಾಣಾಕ್ಷನು ಧೂರ್ತನು ದುರ್ಯೋಧನನಿಲ್ಲಿ!
ಕುರು ಪಾಂಡವರಣುವಣವನು ಕುದಿಸಿದ ಕೃಷ್ಣೆಯದೋ ಅಲ್ಲಿ
ಗದುಗಿನ ವೀರನ ಮುಖವಿಣುಕುತ್ತಿದೆ ಪದ ಪದ ಮಧ್ಯದಲಿ

ಕುವರವ್ಯಾಸನ ಮರುಜನ್ಮವು *ಈ* ತುಂಗೆಯ ದಡದಲ್ಲಿ
ಮತ್ತೂರೀಕಡೆ, ಬೊಮ್ಮನಹಳ್ಳಿಯೆ? ಆಕಡೆ ಹೊಸಹಳ್ಳಿ
ಎಲ್ಲರ ಪರವಶಗೊಳಿಸಿದ ಕಿಂದರಿ ಜೋಗಿಯ ಪರಿಯಲ್ಲಿ
ರಸ ಸವಿದಾನು ಹಂಚಿರಿ ಎಂದನೆ ವ್ಯಾಸಕುವರನಿಲ್ಲಿ?

'ಗಂಗೆಯು ಸ್ನಾನಕೆ ತುಂಗೆಯು ಪಾನಕೆ' ಜಾಣರ ಮಾತುಂಟು
ನೀರೋ ಪಾನಕ ಸಕ್ಕರೆ ಮಳಲು *ಈ* ಪರಿ ಎಲ್ಲುಂಟು?
ಗಾನದ ಅಲೆಯಲೆ ಉಕ್ಕಡ ದಾಟುತ ತುಂಬಿರೆ ಮನವೆಲ್ಲ
ಆಚೀಚೆಯ ದಡ ಹಸಿರಲಿ ಹಬ್ಬಿದೆ ಸಾಟಿಯು ಇದಕಿಲ್ಲ

ಇಂದಿನ ತರುಣರ ಸ್ಫೂರ್ತಿಪದಾರ್ಪಣ ಶಾಸ್ತ್ರಿದ್ವಯರಿಂದ
ವಾಚನ ರಾಮಾಶಾಸ್ತ್ರಿಗಳಿಂದಲಿ ಹೊರಟಿತು ಭರದಿಂದ
ಲಕ್ಷ್ಮೀಕೇಶವಶಾಸ್ತ್ರಿಗಳನುಭವ ಭಾಷಣ ಕಲೆಯಿಂದ
ಅಂತೂ ನಮ್ಮೂರಾಯಿತು ನೆಲೆಮನೆ-ಗಮಕಕೆ ಇವರಿಂದ.

ರೂಪದಿ ರಾಮಾಶಾಸ್ತ್ರಿಗಳಿದ್ದರು ತೆಳ್ಳಗೆ- ತುಸು ಸಣ್ಣ
ವಾಚನ ಕೇಳಲು ಮೈ ರೋಮಾಂಚವು ದನಿ ಕಿರುಮೊಳಗಣ್ಣ!
ಲಕ್ಷ್ಮೀಕೇಶವಶಾಸ್ತ್ರಿಗಳೋ ಆಹ್-ಬೀಸಿದ ಕಟ್ಟಾಳು
ಅಮಿತೋತ್ಸಾಹದ ಬುಗ್ಗೆಯು ಇವರಿಗೆ ನಿಲ್ಲುವರಾರಿದಿರು?

ಶಾಸ್ತ್ರಿಗಳುಲಿಯಲಿ ಬಹ ಭಾರತವೋ- ಭಾರತಕೂ ಸತ್ಯ
ವಾಚನ ಕೇಳುತ ಹೊಂಪುಳಿಯೋಗುವ ಆ ಮುಖ- ಆ ದೃಶ್ಯ
ಪದದರ್ಥವು ಆ ಅಭಿವ್ಯಕ್ತಿಯು ನಿಜ ಮತ್ತೂರಿಗೆ ವಶ್ಯ
ಕಲಿಯುಗವೋ - ಮೇಣ್ ದ್ವಾಪರವೋ - ಛೆ - ಚರ್ಚೆಯನಾವಶ್ಯ!

ಹಾಸ್ಯಕೆ ವೀರಕೆ ಕರುಣಾರಸ ಶೃಂಗಾರಕೆ ಶಾಸ್ತ್ರಿಗಳು
ಭಕ್ತಿಗೆ ರಸ ಅಭಿವ್ಯಕ್ತಿಗೆ ಹಿರಿಯರು ಸಿಕ್ಕಿದುದೆಮ ಪುಣ್ಯ
ಆ ತೊಡೆ ತಟ್ಟುವ ಆ ಕೈ ಬೀಸುವ ತೊನೆದಾಡುವ ದೇಹ
ಅಣುವಣುವಲು ವ್ಯಾಖ್ಯಾನವ ಕೊಟ್ಟಿದೆ ಅರಳಿಸಿ ಕಿವಿ ಮನವ

ಕೃಷ್ಣೆಯ ವ್ಯಥೆಯಲಿ ಮುಳುಗಿದರೆಂದರೆ ಅಳು ಸಭೆಯೊಳಗೆಲ್ಲ
ಭೀಮನ ಗದೆಯನು ಎತ್ತಿದರೆಂದರೆ- ನಾವೇ ಭಟರೆಲ್ಲ
ಆ ದುರ್ಯೋಧನ ಬಂದಾಕ್ಷಣದಲಿ ಕಟ ಕಟ ಹಲ್ಲೆಲ್ಲ
ಭೀಷ್ಮದ್ರೋಣರ ವಿವರಣೆ ತದ್ವತ್ ಇದಿರಿದಿರೇ ಎಲ್ಲ

ಹಲಸಿನ ಹಣ್ಣಿನ ವಿವರಣೆ ಕೊಟ್ಟರೆ ಸಭೆಯಲಿ ಶಾಸ್ತ್ರಿಗಳು
ವಾಸನೆ ಆಹಾ! ಎಲ್ಲರ ಮೂಗಿಗೆ ನಾಲಗೆಯಲಿ ಜೊಲ್ಲು
ಕೈಯಲಿ ಬಿಡಿಸಿದ ಹಣ್ಣಿದೆ - ಇದೆಯೆಂದೆಲ್ಲರ ಅನುಮಾನ
ಬರಿ ಶೂನ್ಯದಲೇ ಎಲ್ಲವ ತರಿಸುವ ಭಾರತ ವ್ಯಾಖ್ಯಾನ!

# ೯. ಸಮರ್ಪಣೆ

***ಕೆ. ರಂಗರಾಯ***

೧೯೬೯ರ ಮಾಘದ ಮಧ್ವನವಮಿಯ 'ಹನುಮತ್ಸಪ್ತಾಹ'ದ ಅಂಗವಾಗಿ ನಡೆದ 'ತೊರವೆ ರಾಮಾಯಣ'ದ ಸುಂದರಕಾಂಡದ ವಾಚನ ವ್ಯಾಖ್ಯಾನಗಳಿಗೆ, ಬಳ್ಳಾರಿ ಜಿಲ್ಲೆಯ ನನ್ನ ಗ್ರಾಮ ಯಮ್ಮಿಗನೂರಿಗೆ, ಶ್ರೀ ಮತ್ತೂರು ಕೃಷ್ಣಮೂರ್ತಿಗಳನ್ನು ಮತ್ತು ಶ್ರೀ ಎಚ್.ಆರ್. ಕೇಶವಮೂರ್ತಿಗಳನ್ನು ಆಹ್ವಾನಿಸಲಾಯಿತು. ಎರಡು ವರ್ಷ ಕೃಷ್ಣಮೂರ್ತಿಗಳು ವ್ಯಾಖ್ಯಾನ ಮಾಡಿದರು. 'ಅದೇ ಸುಂದರಕಾಂಡ.' ಆದರೆ ಏನೋ ಹೊಸ ವಸ್ತು. ಆಮೇಲೆ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳವರಿಂದ ಸ್ವಯಂ ವ್ಯಾಖ್ಯಾನ-ವಿರಾಟಪರ್ವ ಮತ್ತು ಉದ್ಯೋಗಪರ್ವದ ಭಾಗಗಳಿಗೆ. ಮತ್ತೂರರಿಂದ ಆಕರ್ಷಿತರಾಗಿದ್ದ ನನ್ನ ಗ್ರಾಮಬಂಧುಗಳು, ಮತ್ತೂರರ ಗುರುಗಳಾದ ಲಕ್ಷ್ಮೀಕೇಶವಶಾಸ್ತ್ರಿಗಳವರ ಬೀಳ್ಕೊಡುಗೆಯ ಸನ್ನಿವೇಶದಲ್ಲಿ ನೂರಾರು ಜನರು ಸೇರಿ ಆನಂದಬಾಷ್ಪಗಳಿಂದ ಗದ್ಗದಿತಕಂಠರಾಗಿ 'ಆಂಜನೇಯವರದ ಗೋವಿಂದಾ' ಎಂದು ದೊಡ್ಡ ದನಿಯಲ್ಲಿ ತೆಗೆದ ಉದ್ಗಾರವು ಕಿಂಪುರುಷ ಖಂಡದ ಕದಳೀವನವಾಸಿಯಾದ ಮಾರುತಿಗೆ ಕೇಳಿರಬೇಕು. ಅನಂತರ ಶ್ರೀ ಮಾರ್ಕಂಡೇಯ ಅವಧಾನಿಗಳಿಂದ ಎರಡುವರ್ಷ ಅದೇ ವಿರಾಟಪರ್ವ, ಅದೇ ಉದ್ಯೋಗಪರ್ವಗಳ ವ್ಯಾಖ್ಯಾನ - ಶ್ರೀ ಕೇಶವಮೂರ್ತಿಗಳ ವಾಚನದೊಂದಿಗೆ. ನಮ್ಮೆಲ್ಲರಿಗೂ ಅದೇ ಹರ್ಷ. ಅನಂತರ ಶ್ರೀ ಶಾಸ್ತ್ರಿಗಳ ಪುತ್ರರತ್ನ ಚನ್ನಕೇಶವಶಾಸ್ತ್ರಿಗಳಿಂದ ಸಭಾಪರ್ವದ ಕ್ಲಿಷ್ಟ ಭಾಗಗಳಾದ ಶಿಶುಪಾಲವಧೆ, ದ್ರೌಪದೀ ಮಾನಸಂರಕ್ಷಣೆಯ ವ್ಯಾಖ್ಯಾನ - ಶ್ರೀ ಮೂರ್ತಿಗಳ ವಾಚನಕ್ಕೆ. ರಾಜಸೂಯಯಾಗದ ಕಾಲದಲ್ಲಿ ಶ್ರೀಕೃಷ್ಣನನ್ನು ಶಿಶುಪಾಲನು ನಿಂದಿಸುವ ಭಾಗದ ವ್ಯಾಖ್ಯಾನಗಳನ್ನು, ಶಿಶುಪಾಲನೇ ಆಗಿ ವರ್ಣಿಸಿದ ಸಂದರ್ಭದಲ್ಲಿ, ನಮ್ಮ ಭಕ್ತಮಂಡಳಿಯ ಅಧ್ಯಕ್ಷ ವೃದ್ಧ ಲಿಂಗಾರೆಡ್ಡಿಯವರು "ಶಾಸ್ತ್ರಿಗಳೇ ಹರಿನಿಂದೆಯನ್ನು ಎಷ್ಟೆಂತ ಕೇಳಲಿ" ಎಂದಾಗ ಭೀಷ್ಮರ ಬಾಯಿಂದ ಶ್ರೀಹರಿಯ ವಿರಾಟ್ ಸ್ವರೂಪ ವರ್ಣನೆಯನ್ನು ವ್ಯಾಖ್ಯಾನಿಸಿದಾಗ, ಸಮಸ್ತ ಭಕ್ತರು ಚನ್ನಕೇಶವಶಾಸ್ತ್ರಿಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದುದನ್ನು ನೋಡಿದ ನನ್ನ ಕಣ್ಣುಗಳು ಮರೆಯಲಾರವು. ಅನಂತರ ವನಪರ್ವದ ಕಿರಾತಾರ್ಜುನೀಯ, ಘೋಷಯಾತ್ರೆಯ ಭಾಗಗಳು. ಹೀಗೆ ಕೇಶವಮೂರ್ತಿಗಳವರ ಒಂಬತ್ತು ವರ್ಷಗಳ ಸತತ ವಾಚನ ಮತ್ತು ಲಕ್ಷ್ಮೀಕೇಶವಶಾಸ್ತ್ರಿಗಳ ಪ್ರಮುಖ ಶಿಷ್ಯರ ವ್ಯಾಖ್ಯಾನಗಳು ನಮ್ಮ ಊರಿನಲ್ಲಿ ನಡೆದವು.

ಅನಂತರ ಕಿರಿಯ ಕಲಾವಿದರಾದ ರಾಮಸ್ವಾಮಿ, ಮತ್ತೂರು ರಾಮಮೂರ್ತಿಗಳು, ಸುಬ್ರಹ್ಮಣ್ಯರಾಯರ ವಾಚನಕ್ಕೆ ರಾಜಾರಾಮ ಅವಧಾನಿಗಳು, ಹೆಚ್.ಎಸ್. ಗೋಪಾಲ ಮತ್ತು ರಾಮಮೂರ್ತಿಗಳ ವ್ಯಾಖ್ಯಾನಗಳು. ಆರಂಭದಲ್ಲಿ ಸ್ವಲ್ಪ ಕಳಪೆ ಎನಿಸಿದರೂ ಇದೇ ವರುಷದ ಉತ್ಸವದಲ್ಲಿ ನಡೆದ 'ಬಾಲಕಾಂಡದ ಸೀತಾಕಲ್ಯಾಣ'ದ ಕಥೆಯು ನಿರೂಪಣೆಗೊಂಡಾಗ ನಮ್ಮೆಲ್ಲರಿಗೂ ಲಕ್ಷ್ಮೀಕೇಶವ ಶಾಸ್ತ್ರಿಗಳು ಮತ್ತು ಕೇಶವಮೂರ್ತಿಗಳಿಂದ ಕಥೆಯನ್ನು ಕೇಳಿದಷ್ಟು ಸಂತೋಷ. ಈ ರೀತಿಯಾಗಿ ಸತತ ಹದಿನೇಳು ವರುಷಗಳಿಂದ ನನ್ನ ಭಕ್ತಬಾಂಧವರೊಡನೆ ಸಹಕರಿಸಿ ಉತ್ಸವವು ಯಶಸ್ವಿಯಾಗುವಂತೆ ಮಾಡಿ ಕೀರ್ತಿಪಡೆದ ಮತ್ತೂರು ಹೊಸಹಳ್ಳಿಗಳ ವಾಚಕ ಅನುವಾದಕ ರತ್ನಗಳಿಗೆ ನಾವೆಲ್ಲರೂ ಋಣಿಗಳೇ. ಈ ಪುರಾಣಪ್ರವಚನದ ಅದ್ಭುತ ಪವಾಡವೆಂದರೆ ಅಂತಃಕಲಹಗಳಿಂದ ಒಡೆದುಹೋದ ಪಂಗಡವು ನಲವತ್ತು ವರುಷಗಳ ದ್ವೇಷ ಮರೆತು, ಪುನಃ ಸಮ್ಮಿಳಿತವಾದುದು. ರಾಮಸ್ವಾಮಿಯ ದೇವಾಲಯ; ಆಂಜನೇಯ ಸಭಾಮಂಟಪಗಳು (ಅಖಂಡಶಿಲೆಯವು) ಪೂರ್ಣಗೊಂಡು ಅದೇ ದೇವಸ್ಥಾನಗಳಲ್ಲಿ ಕಲ್ಯಾಣಭವನಗಳನ್ನು ಕಟ್ಟಲು ಏರ್ಪಾಟು ನಡೆದಿದೆ. ಇದೆಲ್ಲಾ ಸ್ಫೂರ್ತಿಗೆ ಕಾರಣ ಶ್ರೀ ಕೇಶವಮೂರ್ತಿಗಳ ಮತ್ತು ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳ ಮತ್ತು ಅವರ ಶಿಷ್ಯರ ವಾಚನ ವ್ಯಾಖ್ಯಾನಗಳು. ನನ್ನ ಔಪಾಸನಾದೈವ ಮಾರುತಿಯ ಭವ್ಯ ಸಭಾಮಂಟಪದಲ್ಲಿ ಅಧ್ಯಯನಶೀಲರಾದ ಬ್ರಾಹ್ಮಣವೃಂದದ ಮಧ್ಯದಲ್ಲಿ, ವಿರಾಜಿತರಾದ ಮತ್ತೂರು ಹೊಸಹಳ್ಳಿಯ ವಿದ್ವಾಂಸರು ತಮ್ಮ ಸತತ ವಾಚನ ವ್ಯಾಖ್ಯಾನಗಳಿಂದ ನಮ್ಮೆಲ್ಲರ ಹೃದಯವನ್ನು ತಣಿಸುವ ಕೃಪೆ ಮಾಡಲಿ ಮತ್ತು ನಮ್ಮ ಗ್ರಾಮದ ಭಕ್ತಜನರ ಸಂತತಿ ಬೆಳೆದು, ನಮ್ಮದೇ ಆದ ಶ್ರವಣಸಂಪ್ರದಾಯವನ್ನು ಬೆಳೆಸುವ ಆಶೀರ್ವಾದ ಮಾಡಲಿ. 'ಪುನಃ ಹುಟ್ಟಿದರೆ ಯಮ್ಮಿಗನೂರಲ್ಲಿಯೇ ಅಥವಾ ಮತ್ತೂರು ಹೊಸಹಳ್ಳಿಗಳಲ್ಲಿ ಹುಟ್ಟುವಂತೆ ಮಾಡು ಸ್ವಾಮಿ' ಎಂದೇ ನನ್ನ ಮತ್ತು ನನ್ನಂತಹ ನನ್ನ ಮಿತ್ರರ ಬಯಕೆ.

ನಿಮ್ಮ ಶ್ರೀ ಶಾಸ್ತ್ರಿಗಳನ್ನು ಮತ್ತು ಕೇಶವಮೂರ್ತಿಗಳನ್ನು

ತಲತಲಾಂತರ ಉಳಿಸಿಕೊಳ್ಳುವ ಆದಮ್ಯ ಬಯಕೆಯಂತೆ, ನಮ್ಮದೂ ತಲತಲಾಂತರಗಳವರೆಗೆ ನಿಮ್ಮವರಿಂದ ವಾಚನ ವ್ಯಾಖ್ಯಾನಗಳನ್ನು ಕೇಳುವ ಬಯಕೆ. ನಿಮ್ಮ ಬಯಕೆ ಉಳಿಯುವುದಾದರೆ ನಮ್ಮ ಬಯಕೆಗೆ ಅಳಿವೆಲ್ಲಿದೆ? ಹೀಗೆ ನಿಮ್ಮದನ್ನು ಉಳಿಸಿಕೊಂಡು ನಮ್ಮದನ್ನು ಉಳಿಸಿಕೊಡುವ ಭಾರವು ಮತ್ತೂರು ಹೊಸಹಳ್ಳಿಯ ವಿದ್ವಜ್ಜನರಿಗೆ ಸೇರಿದ್ದಾಗಿದೆ. ಅವರು ಹೇಳಿದ್ದನ್ನು ಕೇಳಿ ಸಂತೋಷಿಸುವುದಷ್ಟೇ ನಮ್ಮ ಕರ್ತವ್ಯ. ಈ ಯೋಗದಲ್ಲಿಯೇ ನಮ್ಮ ನಿಷ್ಠೆ.

## ೧೦. ವ್ಯಾಖ್ಯಾನ ವಾಚಸ್ಪತಿ ಲಕ್ಷ್ಮೀಕೇಶವಶಾಸ್ತ್ರಿಗಳು

*ಎಸ್. ನಾಗೇಶರಾವ್*

ಅದ್ಭುತ ಶಿಲ್ಪಚಾತುರ್ಯದಿಂದ ನಿರ್ಮಿಸಲಾಗಿದ್ದ ಪುರಾತನ ದೇವಾಲಯವೊಂದನ್ನು ವರ್ಣಿಸುವ ತಮ್ಮ ಕವನವೊಂದರಲ್ಲಿ ಮಹಾಕವಿಗಳೊಬ್ಬರು ಆ ದೇವಾಲಯವನ್ನು ನೋಡಲು ಹೋಗುವವರಿಗೆ 'ಬಾಗಿಲೊಳು ಕೈಮುಗಿದು ಒಳಗೆ ಬಾ' ಎಂಬ ಸೂಚನೆಯನ್ನು ಕೊಟ್ಟಿರುತ್ತಾರೆ. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳವರ ವಿಷಯವಾಗಿ ಏನನ್ನಾದರೂ ಬರೆಯುವ ಮೊದಲು, ಆ ದೇವಾಲಯದ ಬಗೆಗೆ ಕವಿ ಹೇಳಿದ ಈ ಮಾತು ನನ್ನ ನೆನಪಿಗೆ ಬರುತ್ತದೆ. ಶ್ರೀ ಶಾಸ್ತ್ರಿಗಳ ವಿಷಯವಾಗಿ ಬರೆಯುವ ಮೊದಲು, ಮನಸ್ಸಿನಲ್ಲಿ ಅವರಿಗೆ ವಂದಿಸದೆ ಬರೆಯಲು ಮೊದಲು ಮಾಡುವುದು ನನಗಂತೂ ಸಾಧ್ಯವಿಲ್ಲ. ನನಗೆ ಆ ಮಹನೀಯರಲ್ಲಿರುವ ಭಕ್ತಿ, ಗೌರವಗಳು ಕಳೆದ ಐವತ್ತು ವರ್ಷಗಳಿಂದಲೂ ಅಚ್ಚಳಿಯದೇ ಇವೆ. ಅಂತಹ ವಿದ್ವನ್ಮಣಿಗಳ ಬಗೆಗೆ ನಾಲ್ಕು ಮಾತುಗಳನ್ನಾಡುವುದು ಅಥವಾ ಬರೆಯುವುದು ಸುಯೋಗವೇ ಸರಿ. ಆದ್ದರಿಂದ ಆ ಮಹನೀಯರ ಬಗೆಗೆ ಈ ಕೆಳಗೆ ಕಂಡುಬರುವ ನಾಲ್ಕು ಮಾತುಗಳನ್ನು ಭಕ್ತಿಯಿಂದಲೂ, ಎಚ್ಚರಿಕೆಯಿಂದಲೂ ಬರೆಯುತ್ತಿದ್ದೇನೆ.

ನಾನು ಮೂಲತಃ ಶಿಕಾರಿಪುರ ತಾಲ್ಲೂಕಿನವನು. ಆದಾಗ್ಯೂ, ನನ್ನ ಮನೆತನದವರೆಲ್ಲರೂ ಬೆಳೆದುದು ಮತ್ತು ಅವರ ವಿದ್ಯಾಭ್ಯಾಸವಾದುದು ಎಲ್ಲವೂ ಶಿವಮೊಗ್ಗೆಯಲ್ಲೇ. ಹೀಗಿರುವಲ್ಲಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳನ್ನು ನಾವು ತಿಳಿಯದಿರಲು ಹೇಗೆ ತಾನೇ ಸಾಧ್ಯ? ನಾವು ಚಿಕ್ಕವರಾಗಿದ್ದಾಗಲೇ ಅವರು ವಿಶಾಲವಾದ ಕೀರ್ತಿಯನ್ನು ಪಡೆದಿದ್ದರು. ನಾನು ನೂರಾರುಬಾರಿ, ಏಕೆ, ಸಾವಿರಾರು ಬಾರಿ ಎಂದರೂ ತಪ್ಪಾಗಲಾರದು, ಅವರ ವಾಚನ-ವ್ಯಾಖ್ಯಾನಗಳನ್ನು ಕೇಳಿ ಆನಂದಿಸಿದ್ದೇನೆ. ಹಾಗೆ ಕೇಳುವುದರ ಮೂಲಕ ನನ್ನ ಜ್ಞಾನವನ್ನೂ ಹೆಚ್ಚಿಸಿಕೊಂಡಿರುತ್ತೇನೆ. ನನಗೆ ಸಂಗೀತ, ಸಾಹಿತ್ಯ, ನಾಟಕ, ಗಮಕ ಇವುಗಳ ಹವ್ಯಾಸವು ಮೊದಲಿನಿಂದಲೂ ಸ್ವಲ್ಪ ಹೆಚ್ಚು. ಸಂಗೀತ, ಗಮಕ, ನಾಟಕಗಳನ್ನು ಕೇಳುವ ಅಥವಾ ನೋಡುವ ಅವಕಾಶವನ್ನು ನಾನು ಎಂದೂ ಕಳೆದುಕೊಳ್ಳುವುದಿಲ್ಲ. ಹೀಗೆ ನಾನು ಕೇಳಿರುವ ಸಂಗೀತ, ವ್ಯಾಖ್ಯಾನ, ಗಮಕ ಮುಂತಾದುವುಗಳಲ್ಲಿ ನನ್ನ ಮನಸ್ಸಿನ ಮೇಲೆ ಅತ್ಯಂತ ಹೆಚ್ಚಿನ ಪರಿಣಾಮವನ್ನು ಬೀರಿರುವುದು ಶ್ರೀ ಶಾಸ್ತ್ರಿಗಳವರ ವ್ಯಾಖ್ಯಾನ. ಅವರ ವ್ಯಾಖ್ಯಾನದ ಕಾರ್ಯಕ್ರಮವನ್ನು ನಾನು ಯಾವಾಗಲೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಬೆಂಗಳೂರಿಗೆ ಬಂದು ನೆಲೆಸಿದ ಅನಂತರವು ಸಹ ಶ್ರೀ ಶಾಸ್ತ್ರಿಗಳ ವ್ಯಾಖ್ಯಾನವನ್ನು ಕೇಳುವ ಅವಕಾಶವನ್ನು ನಾನು ಕಳೆದುಕೊಂಡಿಲ್ಲ.

ಶ್ರೀ ಶಾಸ್ತ್ರಿಗಳ ವ್ಯಾಖ್ಯಾನದ ವೈಖರಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವಾಗ, ಅವರು ಗಮಕಿಗಳೋ, ವ್ಯಾಖ್ಯಾನಕಾರರೋ, ವೇದಾಧ್ಯಯನ ಪಂಡಿತರೋ, ಶಾಸ್ತ್ರಪಾರಂಗತರೋ, ಉಪನ್ಯಾಸಕರೋ ಎನ್ನುವುದನ್ನು ನಿರ್ಧರಿಸುವುದು ಸ್ವಲ್ಪ ಕಷ್ಟದ ವಿಷಯವೇ ಸರಿ. ಅವರು ಇವೆಲ್ಲವೂ ಹೌದು. ನನಗೆ ಗಮಕಕಲೆಯಲ್ಲಿ ಸ್ವಲ್ಪ ಪರಿಶ್ರಮವಿದೆ. ಪದ್ಯಗಳನ್ನು ವಾಚನ ಮಾಡುವಾಗಲೇ ಕವಿವಾಣಿಯ ಸೌಂದರ್ಯ, ಕವಿಹೃದಯ ಇವುಗಳು ಶ್ರೋತೃಗಳಿಗೆ ಅರ್ಥವಾಗುವಂತೆ ವಾಚನ ಮಾಡುವುದೇ ಗಮಕಕಲೆಯ ವಿಶೇಷ ಲಕ್ಷಣವೆಂದು ಪ್ರತಿಪಾದಿಸುತ್ತಿರುವವರಲ್ಲಿ ನಾನೊಬ್ಬ. ಕನ್ನಡದಲ್ಲಿ ರಾಮಾಯಣ, ಭಾರತ, ಭಾಗವತ ಮೊದಲಾದ ಕಾವ್ಯಗಳನ್ನು ವ್ಯಾಖ್ಯಾನದ ಬೆಂಬಲವಿಲ್ಲದೆ ಜನರ ಮನಸ್ಸಿಗೆ ಹಿಡಿಯುವಂತೆ ಓದುವುದೇ ಗಮಕಕಲೆಯ ವೈಶಿಷ್ಟ್ಯವೆಂದು ತುಂಬಾ ಜೋರಾಗಿಯೇ ವಾದಿಸುವವರಲ್ಲಿ ನಾನೊಬ್ಬನು. ಈ ವಿಷಯವನ್ನು ನನಗೆ ತುಂಬಾ ಪ್ರಿಯರಾದ ಶ್ರೀ ಶಾಸ್ತ್ರಿಗಳವರಿಗೇ ತಿಳಿಸಿ ಅವರ ಅಭಿಪ್ರಾಯವನ್ನು ತಿಳಿಯಬೇಕೆಂದು ಕೆಲವು ವೇಳೆ ಸಂಕಲ್ಪ ಮಾಡಿದ್ದುದೂ ಉಂಟು. ಹಾಗೆ ನಿರ್ಧಾರ ಮಾಡಿಕೊಂಡು ಅವರನ್ನು ಕೇಳಿಯೇಬಿಡಬೇಕೆಂದು ಒಂದೆರಡು ಬಾರಿ ಹೋಗಿದ್ದೂ ಉಂಟು. ಆದರೆ ಅವರ ದಿವ್ಯವಾದ ವ್ಯಾಖ್ಯಾನವನ್ನು ಕೇಳಿ ಮುಗ್ಧವಾಗಿ, ಬಾಯಿಮುಚ್ಚಿಕೊಂಡು, ಸುಮ್ಮನೆ ಅವರಿಗೆ ನಮಸ್ಕಾರ ಮಾಡಿ ಮನೆಗೆ ಬಂದೆ. ಅವರನ್ನು ನಾನು ಕೇಳಬೇಕೆಂದಿದ್ದ ಮಾತು

ಎಲ್ಲೋ ಹಾರಿಹೋಯಿತು. ಅವರ ವ್ಯಾಖ್ಯಾನವನ್ನು ಕೇಳಿ ಹತ್ತು ಹದಿನೈದು ದಿನಗಳವರೆಗೂ ಅವರ ಮಂಜುಳವಾಣಿಯೇ ನನ್ನ ಕಿವಿಯಲ್ಲಿ ಝೇಂಕರಿಸುತ್ತಿತ್ತು. ಆ ವಾಣಿಯನ್ನು ಕೇಳಿ ನನ್ನ ಜನ್ಮವೇ ಸಾರ್ಥಕವಾಯಿತೆಂದು ನನಗೆ ಅನ್ನಿಸುತ್ತಿತ್ತು. ಪದ್ಯವನ್ನು ರಾಗವಾಗಿ ಓದುವುದೇ ಗಮಕವೇ? ಪದ್ಯವನ್ನು ನಮ್ಮಂತೆ ಅರ್ಥಸಂಗೀತದಲ್ಲಿ ಓದುವುದೇ ಗಮಕವೇ? ಪದ್ಯವನ್ನು ರಾಗವಾಗಿ ಓದದೇ ಕವಿಹೃದಯ, ಪದಗಳ ಗೂಢಾರ್ಥ, ಲಕ್ಷ್ಯಾರ್ಥ, ರಹಸ್ಯಾರ್ಥಗಳನ್ನು ಜನಮನರಂಜನೆಯಾಗುವಂತಹ ರೀತಿಯಲ್ಲಿ ವ್ಯಾಖ್ಯಾನ ಮಾಡುವುದೂ ಗಮಕವಲ್ಲವೇ? ಶ್ರೀ ಶಾಸ್ತ್ರಿಗಳು ತಮ್ಮ ಮಂಜುಳವಾಣಿಯಲ್ಲಿ ಸಂಸ್ಕೃತ ಶ್ಲೋಕಗಳು, ಕನ್ನಡ ಪದ್ಯಗಳು ಇವುಗಳನ್ನು ಹೇಳುವಾಗ ನಮಗೆ ಸಂಗೀತಕ್ಕಿಂತ ಇನ್ನೂ ಹೆಚ್ಚು ಇಂಪಾಗಿರುವುದಿಲ್ಲವೇ? *ಈ* ಮಾತು ಚರ್ಚೆಗೆ ಬಂದಾಗ "ಮೊದಲು ನಮ್ಮ ಶಾಸ್ತ್ರಿಗಳ ವ್ಯಾಖ್ಯಾನ ಕೇಳಿ, ಆಮೇಲೆ ಏನಾದರೂ ಹೇಳಿ," ಎಂದು ನಾನು ಹಲವು ಬಾರಿ ಹೇಳುತ್ತೇನೆ. ಶಾಸ್ತ್ರಿಗಳು ನನ್ನ ದೃಷ್ಟಿಯಲ್ಲಿ ಕವಿಗಳೂ ಹೌದು, ಪಂಡಿತರೂ ಹೌದು, ವಾಗ್ಮಿಗಳೂ ಹೌದು. ಅವರ ವ್ಯಾಖ್ಯಾನವನ್ನು ಬಿಡದೆ ಕೇಳುವವರಿಗೆ, ಕನ್ನಡ, ಸಂಸ್ಕೃತ ಸಾಹಿತ್ಯದಲ್ಲಿ ಒಂದು ಡಾಕ್ಟರೇಟು ಪದವಿಯ ಪರೀಕ್ಷೆಗೆ ಕೂಡಲು ಸಾಕಾದಷ್ಟು ಸಾಮಗ್ರಿ ದೊರೆಯುತ್ತದೆ. ಇದೇ ಇವರ ವೈಶಿಷ್ಟ್ಯ.

ಅವರ ವ್ಯಾಖ್ಯಾನ ಕ್ರಮವು ಕೂಡ ನಾವು ಗಮನಿಸಬೇಕಾದ್ದು. ಕಾರ್ಯಕ್ರಮ ಆರಂಭವಾಗುವ ವೇಳೆಗೆ ಶ್ರೀ ಶಾಸ್ತ್ರಿಗಳವರು ಬಂದು ಪೀಠದಲ್ಲಿ ಕುಳಿತರೆ ಸಾಕು. ಹಿಂದಿನ ಯುಗದ ಪೌರಾಣಿಕ ರತ್ನರೊಬ್ಬರು ಇಳಿದುಬಂದಿದ್ದಾರೆಯೋ ಎನ್ನಿಸುತ್ತದೆ. ಇವರ ಮಿತ್ರ ಗಮಕಿಗಳೊಬ್ಬರು ಮೊದಲು ಸುಶ್ರಾವ್ಯವಾಗಿ ಪದ್ಯಗಳನ್ನು ಹಾಡುತ್ತಾರೆ. ಒಳ್ಳೆಯ ಹಿತ, ಮಿತ ಮತ್ತು ಮಧುರವಾದ ಸಂಗೀತ. ಶಾಸ್ತ್ರಿಗಳು ವ್ಯಾಖ್ಯಾನ ಆರಂಭ ಮಾಡುವುದೊಂದೇ ತಡ. ಕೇವಲ ನಾಲ್ಕಾರು ನಿಮಿಷಗಳಲ್ಲಿ ಜನರು ಮೈಮರೆಯುತ್ತಾರೆ. ಇವರ ವಾಣಿಯಲ್ಲಿಯೇ ಒಂದು ಅಲೌಕಿಕವಾದ ಸಂಗೀತವಿದೆ. ಇವರ ಮಾತೇ ಸೊಗಸು. ಇವರು ಕೊಡುವ ಉದಾಹರಣೆಗಳು, ಇವರು ಉದಾಹರಿಸುವ ಸಂಸ್ಕೃತಶ್ಲೋಕಗಳು, ಇವು ಇವರ ಪ್ರಕಾಂಡಪಾಂಡಿತ್ಯ ಮತ್ತು ವ್ಯವಹಾರಜ್ಞಾನವನ್ನು ಕೂಡಲೇ ನಮ್ಮ ಗಮನಕ್ಕೆ ತರುತ್ತವೆ. ಇವರು ವ್ಯಾಖ್ಯಾನ ಮಾಡುತ್ತಿರುವಾಗ, ಇವರ ಮಾತುಗಳನ್ನು ಕೇಳಿದಾಗಲೆಲ್ಲಾ ನನಗೆ ಶ್ರೀಮದ್ರಾಮಾಯಣದಲ್ಲಿ ಆಂಜನೇಯನು ಭಿಕ್ಷುಕ ವೇಷದಲ್ಲಿ ರಾಮ ಲಕ್ಷ್ಮಣರನ್ನು ಸಂದರ್ಶಿಸಿದಾಗ ಅವನ ವಿಷಯದಲ್ಲಿ ಶ್ರೀರಾಮನು ಆಡಿದ *ಈ* ಕೆಳಗೆ ಕಂಡ ಮಾತುಗಳು ನೆನಪಿಗೆ ಬರುತ್ತವೆ.

"ವೇದಗಳನ್ನು ಅರ್ಥಸಹಿತವಾಗಿ ಅಧ್ಯಯನ ಮಾಡದಿರುವವನಿಗೆ *ಈ* ರೀತಿಯಲ್ಲಿ ಮಾತನಾಡಲು ಶಕ್ಯವಿಲ್ಲ. *ಈ*ತನು ಸಮಸ್ತ ವ್ಯಾಕರಣಶಾಸ್ತ್ರವನ್ನು ಅನೇಕ ಸಲ ಚೆನ್ನಾಗಿ ವ್ಯಾಸಂಗ ಮಾಡಿರುವುದೇ ನಿಶ್ಚಯ. ಇವನು ಇಷ್ಟು ಮಾತನಾಡಿದರೂ ಒಂದು ಅಪಶಬ್ದವೂ ಹೊರಡಲಿಲ್ಲ. ಮಾತನಾಡುವಾಗ ಮುಖದಲ್ಲಿ ಮತ್ತು ಇತರ ಅಂಗಗಳಲ್ಲಿ ಯಾವ ವಿಕಾರವೂ ಕಾಣಿಸಲಿಲ್ಲ. ಮಾತನ್ನು ಅನಾವಶ್ಯಕವಾಗಿ ವಿಸ್ತರಿಸಲಿಲ್ಲ. ಸಂದೇಹಕ್ಕೆಡೆಯಾಗುವ ಅಸ್ಫುಟವಾದ ಉಚ್ಚಾರಣೆಯಿಲ್ಲ. ಮಾತನಾಡುವಾಗ ಶಬ್ದಗಳಿಗಾಗಿ ತಡವರಿಸಲಿಲ್ಲ. ಇತರರಿಗೆ ಅರ್ಥವಾಗದಂತೆ ಬಹು ವೇಗವಾಗಿಯೂ ಮಾತನಾಡಲಿಲ್ಲ. ಇವನ ಮಾತು ಉರಸ್ಥವೂ ಕಂಠಗತವೂ ಆಗಿ ಮಧ್ಯಮ ಸ್ವರದಲ್ಲಿದೆ. ಇವನು ವ್ಯಾಕರಣಶುದ್ಧವಾಗಿಯೂ ಮಾತನಾಡುತ್ತಾನೆ. *ಈ*ತನ ವಾಕ್ಯರಚನೆ ತ್ವರಿತವೂ ಅಲ್ಲ, ವಿಲಂಬಿತವೂ ಅಲ್ಲ. ಮಾತಿನ ಶೈಲಿ ಮಧುರವೂ ಚೇತೋಹಾರಿಯಾಗಿಯೂ ಆಗಿದೆ."



**8.** *ಪ್ರತಿಕ್ರಿಯೆಗೊಂದು ಕಿವಿ - ಎಚ್.ಆರ್. ರಾಮಶಾಸ್ತ್ರಿಗಳೊಂದಿಗೆ*

ವಾಲ್ಮೀಕಿಗಳು ಶ್ರೀ ಆಂಜನೇಯನ

ವಿಷಯದಲ್ಲಿ ಹೇಳಿರುವ ಈ ಎಲ್ಲ ಮಾತುಗಳು- ಅದರಲ್ಲಿಯೂ **ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಮ್** ಎನ್ನುವ ಮಾತು - ನಮ್ಮ ಶಾಸ್ತ್ರಿಗಳವರ ವಾಣಿಗೆ ಸರಿಹೋಗುತ್ತದೆಯೋ ಇಲ್ಲವೋ ಎನ್ನುವುದನ್ನು ಅವರ ವ್ಯಾಖ್ಯಾನವನ್ನು ಕೇಳಿದವರಿಗೆ ಹೇಳಬೇಕಾಗಿಯೇ ಇಲ್ಲ. ಅವರೊಡನೆ ಬೇರೊಬ್ಬ ಗಮಕಿಗಳು ತಮ್ಮ ಮಧುರವಾದ ಕಂಠದಿಂದ ಪದ್ಯಗಳನ್ನು ಓದುತ್ತಿದ್ದುದರಿಂದ ವ್ಯಾಖ್ಯಾನಕ್ಕೆ ಮೆರುಗನ್ನು ಕೊಡುತ್ತಿದ್ದರೆಂಬುದು ನಿರ್ವಿವಾದ. ಚೇತೋಹಾರಿಯಾದ, ಶ್ರೀ ಶಾಸ್ತ್ರಿಗಳ ಮಂಜುಳವಾಣಿಯನ್ನು ಕೇಳಿದ ನನ್ನಂತಹ ಕೆಲವರಿಗೆ, ಗಮಕಿಗಳೊಬ್ಬರ ಸಹಾಯವಿಲ್ಲದಿದ್ದರು ಸಹ ಅವರ ವ್ಯಾಖ್ಯಾನದ ಜನಪ್ರಿಯತೆ ಎಳ್ಳಷ್ಟೂ ಕಡಮೆಯಾಗುತ್ತಿರಲಿಲ್ಲ ಎನ್ನಿಸುತ್ತದೆ. ಆದರೆ ಅವರೊಡನೆ ಪದ್ಯವಾಚನ ಮಾಡುತ್ತಿದ್ದ ಗಮಕಿಗಳ ಉಪಕಾರವು ಅಷ್ಟಿಷ್ಟಲ್ಲ.

ಒಂದೇ ಮಾತಿನಲ್ಲಿ ಹೇಳುವುದಾದರೆ, ನಮ್ಮ ಲಕ್ಷ್ಮೀಕೇಶವಶಾಸ್ತ್ರಿಗಳು ಕನ್ನಡ ನಾಡಿನ ಸೌಭಾಗ್ಯ. ಹಳೆಯ ಜೀವನಕ್ರಮವು ಮರೆಯಾಗುತ್ತಾ ಬಂದು ಹೊಸಧರ್ಮವು ನಮಗೆ ಒಗ್ಗದೇ, ಮನಸ್ಸಿನ ನೆಮ್ಮದಿಯನ್ನು ಸಂಪೂರ್ಣವಾಗಿ ಕಳೆದುಕೊಂಡು ತೊಳಲಿ ಕಂಗಾಲಾಗಿರುವ ನಮ್ಮ ಜನರಿಗೆ ಶ್ರೀ ಶಾಸ್ತ್ರಿಗಳ ವಾಣಿಯು ಒಂದು ದಿವ್ಯ ಜ್ಯೋತಿಯಿದ್ದಂತೆ. ಎಷ್ಟು ಹಣವಿದ್ದರೂ ಮನಸ್ಸಿನ ನೆಮ್ಮದಿಯಿಲ್ಲದಿದ್ದರೆ ಏನು ಪ್ರಯೋಜನ ಎಂಬುದು ಎಲ್ಲರಿಗೂ ತಿಳಿದ ವಿಷಯ. ದೈವಭಕ್ತಿ, ಪಾಪಭೀತಿ, ಧರ್ಮನಿಷ್ಠೆ ಇವುಗಳೇ ನಮ್ಮ ಮನಸ್ಸಿಗೆ ನೆಮ್ಮದಿಯನ್ನು ದೊರಕಿಸಿ ಕೊಡುವುವೇ ಹೊರತು ಬೇರೆ ಯಾವುದೂ ಅಲ್ಲ. ಆದ್ದರಿಂದ ಜನರಲ್ಲಿ ದೈವಭಕ್ತಿ, ಪಾಪಭೀತಿ, ಧರ್ಮನಿಷ್ಠೆಯನ್ನು ಬೆಳೆಯಿಸಲು ಶ್ರಮಿಸುವವರೆಲ್ಲರೂ ಮಹಾಪುರುಷರು, ಲೋಕೋಪಕಾರಿಗಳು, ನಮ್ಮಂತಹವರ ಉದ್ಧಾರಕ್ಕಾಗಿ ಧರೆಗಿಳಿದುಬಂದ ದೇವಪುರುಷರು. ನಮ್ಮ ಲಕ್ಷ್ಮೀಕೇಶವಶಾಸ್ತ್ರಿಗಳವರು ಇಂತಹ ಮಹನೀಯ ರಲ್ಲೊಬ್ಬರು. ಅವರ ವ್ಯಾಖ್ಯಾನವನ್ನು ಕೇಳಿದವರು ಧನ್ಯರು. ಈ ಮಹನೀಯರು ನಮ್ಮೊಡನಿರುವುದು ನಮ್ಮ ಪುಣ್ಯ. ಭಗವಂತನು ಈ ಮಹನೀಯರಿಗೆ ಪೂರ್ಣಾಯು, ಆರೋಗ್ಯಗಳನ್ನನುಗ್ರಹಿಸಿ ಆ ಮೂಲಕ ನಮ್ಮನ್ನೂ ಕಾಪಾಡಲಿ ಎಂದು ಭಕ್ತಿಪೂರ್ವಕವಾಗಿ ಹಾರೈಸುತ್ತೇನೆ.

## ೧೧. ವ್ಯಾಖ್ಯಾನ ವಾಚಸ್ಪತಿ

***ಗೌರಮ್ಮ ನಾಗರಾಜ್***

ಸುಮಾರು ಮೂವತ್ತು ವರ್ಷಗಳ ಹಿಂದೆ ನನ್ನ ಪೂಜ್ಯ ಗುರುಗಳಾದ ಶ್ರೀ ಬಿ.ಎಸ್.ಎಸ್. ಕೌಶಿಕ್‌ರವರು, ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನದ ಜತೆ ಶ್ರೀ ರಾಮಶಾಸ್ತ್ರಿಗಳವರ ಕಾವ್ಯವಾಚನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ನಾನು ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳ ಕಾರ್ಯಕ್ರಮವನ್ನು ಕೇಳಿದ್ದು ಅದೇ ಮೊದಲು. ಕಥಾಭಾಗ 'ದ್ರೋಣ ದ್ರುಪದರ ಸಮಾಗಮ'. ಅಂದಿನ ಕಾರ್ಯಕ್ರಮ ನನ್ನ ಕಿವಿಯಲ್ಲಿ ಇನ್ನೂ ತುಂಬಿದಂತಿದೆ. ಅಂದಿನಿಂದ ಲಕ್ಷ್ಮೀಕೇಶವ ಶಾಸ್ತ್ರಿಗಳವರ ವ್ಯಾಖ್ಯಾನದೊಡನೆ ನಾನು ವಾಚನ ಮಾಡಬೇಕೆಂಬ ಕುತೂಹಲ ನನಗೆ ಬಹಳವಾಯಿತು. ಏಕೆಂದರೆ, ಕವಿಯ ಹೃದಯವನ್ನರಿತು ಅವರು ವ್ಯಾಖ್ಯಾನ ಮಾಡುತ್ತಿದ್ದ ಶೈಲಿ ಬಹಳ ಅಮೋಘ. ಉಪಮಾನ ಉಪಮೇಯಗಳು, ಉಪಕಥೆಗಳು ಹಾಗೂ ಹಾಸ್ಯಪ್ರಸಂಗಗಳನ್ನು ಸಮಯೋಚಿತವಾಗಿ ಅಳವಡಿಸಿಕೊಂಡು, ಕಾರ್ಯಕ್ರಮಕ್ಕೆ ಒಂದು ಮೆರುಗು ಕೊಡುವ ಸಾಮರ್ಥ್ಯವು ವಿಶೇಷ ರೀತಿಯಲ್ಲಿ ಅವರಿಗಿದೆ.

ನನ್ನ ಅಪೇಕ್ಷೆಯಂತೆಯೇ, ಕೆಲವು ಸಂದರ್ಭಗಳಲ್ಲಿ ಅವರ ವ್ಯಾಖ್ಯಾನದೊಡನೆ ವಾಚನ ಮಾಡುವ ಸುಯೋಗ ನನಗೆ ದೊರಕಿತು. ಅವರ ಸಂಗಡ ಕಡೂರು, ಬೆಂಗಳೂರು, ಮೈಸೂರು, ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿ, ಮೈಸೂರು ಜಿಲ್ಲೆಯಲ್ಲಿನ ಕೆಲವು ಹಳ್ಳಿಗಳಲ್ಲಿ ವಾಚನ ಕಾರ್ಯಕ್ರಮ ನೀಡಿದ್ದೇನೆ. ಶಾಸ್ತ್ರಿಗಳವರು ವ್ಯಾಖ್ಯಾನ ಮಾಡುವಾಗ, ಕುಮಾರವ್ಯಾಸ ಭಾರತದ ಬಕಾಸುರವಧೆ, ದ್ರೌಪದಿ ಸ್ವಯಂವರ, ಸುಭದ್ರಾ ಪರಿಣಯ, ಕೀಚಕವಧೆ, ಉತ್ತರ ಗೋಗ್ರಹಣ, ಉತ್ತರನ ಪೌರುಷ, ಈ ಕಥಾಭಾಗಗಳ ಹಾಸ್ಯ ಪ್ರಸಂಗಗಳನ್ನು ಬಹಳ ರಸವತ್ತಾಗಿ ನಿರೂಪಿಸುತ್ತಿದ್ದರೆ, ವಾಚನ ಮಾಡುವ ನನಗೆ ಬಹಳ ಸ್ಫೂರ್ತಿ ಉಂಟಾಗುತ್ತಿತ್ತು.

ಈ ಕಾವ್ಯವಾಚನ-ವ್ಯಾಖ್ಯಾನ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಯಾವುದೊಂದು ಕುಂಠಿತವಾದರೂ ಕಾರ್ಯಕ್ರಮ ರಂಜಿಸಲು ಸಾಧ್ಯವಾಗುವುದಿಲ್ಲ ಹಾಗೂ ವಾಚನಕ್ಕೆ ತಕ್ಕಂತೆ ವ್ಯಾಖ್ಯಾನ ಹಿತಮಿತವಾಗಿರಬೇಕೇ ಹೊರತು ಅದು ಹನುಮಂತನ

ಬಾಲದಂತೆ ಬೆಳೆದುಕೊಂಡು ಹೋಗಬಾರದು. ಇದನ್ನೆಲ್ಲಾ ಕೂಲಂಕಷವಾಗಿ ಮನದಲ್ಲಿಟ್ಟುಕೊಂಡು ಶಾಸ್ತ್ರಿಗಳವರು ವ್ಯಾಖ್ಯಾನ ಮಾಡುವುದರಿಂದಲೇ ಅವರ ವ್ಯಾಖ್ಯಾನಶೈಲಿ ಅಮೋಘ ಎನಿಸಿಕೊಳ್ಳುತ್ತದೆ.


ರಾಗ ಹಾಗೂ ಭಾವದಿಂದ ಗಮಕಿ ಮಧುರಕಂಠದಿಂದ ಏನೇ ಭಾವಪೂರ್ಣವಾಗಿ ವಾಚನ ಮಾಡಿದರೂ, ಕೆಲವು ಸಂದರ್ಭಗಳಲ್ಲಿ ಕವಿ ಕ್ಲಿಷ್ಟ ಪದಗಳನ್ನು ಪದ್ಯಗಳಲ್ಲಿ ಬಳಕೆ ಮಾಡಿದ್ದರೆ, ಆ ವಾಚನ ಶ್ರೋತೃಗಳಿಗೆ ಕರ್ಣಾನಂದ ಉಂಟು ಮಾಡುವುದೇ ಹೊರತು ಆ ಪದ್ಯಗಳ ಭಾವಾರ್ಥ, ಸೂಕ್ಷ್ಮಾರ್ಥಗಳನ್ನು ತಿಳಿದುಕೊಳ್ಳಲು ನೆರವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ವ್ಯಾಖ್ಯಾನಕಾರನ ಪಾತ್ರ ಬಹಳ ಪ್ರಮುಖವಾದುದು. ಉದಾಹರಣೆಗೆ ಕುಮಾರವ್ಯಾಸಭಾರತದ ಆದಿಪರ್ವದ ಹದಿಮೂರನೇ ಸಂಧಿಯಲ್ಲಿನ ಹತ್ತೊಂಬತ್ತನೇ ಪದ್ಯದ ಒಳಾರ್ಥ ಹಾಗೂ ಸಾರಾಂಶ ತಿಳಿಯಬೇಕಾದರೆ ವ್ಯಾಖ್ಯಾನಕಾರನ ನೆರವು ಅತ್ಯಗತ್ಯ. ಬಹಳ ಪಾಂಡಿತ್ಯವೂ ಬೇಕು.

**ರಾಜಸೂಯದ ಕರ್ತೃವೋಲ್ಜಿತ**
**ರಾಜ ಮಂಡಲವಾಯ್ತು ಮುಖವಿದು**
**ರಾಜರಾಜನ ಪೋಲ್ದುದಳಕಾವೇಷ್ಟಿತತ್ವದಲಿ**
**ರಾಜನುದ್ಯಾನದವೊಲಾಸ್ಯಸ**
**ರೋಜವಾಯ್ತು ತಮಾಲಪತ್ರ ವಿ**
**ರಾಜಿತವು ಜನಮೇಜಯ ಕ್ಷಿತಿಪಾಲ ಕೇಳೆಂದ**

ಇಂತಹ ಪದ್ಯಗಳಿಗೆ ಬಹಳ ಸುಲಲಿತವಾಗಿ, ಸುಲಭ ರೀತಿಯಲ್ಲಿ ವಿವರಣೆ ನೀಡುವ ಶಕ್ತಿ ಅವರಿಗಿದೆ ಹಾಗೂ ಸಭಿಕರ ಮನ ಮೆಚ್ಚಿಸುವ ಸಾಮರ್ಥ್ಯ ಅವರಿಗುಂಟು. ಅವರ ಸ್ಪಷ್ಟ ರೀತಿಯ ಉಚ್ಚಾರಣೆ ಹಾಗೂ ಸಂಸ್ಕೃತಶ್ಲೋಕಗಳ ಅಳವಡಿಕೆ ಬಹಳ ಸೊಗಸು.

ಅನೇಕ ಬಾರಿ ನಾನು ನನ್ನ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಠ ಮಾಡುವಾಗ, ಪದ್ಯಗಳ ಪ್ರತಿಪದಾರ್ಥವನ್ನು ವಿವರಿಸುವ ಸಮಯದಲ್ಲಿ ಅವರ ವ್ಯಾಖ್ಯಾನಕ್ರಮವನ್ನು ಉದಾಹರಣೆಯಾಗಿ ತಿಳಿಸುವುದೂ ಉಂಟು. ನಾನು ಕಿರಿಯವಳಾಗಿ ಅವರ ಪಾಂಡಿತ್ಯದ ಬಗ್ಗೆ ಹೆಚ್ಚಿಗೆ ಬರೆಯಲು ಶಕ್ತಳಲ್ಲ. ಅವರು ಇನ್ನೂ ಬಹುಕಾಲ ಬಾಳಿ ಎಲ್ಲ ಶ್ರೋತೃವರ್ಗವನ್ನೂ ತಮ್ಮ ಪ್ರವಚನಕಾರ್ಯಕ್ರಮಗಳ ಮೂಲಕ ಸಂತೋಷಗೊಳಿಸಬೇಕೆಂಬುದು ನನ್ನ ಆಸೆ.

ಅವರಿಗೆ ಪರಮಾತ್ಮ ಆಯುರಾರೋಗ್ಯವನ್ನು ದಯಪಾಲಿಸಿ ಅವರನ್ನು ಆನಂದಮಯವಾಗಿಡಲೆಂದು ನಾನು ಕೋರುತ್ತೇನೆ.



*9. ನಮನ - ಪ್ರತಿನಮನ*

# ೧೨. ಶಾಸ್ತ್ರಿಗಳು ನಾ ಕಂಡಂತೆ

*ತಾರಾ ಪ್ರಸಾದ್*

ಶಾಸ್ತ್ರಿಗಳವರು ಭಾರತ ಸಾರ ಸಮುದ್ರ. ಅವರ ಬಗ್ಗೆ ಬರೆಯಲು ನಾನು ಶಕ್ತಳಲ್ಲದಿದ್ದರೂ, ಅವರಿಂದ ಪಡೆದ ಜ್ಞಾನತೀರ್ಥಬಿಂದುವಿನ ರುಚಿ ಬಲ್ಲ ನಾನು ಇಷ್ಟು ತಿಳಿಸಬಲ್ಲೆ.

ಶಾಸ್ತ್ರಿಗಳವರು ಬಸವಾನಿಗೆ ಪ್ರತಿವರ್ಷವೂ ಗೌರೀಹಬ್ಬದನಂತರ ಭಾರತವಾಚನ ಕಾರ್ಯಕ್ರಮವನ್ನು ನಡೆಸಿಕೊಡಲು ಆಗಮಿಸುತ್ತಿದ್ದರು. ನಾವು ವರ್ಷಕ್ಕೊಂದು ಸಾರಿ ಬರುವ ಗಣಪತಿ ಹಬ್ಬವನ್ನು ಕಾತರತೆಯಿಂದ ಕಾಯುತ್ತ, ಹಬ್ಬದ ದಿನ ಶ್ರದ್ಧೆಯಿಂದ ಪೂಜೆಮಾಡಿ ಗಣಪತಿಯ ಕಥೆಯನ್ನು ತನ್ಮಯತೆಯಿಂದ ಕೇಳುವಂತೆ ಶಾಸ್ತ್ರಿಗಳವರ ಭಾರತವಾಚನದ ದಾರಿ ಕಾಯುತ್ತಿರುತ್ತಿದ್ದೆವು. ಅವರು ತಿಳಿಸುತ್ತಿದ್ದ ಶ್ಲೋಕ

**ಗಾಂಧರ್ವಂ ಗೀತಸಂಯುಕ್ತಂ ಭಾರತಂ ಭಾರತೀ ಕಥಾ |**
**ಇಷ್ಟಾಭಾರ್ಯಾ ಸುಹೃನ್ಮಿತ್ರಂ ಹ್ಯಪೂರ್ವಾಣಿ ದಿನೇದಿನೇ ||**

ಅಕ್ಷರಸತ್ಯವಾಗುತ್ತಿತ್ತು. ವೇದಿಕೆಯನ್ನೇರುವವರೆಗೂ ನಮ್ಮೊಡನೆ ಆತ್ಮೀಯ ಬಂಧುವಿನಂತೆ ವ್ಯವಹರಿಸುತ್ತಿರುತ್ತಿದ್ದ ಶಾಸ್ತ್ರಿಗಳವರು ವೇದಿಕೆಯನ್ನೇರಿದೊಡನೆಯೇ ಪವಾಡಪುರುಷರಾಗುತ್ತಿದ್ದರು. ನಾರಣಪ್ಪ ಒದ್ದೆಬಟ್ಟೆಯುನ್ನುಟ್ಟು ವೀರನಾರಾಯಣನೆದುರಿನಲ್ಲಿ ಕುಳಿತು ಆವೇಶಭರಿತನಾಗಿ ಭಾರತವನ್ನು ಬರೆಯುತ್ತಿದ್ದ ಎಂಬುದನ್ನು ಕೇಳಿ ತಿಳಿದ ನಮಗೆ, ಅಷ್ಟು ಹೊತ್ತೂ ನಮ್ಮೊಡನೆ ನಕ್ಕು ನಲಿದ ಶಾಸ್ತ್ರಿಗಳವರು ವೇದಿಕೆಯ ಮೇಲೆ ಕುಳಿತ ಕ್ಷಣಕ್ಷಣದಲ್ಲೂ ಶಾಂತಮೂರ್ತಿ ಧರ್ಮಜನಾಗಿ, ಭಕ್ತ ಅರ್ಜುನನಾಗಿ, ಕಲಿಭೀಮನಾಗಿ, ವಾತ್ಸಲ್ಯಮಯಿ ಕುಂತಿಯಾಗಿ, ದೀನೆ ದ್ರೌಪದಿಯಾಗಿ, ಮೃದುಹೃದಯಿ ಕೃಷ್ಣನಾಗಿ ಕಂಡುಬರುತ್ತಿದ್ದರೆಂದರೆ ಅತಿಶಯೋಕ್ತಿಯಲ್ಲ. ಪಾತ್ರಕ್ಕೆ ತಕ್ಕ ಮುಖಭಂಗಿ, ಆವೇಶಭರಿತ ಮಾತು ನಮ್ಮನ್ನು ಅಯಸ್ಕಾಂತದಂತೆ ಅವರೆಡೆಗೆ ಸೆಳೆಯುತ್ತಿದ್ದವು. ಅವರನ್ನೇ ನೋಡುತ್ತಾ ತದೇಕಚಿತ್ತರಾಗಿ ಕುಳಿತ ನಮಗೆ ಕಾಲದ ಪರಿವೆಯಿರುತ್ತಿರಲಿಲ್ಲ. ಇಷ್ಟಾಗಿ ಮಂಗಳಶ್ಲೋಕದೊಡನೆ ಭಾರತ ವಾಚನ ಮುಕ್ತಾಯವಾದಾಗ ಹೃದಯದ ತುಂಬ ಭಾರತದ ಕಥೆ-ವ್ಯಥೆ. ಅದೇ ಗುಂಗಿನಲ್ಲಿಯೇ ನಾವು ಮನೆ ಮುಟ್ಟುತ್ತಿದ್ದೆವು. ಮುಂದೆ ಹಲವಾರು ದಿವಸ ಶಾಸ್ತ್ರಿಗಳವರ ಭಾರತವಾಚನ ಕಣ್ಣೆದುರು ಕಟ್ಟಿದಂತೆ, ಅವರ ನಗುಮುಖದ ವಾಣಿ ಕಿವಿಗೆ ಕೇಳುತ್ತಿರುತ್ತಿತ್ತು. ಅವರ ವ್ಯಾಖ್ಯಾನದ ಬಗ್ಗೆ ಮನೆಯಲ್ಲಿ ಮಾತುಕತೆಗಳು, ಅವರ ಅಕ್ಷಯ ಬತ್ತಳಿಕೆಯಲ್ಲಿನ ಹೊಸಹೊಸ ಅಸ್ತ್ರಗಳ ಬಗ್ಗೆ ಆಶ್ಚರ್ಯಗಳು ವ್ಯಕ್ತವಾಗುತ್ತಿದ್ದವು.

ಈಗ್ಗೆ ಮೂರು ವರ್ಷಗಳ ಹಿಂದೆ ಅವರ ದೇಹಶ್ರಮವನ್ನು ಗಮನಿಸಿ ಅವರಿಗೆ ಹೆಚ್ಚಿನ ತೊಂದರೆ ಕೊಡಬಾರದೆಂದು ನಮ್ಮೂರ ಗಣಪತಿ ಸಮಿತಿಯವರು ಗಣಪತಿ ಹಬ್ಬದ ಇಪ್ಪತ್ತೈದನೇ ವರ್ಷದ ಸಮಾರಂಭದ ದಿನ ಶಾಸ್ತ್ರಿಗಳಿಗೆ ಶಾಲು ಹೊದೆಸಿ ಸನ್ಮಾನ ಮಾಡಿದರು. ಆ ಸಮಾರಂಭದ ದಿನ, ಇನ್ನು ನಮ್ಮೂರಿನಲ್ಲಿ ಅವರ ಕಾರ್ಯಕ್ರಮವನ್ನು ಕೇಳುವುದು ಅಪರೂಪ ಎಂದು ಯೋಚಿಸಿದಾಗ, ಮನಸ್ಸಿಗೆ ತುಂಬಾ ವ್ಯಾಕುಲವಾಯಿತು.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಒಂದು ಕಾರ್ಯಕ್ರಮವನ್ನು ಕೊಡಲು ಅಜ್ಜಂಪುರಕ್ಕೆ ಬಂದಾಗ, ಹೈಸ್ಕೂಲ್ ವಿದ್ಯಾರ್ಥಿಯಾಗಿ ಅಲ್ಲಿದ್ದ ನಮ್ಮವರಾದ ಶ್ರೀ ಹರಿಪ್ರಸಾದ್‌ರೊಡನೆ ಆತ್ಮೀಯವಾಗಿ ಮಾತನಾಡಿಸಿ ಆಗಷ್ಟೇ ಪ್ರಚಲಿತವಾಗಿದ್ದ ದಶಮಾಂಶ ಪದ್ಧತಿಯನ್ನು ಚಿಕ್ಕ ವಿದ್ಯಾರ್ಥಿಯಂತೆ ಕಲಿತಿದ್ದಲ್ಲದೆ, ಅಂದಿನ ಕಾರ್ಯಕ್ರಮದಲ್ಲಿ ಯಾವುದೋ ಸಂದರ್ಭದಲ್ಲಿ "ಹರಿ ನನ್ನ ಗುರು ಈ ದಿನ ನನಗೆ ಹೊಸಲೆಕ್ಕ ಕಲಿಸಿಕೊಟ್ಟ" ಎಂದು ಹೇಳಿದ ಮಾತನ್ನು ಇಂದಿಗೂ ನೆನಪಿಸಿಕೊಳ್ಳುತ್ತ, ಅವರ ಜ್ಞಾನಶ್ರದ್ಧೆಗೆ, ಅವರ ಅಪಾರವಾದ ಹೃದಯ ವೈಶಾಲ್ಯತೆಗೆ ಬೆರಗಾಗುತ್ತೇವೆ.

ಶೃಂಗೇರಿಯಲ್ಲಿ ಒಮ್ಮೆ ಕಾರ್ಯಕ್ರಮ ಕೊಡಲು ಬಂದಾಗ ದುರದೃಷ್ಟವಶಾತ್ ಆ ದಿನ ಏನೋ ಗಲಾಟೆಯಾಗಿ ನೂರನಲವತ್ತನಾಲ್ಕನೇ ಸೆಕ್ಷನ್ ಜಾರಿಯಲ್ಲಿದ್ದಿತು. ಆದ್ದರಿಂದ ಸಾರ್ವಜನಿಕ ಕಾರ್ಯಕ್ರಮ ರದ್ದಾಯಿತು. ಹಾಗೆ ನಿರೀಕ್ಷಿತ ಕಾರ್ಯಕ್ರಮ ರದ್ದಾದರು ಸಹ ನಮ್ಮ ಮನೆಯಲ್ಲಿ ಕೇವಲ ಹತ್ತು ಜನರೆದುರಿನಲ್ಲಿ, ಹತ್ತು ಸಾವಿರ ಜನರಿರುವ ಕಛೇರಿಯಲ್ಲಿನ ಉತ್ಸಾಹದಿಂದ ಶಾಸ್ತ್ರಿಗಳವರು ಭಾರತವಾಚನ ನಡೆಸಿಕೊಟ್ಟಿದ್ದು ಸ್ಮರಣೀಯ.

ಊರಿಗೆ ಬಂದೊಡನೆಯೇ ಅಜ್ಜ ಎಂದು ಮುತ್ತಿಕೊಂಡ ಮಕ್ಕಳನ್ನು ರಮಿಸಿ, ಅವರ ಮುಗ್ಧ ಪ್ರಶ್ನೆಗಳಿಗೆ ಉತ್ತರಿಸಿ ಏಕಲವ್ಯ, ಬಕಾಸುರ, ಮೊದಲಾದವರ ಕಥೆಗಳನ್ನು ಅವರಿಗೆ ತಿಳಿಯುವಂತೆ ವಿವರಿಸುತ್ತಿದ್ದ

ಶಾಸ್ತ್ರಿಗಳು, ಸಭೆಯಲ್ಲಿ ಕುಳಿತು ಕೆಣಕಿಸಿಕೊಂಡ ಭೀಮನು ದುರ್ಯೋಧನನಿಗೆ, "ಎಲವೋ ದುರ್ಯೋಧನ, ನಿನ್ನ ಊರುಭಂಗ ಮಾಡುವೆ. ದುಶ್ಶಾಸನ, ನಿನ್ನ ಕರುಳನ್ನು ಕತ್ತರಿಸಿ ದ್ರೌಪದಿಯ ಸಿರಿ ಮುಡಿಗೆ ಮುಡಿಸುವೆ" ಎಂದು ಹೇಳುವಾಗಿನ ಆವೇಶ ನಿಜಕ್ಕೂ ನಂಬಲಸಾಧ್ಯ.

ಗಮಕ ಕಲೆಯನ್ನು ಪ್ರೋತ್ಸಾಹಿಸಲು ಅವರು ಹೊಸಬರಿಗೆ ಕೊಡುತ್ತಿದ್ದ ಉತ್ತೇಜನವು ಅನೇಕ ಗಮಕಿಗಳ ಉದ್ಭವಕ್ಕೆ ಕಾರಣವಾಗಿದೆ. ಹೊಸಹಳ್ಳಿ, ಶಿವಮೊಗ್ಗ, ಬಸವಾನಿ ಇತ್ಯಾದಿ ಅನೇಕ ಕಡೆಗಳಲ್ಲಿ ಅನೇಕ ಜನ ಕಾರ್ಯಕ್ರಮ ಕೊಡಲು ಶಾಸ್ತ್ರಿಗಳವರ ಸಹೃದಯತೆ, ಹಾಗೂ ವಿಶಾಲ ಮನೋಭಾವವೇ ಕಾರಣವಾಗಿದೆ. ಪೂಜ್ಯ ಶಾಸ್ತ್ರಿಗಳವರಿಂದ ಧೈರ್ಯವನ್ನು ಪಡೆದು ವೇದಿಕೆಗೆ ಬಂದವರಲ್ಲಿ ನಾನೂ ಒಬ್ಬಳು. ಅದಕ್ಕಾಗಿ ಶಾಸ್ತ್ರಿಗಳವರಿಗೆ ಚಿರಋಣಿಯಾಗಿದ್ದೇನೆ.

ಇತ್ತೀಚೆಗೆ ವಯೋಭಾರದಿಂದ ದೂರದ ಊರುಗಳಲ್ಲಿ ಕಾರ್ಯಕ್ರಮಗಳನ್ನು ಕೊಡಲಾಗದಿದ್ದರೂ ಕಂಠಶ್ರೀಯು ಸ್ವಲ್ಪವೂ ಕುಗ್ಗಿಲ್ಲ; ಈಗಲೂ ಹೊಸಹಳ್ಳಿಯಲ್ಲಿ ಆರು ತಿಂಗಳ, ಬಿಡುವಿರದ ಕಾರ್ಯಕ್ರಮವನ್ನು ನೀಡುತ್ತಿದ್ದಾರೆ. ದಯಾಮಯನಾದ ವೀರನಾರಾಯಣನು ನಮಗೆ ಶಾಸ್ತ್ರಿಗಳಿಂದ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕೇಳುವ ಸೌಭಾಗ್ಯವನ್ನು ಒದಗಿಸಲೆಂದು ಪ್ರಾರ್ಥಿಸುತ್ತೇನೆ.

## ೧೩. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನವನ್ನು ಕುರಿತು

*ಡಾ. ಎಸ್. ಮಲ್ಲಿಕಾರ್ಜುನ ಭಟ್ಟ*

'ಕುಮಾರ ವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು
ಭಾರತ ಕಣ್ಣಲಿ ಕುಣಿಯುವುದು' ಎನ್ನುವರು
ಅದು ಹೇಗಾದರೂ ಇರಲಿ, ಅವನ ಕಾವ್ಯವನ್ನು
ರಾಮಾಶಾಸ್ತ್ರಿಗಳು ಸುಶ್ರಾವ್ಯವಾಗಿ ಓದಿದರೆ,
ಲಕ್ಷ್ಮೀಕೇಶವಶಾಸ್ತ್ರಿಗಳು ವ್ಯಾಖ್ಯಾನ ಮಾಡಿದರೆ
ಕೇಳುವರ ಮೈ ರೋಮಾಂಚನಗೊಳ್ಳುತ್ತಿದ್ದುದು,
ಅವರ ಮನೋರಂಗಭೂಮಿಯ ಮೇಲೆ
ಭಾರತದ ಪಾತ್ರಗಳು ನರ್ತಿಸುತಿದ್ದುದಂತೂ ನಿಜ.
ಅವರ ವಾಚನವು ಮುಗಿದಾಗ-
ಕಿನ್ನರಿಯ ಮೋಡಿಗೊಳಗಾದ ಬಾಲಕರು
'ಅಯ್ಯೋ ಹೋಯಿತೆ ಆ ನಾಕ
ಅಯ್ಯೋ ಬಂದಿತೆ ಈ ಲೋಕ'
ಎಂದು ಮರುಗಿದಂತೆ
'ಅಯ್ಯೋ ಮುಗಿಯಿತೆ ಆ ರಸದೂಟ'
ಎಂದುಕೊಳ್ಳದಿದ್ದವರು ವಿರಳವಲ್ಲವೆ ಹೇಳಾ -ಶ್ರೀಶೈಲವಾಸ ೧

ಶರತ್ಕಾಲದಲಿ ತಿಳಿನೀಲಿಯಾಗಸದಿ
ಆಗಾಗ ತೇಲಿ ಬರುವ ವಿವಿಧಾಕೃತಿಯ ಜಲಧರಗಳು
ಪರಿಸರದ ರಮಣೀಯತೆಗೆ
ಕುಂದಣವಿಟ್ಟು ಮನಸೆಳೆವಂತೆ,
ಅವರ ವ್ಯಾಖ್ಯಾನದ ನಡುನಡುವೆ
ಆಗಾಗ ಬರುವ ಉಪಕತೆಗಳು
ಸುಭಾಷಿತಗಳು, ನಾಣ್ಣುಡಿಗಳು
ಸಂದರ್ಭಕ್ಕೆ ಕಳಶವಿಟ್ಟು
ರಸಾಸ್ವಾದನೆಗೆ ನೆರವಾಗುವುವು -ಶ್ರೀಶೈಲವಾಸ ೨

ವಾಸುದೇವರಾಯರ ವಾಚನದ ಯಮುನೆಯೊಡನೆ
ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನ ಗಂಗೆ
ಸಂಗಮಿಸಿದರೆ, ಆ ಪುಣ್ಯ ರಸತೀರ್ಥದಲಿ ಮಿಂದು
ಆನಂದ ತುಂದಿಲರಾಗದವರಾರಯ್ಯ!
ಅವರ ವಾಚನಕ್ಕೆ ಇವರ ವ್ಯಾಖ್ಯಾನ ಸೇರಿದರೆ
ಅಪ್ಪಟ ಅಪರಂಜಿಯುಂಗುರಕ್ಕೆ
ಹೊಳೆವ ಮುತ್ತಿನ ಹರಳಿಟ್ಟಂತೆ ನೋಡಾ -ಶ್ರೀಶೈಲವಾಸ ೩

ಪಾಕಶಾಸ್ತ್ರಜ್ಞನು ತನ್ನ ಕೌಶಲ್ಯದಿಂದ
ಷಡ್ರಸಾನ್ನವನುಣಿಸಿ ತಣಿಸುವಂತೆ,
ಈ ರಸಪಾಕಶಾಸ್ತ್ರಜ್ಞರು ತಮ್ಮ ವ್ಯಾಖ್ಯಾನದಿಂದ
ನವರಸದೌತಣವನಿತ್ತು ತಣಿಸುವರಯ್ಯಾ -ಶ್ರೀಶೈಲವಾಸ ೪

ಹರಿಹರನು ರಗಳೆಗೆ ಹಿರಿಯ ಕವಿಯಾದಂತೆ,
ರಾಘವಾಂಕನು ಷಟ್ಪದಿಗೆ ಬ್ರಹ್ಮನಾದಂತೆ,
ಸರ್ವಜ್ಞನು ತ್ರಿಪದಿಗೆ ತ್ರಿವಿಕ್ರಮನಾದಂತೆ,
ಕುಮಾರವ್ಯಾಸನು ಭಾಮಿನೀಷಟ್ಪದಿಗೆ ಗುರುವಾದಂತೆ,
ಲಕ್ಷ್ಮೀಕೇಶವಶಾಸ್ತ್ರಿಗಳು ವ್ಯಾಖ್ಯಾನಕಲೆಗೆ
'ಪಿತಾಮಹ'ರಾಗಿಹರು, 'ಕೇಸರಿ'ಗಳಾಗಿಹರು
ಈ ಕಲೆಗೆ ಅವರು ದಿಗ್ದಂತಿ
ಅವರು ನಡೆದುದೇ ದಾರಿ
ನುಡಿದುದೇ ಮನಸೆಳೆವ ಭಂಗಿ -ಶ್ರೀಶೈಲವಾಸ ೫

ಮುಖದ ಹಾವಭಾವಗಳಿಂದ
ಕಣ್ಸನ್ನೆ ಕೈಸನ್ನೆಗಳಿಂದ
ತಲೆದೂಗುವ ರೀವಿಯಿಂದ
ವಿವಿಧಾಭಿನಯಗಳಿಂದ,
ಪದ್ಯವನ್ನು ಓದುತ್ತಿರುವಾಗಲೇ ಅರ್ಥವಾಗುವಂತೆ
ಮಾಡುವ ಅವರ ಕಲೆ
ಅವರಿಗೇ ವಿಶಿಷ್ಟವಾದುದು -ಶ್ರೀಶೈಲವಾಸ ೬

## ೧೪. ಗಮಕಕಲೆ ಮತ್ತು ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳು

*ಡಾ. ಟಿ.ಎಸ್. ಕೃಷ್ಣಮೂರ್ತಿ*

ಕನ್ನಡಭೂಮಿ ಮೊದಲಿನಿಂದಲೂ ಆಸ್ತಿಕತೆ ಮತ್ತು ದೈವಭಕ್ತಿಯ ನೆಲೆ. ಇಲ್ಲಿನ ಜನಕ್ಕೆ ಪ್ರಗತಿಸಾಧನೆಯೆಂದರೆ ಕೇವಲ ಉದರ ಪೋಷಣೆಯ ಸಂಕಲ್ಪ-ಸಾಧನೆ ಮಾತ್ರವಾಗಿರಲಿಲ್ಲ. ಅದು ಆತ್ಮವಿಕಾಸಕ್ಕೂ, ಸತ್ಯ-ಧರ್ಮಗಳ ತಳಹದಿಯ ಮೇಲೆ ನಿಂತ ಜೀವನಕ್ಕೂ ಅಳವಡಬೇಕೆಂಬುದೂ ಅವರ ನಂಬಿಕೆಯಾಗಿದ್ದಿತು. ಉತ್ತಮ ಕವಿಗಳು ಬರೆದಿರುವ ಗ್ರಂಥಗಳನ್ನು ಓದುವುದೂ, ಓದಿಸಿ ಕೇಳುವುದೂ ಶ್ರೇಯಸ್ಸಿಗೆ ಸಾಧಕವೆಂದು ಅವರು ಬಗೆದಿದ್ದರು. ಈ ಭಾವನೆಯೇ ನಮ್ಮ ಗಮಕ ಕಲೆಯ ಉಗಮಕ್ಕೂ, ಜನಪ್ರಿಯತೆಗೂ ತಳಹದಿಯಾಯಿತು. ಪ್ರಪಂಚದ ಮತ್ತಾವ ರಾಷ್ಟ್ರದಲ್ಲೂ ಇಂತಹ ಕಲೆ ಇದ್ದು, ಇಷ್ಟೊಂದು ಜನಪ್ರಿಯವಾಗಿ ನಿಂತಿಲ್ಲ. ನಮ್ಮ ಗಮಕಿಗಳೂ, ಹರಿಕಥೆ-ಶಿವಕಥೆ ದಾಸರೂ ತಮ್ಮದೇ ಆದ ರೀತಿಯಲ್ಲಿ ನಮ್ಮ ಕವಿಗಳ (ಗ್ರಂಥಗಳ) ಸಂದೇಶವನ್ನು ಗ್ರಾಮ-ಗ್ರಾಮಕ್ಕೆ ಮುಟ್ಟಿಸಿದ್ದಾರೆ. ನಾಡಿನ ಜನಜೀವನದ ನೀತಿ-ಧರ್ಮಗಳ ಮಟ್ಟವು ಹೆಚ್ಚಿ, ಸುಖ-ಶಾಂತಿಗಳು ದೊರೆಯುವಂತೆ ಮಾಡಿದ್ದಾರೆ. ಇದು ಅಲ್ಪ ಸಾಧನೆಯೇನಲ್ಲ. ಆಡಂಬರಕ್ಕೆ ಸಿಕ್ಕದ ಮಹತ್ಸಾಧನೆ.

ಭಾರತೀಯ ಕಾವ್ಯಮೀಮಾಂಸೆಯ ಪ್ರಕಾರ ಪರಿಶುದ್ಧವಾದ ಹಾಗೂ ಅನಿರ್ವಚನೀಯವಾದ ಆನಂದವು ಕಾವ್ಯದ ಒಂದು ಗುರಿಯಾದರೆ, ಮಾನವನು ಆಧ್ಯಾತ್ಮಿಕ ತತ್ತ್ವಗಳ ಸಾಧನೆಯಿಂದ ಸಂಪನ್ನವಾಗುವಂತೆ ಮಾಡುವುದು ಇನ್ನೊಂದು ಗುರಿ. ಅಂದರೆ ಶಾಸ್ತ್ರದ ಮಾತಿನಲ್ಲಿ ಹೇಳುವುದಾದರೆ ಶಾಸ್ತ್ರಕ್ಕೂ ಕಾವ್ಯಕ್ಕೂ 'ಏಕವಾಕ್ಯತೆ' ಇರಬೇಕು. ಅಂದರೆ, ಪರಿಣಾಮದಲ್ಲಿ ಶಾಸ್ತ್ರ ಬೋಧಿಸಿದ ತತ್ತ್ವಕ್ಕೂ, ಕಾವ್ಯದಿಂದ ಕಂಡ ಸತ್ಯಕ್ಕೂ ಅಭಿನ್ನತೆ ಇರಬೇಕು. ಆದುದರಿಂದಲೇ ಎಲ್ಲ ಶ್ರೇಷ್ಠ ಕವಿಗಳೂ ತಮ್ಮ ಕೃತಿಗಳಲ್ಲಿ ಧರ್ಮಕ್ಕೇ ಪ್ರಧಾನ ಸ್ಥಾನವನ್ನು ಕೊಟ್ಟು, ಅರ್ಥ ಮತ್ತು ಕಾಮಗಳನ್ನು ಧರ್ಮದ ಅಧೀನವನ್ನಾಗಿ ಮಾಡಿರುವುದು. ಈ ತತ್ತ್ವಗಳನ್ನು ಕಥಾನಕ ಕಾವ್ಯಗಳಿಂದಲೂ, ಅವುಗಳ ವ್ಯಾಖ್ಯಾನಗಳಿಂದಲೂ ತಿಳಿಸುವುದು 'ಕಾಂತಾಸಂಮಿತ'ಯಾಯಿತು. ಪತಿಯ ಹಿತವನ್ನೂ ಶ್ರೇಯಸ್ಸನ್ನೂ ಬಯಸುವ ಪ್ರೇಮನಿಧಿಯಾದ ಸದ್ಗುಣಿ ಗೃಹಿಣಿಯು ಅಮೃತವಾಕ್ಕುಗಳಿಂದ ಮನೋರಂಜನೆ ಮಾಡುತ್ತಿದ್ದ ಹಾಗೆಯೇ ಬೋಧೆಯನ್ನೂ ಮಾಡುವ ಸಾಮ್ಯವನ್ನು ಈ ಕಾಂತಾಸಂಮಿತ ಲಕ್ಷ್ಯ ಮಾಡಿಕೊಂಡಿರುತ್ತದೆ. ಬಳ್ಳಿಯಲ್ಲಿ, ವೃಕ್ಷದಲ್ಲಿ ಹೂವು ಅರಳುತ್ತದೆ. ಆದರೆ ಅದರ ಪರಿಮಳ ಪ್ರಸಾರವಾಗಿ ಪುಷ್ಪದ ಸಾರ್ಥಕ್ಯವಾಗುವುದು ಆ ಕಂಪನ್ನು ಹೊತ್ತ ತಂಗಾಳಿಯಿಂದ.[1] ಗಮಕಿ, ಶ್ರೇಷ್ಠ ಕವಿಗಳ ಕೃತಿಕುಸುಮಗಳಿಗೆ ಸೌರಭವನ್ನು ಪ್ರಸರಿಸುವ ಇಂತಹ ತಂಗಾಳಿ.

'ಗಮಕ' ಶಬ್ದವು ಸಂಸ್ಕೃತದಿಂದ ಬಂದದ್ದು. ಗತ್ಯರ್ಥಕವಾದ 'ಗಮ್ಲೃ' ಧಾತುವಿನಿಂದ ಗಮಕ ಶಬ್ದವು ಉತ್ಪತ್ತಿಯಾಗಿದೆ. ಈ ಗಮಕವು ಸಂಗೀತ ಶಾಸ್ತ್ರದಲ್ಲಿ :

**ಆರೋಹಮವರೋಹಂ ಚ ಢಾಲು-ಸ್ಫುರಿತ-ಕಂಪಿತಾಃ |**
**ಆಹತಃ ಪ್ರತ್ಯಾಹತಶ್ಚ ತ್ರಿಪುಚ್ಛಾಂದೋಳಮೂರ್ಛನಾಃ ||**

ಎಂದು ದಶವಿಧವಾಗಿ ನಿರೂಪಿಸಲ್ಪಟ್ಟಿದೆ.[2] ಹೃದಯಂಗಮವಾದ ಶಬ್ದಮಯ ಕಥಾರ್ಥವನ್ನು ಶ್ರೋತೃಗಳ ಸ್ವಾಂತದಲ್ಲಿ ಬಿತ್ತಿ, ರಾಗ ಸುಧಾಸೇಚನೆಯಿಂದ ತೋಯಿಸಿ, ಭಾವಪರಂಪರೆಗಳ ಸ್ಪಂದನೆಯನ್ನುಂಟುಮಾಡುವ ಶಕ್ತಿಯೇ ಗಮಕದ ಕೀಲಕ. ಈ ಗಮಕದ ಕಾಲಿಲ್ಲದಿದ್ದರೆ ಸಾಹಿತ್ಯದೇವಿ ಚಲಿಸಲಾರಳು.[3] ಕವಿಯ ಅದ್ಭುತ ಪ್ರತಿಭಾವಿಶೇಷ ಹಾಗೂ ಸಂಸ್ಕಾರವಿಶೇಷದಿಂದ ಮೂಡಿಬಂದ ಕಾವ್ಯವು ಪುಟಗೊಂಡು, ಆ ಕಾವ್ಯದ ಭಾವ-ರಸ-ಲಹರಿಗಳು ಜೀವಂತಗೊಂಡು ಜನಾಂಗದ ಹೃದಯವೀಣೆಯ ತಂತಿಯನ್ನು ಮಿಡಿಸುವುದೇ ಗಮಕಕಲೆಯ ಮೊದಲ ವೈಶಿಷ್ಟ್ಯ. ಗಮಕದ ಇನ್ನೊಂದು ವೈಶಿಷ್ಟ್ಯವೆಂದರೆ ಸಾಹಿತ್ಯ-ಸಂಗೀತಗಳನ್ನು ಸ್ತುತ್ಯ ರೀತಿಯಲ್ಲಿ ಹೊಂದಾಣಿಸಿಕೊಂಡಿರುವುದು. ಸಂಗೀತದಲ್ಲಿ ಗಮಕವು ಎಷ್ಟು ಪ್ರಾಧಾನ್ಯವನ್ನು ಪಡೆದಿದೆಯೋ, ಸಾಹಿತ್ಯದಲ್ಲೂ ಅಷ್ಟೇ ಪ್ರಾಧಾನ್ಯ ಪಡೆದಿದೆ. ಗಮಕಿ ಉತ್ತಮ ಸಹೃದಯನೂ, ಉತ್ತಮ ಸಂಗೀತಗಾರನೂ ಆಗಿರುತ್ತಾನೆ. ರಸ-ಭಾವಗಳಿಗೆ ತನ್ನ ಕಂಠದಿಂದ ಸಮುಚಿತ ಶಾಬ್ದಿಕ ಸೌಂದರ್ಯವನ್ನು ಮೂಡಿಸುತ್ತಾನೆ. ಕಾವ್ಯವನ್ನು ಮನೋಜ್ಞವನ್ನಾಗಿಸುತ್ತಾನೆ. ಹೀಗೆ ಸಾಹಿತ್ಯ-ಭಾವ-ರಾಗಗಳಲ್ಲಿ ತಜ್ಞನಾದವನು ಮಾತ್ರವೇ ಉತ್ತಮ ಗಮಕಿ ಆಗುತ್ತಾನೆ. ಸಂಸ್ಕಾರಕ್ರಮದಿಂದ, ಪುಣ್ಯಸಂಪಾದನೆಯಿಂದ, ಸರಸ್ವತೀಪ್ರಸಾದದಿಂದ ಅವನು ಕವಿಯೂ ಆಗಿದ್ದರೆ ಇನ್ನಷ್ಟು ಶೋಭೆ, ಅವನ ಗಮಕಕ್ಕೆ. ಅಂತಹ ಗಮಕಿ ದೇಶದ ದೊಡ್ಡ ಸಂಪತ್ತು.

ಗಮಕಿಗೆ ಕಾವ್ಯದ ರೂಪ, ವಸ್ತು ಮತ್ತು ಭಾವಗಳ ಸಮಗ್ರ ವಿಮರ್ಶಾ ಶಕ್ತಿ ಇರಬೇಕು. ಯಾವ ಕಾವ್ಯ? ಇಲ್ಲಿನ ವಸ್ತುವೇನು? ಇಲ್ಲಿನ ಪಾತ್ರಸೃಷ್ಟಿ ಹೇಗಿದೆ? ರಸ-ಭಾವಗಳ ಸೌಂದರ್ಯವೆಂತಹುದು? ಇವನ್ನು ಮೊದಲು ತಾನು ಸಹೃದಯತೆಯಿಂದ ಸ್ವಾಂತದಲ್ಲಿ ಆನಂದಿಸಿ, ಅನಂತರ ಪಂಡಿತ-ಪಾಮರ ವರ್ಗದಿಂದ ಕೂಡಿದ ಶ್ರೋತೃವರ್ಗ ಅರ್ಥಮಾಡಿಕೊಂಡು ಮೆಚ್ಚುವಂತೆ ವಿನ್ಯಾಸ ಮಾಡಬೇಕು. ಆಯಾ ಸಂದರ್ಭ, ಆಯಾ ಪಾತ್ರಗಳನ್ನು ಪೂರ್ತಿಯಾಗಿ ಅರ್ಥಮಾಡಿಕೊಂಡು ಅದಕ್ಕದಕ್ಕೆ ಉಚಿತವಾದ ರಾಗವನ್ನು ಉಪಯೋಗಿಸಿ ಹಾಡಿ, ಶ್ರೋತೃವರ್ಗವನ್ನು ತಲೆದೂಗುವಂತೆ ಮಾಡುವ ಕಲೆ ಗಮಕಿಗೆ ಒದಗಿಬಂದ ಸಂಪತ್ತು.

ಈ ಸಂಪತ್ತು ಕವಿಮಾತ್ರನಾದವನಿಗೆ ಕಷ್ಟಸಾಧ್ಯವೇ. ಇದರಿಂದಲೇ ಗಮಕಿಯ ಸ್ಥಾನ ಉನ್ನತ. ಈ ಸಿದ್ಧಿ ಒದಗಿದ ಗಮಕಿ, ಕವಿಯ ಕೃತಿಗೆ ಚೈತನ್ಯದಾಯಕನಾಗುತ್ತಾನೆ. ವೀಣೆಯಲ್ಲಿ ಅದೆಷ್ಟೋ ವಿಧವಾದ ರಾಗ-ರಸಗಳು ತುಂಬಿಕೊಂಡಿದ್ದರೂ ವೈಣಿಕನ ಕರವಿನ್ಯಾಸ ಕೌಶಲದಿಂದಲ್ಲದೆ ಅವು ಮೂಡಿಬರಲಾರವು. ಕವಿಯ ನವರಸ ರತ್ನಗಳನ್ನು ರಾಗ-ಲಯ ಕುಂದಣದಲ್ಲಿ ಕೂಡಿಸಿ ಶ್ರೋತೃಗಳಿಗೆ ಅರ್ಪಿಸುವುದು ಗಮಕಿಯ ವೈಶಿಷ್ಟ್ಯ. ಇದಕ್ಕೆ ಗಮಕಿಯ ಸಂಸ್ಕಾರ, ಕಾವ್ಯಾವಲೋಕನ ಪರಿಶ್ರಮ, ಅನುಭವ, ಕಂಠಶ್ರೀ ಜತೆಗೆ ಉಚಿತವಾದ ಸ್ವರಯೋಜನೆಯೇ ತಳಹದಿ. ತನ್ನ ಧ್ವನಿಯ ಏರಿಳಿತಗಳ ವಿನ್ಯಾಸದಿಂದಲೂ, ಪದವಿಭಜನೆಯ ಜಾಣ್ಮೆಯಿಂದಲೂ, ಗಮಕಿ ಈ ಸಿದ್ಧಿಯನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಾನೆ. ಈ ಗಾರುಡಿಯಿಂದ ಶ್ರೋತೃಗಳ ಕಿವಿ, ನೋಡುವ ಕಣ್ಣಾಗಿ ರೂಪಿತವಾಗುತ್ತದೆ. ತಾತ್ಪರ್ಯದಲ್ಲಿ-ಕಾವ್ಯರಸಾನುಭವವನ್ನು ಹೃದಯದ ಅಂತರಾಳದಿಂದ ಹೊಮ್ಮಿಸಿ, ಧ್ವನಿಯ ಏರಿಳಿತಗಳಲ್ಲಿ ಮೀಯಿಸಿ, ಜಿಹ್ವಾಗ್ರದಲ್ಲಿ ನರ್ತಿಸುವಂತೆ ಮಾಡಿಸಿ, ಶ್ರೋತೃಗಳ ಶ್ರವಣೇಂದ್ರಿಯಪುಟಪೇಯವನ್ನಾಗಿಸಿ, ಆ ರಸಭಾವವನ್ನು ಅವರ ಹೃದಯಾಂತರಾಳಕ್ಕೆ ಒಯ್ದು, ಶ್ರೋತೃಗಳನ್ನು ಅನಿರ್ವಚನೀಯ ಆನಂದಕ್ಕೆ ಒಯ್ಯುವುದೇ ಗಮಕಿಯ ಗುರಿ. ಇದನ್ನೇ 'ವಿಗಲಿತವೇದ್ಯಾಂತರಮಾನಂದಮ್' ಎಂದು ಬಣ್ಣಿಸಿರುವುದು. ಇದು ಎಲ್ಲೆಲ್ಲಿ ಸಾಧಿಸಲ್ಪಡುತ್ತದೆಯೋ ಅಲ್ಲೆಲ್ಲ ಗಮಕಿ ತನ್ನ ಕಲೆಯ ಕರ್ಮ-ಕೌಶಲದ ಪರಾಕಾಷ್ಠೆ ಮೆರೆದಿದ್ದಾನೆ ಎಂದು ಸಹೃದಯರ ಅಭಿಪ್ರಾಯ.

ಹಿಂದಿನ ದಿನಗಳಲ್ಲಿ ಒಬ್ಬರು ಓದುವುದು, ಮತ್ತೊಬ್ಬರು ಅರ್ಥವನ್ನು ವಿವರಿಸುವುದು ಹೆಚ್ಚು ರೂಢಿಯಲ್ಲಿದ್ದಿತು. ಇದರಿಂದ ಗಮಕ ಇನ್ನೂ ಹೆಚ್ಚು ಚೇತೋಹಾರಿಯಾಗಿರುತ್ತಿದ್ದಿತು. ಜತೆಗೆ ಗಮಕಿಗೂ, ವ್ಯಾಖ್ಯಾನಕಾರನಿಗೂ ಆಯಾಸ ಕಡಮೆಯಾಗುತ್ತಿತ್ತು. ಮಧುರವಾಗಿಯೂ, ಸ್ವರಯುಕ್ತವಾಗಿಯೂ ಸನ್ನಿವೇಶವನ್ನು ಪ್ರತಿಬಿಂಬಿಸುವಂತೆಯೋ, ಪುನಃ ಸೃಷ್ಟಿಮಾಡುವಂತೆಯೋ ಓದಿದರೆ ಚೆನ್ನು. ಜತೆಗೆ ಪಾಂಡಿತ್ಯ, ಸಹೃದಯತೆ ಹಾಗೂ ಕೌಶಲಗಳಿಂದ ಅರ್ಥವನ್ನೂ ವಿವರಿಸಿದರೆ ಬಹು ಮೋಹಕ. ಈ ಸಂಪ್ರದಾಯವು ಇಂದಿಗೂ ಬೆಳೆದುಕೊಂಡು ಬಂದಿದ್ದರೂ, ಇತ್ತೀಚೆಗೆ ಪಂಡಿತ-ಪಾಮರ ಜನ ಹೃದಯಾಭಿರಾಮವಾಗಿ ಅರ್ಥ ವಿವರಿಸುವವರ ಸಂಖ್ಯೆ ವಿರಳವಾಗುತ್ತಿದೆ. ಅದರಲ್ಲಿಯೂ ಪ್ರಖ್ಯಾತರಾಗಿರುವ ವ್ಯಾಖ್ಯಾನಕಾರರ ಸಂಖ್ಯೆಯು ತೀರ ಕಡಮೆ. ಅಲ್ಪಸಂಖ್ಯೆಯ ಈ ವ್ಯಾಖ್ಯಾನಕಾರರಲ್ಲಿ ಪ್ರಥಮಶ್ರೇಣಿಯವರೆನಿಸಿರುವ ಉದ್ದಾಮ ವ್ಯಾಖ್ಯಾನಕಾರರ ಸಂಖ್ಯೆಯಂತೂ ಅಲ್ಪಾಲ್ಪವಾಗಿದೆ. ಇಂತಹ ಅಲ್ಪಸಂಖ್ಯೆಯ ಉದ್ದಾಮ ವ್ಯಾಖ್ಯಾನಕಾರರಲ್ಲಿ ಪೂಜ್ಯರಾದ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ಸೇರಿರುವುದು ಮತ್ತೂರಿನ ಸೌಭಾಗ್ಯ,

ಕನ್ನಡಕುಲದ ಭಾಗ್ಯ. ಅದ್ಭುತವಾದ ತಮ್ಮ ವ್ಯಾಖ್ಯೆಯ ಸಾಮರ್ಥ್ಯದ ಪರಿಣಾಮವಾಗಿ ಲಕ್ಷ್ಮೀಕೇಶವಶಾಸ್ತ್ರಿಗಳು ಕನ್ನಡ ನಾಡಿನಲ್ಲಿ ಶ್ರೇಷ್ಠರೆನಿಸಿರುವ ಉದ್ದಾಮ ವ್ಯಾಖ್ಯಾನಕಾರರ ಗುಂಪಿನಲ್ಲಿ ತಮ್ಮದೇ ಆದೊಂದು ಸ್ಥಾನವನ್ನು ಗಳಿಸಿ ಇಡೀ ನಾಡಿನಲ್ಲಿ ಜನಪ್ರಿಯರಾಗಿದ್ದಾರೆ. ತಮ್ಮ ನಿರೂಪಣಾ ಸಾಮರ್ಥ್ಯ ಕೌಶಲಗಳಿಂದ 'ವ್ಯಾಖ್ಯಾನ ವಾಚಸ್ಪತಿ' ಎಂಬ ಬಿರುದಿಗೆ ಸರ್ವಥಾ ಅರ್ಹರಾಗಿದ್ದಾರೆ. ಕಾವ್ಯದ ಅರ್ಥ-ಭಾವ-ರಸಗಳನ್ನು ರಕ್ತಗತ ಮಾಡಿಕೊಂಡು, ಆಯಾ ಸನ್ನಿವೇಶಗಳಿಗೆ, ಆಯಾ ಪಾತ್ರಗಳಿಗೆ, ಆಯಾ ರಸಭಾವಗಳಿಗೆ ಪಾಂಡಿತ್ಯಪೂರ್ಣವಾಗಿಯೂ ವಿಮರ್ಶಾತ್ಮಕವಾಗಿಯೂ, ಚಾತುರ್ಯಪೂರ್ಣವಾಗಿಯೂ ವ್ಯಾಖ್ಯಾನಿಸುವ ಅವರ ಕೌಶಲ ಮನೋಜ್ಞ.

ಅವರು ವ್ಯಾಖ್ಯಾನ ನವೋದಯದ ಆಚಾರ್ಯರು. ಅವರು ಹರಿಹರ-ರಾಘವಾಂಕ - ಲಕ್ಷ್ಮೀಶ ಮೊದಲಾದ ಮಹಾಕವಿಗಳನ್ನು ವ್ಯಾಖ್ಯಾನ ಮಾಡುವುದನ್ನು ಕೇಳಿದ್ದೇನೆ. ಆದರೆ ನಾಡಿನ ಜನತೆ ಶತಮಾನಗಳಿಂದ ಹಾಡಿ, ಹಾಡಿಸಿ ಕೇಳುತ್ತಲೇ ಇರುವ ಕುಮಾರವ್ಯಾಸನ ವ್ಯಾಖ್ಯಾನವನ್ನು ಮಾಡುವ ಅವರ ವೈಖರಿಯೇ ಬೇರೆ. ಅವರಿಗೆ ಹೆಚ್ಚು ಪ್ರಚಾರ ತಂದಿರುವುದೂ *ಈ* ಕೃತಿಯೇ. ಭಾರತ ಕಥಾಮಂಜರಿಯೇನೋ ನಾರಣಪ್ಪನದೇ. ಆದರೆ ಅದರ ಅನ್ಯಾದೃಶ ವ್ಯಾಖ್ಯಾನ ಮಾತ್ರ ಲಕ್ಷ್ಮೀಕೇಶವಶಾಸ್ತ್ರಿಗಳದ್ದೆ! *ಈ* ಅನನ್ಯತೆಯಿಂದ ಅವರ ವ್ಯಾಖ್ಯಾನವು ವಿಶಿಷ್ಟವಾಗಿ ಸ್ವತಂತ್ರವಾಗಿ ಬೆಳೆಯುತ್ತದೆ; ಕಲಿಯದವರಿಗೂ ಕಾಮಧೇನುವಾಗುತ್ತದೆ. *ಈ* ವ್ಯಾಖ್ಯಾನದಲ್ಲಿ ತಲ್ಲೀನವಾದ ಶ್ರೋತೃಸ್ತೋಮ ರಸಯಾತ್ರೆ ಕೈಗೊಂಡ ಸಾರ್ಥಕ್ಯವನ್ನೂ ಧನ್ಯತೆಯನ್ನೂ ಪಡೆಯುತ್ತದೆ. ಕುಮಾರವ್ಯಾಸನನ್ನು 'ರೂಪಕ ಚಕ್ರವರ್ತಿ' ಎಂದು ಗೌರವಿಸಿದರೆ, ಶಾಸ್ತ್ರಿಗಳನ್ನು **ಉಪಕಥಾ ನಿರೂಪಕ ಚಕ್ರವರ್ತಿ**ಯೆಂದು ಗೌರವಿಸಬೇಕು. ಅವರ ವ್ಯಾಖ್ಯಾನ ನಾನಾ ರಸಗಳಿಗೆ ಆಕರವಾದ ಮನೋಹರವಾದ ಉಪಕಥೆಗಳ ಆಗರ. ಧರ್ಮಸೂಕ್ಷ್ಮಗಳ ವಿವರಣೆಗೆ *ಈ* ಉಪಕಥೆ ಬೇಕೇ ಬೇಕು. ಅವರು ವಾಚಾಳಿಯೇ ಆದರೂ ಅವರನ್ನು ಪ್ರೀತಿಪಾತ್ರರನ್ನಾಗಿಸಿದೆ. ಸಾವಿರಾರು ಮಾತುಗಳು ನಿರರ್ಗಳವಾಗಿ ಹರಿದರೂ ಅವರ ಪಾಂಡಿತ್ಯ, ವಿಶ್ಲೇಷಣಾ ಕೌಶಲ, ಅನುಭವಪರಿಪಾಕ ತಲೆದೂಗುವಂತೆ ಮಾಡುತ್ತವೆ. ಕುಮಾರವ್ಯಾಸನ ಹಾಸ್ಯ, ಕಟಕಿ, ವ್ಯಂಗ್ಯ, ಸರಸ, ಭಗವದ್ಭಕ್ತಿ, ವಕ್ರೋಕ್ತಿ - ಎಲ್ಲವೂ ಶಾಸ್ತ್ರಿಗಳ ವ್ಯಾಖ್ಯಾನದಲ್ಲಿ ಅನ್ಯಾದೃಶವಾಗಿ ಮೂಡಿನಿಂತು, ಅವರ ವಾಗ್ಮಿತೆಯ ಅಂಶವೇ ಆಗಿಬಿಡುತ್ತವೆ; ಕಾವ್ಯದ ಪರಿಣಾಮಕಾರಿ ಶಕ್ತಿಯಾಗಿಬಿಡುತ್ತವೆ. ಜೀವನಾನುಭವದ ನವನೀತವಾಗಿಬಿಡುತ್ತವೆ.

ಗಮಕಕಲೆಯನ್ನು ಕುರಿತು ಮಾತನಾಡುವಾಗ ಅದರ ಅಮೃತಸುಖದ ವಿತರಣೆಗೆ ದಿನದಿನವೂ - ತಮ್ಮ ಎಂಬತ್ತರ ವೃದ್ಧಾಪ್ಯದಲ್ಲಿಯೂ - ದುಡಿಯುತ್ತಿರುವ, ವ್ಯಾಖ್ಯಾನಕ್ಕೆ ಗುರುಸ್ಥಾನದಲ್ಲಿರುವ ಇಂತಹ ಗಮಕಿಗಳನ್ನು ನೆನೆಯದಿರುವುದು ಸಾಧ್ಯವಲ್ಲ. *ಈ* ಪ್ರತಿಭೆಯನ್ನು ಪಡೆದ ಅವರು ಧನ್ಯರು; ಅದನ್ನು ಆಸ್ವಾದಿಸಿದ ನಾವೂ ಧನ್ಯರೇ. ಅವರ ವಿಚಾರಪರತೆ, ರಸಿಕ ವಿಮರ್ಶೆ, ಸಮಯಸ್ಫೂರ್ತಿ, ಶೈಲಿಯ ವೈಖರಿ, ಜ್ಞಾನ ವಿಸ್ತಾರ - ಇವುಗಳು ಚಿರವಾಗಿ ಉಳಿಯುವಂತೆ ಅವರ ವ್ಯಾಖ್ಯಾನವನ್ನು *ಈ*ಗ ಧ್ವನಿಮುದ್ರಣ ಮಾಡಿಕೊಳ್ಳುತ್ತಿರುವುದು ಇಡೀ ನಾಡಿಗೆ ಒಂದು ಉಪಕಾರ. ಇದಕ್ಕೆ ಸಮ್ಮತಿಸಿ ಮೂರು ತಿಂಗಳಿಂದ ಸತತವಾಗಿ ಶ್ರಮಿಸುತ್ತಿರುವ ಶಾಸ್ತ್ರಿಗಳ ಔದಾರ್ಯ ಪ್ರಶಂಸನೀಯ. ಶಾಸ್ತ್ರಿಗಳು ಪರಮ ಆಸ್ತಿಕರು; ದೈವಭಕ್ತರು. ದೈವ ಮಹಿಮೆಯಲ್ಲಿಯೂ, ದೈವ ವಿಲಾಸದಲ್ಲಿಯೂ ಅಪಾರ ನಂಬಿಕೆಯುಳ್ಳವರು. *ಈ*ಗ ಅವರು ನಡೆಸಿಕೊಟ್ಟಿರುವುದು ಅನ್ಯಾದೃಶ ಜ್ಞಾನಯಜ್ಞ; ಇಂತಹ ಜ್ಞಾನಯಜ್ಞ ಕುಮಾರವ್ಯಾಸನಿಗೆ ಅಚ್ಚುಮೆಚ್ಚಾದ ಭಗವಂತ ಶ್ರೀಕೃಷ್ಣನಿಗೆ ತುಂಬ ಮೆಚ್ಚು[4].

---

1. (a) ತರುಃ ಪ್ರಸೂತೇ ಪುಷ್ಪಾಣಿ ಮರುದ್ವಹತಿ ಸೌರಭಮ್|
   (b) ಸುಂದರ್ಯಾ ಅಪಿ ಲಾವಣ್ಯಂ ಪತಿರ್ಜಾನಾತಿ ನೋ ಪಿತಾ|
2. *ಈ* ದಶವಿಧ ಗಮಕಗಳಿಗೆ ಮಂತ್ರಶಾಸ್ತ್ರದಲ್ಲಿ ದಶವಿಧ ಬಿಂದುಗಳೆಂಬ ಅಂಕಿತವಿದೆ.
3. 'ವಿಮಳಪದನ್ಯಾಸ ನಡೆ' - ಎಂದು ರಾಘವಾಂಕನು ಹರಿಶ್ಚಂದ್ರಕಾವ್ಯದಲ್ಲಿ ಸ್ತುತಿಸಿದ್ದಾನೆ.
4. 'ಜ್ಞಾನಯಜ್ಞೇನ ತೇನಾಹಂ ಇಷ್ಟಃ ಸ್ಯಾಮಿತಿ ಮೇ ಮತಿಃ' - ಭಗವದ್ಗೀತೆ.

# ೧೫. ಉತ್ಸಾಹೋ ಬಲವಾನ್ ಆರ್ಯ...

*ಡಾ. ಎ.ಎಸ್. ವೇಣುಗೋಪಾಲರಾವ್*

ಪೂಜ್ಯ ಶಾಸ್ತ್ರಿಗಳನ್ನು ನಾನು ಮೊದಲು ಕಂಡು ಆಗಲೇ ಮೂವತ್ತು ವರುಷಗಳು ಉರುಳಿಹೋದವು. ಕಾಲನ ತೆರೆ ನನ್ನ ಬದುಕಿನ ಮೇಲೆ ಸರಿಸರಿದು ನನ್ನನ್ನು ಸಾಕಷ್ಟು ಹಣ್ಣು ಮಾಡಿದೆ. ಪ್ರತಿದಿನವೂ ಕಣ್ಣೆದುರಿಗಿನ ಕನ್ನಡಿ ನನ್ನನ್ನು ಹಂಗಿಸುತ್ತದೆ; ಬಾಚಣಿಗೆಯ ಹಲ್ಲುಗಳ ನಡುವೆ ಸಿಲುಕುವ ಬಿಳಿಗೂದಲು ನೀನು ವೃದ್ಧನಾಗುತ್ತಿರುವೆ ಎಂದು ಕೆಣಕುತ್ತದೆ. 'ಆಯುರ್ನಶ್ಯತಿ ಪಶ್ಯತಾಂ... ಕಾಲೋ ಜಗದ್ಭಕ್ಷಕಃ'. ವೃದ್ಧಾಪ್ಯದ ನೆನಪಿನಿಂದ, ಬದುಕಿನ ಸೋಲುಗಳ ಸ್ಮರಣೆಯಿಂದ ಮನಸ್ಸು ಉದಾಸವಾಗುತ್ತದೆ.

ಅಂಥ ಕ್ಷಣಗಳಲ್ಲಿ ನಾನು ಶಾಸ್ತ್ರಿಗಳನ್ನು ನೆನೆಸಿಕೊಂಡು ಧೈರ್ಯತಾಳುತ್ತೇನೆ. ಅವರನ್ನು ಮುಪ್ಪು ಸೋಕಿದಂತಿಲ್ಲ. ಮೊಗದ ಮೈಯಿನ ತೆರೆಗಳು ಮನಸ್ಸನ್ನಂತೂ ಸುರುಳಿಸಿಲ್ಲ. ಎಂಟು ದಶಕಗಳ ಸಾರ್ಥಕ ಜೀವನದ ಅಂಚಿನಲ್ಲೂ ತುಂಬಿದ ಉತ್ಸಾಹ ಅವರ ನರನಾಡಿಗಳಲ್ಲಿ ತುಂಬಿದೆ ಮಾತ್ರವಲ್ಲ ತುಳುಕುತ್ತಿದೆ. ಅದು ನನ್ನಂಥವನ ಮುದಿಮನಸ್ಸನ್ನೂ ಉಲ್ಲಾಸಗೊಳಿಸಿಬಿಡುವಷ್ಟು ಪ್ರಭಾವಶಾಲಿಯಾದುದು. ಶಾಸ್ತ್ರಿಗಳ ಸಾಮೀಪ್ಯ *ಈ* ಉತ್ಸಾಹವನ್ನು ಸಾಂಕ್ರಾಮಿಕದಂತೆ ಹರಡಿಬಿಡುತ್ತದೆ. ನಿಜ. 'ಉತ್ಸಾಹೋ ಬಲವಾನ್ ಆರ್ಯ' ಅದು ಆರ್ಯ ಧರ್ಮ. ಶಾಸ್ತ್ರಿಗಳಂತಹವರನ್ನು ಕಂಡೇ ಆದಿಕವಿ ಅಂತಹ ಸೂಕ್ತಿಯನ್ನು ಸೃಷ್ಟಿಸಿರಬೇಕು.

ಮೂವತ್ತು ವರ್ಷದ ಮಾತು ಹೇಳಿದೆ. ಅರಸೀಕೆರೆಯ ಒಂದು ಸಭೆ. ವಿರಾಟಪರ್ವದ ವಾಚನದ ಮುಕ್ತಾಯದ ಸಮಾರಂಭ. ಹತ್ತು ದಿನದಿಂದ ಸಭೆಯ ಮೂಲೆಯಲ್ಲಿ ಕುಳಿತು, ಗಮಕಿ ವೆಂಕಟೇಶಯ್ಯನವರ ರಂಜನೀಯಗಾಯನವನ್ನೂ, ಶಾಸ್ತ್ರಿಗಳ ತುಂಬು ಉತ್ಸಾಹದ ವ್ಯಾಖ್ಯಾನವನ್ನೂ ಕೇಳಿ ಕೇಳಿ ಹಿಗ್ಗುತ್ತಿದ್ದ ನಾನು ಅಂದು ಶಾಸ್ತ್ರಿಗಳಿಗೆ ಸಮೀಪವಾದೆ. ಅಂದೇ ತಾನೇ ಅಲ್ಲಿನ ಪ್ರೌಢಶಾಲೆಯಲ್ಲಿ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ್ದ, ಇಪ್ಪತ್ತು ವರುಷದ *ಈ* ಪಡ್ಡೆ ಉಪಾಧ್ಯಾಯನನ್ನು ಸಭೆಯ ಅಧ್ಯಕ್ಷ ಕೃಷ್ಣಸ್ವಾಮಿಗಳು ಕೂಗಿ ಕರೆದುಬಿಟ್ಟರು. "ನಾಲ್ಕು ಮಾತು ಹೇಳಿ" ಎಂದು ಮೈಕಿನಲ್ಲಿ ಸಾರಿಯೂ ಬಿಟ್ಟರು. ನನ್ನ ಗೊಣಗಾಟ, ಪ್ರತಿಭಟನೆಗಳು ಪ್ರಯೋಜನಕ್ಕೆ ಬರಲಿಲ್ಲ. ಸ್ವಾಮಿಗಳ ವಾತ್ಸಲ್ಯದ ಕಟ್ಟಾಜ್ಞೆಯ ಜತೆಗೆ, "ಬನ್ನಿ... ಬನ್ನಿ..." ಎಂಬ ಶಾಸ್ತ್ರಿಗಳ ತುಂಬು ನಗೆಯ ಆಹ್ವಾನ.

ಏನು ಹೇಳಿದೆನೋ ಏನು ಬಿಟ್ಟೆನೋ ನೆನಪಿಲ್ಲ. ಆದರೆ ಇಷ್ಟು ದೀರ್ಘಕಾಲದ ಮೇಲೂ ಸ್ಮರಣೆಯಲ್ಲಿ ಭದ್ರವಾಗಿ ಉಳಿದಿರುವುದು ಶಾಸ್ತ್ರಿಗಳು ಮತ್ತೆ ಮತ್ತೆ ತಲೆದೂಗುತ್ತಾ 'ಭೇಷ್... ಭೇಷ್... ಹೌದು... ಹೌದು' ಎನ್ನುತ್ತಿದ್ದುದು. ಅವರ *ಈ* ಅಮೃತಸೇಚನವು ಉತ್ಸಾಹದ ಪಕ್ಷಿಯ ಪಕ್ಷಗಳನ್ನು ಕೆದಕೆದರಿ ಹಾರಿಸುತ್ತಿದ್ದುದು; ನನ್ನ ಉಪನ್ಯಾಸ ರಾತ್ರಿ ಹನ್ನೊಂದರನಂತರವೂ ಬೆಳೆದುದು; ಜನ ಕದಲದೆ ಕುಳಿತದ್ದು. 'ಸೋತ್ಸಾಹಸ್ಯ ಲೋಕೇಽಸ್ಮಿನ್ ನ ಕಿಂಚಿದಪಿ ದುರ್ಲಭಮ್' ಅಲ್ಲವೆ?

ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳು ಉತ್ಸಾಹವಂತರು ಎಂದರೆ ತುಂಬ ಸಪ್ಪೆಯಾಯಿತು. 'ವಿಗ್ರಹವಾನ್ ಉತ್ಸಾಹಃ' ಎಂದರೆ ಸತ್ಯಕ್ಕೆ ಸಮೀಪವಾದೀತು. *ಈ* ಮೂವತ್ತು ವರ್ಷಗಳಲ್ಲಿ *ಈ* ಹಿರಿಯರನ್ನು ಹಲವು ಹತ್ತು ಬಾರಿ ಕಂಡಿದ್ದೇನೆ. ಕಂಡವರನ್ನೂ ಕಂಡಿದ್ದೇನೆ. ನಮ್ಮೆಲ್ಲರ ಏಕಾಭಿಪ್ರಾಯವೆಂದರೆ, ಶಾಸ್ತ್ರಿಗಳ ವ್ಯಾಖ್ಯಾನವು, ಕಾವ್ಯವನ್ನು ಪುನಃ ಕಟ್ಟುತ್ತದೆ ಎಂಬುದು. ಅದೊಂದು ಪುನಃಸೃಷ್ಟಿ. ಕುಮಾರವ್ಯಾಸನೋ, ರಾಘವಾಂಕನೋ, ಲಕ್ಷ್ಮೀಶನೋ ಅಲ್ಲಿ ಜನ್ಮತಾಳುತ್ತಾರೆ. 'ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿವುದು'. ಇಲ್ಲವೇ ಕೃತಯುಗ ಅಲ್ಲವೇ ತ್ರೇತಾಯುಗ. ಶಾಸ್ತ್ರಿಗಳು ಪೀಠಿಕೆಯಾಗಿ ಒಂದೆರಡು ಮಾತು ಹೇಳುವರು. ಗಮಕಿಯತ್ತ ಬೆರಳಾಡಿಸುವರು, ತಲೆಯಾಡಿಸುತ್ತಾ ಸೂಚಿಸುವರು, ಗಮಕಿಯ ವಾಚನವನ್ನು ತಾತ್ಸಾರವಿಲ್ಲದೆ ಮೈಗಿವಿಯಾಗಿ ಕೇಳುವರು. ಗಮಕಿಯ ನಾದ ನಿಲ್ಲುತ್ತಿರುವಂತೆಯೇ, ಶಾಸ್ತ್ರಿಗಳ ವಾಗ್ಝರಿ ಉತ್ಸಾಹದ ಕುದುರೆಯೇರಿ ಬಿಡುವುದು. ಲೀಲಾಜಾಲವಾಗಿ ಕಥಾ ಸನ್ನಿವೇಶವನ್ನು ಬಿಡಿಬಿಡಿಯಾಗಿ ಬಿಡಿಸುತ್ತಾ ರಂಗವಲ್ಲಿ ರಚಿಸುವರು. ಅಲ್ಲಿ ಒಮ್ಮೆ ಸಾಗರದ ಗರ್ಜನೆ, ತೊರೆಯ ಮೊರೆತ, ಮತ್ತೊಮ್ಮೆ ನದಿಯ ಮೃದು ಮಂಜುಳ ದನಿ, ಜಲಪಾತದ ಭೋರ್ಗರೆತ, ತುಂಬಿದ ಸಭೆಯಲ್ಲಿ ಕಾಗೆಗಳ ಬಳಗದ ಕುಕ್ಕು ನೋವಿಗೆ ಬಲಿಯಾದ ಮಾನಿನಿಯ ಆಕ್ರಂದನ, ಕೃಷ್ಣಾರ್ತತೆ, "ಬೇಡ ಬೇಡಾ ಹಸುಳೆ ನೊಂದಹನು... ನನ್ನ ಮಗನಲ್ಲ ನಿನ್ನ ಸಿಸುವಿನೋಪಾದಿಯಲಿ..." ಎಂಬ ಚಂದ್ರಮತೀ ಕ್ರಂದನ... ಇಲ್ಲವೆ "ಧುರದಲೋಡಿದ ಪಾತಕವ ಭೂಸುರರು ಕಳೆದಪರು, ಎನಗೆ ನಮ್ಮರಮನೆಯ ನಾರಿಯರು ಸಾಕು..." ಎಂಬ ಉತ್ತರನ ಅಳ್ಳೆದೆಯ ಬಡಬಡಿಕೆ. ಸನ್ನಿವೇಶ ಹೀಗೆ

ಪದರ ಪದರವಾಗಿ ಬಿಚ್ಚುತ್ತಾ ಹೋಗುವುದು. ಕೇಳುಗನ ಎದುರು ಒಂದು ಯಕ್ಷಲೋಕ ನಿರ್ಮಾಣವಾಗುವುದು. ಅದರ ಬಣ್ಣ ಬೆರಗಿನಲ್ಲಿ ಅವನು ಮೈಮರೆದು ಕರಗುವನು.

ಶಾಸ್ತ್ರಿಗಳ ವ್ಯಾಖ್ಯಾನದ ಸಪ್ತಸ್ವರದ ಮೋಹಕತೆ ಮೈಮರೆಸುವಂತಹುದೇ. ಆದರೆ ಅವರ ಜೀವಧ್ವನಿ ಮೂಲಸ್ವರದ ಶ್ರುತಿಯನ್ನು ನೀವು ಹಿಡಿಯಬೇಕಾದರೆ ಭೀಷ್ಮಪರ್ವದ ವ್ಯಾಖ್ಯಾನ ಕೇಳಬೇಕು. ಅದರಲ್ಲೂ *ಈ* ಭಾಗವತೋತ್ತಮ ಕೃಷ್ಣನ ಪ್ರತಿಜ್ಞೆಯನ್ನೇ ಮರೆಸಿಯೋ, ಮುರಿಸಿಯೋ, ಶಂಖಧಾರಿಯಾದ ಪ್ರಭುವನ್ನು ಚಕ್ರಧಾರಿಯಾಗಿಸಿದ ಪ್ರಸಂಗವನ್ನು ನೆನಪಿಸಿಕೊಳ್ಳಬೇಕು. ಆಗ ಶಾಸ್ತ್ರಿಗಳ ವ್ಯಾಖ್ಯಾನದ ತೇರು ಕಥಾ ಸನ್ನಿವೇಶಕ್ಕೆ ತಕ್ಕ ಹಾಗೆ:

"ಎತ್ತಲೊಲೆದರತ್ತ ಸರಿದುದೆತ್ತ ಜಾರಿದರತ್ತ ತಿರುಗಿದುದೆತ್ತ ಹಿಂಗಿದರೆತ್ತ ಲೌಕಿದರೆತ್ತಲುರುಬಿದರತ್ತಲತ್ತಲು" ತಿರುತಿರುಗುತ್ತ ಭ್ರಮೆಗೊಳಿಸಿಬಿಡುವುದು. ಹರಿಯೂ ಮೈಮರೆವನು, ಹರನೂ ಮೈಮರೆವನು ಎಂದ ಮೇಲೆ ನರನದೇನು ಅತಿಶಯ! ಶಾಸ್ತ್ರಿಗಳು ಆಗ ಕಣ್ಣು ಕೆರಳಿಸುವರು, ಬಾಹುಗಳನ್ನು ಅಪ್ಪಳಿಸುವರು, ಭುಜಗಳನ್ನು ಕುಣಿಸುವರು, ಕೈತಟ್ಟುವರು, ನೆಲ ತಟ್ಟುವರು, ರುದ್ರಗಂಭೀರ ಭೀಷ್ಮರೇ ಆಗಿ ಕಂಗೊಳಿಸುವರು.

**ಆ ಸಭೆಯೊಳ್ ಹರಿ ಕರವಿನ್ಯಾಸಂಗಳ್**
**ನುಡಿಯುನಡಕುವಂತಿರೆ ನುಡಿದಂ**
**ಪಾಸುಂ ಪೊಕ್ಕುಂವೆರದು ಸಭಾಸದನಂ**
**ತೊಳಗಿ ಬೆಳಗೆ ದಂತ ಪ್ರಭೆಗಳ್**

ಪಂಪಭಾರತದ *ಈ* ಪದ್ಯಗಳನ್ನು ಶಾಸ್ತ್ರಿಗಳು ನೆನಪಿಸುವರು. ಆ ರಸಪ್ರವಾಹದಲ್ಲಿ ಕೇಳುಗನು ತೇಲಿ ಹೋಗುವನು.

ಪೂಜ್ಯ ಬಿಂದೂರಾಯರು ಕರ್ಣಪರ್ವ ವಾಚನಮಾಡಿದುದನ್ನು ರಸಾರ್ದ್ರ ಚಿತ್ತನಾಗಿ ಕೇಳಿದ್ದೇನೆ. ಕರ್ಣಾವಸಾನ ಪ್ರಸಂಗದಲ್ಲಿ ಅವರ ಕಣ್ಣಂಚಿನಲ್ಲಿ ಅಯಾಚಿತವಾಗಿ ಕಂಬನಿ ಇಣಿಕಿದುದನ್ನು ಕಂಡಾಗ 'ಅಯ್ಯೋ' ಎಂದು ಭಾವಾವಿಷ್ಟನಾಗಿ ಉದ್ಗರಿಸಿದ್ದೇನೆ- ಸಭೆಯನ್ನು ಮರೆತು. ಶಾಸ್ತ್ರಿಗಳ ಭೀಷ್ಮಪರ್ವ ವ್ಯಾಖ್ಯಾನವನ್ನು ಕಂಡು ಕೇಳಿ, ಅನುಭವಿಸುವಾಗ ನನ್ನ ಮೈನವಿರೇಳುತ್ತದೆ. ಆಗ ಹೊಮ್ಮುವ ಉದ್ಗಾರ- ವಹವ್ವಾ! ಎಂಬುದು. ಶಾಸ್ತ್ರಿಗಳ ವ್ಯಾಖ್ಯಾನ ಕೇಳಿದರೆ ಸಾಲದು, ನೋಡಲೂ ಬೇಕು! ರಾಯರ ವಾಚನದಲ್ಲಿ ಶೋಕ ಸ್ಥಾಯಿ, ಶಾಸ್ತ್ರಿಗಳಲ್ಲಿ ಉತ್ಸಾಹವೇ ನಿಸ್ಸಂದೇಹವಾಗಿ ಸ್ಥಾಯಿ. ಅದೇ ಅವರ ಮೂಲ ಮನೋಧರ್ಮ.

'ವ್ಯಾಖ್ಯಾನವಾಚಸ್ಪತಿ ಲಕ್ಷ್ಮೀಕೇಶವಶಾಸ್ತ್ರಿಗಳು, ಮತ್ತೂರು-ಹೊಸಹಳ್ಳಿ, ಶಿವಮೊಗ್ಗಾ ಜಿಲ್ಲೆ' ಎಂಬುದು ಎಷ್ಟು ಉದ್ದ ಹೆಸರು. ಆದರೆ *ಈ* ಮಹನೀಯರ ಮನಸ್ಸು ಮಗುವಿನಂತೆ ಅದೆಷ್ಟು ಮುಗ್ಧವಾದುದು, ಮುದ್ದಾದುದು ಎಂಬುದನ್ನು ನೆನೆದರೆ ಮನಸ್ಸು ತುಂಬಿ ಬರುತ್ತದೆ. ಅವರು ಶಿವಮೊಗ್ಗೆಯಲ್ಲಿಯೇ ನೆಲಸಿದ್ದಾಗ ಪದೇ ಪದೇ ಅವರ ಮಂಗಳಮೂರ್ತಿಯ ದರ್ಶನ ನನಗಾಗುತ್ತಿತ್ತು. ನನ್ನ ನೀರಸ ಉಪನ್ಯಾಸ ಎಲ್ಲಿಯೇ ಇರಲಿ ಅದು ಹೇಗೋ ಶಾಸ್ತ್ರಿಗಳು ಹಾಜರಿರುತ್ತಿದ್ದರು. ಅದು ಎಂಥದೇ ಸಣ್ಣ ಸಭೆಯಿರಲಿ, ಯಾವುದೋ ಸಣ್ಣ ಶಾಲೆಯ ಸಂಘದ ಆರಂಭೋತ್ಸವವಾದರೂ ಶಾಸ್ತ್ರಿಗಳು ಬಂದು ಕೂಡುತ್ತಿದ್ದರು. ಎಲ್ಲಿ ಕುಳಿತರೂ ಎದ್ದು ಕಾಣುವ ವ್ಯಕ್ತಿಯಷ್ಟೆ ಅವರು! ವೇದಿಕೆಯಲ್ಲಿ ಕುರ್ಚಿಯ ಮೇಲೆ ಕುಳಿತ ನಾನೂ ಆ ಎತ್ತರಕ್ಕೆ ಸರಿದೂಗುವಂಥವನಲ್ಲ. ಅಂಥ ಸಂದರ್ಭದಲ್ಲಿ ನನಗೆ ತುಂಬ ಮುಜುಗರ, ಸಂಕೋಚ. *ಈ* ಮಧ್ಯಾಹ್ನದ ಬಿಸಿಲಿನಲ್ಲಿ *ಈ* ಹಿರಿಯ ಜೀವ ಯಾಕೆ *ಈ* ಸಣ್ಣ ಸಭೆಗೆ ನಡೆದು ಬರುತ್ತಾರೆ ಎಂದು ಕುಗ್ಗಿ ಹೋಗುತ್ತಿದ್ದೆ. ಆದರೆ ನನ್ನನ್ನು ಹರಸುವುದರಲ್ಲಿ, ವಾತ್ಸಲ್ಯದ ನುಡಿಯಾಡುವುದರಲ್ಲಿ, ಅವರು ದಣಿವನ್ನೇ ಕಾಣರು. ಸಭೆಯ ಅನಂತರ, ಅವರನ್ನು ಸಮೀಪಿಸಿ, ನಮಸ್ಕರಿಸಿ ಮಾತನಾಡಿಸಿದರೆ, "ಭೇಷ್ ಮಾತಾಡಿದಿರಿ, ಅವತ್ತು ಏನಾಯಿತು ಅಂತೀರಿ..." ಎಂದು ನನ್ನೊಡನೆಯೇ ಹೆಜ್ಜೆ ಹಾಕುವರು. ದತ್ತಜಯಂತಿ ಸಂದರ್ಭದಲ್ಲಿ "ನೀವು ರತ್ನಾಕರನ ಜೀವನಧರ್ಮ ಅಂತ ಮಾತಾಡಿದಿರಲ್ಲಾ, ಏನು ಭೇಷಾಗಿತ್ರೀ. ನಾನು ಮತ್ತೊಂದು ಸಲ ಗ್ರಂಥ ನೋಡಬೇಕು." "ಅವತ್ತು ಉದ್ದಕ್ಕೂ, ನಿಮ್ಮನ್ನು ಹೊಗಳ್ತಾ ಪಕ್ಕದಲ್ಲಿದ್ದವರಿಗೆ ಹೇಳ್ತಾ ಅದೆಷ್ಟು ದೂರ ಹೋಗಿಬಿಟ್ಟೆರಿ. ಕಡೇಲಿ ಅವರು ಮೆತ್ತಗೆ ಅಂದರು- 'ಆ ಹುಡುಗ ನನ್ನ ಅಳಿಯ ಅಂತ'. ಅವರು ನಿಮ್ಮ ಮಾವನೋರು- ಅಂತ ನನಗೆ ಗೊತ್ತೇ ಇರ್ಲಿಲ್ಲ!" ಎಂದು ಉತ್ಸಾಹದಿಂದ ನಗುವರು. ನಾನು ಮತ್ತಷ್ಟು ಕುಗ್ಗಿ ಹೋಗುತ್ತಿದ್ದೆ. ಎಂದೋ ಏನೋ, ಕಾಲದ ಪ್ರವಾಹದಲ್ಲಿ ನನ್ನ ಮರುಳು ಮಾತುಗಳು ತೇಲಿ ಹೋಗಿವೆ. ಆದರೆ *ಈ* ಪುಣ್ಯಾತ್ಮ ಅದೆಷ್ಟು ಪ್ರೀತಿಯಿಂದ, ಅಕ್ಕರೆಯಿಂದ, ಉತ್ಸಾಹದಿಂದ, ತಮ್ಮ ಹೃದಯದಲ್ಲಿ ನನ್ನ ಮಾತುಗಳನ್ನು ಬಚ್ಚಿಟ್ಟುಕೊಂಡಿದ್ದಾರೆ, ವಾತ್ಸಲ್ಯದಿಂದ ಅವುಗಳನ್ನು ತಡತಡವುತ್ತ ಕಾವು ಕೊಡುತ್ತಿದ್ದಾರೆ, ನನ್ನ ಚೇತನವನ್ನು ಅರಳಿಸುತ್ತಿದ್ದಾರೆ ಎಂದು ನೆನೆದರೆ ಹೃದಯ ತುಂಬಿ ಬರುತ್ತದೆ. 'ಪರಗುಣಪರಮಾಣೂನ್ ಪರ್ವತೀಕೃತ್ಯ ...' ನಿಜವೇ, ಅದು ಸಂತರ ಸ್ವಭಾವ. ಆದರೂ ಇಂತಹ ನಿರ್ಮತ್ಸರ-ಪರಿಶುದ್ಧ-ಅಕ್ಕರೆಯೇ? *ಈ* ಜಗತ್ತಿನಲ್ಲಿ. ಶಾಸ್ತ್ರಿಗಳು ತೀರ ಅಪರೂಪದ ಮಗುಮನಸ್ಸಿನ ಸಾತ್ವಿಕರು, ಸಜ್ಜನರು. ಬಾಲವತ್ ಚರ್ಯೆಯ ಉದಾರಿಗಳು, ಸಂತನ ನಿರ್ಮಲ


ಚಿತ್ತ ಹೊತ್ತವರು. ಶಾಸ್ತ್ರಿಗಳು ಶಿವಮೊಗ್ಗ ಬಿಟ್ಟು ಬೆಂಗಳೂರಿನಲ್ಲಿ ನೆಲಸಿದ ಬಹುಕಾಲದ ಮೇಲೂ ಸಭೆಗಳಲ್ಲಿ ನನ್ನ ಕಣ್ಣು ಅವರನ್ನೇ ಹುಡುಕುತ್ತಿತ್ತು. ಹುಡುಕಿ ದಣಿಯುತ್ತಿತ್ತು. ದಣಿದು ಉದಾಸವಾಗುತ್ತಿತ್ತು. ಈಗೀಗ ವಸ್ತುಸ್ಥಿತಿಗೆ ನಿಧಾನವಾಗಿ ಹೊಂದಿಕೊಳ್ಳುತ್ತಿದ್ದೇನೆ.

ಗಮಕವಾಚನಕ್ಕೆ ವ್ಯಾಖ್ಯಾನದ ಆವಶ್ಯಕತೆಯಿದೆಯೇ ಎಂಬ ಬಗ್ಗೆ ನನ್ನದೇ ನಿರ್ದಿಷ್ಟ ಅಭಿಪ್ರಾಯವಿದೆ. ಅದನ್ನು ಲೇಖನಗಳಲ್ಲಿ, ಸಭೆಗಳಲ್ಲಿ ನಾನು ಉಗ್ರವಾಗಿ ಪ್ರತಿಪಾದಿಸಿದ್ದೇನೆ. ಗಮಕಿಯೇ ತೀರ ಆವಶ್ಯಕ ಎನಿಸಿದರೆ ಅಲ್ಲಲ್ಲಿ ನಾಲ್ಕು ಮಾತು ಹೇಳಿದರೆ ಸಾಕು, ಗಮಕವಿಧಾನವೇ ಕವಿಹೃದಯವನ್ನು ಪ್ರಕಾಶಿಸುವಂತಿರಬೇಕು ಎಂಬ ಅಭಿಪ್ರಾಯಕ್ಕೆ ನಾನು ಅಂಟಿಕೊಂಡಿದ್ದೇನೆ. ಆದರೆ ಶಾಸ್ತ್ರಿಗಳ ವ್ಯಾಖ್ಯಾನವೈಖರಿಗೆ ತಲೆದೂಗುವಾಗ ನನ್ನ ಮನಸ್ಸು ಚಂಚಲವಾಗುತ್ತದೆ. ಮತ್ತೊಮ್ಮೆ ನನ್ನನ್ನು ತಡಕಿ ನೋಡಿಕೊಳ್ಳಲೇ ಎನಿಸುತ್ತದೆ. ಅವರಂತಹ ಭಾವುಕ ವಕ್ತಾರರು ತೀರ ಅಪರೂಪ. ಪಂಡಿತರಾದರೂ ನೂರಾರು ಮಂದಿ ದೊರಕಬಹುದು. ಕಾವ್ಯ ರಸಿಕರಾದ ಸಹೃದಯ ವಕ್ತಾರರು ಈ ಜಗತ್ತಿನಲ್ಲಿ ಎಂದೂ ಅಲ್ಪಸಂಖ್ಯಾತರೇ. ಶಾಸ್ತ್ರಿಗಳಿಗೇ ಪ್ರಿಯವಾದ ಒಂದು ಸೂಕ್ತಿ ಉಂಟು. ನನ್ನಂಥವನ ವಾತ್ಸಲ್ಯದ ಪ್ರಶಂಸೆಗೆ ಅವರು ಅದನ್ನು ಬಳಸುವುದುಂಟು. ಆದರೆ ವಾಸ್ತವವಾಗಿ ಈ ಸೂಕ್ತಿಯು ಶತಶಃ ಅನ್ವಯಿಸುವುದು ಪೂಜ್ಯ ಶಾಸ್ತ್ರಿಗಳಿಗೆ:

**ಶತೇಷು ಜಾಯತೇ ಶೂರಃ**
**ಸಹಸ್ರೇಷು ಚ ಪಂಡಿತಃ |**
**ವಕ್ತಾ ದಶಸಹಸ್ರೇಷು**
**ಶ್ರೋತಾ ಭವತಿ ವಾ ನ ವಾ ||**

ಅಂತಹ ಅಪರೂಪದ ವಕ್ತಾರರು. ಅಷ್ಟೇ ಉದಾತ್ತ ಹೃದಯದ 'ಆರ್ಯ'ರು ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು.

'ಶತಂ ಜೀವ ಶರದೋ ವರ್ಧಮಾನಃ' ಎಂದು ಅವರನ್ನು ಹಾರೈಸುವಷ್ಟು ಹಿರಿಯ ನಾನಲ್ಲ. ನನ್ನ ವಯಸ್ಸು, ಅನುಭವ, ಜ್ಞಾನದ ಪರಿಮಿತಿಯನ್ನು ನಾನು ಚೆನ್ನಾಗಿ ಬಲ್ಲೆ. ಆದರೆ ಕಿರಿಯರಿಂದಲೂ ಹಾರೈಕೆಯನ್ನು ಬಯಸುವುದು, ಅದನ್ನು ಗೌರವಿಸುವುದು ಈ ನಾಡಿನ ಸಂಸ್ಕೃತಿ. 'ಅರ್ಭಕೇಭ್ಯೋ ನಮಃ' ಎಂದ ದೇಶವಲ್ಲವೆ ಇದು? 'ಮಳೆ ಬಂದು ಬೆಳೆ ಬೆಳೆದು ಧರೆ ತಣಿಯಲೆಂದು.... ಬಾಲಕರು ಬಂದಿಹೆವು ಹರಸಲಿಕೆ ಇಂದು' ಎಂದು ಜಾನಪದ ಮಕ್ಕಳು ಹಾಡುವುದನ್ನು ಕೇಳಿರುವಿರಲ್ಲವೆ? ಇದೇ ಸಂಸ್ಕೃತಿಯ ಬೆಂಬಲದಿಂದ ನಾನು ಪೂಜ್ಯ ಶಾಸ್ತ್ರಿಗಳಿಗೆ ಅಖಂಡ ಆಯುಸ್ಸು, ಆರೋಗ್ಯವನ್ನು ಕೋರುತ್ತೇನೆ. ನಾಡಿನ ಅಪೂರ್ವ ಆಸ್ತಿಯಾದ ಈ ಹಿರಿಯ ಜೀವವನ್ನು ಭಗವಂತನು ಬಹುಕಾಲ ನಮಗಾಗಿ ಉಳಿಸಿಕೊಡಲಿ.



*10. ಅಭಿಮಾನಕ್ಕೆ ಶರಣು*

# ೧೬. ನಮ್ಮ ಕಾಲದ ಭೀಷ್ಮ

*ಪ್ರಭು*

ತರೀಕೆರೆಯ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ. ಅಲ್ಲಿ ರಥೋತ್ಸವದ ಸಂಜೆ ಕಾವ್ಯವಾಚನ-ವ್ಯಾಖ್ಯಾನ ಏರ್ಪಡಿಸಿದೆ. ಕಾರ್ಯಕ್ರಮ ಆರಂಭವಾಯಿತು. ಮಂಗಳಪದ್ಯಗಳ ವಾಚನವೂ ಮುಗಿಯಿತು. ಶಾಸ್ತ್ರಿಗಳು ಕಥಾಭಾಗವನ್ನು ಹೇಳೋಣವೆಂದರೆ ಹಿರಿಯರಾರೂ ಬಂದಿರಲಿಲ್ಲ. ಮುಂದುಗಡೆ ಮಕ್ಕಳು ಯಾವಾಗಲೋ ಬಂದು ಜಮಾಯಿಸಿದ್ದಾರೆ. ಕಥಾಭಾಗವನ್ನಂತೂ ಹೇಳುವಂತಿಲ್ಲ. ಮಕ್ಕಳ ಗಲಾಟೆ ನಿಲ್ಲಿಸಲು ಏನಾದರೂ ಹೇಳಲೇಬೇಕು. ಸರಿ, ಒಂದು ಸಮಸ್ಯೆಯೊಂದಿಗೇ ಶಾಸ್ತ್ರಿಗಳು ಅಂದಿನ ವ್ಯಾಖ್ಯಾನ ಪ್ರಾರಂಭಿಸಿದರು. ಮಕ್ಕಳಿಗೆಂದೇ ಆ ಸಮಸ್ಯೆ.

"ಒಂದಷ್ಟು ಗಿಣಿಗಳ ಎರಡು ಹಿಂಡು ಹಾರಿಹೋಗುತ್ತಲಿತ್ತು. ಮುಂದಿನ ಹಿಂಡು ಹಿಂದಿನದಕ್ಕೆ ಹೇಳಿದವು, 'ನಿಮ್ಮಿಂದ ಒಬ್ಬರು ನಮ್ಮ ಹಿಂಡಿಗೆ ಬನ್ನಿ; ಆಗ ನಾವು ನಿಮಗಿಂತ ಎರಡರಷ್ಟಾಗುತ್ತೇವೆ.' ಇದಕ್ಕೆ ಪ್ರತಿಯಾಗಿ ಹಿಂದಿನ ಗಿಳಿಹಿಂಡು ಹೇಳಿದವು, 'ನಿಮ್ಮಿಂದಲೇ ಒಬ್ಬರು ನಮ್ಮೆಡೆಗೆ ಬನ್ನಿ; ಆಗ ನಾವೂ ನೀವೂ ಸಮ ಆಗುವೆವು.' ಹಾಗಾದರೆ ಆ ಎರಡೂ ಹಿಂಡಿನಲ್ಲಿ ಎಷ್ಟೆಷ್ಟು ಗಿಣಿಗಳಿದ್ದವು?"

ಗಲಾಟೆ ನಿಂತಿತು. ಹುಡುಗರಲ್ಲಿ ಲವಲವಿಕೆ ಮೂಡಿತು. ಶಾಸ್ತ್ರಿಗಳು ಉತ್ತರಕ್ಕೆ ಕಾದರು. ತಪ್ಪು ಉತ್ತರಗಳು ಬಂದಾಗ 'ಊಹೂಂ' ಎಂದರು. ಒಳಗೆ ಬರುತ್ತಿದ್ದ ಹಿರಿಯರನ್ನು ಪರಿಚಿತ ಮುಗುಳ್ನಗೆಯಿಂದ ಸ್ವಾಗತಿಸುತ್ತಿದ್ದರು. ಐದಾರು ನಿಮಿಷದನಂತರ ತಾವೇ ಒಗಟನ್ನು ಒಡೆದರು. ಆನಂತರ ಅಂದಿನ ಕಥೆಯ ಆರಂಭ. ಶಾಸ್ತ್ರಿಗಳೇ ಹೇಳಿದಂತೆ ಹೀಗೆಯೇ ಎಷ್ಟೋ ಬಾರಿ ಆಗುವುದುಂಟು. ಸಮಯ ವ್ಯರ್ಥವಾಗದಂತೆ ಆಗೆಲ್ಲ ಇಂತಹುದೇ ಜಾಣ ಪ್ರಶ್ನೆಗಳಿಗೆ ಹುಡುಗರನ್ನು ಹಚ್ಚುವುದು. ಶಾಸ್ತ್ರಿಗಳ ಮಹಾತಲದ ಮಾಯಾ ಸಂಚಿಕೆಯಲ್ಲಿ ಇಂತಹ ಉಪಾಯಗಳು ಅಕ್ಷಯ. ಆ ಕ್ಷಣಗಳಲ್ಲಿ ಅವರು ಮಕ್ಕಳೊಡನೆ ಮಕ್ಕಳು.

ಬಾಲ್ಯದಿಂದಲೂ ಕಠಿಣ ಪರಿಶ್ರಮದಿಂದ ಕಲಿತು ವಿದ್ವಾಂಸರಾದವರು. ವೇದದಲ್ಲಿ, ಶಾಸ್ತ್ರಗಳಲ್ಲಿ, ಸಂಸ್ಕೃತ-ಕನ್ನಡ ಸಾಹಿತ್ಯಗಳಲ್ಲಿ ಪಂಡಿತರು. ಕನ್ನಡದ, ಸಂಸ್ಕೃತದ ಸಾವಿರಾರು ಪದ್ಯಗಳು ಅವರಿಗೆ ಸದಾ ಕಂಠಸ್ಥ. ಹತ್ತು ದಿಕ್ಕಿಗೆ ಚಾಚಿಕೊಂಡ ಅವರ ಆಸಕ್ತಿಗಳಿಂದಾಗಿ ಅವರೊಂದು ವಿದ್ಯೆಯ ಭಂಡಾರ. ತಮ್ಮ ತಾರುಣ್ಯಕಾಲದಲ್ಲಿ ಸಾಹಿತ್ಯಸೇವೆ ಮಾಡುವ ದೀಕ್ಷೆ ತೊಟ್ಟರು. ಕಾವ್ಯವಾಚನಕ್ಕೆ ವ್ಯಾಖ್ಯಾನವನ್ನೂ ಮಾಡಿದರೆ ಹೇಗಿರುತ್ತೆ ಎಂಬ ಕುತೂಹಲವು ಪ್ರಯೋಗದಲ್ಲಿ ಸಫಲವಾದಾಗ ಅದು ಅವರಿಗೊಂದು ಪ್ರವೃತ್ತಿಯೇ ಆಗಿಹೋಯಿತು. ಅವರೇ ಸಂಸ್ಥಾಪಿಸಿದ ಈ ಹೊಸ ಕಾವ್ಯಪ್ರಚಾರ ವೈಖರಿಯು ಅಂದಿನ ಗಣ್ಯ ಸಾಹಿತಿಗಳಿಂದ ಪ್ರಶಂಸೆ ಗಳಿಸಿದಾಗ ಅವರಿಗೆ ಅದೇ ವೃತ್ತಿಯನ್ನು ಜೀವನ ಪರ್ಯಂತ ತಪಸ್ಸಿನಂತೆ ಸಾಧಿಸುವ ಹಂಬಲ ಬೇರೂರಿತು. ೧೯೩೭ರಲ್ಲಿ ಶಿವಮೊಗ್ಗೆಯ ಕರ್ಣಾಟಕ ಸಂಘದಲ್ಲಿ ಶ್ರೀ ಟಿ. ರಾಮಶಾಸ್ತ್ರಿಗಳೊಂದಿಗೆ ಪ್ರಾರಂಭವಾಗಿ ನಿರಂತರ ನಡೆದು ಬಂದ ಕಾವ್ಯಸರಸ್ವತಿಯ ಉಪಾಸನೆಗೆ ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯನವರು, ಡಿ.ವಿ.ಜಿ., ಮಾಸ್ತಿ, ವಿ.ಸೀ. ಮೊದಲಾದವರೆಲ್ಲ ತಲೆದೂಗಿದ್ದಾರೆ. ನಲವತ್ತೈದು ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ನಾಡಿನ ಎಲ್ಲೆಡೆ ಗಮಕ ಪ್ರದರ್ಶನಕ್ಕಾಗಿ ಪ್ರವಾಸ ಮಾಡುತ್ತಾ ಅವಿರತವಾಗಿ ಸಾಹಿತ್ಯ ಹಾಗೂ ಸಂಸ್ಕೃತಿಗಳ ಪ್ರಚಾರ ಮಾಡುತ್ತಿರುವ ಶಾಸ್ತ್ರಿಗಳು ಆಯಾಸ ಕಾಣದ ಜೀವ. ಹೋದೆಡೆಯೆಲ್ಲಾ ಅನುಭವದ ಸಾರವನ್ನೇ ವರ್ಧಿಸಿಕೊಳ್ಳುತ್ತಿರುವ ಶಾಸ್ತ್ರಿಗಳು ಅಸಂಖ್ಯಾತ ಕಥೆಗಳ, ದೃಷ್ಟಾಂತಗಳ, ಗಾದೆಗಳ, ಒಗಟುಗಳ, ತಮಾಷೆಗಳ, ಸುಭಾಷಿತಗಳ ತವನಿಧಿ. ಅವರ ವಾಗ್ಮಿತೆ ಅನನ್ಯಾದೃಶ. ಎಂಬತ್ತರ ಹೊಸ್ತಿಲಿನ ಶಾಸ್ತ್ರಿಗಳು ಈಗಲೂ ವ್ಯಾಖ್ಯಾನಕ್ಕೆ ಕುಳಿತರೆಂದರೆ ಮದುವಣಿಗನ ಲವಲವಿಕೆ ಬಂದುಬಿಡುತ್ತದೆ. ವ್ಯಾಖ್ಯಾನದ ವೇದಿಕೆಯನ್ನು ಅವರು ಏರಿದಾಗ ಯುದ್ಧಕ್ಕೆ ಹೊರಟ ಭೀಷ್ಮರಂತೆ. ಮಾತನಾಡಿ ದಣಿಯರು. ಸರ್ವದಾ ಏನಾದರೊಂದು ಪುಸ್ತಕ ಓದುವುದೇ ಅವರ ನಿತ್ಯದ ತಾಲೀಮು.

ಶ್ರೋತೃಗಳ ಮನೋಭಾವ, ಅಭಿರುಚಿಯ ಸ್ತರಕ್ಕೆ ತಕ್ಕಂತೆ ಅವರು ತಮ್ಮ ವ್ಯಾಖ್ಯಾನಶೈಲಿಯನ್ನು ಅಳವಡಿಸಿಕೊಳ್ಳುವರು. ತಾವು ಹಳೆಯ ತಲೆಮಾರಿಗೆ ಸೇರಿದ್ದರೂ, ಅತ್ಯಾಧುನಿಕ ಜನತೆಯನ್ನೂ 'ಸೈ' ಎನಿಸಬಲ್ಲ ವಾಕ್ಪಟುತ್ವ ಅವರ ಸಹಜಾತ ಸಿದ್ಧಿ. ಅಂತೆಯೇ ಶಿವಮೊಗ್ಗೆಯ ಸೂಟುಬೂಟಿನ ಲಾಯರುಗಳಿಗೆಂದೇ, ಏಳು ವರ್ಷದ ಹಿಂದೆ ಏರ್ಪಡಿಸಿದ್ದ 'ಭಾರತವಾಚನ' ಕಾರ್ಯಕ್ರಮದಲ್ಲಿ ಶಾಸ್ತ್ರಿಗಳು ಬಣ್ಣಿಸಿದ್ದ ಶ್ರೀಕೃಷ್ಣಸಂಧಾನವನ್ನು ಅವರುಗಳು ಇಂದಿಗೂ ಚಪ್ಪರಿಸುತ್ತಾರೆ. ಶ್ರೀಕೃಷ್ಣನು ಸಂಧಾನಕ್ಕೆ ಹೊರಟಾಗ ಕೌರವರ ಬಣದಲ್ಲಿಯೂ, ಪಾಂಡವರ ಸೋದರರಲ್ಲಿಯೂ, ಉದ್ಭವಿಸಿದ

ಆಶಂಕೆಗಳನ್ನು ಲಾಯರುಗಳ ಪಾಯಿಂಟಿನ ರೂಪದಲ್ಲಿಯೇ ಶಾಸ್ತ್ರಿಗಳು ವರ್ಣಿಸಿದಾಗ ಈ ಪುಟ್‌ಲಾಯರಿ ಪ್ರತಿಭೆಗೆ, ಕರೀಕೋಟಿನವರೆಲ್ಲಾ 'ಮೂಗಿನಲ್ಲಿ ಬೆರಳಿಟ್ಟು ಮಕುಟವ ತೂಗಿದ್ದರು.' ಒಂದೇ ಪ್ರಕರಣವನ್ನೇ, ನೆರೆದಿರುವ ಸಭಿಕರಿಗೆ ತಕ್ಕಂತಹ ಶೈಲಿಯಲ್ಲಿ ರುಚಿ ಕಟ್ಟಿಸಬಲ್ಲವರಿವರು.


ಅವರ ಭಾವಾಭಿನಯ ಕುಶಲತೆ ಯಾರನ್ನೂ ಮಂತ್ರಮುಗ್ಧ ಮಾಡಬಲ್ಲದು. ಕಡುಗಲಿ ಅಭಿಮನ್ಯುವಿರಲಿ, ಬಡಾಯಿ ಉತ್ತರಕುಮಾರನಿರಲಿ, ವರಮುನಿ ವಸಿಷ್ಠರಿರಲಿ, ಹಠಮಾರಿ ವಿಶ್ವಾಮಿತ್ರರಿರಲಿ. ಅದೇ ಪಾತ್ರವೇ ನಮ್ಮ ಮುಂದೆ ಓಡಿಯಾಡಿದಂತೆ ಚಿತ್ರಿಸಬಲ್ಲರಿವರು. ಅವರ ಒಂದು ಚಿಟಿಕೆ, ಚಪ್ಪಾಳೆ, ಒಂದು ಕೈ ಬೀಸು, ಭುಜಕುಣಿತ, ತುಟಿಯ ಕೊಂಕು, ಹುಬ್ಬಿನ ಚಲನೆ, ಕಣ್ಣಿನ ಚಲನವಲನಗಳು ನಮಗೆ ಥಟ್ಟನೆ ಆ ಪಾತ್ರ ಆ ಪ್ರಸಂಗ ಆ ಭಾವನೆಯನ್ನು ಸಾಕ್ಷಾತ್ಕರಿಸಬಲ್ಲವು. ಎಲ್ಲದರಲ್ಲಿಯೂ ಏನಾದರೊಂದು ವಿಶೇಷವಿರುತ್ತದೆ ಎಂಬುದನ್ನು ಅವರು ವಿವರಿಸುವಾಗ ದೃಷ್ಟಾಂತವಾಗಿ 'ಕಿಂ ಪನಸಃ ಸಪುಷ್ಪಃ? - ಹೂ ಬಿಡದಿದ್ದರೇನಂತೆ, ಹಲಸಿನ ಮರದಲ್ಲಿ ಬಿಟ್ಟ ಹಣ್ಣಿನ ತೊಳೆಗೇನು ಕುಂದೆ? ತೊಳೆಯನ್ನು ಬಿಡಿಬಿಡಿಸಿ ತಿನ್ನುವಾಗ ಎಷ್ಟು ರುಚಿ' ಎಂದು ಹೇಳುಹೇಳುತ್ತಾ ಅವರು ಬರಿಗೈಯಲ್ಲಿಯೇ ತೊಳೆ ಬಿಡಿಸುತ್ತಿದ್ದಂತೆಯೇ, ನಮಗೆಲ್ಲಾ ಹಲಸಿನ ಹಣ್ಣಿನ ವಾಸನೆಯೇ ಮೂಗಿಗೆ ಅಡರಲಾರಂಭಿಸಿದರೆ ಏನಾಶ್ಚರ್ಯವಿಲ್ಲ. ಕವಿಯ ಭಾವನೆಯನ್ನು ಸ್ವತಃ ಅನುಭವಿಸಿಕೊಂಡು ನಿರೂಪಿಸುತ್ತಿರುವಾಗ ಸಮಗ್ರ ಮಹಾಭಾರತವೇ ಅವರ ಮೈಮುಖಗಳಲ್ಲಿ ಮೂಡಬಲ್ಲದು. 'ಭಾರತ ಮೈಯಲಿ ಕುಣಿವುದು'!

ಶಾಸ್ತ್ರಿಗಳ ನೆನಪು ಅಗಾಧ. ಯಾವ ಸಂವತ್ಸರದಲ್ಲಿ ಊರೊಳಕ್ಕೆ ಹೊಳೆ ನುಗ್ಗಿತ್ತು, ಯಾವ ಯಾವ ಇಸವಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಎಲ್ಲಿ ನಡೆದಾಗ ಯಾವ ಸಾಹಿತಿಗಳು ಬಂದಿದ್ದರು, ಅವರು ತಮ್ಮನ್ನು ಮಾತನಾಡಿಸಿದಾಗ ಏನಂದಿದ್ದರು, ಯಾರ ಮದುವೆಯ ದಿವಸ ಊರಲ್ಲಿ 'ಮುಸಲಧಾರೆ'ಯ ಮಳೆ ಹಿಡಿದಿತ್ತು, ತರೀಕೆರೆಯಲ್ಲಾದ ರೈಲು ಅಪಘಾತದ ವಿಚಾರ, ಯಾವೂರಿನ ಯಾವ ಕಾರ್ಯಕ್ರಮದಲ್ಲಿ ಒಳ್ಳೆ ಭಾಷಣ ಕೇಳಿದ್ದು - ಇಂತಹ ನೂರಾರು ಸಂಗತಿಗಳನ್ನು, ಹರಟೆಯ ರಸಘುಳಿಗೆಯಲ್ಲಿ ಎಲಡಿಕೆಯ ಜತೆ ಅವರೊಡನೆ ಮೆಲ್ಲಬಹುದು. ಅವರ ನೆನಪಿನ ಬುತ್ತಿ ಅಪಾರ, ರಸಪೂರ.

ಶಾಸ್ತ್ರಿಗಳ ಪ್ರಬುದ್ಧವ್ಯಾಖ್ಯಾನಕ್ಕೆ ಅವರ ವಿದ್ವತ್ತು, ವಾಗ್ಮಿತೆಗಳಂತೆಯೇ ಅವರ ಸಮಯಸ್ಫೂರ್ತಿಯದೂ ಸಮಪಾಲು. ತರೀಕೆರೆಯ ಸಾಲುಮರದಮ್ಮನ ದೇವಸ್ಥಾನದ ಆವರಣದಲ್ಲಿ ಹರಿಶ್ಚಂದ್ರಕಾವ್ಯ ಹೇಳುತ್ತಿದ್ದರು. ತನ್ನ ಅಖಂಡ ರಾಜ್ಯಸಂಪತ್ತನ್ನೇ ವಿಶ್ವಾಮಿತ್ರನಿಗೆ ಮಹಾರಾಜನು ಧಾರೆ ಎರೆದು ಕೊಡುವ ಘಟ್ಟ. ಆ ಹೊತ್ತಿಗೆ ಎಲ್ಲಿಂದಲೋ ಲಾರಿಯೊಂದು ಬಂದು ಗೇಟಿನ ಬಳಿ ನಿಂತಿತು. ಡ್ರೈವರ್ ಹಾರನ್ ಮಾಡಹತ್ತಿದ. ರಸಭಂಗವಾಗುವುದೆಂದು ರೇಗಿದ ಜನ ಅತ್ತ ತಿರುಗುವಷ್ಟರಲ್ಲಿ ಶಾಸ್ತ್ರಿಗಳು ವ್ಯಾಖ್ಯಾನಿಸಿದ್ದರು. "ಹರಿಶ್ಚಂದ್ರ ಮಹಾರಾಜ ಹೇಳುತ್ತಿದ್ದಾನೆ, 'ಮಹರ್ಷಿಗಳೇ, ರಾಜ್ಯ, ಕೋಶ ಸಹಿತ ನನ್ನ ಸರ್ವ ಸಂಪತ್ತನ್ನು ತಮಗೆ ದಾನ ಮಾಡಿದ್ದೇನೆ, ಈಗ ಅವೆಲ್ಲವೂ ತಮ್ಮವು. ಹೇಗಿದ್ದರೂ ಲಾರಿಯೂ ಬಂದಿದೆ. ಅದರಲ್ಲಿಯೇ ತಮಗೆ ಒಯ್ಯಬೇಕಾಗಿರುವುದನ್ನೆಲ್ಲಾ ಹೇಳಿದರೆ, ತುಂಬಿಡಲು ಅರಮನೆಯ ಸೇವಕರಿಗೆ ಹೇಳಿಬಿಡುತ್ತೇನೆ'..." ಜನ ಒಂದು ಕ್ಷಣ ಕಕ್ಕಾಬಿಕ್ಕಿಯಾಗಿದ್ದರು. ಆಮೇಲೆ ನಗೆಗಡಲು!

ಸಂಗೀತ ಕಛೇರಿಯೊಂದು ಶಿವಮೊಗ್ಗದಲ್ಲಿ ನಡೆದಾಗ ಕೊನೆಗೆ ಕಲಾವಿದರಿಗೆ ಉಪಚಾರದ ನಾಲ್ಕು ಮಾತಾಡಿರೆಂದು ಅಚಾನಕವಾಗಿ ಶಾಸ್ತ್ರಿಗಳಿಗೆ ಕೋರಿಕೆ ಬಂತು. ಅದೇ ಹೊತ್ತಿಗೆ ಹೊರಗೆ ಮೋಡಕಟ್ಟಿ ಮಳೆ ಬಂದೀತೆಂದು ಜನ ಕಂಗಾಲಾಗುತ್ತಿದ್ದರೆ ಶಾಸ್ತ್ರಿಗಳು ವಂದನಾರ್ಪಣೆಯಲ್ಲಿ ಅದಕ್ಕೆ ಅರ್ಥೈಸಿದ್ದು ಹೀಗೆ, 'ಇವತ್ತಿನ ಸಂಗೀತ ಕಛೇರಿ ನಿಜವಾಗಿ ಅದ್ಭುತ, ದೇವದುರ್ಲಭ. ದೇವಲೋಕದಲ್ಲಿ ಘನಂದಾರಿ ಗಂಧರ್ವರು, ಸಂಗೀತ ಪ್ರವೀಣರು ಇರ್‍ತಾರೆ ಅಂತ ಕೇಳಿದೀವಿ. ಆದ್ರೂ ಇವತ್ತು ಈ ಭೂಲೋಕದಲ್ಲಿ ನಡೆದ ಸಂಗೀತ ಅದಕ್ಕಿಂತಲೂ ಮಿಗಿಲು ಅಂತ ಯಾರೋ ಇಂದ್ರನಿಗೆ ರಿಪೋರ್ಟು ಮಾಡಿದಾರೆ. ಆ ಇಂದ್ರನಿಗೂ ಕುತೂಹಲ ಬಂದು ತನಗೆ ಬಂದ ಸಮಾಚಾರ ನಿಜವೋ ಸುಳ್ಳೋ, ಹೋಗಿ ತಿಳ್ಕೊಂಡು ಬನ್ನಿ ಅಂತ ಈ ಮಳೆಯನ್ನ ಅಟ್ಟಿದ್ದಾನೆ ನೋಡಿರಿ...' ಇಷ್ಟು ಹೇಳುವಷ್ಟರಲ್ಲಿ ಸಿಡಿಲೊಂದು ಅಬ್ಬರಿಸಿತು. ಲೈಟೂ, ಮೈಕೂ ಎಲ್ಲ ಹೋದುವು. ಮಧ್ಯದ ಎರಡು ಮೂರು ಸೆಕೆಂಡಿನಲ್ಲಿಯೇ ಶಾಸ್ತ್ರಿಗಳು ಹೇಳಿ ಮುಗಿಸಿದ್ದರು, '.... ಅಕೋ, ವಜ್ರಾಯುಧ ತಗೊಂಡು ಇಂದ್ರನೇ ಬಂದಾಂತ ಕಾಣುತ್ತೆ'!

ಪ್ರತಿಭಾಸಂಪನ್ನರಾಗಿದ್ದರೂ ಶಾಸ್ತ್ರಿಗಳು ಯಾವಾಗಲೂ ಸದ್ಗುಣಗಳನ್ನೇ ಎಲ್ಲೆಡೆ ಅರಸುವ ಪ್ರವೃತ್ತಿಯವರು. ಪ್ರೈಮರಿ ಶಾಲೆಯ ವಾರ್ಷಿಕೋತ್ಸವವಾದರೂ ಶಾಸ್ತ್ರಿಗಳದು ಕಡ್ಡಾಯ ಹಾಜರಿ.



*11. ವಿಶ್ರಾಂತಿ : ವ್ಯಾಖ್ಯಾನ - ಧ್ಯಾನ*

ಆ ಗಜಿಬಿಜಿಯಲ್ಲಿಯೂ ಇವರು ತದೇಕಚಿತ್ತರಾಗಿ ಕುಳಿತು, ಹಳ್ಳಿಯ ಚಿಕ್ಕಮಕ್ಕಳು ತೊದಲುವ ಪ್ರದರ್ಶನಗಳನ್ನು ಸವಿಯುತ್ತಾ ಅಣುಮಾತ್ರ ಸ್ವಾರಸ್ಯವಿದ್ದರೂ, ಹೃತ್ಪೂರ್ವಕ ತಲೆದೂಗುವರು. ಭಾಷಣಗಳನ್ನು ಕೇಳಲು ತಪ್ಪದೇ ಹೋಗುವುದು; ಅಲ್ಲಿ ಕೇಳಿದ ಮಾತುಗಳನ್ನು ಶಾಸ್ತ್ರಿಗಳೇ ಹೇಳುವಂತೆ 'ಹಂಸ ಕ್ಷೀರ ನ್ಯಾಯ'ದಂತೆ ಸ್ವೀಕರಿಸಿ ತಮ್ಮ ವ್ಯಾಖ್ಯಾನದ ಹೊತ್ತಿನಲ್ಲಿ ಉಲ್ಲೇಖ ಮಾಡುವುದು, ಅವರಲ್ಲಿ ಹಿಂದಿನಿಂದಲೂ ಕಂಡುಬಂದ ಜಾಯಮಾನ. ಕೆಲವು ಒಳ್ಳೆಯ ಮಾತುಗಳನ್ನಂತೂ ದಿನಾಂಕ ಸಹಿತ ನೆನಪಿಟ್ಟಿರುತ್ತಾರೆ.

ತಮ್ಮ ಕಲೆಯ ವೃತ್ತಿಗಾಗಿ ಜೀವನವನ್ನೇ ಮುಡುಪಾಗಿಡುವವರು ವಿರಳ. ಶಾಸ್ತ್ರಿಗಳು ಅಂತಹವರಲ್ಲಿ ಓರ್ವರು. ಅವರಿಗೆ ಬಾಲ್ಯ ಕಾಲದಲ್ಲಿ ಲಕ್ಷಾಂತರ ಬೆಲೆ ಬಾಳುವ 'ಜಹಗೀರು' ಆಸ್ತಿಯಿದ್ದಿತೆಂದು ಕೇಳಿದ್ದೇನೆ. ತಮಗೆ ಹವ್ಯಾಸವಾಗಿ ಅಂಟಿದ ಈ 'ವ್ಯಾಖ್ಯಾನ'ವೆಂಬ ಕಲೆಗಾಗಿ ತಮ್ಮನ್ನು ಪೂರ್ಣ ಸಮರ್ಪಿಸಿಕೊಂಡರು. ಸಾಕಷ್ಟು ಗಮನ ವಹಿಸದ್ದರಿಂದ ಅವರಿಗೆ ವಂಶಪಾರಂಪರ್ಯವಾಗಿ ಬಂದಿದ್ದ ಅಪಾರ ಜಮೀನು, ಮನೆ ಎಲ್ಲ ಆಸ್ತಿಯೂ ಕೈತಪ್ಪಿಯೇ ಬಿಟ್ಟಿತು. ಇಷ್ಟಾದರೂ ಕಲೆಗೆ ತೆತ್ತುಕೊಂಡ ಶಾಸ್ತ್ರಿಗಳ ಉದಾರ ಜೀವ ಮಿಡುಕಲಿಲ್ಲ. ಹತ್ತು ಮಂದಿಯ ದೊಡ್ಡ ಸಂಸಾರ. ವರಮಾನ ಏನೇನೂ ಸಾಲದು. ಇದ್ದ ಆಸ್ತಿಯೆಲ್ಲಾ ಪರಭಾರೆಯಾಯಿತು. ಆದರೂ ಕೃಪಣತೆಗೆ ಪಕ್ಕಾಗದೇ, ಇದ್ದದ್ದರಲ್ಲಿಯೇ ತೃಪ್ತಿಪಟ್ಟು ಕಲಾರಾಧನೆಯನ್ನು ಮಾತ್ರ ತಪ್ಪಿಸದೆ ಜೀವನಯಾತ್ರೆ ಮುಂದುವರೆಸಿದ್ದಾರೆ. ಸರಸ್ವತಿಯನ್ನು ನೆಚ್ಚಿಕೊಂಡದ್ದರಿಂದ ಲಕ್ಷ್ಮಿಯನ್ನು ಕಳಕೊಳ್ಳಬೇಕಾಗಿ ಬಂದರೂ, ಈ ದುರದೃಷ್ಟಕ್ಕೆ ನೋಯದ ನಿರ್ಲಿಪ್ತರಿವರು, ಶಾಸ್ತ್ರಿಗಳು.

ಶಾಸ್ತ್ರಿಗಳ ಕೈಬರೆಹವೋ ಅಪ್ಪಟ ಮುತ್ತಿನಂತಹ ದುಂಡಕ್ಷರಗಳವು. ಇಷ್ಟು ಮುದ್ದಾಗಿ ಬರೆಯುವುದು ಎಲ್ಲಿ ಕಲಿತಿರೆಂದರೆ, ಬಾಲ್ಯದ ಶಾಲಾ ದಿನಗಳನ್ನು ಕಣ್ಣ ಮುಂದೆ ಮೂಡಿಸಿಕೊಳ್ಳುತ್ತಾ ನಿಧಾನ ನುಡಿಯುತ್ತಾರೆ, - "ನಮ್ಮ ಭೆರಿ ಮೇಷ್ಟ್ರು ಚಿಂತಾಮಣಿ ಅವಧಾನಿಗಳು ಮರಳಿನಲ್ಲಿ ತಿದ್ದಿಸಿ ತಿದ್ದಿಸಿ ಕಲಿಸಿದ್ದು. ಆವಾಗ ತಪ್ಪು ಬರೆದರೆ ತುಂಬಾ ಹೊಡೆಯುತ್ತಿದ್ದರು. ಯಾಕೆ ಎಂದು ಗೊತ್ತಾಗುತ್ತಿದ್ದಿಲ್ಲ. ಈಗ ನೀವು ಪ್ರಶ್ನೆ ಹಾಕಿದ ಮೇಲೆ ಕಾರಣ ಗೊತ್ತಾಗುತ್ತಿದೆ..."

ಆಯಾಸವರಿಯದ ದೀರ್ಘ ಬದುಕು, ಶಾಸ್ತ್ರಿಗಳದು. ಈಗ ವೃದ್ಧಾಪ್ಯದಲ್ಲೂ ಎರಡು ಘಂಟೆ, ಮೂರು ಘಂಟೆ ಅಜಸ್ರವ್ಯಾಖ್ಯಾನ ಮಾಡಿದರೂ ದನಿ ಬೀಳುವುದಿಲ್ಲ, ತೊಡೆ ನೋಯುವುದಿಲ್ಲ, ರಟ್ಟೆ ಸೋಲುವುದಿಲ್ಲ. ಮಧ್ಯೆ ಒಂದೆರಡು ತೊಟ್ಟು ಬಿಸಿ ಕಾಫಿ ಕೊಟ್ಟರಾಯಿತು, ಅಷ್ಟೆ! ಕಾರ್ಯಕ್ರಮ ಮುಗಿದೊಡನೆಯೇ 'ಅರಸುಗಳಿಗಿದು ವೀರ...' ಫಲಶ್ರುತಿ ಕೇಳುತ್ತಿರುವಂತೆಯೇ ಶಾಸ್ತ್ರಿಗಳ ಎಲೆಯಡಕೆಯ ಸಂಚಿ ಪ್ರತ್ಯಕ್ಷವಾಗುತ್ತದೆ. ಎಲೆಗೆ ಸುಣ್ಣ ತೀಡುತ್ತಾ ಶ್ರೋತೃಗಳೊಂದಿಗೆ ಬೆರೆತು ಅಂದಿನ ಕಾರ್ಯಕ್ರಮ ಕುರಿತು ಸಲ್ಲಾಪ ಪ್ರಾರಂಭ. ನಾಳೆಯದು ಹೇಗಿರಬೇಕೆಂಬ ಚರ್ಚೆ. ಮುಖದಲ್ಲೊಂದು ಮಾಸದ ನಗುವಿನ ಗೆರೆ; ಬಿಡುವಿನ ವೇಳೆಯಲ್ಲಿ ಒಂದಿಷ್ಟು ಇಸ್ಪೀಟು. ಸಂಪನ್ನ ಬದುಕು, ಮತ್ತೂರಿನ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳದು.

# ೧೭. ಕರ್ನಾಟಕ ಪ್ರವಚನಪಿತಾಮಹ

*ವೈ. ಪ್ರತಿಮಾ ಮೋಹನ್*

**ಪ್ರವಚನ ಪ್ರವೀಣ, ವ್ಯಾಖ್ಯಾನ ವಾಚಸ್ಪತಿ** ಎಂದು ಕೀರ್ತಿಶಾಲಿಗಳಾದ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳಿಗೆ ೧೯೮೫ನೇ ಇಸವಿ, ಏಪ್ರಿಲ್ ೨೨ರಂದು ಎಂಬತ್ತು ವರ್ಷಗಳಾಗಲಿವೆ. ಅವರು ಉತ್ಸಾಹವನ್ನೂ, ಕೇಳಿದಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಜನವನ್ನು ರಂಜಿಸುವ ಚಾತುರ್ಯವನ್ನೂ ಇಂದಿಗೂ ಹೊಂದಿದ್ದಾರೆ. ಗಮಕಿಗಳೊಂದಿಗೆ ಕೂಡಿ ವ್ಯಾಖ್ಯಾನ ಕಲೆಯನ್ನು ಬೆಳೆಸಿದ ಕೀರ್ತಿ ಶಾಸ್ತ್ರಿಗಳಿಗೆ ಸಲ್ಲತಕ್ಕದ್ದು.

ಶಾಸ್ತ್ರಿಗಳ ಜನನ ಮಲೆನಾಡಿನ ಮತ್ತೂರು ಅಗ್ರಹಾರದ ಪ್ರಸಿದ್ಧ ವಿದ್ವಾಂಸರ ವಂಶದಲ್ಲಿ ವಿಶ್ವಾವಸು ಸಂವತ್ಸರ ಚೈತ್ರ ಬಹುಳ ಪಂಚಮಿ ೨೨-೪-೧೯೦೫ರಲ್ಲಿ. ವೇದ ಘನಪಾಠಿ ಚನ್ನಪ್ಪಾವಧಾನಿಗಳು ಶ್ರೀ ಶಾಸ್ತ್ರಿಗಳ ತಂದೆ. ಮತ್ತೂರಿನ ಸಂಸ್ಕೃತ ಪಾಠಶಾಲೆ ಅಧ್ಯಕ್ಷರಾಗಿದ್ದ ಚನ್ನಕೇಶವಶಾಸ್ತ್ರಿಗಳು ಅವರ ಪ್ರಥಮ ಗುರು. ಅನಂತರ ಬೆಂಗಳೂರಿನ ಸಂಸ್ಕೃತ ಕಾಲೇಜಿನಲ್ಲಿ ವೇದಶಾಸ್ತ್ರ ಪಾರಂಗತರಾದರು. ಸಣ್ಣ ವಯಸ್ಸಿನಲ್ಲೇ ಅವರು, ಊರವರನ್ನೆಲ್ಲಾ ಬರಮಾಡಿಕೊಂಡು ಸಾಹಿತ್ಯಸೇವೆ ಮಾಡುತ್ತಿದ್ದರು. ಗಮಕಿಗಳೊಬ್ಬರು ಕಾವ್ಯ ಓದುವುದು, ತಾವು ಅರ್ಥ ವಿವರಣೆ ನೀಡುವುದು. ಈ ರೀತಿ ಗಮಕಿಗಳೊಂದಿಗೆ ಕೂಡಿ ಕಾವ್ಯಪ್ರವಚನ ಮಾಡುವ ಕಲೆಯ ಪ್ರಾರಂಭ ಅವರಿಂದಲೇ ಆಯಿತು.

ಶಾಸ್ತ್ರಿಗಳವರು ವ್ಯಾಖ್ಯಾನ ಕಲೆಯ ಪ್ರಾರಂಭ ಮಾಡಿದ್ದು ಆಕಸ್ಮಿಕ ಮತ್ತು ಸ್ವಾರಸ್ಯಕರ. ೧೯೩೨ರಲ್ಲಿ ಶಾಸ್ತ್ರಿಗಳು ಮತ್ತೂರಿನ ಕರ್ನಾಟಕ ಸಂಘದ ಸದಸ್ಯರಾದರು. ೧೯೩೭ರ ಸಂಘದ ವಾರ್ಷಿಕೋತ್ಸವದಲ್ಲಿ ಶ್ರೀ ಟಿ.ಎಸ್. ವೆಂಕಣ್ಣಯ್ಯನವರಿಂದ ಕುಮಾರವ್ಯಾಸ ಭಾರತದ ಬಗ್ಗೆ ಉಪನ್ಯಾಸ ಕೇಳಿದರು. ಆಗ ಅವರು ಮತ್ತು ಶ್ರೀ ಟಿ.ರಾಮಶಾಸ್ತ್ರಿಗಳು ವಿಚಾರ ಮಾಡಿ, ರಾಮಶಾಸ್ತ್ರಿಗಳು ಗಮಕ ಓದುವುದು, ತಾವು ಅರ್ಥ ವಿವರಣೆ ನೀಡುವುದು ಎಂದು ತೀರ್ಮಾನಿಸಿದರು. ಮಾರನೆಯ ದಿನ ಅವರ ಕಾರ್ಯಕ್ರಮದ ಏರ್ಪಾಡಾಯಿತು. ಆಗ ಅವರಿಗೆ ೩೨ ವಯಸ್ಸು ಮತ್ತು ಶ್ರೀ ರಾಮಶಾಸ್ತ್ರಿಗಳಿಗೆ ೩೭ ವರ್ಷ. ಅಲ್ಲಿಂದ ಮುಂದೆ ಅವರು ವ್ಯಾಖ್ಯಾನ ಕಲೆ ಬೆಳೆಸಿಕೊಂಡರು.

ಮಹಾಭಾರತದಲ್ಲಿನ ವ್ಯಾಖ್ಯಾನಗಳ ಕೆಲವು ಪ್ರಸಂಗಗಳನ್ನು ಇಲ್ಲಿ ಸ್ಮರಿಸಬಹುದು. 'ಬಕಾಸುರವಧೆ'ಯ ಪ್ರಸಂಗ, 'ಅರ್ಜುನನು ಕೈಲಾಸವಾಸಿ ಪರಮೇಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದ ಪ್ರಸಂಗ' ಮುಂತಾದುವುಗಳು ನಮ್ಮ ಸ್ಮರಣೆಯಲ್ಲಿ ಉಳಿಯುವಂಥವು. ಬಕಾಸುರವಧೆಯ ಸಮಯದಲ್ಲಿ ಏಕಚಕ್ರ ನಗರದ ಬ್ರಾಹ್ಮಣನ ಸಂಸಾರದ ವರ್ಣನೆ, ಬ್ರಾಹ್ಮಣ - ಕುಂತಿಯರ ನಡುವಿನ ಸಂವಾದ ಮುಂತಾದುವುಗಳ ಅರ್ಥ ವಿವರಣೆಗಳನ್ನು ಕೇಳುವುದು ಬಹಳ ಸೊಗಸು. ಪಾಶುಪತಾಸ್ತ್ರ ಪಡೆವ ಸಂದರ್ಭದಲ್ಲಿ ಕಿರಾತ-ಅರ್ಜುನರ ನಡುವಣ ಸಂಭಾಷಣೆಯೂ ನೆನಪಿನಲ್ಲಿ ಉಳಿಯುವಂಥದು. ಭಾರತ ಮಾತ್ರವೇ ಅಲ್ಲದೆ, ಕನ್ನಡ ಮತ್ತು ಸಂಸ್ಕೃತ ರಾಮಾಯಣ, ಭಾರತ, ಭಾಗವತ, ಕಾವ್ಯ



*12. ಪೇಟ ಧರಿಸಿರುವವರು ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು - ತಮ್ಮ ಭಾವ ಶ್ರೀ ಕೆ.ಸುಬ್ಬರಾಯ ಅವಧಾನಿಗಳು ಹಾಗೂ ತಮ್ಮ ಪರಿವಾರದೊಂದಿಗೆ*

ಮತ್ತು ನಾಟಕಗಳ ಪ್ರವಚನ ತಪವನ್ನು ನಡೆಸಿ **ಕರ್ನಾಟಕ ಪ್ರವಚನ ಪಿತಾಮಹ** ಎಂದು ಕೀರ್ತಿಶಾಲಿಗಳಾಗಿದ್ದಾರೆ.

ಖ್ಯಾತ ಗಮಕಿಗಳಾದ **ಗಮಕ ಕಲಾ ಕೋಕಿಲ**, ಶ್ರೀ ಎಚ್.ಆರ್. ಕೇಶವಮೂರ್ತಿ, ಶ್ರೀ ಕೆ.ಎಸ್. ವೆಂಕಟೇಶಯ್ಯ, ಶ್ರೀ ವಾಸುದೇವ ರಾವ್, ಶ್ರೀಮತಿ ಅನ್ನಪೂರ್ಣಮ್ಮ, ಶ್ರೀ ರಾಮಶಾಸ್ತ್ರಿಗಳು ಮುಂತಾದವರೊಂದಿಗೆ ಪ್ರವಚನಗಳನ್ನು ಶ್ರೀ ಶಾಸ್ತ್ರಿಗಳು ಮಾಡಿರುವರು. ಶ್ರೀಗಳವರು ೧೯೪೦ರಲ್ಲಿ ಮತ್ತೂರು ಸಂಸ್ಕೃತ ಪಾಠಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಕೈಗೊಂಡರು. ೧೯೫೭ರಿಂದ ಮೂರು ವರ್ಷಕಾಲ ಆಕಾಶವಾಣಿಯಲ್ಲಿ ಕಲಾವಿದರಾಗಿ ಪ್ರಸಾರ ಮಾಡಿದ್ದಾರೆ. ಬೆಂಗಳೂರು, ರಾಯಚೂರು, ಬಳ್ಳಾರಿ, ಗದಗ, ಹೊಸಪೇಟೆ, ರಾಣಿಬೆನ್ನೂರು ಮುಂತಾದೆಡೆಯಲ್ಲೆಲ್ಲಾ ಅವರು ಕಾರ್ಯಕ್ರಮ ಕೊಟ್ಟಿದ್ದಾರೆ. ಎಲ್ಲ ಕಡೆಗಳಲ್ಲೂ ಅವರಿಗೆ ಪ್ರಶಸ್ತಿ, ಸನ್ಮಾನಗಳು ದೊರೆತಿವೆ.

ತಮ್ಮ ಪ್ರವಚನ ಕಲೆಯನ್ನು ತಮ್ಮ ಇಬ್ಬರು ಮಕ್ಕಳಿಗೂ ಕಲಿಸಿರುವರು. ಇಂದಿಗೂ ಅವರಿಗೆ ಆಗಾಗ ಆಹ್ವಾನಗಳು ಬರುತ್ತಿರುತ್ತವೆ. ಮಹಾಭಾರತದಲ್ಲಿನ ಅವರ ಕೆಲವು ಪ್ರಸಂಗಗಳ ವ್ಯಾಖ್ಯಾನಗಳು ಆಗಲೇ ಧ್ವನಿಮುದ್ರಿತವಾಗಿವೆ. ಈಗ ಸಮಗ್ರ ಭಾರತದ ಧ್ವನಿ ಮುದ್ರಣವಾಗುತ್ತಿರುವುದು ಮಹತ್ತರವಾದದ್ದು. ಈ ಎಂಬತ್ತನೆಯ ವಯಸ್ಸಿನಲ್ಲೂ ಈ ಕಲೆಯ ಬಗ್ಗೆ ಅವರಿಗಿರುವ ಉತ್ಸಾಹ, ಆಸಕ್ತಿಗಳು ವರ್ಣಿಸಲಸಾಧ್ಯ. ಇನ್ನೂ ಹೆಚ್ಚು ಹೆಚ್ಚು ವ್ಯಾಖ್ಯಾನ ಕಲೆಯನ್ನು ಬೆಳೆಸಿ, ಪೋಷಿಸಿ ಅನೇಕಾನೇಕ ಜನರು ಅವರ ಕಲೆಯನ್ನು ಕೇಳಿ ತಿಳಿದು, ನಲಿಯುವಂತಾಗಲಿ, ಅವರ ಕೀರ್ತಿ ಮತ್ತು ಅವರ ಕಲೆ ಇನ್ನೂ ಹೆಚ್ಚು ಬೆಳೆಯುವಂತಾಗಲಿ- ಎಂದು ನಮ್ಮಂತಹ ಅವರ ಅನೇಕ ಅಭಿಮಾನಿಗಳ ಹಾರೈಕೆ.

## ೧೮. ವ್ಯಾಖ್ಯಾನ ವಾಚಸ್ಪತಿ

***ಬಿ.ಎಸ್.ಎಸ್. ಕೌಶಿಕ್***

ಕರುನಾಡ ಭೂಸುರರ, ತ್ರಿಮತಸ್ಥ ವರ್ಗದೊಳು
ಉರುವ ಮೇಧಾವಿಗಳು, ಪೂಜ್ಯರಾಗೆಸೆದಿರ್ಪ
ಮೆರೆವ ಶಾಖೆಯು ಕೌಶಿಕ ಸಂಕೇತಿಗಳು,
ಜಗದೊಳೆಲ್ಲೆಡೆಯೊಳ್ನೆಲಸಿರ್ಪರು
ಪರಮ ವೈದಿಕ ಧರ್ಮದಾಚಾರ ನಿರತರಹ-
ರಿರುವ ತುಂಗಾತೀರ ವಾಸಿಗಳು ತಾವಾಗಿ
ಪರುಷಸಮ ಮತ್ತೂರು, ಹೊಸಹಳ್ಳಿ
ನಲ್ವೆಸರ ಕ್ಷೇತ್ರಗಳ ಬೆಳಗಿರ್ಪರು ೧

ಉರುವ ವಾಚನ ಕಲೆಯ ಕೋವಿದರುಮಲ್ಲದೆಯೆ
ಶಿರದೂಗಿ ಪಂಡಿತರು, ಪಾಮರರು ಮೆಚ್ಚುವೊಲು
ಸರಸಪೂರಿತಮಪ್ಪ ವ್ಯಾಖ್ಯಾನಮಂಗೈವ ವಾಗ್ಮಿಗಳು ಇಲ್ಲಿರ್ಪರು
ಪಿರಿಯರವರೊಳು ಮಹಾ ವ್ಯಾಖ್ಯಾನ ಸಿಂಹರಹ
ಸಿರಿಮೊಗರು ಲಕ್ಷ್ಮೀಕೇಶವ ಶಾಸ್ತ್ರಿಗಳು, ನಾಡ
ಪರಮ ವ್ಯಾಖ್ಯಾತೃಗಳ ವರ್ಗಕ್ಕೆ ಭೂಷಣರು
ತಾವಾಗಿ ಶೋಭಿಸಿಹರು ೨

ಉರುವ ಸಂಸ್ಕೃತ ಮೇಣು, ಭಾಷೆ ಕನ್ನಡದೊಳಗೆ
ಪರಮ ಪಾಂಡಿತ್ಯವನು ಗಳಿಸಿರುವ ಶಾಸ್ತ್ರಿಗಳು
ಕರುನಾಡೊಳೆಲ್ಲಕಡೆ ಸಂಚರಿಸಿ, ವ್ಯಾಖ್ಯಾನ ವೈಖರಿಯ ಹಿರಿಮೆಗಳನು
ಹರುಷದಿಂ ಶ್ರವಣಿಸುವ ಸಹೃದಯಾಸ್ತಿಕ ಜನರ
ವರ ಸಭೆಯ ಪಂಡಿತರ, ಸಾಹಿತ್ಯ ಪರಿಣತರ
ಸರುವೇಂದ್ರಿಯಂಗಳಂ ತಮ್ಮೆಡೆಗೆ ಸೆಳೆಗೊಂಬ
ಕೌಶಲವ ಮೆರೆಸಿರ್ಪರು ೩

ಇಂದುವರೆಗುಂ, ಗಮಕ ಕಲೆಯ ಅಭಿಮಾನಿಗಳು
ಮುಂದೆ ತಾವೈತಂದು ಕೈಕೊಳ್ಳದಿಹ, ಬಹಳ
ಚಂದವಹ ಸ್ತುತ್ಯರ್ಹ ಯೋಜನೆಯು ತಾನೆನಿಸಿಕೊಳ್ಳಲಿಹ
ಧ್ವನಿಮುದ್ರಣ
ತಂದೆ ಕುವರವ್ಯಾಸ ಭಾರತದ ಪೂರ್ಣ ಸೊಬ
ಗಿಂದಿನ ಸಮಾಜಕ್ಕೂ, ಮುಂಬರುವ ಪೀಳಿಗನು
ಒಂದು ಮಹದಾಸ್ತಿಯಾಗಿಪ ನಿಮ್ಮ ಈ ಕಾರ್ಯ
ಚಿರನೆನಹನೀವಸೇವೆ ೪

ಸೊಗಸಿನೀ ಧ್ವನಿ ಮುದ್ರಣಕೆ ತಮ್ಮ ಸುಶ್ರಾವ್ಯ
ಮಿಗಿಲೆನಿಪ ಕಂಠದಾನವಗೈದು ವಾಚಿಸಿಹ
ನಗುಮೊಗರು ವರಗಮಕಿ ಎಚ್.ಆರ್.ಕೇಶವಮೂರ್ತಿ
ದಿಟಕು ಸತ್ಪಾತ್ರರಿಹರು
ಬಗೆ ಬಗೆಯ ರಸಭಾವಗಳ ಶ್ರೋತೃಗಳ ಸಭೆಗೆ
ಬಿಗುಹು ವಾಗ್ಝರಿಯಿಂದ, ಪಾಂಡಿತ್ಯ ಪ್ರಭೆಯಿಂದ
ಝಗ ಝಗಿಸುವೊಲು ತೋರ್ಪ ವ್ಯಾಖ್ಯಾತೃ ಶಾಸ್ತ್ರಿಗಳು,
ಮುದ್ರಣಕೆ ಮೆರಗೀವರು ೫

ಗಮಕಿಗಳು ಸಾಮಾನ್ಯರಿರಲಿ, ಕೋವಿದರಿರಲಿ
ಸಮನಸರು ಲಕ್ಷ್ಮೀಕೇಶವ ಶಾಸ್ತ್ರಿಗಳು ಗೈವ
ವಿಮಲವಹ ವ್ಯಾಖ್ಯಾನ, ರಸಪೂರ್ಣವಾಗಿರುತ, ಗಮಕಿಗಂ
ಶ್ರಾವಕರಿಗುಂ
ಅಮಮ ಚೇತೋಹಾರಿಯಾಗಿರುತ, ಪೇಳ್ವ ಕಥೆ
ತಮ ತಮ್ಮ ಕಣ್ಮುಂದೆ ನಡೆದಿಹುದೊ ಎನಿಪಂತೆ
ಝಮಕು ಬಿನ್ನಾಣಗಳ ಮೆರೆವವರ ಪಾಂಡಿತ್ಯ
ಪೂರ್ಣತೆಯ ತೋರಿ ಮೆರೆಗುಂ ೬

ಒಟ್ಟಿನಲಿ ಲಕ್ಷ್ಮೀಕೇಶವಶಾಸ್ತ್ರಿಗಳು ಗೈವ
ಮಟ್ಟದಲಿ ವ್ಯಾಖ್ಯಾನಗೈವವರು ಬಹು ವಿರಳ
ದಿಟ್ಟವಹ ಇವರ, ವರ ವ್ಯಾಖ್ಯಾನ ಪಹಣಿಯದು,
ನಮ್ಮ ವ್ಯಾಖ್ಯಾತೃ ಕುಲಕೆ|
ಕೊಟ್ಟಿರುವ ಪೊಸಶಕೆಯ ಕೊಡುಗೆಯಾಗೆಸೆದಿಹುದು
ಘಟ್ಟಿಗರು ವ್ಯಾಖ್ಯಾನ ಮಾರ್ತಾಂಡರೆನಿಪಿವರ
ಕೊಟ್ಟು ಪೂರ್ಣಾಯುಷವ ಆರೋಗ್ಯ ಶಾಂತಿಯನು ವೀರನಾರಣ
ಪೊರೆಯಲಿ ೭

## ೧೯. ತುಂಗಾತೀರದಿಂದ ತೆಂಗಿನ ಬೀಡಿಗೆ...

*ಬಿ.ಜಿ. ಶ್ರೀರಂಗಯ್ಯ*

ಅವರು ಬಂದರು, ಹಾಡಿದರು, ಮಾತನಾಡಿದರು, ಗೆದ್ದುಕೊಂಡರು!

೧೯೫೩ನೇ ವರ್ಷದ ಫಾಲ್ಗುಣಮಾಸ. ಒಂದು ವಿವಾಹದ ನಿಮಿತ್ತ ಶಿವಮೊಗ್ಗೆಗೆ ಹೋದೆ. ವರ ನನ್ನ ಅಣ್ಣಂದಿರ ಮೈದುನ. ಖ್ಯಾತ ಸಂಗೀತ ವಿದ್ವಾಂಸರೂ, ಕೀರ್ತನ ಕೋವಿದರೂ ಆಗಿದ್ದ ಶ್ರೀ ಕೆ. ರಾಮದಾಸರು ಆತನ ಚಿಕ್ಕಪ್ಪ. ನಾಟಕ ಸಾಹಿತ್ಯ ಸಂಗೀತಗಳಲ್ಲಿ ಆಸಕ್ತನಾದ ನನ್ನ ಬಗ್ಗೆ ಅವರಿಗೆ ತುಂಬಾ ವಿಶ್ವಾಸ. ವಿವಾಹದ ಕಲಾಪಗಳೆಲ್ಲ ಮುಗಿದವು. ಭೂರಿ ಭೋಜನವೂ ಆಯಿತು. ಸಂಜೆ ಬೀಗರಿಂದ ಕಾಫಿ ಉಪಚಾರವನ್ನೂ ಮಾಡಿಸಿಕೊಂಡಾಯಿತು. ನನಗೆ ಹೊತ್ತು ಕಳೆಯುವುದೇ ಕಷ್ಟವಾಗಿತ್ತು. ಆಗ ರಾಮದಾಸರು - "ಬಾರಯ್ಯ, ಇಲ್ಲೇನು ಮಾಡುತ್ತಿ? ಕಾಡು ಹರಟೆ, ಇಸ್ಪೀಟು ನಿನಗೂ ಸೇರುವುದಿಲ್ಲ. ನಮ್ಮಿಬ್ಬರಿಗೂ ಇಷ್ಟವಾದ ಕಾರ್ಯಕ್ರಮ ನಡೆಯುತ್ತಿದೆಯಂತೆ, ಸುಬ್ರಾಮು ಹೇಳಿದ. ಅಲ್ಲಿಗೆ ಹೋಗೋಣ ನಡಿ- " ಎಂದು ಕರೆದರು. ಆ ಸಮೂಹದಲ್ಲಿ ಅವರು ನನ್ನನ್ನೇ ತಮ್ಮ ಜತೆಗೆ ಆರಿಸಿಕೊಂಡದ್ದು ನನಗೆ ಸಾಮಾನ್ಯ ಸನ್ಮಾನವೆ? ಒಳಗೊಳಗೇ ಹಿಗ್ಗುತ್ತ ಅವರನ್ನು ಹಿಂಬಾಲಿಸಿದೆ. ದಾರಿಯಲ್ಲಿ ಯಾರನ್ನೊ, "ಪಿ.ಡಬ್ಲ್ಯು.ಡಿ. ಕಾಲೋನಿ ಎಲ್ಲಿದೆ?" ಎಂದು ವಿಚಾರಿಸಿಕೊಂಡು ಅತ್ತ ಹೆಜ್ಜೆ ಹಾಕಿದೆವು. ೧೫-೨೦ ಮಾರು ನಡೆಯುವುದರೊಳಗೆ ಧ್ವನಿವರ್ಧಕ "ನಿಶ್ಚಿತ ಕಾರ್ಯಕ್ರಮದಂತೆ ಶ್ರೀ ವೆಂಕಟೇಶಯ್ಯನವರಿಂದ ಭಾರತ ವಾಚನ, ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳವರಿಂದ ವ್ಯಾಖ್ಯಾನ ಈಗ ಪ್ರಾರಂಭವಾಗಲಿದೆ. ಈ ದಿನದ ಕಥಾಭಾಗ 'ದುರ್ವಾಸಾತಿಥ್ಯ'. ಸರ್ವರಿಗೂ ಸುಸ್ವಾಗತ" ಎಂಬ ನುಡಿಗಳಿಂದ ನಮ್ಮನ್ನು ಎದುರುಗೊಂಡಿತು. ಗಮ್ಯಸ್ಥಾನ ಹತ್ತಿರವಾದಂತೆ ವಿದ್ಯುದ್ದೀಪಗಳಿಂದ ಬೆಳಗುವ ಹಸಿರುವಾಣಿ ಚಪ್ಪರವನ್ನು ಕಂಡೆವು. ಅದರಡಿಯಲ್ಲಿ ವೇದಿಕೆಯ ಮೇಲೆ ಧ್ವನಿವರ್ಧಕಗಳನ್ನು ಆನಿಸಿಟ್ಟ ಎರಡು ವಾಟುಮೇಜುಗಳು. ಅವುಗಳ ಹಿಂದೆ ವೇದಿಕೆಯನ್ನು ತುಂಬಿಕೊಂಡು ಭೂಷಣಪ್ರಾಯರಾಗಿ ಆಸನಸ್ಥರಾಗಿದ್ದ ಇಬ್ಬರು ಶ್ವೇತವಸನಧಾರಿಗಳು.


ನಾವೂ ಶ್ರೋತೃವೃಂದದಲ್ಲಿ ಬೆರೆತೆವು. ಮಂದಮಂದವಾಗಿ ಶ್ರುತಿ ಪ್ರವಹಿಸತೊಡಗಿತು. ಹಿಂದೆಯೇ ಅದಕ್ಕೆ ಮೇಳವಿಸಿ 'ಶ್ರೀ ವನಿತೆಯರಸನೆ...' ಎಂಬ ಪ್ರಾರ್ಥನಾ ಪದ್ಯದ ವಾಚನ ಪ್ರಾರಂಭವಾಯಿತು. ಆ ಗಂಭೀರ ನಾದ ಕಿವಿಯನ್ನು ಹೊಗುತ್ತಿದ್ದಂತೆಯೇ ಪುಳಕಿತನಾದೆ. ಗೌಳಕಂಠದಿಂದ ಹೊರ ಹೊಮ್ಮುವ ರಾಗ ಸಂಚಾರ, ಸ್ಫುಟವಾದ ಪದೋಚ್ಚಾರ. ಷಟ್ಪದಿಯ ಲಯ, ಗತ್ತು, ಶಬ್ದಪ್ರಯೋಗಗಳ ವಿನ್ಯಾಸದ ಸುಭಗ ನಡೆ. ಅಪಾರ್ಥಕ್ಕೆಡೆಗೊಡದ ಪದವಿಭಾಗ! ಒಮ್ಮೆಲೇ, 'ಸೊಗಸಾಗಿ ಹಾಡಬಲ್ಲವರು, ಉತ್ತಮವಾಗಿ ವಾಚಿಸಬಲ್ಲವರು' ಎನ್ನಿಸಿತು.

ಅವರನ್ನು ದಿಟ್ಟಿಸಿನೋಡಿದೆ. ಭಸ್ಮಭೂಷಿತವಾದ ಲಲಾಟದಲ್ಲಿ ಭ್ರೂಮಧ್ಯೆ ಕುಂಕುಮ. ನೀಳನಾಸಿಕವನ್ನು ಆತುಕೊಂಡ ಚಷ್ಮ. ಅದರಡಿಯಲ್ಲಿ ಸೊಗಸಾಗಿ ತಿದ್ದಿದ ಮೀಸೆ. ಕಿವಿಯಲ್ಲಿ ಮಿಂಚುವ ಹತ್ತಕಡಕು. ಧವಳ ಅಂಗವಸ್ತ್ರದಿಂದ ಆಚ್ಛಾದಿತವಾದ ನೆಟ್ಟನೆಯ ದೇಹ. ಗೌರವವನ್ನು ಉಕ್ಕಿಸುವ ಆಕಾರ! ಅಂಗಚೇಷ್ಟೆ ಮಾಡದೆ, ನಾಭಿಯಿಂದ ಹರಿದು ಬರುತ್ತಿದೆಯೇನೋ ಎನ್ನುವಂತೆ ನಿರರ್ಗಳವಾಗಿ ವಿವಿಧ ರಾಗಗಳಲ್ಲಿ ಮುಂದಿನ ಪದ್ಯಗಳನ್ನು ಓದುತ್ತಿದ್ದಾರೆ. ಅದು ಮುಂದುವರಿದ ಹಾಗೆಲ್ಲಾ ವಾಚನದ ಮೇಲೆ ಅವರಿಗಿರುವ ಪ್ರಭುತ್ವವನ್ನು ನಾನು ಗುರ್ತಿಸಿದೆ. ರಾಮದಾಸರತ್ತ ನೋಡಿದೆ. ಅವರೂ ಎವೆ ಮುಚ್ಚಿ ತಲೆದೂಗುತ್ತಿದ್ದಾರೆ! ಅವರೇ ಮೆಚ್ಚಿದ ಮೇಲೆ ಇನ್ನೇನಿದೆ? ಅವರೇ ಗಮಕಿ ವೆಂಕಟೇಶಯ್ಯನವರೆಂದು ವಿದಿತವಾಯಿತು.

ಕಥಾಸಂಧಿಯನ್ನು ಓದಿ ನಿಲ್ಲಿಸಿದ ತಕ್ಷಣ ಅವರ ಎಡ ಬದಿಯಲ್ಲಿದ್ದವರು- ಕೀಲಿ ಕೊಟ್ಟು ಚಾಲು ಮಾಡಿದಂತೆ ಪುಸ್ತಕಾವಲೋಕನ ಮಾಡುತ್ತಿದ್ದವರು ತಲೆ ಎತ್ತಿ ಕಾಳಿದಾಸನ 'ವಾಗರ್ಥಾವಿವ ಸಂಪೃಕ್ತೌ....' ಎಂಬ ಮಂಗಳಾಚರಣೆಯ ಶ್ಲೋಕವನ್ನು ಅಷ್ಟೇನೂ ಶ್ರಾವ್ಯವಲ್ಲದ ದನಿಯಲ್ಲಿ ಸಾಂಗತ್ಯದ ಧಾಟಿಯಲ್ಲಿ ಹೇಳಿ ಅರ್ಥ ವಿನ್ಯಾಸ ಮಾಡಿ, ಕೈಮುಗಿದು ಪೂರ್ವಕಥಾ ಸಂದರ್ಭವನ್ನು ವಿವರಿಸತೊಡಗಿದರು. ಆ ಕ್ಷಣಕ್ಕೆ ಅವರ ಮಾತಿಗಿಂತ ಅವರ ಆಕಾರ ನನ್ನನ್ನು ಆಕರ್ಷಿಸಿತು. ಗುಂಡು ಗುಂಡಾದ, ಎತ್ತರಕ್ಕೆ ತಕ್ಕ ಗಾತ್ರದ ಆಳ್ತನ. ತ್ರಿಪುಂಡ್ರ ಧಾರಿಯಾದ ವಿಶಾಲ ಹಣೆ, ಬೆಳಕಿಗೆ ಫಳಫಳಿಸುವ ನೆತ್ತಿ, ಅಗಲವಾದ ಮುಖ, ಮಿಂಚು ಸೂಸುವ ಕಣ್ಣು, ತಾಂಬೂಲರಾಗರಂಜಿತವಾದ ತುಟಿ, ಕೊರಳಿನಿಂದ ಎರಡು ಕಡೆಗೆ ಇಳಿ ಬಿಟ್ಟ ಬಿಳಿ ಶಲ್ಯ, ತುಂಡು ತೋಳಿನ ಅಂಗಿ, ಕೇಳುಗರನ್ನು ನೇರವಾಗಿ ಮಂದಹಾಸದಿಂದ ಅವಲೋಕಿಸುವ ಸುಟಿ, ಆಡು ಭಾಷೆಯಲ್ಲೇ ಸ್ವಾರಸ್ಯವಾಗಿ ಅನುವಾದ ಮಾಡುವ ಧಾಟಿ, ಕುಳಿತಲ್ಲಿಯೇ ನುಲಿದಾಡುತ್ತ, ಉತ್ಸಾಹದ ಚಿಲುಮೆಯಂತೆ ಚುರುಕಾಗಿದ್ದ ಅವರು ಬೇಗ ನನಗೆ - ವಯೋಭೇದ ಮೀರಿ- ಸರಸದವರಾಗಿ ಭಾಸವಾದರು. ಅವರೇ ವ್ಯಾಖ್ಯಾನ ಪಟು ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳೆಂದು ಮತ್ತೊಮ್ಮೆ ನನಗೆ ಪರಿಚಯ ಮಾಡಿಕೊಡಬೇಕಾಗಲಿಲ್ಲ.

ತಮ್ಮತಮ್ಮ ಕಲೆಗಳಲ್ಲಿ ಪರಿಣತರಾದ ಅವರಿಬ್ಬರ ಪ್ರಥಮ ದರ್ಶನ ನನಗೆ ಆದದ್ದು ಹಾಗೆ! ಭಾರತ ವಾಚನಕ್ಕೆ ಇಬ್ಬರೇಕೆ ಎಂದು ಅನುಮಾನಿಸಿ ಪದ್ಯಗಳ ತಾತ್ಪರ್ಯ ಮಾತ್ರ ಹೇಳುತ್ತಾರೇನೋ ಎಂದು ಭಾವಿಸಿದ್ದ ನನಗೆ, ಅಂದಿನ ಕಾರ್ಯಕ್ರಮ ಮುಗಿಯುವುದರೊಳಗೆ - ಹೀಗೆ ಓದುವವರು, ಹೀಗೆ ವ್ಯಾಖ್ಯಾನ ಮಾಡುವವರು - ಇಬ್ಬರಿರಬೇಕು ಅನ್ನಿಸಿತು. ಅಷ್ಟೇ ಅಲ್ಲ. ಇವರಿಬ್ಬರೇ ಇರಬೇಕು ಎಂದುಕೊಂಡೆ. ಅಂದು ಅವರ ಹೊಂದಾಣಿಕೆಯ ವ್ಯಾಖ್ಯಾನ-ವಾಚನ ನನ್ನ ಮೇಲೆ ಅಂಥ ಪ್ರಭಾವ ಬೀರಿದವು.

ಈ ಹಿಂದೆ ತಿರುಪತಿ ರಥೋತ್ಸವ ಕಾಲದಲ್ಲಿ ನಡೆಯುವ ಚಂಪಕೋತ್ಸವ ಸಂದರ್ಭದಲ್ಲಿ ಶ್ರೀ ಕೃಷ್ಣಗಿರಿ ಕೃಷ್ಣರಾಯರ ವಾಚನ ಕೇಳಿದ್ದೆ. ಸಂಸ್ಕೃತಿ ಪ್ರಚಾರ ಯೋಜನೆಯ ಅಂಗವಾಗಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರ ವಾಚನ ಕೇಳಿ ಬೆರಗಾಗಿದ್ದೆ. ಅನುವಾದವಿಲ್ಲದ ವಾಚನಗಳು ಅವು. ಶುದ್ಧ ಗಮಕ ವಾಚನ. ವಾಚನವಿಲ್ಲದ ವ್ಯಾಖ್ಯಾನವನ್ನೂ ಕೇಳಿದ್ದುಂಟು. ವಾಲ್ಮೀಕಿ ಹೃದಯ ಪ್ರಕಾಶರೆಂದು ಪ್ರಕೀರ್ತಿತರಾದ ವೇ. ಹಂದನಕೆರೆ ಶಾಮಣ್ಣನವರ ಹೃದಯಂಗಮವಾದ ರಾಮಾಯಣ ಪ್ರವಚನಕ್ಕೆ ಮಾರು ಹೋಗಿದ್ದೆ. ಹರಿಕಥಾ ಕಾಲಕ್ಷೇಪಕ್ಕೆ ಒಗ್ಗಿ ಹೋಗಿದ್ದ ನಮ್ಮೂರವರಿಗೆ ಋಷಿ ಸದೃಶರಾದ ಅವರ ವಾಣಿಯನ್ನು ಕೇಳಿಸಬೇಕೆಂದು ಆಸೆಯಾಗಿತ್ತು. ಆದರೆ ಅವರು ಶಾಶ್ವತವಾಗಿ ನಮ್ಮನ್ನು ಅಗಲಿ ಹೋದರು. ಹಾಗಾಗಿ ವೈವಿಧ್ಯಮಯವಾದ, ಇತ್ತ ಕಡೆಗೆ ಹೊಸದು ಎನ್ನಬಹುದಾದ ಇಂತಹ



*13. ಶಾಸ್ತ್ರಿಗಳ ಮನೆ : ಮತ್ತೂರು*

ಕಾರ್ಯಕ್ರಮ ನಮ್ಮೂರಿನಲ್ಲಿ ಪ್ರಚಲಿತವಾಗಿರಲಿಲ್ಲ. ಇವರನ್ನಾದರೂ ಆಹ್ವಾನಿಸಿ ಈ ವಿನೂತನ ರೀತಿಯ ಕಾವ್ಯ ಸಲ್ಲಾಪವನ್ನು ಏರ್ಪಡಿಸಬೇಕೆಂಬ ಆಕಾಂಕ್ಷೆ ಅಂದಿನ ಕಾರ್ಯಕ್ರಮದಿಂದಾಗಿ ನನ್ನಲ್ಲಿ ಕೆರಳಿತು.

ವೀರನಾರಾಯಣನ ಸ್ತೋತ್ರದೊಂದಿಗೆ ಅದು ಮುಗಿದೊಡನೆ ರಾಮದಾಸರು ನನ್ನ ರಟ್ಟೆ ಹಿಡಿದು, ವೇದಿಕೆಯ ಹತ್ತಿರ ಕರೆದೊಯ್ದರು. ಗಮಕಿಗಳು ಗ್ರಂಥವನ್ನು ಚೀಲಕ್ಕೆ ಸೇರಿಸುತ್ತಿದ್ದಾರೆ; ವ್ಯಾಖ್ಯಾನಕರ್ತರು ವೀಳೆಯವನ್ನು ಜಗಿಯುತ್ತ ತಮ್ಮ ಸಂಚಿಯಿಂದ ಚೂರ್ಣವನ್ನು ತೆಗೆಯುತ್ತಿದ್ದಾರೆ. ರಾಮದಾಸರನ್ನು ಕಂಡಕೂಡಲೇ ಇಬ್ಬರೂ ಕೈಜೋಡಿಸಿ ವಂದಿಸಿದರು, "ನಮ್ಮ ಕಾರ್ಯಕ್ರಮ ನೀವು ಕೇಳಿದ್ದು ನಮಗೆ ತುಂಬಾ ಸಂತೋಷ" ಎಂದರು. "ನಾನೊಬ್ಬನೇ ಅಲ್ಲ. ಈ ಮರಿಸಾಹಿತಿಯನ್ನೂ ಕರೆ ತಂದಿದ್ದೇನೆ. ಇವನಿಗೂ ಇದರಲ್ಲೆಲ್ಲಾ ಅಭಿರುಚಿ. ಇಂತಹದನ್ನೆಲ್ಲಾ ವ್ಯವಸ್ಥೆ ಮಾಡುವುದರಲ್ಲಿ ಜಾಣ. ನಿಮ್ಮ ಪರಿಚಯವೂ ಇವನಿಗಿರಬೇಕು," ಎಂದು ನನ್ನ ಹೆಸರು, ಸಂಬಂಧ, ಎಲ್ಲಾ ಹೇಳಿ ನನ್ನನ್ನು ನಾಚಿಸಿದರು. ನನ್ನ ಸಂತೋಷಾಧಿಕ್ಯವನ್ನು ವ್ಯಕ್ತಪಡಿಸಿ ಅವರುಗಳನ್ನು ನಮ್ಮೂರಿಗೆ ಆಹ್ವಾನಿಸಿದೆ.

ಅತ್ಯುತ್ಸಾಹದಿಂದ ಒಪ್ಪಿಕೊಂಡ ಅವರು ತಮ್ಮ ವಿಳಾಸಕೊಟ್ಟು ನನ್ನ ವಿಳಾಸ ಬರೆದುಕೊಂಡರು. ಬಂಧುವೊಬ್ಬರ ವಿವಾಹಮಂಗಳದಲ್ಲಿ ಭಾಗಿಯಾಗಿದ್ದೆನೆಂಬ ಸಂತಸದ ಜತೆಗೆ ಒಂದು ಉತ್ತಮ ಕಾರ್ಯಕ್ರಮ ಕೇಳಿ, ವಿದ್ವಾಂಸರಿಬ್ಬರ ಪರಿಚಯ ಲಾಭವನ್ನೂ ಪಡೆದೆನೆಂಬ ಆನಂದವೂ ಸೇರಿಕೊಂಡಿತು. ಅದೇ ಗುಂಗಿನಲ್ಲಿ ಊರಿಗೆ ವಾಪಸಾಗಿ ನನ್ನ ಅಕ್ಕನವರ ಮಕ್ಕಳೂ, ಇಂತಹದರಲ್ಲೆಲ್ಲಾ ಅಕ್ಕರೆ ಉಳ್ಳವರೂ, ಆದ ಶ್ರೀ ಕೆ.ಎಲ್. ನಾರಾಯಣರಾವ್ ಮತ್ತು ಕೆ. ರಾಮಕೃಷ್ಣರವರಿಗೆ ವರ್ಣಾವರ್ಣಿ ಮಾಡಿ ಹೊಗಳಿ ಹೇಳಿದೆ. 'ಶ್ರೀರಾಮ ಭಜನ ಬಾಲ ಸೇವಾ ಸಂಘದ ರಾಮೋತ್ಸವಕ್ಕೆ ಅವರನ್ನು ಕರೆಸಿ' ಎಂದು ಸೂಚಿಸಿದೆ. ಆದರೆ ಅಷ್ಟು ಹೊತ್ತಿಗಾಗಲೇ ಹರಿಕಥಾ ಕಾರ್ಯಕ್ರಮ ನಿಶ್ಚಯವಾಗಿತ್ತು. ಅಲ್ಲದೆ ಭಾರತ ವಾಚನ ಆಕರ್ಷಣೀಯವಾಗಿ ವಾರಗಟ್ಟಲೇ ಜನರಿಗೆ ಹಿಡಿಸಬಲ್ಲುದೇ? ಎಂಬ ಅನುಮಾನ, ನಮ್ಮೂರವರಿಗೆ. ನನ್ನ ಮೆಚ್ಚುಗೆಯೊಂದೇ ಸಾಲದು ಎಂದೂ ತೋರಿರಬೇಕು. 'ಆಹ್ವಾನಿಸುತ್ತೇನೆಂದು ಹೇಳಿದ ಮಾತಿಗೆ ತಪ್ಪಿದಂತಾಯಿತಲ್ಲ, ಏನು ಮಾಡಲಿ?' ಎಂಬ ಯೋಚನೆಯಲ್ಲಿರುವಾಗ ಸಂಸ್ಕೃತಿ ಪ್ರಚಾರ ಯೋಜನೆ ಅಂಗವಾಗಿ ಶ್ರೀ ಶಾಸ್ತ್ರಿಗಳ ಮತ್ತು ಶ್ರೀ ರಾಮಶಾಸ್ತ್ರಿಗಳ ಪ್ರವಚನ-ವಾಚನ ಅರಸೀಕೆರೆಯಲ್ಲಿ ಏರ್ಪಾಡಾಯಿತು. ನಾಟಕ ಮಂದಿರದಲ್ಲಿ ಕಾರ್ಯಕ್ರಮ. ಕೃಷ್ಣರಾಯಭಾರದ ಪ್ರಸಂಗ. ನಾನು ಅನೇಕರಿಗೆ ಹೇಳಿ ಪ್ರಚಾರ ಮಾಡಿದೆ. ಶಾಸ್ತ್ರಿಗಳ ಮಾತುಗಾರಿಕೆ, ಹಾವಭಾವ, ನಾಟಕೀಯ ವ್ಯಾಖ್ಯಾನ, ಪಂಡಿತಪಾಮರರಿಬ್ಬರಿಗೂ ಒಪ್ಪಾಯಿತು. ನನ್ನ ಮಾತಿಗೆ ಸಾಕ್ಷ್ಯಾಧಾರ ದೊರೆತಂತಾಯಿತು. ಅವರಿಬ್ಬರಿಗೂ ನನ್ನ ಭಾವ ಶ್ರೀ ಮೈಲಾರಯ್ಯನವರ ಮನೆಯಲ್ಲಿ ಹಾರ್ದಿಕ ಸ್ವಾಗತವಾಯಿತು. ಆದರೋಪಚಾರ ನಡೆದು ಇಲ್ಲಿ ತಮಗೆ ಉತ್ತೇಜನ ಸಿಗುತ್ತದೆ ಎಂಬುದನ್ನು ಅವರು ಕಂಡುಕೊಂಡರು.

ಅದಾದ ಕೆಲವೇ ದಿನಗಳಲ್ಲಿ ಶ್ರೀ ವೆಂಕಟೇಶಯ್ಯನವರು ತಾವು ಹೊಳೆನರಸೀಪುರಕ್ಕೆ ಹೋಗಿ ವಾಪಸ್ಸು ಶಿವಮೊಗ್ಗೆಗೆ ಹೋಗುವಾಗ ಅರಸೀಕೆರೆಯಲ್ಲಿ - ತಮ್ಮದೊಂದು ಕಾರ್ಯಕ್ರಮ ಏರ್ಪಡಿಸುವುದಾದರೆ - ಇಳಿಯುವುದಾಗಿ ಪತ್ರ ಬರೆದರು. ಅದರಂತೆ ಅಹೋಬಲರಾಯರ ವೃತ್ತದಲ್ಲಿ ಸಹೋದರ ಸಂಘದ ವತಿಯಿಂದ ವಾಚನವನ್ನು ಇಟ್ಟುಕೊಂಡೆವು. ಅದರಿಂದಲೂ ನಮ್ಮೂರಿನ ಅನೇಕರು ಸುಪ್ರೀತರಾದರು. ಹೀಗೆ ಶ್ರೀ ಶಾಸ್ತ್ರಿಗಳೂ, ಶ್ರೀ ವೆಂಕಟೇಶಯ್ಯನವರೂ ತಮ್ಮತಮ್ಮ ಸಾಮರ್ಥ್ಯದ ಪರಿಚಯ ಮಾಡಿಕೊಟ್ಟು, ಅವರಿಬ್ಬರನ್ನೂ ಕರೆಸಿಕೊಂಡು ಮನಸೋಕ್ತ ಕೇಳಿ ಆನಂದಿಸಬೇಕೆಂಬ ಆಸೆಯನ್ನು ಕುದುರಿಸಿದರು.

ಅದಕ್ಕೆ ಒಂದು ಸಂದರ್ಭ ಒದಗಿ ಬಂತು!

ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ ಕಳೆಯುತ್ತಾ ಬಂದರೂ ಅರಸೀಕೆರೆ ತಾಲ್ಲೂಕಿಗೆ ವರುಣನ ಕೃಪೆ ಆಗಲೇ ಇಲ್ಲ. ಜನ ತಮಗೆ ತಿಳಿದಂತೆ ದೇವತಾಸೇವೆ ಮಾಡಿ ಮಳೆಗಾಗಿ ಪ್ರಾರ್ಥಿಸಿದರು; ನಿರಾಶರಾದರು. ಈ ಸಂದರ್ಭವನ್ನು ನಾನು ಮತ್ತು ಕೆ. ರಾಮಕೃಷ್ಣ ಉಪಯೋಗಿಸಿಕೊಂಡೆವು. ವಿರಾಟಪರ್ವ ಓದಿಸಿದರೆ, ಈಶ್ವರನಿಗೆ ಕುಂಭಾಭಿಷೇಕ ಮಾಡಿಸಿದರೆ, ಮಳೆ ಬರುತ್ತದೆ ಎಂಬ ಪ್ರತೀತಿ ದಟ್ಟವಾಗಿದ್ದ ಕಾಲ. ಆದ್ದರಿಂದ, 'ಅನಾವೃಷ್ಟಿ ನಿವಾರಣೆಗಾಗಿ - ಭಾರತವಾಚನ, ಭವಾನಿ ಶಂಕರೇಶ್ವರನಿಗೆ ಅಭಿಷೇಕ, ಪರ್ಜನ್ಯ ಜಪ, ಹವನ ಹೋಮ ನಡೆಸೋಣ. ಸಂದರ್ಭ ಅನುಕೂಲವಾಗಿದೆ, ಜನರ ಸಹಕಾರ ಸಿಗುತ್ತದೆ, ನಮ್ಮ ಆಸೆ ತೀರಿಸಿಕೊಳ್ಳಲು ಮಾರ್ಗವಾಗುತ್ತದೆ' ಎಂದು ನಿಶ್ಚಯಿಸಿ ಕಾರ್ಯೋನ್ಮುಖರಾದೆವು. ಆಗ ಶ್ರೀ ಕೆ.ಅನಂತ ನಾಗರಾಜ್ ಅರಸೀಕೆರೆ ಪುರಸಭಾಧ್ಯಕ್ಷರು; ನಮ್ಮಿಬ್ಬರ ವಿಶ್ವಾಸಿಗಳು. ನಮ್ಮ ಯೋಜನೆ ಅವರ ಮುಂದಿಟ್ಟೆವು. ಅವರ ನೇತೃತ್ವದಲ್ಲಿ ಈ ಕಾರ್ಯಗಳು ನಡೆಯಲಿ ಎಂದು ನಮ್ಮ ಆಶಯವನ್ನು ವ್ಯಕ್ತಪಡಿಸಿದೆವು. ಅವರೇ ಅಧ್ಯಕ್ಷರಾಗುಳ್ಳ ಒಂದು ಸಮಿತಿ ಊರಿನ ಗಣ್ಯರನ್ನೊಳಗೊಂಡು ರಚನೆಯಾಯಿತು.

ಕೆ.ರಾಮಕೃಷ್ಣನೂ ಅವರೂ ನಾನೂ ಸಂಚಾಲಕ ಕಾರ್ಯದರ್ಶಿಗಳು. ಮೊದಲ ದೇಣಿಗೆ ನೂರು ರೂ. ಅಧ್ಯಕ್ಷರದೆ! ಹುಮ್ಮಸ್ಸಿನಿಂದ ಸಿದ್ಧತೆಗೆ ತೊಡಗಿದೆವು.

ವಾಚನಕ್ಕೆ ಶ್ರೀ ವೆಂಕಟೇಶಯ್ಯನವರು, ವ್ಯಾಖ್ಯಾನಕ್ಕೆ ಶ್ರೀ ಶಾಸ್ತ್ರಿಗಳು ಎಂದು ನಮ್ಮ ಅಪೇಕ್ಷೆ. ಅವರಿಬ್ಬರಿಗೂ ನಮ್ಮ ಪತ್ರ ಹೋಯಿತು. ಶೀಘ್ರವಾಗಿ ಅವರ ಸಮ್ಮತಿಯೂ ದೊರಕಿತು. ಕಾರ್ಯಕ್ರಮದ ಸವಿವರವಾದ ಹಸ್ತಪತ್ರಿಕೆ ಅಚ್ಚುಹಾಕಿಸಿ ಹಂಚಿ ಪ್ರಚಾರ ಮಾಡಿದೆವು. ಮಳೆಗಾಗಿ ದೇವತಾಸೇವೆ ಎಂದೇ ಸಾರ್ವಜನಿಕರ ಭಾವನೆ. ಶ್ರಾವಣ ಶುಕ್ಲ ಸಪ್ತಮಿಯಿಂದ ಇಪ್ಪತ್ನಾಲ್ಕು ದಿನಗಳ ಅರ್ಧಮಂಡಳ ಕಾರ್ಯಕ್ರಮ. ಸ್ಥಳ ಶ್ರೀ ಅಹೋಬಲರಾಯರ ಛತ್ರ. ಅಲ್ಲೊಂದು ಸುಂದರ ಮಂಟಪ ರಚಿಸಿ, ಚಂದ್ಲಾಪುರದ ದಾನಪ್ಪನವರು ಕೊಟ್ಟ ಶ್ರೀಕೃಷ್ಣನ ಮುದ್ದಾದ ಮೂರ್ತಿಯನ್ನು ಇರಿಸಿ ಅಲಂಕಾರ ಮಾಡಿದೆವು. ಧ್ವನಿವರ್ಧಕ ಮತ್ತು ವಿದ್ಯುತ್‌ದೀಪ ಸೇವೆ ಮಾಮೂಲಿನಂತೆ ಟಿ.ಕೆ. ರಾಜಗೋಪಾಲ್ ಸಹೋದರರದು. ಅತಿಥಿಗಳ ಊಟ ವಸತಿ ನಮ್ಮ ಭಾವನವರ ಮನೆಯಲ್ಲಿ. ಆ ದಿನ ಬಂತು. ಶ್ರೀ ಶಾಸ್ತ್ರಿಗಳೂ, ಶ್ರೀ ವೆಂಕಟೇಶಯ್ಯನವರೂ ಮಧ್ಯಾಹ್ನ ಶಿವಮೊಗ್ಗೆಯಿಂದ ಬಂದು ಬಿಡಾರ ಮಾಡಿದರು. ಸಂಜೆ ಏಳು ಗಂಟೆಗೆ ಸರಿಯಾಗಿ ಶ್ರೀ ಕೆ.ಆರ್. ಕೃಷ್ಣಪ್ಪನವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಶ್ರೀ ಕೆ. ಅನಂತನಾಗರಾಜ್ ಉದ್ಘಾಟಿಸಿ, "ಅನಾವೃಷ್ಟಿ ನಿವಾರಣಾರ್ಥವಾಗಿ ಹಿಂದಿನವರು ಹಾಕಿಕೊಟ್ಟ ಸಂಪ್ರದಾಯದಂತೆ ವಿರಾಟಪರ್ವ ವಾಚನ-ವ್ಯಾಖ್ಯಾನ, ಪರ್ಜನ್ಯ ಜಪ, ಈಶ್ವರನಿಗೆ ಅಭಿಷೇಕ, ಹವನ ಹೋಮಾದಿಗಳನ್ನು ತಮ್ಮೆಲ್ಲರ ಸಹಾಯ ಸಹಕಾರದ ನಿರೀಕ್ಷೆ ಮೇಲೆ ಏರ್ಪಡಿಸಲಾಗಿದೆ. ಭಗವಂತ ಸುಪ್ರೀತನಾಗಿ, ನಮಗೆ ಬಂದಿರುವ ಮಳೆಯ ಅಭಾವವನ್ನು ಪರಿಹರಿಸಲಿ" ಎಂದು ಹಾರೈಸಿದರು. ಕಿಕ್ಕಿರಿದು ತುಂಬಿದ್ದ ಶ್ರೋತೃ ವೃಂದವನ್ನು ನೋಡಿ ಕಲಾವಿದರಿಗೂ ಹೃದಯ ತುಂಬಿ ಬಂದಿರಬೇಕು. ಅವರು ಆತ್ಮಸಂತೋಷಕ್ಕಾಗಿ, ತಮ್ಮ ಅಭಿರುಚಿಗನುಗುಣವಾಗಿ ಕಾವ್ಯಗಳನ್ನು ಅನುಸಂಧಾನ ಮಾಡಿ ತಮಗಾದ ಆನಂದವನ್ನು ಇತರರಿಗೂ ಹಂಚಬೇಕೆಂಬುದರ ಕಡೆಗೇ ಹೆಚ್ಚು ಒಲವುಳ್ಳವರು. ಕಥಾಭಾಗವಾದರೂ ರಂಜನೀಯ ಘಟನಾವಳಿಯಿಂದ ಕೂಡಿದ ವಿರಾಟಪರ್ವ. ಕವಿಪುಂಗವ ಕುಮಾರವ್ಯಾಸನ ಓಜಸ್ವಿತೆಯೂ, ಭಾವ ರಸಗಳ ಆಗರವೂ, ಅನುಪಮವಾದ ಶಬ್ದಪ್ರಯೋಗ, ವರ್ಣನಾ ವೈಖರಿ, ನಾಟಕೀಯತೆಯಿಂದ ಆಹ್ಲಾದಕಾರಿಯೂ ಆದ ಪ್ರಾಸಾಧಿಕ ಕಾವ್ಯಗಂಗೆ. ವಾಗ್ಮಿಗಳಿಗೆ ವಿಪುಲ ಸಾಮಗ್ರಿಯೊದಗಿಸುವ ಅವರ ಕಲ್ಪನೆಗಳ ಗರಿಗೆದರಿಸುವ ವಾಗ್ದೇವಿಯ ಅಕ್ಷಯ ಭಂಡಾರ. ಅದನ್ನು ಪ್ರಸ್ತುತಪಡಿಸುವವರು ತಮ್ಮ ಸಂಗೀತ-ಸಾಹಿತ್ಯ ವಚೋವಿಲಾಸಗಳಿಂದ ಮತ್ತಷ್ಟು ರಂಜನೀಯಗೊಳಿಸಬಲ್ಲ ಪ್ರತಿಭಾ ವಿಶಿಷ್ಟರು. ಅವರಿಗೆ ಸರಿದೊರೆಯಾಗಿ ಪ್ರತಿಸ್ಪಂದಿಸಬಲ್ಲ ರಸಿಕರ ಸಮೂಹ! 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂಬ ಕವಿ ಕುವೆಂಪುರವರ ಕಾಣ್ಕೆ ಆಗ ನಿದರ್ಶನಕ್ಕೆ ಬಂದಿತು.

ಶ್ರೀ ವೆಂಕಟೇಶಯ್ಯನವರು ವೃತ್ತಿನಾಟಕ ಮಂಡಲಿಯಲ್ಲೇ ಸ್ವೋಪಜ್ಞತೆಗೆ ಹೆಸರಾಂತ ಚಾಮುಂಡೇಶ್ವರಿ ಕಂಪೆನಿಯಲ್ಲಿ ನಟರಾಗಿದ್ದರಂತೆ. ಅವರು ಅಲ್ಲಿ ಸಂಗೀತ, ಸಂಭಾಷಣೆ, ಅಭಿನಯದಲ್ಲಿ ಪರಿಣತಿ ಪಡೆದವರು; ಗಮಕಕ್ಷೇತ್ರಕ್ಕೆ ಬಂದು ಉತ್ತಮ ಪಟ್ಟ ಸಾಧಿಸಿದವರು. ಲೋಕಪ್ರಿಯವಾದ ಕಾವ್ಯದ ಭಾವಾಭಿವ್ಯಕ್ತಿಗೆ ಪೋಷಕವಾಗಿ, ರಾಗಸಂಯೋಜನೆ ಮಾಡಿ ಪ್ರತಿ ಪದದ ಅರ್ಥವನ್ನು ತಾವೂ ಗ್ರಹಿಸಿ, ವಾಚಿಸುವ ಅವರ ವಿಧಾನವು, ಸಂಗೀತಸಖಿಯಾಗಿ ಕಾವ್ಯರಾಣಿಯನ್ನು ಪೀಠಕ್ಕೇರಿಸಿ ಓಲೈಸುವ-ಔಚಿತ್ಯ ಪ್ರಜ್ಞೆಯುಳ್ಳದ್ದು. ತಡವದೆ, ಅಲಸದೆ, ಅಪಶಬ್ದ ನುಡಿಯದೆ, ಅರ್ಥ ವಿಪರ್ಯಸ್ತವಾಗುವ ಪದ ವಿಭಾಗಕ್ಕೆಡೆಗೊಡದೆ, ಮಾಡುವ ಅವರ ವಾಚನ ಕೇಳುವವರಿಗೆ ಒಂದು ಅಪೂರ್ವ ಅನುಭವ. ಸಂಗೀತ ಪ್ರಿಯರಿಗಂತೂ ಘನ ಮತ್ತು ರಂಜನೀಯ ರಾಗಗಳಾದ ತೋಡಿ, ಕಲ್ಯಾಣಿ, ಶಂಕರಾಭರಣ, ಕಾಂಭೋಜಿ, ಭೈರವಿ, ಮೋಹನ, ಬೇಗಡೆ ಬಿಲಹರಿ, ಕಮಾಚ್, ಅಭೇರಿ, ಸಿಂಧುಭೈರವಿ, ಬೇಹಾಗ್, ಶಹನಗಳಲ್ಲಿ ಪದ್ಯ ಓದಿ ಅಲ್ಪ ಸಮಯದಲ್ಲೇ ಅವುಗಳ ಪೂರ್ಣ ಕಳೆಯನ್ನು ತೋರಿಸುತ್ತಿದ್ದರೆ, ಇವರು ಸಂಗೀತಕ್ಷೇತ್ರಕ್ಕೇ ಮೀಸಲಾಗಬಾರದಿತ್ತೇ ಎನ್ನಿಸುತ್ತಿತ್ತು. ನಾರಣಪ್ಪ ತನ್ನ ಪಾತ್ರಗಳನ್ನು ಯಾವ ರೀತಿ ಕಡೆದು ನಿಲ್ಲಿಸುತ್ತಿದ್ದನೋ ಅದೇ ರೀತಿಯಲ್ಲೇ ತಮ್ಮ ವಾಚನಕೌಶಲದಿಂದ ತಾವೂ ಅವನ್ನು ಸ್ಫುಟಗೊಳಿಸಿ ಕೇಳುಗರಿಗೆ ಪರಿಚಯಿಸಿದರು.

ಶ್ರೀ ಶಾಸ್ತ್ರಿಗಳು ಚಾಮರಾಜೇಂದ್ರ ಸಂಸ್ಕೃತಪಾಠಶಾಲೆಯಲ್ಲಿ ಸಾಹಿತ್ಯ ಅಲಂಕಾರ ಅಭ್ಯಾಸ ಮಾಡಿದ ವಿದ್ವಾಂಸರು. ಅದು ಹೇಗೆ ಈ ವ್ಯಾಖ್ಯಾನಕ್ಷೇತ್ರಕ್ಕೆ ಬಂದರೋ! ಅವರ ಪ್ರವೃತ್ತಿಯೇ ಅದಿರಬೇಕು. ಅದು ಅವರ ಸ್ವಕ್ಷೇತ್ರವಾಯಿತು. ಸಾಹಿತ್ಯದ ಗೀಳು ಹಚ್ಚಿಕೊಂಡವರಿಗೆ ತಾವು ಓದಿದ, ತಾವು ಅನುಭವಿಸಿದ ಸಾಹಿತ್ಯ ಸ್ವಾರಸ್ಯಗಳನ್ನು ಯಾರಿಗಾದರೂ ಅವರಿಗೆ ಬೇಕಿರಲಿ ಬೇಡವಾಗಿರಲಿ - ಯಾವುದಾದರೂ ವ್ಯಾಜದಲ್ಲಿ ಹೇಳಿದ ಹೊರತು ಸಮಾಧಾನವಾಗುವುದಿಲ್ಲ. ಶಾಸ್ತ್ರಿಗಳೂ ಈ ಚಟದಿಂದ

ಪೀಡಿತರಾದವರೆಂದು ಕಾಣುತ್ತದೆ. ಅಪ್ತವಲಯದಲ್ಲಿ ಲೋಕಾಭಿರಾಮವಾಗಿ ಪ್ರಾರಂಭವಾಗಿ ಬರಬರುತ್ತ ಬಹು ಜನರಿಗೆ ಪ್ರಿಯವಾಗಿ, ಅದೇ ಹವ್ಯಾಸವಾಗಿ ಅವರನ್ನು ವ್ಯಾಖ್ಯಾನಕಾರರಾಗೇ ರೂಪಿಸಿ ವೇದಿಕೆ ಏರಿಸಿರಬೇಕೆಂದು ಕಾಣುತ್ತದೆ. ಏಕೆಂದರೆ ಅವರ ವ್ಯಾಖ್ಯಾನವು ಪಾರಿಭಾಷಿಕ ಶಬ್ದಗಳ ಪಾಂಡಿತ್ಯ ಪ್ರದರ್ಶನವಲ್ಲ. ನಿತ್ಯವೂ ಎಲ್ಲರೂ ಬಳಸುವ ಆಡುಮಾತಿನ ಸರಸ ಸಲ್ಲಾಪ. ಅದು ಅವರದೇ ಸ್ವಂತ ವ್ಯಾಖ್ಯಾನ ಶೈಲಿ. ನಾರಣಪ್ಪನೇ ಆ ವಿಚಾರದಲ್ಲಿ ಅವರಿಗೆ ಮೇಲು ಪಂಕ್ತಿ! ಆದ್ದರಿಂದ ಎಲ್ಲರೂ ಅವರ ವ್ಯಾಖ್ಯಾನದ ಅಯಸ್ಕಾಂತದ ಸೆಳವಿಗೆ ಸಿಕ್ಕಿ ಭಾವರಸದಲ್ಲಿ ಮುಳುಗಿದರು. ಅವರು ರೂಢಿಸಿಕೊಂಡ ಆ ಪ್ರಕಾರದ ಪ್ರೌಢಿಮೆಯನ್ನು ಅರಸೀಕೆರೆಯವರು ಕೇಳಿದರು. ಅದಕ್ಕಿಂತಲೂ ಹೆಚ್ಚಾಗಿ 'ಕಂಡರು', ಹಿಗ್ಗಿದರು, ನಕ್ಕರು, ಕಂಬನಿಗರೆದರು, ಉಬ್ಬಿದರು, ಕೋಪಗೊಂಡರು, ಭಕ್ತಿಯಿಂದ ಬಾಗಿದರು!! ಶಾಸ್ತ್ರಿಗಳೇನೂ ವೇಷ ಕಟ್ಟಲಿಲ್ಲ. ನಾಟಕದ ಸಂಭಾಷಣೆಯಂತೆ ಬಾಯಿ ಪಾಠವೊಪ್ಪಿಸುವ ನೀರಸ ನಿರೂಪಣೆಯೂ ಅವರದಲ್ಲ. ವೇದಿಕೆ ಏರಿ ಶ್ರೀ ವೆಂಕಟೇಶಯ್ಯನವರು, ರೂಪಕ ಚಕ್ರವರ್ತಿ ನಾರಣಪ್ಪನ ದಿವ್ಯ ಕಾವ್ಯದ ರಸೋತ್ಕರ್ಷವನ್ನು ತಮ್ಮ ಗಮಕದಿಂದ ಯಾವ ಔನ್ನತ್ಯಕ್ಕೆ ಚಿಮ್ಮಿಸುವರೋ ಅದೇ ಎತ್ತರದ ಭವ್ಯೋನ್ನತಿಗೆ ಸಾರಿ ವಾಗ್ವೈಖರಿಗೆ ಅರ್ಥಪುಷ್ಟಿಯನ್ನೂ ಧ್ವನಿಸಮೃದ್ಧಿಯನ್ನೂ ಜೋಡಿಸಿ, ತಮ್ಮ ಆಂಗಿಕ ಅಭಿನಯವನ್ನೂ ಬೆರೆಸಿ ವ್ಯಾಖ್ಯಾನವನ್ನು ಬಿತ್ತರಿಸುವರು! ಪದ್ಯಗಳ ವಾಚನದ ಸಮಯದಲ್ಲೇ ಅವರ ಭಾವಾಭಿವ್ಯಕ್ತಿಗಳನ್ನು ತಮ್ಮ ಕಣ್ಣುಗಳಿಂದಲೇ ಸೂಚಿಸುವರು. ಕಥಾ ಸಂದರ್ಭದ ಸಂಭಾಷಣೆ, ಕ್ರಿಯೆಗಳಿಗನುಸಾರ ಅವರ ಅಂಗಾಂಗಗಳೆಲ್ಲವೂ ಚಲಿಸುವುವು. ಕುಳಿತಲ್ಲೇ ಪುಟಿದೇಳುವರು, ತಲೆದೂಗುವರು. ಹಿಂದಕ್ಕೂ ಮುಂದಕ್ಕೂ ತೊನೆದಾಡುವರು. ಅವಡುಗಚ್ಚುವರು. ಬಿಗಿದ ಮುಷ್ಟಿಯಿಂದ ಝುಂಕಿಸುವರು. ಮಾತಿಗೆ ತಕ್ಕಂತೆ ಭಾವಭಂಗಿ! ಆ ಮಿಂಚುವ ಕಣ್ಣು, ಅದರುವ ತುಟಿ, ಝಳಪಿಸುವ ತೋಳು, ದೈನ್ಯದಿಂದ ಕುಗ್ಗುವ ಅಟ್ಟಹಾಸದಿಂದ ಬೀಗುವ ಭಕ್ತಿಯಿಂದ ಬಾಗುವ ಬೆಡಗು, ಭುಜಾಸ್ಫಾಲನದ ಝೋಕು! ಆ ಆರ್ಭಟ, ಆರ್ತಾಲಾಪ, ಆ ಕರುಣೆ, ಲಾಂತ್ಯಗಳ ಉಕ್ಕಂದ, ಆ ಆಡುಮಾತಿನ ಸರಸ, ಅಣಕ ವ್ಯಂಗ್ಯ ವ್ಯಂಜಕಧ್ವನಿವೈವಿಧ್ಯ! ಈ ಎಲ್ಲ ಕಥಾ ಶಯ್ಯೆಗನುಗಾಮಿಯಾದ ಚರ್ಯೆಗಳ ಮೇಳ ಶಾಸ್ತ್ರಿಗಳದೇ, ಅನನುಕರಣೀಯವಾದ ಛಾಪು! ಆಯಾ ಪಾತ್ರಗಳಲ್ಲಿ ತಾದಾತ್ಮ್ಯ ಹೊಂದುವರು. ಅಭಿಮಾನಧನೆ, ಅನುನಯ ಚಾತುರ್ಯಗಳ ಮೂರ್ತಿ, ಭಕ್ತಿಯ ಖನಿ, ಅನ್ಯಾಯಕ್ಕೆ ಸಿಡಿದೇಳುವ ಅಗ್ನಿಕನ್ಯೆ ದ್ರೌಪದಿಯಾಗುವರು; ಘನತೆ ಗಾಂಭೀರ್ಯಗಳ ಮೇರು ಯುಧಿಷ್ಠಿರನಾಗುವರು, ಔದ್ಧತ್ಯದ ಮೇಲ್ಪದರದಡಿಯಲ್ಲಿ ಅನುಕಂಪವನ್ನು ಹುದುಗಿಸಿಕೊಂಡ ಅಪ್ರತಿಮಮಲ್ಲ ಭೀಮನಾಗುವರು; ಮಹಾ ಪರಾಕ್ರಮಶಾಲಿಯಾದರೂ, ವಿನಯಶೀಲ ನಾಟ್ಯಾಚಾರ್ಯ ಅರ್ಜುನನಾಗುವರು; ನೃಶಂಸನಾದ ಕೀಚಕನಾಗಿ ವಿಜೃಂಭಿಸುವರು; ಕುಟಿಲ ಶಕುನಿಯಾಗುವರು; ದುಷ್ಟ ದುರ್ಯೋಧನನಾಗುವರು; ಮಿಗಿಲಾಗಿ ಅಸಾಧಾರಣ ವಾಕ್ಚತುರ ಉತ್ತರ ಭೂಪನಾಗುವರು! ಕಥಾವಸರದಲ್ಲಿ, ಅಗೋ ಶ್ರೀಕೃಷ್ಣ ಪ್ರತ್ಯಕ್ಷನಾದ!! ಆ ಮಹಿಮಾರ್ಣವನ ಪ್ರಸನ್ನತೆ, ಭಕ್ತಪರಾಧೀನತೆ, ವಾತ್ಸಲ್ಯಪೂರಿತ ಸಲುಗೆ, ಸಾಮಾನ್ಯನಂತೆ ವ್ಯವಹರಿಸುವ ಸೌಜನ್ಯ-ಇವನ್ನೂ ಪ್ರತಿಬಿಂಬಿಸುವರು. ಭಾರತದ ಎಲ್ಲ ಮಹಾಪುರುಷರನ್ನೂ ಕುಮಾರವ್ಯಾಸನ ಸಹಾಯದಿಂದ ಕಣ್ಣ ಮುಂದೆ ಚಿತ್ರಿಸುವರು. ತನ್ಮಯರಾದ ಶ್ರೋತೃಗಳಿಂದ, 'ಆಹಾ', 'ಅಯ್ಯೋ', 'ಭಲಾ', 'ಅರರೆ', 'ಛೀಛೀ', 'ಸದ್ಯ', 'ಕಷ್ಟಕಷ್ಟ', 'ಶಾಭಾಷ್', ಎಂಬ ಉದ್ಗಾರಗಳನ್ನು ಕಸಿಯುವರು!

ಮೊದಲೇ ಕುತೂಹಲಕಾರಿಯಾದ ಕಥಾನಕ. ಪ್ರಚೋದಕವಾದ ವಾಚನ -ಹಿಮ್ಮೇಳಕ್ಕೆ; ಕೇಳಬೇಕೆ? ಅದಕ್ಕೆ ಹೊಯ್‌ಕಯ್ಯಾಗಿ ಶಾಸ್ತ್ರಿಗಳದು ವ್ಯಾಖ್ಯಾನದ ಘೋಷಣೆ. ಅದಕ್ಕಾಗಿ ತಾವು ಓದಿದ ಕನ್ನಡ, ಸಂಸ್ಕೃತ ಭಾಷೆಗಳ ಕಾವ್ಯಗಳ, ಶಾಸ್ತ್ರಗ್ರಂಥ, ಸಾಹಿತ್ಯ, ಪುರಾಣ, ಕಥೆ, ಸಮಾಚಾರಗಳಿಂದ, ತಾವು ನೋಡಿದ ಹಾಗೂ ಇನ್ನೊಬ್ಬರು ಹೇಳಿದ ಸ್ವಾರಸ್ಯಗಳಿಂದ, ಆಯ್ದು ಸಂದರ್ಭೋಚಿತವಾಗಿ ಉದಾಹರಿಸುವರು. ಒಮ್ಮೊಮ್ಮೆ ಕವಿಯ ಚೌಕಟ್ಟನ್ನು ಅತಿಕ್ರಮಿಸಿ, ತಮ್ಮ ಟಿಪ್ಪಣಿಯ ಕೋಶದಿಂದ ತಮ್ಮ ಲೋಕಸಂಗ್ರಹದ ಸರಕನ್ನು ಹೊರತೆಗೆದು ಹಂಚುವರು. ಇಂತಹಾ ವಿನೂತನ ರೀತಿಯ ವ್ಯಾಖ್ಯಾನದಿಂದ ಜನಮನವನ್ನು ಸೂರೆಗೊಂಡರು. ಆಬಾಲವೃದ್ಧರಿಗೂ ಪ್ರಿಯರಾದರು. ಪ್ರತಿದಿನದ ಕಾರ್ಯಕ್ರಮ ಮುಗಿದನಂತರ ಅವರನ್ನು ಹಿಂಬಾಲಿಸಿ ನಮ್ಮ ಭಾವನವರ ಮನೆಗೆ ಹೋದ ಕೆಲವರಿಗೆ ಅದೇ ಗುಂಗು. ಶಾಸ್ತ್ರಿಗಳಿಗೆ ದಣಿವರಿಯದ ಅದೇ ಉತ್ಸಾಹ, ಮತ್ತಷ್ಟು ಹೇಳುವ ತವಕ! ರಾತ್ರಿಯ ಎರಡು-ಮೂರು ಗಂಟೆಯಾದರೂ ಊಟ ನಿದ್ದೆ ಮರೆತು, ರಾಮಾಯಣ, ಭಾರತ, ಭಾಗವತ ಕಾವ್ಯಗಳಲ್ಲಿನ ರೋಚಕಾಂಶಗಳ ಪ್ರಸ್ತಾಪ, ವಿಮರ್ಶೆ, ವಿಚಾರಮಂಥನಗಳ ಗೋಷ್ಠಿ ಚರ್ಚೆಯಲ್ಲಿ ತಾವೂ ಸೇರುವರು. ಬೇರೆಯವರು ಏನಾದರೂ ಹೇಳುತ್ತಿದ್ದರೆ ಮುಗ್ಧ ಕುತೂಹಲಿಗಳಾಗಿ ಕೇಳುವರು.

ಹೀಗೆ ಸಾಗಿದ ಅವರ ಮತ್ತು ವೆಂಕಟೇಶಯ್ಯನವರ ಹೊಂದಾಣಿಕೆಯ ಕಾರ್ಯಕ್ರಮ ತಾಳಮದ್ದಳೆ, ಯಕ್ಷಗಾನ, ಹರಿಕಥೆ, ನಾಟಕಾಭಿನಯ,

ಕಾವ್ಯಸಲ್ಲಾಪ, ಆಶುಭಾಷಣಗಳ ಸಮ್ಮಿಶ್ರಣದ ವರ್ಣಮಯ ರಸಮಂಜರಿ. ಅದು ಕೇವಲ ಕೇಳುವುದು ಮಾತ್ರವಲ್ಲ, ಪ್ರೇಕ್ಷಣೀಯವೂ ಹೌದು ಎಂಬ ಪ್ರತೀತಿ ಬಹುಬೇಗ ಹರಡಿತು. ಅದರಿಂದಾಗಿ ಸ್ಥಳ ಪರಸ್ಥಳಗಳಿಂದ ಜನಬರುತ್ತಿದ್ದರು, ನಿರೀಕ್ಷೆಗೂ ಮೀರಿ ಅದು ಯಶಸ್ವಿಯಾಯಿತು. ಅದಕ್ಕಾಗಿ ಶ್ರಮಿಸಿದವರಿಗೆಲ್ಲಾ ಖುಷಿಯಾಯಿತು. ಆದರೆ... ದಿನಗಳೆದಂತೆಲ್ಲ ಮೆಲ್ಲಮೆಲ್ಲನೆ ಒಂದು ಆತಂಕವೂ ತಲೆದೋರಿತು. ಯಾವ ಉದ್ದೇಶದ ನೆಪವನ್ನು ಸಾರ್ವಜನಿಕರ ಮುಂದಿಟ್ಟು ಈ ಕಾರ್ಯಕ್ರಮ ಹಮ್ಮಿಕೊಂಡೆವೋ ಅದರ- ಮಳೆ ಬರುವುದರ - ಚಿಹ್ನೆಯೇ ಕಾಣಲಿಲ್ಲ. ಆಕಾಶ ನಿರಭ್ರ ಶುಭ್ರ! ತುಣುಕು ಮೋಡವೂ ಕಾಣದು. ಬೇಸಿಗೆಯ ಬಿರುಬು. ಭಾರತ ವಾಚನ ಕೇಳುವ, ಕೇಳಿಸುವ ಆಸೆಗಾಗಿ ಏರ್ಪಡಿಸಿ, ತೊಡಕಿಗೆ ಸಿಕ್ಕಿಕೊಂಡೆವಲ್ಲ, ಅದು ಮುಗಿಯುವುದರೊಳಗಾಗಿ ಮಳೆ ಬಾರದಿದ್ದರೆ ಹಂಗಿಸುವವರ ಮಾತನ್ನು ಹೇಗೆ ಎದುರಿಸುವುದು ಎಂಬ ಅಳುಕು ಬಾಧಿಸತೊಡಗಿತು. ಈ ದುಗುಡದ ಜತೆಗೆ ನಮ್ಮ ಅಣ್ಣನವರ ಮನೆಯಲ್ಲಿ ದುಃಖದಾಯಕ ಪ್ರಸಂಗವೊದಗಿ ನನಗೆ ಆಶೌಚವೂ, ನಮ್ಮೆಲ್ಲ ಬಂಧುಗಳಿಗೆ ಸಂತಾಪವೂ ಪ್ರಾಪ್ತವಾಯಿತು. ಎಲ್ಲ ಭಾರವೂ ಕೆ. ರಾಮಕೃಷ್ಣ ಅವರ ಮೇಲೆ. ಅಧ್ಯಕ್ಷರೊಡನೆ ಈ ಪೂರ್ವಾಪರವನ್ನು ಮುಂದಿಟ್ಟು ಸಮಾಲೋಚಿಸಿದೆವು. "ದೇವರ ಸೇವೆ ಮಾಡುತ್ತಿದ್ದೇವೆ, ಯಾರಿಗೂ ದುರುದ್ದೇಶವಿಲ್ಲ, ವಾಚನ ಕಾರ್ಯಕ್ರಮ ಚೆನ್ನಾಗಿ ನಡೆಯುತ್ತಿದೆ, ಜನ ಆನಂದಪಟ್ಟಿದ್ದಾರೆ, ಇನ್ನೂ ಏಳು-ಎಂಟು ದಿನಗಳಿವೆ, ನಮ್ಮ ಕರ್ತವ್ಯ ನಾವು ಮಾಡೋಣ, ಅವನು ಕೈಬಿಡಲಾರ" ಎಂದು ಅವರು ಧೈರ್ಯ ಹೇಳಿದರು. ಅವರ ಮಾತಿನಿಂದ ಉತ್ಸಾಹ ತಳೆದು ಮೂರು ದಿನಗಳ ಮುಕ್ತಾಯ ಸಮಾರಂಭಗಳ ಪೂರ್ವಸಿದ್ಧತೆಗೆ ಮನಸ್ಸು ಕೊಟ್ಟೆವು. ಅಭಿಷೇಕ, ಜಪ ಹೋಮಾದಿಗಳಿಗೆ ಸ್ಥಳೀಯರ ಜತೆಗೆ ಶಿವಮೊಗ್ಗೆಯಿಂದಲೂ ಋತ್ವಿಜರನ್ನು ಕರೆಸಬೇಕೆಂದು ನಿಶ್ಚಯಿಸಿದೆವು. ಪ್ರಧಾನಾಚಾರ್ಯತ್ವಕ್ಕೆ, ವೇದವಿದರೂ, ನಿಷ್ಠರೂ ಆದ ಶಿವಮೊಗ್ಗೆಯ ವೇ. ಬ್ರ. ಶ್ರೀ ಕೇಶವಮೂರ್ತಿ ಘನಪಾಠಿಗಳನ್ನು ಆಹ್ವಾನಿಸಲು ಶ್ರೀ ಶಾಸ್ತ್ರಿಗಳೇ ಸೂಚಿಸಿ ಅವರಿಗೆ ತಾವೊಂದು ಪತ್ರ ಬರೆದುಕೊಟ್ಟರು. ಪ್ರತ್ಯಕ್ಷವಾಗಿಯೇ ಅವರನ್ನು ಕರೆಯಲು ಕೆ.ವಿ. ಅನಂತರಾಮಯ್ಯನವರು ಶಿವಮೊಗ್ಗೆಗೆ ಹೋದರು. ಮಿಕ್ಕವರಿಗೂ ಪತ್ರ ಬರೆದೆವು.

ಘನಪಾಠಿಗಳು ಅಗ್ನಿಕಾರ್ಯ ಮಾಡುತ್ತಿರುವಾಗ ಅನಂತರಾಮಯ್ಯನವರು ಅವರ ದರ್ಶನ ಮಾಡಿದರು. ಪ್ರಭಾವಿತರಾಗಿ ದೀರ್ಘದಂಡ ಪ್ರಣಾಮ ಸಲ್ಲಿಸಿದರು. ಭಾರತವಾಚನ ಕೇಳುವ- ಕೇಳಿಸುವ ಆಸೆಗಾಗಿ ಅನಾವೃಷ್ಟಿ ನಿವಾರಣೆಯ ನೆಪವೊಡ್ಡಿ ತಂದುಕೊಂಡಿರುವ ಸಂದಿಗ್ಧ ಪರಿಸ್ಥಿತಿಯನ್ನು ನಿವೇದಿಸಿಕೊಂಡರು. "ಮಳೆ ಬರುವ ಸೂಚನೆಯೇ ಇಲ್ಲ. ಆತಂಕವಾಗಿದೆ. ತಾವು ಬಂದು ದೇವತಾ ಕಾರ್ಯಗಳ ಆಚಾರ್ಯತ್ವ ವಹಿಸಿ, ಭಗವಂತನ ಅನುಗ್ರಹಕ್ಕೆ ಪಾತ್ರರಾಗುವಂತೆ ಕಲಾಪಗಳನ್ನು ನಡೆಸಿಕೊಡಬೇಕು. ನಮ್ಮವರಿಗೆ ಬರಬಹುದಾದ ಅಪನಿಂದೆಯಿಂದ ಪಾರು ಮಾಡಬೇಕು" ಎಂದು ಪ್ರಾರ್ಥಿಸಿದರು. "ಸತ್ಕಾರ್ಯದಲ್ಲಿ ಪ್ರವೃತ್ತರಾದವರಿಗೆ ದೇವರ ಕೃಪೆ ಇದ್ದೇ ಇರುತ್ತದೆ. ಆತಂಕ ಬೇಡ. ನಾನೂ ಬರುತ್ತೇನೆ. ಎಲ್ಲರೂ ಸೇರಿ ನಮ್ಮ ಕರ್ತವ್ಯ ಮಾಡೋಣ. ನಮ್ಮ ಯೋಗಕ್ಷೇಮ ಈ ಹುತವಾಹನ ಹೊರುತ್ತಾನೆ" ಎಂದು ಅಭಯ ನುಡಿದರು. ಊರಿಗೆ ವಾಪಸಾಗಿ ಈ ವಿವರ ತಿಳಿಸಿದಾಗ ನಮಗೆಲ್ಲಾ ಮತ್ತಷ್ಟು ಧೈರ್ಯವಾಯಿತು. ಎಲ್ಲ ವ್ಯವಸ್ಥೆಗಳೂ ಹುರುಪಿನಿಂದ ಆಗಲಾರಂಭಿಸಿದವು. ಅಷ್ಟು ಹೊತ್ತಿಗೆ ನನಗಿದ್ದ ಆಶೌಚವೂ ನಿವಾರಣೆಯಾಗಿತ್ತು. ಅತ್ತ ಕಾವ್ಯವಾಚನ-ವ್ಯಾಖ್ಯಾನಗಳ ಅಮೃತವರ್ಷಧಾರೆಯ ಆಕರ್ಷಣೆ! ಇತ್ತ ವೇದೋಕ್ತ ಕಾಮ್ಯಕರ್ಮಗಳನ್ನು ಶ್ರದ್ಧೆಯಿಂದ ನಡೆಸಲು ಅಚ್ಚುಕಟ್ಟಾದ ವ್ಯವಸ್ಥೆಯ ವಿತರಣೆ! ಅಹೋಬಲರಾಯರ ಛತ್ರ, ಭವಾನಿ ಶಂಕರೇಶ್ವರಸ್ವಾಮಿ ದೇವಸ್ಥಾನಗಳ ಪರಿಸರವು ಯಜ್ಞಸಮಾರಂಭದ ಪವಿತ್ರಕ್ಷೇತ್ರವಾಗಿಯೂ ಪರಿವರ್ತಿತವಾಯಿತು.

ನಡೆಯಬೇಕಾದ ಮೂರು ದಿನಗಳ ಕಲಾಪ ಪ್ರಾರಂಭವಾಗುವ ದಿನದ ಹಿಂದಿನ ದಿನ, ಘನಪಾಠಿಗಳೂ ಋತ್ವಿಜರೂ ಆಗಮಿಸಿದರು. ಅವರಿಗಾಗಿ ಏರ್ಪಡಿಸಿದ್ದ ವಸತಿಗಳಲ್ಲಿ ಎಲ್ಲರೂ ಸ್ಥಳೀಯರೊಡಗೂಡಿ, ಬಿಡಾರ ಮಾಡಿದರು. ಮಾರನೆಯ ದಿನ ಋತ್ವಿಗ್ವರಣವಾಗಿ -ನಿಯೋಜಿತ ವಿಧ್ಯುಕ್ತ ಕಾರ್ಯಗಳು ಪ್ರಾರಂಭವಾದವು. ಕಾಲಕಾಲಕ್ಕೆ ಯಾವ ಲೋಪವೂ ಇಲ್ಲದೆ ನಡೆದವು. ಎರಡು ದಿನಗಳೊಳಗಾಗಿ ಭವಾನಿ ಶಂಕರೇಶ್ವರ ಸ್ವಾಮಿಯವರ ನೆತ್ತಿಯ ಮೇಲೆ ಎರಡು ಅಡಿ ಅಭಿಷೇಕ ಜಲ ನಿಂತಿತು! ಆದರೂ ಆ ಉರಿಗಣ್ಣನ ನೆತ್ತಿ ತಂಪಾಗಿ ಸೀತ ಕುಂದಿದಂತೆ ಕಾಣಲೇ ಇಲ್ಲ! ಜಪ, ಪಾರಾಯಣ ಹೋಮಾದಿಗಳು ನಡೆದಿವೆ. ಅತ್ತ ಅಹೋಬಲರಾಯರ ಛತ್ರದಲ್ಲಿ ಉತ್ತರ ಗೋಗ್ರಹಣದ ವಿಮೋಚನೆಯಾಗುತ್ತಿದೆ. ಧರ್ಮಿಷ್ಠರಾದ ಪಾಂಡವರು ಅಜ್ಞಾತವಾಸ ಮುಗಿಸಿ ಪ್ರಕಟವಾಗಲಿದ್ದಾರೆ. ಗಾಂಡೀವಿಯ ಇಂದ್ರಧನುಸ್ಸು ಠೇಂಕಾರ ಮಾಡಲಿದೆ. ಧರ್ಮರಾಜ ವಿರಾಟನ ಸಿಂಹಾಸನ ಏರಲಿದ್ದಾನೆ! ಪಾಂಡವರಿದ್ದಲ್ಲಿ ಸುಭಿಕ್ಷೆ ನೆಲಸಬೇಡವೆ? ಅಭಿಮನ್ಯು-ಉತ್ತರೆಯರ ವಿವಾಹ ಮಂಗಳ ಜರುಗುವ ಕೊನೆಯ ಘಟ್ಟಕ್ಕೆ ಬಂದಾಗಿದೆ. ಈ

ಎಲ್ಲದರ ದ್ಯೋತಕವಾಗಿ ಸುವೃಷ್ಟಿ ವರ್ಷಿಸಿ ಎಲ್ಲರಿಗೂ ಹರ್ಷವನ್ನುಂಟು ಮಾಡಬೇಕಿತ್ತಲ್ಲವೆ ? ಅರ್ಧ ಮಂಡಲದ ಈ ಕಾರ್ಯಕ್ರಮ ಸಾಂಗವಾಗಿ ನೆರವೇರಲು ಒಂದೇ ದಿನ ಬಾಕಿ, ಆದರೂ ಮಳೆ ಬರುವ ಸೂಚನೆಯೇ ಇಲ್ಲ.

ಸಂಭ್ರಮದ ಈ ದೇವತಾ ಸೇವೆಗಳು, ಆನಂದದಾಯಕವಾದ ಇಪ್ಪತ್ನಾಲ್ಕು ದಿನಗಳ ಭಾರತವಾಚನ ಒಂದು ದಿನದ ಅನಂತರ ಮುಗಿದು ಹೋಗುತ್ತವೆ. ಉದ್ದಿಷ್ಟ ಮಳೆಯೂ ಬರಲಿಲ್ಲ. ಎಲ್ಲರಿಗೂ ಬೇಸರ. ಆದರೂ ಯಥಾನುಕ್ರಮವಾಗಿ ನಿಶ್ಚಿತ ಕಲಾಪ ನಡೆದು ಕೊನೆಯ ದಿನವೂ ಬಂದಿತು. ಹವನ ಹೋಮಗಳೂ ಮುಗಿದು ಪೂರ್ಣಾಹುತಿಯೂ ಆಯಿತು. ಘನಪಾಠಿಗಳೂ, ಅವರನ್ನು ಹಿಂಬಾಲಿಸಿ ಇತರೆ ಋತ್ವಿಜರೂ ಭಕ್ತಾದಿಗಳೂ ಇಂದ್ರ, ವರುಣ, ಪರ್ಜನ್ಯರನ್ನು ಮಂತ್ರಪೂರ್ವಕವಾಗಿ ಕರೆಯುತ್ತ "ಪರ್ಜನ್ಯ ಏಹಿ" ಎಂದು ಉಚ್ಚಕಂಠದಿಂದ ಬೇಡುತ್ತ, ದೇವಾಲಯದ ಪ್ರದಕ್ಷಿಣೆ ಹೊರಟರು. ಮಧ್ಯಾಹ್ನ ಎರಡು ಗಂಟೆ. ಉರಿಯುವ ಸೂರ್ಯನ ತಾಪ ಬೇಸಿಗೆಯನ್ನು ನೆನಪಿಗೆ ತರುತ್ತಿದೆ. ಆಕಾಶ ಗುಡಿಸಿ ತೊಳೆದು ಸಾರಿಸಿ, ಬಟ್ಟೆಯಿಂದ ಒರೆಸಿದಂತೆ ಸ್ವಚ್ಛನೀಲ! ಗಾಳಿಯ ಸಂಚಾರವೂ ಇಲ್ಲ. ಇನ್ನೆಲ್ಲಿಯ ಮಳೆ ?

ಎಲ್ಲರೂ ನಿಸ್ತೇಜರಾದರು. ಪ್ರದಕ್ಷಿಣೆ ಒಂದಾಯಿತು, ಎರಡಾಯಿತು, ಮೂರಾಯಿತು, ವರ್ಷಾಧಿಪತಿಗೆ ಮೊರೆ ಇಡುವುದು ಸಾಗಿಯೇ ಇತ್ತು. ನಾಲ್ಕನೆಯ ಸುತ್ತಿನ ಹೊತ್ತಿಗೆ ಆ ಮೊರೆ ಗುರಿತಲುಪಿರಬೇಕು. ಈಶಾನ್ಯ ದಿಕ್ಕಿನಿಂದ, ಅಮರ ಗಿರಿಯ ಶಿಖರದಿಂದ ಬೆಳ್ಳಿಯ ಗೆಜ್ಜೆಯ ಗೊಂಚಲಿನಂತೆ ಉಂಡುಂಡೆಯಾದ ಮೋಡಗಳು ಸರಸರನೆ ಮೇಲೇರಿ ಬರುವುದು ಕಾಣಿಸಿತು! ಸೂರ್ಯನ ಕಿರಣ ಬಹುಬೇಗ ಮಂಕಾದವು. ದೇವಾಲಯದ ಆವರಣದಲ್ಲಿದ್ದ ಅರಳಿಯ ಮರ ಹರ್ಷ ಪುಲಕಿತವಾಗಿ ಅಲ್ಲಾಡಲಾರಂಭಿಸಿತು. ಪವಮಾನನೂ ಸುಪ್ರೀತನಾಗಿರಬೇಕು! ಇದೆಲ್ಲವನ್ನೂ ನೋಡ ನೋಡುತ್ತ ಎಲ್ಲರೂ ಆಶ್ಚರ್ಯ ಚಕಿತರಾದರು. ಅದ್ಭುತದ ನಿರೀಕ್ಷೆಯಲ್ಲಿ ರೋಮಾಂಚನಗೊಂಡರು. ತೀವಿದ ಹೋಮ ಧೂಮ ನೆತ್ತಿಯ ಮೇಲೆ ದಟ್ಟೈಸಿದ ಮೋಡಗಳಿಗೆಲ್ಲಾ ಕಪ್ಪು ಬಣ್ಣ ಬಳಿಯಿತೇನೋ ಎಂಬಂತೆ ಕಾಣಲಾರಂಭಿಸಿದಾಗ ಎಲ್ಲರ ಆಶಾನೇತ್ರಗಳೂ ಅತ್ತ ಕಡೆಗೇ! ಆದರೆ ಘನಪಾಠಿಗಳು ಅವಿಚಲಿತಚಿತ್ತರಾಗಿ, ಅತ್ತಿತ್ತ ನೋಡದೆ, ಮಂತ್ರೋಚ್ಚಾರ ಮಾಡುತ್ತಾ, ಜೋಡಿಸಿದ ಕರಗಳನ್ನು ಶಿರದ ಮೇಲಿರಿಸಿಕೊಂಡು ಪ್ರದಕ್ಷಿಣೆ ಬರುತ್ತಾ; "ಓ, ಇಂದ್ರ; ಓ, ವರುಣ; ಓ, ಪರ್ಜನ್ಯ" ಎಂದು ಮೇಘಗಂಭೀರ ವಾಣಿಯಿಂದ ಪ್ರಾರ್ಥಿಸುತ್ತಲೇ ಇದ್ದರು!!

ಆರನೆಯ ಸುತ್ತು ಮುಗಿಯುವುದರೊಳಗೆ, ಮಡವುಗಟ್ಟಿದ ಮೋಡದ ಕಟ್ಟೆ ತುಂಬಿ ಕೋಡಿ ಬಿತ್ತು! ಈಶ್ವರ ತನ್ನ ಜಟೆಯನ್ನು ಸಡಿಲಿಸಿದಂತೆ ಕಾಣಿಸಿತು. ತಟತಟನೆ ಮಳೆಯ ತೋರ ಹನಿಗಳು ಸಶಬ್ದವಾಗಿ ಉದುರ ತೊಡಗಿದವು. ಎಲ್ಲರಿಗೂ ಸಂಭ್ರಮ. ಉದ್ವಿಗ್ನತೆ ! ಎಂಟನೆಯ ಸುತ್ತಿನ ಹೊತ್ತಿಗೆ ಮಳೆ ಪ್ರಾರಂಭವಾಯಿತು. ಜ್ಞಾಪಿಸಿಕೊಂಡರೆ ಈಗಲೂ ಅದು ಪವಾಡ ಅನಿಸುತ್ತದೆ. ಕರೆಕರೆದಂತೆಲ್ಲಾ ವಿಧೇಯತೆಯಿಂದ ದಿಢೀರನೆ ಬಂದ ಮಳೆ ಇಪ್ಪತ್ತು -ಇಪ್ಪತ್ತೈದು ನಿಮಿಷ ಸುರಿಯಿತು. ಮನೆಯ ಸೂರುಗಳಿಂದ ನೀರಿಳಿಯಿತು. ರಸ್ತೆ ಚರಂಡಿಗಳಲ್ಲಿ ತುಂಬಿ ಹರಿಯಿತು. ಗುಂಡಿಗೊಟರುಗಳಲ್ಲಿ ತುಂಬಿಕೊಂಡಿತು. ವಿಸ್ಮಯಾವಿಷ್ಟರಾದ ಅನೇಕರು ನಿಂತಲ್ಲಿಯೇ ನಿಂತು ತೊಯ್ದು ಹೋದರು. "ಇದೆಲ್ಲಾ ಮಾಡಿದರೆ ಮಳೆ ಬಂದು ಬಿಡುತ್ತದೋ? ಇವರು ಮಳೆ ತರಿಸುತ್ತಾರೋ?" ಎಂದು ಅಣಕದ ಮಾತಾಡಿ ಮತ್ತಷ್ಟು ಚುಚ್ಚಲು ನಾಲಗೆ ಮಸೆಯುತ್ತಿದ್ದ ಹಿರಿಯರೊಬ್ಬರು ಅಂಗಳದಲ್ಲಿ ನಿಂತಿದ್ದವರು ಮೋಡ ಮುಸುಕಿದೊಡನೆಯೇ ದಿಙ್ಮೂಢರಾದರು. ಮಳೆಗೆ



**14.** *ಶ್ರೀ ಸತ್ಯನಾರಾಯಣಪೂಜಾನಿರತ ಶಾಸ್ತ್ರಿಗಳು*



*15. ಪೂಜಾಸಂಭ್ರಮ : ಪರಿವಾರದ ನಡುವೆ ಲಕ್ಷ್ಮೀಕೇಶವಶಾಸ್ತ್ರಿಗಳು. ರತ್ನಮ್ಮನವರು, ರಘುಪತಿ ಶಾಸ್ತ್ರಿ, ಮಮ್ಮಗ ಲಕ್ಷ್ಮೀಕೇಶವ ಶಾಸ್ತ್ರಿ, ಸುಲೋಚನಾ ಶಾಸ್ತ್ರಿ, ಪುರೋಹಿತರು*

ಮರೆಯಾಗಿ ಪಕ್ಕದ ಪಡಸಾಲೆಗೆ ಹೋಗಿ ನಿಲ್ಲೋಣ ಎಂಬುದನ್ನೇ ಮರೆತು ನಿಂತುಬಿಟ್ಟರು.

ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗವಾದನಂತರ ಮನೆಗೆ ಮರಳಿದವರೆಲ್ಲರೂ ದಿವ್ಯಾನುಭೂತಿಯಿಂದ ಭಾವಾವಿಷ್ಟರಾದರು. ಅಮೋಘವಾದ ಭಾರತ ವಾಚನ-ವ್ಯಾಖ್ಯಾನ ಕಾರ್ಯಕ್ರಮಕ್ಕೆ ಅರ್ಹವಾದ ಅಸದೃಶ ಮುಕ್ತಾಯ! ಅದರ ಪ್ರಭಾವ ಸಂಜೆಯ ಸಮಾರೋಪ ಕಾರ್ಯಕ್ರಮದ ವೇಳೆ ಕಾಣಿಸಿತು. ವಾಚನ ಮಂಗಳಕ್ಕೆ, ವ್ಯಾಸ ಪೂಜೆಗೆ, ಸನ್ಮಾನ ಸಮರ್ಪಣೆಗೆ ಅತಿಶಯವಾದ ಜನ ಸಂದಣಿ! ಉತ್ತೇಜಿತರಾದ ವೆಂಕಟೇಶಯ್ಯ ಮನತಣಿಯುವಂತೆ ಹಾಡಿದರು. ಶಾಸ್ತ್ರಿಗಳೂ ಉತ್ಸಾಹದ ಬುಗ್ಗೆ! ಉಕ್ಕುವ ಸ್ಫೂರ್ತಿಯಿಂದ ನಿರೂಪಿಸಿದರು, ಮಾತಾಡಿದರು. ಕಲಾವಿದರಿಬ್ಬರಿಗೂ ಸಂಭಾವನೆಯ ಕಡೆಗೆ ಲಕ್ಷ್ಯವಿರಲಿಲ್ಲ. ಕವಿಹೃದಯವನ್ನು ಅರಿತು ಕಾವ್ಯರಸಾಸ್ವಾದ ಮಾಡಬಲ್ಲ ಸಹೃದಯ ರಸಿಕರ ನೆರವಿನಿಂದಲೇ ಕಾವ್ಯದ ಸಾರ್ಥಕ್ಯ ಎಂಬ ಕವಿಕುಲ ಗುರುವಿನ ಉಕ್ತಿಯಂತೆ, ತಮ್ಮ ಕಾರ್ಯಕ್ರಮಕ್ಕೆ ಪ್ರೋತ್ಸಾಹಕೊಟ್ಟ - ಅರಸೀಕೆರೆಯ ಶ್ರೋತೃಗಳು ತಮ್ಮ ಕಲಿಕೆಗೆ ಸಾರ್ಥಕ್ಯ ತಂದುಕೊಟ್ಟರೆಂದು ತೃಪ್ತಿಪಟ್ಟರು. ಮೊದ ಮೊದಲು ಸ್ನಾನಂದಕ್ಕಾಗಿ ತುಂಗೆಯ ತಟದಲ್ಲಿ ಬೆಳೆಸಿಕೊಂಡ ಹವ್ಯಾಸ, ಅಗೀಗ ಆಸಕ್ತರ ಅಪೇಕ್ಷೆಯಂತೆ ಅಲ್ಲಲ್ಲಿ ನಡೆಸಿದ ಕಾವ್ಯ ಪರಿಚರ್ಯೆ - ಅದು ಜನಪ್ರಿಯವಾಗಿ, ತಾವು ನಾಡಿನ ವಿಶಾಲ ಕ್ಷೇತ್ರಕ್ಕೂ ಪ್ರವೇಶಿಸಲು ಅರಸೀಕೆರೆ ತೆರೆದ ಮಹಾದ್ವಾರವಾಗಿ ಅವಕಾಶ ಕಲ್ಪಿಸಿಕೊಟ್ಟಿತಲ್ಲ ಎಂಬ ಹಿಗ್ಗು ಅವರಿಗೆ. ವಿದ್ಯೆಗೆ ತಕ್ಕ ವಿನಯದ ವಾಕ್ಕುಗಳಿಂದ ತಮ್ಮ ಈ ಹೃದಯಸ್ಥ ಭಾವನೆಗಳನ್ನು ಕಾವ್ಯಮಂಗಳದ ಅನಂತರ ಆಡಿಯೂ ತೋರಿದರು.

ಇದೇ ಸಂದರ್ಭದಲ್ಲಿ ಸಹೃದಯರೊಬ್ಬರು ಬೆಳಕಿಗೆ ಬಂದ ವಿಚಾರ ಉಲ್ಲೇಖಾರ್ಹವಾಗಿದೆ. ನಮ್ಮೂರಿನ ಪ್ರೌಢಶಾಲಾ ವಾಣಿಜ್ಯ ವಿಭಾಗದ ಉಪಾಧ್ಯಾಯರೊಬ್ಬರು - ನನಗೆ ಪರಿಚಯದವರು - ಈ ಮುಕ್ತಾಯ ಸಮಾರಂಭದಲ್ಲಿ ಅಭಿನಂದನಾ ಭಾಷಣಕಾರರು.



*16. ಹೋಮ : ಆರತಿ : ಬಂಧು ಬಾಂಧವರ ನಡುವೆ ಪೂಜಾನಿರತರು : ರತ್ನಮ್ಮನವರು ಮತ್ತು  ಸುಲೋಚನಾ ಶಾಸ್ತ್ರಿ*

ಕಾರ್ಯಕ್ರಮದ ಹೆಗ್ಗಳಿಕೆಗೆ ಕಳಶವಿಟ್ಟಂತೆ - ಅದನ್ನು ನಡೆಸಿಕೊಟ್ಟ ವಿದ್ವಾಂಸರ ಕಲಾಪರಿಣತಿಯನ್ನು ವರ್ಣಿಸಿ, ಕಾವ್ಯಪ್ರಯೋಜನ-ವನ್ನೂ ಅದು ಹೃದಯಕ್ಕೆ ನೀಡುವ ಸುಸಂಸ್ಕಾರವನ್ನೂ ವಿವರಿಸಿ, ಹೃದಯಂಗಮವಾಗಿ ಮಾತಾಡಿ ತಮ್ಮನ್ನು ಪರಿಚಯಿಸಿಕೊಂಡರು! ಅವರೇ ಈಗ ಖ್ಯಾತನಾಮರಾದ ಸಾಹಿತಿ, ವಾಗ್ಮಿ ಶಿವಮೊಗ್ಗೆಯ ಕಮಲಾ ನೆಹರೂ ಕಾಲೇಜಿನ ಪ್ರಾಧ್ಯಾಪಕ ಡಾ.ಎ.ಎಸ್.ವೇಣುಗೋಪಾಲ ರಾವ್‌ರವರು! ವೈಯಕ್ತಿಕವಾಗಿ ನನಗೆ ಅವರ ಸನ್ನಿತ್ರತ್ವ ನಿಕಟಗೊಳಿಸಿದ್ದೂ ಈ ವಾಚನ-ವ್ಯಾಖ್ಯಾನಗೋಷ್ಠಿಯೇ! ಮತ್ತೊಂದು ವಿಶೇಷವೆಂದರೆ ಈ ಸಮಾರಂಭದ ಅಧ್ಯಕ್ಷತೆ ವಹಿಸಿದವರು ತಹಶೀಲದಾರ್ ರಶೀದ್‌ಖಾನ್‌ರವರು! ಶಾಸ್ತ್ರಿಗಳ ವ್ಯಾಖ್ಯಾನ ವೈಖರಿಯಿಂದ ಪ್ರಭಾವಿತರಾಗಿ - ಭಾರತ ರಾಮಾಯಣಗಳ ಒಂದೆರಡು ಅಂಶಗಳನ್ನೆತ್ತಿಕೊಂಡು ಮಾತಾಡಿ ಎಲ್ಲರನ್ನೂ ಅಚ್ಚರಿಗೊಳಿಸಿದರು. ಸಮಿತಿಯ ಅಧ್ಯಕ್ಷರೂ, ಕೆ.ರಾಮದಾಸರೂ, ಊರಿನ ಗಣ್ಯರೂ ಅಪರೂಪವಾದ ಈ ಸತ್ಸಂಗ ಬೀರಿದ ಪರಿಣಾಮ ಕುರಿತು ಹೃದಯ ಬಿಚ್ಚಿ ಹೊಗಳಿದರು. ಅದಕ್ಕೆ ಕಾರಣರಾದ ಘನಪಾಠಿಗಳ ಮೇಲೆ, ಶಾಸ್ತ್ರಿಗಳ ಮೇಲೆ, ವೆಂಕಟೇಶಯ್ಯನವರ ಮೇಲೆ ಶ್ಲಾಘನೆಯ ಹೂ-ಮಳೆಗರೆದರು. ಅಪಾರ ಗೌರವಾದರಗಳಿಂದ ವಂದಿಸಿದರು. ಇಪ್ಪತ್ನಾಲ್ಕು ದಿನಗಳ ಕಾಲ ಇಂತಹದೊಂದು ಸದವಕಾಶ ಕಲ್ಪಿಸಿಕೊಟ್ಟವರಿಗೆಲ್ಲಾ ಅಪರೋಕ್ಷವಾಗಿ ಅಭಿನಂದನೆಯ ಹಾರ ಸಂದಾಯವಾಯಿತು. ಶುಭಕಾಮನೆಯಿಂದ ಪ್ರಾರಂಭವಾಗಿ, ಶುಭಪ್ರದವಾಗಿಯೇ ಪರ್ಯವಸಾನವಾದದ್ದೆಲ್ಲವೂ ಶುಭವೇ ಎಂಬ ಮಾನಸಿಕ ಸಮಾಧಾನ ನಮ್ಮದಾಯಿತು!

ಈ ಸಮಾರಂಭದೊಂದಿಗೆ ಶಾಸ್ತ್ರಿಗಳ, ವೆಂಕಟೇಶಯ್ಯನವರ ಮತ್ತು ನಮ್ಮೂರವರ ಸಂಬಂಧ ಔಪಚಾರಿಕವಾಗುಳಿಯಲಿಲ್ಲ. ಆತ್ಮೀಯವಾಗಿ ಬೆಸೆದುಕೊಂಡಿತು. ಅವರಿಗೆ ಇಲ್ಲಿನವರು ತಮ್ಮ ಕಾರ್ಯಕ್ರಮವನ್ನು ನಿತ್ಯೋತ್ಸಾಹದಿಂದ , ಅಕ್ಕರೆಯಿಂದ ಅನುಭವಿಸಿ ಕೇಳುತ್ತಾರೆ ಎಂಬ ಕಾರಣಕ್ಕೆ ಅಭಿಮಾನ. ಹೀಗೆ ಕೇಳುವವರು ಅವರಿಗೂ ಬೇಕು. ಇಲ್ಲದಿದ್ದರೆ ತಮ್ಮ ವಿದ್ಯೆ ಕಾಡಿನ ಬೆಳುದಿಂಗಳಾಗುತ್ತದೆ ಎಂದು ತಿಳಿದವರು ಅವರು. ತಾವೇ ಮುಂದಾಗಿ ಕೇಳಿಸಿ ಸಂತೋಷಿಸುವವರು. ಅವರ ಈ ವರ್ತನೆಯನ್ನು ಕಂಡಾಗೆಲ್ಲಾ ಪೂಜ್ಯ ಮಾಸ್ತಿಯವರು ತಮ್ಮ 'ಭಾವ' ಎಂಬ ಕೃತಿಯಲ್ಲಿ ಪ್ರಸ್ತಾಪಿಸಿರುವ ಹೃದಯಸ್ಪರ್ಶೀ ವಿಷಯವೊಂದರ ನೆನಪಾಗುತ್ತದೆ. ವೈಣಿಕ ಶಿಖಾಮಣಿ ಶೇಷಣ್ಣನವರು ತಮ್ಮ ಮನೆಯಲ್ಲಿ ಆಗಾಗ್ಗೆ ತಾವೇ ತಮ್ಮ ವೀಣಾಕಛೇರಿಯನ್ನು ಏರ್ಪಡಿಸಿ, ಸಂಗೀತಪ್ರಿಯರಾದವರ ಮನೆಮನೆಗೆ ತಾವೇ ಹೋಗಿ ಕರೆತಂದು ಅವರಿಗೆ ತಮ್ಮ ಸ್ವರ್ಗೀಯ ವಾದನವನ್ನು ಕೇಳಿಸುತ್ತಿದ್ದರಂತೆ! ಹೊಸಹಳ್ಳಿ, ಮತ್ತೂರು, ಶಿವಮೊಗ್ಗೆಯವರಿಗೂ ಅದೇ ನಿರಾಡಂಬರ ಸ್ವಭಾವ. ಈ ಸಾರಸ್ವತಾಸಕ್ತಿಯ ಸೂತ್ರ ಅಲ್ಲಿಯವರನ್ನೂ, ಇಲ್ಲಿಯವರನ್ನೂ ಬಹಳ ಹತ್ತಿರಕ್ಕೆ ತಂದು ಕೂಡಿಸಿದೆ. ಆಗಿನಿಂದ ಅರಸೀಕೆರೆಯ ಶ್ರೀರಾಮ ಭಜನ ಬಾಲ ಸೇವಾ ಸಂಘದ ರಾಮೋತ್ಸವದ ಕಾರ್ಯಕ್ರಮಗಳು - ಶಾಸ್ತ್ರಿಗಳು, ಮಾರ್ಕಂಡೇಯಾವಧಾನಿಗಳು, ಪ್ರಸನ್ನ, ರಘುಪತಿ ಶಾಸ್ತ್ರಿ, ರಾಜಾರಾಂ, ವೆಂಕಟೇಶಯ್ಯನವರು, ಎಚ್.ಆರ್.ಕೇಶವಮೂರ್ತಿಯವರು, ರಾಮಶಾಸ್ತ್ರಿಯವರು, ತಿರುಮಲಾವಧಾನಿ - ಇವರುಗಳಲ್ಲಿ ಒಬ್ಬರಲ್ಲ ಮತ್ತೊಬ್ಬರ ಕಾರ್ಯಕ್ರಮವಿಲ್ಲದೆ ನಡೆದೇ ಇಲ್ಲ. ಅವರುಗಳೆಲ್ಲಾ ಬಿತ್ತಿ ಬೆಳೆಸಿದ ಅಭಿರುಚಿಯ ಫಲವಾಗಿ ಎಂ.ಎಸ್.ಚಂದ್ರಶೇಖರಯ್ಯ, ಎಚ್.ಕೆ. ರಾಮಸ್ವಾಮಿ, ಎಸ್.ನಾಗೇಶರಾವ್, ಶ್ರೀಮತಿಯರಾದ ಅನ್ನಪೂರ್ಣಮ್ಮ, ರುಕ್ಮಿಣಿಯಮ್ಮ ಮೊದಲಾದ ಹಿರಿಯ ಗಮಕ ವಿದ್ವಾಂಸರೂ ಪರಿಚಿತರಾದರು. ಅವರೆಲ್ಲರೂ ಸತತವಾಗಿ ರಾಘವಾಂಕ, ಲಕ್ಷ್ಮೀಶ, ಕುಮಾರವ್ಯಾಸ, ಕುಮಾರವಾಲ್ಮೀಕಿ, ರುದ್ರಭಟ್ಟ, ತಿಮ್ಮಣ್ಣ ಕವಿ, ಕನಕದಾಸ, ಮುದ್ದಣ, ಈ ಕವಿಗಳ ಕಾವ್ಯಧಾರೆಯಲ್ಲಿ ನಮ್ಮನ್ನು ಮೀಯಿಸಿದರು. ವೆಂಕಟೇಶಯ್ಯನವರು ಇಲ್ಲೇ ಉಳಿದು ಎರಡು ವರ್ಷಗಳ ಕಾಲ ದೇವನೂರು, ಬಾಣಾವರ ಅರಸೀಕೆರೆಗಳಲ್ಲಿ ಗಮಕ ತರಗತಿಗಳನ್ನು ನಡೆಸಿದರು. ಸಂಗೀತಗಾರರಾದ ಬಿ.ಆರ್. ಸುಬ್ಬುಕೃಷ್ಣ, ಕುಮಾರಿ ಗಾಯತ್ರಿ, ಗಮಕ ಶಿಕ್ಷಣ ಪಡೆದದ್ದು ಆಗಲೇ. ಅದರ ಫಲವಾಗಿ ಅರಸೀಕೆರೆಯ ಪರಿಸರ ಗಮಕ ಕಲೆಯ ಫಲವತ್ತಾದ ಕ್ಷೇತ್ರ ಅನಿಸಿಕೊಂಡಿತು.

ಹೀಗೆ ಮೂವತ್ತು ವರ್ಷಗಳಿಂದ ಈ ಉಭಯ ಸ್ಥಳದವರಿಗೂ ಬೆಳೆದು ಬಂದಿರುವ ಸ್ನೇಹಕ್ಕೆ ಸೇತುವಾಗಿರುವವರು ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು. ಅವರ ವಿಚಾರದಲ್ಲಿ ಹೇಳಬಹುದಾದ ನಾಲ್ಕು ಮಾತುಗಳು ಅಪ್ರಸ್ತುತವಾಗಲಾರವು. ಅವರು ಈಗಾಗಲೇ ನಾಡಿಗೆಲ್ಲಾ ಪರಿಚಿತರು. ಅವರು ಅರಸೀಕೆರೆಯವರ ಅಭಿಮಾನಕ್ಕೆ ಮಾತ್ರ ಪಾತ್ರರಾಗಿಲ್ಲ; ಅವರಿಗೆ ಸನ್ಮಾನ, ಪ್ರಶಸ್ತಿ, ಗೌರವ, ಮಾನ್ಯತೆ, ಮನ್ನಣೆ ಅಪಾರವಾಗಿ ಸಿಕ್ಕಿವೆ. ಕಾವ್ಯವಾಚನವನ್ನು ಜನಪ್ರಿಯಗೊಳಿಸುವಲ್ಲಿ ಅವರ ಪಾತ್ರವೂ ಹಿರಿದು. ವ್ಯಾಖ್ಯಾನ ವಿಧಾನಕ್ಕೊಂದು ಹೊಸ ಧಾಟಿಯನ್ನು ಹಾಕಿಕೊಟ್ಟ ಅನನ್ಯ ಸಾಧಾರಣರು ಅವರು. ಅವರ ಶೈಲಿಯ ವೈಶಿಷ್ಟ್ಯಕ್ಕೆ ಅವರ ರೂಪವೂ ವಿಲಕ್ಷಣ ಸೊಬಗು ನೀಡುವುದು


ಕಾರಣವಿರಬೇಕು! ಅವರು ವ್ಯಕ್ತಿಯಾಗಿ ಸ್ನೇಹಪರರು. ಸುಲಭ ಸಾಧ್ಯರು. ಆತ್ಮೀಯವಾಗಿ ಹೊಂದಿಕೊಳ್ಳುವ ಗುಣವುಳ್ಳವರು. ಸಾಹಿತ್ಯ, ಸಂಸ್ಕೃತಿ, ಧಾರ್ಮಿಕ ವಿಚಾರಗಳನ್ನು ಸದಾಚಿಂತಿಸುವುದರಿಂದಲೋ ಏನೋ ಪ್ರಸನ್ನಚಿತ್ತರು. ವ್ಯಾಖ್ಯಾನಕಾರರಾಗಿ ಅವರು ನಿಪುಣರು. ಅವರ ಸ್ವಾಭಾವಿಕ ಪ್ರತಿಭೆ ಸಾತತ್ಯವಾಗಿ, ವಿಸ್ತಾರವಾಗಿ ಬೆಳೆಯುತ್ತಲೇ ಇರುತ್ತದೆ. ಅವರೊಬ್ಬ ಜ್ಞಾನಭಿಕ್ಷು! ಅಧ್ಯಯನಶೀಲರು. ತಮ್ಮ ನೆನಪಿನ ಕೋಶಾಗಾರಕ್ಕೆ, ವ್ಯಾಖ್ಯಾನವೃತ್ತಿಗೆ ಸುಯೋಗ್ಯವಾದ ಪರಿಕರಗಳನ್ನು ಕಲೆ ಹಾಕುವುದರಲ್ಲಿ ಬೇಸರವನ್ನೇ ಅರಿಯದವರು. ವೇದಿಕೆ ಏರಿದರೆ ಈಗ ಅದೇ ಬಗೆಯ ವ್ಯಾಖ್ಯಾನ, ಪಾತ್ರಪೋಷಣೆ! ಮಾತಿನ ಗಾರುಡಿ! ಕಿರಿಯ ಗಮಕಿಗಳ ಜೊತೆಗೆ ಕುಳಿತು ಅವರಿಗೆ ಧೈರ್ಯತುಂಬಿ ಪ್ರೋತ್ಸಾಹಿಸಿದ ಉದಾಹರಣೆಗಳೂ ಇವೆ. ಅವರ ಸಂಪರ್ಕಕ್ಕೆ ಬಂದವರಿಗೆಲ್ಲಾ ಅವರ ಹಿರಿಮೆಯ ಪರಿಚಯವಾಗಿ, ಅವರ ವೈದುಷ್ಯವೂ, ಸರಸ ಸಜ್ಜನಿಕೆಯೂ, ಸರ್ವರ ಗೌರವಾದರಗಳಿಗೆ ಪಾತ್ರರನ್ನಾಗಿಸಿವೆ! ಅವರು ವಾಖ್ಯಾನವಾಚಸ್ಪತಿಗಳು ಮಾತ್ರವಲ್ಲ, **ಸಾಭಿನಯ ವ್ಯಾಖ್ಯಾನ ವಿಚಕ್ಷಣವೇತ್ತರೂ ಹೌದು !!**

ಶಾಸ್ತ್ರಿಗಳ ಮತ್ತು ಅವರ ಚಿರಂಜೀವರ ಕಾರಣದಿಂದಾಗಿ ತುಂಗಾತಟಿಯವರಿಗೂ - ನಮ್ಮವರಿಗೂ ಅನ್ಯೋನ್ಯತೆ ಹಾಗೇ ಮುಂದುವರಿದಿದೆ. ಏಕೆಂದರೆ ಅವರೆಲ್ಲಾ ನಾವು ಕರೆದಾಗ ಬಂದರು, ಹಾಡಿ ಮೆಚ್ಚಿಸಿದರು, ಮಾತಾಡಿ ನಮ್ಮನ್ನು ಗೆದ್ದುಕೊಂಡರು!

## ೨೦. ಕಲೋಪಾಸಕ ಶ್ರೀ ಶಾಸ್ತ್ರಿಗಳು

*ಎಸ್. ಮಹಾಬಲ*

೧೯೦೫ರಲ್ಲಿ ಮತ್ತೂರಿನಲ್ಲಿ ಇವರ ಜನನ. ತಂದೆ ವೇದ ವಿದ್ವಾಂಸರಾಗಿದ್ದ ಬ್ರಹ್ಮೀಭೂತ ಚನ್ನಪ್ಪಾವಧಾನಿಗಳು;



*17. ಎಚ್.ಆರ್. ರಾಮಶಾಸ್ತ್ರಿಗಳು*

ತಾಯಿಯಾದರೋ ಔದಾರ್ಯ, ಕರುಳುಪ್ರೀತಿ ಹಾಗೂ ಅನುಕಂಪಗಳ ಸಾಕಾರಮೂರ್ತಿಯಾಗಿದ್ದ ಶ್ರೀಮತಿ ಸಾವಿತ್ರಮ್ಮನವರು. ಶಾಸ್ತ್ರಿಗಳು ಒಳ್ಳೆಯ ಮನೆತನದಲ್ಲಿ ಹುಟ್ಟಿ ಒಳ್ಳೆಯ ವಾತಾವರಣದಲ್ಲಿ ಬೆಳೆದರು. ಮತ್ತೂರು ಹೊಸಹಳ್ಳಿಯ ಜನರಿಗೆಲ್ಲಾ ಅಚ್ಚುಮೆಚ್ಚಾಗಿದ್ದರು. ಅವರ ತಾಯಿಯ ಮನೆ ಹೊಸಹಳ್ಳಿಯಾದುದರಿಂದ ಅವರು ಎರಡೂ ಊರಿಗೆ ಸೇರಿದ ಬಾಲಕನಂತೆ ಬೆಳೆದರು.

ಬಹಳ ಚಿಕ್ಕವಯಸ್ಸಿನಲ್ಲಿಯೇ ಕನ್ನಡ, ಸಂಸ್ಕೃತ ಹಾಗೂ ಗಣಿತಗಳಲ್ಲಿ ವಯಸ್ಸಿಗೆ ಮೀರಿದ ಪ್ರೌಢಿಮೆ ಪಡೆದಿದ್ದರು. ಅವರಿಗೆ ಕನ್ನಡ ಮತ್ತು ಗಣಿತದಲ್ಲಿ ಆಸಕ್ತಿ ಮೂಡಿಸಿದವರು- ಎರಡು ಊರಿಗೇ ಉಪಾಧ್ಯಾಯರಾಗಿದ್ದ ವೇ. ಬ್ರ. ಶ್ರೀ ಚಿಂತಾಮಣಿ ಅವಧಾನಿಗಳು. ಮುಂದೆ ಅವರ ವ್ಯಾಖ್ಯಾನಕ್ಕೆ ಪ್ರೋತ್ಸಾಹಿಸಿ, ತಪ್ಪದೇ ಊರಿನಲ್ಲಿ ನಡೆಯುವ ಎಲ್ಲಾ ವಾಚನ ಸಭೆಗಳಿಗೂ ಹಾಜರಿರುತ್ತಿದ್ದ ಪೂಜ್ಯ ಚಿಂತಾಮಣಿ ಅವಧಾನಿಗಳು ತಮ್ಮ ೯೫ನೇ ವಯಸ್ಸಿನಲ್ಲೂ ಭಾರತ ವಾಚನದಲ್ಲಿ ಮೊದಲು ಹಾಜರಿದ್ದು ಇವರು ಕೀರ್ತಿವಂತರಾಗಲು ಕಾರಣರಾದವರಲ್ಲಿ ಪ್ರಮುಖರು.

ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸ್ನೇಹಿತರಾದ ಶ್ರೀ ವಿ. ಅನಂತಶಾಸ್ತ್ರಿಗಳು, ಶ್ರೀ ರಾಮಶಾಸ್ತ್ರಿಗಳು ಮುಂತಾದವರ ಜತೆ ಬೆಂಗಳೂರಿಗೆ ಹೋಗಿ ನಾಲ್ಕು ವರ್ಷಕಾಲ ವ್ಯಾಸಂಗ ಮಾಡಿ ವಾಪಸ್ಸು ಬಂದು, ಸಂಸ್ಕೃತ ಪಾಠಶಾಲೆಯ ಉಪಾಧ್ಯಾಯರಾದರು. ಇದೇ ಸಂದರ್ಭದಲ್ಲಿ ಸಮಗ್ರ

ಗದುಗಿನ ಭಾರತವನ್ನೇ ಕಂಠಸ್ಥ ಮಾಡಿಕೊಂಡಿದ್ದ ಪ್ರಸಿದ್ಧ ಗಮಕಿಗಳಾದ ಶ್ರೀ ಬಿಂದೂರಾಯರ ಭಾರತವಾಚನ ಕೇಳುವ ಅವಕಾಶ ದೊರಕಿತು. ಅದು ಇವರ ಮೇಲೆ ತುಂಬಾ ಪ್ರಭಾವ ಬೀರಿತು. ಜತೆಗೆ ಇವರ ಸೋದರಮಾವಂದಿರಾದ ಶ್ರೀ ಎಚ್.ಎಸ್.ವಿಶ್ವನಾಥ ಶಾಸ್ತ್ರಿಗಳು ನಡೆಸುತ್ತಿದ್ದ ಯಕ್ಷಗಾನ ಪ್ರಸಂಗ ಇವುಗಳ ಪ್ರಭಾವವೂ ಇವರ ಮೇಲೆ ಆಯಿತು. ಸುಮಾರು ೧೯೩೫ನೇ ಇಸ್ವಿಯಲ್ಲಿ ಕೆಲವರ ವಾಚನ ಇವರ ವ್ಯಾಖ್ಯಾನದೊಡನೆ ಪ್ರತಿ ಏಕಾದಶಿಯಂದು ನಡೆಯಲು ಪ್ರಾರಂಭವಾಯಿತು.

ಆಗಿನ ಕಾಲದ ವಾಚಕರಲ್ಲಿ ಪ್ರಮುಖರಾದವರು ಶ್ರೀಯುತರುಗಳಾದ ಟಿ.ರಾಮಶಾಸ್ತ್ರಿಗಳು, ಸಿ. ಸುಬ್ರಾಯಶಾಸ್ತ್ರಿಗಳು, ಎಚ್.ಆರ್. ರಾಮಸ್ವಾಮಿಶಾಸ್ತ್ರಿಗಳು, ಎ.ನಾರಾಯಣಶಾಸ್ತ್ರಿಗಳು, ಎಂ.ಎಸ್.ಕೃಷ್ಣಸ್ವಾಮಿಗಳು ಹಾಗೂ ಎಸ್.ಕೇಶವಶ್ರೌತಿಗಳು. ಹೀಗೆ ಪ್ರಾರಂಭವಾದ ವಾಚನ-ವ್ಯಾಖ್ಯಾನ ಕಾರ್ಯಕ್ರಮ ಅವರ ಪರಿಶ್ರಮದಿಂದ ಹಾಗೂ ಜನರ ಪ್ರೋತ್ಸಾಹದಿಂದ ಶಿವಮೊಗ್ಗಾನಗರ ಹಾಗೂ ಇತರ ಕಡೆಗಳಲ್ಲಿ ಪ್ರಾರಂಭವಾಯಿತು. ಅವರ ಜೊತೆಗೆ ಹೆಚ್ಚಾಗಿ ಶ್ರೀ ಟಿ. ರಾಮಶಾಸ್ತ್ರಿಗಳು ವಾಚನ ಮಾಡುತ್ತಿದ್ದರು. ಅವರಿಬ್ಬರ ಜೋಡಿ ಅದ್ವಿತೀಯವಾದುದು. ಪರಸ್ಪರ ಮನೋಭಾವಗಳ ಹೊಂದಾಣಿಕೆ ತುಂಬಾ ಚೆನ್ನಾಗಿತ್ತು. ಮತ್ತೂರು ಹೊಸಹಳ್ಳಿಗಳಲ್ಲಿ ಯಾವ ವಿಶೇಷ ಕಾರ್ಯಕ್ರಮಗಳಿದ್ದರೂ ರಾತ್ರಿ ಭಾರತವಾಚನವಿರುತ್ತಿತ್ತು. ಹೀಗೆ ಹದಿನೈದು ವರ್ಷಗಳ ಕಾಲ ಪರಿಶ್ರಮದಿಂದ ಅವರ ಕೀರ್ತಿ ಹೊರಗೂ ಪ್ರಸರಿಸಿತು.

ಇದೇ ಸಂದರ್ಭದಲ್ಲಿ ಮತ್ತೂರು ಹೊಸಹಳ್ಳಿ ಕರ್ನಾಟಕ ಸಂಘವನ್ನು ಮತ್ತೂರಿನಲ್ಲಿ ಸ್ಥಾಪಿಸಿ ಅದರ ಅಂಗವಾಗಿ 'ಶ್ರೀ ಶಾರದಾ ಪುಸ್ತಕ ಭಂಡಾರ'ವನ್ನು ಸ್ಥಾಪಿಸಿದರು. ಅವರಿಬ್ಬರೇ ಅದರ ಪ್ರಮುಖರಾಗಿದ್ದರು. ಇದರ ಕಾರ್ಯಕ್ರಮಗಳಿಗೆ ಶಿವಮೊಗ್ಗಾ, ಮೈಸೂರು, ಬೆಂಗಳೂರು ಮುಂತಾದ ಕಡೆಗಳಿಂದ ಕನ್ನಡದ ಕವಿಗಳನ್ನೂ, ಉದ್ದಾಮಪಂಡಿತರನ್ನೂ, ಸಂಸ್ಕೃತ ವಿದ್ವಾಂಸರನ್ನೂ, ವಿಜ್ಞಾನ ಹಾಗೂ ಕಲಾವಿದ್ವಾಂಸರನ್ನೂ ಕರೆಸುತ್ತಿದ್ದರು. ಹೀಗೆ ಎಲ್ಲಾ ರೀತಿಗಳಿಂದಲೂ ತಮ್ಮ ಜ್ಞಾನ ಹೆಚ್ಚಿಸಿಕೊಂಡು ಪರಿಪೂರ್ಣರಾಗಿ ಬೆಳೆದರು. ಅನಂತರ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರು ಪ್ರಾರಂಭಿಸಿದ ಸಂಸ್ಕೃತಿ ಪ್ರಸಾರ ಇಲಾಖೆಯ ಕೋರಿಕೆಯಂತೆ ನಾಲ್ಕು-ಐದು ವರ್ಷಗಳ ಕಾಲ ಪ್ರತಿ ತಿಂಗಳು ಕರ್ನಾಟಕದ ಅನೇಕ ನಗರ, ಪಟ್ಟಣ ಹಾಗೂ ಊರುಗಳಲ್ಲಿ ಅವರ ಕಾರ್ಯಕ್ರಮಗಳು ನಡೆದುವು. ಹೀಗೆ ಅವರ ವ್ಯಾಖ್ಯಾನ ತುಂಬಾ ಪ್ರಸಿದ್ಧವಾಯಿತು. ಅನೇಕ ಮಠಾಧಿಪತಿಗಳು, ಸರ್ಕಾರಿ ಅಧಿಕಾರಿಗಳು ಅವರ ವ್ಯಾಖ್ಯಾನ ಕೇಳಿ ಅನೇಕ ರೀತಿಯ ಮರ್ಯಾದೆ ಮಾಡಿ ಬಿರುದುಗಳನ್ನು ಕೊಟ್ಟರು.

ಈ ಹೊತ್ತಿಗೆ ನಾಟಕದ ಶ್ರೇಷ್ಠ ಅಭಿನೇತೃಗಳಾಗಿದ್ದ ಗಮಕ ವಿದ್ವಾನ್ ಕೆ. ಎಸ್. ವೆಂಕಟೇಶಯ್ಯನವರ ಪರಿಚಯ ಆಗಿ ಅವರ ವಾಚನಕ್ಕೆ ಇವರು ವ್ಯಾಖ್ಯಾನ ಮಾಡುತ್ತಿದ್ದರು. ಇದೊಂದು ಅಪೂರ್ವ ಜೋಡಿ - ಅದರಲ್ಲಿ ಶ್ರೀಯುತ ವೆಂಕಟೇಶಯ್ಯನವರ ಜೈಮಿನಿಭಾರತ ವಾಚನ, ಶ್ರೀ ಶಾಸ್ತ್ರಿಗಳ ವ್ಯಾಖ್ಯಾನ ಅದ್ಭುತ ವಾಗಿರುತ್ತಿತ್ತು. ಅನೇಕ ಕಡೆಗಳಲ್ಲಿ ಕಾರ್ಯಕ್ರಮಗಳು ನಡೆಯುತ್ತಿದ್ದವು. ತರುಣ ವಾಚಕರಾದ ಶ್ರೀ ಪಿ. ತಿರುಮಲಾವಧಾನಿಗಳು, ಶ್ರೀ ಎಚ್.ಆರ್. ಕೇಶವಮೂರ್ತಿಗಳು, ಶ್ರೀ ಎಚ್.ಕೆ. ಸೂರ್ಯನಾರಾಯಣಾವಧಾನಿಗಳು, ಸಂಗೀತ ವಿದ್ವಾಂಸರಾದ ಶ್ರೀ ಎಚ್.ಆರ್. ರಾಮಶಾಸ್ತ್ರಿ ಇವರಲ್ಲದೇ ಪ್ರಸಿದ್ಧರಾದ ಶ್ರೀ ಎಂ.ರಾಘವೇಂದ್ರರಾಯರು, ಶ್ರೀ ಸುಬ್ಬಯ್ಯ ಕೌಶಿಕ್‌ರವರು ಹಾಗೂ ಹೊಸಹಳ್ಳಿಯ ಎಚ್.ಎಸ್. ದತ್ತಾತ್ರಿ ಮುಂತಾದವರ ವಾಚನಗಳಿಗೆ ವ್ಯಾಖ್ಯಾನ ಮಾಡಿರುತ್ತಾರೆ,



*18. ಚನ್ನಕೇಶವ ಶಾಸ್ತ್ರಿ (ವ್ಯಾಖ್ಯಾನಕಾರರು) ಪತ್ನಿ ಯಶೋದ ಅವರೊಂದಿಗೆ*



*19. ರತ್ನಮ್ಮ ಲಕ್ಷ್ಮೀಕೇಶವಶಾಸ್ತ್ರಿ, ಜಯಮ್ಮ ಶಾಸ್ತ್ರಿ (ಸೊಸೆ), ಸುಲೋಚನಾ ಶಾಸ್ತ್ರಿ(ಸೊಸೆ), ರಘುಪತಿ ಶಾಸ್ತ್ರಿ (ಮಗ)*

ಹಾಗೂ ಹಲವು ವ್ಯಾಖ್ಯಾನಕಾರರಿಗೂ ಮಾರ್ಗದರ್ಶನ ಮಾಡಿದ್ದಾರೆ.

ಅವರು ಕನ್ನಡದ ಕಾವ್ಯಗಳಿಗಲ್ಲದೇ ಪುರಾಣಗಳು, ಮಹಾಭಾರತ, ರಾಮಾಯಣ, ಭಾಗವತ, ಹರಿವಂಶ ಮುಂತಾದ ಸಂಸ್ಕೃತದ ಮಹಾಕಾವ್ಯಗಳಿಗೂ ವ್ಯಾಖ್ಯಾನ ಮಾಡುವುದರಲ್ಲಿ ನಿಷ್ಣಾತರಾಗಿದ್ದಾರೆ. ಅವರು ವ್ಯಾಖ್ಯಾನದ ನಡುವೆ ಹೇಳುವ ಉಪಕಥೆಗಳು, ಮೂಲ ಕೃತಿಗಳ ಸಂದರ್ಭಗಳು, ಅದ್ಭುತವಾಗಿರುತ್ತವೆ. ಅವರು ಶ್ರೋತೃ ವರ್ಗದವರೆಲ್ಲರಿಗೂ ಮನಸ್ಸಿಗೆ ನಾಟುವಂತೆ ವ್ಯಾಖ್ಯಾನಿಸುತ್ತಾರೆ. ಶ್ರೋತೃವೃಂದ ಯಾವ ರೀತಿ ಎಂದು ತಿಳಿದು, ಅದಕ್ಕೆ ತಕ್ಕ ಹಾಗೇ, ಅದೇ ಕಾವ್ಯಕ್ಕೆ ಅದೇ ಪದ್ಯಗಳಿಗೆ ವೈವಿಧ್ಯಮಯವಾಗಿ ಜನರಂಜನೆಯಾಗುವಂತೆ ವ್ಯಾಖ್ಯಾನ ಮಾಡುತ್ತಾರೆ. ವ್ಯಾಖ್ಯಾನದಲ್ಲಿ ಅವರಿಗೆ ಸರಿಸಾಟಿಯಿಲ್ಲ ಎಂದರೆ ಅತಿಶಯೋಕ್ತಿಯು ಆಗಲಾರದು. ವ್ಯಾಖ್ಯಾನಿಸುವಾಗ ತಾವೇ ಆಯಾ ಪಾತ್ರವಾಗಿ ಬಿಡುತ್ತಾರೆ. ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಬರುವ ಹಾಗೇ ರಸಗಳನ್ನೇ ಬದಲಾವಣೆ ಮಾಡುವ ಕಲೆ ಅವರಿಗೆ ಸಿದ್ಧಿಸಿದೆ. ಆಯಾರಸದ ಪರಿಪೂರ್ಣತೆಯನ್ನೇ ತಮ್ಮ ಮಾತಿನ ಚಮತ್ಕಾರದಿಂದ, ಮುಖದ ಹಾವಭಾವಗಳಿಂದ, ಧ್ವನಿಯ ಏರಿಳಿತಗಳಿಂದ ತೋರಿಸುವುದರಲ್ಲಿ ಅವರು ಅದ್ವಿತೀಯ ರಾಗಿದ್ದಾರೆ. ಅವರ ವ್ಯಾಖ್ಯಾನದಲ್ಲಿ ಕಣ್ಣು ಕಿವಿ ಹಾಗೂ ಮೆದುಳು ಮೂರೂ ಎಚ್ಚರವಾಗಿದ್ದು ರಸಾಸ್ವಾದ ಮಾಡುತ್ತಿರುತ್ತವೆ. ಕೇಳುವಾಗ ಸಭಿಕರು ಮಂತ್ರ ಮುಗ್ಧರಾಗಿಬಿಡುತ್ತಾರೆ.

ಇವೆಲ್ಲಕ್ಕಿಂತ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರತಿ ಪದ್ಯದ ವ್ಯಾಖ್ಯಾನದ ಮುಕ್ತಾಯವು ಸರಿಯಾಗಿ ಮುಂದಿನ ಪದ್ಯದ ಪ್ರಾರಂಭಕ್ಕೆ ಹೊಂದಿಕೊಳ್ಳುತ್ತದೆ. ವಾಚನಕಾರರು ಮುಂದಿನ ಪದ್ಯವನ್ನೇ ಪ್ರಾರಂಭಿಸಬೇಕೆಂಬ ಇಂಗಿತ ಇರುತ್ತದೆ. ರಸಕ್ಕೆ ತಕ್ಕಂತೆ, ಇದನ್ನು ಅತ್ಯಂತ ಸಮರ್ಪಕವಾಗಿ ಉಪಯೋಗಿಸಿಕೊಂಡಿದ್ದವರು ಮೂವತ್ತೈದು ವರ್ಷಕಾಲ ಅವರ ಜೊತೆ ವಾಚನ ಮಾಡುತ್ತಿದ್ದ ಶ್ರೀ ಟಿ.ರಾಮಶಾಸ್ತ್ರಿ ಗಳೊಬ್ಬರೇ ಎಂದು ಹೇಳಬಹುದು. ರಾಮಶಾಸ್ತ್ರಿಗಳ ವಾಚನ, ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನ ಎಂಬುದು ಪ್ರಸಿದ್ಧಿಯಾಗಿತ್ತು. ಅವರಿಬ್ಬರೂ ಒಟ್ಟಿಗೆ ಅಭ್ಯಾಸ



*20. ವೀಣಾ ಶಾಸ್ತ್ರಿ(ಸೊಸೆ), ಪುಷ್ಪಾ ಸತ್ಯನಾರಾಯಣ್ (ಮಗಳು), ಲಲಿತಾ ಸತೀಶ್ (ಸೊಸೆ)*

ಮಾಡಿದ್ದರಿಂದ ಪರಸ್ಪರ ಅರಿವು ತುಂಬಾ ಚೆನ್ನಾಗಿತ್ತು. ಪದ್ಯಗಳ ನಡುವೆಯೂ ವಾಚನ ನಿಲ್ಲಿಸಿ ಅದಷ್ಟಕ್ಕೇ ವ್ಯಾಖ್ಯಾನಿಸುವುದು ಅವರ ವೈಶಿಷ್ಟ್ಯ. ಕಾರಣ: ಒಂದೇ ಪದ್ಯವಾದರೂ, ರಸ ಬೇರೆ ಇರಬಹುದು, ಪಾತ್ರ ಬೇರೆ ಇರಬಹುದು, ಆದ್ದರಿಂದ ಅಲ್ಲಿಗೆ ನಿಲ್ಲಿಸಬೇಕಾಗುತ್ತಿತ್ತು. ಇದನ್ನು ಈ ಜೋಡಿ ತುಂಬಾ ಸಮರ್ಪಕವಾಗಿ, ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುತ್ತಿತ್ತು.

ಅವರ ಇನ್ನೊಂದು ದೊಡ್ಡ ಗುಣ, ಇನ್ನೊಬ್ಬ ವ್ಯಾಖ್ಯಾನಕಾರರನ್ನು ಎಂದೂ ದೂಷಿಸಿದವರಲ್ಲ.  ಬೇರೆ ಯಾರದ್ದೇ ವಾಚನವಿರಲಿ, ಅವರಿಗೆ ಪ್ರೋತ್ಸಾಹಿಸಲು ಅಥವಾ ಹೊಸ ವಿಷಯ ಸಂಗ್ರಹಿಸಲು ಅಲ್ಲಿಗೆ ಹೋಗುತ್ತಾರೆ. ವಾಚನಕಾರರನ್ನೇ ಆಗಲಿ ಅವರ ದೌರ್ಬಲ್ಯವನ್ನು ಮುಚ್ಚುವಂತೆ ಮಾಡಿ ಪ್ರೋತ್ಸಾಹಿಸುತ್ತಾರೆ. ರಾಗಜ್ಞಾನ ಪೂರ್ಣವಾಗಿರದಿದ್ದರೂ, ಯಾವ ರಸಕ್ಕೆ ಹೇಗೆ ಓದಬೇಕೆಂಬುದನ್ನು ಭಾವದಿಂದಲೇ ಸೂಚಿಸಬಲ್ಲರು. ಇನ್ನೊಬ್ಬರ ಗುಣಗ್ರಹಣ ಮಾಡುವುದೇ ಅವರ ಸ್ವಭಾವ. ಅವರು ಸಂಗ್ರಹಿಸಿರುವ ಅಪೂರ್ವ ಕಥೆಗಳು, ಸುಭಾಷಿತಗಳು, ಸುಮಾರು ನಾಲ್ಕಾರು ಗ್ರಂಥಗಳಷ್ಟಾಗಬಹುದು. ಯಾವ ಹೊಸ ವಿಷಯ ತಿಳಿಯಲಿ, ಅದನ್ನೇ ಬರೆದಿಡುವುದು ಹಾಗೂ ಸಂದರ್ಭಕ್ಕೆ ತಕ್ಕ ಹಾಗೆ ಅದರ ಪ್ರಯೋಗ ಮಾಡುವುದು ಅವರ ವೈಶಿಷ್ಟ್ಯ. ಅವರ ಜ್ಞಾಪಕಶಕ್ತಿ ಮತ್ತು ಮೇಧಾಶಕ್ತಿ ಅಪೂರ್ವವಾದದ್ದು.

ಅವರು ಎಂದೂ ಸಂಪಾದನೆಯ ದೃಷ್ಟಿಯಿಂದ ವ್ಯಾಖ್ಯಾನಕ್ಕೆ ಹೋಗುವವರಲ್ಲ.  ಕಲೋಪಾಸನೆಯೇ ಧ್ಯೇಯ. ಜನಗಳಿಗೂ ಆನಂದವಾಗಬೇಕೆಂಬುದು ಅವರ ಇಷ್ಟ. ಅವರಿಗೆ ರಾಜಕಾರಣಿಗಳ ಕೃಪೆಯಿದ್ದಿದ್ದರೆ ಕೀರ್ತಿಶಿಖರದಲ್ಲಿರುತ್ತಿದ್ದರು. ಆದರೆ ಅವರಿಗೆ ತಾವಾಗಿಯೇ ಕೀರ್ತಿಯನ್ನು ಹುಡುಕಿಕೊಂಡು ಹೋಗುವ ಮನಸ್ಸಿಲ್ಲ. ಕೀರ್ತಿಯೇ ಅವರನ್ನು ಹುಡುಕಿಕೊಂಡು ಬಂದಿದೆ. ಈಗ ಎಂಬತ್ತು ವರ್ಷ ತುಂಬಿರುವ ಈ ಕಲೋಪಾಸಕರಿಗೆ ಜನತೆ ಹಾಗೂ ಸರ್ಕಾರ ಆದರಿಸಿ ಗೌರವಿಸುವುದು ಕರ್ತವ್ಯವಾಗಿದೆ. ಅವರಿಂದ ಮುಂದೆ ಇನ್ನೂ ತರುಣ ಕಲಾವಿದರು ಮಾರ್ಗದರ್ಶನ ಪಡೆದು, ಅವರು ಅತಿ ಪ್ರಯಾಸದಿಂದ ಗಳಿಸಿದ ಕಲೆಯನ್ನು ಬೆಳೆಸಿಕೊಂಡು ಹೋಗಲಿ, ಅವರು ಮಾರ್ಗದರ್ಶನ ಮಾಡುತ್ತಾ ಚಿರಕಾಲ ಬಾಳಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.



*21. ಲಕ್ಷ್ಮೀಕೇಶವಶಾಸ್ತ್ರಿಗಳು, ಮಗ ಚನ್ನಕೇಶವಶಾಸ್ತ್ರಿಗಳು, ಮಮ್ಮಗಳು ಚೂಡಾರತ್ನ ಸುಧೀರ್ ಹಾಗೂ ರತ್ನಮ್ಮನವರು*

## ೨೧. ನಾ ಕಂಡ ಭೀಮ


*ಪದ್ಮಿನೀ ರಾಮಮೂರ್ತಿ*

ಈ ಸಂಗತಿ ನಡೆದು ಸುಮಾರು ಇಪ್ಪತ್ತು ವರ್ಷಗಳ ಮೇಲಾಗಿರಬಹುದು. ನಾನಾಗ ಹತ್ತು ಅಥವಾ ಹನ್ನೊಂದು ವರ್ಷಗಳ ಬಾಲೆ. ಆಗೆಲ್ಲಾ ನಮ್ಮ ತಂದೆಯವರೊಂದಿಗೆ ಅವರ ಕಾವ್ಯವಾಚನ ಕಾರ್ಯಕ್ರಮ ನಡೆಯುವಲ್ಲಿಗೆ ತಂಬೂರಿ ಶ್ರುತಿ ಹಾಕಲು ನಾನೂ ಹೋಗುತ್ತಿದ್ದೆ. ಕೆಲವು ಅಂದಿನ ಸನ್ನಿವೇಶಗಳು ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತೆ ಸ್ಥಿರವಾಗಿವೆ. ನಮ್ಮ ತಂದೆಯವರು (ಶ್ರೀ ಬಿ.ಎಸ್. ಎಸ್.ಕೌಶಿಕ್‌ರವರು) ಈಗಿನಂತೆ ವಾಚನ ಮತ್ತು ವ್ಯಾಖ್ಯಾನಗಳೆರಡನ್ನೂ ಮಾಡುತ್ತಿರಲಿಲ್ಲ. ಕೇವಲ ವಾಚನ ಕಾರ್ಯವನ್ನು ಮಾತ್ರ ನಿರ್ವಹಿಸುತ್ತಿದ್ದರು. ಅವರು ವೇದಿಕೆಯಲ್ಲಿ ಗಂಭೀರವಾಗಿಯೂ, ಸುಶ್ರಾವ್ಯವಾಗಿಯೂ, ನವರಸ ಭರಿತವಾಗಿಯೂ ಕಾವ್ಯವಾಚನ ಮಾಡುತ್ತಿದ್ದರು. ವ್ಯಾಖ್ಯಾನಕ್ಕೆ ಬೇರೆ ಯಾರಾದರೊಬ್ಬರು ಇರುತ್ತಿದ್ದರು. ಅಂತೆಯೇ ಮೈಸೂರು ಬಳಿಯ ಗುಂಡ್ಲುಪೇಟೆ ಎಂಬ ಊರಿನಲ್ಲಿ ನಮ್ಮ ತಂದೆಯವರ ವಾಚನವಿದ್ದಿತು. ವ್ಯಾಖ್ಯಾನಕಾರರಾಗಿ ಪೂಜ್ಯರಾದ ವೇ. ಬ್ರ. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳವರು ಆಗಮಿಸಿದ್ದರು. ನಾವು ಮೂವರೂ (ನಾನು ಶ್ರುತಿಗೆ) ವೇದಿಕೆಯ ಮೇಲೆ ಕುಳಿತಿದ್ದೆವು. ಸುತ್ತಮುತ್ತಲಿನ ಹಳ್ಳಿಗಳಿಂದಲೂ ಜನ ಬಹಳವಾಗಿ ಬಂದು ಸೇರಿದ್ದರು. ಅನುಭವಸ್ಥರೂ, ಅವರವರ ವಿದ್ಯೆಯಲ್ಲಿ ಪ್ರಾವೀಣ್ಯವನ್ನು ಹೊಂದಿದ್ದವರೂ ಆದ ಅವರುಗಳ ವಾಚನ ಮತ್ತು ವ್ಯಾಖ್ಯಾನಗಳನ್ನು ಆಸ್ವಾದಿಸಲು ಸೇರಿದ ಜನ ಬಹಳ ಉತ್ಸುಕರಾಗಿದ್ದರು. ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದವಾಗಿತ್ತು. ಸರಿ, ಕಾರ್ಯಕ್ರಮವು ಗಣಪತಿಯ ಪ್ರಾರ್ಥನಾಶ್ಲೋಕದೊಂದಿಗೆ ಪ್ರಾರಂಭವಾಯ್ತು. ಮಹಾಭಾರತದ ಒಂದು ರಸವತ್ತಾದ ಸನ್ನಿವೇಶ. ದುರ್ಯೋಧನನಲ್ಲಿಗೆ ಭೀಮ ಬರುವ ರೀತಿ, ದುರ್ಯೋಧನನ ಠೇಂಕಾರ, ಅದಕ್ಕೆ ಉತ್ತರವಾಗಿ ಭೀಮನು ಅಟ್ಟಹಾಸದಿಂದ ಗದೆಯನ್ನು ಲೀಲಾಜಾಲವಾಗಿ ತಿರುಗಿಸುತ್ತಾ ಭೂಮಿಯೇ ಅದುರುವಂತೆ ಬರುವ ರೀತಿಯನ್ನು ಪೂಜ್ಯ ಶಾಸ್ತ್ರಿಗಳವರು ಹೇಳುತ್ತಿದ್ದರೆ ಎಲ್ಲರ ಅಂತಃಚಕ್ಷುಗಳಲ್ಲಿಯೂ, ಧೀರನಾದ ಭೀಮನ ಚಿತ್ರ ಮೂಡಿಬರುತ್ತಿತ್ತು. ಸ್ವಲ್ಪ ಅಲುಗಾಡಿದರೂ ತಮ್ಮಿಂದ ಆ ದೃಶ್ಯ ಎಲ್ಲಿಯಾದರೂ ಮರೆಯಾಗುವುದೋ ಎನ್ನುವ ರೀತಿಯಲ್ಲಿ, ಸೇರಿದ್ದ ಜನರೆಲ್ಲರೂ ಬಿಟ್ಟ ಕಣ್ಣು ಬಿಟ್ಟಂತೆ ತದೇಕ ಚಿತ್ತರಾಗಿ ಕಿವಿಗೊಟ್ಟು ಕೇಳುತ್ತಿದ್ದರು. ಏನಾಯಿತೋ ಏನೋ, ಇದ್ದಕ್ಕಿದ್ದಂತೆ ನಾವು ಕುಳಿತ ವೇದಿಕೆ ಅಲುಗಾಡಿ ಇನ್ನೇನು ನಾನು ಹಿಡಿದಿದ್ದ ತಂಬೂರಿ ಕೆಳಗೆ ಬೀಳಬೇಕು. ಅಷ್ಟರಲ್ಲೇ ನಮ್ಮ ತಂದೆಯವರು ಅದನ್ನು ಹಿಡಿದುಕೊಂಡರು. ನನಗೆ ಒಂದು ರೀತಿಯ ನಾಚಿಕೆಯಾಗಿ ತಡಬಡಿಸಿ ತಬ್ಬಿಬ್ಬುಗೊಂಡು ಕಣ್ಣು ಬಿಟ್ಟಾಗ ನಮ್ಮ ತಂದೆಯವರ ಆಕ್ಷೇಪಣಾಯುಕ್ತ ನೋಟವು ನನ್ನತ್ತ ಹರಿದು ದಿಟವಾಗಿಯೂ ನನ್ನನ್ನು ಗಾಬರಿಗೊಳಿಸಿತ್ತು. ಆದರೆ ಒಂದೇ ಘಳಿಗೆಯಷ್ಟೇ. ಮರುಕ್ಷಣವೇ ಅವರು ಹುಸಿನಗುವಿನೊಂದಿಗೆ ಸರಿಯಾಗಿ ಕೂರಲು ಹೇಳಿ, ತಂಬೂರಿಯನ್ನು ನನ್ನ ಕೈಗಿತ್ತರು. ಆಗ ನಡೆದುದಿಷ್ಟೇ. ಭೀಮನನ್ನು ದುರ್ಯೋಧನ ಮೂದಲಿಸಿದಾಗ, ಕ್ರೋಧತಪ್ತನಾದ ಭೀಮನಾದರೋ, "ಏನೆನ್ನುವೆಯೋ ದುರ್ಯೋಧನಾ! ನಿನ್ನ ಗತಿ ನೆಟ್ಟಗಾಗುವುದಿಲ್ಲ" ಎಂದು ಮುಂತಾಗಿ ಅಬ್ಬರಿಸಿ ಗದೆಯನ್ನು ಭೂಮಿಗೆ ಅಪ್ಪಳಿಸಿದ ಸನ್ನಿವೇಶವನ್ನು ಶಾಸ್ತ್ರಿಗಳವರು ವ್ಯಾಖ್ಯಾನ ಮತ್ತು ಅಭಿನಯಗಳ ಮೂಲಕ ತೋರಿಸಿದಾಗ ಸಹಜವಾಗಿಯೇ ನಾವು ಕುಳಿತಿದ್ದ ವೇದಿಕೆ ಅದುರಿ ನನ್ನ ಕೈಲಿದ್ದ ತಂಬೂರಿ ಬೀಳುವುದರಲ್ಲಿತ್ತು. ನೆರೆದಿದ್ದ ಜನರೂ, ಭೀಮನ ಅಟ್ಟಹಾಸಕ್ಕೆ ಬೆದರಿ, ನಾವೆಲ್ಲರೂ, ಅಂದಿನ ಮಹಾಭಾರತದ ಕಾಲಕ್ಕೇ ಹೋಗಿದ್ದೆವೆಂದರೆ ಅತಿಶಯೋಕ್ತಿಯಾಗಲಾರದು. ಇಷ್ಟು ವರ್ಷಗಳು ಸರಿದು ಹೋದರೂ ಅಂದಿನ ಆ ಸನ್ನಿವೇಶದ ಚಿತ್ರಣ ನನ್ನ ಒಳ ಮನಸ್ಸಿನಲ್ಲಿ ಅಚ್ಚೊತ್ತಿಬಿಟ್ಟಿದೆ.

ಎಲ್ಲ ಪಾತ್ರಗಳನ್ನೂ ತಮ್ಮಲ್ಲಿಯೇ ಆವಿರ್ಭವಿಸಿಕೊಳ್ಳುವ ತಾದಾತ್ಮ್ಯ, ಮತ್ತು ಶೃಂಗಾರ ಸನ್ನಿವೇಶಗಳಲ್ಲಿನ ರಸಭರಿತ ಚಿತ್ರಣವಲ್ಲದೆ, ದುಃಖಸನ್ನಿವೇಶದಲ್ಲಿನ ಅವರ ಭಾವ ಪ್ರದರ್ಶನ ಇವೆಲ್ಲವೂ ಅವರ ಉನ್ನತ ಮಟ್ಟದ ವ್ಯಾಖ್ಯಾನ ಪ್ರಪೂರ್ಣತೆಗೆ ನಿದರ್ಶನಗಳಾಗಿವೆ. ಅಂತೆಯೇ ಈ ವ್ಯಾಖ್ಯಾನ ಕಲೆಗೇ ಭೀಷ್ಮ ಪಿತಾಮಹರಂತಿರುವ ಜ್ಞಾನವೃದ್ಧರೂ, ವಯೋವೃದ್ಧರೂ, ಶ್ರೇಷ್ಠರಲ್ಲಿ ಶ್ರೇಷ್ಠರೂ ಆದ ಮಹಾವ್ಯಾಖ್ಯಾನ ವಾಚಸ್ಪತಿಗೆ ನನ್ನ ಅನಂತಾನಂತ ಭಕ್ತಿಪೂರ್ವಕ ನಮನಗಳನ್ನು ಸಮರ್ಪಿಸುತ್ತೇನೆ.

# ೨೨. ನಮ್ಮ ಊರಿನ ರಸಿಕರು

*ಎಚ್.ಆರ್. ಕೇಶವಮೂರ್ತಿ*



*22. ಶಾಸ್ತ್ರಿಗಳ ಪುತ್ರ ಸತೀಶ್ ಅವರು*


ತುಂಗಾನದಿಯ ಎಡ-ಬಲಗಳಲ್ಲಿ ಶಿವಮೊಗ್ಗೆಯಿಂದ ನಾಲ್ಕು ಮೈಲು ದೂರದಲ್ಲಿರುವ ಜೋಡಿ ಅಗ್ರಹಾರವೆಂದರೆ ಮತ್ತೂರು ಹಾಗೂ ಹೊಸಹಳ್ಳಿ. ಇದು, ಕನ್ನಡದ ಜನಪ್ರಿಯ ಕವಿಯೊಬ್ಬರ ಉದ್ಗಾರದಂತೆ **ಗಮಕಿಗಳ ಹುತ್ತ**, ಗಮಕ-ವ್ಯಾಖ್ಯಾನ ಕಲೆಯ ತವರುಮನೆ; ವ್ಯಾಖ್ಯಾನ ಕಲೆಯ **ಪಿತಾಮಹ** ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳ ಹುಟ್ಟೂರು, ಬೆಳೆದೂರು, ಬೇರೂರು (ಬೇರ್ ಊರು!).

'ಸೂತ ಪುರಾಣಿಕ'ರಿಂದ 'ಸೌತಿ'ಯನ್ನು ಮಥಿಸಿ ತೆಗೆದಂತೆ, 'ಮದಾಲಸೆ'ಯಿಂದ 'ಪ್ರತಿ ಮದಾಲಸೆ'ಯನ್ನು ಸೃಷ್ಟಿಸಿದಂತೆ ಶ್ರೀ ಶಾಸ್ತ್ರಿಗಳು 'ಪುರಾಣ ವಾಚನ' ಕಲೆಯಿಂದ 'ಗಮಕ-ಪ್ರವಚನ' ಕಲೆಯನ್ನು ಹುಟ್ಟುಹಾಕಿದರು. ಪ್ರಾರಂಭದಲ್ಲಿ ಪುರಾಣ ವಾಚನವನ್ನು ನಡೆಸುತ್ತಿದ್ದು, ಜನರಿಗೆ ಅದರಲ್ಲಿ ಅಭಿರುಚಿ ಕ್ರಮೇಣ ಕಡಮೆಯಾಗುತ್ತಿರುವುದನ್ನು ಗಮನಿಸಿ, ಆ ಕಲೆಗೇ **ಕನ್ನಡದ ಕಸಿ** ಮಾಡಿ, ಕನ್ನಡ ಕಾವ್ಯಗಳಿಗೆ ರಾಗವಾಗಿ ಹಾಡಬಲ್ಲ ಗಮಕಿಗಳ ನೆರವನ್ನು ಬಳಸಿಕೊಂಡು *ಈ*ಗಿರುವ ಗಮಕ - ವ್ಯಾಖ್ಯಾನ ಪದ್ಧತಿಯನ್ನು ರೂಪಿಸಿದರು. ಇದು 'ಪುರಾಣ' ಪದ್ಧತಿಗಿಂತ ಭಿನ್ನವಾಗಿ ಹೆಚ್ಚು ಆರ್ದ್ರವೂ, ರಸಸ್ಯಂದಿಯೂ ಆಗಿದ್ದುದರಿಂದ ಜನರ ಒಲವು ಬಹುಬೇಗ *ಈ* ಕಡೆಗೆ ಒಲಿಯಿತು. ಕಳೆದ ಐವತ್ತು ವರ್ಷಗಳ ಶಾಸ್ತ್ರಿಗಳ ಪರಿಶ್ರಮದಿಂದ ಕರ್ನಾಟಕದಲ್ಲಿ ಪ್ರವಚನ(ವ್ಯಾಖ್ಯಾನ) ವೆಂದರೆ ಶಾಸ್ತ್ರಿಗಳು, ಗಮಕವೆಂದರೆ ಮತ್ತೂರು ಎಂಬಷ್ಟು ಖ್ಯಾತಿ ಆ ಕಲೆಗೆ ಪ್ರಾಪ್ತವಾಯಿತು.

ಒಂದು ದೇಶ-ಕಾಲದ ಜನಪದದ ಸಮಷ್ಟಿಯ ಚಿಂತನೆಗಳು ಪ್ರತಿಭಾವಂತ ಕವಿಯೊಬ್ಬನ ಮೂಲಕ ಅಭಿವ್ಯಕ್ತಿಗೊಂಡು ಮಹಾಕಾವ್ಯದ ಜನನವಾಗುವುದಂತೆ! ಆ ಅರ್ಥದಲ್ಲಿ ಕವಿಯು ಕಾವ್ಯದ 'ಜನಕ'ನಾದರೆ ಕಾವ್ಯವೂ ಕವಿಯ 'ಸೃಷ್ಟಿಕರ್ತ'ನಾಗುತ್ತದೆ. ಆ ದೃಷ್ಟಿಯಲ್ಲಿ ಗಮಕ ವಾಚನ-ವ್ಯಾಖ್ಯಾನದ ಜನಕರು ಶ್ರೀ ಶಾಸ್ತ್ರಿಗಳಾದರೆ ಅವರು ಹಾಗಾಗಲು, ಹಾಗೆ ಬೆಳಗಲು ಕಾರಣಿಕರು ಮತ್ತೂರು-ಹೊಸಹಳ್ಳಿಯ ಜನಪದವೇ. ಪುರಾಣವು ಹಿಂದೆ ಸರಿದು, ಸಂಸ್ಕೃತದ ಸ್ಥಾನದಲ್ಲಿ ಕನ್ನಡ ಕಾಲಿರಿಸುತ್ತಿದ್ದ ಆ ಸಂಕ್ರಮಣ ಕಾಲದಲ್ಲಿ ಶಾಸ್ತ್ರಿಗಳು ಪ್ರಾರಂಭಿಸಿದ ನವ್ಯಪದ್ಧತಿಗೆ ನಿರಂತರವಾದ ಪ್ರೋತ್ಸಾಹ ಕೊಟ್ಟು, ಊರಿನಲ್ಲಿ ನಡೆಯುವ ಯಾವುದೇ ಸಾರ್ವಜನಿಕ ಸಮಾರಂಭದಲ್ಲಾಗಲಿ, ಯಾರದೇ ಮನೆಯ ಮದುವೆ-ಮುಂಜಿಗಳಲ್ಲಾಗಲಿ 'ಭಾರತ ವಾಚನ'ಕ್ಕೆ ಅವಕಾಶ ಮಾಡಿಕೊಟ್ಟು, ಶಾಸ್ತ್ರಿಗಳೂ, ಅವರೊಂದಿಗೆ ಗಮಕ-ಪ್ರವಚನ ಕಲೆಯೂ ಬೆಳೆಯಲು, ಊರವರು ಕಾರಣರಾದುದು ಸಾಮಾನ್ಯ ಸಂಗತಿಯೇನಲ್ಲ.

ಯಾವುದೇ ಕಾಲದಲ್ಲೂ ಹೊಸ ಕಲೆಗೆ, ಹೊಸ ಬಗೆಗೆ ಜನಾದರ ಕೂಡಲೇ ದೊರೆತುದಿಲ್ಲ. ಕಾಳಿದಾಸ, ಭವಭೂತಿ ಮೊದಲಾದವರ ಕಾಲದಿಂದಲೂ ಹೀಗೇ! "Old is Gold" ಎಂಬುದು ನರೆತ ಕೂದಲಿನ ಮಾತಾದರೆ 'ಪುರಾಣಮಿತ್ಯೇವ ನ ಸಾಧು ಸರ್ವಮ್' ಎಂಬುದು ಕಿರುಮೀಸೆಯ ವಾದ. *ಈ* ಹೊಯ್ದಾಟ ಬೇರೆಡೆಗಳಿಗಿಂತ ವೈದಿಕ ಸಂಪ್ರದಾಯಸ್ಥರಲ್ಲಿ ಇನ್ನೂ ಹೆಚ್ಚು. ಇದು ಎಲ್ಲರಿಗೂ ತಿಳಿದ ವಿಷಯ. ಹಾಗಿರುವಲ್ಲಿ ಕೇವಲ ಸಂಪ್ರದಾಯಸ್ಥ ವೈದಿಕ ಕುಟುಂಬಗಳೇ ನೆಲೆಸಿರುವ ಮತ್ತೂರು-ಹೊಸಹಳ್ಳಿಗಳಲ್ಲಿ ಶಾಸ್ತ್ರಿಗಳ *ಈ* ಹೊಸ ಕಲೆಗೆ ಬಹುಬೇಗ ಜನಾದರ ದೊರೆತುದು ಆಶ್ಚರ್ಯವೇ ಸರಿ. *ಈ* ನಾಡಿಗೆ 'ರಾಷ್ಟ್ರಕವಿ'ಯನ್ನಿತ್ತ ಜಿಲ್ಲೆಯೇ **ಪ್ರವಚನ**

**ಚಕ್ರವರ್ತಿ**ಗಳನ್ನೂ ನೀಡಿದುದು *ಈ* ನೆಲದ, *ಈ* ಜನರ ಭಾಗ್ಯ!



***23. ರತ್ನಮ್ಮನವರು, ಲಕ್ಷ್ಮೀಕೇಶವಶಾಸ್ತ್ರಿಗಳು, ಸತೀಶ್, ಲಲಿತ, ಲಲಿತ ಅವರ ತಂದೆ ವೆಂಕಟನಾರಾಯಣ***

ಶಾಸ್ತ್ರಿಗಳು ಕೇವಲ ಪ್ರತಿಭಾವಂತರು ಮಾತ್ರವಲ್ಲ, ಅಸಾಧಾರಣ ಪಂಡಿತರೂ ಹೌದು. ಸಂಸ್ಕೃತ-ಕನ್ನಡಗಳ ಪಾಂಡಿತ್ಯದಲ್ಲಿ ಸವ್ಯಸಾಚಿಗಳು. ಅನುಪಮವಾದ, ಕೇಳಿದಷ್ಟೂ ಕೇಳುತ್ತಲೇ ಇರಬೇಕೆನಿಸುವ ಮಧುರಭಾಷಿಗಳು. ವ್ಯಾಖ್ಯಾನಕಲೆಗೆ ಹೇಳಿಮಾಡಿಸಿದ ವ್ಯಕ್ತಿ. ರಸ-ಭಾವಗಳಿಗೆ ತಕ್ಕಂತೆ ಮುಖಭಾವ ಹೊಂದಿಸಿಕೊಂಡು ಕಣ್ಣು, ತುಟಿ, ನಾಲಗೆ, ಕೈ ಬೆರಳುಗಳಲ್ಲಿ, ಗಮಕಿಯ ವಾಚನ ಕಾಲದಲ್ಲೇ ಮುಂದಿರುವ ರಸಿಕ ಶ್ರೋತೃವಿಗೆ ಅರ್ಥಸ್ಫುರಣೆಯಾಗುವಂತೆ ಮಾಡುವ ಅವರ ಕೌಶಲ ಅನನ್ಯಸಾಧಾರಣವಾದದ್ದು. ಮಾತಿಗಿಂತ ಮೌನದಲ್ಲೇ ಹೆಚ್ಚು ವ್ಯಾಖ್ಯಾನಿಸಬಲ್ಲ ಚಾತುರ್ಯ ಅವರದೇ ಆದ ವೈಶಿಷ್ಟ್ಯ. ಶಾಸ್ತ್ರಿಗಳ *ಈ* ಬೆಳವಣಿಗೆಯಲ್ಲಿ ಮತ್ತೂರು-ಹೊಸಹಳ್ಳಿಯ ಶ್ರೋತೃಗಳ ಪಾಲೂ ಹಿರಿದಾದುದು.

ಸಾಮಾನ್ಯವಾಗಿ 'ಸಭೆ' ಎಂದರೆ ವೇದಿಕೆಯ ಮೇಲೆ ಕುಳಿತವರಿಗೆ 'ಬಾಯಿ' ಹಾಗೂ ಕೆಳಗೆ ಕುಳಿತವರಿಗೆ 'ಕಿವಿ'. ಇದು ನಾವಿಂದು ಎಲ್ಲೆಲ್ಲೂ ಕಾಣುವ ದೃಶ್ಯ. ಕೆಲವೇಳೆ ಪ್ರಶ್ನೋತ್ತರವೆಂಬ ಸಮಯದಲ್ಲಿ ಇದು ಸ್ವಲ್ಪ ಕಾಲ ವ್ಯತ್ಯಾಸವಾಗುವುದೂ ಉಂಟು. ಆದರೆ ನಮ್ಮೂರಿನಲ್ಲಿನ ಶ್ರೋತೃಗಳ ರೀತಿಯೇ ಬೇರೆ. ಇಲ್ಲಿ ಕೆಳಗೆ ಕುಳಿತಿರುವವರಿಗೂ ಬಾಯಿ; ಅವರು ಮೇಲಿನವರಿಗಿಂತ ವಯಸ್ಸು-ವಿದ್ಯೆಗಳೆರಡರಲ್ಲೂ ಹಿರಿಯರಾಗಿರುವುದೂ ಕಾರಣವಿರಬಹುದು. ಜತೆಗೆ ತಮ್ಮ ಮಕ್ಕಳನ್ನು ತಪ್ಪಿನ ಸಮಯದಲ್ಲೇ ತಿದ್ದುವ ಕಾಳಜಿಯೂ ಸೇರಿರುತ್ತಿದ್ದುದು ಗಮನಿಸಬೇಕಾದ ಅಂಶ. ಇದರಿಂದ ಕಲಾವಿದರಿಗಾಗುವ ಲಾಭ ಅಪಾರ. ಒಮ್ಮೆ ಭೀಷ್ಮಪರ್ವದಲ್ಲಿ ಶ್ರೀಕೃಷ್ಣನು ಚಕ್ರ ಹಿಡಿವ ಸಂದರ್ಭದ ಭಾರತವಾಚನ ನಡೆಯುತ್ತಿತ್ತು. ನಾನು ಓದುತ್ತಿದ್ದೆ. ನನ್ನ ಗೆಳೆಯರು ವ್ಯಾಖ್ಯಾನಿಸುತ್ತಿದ್ದರು. ಒಂದು ಪದ್ಯಕ್ಕೆ ಸ್ವಲ್ಪ ತಪ್ಪಾಗಿ ವ್ಯಾಖ್ಯಾನ ಮಾಡಿದರು. ಕೂಡಲೇ ಸಭೆಯಲ್ಲಿದ್ದ ನಮ್ಮ ದೊಡ್ಡಪ್ಪ ವೇ.ಚೆನ್ನಿಗರಾಯ ಅವಧಾನಿಗಳು ಹಾಗೂ ತಂದೆ ವೇ.ರಾಮಸ್ವಾಮಿ ಶಾಸ್ತ್ರಿಗಳು "ಎಲ್ಲಿದೆ ಹಾಗೇಂತ? ಆ ಪದ್ಯದಲ್ಲಿ ಹಾಗಂತಿದೆಯೇ?" ಎಂದು ಪ್ರಶ್ನಿಸಿದರು. ವ್ಯಾಖ್ಯಾನ ಮಾಡುತ್ತಿದ್ದ ನನ್ನ ಮಿತ್ರರಿಗೆ ಏನು ಹೇಳಲೂ ತೋಚಲಿಲ್ಲ. ಆಗ ಅವರೇ ವ್ಯಾಖ್ಯಾನಿಸಿ ಇವರ ತಪ್ಪನ್ನು ತೋರಿಸಿ, ತಿದ್ದಿದರು. ಇನ್ನೊಮ್ಮೆ ವ್ಯಾಖ್ಯಾನಕಾರರೊಬ್ಬರು 'ವಿಶ್ವರೂಪ ದರ್ಶನ'ದ ಸಂದರ್ಭದಲ್ಲಿ 'ಮಧು-ಕೈಟಭರ ವಧೆ'ಯ ವೃತ್ತಾಂತವನ್ನು ತಪ್ಪಾಗಿ ವ್ಯಾಖ್ಯಾನಿಸಿದಾಗ ಸಭೆಯಲ್ಲಿದ್ದ ವೇ.ಲಕ್ಷ್ಮೀರಮಣ ಅವಧಾನಿಗಳು ಪುರಾಣದಲ್ಲಿ ಬರುವ ಆ ಕಥೆಯನ್ನು ವಿಸ್ತಾರವಾಗಿ, ರಸಪೂರ್ಣವಾಗಿ ಹೇಳಿ ಜನರನ್ನು ರಂಜಿಸಿ, ಆ ಕಿರಿಯ ವ್ಯಾಖ್ಯಾನಕಾರರನ್ನು ತಿದ್ದಿದರು. ಅನಂತರ ಕಾರ್ಯಕ್ರಮ ಯಥಾಪ್ರಕಾರ ಮುಂದುವರೆಯುತ್ತಿತ್ತು. ಶ್ರೋತೃಗಳಿಗಾಗಲೀ, ವ್ಯಾಖ್ಯಾನಕಾರರಿಗಾಗಲೀ ಇದು ರಸಾಭಾಸವಾಗಿ ಕಾಣುತ್ತಿರಲಿಲ್ಲ. ಮರುದಿನದಿಂದ ಅವರು ತುಂಬ ಜಾಗರೂಕರಾಗಿ ಕವಿ ಹಾಗೂ ಕಾವ್ಯಗಳಿಗೆ ಸ್ವಲ್ಪವೂ ಅಪಚಾರವಾಗದಂತೆ ವ್ಯಾಖ್ಯಾನಿಸುವ ಅಭ್ಯಾಸದಲ್ಲಿ ತೊಡಗುತ್ತಿದ್ದರು.

ಮತ್ತೊಂದು ಪ್ರಸಂಗದಲ್ಲಿ ಶ್ರೀ ಶಾಸ್ತ್ರಿಗಳೂ ಹೀಗೆ ಕೆಳಗೆ ಕುಳಿತು ವ್ಯಾಖ್ಯಾನ ಮಾಡಿದ್ದುಂಟು: 'ಲವ ಕುಶ ಕಾಳಗ'ದ ಭಾಗ. ಶ್ರೀರಾಮನನ್ನು ಕೆಡವಿಬಂದ 'ಶರವೇದಮೂರ್ತಿ'ಗಳಂತಿದ್ದ ಬಾಲಕರನ್ನು ವಾಲ್ಮೀಕಿ ಮುನಿಗಳು ಯುದ್ಧದ ಬಗ್ಗೆ ಪ್ರಶ್ನಿಸಿದಾಗ ಕುಶ "ಬಂದುದೊಂದಶ್ವಂ ಅದನೀ ಲವಂ ಕಟ್ಟಿದಂ...." ಎಂದು ಹೇಳುವ ಪದ್ಯಕ್ಕೆ ಅಂದಿನ ವ್ಯಾಖ್ಯಾನಕಾರರು ಅರ್ಥವಿವರಣೆ



25. ಶಿವರಾಮಕೃಷ್ಣ ಶಾಸ್ತ್ರಿ, ಸತೀಶ್, ಪುಷ್ಪವಲ್ಲಿ ಅವರ ಮಗ ನಂದನ್ (ಉಪನಯನದ ವಟು), ಎಲೆಅಡಕೆ ತಟ್ಟೆಯೊಡನೆ ಪುಷ್ಪವಲ್ಲಿ

ನೀಡುವಾಗ "ಈ ಲವಂ ಕಟ್ಟಿದಂ" ಎಂಬಲ್ಲಿನ 'ಧ್ವನಿ'ಯನ್ನು ಗಮನಿಸದೆ ತೇಲಿಸಿ ಅರ್ಥ ಹೇಳುತ್ತ ಮುಂದುವರೆದರು. ಆಗ ಸಭೆಯಲ್ಲಿ ಶ್ರೋತೃಗಳಾಗಿದ್ದ ಶಾಸ್ತ್ರಿಗಳು ಕೂಡಲೇ "ಇಲ್ಲಿ ಒಂದು ಸ್ವಾರಸ್ಯ...." ಎಂದು ಹೇಳುತ್ತ ಅಲ್ಲಿನ ಕವಿಯ ಭಾವ, ಅದರಲ್ಲಿ ಅಡಗಿರುವ ಧ್ವನಿ, ಎಲ್ಲವನ್ನೂ ವ್ಯಾಖ್ಯಾನಿಸಿದರು. ಎಲ್ಲರೂ, ಮೇಲೆ ಕುಳಿತವರು ಸಹ ಶಾಸ್ತ್ರಿಗಳ ವಾಣಿಗೆ ಮರುಳಾಗಿ ತಲೆದೂಗುತ್ತ ಆಲಿಸುತ್ತಿದ್ದರು. ಶಾಸ್ತ್ರಿಗಳಿಗೆ ತಪ್ಪು ಕಂಡುಹಿಡಿದೆನೆಂಬ ಭಾವವಾಗಲೀ, ಮೇಲೆ ಕುಳಿತ ವ್ಯಾಖ್ಯಾನಕಾರರಿಗೆ ಅಪಮಾನವಾಯ್ತೆಂಬ ಭಾವನೆಯಾಗಲೀ ಸ್ವಲ್ಪವೂ ಉಂಟಾಗಲಿಲ್ಲ. ಗುರು-ಶಿಷ್ಯರ ಮಧುರ ಬಾಂಧವ್ಯದಂತೆ ರಸಿಕ-ಪ್ರವಾಚಕರು ಬೆರೆತಂತಿದ್ದರು. ಇದು ಅಪರೂಪದ ನೋಟ. ಅಂಥ ವಾತಾವರಣ ನಾವು ಕಂಡುದಕ್ಕಿಂತಲೂ ಹಿಂದೆ, ಶ್ರೀ ಶಾಸ್ತ್ರಿಗಳು ವ್ಯಾಖ್ಯಾನ ಪರಂಪರೆಯನ್ನು ಪ್ರಾರಂಭಿಸಿದ ದಿನಗಳಲ್ಲಿ ಇನ್ನೂ ಹೆಚ್ಚಾಗಿದ್ದಿತು. ಅದರಿಂದಲೇ ಶಾಸ್ತ್ರಿಗಳು ದಿನದಿನಕ್ಕೆ ಬೆಳೆಯುತ್ತ ಈ ಉತ್ತುಂಗವನ್ನು ತಲುಪಿದರು.

ಇಂದಿಗೂ, ಊರಿನಲ್ಲಿ ನಡೆಯುವ ಕಾರ್ಯಕ್ರಮದ ಅನಂತರ ಕನಿಷ್ಠ ಅರ್ಧಗಂಟೆ ಆ ದಿನದ ವಾಚನ-ವ್ಯಾಖ್ಯಾನಗಳ ಬಗೆಗೆ ಚರ್ಚಿಸದೆ, ಸಲಹೆ ನೀಡದೆ ರಸಿಕವೃಂದ ಮೇಲೇಳುವುದಿಲ್ಲ. ಈ ಮಧುರ ಬಾಂಧವ್ಯವನ್ನೇ ಅಭಿನವಗುಪ್ತ 'ಸರಸ್ವತ್ಯಾಃ ತತ್ತ್ವಂ ಕವಿಸಹೃದಯಾಖ್ಯಂ ವಿಜಯತೇ' ಎಂದಿರುವುದು. ಅದು ಇಲ್ಲಿ ಸಾರ್ಥಕವಾಗಿದೆ. ಅಂಥ ವಾತಾವರಣವೇ ಶಾಸ್ತ್ರಿಗಳ ಈ ಸಿದ್ಧಿಗೆ ಕಾರಣವೆಂಬುದರಲ್ಲಿ ಸಂಶಯವೇ ಇಲ್ಲ.



24. ಶಾಸ್ತ್ರಿಗಳ ಮಗ ಸತೀಶ್ ಮತ್ತು ಸೊಸೆ ಲಲಿತ

ತಾವು ಸೃಷ್ಟಿಸಿದ ಪರಂಪರೆ ಬೆಳೆದು ಬೆಳಗುವುದನ್ನೂ, ನೂರಾರು ಶಿಷ್ಯರು ಪ್ರಶಿಷ್ಯರು ಆ ಬೆಳಕಿನಲ್ಲಿ ಮಾರ್ಗದರ್ಶನ ಪಡೆದು ನಾಡಿನಲ್ಲಿ ಕೀರ್ತಿಶಾಲಿಗಳಾಗಿ ಬಾಳುತ್ತಿರುವುದನ್ನೂ ಕಂಡು ಸಂತೋಷಿಸುವ ಶಾಸ್ತ್ರಿಗಳ ಬಾಳು ನಿಜಕ್ಕೂ ಸಾರ್ಥಕ. ಕಳೆದ ವರ್ಷ ಹೊಸಹಳ್ಳಿಯ ಗಮಕ ಕಲಾ ಪರಿಷತ್ತಿನ 'ಸಮಗ್ರ ಕುಮಾರವ್ಯಾಸ ಭಾರತ ಪ್ರವಚನ ಸಮಿತಿ' ಕೈಗೊಂಡಿದ್ದ ಕುಮಾರವ್ಯಾಸ ಭಾರತ ವಾಚನ - ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಶಾಸ್ತ್ರಿಗಳು ಎಂಟು ತಿಂಗಳ ಕಾಲ

ದೀಕ್ಷಾಬದ್ಧರಾಗಿ ನಡೆಸಿಕೊಟ್ಟ ವ್ಯಾಖ್ಯಾನ ಅವರ ಐವತ್ತು ವರ್ಷಗಳ ಸಾಧನೆಯ ಸಿದ್ಧಿಯಾಗಿತ್ತು. ವಾಚನಕಾರನಾಗಿ ಅವರ ಪಕ್ಕದಲ್ಲೇ ಕುಳಿತು ಕೇಳುವ ಸೌಭಾಗ್ಯ ನನ್ನದಾದುದು ಯಾವ ಜನ್ಮದ ಸುಕೃತವೋ ಕಾಣೆ. ಆ ಕಾರ್ಯಕ್ರಮ ಮುಗಿದಾಗ ಜನರೆಲ್ಲ, "ಅಯ್ಯೋ ಹೋಯಿತೆ ಆ ನಾಕ! ಅಯ್ಯೋ ಬಂದಿತೆ ಈ ಲೋಕ" ಎಂದೂ, "ಇನ್ನಾಯಿತೆ ಪ್ರೀತಿ!" ಎಂದೂ ಹಲುಬಿದುದನ್ನೂ, ಶ್ರೀ ಶಾಸ್ತ್ರಿಗಳು ಬೆಂಗಳೂರಿಗೆ ಹೊರಟು ನಿಂತಾಗ ಕೃಷ್ಣನನ್ನು ದ್ವಾರಕೆಗೆ ಕಳುಹಬಂದ ಪಾಂಡವರಂತೆ ನೀರುಗಣ್ಣಿನಿಂದ ಬೀಳ್ಕೊಟ್ಟುದನ್ನೂ ನಾನೆಂದೂ ಮರೆಯಲಾರೆ.

**ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಮ್** ಎಂಬ ಆರ್ಯೋಕ್ತಿಯಂತೆ ಬಾಳಿದ ಪುಣ್ಯ ಜೀವಿಗಳು ಶ್ರೀ ಶಾಸ್ತ್ರಿಗಳು. ಇಂದು ಗಮಕಕಲೆ ಮತ್ತು ವ್ಯಾಖ್ಯಾನಕಲೆ ಇಷ್ಟೊಂದು ಜನಪ್ರಿಯವಾಗಿರುವುದರಲ್ಲಿ ಲಕ್ಷ್ಮೀಕೇಶವಶಾಸ್ತ್ರಿಗಳ ಕೊಡುಗೆ ಅಪಾರ. ಅವರೊಂದಿಗೆ ಕುಳಿತು ವಾಚಿಸುವ ಭಾಗ್ಯ ನನ್ನಂತೆ ನನ್ನ ಕಿರಿಯ ಬಂಧುಗಳಿಗೂ, ಶಿಷ್ಯರಿಗೂ, ಬಹುಕಾಲ ದೊರೆಯುತ್ತಿರಲೆಂದೂ, ಈ ಕಲಾಸೇವೆ ಶಾಸ್ತ್ರಿಗಳಿಂದ ಇನ್ನೂ ಹತ್ತಾರು ವರ್ಷಗಳ ಕಾಲ ನಡೆಯಲೆಂದೂ ದಯಾಮಯನಾದ ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

## ೨೩. ಶಾಸ್ತ್ರಿಗಳ ವ್ಯಾಖ್ಯಾನ ವೈಖರಿ

***ಕೇಶವ***

"ಹೇಗಿತ್ತು ಶಾಸ್ತ್ರಿಗಳ ವ್ಯಾಖ್ಯಾನ?" ಎಂದು ಮಿತ್ರರೊಬ್ಬರನ್ನು ಹಿಂದಿನ ದಿನದ ಶಾಸ್ತ್ರಿಗಳ ಕಾರ್ಯಕ್ರಮದ ಬಗ್ಗೆ ಪ್ರಶ್ನಿಸಿದೆ. "ಸೊಗಸಾಗಿತ್ತು" ಎಂದರು. ಎಷ್ಟೋ ಬಾರಿ ಶಾಸ್ತ್ರಿಗಳ ವ್ಯಾಖ್ಯಾನದ ಬಗ್ಗೆ ಅನೇಕ ಮಿತ್ರರನ್ನು ಈ ರೀತಿ ಪ್ರಶ್ನಿಸಿದ್ದೇನೆ. ಪ್ರತಿ ಬಾರಿಯೂ, 'ಸೊಗಸಾಗಿತ್ತು', 'ಅದ್ಭುತವಾಗಿತ್ತು', 'ತುಂಬ ಚೆನ್ನಾಗಿತ್ತು' ಇತ್ಯಾದಿ ಪ್ರತಿಕ್ರಿಯೆಗಳು ದೊರೆತಿವೆ. ನಾನೂ ಅನೇಕ ಬಾರಿ ಈ ಬಗ್ಗೆ ಚಿಂತಿಸಿದ್ದೇನೆ. ಅದು ಹೇಗೆ ಶಾಸ್ತ್ರಿಗಳ ವ್ಯಾಖ್ಯಾನ ಬೇರೆಯವರದ್ದಕ್ಕಿಂತ ಭಿನ್ನವಾಗಿರುತ್ತದೆ? ಕಾರಣವೇನಿರಬಹುದು? ನಮ್ಮ ಮಿತ್ರವೃಂದದಲ್ಲಿ ಶಾಸ್ತ್ರಿಗಳ ವ್ಯಾಖ್ಯಾನದ ಬಗ್ಗೆ ಚರ್ಚೆ ಬಂದಾಗಲೆಲ್ಲ, ನಮ್ಮ ಅನೇಕ ಮಿತ್ರರು, ಶಾಸ್ತ್ರಿಗಳು ಅಂದಿನ ಕಾರ್ಯಕ್ರಮದಲ್ಲಿ ಇಂತಹ ಪದ್ಯದ ಬಗ್ಗೆ ಹೀಗೆ ವ್ಯಾಖ್ಯಾನಿಸಿದ್ದರು ಎಂದು ತಾವು ಕೇಳಿದ ಕಾರ್ಯಕ್ರಮದ ಬಗ್ಗೆ ಹೇಳುತ್ತಿರುತ್ತಾರೆ. ಅಂತಹ ಅನೇಕ ಮಿತ್ರರಿಗೆ ಹಾಗೂ ನನಗೆ, 'ಬಹಳ ಚೆನ್ನಾಗಿತ್ತು' ಎಂದು ದಟ್ಟವಾಗಿ ಅನ್ನಿಸಿದ ಕೆಲವು ಪ್ರಸಂಗಗಳ ವ್ಯಾಖ್ಯಾನಗಳನ್ನು ಈ ಲೇಖನದಲ್ಲಿ ಕೊಡಲಾಗಿದೆ. ಅಂತೆಯೇ, ಇದು ಶಾಸ್ತ್ರಿಗಳ ವ್ಯಾಖ್ಯಾನವೈಖರಿಯನ್ನು ಪರಿಚಯಿಸುವ ಪ್ರಯತ್ನವೂ ಆಗಿದೆ.

**"ಗಾಲಿಯೊಂದೇ ರಥಕೆ, ಜೋಡಾಗಿ ಪೂಡುವೊಡೆ ಸಾಲದೇಳೇಹಯಂ**
**ನಡೆಸುವೊಡೆ ಸಾರಥಿಗೆ ಕಾಲಿಲ್ಲ..." (ಸಂಧಿ ೨೬, ಪದ್ಯ ೨೬)**

ಜೈಮಿನೀಭಾರತದ ಈ ಪದ್ಯಕ್ಕೆ 'ಒಂದೇ ಗಾಲಿಯ ರಥ, ಏಳುಕುದುರೆಗಳು ಹಾಗೂ ಕಾಲಿಲ್ಲದ ಸಾರಥಿ - ಇಂತಹ ನ್ಯೂನತೆಗಳಿದ್ದಾಗ್ಯೂ, ಸೂರ್ಯ ಕಾಲಗತಿಯನ್ನು ಮೀರಬಾರದೆಂದು ಪ್ರತಿದಿನ ಲೋಕಯಾತ್ರೆಯನ್ನು ಮಾಡುತ್ತಿರುತ್ತಾನೆ - ಮಹಾತ್ಮರ ರೀತಿಯೇ ಅಂತಹುದು' ಎಂಬ ವ್ಯಾಖ್ಯಾನವನ್ನು ಯಾರಾದರೂ ನೀಡಿಯಾರು. ಆದರೆ, ಶಾಸ್ತ್ರಿಗಳು ಈ ಪದ್ಯವನ್ನು ಒಂದು ಸಂದರ್ಭದಲ್ಲಿ ಕೇಳುಗರ ಮನಮುಟ್ಟುವಂತೆ ವ್ಯಾಖ್ಯಾನಿಸಿದ ರೀತಿ ನೋಡಿ -"ಮಹಾತ್ಮನಾದ ಸೂರ್ಯ ಭಗವಂತನ ಕಷ್ಟಕರವಾದ ನಿತ್ಯಯಾತ್ರೆಯ ಪರಿಯನ್ನು ಗಮನಿಸಿ : ಒಂಟಿಗಾಲಿಯ ರಥದಲ್ಲಿ ಸಮತೋಲ ಕಾಪಾಡಿಕೊಳ್ಳಬೇಕು; ಕುದುರೆಗಳೋ ಮೂರು ಜೋಡಿ, ಒಂದು ಒಂಟಿ, ಎತ್ತೆತ್ತಲೋ ಎಳೆಯುತ್ತವೆ. ನೋಡಿ, ಈಗ ಕಾರಿನಲ್ಲಿ ಹೋಗಬೇಕೆಂದು ಸಾಹೇಬರು ಬಂದಾಗ ನೀವು ಗಮನಿಸಿರಬಹುದು, ಕಾರಿನ ಚಾಲಕ ಬಾಗಿಲನ್ನು ತೆಗೆದು ಸಾಹೇಬರಿಗೆ ಆರಾಮವಾಗಿ ಕೂಡಲವಕಾಶ ನೀಡಿ ಅನಂತರ ತನ್ನ ಜಾಗೆಯಲ್ಲಿ ಕುಳಿತು ಕಾರನ್ನು ನಡೆಸುತ್ತಾನೆ. ಆದರೆ ಇಲ್ಲಿ -'ಸಾರಥಿ, ಹೊರಡೋಣವೇ' ಎಂದು ಸೂರ್ಯ ಸಿದ್ಧನಾಗಿ ಕೇಳಿದರೆ, 'ಎತ್ತಿ ಕೂಡಿಸು ನನ್ನ ರಥದಲ್ಲಿ' ಎಂದು ಕೈ ಚಾಚುತ್ತಾನೆ, ಸಾರಥಿ"

ಕುಮಾರವ್ಯಾಸ ಭಾರತದ ಅರಣ್ಯಪರ್ವದಲ್ಲಿ ಧರ್ಮರಾಜನು ಲೋಮಶ ಮಹರ್ಷಿಗಳ ಬಳಿ ತಾನು ರಾಜ್ಯಕೋಶಗಳನ್ನು ಕಳೆದುಕೊಂಡ ಸಂಕಟವನ್ನು ತೋಡಿಕೊಂಡಾಗ ಲೋಮಶ ಮಹರ್ಷಿಗಳು ನಳಚರಿತ್ರೆಯನ್ನು ಧರ್ಮರಾಜನಿಗೆ ಹೇಳಿದ ಈ ಕೆಲ ಪದ್ಯಗಳ (ಅರಣ್ಯ ಪರ್ವ: ಸಂಧಿ ೯, ಪದ್ಯ ೬-೯) ವ್ಯಾಖ್ಯಾನವನ್ನು ಶಾಸ್ತ್ರಿಗಳು ಮಾಡಿದ ರೀತಿ ಅನನ್ಯವಾಗಿದೆ. ನಾವೆಲ್ಲರೂ ನಳಚರಿತ್ರೆಯನ್ನು ಕೇಳಿದ್ದೇವೆ. ನಳ ಅಂತ ಒಬ್ಬ ರಾಜ

ತಮ್ಮನೊಡನೆ ಜೂಜಿನಲ್ಲಿ ಸೋತು, ಕಾಡಿನಲ್ಲಿ ಮೈಮೇಲಿದ್ದ ಬಟ್ಟೆಯನ್ನು ಕಳೆದುಕೊಂಡು, ಹೆಂಡತಿಯ ಅರ್ಧ ಸೀರೆಯನ್ನೇ ಮಾನಮುಚ್ಚುವ ಸಲುವಾಗಿ ಸುತ್ತಿಕೊಂಡು, ಹೆಂಡತಿಯನ್ನು ಬಿಟ್ಟು, ವಿಷಸರ್ಪವೊಂದನ್ನು ಬದುಕಿಸಲು ಹೋಗಿ ಕಚ್ಚಿಸಿಕೊಂಡು, ಕುರೂಪದೇಹವನ್ನು ಹೊಂದಿ, ಬಾಹುಕನೆಂಬ ಹೆಸರಿನಲ್ಲಿ ಋತುಪರ್ಣ ರಾಜನ ಸೇವೆ ಮಾಡಿ, ಅಕ್ಷಹೃದಯವನ್ನು ಕಲಿತು



*26. ನಿಂತವರು : ಮಮ್ಮಗ ಎಂ.ಸಿ.ಮಹೇಶ್, ರೇಖಾಮಹೇಶ್, ಮಮ್ಮಗ ಎಂ.ಸಿ. ಪ್ರಕಾಶ್, ಶ್ರೀಮತಿ ಪ್ರಕಾಶ್. ಕುಳಿತವರು : ಲಕ್ಷ್ಮೀಕೇಶವಶಾಸ್ತ್ರಿಗಳು ಮತ್ತು ರತ್ನಮ್ಮನವರು*

ಮರಳಿ ರಾಜ್ಯ ಪಡೆದ ಕಥೆ. ಇಲ್ಲಿ ಶಾಸ್ತ್ರಿಗಳು- ಲೋಮಶ ಮಹರ್ಷಿಗಳು ಧರ್ಮರಾಜನ 'ಎಲ್ಲ ಕಳೆದುಕೊಂಡೆ' ಎಂಬುದಕ್ಕೆ ಪ್ರತ್ಯುತ್ತರವಾಗಿ "ಧರ್ಮರಾಜ, ನಳ ಕಳೆದುಕೊಂಡ ವಸ್ತುಗಳ ಪಟ್ಟಿಯನ್ನು ಕೊಡುತ್ತೇನೆ ಕೇಳು. ನಿನ್ನಂತೆಯೇ ಜೂಜಿನಲ್ಲಿ ಸೋತು ರಾಜ್ಯ ಕಳೆದುಕೊಂಡ; ಮನುಷ್ಯನಿಗೆ ಅತಿ ಮುಖ್ಯವಾದ ಬಟ್ಟೆಯನ್ನು ಕಳೆದುಕೊಂಡನಯ್ಯ; ಹೆಂಡತೀನ ಕಳಕೊಂಡ, ನಿನಗಾದರೋ ಹೆಂಡತಿ ಬಳಿಯಲ್ಲೇ ಇದ್ದಾಳೆ; ಇವೆಲ್ಲವೂ ಹೋಗಲಿ ಮನುಷ್ಯನಿಗೆ ದೈವದತ್ತವಾದ ಶರೀರ ಕೊನೆಯವರೆವಿಗೂ ಇರುತ್ತದೆ (ಮುಪ್ಪಿನ ಚಿಹ್ನೆಗಳ ಹೊರತಾಗಿ). ಈ ನಳನ ದೌರ್ಭಾಗ್ಯ ನೋಡಯ್ಯ, ಅತಿ ಸುಂದರವಾದ ಶರೀರ ಹೊಂದಿದ್ದ ನಳ ಅತಿ ಕುರೂಪಿಯಾಗಿ ಹೋದ; ಇನ್ನೂ ದೌರ್ಭಾಗ್ಯದ ಸಂಗತಿಯೊಂದಿದೆ- ಹುಟ್ಟಿದಾರಭ್ಯ ವ್ಯಕ್ತಿಗೆ ಸಾಯುವವರೆಗೂ ಹೆಸರೊಂದಿರುತ್ತದೆ. ಆದರೆ ಈ ನಳ ತನ್ನ ಹೆಸರನ್ನೂ ಕಳೆದುಕೊಂಡನಯ್ಯ ಧರ್ಮರಾಜ" ಎಂದು ಅರ್ಥೈಸಿದರು.

ಶಾಸ್ತ್ರಿಗಳದು ಇನ್ನೊಂದು ವೈಶಿಷ್ಟ್ಯವಿದೆ : ಪುರಾತನ ಕನ್ನಡ ಕಾವ್ಯಗಳಿಗೆ ವ್ಯಾಖ್ಯಾನ ನೀಡುವಾಗ ಇಂಗ್ಲಿಷ್ ಶಬ್ದಗಳನ್ನು- ಸೂಕ್ತಿಗಳನ್ನು ಇತರೆ ವ್ಯಾಖ್ಯಾನಕಾರರು ಬಳಸಿದಾಗ ಅದು odd ಎಂಬಂತೆ ನಮಗೆ ತೋರುತ್ತದೆ. ಆದರೆ, ಶಾಸ್ತ್ರಿಗಳು ಇಂಗ್ಲಿಷನ್ನೂ ಕನ್ನಡವೆಂಬಂತೆಯೇ ಸುಲಲಿತವಾಗಿ ಬಳಸುವುದರಲ್ಲಿ ಸಿದ್ಧಹಸ್ತರು.

ಕುಂತೀಭೋಜನ ಅರಮನೆಗೆ ದುರ್ವಾಸ ಮುನಿಗಳು ಆಗಮಿಸಿದ್ದಾರೆ. ಅವರ ಸೇವೆಗೆಂದು ರಾಜ ತನ್ನ ಮಗಳು ಕುಂತಿಯನ್ನು ನೇಮಿಸಿದ್ದಾನೆ. ಕುಂತಿಯ ಸೇವೆಯಿಂದ ಪ್ರೀತರಾದ ಮುನಿಗಳು ಕುಂತಿಗೆ 'ವರವನ್ನು ಕೇಳಿಕೋ' ಎಂದಿದ್ದಾರೆ (ಕುಮಾರವ್ಯಾಸ ಭಾರತ ಆದಿಪರ್ವ ಸಂಧಿ ೩, ಪದ್ಯ ೧೬-೧೭). ಈ ಸಂದರ್ಭದಲ್ಲಿ ಶಾಸ್ತ್ರಿಗಳು ವ್ಯಾಖ್ಯಾನಿಸುತ್ತಾರೆ- "ನೋಡಿ, ಇಂಗ್ಲಿಷಿನಲ್ಲಿ ಒಂದು ಮಾತಿದೆ - 'A boy is a boy; but a girl is a little woman' ಎಂದು. ಅಂದರೆ ಕುಂತಿಯ ಜಾಗದಲ್ಲಿ ಹುಡುಗನಿದ್ದರೆ ಏನು ಕೇಳಬಹುದಿತ್ತು?- ನನಗೊಂದು ಆಡುವ ವಸ್ತುವೆಂದೋ, ಇನ್ನೂ ಮುಂದುವರೆದು ನನಗೊಂದು ಖಡ್ಗ ಕೊಡಿರೆಂದೋ ಕೇಳುತ್ತಿದ್ದ. ಆದರೆ ಕುಂತಿ 'ಹುಡುಗಿ' ಹತ್ತು ವರ್ಷದ ಬಾಲೆ- ಅವಳು ಕೇಳಿದಳು, 'ನನಗೊಂದು ಮಗುವನ್ನು ಕೊಡಿರಿ' ಎಂದು. ನೋಡಿ ಹೇಗಿದೆ - A girl is a little woman."

ಕಿರಾತಾರ್ಜುನೀಯದಲ್ಲಿ ಅರ್ಜುನನ ಪೌರುಷಕ್ಕೆ ಮೆಚ್ಚಿ ಶಿವ ಹಾಗೂ ಉಮೆ ಅನುಗ್ರಹಿಸಿದ ಪಾಶುಪತಾಸ್ತ್ರ ಹಾಗೂ ಅಂಜನಾಸ್ತ್ರಗಳ ಬಗ್ಗೆ ತಿಳಿಸುತ್ತಾ (ಅರಣ್ಯ ಪರ್ವ: ಸಂಧಿ ೬, ಪದ್ಯ ೧೦೬) ಶಾಸ್ತ್ರಿಗಳು, ಶಿವ ಅನುಗ್ರಹಿಸಿದ ಪಾಶುಪತಾಸ್ತ್ರ ಇಡಿಯ ಜಗತ್ತೇ ಯುದ್ಧಕ್ಕೆ ನಿಂತಾಗ ಬಳಸುವಂತಹ ಜಗತ್ತಿನ ವಿನಾಶಕ್ಕೆ ಕಾರಣವಾಗುವ ಅಸ್ತ್ರವೆಂತಲೂ, ಅದೇ ಉಮೆ, ಜಗನ್ಮಾತೆ ಅನುಗ್ರಹಿಸಿದ ಅಂಜನಾಸ್ತ್ರವು ಒಬ್ಬ, ಇಬ್ಬರು, ಮೂವರು ಹೀಗೆ ಎಷ್ಟು ಬೇಕೋ ಅಷ್ಟು ಶತ್ರುನಾಶ ಮಾತ್ರಕ್ಕೆ ಬಳಸುವ ಅಸ್ತ್ರವೆಂತಲೂ ವಿವರಣೆ ನೀಡಿ, ಅದಕ್ಕೊಂದು ಉದಾಹರಣೆ ನೀಡಿದರು, "ಅಪ್ಪ ಮಗನಿಗೆ ೧೦,೦೦೦ ರೂ.ಗಳ ಚೆಕ್ ಕೊಟ್ಟಿದ್ದಾನೆ- ನಗದು

ಮಾಡಿಕೊಳ್ಳದೆ ಖರ್ಚಿಗೆ ದಾರಿಯೇ ಇಲ್ಲ. ಅದೇ ತಾಯಿ ೫೦ ರೂ.ಗಳ ನೋಟೊಂದನ್ನು ಚಿಲ್ಲರೆ ಚಿಲ್ಲರೆಯಾಗಿ ಎಷ್ಟು ಬೇಕೋ ಅಷ್ಟನ್ನು ಬಳಸಲು ಸಾಧ್ಯವಾಗುವಂತೆ ನೀಡಿದ್ದಾಳೆ- ಹಾಗಾಯಿತು ಈ ಉಮೆಯ ಅನುಗ್ರಹದ ವೈಶಿಷ್ಟ್ಯ" ಎಂದು.

ಇನ್ನು, ಕವಿಯ ಕೆಲವು ಮಾತುಗಳ ನಿರ್ದಿಷ್ಟ ವ್ಯಾಖ್ಯಾನದ ರೀತಿ ನೋಡಿ- ಸಂಜಯನನ್ನು ದೂತನನ್ನಾಗಿ ಕಳುಹಿಸಲು ನಿಶ್ಚಯವಾಗಿದೆ. ಅವನನ್ನು ಖಳಚತುಷ್ಟಯರು ದೌತ್ಯಕ್ಕಾಗಿ ತಯಾರಿಸುತ್ತಿದ್ದಾರೆ. ಕವಿ ಕುಮಾರವ್ಯಾಸ ಹೇಳುತ್ತಾನೆ, - "ಸಂಜಯನನಾಗಳೆ ಕರೆಸಿ ಕುರುಪತಿ ಬುದ್ಧಿಗಲಿಸಿದನು" (ಉದ್ಯೋಗ ಪರ್ವ: ಸಂಧಿ ೨, ಪದ್ಯ ೨೩). ಅದನ್ನು ಶಾಸ್ತ್ರಿಗಳು ವ್ಯಾಖ್ಯಾನಿಸುವ ಸೊಬಗು ನೋಡಿ. "ನಾಲ್ಕೂ ಖಳರು ಕುಳಿತಿದ್ದಾರೆ - ಕಲ್ಪಿಸಿಕೊಳ್ಳಿ. ಸಂಜಯನನ್ನು ಕರೆಸಿದ್ದಾರೆ- ದುರ್ಯೋಧನ ಸಂಜಯನನ್ನು ಕುರಿತು ಹೇಳಿದ, ನೀನು ಪಾಂಡವರ ಬಳಿಗೆ ಹೋಗಿ ಜೋರಿನಿಂದ, ಚಕ್ರವರ್ತಿಯ ದೂತನಿಗೆ ತಕ್ಕ ರೀತಿಯಲ್ಲಿ ನುಡಿಯಬೇಕು - ಎಲ್ಲಿ ಹೇಳು ನೋಡೋಣ- 'ಮಹಾರಾಜ', ಎಂದು. ಸಂಜಯ ಕೇವಲ ಸೂತ, ಪಾಂಡವರ ಪಕ್ಷಪಾತಿ ಬೇರೆ. ಆತ ಮೆಲ್ಲಗೆ 'ಮಹಾರಾಜ' ಎಂದ. ಅದಕ್ಕೆ ದುರ್ಯೋಧನ 'ಉಹುಂ, ಇನ್ನೂ ಜೋರಾಗಿ' ಎಂದ. ಮತ್ತೆ ಸಂಜಯ 'ಮಹಾರಾಜ' ಎಂದ. ಆಗ ದುರ್ಯೋಧನ 'ಉಹುಂ, ಸಾಲದು. ಇನ್ನೂ ಜೋರಾಗಿ ಹೇಳಬೇಕು. ಸಭೆಯ ಜನ ನಡುಗಬೇಕು' ಎಂದು ಹೇಳಿದ." ಈ ಮಾತುಗಳನ್ನು ಹೇಳುವಾಗ ಶಾಸ್ತ್ರಿಗಳ ಮುಖ, ಕೈಯ ಹಾಸುಬೀಸುಗಳನ್ನು ನೋಡುವುದೇ ಒಂದು ಸೊಗಸು.

"ಮೆಲ್ಲಗೆ ಮಾತ ತೆಗೆದನು ಕೌರವರ ರಾಯ" ಎನ್ನುತ್ತಾನೆ ನಾರಣಪ್ಪ (ಕರ್ಣ ಪರ್ವ: ಸಂಧಿ ೫, ಪದ್ಯ ೫). ಕರ್ಣನ ಸೇನಾಪಟ್ಟದ ಮೊದಲ ದಿನದ ಯುದ್ಧದಲ್ಲಿ ಸೋಲಾಗಿದೆ. ಆದರೆ ಅದನ್ನು ಬೇರಾರೂ ಬಾಯ್ಬಿಟ್ಟು ಆಡುವಂತಿಲ್ಲ. ಏಕೆಂದರೆ ಕೌರವನ ಪರಮಾಪ್ತ ಕರ್ಣ. ರಾತ್ರಿಯ ಸಭೆಯಲ್ಲಿ ಕೌರವನೇ ಈ ವಿಚಾರವನ್ನು ಪ್ರಸ್ತಾಪಿಸುತ್ತ, "ಕರ್ಣ, ಅಲ್ಲ ವಿಷಯಕ್ಕೆ ಹೇಳ್ತೀನಿ. ಅವರೇ ಗೆದ್ದರೂಂತಲ್ಲ. ಆದರೂ ಸ್ವಲ್ಪ ಅವರ ಕೈಯೇ ಮೇಲಾಯ್ತೋಂತ, ವಿಷಯಕ್ಕೆ ಹೇಳ್ತೀನಿ..."

ಶಾಸ್ತ್ರಿಗಳ ನಗೆಚಾಟಿಕೆಯ ಒಂದೆರಡು ಉದಾಹರಣೆ- ಅಭಿಮನ್ಯು ಚಕ್ರವ್ಯೂಹ ಹೊಕ್ಕಿದ್ದಾನೆ (ದ್ರೋಣಪರ್ವ: ಸಂಧಿ ೫, ಪದ್ಯ ೩೪), ಯಾರೂ ಅವನನ್ನು ಎದುರಿಸಲು ಸಾಧ್ಯವಾಗುತ್ತಿಲ್ಲ. ಶಲ್ಯನು



*27. ನಿಂತವರು : ಚನ್ನಕೇಶವಶಾಸ್ತ್ರಿಗಳ ಮಗ ಎಂ.ಸಿ.ಮಹೇಶ್, ರೇಖಾಮಹೇಶ್, ಎಂ.ಸಿ.ಪ್ರಕಾಶ್, ಶ್ರೀಮತಿ ಪ್ರಕಾಶ್.*
*ಕುಳಿತವರು : ಚನ್ನಕೇಶವಶಾಸ್ತ್ರಿಗಳ ಮಗಳು ಡಾ. ಉಷಾ, ಮಮ್ಮಗ ಸುಜಿತ್, ಅಳಿಯ ಡಾ. ಪಿ.ವಿ. ವೇಣುಗೋಪಾಲ್, (ಮಮ್ಮಗ ) ರಂಜಿತ್, ಹರ್ಷ*

ಅಭಿಮನ್ಯುವನ್ನು ಎದುರಿಸಿ ಸೋತುದನ್ನು ಕಂಡು ಶಲ್ಯನ ತಮ್ಮ, "ನಾನು ಶಲ್ಯನ ತಮ್ಮ ಬಂದಿದ್ದೇನೆ ಕಣೋ" ಎನ್ನುತ್ತ ಮೇಲೆ ಹಾಯುತ್ತಾನೆ. ಅಭಿಮನ್ಯುವಿಗೆ ಅವನ ಮಾತು ಕೇಳಿ ತಮಾಷೆ ಮಾಡಬೇಕೆನಿಸಿ ತನ್ನ ಸಾರಥಿಯೊಂದಿಗೆ, "ಸಾರಥಿ, ಯಾರು ಬಂದಿದಾರೆ ಗೊತ್ತೇನೋ? ಶಲ್ಯನ ತಮ್ಮ ಕಣೋ, ಸೋತ ಶಲ್ಯನ ತಮ್ಮ! ಹೆಸರೇ ಇಲ್ಲ, ವೀರನಂತೆ." ಎನ್ನುತ್ತಾನೆ.

ಸುಯೋಧನ ಜೈತ್ರಯಾತ್ರೆಗೆ ಹೋಗಿದ್ದಾಗ ಚಿತ್ರಸೇನನ ಸೆರೆಗೆ ಕೌರವರು ಸಿಲುಕುತ್ತಾರೆ. ರಾಜ ಸೆರೆಸಿಕ್ಕಾಗ ಪಾಳೆಯ ಲೂಟಿಯಾಗುತ್ತದೆ. "ಕೀಳು ಮೇಲೊಂದಾಯ್ತು ಧನಿಕರ ಪೀಳಿಗೆಯ ಧನ ಸೂರೆವೋದುದು" (ಅರಣ್ಯ ಪರ್ವ: ಸಂಧಿ ೨೦, ಪದ್ಯ ೧-೨)

ಎನ್ನುತ್ತಾನೆ ಕವಿ. ಶಾಸ್ತ್ರಿಗಳು: ರಾಜನೊಂದಿಗೆ ಪಟ್ಟಣವೇ ಹೋಗಿತ್ತು. ಅವಕಾಶ ಸಿಕ್ಕಾಗ ಲೂಟಿಯ ಕಾರ್ಯ ಮೊದಲಾಯಿತು. ಈಗ ಆಳೂ, ಅರಸರೂ ಒಂದೇ. ವಿಹಾರಕ್ಕೆಂದು ಬಂದ ಕೆಲವರು ಸ್ವಲ್ಪ ದೂರ ಹೋಗಿದ್ದಾರೆ, ಅವರಿಗೆ ರಾಜ ಸೆರೆ ಸಿಕ್ಕ ಸಮಾಚಾರ ತಿಳಿದಿಲ್ಲ. ಪಾಳೆಯದ ಕಡೆಯಿಂದ ಜನ ಗಾಬರಿಯಾಗಿ ಓಡಿ ಬರುತ್ತಿರುವುದನ್ನು ಕಂಡ ಇವರು "ಏನ್ರೀ?" ಎಂದು ವಿಚಾರಿಸಿದರೆ, ಅವರು "ಓಡ್ರೀ" ಅಂದರಂತೆ. ಕತೆ ಹೇಳುತ್ತ ಕೂಡಲು ವೇಳೆಯೆಲ್ಲಿದೆ? ಸದ್ಯ, ಜೀವ ಉಳಿದರೆ ಸಾಕಾಗಿದೆ.

ಎಂದೂ ಯುದ್ಧ ನೋಡದ ಉತ್ತರಕುಮಾರ ಬೃಹನ್ನಳೆಯನ್ನು ಸಾರಥಿಯಾಗಿ ಮಾಡಿಕೊಂಡು ಯುದ್ಧಕ್ಕೆ ಹೊರಟ (ವಿರಾಟ ಪರ್ವ ಸಂಧಿ ೬, ಪದ್ಯ ೨೮). ಸೇನೆ ಕಂಡು ಭಯವಾಗಿ ಓಟಕಿತ್ತ. ಬೃಹನ್ನಳೆ ಬಿಡಲಿಲ್ಲ. ಬೈದು, ಜರೆದು "ನೀನೇ ಸಾರಥಿಯಾಗಿರು. ನಾನು ಯುದ್ಧ ಮಾಡಿ ಗೆಲ್ಲುತ್ತೇನೆ" ಎಂದು ಹೇಳಿದರೆ, ಉತ್ತರ "ಹುಲು ಬೃಹನ್ನಳೆಯಾದ ನಿನಗೀ ಕದನ ನಾಟಕ ವಿದ್ಯೆಯಲ್ಲ" ಎನ್ನುತ್ತಾನೆ. ಶಾಸ್ತ್ರಿಗಳು -"ಸಾರಥಿ, ರಾಜಪುತ್ರ ನಾನೇ ಹೆದರ್ತೀನಿ. ಇನ್ನು ನಪುಂಸಕ ನೀನು ಯುದ್ಧ ಮಾಡಿ ಗೆಲ್ತೀಯಾ? ಹೇಗಾದ್ರೂ ಮಾಡಿ ನನ್ನನ್ನು ಒಪ್ಪಿಸಿ ಅಲ್ಲಿಗೆ ಕರ್‍ಕೊಂಡು ಹೋಗಿ ಬಲಿ ಕೊಡೋಣ ಅಂತ ನಿನ್ನ ತಂತ್ರ, ನನಗ್ಗೊತ್ತು. ಸಾರಥಿ, ಯುದ್ಧ ಅಂದ್ರೆ ನಾಟ್ಯ ಅಂತ ತಿಳ್ಕೋಬೇಡ. ಅಲ್ಲಿ ತಾಳ ತಪ್ಪಿದ್ರೆ ತಪ್ಪು ಅಂತ ಹೇಳ್ತಾರೆ, ತಿದ್ಕೋ ಬಹ್ದು. ಆದ್ರೆ ಇಲ್ಲಿ ತಪ್ಪಿದ್ರೆ ತಿದ್ಕೋಳ್ಳೋಕೆ ಪ್ರಾಣ ಇರೋಲ್ಲ" ಎಂದು ವಿವರಿಸುತ್ತಾರೆ. ಉತ್ತರನ ಪ್ರಾಣಭಯಕ್ಕೆ ಇದಕ್ಕಿಂತ ವಿವರಣೆ ಬೇಕೆ ?

ಗಮಕಕ್ಕೆ ವ್ಯಾಖ್ಯಾನವೇಕೆ ಬೇಕು? ಎಂದು ವಾದಿಸುವ ವರ್ಗವೊಂದಿದೆ. ನಿಜ, ಆದರೆ, ಮೇಲೆ ಉಲ್ಲೇಖಿಸಿರುವ ವೈಶಿಷ್ಟ್ಯಗಳಿಂದಾಗಿ ಶ್ರೀ ಶಾಸ್ತ್ರಿಗಳಂತಹವರ ವ್ಯಾಖ್ಯಾನ ಈ ಕಾವ್ಯಗಳಿಗಿದ್ದರೆ ಅವುಗಳ ಸೊಗಸು ಇನ್ನೂ ಚೆನ್ನು.

ಮಾನ್ಯ ತೀ. ನಂ. ಶ್ರೀಯವರು ತಮ್ಮ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಒಂದೆಡೆ ಪಂಪಭಾರತದ ಭೀಷ್ಮಸೇನಾ ಪಟ್ಟದ ಸಂದರ್ಭದ ಭೀಷ್ಮನ "ಸೂಳ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್" ಎಂಬ ವಾಕ್ಯದ 'ಸೂಳ್' - ಸರದಿಯೆಂತಲೂ, 'ಕಾಣ' ಎಂಬುದಕ್ಕೆ 'ಒಳಗಣ್ಣಿನಿಂದ ನೋಡು', 'ಯೋಚಿಸಿ ತಿಳಿ' ಎಂತಲೂ ಅರ್ಥ ಮಾಡಿದ್ದಾರೆ. ಈ ಪದಗಳ ಬಳಕೆಯ ವೈಶಿಷ್ಟ್ಯವನ್ನು ಸಾರುತ್ತಾ - ಭೀಷ್ಮರು ಕರ್ಣನಿಗೆ ಹೇಳಿದುದನ್ನು - "ಕರ್ಣ, ಎಲ್ಲರಿಗೂ ಬರುವುದು ಸರದಿಯೊಂದೇ; ನಿನ್ನದೂ ಬರುತ್ತದೆ. ಆತುರವೇಕೆ ? ಸರದಿ ಮಾತ್ರ -ಏಕೆಂದರೆ ಅಲ್ಲಿರುವವನು ಅರ್ಜುನ; ನಿನ್ನ ಒಳಗಣ್ಣನ್ನು ತೆರೆದು ಯೋಚಿಸಿನೋಡು" ಎಂದು ಅರ್ಥೈಸಿದ್ದಾರೆ. ಅಂತೆಯೇ, ಶ್ರೀ ಶಾಸ್ತ್ರಿಗಳು ಸಹ, ಕವಿಯ ಆಶಯಗಳನ್ನು, ಆಯಾ ಪಾತ್ರಗಳ ಸ್ವಭಾವಗಳ ಆಳಕ್ಕಿಳಿದು ಹುಡುಕಿ ತೆಗೆಯುತ್ತಾರೆ. ಇದು ಮೇಲಿನ ಉದಾಹರಣೆಗಳಿಂದ ಕೆಲಮಟ್ಟಿಗಾದರೂ ಸ್ಪಷ್ಟವಾಗಿದೆ ಎಂಬ ಆಶಯ ನನಗಿದೆ.

******

# ಅನುಬಂಧ

## ೧. ಮೂಲಗ್ರಂಥದ ಪರಿವಿಡಿ

***ಪ್ರವಚನ ಚಕ್ರವರ್ತಿ*: ವ್ಯಾಖ್ಯಾನ ಚಕ್ರವರ್ತಿ ಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳ ಅಭಿನಂದನಾ ಗ್ರಂಥ; ಪ್ರಧಾನ ಸಂಪಾದಕರು: ಎಚ್.ಆರ್. ಕೇಶವಮೂರ್ತಿ; ಗಮಕ ಕಲಾ ಪರಿಷತ್, ಹೊಸಹಳ್ಳಿ- ೫೭೦ ೨೦೨, ಶಿವಮೊಗ್ಗ ತಾಲ್ಲೂಕು; ೧೯೮೬; ೧/೮ ಡೆಮ್ಮಿ, ಪು. 16 + 174.**

## ೨. ಶುಭಾಶಯಗಳು

### ಶುಭಾಶಂಸೆ


ಗಮಕವ್ಯಾಖ್ಯಾನ ಕಲೆಯಲ್ಲಿ ಹಿರಿಯರೂ, ಶ್ರೇಷ್ಠರೂ ಆದ ಪೂಜ್ಯ ಬ್ರಹ್ಮಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳವರಿಗೆ ಎಂಬತ್ತು ವರ್ಷ ತುಂಬಿದ ಶುಭ ಸಂದರ್ಭದಲ್ಲಿ ಅವರ ಪ್ರವಚನಕಲೆಯ ಸುವರ್ಣಮಹೋತ್ಸವವಾಗುತ್ತಿರುವುದು ಒಂದು ಅಪೂರ್ವ ಸುಘಟನೆಯೇ ಸರಿ.

ಶ್ರೀಮಾನ್ ಶಾಸ್ತ್ರಿಗಳವರು ಬೆಂಗಳೂರಿನ ನಮ್ಮ **ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ**ಯಲ್ಲಿ ನಾಲ್ಕಾರು ಬಾರಿ ತಮ್ಮ ಪ್ರವಚನವನ್ನು ನಡೆಸಿಕೊಟ್ಟಿದ್ದಾರೆ. ಈ ಕಾರ್ಯಕ್ರಮಗಳಲ್ಲಿ ಸುಮಧುರ ಕಾವ್ಯವಾಚನ ಶ್ರೀ ಎಚ್.ಆರ್. ರಾಮಶಾಸ್ತ್ರಿಗಳವರದು; ವ್ಯಾಖ್ಯಾನ ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳದು. ಅವರು ಕವಿಯ ಪ್ರತಿಯೊಂದು ಮಾತನ್ನೂ ತಾವೂ ಸವಿದು ನೋಡಿ ಅದರ ಸ್ವಾರಸ್ಯವನ್ನು ಎತ್ತಿ ತೋರಿಸುವ ನಿಪುಣತೆಯನ್ನೂ ಪಡೆದವರು. ಕವಿಹೃದಯವನ್ನು ನಮಗೆ ತೋರಿಸಿ ಕಾವ್ಯದ ಸಂಪೂರ್ಣ ಉಪಯೋಗವು ನಮಗೆ ದೊರಕುವಂತೆ ಮಾಡುವ ಕೌಶಲವು ಅವರಲ್ಲಿದೆ. ಹೀಗೆ ಮಾಡುವುದರಲ್ಲಿ ಅವರು ತಮ್ಮ ಅಗಾಧವಾದ ವಿದ್ವತ್ತನ್ನು ಬಳಸಿಕೊಂಡು, ಸಮಾನ ಸನ್ನಿವೇಶಗಳನ್ನೂ, ಉಪಮಾನಗಳನ್ನೂ ಇತರ ಸಾಮಗ್ರಿಯನ್ನೂ ಶ್ರೋತೃಗಳ ಅವಗಾಹನೆಗೆ ತರುತ್ತಾರೆ. ಅವರ ವ್ಯಾಖ್ಯಾನವು ಈ ಮತ್ತು ಇತರ ಕಾರಣಗಳಿಂದ ವೈಶಿಷ್ಟ್ಯಪೂರ್ಣವಾಗಿದ್ದು ನಮ್ಮ ಸಂಸ್ಥೆಯ ಸ್ಥಾಪಕರಾದ ಡಿ.ವಿ. ಗುಂಡಪ್ಪನವರ ಮತ್ತು ಇತರರ ಮೆಚ್ಚುಗೆಗೂ, ಕೃತಜ್ಞತೆಗೂ ಪಾತ್ರವಾಗಿದೆ.

ಭಗವಂತನು ಅವರಿಗೆ ಆರೋಗ್ಯವನ್ನೂ, ಪೂರ್ಣಾಯುಸ್ಸನ್ನೂ ಕರುಣಿಸಲಿ. ಅವರ ವ್ಯಾಖ್ಯಾನಕಲೆಯ ಉಪಯೋಗವು ನಮ್ಮ ಜನರಿಗೆ ಇನ್ನೂ ದೊರಕುವಂತಾಗಲಿ; ಮತ್ತು ಭಗವಂತನು ಅವರಿಗೆ ಎಲ್ಲ ಶುಭಗಳನ್ನೂ ಅನುಗ್ರಹಿಸಲಿ ಎಂದು ಹೃತ್ಪೂರ್ವಕ ಹಾರೈಸುತ್ತೇನೆ.

*ನಿಟ್ಟೂರು ಶ್ರೀನಿವಾಸರಾವ್*

## ೩. ಹಸ್ತಾಕ್ಷರ



## ೪. ಲಕ್ಷ್ಮೀಕೇಶವಶಾಸ್ತ್ರಿಗಳ ವಂಶವೃಕ್ಷ

ಚನ್ನಕೇಶವ ಶಾಸ್ತ್ರಿ

|

ಶ್ರೀಕೇಶವ ಅವಧಾನಿಗಳು (ಮೂವರು ಮಕ್ಕಳು)

|

ಚನ್ನಕೇಶವ (ಚನ್ನಪ್ಪ) ಅವಧಾನಿಗಳು + ಸಾವಿತ್ರಮ್ಮ

---

ಲಕ್ಷ್ಮೀಕೇಶವ ಶಾಸ್ತ್ರಿಗಳು (ಪವತಿ)
(2005: ಶತಮಾನೋತ್ಸವ ವರ್ಷ)
+ ರತ್ನಮ್ಮ

1. ಎಂ.ಎಲ್.ಚನ್ನಕೇಶವಶಾಸ್ತ್ರಿ
   +ವಿಶಾಲಾಕ್ಷಿ(ಪವತಿ)
   +ಯಶೋದ (೨ನೇ ಸಂಸಾರ)
2. ರಾಜಲಕ್ಷ್ಮಿ (ಪವತಿ) + ಎಂ.ಎಲ್.ಸುಬ್ರಹ್ಮಣ್ಯ ಉಪಾಧ್ಯಾಯ
3. ವೈದೇಹಿ (ಪವತಿ) + ಎಂ.ಆರ್. ನಾರಾಯಣರಾವ್
4. ಶಾಂತ + ಎಂ.ಆರ್. ಕೃಷ್ಣರಾವ್
5. ರಘುಪತಿಶಾಸ್ತ್ರಿ + ಸುಲೋಚನ
6. ಕುಮಾರಸ್ವಾಮಿ + ಶಾರದ
7. ಸತ್ಯವತಿ + ಡಾ. ವಸಂತ್
8. ರಾಧಾಕೃಷ್ಣಶಾಸ್ತ್ರಿ (ಪವತಿ) + ಜಯಮ್ಮ
9. ಸತೀಶ ಎಂ.ಎಲ್. + ಲಲಿತ
   (ಕಂಪ್ಯೂಟರ್ ಸೆಂಟರ್ 'ಉತ್ತರ' )
10. ಶಿವರಾಮಕೃಷ್ಣಶಾಸ್ತ್ರಿ (ಕಂಪ್ಯೂಟರ್ ಸೆಂಟರ್ 'ಉತ್ತರ' )
   +ವೀಣಾ
11. ಪುಷ್ಪವಲ್ಲಿ (ಅಮೆರಿಕಾ) + ಸೋಮನಹಳ್ಳಿ ಸತ್ಯನಾರಾಯಣ

---

ಅನ್ನಪೂರ್ಣಮ್ಮ
+
ಕೆ.ಸುಬ್ಬರಾಯ ಅವಧಾನಿ

1. ಲೀಲಾವತಿ
   +ಸುಬ್ಬರಾಯಶಾಸ್ತ್ರಿ
2. ಪದ್ಮಾವತಿ
   + ಚಂದ್ರಶೇಖರ್
3. ಲಕ್ಷ್ಮಿ
   +ಸುಬ್ರಹ್ಮಣ್ಯ (ಪವತಿ)
4. ಹೆಚ್.ಎಸ್.ಗೋಪಾಲ್
   +ಅನ್ನಪೂರ್ಣಾದೇವಿ ಎಂ.ಆರ್.
5. ಡಾ.ವೆಂಕಟೇಶಮೂರ್ತಿ(ಮಕ್ಕಳತಜ್ಞ )
   + ಶಾಮಲ

---

ರಾಮಭದ್ರ ಶಾಸ್ತ್ರೀ (ಪವತಿ)
೧ನೇ ಹೆಂಡತಿ ಅನ್ನಪೂರ್ಣಮ್ಮ (ಪವತಿ)
೨ನೇ ಹೆಂಡತಿ ಸುಬ್ಬಲಕ್ಷ್ಮಿ

ಮೊದಲನೇ ಹೆಂಡತಿ ಮಕ್ಕಳು

1. ಎಂ.ಆರ್.ಚನ್ನಕೇಶವಶಾಸ್ತ್ರಿ (ಪವತಿ)
   + ಮೀನಾಕ್ಷಮ್ಮ
2. ವಿಶ್ವೇಶ್ವರ ಶಾಸ್ತ್ರಿ (ಪವತಿ)(ದತ್ತು)
   + ರಮಾ
3. ವಾಸಂತಿ
   + ಎಲ್.ವಿ.ಸುಬ್ರಹ್ಮಣ್ಯ(ಪವತಿ)
4. ಡಾ. ಎಂ.ಆರ್.ಸುಬ್ರಹ್ಮಣ್ಯ
   + ಜಯ

ಎರಡನೇ ಹೆಂಡತಿ ಮಕ್ಕಳು

1. ಡಾ. ಎಂ.ಆರ್.ಎಸ್.ಮೂರ್ತಿ
   + ಡಾ. ಸಾವಿತ್ರಿ
2. ಅನಂತಲಕ್ಷ್ಮಿ (ವಕೀಲರು)
   + ಪ್ರೊ. ಎಲ್.ಎಂ.ಎಲ್.ಶಾಸ್ತ್ರಿ
3. ಅನ್ನಪೂರ್ಣಾದೇವಿ
   +ಹೆಚ್.ಎಸ್.ಗೋಪಾಲ
4. ಸೀತಾಲಕ್ಷ್ಮಿ(ಶಿಕ್ಷಕಿ)
   + ಮೋಹನ್ ಕುಮಾರ್

# ೫. ವ್ಯಕ್ತಿವಿವರ
## ವೇ. ಬ್ರ. ಶ್ರೀ ಲಕ್ಷ್ಮೀಕೇಶವ ಶಾಸ್ತ್ರೀ

**ಜನನ:** ೨೨.೪.೧೯೦೫: ಚೈತ್ರ ಕೃಷ್ಣ ಪಂಚಮಿ, ವಿಶ್ವಾವಸು; ಮತ್ತೂರು

**ತಂದೆ:** ಬ್ರಹ್ಮೀಭೂತ ಚನ್ನಪ್ಪಾವಧಾನಿಗಳು, ಮತ್ತೂರು

**ತಾಯಿ:** ಶ್ರೀಮತಿ ಸಾವಿತ್ರಮ್ಮ, ಹೊಸಹಳ್ಳಿ

**ಮೊದಲ ಗುರುಗಳು:** ಪ್ರಾಥಮಿಕ : ಕನ್ನಡ: ವೇ. ಬ್ರ. ಶ್ರೀ ಚಿಂತಾಮಣಿ ಅವಧಾನಿಗಳು

ಸಂಸ್ಕೃತ: ವೇ. ಬ್ರ. ಶ್ರೀ ಚನ್ನಕೇಶವಶಾಸ್ತ್ರಿಗಳು

**ಪ್ರೌಢ ವಿದ್ಯಾಭ್ಯಾಸ:** ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆ, ಬೆಂಗಳೂರು

**ಗೆಳೆಯರ ಸಹಯೋಗ:** ಮತ್ತೂರು-ಹೊಸಹಳ್ಳಿ ಕರ್ನಾಟಕ ಸಂಘದ ಸ್ಥಾಪನೆ; ಶ್ರೀ ಶಾರದಾ ಪುಸ್ತಕ ಭಂಡಾರದ ಸ್ಥಾಪನೆ: ೧೯೩೨

**ಗಮಕವಾಚನದ ಮೊದಲ ಸಂಗಾತಿ: ಮತ್ತೂರು ರಾಮಶಾಸ್ತ್ರಿ:** ೧೯೩೭

**ಇತರ ಪ್ರಧಾನ ಸಂಗಾತಿಗಳು:** ಕುಪ್ಪಳ್ಳಿ ವೆಂಕಟೇಶಯ್ಯ, ಹೊಸಹಳ್ಳಿ ಎಚ್.ಆರ್. ಕೇಶವಮೂರ್ತಿ, ಎಚ್.ಆರ್. ರಾಮಶಾಸ್ತ್ರಿ

**ಗಮಕವಾಚನದ ಇತರ ಸಂಗಾತಿಗಳು:** ಹೊಸಹಳ್ಳಿ ರಾಮಸ್ವಾಮಿ ಶಾಸ್ತ್ರಿ, ಚಾ.ಸುಬ್ರಾಯಶಾಸ್ತ್ರಿ, ಬಿ.ಎಸ್.ಎಸ್. ಕೌಶಿಕ್, ರುಕ್ಮಿಣಿ ಸಂಪತ್ತಯ್ಯಂಗಾರ್, ಅನ್ನಪೂರ್ಣಮ್ಮ, ವಾಸುದೇವರಾವ್, ಸೂರ್ಯನಾರಾಯಣ ಅವಧಾನಿ ಮೊದಲಾದವರು.

**ಮತ್ತೂರು ಸಂಸ್ಕೃತ ಪಾಠಶಾಲೆಯಲ್ಲಿ ಉಪಾಧ್ಯಾಯ:** ೧೯೪೦

**ರಾಜ್ಯ ಸರ್ಕಾರದ ಸಂಸ್ಕೃತಿ ಪ್ರಸಾರ ಯೋಜನೆಯ ಕಲಾವಿದ:** ೧೯೫೫-೧೯೬೦

**ಆಕಾಶವಾಣಿಯಲ್ಲಿ ಗಮಕ ಕಲಾವಿದ :** ೧೯೫೬-೧೯೫೯

**ವಾಚಿಸಿದ ಕಾವ್ಯಗಳು:** ಕುಮಾರವ್ಯಾಸ ಭಾರತ, ಜೈಮಿನಿಭಾರತ, ಪಂಪಭಾರತ, ಹರಿಶ್ಚಂದ್ರಕಾವ್ಯ, ತೊರವೆ ರಾಮಾಯಣ, ಗಿರಿಜಾಕಲ್ಯಾಣ, ಶಾಕುಂತಲ ನಾಟಕ, ಶ್ರೀಮದ್ರಾಮಾಯಣ, ಶ್ರೀ ಭಾಗವತ, ಶ್ರೀ ಶಂಕರವಿಜಯ, ಇ.

**ಸಂಸ್ಕೃತದಲ್ಲಿ:** ವ್ಯಾಸಭಾರತ, ವಾಲ್ಮೀಕಿರಾಮಾಯಣ, ದೇವೀಭಾಗವತ, ಅಷ್ಟಾದಶ ಪುರಾಣಗಳು, ಶ್ರೀಶಂಕರವಿಜಯ, ಸಂಸ್ಕೃತ ಕಾವ್ಯನಾಟಕಗಳು

**ಬಿರುದುಗಳು:** ಪ್ರವಚನ ಚಕ್ರವರ್ತಿ, ಸಾಹಿತ್ಯವಾರಿಧಿ, ಭಾರತಕಥಾವಾರಿಧಿ, ವ್ಯಾಖ್ಯಾನವಾಚಸ್ಪತಿ, ಪ್ರವಚನಶಿರೋಮಣಿ, ಪ್ರವಚನಪ್ರವೀಣ ಇತ್ಯಾದಿ.

**ಶಿಷ್ಯರು:** ಚನ್ನಕೇಶವಶಾಸ್ತ್ರಿ , ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು, ರಘುಪತಿಶಾಸ್ತ್ರಿ, ಮತ್ತೂರು ಕೃಷ್ಣಮೂರ್ತಿ ಮೊದಲಾದವರು.

**ಕುಮಾರವ್ಯಾಸ ಭಾರತದ ಪೂರ್ಣವ್ಯಾಖ್ಯಾನದ ಧ್ವನಿಸುರುಳಿ:** ೧೯೮೫

**'ಪ್ರವಚನ ಚಕ್ರವರ್ತಿ' ಅಭಿನಂದನ ಗ್ರಂಥದ ಸಮರ್ಪಣೆ:** ೧೯೮೬

**ಮರಣ:** ೬.೫.೧೯೯೩

**ಜನ್ಮಶತಾಬ್ದಿ ಕಾರ್ಯಕ್ರಮ ಉದ್ಘಾಟನೆ:** ೨೯.೮.೦೪

**ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿ ಜನ್ಮಶತಮಾನೋತ್ಸವ ವರ್ಷ:** ೨೦೦೪-೦೫

# ೬. ಪ್ರಶಸ್ತಿ / ಸಂಮಾನ

**ಕರ್ನಾಟಕ ಸಂಘ**

ಶಿವಮೊಗ್ಗ

***ಪ್ರವಚನ ಚಕ್ರವರ್ತಿ, ವ್ಯಾಖ್ಯಾನ ವಾಚಸ್ಪತಿ, ಶ್ರೀ ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರೀ ಅವರನ್ನು***
***ದಿನಾಂಕ ೨೯.೦೭.೧೯೮೬ರಂದು ಸನ್ಮಾನಿಸಿ ಅರ್ಪಿಸಿದ***

## *ಸಂಮಾನ ಪತ್ರ*

*ಸನ್ಮಾನ್ಯರೇ,*

ಸಹ್ಯಾದ್ರಿಯ ಸಸ್ಯಶ್ಯಾಮಲೆಯ ತೌರು ಶಿವಮೊಗ್ಗ ಜಿಲ್ಲೆ. ಇದು ಶಾಂತಿಸಮೃದ್ಧಿಯ ಬೀಡೂ ಹೌದು. *ಈ* ಸಸ್ಯಶ್ರೀಯಿಂದ ಪ್ರಭಾವಿತರಾದ ಇಲ್ಲಿನ ಜನ ತಮ್ಮ ಮನಸ್ಸನ್ನು ವಿಕಸನಗೊಳಿಸಿಕೊಂಡು ಅಂತಃಸತ್ತ್ವವನ್ನು ಸಬಲಗೊಳಿಸಿಕೊಂಡಿದ್ದಾರಲ್ಲದೇ, ಇತರರನ್ನೂ ತಮ್ಮ ಜಾಡಿನಲ್ಲಿ ಕರೆದೊಯ್ದು ಧನ್ಯರಾಗಿದ್ದಾರೆ. ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ ಮುಂತಾದ ಲಲಿತಕಲೆಗಳ ಆರಾಧಕರಾಗಿ ಮಾನ್ಯರೂ ಆಗಿದ್ದಾರೆ. ಇಂತಹ ಬೆರಳೆಣಿಕೆಯ ಮಹಾಮಾನ್ಯರಲ್ಲಿ ತಾವೂ ಒಬ್ಬರು ಎಂಬುದನ್ನು ಸ್ಮರಿಸಲು ನನಗೆ ಹೆಮ್ಮೆಯಾಗುತ್ತಿದೆ. ತುಂಗೆಯ ಮಂಗಳ ಸಾಮೀಪ್ಯ, ಗ್ರಾಮದೇವತೆಯಾದ ಶ್ರೀ ಚನ್ನಕೇಶವನ ದಿವ್ಯಸಾನ್ನಿಧ್ಯ, ಗದ್ದೆ-ತೋಟ-ವನಶ್ರೀಯ ಮಧ್ಯೆ ಕುಕಿಲುವ ಪಕ್ಷಿಗಳ ಮಂಜುಳ ನಿನಾದ, ಅಗ್ನಿಹೋತ್ರಿಗಳ ಹೋಮಧೂಮದಿಂದ ಪವಿತ್ರವಾದ ವಾತಾವರಣ, ವೇದ ಪಠಣ-ಪಾಠನದ ಮಂಗಳ ಧ್ವನಿ, ಅಧ್ಯಯನ-ಅಧ್ಯಾಪನಶೀಲರಾದ ವಿದ್ವಾಂಸರ ವಾಸ - ಇಂತಹ ಋಷ್ಯಾಶ್ರಮವನ್ನು ಪ್ರತಿನಿಧಿಸುವ ನಿಷ್ಕಳಂಕ ಪರಿಸರದ ಮಧ್ಯೆ ಶ್ರೀ ಚನ್ನಪ್ಪ ಅವಧಾನಿಗಳು ಮತ್ತು ಶ್ರೀಮತಿ ಸಾವಿತ್ರಮ್ಮ ದಂಪತಿಗಳಿಗೆ ಸುಪುತ್ರರಾಗಿ ವಿಶ್ವಾವಸು ಸಂವತ್ಸರದ ಚೈತ್ರ ಬಹುಳ ಪಂಚಮಿ ದಿ.೨೨.೦೪.೧೯೦೫ ರಂದು ತಾವು ಜನ್ಮ ಪಡೆದಿರಿ. ಮತ್ತೂರಿಗೆ, ತನ್ಮೂಲಕ ಗಮಕ ಪ್ರಪಂಚಕ್ಕೆ ಇದು ಪುಣ್ಯೋದಯದ ದಿನ. ಮಾತಿಗೆ ಮೊದಲಗುರು ತಾಯಿ; ವಿದ್ಯೆಗೆ ಮೊದಲಗುರು ತಂದೆ- ಇದು ನಮ್ಮ ಸಂಸ್ಕೃತಿಯ ತಾಯಿಬೇರು. *ಈ* ತಾಯಿಬೇರಿನಿಂದ ಹನಿಹನಿ ನೀರು ಕುಡಿದು, ಕನ್ನಡ-ಸಂಸ್ಕೃತ ಭಾಷೆಗಳಲ್ಲಿ, ಸಾಹಿತ್ಯಗಳಲ್ಲಿ, ಸತ್ತ್ವಯುತವಾದ ವಿದ್ವತ್ತನ್ನು ಸಂಪಾದಿಸಿ ವಿದ್ವತ್ ಶರೀರಿಗಳಾಗಿ ತಂದೆಯಿಂದ ಬಳುವಳಿಯಾಗಿ ಬಂದ ಅಧ್ಯಯನ-ಅಧ್ಯಾಪನಗಳನ್ನು ಮುಂದುವರಿಸಿದಿರಿ. ಇತ್ತೀಚಿನ ವರ್ಷಗಳಲ್ಲಿ ವ್ಯಾಖ್ಯಾನವು ಒಂದು ಕಲೆಯ ಸ್ಥಾನವನ್ನು ಪಡೆದಿದೆ. ಇದಕ್ಕೆ ತಾವೇ ಮೂಲ ಕಾರಣರು. ವ್ಯಾಖ್ಯಾನವು, ಶ್ರೋತೃಗಳಲ್ಲಿ ರಸಾನುಭವ ಹಾಗೂ ಸೌಂದರ್ಯಾನುಭವಶಕ್ತಿಯನ್ನು ಜಾಗೃತಗೊಳಿಸುವ, ದುಷ್ಪ್ರವೃತ್ತಿಯನ್ನು ದಮನಮಾಡಿ ಸತ್ಪ್ರವೃತ್ತಿಯನ್ನು ಚೇತನಗೊಳಿಸುವ ಮಾಧ್ಯಮ ಎಂಬುದನ್ನು ತೋರಿಸಿ ಕೊಟ್ಟಿದ್ದೀರಿ. ವ್ಯಾಖ್ಯಾನದೊಂದಿಗೆ ಧರ್ಮಸಂಗತಿಗಳನ್ನು ನಿರೂಪಿಸಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಿದ್ದೀರಿ. ತಮ್ಮ ವ್ಯಾಖ್ಯಾನದ ಶೈಲಿ ಅದ್ವಿತೀಯ, ಅನುಕರಣೀಯ. ವಿದ್ವತ್ತಿನ ಬೆನ್ನು ಹತ್ತಿದ ಬಾಣಭಟ್ಟ, ಶ್ರೀಮಂತಿಕೆಯ ಸರ್ವಸ್ವವನ್ನೂ ಕಳೆದುಕೊಂಡ. ತಾಳ-ತಂಬೂರಿಯನ್ನು ಹಿಡಿದ ಶೀನಪ್ಪನಾಯಕ -ಪುರಂದರದಾಸನಾದ. ತಮ್ಮ ಬಾಳಿನ ಏಳು-ಬೀಳುಗಳು *ಈ* ಮಹಾಪುರುಷರಿಬ್ಬರನ್ನೂ ನೆನಪಿಗೆ ತರುತ್ತವೆ. ವಂಶಪಾರಂಪಾರ್ಯವಾಗಿ ಬಂದ ಶ್ರೀಮಂತಿಕೆಯಿಂದ ಇಂದು ತಾವು ದೂರವಾಗಿದ್ದೀರಿ. ಆದರೇನಂತೆ, ತಾವು ಇಂದು ಪ್ರವಚನ ಪ್ರಪಂಚದ ಅನಭಿಷಿಕ್ತ ಸಾಮ್ರಾಟರಾಗಿದ್ದೀರಿ. ತಮ್ಮ ವಿದ್ವತ್ತನ್ನು ಸಹೃದಯರಿಗೆ ಹಂಚುವ ಕೈಂಕರ್ಯವನ್ನು ಕೈಗೊಂಡು ಕಾವ್ಯವಾಚಕರು-ವ್ಯಾಖ್ಯಾತೃಗಳ ಬಳಗವನ್ನು ರಚಿಸಿ, ಅವರಿಗೆ ಶಾಸ್ತ್ರೀಯ ತರಬೇತಿ ನೀಡಿ, ಅವರ ಮೂಲಕ ನಾಡಿನ ಉದ್ದಗಲದಲ್ಲಿ ಕಾವ್ಯವಾಚನ ವ್ಯಾಖ್ಯಾನ ಮಾಡಿಸಿ, ಗಮಕಕಲೆಗೆ ಹೊಸ ಆಯಾಮವನ್ನು ಸೃಷ್ಟಿಸಿ, ಎಂಬತ್ತು ಸಂವತ್ಸರಗಳ ಸುದೀರ್ಘ ಬಾಳುವೆಯನ್ನು ಸಾರ್ಥಕಪಡಿಸಿಕೊಂಡಿದ್ದೀರಿ. ನಾವು ನಿಜವಾಗಿಯೂ ಭಾಗ್ಯಶಾಲಿಗಳು. ಏಕೆಂದರೆ ತಮ್ಮ ದಿವ್ಯಸಾನ್ನಿಧ್ಯ ನಮ್ಮೊಂದಿಗಿದೆ; ತಮ್ಮ ಅಮೃತವಾಣಿಯನ್ನು ಪ್ರತ್ಯಕ್ಷ ಕೇಳುವ ಪುಣ್ಯ ನಮಗಿದೆ. ಎಲ್ಲಕ್ಕೂ ಮಿಗಿಲಾದ ತಮ್ಮನ್ನು ಅಂತಃಕರಣಪೂರ್ವಕ ಗೌರವದಿಂದ ಸನ್ಮಾನಿಸುವ ಭಾಗ್ಯ ನಮ್ಮ ಪಾಲಿಗಿದೆ. ಕಾವ್ಯ ಶರೀರೆಯೂ, ವ್ಯಾಖ್ಯಾನ ಮಾತೆಯೂ ಆದ ಆ ಶಾರದೆ ತಮಗೆ, ತಮ್ಮ ಬಂಧು ಬಳಗಕ್ಕೆ, ಸಕಲ ಸನ್ಮಂಗಲಗಳನ್ನು ದಯಪಾಲಿಸಲಿ ಎಂದು ಭಕ್ತಿಪೂರ್ವಕ ಪ್ರಾರ್ಥಿಸಿ, *ಈ* ಬಿನ್ನಪವನ್ನು ತಮಗೆ ಅರ್ಪಿಸುತ್ತಿದ್ದೇವೆ.

|| ***ನಮೋ ಮಹದ್ಭ್ಯಃ*** ||

***ಜಿ.ನಾರಾಯಣ***
*ಸಮಾರಂಭದ ಅಧ್ಯಕ್ಷರು*

***ಎಸ್. ನರಸಿಂಹ***
*ಅಧ್ಯಕ್ಷರು, ಕರ್ನಾಟಕ ಸಂಘ*

# ೭. ವರ್ತಮಾನ

## ಪ್ರತಿಮಾ ಮೋಹನ್ : ಕನ್ನಡಪ್ರಭ, ಭಾನುವಾರ, ನವೆಂಬರ್ ೩೦, ೧೯೮೦

'ಕೇಳಿದರೆ ಶಾಸ್ತ್ರಿಗಳ ಭಾರತವನ್ನ ಕೇಳಬೇಕು' -ಇದು ಶಾಸ್ತ್ರಿಗಳ ವಾಕ್ಯರಚನಾ ಚಾತುರ್ಯದ ಪ್ರಶಂಸೆ. ಇದು ಉತ್ಪ್ರೇಕ್ಷೆ ಎನಿಸುವುದಿಲ್ಲ. ಅವರ ಸರಳ-ಸುಂದರ ಸರಸ-ಶೈಲಿ, ನಡು ನಡುವೆ ಬೆರೆತು ಬರುವ ಲಘು ಹಾಸ್ಯ, ಅವರ ಪ್ರವಚನ ಕೌಶಲ ಎಂಥವರನ್ನೂ ತನ್ಮಯಗೊಳಿಸುವಂತಹುದು. ಅವರು ಕಳೆದ ಐವತ್ತು ವರ್ಷಗಳಿಂದ ತಮ್ಮ ವಾಕ್ಚಾತುರ್ಯದಿಂದ ಕನ್ನಡಿಗರ ಮನವನ್ನು ರಂಜಿಸುತ್ತಾ ಬಂದಿದ್ದಾರೆ. ಶ್ರೀಗಳವರು ೧೯೪೦ರಲ್ಲಿ ಮತ್ತೂರು ಸಂಸ್ಕೃತ ಪಾಠಶಾಲೆಯಲ್ಲಿ ಉಪಾಧ್ಯಾಯ ವೃತ್ತಿ ಕೈಗೊಂಡರು. ಆಗಲೇ ಮತ್ತೂರು ಹೊಸಹಳ್ಳಿ, ಕರ್ನಾಟಕ ಸಂಘದ ಸ್ಥಾಪನೆಯಾಗಿತ್ತು. ೪೧ನೇ ಇಸವಿಯ ವಾರ್ಷಿಕೋತ್ಸವಕ್ಕೆ ನಾಲ್ಕು ಆಣೆ ಎರಡು ಆಣೆ ಚಂದಾ ಎತ್ತಿ ೨೦-೩೦ರೂ. ಸಂಗ್ರಹವಾಯಿತು. *ಈ* ವಾರ್ಷಿಕೋತ್ಸವಕ್ಕೆ ಶಿವಮೊಗ್ಗದಲ್ಲಿನ ನಿವೃತ್ತ ಕನ್ನಡ ಪ್ರಾಚಾರ್ಯ ಟಿ.ಎಸ್.ಶಾಮರಾಯರು ಆಗಮಿಸಿದ್ದರು. ಎರಡು ದಿನಗಳು ಭಾರತ ವಾಚನ ನಡೆಯಿತು. *ಈ* ಸಂದರ್ಭದಲ್ಲಿ ಶಾಮರಾಯರು ಇವರನ್ನು ಹೊಗಳಿ, "ಇದನ್ನು ಮುಂದೆ ತನ್ನಿ, *ಈ* ಪದ್ಧತಿ ಬೆಂಗಳೂರು, ಮೈಸೂರು ಎಲ್ಲ ಕಡೆಗಳಿಗೂ ಹಬ್ಬಿ ಬಹಳ ಪ್ರಸಿದ್ಧಿಯಾಗುತ್ತದೆ" ಎಂದರು. ಇವರ *ಈ* ಕಲೆಯ ಇಬ್ಬರು ಪ್ರಮುಖ ಪೋಷಕರು ಎಸ್.ಎ. ರಾಮನ್ ಮತ್ತು ಎಸ್.ಎ. ಕೃಷ್ಣನ್ ಸಹೋದರರು. ಅವರ ಮನೆಯಲ್ಲಿ ಆಗಾಗ ಇವರ ಭಾರತ, ರಾಮಾಯಣ ಪ್ರವಚನ ನಡೆಯುತ್ತಿತ್ತು.

ಶಿವಮೊಗ್ಗ ಜಿಲ್ಲೆಯಲ್ಲಿ ೧೯೫೫ರಲ್ಲಿ ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಸಂಸ್ಕೃತಿ ಪ್ರಸಾರ ಕಾರ್ಯಕ್ರಮ ಜಾರಿಗೆ ಬಂತು. ಆಗ ಇವರಿಗೆ ಮತ್ತು ರಾಮಶಾಸ್ತ್ರಿಗಳಿಗೆ ಬೇರೆ ಬೇರೆಯಾಗಿ ಆಹ್ವಾನ ಬಂತು. ಆದರೆ ಇವರು ಬೇರೆಯಾಗಿ ಮಾಡಲು ತಯಾರಿರಲಿಲ್ಲ. ಆದ್ದರಿಂದ ಜಿಲ್ಲಾಧಿಕಾರಿ ಎಮ್.ಎ.ಎಸ್. ರಾಜನ್ ಅವರ ಹತ್ತಿರ ಅರ್ಜಿ ಸಲ್ಲಿಸಿದರು. ರಾಜನ್ ಅವರು ಒಮ್ಮೆ ಇವರ ವ್ಯಾಖ್ಯಾನವನ್ನು ಕೇಳಿ ಮೆಚ್ಚಿಕೊಂಡಿದ್ದರು. ಆದ್ದರಿಂದ ಅವರು ಮುಂದೆ ಇವರಿಬ್ಬರ ಕಾರ್ಯಕ್ರಮ ಯಾವಾಗಲೂ ಒಟ್ಟಿಗೇ ಇರಬೇಕೆಂದೂ ಇಬ್ಬರಿಗೂ ಪ್ರತ್ಯೇಕವಾಗಿ ಸಂಭಾವನೆ ಕೊಡಬೇಕೆಂದೂ ತಹಸೀಲ್ದಾರರಿಗೆ ಬರೆದರು. ಇದೇ ಸಮಯದಲ್ಲಿ ಆಗುಂಬೆಯ ಮುಜರಾಯಿ ದೇವಸ್ಥಾನದ ಅಷ್ಟಬಂಧ ಕಾರ್ಯಕ್ರಮದ ಅಂಗವಾಗಿ ಶಾಸ್ತ್ರಿಗಳವರ ಕಾರ್ಯಕ್ರಮದ ಏರ್ಪಾಟಾಗಿತ್ತು. ಬೆಂಗಳೂರಿನ ವಿಶ್ವೇಶ್ವರಪುರದ ಕೋಟಾ ವಿಜಯಲಕ್ಷ್ಮಿ ಕಲ್ಯಾಣ ಮಂಟಪದ ಬಳಿ ಆಗಮ ಸಮ್ಮೇಳನದಲ್ಲಿ, ಮಲ್ಲೇಶ್ವರದ ಶ್ರೀರಾಮಮಂದಿರದಲ್ಲಿ ಸಹಾ ಇವರ ಕಾರ್ಯಕ್ರಮವಿದ್ದಿತು. ಆಗಮ ಸಮ್ಮೇಳನದಲ್ಲಿ ಆವನಿ ಮಠದ ಸ್ವಾಮಿಗಳು, **ವ್ಯಾಖ್ಯಾನ ವಾಚಸ್ಪತಿ** ಎಂದು ಇವರಿಗೂ, **ಗಮಕ ಶಿರೋಮಣಿ** ಎಂದು ರಾಮಶಾಸ್ತ್ರಿಗಳಿಗೂ ಪ್ರಶಸ್ತಿ ಕೊಟ್ಟರು. ತೀರ್ಥಹಳ್ಳಿಯ ಬಳಿ ದುರ್ವಾಸಪುರದ ದ್ವಾರಕಾಪೀಠದ ಗುರುಗಳಿಂದಲೂ ಇವರಿಗೆ ಪ್ರಶಸ್ತಿ ದೊರೆತಿದೆ.

ರಾಯಚೂರ್, ಬಳ್ಳಾರಿ, ಗದಗ್, ಹೊಸಪೇಟೆ, ರಾಣಿಬೆನ್ನೂರು ಮುಂತಾದೆಡೆಯೆಲ್ಲಾ ಇವರು ಕಾರ್ಯಕ್ರಮ ಕೊಟ್ಟಿದ್ದಾರೆ. ೧೯೭೩ರಲ್ಲಿ ಬೆಂಗಳೂರಿನ ಗಾಯನ ಸಮಾಜದವರು ಸನ್ಮಾನಿಸಿದರು. ಗೋಖಲೆ ಇನ್ಸ್‌ಟಿಟ್ಯೂಟಿನಲ್ಲಿ ಆಗಾಗ ಕಾರ್ಯಕ್ರಮ ನಡೆಯುತ್ತಿರುತ್ತದೆ. ೧೯೭೭ರ ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ, ೧೯೭೮ರಲ್ಲಿ ಬೆಂಗಳೂರಿನ ದಾಸಾಶ್ರಮದಲ್ಲಿ, ಕಳೆದ ಸೆಪ್ಟೆಂಬರ್‌ನಲ್ಲಿ ತೀರ್ಥಹಳ್ಳಿಯ ಸಮೀಪದ ಬಸವಾನಿಯಲ್ಲಿ, ಇವರಿಗೆ ಸನ್ಮಾನ ನಡೆಯಿತು.

ತಮ್ಮ ಪ್ರವಚನಕಲೆಯನ್ನು ಇಬ್ಬರು ಮಕ್ಕಳಿಗೂ ಕಲಿಸಿರುವರು. ಇಂದಿಗೂ ಇವರಿಗೆ ಆಹ್ವಾನಗಳು ಬರುತ್ತಿರುತ್ತವೆ. *ಈ*ಗ **೭೫** ವರ್ಷ ವಯಸ್ಸಿನಲ್ಲಿರುವ ಇವರಿಗೆ *ಈ*ಗಲೂ *ಈ* ಕಲೆಯ ಬಗ್ಗೆ ಉತ್ಸಾಹ ಆಸಕ್ತಿಗಳು ವರ್ಣಿಸಲಸಾಧ್ಯ. *ಈ* ವರ್ಷದ ಗಣೇಶೋತ್ಸವಕ್ಕೆ ಇವರ ಮನೆಯ ಬಳಿಯ ಕಾರ್ಯಕ್ರಮವೊಂದಕ್ಕೆ ಆಹ್ವಾನವಿದ್ದಿತು. ಮಾರನೆಯ ದಿನ ಮಗಳ ವಿವಾಹ ಮಹೋತ್ಸವ; ಅಂಥಾ ಗಡಿಬಿಡಿಯಲ್ಲೂ ಇಲ್ಲ ಎನ್ನದೆ ಕಾರ್ಯಕ್ರಮ ನಡೆಸಿಕೊಟ್ಟರು.

## ಸಂಪಾದಕೀಯ : ಸಂಕೇತಿ ಸಂಗಮ, ಮೇ ೨೦೦೪

ಪ್ರತಿಯೊಬ್ಬ ಮನುಷ್ಯನ ಜೀವನವೂ ರೋಚಕವೇ, ರಮಣೀಯವೇ, ಅನುಕರಣೀಯವೇ ಆಗಿರುತ್ತದೆ. ಆದರೆ ಅದರಲ್ಲಿ ತರ-ತಮ ಉಂಟು. ಕೆಲವರ ಜೀವನ ಕೆಲವರಿಗೆ ಮಾತ್ರ ಮಾದರಿಯಾಗಿ ಕೆಲವು ಕಾಲ ಆದರ್ಶವೆನಿಸಿದರೆ, ಇನ್ನು ಕೆಲವರ ಜೀವನ ಅನೇಕರಿಗೆ ಮಾದರಿಯಾಗಿ ಬಹುಕಾಲ

ಆದರ್ಶವೆನಿಸುತ್ತದೆ. ಮನುಷ್ಯ ಸ್ವಾರ್ಥವನ್ನು ಹೆಚ್ಚುಮಾಡಿಕೊಂಡಷ್ಟೂ ಅದೇ ಅನುಪಾತದಲ್ಲಿ ಪ್ರಸಿದ್ಧಿಯೂ ಕ್ಷೀಣಿಸುತ್ತ ಹೋಗುತ್ತದೆ. ಜಗತ್ತಿನ ಎಲ್ಲ ಜೀವಿಗಳ ಏಳ್ಗೆಗಾಗಿ ಸ್ವಾರ್ಥಲೇಪವಿಲ್ಲದೆ ಬದುಕುವವನು ಮಹಾತ್ಮನೆನಿಸುತ್ತಾನೆ. ಅಂತಹವನು ಸಕಲರಿಗೂ ಆದರ್ಶವೆನಿಸುತ್ತಾನೆ. ಮತ್ತೂರಿನ ಖ್ಯಾತ ಗಮಕವ್ಯಾಖ್ಯಾನಕಾರರಾಗಿದ್ದ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ಅಂತಹ ಅಪರೂಪದ ವ್ಯಕ್ತಿ. ಸಜ್ಜನಿಕೆಯೇ ಅವರಿಗೆ ಭೂಷಣವಾಗಿತ್ತು. ಸಂಸ್ಕೃತಸಾಹಿತ್ಯದಲ್ಲಿ ಅಪಾರವಾದ ಪಾಂಡಿತ್ಯವನ್ನು ಹೊಂದಿದ್ದ ಶಾಸ್ತ್ರಿಗಳು ಗಮಕಕ್ಷೇತ್ರಕ್ಕೆ ನೀಡಿದ ಕೊಡುಗೆ ಮಹತ್ತರವಾದದ್ದು. ಮತ್ತೂರಿನ ಶ್ರೀಮಂತ ಮನೆತನದಲ್ಲಿ ಹುಟ್ಟಿದ ಶಾಸ್ತ್ರಿಗಳು ಸಾಂಸಾರಿಕ ತಾಪತ್ರಯಗಳಿಂದಾಗಿ ಎಲ್ಲ ಆಸ್ತಿಯನ್ನೂ ಕಳೆದುಕೊಂಡರು. ಲಕ್ಷ್ಮಿ ಕೈಬಿಟ್ಟರೂ ಸರಸ್ವತಿ ಅವರನ್ನು ಕೈಬಿಡಲಿಲ್ಲ. ಅನೇಕ ಪುರಾಣಗಳನ್ನು ಅಭ್ಯಾಸ ಮಾಡಿದ್ದ ಅವರು ತಮ್ಮ ಗೆಳೆಯ ಶ್ರೀ ಟಿ. ರಾಮಶಾಸ್ತ್ರಿ ಅವರೊಂದಿಗೆ ಕಾವ್ಯವಾಚನ, ವ್ಯಾಖ್ಯಾನಗಳಲ್ಲಿ ತೊಡಗಿಕೊಂಡರು. ಅದಕ್ಕೆ ಮುನ್ನ ಕನ್ನಡಕಾವ್ಯಗಳನ್ನು ರಾಗವಾಗಿ ಓದುವುದೂ ಅದಕ್ಕೆ ಅವರೇ ಅರ್ಥಹೇಳುತ್ತ ಹೋಗುವುದೂ ಚಾಲ್ತಿಯಲ್ಲಿತ್ತಾದರೂ ಶಾಸ್ತ್ರಿಗಳು ಕಂಡರಿಸಿದ 'ವ್ಯಾಖ್ಯಾನ'ವೆಂಬ ಸೊಬಗಿನ ಕಲೆ ಅಲ್ಲಿ ಅರಳಿರಲಿಲ್ಲ. ತಾವು ಕಲಿತ ಸಂಸ್ಕೃತಸಾಹಿತ್ಯದಿಂದ ಅಪೂರ್ವವಾದ ಸಾರವನ್ನು ತೆಗೆದು ತಮ್ಮ ವ್ಯಾಖ್ಯಾನಕ್ಕೆ ಜೋಡಿಸಿ ನಡುವೆ ಉಪಕಥೆಗಳೆಂಬ ಕೆಂಪು ಹವಳದ ಮಣಿಯನ್ನು ಕೋದು ಅಪರೂಪವಾದ ವ್ಯಾಖ್ಯಾನಪರಂಪರೆಯ ರಸಮಾಲೆಯನ್ನು ನಿರ್ಮಿಸಿದರು. ಇದು ಪಂಡಿತ ಪಾಮರರಾದಿಯಾಗಿ ಎಲ್ಲರನ್ನೂ ಸೆಳೆಯಿತು. ಗಮಕಕಲೆಗೆ ವ್ಯಾಖ್ಯಾನದ ಅಗತ್ಯವಿಲ್ಲವೆನ್ನುವವರೂ ಶಾಸ್ತ್ರಿಗಳ ವ್ಯಾಖ್ಯಾನವನ್ನು ಕೇಳಿದ ಮೇಲೆ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಂಡರು. ಶಾಸ್ತ್ರಿಗಳು ಹಾಕಿಕೊಟ್ಟ ಪರಂಪರೆಯಲ್ಲಿ ಇಂದು ಅನೇಕರು ವ್ಯಾಖ್ಯಾನವನ್ನು ಮುಂದುವರೆಸಿದ್ದಾರೆ. ವೇ. ಮಾರ್ಕಂಡೇಯ ಅವಧಾನಿಗಳು, ಶ್ರೀ ಮತ್ತೂರು ಕೃಷ್ಣಮೂರ್ತಿಯವರು, ಶಾಸ್ತ್ರಿಗಳ ಮಕ್ಕಳಾದ ಚನ್ನಕೇಶವ ಶಾಸ್ತ್ರಿ, ರಘುಪತಿ ಶಾಸ್ತ್ರಿ ಮೊದಲಾದವರು ಅವರ ಶಿಷ್ಯರಾಗಿ ಇಂದು *ಈ* ಕಲೆಯ ಮುಂಚೂಣಿಯಲ್ಲಿದ್ದಾರೆ. ಇದು ಶಾಸ್ತ್ರಿಗಳ **ಜನ್ಮಶತಮಾನೋತ್ಸವ ವರ್ಷ**. ತಮ್ಮ ಅಮೋಘವಾದ ಉಕ್ತಿವೈಭವದಿಂದ ಸಾವಿರಾರು ಜನರಿಗೆ ಬದುಕುವ ಮಾರ್ಗವನ್ನು ತೋರಿದ ಆ ಮಹಾನ್ ಚೇತನಕ್ಕೆ ಸೂಕ್ತವಾದ ರೀತಿಯಲ್ಲಿ ಶತಮಾನೋತ್ಸವದ ಆಚರಣೆ ಎಲ್ಲೆಡೆ ವೈಭವದಿಂದ ನಡೆಯಲಿ ಎಂದು ಆಶಿಸೋಣ.

## ಪ್ರವಚನ ಚಕ್ರವರ್ತಿಯ ಜನ್ಮಶತಾಬ್ದದ ಉದ್ಘಾಟನೆ : ಸಂಕೇತಿ ಸಂಗಮ, ಸೆಪ್ಟಂಬರ್ ೨೦೦೪

ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ **ಜನ್ಮಶತಾಬ್ದದ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವು** ಶ್ರೀ ಚನ್ನಕೇಶವ ಕಲ್ಯಾಣಮಂದಿರದಲ್ಲಿ ದಿನಾಂಕ ೨೯.೮.೦೪ರಂದು ಸಂಜೆ ೬ಕ್ಕೆ ಪ್ರಾರಂಭವಾಯಿತು. ಅಖಿಲ ಕರ್ನಾಟಕ ನಾಲ್ಕನೇ ಗಮಕಸಮ್ಮೇಳನದ ಅಧ್ಯಕ್ಷರಾದ ಮತ್ತೂರು ಮಾರ್ಕಂಡೇಯ ಅವಧಾನಿಗಳು ಅಧ್ಯಕ್ಷತೆ ವಹಿಸಿದ್ದರು. ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳ ಮಗಳು ಶ್ರೀಮತಿ ಸತ್ಯವತಿ (ಬೆಂಗಳೂರಿನ ಖ್ಯಾತ ವಿಜ್ಞಾನಿ ಡಾ|| ವಸಂತ್ ಅವರ ಪತ್ನಿ) ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶಿವಮೊಗ್ಗೆಯ ದೇಶೀಯ ವಿದ್ಯಾಶಾಲೆಯ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಎಲ್.ಎಂ.ಎಲ್.ಶಾಸ್ತ್ರಿ ಅವರು ಮುಖ್ಯಅತಿಥಿಗಳಾಗಿ ಪಾಲ್ಗೊಂಡಿದ್ದರು. ಪ್ರಾರಂಭದಲ್ಲಿ ಗಾಯತ್ರೀ ವೇದಪಾಠಶಾಲೆಯ ವಿದ್ಯಾರ್ಥಿಗಳಿಂದ ವೇದಘೋಷ, ಶ್ರೀಮತಿ ಅರ್ಚನಾ ಮಹೇಶ ಅವರಿಂದ ಪ್ರಾರ್ಥನೆ ನಡೆದವು. ಖ್ಯಾತ ವ್ಯಾಖ್ಯಾನಕಾರ ಶ್ರೀ ಎಚ್.ಎಸ್. ಗೋಪಾಲ ಅವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ರಾಜಾರಾಮಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ಗಮಕಕಲಾ ಪರಿಷತ್ತಿನ ಕಾರ್ಯದರ್ಶಿ ಶ್ರೀ ಎಸ್. ರಾಮಸ್ವಾಮಿ ಎಲ್ಲರನ್ನೂ ವಂದಿಸಿದರು. ನಿರೂಪಣೆಯ ಜವಾಬ್ದಾರಿಯನ್ನು ಖ್ಯಾತ ಶಿಶುವೈದ್ಯ ಡಾ. ವೆಂಕಟೇಶಮೂರ್ತಿ ಅಚ್ಚುಕಟ್ಟಾಗಿ ನಿರ್ವಹಿಸಿದರು.

**ಪ್ರವಚನ ಚಕ್ರವರ್ತಿ** ಎಂದು ಖ್ಯಾತರಾದ ಪೂಜ್ಯ ಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿ (೧೯೦೫-೧೯೯೩) ಅವರು ಗಮಕವ್ಯಾಖ್ಯಾನ ಕ್ಷೇತ್ರದಲ್ಲಿ ಧ್ರುವತಾರೆಯಾಗಿ ಬೆಳಗಿದ ಮಹನೀಯರು. 'ಗಮಕಕ್ಕೆ ವ್ಯಾಖ್ಯಾನ ಬೇಕೆ?' ಎಂದು ಮೂಗುಮುರಿಯುತ್ತಿದ್ದ ಅನೇಕರು, ಶಾಸ್ತ್ರಿಗಳ ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಮೊದಲ ಸಾಲಿನ ಶ್ರೋತೃಗಳಾಗಿ ಇರುತ್ತಿದ್ದುದು ಅವರ ವ್ಯಾಖ್ಯಾನದ ಶ್ರೇಷ್ಠತೆಗೆ ಸಾಕ್ಷಿ! ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಅಪಾರ ಪ್ರಭುತ್ವ ಹೊಂದಿದ್ದ ಲಕ್ಷ್ಮೀಕೇಶವಶಾಸ್ತ್ರಿಗಳು ಗಮಕವ್ಯಾಖ್ಯಾನ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರವಾದುದು. ಅವರೊಬ್ಬ ಮಹಾನ್ ಪಂಡಿತ, ಪ್ರಖರ ವಾಗ್ಮಿ, ಅಭಿಜಾತ ನಟ, ಉತ್ತಮ ಕಥೆಗಾರ, ಸುಭಾಷಿತರತ್ನ ಭಾಂಡಾಗಾರ, ಉಪಕಥಾಸರಿತ್ ಸಾಗರ ಎಲ್ಲವೂ ಆಗಿದ್ದರು. ಪ್ರಸಂಗಕ್ಕೆ ತಕ್ಕಂತೆ ಎಲ್ಲವನ್ನೂ ಮೇಳೈಸಿ, ಔಚಿತ್ಯ ಕೆಡದಂತೆ ಹೇಳುವ ಕಲೆ ಅವರಿಗೆ ಕರಗತವಾಗಿದ್ದಿತು.

೧೯೮೪ರಲ್ಲಿ ಹೊಸಹಳ್ಳಿಯ ಗಮಕಕಲಾ ಪರಿಷತ್ತು ಪೂಜ್ಯ ಶಾಸ್ತ್ರಿಗಳ ವ್ಯಾಖ್ಯಾನವನ್ನು 'ಗಮಕಗಂಧರ್ವ' ಎಚ್.ಆರ್. ಕೇಶವಮೂರ್ತಿ ಅವರ

ವಾಚನದೊಂದಿಗೆ ಮೇಳೈಸಿ, **ಸಮಗ್ರ ಕುಮಾರವ್ಯಾಸ ಭಾರತವನ್ನು** ಧ್ವನಿಮುದ್ರಣದಲ್ಲಿ ಹಿಡಿದಿಟ್ಟಿರುವುದು ಕನ್ನಡ ಸಾರಸ್ವತ ಪರಂಪರೆಯಲ್ಲಿ ಅಪೂರ್ವವಾದ ಪ್ರಯತ್ನ. ೧೩೫ ಸಿ-೯೦ ಕ್ಯಾಸೆಟ್‌ಗಳಲ್ಲಿ ಹರಿದಿರುವ *ಈ* ವಾಚನ-ವ್ಯಾಖ್ಯಾನಧಾರೆ ಸಹೃದಯ ಶ್ರೋತೃಗಳಿಗೆ ರಸದೌತಣವಾಗಿ ನೂರು ಕಾಲ ದೊರೆಯುವಂತಾಗಿದೆ. ಐತಿಹಾಸಿಕವಾದ ಇಂತಹುದೊಂದು ಸಾಹಸವನ್ನು ಯಶಸ್ವಿಯಾಗಿ ನಿರ್ವಹಿಸಿದ ಹೊಸಹಳ್ಳಿಯ ಗಮಕಕಲಾ ಪರಿಷತ್ತು, ಇದೀಗ ೨೦೦೪-೨೦೦೫ನೇ ವರ್ಷವನ್ನು "**ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರಿಗಳ ಜನ್ಮಶತಮಾನೋತ್ಸವ ವರ್ಷ**"ವಾಗಿ ಆಚರಿಸುತ್ತಿದೆ.

## ಶತಮಾನೋತ್ಸವ ಸಮಾರೋಪ

***ಗಮಕ ಸಂಪದ : ಮೇ, ೨೦೦೫***

ಕಳೆದೊಂದು ವರ್ಷದಿಂದ ನಡೆಸುತ್ತಿದ್ದ ಪ್ರವಚನ ಚಕ್ರವರ್ತಿ ಲಕ್ಷ್ಮೀಕೇಶವ ಶಾಸ್ತ್ರೀ ಜನ್ಮಶತಮಾನೋತ್ಸವ ಕಾರ್ಯಕ್ರಮಗಳ ಸಮಾರೋಪ ಸಮಾರಂಭವನ್ನೂ ೨೬ನೇ ವಾರ್ಷಿಕ ಗಮಕ ಸಪ್ತಾಹದ ಸಮಾರೋಪವನ್ನೂ ದಿನಾಂಕ ೬.೦೫.೨೦೦೫ರ ಶುಕ್ರವಾರ ಸಂಜೆ ಒಟ್ಟಾಗಿ ನಡೆಸಲಾಯಿತು. ದಾವಣಗೆರೆಯ ಡಿ.ಆರ್.ಆರ್. ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಶ್ರೀ ಎನ್. ಕಾಳೇಶ್ವರರಾವ್ ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಬೆಂಗಳೂರಿನ ಖ್ಯಾತ ಗಮಕಿಗಳೂ ಶ್ರೀವಿದ್ಯಾಗಣಪತಿ ದೇವಸ್ಥಾನದ ನಿರ್ಮಾತೃಗಳೂ ಪುಸ್ತಕ ಪ್ರಕಾಶಕರೂ ಆದ ವೇ॥ಶ್ರೀ॥ ಎ.ಎಸ್. ಗಂಗಾಧರ ಶಾಸ್ತ್ರೀ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಶಿವಮೊಗ್ಗೆಯ ಕಮಲಾನೆಹರೂ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಡಾ। ಎ.ಎಸ್. ವೇಣುಗೋಪಾಲರಾವ್ ಅವರು ಸಮಾರೋಪ ಭಾಷಣವನ್ನು ನೆರವೇರಿಸಿದರು. ಡಾ। ರಾವ್ ಅವರು ತಮ್ಮ ಉಪನ್ಯಾಸದಲ್ಲಿ ಲಕ್ಷ್ಮೀಕೇಶವಶಾಸ್ತ್ರಿಗಳವರ ವ್ಯಾಖ್ಯಾನ ವೈಖರಿಯನ್ನು ಹಾಗೂ ಅವರೊಂದಿಗೆ ತಮಗಿದ್ದ ಭಾವನಾತ್ಮಕ ಸಂಬಂಧಗಳನ್ನು ಸವಿಸ್ತರವಾಗಿ ತಿಳಿಸಿ ಪರಿಷತ್ತಿನ ಕಾರ್ಯಕ್ರಮಗಳನ್ನು ಶ್ಲಾಘಿಸಿದರು.

"ನಾನು ಲಕ್ಷ್ಮೀಕೇಶವ ಶಾಸ್ತ್ರಿಗಳನ್ನು ಮೆಚ್ಚಿಕೊಳ್ಳುವುದು ಕೇವಲ ಅವರು ದೊಡ್ಡ ವಿದ್ವಾಂಸರು ಎಂದಲ್ಲ. ಅವರಂಥ ದೊಡ್ಡ ವಿದ್ವಾಂಸರು ನಾಡಿನಲ್ಲಿದ್ದಾರೆ. ಶಾಸ್ತ್ರಿಗಳ ವಿಶೇಷ ಇರುವುದು ಇತರರ ವಿದ್ವತ್ತನ್ನು ಗುರುತಿಸುವುದರಲ್ಲಿ ಹಾಗೂ ಕೊಂಡಾಡುವುದರಲ್ಲಿ. ವೇದಿಕೆಯ ಮೇಲೆ ಕುಳಿತ ಎಂಥ ಕಿರಿಯನೇ ಆಗಿರಲಿ, ಅಲ್ಪಜ್ಞನೇ ಆಗಿರಲಿ, ಅವನ ಮಾತುಗಳನ್ನು ಶ್ರದ್ಧೆಯಿಂದ ಆಲಿಸಿ ಅದರಲ್ಲಿನ ಉತ್ತಮ ಅಂಶಗಳನ್ನು ಮುಕ್ತವಾಗಿ ಶ್ಲಾಘಿಸಿ ಅವರು ಪ್ರೋತ್ಸಾಹಿಸುತ್ತಿದ್ದ ರೀತಿ ನನಗೆ ಎಂದೂ ನೆನಪಿನಲ್ಲಿ ಉಳಿಯುವ ಸಂಗತಿ. ನಮ್ಮ ಪರಿಚಯದ ೪೦ ವರ್ಷಗಳಲ್ಲಿ ಇಂಥ ನೂರಾರು ಪ್ರಸಂಗಗಳು ನಡೆದಿರುವುದು ನನಗೆ ನಿತ್ಯ ನೆನಪಾಗುತ್ತದೆ.

ಗಮಕವಾಚನಕ್ಕೆ ವ್ಯಾಖ್ಯಾನದ ಅಗತ್ಯವಿಲ್ಲ ಎಂದು ಉಗ್ರವಾಗಿ ಪ್ರತಿಪಾದಿಸುವವರಲ್ಲಿ ನಾನೂ ಒಬ್ಬ. ಅನೇಕ ದಿನಗಳವರೆಗೆ ನಾನು ಈ ಅಭಿಪ್ರಾಯವನ್ನು ದೃಢವಾಗಿಯೇ ಇಟ್ಟುಕೊಂಡಿದ್ದೆ. ಆದರೆ ಶಾಸ್ತ್ರಿಗಳ ವ್ಯಾಖ್ಯಾನವೈಖರಿ ಹಾಗೂ ಅದೇ ಪರಂಪರೆಯಲ್ಲಿ ಬಂದ ಮಾರ್ಕಂಡೇಯಾವಧಾನಿಗಳು ಮೊದಲಾದವರ ವ್ಯಾಖ್ಯಾನವನ್ನು ಕೇಳಿದ ಮೇಲೆ ನನ್ನ ಅಭಿಪ್ರಾಯವನ್ನು ಬದಲಿಸಿಕೊಂಡಿದ್ದೇನೆ. ಗಮಕವಾಚನಕ್ಕೆ ವ್ಯಾಖ್ಯಾನದ ಅಗತ್ಯ ಖಂಡಿತವಾಗಿಯೂ ಇದೆ ಎಂದು ಸ್ಪಷ್ಟವಾಗಿ ಘೋಷಿಸುತ್ತೇನೆ" ಎಂದು ಅವರು ತಮ್ಮ ಭಾಷಣದಲ್ಲಿ ಹೇಳಿದರು.

ವೇ॥ ಬ್ರ॥ ಶ್ರೀ ಮಾರ್ಕಂಡೇಯ ಅವಧಾನಿಗಳೂ ಈ ಸಮಾರಂಭದಲ್ಲಿ ಉಪಸ್ಥಿತರಿದ್ದು ಸಭಿಕರನ್ನುದ್ದೇಶಿಸಿ ಮಾತನಾಡಿದರು. ಪ್ರಸಿದ್ಧ ವ್ಯಖ್ಯಾನಕಾರರಾದ ಪೂಜ್ಯರು ಶಿವಮೊಗ್ಗದಲ್ಲಿ ೧೯೬೭ರ ಜನವರಿ ೧೭, ೧೮, ೧೯ ರಂದು ನಡೆದ ಅಖಿಲ ಕರ್ನಾಟಕ ನಾಲ್ಕನೇ ಗಮಕ ಸಮ್ಮೇಳನದ ಅಧ್ಯಕ್ಷರಾಗಿದ್ದವರು. ಬೆಂಗಳೂರಿನ ಕರ್ನಾಟಕ ಗಮಕ ಕಲಾ ಪರಿಷತ್ತು ನಡೆಸುತ್ತಿದ್ದ ತ್ರೈವಾರ್ಷಿಕ ಗಮಕ ಸಮ್ಮೇಳನಗಳಲ್ಲಿ ವಾಚನಕಾರರಿಗೆ ಮಾತ್ರ ಸಲ್ಲುತ್ತಿದ್ದ ಸಮ್ಮೇಳನಾಧ್ಯಕ್ಷತೆಯ ಗೌರವವನ್ನು ವ್ಯಾಖ್ಯಾನಕಾರರಾಗಿ ಮೊದಲಬಾರಿಗೆ ಪಡೆದು 'ಗಮಕ ರತ್ನಾಕರ' ಪ್ರಶಸ್ತಿಯಿಂದಲೂ ಗೌರವಿಸಲ್ಪಟ್ಟವರು. ಶ್ರೀಯುತ ಅವಧಾನಿಗಳು, ಬಾಲ್ಯದಲ್ಲಿ ಮತ್ತೂರಿನಲ್ಲಿ ನಡೆಯುತ್ತಿದ್ದ ಗಮಕ ಕಾರ್ಯಕ್ರಮಗಳನ್ನು ಸ್ಮರಿಸಿ ಆ ದಿನಗಳಲ್ಲಿ ಹಿರಿಯ ಗಮಕಿ ರಾಮಶಾಸ್ತ್ರಿಗಳು ಹಾಗೂ ಲಕ್ಷ್ಮೀಕೇಶವ ಶಾಸ್ತ್ರಿಗಳು ಜೋಡಿಯಾಗಿ ನಡೆಸುತ್ತಿದ್ದ ಕಾರ್ಯಕ್ರಮಗಳು ತಮ್ಮ ಮೇಲೆ ಬೀರಿದ ಪ್ರಭಾವವನ್ನು ವಿವರವಾಗಿ ತಿಳಿಸಿದರು. ತಮ್ಮ ಪರಂಪರಾಗತ ವೃತ್ತಿಯಾದ ಪೌರೋಹಿತ್ಯಕ್ಕಿಂತಲೂ ಪ್ರವೃತ್ತಿಯಾದ ಕಾವ್ಯವ್ಯಾಖ್ಯಾನವೇ ತಮಗೆ ಹೆಚ್ಚು ಇಷ್ಟವಾಗುವಂತೆ ಆದುದು ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನದ ಪ್ರಭಾವದಿಂದ ಎಂದು ಅವರು ತಿಳಿಸಿದರು.

ಶತಮಾನೋತ್ಸವ ಕಾರ್ಯಕ್ರಮಗಳಿಗೆ ಆರ್ಥಿಕ ಸಹಕಾರ ನೀಡಿದ್ದ ಲಕ್ಷ್ಮೀಕೇಶವಶಾಸ್ತ್ರಿಗಳ ಕುಟುಂಬವರ್ಗದವರ ಪರವಾಗಿ ಅವರ ಮಕ್ಕಳಾದ ಶ್ರೀ ರಘುಪತಿಶಾಸ್ತ್ರಿಗಳು ಮಾತನಾಡಿ ತಮ್ಮ ತಂದೆಯವರ ಬಗೆಗೆ ಪರಿಷತ್ತು ನೀಡಿರುವ ಗೌರವಸಮರ್ಪಣೆಯನ್ನು ಮುಕ್ತವಾಗಿ ಶ್ಲಾಘಿಸಿ, ಇದೇ ರೀತಿ ಇನ್ನೂ ಅನೇಕ ಹಿರಿಯ ಗಮಕಿಗಳ ಶತಮಾನೋತ್ಸವಗಳನ್ನು ಪರಿಷತ್ತು ಆಚರಿಸಲೆಂದು ಹಾರೈಸಿದರು.

# ೮. ಅಭಿಪ್ರಾಯಗಳು

ಇಂದು 'ಗಮಕ-ವ್ಯಾಖ್ಯಾನ' ಒಂದು ಚಳವಳಿಯಂತೆ ನಡೆಯುತ್ತಿದೆ. ಸಮೂಹಮಾಧ್ಯಮಗಳಲ್ಲೂ ಇದು ದಾಂಗುಡಿಯಿಟ್ಟಿದೆ. ಕ್ಯಾಸೆಟ್‌ಗಳ ಸೆಟ್ಟುಗಳೇ ಬರುತ್ತಿವೆ. ಲಕ್ಷ್ಮೀಕೇಶವ ಶಾಸ್ತ್ರೀಗಳೇ *ಈ* ವ್ಯಾಖ್ಯಾನಸಂಸ್ಕೃತಿಗೆ ಮೂಲ. *ಈ* ಮೂಲಕ ಮತ್ತೂರನ್ನು ಇನ್ನೊಂದು ಪ್ರಸಿದ್ಧಿಯತ್ತ ಕೊಂಡೊಯ್ಯುತ್ತಿರುವ ಕೀರ್ತಿ ಶಾಸ್ತ್ರಿಗಳದ್ದು. ಲಕ್ಷ್ಮೀಕೇಶವಶಾಸ್ತ್ರಿಗಳು ತಮ್ಮ ಜೀವನವನ್ನೇ ಗಮಕವ್ಯಾಖ್ಯಾನಕ್ಕೆ ಧಾರೆಯೆರೆದು ಬೆಳೆಸಿದ್ದಾರೆಂದರೆ ತಪ್ಪಿಲ್ಲ. ಅವರ ಕುಟುಂಬವೇ ಇದಕ್ಕೆ ದುಡಿದಿದೆ. ತಮ್ಮ ಎಂಬತ್ತನೇ ವಯಸ್ಸಿನಲ್ಲಿಯೂ *ಈ* ಪ್ರವಚನಗಳನ್ನು ನೀಡಿ ಜನರನ್ನು ರಂಜಿಸುತ್ತಾ, ಯುವ ಪೀಳಿಗೆಯನ್ನ ಬಡಿದೆಬ್ಬಿಸುತ್ತಾ, ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಜನಮನದಲ್ಲಿ ಜೀವಂತವಾಗಿರಿಸಿದವರು ಶಾಸ್ತ್ರಿಗಳು. ಅಭಿಮಾನಿಗಳ ಮಹಾಪೂರವೇ ಇವರಿಗಿದ್ದು ಇಂದಿಗೂ ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನವನ್ನು ನೆನಪಿಸಿಕೊಂಡು ಪುಳಕಗೊಳ್ಳುವವರಿದ್ದಾರೆ. ಶಾಸ್ತ್ರಿಗಳು ೬.೫.೧೯೬೩ ರಂದು ದೈವಾಧೀನರಾದರು. ಇದು ಅವರ ಶತಮಾನೋತ್ಸವದ ನೆನಪು. ಇನ್ನೂ ನೂರ್ಕಾಲ ಅವರ ನೆನಪು ಚಿರವಾಗಿರುತ್ತದೆ; ಅವರು ಹಾಕಿಕೊಟ್ಟ ಮಾರ್ಗ ಹೆದ್ದಾರಿಯಾಗಿ ಪ್ರವಹಿಸುತ್ತಿರುತ್ತದೆ.

("ಪ್ರವಚನ ಚಕ್ರವರ್ತಿ, ವ್ಯಾಖ್ಯಾನ ವಾಚಸ್ಪತಿ" ಎಂಬ ಲೇಖನದಿಂದ) ***ಪ್ರೊ. ನಾ. ಗೀತಾಚಾರ್ಯ,***

ಗಮಕಕಲೆಯ ಅವನತಿಯ ಕಾಲದಲ್ಲಿ ಅದನ್ನು ಉಳಿಸಿಕೊಳ್ಳಲು, ಬೆಳೆಸಿಕೊಳ್ಳಲು ಶ್ರಮಿಸಿದ ಮಹನೀಯರೆಲ್ಲರನ್ನೂ ಅಭಿನಂದಿಸಬೇಕಾದ್ದು ಎಲ್ಲ ಸುಸಂಸ್ಕೃತರ ಕರ್ತವ್ಯ. ತಮ್ಮ ಬದುಕನ್ನೇ *ಈ* ಕಲೆಯ ಉದ್ಧಾರಕ್ಕಾಗಿ ಮೀಸಲಿಟ್ಟು, ಶ್ರಮಿಸಿ, ಕಲಿಸಿ, ಹೇಳಿಸಿ, ಕೇಳಿಸಿ, ವಿವರಿಸಿ, ವ್ಯಾಖ್ಯಾನಿಸಿ, ಇದನ್ನು ಜೀವಂತವಾಗಿ ಉಳಿಸಿಕೊಟ್ಟ ವೇ. ಬ್ರ. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳನ್ನು ಸಂಸ್ಕೃತಿಪ್ರಿಯರು ಮರೆಯದೇ ಅಭಿನಂದಿಸಲೇಬೇಕು.

("ಗಮಕಕಲೆ " ಎಂಬ ಲೇಖನದಿಂದ) ***ಪಾಂಡುರಂಗ ಉಡುಪ***

ಕನ್ನಡ ಕಾವ್ಯಗಳ 'ಧ್ವನಿ ಮುದ್ರಣ' (ಕ್ಯಾಸೆಟ್) ರಂಗದಲ್ಲಿ ಪ್ರಾಯಶಃ ಇದುವರೆಗೆ ಯಾರೂ ಕೈಗೊಳ್ಳದಿರುವ, ಕನ್ನಡಿಗರಿಗೆ ಪ್ರಿಯವೆನಿಸುವ ವಿನೂತನ ಸಾಹಸವೊಂದನ್ನು ಶ್ರೀ ಶಾಸ್ತ್ರಿಗಳವರು ಕೈಗೊಂಡಿದ್ದಾರೆ. ರಾಜ್ಯದ ಪ್ರಸಿದ್ಧ ಗಮಕಿ ವಿದ್ವಾನ್ ಶ್ರೀ ಎಚ್.ಆರ್. ಕೇಶವಮೂರ್ತಿಗಳವರ ವಾಚನದೊಂದಿಗೆ ಶ್ರೀ ಶಾಸ್ತ್ರಿಗಳವರು ನೂರಾರು 'ಕ್ಯಾಸೆಟ್'ಗಳು ಬೇಕಾಗುವ **'ಸಮಗ್ರ ಕುಮಾರವ್ಯಾಸ ಭಾರತ' ಧ್ವನಿಮುದ್ರಣಕಾರ್ಯ** ಕೈಗೊಂಡು *ಈ*ಗಾಗಲೇ ಮುಕ್ಕಾಲು ಭಾಗ ಮುಗಿದಿದ್ದು, ಸದ್ಯದಲ್ಲೇ ಪೂರ್ಣಗೊಳ್ಳುವುದೆಂಬ ಶುಭವಾರ್ತೆಯು ಕನ್ನಡ ಕಾವ್ಯಲೋಲರಿಗೆ ಹರ್ಷದಾಯಕವಾಗದಿರದು. ಕನ್ನಡನಾಡಿನ ಸಮರ್ಥ ವಾಚನ-ಪ್ರವಚನಕಾರರು ಕನ್ನಡದ ಕೆಲವು ಉತ್ತಮ ಕಾವ್ಯಗಳ ಸಮಗ್ರ ಧ್ವನಿಮುದ್ರಣ ಕಾರ್ಯ ನಡೆಸಿದರೆ ಕನ್ನಡ ರಸಿಕಲೋಕಕ್ಕೆ ವಿಶೇಷ ಉಪಕಾರವಾದೀತು. ಕನ್ನಡ ಸಾಹಿತ್ಯ ಪರಿಷತ್ತಿನವರೂ, ಸರ್ಕಾರದವರೂ ಗಮಕಿಗಳಂತೆಯೇ ಪ್ರವಚನಕಾರರನ್ನೂ ಪುರಸ್ಕರಿಸುವುದು ಸೂಕ್ತವಾಗಿದೆ. *ಈ* ದಿಸೆಯಲ್ಲಿ ಸರ್ಕಾರದ ಗಮನ ಸೆಳೆಯುವ ಸಾರ್ವಜನಿಕ ಪ್ರಯತ್ನವೂ ಅವಶ್ಯವಾಗಿದೆ.

("ಗಮಕ ಕಲೆ :ಸರ್ಕಾರ ಮತ್ತು ಸಮಾಜ" ಎಂಬ ಲೇಖನದಿಂದ) ***ಬಸವಾನಿ ರಾಮಶರ್ಮಾ***

ಸಾರ್ವತ್ರಿಕವಾಗಿ ಆಗಾಗ ಕಾವ್ಯವಾಚನ ಕಾರ್ಯಕ್ರಮಗಳು ಅಲ್ಲಲ್ಲಿ ನಡೆಯುತ್ತಲೇ ಇರಬೇಕು. ಅನೇಕ ಗಮಕಿಗಳು ವ್ಯಾಖ್ಯಾಕಾರರು *ಈ* ದಿಸೆಯಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಇವರ ದಾರಿಯಲ್ಲಿ ಬಂದಿರುವ ಕಲ್ಲುಮುಳ್ಳುಗಳನ್ನು ತೊಡೆದು ಹಾಕಿ, ಗಮಕವನ್ನು ಸುಗಮಗೊಳಿಸುವಲ್ಲಿ ಕನ್ನಡಿಗರೆಲ್ಲರೂ ಅಭಿಮಾನದಿಂದ ಸಹಕರಿಸಬೇಕು. ವ್ಯಾಖ್ಯಾನ ವಾಚಸ್ಪತಿ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳು ಬಹುಕಾಲದಿಂದ ನಡೆಸುತ್ತಿರುವ ಗಮಕನಂದನದಲ್ಲಿ ಮರಿದುಂಬಿಗಳಾದ ನಾವು ಕನ್ನಡ ಕಾವ್ಯಮಕರಂದವನ್ನು (ಜೇನು ನೊಣಗಳಾಗಿ) ಕನ್ನಡಿಗರೆಲ್ಲರಿಗೆ ಹಂಚುವ ಮೂಲಕ ಅವರನ್ನು ಅಭಿನಂದಿಸಬೇಕು.


("ಗಮಕ : ಸರ್ವಜನಾಕರ್ಷಕ ? " ಎಂಬ ಲೇಖನದಿಂದ ) ***ನಿ.ನಾ.ಮಧ್ಯಸ್ಥ***

ಕಾವ್ಯದ ರಸಭಾವಗಳನ್ನು ಶ್ರೋತೃಗಳು ಸಂಪೂರ್ಣವಾಗಿ ಆಸ್ವಾದಿಸುವಂತಾಗಲು ಕಾವ್ಯದ ವಾಚನದ ಜತೆ ಜತೆಗೇ ಅದರ ವ್ಯಾಖ್ಯಾನ ಅಥವಾ 'ಅನುವಾದ'ವನ್ನೂ ಹೇಳುವುದುಂಟಷ್ಟೆ. ಗಮಕಕಲೆಗಿಂತ ಭಿನ್ನವಾಗಿದ್ದರೂ, ಅದಕ್ಕೆ ಪೂರಕವಾದ *ಈ* ವ್ಯಾಖ್ಯಾನ ಅಥವಾ ಪದ್ಯವರ್ಣನೆಯನ್ನು ಮಾಡಲು ಬೇರೆಯೇ ಪ್ರತಿಭೆಯ ಆವಶ್ಯಕತೆಯಿದೆ. ಸಾಹಿತ್ಯದಲ್ಲಿ ಸ್ವತಃ ಪರಿಶ್ರಮ ಹೊಂದಿದ್ದು, ಕವಿಹೃದಯವನ್ನರಿತು, ಶ್ರೋತೃಗಳ ಮನೋಧರ್ಮಕ್ಕೆ

ತಕ್ಕಂತೆಯೇ, ತನ್ನ ವಾಗ್ಮಿತೆಯಿಂದ ಕಾವ್ಯದ ಸ್ವಾರಸ್ಯ-ಸಂದೇಶಗಳನ್ನು ಜನತೆಗೆ ಪ್ರವಹಿಸಬಲ್ಲ , ಸುವರ್ಣ ಸೇತುವೆಯಾಗಬಲ್ಲ- ಈ ವ್ಯಾಖ್ಯಾನಕಾರ; ಕವಿಯನ್ನು ಸಮಾಜಕ್ಕೆ ಪರಿಚಯಿಸಿ ಆತ್ಮೀಯನನ್ನಾಗಿಸಬಲ್ಲ. ಗಮಕಿಯ ಕಲಾಸೇವೆಯಲ್ಲಿ ಇವನದೂ ಸಮಪಾಲು. ಈ ಸಂದರ್ಭದಲ್ಲಿ ಸನ್ಮಾನಿತರಾದ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ಆದರ್ಶ ವ್ಯಾಖ್ಯಾನಕಾರರಾಗಿದ್ದಾರೆ. ನಲವತ್ತೈದು ವರ್ಷಗಳಿಗೂ ಮೀರಿ ನಾಡಿನಲ್ಲೆಲ್ಲ ಈ ವ್ಯಾಖ್ಯಾನಕಲೆಯನ್ನು ತಾವೇ ಆರಂಭಿಸಿ ಪ್ರಚುರಪಡಿಸಿದ್ದಾರೆ. ಎಲ್ಲೆಡೆ ಮೆಚ್ಚುಗೆ ಗಳಿಸಿದ್ದಾರೆ. ಶ್ರೀಯುತರು ವೇದ, ಶಾಸ್ತ್ರ, ಸಂಸ್ಕೃತ ಹಾಗೂ ಕನ್ನಡಸಾಹಿತ್ಯದಲ್ಲಿ ಆಳವಾಗಿಯೂ ವಿಸ್ತಾರವಾಗಿಯೂ ಅಧ್ಯಯನ ಮಾಡಿದ್ದು, ಆ ಪರಿಣತಿಗೆ ತಮ್ಮ ಅಪೂರ್ವ ವಾಗ್ವೈಖರಿಯಿಂದ ಮೆರುಗು ಕೊಟ್ಟು ರಂಜನೀಯ ಮಾರ್ಗವೊಂದನ್ನೇ ವ್ಯಾಖ್ಯಾನಕಲೆಯಲ್ಲಿ ಸಂಸ್ಥಾಪಿಸಿದ್ದಾರೆ. ಅವರು ಪ್ರಚುರಪಡಿಸಿದ ಈ ವ್ಯಾಖ್ಯಾನಕಲೆಯನ್ನು ಇನ್ನೂ ಹಲವರು ರೂಢಿಸಿಕೊಂಡಿರುವರು. ಅವರೆಲ್ಲರ ಈ ವ್ಯಾಖ್ಯಾನದ ಶೈಲಿ ಮಾತ್ರ ಬೇರೆ ಬೇರೆ ಬಗೆಯದ್ದಾಗಿದೆ. ಅವರುಗಳ ವ್ಯಾಖ್ಯಾನದ ಶೈಲಿಗಳಲ್ಲಿ ಕಂಡು ಬರುವ ಭಿನ್ನತೆಗೆ ಅವರವರ ವ್ಯಾಸಂಗಸ್ತರವೂ ಕಾರಣವಾದಂತೆಯೇ ಮೂಲತಃ ಅವರ ಮನೋಭಾವವೇ ಮೂಲಪ್ರೇರಕವಾಗಿರುವಂತೆ ತೋರುತ್ತದೆ.
("ಗಮಕ: ಎರಡು ಟಿಪ್ಪಣಿಗಳು ಭಾಗ ೧ " ಎಂಬ ಲೇಖನದಿಂದ ) ***ಹೊ.ವೆಂ.ಸತ್ಯನಾರಾಯಣ ಶಾಸ್ತ್ರೀ***

## ೯. ಲೇಖಕರು

1. ರಾ. ಗಣೇಶಶರ್ಮಾ
2. ವಿದ್ವಾನ್ ಎಸ್. ನರಸಿಂಹಮೂರ್ತಿ ಶಾಸ್ತ್ರಿಗಳು, ವೈದಿಕರು, ಲಿಂಗದಹಳ್ಳಿ.
3. ವಿದ್ವಾನ್ ಎಚ್. ಎಂ. ತಿಮ್ಮಪ್ಪ
4. ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್
5. ಮತ್ತೂರು ಕೃಷ್ಣಮೂರ್ತಿ, ಬೆಂಗಳೂರು
6. ಎಂ. ರಾಘವೇಂದ್ರರಾವ್
7. ವಿದ್ಯಾಭೂಷಣ, ವ್ಯಾಖ್ಯಾನ ಕೇಸರಿ, ಬಸವಾನಿ ರಾಮಶರ್ಮಾ
8. ಡಾ. ನಂದಕುಮಾರ್, ಭಾರತೀಯ ವಿದ್ಯಾಭವನ, ಲಂಡನ್
9. ಕೆ. ರಂಗರಾಯ, ಡೆಪ್ಯುಟಿ ತಹಶೀಲ್ದಾರ್, ಬಳ್ಳಾರಿ
10. ಎಸ್. ನಾಗೇಶರಾವ್
11. ಗೌರಮ್ಮ ನಾಗರಾಜ್, ಮೈಸೂರು
12. ತಾರಾ ಪ್ರಸಾದ್
13. ಡಾ. ಎಸ್. ಮಲ್ಲಿಕಾರ್ಜುನ ಭಟ್ಟ
14. ಡಾ. ಟಿ.ಎಸ್. ಕೃಷ್ಣಮೂರ್ತಿ
15. ಡಾ. ಎ.ಎಸ್. ವೇಣುಗೋಪಾಲರಾವ್, ನಿವೃತ್ತ ಪ್ರಾಧ್ಯಾಪಕರು, ಹಾಸನ
16. ವೈ. ಪ್ರತಿಮಾ ಮೋಹನ್, ಬೆಂಗಳೂರು
17. ಬಿ.ಎಸ್.ಎಸ್. ಕೌಶಿಕ್, ಬೆಂಗಳೂರು
18. ಬಿ.ಜಿ. ಶ್ರೀರಂಗಯ್ಯ
19. ಎಸ್. ಮಹಾಬಲ, ಭದ್ರಾವತಿ
20. ಪದ್ಮಿನೀ ರಾಮಮೂರ್ತಿ
21. ಎಚ್.ಆರ್. ಕೇಶವಮೂರ್ತಿ, ಹೊಸಹಳ್ಳಿ
22. ಕೇಶವ




# ನಿಗಮ ಕೌಮುದಿ

**ವೇ. ಬ್ರ. ಶ್ರೀ ನರಸಿಂಹಮೂರ್ತಿ ಅಭಿನಂದನ**

*ಪ್ರಧಾನ ಸಂಪಾದಕರು*

**ಎಲ್.ವಿ. ಸೀತಾರಾಮ್**

# ನಿಗಮ ಕೌಮುದಿ

## ಅಭಿನಂದನಾಗ್ರಂಥ ಸಮರ್ಪಣೆ

**ವೇದರತ್ನ, ವಿದ್ಯಾಸಾಗರ**

**ವೇ.ಬ್ರ. ಶ್ರೀ ನರಸಿಂಹಮೂರ್ತಿಗಳವರಿಗೆ**

**ಲಿಂಗದಹಳ್ಳಿ**

***ದಿನಾಂಕ ೩ ೦೨.೧೧.೨೦೦೩***

***ಕಾರ್ತಿಕ ಶುದ್ಧ ನವಮಿ, ಭಾನುವಾರ***

*ಪ್ರಧಾನ ಸಂಪಾದಕರು*

**ಎಲ್.ವಿ. ಸೀತಾರಾವ್**

**ಆಸ್ತಿಕ ವಿವರ್ಧಿನಿ ಸಂಘ**

**ಲಿಂಗದಹಳ್ಳಿ**

**ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

# ನಿಗಮ ಕೌಮುದಿ

*ಪ್ರಕಾಶಕರು:* **ಆಸ್ತಿಕ ವಿವರ್ಧಿನಿ ಸಂಘ**
ಲಿಂಗದಹಳ್ಳಿ ೫೭೭ ೧೨೯
ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
ದೂರವಾಣಿ: ೦೮೨೬೧ ೪೫೪೪೮೫೨


ಮುದ್ರಿತ ಪ್ರತಿಗಳು ೬೦೦
ಮೊದಲನೆ ಮುದ್ರಣ ಅಕ್ಟೋಬರ್ ೨೦೦೩

*ಮುದ್ರಕರು* **ಗಣನಾಥ್ ಆಫ್‌ಸೆಟ್ ಪ್ರಿಂಟರ್ಸ್**
ನಂ.೧೫ ೧ನೇ ಕ್ರಾಸ್, ಮಂಜುನಾಥನಗರ
ಮಾಗಡಿ ಮುಖ್ಯರಸ್ತೆ, ಬೆಂಗಳೂರು ೫೬೦ ೦೨೩
ದೂರವಾಣಿ ೩೩೫೨೮೫೦, ಮೊಬೈಲ್ ೯೮೪೪೦ ೧೫೧೧೧

## ನಿಗಮ ಕೌಮುದಿ

*ಪೂಜ್ಯ ವೇ. ನರಸಿಂಹಮೂರ್ತಿಯವರಿಗೆ ಅರ್ಪಿಸುತ್ತಿರುವ ಸಂಭಾವನಾಗ್ರಂಥಕ್ಕೆ ಯೋಗ್ಯ ಹೆಸರೊಂದನ್ನು ಸೂಚಿಸುವಂತೆ ಹಲವು ವಿದ್ವಾಂಸರಲ್ಲಿ ಅರಿಕೆ ಮಾಡಿದ್ದೆವು. ಒಂದೇ ಶೀರ್ಷಿಕೆಯು ಕೃತಿ ಹಾಗೂ ವ್ಯಕ್ತಿಯನ್ನು ಸೂಚಿಸುವಂತಿರಬೇಕೆಂದು ಆಶಿಸಿದ್ದೆವು. ನಮ್ಮ ಅಪೇಕ್ಷೆಯನ್ನು ಪೂರೈಸಿಕೊಟ್ಟವರು ಮತ್ತೂರಿನ ಶ್ರೀ ಕೇಶವ ಅವಧಾನಿಗಳು.*

***ಕೌಮುದೀ*** *ಎಂಬ ದೀರ್ಘಾಂತ ಸಂಸ್ಕೃತ ಶಬ್ದ ಕನ್ನಡಕ್ಕೆ ಹ್ರಸ್ವವಾಗಿದೆ.* ***ನಿಗಮ*** *ಎಂದರೆ* ***ವೇದ*** *ಎಂದೂ,* ***ಕೌಮುದೀ*** *ಎಂದರೆ* ***ಬೆಳುದಿಂಗಳು*** *ಎಂದೂ ಅರ್ಥ. (ನಿಗಮ = ವೇದ, ವೇದಭಾಗ, ದೈವವಾಣಿ, ಮಾರ್ಗ, ತರ್ಕ ಇತ್ಯಾದಿ. Passage to vedas. ಕೌಮುದಿ = ಬೆಳುದಿಂಗಳು, Festivity, throwing light on the subject treated.)* ***ನಿಗಮ ಕೌಮುದಿ*** *ವೇದಗಳ ಅರ್ಥಗೌರವವನ್ನು ಅಗತ್ಯವಿರುವ ಎಲ್ಲ ಕಡೆ ಮುಟ್ಟಿಸುವಂಥಾದ್ದು. ಗುರುಗಳು ವೇದಸ್ವರೂಪರು. ಅವರ ವಾಣಿ ಬೆಳುದಿಂಗಳಿನಂತೆ ಆಹ್ಲಾದಕರವೂ ಹೃದ್ಯವೂ ಆದದ್ದು. ಬೆಳಕಿನೆಡೆಗೆ ಒಯ್ಯುವಂಥಾದ್ದು.*

*ವೇದವಿದರಿಗೆ ಒಂದು ಅಭಿನಂದನಾಗ್ರಂಥವನ್ನು ಸಮರ್ಪಿಸಬೇಕೆಂದು ಭಾವಿಸಿದಾಗ ಅದು ವಿಶಿಷ್ಟವಾಗಿರಬೇಕೆಂದು ಯೋಜಿಸಿದೆವು. ವೇದತತ್ತ್ವಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವಂಥ ಲೇಖನಗಳನ್ನು ಸಂಗ್ರಹಿಸಿದೆವು. ಹಾಗಾಗಿ ಈ ಕೃತಿಯು ವೇದಮಾರ್ಗವನ್ನು ಹುಡುಕುವವರಿಗೆ ದಾರಿದೀಪವಾಗಿದೆ. ಬೆಳಕನ್ನು ತೋರಿಸುತ್ತದೆ.* ***ನಿಗಮ*** *ಎಂದರೆ ಮಾರ್ಗ, ನಿಖರತೆ ಎಂಬ ಅರ್ಥವೂ ಇದೆ.* ***ಕೌಮುದಿ*** *ಎಂದರೆ ವಿಷಯದ ಮೇಲೆ ಬೆಳಕು ಬೀರುವುದು ಮತ್ತು ಹೃದಯವನ್ನು ಅರಳಿಸಿ ಆಹ್ಲಾದಗೊಳಿಸುವುದು ಎಂದರ್ಥವಾಗುತ್ತದೆ. ಆದ್ದರಿಂದ ಈ ಕೃತಿಗೆ '****ನಿಗಮ ಕೌಮುದಿ****' - ವೇದಮಾರ್ಗಕ್ಕೆ ದೀಪ ಎಂದು ಹೆಸರಿಟ್ಟಿದ್ದೇವೆ.*

*ಪೂಜ್ಯ ಗುರುಗಳು ವೇದಪಾರಂಗತರು, ಅಷ್ಟೇ ವೈಚಾರಿಕ ಮನೋಭಾವವನ್ನುಳ್ಳವರು. ಅವರ ಮಾತುಗಳಲ್ಲಿ ಹೊಸಯುಕ್ತಿ ಹಳೆತತ್ತ್ವವಿದೆ. ಋಷಿವಾಕ್ಯದೊಡನೆ ವಿಜ್ಞಾನತತ್ತ್ವವನ್ನು ಮೇಳೈಸಿ ಮೈಗೂಡಿಸಿಕೊಂಡ ವಿಶಿಷ್ಟ ವ್ಯಕ್ತಿತ್ವ ಅವರದು. ಆದ್ದರಿಂದಲೇ ಅವರ ಸಾನ್ನಿಧ್ಯ ಎಲ್ಲರಿಗೂ ಆಹ್ಲಾದಕರ ಬೆಳುದಿಂಗಳಿನಂತೆ.*

*ಆದ್ದರಿಂದಲೇ ಅವರ ಜ್ಞಾನ, ಸ್ವಭಾವವನ್ನು ಸೂಚಿಸುವಂತೆ ಈ ಹೆಸರನ್ನು ಆಯ್ಕೆ ಮಾಡಲಾಗಿದೆ. ಜ್ಞಾನಕ್ಕೆ ನಿಗಮ, ಸ್ವಭಾವಕ್ಕೆ ಕೌಮುದಿ ಎಂದರೂ ಅಡ್ಡಿ ಇಲ್ಲ. ಇದಕ್ಕೆ ಮುಂಚೆ ಸರ್ವಸಮ್ಮತವಾಗಿ ಆಯ್ಕೆಯಾಗಿದ್ದ ಪದ ವೇ.ಬ್ರ. ಅಶ್ವತ್ಥಾವಧಾನಿ ಅವರು ಸೂಚಿಸಿದ್ದ 'ನಿಗಮಾ' ಎಂಬ ಶಬ್ದ. ಈ ಪದ ಕೂಡ ನಾವೀಗ ಆಯ್ಕೆ ಮಾಡಿರುವ ಪದದ ಅರ್ಥಕ್ಕೆ ಸಮೀಪವಾಗಿದೆ. ಬೆಳುದಿಂಗಳಿನ ತಂಪಿಗಾಗಿ ಮತ್ತು ಅರ್ಥಸ್ಫುಟತೆಗಾಗಿ ಪ್ರಕೃತ ಪದವನ್ನು ಉಳಿಸಿದೆ.*

***ಎಲ್.ವಿ. ಸೀತಾರಾಮ್***
*ಪ್ರಧಾನ ಸಂಪಾದಕರು*

# ಗೌರವಾಧ್ಯಕ್ಷರ ನಿವೇದನೆ

ವೇದರತ್ನ ವಿದ್ಯಾಸಾಗರ ನರಸಿಂಹಮೂರ್ತಿಗಳಿಗೆ ತವರೂರಿನಲ್ಲಿ ಸನ್ಮಾನ - "ಅಭಿನಂದನ ಗ್ರಂಥ" ಸಮರ್ಪಣೆಯಾಗುತ್ತಿದೆ. ಈ ಸಂದರ್ಭದಲ್ಲಿ ಅವರು ವಾಮನನಾಗಿ ನಮ್ಮೊಂದಿಗಿದ್ದು ತ್ರಿವಿಕ್ರಮನಾಗಿ ಬೆಳೆದು ಬಂದ ಪರಿಯನ್ನು ನಾನು ನೋಡಿ ಕೇಳಿ ಆನಂದಿಸಿದ್ದೇನೆ, ಸಂತೋಷಪಟ್ಟಿದ್ದೇನೆ. ಕಾಳಿದಾಸ ಮಹಾಕವಿಯ **ತದ್ಗುಣೈಃ ಕರ್ಣಮಾಗತ್ಯ ಚಾಪಲಾಯ ಪ್ರಚೋದಿತಃ** ಎಂಬ ವಾಕ್ಯದಂತೆ ನನ್ನ ಸಹಪಾಠಿಯಾದ ನನ್ನ ದೊಡ್ಡಮ್ಮನ ಮಗನ ಪ್ರತಿಭೆ ನನ್ನನ್ನು ಪ್ರಚೋದಿಸಿ ಬರೆಯುವಂತೆ ಮಾಡಿದೆಯೇ ವಿನಃ, ನಾನೇನೂ ಅವರ ಬಗ್ಗೆ ಬರೆಯಲು ಶಕ್ತನಲ್ಲ.

ನರಸಿಂಹಮೂರ್ತಿಗಳ ತಂದೆ ಪೂಜ್ಯ ಶ್ಯಾಮಶಾಸ್ತ್ರಿಗಳು ಬಾಲ್ಯದಲ್ಲಿಯೇ ಕಾವೇರಿ ತೀರದ ರುದ್ರಪಟ್ಟಣದಲ್ಲಿ ಇದ್ದು ವೇದ, ಸಂಗೀತ, ಪಿಟೀಲು ವಾದನದ ಅಭ್ಯಾಸ ಮಾಡಿ ಊರಿಗೆ ಹಿಂದಿರುಗಿ ಕೆಲವರಿಗೆ ಪಿಟೀಲು ನುಡಿಸುವುದನ್ನು ಹೇಳಿಕೊಡುತ್ತಿದ್ದರು. ಅವರು ತುಂಬಾ ಪ್ರಾಮಾಣಿಕರು, ಸರ್ಕಾರಿ ಗುತ್ತಿಗೆ ಕೆಲಸಗಳನ್ನು ತೆಗೆದುಕೊಂಡು ಊರಿನ ಕೆಲಸ ಮಾಡಿಸುತ್ತಿದ್ದರು. ಸರ್ಕಾರದ ಹಣದ ಲೆಕ್ಕವನ್ನು ಸರಿಯಾಗಿಟ್ಟು ಉಳಿದ ಹಣವನ್ನು ಸರ್ಕಾರಕ್ಕೆ ಹಿಂದಿರುಗಿಸುತ್ತಿದ್ದರು.

ನರಸಿಂಹಮೂರ್ತಿಗಳ ತಾಯಿ ಫಣಿಯಮ್ಮ ಮಮತಾಮಯಿ, ಊರಿಗೇ ಅವರು ತಾಯಿಯಾಗಿದ್ದರು. ಎಲ್ಲರೂ ಅವರಲ್ಲಿ ವಿಶ್ವಾಸವಿಟ್ಟಿದ್ದರು. ಏನೇ ಕಷ್ಟ ಬಂದರೂ ಅವರಿಂದ ಊರಿನ ಹೆಂಗಸರು ಸಹಾಯ ಪಡೆಯುತ್ತಿದ್ದರು. ಅವರನ್ನು ಕೇಳದೆ ಯಾವ ಹೊಸ ಕೆಲಸಕ್ಕೂ ಕೈ ಹಾಕುತ್ತಿರಲಿಲ್ಲ. ಅವರಿಗೆ ಮಕ್ಕಳು ದೇವರ ಸಮಾನ. ಕೃಷ್ಣಾಷ್ಟಮಿಯಂದು ರಾತ್ರಿಪೂಜೆಯಾದ್ದರಿಂದ ಮಕ್ಕಳು ಪೂಜೆಯ ಹೊತ್ತಿಗೆ ಮಲಗಿಬಿಡುವರೆಂದು ನೈವೇದ್ಯಕ್ಕೆ ಮುಂಚೆಯೇ ಮಕ್ಕಳಿಗೆ ಕೃಷ್ಣನಿಗಾಗಿ ಮಾಡಿಟ್ಟ ಉಂಡೆಯನ್ನು ಕೊಡುತ್ತಿದ್ದರು. ತಂದೆಯ ಪ್ರಾಮಾಣಿಕತೆ, ಬುದ್ಧಿವಂತಿಕೆ, ತಾಯಿಯ ಸಹನೆ, ಕರುಣೆಯನ್ನು ಪಡೆದ ಮಗ ನರಸಿಂಹಮೂರ್ತಿ.

ನಾನು ಮತ್ತು ನರಸಿಂಹಮೂರ್ತಿ ಒಟ್ಟಿಗೆ ಆಡಿ ಬೆಳೆದವರು. ಲೋಯರ್ ಸೆಕೆಂಡರಿವರೆಗೆ ಒಟ್ಟಿಗೆ ಓದಿದೆವು. ಮುಂದೆ ಇಂಗ್ಲಿಷ್ ಲೋಯರ್ ಸೆಕೆಂಡರಿ ಓದಲು ನರಸಿಂಹಮೂರ್ತಿ ಚಿಕ್ಕಮಗಳೂರಿಗೆ ಹೋದರೆ ನಾನು ಕನ್ನಡ ಲೋಯರ್ ಸೆಕೆಂಡರಿ ಓದಲು ಬೀರೂರಿಗೆ ಹೋದೆ. ಮುಂದೆ ಶೃಂಗೇರಿಯಲ್ಲಿ ವೇದಾಧ್ಯಯನಕ್ಕಾಗಿ ಇಬ್ಬರೂ ಒಟ್ಟಿಗೆ ಸೇರಿದೆವು. ನರಸಿಂಹಮೂರ್ತಿಯ ಅಗಾಧವಾದ ಗ್ರಹಣಶಕ್ತಿ, ಏಕಸಂಧಿಗ್ರಾಹಿತನ ಹಾಗೂ ಚುರುಕುತನವನ್ನು ಗಮನಿಸಿ ನಮ್ಮ ಗುರುಗಳಾದ ರಾಮಚಂದ್ರಶಾಸ್ತ್ರಿಗಳು ನರಸಿಂಹಮೂರ್ತಿಗಳನ್ನು ಗುರುಗಳ ಜತೆ ಸಹಾಧ್ಯಾಯಿಯಾಗಿ ಸೇರಿಸಿದರು. ಚಿಂತನೆ ಚರ್ಚೆ ಮಾಡಲು ಗುರುಗಳ ಜತೆ ಇರುವ ಭಾಗ್ಯ ಯಾರಿಗೆ ತಾನೆ ದೊರಕುತ್ತದೆ ?

**ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ| ಪಾದಂ ಸಬ್ರಹ್ಮಚಾರಿಭ್ಯಃ ಪಾದಂ ಕಾಲಕ್ರಮೇಣ ಚ|** ಎಂದಿದ್ದರೂ ನರಸಿಂಹಮೂರ್ತಿಗಳು ತಮ್ಮ ಬುದ್ಧಿವಂತಿಕೆಯಿಂದಲೇ ಹೆಚ್ಚಾಗಿ ಕಲಿತು ತಮ್ಮ ಸಹಪಾಠಿಗಳಿಗೂ ತಾವೇ ಕಲಿಸಿದರು. ಅಲ್ಲದೆ ನಿರಂತರ ಕಲಿಯುವ ಉತ್ಸಾಹವನ್ನೂ ಹೊಂದಿದ್ದರು. **ಆಸುಪ್ತೇರಾಮೃತೇಃ ಕಾಲಂ ನಯೇತ್ ವೇದಾಂತಚಿಂತಯಾ** ಎನ್ನುವಂತೆ ಈಗಲೂ ವ್ಯಾಖ್ಯಾನ ಚತುಸ್ಸೂತ್ರೀ ಪುಸ್ತಕವನ್ನು ಸದಾ ತಮ್ಮೊಂದಿಗಿಟ್ಟುಕೊಂಡು ಚಿಂತನೆಯಲ್ಲಿ ತೊಡಗಿರುತ್ತಾರೆ.

**ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ|** ಗೀತೆಯ ಈ ವಾಕ್ಯ ಅಕ್ಷರಶಃ ಸತ್ಯವಾಗಿದೆ ಅವರಲ್ಲಿ. ಅನೇಕ ದುಃಖ ಸನ್ನಿವೇಶಗಳಲ್ಲೂ ದುಃಖವನ್ನು ನುಂಗಿಕೊಂಡು ಕರ್ತವ್ಯದ ಕಡೆ ಗಮನವಿಟ್ಟವರು. ಅವರ ಪಾಂಡಿತ್ಯಪ್ರಶಂಸೆಯಾಗುವೆಡೆಯಲ್ಲಿ ಬೀಗದ ನಿಗರ್ವಿಗಳು.

ನರಸಿಂಹಮೂರ್ತಿಗಳು ಎಲ್ಲಿದ್ದರೂ ಅಲ್ಲಿ ಸುತ್ತಮುತ್ತಲಿನವರ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ. ಅವರ ಪರಿಚಯ ಪಡೆದವರು ಅವರ ವಿದ್ವತ್ತಿಗೆ ಆಕರ್ಷಿತರಾಗುತ್ತಾರೆ. ಶೃಂಗೇರಿಯಲ್ಲಿದ್ದಾಗ ಭಂಡಿಗಡಿ ಮಠದ ಸ್ವಾಮಿಗಳಾದ ಕೃಷ್ಣಾನಂದ ಸ್ವಾಮಿಗಳು ಸಹ ವೇದಾಧ್ಯಯನ ಮಾಡುತ್ತಿದ್ದರು. ಕೆಲವು ಕಾಲ ಸ್ವಾಮಿಗಳಿಗೂ ನರಸಿಂಹಮೂರ್ತಿಗಳು ಪಾಠ ಹೇಳಿಕೊಡುತ್ತಿದ್ದರು. ಗುರುಗಳು ನರಸಿಂಹಮೂರ್ತಿಗಳ ಅಖಂಡ ಪಾಂಡಿತ್ಯಕ್ಕೆ ಮನಸೋತು

ತಮ್ಮೊಡನೆ ತಾಂಬರಂನಲ್ಲಿನ ಶಾಖಾಮಠದಲ್ಲಿ ನಡೆಯುವ ವಿದ್ವತ್ ಸಭೆಗೆ ಪ್ರತಿವರ್ಷ ಕರೆದುಕೊಂಡು ಹೋಗುತ್ತಿದ್ದರು. ಈರೋಡಿನ ಬ್ಯಾಂಕ್ ಮ್ಯಾನೇಜರ್ ಒಬ್ಬರು ಅವರನ್ನು ನೋಡುವುದಕ್ಕೆಂದೇ ಲಿಂಗದಹಳ್ಳಿಗೆ ಬಂದು ಶಾಲು ಹೊದಿಸಿ ಸನ್ಮಾನಿಸಿ ಸಂತೋಷಪಟ್ಟರು.

ಮುಳುಬಾಗಿಲಿನ ಮಠದಲ್ಲಿ ಕೆಲವು ವರ್ಷ ನರಸಿಂಹಮೂರ್ತಿಗಳು ಉಪಾಧ್ಯಾಯರಾಗಿದ್ದರು. ಆಗ ನಡೆದ ಘಟನೆ ಹೀಗಿದೆ. ಅಲ್ಲಿನ ಮಠದ ಅಧಿಕಾರಿಗಳು ನರಸಿಂಹಮೂರ್ತಿಗಳಿಗೆ ಒಂದು ವರ್ಷದ ಸಂಬಳವನ್ನು ಆರಂಭಕ್ಕೆ ಮುಂಚಿತವಾಗಿಯೇ ಕೊಟ್ಟಿದ್ದರು. ವರ್ಷ ಕಳೆದನಂತರ ನರಸಿಂಹಮೂರ್ತಿಗಳು ಲೆಕ್ಕಹಾಕಿ ಉಳಿದ ಹಣವನ್ನು ಮಠಕ್ಕೆ ಹಿಂದಿರುಗಿಸಿದಾಗ, ಅಲ್ಲಿನ ಅಧಿಕಾರಿಗಳು ಅವರ ಪ್ರಾಮಾಣಿಕತೆಗೆ ಮೆಚ್ಚಿ ಆ ಹಣವನ್ನು ಪುನಃ ಅವರಿಗೆ ನೀಡಿ, ಮೇಲೆ ಒಂದು ಸಾವಿರ ರೂ.ಗಳನ್ನು ಕೊಟ್ಟು ಶಾಲು ಹೊದಿಸಿ ಸನ್ಮಾನಿಸಿದರು.

ನರಸಿಂಹಮೂರ್ತಿಗಳ ವಿದ್ವತ್ ಪ್ರತಿಭೆ ಅಸಾಧಾರಣವಾದದ್ದು. ಆದರೆ ಅವರ ಸಂಕೋಚಸ್ವಭಾವದಿಂದ ಎಲೆಮರೆಯ ಕಾಯಿಯಂತಿದ್ದ ಅವರ ಪ್ರತಿಭೆ ಹೊರಜಗತ್ತಿಗೆ ಬೇಗನೆ ಬೆಳಕಿಗೆ ಬರಲಿಲ್ಲ. ಸರ್.ಎಂ. ವಿಶ್ವೇಶ್ವರಯ್ಯನವರು ಬಾಬಾಬುಡನ್ ಗಿರಿಯ ಕಬ್ಬಿಣವನ್ನು ಜಗತ್ತಿಗೆ ಪರಿಚಯಿಸಿದಂತೆ ವಿದ್ವಾಂಸರಾದ ವೇದರತ್ನ ಪರೀಕ್ಷಕರಾದ ಶ್ರೀಯುತ ಮತ್ತೂರು ಕೃಷ್ಣಮೂರ್ತಿಗಳು ಲಿಂಗದಹಳ್ಳಿಯಲ್ಲಿ ಅಡಗಿದ್ದ **ಅಮೂಲ್ಯರತ್ನವನ್ನು** ಜಗತ್ತಿಗೆ ಪರಿಚಯಿಸಿದ್ದಾರೆ.

**ನ ಸ್ಮರೇತ್ ಅಪಕಾರಾಣಾಂ ಶತಮಪ್ಯಾತ್ಮವತ್ತಯಾ** ಎನ್ನುವ ಧ್ಯೇಯವುಳ್ಳ ನರಸಿಂಹಮೂರ್ತಿಗಳು ಆರೋಗ್ಯವಂತರಾಗಿ, ಭಾಗ್ಯವಂತರಾಗಿ, ನೂರ್ಕಾಲ ಬಾಳಲಿ. ಅವರ ದ್ವಿಷಷ್ಟಿಪೂರ್ತಿ ಸಮಾರಂಭವನ್ನು ಅವರ ಶಿಷ್ಯರು, ಬಂಧುಗಳು ಕಾಣುವಂತಾಗಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

***ಎಲ್.ವಿ. ಕೃಷ್ಣಮೂರ್ತಿ***

## ಪ್ರಧಾನಸಂಪಾದಕರ ನಿವೇದನೆ

ಮಾನವನ ಜೀವನದಲ್ಲಿ ಅಮೃತಘಳಿಗೆಗಳು ಒಮ್ಮೊಮ್ಮೆ ಮಾತ್ರ ಲಭಿಸುತ್ತವೆ. ಯಾವಾಗಲೂ ಲಭಿಸುವುದಿಲ್ಲ. ಅಂಥ ಶುಭಘಳಿಗೆ ನಮ್ಮೆಲ್ಲರಿಗೂ ಈ ದಿನ ಪ್ರಾಪ್ತವಾಗಿದೆ ಎಂದು ಹೇಳಲು ತುಂಬಾ ಸಂತೋಷವಾಗುತ್ತದೆ. ಸಂಸ್ಕೃತಭಾಷೆಯ ನಾನಾ ವಿಷಯಗಳಲ್ಲಿ ಪಾಂಡಿತ್ಯ ಪಡೆದಿರುವ ಪೂಜನೀಯ ವೇ|| ಬ್ರ|| ನರಸಿಂಹಮೂರ್ತಿಗಳಿಗೆ ಅಭಿನಂದನಾಗ್ರಂಥವನ್ನು ಸಮರ್ಪಣೆ ಮಾಡುವುದರ ಮೂಲಕ ಸನ್ಮಾನಿಸಿ ಅವರ ಆಶೀರ್ವಾದ ಪಡೆಯುವವರಿದ್ದೇವೆ. ಇಂಥ ಮಹಾನುಭಾವರು ನಮ್ಮ ಊರಿನವರಾಗಿರುವುದೂ, ನಮ್ಮೆಲ್ಲರಿಗೂ ಬಂಧುಗಳಾಗಿರುವುದೂ, ಒಂದು ಸುಯೋಗವೇ ಸರಿ. ಸಂಸ್ಕೃತವನ್ನು ನೆನಸಿಕೊಂಡರೆ ತಕ್ಷಣ ಅವರ ನೆನಪು ಬರುತ್ತದೆ. 'ಸಂಸ್ಕೃತ ಬೇರೆಯಲ್ಲ, ಅವರು ಬೇರೆಯಲ್ಲ' ಎನ್ನುವಷ್ಟರ ಮಟ್ಟಿಗೆ ಸಂಸ್ಕೃತದ ಸಾಹಿತ್ಯ ಅವರಲ್ಲಿ ಹಾಸುಹೊಕ್ಕಾಗಿದೆ. ಒಮ್ಮೊಮ್ಮೆ ಅವರು ಸಂಸ್ಕೃತದಲ್ಲಿ ಯೋಚಿಸಿ ಕನ್ನಡದಲ್ಲಿ ಮಾತನಾಡುವರು ಎನಿಸುತ್ತದೆ. ಹೂವಿನ ಜತೆ ನಾರು ಇದ್ದಂತೆ ನಾವು ಅವರೊಂದಿಗೆ ಇದ್ದೇವೆ.

ಸಂಪಾದಕಮಂಡಳಿಯ ಸಂಚಾಲಕರಾದ ಶ್ರೀ ಎಲ್.ಜಿ. ಅನಂತರವರು ಬಹಳ ಬುದ್ಧಿವಂತರು. ಆದ್ದರಿಂದಲೇ ಅವರಿಗೆ ವಿಶಿಷ್ಟ ರೀತಿಯಲ್ಲಿ ಸನ್ಮಾನವನ್ನು ಮಾಡುವ ಆಲೋಚನೆ ಹೊಳೆಯಿತು. ತಕ್ಷಣವೇ ಹಳ್ಳಿಯ ನಮ್ಮ ಜನಾಂಗದವರ ಸಭೆ ಏರ್ಪಡಿಸಿ ತಮ್ಮ ಯೋಜನೆ ಮುಂದಿಟ್ಟರು. ಎಲ್ಲರೂ ಉತ್ಸಾಹದಿಂದ ಒಪ್ಪಿದರು. ಅನಂತರ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಒಬ್ಬರು ಅಧ್ಯಕ್ಷರು, ಇನ್ನೊಬ್ಬರು ಕಾರ್ಯದರ್ಶಿ ಮತ್ತೆ ಕೋಶಾಧಿಕಾರಿ. ಲೇಖನಗಳನ್ನು ಸಂಗ್ರಹಿಸಿ ಅವುಗಳಿಗೆ ಒಂದು ರೂಪಕೊಡುವ ಕೆಲಸ, ಗ್ರಂಥಗಳನ್ನು ಪುಸ್ತಕ ರೂಪದಲ್ಲಿ ಅಂದವಾಗಿ ಮುದ್ರಿಸುವ ಕೆಲಸ, ಹೀಗೆ ಹಲವಾರು ಕೆಲಸಗಳನ್ನು ವಹಿಸಿಕೊಂಡು 'ಸೇವೆ' ಎಂದು ಉತ್ಸಾಹದಿಂದ ದುಡಿದಿದ್ದಾರೆ. ಅಮೂಲ್ಯ ಸಲಹೆಗಳನ್ನು ಕೊಟ್ಟಿದ್ದಾರೆ. ಹಲವು ಬಾರಿ ಸಭೆ ಸೇರಿ ಸದಸ್ಯರ ಅಭಿಪ್ರಾಯ ಪಡೆದು ಲೇಖನಗಳನ್ನು ಅಚ್ಚುಮಾಡಿಸಿದ್ದೇವೆ. ತುಂಬು ಹೃದಯದಿಂದ ಬಹಳ ಮಂದಿ ಧನಸಹಾಯಮಾಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಜನರು ನಮ್ಮ ಮನವಿಗೆ ಓಗೊಟ್ಟು ಶ್ರೀಯುತರ ಬಗ್ಗೆ ಲೇಖನ ಸಿದ್ಧಪಡಿಸಿ ಕಳುಹಿಸಿದ್ದಾರೆ. ಅವರ ಶ್ರದ್ಧಾಭಕ್ತಿಗಳನ್ನು ಎಷ್ಟು ಹೊಗಳಿದರೂ ಸಾಲದು.

ವೇ. ಬ್ರ. ಶ್ರೀ ನರಸಿಂಹಮೂರ್ತಿಗಳ ಊರು ತರೀಕೆರೆ ತಾಲ್ಲೋಕಿನ ಲಿಂಗದಹಳ್ಳಿ. ಅವರ ಬಾಲ್ಯವಿದ್ಯಾಭ್ಯಾಸ ಹಳ್ಳಿಯಲ್ಲೇ ಆಯಿತು. ಅನಂತರ ಶೃಂಗೇರಿ ಪಾಠಶಾಲೆಯಲ್ಲಿ ಎಂಟು ವರ್ಷ ನನ್ನ ಅಣ್ಣನವರಾದ ಕೃಷ್ಣಮೂರ್ತಿಗಳ ಜತೆಯಲ್ಲಿ ಮತ್ತು ಶ್ರೀ ಬೀರೂರು ಚಿದಂಬರ ಜೋಯ್ಸರೊಂದಿಗೆ (ಒಂದು ಹಾಳೆ ಮತ್ತು ಒಂದು ಬರೆಯುವ ಪೆನ್ ಕೊಟ್ಟರೆ ನಿಂತ ಜಾಗದಲ್ಲೇ ಸಂಸ್ಕೃತ ಕವನ ರಚಿಸಲು ಸಮರ್ಥರಾಗಿದ್ದ ಆಶುಕವಿಗಳು ಶ್ರೀ ಜೋಯ್ಸರವರು) ವ್ಯಾಸಂಗ ಮಾಡಿದರು. ಅನಂತರ ಧಾರಾವಾಡದಲ್ಲೂ *ಈ* ಮೂವರೂ ಸುಮಾರು ನಾಲ್ಕು ವರ್ಷ ವ್ಯಾಸಂಗ ಮಾಡಿದರು. ಶ್ರೀಯುತರು ಸುಮಾರು ತಮ್ಮ ನಲವತ್ತನೇ ವಯಸ್ಸಿನವರೆಗೂ ಓದಿ ಅನೇಕ ವಿಷಯಗಳಲ್ಲಿ ವಿದ್ವತ್ ಪರೀಕ್ಷೆಯನ್ನು ಮಾಡಿದರು. ಅನಂತರವೂ ಅನೇಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರು. ಅವರು ಮಾಡಿರುವ ಪರೀಕ್ಷೆಗಳನ್ನು ಬರೆಯಲು ಹೊರಟರೆ ಒಂದು ಪುಟವೇ ಬೇಕಾಗುವುದು.

ಅನಂತರ ಬೆಂಗಳೂರು ಶಂಕರಮಠದ ಶಾಲೆಯಲ್ಲಿ ನನ್ನ ಅಣ್ಣಂದಿರಾದ ವೇ. ಕೃಷ್ಣಮೂರ್ತಿಗಳು, ನಮ್ಮ ಜನಾಂಗದಲ್ಲೇ ಮುಖ್ಯ ಪುರೋಹಿತರು ಎನ್ನಿಸಿಕೊಂಡಿರುವ ವೇ. ಬ್ರ. ಶ್ರೀ ರಾಮೇಶ್ವರಾವಧಾನಿಗಳು (ಇವರು ಭಾರತದರ್ಶನ ಸಂಚಿಕೆ ತರುವಲ್ಲಿ ಹೆಸರು ಪಡೆದವರು. ಅನೇಕ ಯಜ್ಞ ಯಾಗಾದಿಗಳನ್ನು ಮಾಡಿಸಿದವರು. ತಮ್ಮ ಊರಾದ ಪೂಮಗಾಮೆಯಲ್ಲಿ ಸ್ವಂತ ಮನೆಯನ್ನೇ ರಾಮಮಂದಿರವಾಗಿ ಮಾರ್ಪಡಿಸಿ ಹೋಮಾದಿಗಳನ್ನು ಮಾಡಿದವರು) ಮತ್ತು ಶ್ರೀ ವಾಸುದೇವ ಶಾಸ್ತ್ರಿಗಳು ಅವರುಗಳೊಂದಿಗೆ ವ್ಯಾಸಂಗ ಮಾಡಿ ವೇದಾಂತ ವಿದ್ವತ್ ಮುಗಿಸಿದರು. ನನ್ನ ಜೀವನದಲ್ಲಿ ಯಾವಾಗಲೂ ಜ್ಞಾಪಿಸಿಕೊಳ್ಳುವಂಥ ಆನಂದಮಯವಾದ ಅನುಭವ ಎಂದರೆ ಹಲವಾರು ತಿಂಗಳು ನಾನು ಬೆಂಗಳೂರಿನಲ್ಲಿ ಅವರ ಜತೆಯಲ್ಲಿ ವಾಸಮಾಡಿದ್ದು. ಶ್ರೀಯುತರು ಆಗಲೇ ಪ್ರಸಿದ್ಧಿ ಪಡೆದಿದ್ದರು. ಕೆಲವಾರು ಜನ ಅವರಲ್ಲಿಗೆ ಬಂದು ತಮ್ಮ ಸಮಸ್ಯೆಗಳನ್ನು ವಿವರಿಸಿ ಅವರಿಂದ ಸಲಹೆ ಪಡೆಯುತ್ತಿದ್ದರು. ನನ್ನ ಅಣ್ಣನವರಾದಿಯಾಗಿ ನಾವೆಲ್ಲರೂ ಅವರ ಪ್ರಭಾವಕ್ಕೊಳಗಾದೆವು. ಬೆಂಗಳೂರು ಶಂಕರಮಠದಲ್ಲಿ ಬೇರೆ ಬೇರೆ ಮನೆಗಳಲ್ಲಿದ್ದ ನಾವು ಒಂದಾದೆವು. ಆಗ ಇಬ್ಬರಿಗೂ ತಲಾ ೨೫ ರೂ. ವಿದ್ಯಾರ್ಥಿವೇತನ ಬರುತ್ತಿತ್ತು. ಒಂದು ಮನೆಯಲ್ಲಿ ಊಟ, ಇನ್ನೊಂದರಲ್ಲಿ ವ್ಯಾಸಂಗ. ಆ ಕಾಲದಲ್ಲಿ ಅಕ್ಕಿ, ಬೆಲ್ಲ, ಸಕ್ಕರೆ, ಸೌದೆ ಹೀಗೆ ಎಲ್ಲಕ್ಕೂ ಸರದಿಯಲ್ಲಿ ಕಾದು ನಿಲ್ಲಬೇಕಾಗಿತ್ತು. ಅದನ್ನೆಲ್ಲಾ ಸಹಿಸಿಕೊಂಡು ನಮಗಾರಿಗೂ ಕೆಲಸ ಹೇಳದೆ ಸಂಸಾರವನ್ನು ಸರಿದೂಗಿಸಿಕೊಂಡು ಹೋಗುತ್ತಿದ್ದರು. ನಾವೆಲ್ಲ ಅವರ ಆಜ್ಞಾನುವರ್ತಿಗಳಾಗಿದ್ದೆವು. ಆದರೆ ಅವರು ಯಾರಿಗೂ ಆಜ್ಞೆ ಮಾಡುತ್ತಿರಲಿಲ್ಲ. ಅವರು ಹೇಳಿದ ಕೆಲಸವನ್ನು ನಾವು 'ಸೇವೆ' ಎಂದು ಭಾವಿಸುತ್ತಿದ್ದೆವು. ಇಂಥ ಅವರು ಮನಸ್ಸು ಮಾಡಿದ್ದರೆ ದೊಡ್ಡ ಸೈಟ್ ಮಾಡಿ ಲಕ್ಷಾಂತರ ರೂ.ಗಳನ್ನು ಇಡಬಹುದಾಗಿದ್ದಿತು. ಆದರೆ ಅವರ ಒಲವು ಹಳ್ಳಿಯ ಕಡೆ ಹರಿಯಿತು. ರಾಮಾಯಣದ ಒಂದು ಪ್ರಸಂಗವನ್ನು ಹೇಳಿದರೆ ಅನುಚಿತವಾಗಲಾರದೆಂದು ಭಾವಿಸಿದ್ದೇನೆ. ಶ್ರೀರಾಮನು ರಾವಣಾದಿಗಳನ್ನು ಕೊಂದು ವಿಭೀಷಣನಿಗೆ ಪಟ್ಟಕಟ್ಟಿ ಅಯೋಧ್ಯೆಗೆ ಇನ್ನೇನು ಹೊರಡಬೇಕು ಎಂಬ ಸಿದ್ಧತೆಯಲ್ಲಿದ್ದಾಗ ಲಕ್ಷ್ಮಣನಿಗೆ ಹೀಗೆ ಅನ್ನಿಸಿತಂತೆ, "ಏನೂ ತಪ್ಪು ಮಾಡದೆ ನನ್ನ ಅಣ್ಣನಿಗೆ ವನವಾಸ, ಸೀತಾಪಹರಣ, ರಾಕ್ಷಸರೊಡನೆ ಯುದ್ಧ ಸಂಭವಿಸಿತು. ಅಂಥ ಅಯೋಧ್ಯೆಗೆ ಹೋಗುವುದರ ಬದಲಿಗೆ, ಸಂಪತ್ತಿನಿಂದ ಕೂಡಿದ ಲಂಕೆಯಲ್ಲಿ ಏಕೆ ಇರಬಾರದು?" ಇದನ್ನು ಅಣ್ಣನಿಗೆ ಹೇಳಿಯೂ ಬಿಟ್ಟನಂತೆ. ಅದಕ್ಕೆ ಶ್ರೀರಾಮ "ಲಂಕೆಯು ಚಿನ್ನ ವಜ್ರಗಳಿಂದ ಕೂಡಿದ್ದರೂ ಅದು ರುಚಿಸುವುದಿಲ್ಲ. ತಾಯಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತ ಹೆಚ್ಚಿನದು" ಎಂದು ಹೇಳಿದನಂತೆ.

ಹೀಗೆ ಅವರಿಗೆ ತಮ್ಮ ಹಳ್ಳಿಯ ಮುಂದೆ ಬೆಂಗಳೂರು ಏನೇನೂ ಅಲ್ಲ ಎನಿಸಿದ್ದರಿಂದ ಊರಿಗೆ ಬಂದರು. ತೋಟದ ವ್ಯವಸಾಯ ಮಾಡಿದರು. ಕೆಲವು ಕಾಲ ಗುದ್ದಲಿ ಹಿಡಿದು ಅಗತೆಯನ್ನು ಮಾಡಿದರು. ಗಾಂಧೀಜಿಯವರಂತೆ ವಸ್ತ್ರಧರಿಸಿ ಸರಳ ಜೀವನ ನಡೆಸಿದರು. ಕೇವಲ ಹಣ್ಣುಹಂಪಲುಗಳಲ್ಲಿ ಒಪ್ಪತ್ತಿನ ಊಟ ಮುಗಿಸುತ್ತಿದ್ದರು. ವ್ಯವಹಾರವನ್ನೂ ಮಾಡಿದರು. ಲಾಭನಷ್ಟಗಳು ಉಂಟಾದಾಗ ಅವರ ಮನಸ್ಸು ಹಿಗ್ಗಲಿಲ್ಲ ಹಾಗೂ ಕುಗ್ಗಲಿಲ್ಲ. ಏನೇ ಮಾಡುತ್ತಿದ್ದರೂ ಕೈನಲ್ಲಿ ಒಂದು ಪುಸ್ತಕ ಇರುತ್ತಿದ್ದಿತು. *ಈ*ಗ ಸಹ ಏನನ್ನಾದರೂ ಗ್ರಂಥವನ್ನು ಓದುತ್ತಲೇ ಇರುತ್ತಾರೆ. ಸಾಹಿತ್ಯಾಭ್ಯಾಸದಿಂದ ಚಿಂತನಾಶಕ್ತಿ ಹೆಚ್ಚಿ ಮನಸ್ಸು ವಿಶಾಲವಾಗಿಯೂ, ದೃಢವಾಗಿಯೂ ಆಯಿತು. ವಿದ್ಯೆ ಎಂದರೆ ಜ್ಞಾನದ ಬಾಗಿಲನ್ನು ತೆರೆಯುವ ಬೀಗದ ಕೈ ಎಂದು ನಂಬಿದವರು. ವಿದ್ಯೆಯ ಮೂಲಕ ಅಪಾರವಾದ ಜ್ಞಾನ ಪಡೆದಿದ್ದರಿಂದ ಅವರಿಗೆ ಪ್ರತಿಯೊಬ್ಬರಲ್ಲೂ ದೈವಾಂಶವಿದೆ ಎಂಬ ಭಾವನೆ. ಎಲ್ಲರನ್ನೂ ಒಂದೇ ರೀತಿಯಾಗಿ ಕಾಣುತ್ತಾರೆ. ಶ್ರೀಮಂತರ, ರಾಜಕೀಯ ವ್ಯಕ್ತಿಗಳ ಹಿಂದೆ ಮುಂದೆ ಸುತ್ತುವುದಿಲ್ಲ. ಒಬ್ಬ ಬಾಲಬ್ರಹ್ಮಚಾರಿ ಬಂದರೂ ಅವನಿಗೂ ಮಂತ್ರ ಹೇಳಿಕೊಟ್ಟು *ಈ* ವಯಸ್ಸಿನಲ್ಲೂ, ಅದನ್ನು ಬರೆದು ಕೊಡುತ್ತಾರೆ. ದೊಡ್ಡವರಿಗೂ ಇದೇ ರೀತಿ. ಜ್ಞಾಪಕಶಕ್ತಿ ಅಪಾರ. ಸಂಸ್ಕೃತದ **ಸಿದ್ಧಾಂತ ಕೌಮುದಿ**ಯಲ್ಲಿ ಬರೆದಿರುವುದನ್ನು ಬಾಯಲ್ಲಿಯೇ ಹೇಳುತ್ತಾರೆ. ಇಂಗ್ಲಿಷ್‌ನ **ರೆನ್ ಅಂಡ್ ಮಾರ್ಟಿನ್** ವ್ಯಾಕರಣವನ್ನು ಓದಿದ್ದಾರೆಂದು

ಕೇಳಿದ್ದೇನೆ. ಸಾಮಾನ್ಯವಾಗಿ ನಮಗೆ ಒಂದೊಂದು ವಿಷಯದಲ್ಲಿ ವಿದ್ವತ್ ಪಡೆಯಲು ನಮ್ಮ ಜೀವಮಾನದಲ್ಲಿ ಸಾಧ್ಯವಾಗಬಹುದು. ಆದರೆ ಅವರು ಸಂಸ್ಕೃತದ ಅನೇಕ ವಿಷಯಗಳಲ್ಲಿ ವಿದ್ವತ್ ಮಾಡಿದ್ದಾರೆ. ಪೌರೋಹಿತ್ಯದಲ್ಲಿ ಅವರಿಗೆ ಬಿಡುವೇ ಇರುವುದಿಲ್ಲ. ಏನೇ ಮಾಡಿಸಿದರೂ ಜನರು ಕೊಟ್ಟಷ್ಟು ಸಂಭಾವನೆ ತೆಗೆದುಕೊಳ್ಳುವರು. ನಮ್ಮ ಜನಾಂಗದವರಿಗೆ ಇದೊಂದು ವರದಾನ. ಆಹಾರದಲ್ಲೂ ಬಹಳ ಶಿಸ್ತು. ಬೆಳಗ್ಗೆ ಐದು ಗಂಟೆಯಿಂದ ಅವರ ದಿನಚರಿ ಆರಂಭವಾಗಿ ರಾತ್ರಿ ಹನ್ನೊಂದು ಗಂಟೆಗೆ ಮುಗಿಯುವುದು.

ಬೆಳಗ್ಗೆ ಆರು ಗಂಟೆಗೆ ಚಿಕ್ಕಬಾಲಕರಿಗೆ ಶ್ಲೋಕ ಮಂತ್ರ ಹೇಳಿಕೊಡುವುದು, ಒಂದು ಗಂಟೆ ಅನಂತರ ದೊಡ್ಡವರಿಗೆ, ಮಧ್ಯಾಹ್ನ ಊರಿನ ಗೃಹಿಣಿಯರಿಗೆ ಶ್ಲೋಕ, ವಿಷ್ಣುಸಹಸ್ರನಾಮ ಇತ್ಯಾದಿಗಳನ್ನು ಹೇಳಿಸುವುದು. ಸಂಜೆ ದೊಡ್ಡವರಿಗೆ ಅಭಿಷೇಕದ ಮಂತ್ರ, ಚೌಲ ಉಪನಯನ ಇತ್ಯಾದಿಗಳನ್ನು ಮಾಡಿಸುವ ಕ್ರಮ ಮುಂತಾದವುಗಳನ್ನು ಹೇಳಿಕೊಡುವರು. ಊರಿನ ಜನರು ಆಗಾಗ್ಗೆ ಬೆಳಗ್ಗೆ ಹಾಗೂ ಸಂಜೆ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಬರುವರು. ಇವುಗಳ ಮಧ್ಯೆ ಒಂದೆರಡು ನಿತ್ಯಪೌರೋಹಿತ್ಯ. ಅವರು ಯಾವಾಗ ಆಹಾರ ಸ್ವೀಕರಿಸುವರೋ ತಿಳಿಯದು. ಯಾವಾಗಲೂ ದೇವರ ವಿಚಾರಗಳಲ್ಲೇ ತೊಡಗಿರುವುದರಿಂದಲೂ, ಆಹಾರದಲ್ಲೂ ಕಟ್ಟುನಿಟ್ಟಾಗಿರುವುದರಿಂದಲೂ, ಅವರು *ಈ* ವಯಸ್ಸಿನಲ್ಲೂ ಮಾನಸಿಕವಾಗಿಯೂ ಶಾರೀರಿಕವಾಗಿಯೂ ಆರೋಗ್ಯವಾಗಿದ್ದಾರೆ. ಅವರ ಚಟುವಟಿಕೆ ಮತ್ತು ವೇಗದ ನಡಿಗೆಯನ್ನು ನೋಡಿ ಯುವಕರೂ ನಾಚಿಕೊಳ್ಳುವರು.

ನಮ್ಮ ಊರಿನಲ್ಲಿದ್ದ ಕೆಲವು ಗಣ್ಯವ್ಯಕ್ತಿಗಳ ಪ್ರಭಾವ ಅವರ ಮೇಲೆ ಉಂಟಾದ್ದರಿಂದ ಅವರಿಗೆ ಇಷ್ಟೆಲ್ಲಾ ಸಾಧನೆ ಮಾಡಿ ಪ್ರಸಿದ್ಧಿ ಪಡೆಯಲು ಸಾಧ್ಯವಾಯಿತೆಂದು ಭಾವಿಸಿದ್ದೇನೆ. ಅವರ ಚಿಕ್ಕಪ್ಪನವರಾದ ಶ್ರೀ ಸುಬ್ಬರಾಯರು ಆ ಕಾಲದಲ್ಲೇ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿ ವಿದ್ಯಾವಂತರೆನಿಸಿಕೊಂಡವರು. ಇದ್ದ ಸರ್ಕಾರಿ ಕೆಲಸ ಬಿಟ್ಟು ನಮ್ಮ ಹಳ್ಳಿಗೆ ಎಂಟು ಮೈಲಿ ದೂರದ ಕಾಡಿನ ಜಮೀನನ್ನು ಸಾಗುವಳಿ ಮಾಡಿ ಹಣ್ಣುಗಳನ್ನು ಬೆಳೆದು ಅದನ್ನೇ ಕೆಲವು ದಿನ ಆಹಾರವಾಗಿಸಿಕೊಂಡಿದ್ದರು. ಪಾಲಿಷ್ ಮಾಡಿದ ಅಕ್ಕಿ ಉಪಯೋಗಿಸುತ್ತಿರಲಿಲ್ಲ. ವಸ್ತ್ರದ ಉಪಯೋಗ ತುಂಬಾ ಕಡಮೆ ಇದ್ದಿತು. **ರೀಡರ್ಸ್ ಡೈಜೆಸ್ಟ್** ಇತ್ಯಾದಿ ಸಂಚಿಕೆಗಳನ್ನು ತರಿಸಿ ಓದುತ್ತಿದ್ದರು. ಹಾಗೆಯೇ ಅವರ ಸೋದರಮಾವಂದಿರಾದ ಶ್ರೀಯುತ ಮಲ್ಲಿಕಾರ್ಜುನಾವಧಾನಿಗಳು ಸ್ವಂತ ಪರಿಶ್ರಮ ಹಾಗೂ ಸಾಹಸದಿಂದ ವಿದ್ಯೆಯಲ್ಲಿ ಪಾಂಡಿತ್ಯ ಪಡೆದವರು. ಏನೂ ಗೊತ್ತಿಲ್ಲದೇ ಇದ್ದ ಹಿಂದಿ ಭಾಷೆಯನ್ನು ಕಲಿತು ಗೋರಖ್‌ಪುರದಿಂದ ಹೊರಡುತ್ತಿದ್ದ **ಕಲ್ಯಾಣ್** ಮಾಸ ಪತ್ರಿಕೆ ತರಿಸಿ ಇತರರಿಗೆ ವಿವರಿಸುವ ಸಾಮರ್ಥ್ಯ ಪಡೆದಿದ್ದರು. ಅವರ ಜತೆಯಲ್ಲಿ ಬಿಡುವಿನಲ್ಲಿ ಆಗಾಗ್ಗೆ ಧರ್ಮಶಾಸ್ತ್ರ, ಸಾಹಿತ್ಯ ಇತ್ಯಾದಿಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು ಎಂದು ಕೇಳಿದ್ದೇನೆ.

ವೇದವಿದ್ವಾನ್ ಶ್ರೀ ನರಸಿಂಹಮೂರ್ತಿಗಳನ್ನು ನೋಡದೆ ಇದ್ದವರು ಕೆಲವರು ಅವರ ಪ್ರತಿಭಾಮಹಿಮೆಯನ್ನು ಅಂದಾಜು ಮಾಡಿ ಹೀಗಿರಬಹುದೆಂದು ಕೊಳ್ಳುವುದು ಉಂಟು: ಅಂಥ ಜನರ ಕಲ್ಪನೆ ಏನೆಂದರೆ ಶ್ರೀಮಾನ್‌ರವರು ಮಹಡಿಯನ್ನೊಳಗೊಂಡ ತಾರಸೀಮನೆ ಹೊಂದಿರುವರು. ಹೊರಗಡೆ ಗೋಡೆ ಅಲಂಕೃತವಾಗಿದೆ, ಬಣ್ಣ ಬಣ್ಣದ ಚಿತ್ರಗಳಿಂದ; ಒಳಗಡೆ ಗೋಡೆಗಳು ಸಂಸ್ಕೃತಶ್ಲೋಕಗಳಿಂದ ತುಂಬಿವೆ. ಮಧ್ಯಭಾಗದಲ್ಲಿ ಸಿಂಹಾಸನದಂಥ ಒಂದು ಕುರ್ಚಿಯ ಮೇಲೆ ಅವರು ಹಣೆಯಲ್ಲಿ ವಿಭೂತಿ ಮತ್ತು ಕುಂಕುಮಧರಿಸಿ ಕುಳಿತಿದ್ದಾರೆ. ಅವರು ಧರಿಸಿರುವ ಮೈಸೂರು ಸಿಲ್ಕ್‌ನ ವಸ್ತ್ರಗಳು ಮೆರುಗನ್ನು ತಂದುಕೊಟ್ಟಿವೆ. ಅನೇಕ ಶಿಷ್ಯರನ್ನು ಹೊಂದಿದ್ದಾರೆ. ಒಂದು ಕಾರನ್ನು ಇಟ್ಟಿದ್ದಾರೆ. ಆದರೆ ಅವರು ಅಲ್ಲಿ ಹೋಗಿ ನೋಡಿದಾಗ ತದ್ವಿರುದ್ಧವಾಗಿ ಕಾಣುವುದು. ಹಿಂದಿನ ಕಾಲದ ಅದೇ ಹಳೇ ಮನೆ. ಯಾವ ಅಲಂಕಾರಗಳೂ ಇಲ್ಲ. ವೈಭವವಿಲ್ಲ. ಒಳಗಡೆ ನಾಲ್ಕು ಬೀರುಗಳ ತುಂಬಾ ಪುಸ್ತಕಗಳಿವೆ. ಇಷ್ಟು ಪುಸ್ತಕಗಳನ್ನು ಹೇಗೆ ಕೊಂಡರೋ, ಹೇಗೆ ಓದಿದರೋ ಎಂದು ಯೋಚಿಸಿದರೆ ಆಶ್ಚರ್ಯವಾಗುವುದು. ತುಂಬಾ ಸರಳ ಜೀವನ ನಡೆಸುತ್ತಿರುವರು.

ಮಾನವನು ಹಣಬಲದಿಂದ ಏನನ್ನಾದರೂ ಕೊಳ್ಳಬಹುದು, ಆದರೆ ಆರೋಗ್ಯವನ್ನು ಕೊಳ್ಳಲು ಸಾಧ್ಯವಿಲ್ಲ. ಮನಸ್ಸೇ ಮೂಲ. ಮನಸ್ಸು ದೃಢವಾಗಿದ್ದರೆ ನಮ್ಮ ದೇಹ ಹೇಳಿದಂತೆ ಕೇಳುತ್ತದೆ. ಒಳ್ಳೆಯ ಸಾಹಿತ್ಯದ ಅಭ್ಯಾಸದಿಂದ ಮನಸ್ಸು ಆಧ್ಯಾತ್ಮಿಕದ ಕಡೆ ತಿರುಗುವುದು. ವೇದಗಳ ಸಾರವನ್ನು ತಿಳಿದು ಅನುಸರಿಸಿದರೆ ಆರೋಗ್ಯವು ಲಭಿಸುವುದು. ಆರೋಗ್ಯಸೂತ್ರಗಳು ಅವುಗಳಲ್ಲೇ ಅಡಗಿರುತ್ತವೆ. ಮುಖ್ಯವಾಗಿ ವಿದ್ಯೆ ಗಳಿಸುತ್ತೇನೆ ಎಂಬ ಹಠ ಅಥವಾ ಇಚ್ಛಾಶಕ್ತಿ ಹೊಂದಬೇಕು. ಮಾನ್ಯ ಕೆಂಗಲ್ ಹನುಮಂತಯ್ಯನವರಿಗೆ ಇಚ್ಛಾಶಕ್ತಿ ಇದ್ದುದರಿಂದಲೇ ನಾವಿಂದು ಭವ್ಯವಾದ ವಿಧಾನಸೌಧವನ್ನು ಕಾಣುತ್ತಿದ್ದೇವೆ. ಶ್ರೀಯುತ ನರಸಿಂಹಮೂರ್ತಿಗಳಿಗೆ ಅಂಥ ಇಚ್ಛಾಶಕ್ತಿ ಇರುವುದರಿಂದ ಸಂಸ್ಕೃತ ವಿದ್ಯೆಯಲ್ಲಿ ಅಪಾರ ಪಾಂಡಿತ್ಯ

ಪಡೆದು ವೇದಗಳ ಸಾರವನ್ನು ಎಲ್ಲರಿಗೂ ತಿಳಿಯುವಂತೆ ಹೇಳುವರು. ನಮ್ಮೆಲ್ಲರ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಸಮರ್ಥರಾಗಿದ್ದಾರೆ. ಇಷ್ಟು ಪಾಂಡಿತ್ಯ ಹೊಂದಿದ್ದರೂ ಸ್ವಲ್ಪವೂ ಗರ್ವವಿಲ್ಲ. ಯಾರೇ ಬಂದರೂ ಪ್ರೀತಿಯಿಂದ ಮಾತನಾಡಿಸುವರು. ಅವರ ಆದರ್ಶಗಳನ್ನು ನಾವು ಪಾಲಿಸುತ್ತಾ ನಮ್ಮ ಬಾಳನ್ನು ಸಾರ್ಥಕಪಡಿಸಿಕೊಳ್ಳೋಣ. ಅವರ ಆಶೀರ್ವಾದ ನಮ್ಮ ಮೇಲೆ ಯಾವಾಗಲೂ ಇರಲಿ ಎಂದು ಹಾರೈಸುತ್ತೇನೆ.

ಪ್ರಸ್ತುತ ನಾವೆಲ್ಲರೂ ಸೇರಿ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳವರಿಗೆ ಸಮರ್ಪಣೆ ಮಾಡಲಿರುವ ಅಭಿನಂದನಾಗ್ರಂಥ ಕೇವಲ ವ್ಯಕ್ತಿಯ ಹೊಗಳಿಕೆಗೆ ಸೀಮಿತವಾಗದೆ ಸಂಗ್ರಹಯೋಗ್ಯ ಲೇಖನಗಳನ್ನೊಳಗೊಂಡಿರಬೇಕೆಂಬ ದೃಷ್ಟಿಯಿಂದ ಗ್ರಂಥದ ಎರಡನೇ ಭಾಗದಲ್ಲಿ ಮಹಾನ್ ವಿದ್ವಾಂಸರಿಂದ ನಾನಾ ದರ್ಶನಗಳ ಬಗ್ಗೆ ಲೇಖನಗಳನ್ನು ಬರೆಯಿಸಿ ಪ್ರಕಟಿಸಿದ್ದೇವೆ. ಇದಲ್ಲದೆ ನಮ್ಮಿಂದ ಅಭಿನಂದಿಸಲ್ಪಡುತ್ತಿರುವ ಪರಮಪೂಜ್ಯ ನರಸಿಂಹಮೂರ್ತಿಗಳು ಸ್ವತಃ ಲೇಖಕರಾಗಿ ಬರೆದಿರುವ ಅನೇಕ ಅಪ್ರಕಟಿತ ಲೇಖನಗಳಲ್ಲಿ ಕೆಲವನ್ನಾದರೂ ಈ ಗ್ರಂಥದಲ್ಲಿ ಸೇರಿಸಿದಲ್ಲಿ ಅದೂ ಒಂದು ರೀತಿಯ ಗೌರವ ಸಮರ್ಪಣೆ ಆಗುತ್ತದೆ ಎಂದು ಭಾವಿಸಿ, ಭಾಗ ಒಂದರಲ್ಲಿ **ಶಿವಸ್ತುತಿ ಮತ್ತು ವಿಷ್ಣುಸ್ತುತಿಗಳ ಕನ್ನಡ ತಾತ್ಪರ್ಯಗಳನ್ನು ಪ್ರಕಟಿಸಲಾಗಿದೆ.** ಪೂಜ್ಯರ ವ್ಯಕ್ತಿದರ್ಶನ ಎಲ್ಲರಿಗೂ ದೊರೆಯುವಂತಾಗಲೆಂದು ಸೂಕ್ತ ಭಾವಚಿತ್ರಗಳನ್ನು ಪ್ರಕಟಿಸಿ ಗ್ರಂಥದ ಶೋಭೆ ಹೆಚ್ಚಿಸಲು ಪ್ರಯತ್ನಿಸಲಾಗಿದೆ. ಅನೇಕ ಅಭಿಮಾನಿಗಳು ಅಭಿಮಾನಪೂರ್ವಕವಾಗಿ ಬರೆದು ಕಳುಹಿಸಿದ ಲೇಖನಗಳಿಂದ ಪೂಜ್ಯರ ಹಲವು ಮುಖಗಳ ಪರಿಚಯ ಮಾಡಿಕೊಡಲಾಗಿದೆ. ಸಹಕರಿಸಿದ ಸರ್ವರಿಗೂ ಸಂಪಾದಕ ಮಂಡಳಿಯ ಅನಂತ ಕೃತಜ್ಞತೆಗಳು.

***ಎಲ್.ವಿ. ಸೀತಾರಾಮ್***

## ಸಂಚಾಲಕರ ಮಾತು

ಲಿಂಗದಹಳ್ಳಿಯ ಇತಿಹಾಸದಲ್ಲಿಯೇ ಅಲ್ಲದೆ ಸಂಕೇತಿ ಸಮುದಾಯದಲ್ಲಿಯೇ ಪ್ರಾತಃಸ್ಮರಣೀಯರಾಗಿ ವಿಜೃಂಭಿಸುವ ಧ್ರುವತಾರೆಯೇ ಲಿಂಗದಹಳ್ಳಿ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳು. ಭಾರತೀಯ ವಿದ್ಯಾಭವನದವರು ಕೊಡಮಾಡುವ ಪ್ರತಿಷ್ಠಿತ **ವೇದರತ್ನ ಪ್ರಶಸ್ತಿ** ಶ್ರೀಯುತರಿಗೆ ಅಕ್ಟೋಬರ್ ೨೦೦೨ ರಲ್ಲಿ ಪ್ರಾಪ್ತಿಯಾದ ಸಂದರ್ಭದಲ್ಲಿ ಜೀವವಿಮಾ ಏಜಂಟರಾದ, ಬಿಚ್ಚುನುಡಿಯ ನೇತಾರ ಶ್ರೀ ಎಲ್.ಆರ್. ಶ್ರೀನಿವಾಸ್‌ರವರು ವೇ. ಬ್ರ. ಶ್ರೀಗಳವರಿಗೆ ಅಭಿನಂದನಾಗ್ರಂಥವನ್ನು ಸಮರ್ಪಣೆ ಮಾಡಬೇಕೆಂಬ ತಮ್ಮ ಮನದಾಳವನ್ನು ಎಲ್ಲ ಬಾಂಧವರಲ್ಲೂ ವ್ಯಕ್ತಪಡಿಸುತ್ತಿದ್ದರು. ಅವರ ಆ ಮಹದಾಸೆಯನ್ನು ನೆರವೇರಿಸುವುದಕ್ಕೋಸ್ಕರವೋ ಎಂಬಂತೆ ಎಲ್ಲ ಬಾಂಧವರೂ ಈ ಮಹತ್ಕಾರ್ಯಕ್ಕೆ ಚಾಲನೆ ಕೊಟ್ಟರು. ಆದರೆ ಈಗ ಶ್ರೀನಿವಾಸ್‌ರವರು ನಮ್ಮೊಂದಿಗಿಲ್ಲ. ಕೇವಲ ಅವರ ನೆನಪು ಉಳಿದಿದೆ. ಶ್ರೀಯುತರಿದ್ದಿದ್ದರೆ ಅದೆಷ್ಟು ಸಂತಸಪಟ್ಟು, ಹಿರಿಹಿರಿ ಹಿಗ್ಗುತ್ತಿದ್ದರು ಅನ್ನುವುದು ಎಲ್ಲರ ಮನಸ್ಸಿಗೂ ಬಾರದಿರುವುದಿಲ್ಲ. ಗ್ರಂಥಸಮರ್ಪಣೆಗೆ ಶ್ರೀ ಶ್ರೀನಿವಾಸ್‌ರವರು ನಮ್ಮೊಂದಿಗೆ ಇದ್ದಾರೆಂದೇ ನನ್ನ ಅಂತರಂಗ ಭ್ರಮಿಸುತ್ತದೆ.

'ಅಭಿನಂದನಾಗ್ರಂಥ' ಸಮಿತಿಯು ರಚಿಸಲ್ಪಟ್ಟು, ಸಂಚಾಲಕನಾಗಿ ಮತ್ತು ಸಂಪಾದಕಮಂಡಳಿ ಸದಸ್ಯನಾಗಿ ಕಾರ್ಯವನ್ನು ನಿರ್ವಹಿಸಲು ಎಲ್ಲರೂ ನನ್ನನ್ನು ಆಯ್ಕೆ ಮಾಡಿದಾಗ ನನ್ನಲ್ಲಿ ಅಧೈರ್ಯ ಮೂಡಿತ್ತು. 'ಇಂತಹ ಮಹತ್ಕಾರ್ಯಕ್ಕೆ ಸಂಚಾಲಕನಾಗಿ ಕಾರ್ಯನಿರ್ವಹಿಸುವುದು ನನ್ನಿಂದ ಸಾಧ್ಯವೇ' ಎಂಬ ಪ್ರಶ್ನೆ ನನ್ನಲ್ಲೇ ಉದ್ಭವಿಸಿತ್ತು. ಎಲ್ಲರೂ ಸಹಕರಿಸಿದರೆ ಎಂತಹ ಕೆಲಸವನ್ನಾದರೂ ಮಾಡಬಹುದೆಂಬ ಅಭಿಪ್ರಾಯ ಹಾಗೂ ನನ್ನ ಹಿಂದಿನ ಅನುಭವಗಳಿಂದಾಗಿ ಮುನ್ನುಗ್ಗಿದೆ. ನಾನು ಅಂದುಕೊಂಡಂತೆಯೇ ಎಲ್ಲರ ಪೂರ್ಣಮನಸ್ಸಿನ ಸಹಕಾರದಿಂದ ಕಾರ್ಯ ಸುಸೂತ್ರವಾಗಿ ನಡೆದು, ಸಕಾಲದಲ್ಲಿ ಅಭಿನಂದನಾಗ್ರಂಥ ಮುದ್ರಣವಾಗಿ ಹೊರಬರಲು ಕಾರಣವಾಯ್ತು.

ಅಭಿನಂದನಾಗ್ರಂಥ ವೈವಿಧ್ಯಪೂರ್ಣವಾಗಿ ಮೂಡಿಬರಲು ಮುಖ್ಯವಾದ ಕಾರಣಕರ್ತರನ್ನು ನೆನೆಯಲೇಬೇಕು. ಈ ವಿಚಾರದಲ್ಲಿ ಮತ್ತೂರಿನ ವೇ.ಬ.ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು ಹಾಗೂ ಪ್ರೊ. ಎಲ್.ಎಂ.ಎಲ್.ಶಾಸ್ತ್ರಿಗಳು ಸಲಹೆಗಾರರಾಗಿ, ಲೇಖನಗಳ ಸಂಗ್ರಾಹಕರಾಗಿ, ಲೇಖನಗಳ ಕರ್ತೃಗಳಾಗಿ ಅತಿ ಹೆಚ್ಚಿನ ಶ್ರಮ ಹಾಗೂ ಕಾಳಜಿ ವಹಿಸಿ ಅಭಿನಂದನಾಗ್ರಂಥವು ಸಮರ್ಪಣೆಗೆ ಯೋಗ್ಯವಾಗುವಂತೆ ಮಾಡಿದುದನ್ನು ನಾವು ಎಂದೂ ಮರೆಯುವಂತಿಲ್ಲ. ಅವರಿಗೆ ನಮ್ಮೆಲ್ಲರ ಅನಂತಾನಂತ ಧನ್ಯವಾದಗಳು.

ಸಂಪಾದಕಮಂಡಳಿಯ ಪ್ರಧಾನ ಸಂಪಾದಕರಾಗಿ ತಮ್ಮ ಭಾಗದ ಕಾರ್ಯವನ್ನು ಬಹು ಶ್ರದ್ಧೆಯಿಂದ ನಿರ್ವಹಿಸಿ, ಒಂದು ಉತ್ತಮ ಲೇಖನವನ್ನೂ ಸೇರ್ಪಡಿಸಿ, ಎಲ್ಲ ರೀತಿಯಲ್ಲಿ ಸಹಕರಿಸಿದ ಶ್ರೀ ಎಲ್.ವಿ.ಸೀತಾರಾಮ್‌ರವರಿಗೆ ಕೃತಜ್ಞತೆಗಳು.

ಅಭಿನಂದನಾಗ್ರಂಥ ಸಂಪಾದಕಮಂಡಳಿಯ ಸದಸ್ಯರಾಗಿ ಶ್ರೀ ಎಲ್.ವಿ. ಸೂರ್ಯನಾರಾಯಣ್, ಶ್ರೀ ಎಲ್.ಕೆ. ಶ್ರೀಪತಿ, ಶ್ರೀ ಎಲ್.ಸಿ. ಆನಂದಮೂರ್ತಿ, ಶ್ರೀ ಬಿ.ಆರ್. ಪದ್ಮನಾಭ್, ಶ್ರೀ ಬಿ.ಸಿ. ಜಗನ್ನಾಥ್ ಹಾಗೂ ಶ್ರೀಮತಿ ತಾರಾ ಪ್ರಸಾದ್‌ರವರು ತಮ್ಮ ಭಾಗದ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡಿ ಗ್ರಂಥವು ಸುಂದರವಾಗಿ ಮೂಡಿಬರಲು ಕಾರಣಕರ್ತರಾಗಿರುತ್ತಾರೆ. ಅವರೆಲ್ಲರಿಗೂ ತುಂಬುಹೃದಯದ ಧನ್ಯವಾದಗಳು.

ಗೌರವಾಧ್ಯಕ್ಷರಾಗಿ ವೇ.ಬ್ರ. ಶ್ರೀ ಕೃಷ್ಣಮೂರ್ತಿಗಳು ತಮ್ಮ ಅನಾರೋಗ್ಯದ ನಡುವೆಯೂ ಈ ಕಾರ್ಯದಲ್ಲಿ ಪೂರ್ಣ ಸಹಕಾರ ಕೊಟ್ಟು ಆಶೀರ್ವದಿಸುತ್ತಾ ಬಂದಿರುತ್ತಾರೆ. ಶ್ರೀಯುತರಿಗೂ ಸಮಿತಿಯ ಪರವಾಗಿ ಅನೇಕಾನೇಕ ಸಾಷ್ಟಾಂಗ ನಮಸ್ಕಾರಗಳು. ಕಾರ್ಯಾಧ್ಯಕ್ಷರಾಗಿ ಡಾ.ಬಿ.ವಿ.ಸುರೇಶ್‌ರವರು ಎಲ್ಲ ರೀತಿಯ ಪ್ರೋತ್ಸಾಹ ಕೊಟ್ಟು, ವೇ. ನರಸಿಂಹಮೂರ್ತಿಗಳ ಮೇಲಿನ ಪೂಜ್ಯಭಾವನೆಗಳಿಗೆ ಸ್ಪಂದಿಸಿರುತ್ತಾರೆ. ಶ್ರೀಯುತರಿಗೂ ಅನಂತ ವಂದನೆಗಳು. ಹಣಸಂಗ್ರಹ ಸಮಿತಿಯ ಸದಸ್ಯ ಬಾಂಧವರೆಲ್ಲರಿಗೂ, ಕೋಶಾಧ್ಯಕ್ಷರಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ರಮೇಶ್‌ರವರಿಗೂ ಹೃದಯ ತುಂಬಿದ ಧನ್ಯವಾದಗಳು.

ವೇ. ಬ್ರ. ಶ್ರೀ ನರಸಿಂಹಮೂರ್ತಿಗಳವರ ಬಗ್ಗೆ ಪುಟ್ಟ ಲೇಖನಗಳನ್ನು ಬರೆದು ಕೊಡುವಂತೆ ಬಂಧುಗಳಲ್ಲಿ ವಿನಂತಿಸಿದಾಗ, ಹಲವರು ಇದಕ್ಕೆ ಸ್ಪಂದಿಸಿ, ವೇ.ಗಳವರ ಮೇಲಿನ ಪೂಜ್ಯ ಭಾವನೆಯಿಂದ ಹಾಗೂ ಶ್ರೀಯುತರ ಸಾಧನೆಯನ್ನೇ ಗಮನದಲ್ಲಿಟ್ಟುಕೊಂಡು ಉತ್ತಮ ಲೇಖನಗಳನ್ನು ತಯಾರಿಸಿ, ಸಕಾಲದಲ್ಲಿ ನಮ್ಮಗಳ ಕೈ ಸೇರುವಂತೆ ಮಾಡಿ, ತಮ್ಮ ಕರ್ತವ್ಯಕ್ಕೆ ಚ್ಯುತಿ ಬಾರದಂತೆ ನಿರ್ವಹಿಸಿರುತ್ತಾರೆ. ಅವರೆಲ್ಲರಿಗೂ ಕೃತಜ್ಞತೆಗಳು. ಸಲಹಾಸಮಿತಿಯ ಕೋರಿಕೆಯ ಮೇರೆಗೆ ನಾಡಿನ ಅನೇಕ ವಿದ್ವಾಂಸರುಗಳು ಅಭಿನಂದನಾಗ್ರಂಥಕ್ಕೆ ಪೂರಕ ವಿಷಯಗಳ ಮೇಲೆ ಅನೇಕ ಅತ್ಯುತ್ತಮ ಲೇಖನಗಳನ್ನು ಬರೆದು ನಮ್ಮೆಲ್ಲರ ಗೌರವಗಳಿಗೆ ಪಾತ್ರರಾಗಿರುತ್ತಾರೆ. ಇಂತಹ ಲೇಖನಗಳನ್ನು ಗ್ರಂಥಕ್ಕೆ ಸೇರ್ಪಡಿಸಿ, ಗ್ರಂಥದ ಮೌಲ್ಯ ಹೆಚ್ಚುವಂತೆ ಮಾಡಿದ ಎಲ್ಲ ವಿದ್ವಾಂಸರಿಗೂ, ಸಾ. ನಮಸ್ಕಾರಗಳೊಂದಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಅಭಿನಂದನಾಗ್ರಂಥವನ್ನು ಅತ್ಯಂತ ಸುಂದರವಾಗಿ, ಅತ್ಯಲ್ಪ ಕಾಲದಲ್ಲೇ ಅತಿ ಕಡಮೆ ವೆಚ್ಚದಲ್ಲಿ ಮುದ್ರಣ ಮಾಡಿಕೊಟ್ಟು ಪೂರ್ಣಪ್ರಮಾಣದ ಸಹಕಾರವನ್ನು ಕೊಡುತ್ತಿರುವ ಬೆಂಗಳೂರಿನ ಗಣನಾಥ್ ಆಫ್‌ಸೆಟ್ ಪ್ರಿಂಟರ್ಸ್ ಮಾಲೀಕರೂ, ಕೌಶಿಕ, ಸಂಕೇತಿ ಸಂಘದ ಕೋಶಾಧ್ಯಕ್ಷರೂ, ಆದ ಶ್ರೀ ಸಿ.ಕೆ. ಮಂಜುನಾಥ್‌ರವರಿಗೂ ಗ್ರಂಥಸಮಿತಿಯ ಪರವಾಗಿ ಅನಂತ ಕೃತಜ್ಞತೆಗಳು.

ಅಭಿನಂದನಾಗ್ರಂಥಕ್ಕೇ ಅಲ್ಲದೆ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳವರ ಹೆಸರಿನಲ್ಲಿ ಶಾಶ್ವತವಾಗಿ ಮಾಡಬಹುದಾದ ಕೈಂಕರ್ಯಕ್ಕೆ ಉದಾರವಾಗಿ ಪೂಜ್ಯಭಾವನೆಯಿಂದ ಧನಸಹಾಯ ಮಾಡುತ್ತಿರುವ ದಾನಿಗಳಿಗೂ ಅನಂತಾನಂತ ಧನ್ಯವಾದಗಳು.

ಲೇಖನಗಳಲ್ಲಿನ ಮುದ್ರಣದೋಷಣಗಳ ತಿದ್ದುಪಡಿಯ ಕಾರ್ಯದಲ್ಲಿ ಸಹಕರಿಸಿದ ಪ್ರೊ. ಎಂ.ಎನ್.ಚಂದ್ರಶೇಖರ್, ಶ್ರೀಮತಿ ಕಾತ್ಯಾಯಿನಿ ಅನಂತ್, ಶ್ರೀ ಎಲ್.ವಿ. ಸತ್ಯಮಾಧವ, ಶ್ರೀ ಎಲ್.ಆರ್. ಸುಬ್ರಹ್ಮಣ್ಯ ಹಾಗೂ ಶ್ರೀ ಬಿ.ಡಿ. ಶ್ಯಾಮಕಿಶೋರ್ ಇವರುಗಳಿಗೆ ಧನ್ಯವಾದಗಳು.

ಗ್ರಂಥರಚನೆಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲ ಮಹನೀಯರಿಗೂ, ಬಂಧು-ಬಾಂಧವರಿಗೂ, ಹಿತೈಷಿಗಳಿಗೂ, ದಾನಿಗಳಿಗೂ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ, ಆದರೆ ಮೊದಲೇ ಪ್ರಸ್ತಾಪಿಸಬಹುದಾದ ವಿಚಾರವೆಂದರೆ, ಪ್ರಚಾರಪ್ರಿಯರಲ್ಲದ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳವರು ನಮ್ಮೆಲ್ಲರ ಕೋರಿಕೆಯನ್ನು ಮನ್ನಿಸಿ, 'ಅಭಿನಂದನಾಗ್ರಂಥ' ಸಮರ್ಪಿಸಲು ಒಪ್ಪಿಗೆ ನೀಡಿದುದೇ ಅಲ್ಲದೆ ಸಂಕ್ಷಿಪ್ತವಾಗಿ ತಮ್ಮ ಆತ್ಮಕಥನವನ್ನೂ ಬರೆದುಕೊಟ್ಟು, ತಮ್ಮ ಕೆಲವು ಲೇಖನಗಳನ್ನು ಈ ಗ್ರಂಥದಲ್ಲಿ ಪ್ರಕಟಿಸಲು ಅನುಮತಿ ನೀಡಿ ಅನುವು ಮಾಡಿಕೊಟ್ಟಿದ್ದಕ್ಕಾಗಿ ಸಾ|| ನಮಸ್ಕಾರಗಳೊಂದಿಗೆ ಅಭಿನಂದನಾ ಸಮಿತಿಯ ಪರವಾಗಿ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

*ಕಾರ್ತಿಕ ಶುದ್ಧ ಬಿದಿಗೆ, ಸೋಮವಾರ* ***ಎಲ್.ಜಿ. ಅನಂತ್***

*ದಿನಾಂಕ : ೨೬.೧೦.೨೦೦೪*

# ೧. ವಿಶ್ವರತ್ನ

*ಪ್ರೊ. ಎ. ವಿ. ಸೂರ್ಯನಾರಾಯಣಸ್ವಾಮಿ*

೧೯೨೪ನೇ ಇಸವಿ. ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ನಾಲ್ಕನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿದ್ದ ಸುಮಾರು ನಲವತ್ತು ವಿದ್ಯಾರ್ಥಿಗಳೆಲ್ಲರನ್ನೂ ಒಟ್ಟಾಗಿ ಒಂದು ದಿನ ಒಂದು ಕಡೆ ಕೂರಿಸಿ, ಮುಖ್ಯೋಪಾಧ್ಯಾಯರು ಕನ್ನಡದಲ್ಲಿ 'ಉಕ್ತಲೇಖನ'ವನ್ನು ಹೇಳಿ ವಿದ್ಯಾರ್ಥಿಗಳಿಂದ ಬರೆಸಿದರು. ನಲವತ್ತು ವಿದ್ಯಾರ್ಥಿಗಳ ಪೈಕಿ, ಎರಡನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿ, ಕನ್ನಡದ 'ಉಕ್ತಲೇಖನ'ವನ್ನು ತಪ್ಪಿಲ್ಲದೆ ಚೆನ್ನಾಗಿ ಬರೆದಿದ್ದರು. ಉಕ್ತಲೇಖನವನ್ನು ನೋಡಿ ಹರ್ಷಪಟ್ಟ ಮುಖ್ಯೋಪಾಧ್ಯಾಯರು, ಚೆನ್ನಾಗಿ 'ಉಕ್ತಲೇಖನ' ಬರೆದಿದ್ದ ಎರಡನೇ ತರಗತಿಯ ಆ ವಿದ್ಯಾರ್ಥಿಗೆ 'ದ್ವಿಪದೋನ್ನತಿ' (ಡಬ್ಬಲ್ ಪ್ರಮೋಶನ್) ಕೊಟ್ಟು ಕನ್ನಡದ ನಾಲ್ಕನೇ ತರಗತಿಗೆ ಸೇರಲು ಅನುಮತಿ ನೀಡಿದರು. ಈ 'ದ್ವಿಪದೋನ್ನತಿ' ಹೊಂದಿ ಕನ್ನಡದ ಎರಡನೇ ತರಗತಿಯಿಂದ ನಾಲ್ಕನೇ ತರಗತಿಗೆ ಸೇರಿದ ವಿದ್ಯಾರ್ಥಿಯೇ, ಈಗ ನಮ್ಮೆಲ್ಲರ ಹಿರಿಯರಾಗಿರುವ ಪೂಜ್ಯ ನರಸಿಂಹಮೂರ್ತಿಗಳು. 'ಬೆಳೆಯುವ ಬೆಳೆ ಸದ್ದು ಮಾಡುವುದಿಲ್ಲ'ವೆಂಬುದು ಗಾದೆ. ಬಾಲ್ಯಾವಸ್ಥೆಯಲ್ಲಿಯೇ, ಸರ್ಕಾರಿ ಕನ್ನಡ ಪ್ರಾಥಮಿಕಶಾಲೆಯ ಪವಿತ್ರ ಆವರಣದಲ್ಲಿ, ತಪ್ಪಿಲ್ಲದೆ ಚೆನ್ನಾಗಿ ಬರೆದ ಕನ್ನಡ ಉಕ್ತಲೇಖನದೊಂದಿಗೆ, ಪೂಜ್ಯನರಸಿಂಹಮೂರ್ತಿಗಳ ಆತ್ಮವಿಕಾಸವಾಗಲು ಪ್ರಾರಂಭ ವಾಯಿತು. ಅನಂತರ ೧೯೨೭ರಲ್ಲಿ ನರಸಿಂಹಮೂರ್ತಿಗಳು ಚಿಕ್ಕಮಗಳೂರಿನ ಇಂಗ್ಲಿಷ್ ಮಾಧ್ಯಮಿಕ ಶಾಲೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಮುಂದೆ ಶೃಂಗೇರಿ, ಧಾರವಾಡ, ಚೆನ್ನೈ ಮತ್ತು ಬೆಂಗಳೂರುಗಳಲ್ಲಿ ಮೂವತ್ತು ವರ್ಷಗಳು ಸಂಸ್ಕೃತ ಭಾಷಾಧ್ಯಯನವನ್ನೂ ನಡೆಸಿ, ಕಡುಕಷ್ಟದ ನಿರಂತರ ತಪಸ್ಸಿನ ಫಲವಾಗಿ, ಸಂಸ್ಕೃತಭಾಷೆಯಲ್ಲಿ ಸಾಹಿತ್ಯ, ಅಲಂಕಾರ, ವೇದಾಂತ, ಮೀಮಾಂಸಾ ಶಾಸ್ತ್ರ ಮತ್ತು ಜ್ಯೋತಿಶ್ಶಾಸ್ತ್ರಗಳಲ್ಲಿ ವಿದ್ವತ್ ಪದವಿಗಳಿಸಿ ಆತ್ಮವಂತ ಪಂಡಿತೋತ್ತಮರಾದರು.

ನಿಜವಾದ ವಿದ್ಯಾರ್ಥಿ ತನ್ನ ಇಷ್ಟದ ವಿದ್ಯೆಯನ್ನು ಸಾಧನೆ ಮಾಡುವಾಗ ಅನುಭವಿಸುವ ಕಷ್ಟನಷ್ಟಗಳಿಂದ, ಭವಿಷ್ಯದ ದಿನಗಳಲ್ಲಿ ಶಿಷ್ಟ ಮತ್ತು ವಿಶಿಷ್ಟ ವ್ಯಕ್ತಿಯಾಗಿ ಕಂಗೊಳಿಸುತ್ತಾನಲ್ಲವೆ ? ಹಾಗೆಯೇ ನಮ್ಮ ಪೂಜ್ಯ ನರಸಿಂಹಮೂರ್ತಿಗಳು, ತಮ್ಮ ವ್ಯಾಸಂಗದ ತಪಸ್ಸಿನ ದಿನಗಳಲ್ಲಿ ಅನುಭವಿಸಿದ ಕಷ್ಟನಷ್ಟಗಳಿಂದ, ಮುಂದೆ ಶಿಷ್ಟ ಮತ್ತು ವಿಶಿಷ್ಟ ವ್ಯಕ್ತಿತ್ವವನ್ನು ಪಡೆದ ಮಹಾಪುರುಷರಾದರು.

ಹಿರಿಯರ ಅನುಭವವಾಣಿಯೊಂದು ಹೀಗಿದೆ:

**ಓದು ಸಾರ್ಥಕ, ಓದಿದುದೆಲ್ಲ ತಿಳಿದರೆ**
**ತಿಳಿವು ಸಾರ್ಥಕ, ತಿಳಿದಂತೆ ಬದುಕಿದರೆ**
**ಬದುಕು ಸಾರ್ಥಕ, ಬದುಕಿನಲ್ಲಿ ಬೆಳಗಿದರೆ**

ಓದು ಸಾರ್ಥಕವಾಗುವುದು ಯಾವುದಾದರೂ ಒಂದು ಗ್ರಂಥವನ್ನು ಓದಿದವರು ಆ ಗ್ರಂಥದಲ್ಲಿ ಹೇಳಿರುವ ವಿಷಯವನ್ನು ಚೆನ್ನಾಗಿ ಮನಸ್ಸಿನಲ್ಲಿ ತಿಳಿದಾಗ ಮಾತ್ರ. ಆ ತಿಳಿವು ಸಾರ್ಥಕವಾಗುವುದು, ತಾವು ಓದಿದ ಗ್ರಂಥದಿಂದ ತಿಳಿದ ಜೀವನಮೌಲ್ಯಗಳನ್ನು ತಮ್ಮ ಬಾಳಿನಲ್ಲಿ ಅಳವಡಿಸಿಕೊಂಡು ಬದುಕಿದಾಗ ಮಾತ್ರ. ಆ ಬದುಕು ಸಾರ್ಥಕವಾಗುವುದು, ತಾವು ಅಳವಡಿಸಿಕೊಂಡ ಜೀವನ ಮೌಲ್ಯಗಳನ್ನು ಎಂಥ ಕಠಿಣ ಸಂದರ್ಭದಲ್ಲಿಯೂ ಬಿಡದೆ ತಮ್ಮ ಬಾಳನ್ನು ಮೌಲ್ಯಗಳ ಆಚರಣೆಯಿಂದ ಬೆಳಗಿಸಿಕೊಂಡಾಗ ಮಾತ್ರ. ಈ ಅನುಭವವಾಣಿಯಂತೆ ನಮ್ಮ ಪೂಜ್ಯ ನರಸಿಂಹಮೂರ್ತಿಗಳು, ತಮ್ಮ ಓದಿನಿಂದ ಮತ್ತು ಆಚಾರ್ಯರಿಂದ ತಿಳಿದ ಜೀವನ ಮೌಲ್ಯಗಳನ್ನು, ಬಾಳಿನುದ್ದಕ್ಕೂ ಅಳವಡಿಸಿಕೊಂಡಿರುತ್ತಾರೆ; ಬದುಕಿನಲ್ಲಿ ಈಗಲೂ ತುಂಬು ಬೆಳಕನ್ನು ಕಾಣುತ್ತಿರುವ ಧರ್ಮವಂತರಾಗಿರುತ್ತಾರೆ.

ನರಸಿಂಹಮೂರ್ತಿಗಳು ಪ್ರೀತಿವಾತ್ಸಲ್ಯಗಳನ್ನು ಸಾಕ್ಷಾತ್ಕರಿಸಿ ಕೊಂಡಿರುವ ಮಹಾಮಹಿಮರು.

ಆತ್ಮವಂತರಾದ ನರಸಿಂಹಮೂರ್ತಿಗಳು ತೋರುವ ಅಪೂರ್ವಪ್ರೀತಿಯಲ್ಲಿ, ಜನರ ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ತಮಗೆ ತಿಳಿಯದಂತೆ ಮರೆಯಾಗಿರಬಹುದಾದ ದರ್ಪ

ಮತ್ತು ಗರ್ವವು ಕರಗಿ ನೀರಾಗಿ ಹೋಗುವುದು, ಮತ್ತು ಮನಸ್ಸು ನಿರ್ಮಲವಾಗುವುದು. ಸಹನೆಯಿಂದ ಮಾತ್ರವೇ ಸಂಸಾರದಲ್ಲಿ ಸದಾ ಸಂತೋಷ ಪ್ರಾಪ್ತವಾಗುತ್ತದೆಂಬುದು ನಮ್ಮ ಮೂರ್ತಿಗಳ ಬಾಳಿನಿಂದ ನಾವು ಅರಿಯಬಹುದಾದ ಅಪೂರ್ವ ಸಂಗತಿಯಾಗಿದೆ. ಅವರ ನಾಲಗೆಯ ಮೇಲಿನ ಮಾತಿನ ಮಾಧುರ್ಯ, ಅವರ ಹೃದಯದಲ್ಲಿರುವ ಶುಚಿತ್ವ, ಅದರ ಜತೆಗೆ ಮನಸ್ಸಿನಲ್ಲಿರುವ ಶಾಂತತೆಗಳು, ಅವರನ್ನು ಸಮಾಜದಲ್ಲಿ ದೊಡ್ಡ ವ್ಯಕ್ತಿಯನ್ನಾಗಿ ಮಾಡಿವೆ. ನರಸಿಂಹಮೂರ್ತಿಗಳ ವಾಣಿಯಲ್ಲಿ, ವಾಗಾಡಂಬರದ ಸಿಡಿಲು ಗುಡುಗಿನ ಆರ್ಭಟವಿಲ್ಲದೆ, ಗಂಗಾನದಿಯ ಶಾಂತ ಸಲಿಲದ ನಾದಮಾಧುರ್ಯವಿದೆ. ಭಗವಂತನ ಪ್ರತಿರೂಪವೇ ಈ ವ್ಯಕ್ತಪ್ರಪಂಚವೆಂದು ತಿಳಿದಿರುವ ಮೂರ್ತಿಗಳು, ಇಲ್ಲಿ ಕಾಣಿಸುವ


**ಅಲ್ಪದೃಶ್ಯವಾಗಲಿ**
**ಸ್ವಲ್ಪ ದೃಶ್ಯವಾಗಲಿ**
**ಕಲ್ಪದೃಶ್ಯವಾಗಲಿ ಮತ್ತು**
**ಶಿಲ್ಪ ದೃಶ್ಯವಾಗಲಿ**

ನಮ್ಮ ಸಂಕಲ್ಪವನ್ನು ವಿಕಲ್ಪ ಮಾಡದೆ, ಅವೆಲ್ಲವೂ ಪರಮಾನಂದದ ಪರಿಕಲ್ಪಕ್ಕೆ ಕಾರಣವಾಗುವ ಬ್ರಹ್ಮದೃಶ್ಯವೆಂದು ಭಾವಿಸಿ, ಅವಕ್ಕೆ ಗೊನೆ ಬಿಟ್ಟ ಬಾಳೆಯಂತೆ, ತೆನೆಬಿಟ್ಟ ಬತ್ತದಂತೆ ಶಿರಬಾಗಿ ವಂದಿಸಿ, ಅದರಿಂದ ಪಡೆದ ಅನುಭವದ ತಂಪು ಕಂಪುಗಳನ್ನು ತಮ್ಮ ಇಂಪಿನ ವಾಣಿಯಲ್ಲಿ ಸಹೃದಯರಿಗೆ ಸಂತೋಷದಿಂದ ಸಮರ್ಪಿಸುತ್ತಾರೆ. ಅಸೂಯೆ ಮತ್ತು ಅಸಮಾಧಾನದ ಪರಿಚಯವಿಲ್ಲದ ಮಹಾನ್ ವ್ಯಕ್ತಿಗಳೆಂದರೆ ನಮ್ಮ ಪೂಜ್ಯ ನರಸಿಂಹಮೂರ್ತಿಗಳು. ಸದಾ ಎಳೆ ಬಿಸಿಲಿನ ಸಂತೃಪ್ತಿಯ ಹೂನಗೆಯನ್ನು ಬೀರುತ್ತಿರುವ ನಮ್ಮ ಮೂರ್ತಿಗಳ ವದನಮಂಡಲವು, ದೇವಸ್ಥಾನದ ದೇವರಿಗೆ ಎತ್ತಿದ ಮಂಗಳಾರತಿಯ ಶಾಂತ ಬೆಳಕಿನಂತೆ ಬೆಳಗುತ್ತದೆ. ಸರ್ವರನ್ನೂ ಬಹು ಗೌರವಾದರಗಳಿಂದ ಕಾಣುವ ಹೃದಯ ಸಂಪನ್ನತೆಯನ್ನು ನಮ್ಮ ಮೂರ್ತಿಗಳು ಹೊಂದಿರುತ್ತಾರೆ.

ಹಣ ಮತ್ತು ಕೀರ್ತಿಯ ಆಸೆಯಿಲ್ಲದ ನರಸಿಂಹಮೂರ್ತಿಗಳು, ಪ್ರೀತಿಯಿಂದ ಆಹ್ವಾನಿಸಿದ ಎಲ್ಲರ ಮನೆಗಳಿಗೂ ಹೋಗಿ, ಯಾವ ಆಲಸ್ಯವೂ ಇಲ್ಲದೆ ಕ್ರಮಬದ್ಧವಾಗಿ ಪೌರೋಹಿತ್ಯವನ್ನು ಮಾಡುತ್ತಿದ್ದಾರೆ. ಸ್ತ್ರೀಯರಿಗೆ ವೇದಾಧಿಕಾರವಿದೆಯೆಂದು ಮೂರ್ತಿಗಳು ಒಪ್ಪುತ್ತಾರೆ. ಮೂರ್ತಿಗಳು ಆಸೆಯ ಇಳಿಜಾರಿನಲ್ಲಿ ಜಾರದೆ, ಕಷ್ಟಗಳ ಕಡಿದಾದ ಬೆಟ್ಟವನ್ನು ಕಂಡು ಬೆದರದೆ, ತಮ್ಮ ಅಂತರಂಗವನ್ನು ಅಸಮಾಧಾನದ ಅಗ್ನಿಪರ್ವತವನ್ನಾಗಿ ಮಾಡಿಕೊಳ್ಳದೆ, ಸದಾಕಾಲವೂ ಹಸನ್ಮುಖಿಗಳಾಗಿದ್ದು, ಅಕ್ಕಪಕ್ಕದವರು ತೋರುವ ಅಕ್ಕರೆಯೇ ಅಷ್ಟೈಶ್ವರ್ಯವೆಂದು ಭಾವಿಸಿ, ಶಾಶ್ವತ ಚೈತನ್ಯದ ಚಿಂತನದಿಂದ ತಮ್ಮ ಆತ್ಮದರ್ಶನ ಮಾಡಿಕೊಳ್ಳುತ್ತಿರುವ ಮಹಾದಾರ್ಶನಿಕರಾಗಿದ್ದಾರೆ. ಈ ಪ್ರಪಂಚಕ್ಕೆ ಗುರು ಯಾರು? ಎಂಬುದನ್ನು ಡಿ.ವಿ. ಗುಂಡಪ್ಪನವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಹೀಗೆ ವರ್ಣಿಸಿದ್ದಾರೆ:

**ಗರ್ವಪಡದುಪಕಾರಿ, ದರ್ಪಬಿಟ್ಟಧಿಕಾರಿ**
**ನಿರ್ವಿಕಾರದ ನಯನದಿಂ ನೋಳ್ಪುದಾರಿ**
**ಸರ್ವಧರ್ಮಾಧಾರಿ, ನಿರ್ವಾಣಸಂಚಾರಿ**
**ಉರ್ವರೆಗೆ ಗುರುವವನು - ಮಂಕುತಿಮ್ಮ**

ಸಮಾಜಕ್ಕೆ ಉಪಕಾರ ಮಾಡಿ ಯಾರು ಗರ್ವಪಡುವುದಿಲ್ಲವೋ, ಅಧಿಕಾರದಲ್ಲಿದ್ದೂ ಯಾರು ತಮ್ಮ ಅಧಿಕಾರದ ದರ್ಪವನ್ನು ಬಿಟ್ಟಿರುತ್ತಾರೋ, ಉದಾರ ಮನಸ್ಸಿನ ಕಣ್ಣಿನಿಂದ ಈ ಪ್ರಪಂಚವನ್ನು ಯಾರು ನೋಡುತ್ತಾರೋ, ತಮ್ಮ ಆತ್ಮವಿಕಾಸಕ್ಕೆ ಸರ್ವಧರ್ಮಗಳಲ್ಲಿಯೂ ದೊರೆಯುವ ಸದ್ವಿಚಾರಗಳನ್ನು ತಿಳಿದು ಯಾರು ಅದನ್ನು ಅನುಸರಿಸುತ್ತಾರೋ, ಅರಿಷಡ್ವರ್ಗಗಳನ್ನು ದೂರಮಾಡಿ ಈ ಲೋಕಸಂಚಾರದ ಮೂಲಕ ಯಾರು ತಮ್ಮ ಆತ್ಮದರ್ಶನ ಮಾಡಿಕೊಳ್ಳುತ್ತಾರೋ, ಅವರೇ ಈ ಜಗದ ಗುರುಗಳು.



*28. ಸರಳಜೀವಿ, ಪರೋಪಕಾರಿ, ಸಾತ್ತ್ವಿಕರಾದ ವೇದರತ್ನ ನರಸಿಂಹಮೂರ್ತಿಶಾಸ್ತ್ರಿಗಳು*

'ಮಂಕುತಿಮ್ಮನ ಕಗ್ಗ'ದಲ್ಲಿ ಗುರುಗಳ ಬಗ್ಗೆ ಹೇಳಿರುವ ಈ ಎಲ್ಲಾ ಶ್ರೇಷ್ಠ ಗುಣಗಳನ್ನು ಹೊಂದಿರುವ ನಮ್ಮ ಪೂಜ್ಯ ನರಸಿಂಹಮೂರ್ತಿಗಳು, ನಮ್ಮೆಲ್ಲರ ಅಪರೂಪದ ಗುರುವರ್ಯರಾಗಿರುತ್ತಾರೆ. ನಮ್ಮ ಕಣ್ಮುಂದೆ ಕಾಣಿಸುತ್ತಿರುವ ಹಿರಿಯರನ್ನು ಮರೆತು ಬಾಳುವುದು ನಿಜವಾದ ಬಾಳಲ್ಲ, ಅವರನ್ನು ಅರಿತು ಬಾಳುವುದೇ ನಿಜವಾದ ಬಾಳು. ಪರಮಾತ್ಮ ನಮಗೆ ವರನೀಡಲು ಯಾವ ರೂಪಿನಿಂದಲಾದರೂ ಬರಬಹುದು. ವರ ನೀಡಿ ಆಶೀರ್ವಾದ ಮಾಡಲು ಬಂದವರು ಮಹಾಪುರುಷರೆಂದು ತಿಳಿಯುವ ಸಂಸ್ಕಾರ ನಮಗಿರಬೇಕು ಅಷ್ಟೆ.

ಡಿ.ವಿ.ಜಿ. ಅವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ

**ಸಾಮಾನ್ಯರೂಪದಲಿ, ಸಂಸಾರಿ ವೇಷದಲಿ**
**ಸ್ವಾಮಿ ನಿನ್ನೆಡೆಗೆ ಬರಬಹುದು ವರನೀಡಿ**
**ಮೈಮೆ ಕಾಂಬೊಡೆ ನಿನಗೆ ಸಂಸ್ಕಾರವಿರಬೇಕು**
**ತಾಮಸಿಗೆ ವರವೆಲ್ಲಿ? - ಮಂಕುತಿಮ್ಮ**


ಎಂದು ಹೇಳಿರುವಂತೆ ನಮ್ಮ ನರಸಿಂಹಮೂರ್ತಿಗಳು ನಮ್ಮೆಲ್ಲರನ್ನೂ ಹರಸಲು ಧರೆಗಿಳಿದು ಬಂದ ದೈವಪುರುಷರಾಗಿದ್ದಾರೆ. ನಮ್ಮ ಕಣ್ಮುಂದೆ ತವನಿಧಿಯಂತೆ ಕಂಗೊಳಿಸುತ್ತಿರುವ ಪೂಜ್ಯ ನರಸಿಂಹಮೂರ್ತಿಗಳ ಸನ್ನಿಧಿಯಲ್ಲಿ ನಮ್ಮ ಅಂತರಂಗದ ಕಾಮಕ್ರೋಧಗಳ ಕುದಿಯನ್ನು ಕಳೆದುಕೊಂಡರೆ, ನಾವು ಬ್ರಹ್ಮಾನಂದದ ತುದಿಗೇರಿ ನಮ್ಮ ಬಾಳು ಸಾರ್ಥಕವಾಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ನಮ್ಮ ನರಸಿಂಹಮೂರ್ತಿಗಳು ನಿಜವಾದ ಸಾರಥಿಗಳು, ಯಾರಿಗೆ? ವೇದಮಾತಾ ಭಾರತೀ ತೇರಿಗೆ. ತಮ್ಮ ವೇದಘೋಷದ ಮಹಾ ಮಂಗಳಾರತಿಯನ್ನು ವಿಶ್ವದ ತೇರನ್ನು ಅಲಂಕರಿಸಿರುವ ವೇದಮಾತಾ ಭಾರತೀದೇವಿಯ ವದನಾರವಿಂದಕ್ಕೆ ಎತ್ತಿ, ಅವಳ ಕೀರುತಿ ಆಗಸದ ಪೂರ್ತಿ ಬೆಳಗಲು, ನಮ್ಮ ಪೂಜ್ಯ ಮೂರ್ತಿ, ವೇದಮಾತಾ ಭಾರತೀ ದೇವಿಯ ತೇರಿಗೆ ಮಹಾಸಾರಥಿಯಾಗಿದ್ದಾರೆಂದರೆ ತಪ್ಪಾಗುವುದಿಲ್ಲ

## ೨. ವಿದ್ಯಾಸಾಗರ *

*ಬಸವಾನಿ ರಾಮಶರ್ಮಾ*

ಪೂಜ್ಯ ವಿದ್ಯಾಸಾಗರ, ವಿದ್ವಾನ್ ಲಿಂಗದಹಳ್ಳಿ ಎಸ್.ನರಸಿಂಹಮೂರ್ತಿಗಳವರು ರಾಷ್ಟ್ರಮಟ್ಟದ ಸಂಸ್ಕೃತ ಪಂಡಿತರಲ್ಲಿ ಅಗ್ರಗಣ್ಯರು. ಅವರು ಇಂಗ್ಲಿಷ್, ಕನ್ನಡ, ತಮಿಳು, ಹಿಂದಿ ಭಾಷೆಗಳನ್ನು ಬಲ್ಲವರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲಿಯೂ ಪ್ರಭುತ್ವವುಳ್ಳವರು. ಸಂಸ್ಕೃತ ಸಾಹಿತ್ಯ, ಅಲಂಕಾರ, ವ್ಯಾಕರಣ, ವೇದಾಂತ ಹಾಗೂ ಮೀಮಾಂಸಾ ವಿಷಯಗಳಲ್ಲಿ ಪದವಿ ಪಡೆದವರು. ಜ್ಯೋತಿಶ್ಶಾಸ್ತ್ರ ಹಾಗೂ



**29.** *ಗ್ರಂಥ ಭಂಡಾರಿ ಶಾಸ್ತ್ರಿಗಳು*

* *ವಿದ್ಯಾಸಾಗರ, ವಿದ್ವಾನ್ ಲಿಂಗದಹಳ್ಳಿ ಎಸ್. ನರಸಿಂಹಮೂರ್ತಿ ಅವರಿಗೆ ತಾ. ೧೬.೫.೯೩ರಂದು ಲಿಂಗದಹಳ್ಳಿಯಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಮಾಡಿದ ಅಭಿನಂದನಾ ಭಾಷಣ.*

***ವ್ಯಕ್ತಿತ್ವ ಪರಿಚಯ :*** *ವಿದ್ಯಾಭೂಷಣ, ವೇದರತ್ನ, ವ್ಯಾಖ್ಯಾನ ಕೇಸರಿ ಬಸವಾನಿ ರಾಮಶರ್ಮಾ* ***ನಿರೂಪಣೆ :*** *ಪ್ರೊ. ಎಲ್.ಎಂ.ಎಲ್.ಶಾಸ್ತ್ರೀ*


ಸ್ಮಾರ್ತ ಪ್ರಯೋಗಗಳಲ್ಲಿಯೂ ಪರಿಣತರಾಗಿ **ಶಾಸ್ತ್ರನಿಧಿ** ಗಳೆನಿಸಿದ್ದಾರೆ.

ಅಲಂಕಾರಶಾಸ್ತ್ರ ಅವರ ಮೆಚ್ಚಿನ ವಿಷಯ. ಈ ವಿಷಯದಲ್ಲಿ ಅವರ ಪಾಂಡಿತ್ಯಕ್ಕೊಂದು ನಿದರ್ಶನ ನೀಡಬಹುದು. ಪಂಡಿತರಾಜ ಜಗನ್ನಾಥನ ರಸಗಂಗಾಧರ ಕೃತಿಯ ಎರಡು ಆನನಗಳು ದೊರೆತಿವೆ. ಇನ್ನು ಮೂರು ಸಿಕ್ಕಿಲ್ಲ. ಶ್ರೀಯುತರು ವಿದ್ಯಾಭ್ಯಾಸ ಮುಗಿಸಿ ಬಂದ ತಾರುಣ್ಯದಲ್ಲಿ ಅವನ್ನು ತಾವು ಬರೆಯುವುದಾಗಿ ಹೇಳುತ್ತಲಿದ್ದರು. ಸಂಸಾರತಾಪತ್ರಯಗಳಿಂದ ಈ ಕೆಲಸ ಆಗಲಿಲ್ಲ. ಆದರೆ ಹಾಗೆ ಬರೆಯಬಲ್ಲ, ಬರೆಯುವೆನೆಂದು ಧೈರ್ಯವಾಗಿ ಹೇಳಬಲ್ಲ, ಇನ್ನೊಬ್ಬ ಪಂಡಿತರನ್ನು ಭರತಖಂಡದಲ್ಲಿ ನಾನು ಇಲ್ಲಿಯವರಿಗೆ ಕಂಡಿಲ್ಲ, ಕೇಳಿಲ್ಲ. ಅವರು ರಸಗಂಗಾಧರ ರಚಿಸಲೆತ್ನಿಸದಿದ್ದುದು ಸಾಹಿತ್ಯಜಗತ್ತಿಗಾದ ಅತಿ ದೊಡ್ಡ ನಷ್ಟವೆನ್ನಬಹುದು.

ವ್ಯಾಕರಣಶಾಸ್ತ್ರ ಸಾಮಾನ್ಯರಿಗೆ ಕಬ್ಬಿಣದ ಕಡಲೆ. ಆದರೆ ಶ್ರೀಯುತರು ಅದನ್ನು 'ಆನಂದಸಾಗರ' ಎಂದು ಕರೆಯುತ್ತಿದ್ದರು. ಶೃಂಗೇರಿಯ ಅಭಿನವ ವಿದ್ಯಾತೀರ್ಥ ಸ್ವಾಮೀಜಿಯವರು **ನರಸಿಂಹಮೂರ್ತಿಯವರಂತೆ ವ್ಯಾಕರಣ ಹೇಳಬಲ್ಲವರಾರು?** ಎಂದು ಪ್ರಶಂಸಿಸುತ್ತಿದ್ದರು. ಅವರ ಸಹಾಧ್ಯಾಯಿಯಾದ ಓಣೇಕೆರೆ ನರಸಿಂಹಮೂರ್ತಿಯವರನ್ನು ಸ್ವಾಮೀಜಿಯವರು **ಅಪೂರ್ವೋಽಯಂ ವಿದ್ಯಾರ್ಥೀ** ಎಂದು ಪ್ರಶಂಸಿಸಿದ್ದರಂತೆ. ಈ ಮೂರ್ತಿದ್ವಯರಿಗೆ ಮುಂದೆ ಸ್ವಾಮೀಜಿಯವರೇ ಪಾಠ ಹೇಳಲು ನಿಯುಕ್ತರಾದರು. ಅವರಲ್ಲಿ, ಒಳ್ಳೆಯ ಶಿಷ್ಯರಿಗೆ ಕಲಿಸುವುದರಿಂದ ವಿದ್ಯೆ ಬೆಳೆಯಲಿ ಎಂಬ ಉದ್ದೇಶವಿದ್ದಿತು.

ಪೂಜ್ಯರು ಬೆಂಗಳೂರು, ಧಾರವಾಡ ಮತ್ತು ಶೃಂಗೇರಿಗಳ ಮಹಾಪಾಠಶಾಲೆಗಳಲ್ಲಿ ಕಲಿತರು. ಎಂಥ ಕಠಿಣ ಪಠ್ಯಗ್ರಂಥಗಳನ್ನೂ ಒಂದೆರಡು ಬಾರಿಗಿಂತ ಹೆಚ್ಚಾಗಿ ಓದಿದವರಲ್ಲ. ಅಧ್ಯಾಪಕರು **'ನರಸಿಂಹಮೂರ್ತಿ ಬಿದ್ರಪ್ಪ, ಏಕಸಂಧಿಗ್ರಾಹಿ'** ಎನ್ನುತ್ತಿದ್ದರಂತೆ. ವೇದ ಕಲಿಯಲು ಹತ್ತಾರು ಬಾರಿ ಗಟ್ಟಿಯಾಗಿ ಹೇಳಬೇಕಾಗುತ್ತದೆ. ಆದರೆ ಅವರು ಕಿವಿಯಿಂದ ಕೇಳಿ ಅಥವಾ ಒಂದು ಬಾರಿ ಮೌನವಾಗಿ ಓದಿಯೇ ಅಭ್ಯಾಸ ಮಾಡಿದವರು. ಬೆಂಗಳೂರಿನಲ್ಲಿ ಶ್ರೀ ರಾಮ ಚಂದ್ರಶಾಸ್ತ್ರಿಗಳು ಸೂತ್ರಭಾಷ್ಯ ಪಾಠ ಹೇಳುವಾಗ ಉಳಿದವರು ಬಹು ಕ್ಲಿಷ್ಟವೆಂದು ಗೋಳಾಡುವಾಗ, ಇವರು 'ಅದೇನು ಮಹಾ!' ಅಂತ ಬೇರೆ ಪದ್ಯವನ್ನು ಅವಲೋಕಿಸುತ್ತಿದ್ದು ಅಂದೇ ಅದನ್ನು ಒಪ್ಪಿಸುತ್ತಿದ್ದರಂತೆ. ಯಾವುದೇ ಕಠಿಣ ಗ್ರಂಥವಾಗಲಿ ಎರಡು ಬಾರಿ ಓದುವುದೆಂಬುದಿಲ್ಲ. ಈಗಲೂ ಮನಸ್ಸು ಮಾಡಿದರೆ ಅಷ್ಟಾವಧಾನ, ಶತಾವಧಾನ ಮಾಡಬಲ್ಲವರು. ಹೀಗೆ ಓದುವ ಕಾಲದಲ್ಲಿ ಉಪಾಧ್ಯಾಯರ, ಸಹಧ್ಯಾಯಿಗಳೆಲ್ಲರ ಪ್ರೀತಿ ಗೌರವ ಪಡೆದವರು. ಜ್ಞಾಪಕಶಕ್ತಿಯಲ್ಲಿ ಅವರಿಗೆ ಸರಿಸಾಟಿ ಇರಲಿಲ್ಲ.

ಓದುವ ಕಾಲದಲ್ಲಿ ಆಶುಕವಿತ್ವ (ಸಂಸ್ಕೃತ ಭಾಷೆಯಲ್ಲಿ) ಮಾಡುವುದು ಅವರ ಹವ್ಯಾಸವಾಗಿತ್ತು. ಇಪ್ಪತ್ತು-ಮೂವತ್ತು ಲಘು ಕಾವ್ಯಗಳನ್ನು ಬರೆದಿದ್ದಾರೆ. ಅವು ಪ್ರಕಟವಾಗಬೇಕಾಗಿದೆ. ಬೆಂಗಳೂರು



***30. ಗ್ರಂಥ ಶ್ರೀಮಂತ***

ವಿಶ್ವವಿದ್ಯಾಲಯ ಒಮ್ಮೆ **ಭಾರತ ಭಾಗ್ಯ ವಿಧಾತಾ** ಶೀರ್ಷಿಕೆಯಲ್ಲಿ ಸಂಸ್ಕೃತದಲ್ಲಿ ಕಾವ್ಯ ಬರೆಸಬೇಕೆಂದು ಆಶಿಸಿದಾಗ ಅವರು ಒಂದು ಗಂಟೆಯಲ್ಲಿ ಸಿದ್ಧಪಡಿಸಿಕೊಟ್ಟರಂತೆ.

ಓದುವ ಕಾಲದಲ್ಲಿ ಯಾರೂ ಸಂಸ್ಕೃತದಲ್ಲಿ ಸಂಭಾಷಣೆ ಮಾಡುತ್ತಿರಲಿಲ್ಲ. ಆದರೆ ಶ್ರೀಯುತರು ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು. ಚಿಕ್ಕ ನುಡಿಗಳಲ್ಲಿ ಅಥವಾ ಸಮಾಸಯುಕ್ತ ಸುದೀರ್ಘ ವಾಕ್ಯಗಳಲ್ಲಿ ಬೇಕಾದರೂ ಉಪನ್ಯಾಸ ಮಾಡಬಲ್ಲರು. ಸಂಸ್ಕೃತಭಾಷೆಯ ಮೇಲಿನ ಅವರ ಪಾಂಡಿತ್ಯಶಕ್ತಿಗೆ ಒಂದು ಉದಾಹರಣೆ: ಒಮ್ಮೆ ತಮಿಳುನಾಡಿನಲ್ಲಿ ವಿಶೇಷ ವ್ಯಾಸಂಗಕ್ಕಾಗಿ

೨೫೦.೦೦ ರೂ. ವಿದ್ಯಾರ್ಥಿ ವೇತನಕ್ಕಾಗಿ ಸಂಸ್ಕೃತದಲ್ಲಿ ಒಂದು ಅರ್ಜಿ ಬರೆದರು. ಆದರೆ ಅಂಚೆಗೆ ಹಾಕಲಿಲ್ಲ. ಒಂದು ತಿಂಗಳನಂತರ *ಈ* ಕಾಗದ ವಿದ್ವಾನ್ ಮತ್ತೂರು ರಾಮಭದ್ರಶಾಸ್ತ್ರಿಗಳಿಗೆ ಸಿಕ್ಕಿತು. ಯಾರು ಬರೆದಿದ್ದೆಂದು ಅಲ್ಲಿ ಉಲ್ಲೇಖವಿರಲಿಲ್ಲ. ಇಷ್ಟು ಸುಂದರ ಭಾಷೆಯಲ್ಲಿ ಬರೆದ ವ್ಯಕ್ತಿಯನ್ನು ಒಮ್ಮೆ ನೋಡುವುದು ಹುಟ್ಟಿದ್ದಕ್ಕೆ ಸಾರ್ಥಕವೆಂದು ತಿಳಿದು ಭೇಟಿಗಾಗಿ ಹಾತೊರೆದರಂತೆ. ವಿಚಾರಿಸಲಾಗಿ ಆ ವ್ಯಕ್ತಿ ತಮ್ಮ ಮಿತ್ರರು ಎಂದು ತಿಳಿದಾಗ ವಿಸ್ಮಯ ಸೀಮಾತೀತ.

ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳು ರಚಿಸಿದ 'ವಿವೇಕ ಚೂಡಾಮಣಿ' ಕೃತಿಯ ಸಂಸ್ಕೃತ ವ್ಯಾಖ್ಯಾನದ ಕರಡು ಪ್ರತಿಯನ್ನು ನೋಡಿ ಶುದ್ಧಪ್ರತಿಯನ್ನು ಸಿದ್ಧಪಡಿಸಿಕೊಟ್ಟರು. ಅವರ ವಿವಾಹ ನಿಶ್ಚಯವಾದ ಸುದ್ದಿ ಕೇಳಿದಾಗ ಗುರುಗಳು ಕರೆಸಿ ಆಶೀರ್ವದಿಸಿ ಅನುಗ್ರಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಒಮ್ಮೆ ಶ್ರೀಮದಭಿನವ ವಿದ್ಯಾತೀರ್ಥ ಸ್ವಾಮಿಗಳು ಮತ್ತೂರು ಅಗ್ರಹಾರಕ್ಕೆ ಭೇಟಿ ನೀಡಿದ ಸಂದರ್ಭ. ಬೃಹತ್ ಸಭೆ. ಮತ್ತೂರು-ಹೊಸಹಳ್ಳಿಯ ಎಲ್ಲಾ ವಿದ್ವಾಂಸರೂ ಕಲೆತಿದ್ದಾರೆ. ಗುರುಗಳಿಗೆ ಎಲ್ಲರ ಪರಿಚಯ ಮಾಡಿಕೊಡಲಾಯಿತು. ಆದರೆ ಗುರುಗಳು ಯಾರ ಬಗ್ಗೆಯೂ ಒಂದೂ ಮಾತನಾಡಲಿಲ್ಲ. ಆದರೆ "ಲಿಂಗದಹಳ್ಳಿ ನರಸಿಂಹಮೂರ್ತಿಯವರಂತೆ ವ್ಯಾಕರಣ ತಿಳಿದವರು ಯಾರಿದ್ದಾರೆ?!" ಎಂದು ಸ್ವಾಮಿಗಳು ಹೇಳಿ ಎಲ್ಲರನ್ನೂ ಚಕಿತಗೊಳಿಸಿದರು. ಶ್ರೀಯುತರ ಪಾಂಡಿತ್ಯಕ್ಕೆ ಇದಕ್ಕಿಂತ ಬೇರೆ ಯೋಗ್ಯತಾಪತ್ರ ಬೇಕೆ? ಶೃಂಗೇರಿಯ *ಈ*ಗಿನ ಭಾರತೀತೀರ್ಥಸ್ವಾಮಿಗಳು ಕೂಡ ಕರೆಸಿ ಅನುಗ್ರಹಿಸಿದ್ದಾರೆ. ಹೀಗೆ ಶೃಂಗೇರಿಯ ಮೂವರು ಜಗದ್ಗುರುಗಳ ಕೃಪೆಗೆ ಶ್ರೀಯುತರು ಪಾತ್ರರಾಗಿರುವುದು ಹೆಮ್ಮೆಯ ಸಂಗತಿಯಾಗಿದೆ.

ವಿದ್ಯಾಭ್ಯಾಸಕಾಲದಲ್ಲಿ ಶೃಂಗೇರಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಹರಿಹರಪುರ ಮಠದ ಶ್ರೀಗಳವರಿಗೂ, ಶಕಟಪುರಿ ಮಠದ ಶ್ರೀಗಳವರಿಗೂ ಅವರು 'ಚಿಂತನೆ' ಹೇಳುತ್ತಿದ್ದರು. ಶಕಟಪುರಿ ಮಠವು ಉತ್ತರದ ಶ್ರೀ ಜಗದ್ಗುರು ಶ್ರೀ ಶ್ರೀ ತೋಟಕಾಚಾರ್ಯ ಸಂಸ್ಥಾನದ ಶಾಖೆಯಾಗಿದ್ದು ತಮಿಳುನಾಡಿನಲ್ಲಿ ಅಸಂಖ್ಯಾತ ಭಕ್ತರನ್ನು ಹೊಂದಿದೆ. ಅಲ್ಲಿನ ಮಠಾಧೀಶ ಶ್ರೀ ರಾಮಚಂದ್ರ ಭಾರತಿ ಸ್ವಾಮಿಗಳು ತಮಿಳುನಾಡಿನ ಸಂಚಾರಕಾಲದಲ್ಲಿ ವಿದ್ವಾಂಸರೊಬ್ಬರು ಜತೆಗಿರಬೇಕಾದ್ದರಿಂದ ಶ್ರೀ ನರಸಿಂಹಮೂರ್ತಿಯವರನ್ನು ಜತೆಗೆ ಕರೆದೊಯ್ಯುತ್ತಿದ್ದರು. ಮೊದಲಿನ ನಾಲ್ಕಾರು ದಿನ ಅಲ್ಲಿನ ವಿದ್ವಾಂಸರು ಅವರನ್ನು ಕಡೆಗಣಿಸಿದ್ದುಂಟು. ಒಂದು ದಿನ ವಾಕ್ಯಾರ್ಥ ಸಮಯದಲ್ಲಿ ಅವರ ನಿಶಿತ ಪ್ರತಿಭೆ ಪ್ರಕಟವಾದಾಗ ಅವರು ನಿಬ್ಬೆರಗಾದರು. ಮುಂದೆ ತಮಿಳುನಾಡಿನ ಎಲ್ಲೆಡೆ ವಿದ್ವತ್ ಸಭೆಗಳಲ್ಲಿ ಭಾಗವಹಿಸಿ ಅಲ್ಲಿನ ವಿದ್ವಾಂಸರ ಹೃದಯ ಗೆದ್ದರು.

ಮದ್ರಾಸಿನಲ್ಲಿ ಶಕಟಪುರಿ ಮಠದ ಶಾಖೆ ಇದ್ದು, ಪ್ರತಿ ವರ್ಷ ನವರಾತ್ರಿಯಲ್ಲಿ ವಿದ್ವತ್ಸಭೆ ನಡೆಯುವ ರೂಢಿ ಇರುತ್ತದೆ. ಆ ಸಭೆಗೆ ನರಸಿಂಹಮೂರ್ತಿಯವರು ಖಾಯಂ ಆಮಂತ್ರಿತರಿದ್ದು, ಸಭೆಯ ಸಮಸ್ತ ಸೂತ್ರಧಾರತ್ವ ವಹಿಸಿ, ನಿರ್ವಹಿಸಿಕೊಡುತ್ತಾ ಬಂದಿದ್ದಾರೆ; ಹೀಗೆ ಅಲ್ಲಿನ ಎಲ್ಲಾ ವಿದ್ವಾಂಸರ ಪರಿಚಯ ಸಂಪಾದಿಸಿದ್ದಾರೆ.

ಶ್ರೀ ಶ್ರೀ ರಾಮಚಂದ್ರ ಭಾರತಿಯವರು ಇವರ ಪಾಂಡಿತ್ಯ ಗಮನಿಸಿ **ವಿದ್ಯಾಸಾಗರ** ಪ್ರಶಸ್ತಿಯನ್ನಿತ್ತು ಸನ್ಮಾನಿಸಿರುತ್ತಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಬೆಂಗಳೂರಿನ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ ಮುಂತಾದ ಸಂಘ ಸಂಸ್ಥೆಗಳಿಂದ ಶ್ರೀಯುತರು ಸನ್ಮಾನಿತರಾಗಿದ್ದಾರೆ. ಮಾತು ಬೆಳ್ಳಿ, ಮೌನ ಬಂಗಾರ ಎಂಬ ನಾಣ್ಣುಡಿಯಂತೆ, ಸದಾ ಮೌನಿ ಆದ ಅವರನ್ನು ಮೇಲೆ ಬಿದ್ದು ಪ್ರಶ್ನೆ ಕೇಳಿ ಕೆದಕಿದಾಗ ಮಾತ್ರ ವಿದ್ವತ್ಪ್ರತಿಭೆ ಗೋಚರವಾಗುತ್ತದೆ.

ಶ್ರೀಯುತರು ಬರಹ, ಭಾಷಣಗಳೆರಡರಲ್ಲಿಯೂ ನಿಪುಣರು, ಉನ್ನತ ಮಟ್ಟದಲ್ಲಿ ವಿಷಯ ನಿರೂಪಣೆ ಮಾಡುವ ಕೌಶಲವುಳ್ಳವರು. ಕನ್ನಡದಲ್ಲಿ **ಸಪ್ತಪದಿ** ಮೊದಲಾದ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಸಂಸ್ಕೃತದಲ್ಲಿ **ದೇವೀಸ್ತುತಿ** ಮುಂತಾದ ಖಂಡಕಾವ್ಯಗಳನ್ನು ರಚಿಸಿರುತ್ತಾರೆ. ಅವರ ಕೃತಿಗಳು ಪಂಡಿತ-ಪಾಮರರಿಬ್ಬರಿಗೂ ರಂಜನೆ ನೀಡುತ್ತವೆ. ಅವರ ಅನುವಾದಸಾಮರ್ಥ್ಯವು ಅನುಪಮವಾದದ್ದು. **ರುದ್ರಾಧ್ಯಾಯ**ಕ್ಕೆ ಶ್ರೀ ವಿಷ್ಣುಸೂರಿಯವರು ಬರೆದ ಭಾಷ್ಯವನ್ನು ಕನ್ನಡಕ್ಕೆ ಅನುವಾದ ಮಾಡಲು ಸಾಧ್ಯವಿಲ್ಲವೆಂದು ಹಲವಾರು ಉದ್ದಾಮ ಪಂಡಿತರು ಕೈಬಿಟ್ಟಿದ್ದನ್ನು ಶ್ರೀಯುತರು ತುಂಬಾ ಸೊಗಸಾಗಿ ಕನ್ನಡಿಸಿ ಆಸ್ತಿಕರ ಪ್ರಶಂಸೆ ಗಳಿಸಿದ್ದಾರೆ. *ಈ* ಅನುವಾದವು **'ಶಿವಾರ್ಪಣಮ್'** ಕೃತಿಯಲ್ಲಿ ಪ್ರಕಟವಾಗಿದೆ.*

ಶ್ರೀ ನರಸಿಂಹಮೂರ್ತಿಯವರ ಬೋಧನಾಶಕ್ತಿ ಅಸದೃಶವಾದುದು. ಕೀರ್ತಿಶೇಷರಾದ ಶ್ರೀ ಚಂದ್ರಮೌಳಿರಾಯರ ನೇತೃತ್ವದಲ್ಲಿ ಶೃಂಗೇರಿಯಲ್ಲಿ ಕೆಲವು ಕಾಲ ನಡೆದ ಪ್ರಾಚ್ಯವಿದ್ಯಾಪೀಠದಲ್ಲಿ ಅವರು

---

* *ಈ* ಕೃತಿಯು ಶಿವಮೊಗ್ಗದ 'ಭಾರತ್ ಫೌಂಡರ್ಸ್'ನ ಟಿ.ವಿ. ನಾರಾಯಣಶಾಸ್ತ್ರಿಯವರಲ್ಲಿ ಸಿಗುತ್ತದೆ.

ಸಂಸ್ಕೃತ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ ಭೀಮನಕಟ್ಟೆ ಮಠ, ಮುಳುಬಾಗಿಲು ಮಠ, ಕೂಡಲಿ ಮಠ ಹಾಗೂ ಶಕಟಪುರಿ ಮಠದ ಸ್ವಾಮಿಗಳಿಗೆ ಶಾಸ್ತ್ರಬೋಧನೆ ಮಾಡಿರುತ್ತಾರೆ.

'ಪೌರೋಹಿತ್ಯವೆಂಬುದು ಉದರಂಭರಣಕ್ಕಾಗಿ ಮಾಡುವ ಸಾಮಾನ್ಯ ವಿದ್ಯೆ, ಬಡಬ್ರಾಹ್ಮಣರ ವೃತ್ತಿ' ಎಂಬಂತಾಗಿದೆ. ಖ್ಯಾತ ವಿದ್ವಾಂಸರು ಈ ವೃತ್ತಿಯಿಂದ ದೂರ ಉಳಿಯುತ್ತಾರೆ. ಆದರೆ ಶ್ರೀಯುತರು ಸಮರ್ಥ ಪುರೋಹಿತರಾಗಿ ವೈದಿಕರಂಗದಲ್ಲಿ ಖ್ಯಾತನಾಮರಾಗಿದ್ದಾರೆ. ಸೂತ್ರಾರ್ಥ, ಮಂತ್ರಾರ್ಥ ಮತ್ತು ಕರ್ಮಸ್ವರೂಪ ಹಾಗೂ ಕರ್ಮದ ಉದ್ದೇಶ ತಿಳಿದು ಅತ್ಯಂತ ವಿಚಕ್ಷಣೆಯಿಂದ ಪೌರೋಹಿತ್ಯ ನಡೆಸುವ ಅವರಂತಹ ಆಚಾರ್ಯರು ಕೇವಲ ವಿರಳ. ಪೌರೋಹಿತ್ಯದಲ್ಲಿ ಅವರ ಚುರುಕು - ಚಟುವಟಿಕೆ ಬೆರಗುಗೊಳಿಸುವಂಥದ್ದು. ಅಸಂತುಷ್ಟೋ ದ್ವಿಜೋ ನಷ್ಟಃ ಎಂಬ ಮಾತಿದೆ. ಅವರು ಆದಾಯದ ಕಡೆ ಎಂದೂ ಗಮನ ಕೊಡದ ಅಲ್ಪತೃಪ್ತರು. ನಾಡಿನಾದ್ಯಂತ ರುದ್ರಯಾಗ, ಚಂಡೀಯಾಗ, ವಿಷ್ಣುಯಾಗ, ದೇವತಾಪ್ರತಿಷ್ಠೆ ಮುಂತಾದ ಕಾರ್ಯಗಳಲ್ಲಿ ಅಧ್ವರ್ಯುಗಳಾಗಿ ಸಮರ್ಥ ಆಚಾರ್ಯರೆನಿಸಿ ವಿಖ್ಯಾತರಾಗಿದ್ದಾರೆ. ಮೃದುನುಡಿ, ಮಿತಭಾಷೆ, ಪಾಂಡಿತ್ಯಕ್ಕೆ ಮೀರಿದ ವಿನಯವಂತಿಕೆಯಿಂದ ಎಲ್ಲರ ಮನಸ್ಸನ್ನೂ ಗೆಲ್ಲುತ್ತಾರೆ.



*31. ಆನಂದವೇ ಧ್ಯಾನ*

ವಿದ್ವಾನ್ ನರಸಿಂಹಮೂರ್ತಿಯವರು ಸರಸ್ವತಿಯ ಸುಪುತ್ರರು. ವಯಸ್ಸು ೮೦ ಮೀರಿದ್ದರೂ ಇಂದಿಗೂ ಗ್ರಂಥವ್ಯಾಸಂಗ ನಿರತರು. ಪೂರ್ವಾಗ್ರಹ ದೋಷರಹಿತ ಮಹಾಪಂಡಿತರು. ತಮ್ಮ ಚಿಂತನೆಯನ್ನು ಶಾಸ್ತ್ರಗಳಿಗೆ ಸೀಮಿತಗೊಳಿಸಿಕೊಳ್ಳದೇ ಪ್ರಚಲಿತವಿರುವ ಜಗತ್ತಿನ ಎಲ್ಲ ತತ್ತ್ವ ಸಿದ್ಧಾಂತಗಳನ್ನೂ ಗ್ರಹಿಸಿ ವಿಭಿನ್ನ ವಾದಗಳನ್ನು ಮಂಡಿಸಿದ್ದಾರೆ. ಈ ಕುರಿತು ಸೂಕ್ತ ನಿರ್ಣಯ ನೀಡಬಲ್ಲ ಪ್ರತಿಭಾಶಾಲಿಗಳು. ಮಾನವೀಯತೆಗೆ ಹೆಚ್ಚಿನ ಮಹತ್ತ್ವ ನೀಡಿರುವ ಶ್ರೀಯುತರು ಗಾಂಧೀವಾದ, ಸಾಮ್ಯವಾದ, ಸಮಾಜವಾದೀ ಸಿದ್ಧಾಂತಗಳನ್ನು ಆಳವಾಗಿ ಚಿಂತಿಸಿರತಕ್ಕವರು. ಶ್ರೀಯುತರು ಸಂಪ್ರದಾಯಜಡರಲ್ಲ, ಸಂಪ್ರದಾಯ ವಿರೋಧಿಗಳೂ ಅಲ್ಲ; ಮಾನವೀಯತೆಯ ಹಿನ್ನೆಲೆಯಲ್ಲಿ ಪರಂಪರಾಚಾರಣೆಗಳನ್ನು ಆಧುನಿಕ ದೃಷ್ಟಿಕೋನದಿಂದ ನೋಡತಕ್ಕವರು. ವರ್ತಮಾನ ಹಾಗೂ ಅತಿದೂರ ಭವಿಷ್ಯದಲ್ಲಿ ಜಗತ್ತಿನ ಸಾಮಾನ್ಯ ಜನಸ್ತೋಮದ ಶ್ರೇಯಸ್ಸಿಗೆ ಸಾಧಕವಾಗದ ಎಲ್ಲಾ ಸಂಪ್ರದಾಯಗಳನ್ನೂ ಪಾರಂಪರಿಕಾಚರಣೆಗಳನ್ನೂ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬಲ್ಲವರು. ಕಾಲ, ದೇಶ, ವಿದ್ಯಮಾನಗಳನ್ನು ಅನುಲಕ್ಷಿಸಿ ಹಿಂದಿನ ಸ್ಮೃತಿ, ಧರ್ಮಶಾಸ್ತ್ರಗಳನ್ನು ಅರ್ಥೈಸುವ ಕ್ರಾಂತಿಕಾರೀ ಮನೋಭಾವ ಅವರದು. ಹಲವು ಸಂದರ್ಭಗಳಲ್ಲಿ ಸಂಪ್ರದಾಯವಾದೀ ವಿದ್ವಾಂಸರ ಅಭಿಮತಕ್ಕೂ, ಇವರ ಹೇಳಿಕೆಗೂ ಅಜಗಜಾಂತರವಿರುತ್ತದೆ. ಕಾಲಕಾಲಕ್ಕೆ ತ್ರಿಮತಸ್ಥ ಪೀಠಾಧಿಪತಿಗಳು ಧರ್ಮಸಭೆ ನಡೆಸಿ ಆಚರಣೆಗಳನ್ನು ಪರಿಷ್ಕರಿಸಬೇಕು ಎಂಬ ನಿಲುವು ಅವರದು. ಯಜ್ಞ, ಯಾಗ, ದಾನ, ಸಂನ್ಯಾಸ, ದೇವತಾಪೂಜೆ ಮುಂತಾದವುಗಳ ಬಗ್ಗೆ ಅತ್ಯಂತ ವೈಜ್ಞಾನಿಕ ವಿವೇಚನೆಯುಳ್ಳವರು. ವೇದಗಳು ಬೋಧಿಸುವ ಸಕಲಜನ ಕಲ್ಯಾಣ ಸಿದ್ಧಾಂತವನ್ನು ಸಾರುವುದು ಅವರ ಗುರಿಯಾಗಿದೆ. ಆದರೆ ಲಿಂಗದಹಳ್ಳಿಯಲ್ಲಿ ಕುಳಿತು ಯಾರಿಗೆ ಏನನ್ನು ಬೋಧಿಸಲಾದೀತು? ಇಲ್ಲಿನ ಶ್ರೀಸಾಮಾನ್ಯರಾದ ಲಿಂಗಣ್ಣ-ವೀರಣ್ಣ-ಬಸಣ್ಣರ ಜೊತೆ ನರಸಿಂಹಣ್ಣನಾಗಿ ಸುಮಾರು ೮೦ ವಸಂತಗಳನ್ನು ಕಂಡರು. **ಕುಗ್ರಾಮವಾಸಃ ಕುಲಹೀನಸೇವಾ** ಎಂಬುದು ಜನ್ಮಾಂತರ ದೋಷ ಎಂದು ಅಪ್ಪಯ್ಯದೀಕ್ಷಿತರು ನಿಟ್ಟುಸಿರುಬಿಟ್ಟಿದ್ದಾರೆ.

ಬೆಂಗಳೂರು, ದೆಹಲಿಯಂತಹ ಜಾಗದಲ್ಲಿದ್ದಿದ್ದರೆ ಅಖಿಲ ಭಾರತ ಕೀರ್ತಿಯನ್ನೂ, ಹಣವನ್ನೂ ಗಳಿಸಬಹುದಿತ್ತು. ಮಿಂಚಿದ್ದಕ್ಕೆ

ಚಿಂತಿಸಿ ಫಲವೇನು? ದ್ವಾರಕಾ ಮಠಾಧೀಶರು ಎರಡು ಬಾರಿ ತಮ್ಮಲ್ಲಿಗೆ ಬರಮಾಡಿಕೊಳ್ಳಲು ಕರೆ ಕಳಿಸಿದ್ದರು. ಕಾರ್ಕಳದ ಜೈನ ಮಠದ ಶ್ರೀಗಳು ಹತ್ತಾರು ಬಾರಿ ಆಹ್ವಾನ ನೀಡಿದ್ದರು. ಆದರೆ ಶ್ರೀಯುತರ ಕಾರ್ಯಕ್ಷೇತ್ರ ಲಿಂಗದಹಳ್ಳಿಗೆ ಸೀಮಿತವಾಯಿತು. ಇದು ನಿಜವಾಗಿ ನಮ್ಮ ಹಳ್ಳಿಯ ಭಾಗ್ಯ; ಆದರೆ ಕರ್ನಾಟಕದ ದೌರ್ಭಾಗ್ಯ. ತಿಮಿಂಗಿಲ ಸಮುದ್ರದಲ್ಲಿಯೇ ಈಜಬೇಕಿತ್ತು. ಕಡೇ ಪಕ್ಷ ಮಹೇಶಯೋಗಿಯಂತಹವರ ಆಶ್ರಯದಲ್ಲಿದ್ದು, ಆರ್ಥಿಕವಾಗಿ ಯಾದರೂ ಮೇಲೇರಬಹುದಿತ್ತು. ಗೌರವ ಮಾಸಾಶನ ನೀಡಲು ಕರ್ನಾಟಕ ಸರ್ಕಾರದ ಕಣ್ಣಿಗೆ ಶ್ರೀಯುತರು ಬೀಳಲಿಲ್ಲ. ಏಕೆಂದರೆ ಅವರು ಬೇಡುವುದಿಲ್ಲ. ಅಲ್ಪತೃಪ್ತರಾದ ಅವರೆಂದೂ ಇಂಥ ಆಲೋಚನೆ ಮಾಡಿದವರಲ್ಲ. ಶಿಷ್ಯವರ್ಗದ ಕಿರಿಕಿರಿ ಇದು, ಅಷ್ಟೆ. ಇನ್ನಾದರೂ ಅವರ ಪಾಂಡಿತ್ಯ ಪ್ರತಿಭೆ ಬೋಧನೆಗಳು, ಹಾಗೂ ಮಾರ್ಗದರ್ಶನ ಸಾಮರ್ಥ್ಯಗಳು ಸಾರ್ಥಕವಾಗುವ ಅವಕಾಶ ದೊರಕಲೆಂದು ಪ್ರಾರ್ಥಿಸುವುದಷ್ಟೇ ನಮ್ಮ ಕರ್ತವ್ಯವಾಗಿದೆ. ಅವರ ಲೇಖನ ಕೃತಿಗಳು ಮುದ್ರಣ ಕಂಡರೆ ಆಗ ಮಾತ್ರ ಸಾರಸ್ವತ ಲೋಕ ಶ್ರೀಮಂತವಾದೀತು.

ಶ್ರೀಯುತರು ಭಾಷಣ-ಲೇಖನ ಕಲೆಗಳಲ್ಲಿ ಸವ್ಯಸಾಚಿಗಳೆಂಬ ಮಾತನ್ನು ಹಿಂದೆಯೇ ಹೇಳಿದೆ. ವಿದ್ಯಾರ್ಥಿದೆಸೆಯಿಂದಲೂ ಆಶುಕವಿತ್ವ ರಚನೆಯಲ್ಲಿ ನಿಷ್ಣಾತರು. ಸಂಸ್ಕೃತಭಾಷೆಯ ಉಪನ್ಯಾಸದಲ್ಲಿ ಗಂಗಾಪ್ರವಾಹದಂತೆ ನಿರರ್ಗಳವಾಗಿ ಸಾಗುವ ವಾಗ್ಧೋರಣೆಗೆ ಅವರನ್ನು ಸರಿಗಟ್ಟುವರಿಲ್ಲ. ಮಿತಭಾಷಿಗಳಾಗಿ ಮೌನಿಗಳಾಗಿರುವುದರಿಂದ ಅನೇಕ ಮಹನೀಯರ ಅವಶ್ಯ ಪರಿಚಯದಿಂದ ವಂಚಿತರಾದದ್ದೂ ಇದೆ. ಉದಾಹರಣೆಗೆ ಭೀಮನಕಟ್ಟೆಯ ಕಿರಿಯ ಶ್ರೀಗಳವರಿಗೆ ಶಿಕ್ಷಕರಾಗಿರುತ್ತ ಎಷ್ಟೋ ದಿನಗಳವರೆಗೆ ಹಿರಿಯ ಶ್ರೀಗಳವರ ಪರಿಚಯಕ್ಕೆ ತಾವಾಗಿ ಹೋಗದೆ ಮುಂದೊಮ್ಮೆ 'ವೃತ್ತಿ ವಿವೇಕ'ದಲ್ಲಿ ಹೀಗೆ ಹೇಳಿದೆಯಲ್ಲ ಎಂಬ ಹಿರಿಯ ಶ್ರೀಗಳ ಮಾತನ್ನು ಕೇಳಿದಾಗ ಸಾಹಿತ್ಯದಲ್ಲಿ ಉದ್ದಾಮ ವಿದ್ವಾಂಸರಾದ ಅವರನ್ನು ಮಾತನಾಡಿಸದೆ ಹೋದೆನಲ್ಲಾ! ಎಂದು ಚಿಂತಿಸಿದ್ದೂ ಉಂಟು. ಆದರೆ ತಾವಾಗಿ ಮೇಲೆ ಬಿದ್ದು ಮಾತಾಡಿಸಿ ಮರ್ಯಾದೆ ಪಡೆಯಬೇಕೆನ್ನುವ ಪ್ರವೃತ್ತಿ ಇಲ್ಲದ ನಿಗರ್ವಿಗಳು. ನಾವಾಗಿ ಕೇಳಿದರೆ ಹೇಳಿಯಾರು, ತಾವಾಗಿ ಏನನ್ನೂ ಹೇಳರು. ಹಿರಿಯರನ್ನೂ ಕಿರಿಯರನ್ನೂ ಸಮಾನಗೌರವದಿಂದ ಕಾಣುವ ಸಹೃದಯರು. ಆದ್ದರಿಂದಲೇ ಆಬಾಲವೃದ್ಧರ ಗೌರವ ಪಡೆದವರು. ವಯಸ್ಸಾದರೂ ತರುಣರನ್ನು ನಾಚಿಸುವ ಕ್ರಿಯಾಶೀಲರು. ಈ ವಯಸ್ಸಿನಲ್ಲಿ ಸೈಕಲ್ ತುಳಿಯುತ್ತಾ ಸಮೀಪದ ಹಳ್ಳಿಗಳಿಗೆ



32. ಜ್ಞಾನವೃದ್ಧ; ವಯೋವೃದ್ಧರಲ್ಲ: ೯೨ ವರ್ಷದ ಯುವಕ

ಪೌರೋಹಿತ್ಯಕ್ಕಾಗಿ ಹೋಗುವುದನ್ನು ನೋಡುವಾಗ ವಿಸ್ಮಯವಾಗುತ್ತದೆ. ಹಿಂಡುವ ಹಸುವಿನ ಕೆಚ್ಚಲು ಕೊಯ್ಯುವ ನಮ್ಮ ಪ್ರವೃತ್ತಿಗಾಗಿ, ಈ ವಯಸ್ಸಿನಲ್ಲೂ ಅವರನ್ನು ದುಡಿಸುವ ನಮ್ಮ ಆಲಸ್ಯಕ್ಕಾಗಿ ವೇದನೆಯೂ ಆಗುತ್ತದೆ.

ಬಹುಭಾಷಾಜ್ಞ ಮಹಾಪಂಡಿತರಾಗಿಯೂ ನಿಗರ್ವಿಗಳು, ಸಾಮಾನ್ಯರಲ್ಲಿ ವ್ಯವಹಾರ ಉಳ್ಳವರು, ಗಂಭೀರ ಚಿಂತಕರಾಗಿಯೂ ಸಾಮಾನ್ಯ ದೈನಂದಿನ ಬದುಕಿನ ಏರುಪೇರುಗಳಲ್ಲಿ ಭಾಗಿಗಳು, ಹಣವಿಲ್ಲವಾದರೂ ಹೃದಯಶ್ರೀಮಂತಿಕೆ ಉಳ್ಳವರು. ವಯಸ್ಕರಾಗಿಯೂ ತಾರುಣ್ಯದ ಉತ್ಸಾಹ, ಸದಾಚಾರ, ಸದ್ಗುಣ ಸಂಪನ್ನತೆಯಿಂದ ಕೂಡಿ ಆಚಾರ್ಯರಾಗಿ ನಮ್ಮ ಮಧ್ಯೆ ಇದ್ದಾರೆಂಬುದೇ ನಮಗೆ ಭಾಗ್ಯದ ಸಂಗತಿಯಾಗಿದೆ. ನಾವು ಅವರ ಶಿಷ್ಯರು, ಬಂಧುಗಳು ಎಂದು ಹೇಳಿಕೊಳ್ಳುವುದೇ ನಮಗೆ ತುಂಬಾ ಅಭಿಮಾನದ ಸಂಗತಿಯಾಗಿದೆ. ತಮ್ಮ ತೇಜಃಪುಂಜ ವ್ಯಕ್ತಿತ್ವದಿಂದಲೇ ಪ್ರಭಾವ ಬೀರುವ ಶ್ರೀ ನರಸಿಂಹಮೂರ್ತಿಗಳ ಚರಣಾರವಿಂದಗಳಲ್ಲಿ ನಮ್ಮ ನಮ್ರ ನಮನಗಳಿರಲಿ. ಶ್ರೀಯುತರಿಗೆ ಶತಮಾನೋತ್ಸವ ನಡೆಸುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸೋಣ.

## ೩. ವೃತ್ತಿಗೌರವದ ಅಣ್ಣ

*ಸಾವಿತ್ರಮ್ಮ ರಾಮಶರ್ಮಾ*

ಶಿವಮೊಗ್ಗದ ಶಂಕರಮಠದ ಆವರಣದಲ್ಲಿ ಓರ್ವ ವಯೋವೃದ್ಧರು ಧ್ಯಾನಸ್ಥರಾಗಿ ಕುಳಿತಿದ್ದರು. ಅವರ ಮುಖದಲ್ಲಿರುವ ತೇಜಸ್ಸನ್ನು ಕಂಡ ದ್ವಿಜರೊಬ್ಬರು ಅವರನ್ನು ಕಂಡು ಪರಿಚಯ ಮಾಡಿಕೊಂಡು 'ಈ ಊರಿನಲ್ಲಿ ಮೂರು ಜನ ವೇದಪಾರಾಯಣಕರ್ತರು ಇದ್ದಾರೆಂದು ಕೇಳಿದ್ದೇನೆ. ಅವರು ಯಾರು ಎಂದು ನಿಮಗೆ ಗೊತ್ತೇ?' ಎಂದು ಕೇಳಿದರು. ಆಗ ವಿನಯಶೀಲರಾದ ವೃದ್ಧರು, ತಾವು ಯಾರು ಎಂದು ಹೇಳಿಕೊಳ್ಳಲಿಲ್ಲ. ಬದಲಾಗಿ ತಮ್ಮ ಬಳಿ ಬಂದ ಯುವಕನನ್ನು ತೋರಿಸಿ 'ಇವನು ಚೆನ್ನಾಗಿ ವೇದಪಾರಾಯಣ ಮಾಡುತ್ತಾನೆ ' ಎಂದರು. ಅದನ್ನು ಕೇಳಿ ಅವರಿಗೆ ದಿಗ್ಭ್ರಮೆ ಆಯಿತು. ಭಾರತದಲ್ಲೇ ಪ್ರತಿಷ್ಠಿತ 'ವೇದರತ್ನ' ಪ್ರಶಸ್ತಿ ಪಡೆದ ಏಳು ಜನರಲ್ಲಿ ಒಬ್ಬರಾದ ವಿದ್ವಾನ್ ನರಸಿಂಹಮೂರ್ತಿಗಳು 'ನಾನು' ಎಂಬ 'ಅಹಂ'ನ್ನೆ ಕಳೆದುಕೊಂಡ ಜ್ಞಾನಿಗಳು. ಅಂತಹ ಜ್ಞಾನಿಗಳ ತಂಗಿಯಾದ ನಾನು ಎಷ್ಟು ಭಾಗ್ಯಶಾಲಿ ಎನ್ನಿಸಿತು. ವಿದ್ಯಾಸಾಗರ ಪೂಜ್ಯ ನರಸಿಂಹಮೂರ್ತಿಗಳ ಬಗ್ಗೆ ಬರೆಯುವುದೆಂದರೆ ಸಾಗರದ ನೀರನ್ನು ಅಳತೆ ಮಾಡಿದಂತೆ, ಸೂರ್ಯನ ಕಿರಣಗಳನ್ನು ಹಿಡಿಯಲು ಹೊರಟಂತೆ, ವ್ಯರ್ಥ ಸಾಹಸವೇ ಸರಿ.




*33 ಶಾಸ್ತ್ರಿಗಳ ಮಾತಾಪಿತೃಗಳು*

ಬಾಲ್ಯದಿಂದಲೇ ನಾವು ಅವರನ್ನು ಗಮನಿಸಿದಂತೆ ಅವರು ಯಾರನ್ನೂ ದೂಷಿಸಿದವರಲ್ಲ. ಅವರು ತಮ್ಮ ತಂದೆಯಿಂದ ಅಲ್ಪತೃಪ್ತಿಯನ್ನೂ, ಪ್ರಾಮಾಣಿಕತೆಯನ್ನೂ ಮತ್ತು ತಮ್ಮ ತಾಯಿಯವರಿಂದ ಸೇವಾ ಮನೋಭಾವವನ್ನೂ, ಕರ್ತವ್ಯದಲ್ಲಿ ತನ್ಮಯತೆಯನ್ನೂ ಪಡೆದು ಅದನ್ನು ಜೀವನದ ಉದ್ದಕ್ಕೂ ಪಾಲಿಸಿಕೊಂಡು ಬರುತ್ತಿದ್ದಾರೆ.

ಬಾಲ್ಯದಿಂದಲೇ ಸಂಸ್ಕೃತ, ಸಾಹಿತ್ಯ, ವೇದಾಂತಗಳ ಅಭ್ಯಾಸಗಳ ಸಲುವಾಗಿ ಶೃಂಗೇರಿ, ಧಾರವಾಡ, ಬೆಂಗಳೂರು ಮುಂತಾದ ಕಡೆಗಳಿಗೆ ತೆರಳಿದ್ದರಿಂದಲೂ, ನಾನು ಸಹ ಬಾಲ್ಯದಲ್ಲಿಯೇ ವಿವಾಹವಾಗಿ ಬಸವಾನಿಯ ಸುಸಂಸ್ಕೃತ ಮನೆತನದ ಮೇಧಾವಿ ರಾಮಶರ್ಮರ ಜತೆಯಲ್ಲಿ ಹಲವಾರು ವರುಷ ಮಾಯಾವರದಲ್ಲಿದ್ದುದರಿಂದಲೂ ನಮ್ಮ ಅಣ್ಣನವರ ವಿದ್ಯಾಭ್ಯಾಸದ ಬಗ್ಗೆ ಅಷ್ಟಾಗಿ ತಿಳಿದಿರಲಿಲ್ಲ. ಮಾಯಾವರದಿಂದ ಬಂದು ನಾವು ಬಸವಾನಿಯಲ್ಲಿ ನೆಲೆಸಿದಾಗ, ನಮ್ಮ ಅಣ್ಣನವರ ವಿದ್ವತ್ತಿನ ಪರಿಚಯವಾಯಿತು. ಇಷ್ಟೊಂದು ವೇದ, ಸಾಹಿತ್ಯ, ತರ್ಕ, ಮೀಮಾಂಸಾಶಾಸ್ತ್ರ, ಹಲವಾರು ಭಾಷೆಗಳ ಆಳವಾದ ಅಧ್ಯಯನ ಮಾಡಿರುವುದನ್ನು ತಿಳಿದು ಆಶ್ಚರ್ಯಪಟ್ಟೆ. ಅದು ಅವರಿಂದ ನನ್ನ ಅರಿವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಯಿತು. ನನ್ನ ಪತಿಯಾದ ಶ್ರೀಯುತ ರಾಮಶರ್ಮರವರು ಸಹ ಅಸಾಮಾನ್ಯ ಮೇಧಾವಿಗಳೇ. ನಿರರ್ಗಳವಾಗಿ ಅವರು ವೇದ, ಉಪನಿಷತ್, ಸಾಹಿತ್ಯ, ಧರ್ಮದ ಬಗ್ಗೆ ಉಪನ್ಯಾಸ ನೀಡುವಾಗ ಜನ ಅವರ ಕಂಠಶ್ರೀಗೆ ಮರುಳಾಗಿ ಕೇಳುತ್ತಾ ಅವರ ಆಳವಾದ ಪಾಂಡಿತ್ಯಕ್ಕೆ ತಲೆತೂಗುತ್ತಿದ್ದರು. ನನ್ನ ಪತಿ ಹಾಗೂ ನಮ್ಮ ಅಣ್ಣ ಇಬ್ಬರೂ ನಮ್ಮ ಮನೆಯಲ್ಲಿ ಧರ್ಮದ ಬಗ್ಗೆ ಅನೇಕ ವಾದ ವಿವಾದ ನಡೆಸುತ್ತಿದ್ದರು. ಅವರಿಬ್ಬರ ಜತೆ ನಮ್ಮ ಇನ್ನೊಬ್ಬ ಅಣ್ಣ - ವೇದಕೋವಿದರಾಗಿ ರಾಮಾಯಣ ಪಾರಾಯಣದಲ್ಲಿ ನಿಷ್ಣಾತರಾದ ಕೃಷ್ಣಮೂರ್ತಿಗಳೂ ಸೇರಿದಾಗ ಮನೆಯೇ ಒಂದು ಧರ್ಮಸಭೆಯಾಗುತ್ತಿತ್ತು.

ನಮ್ಮ ಅಣ್ಣ ಮೃದು ಮಾತಿನ ಸಹೃದಯಿ. ಕೋಪ ಕಂಡರಿಯದ, ಅರಿಷಡ್ವರ್ಗವನ್ನು ನಿಗ್ರಹಿಸಿರುವ ನಿಗರ್ವಿ. ವೇದಪಾರಾಯಣ,



**34. ಬಾಲ್ಯಗೆಳೆಯ, ಸೋದರ, ಸಹಪಾಠಿ**
**ವೇ. ಬ್ರ. ಶ್ರೀ ಎಲ್.ವಿ.ಕೃಷ್ಣಮೂರ್ತಿಯವರೊಂದಿಗೆ ಶಾಸ್ತ್ರಿಗಳು**

ಸಂಗೀತ, ಸಾಹಿತ್ಯ, ತರ್ಕ ಮೀಮಾಂಸಾ ಶಾಸ್ತ್ರಗಳಲ್ಲಿ ಅದ್ವಿತೀಯರು. ದೊಡ್ಡವರ ಮಾತನ್ನು ಕೇಳುವಷ್ಟೇ ಆಸಕ್ತಿಯಿಂದ ಮಕ್ಕಳ ಮಾತನ್ನೂ ಕೇಳುವ ಸಹನಶೀಲರು. ವೃತ್ತಿಯಿಂದ ಪೌರೋಹಿತ್ಯ ಮಾಡಿಸುವ ನಮ್ಮ ಅಣ್ಣ ಬಡವ ಬಲ್ಲಿದ ಭೇದವಿಲ್ಲದೆ, ಯಾವುದೇ ಕಾರ್ಯ ಮಾಡಿಸುವಾಗ ಮಂತ್ರಲೋಪ ಕ್ರಿಯಾಲೋಪವಿಲ್ಲದಂತೆ ನಡೆಸಿಕೊಡುವ ಸಮಚಿತ್ತರು. ವರ್ಷದಲ್ಲಿ ಎರಡು ನೂರು ದಿನಗಳು ಯಾರಾದರೊಬ್ಬರ ಕರೆಗೆ ಓಗೊಟ್ಟು ವೈದಿಕವಿರಲಿ, ಮದುವೆಯಿರಲಿ ಶ್ರದ್ಧೆಯಿಂದ ನಡೆಸಿಕೊಟ್ಟು ಸಿಕ್ಕ ಪ್ರತಿಫಲವನ್ನು ಗಣನೆಗೆ ತೆಗೆದುಕೊಳ್ಳದೇ ವೃತ್ತಿಗೆ ಗೌರವ ಕೊಡುವ ತಪಸ್ವಿಗಳು.

ಮನೆಯಲ್ಲಿದ್ದಾಗಲೂ, 'ಜ್ಯೋತಿಷ್ಯ' ಕೇಳಲು ಕುಟುಂಬದ ಯಜಮಾನನೊಂದಿಗೆ ಬರುವ ಹತ್ತೂ ಜನಕ್ಕೂ ಅವರು ಕೇಳುವ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರಿಸಿ ಕೊನೆಯಲ್ಲಿ ಸಿಗುತ್ತಿದ್ದ ನಾಲ್ಕಾಣೆ ದಕ್ಷಿಣೆಗೇ ತೃಪ್ತಿ ಪಡುತ್ತಿದ್ದನ್ನು ನೋಡಿ ಆಶ್ಚರ್ಯವಾಗುತ್ತಿತ್ತು. ಜತೆಯಲ್ಲಿ ಅಲ್ಲಿಗೆ ಬರುವ ಚಿಕ್ಕ ಮಕ್ಕಳಿಗೆ ಸಂಸ್ಕೃತವನ್ನು ಹೇಳಿಕೊಡುವ, ದೊಡ್ಡವರಿಗೆ ವೇದಪಾಠ ಕಲಿಸುವ ಕಾಯಕವನ್ನೂ ಮಾಡುತ್ತಿದ್ದರು.

ಜ್ಯೋತಿಷ್ಯ ಶಾಸ್ತ್ರ, ವೇದ, ಸಂಸ್ಕೃತ, ಸಾಹಿತ್ಯ, ವ್ಯಾಕರಣ ಎಲ್ಲವನ್ನೂ ಸುಲಲಿತವಾಗಿ ಯಾವೊಂದು ಪುಸ್ತಕದ ಸಹಾಯವೂ ಇಲ್ಲದೆ ಶಿಷ್ಯರಿಗೆ ಕಲಿಸಿಕೊಡುವ ಅವರ ನೆನಪಿನಶಕ್ತಿ ಅಸಾಧಾರಣವಾದುದು. ಏಕಸಂಧಿಗ್ರಾಹಿಯಾದ ಅವರ ಜ್ಞಾಪಕಶಕ್ತಿಯ ಬಗ್ಗೆ ಸ್ವಾರಸ್ಯವಾದ ಸಂಗತಿಯೊಂದು ನೆನಪಿಗೆ ಬರುತ್ತದೆ. ಒಂದು ಸಾರಿ ಧಾರವಾಡಕ್ಕೆ ರಾತ್ರಿ ಹತ್ತು ಗಂಟೆಗೆ ಹೋದಾಗ ಮಾರನೇ ದಿನವೇ ಒಂದು ಕಿರುಪರೀಕ್ಷೆ ಇದೆ ಎಂದೂ, ಅದರಲ್ಲಿ ಪಾಸಾದರೆ ಮಾತ್ರ ತಾವು ಓದಲು ಬಯಸಿದ ತರಗತಿಗೆ ಸೇರಲು ಸಾಧ್ಯ ಎಂದೂ, ಅದರ ಅಭ್ಯಾಸದಲ್ಲಿ ತೊಡಗಿದ್ದ ಸಹಪಾಠಿಗಳಿಂದ ತಿಳಿಯಿತು. ಆದರೆ ಪರೀಕ್ಷೆಯ ಬಗ್ಗೆ ಏನೂ ತಿಳಿಯದ್ದರಿಂದಲೂ ಪ್ರಯಾಣದ ಆಯಾಸ ದಿಂದಲೂ ನರಸಿಂಹಮೂರ್ತಿಗಳು ಬೇಗನೆ ಮಲಗಿದರು. ಅಭ್ಯಾಸ ಮಾಡುತ್ತಿದ್ದ ಸಹಪಾಠಿಗಳು ಮಾತ್ರ ಬಹಳ ಹೊತ್ತು ಅಭ್ಯಾಸ ಮಾಡಿ ಮಲಗಿದರು. ಮಾರನೆಯ ದಿನ ಸಹಪಾಠಿಗಳೊಂದಿಗೆ ಪರೀಕ್ಷೆಗೆ ಹೊರಟಾಗ ಗೆಳೆಯರಿಗೆ ಆಶ್ಚರ್ಯ. ಪರೀಕ್ಷಕರು ಕೇಳಿದ ಪ್ರಶ್ನೆಗಳಿಗೆ ನಿರಾಯಾಸದಿಂದ ಉತ್ತರಿಸಿದರು, ಕೇವಲ ಹಿಂದಿನ ದಿನ ಗೆಳೆಯರು ಮಾಡುತ್ತಿದ್ದ ಅಭ್ಯಾಸವನ್ನು ಒಂದು ಸಾರಿ ಕೇಳಿದುದರಿಂದಲೇ ಉತ್ತರಿಸಿದ್ದರು.

ನರಸಿಂಹಮೂರ್ತಿಗಳಿಗೆ ತಕ್ಕ ಪತ್ನಿ ಸೀತತ್ತಿಗೆ. ಒಂದು ದಿನವೂ ಗೊಣಗಿದ್ದನ್ನಾಗಲಿ, ಪತಿಗೆ ಎದುರಾಡಿದ್ದನ್ನಾಗಲಿ, ಜೋರಾಗಿ ಮಾತಾಡಿದ್ದನ್ನಾಗಲಿ ನಾನು ಕೇಳಿಲ್ಲ. ಮೃದುಹೃದಯಿ. ಮನೆಗೆ ಬಂದವರಿಗೆ ಅತಿಥಿಸತ್ಕಾರ ಮಾಡುವುದು, ಪತಿ ಊರಿನಲ್ಲಿ ಇಲ್ಲದಿದ್ದಾಗ ಮನೆಯ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುವುದು ಎಲ್ಲವೂ ಅವರ ಕರ್ತವ್ಯ.

ಈಗ ನಮ್ಮ ಅಣ್ಣನವರ ಶರೀರಕ್ಕೆ ವಯಸ್ಸಾಗಿದ್ದರೂ, ಅವರ ಜ್ಞಾಪಕ ಶಕ್ತಿ ಅಸಾಧಾರಣವಾಗಿದೆ. ತಮ್ಮ ದಿನಚರಿಯನ್ನು ಏನೊಂದೂ ಕುಂದಿಲ್ಲದೆ ನಡೆಸಿಕೊಂಡು ಬಂದಿದ್ದಾರೆ. ಮುಂದೆಯೂ ಸಹ ದೇವರು ಅವರಿಗೆ ಆಯುರಾರೋಗ್ಯಭಾಗ್ಯವನ್ನು ನೀಡಿ ನಮ್ಮೆಲ್ಲರಿಗೂ ಅವರು ಇನ್ನೂ ಅನೇಕ ಕಾಲ ಮಾರ್ಗದರ್ಶನ ನೀಡುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

## ೪. ವೇದರತ್ನ

*ವಿದ್ವಾನ್ ಕೆ. ಎಸ್. ಭಾಸ್ಕರಭಟ್ಟ*

**ಓಂಕಾರಮಂದಿರಮನೋಹರರತ್ನದೀಪಾಮ್**
**ಅಜ್ಞಾನಗಾಢತಿಮಿರಾಸಹಚಿತ್ಪ್ರಕಾಶಾಮ್**
**ಸೃಷ್ಟಿಸ್ಥಿತಿಪ್ರಲಯಕೌತುಕಕೇಲಿಶೀಲಾಂ**
**ವಿದ್ಯಾಮನಾದಿನಿಧನಾಂ ಹೃದಿ ಭಾವಯಾಮಿ**

ಸಾತ್ತ್ವಿಕ ಚಿತ್ತವೃತ್ತಿಯೇ ಮೂರ್ತಿವೆತ್ತಂತಿರುವ ಲಿಂಗದಹಳ್ಳಿ ವಿದ್ವಾನ್ ನರಸಿಂಹಮೂರ್ತಿಗಳನ್ನು ನಾನು ಮೈಸೂರಿನ ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದ ಸಮಯ ದಿಂದಲೂ ಬಲ್ಲೆ. ತೊಂಬತ್ತೆರಡು ವಸಂತಋತುಗಳನ್ನು ಕಂಡಿರುವ ದೀರ್ಘಾಯುಷಿಗಳಾದ ಅವರು ಸರ್ವಥಾ ಅಭಿನಂದ್ಯರು.

ಅವರಿಗೆ ಬ್ರಾಹ್ಮಣೋಚಿತವಾದ ಚೌಲೋಪನಯನಾದಿ ಸಂಸ್ಕಾರಗಳು ಯಥಾಕಾಲದಲ್ಲಿ ನಡೆದವು. ಅನಂತರ ಸ್ವಕುಲೋಚಿತವಾದ ತೈತ್ತಿರೀಯ ಕೃಷ್ಣಯಜುರ್ವೇದದ ಅಧ್ಯಯನವು ವರವಾಗಿ ಪರಿಣಮಿಸಿತು. ಶೃಂಗೇರಿ ಮಠದ ಪಾಠಶಾಲೆಯಲ್ಲಿ ಸಂಸ್ಕೃತ ಸಾಹಿತ್ಯ ವಿದ್ಯಾಭ್ಯಾಸವನ್ನು ಆರಂಭಿಸಿದ ಅವರು ತಮ್ಮ ಇಪ್ಪತ್ತಾರನೆಯ ವಯಸ್ಸಿನಲ್ಲಿ, ಸದ್ವಂಶದಲ್ಲಿ ಹುಟ್ಟಿದ ಸೀತಮ್ಮ ಎಂಬ ಕನ್ಯೆಯೊಡನೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ಅವರು ವಿವಾಹವಾದ ಮೇಲೂ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಸುಮಾರು ಮೂವತ್ತು ವರ್ಷಗಳ ಕಾಲ ವಿವಿಧ ಶಾಸ್ತ್ರಗಳಲ್ಲಿ ಅಧ್ಯಯನ ಮಾಡಿ ವಿದ್ವತ್ಪದವಿಯನ್ನು ಗಳಿಸಿದರು. ಪಾಣಿನೀಯ ವ್ಯಾಕರಣಶಾಸ್ತ್ರ, ಮೀಮಾಂಸಾಶಾಸ್ತ್ರ, ವೇದಾಂತಶಾಸ್ತ್ರ, ಅಲಂಕಾರಶಾಸ್ತ್ರ, ಜ್ಯೋತಿಶ್ಶಾಸ್ತ್ರ ಇವು ಅವರ ಅಧ್ಯಯನ ವಿಷಯಗಳು. ಸಾಯಣಾಚಾರ್ಯರ ಯಜುರ್ವೇದದ ಭಾಷ್ಯವನ್ನೂ ಋಗ್ವೇದ ಯಜುರ್ವೇದಗಳ ಸ್ಮಾರ್ತ ಪ್ರಯೋಗಗಳನ್ನೂ ಅಭ್ಯಸಿಸಿದರು.

ವಿದ್ವತ್ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅವರು ಅಂದಿನ ಮೈಸೂರು ಮಹಾರಾಜರಿಂದ ಆಸ್ಥಾನದಲ್ಲಿ ವಿದ್ವತ್ಪರೀಕ್ಷೆಯ ಸರ್ಟಿಫಿಕೇಟಿನೊಡನೆ ಶಾಲು ಹೊದೆಯಿಸಲ್ಪಟ್ಟು ಸನ್ಮಾನಿತರಾದರು. ಅನಂತರ ಶ್ರೀ ನರಸಿಂಹಮೂರ್ತಿಗಳು ಶೃಂಗೇರಿ ಮಠದ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಅವರು ಯಾವ ವಿದ್ಯಾಸಂಸ್ಥೆಯಲ್ಲಿಯೂ ಖಾಯಂ ಆಗಿ ಉಪಾಧ್ಯಾಯ ವೃತ್ತಿಯನ್ನು ಪಡೆಯದಿದ್ದರೂ ಮಠಾಧೀಶರಾದ ಅನೇಕ ಸಂನ್ಯಾಸಿಗಳಿಗೆ ಅದ್ವೈತ ವೇದಾಂತಶಾಸ್ತ್ರವನ್ನು ಬೋಧಿಸಿರುತ್ತಾರೆ ಮತ್ತು ಅನೇಕ ಸಂಸ್ಕೃತಪಾಠಶಾಲೆಗಳಲ್ಲಿ ಮಕ್ಕಳಿಗೆ ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಕಲಿಸಿ ಉತ್ತಮಶಿಕ್ಷಕರೆಂದು ಖ್ಯಾತಿಯನ್ನು ಪಡೆದಿರುತ್ತಾರೆ.




*35. ವಿವಾಹ: ಪೌರೋಹಿತ್ಯ (ಮೇ, ೨೦೦೨)*

ವೇದಾಧ್ಯಯನಕ್ಕೆ ತವರೂರಿನಂತಿರುವ ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿ ಮತ್ತೂರು ಗ್ರಾಮಗಳಲ್ಲಿ ನಡೆಯುವ ಧಾರ್ಮಿಕ ಸಮಾರಂಭಗಳಿಗೆ ಅವರು ಆಗಾಗ್ಗೆ ಬರುತ್ತಿದ್ದರು. ನನ್ನ ಸಹಪಾಠಿ ಮಿತ್ರರಿರುವ ಆ ಗ್ರಾಮಕ್ಕೆ ನಾನು ಧಾರ್ಮಿಕ ಸಮಾರಂಭಗಳಿಗೆ ಹೋಗುತ್ತಿದ್ದೆ. ಆ ಸಂದರ್ಭದಲ್ಲಿ ನನಗೂ ಶ್ರೀ ಶಾಸ್ತ್ರಿಗಳಿಗೂ ಸ್ನೇಹ ಕುದುರಿತು.

ಶ್ರೀ ನರಸಿಂಹಮೂರ್ತಿಯವರು ಸಹಜವಾಗಿ ಸಂಕೋಚ ಸ್ವಭಾವದವರು. ಆತ್ಮಶ್ಲಾಘನೆ ಅನ್ನು ಅವರು ಎಂದೂ ಮಾಡಿಕೊಂಡವರಲ್ಲ. ಬೀರೂರಿನಲ್ಲಿ ಹೈಸ್ಕೂಲು ಪಂಡಿತರಾಗಿದ್ದ ದಿವಂಗತ ವಿದ್ವಾನ್ ಕೋಟ ವಾಸುದೇವ

ಶಾಸ್ತ್ರಿಗಳು ಅವರಿಗೆ ಆಪ್ತರಾಗಿದ್ದರು. ಸಂಸಾರದಲ್ಲಿ ಅನೇಕ ಕಷ್ಟ ಕಾರ್ಪಣ್ಯಗಳಿದ್ದರೂ, ಸಾರ್ವಜನಿಕ ಪ್ರೀತಿ ವಿಶ್ವಾಸಗಳಿಂದ ಮೌನವಾಗಿ ಎದುರಿಸುತ್ತಾ ಗೌರವವಾಗಿ ಸಂಸಾರವನ್ನು ನಡೆಯಿಸಿದರು. ಹೆಣ್ಣು ಮಕ್ಕಳಿಗೆ ಸಕಾಲದಲ್ಲಿ ಮದುವೆ ಮಾಡಿ ಕನ್ಯಾಪಿತೃತ್ವದಿಂದ ಮುಕ್ತರಾಗಿರುತ್ತಾರೆ.



***36.* ಶಾಸ್ತ್ರಿಗಳ ಹೆಣ್ಣು ಮಕ್ಕಳು ಮತ್ತು ಅಳಿಯಂದಿರು**

ಸುಮಾರು ೧೯೮೦ನೆಯ ಇಸವಿಯ ಸಮಯದಲ್ಲಿ ಅವರು ಭೀಮನಕೋಣೆ ಹವ್ಯಕ ಸಂಪದಭಿವೃದ್ಧಿ ಸಮಾಜದ ಆಶ್ರಯದಲ್ಲಿ ಕೇಡಲಸರದ ಗಣಪತಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ಗುರುಕುಲ ವೇದಪಾಠಶಾಲೆಯ ಅಧ್ಯಾಪಕರಾಗಿ ಇಲ್ಲಿಗೆ ಬಂದರು. ಅನಂತರ ನನಗೂ, ಅವರ ಸಂಪರ್ಕ ಹತ್ತಿರವಾಯಿತು.

ಶ್ರೀ ನರಸಿಂಹಮೂರ್ತಿಗಳು ಕೇಡಲಸರದಲ್ಲಿ ಅಧ್ಯಾಪಕರಾಗಿದ್ದ ಅವಧಿಯಲ್ಲಿ ಅಲ್ಲಿಯ ಅಡಕೆ ಬೆಳೆಗಾರರಲ್ಲಿ ಗಣ್ಯರಾಗಿರುವ ಮತ್ತಿಕೊಪ್ಪದ ಶ್ರೀ ಹರನಾಥರಾಯರ ಮನೆಯಲ್ಲಿ ವಾಸವಾಗಿದ್ದರು. ಕೇಡಲಸರಕ್ಕೂ ಕೊಪ್ಪಕ್ಕೂ ಎರಡೂವರೆ ಮೈಲಿ ದೂರ. ಅವರು ಪ್ರತಿನಿತ್ಯವೂ ಬೆಳಗ್ಗೆ ಮತ್ತಿಕೊಪ್ಪದಿಂದ ಕೇಡಲಸರಕ್ಕೆ ಪಾದಚಾರಿಗಳಾಗಿ ಬಂದು ಪಾಠಶಾಲೆಯ ಕಾರ್ಯವನ್ನು ಮುಗಿಸಿಕೊಂಡು ಸಂಜೆ ಐದು ಘಂಟೆಗೆ ಪಾದಚಾರಿಯಾಗಿ ಮತ್ತಿಕೊಪ್ಪಕ್ಕೆ ಹೋಗುತ್ತಿದ್ದರು. ವೃದ್ಧರಾಗಿದ್ದರೂ ನಡೆಯುವುದಕ್ಕೆ ಹಿಂಜರಿಯುತ್ತಿರಲಿಲ್ಲ.

ಮಿತಭಾಷಿಗಳೂ, ಮಿತಾಹಾರಿಗಳೂ, ಶ್ರೋತ್ರಿಯರೂ ಆಗಿರುವ ಶಾಸ್ತ್ರಿಗಳು ಈ ಮುಪ್ಪಿನಲ್ಲಿಯೂ ಆರೋಗ್ಯವಂತರಾಗಿ ಚಟುವಟಿಕೆಯಿಂದ ಇರುವುದು ಅವರ ನೈಷ್ಠಿಕ ನಿಯಮಗಳ ಅಭ್ಯಾಸಬಲವನ್ನು ವ್ಯಕ್ತಪಡಿಸುತ್ತದೆ.

ಯದೃಚ್ಛಾಲಾಭಸಂತುಷ್ಟರಾದ ಶಾಸ್ತ್ರಿಗಳ ಜನಪ್ರಿಯತೆ ಅಸಾಧಾರಣವಾದುದು. ಅವರು ದೊಡ್ಡ ವಿದ್ವಾಂಸರೆಂದು ಸಾಮಾನ್ಯ ಜನರಿಗೆ ಇಂದಿಗೂ ಗೊತ್ತಿಲ್ಲ. ಶ್ರೀ ನರಸಿಂಹಮೂರ್ತಿಗಳು ಸರ್ಕಾರದವರು ಸಂಸ್ಕೃತ ವಿದ್ವಾಂಸರಿಗೆ ಕೊಡುವ ಪ್ರಶಸ್ತಿ ಪುರಸ್ಕಾರಗಳಿಗೆ ಆಸೆ ಪಟ್ಟವರಲ್ಲ. ಆ ಬಗ್ಗೆ ಯಾರನ್ನೂ ಸಹಾಯಕ್ಕಾಗಿ ಯಾಚಿಸಲೂ ಇಲ್ಲ. ಶ್ರೀ ಹರನಾಥರಾಯರು ತಮ್ಮ ಮನೆಯಲ್ಲಿ ನಡೆಯುವ ಮಂಗಲ ಮಹೋತ್ಸವಕ್ಕೆ ಈಗಲೂ ಶ್ರೀ ನರಸಿಂಹಮೂರ್ತಿಗಳನ್ನು ಕರೆಸಿಕೊಳ್ಳುತ್ತಾರೆ.

ವಿದ್ವಾನ್ ನರಸಿಂಹಮೂರ್ತಿಗಳ ವಿದ್ಯಾರ್ಹತೆಯನ್ನು ಪರಿಶೀಲಿಸಿದ ಬೊಂಬಾಯಿನ ಭಾರತೀಯ ವಿದ್ಯಾಭವನದ ಬೆಂಗಳೂರು ಶಾಖೆಯು ಅವರನ್ನು ಕರೆಯಿಸಿಕೊಂಡು **ವೇದರತ್ನ** ಎಂಬ ಉಪಾಧಿಯನ್ನು ಕೊಟ್ಟು, ಸನ್ಮಾನಿಸಿ ಒಂದು ಲಕ್ಷ ರೂಪಾಯಿಗಳ ಗೌರವಧನವನ್ನು ಈಚೆಗೆ ನೀಡಿರುವುದು ಸರ್ವದಾ ಅಭಿನಂದನೀಯವಾಗಿದೆ.

ಶ್ರೀ ನರಸಿಂಹಮೂರ್ತಿಗಳವರ ಮೇಧಾಶಕ್ತಿ ಅಸಾಮಾನ್ಯವಾದುದು. ಅವರು ಅಧ್ಯಯನ ಮಾಡಿದ ಶಾಸ್ತ್ರಗಳಲ್ಲಿ ಜಿಜ್ಞಾಸೆಯುಂಟಾದಾಗ ನಮಗೆ ಉಂಟಾದ ಸಂಶಯವನ್ನು ಸಪ್ರಮಾಣವಾಗಿ ನಿವಾರಿಸಿ ಸಮಾಧಾನಕರವಾದ ಉತ್ತರವನ್ನು ಕೊಡುತ್ತಾರೆ ಎಂಬುದು ನನ್ನ ಅನುಭವ. ಹೊಸಮಂತ್ರಗಳನ್ನು ಒಮ್ಮೆ ಓದಿ ಅನಂತರ ತಮ್ಮ ಸ್ಮರಣಶಕ್ತಿಯಿಂದ ಮುಂದುವರಿಸಿಕೊಂಡು ಹೋಗುವ ಪರಿಪಾಠ ಅವರಿಗಿದೆ.

ಈಗಿನ ಕಾಲದಲ್ಲಿ ಪೌರೋಹಿತ್ಯವನ್ನು ಶಾಸ್ತ್ರೀಯವಾಗಿ ಶುದ್ಧವಾಗಿ ಮಾಡಿಸುವ ವೈದಿಕರು ಕಡಮೆಯಿದ್ದಾರೆ. ಆದರೆ

ನರಸಿಂಹಮೂರ್ತಿಗಳು ಹಾಗಲ್ಲ. ಅವರು ಗೃಹಸ್ಥರ ಮನೋವೃತ್ತಿಯನ್ನು ತಿಳಿದು ಅವರಿಗೆ ಸಮಾಧಾನವಾಗುವಂತೆ ದಕ್ಷಿಣಾಲೋಭವಿಲ್ಲದೆ ಶಾಸ್ತ್ರೀಯವಾಗಿ ಮಾಡಿಸುತ್ತಾರೆ. ಸಾಂಪ್ರದಾಯಿಕವಾದ ಆಚರಣೆಯನ್ನು ಕೈಬಿಡುವುದಿಲ್ಲ. **ಅಸಂತುಷ್ಟೋ ದ್ವಿಜೋ ನಷ್ಟಃ ಸಂತುಷ್ಟಶ್ಚ ಮಹೀಪತಿಃ** ಎಂಬ ನೀತಿಯಂತೆ ಬ್ರಾಹ್ಮಣರಿಗೆ ಅಸಂತುಷ್ಟಿ ಒಳ್ಳೆಯದಲ್ಲ.

ಗೌತಮಧರ್ಮಸೂತ್ರದಲ್ಲಿ ಪೌರೋಹಿತ್ಯವನ್ನು ಕುರಿತು

**"ಬ್ರಾಹ್ಮಣಂ ಚ ಪುರೋ ದಧೀತ"**
**(ಗೌ.ಧ.ಸೂ.೧೧-೧೨)**
**"ವಿದ್ಯಾಭಿಜನವಾಗ್ರೂಪವಯಶ್ಶೀಲಸಂಪನ್ನಮ್"**
**(ಗೌ.ಧ.ಸೂ.೧೧-೧೩)**
**"ನ್ಯಾಯ ವೃತ್ತಂ ತಪಸ್ವಿನಮ್" (ಗೌ.ಧ.ಸೂ.೧೧-೧೪)**

ಎಂದಿದೆ.

ಬ್ರಾಹ್ಮಣನನ್ನು ಪುರೋಹಿತನನ್ನಾಗಿ ಮಾಡಬೇಕು. ಆತನು ಅನೇಕ ವೇದಶಾಸ್ತ್ರಪಾರಂಗತನೂ ಆಗಿರಬೇಕು. ಆತನ ವಾಕ್ಕು ವ್ಯಾಕರಣದೋಷರಹಿತವಾಗಿ ಸ್ಫುಟವಾಗಿರಬೇಕು. ಸತ್ಕುಲ ಪ್ರಸೂತನಾದ ಅವನು ಮಧ್ಯಮ ವಯಸ್ಸಿನವನೂ, ಸುಂದರನೂ ಆಗಿರಬೇಕು. ಅವನು ಅಂತಃಕರಣಶುದ್ಧನೂ, ಆಚಾರವಂತನೂ ಆಗಿರಬೇಕು. ಅವನಲ್ಲಿ ಲೋಕವಿರುದ್ಧವಾದ ನಡವಳಿಕೆಯಿರಬಾರದು. ಅವನು ವಿಲಾಸಿಯಾಗಿರಬಾರದು. ತಪಸ್ವಿಯೆಂದರೆ ಅಭೋಗಪರ; ಅರ್ಥಾತ್ ಯದೃಚ್ಛಾಲಾಭಸಂತುಷ್ಟನೆಂದು ಹೇಳಬಹುದು.

ಗೌತಮಧರ್ಮಸೂತ್ರದಲ್ಲಿ ಅಭಿನಂದನೆಗೆ ಅರ್ಹರಾದವರನ್ನು ಎತ್ತಿ ಹೇಳಲಾಗಿದೆ.

**"ವಿತ್ತಬಂಧುಕರ್ಮಜಾತಿವಿದ್ಯಾವಯಾಂಸಿ ಮಾನ್ಯಾನಿ,**
**ಪರಬಲೀಯಾಂಸಿ" ||೬-೨೧||**
**ಶ್ರುತಂ ತು ಸರ್ವೇಭ್ಯೋ ಬಲೀಯಃ ||೬-೨೨||**
(ಆರನೆಯ ಅಧ್ಯಾಯ)

ಧನಿಕ, ಬಂಧು, ಅಧಿಕಾರಿ, ಅಭಿಜಾತ, ವಿದ್ಯಾವಂತ, ವಯಸ್ಸಿನಿಂದ ಹಿರಿಯ - ಇವರೆಲ್ಲರೂ ಮಾನ್ಯರು. ಇವರೆಲ್ಲರೂ ಒಂದು ಸಭೆಯಲ್ಲಿ ಒಟ್ಟಾಗಿ ಸೇರಿದಾಗ ವಿಲೋಮಕ್ರಮದಿಂದ ಅವರನ್ನು ಅಭಿನಂದಿಸಬೇಕು. ಅಂದರೆ ಮೊದಲು ವಯಸ್ಸಾದವರು, ಅನಂತರ ವಿದ್ಯಾವಂತರು, ಅಭಿಜಾತ, ಅಧಿಕಾರಿ, ಬಂಧು, ಧನಿಕ- ಹೀಗೆ. ಆದರೆ ವೇದಶಾಸ್ತ್ರಜ್ಞರು ಎಲ್ಲರಿಗಿಂತಲೂ ಪ್ರಥಮವಾಗಿ ಅಭಿನಂದನೆಗೆ ಅರ್ಹರು

ವೇದವಿದ್ಯಾವಂತನು ಅಗ್ನಿಯಂತೆ ತೇಜಸ್ವಿ. **"ಅಗ್ನಿ ರ್ವೈ ಮಾಣವಕಃ "** ಎಂದೂ ಇದೆ.

ಪ್ರಕೃತ ವಯೋವೃದ್ಧರೂ ಜ್ಞಾನವೃದ್ಧರೂ ಆಗಿರುವ ಲಿಂಗದಹಳ್ಳಿ ನರಸಿಂಹಮೂರ್ತಿಯವರು ಸರ್ವಥಾ ಅಭಿನಂದನೆಗೆ ಅರ್ಹರು. ಬ್ರಾಹ್ಮಣರ ಸರ್ವಸ್ವವೇ ವೇದಶಾಸ್ತ್ರಗಳು.

ಹಿಂದೆ ಅಧ್ಯಯನಮಾರ್ಗದಲ್ಲಿ ಇದ್ದ ವೇದಶಾಖೆಗಳು ಕಾಲಧರ್ಮದಿಂದ ನಷ್ಟವಾಗಿವೆ. ಮಹಾಭಾಷ್ಯದಲ್ಲಿ ಪತಂಜಲಿ ಮಹರ್ಷಿಗಳು ಹಿಂದೆ ಪ್ರಚಾರದಲ್ಲಿದ್ದ ವೇದಶಾಖೆಗಳನ್ನು ಕುರಿತು **ಏಕಶತಮಧ್ವರ್ಯುಶಾಖಾಃ ಸಹಸ್ರವರ್ತ್ಮಾ ಸಾಮವೇದಃ ಏಕವಿಂಶತಿಧಾ ಬಾಹ್ವೃಚಂ ನವಧಾ ಆಥರ್ವಣೋ ವೇದಃ** ಎಂದಿದ್ದಾರೆ.

ಅಂದರೆ ಋಗ್ವೇದದಲ್ಲಿ ಇಪ್ಪತ್ತೊಂದು ಶಾಖೆಗಳೂ, ಯಜುರ್ವೇದದಲ್ಲಿ ಒಂದು ನೂರ ಒಂದು ಶಾಖೆಗಳೂ, ಸಾಮವೇದದಲ್ಲಿ ಸಾವಿರ ಶಾಖೆಗಳೂ, ಅಥರ್ವಣವೇದದಲ್ಲಿ ಒಂಬತ್ತು ಶಾಖೆಗಳೂ ಇದ್ದವಂತೆ. ಆದರೆ ಈಗ ನಮ್ಮ ಉಪೇಕ್ಷೆಯಿಂದ ಪ್ರತಿವೇದದಲ್ಲಿಯೂ ಎರಡೋ-ಮೂರೋ ಶಾಖೆಗಳು ಅಧ್ಯಯನಮಾರ್ಗದಲ್ಲಿ ಇವೆ.

ನಮ್ಮ ಹಿರಿಯರು ಗುರುಕುಲ ಸಂಪ್ರದಾಯದಿಂದ ವೇದಗಳನ್ನು ರಕ್ಷಿಸಿಕೊಂಡು ಬಂದಿದ್ದರು. ನಾವು ಮುಂದೆ ನಮ್ಮ ಮಕ್ಕಳಿಗಾಗಿ ಋಷಿಗಳ ಜ್ಞಾನಾರ್ಜಿತ ಸ್ವತ್ತಾದ ವೇದವನ್ನು ರಕ್ಷಿಸಬೇಕಾಗಿದೆ. ವೇದಾಧ್ಯಯನವನ್ನು ರಕ್ಷಿಸುವುದು, ಬ್ರಾಹ್ಮಣರ ಮುಖ್ಯ ಜವಾಬ್ದಾರಿಯಾಗಿದೆ. ಇಂದಿನ ಬ್ರಾಹ್ಮಣ ಕುಮಾರರಿಗೆ ಮಾರ್ಗದರ್ಶನಕ್ಕಾದರೂ, ವೇದವಿದ್ವಾಂಸರನ್ನು ಸನ್ಮಾನಿಸುವುದು ಸೂಕ್ತವಾಗಿದೆ. ಅಭಿನಂದನಗ್ರಂಥ ಸಮರ್ಪಣೆ ಸಹ ಮುಂದಿನವರಿಗೆ ಕೈಗನ್ನಡಿಯಾಗಲಿ.

ನನಗೆ ಅತ್ಯಂತ ಪ್ರಿಯರಾದ ಶ್ರೀ ವಿದ್ವಾನ್ ನರಸಿಂಹಮೂರ್ತಿಗಳು ಶತಾಯುಷಿಗಳಾಗಿ ಆರೋಗ್ಯವಂತರಾಗಿ ಬಾಳಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ಶ್ರೋತ್ರಿಯರಿಗೆ ಸಲ್ಲುವ ಗೌರವ ವೇದ ಸಮ್ಮತವೆಂದು ವಿನಂತಿಸುತ್ತಾ **ಯಾವತೀ ವೈ ದೇವತಾಃ ತಾಃ ಸರ್ವಾ ವೇದವಿದಿ ಬ್ರಾಹ್ಮಣೇ ವಸಂತಿ ತಸ್ಮಾತ್ ಬ್ರಾಹ್ಮಣೇಭ್ಯೋ ವೇದವಿದ್ಭ್ಯೋ ದಿವೇ ದಿವೇ ನಮಸ್ಕುರ್ಯಾತ್ ನಾಶ್ಲೀಲಮ್ ಕೀರ್ತಯೇದೇತಾ ಏವ ದೇವತಾಃ ಪ್ರೀಣಾತಿ** ಎಂಬ ಮಂತ್ರದೊಡನೆ ಈ ಪರಿಚಯಾತ್ಮಕ ಪ್ರಬಂಧವನ್ನು ಉಪಸಂಹರಿಸುತ್ತೇನೆ.

## ೫. ಶತಮಾನ ಪುರುಷ

*ಎ. ಸಿ. ಆಶಾ*

ಈ ಶತಮಾನದಿ ನಾವ್ ಕಂಡ
ಮಹನೀಯರು ಇವರು,
ಹಸಿರು ಬನದ ನಡುವೆ ನಿಂದ
ಬೃಹದಾಲದಂತೆ ಇಹರು ೧


ಸಂಸಾರಿಯಾಗಿದ್ದು ನಿಜಸಂತರು ಇವರು
ಶಾಂತಮುದ್ರೆಯನೋಂತ ನಿತ್ಯಯೋಗಿಯೆ ಇವರು
ಉಪಕಾರಿಯಿವರು, ಪ್ರತಿಫಲವ ಬೇಡಿಲ್ಲ
ಇವರಿಂದ ಉಪಕೃತರೆ ಇಲ್ಲಿ ಎಲ್ಲ ೨

ಜ್ಞಾನವಾರಿಧಿಯಲ್ಲಿ ನಿತ್ಯ ಈಜುತಲಿಹರು
ವೇದಸಂದೇಶಸಾರದ ವಾಹಕರೆ ಇವರು
ನಿತ್ಯಸಾಧಕರಿವರು ನಿತ್ಯಪೂಜಕರಿವರು
ಈ ಹಿರಿಮೆ ಮತ್ತಾರಿಗೂ ಇಲ್ಲಿ ಇಲ್ಲ ೩

ತಮವನ್ನು ಮೀರಿನಿಂತ ಉತ್ತಮರು ಇವರು
ಪ್ರವೃತ್ತಿ ಮಾರ್ಗದಲೆ ಮುಂದೆ ನಡೆದವರು
ಪಾತ್ರಾಪಾತ್ರರನು ಸಮನಾಗಿ ಕಂಡವರು
ಇವರು ನಮ್ಮ ಹಿರಿಯರು, ವಿಭೂತಿ ಪುರುಷರು ೪

ಆ ಭಗವಂತ ಕಂಭದಿಂದೆದ್ದು ಬಂದಂತೆ
ನಮ್ಮ ಮುಂದಿರುವ ಇವರೆ ನಾರಸಿಂಹರು
ವೇದರತ್ನವು ಇವರು, ಪಾಮರರೇ? ಇವರು?
ತಮ್ಮ ಹಿರಿಮೆಯಿಂದಲೇ ನಮ್ಮ ಹೆಮ್ಮೆಯಾಗಿಹರು ೫

ಲೌಕಿಕದೊಳಲೌಕಿಕವ ಗೋಚರಿಸಿಕೊಂಡವರು
ಐಹಿಕದ ಐಸಿರಿಯ ಬೇಡವೆಂದವರು
ಜ್ಞಾನಸಂಪದವ ವಿತರಿಸಿದ ಧನಿಕರಿವರು
ಇವರೆ ನಮ್ಮ ಹಿರಿಯರು ಶತಾಯುಃ ಪುರುಷರು ೬



***37.** ಅಧ್ಯಯನಶೀಲ*

# ೬. ಪ್ರಜ್ಞಾವಂತ

***ಪೂರ್ಣಿಮಾ ರಂಗನಾಥ್***

ನಮ್ಮ ಸಮಾಜದ ಪ್ರಜ್ಞಾವಂತ ಪೀಳಿಗೆಯಲ್ಲಿ ಶ್ರೀಯುತ ವೇ. ಬ್ರ. ಶ್ರೀ ಎಸ್.ನರಸಿಂಹಮೂರ್ತಿಯವರೂ ಒಬ್ಬರಾಗಿದ್ದಾರೆ. ನಮ್ಮ ಬದುಕಿನ ಗುಣ ದೋಷಗಳ ಬಗ್ಗೆ, ಆಯಾ ಸಂದರ್ಭಕ್ಕೆ ತಕ್ಕಂತೆ ವೇ. ಬ್ರ. ಶ್ರೀಗಳು ಸಮಯೋಚಿತ ಅಭಿಪ್ರಾಯಗಳನ್ನು ಕೊಡುತ್ತಾ ಬರುತ್ತಿದ್ದಾರೆ. *ಈ* ದಿಸೆಯಲ್ಲಿ ನೆನಪಿನ ಭಂಡಾರದಿಂದ ಕೆಲವಂಶಗಳನ್ನು ತೆಗೆದಿಡುವ ಅಲ್ಪಪ್ರಯತ್ನವಿದು.

ಭಾರತದ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಅಂಡೇಕುಳಿ ಮಂಜಯ್ಯನವರು ಗಾಂಧೀಜಿಯವರ ಕರೆಯನ್ನು ಅನುಸರಿಸಿ ಚಳವಳಿಯಲ್ಲಿ ಭಾಗವಹಿಸಿ ಮೂರು-ನಾಲ್ಕು ಬಾರಿ ಜೈಲಿಗೆ ಹೋಗಿ ಬಂದಿದ್ದರು. ಆಗಿನ ಕಾಲದಲ್ಲಿನ್ನೂ ನಮ್ಮವರಿಗೆ ಹೊರಗಿನ ಸಂಪರ್ಕ ಹೆಚ್ಚಾಗಿ ಇರಲಿಲ್ಲವಾಗಿ ಮಂಜಯ್ಯನವರಿಗೆ ಶ್ರೀಯುತ ವೇ.ಬ್ರ.ಶ್ರೀಗಳ ತಂದೆಯವರಾದ ಶ್ರೀ ಶ್ಯಾಮಶಾಸ್ತ್ರಿಗಳಂತಹ ಮಡಿವಂತರು ಆಂತರಂಗಿಕವಾಗಿ ಬಹಿಷ್ಕಾರ ಹಾಕಿದ್ದರು. ಆಗ ಶ್ರೀಯುತ ನರಸಿಂಹಮೂರ್ತಿಯವರ ಮದುವೆಯ ಸಂದರ್ಭ. ಮಂಜಯ್ಯನವರೂ ಮದುವೆಗೆ ಬಂದಿದ್ದರು. ಆಗ ನಡೆದ ಕೆಲವು ಘಟನೆಗಳು, ಮಾತುಕಥೆಗಳು ಮಂಜಯ್ಯನವರನ್ನು ಘಾಸಿಗೊಳಿಸಿತ್ತು. ಅದನ್ನು ತಿಳಿದ ನರಸಿಂಹಮೂರ್ತಿಗಳು, ಮಂಜಯ್ಯನವರು ಊರಿಗೆ ಮರಳಿದನಂತರ ಅವರಿಗೊಂದು ಪತ್ರ ಬರೆದರು. ಅದರಲ್ಲಿ ದೇಶಸೇವೆಯಂತಹ ಉನ್ನತ ಕಾರ್ಯದಲ್ಲಿ ಎದುರಾಗುವ ಸಮಸ್ಯೆಗಳು, ಅದನ್ನು ಎದುರಿಸುವ ಮನೋಬಲವನ್ನು ಹೊಂದುವ ವಿಧಾನ- ಇವುಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದರು. ಪರಿಣಾಮ ಮಂಜಯ್ಯನವರಿಗೆ ತಮ್ಮ ಕೆಲಸದ ಬಗ್ಗೆ ಪೂರ್ಣ ತೃಪ್ತಿ ಸಿಕ್ಕಿತ್ತು.

ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಹಲವಾರು ಮಂದಿಯನ್ನು ನೋಡಿದ್ದರೂ, ಮಂಜಯ್ಯನವರಂತಹ ನಿಷ್ಠಾವಂತರ ತ್ರಿಕರಣ ಪೂರ್ವಕವಾದ ದೇಶಸೇವೆಯನ್ನು ನಾನೆಲ್ಲೂ ನೋಡಲಿಲ್ಲ ಎನ್ನುತ್ತಾರೆ ಶ್ರೀಯುತರು.

ಇದೇ ರೀತಿ ದೇಶಸೇವೆಯಲ್ಲಿ ಭಾಗವಹಿಸಿದ ನಮ್ಮೂರಿನ ಮಹಿಳೆಯರಾದ ಶ್ರೀಮತಿ ಸಾವಿತ್ರಮ್ಮ ರಾಮಶರ್ಮಾ, ಶ್ರೀಮತಿ ಪದ್ಮಾರಾಮದಾಸ್ ಮತ್ತು ಶ್ರೀಮತಿ ರುಕ್ಮಿಣಿ ರಾಮಚಂದ್ರರಾವ್ ಅವರಿಗೆ ಸಮಾಜವು ಬಹಿರಂಗವಾಗಿಯೇ ಬಹಿಷ್ಕಾರವನ್ನು ಹಾಕಿತ್ತು. ಆ ಸಂದರ್ಭದಲ್ಲಿ ಕೂಡ ಶ್ರೀಯುತರು ಆ ಮಹಿಳೆಯರ ಕುಟುಂಬಕ್ಕೆ ಬರೆದ ಸಾಂತ್ವನದ ಪತ್ರದಲ್ಲಿ ದೇಶಸೇವೆಯಂತಹ ಕೆಲಸದಲ್ಲಿ ಎದುರಾಗುವ ಅಡ್ಡಿ ಆತಂಕಗಳಿಗೆ ಅಂಜಬಾರದು, ಇಷ್ಟು ಒಳ್ಳೆಯ ಕೆಲಸ ಮಾಡಿದ ಮಹಿಳೆಯರಿಗೆ ಎಂದೂ ಸಮಾಜದಲ್ಲಿ ಪುರಸ್ಕಾರವಿದೆ ಎಂದರು. *ಈ* ಘಟನೆಯಿಂದ ಶ್ರೀಮತಿ ಸಾವಿತ್ರಮ್ಮ ರಾಮಶರ್ಮಾ ಮತ್ತು ಪದ್ಮಾರಾಮದಾಸ್ ಇವರಿಗೆ ತಮ್ಮ ಸಮಾಜಸೇವೆಯನ್ನು ಹೆಚ್ಚಿನ ಉತ್ಸಾಹದಿಂದ ಅನಂತರವೂ ಮುಂದುವರೆಸಲು ಸಾಧ್ಯವಾಯಿತು. ಇದು ಲೇಖನಿಯಿಂದಲೇ ದೇಶಸೇವೆ ಮಾಡಿದ ಶ್ರೀಯುತರ ಶೈಲಿ.

ವೇ. ಬ್ರ. ಶ್ರೀಗಳು ತಮ್ಮ ಯಾವುದೇ ವಿಚಾರವನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಪ್ರಸ್ತುತಪಡಿಸುತ್ತಾರೆ. ಅದರಲ್ಲಿ ಮುಖ್ಯವಾದದ್ದು ಜಾತಿ. ಆ ವಿಚಾರಕ್ಕೆ ಸಂಬಂಧಿಸಿದಂತೆ ಸುಮಾರು ೧೯೪೩ರಲ್ಲಿ ಶ್ರೀಯುತರು 'ಬ್ರಾಹ್ಮಣ-ಬ್ರಾಹ್ಮಣೇತರರ ಸಮಸ್ಯೆ' ಎಂಬ ಲೇಖನವನ್ನು ಬರೆದಿದ್ದರು. ಇದರಲ್ಲಿ ಜಾತಿ ಎಂಬುದು ಹುಟ್ಟಿನಿಂದ ಬರುವುದೋ ಅಥವಾ ಗುಣದಿಂದ ಬರುವುದೋ ಎಂಬ ಬಗ್ಗೆ ವಿವರವಾಗಿ ಚರ್ಚಿಸಿ, 'ಇಡೀ ಮಾನವ ಜನಾಂಗ ಒಂದೇ. ಇದರಲ್ಲಿ ಪಾನ ವ್ಯಸನಾದಿ ದುಶ್ಚಟಗಳಿಗೆ ಬಲಿಯಾದ ವ್ಯಕ್ತಿ *ಈ* ಸಮಾಜದಲ್ಲಿ ಬೆರೆಯಲು ಅನರ್ಹನೇ ಹೊರತು ಅವರ ಕುಟುಂಬ ವರ್ಗದವರಿಗೆ *ಈ* ಅಸ್ಪೃಶ್ಯತೆ ಅನ್ವಯವಾಗುವುದಿಲ್ಲ. ಮೊದಲಿನಿಂದಲೂ ಸ್ಪೃಶ್ಯಾಸ್ಪೃಶ್ಯತೆಗೆ ಒತ್ತುಕೊಟ್ಟು, ಅಸ್ಪೃಶ್ಯರ ಒಂದು ವರ್ಗವನ್ನೇ ಸೃಷ್ಟಿಸಿರುವುದು ಸಮಾಜದ ದೋಷ' ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಗುಣ ಧರ್ಮವನ್ನು ಅನುಸರಿಸಿ ವ್ಯಕ್ತಿ, ಸಮಾಜದಲ್ಲಿ ತನ್ನ ಸ್ಥಾನವನ್ನು ಹೊಂದುತ್ತಾನೆಯೇ ಹೊರತು ಬೇರೆಯಲ್ಲ. ಗೀತೆಯಲ್ಲಿ ಹೇಳಿರುವುದೂ ಇದೇ ಸರಳಸತ್ಯವನ್ನು ಎನ್ನುತ್ತಾರೆ.

ಶ್ರೀಯುತರು, ಪೂರ್ವಾಶ್ರಮದ ಶ್ರೀಧರಸ್ವಾಮಿಗಳನ್ನು ಬೀರೂರಿನಲ್ಲಿ ಮೊದಲ ಬಾರಿ ಭೇಟಿ ಮಾಡಿದಾಗಲೇ ಅವರಿಂದ ಪ್ರಭಾವಿತರಾದರು. ಅನಂತರದಲ್ಲಿ ಎರಡು ಬಾರಿ ಶೃಂಗೇರಿಯಲ್ಲಿ ಸ್ವಾಮಿಗಳನ್ನು ಭೇಟಿಯಾಗುವ ಸಂದರ್ಭ ಬಂದಿತು. ಸ್ವಾಮಿಗಳು ಎನ್ನುವ ಮಾತಿಗೆ ತಕ್ಕಂತೆ ಯಾವುದೇ ಆಸೆ ಆಮಿಷಗಳಿಗೊಳಪಡದೆ, ಯಾವ ಹೊಗಳಿಕೆಗೂ ಬಲಿಯಾಗದೆ ಇರುವ ನಿಜವಾದ ಸಂನ್ಯಾಸಿ ಅವರು ಎಂದು ಶ್ರೀಯುತರು ಹೊಗಳುತ್ತಾರೆ.

ಇತ್ತೀಚಿನ ದಿನಗಳಲ್ಲಿ ಶ್ರೀಯುತರು ನೋಡಿದ, ಒಡನಾಡಿದ ವ್ಯಕ್ತಿಗಳಲ್ಲಿ ಸಖರಾಯಪಟ್ಟಣ(ಸಕ್ರೆಪಟ್ನ)ದ ಶ್ರೀಯುತ ವೆಂಕಟಾಚಲಯ್ಯನವರೂ ಒಬ್ಬರು.



**38. ಸಖರಾಯಪಟ್ಟಣದಲ್ಲಿ ಸಂಮಾನ (೧.೬.೨೦೦೩)**

**ಯದಾ ಕಿಂಚಿತ್ಕಿಂಚಿದ್ಬುಧಜನಸಕಾಶಾದವಗತಂ |**
**ತದಾ ಮೂರ್ಖೋಽಸ್ಮೀತಿ ಜ್ವರ ಇವ ಮದೋ ಮೇ**
**ವ್ಯಪಗತಃ |**

'ಯಾವುದೇ ದೇವತಾ ಸ್ತೋತ್ರಗಳಿಗಿಂತಲೂ ಮಿಗಿಲಾದುದು ಗಾಂಧೀಜಿಯವರ ಜೀವನ ದರ್ಶನ ಮತ್ತು ಆತ್ಮಚರಿತ್ರೆ' ಎನ್ನುತ್ತಾರೆ ಶ್ರೀಯುತರು.

ಪ್ರಸ್ತುತದಲ್ಲಿ ಮುಕ್ತಿಯನ್ನು ಹೊಂದ ಬಯಸುವ ವ್ಯಕ್ತಿಯು ಯಾರೂ ಇಲ್ಲದ ಜಾಗಕ್ಕೆ ಹೋಗಿ ಧ್ಯಾನಕ್ಕಾಗಲೀ, ತಪಸ್ಸಿಗಾಗಲೀ ಕುಳಿತರೆ ಆತನು ತನ್ನ ಜವಾಬ್ದಾರಿಗಳಿಂದ ನುಣುಚಿಕೊಂಡಂತಾಗುವುದಿಲ್ಲವೇ ಎಂಬ ಸಂದೇಹಕ್ಕೆ ಬಹಳ ಸರಳವಾಗಿ ಉತ್ತರಿಸುತ್ತಾರೆ. 'ಯಾವುದೇ ಸಂಸಾರಿ ಅಥವಾ ವ್ಯಕ್ತಿ ಸಂಸಾರದ ಜಂಜಾಟದಲ್ಲೇ ತನ್ನ ಪ್ರತಿಯೊಂದು ಕೆಲಸವನ್ನೂ ನಿಷ್ಕಾಮಕರ್ಮದಂತೆ ಪೂರ್ಣ ಜವಾಬ್ದಾರಿಯಿಂದ ನಿಃಸ್ವಾರ್ಥದಿಂದ ನಿರ್ವಹಿಸುತ್ತಾನೋ ಆತನೇ ರೂಢಿಯೊಳಗುತ್ತಮನು. ಅದೇ ಯಜ್ಞ, ಯಾಗ. ಅದಕ್ಕಿಂತ ಬೇರೆ ತಪಸ್ಸು ಬೇಕಿಲ್ಲ. ಅದೇ ಮನುಷ್ಯನನ್ನು ಮುಕ್ತಿಗೆ ಒಯ್ಯುವ ಸರಳವಾದ ಮತ್ತು ನಿಜವಾದ ದಾರಿ' ಎಂಬುದೇ ಮನುಕುಲಕ್ಕೆ ಶ್ರೀಯುತರು ನೀಡುವ ಸಂದೇಶ.

ಅವರ ದಾನ-ಧರ್ಮ, ನಯ-ವಿನಯ, ಆದರೋಪಚಾರಗಳು ಶ್ರೀಯುತರಿಗೆ ಬಹಳ ಮೆಚ್ಚುಗೆ. ವೃತ್ತಿಯಲ್ಲಿ ಜಮೀನ್ದಾರರು; ಪ್ರವೃತ್ತಿಯಲ್ಲಿ ಸಾಧುಗಳು. ಈ ರೀತಿಯ ಸರಳ ಸ್ವಭಾವದಿಂದ ಸಮಾಜದಲ್ಲಿ ತಮ್ಮ ಸ್ಥಾನವನ್ನು ತಾವೇ ಗಳಿಸಿಕೊಂಡಿದ್ದಾರೆ. ತಮಗೆ ಭಗವಂತನು ಕರುಣಿಸಿದ ಭಾಗ್ಯವನ್ನೆಲ್ಲಾ ದಾನದ ರೂಪದಲ್ಲಿ ಹಿಂದಿರುಗಿಸುವುದರ ಮೂಲಕ, ತಮ್ಮ ನಿಃಸ್ವಾರ್ಥ ಸೇವೆಯಿಂದ ಈ ನಿತ್ಯಯಜ್ಞದಲ್ಲಿ ಲೌಕಿಕದಲ್ಲಿದ್ದೂ ಪರಮಾರ್ಥವನ್ನು ಸಾಧಿಸಿದ್ದಾರೆ ಎಂದು ಹೆಮ್ಮೆ ಪಡುತ್ತಾರೆ.

ಶ್ರೀಯುತರ ಮೇಲೆ ಗಾಂಧೀಜಿಯವರ ಪ್ರಭಾವ ಅಪಾರವಾಗಿದೆ. ಮೊದಮೊದಲಿಗೆ ಗಾಂಧೀಜಿಯವರ ವಿಚಾರಗಳು ಅವರಿಗೆ ಅಷ್ಟೇನೂ ಹಿಡಿಸುತ್ತಿರಲಿಲ್ಲ. ನಿಧಾನವಾಗಿ ಅವರ ಲೇಖನಗಳು, ಜೀವನ ಶೈಲಿ, ಅವರ ಆತ್ಮಚರಿತ್ರೆ ಇವನ್ನೆಲ್ಲಾ ನೋಡುತ್ತಾ, ಓದುತ್ತಾ ಬಹಳವಾಗಿ ಪ್ರಭಾವಿತರಾದರು. ಅದರ ಬಗ್ಗೆ ಒಂದು ಉದಾಹರಣೆಯನ್ನೂ ಹೇಳುತ್ತಾರೆ.

**ಯದಾ ಕಿಂಚಿಜ್ಞೋಽಹಂ ಗಜ ಇವ ಮದಾಂಧ**
**ಸ್ಸಮಭವಂ**
**ತದಾ ಸರ್ವಜ್ಞೋಽಸ್ಮೀ ತ್ಯಭವದವಲಿಪ್ತಂ ಮಮ**
**ಮನಃ|**



**39.ಶ್ರೀರಾಮಮಂದಿರದ ಶಂಕುಸ್ಥಾಪನೆ : ೨೬.೧೦.೧೯೮೬**
**ಸಂದೇಶ ಓದುತ್ತಿರುವ ಎಲ್.ಆರ್. ಶ್ರೀನಿವಾಸ್ ; ಹಿರೇಮಗಳೂರು ಶ್ರೀ ಕಣ್ಣನ್,**
**ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು ಮತ್ತು ಶಾಸ್ತ್ರಿಗಳು**

# ೭. ಅಂತರ್ಯದ ಸೊಗಸು

*ಡಾ. ಎಲ್.ಎಚ್.ಮಂಜುನಾಥ್*

ನೀಳ ಶರೀರ, ಕಂದು ಬಣ್ಣ, ಬಿಳಿ ಕುರುಚಲ ಗಡ್ಡ, ತೊಂಬತ್ತರ ಇಳಿಯವಸ್ಸಿನಲ್ಲಿಯೂ ಬಾಗದ ಬೆನ್ನು, ಯುವಕರನ್ನೂ ನಾಚಿಸುವ ದೃಢವಾದ ವೇಗದ ನಡುಗೆ, ಯಾವುದೇ ರೀತಿಯ ಆಡಂಬರವಿಲ್ಲದ ಸರಳ ವ್ಯಕ್ತಿತ್ವ, ದೇಹಿ ಎಂದು ಬಂದವರಿಗೆ ನಾಸ್ತಿ ಎನ್ನದ ಮೃದು ಸ್ವಭಾವ. ಇಷ್ಟನ್ನು ಹೇಳಿದರೆ ಲಿಂಗದಹಳ್ಳಿಯ ವಯೋವೃದ್ಧ ಪುರೋಹಿತ, ಸಂಸ್ಕೃತ ವಿದ್ವಾಂಸ, ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಬಾಹ್ಯ ವ್ಯಕ್ತಿತ್ವವನ್ನಷ್ಟೇ ವಿವರಿಸಿದಂತಾಗುತ್ತದೆ. ಸಾಮಾನ್ಯವಾಗಿ ಅವರ ಸಂಪರ್ಕಕ್ಕೆ ಬರುವವರಿಗೆ ಇದಕ್ಕಿಂತ ಹೆಚ್ಚೇನೂ ಗೊತ್ತಾಗುವುದಿಲ್ಲ.


ಶಾಸ್ತ್ರಿಗಳ ಅಂತರ್ಯದ ಸೊಗಸನ್ನು ಅರಿಯಬೇಕಾದರೆ, ಅವರೊಡನೆ ಮಾತಿಗೆ ತೊಡಗಬೇಕು. ಅವರಿಗೆ ಪ್ರಿಯವಾದ ಸಂಸ್ಕೃತಸಾಹಿತ್ಯದ ಸಂಪತ್ತಿನ ಬಗ್ಗೆ ಕೆದಕಬೇಕು. ಅವರ ಮುಖ ಕೂಡಲೇ ಅರಳುತ್ತದೆ. ಮುಖದಲ್ಲಿ ಮಗುವಿನ ಲಾಸ್ಯ ಕಾಣುತ್ತದೆ. ಕೇಳುಗರು ಸಂಸ್ಕೃತ ಭಾಷೆಯನ್ನು ತಿಳಿಯದ ಅಜ್ಞಾನಿಗಳು, ಮತ್ತು ತಾವು ಆ ಭಾಷೆಯ ಸಮರ್ಥ ಸಾಧಕರೆಂಬ ಹೆಗ್ಗಳಿಕೆ ಅವರಲ್ಲಿ ಲವಲೇಶವೂ ಕಾಣುವುದಿಲ್ಲ. ಬದಲಾಗಿ ಭಾಷೆಯ ಬಗ್ಗೆ ತಿಳಿಸಬೇಕೆಂಬ, ಅದರ ಶ್ರೀಮಂತಿಕೆಯ ಬಗ್ಗೆ ವಿವರಿಸಬೇಕೆಂಬ ಉತ್ಸಾಹ ಉಕ್ಕಿ ಹರಿಯುತ್ತದೆ. ನೀವು ಆಸಕ್ತ ಕೇಳುಗರಾದರೆ, ಸರಸ್ವತಿ ಅವರ ನಾಲಗೆಯಲ್ಲಿ ನರ್ತಿಸತೊಡಗುತ್ತಾಳೆ.

ನರಸಿಂಹಮೂರ್ತಿಶಾಸ್ತ್ರಿಗಳು ಜೀವನದುದ್ದಕ್ಕೂ ಸಂಸ್ಕೃತದ ಅಧ್ಯಯನ, ಉಪಾಧ್ಯಾಯ ವೃತ್ತಿ ನಡೆಸುತ್ತಾ ಬಂದರೂ, ಹಲವಾರು ಯತಿಗಳಿಗೆ ಸಂಸ್ಕೃತ ಶಿಕ್ಷಕರಾದರೂ, ಅವರು ಜೀವನಕ್ಕಾಗಿ ಅವಲಂಬಿಸಿದ ವೃತ್ತಿ ಪೌರೋಹಿತ್ಯವೇ. ಜ್ಞಾನವಿದ್ದರೆ ಸಾಕೇ? ಲೌಕಿಕವಾಗಿ ಬದುಕಬೇಕಿದ್ದಲ್ಲಿ 'ಬುಕ್ಕುಂಡ ಭಟ್ಟ'ನ ಸಮಯಪ್ರಜ್ಞೆಯಿಂದ ಮಾತ್ರ ಸಾಧ್ಯವೆನ್ನುತ್ತಾರೆ.

ನರಸಿಂಹಮೂರ್ತಿಶಾಸ್ತ್ರಿಗಳ ಬಳಿ ಕುಳಿತು ಅಲಂಕಾರಶಾಸ್ತ್ರದ ಶ್ಲೋಕಾರ್ಥ ಆಲಿಸುವುದು ತುಂಬ ಕಚಗುಳಿ ಕೊಡುವ ಕೆಲಸ. ಹನುಮನ್ ನಾಟಕದ ಈ ಸಾಹಿತ್ಯ ರಸ ಕೇಳಿ :

**ಯಾತಸ್ಯಾಸ್ತಮನನ್ತರಂ ದಿನಕೃತೋ ವೇಷೇಣ ರಾಗಾನ್ವಿತಃ**
**ಸ್ವೈರಂ ಶೀತಕರಃ ಕರಂ ಕಮಲಿನೀಮಾಲಿಂಗಿತುಂ ಯೋಜಯನ್ |**
**ಶೀತಸ್ಪರ್ಶಮವಾಪ್ಯ ಸಂಪ್ರತಿ ತಯಾ ಯುಕ್ತೇ ಮುಖಾಂಭೋರುಹೇ**
**ಹಾಸೇನ್ಯೈವ ಕುಮುದ್ವತೀವನಿತಯಾ ವೈಲಕ್ಷ್ಯಪಾಂಡೂಕೃತಃ ||**

ಸೂರ್ಯನ ಪ್ರೇಯಸಿ ಕಮಲಿನಿ. ಸೂರ್ಯ ಅಸ್ತಂಗತನಾದರೆ ಅವಳು ಮುದುಡುತ್ತಾಳೆ. ಚಂದ್ರನ ಪ್ರೇಯಸಿ ಕುಮುದಿನಿ. ಚಂದ್ರನಿಗೆ ತನ್ನವಳಲ್ಲದೆ ಪರಸ್ತ್ರೀಯರ ಮೇಲೆಯೇ ಕಣ್ಣು. ಕಮಲಿನಿಯಲ್ಲಿ ಆಸೆ. ಸೂರ್ಯ ಕೆಂಪು ರಾಗವಾಗಿ ಅಸ್ತಂಗತವಾಗುತ್ತಿದ್ದಂತೆ ಪೂರ್ವದಲ್ಲಿ ಅವನದೇ ಬಣ್ಣ - ಕೆಂಪು (ಉದಯಿಸುತ್ತಿರುವ ಚಂದ್ರನ ಬಣ್ಣ) ಚಂದ್ರ ಮೂಡಿದ. ಇನ್ನೇನು ಸೂರ್ಯ ಅಸ್ತಂಗತನಾಗಿದ್ದಾನೆ. ನಾನೇ ಅವನ ಬಣ್ಣ ಧರಿಸಿ ಆಲಿಂಗಿಸುತ್ತೇನೆಂದು ಹೊರಟ. ಆದರೆ ಸೂರ್ಯನೋ ಶಾಖಭರಿತ, ಚಂದ್ರನೋ ಶೀತಲ. ಅವನ ಆಲಿಂಗನದಿಂದ ಕಮಲಿನಿಗೆ ಇದು ಅರ್ಥವಾಯಿತು. ಕೂಡಲೇ ಮುಖಮುಚ್ಚಿಕೊಂಡು ಬಿಟ್ಟಳು (ಮುದುಡಿದಳು!). ಚಂದ್ರನಿಗೆ ಅವಮಾನವಾಗಿ ಆಚೀಚೆ ನೋಡುತ್ತಾನೆ. ಕುಮುದಿನಿ ಅರಳಿಕೊಂಡು ನಗುತ್ತಿದ್ದಾಳೆ!! ತನ್ನ ಕಳ್ಳತನ ಗೊತ್ತಾಯಿತೆಂದು ಚಂದ್ರ ಬಿಳಿಚಿಕೊಂಡು



***40.** ತಮ್ಮ ಮನೆಯ ಮುಂದೆ ಎಳೆಬಿಸಿಲಿಗೆ ಮೈಒಡ್ಡಿದ ಶಾಸ್ತ್ರಿಗಳು*

ಬಿಟ್ಟ!!! ಕೆಂಪಗಿರುವ ಚಂದ್ರ ಬೆಳ್ಳಗಾಗುವ ಕ್ರಿಯೆಯನ್ನು ಇದಕ್ಕಿಂತ ರಸವತ್ತಾಗಿ ಯಾರಾದರೂ ವರ್ಣಿಸಲು ಸಾಧ್ಯವೇ?

ಸಂಸ್ಕೃತದಲ್ಲಿ ಚಮತ್ಕಾರಗಳು ಅವರ ಬಾಯಿಂದ ಕೇಳಲು ಸೊಗಸು

**ಏಕೋ ನಾ ವಿಂಶತಿಃ ಸ್ತ್ರೀಣಾಂ ಸ್ನಾನಾರ್ಥಂ ಸರಯೂಂ ಗತಾಃ |**
**ವಿಂಶತಿಃ ಪುನರಾಯಾತಾ ಏಕೋ ವ್ಯಾಘ್ರೇಣ ಭಕ್ಷಿತಃ ||**

ಒಂದು ಕಮ್ಮಿ ಇಪ್ಪತ್ತು ಸ್ತ್ರೀಯರು ಸ್ನಾನಕ್ಕೆ ಸರಯೂ ನದಿಗೆ ಹೋದರು. ಒಬ್ಬರನ್ನು ಹುಲಿ ತಿಂದು ಇಪ್ಪತ್ತು ಜನರು ಹಿಂದಿರುಗಿದರು. ಹತ್ತೊಂಬತ್ತು ಜನ ಹೋಗಿ ಒಬ್ಬರನ್ನು ಹುಲಿ ತಿಂದರೆ ಇಪ್ಪತ್ತು ಜನ ಹಿಂದಿರುಗಿ ಬರುವುದು ಹೇಗೆ?

ಸಂಸ್ಕೃತದಲ್ಲಿ ನಾ ಎಂದರೆ ಪುರುಷ -*ಈಗ* ನೋಡಿ ಚಮತ್ಕಾರ (ಒಬ್ಬ ಗಂಡಸು ಮತ್ತು ಇಪ್ಪತ್ತು ಸ್ತ್ರೀಯರು ಸರಯೂ ನದಿಗೆ ಸ್ನಾನಕ್ಕೆ ಹೋದಾಗ ಒಬ್ಬರನ್ನು ಹುಲಿ ತಿಂದಿತು. ಇಪ್ಪತ್ತು ಜನ ವಾಪಸ್ಸಾದರು.)

ನರಸಿಂಹಮೂರ್ತಿಶಾಸ್ತ್ರಿಗಳು ತಮ್ಮ ಅಧ್ಯಯನ ಜೀವನದಲ್ಲಿ, ವೃತ್ತಿ ಜೀವನದಲ್ಲಿ, ಸಾಕಷ್ಟು ಕಡೆ ತಿರುಗಾಡಿದ್ದಾರೆ. ವರುಷಗಟ್ಟಲೆ ತಮ್ಮ ಹುಟ್ಟೂರನ್ನು ಬಿಟ್ಟು ಅಧ್ಯಯನಶೀಲರಾಗಿದ್ದಾರೆ. ಸಂಸ್ಕೃತ ವ್ಯಾಕರಣದಲ್ಲಿ ವಿಶೇಷ ಹಿಡಿತ ಸಾಧಿಸಿದ್ದಾರೆ. ನರಸಿಂಹಮೂರ್ತಿ ಶಾಸ್ತ್ರಿಗಳು ವೇದ ಉಪನಿಷತ್ತಿನಲ್ಲಿ ನುರಿತವರು. ಕಳೆದೈದು ವರ್ಷಗಳಿಂದ ಅವರ 'ವೇದ ಉಪನಿಷತ್ ವ್ಯಾಖ್ಯೆ'ಯು 'ಸಂಕೇತಿ ಸಂಗಮ'ದಲ್ಲಿ ಪೂರ್ಣ ಧಾರಾವಾಹಿಯಾಗಿ ಬರುತ್ತಿದೆ. ಅವರ ಪ್ರಕಾರ ವೇದದಲ್ಲಿ ಮುಕ್ತಿಗೆ ಬೇಕಾದ ಎಲ್ಲ ಜ್ಞಾನಭಂಡಾರವಡಗಿದೆ. ಅದರ ಅಧ್ಯಯನವನ್ನು ಎಲ್ಲರೂ ಮಾಡಬೇಕು.

ನರಸಿಂಹಮೂರ್ತಿಶಾಸ್ತ್ರಿಗಳನ್ನು ರಾಜ್ಯದ ವಿವಿಧ ಮಠಗಳು ಗುರುತಿಸಿದರೂ, ಅವರ ಪಾಂಡಿತ್ಯಕ್ಕೆ ರಾಷ್ಟ್ರೀಯ ಮಟ್ಟದ ಗೌರವ ಸಿಕ್ಕಿದ್ದು ತೀರಾ ಇತ್ತೀಚೆಗೆ- ಭಾರತೀಯ ವಿದ್ಯಾಭವನದವರು ಅವರ ವೇದ ಮತ್ತು ಸಂಸ್ಕೃತ ವ್ಯಾಕರಣ ಪಾಂಡಿತ್ಯವನ್ನು ಗುರುತಿಸಿ **ಶ್ರೀಸದ್ಗುರು ಗಂಗೇಶ್ವರಾನಂದ ವೇದರತ್ನ ಪುರಸ್ಕಾರ** ನೀಡಿದಾಗ.

ಸಂಸ್ಕೃತ ಭಾಷೆಯ ಪ್ರಚಾರ ಮುಂದುವರಿಸುವ ಬಗ್ಗೆ ಕೇಳಿದರೆ, ತಮ್ಮ ಪೌರೋಹಿತ್ಯವೃತ್ತಿಗೆ ಶಿಷ್ಯರನ್ನು ತಯಾರು ಮಾಡಲಿಲ್ಲವೇ ಎಂದು ಕೇಳಿದರೆ- ದುರ್ಗಾದೇವೀ ಸ್ತುತಿಯಿಂದ ಒಂದು ಶ್ಲೋಕವನ್ನು ವಿವರಿಸುತ್ತಾರೆ.

**ಮಾತಸ್ತ್ವದೀಯ ಮುಕುಟೇ ತನುಚಂದ್ರ ಏಷಃ**
**ಶೋಭಾಕೃತೇ ತವ ನಹಿ ಸ್ಥಿತಿಮೇತಿಕಿಂತು**
**ಕಾಂತೀಪ್ಸುರೇವ ವಸತಿ ಸ್ವವಿವೃದ್ಧಿ ಕಾಮಃ**
**ಸ್ವಾರ್ಥೇರಿತಸ್ಸ ಖಲು ಕಾಂತಿ ಖನೇರ್ಮುಖಾತ್ತೇ**

ಲಲಿತಾದೇವಿಯ ಕಿರೀಟದಲ್ಲಿ ಬಿದಿಗೆ ಚಂದ್ರ ಕುಳಿತಿದ್ದಾನೆ ಯಾಕೆ? ದೇವಿಗೆ ಶೋಭೆ ನೀಡಲು ಅಲ್ಲ. ದೇವಿಯ ಕಾಂತಿಯಿಂದ ಪ್ರೇರಣೆ ಪಡೆಯಲು ಹಾಗೂ ಸ್ವಪ್ರಕಾಶಿತನಾಗಬೇಕೆಂಬ ಸ್ವಾರ್ಥದಿಂದ ಚಂದ್ರನೇ ಬಂದು ಕುಳಿತಿದ್ದಾನೆ.

ಹಾಗೇ ಸಂಸ್ಕೃತ ಭಾಷೆ. ಅದರ ಕಾಂತಿಗೆ, ಇಂಪಿಗೆ, ಸೌಂದರ್ಯಕ್ಕೆ ಆಸೆಯುಳ್ಳವರು ಅದನ್ನು ಕಲಿಯಬೇಕೇ ಹೊರತು ಸಂಸ್ಕೃತ ಭಾಷೆಯನ್ನು ತಾನೇ ಬೆಳೆಸುತ್ತೇನೆಂಬ ಗರ್ವದಿಂದ ಹೊರಟರೆ ಭಾಷೆಗೇನೂ ಲಾಭವಿಲ್ಲ ಎಂದು ಶಾಸ್ತ್ರಿಗಳು ಪ್ರತಿಕ್ರಿಯಿಸುತ್ತಾರೆ.



**41.** *ಶಾಸ್ತ್ರಿಗಳಿಗೆ ಸಂಮಾನ : ಹಿರೇಮಗಳೂರು ಶ್ರೀ ಕಣ್ಣನ್ ಅವರಿಂದ ಶುಭನುಡಿ*

ಶಾಸ್ತ್ರಿಗಳದ್ದು ಸಾತ್ತ್ವಿಕ ಜೀವನ, ಎಲ್ಲದರಲ್ಲಿಯೂ ಮಿತ ಸಾಧಿಸುವ ಶಾಸ್ತ್ರಿಗಳ ಜೀವನದಲ್ಲಿ ಪತ್ನಿ ಸೀತಮ್ಮ ಸಹಭಾಗಿ. ಅನುರೂಪ ದಾಂಪತ್ಯ. ಹುಟ್ಟೂರು ಲಿಂಗದಹಳ್ಳಿಯವರು ಶಾಸ್ತ್ರಿಗಳಿಗೆ ಅಭಿನಂದನಾ ಗ್ರಂಥ ಸಮರ್ಪಿಸಲು ಹೊರಟಿದ್ದಾರೆ. ಚಂದ್ರನಂತೆ ತಮಗೆ ತಾವೇ ಪ್ರೇರಣೆ ಹೊಂದಬಯಸಿದ್ದಾರೆ. ವೇದರತ್ನ ಲಿಂಗದಹಳ್ಳಿ ನರಸಿಂಹಮೂರ್ತಿಶಾಸ್ತ್ರಿಗಳು ಶತಾಯುಗಳಾಗಲಿ.

# ೮. ಅಪರೋಕ್ಷಾನುಭವಿ

*ಅಜ್ಜಂಪುರ ಜಿ. ಸೂರಿ*

೧೯೬೦- ನಾನು ಲಿಂಗದಹಳ್ಳಿಯಲ್ಲಿ ಗ್ರಾಮೀಣಾಭಿವೃದ್ಧಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಕಾಲ. ನರಸಿಂಹಮೂರ್ತಿಗಳು ಲಿಂಗದಹಳ್ಳಿಗೆ ತಿರುಗಿ ಬಂದಿದ್ದಾರೆಂದು ನನ್ನ ಮಿತ್ರ ಎಲ್.ವಿ.ವಸಂತಕುಮಾರ್ ಆಗಾಗ ನನಗೆ ಹೇಳುತ್ತಿದ್ದರು; ಅವರ ಬಗ್ಗೆ ಗೌರವ, ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.

"ಇದುವರೆಗೆ ಎಲ್ಲಿದ್ದರು? ಏನು ಮಾಡುತ್ತಿದ್ದರು? ಇಲ್ಲಿಗೇಕೆ ಬಂದರು?" ಎಂದು ಕೇಳಿದೆ.


"ಅವರು ಬಹು ದೊಡ್ಡ ವಿದ್ವಾಂಸರು, ಶೃಂಗೇರಿ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರ ತಂದೆ ವೃದ್ಧಾಪ್ಯದಲ್ಲಿದ್ದಾರೆ. ಅವರ ಸೇವೆ ಮಾಡಿಕೊಂಡಿರಲು ಬಂದಿದ್ದಾರೆ" ಎಂದರು.

ಒಂದು ದಿನ ಬಸವಾನಿ ರಾಮಶರ್ಮರು, ನರಸಿಂಹಮೂರ್ತಿಗಳನ್ನು ನನಗೆ ತೋರಿಸಿ, "ಇವರು ಅಂತಿಂಥವರಲ್ಲ; ಮಹಾ ಪ್ರಾಜ್ಞರು" ಎಂದರು. ಈಗ ನರಸಿಂಹಮೂರ್ತಿಯವರಿಗೆ ತೊಂಬತ್ತೂರು ಆಗಿದ್ದರೆ, ಆಗ ಅವರಿಗೆ ಐವತ್ತು ವರ್ಷ ಆಗಿದ್ದಿರಬಹುದು. ನಾನು ಮೊದಲ ಸಲ ಅವರನ್ನು ಕಂಡಾಗ ಹೇಗಿದ್ದರೋ, ಈಗಲೂ ಹಾಗೆಯೇ ಇದ್ದಾರೆ.

ಮಾತು ಬೆಳ್ಳಿ, ಮೌನ ಬಂಗಾರ ಎನ್ನುತ್ತಾರೆ ಹಿರಿಯರು. ಮಾತು ಅಪರಾಧವಲ್ಲ. ಮಾತಿನಿಂದ ಕೆಲಸ ಆಗುವುದಿಲ್ಲ. ಕೆಲಸಕ್ಕೆ ಮೌನವೇ ಬೇಕು. ನರಸಿಂಹಮೂರ್ತಿಗಳೂ ಅಷ್ಟೆ. ಸದಾ ಮೌನಿ. ತಾವಾಗಿ ಮಾತನಾಡುವುದು ಕಡಮೆ. ಮಾತನಾಡಿದರೆ ಮಾತಿಗೆಲ್ಲಿ ಪೆಟ್ಟಾಗುವುದೋ ಎಂದು ಮೃದುವಾಗಿ, ಹಿತವಾಗಿ, ಮಿತವಾಗಿ ಮಾತನಾಡುತ್ತಾರೆ.

ಒಬ್ಬ ವ್ಯಕ್ತಿಯನ್ನು ನೋಡಿದ ಕೂಡಲೇ ಅವನ ಯೋಗ್ಯತೆಯನ್ನು ಅಳೆಯಬಲ್ಲ ಲೌಕಿಕ ಶಕ್ತಿ ಅವರಲ್ಲಿ ಇರಲೇ ಇಲ್ಲ. ಹೀಗಾಗಿ ತಮ್ಮ ಕಷ್ಟಗಳನ್ನು ಅವರಲ್ಲಿ ತೋಡಿಕೊಂಡು ಹಣ ಕೀಳುವ ಅಪ್ರಾಮಾಣಿಕರಿಂದ ಅವರು ಸದಾ ಸುತ್ತುವರಿಯಲ್ಪಟ್ಟಿರುತ್ತಿದ್ದರು. ಯಾರಿಗೇ ಕಷ್ಟ ಬರಲಿ, ಅದು ತಮಗೇ ಬಂದಿದೆ ಎಂಬಂತೆ ಚಡಪಡಿಸುತ್ತಿದ್ದರು. ಕೊಡುವವರಿದ್ದರೆ ಕೇಳುವವರಿಗೇನು ಕಡಮೆ!

ಒಮ್ಮೆ ಹೀಗಾಯಿತು- ತರೀಕೆರೆಯ ಪೇಟೆಯಲ್ಲಿ ಅವರು ನಡೆದು ಬರುತ್ತಿದ್ದುದನ್ನು ಗಮನಿಸಿದೆ. ಆ ವೇಳೆಗೆ ನಾನು ಅವರ ಆತ್ಮೀಯನಾಗಿದ್ದೆ. ಮಾತನಾಡಿಸಿದೆ. ಕಾಫಿಗೆ ಕರೆದೆ. ನಯವಾಗಿ ಒಲ್ಲೆ ಎಂದರು. ಪೇಟೆಗೆ ಬಂದ ಕಾರಣ ಕೇಳಿದೆ. ಹೇಳಲು ಅಂಜಿದರು. ಒತ್ತಾಯ ಮಾಡಿದ ಮೇಲೆ ವಿಪರೀತ ಅಂಜುತ್ತಲೇ, "ಪಾಪ, ಬೆಳಿಗ್ಗೆ ಒಬ್ಬ ಬಂದಿದ್ದ. ಅವನ ಹೆಂಡತಿಗೆ ಕಾಯಿಲೆಯಂತೆ. ಚಿಕ್ಕ ಚಿಕ್ಕ ಮಕ್ಕಳು. ಬಹಳ ಬಡವ, ಹೇಳಿಕೊಂಡು ಅತ್ತು ಬಿಟ್ಟ. ನನ್ನಲ್ಲಿ ದುಡ್ಡು ಇರಲಿಲ್ಲ. ಅದಕ್ಕಾಗಿ ಇದನ್ನು ತಂದಿದೀನಿ. ಎಲ್ಲಾದರೂ ಗಿರವಿ ಇಟ್ಟರೆ ಅವನಿಗೆ ಸಹಾಯ ಮಾಡಬಹುದು" ಎನ್ನುತ್ತ ತಮ್ಮ ಕೈಚೀಲದಲ್ಲಿದ್ದ ಆರು ಚಿನ್ನದ ಬಳೆಗಳನ್ನು ನನಗೆ ತೋರಿಸಿದರು. ನನಗೆ ಹೇಗ್ಹೇಗೋ ಆಯಿತು. "ಇವನ್ನು ಹಾದಿ ಬೀದಿಯಲ್ಲೆಲ್ಲ ತೆಗೆದು ತೋರಿಸಬಾರದು. ನಾವೀಗ ನೇರ ಊರಿಗೆ ಹೋಗೋಣ. ನಾಳೆ ನೋಡಿದರಾಯಿತು" ಎಂದು ಊರಿಗೆ ಕರೆದುಕೊಂಡು ಬಂದೆ. ಮರುದಿನ ಬೆಳಗ್ಗೆ ಅವರು ಹೇಳಿದ ವ್ಯಕ್ತಿ ವಾಸಪ್ಪನ ಹೋಟೆಲಿನಲ್ಲಿ ಸಿಕ್ಕಿದ. ಮಾತನಾಡಿಸಿದೆ. ಇತರರ



*42. 'ಸಂಭೃತಿ'ಯನ್ನು ಅವಲೋಕಿಸುತ್ತಿರುವ ಶಾಸ್ತ್ರಿಗಳು*

ಮೂಲಕ ವಿಚಾರಿಸಿದೆ. ಆತನ ಮನೆಯಲ್ಲಿ ಎಲ್ಲರೂ ಕ್ಷೇಮವಾಗಿದ್ದಾರೆಂದೂ, ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾನೆಂದೂ ತಿಳಿಯಿತು. ಹೀಗಿತ್ತು ನರಸಿಂಹಮೂರ್ತಿಗಳ ಲೌಕಿಕಜ್ಞಾನ!

ಮಾನವೀಯ ಅಂತಃಕರಣದ ನರಸಿಂಹಮೂರ್ತಿಗಳು ರೈತ ಸಮುದಾಯದ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ.

ಅವರು ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ಮಹನೀಯರು.

ಸಮಯ ಸಿಕ್ಕಾಗಲೆಲ್ಲ ಅವರು ಚಿಂತನಶೀಲರಾಗುವರು- ಆಧ್ಯಾತ್ಮಿಕ ತತ್ತ್ವಗಳ ಕಡೆ. ಹೊಟ್ಟೆಪಾಡಿಗಾಗಿ ಅವರು ಕೈಯೊಡ್ಡಿದವರಲ್ಲ. ಯಾವುದಕ್ಕೂ ಹಿಗ್ಗದ, ಕುಗ್ಗದ, ವಿಮರ್ಶಾತ್ಮಕ ಸೂಕ್ಷ್ಮಾತಿಸೂಕ್ಷ್ಮ ಮನಸ್ಸುಳ್ಳವರು. ತಮ್ಮತನ ಉಳಿಸಿಕೊಂಡು, ಬೆಳೆಸಿಕೊಂಡಿರುವ ವಿಶೇಷ ಎನ್ನಬಹುದಾದ ವ್ಯಕ್ತಿತ್ವ ಉಳ್ಳವರು. ಕಿರಿಯರಲ್ಲಿ ಶ್ರದ್ಧೆ, ಜ್ಞಾನ, ಸಾಧನೆ ಹಾಗೂ ಸಾಮರ್ಥ್ಯ ಕಂಡರೆ ಪ್ರೀತಿಯಿಂದ ಕಂಡು ಗೌರವಿಸುವ ದೊಡ್ಡತನ ಅವರಲ್ಲಿದೆ.

ಒಟ್ಟಿನಲ್ಲಿ ಇಂದಿನ ಕಲುಷಿತ ಸಮಾಜದ ಮಧ್ಯದಲ್ಲಿ ಅವರು ಒಬ್ಬ ಪರಿಶುದ್ಧ ವ್ಯಕ್ತಿ.

ಅವರಿಗೆ ನೂರು ತುಂಬಿ ತುಳುಕಲಿ, ಸುಖ ಶಾಂತಿ ವಿಜೃಂಭಿಸಲೆಂದು ದಯಾಮಯನನ್ನು ಪ್ರಾರ್ಥಿಸುತ್ತಾ ಹೃದಯ ತುಂಬಿ, ಮನತುಂಬಿ, ತಲೆಬಾಗಿ ಅವರಿಗೆ ಎರಡೂ ಕೈ ಜೋಡಿಸಿ ವಂದಿಸುತ್ತೇನೆ.

## ೯. ಅಪೂರ್ವ ವಜ್ರ

***ಕಾತ್ಯಾಯಿನಿ ಅನಂತ್***

ಶ್ರೀ ನರಸಿಂಹಮೂರ್ತಿಯವರು ಮಿತಭಾಷಿ, ಸರಳಜೀವಿ, ನಿಗರ್ವಿ, ಪರೋಪಕಾರಿಗಳು; ಉಡುಗೆ-ತೊಡುಗೆ ಆಹಾರ ಸೇವನೆ ಎಲ್ಲದರಲ್ಲೂ ಸರಳತೆಯೇ ಎದ್ದು ತೋರುತ್ತದೆ. ಸಮಯಕ್ಕೆ ಸರಿಯಾಗಿ ಹಿತಮಿತವಾದ ಆಹಾರ ಸೇವನೆ, ಶಿಸ್ತುಬದ್ಧ ಜೀವನ ಕ್ರಮವೇ ಅವರ ಆರೋಗ್ಯದ ಗುಟ್ಟಿರಬೇಕೆಂಬುದು ನನ್ನ ಭಾವನೆ. 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆ ಮಾತಿಗೆ ಅನ್ವರ್ಥವಾಗುವಂತಿರುವ ನಮ್ಮ 'ಮಾಯ' ಅವರು ವಿದ್ವತ್ತಿನ ಗಣಿಯೇ ಆಗಿದ್ದರೂ ಎಂದೂ ಗರ್ವಪಟ್ಟಿಲ್ಲ. ಮಾಯನವರು ಸುಮಾರು ಐದಾರು ಸಂಸ್ಕೃತ ವಿದ್ವತ್‌ಗಳನ್ನು ಗಳಿಸಿದ್ದರು ಕೂಡ, ಅವರನ್ನು ನೋಡಿದವರಾರಿಗೂ ಹಾಗೆ ಅನ್ನಿಸುವುದಿಲ್ಲ. ಇದಕ್ಕೆ ಅವರ ಸರಳತೆಯೇ ಮುಖ್ಯ ಕಾರಣ. "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎಂಬ ನಾಣ್ಣುಡಿಯಂತೆ ನಮ್ಮ ಮಾಯನವರು ಆಕಾರದಲ್ಲಿ ಸಣ್ಣದಾಗಿದ್ದರೂ, ಬುದ್ಧಿವಂತಿಕೆಯಲ್ಲಿ ಅಪ್ರತಿಮರು. ಹೀಗಿದ್ದು ಕೂಡ ಎಲೆಮರೆಯ ಕಾಯಿಯಂತೆ ಇದ್ದಾರೆ. ತೀರ ಇತ್ತೀಚೆಗಷ್ಟೇ ಅವರ ವಿದ್ವತ್ತಿಗೆ ಅಲ್ಪ-ಸ್ವಲ್ಪ ಪ್ರಶಸ್ತಿ ಪುರಸ್ಕಾರಗಳು ಸಿಗುತ್ತಾ ಇವೆ.

ಶ್ರೀಯುತರು ವಿದ್ವನ್ಮಣಿಯೇ ಆಗಿದ್ದರೂ, ಎಲ್ಲರಿಗೂ ಸಮಾನ ಮಾನ್ಯತೆ ಕೊಡುತ್ತಾರೆ. ಅತಿ ಚಿಕ್ಕವರೇ ಆಗಿರಲಿ, ದೊಡ್ಡವರೇ ಆಗಿರಲಿ, ಎಲ್ಲರ ಮಾತುಗಳನ್ನೂ ಆಸಕ್ತಿಯಿಂದ ಆಲಿಸಿ, ಹೆಚ್ಚು ಗಮನ ಕೊಡುತ್ತಾರೆ. ದೊಡ್ಡವರು, ಚಿಕ್ಕವರು ಎಂಬ ಭೇದಭಾವವೇ ಇಲ್ಲ. ಇದು ದೊಡ್ಡ ಗುಣವಿರುವವರ ರೀತಿ. ಇಂತಹ ನೆನಪಿನ ಶಕ್ತಿ ಇರುವ ವ್ಯಕ್ತಿಗಳನ್ನು ಲಕ್ಷದಲ್ಲಿ ಒಬ್ಬರನ್ನು ನೋಡಬಹುದೇನೋ? ಅವರು ತಮ್ಮ ವಿದ್ವತ್ತನ್ನು ಪ್ರದರ್ಶಿಸಲು ಹೋಗುವುದಿಲ್ಲ. ಪ್ರದರ್ಶಿಸುವ ಸಮಯ ಬಂದಾಗ, ಅವರ ಸಮಕ್ಕೆ ಯಾರೂ ನಿಲ್ಲಲಾಗುವುದಿಲ್ಲ.

ಹಿಂದೆ ರಾಜರ ಕಾಲದಲ್ಲಿ ರಾಜಗುರುಗಳು ಅಂತ ಇರುತ್ತಿದ್ದರಂತೆ. ಹಾಗೆಯೇ ಇವರು, ನಮ್ಮೂರಿನ ಹಾಗೂ ಸುತ್ತಮುತ್ತಲಿನ ಊರುಗಳ ಬಂಧು-ಬಾಂಧವರ ಕುಲಗುರುಗಳಂತೆ ಇದ್ದಾರೆ. ಯಾರ ಮನೆಯ ಧಾರ್ಮಿಕ ಕಾರ್ಯವೇ ಆಗಲಿ, ಚಿಕ್ಕದಿರಲಿ, ದೊಡ್ಡದೇ ಆಗಲಿ ಬಡವ-ಬಲ್ಲಿದರೆನ್ನದೆ ತಮ್ಮದೇ ಕೆಲಸ ಅನ್ನುವಷ್ಟು ಶ್ರದ್ಧೆ ವಹಿಸಿ, ಆಸಕ್ತಿಯಿಂದ ನಡೆಸಿಕೊಡುವ ದೊಡ್ಡಗುಣ ಅವರಲ್ಲಿದೆ. ಯಾರ ಮನೆಯ ಕೆಲಸವೇ ಆಗಲಿ ನಮ್ಮ 'ಮಾಯ' ಅವರಿಗೆ ನಡೆಸಿಕೊಡಲು ಹೇಳಿಬಿಟ್ಟರೆ ಸಾಕು, ಬೆಳಗ್ಗೆಯೇ ಹೋಗಿ ಅವರ ಮನೆಯವರನ್ನೂ ಚುರುಕುಗೊಳಿಸಿ, ಆ ಕಾರ್ಯ ಸುಸೂತ್ರವಾಗಿ ನಡೆಯುವಂತೆ ಮಾಡುತ್ತಾರೆ.

ಮಾಯನವರು ಕೋಪಗೊಂಡಿದ್ದನ್ನು ನಾನಂತೂ ನೋಡಿಯೇ ಇಲ್ಲ. ಸದಾ ಹಸನ್ಮುಖಿಯಾಗಿದ್ದು ಉತ್ಸಾಹದ ಚಿಲುಮೆಯೇ ಆಗಿರುತ್ತಾರೆ. ಯಾವಾಗಲೂ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಈಗಲು ಕೂಡ ಕನ್ನಡಕವನ್ನು ಉಪಯೋಗಿಸದೆಯೇ ಓದುವ,

ಬರೆಯುವ ಹವ್ಯಾಸಗಳನ್ನು ಇಟ್ಟುಕೊಂಡಿರುತ್ತಾರೆ. ಎಲ್ಲಾ ವಿಷಯಗಳಲ್ಲೂ ಆಸಕ್ತಿ ಉಳ್ಳವರಾಗಿದ್ದು, ದೂರದರ್ಶನ ಕಾರ್ಯಕ್ರಮಗಳನ್ನೂ ಸಮಯವಿದ್ದಾಗ ವೀಕ್ಷಿಸುತ್ತಾರೆ. ಒಂದಿಲ್ಲೊಂದು ಕೆಲಸಕಾರ್ಯಗಳ ನಿಮಿತ್ತ ಊರಿಂದೂರಿಗೆ ತಿರುಗಾಡುತ್ತಲೇ ಇರುತ್ತಾರೆ. ಅವರ ನಡಿಗೆಯ ಸಮಕ್ಕೆ ಈಗಿನ ಯುವಕರೂ ನಡೆಯುವುದಕ್ಕೆ ಆಗುವುದಿಲ್ಲಾಂತ ನಿಸ್ಸಂದೇಹವಾಗಿ ಹೇಳಬಹುದು. ಈಗ್ಗೆ ಎರಡು ವರ್ಷಗಳ ಹಿಂದೆ ಆಕಾಶವಾಣಿಯವರು ಸಂದರ್ಶನ ಮಾಡಿದ ಸಂದರ್ಭದಲ್ಲಿ, ಈಗಲೂ ಮೂರು-ನಾಲ್ಕು ಬ್ಯಾಚ್‌ಗಳಿಗೆ ವೇದಪಾಠ ಮಾಡುವ ಉತ್ಸಾಹ ತಮಗಿದೆ ಎಂದು ಹೇಳಿದ ತೊಂಬತ್ತರ ಪರೆಯದ ಮಾಯನವರ ಮಾತುಗಳನ್ನು ಕೇಳಿ ನಾನು ಪುಳಕಿತಳಾದೆ. ಇಂತಹ ವ್ಯಕ್ತಿ ನಮ್ಮ ಮಾವನಾಗಿರುವುದು ನನಗೆ ಹೆಮ್ಮೆಯ ವಿಷಯ. ಅವರ ಜ್ಞಾನದ ಒಂದಂಶವನ್ನೂ ಕಲಿಯಲಿಕ್ಕೆ ಸಾಧ್ಯವಾಗಲಿಲ್ಲವಲ್ಲ ಎಂಬುದೇ ಬೇಸರದ ಸಂಗತಿ. ಈಗೆರಡು ವರ್ಷಗಳಿಂದ ಕೆಲವು ಹೆಂಗೆಳೆಯರು ಭಗವದ್ಗೀತೆ, ಸೌಂದರ್ಯಲಹರಿ ಇತ್ಯಾದಿಗಳನ್ನು ಶ್ರೀಯುತರ ಮಾರ್ಗದರ್ಶನದಲ್ಲಿ ಕಲಿಯುತ್ತಿದ್ದಾರೆ. ಹಲವಾರು ಮಂದಿ ಪುರುಷರು ಸಹ ಪೂಜೆಮಂತ್ರ, ವೇದಪಾಠಗಳನ್ನು ಅವರಲ್ಲಿ ಕಲಿಯುತ್ತಿರುವುದು ಸಂತೋಷದ ಸಮಾಚಾರ.

ಹೆಂಗೆಳೆಯರು ಪಾಠ ಹೇಳಿಸಿಕೊಂಡಿದ್ದರಿಂದ ಗುರುಕಾಣಿಕೆಯ ರೂಪದಲ್ಲಿ ಒಂದು ಟೇಪ್‌ರೆಕಾರ್ಡರ್ ಸಮರ್ಪಿಸಿದಾಗ, ಮಾಯನವರು ಕುತೂಹಲದಿಂದ ನೋಡಿ ಸಂತೋಷಪಟ್ಟದ್ದು ಅವರ ಮಗುವಿನಂತಹ ಮುಗ್ಧ ಮನಸ್ಸಿನ ನಿದರ್ಶನ.

ಶ್ರೀಯುತರಿಗೆ ಇತ್ತೀಚೆಗೆ ಭಾರತೀಯ ವಿದ್ಯಾಭವನದವರು ಕೊಡುವ ಪ್ರತಿಷ್ಠಿತ **ವೇದರತ್ನ** ಪ್ರಶಸ್ತಿ ಲಭಿಸಿರುತ್ತದೆ. ಪ್ರಶಸ್ತಿಪ್ರದಾನವನ್ನು ಕರ್ನಾಟಕದ ರಾಜ್ಯಪಾಲರಾದ ಸನ್ಮಾನ್ಯ ಚತುರ್ವೇದಿಯವರು ಬೆಂಗಳೂರಿನಲ್ಲಿ ನೆರವೇರಿಸಿಕೊಟ್ಟರು. ಈ ಸಮಾರಂಭಕ್ಕೆ ನಾನು ನನ್ನ ಮನೆಯವರೊಂದಿಗೆ ಹೋಗಿದ್ದೆ. ಇಂತಹ ಅಪೂರ್ವವಾದ ಸಮಾರಂಭವವನ್ನು ವೀಕ್ಷಿಸಿದ 'ನಾವೇ ಧನ್ಯರು' ಅನ್ನುವ ಧನ್ಯತಾಭಾವ ಎಲ್ಲರ ಮನದಲ್ಲಿ ಉದ್ಭವಿಸಿತ್ತು. ಇದು ಕರ್ನಾಟಕದ ಜನತೆಯೇ ಹೆಮ್ಮೆ ಪಡುವಂತಹ ವಿಷಯ. ಇದು ಅತ್ಯಂತ ಅರ್ಹವ್ಯಕ್ತಿಗೆ ಸಂದ ಪ್ರಶಸ್ತಿಯಾಗಿದೆ ಎಂದು ಹೇಳುವುದರಲ್ಲಿ ಅತಿಶಯೋಕ್ತಿ ಏನಿಲ್ಲ.

ವೇ. ಬ್ರ. ಶ್ರೀಗಳ ಧರ್ಮಪತ್ನಿ ಶ್ರೀಮತಿ ಸೀತಮ್ಮನವರು. ಅವರು ಎಲ್ಲಾ ವಿಧದಲ್ಲೂ ಪತಿಗೆ ಸಹಕಾರ ಕೊಡುವ ಬಾಳಸಂಗಾತಿ ಯಾಗಿದ್ದಾರೆ. ಅವರಿಬ್ಬರೂ ಅನ್ಯೋನ್ಯ ದಂಪತಿಗಳಾಗಿದ್ದು ಎಲ್ಲರಿಗೂ ಮಾದರಿಯಂತಿದ್ದಾರೆ. ಸೀತಮ್ಮನವರು ಸಹ ಈ ಇಳಿ ವಯಸ್ಸಿನಲ್ಲೂ ಸದಾಕಾಲ ಏನಾದರೊಂದು ಕೆಲಸದಲ್ಲಿ ತೊಡಗಿರುತ್ತಾರೆ. ಸಮಯ ಸಿಕ್ಕಾಗಲೆಲ್ಲಾ ಏನಾದರೂ ಓದುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ವೃಥಾ ಕಾಲಹರಣ ಮಾಡದೆ ಸದಾ ಚಟುವಟಿಕೆಯಿಂದ ಇರುವ ಈ ಆದರ್ಶ ದಂಪತಿಗಳನ್ನು ನೋಡಿ ಕಲಿಯುವುದು ಬಹಳ ಇರುತ್ತದೆ.



*43. ವೇದ ಅಧ್ಯಾಪನದನಂತರ ಶ್ರೀರಾಮಮಂದಿರದಿಂದ ಹೊರಬರುತ್ತಿರುವ ಶಾಸ್ತ್ರಿಗಳು*

ನಿಜಕ್ಕೂ ನರಸಿಂಹಮಾಯನವರು ಒಂದು ಅಪರೂಪದ **ಅಪೂರ್ವ ವಜ್ರ** ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂತಹ ವಜ್ರ ನಮ್ಮೂರಿನಲ್ಲಿರುವುದು ನಿಜಕ್ಕೂ ಹೆಮ್ಮೆಪಡುವ ವಿಚಾರ. ಶ್ರೀಯುತರ ಆಶೀರ್ವಾದ ಮತ್ತು ಮಾರ್ಗದರ್ಶನ ನಮ್ಮೆಲ್ಲರಿಗೂ ನಿರಂತರವಾಗಿ ದೊರೆಯುತ್ತಿರಲೆಂದು ಆ ಸರ್ವಾಂತರ್ಯಾಮಿಯಲ್ಲಿ ಭಕ್ತಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

## ೧೦. ತಪಸ್ವಿ


*ವಿದ್ವಾನ್ ಬಿ. ಲಕ್ಷ್ಮೀನಾರಾಯಣ್*

ಗಾಂಧಿತಾತನ ತೆರದಿ ಸ್ವಾವಲಂಬನೆ ಹೊಂದಿ
ಸಮಯ ಪ್ರಜ್ಞೆಯ ಛಲದಿ ತೋರಿಸಿಹರು
ಋಷಿಸಮರು ತಾವಾಗಿ ಸ್ಮಾರ್ತಕಾರ್ಯದ ಭರವ
ಸಾಂಗವಾಗುವ ವಿಧದಿ ನಡೆಸುತಿಹರು ೧

ನವದಶಕದಾಯುಷ್ಯದವಧಿಯಲಿ ತಾವೆಂದೂ
ದಣಿವಿನಾ ಮೊಗವನ್ನು ಹೊಂದದವರು
ಪುರೋಹಿತ ವೃತ್ತಿಯನು, ಲೋಪ ಕರ್ಮಕೆ ಬರದೆ
ಇರುವಂತೆ ನಡೆಸಿಹರು ಲೋಭಪಡದೆ ೨

ಶ್ರೀಯುತರ ಶ್ರೀಮತಿ ಸೀತಮ್ಮನೆಂದೆಂದು
ಪತಿಯ ಸೇವೆಯಲಿ ತಾ ಧನ್ಯೆ ಎನ್ನುವರು
ಪತಿದೇವ ಪ್ರಗತಿಯಲಿ ಬೆಂಬಲಕೆ ನಿಂತವರು
ದಂಪತಿಗಳೀ ಜೋಡಿ ನಮಗೆ ಮಾದರಿಯು ೩

ಇಂದು ನಾವುಗಳು ಸಲ್ಲಿಸುತಿಹ ಸಮ್ಮಾನ
ತಮಗಿಲ್ಲ ಇದರಲ್ಲಿ ತಿಲಮಾತ್ರ ಬಿಗುಮಾನ
ಸೂರ್ಯದೇವಗೆ ಸೊಡರ ದೀಪವನು ಹಿಡಿದಂತೆ
ಆಯಿತಿದೋ ನಮ್ಮಯ ಮನಕೆ ಅನುಮಾನ ೪



***44.** ಆಸ್ತಿಕ ವಿವರ್ಧಿನಿ ಸಂಘದ ವತಿಯಿಂದ ಆತ್ಮೀಯ ಸಂಮಾನ (೧೬.೫.೧೯೯೩) ಶ್ರೀ ಕೆ.ವಿ. ಶೇಷಾದ್ರಿ ಅವರ ಭಾಷಣ*

# ೧೧. ನುಡಿನಮನ

## ಅ. ಶ್ರೀರಸ್ತು

*ವೇ. ಬ್ರ. ಶ್ರೀ ರಾಮೇಶ್ವರಾವಧಾನಿಗಳು*

*ಮಾನ್ಯರಾದ ಪಂಡಿತಪ್ರವರ, ವೇದರತ್ನ, ಸಮಾಜಸೇವಕ, ಪರೋಪಕಾರೀಮಿತ್ರರಾದ ಲಿಂಗದಹಳ್ಳಿ ನರಸಿಂಹಮೂರ್ತಿಗಳ ವಿಷಯದಲ್ಲಿ ಕೆಲವು ಮಾತುಗಳನ್ನು ಬರೆಯಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ಅಭಿನಂದನಾ ಸಮಿತಿಯವರನ್ನು ಅಭಿವಂದಿಸುತ್ತೇನೆ.*

*ಶಂಕರಮಠದ ಪಾಠಶಾಲೆಯಲ್ಲಿ ನಾನು ವ್ಯಾಸಂಗಮಾಡುತ್ತಿದ್ದಾಗ ಮಾನ್ಯರೂ ವ್ಯಾಸಂಗ ಮಾಡುತ್ತಿದ್ದರು. ಮಾನ್ಯರಾದ ಶಾಮಭಟ್ಟರು, ಲಿಂಗದಹಳ್ಳಿಯ ಕೃಷ್ಣಮೂರ್ತಿಗಳು, ಶ್ರೀಯುತ ನರಸಿಂಹಮೂರ್ತಿಗಳು ವೇದಾಂತ ವಿದ್ಯಾರ್ಥಿಗಳು. ರಾಮೇಶ್ವರಾವಧಾನಿಯಾದ ನಾನೂ, ಶ್ರೀವಾಸುದೇವ ಶಾಸ್ತ್ರಿಗಳೂ, ಶ್ರೀಯುತ ಲಕ್ಷ್ಮೀನರಸಿಂಹಶಾಸ್ತ್ರಿಗಳೂ ಪೂರ್ವಮೀಮಾಂಸಾ ವಿದ್ಯಾರ್ಥಿಗಳು. ಮಾನ್ಯರಾದ ಪಂಡಿತ ಪ್ರಕಾಂಡರಾದ ವೇ. ರಾಮಚಂದ್ರಶಾಸ್ತ್ರಿಗಳು ವೇದಾಂತಾಚಾರ್ಯರು. ಮಾನ್ಯರಾದ ತೀರ್ಥಹಳ್ಳಿ ಸುಬ್ಬಾಶಾಸ್ತ್ರಿಗಳೂ (ಅನಂತರ, ವೇ. ವಿದ್ವಾನ್ ಬಿ.ರಾಮಭಟ್ಟರೂ) ಮೀಮಾಂಸಾಚಾರ್ಯರು. ೧೯೪೪ ರಿಂದ ೧೯೫೦ರವರೆಗೆ ಆರು ವರ್ಷಗಳ ಕಾಲ ಇಂತಹ ಘನವಿದ್ವಾಂಸರ ಪಾದದಡಿಯಲ್ಲಿ, ಅಂತಹ ಸನ್ಮಿತ್ರರ ಸಹವಾಸದಲ್ಲಿ ವ್ಯಾಸಂಗ ಮಾಡುವ ಭಾಗ್ಯವು ನನ್ನದಾಗಿತ್ತು.*


*ಮಾನ್ಯರಾದ ನರಸಿಂಹಮೂರ್ತಿಗಳು ಶಂಕರಮಠದ ಆವರಣದಲ್ಲಿ ನನ್ನ ಮನೆಯ ಪಕ್ಕದ ಮನೆಯಲ್ಲಿಯೇ ಇದ್ದರು. ಅವರು ಆಹಾರದಲ್ಲಿಯೂ ಸಾತ್ತ್ವಿಕರು, ಮಾತಿನಲ್ಲಿಯೂ ಸಾತ್ತ್ವಿಕರು, ನಡತೆಯಲ್ಲಿಯೂ ಸಾತ್ತ್ವಿಕರು, ಉತ್ತಮ ಗಾಂಧೀವಾದಿಗಳು. ಬೇರೆಯವರ ಮನಸ್ಸನ್ನು ನೋಯಿಸಿದವರೇ ಅಲ್ಲ. ವಿದ್ಯೆಯ ವಿಷಯದಲ್ಲಿ ಹೇಳುವುದಾದರೆ ಸಾಹಿತ್ಯ, ತರ್ಕ, ವ್ಯಾಕರಣ ಮೊದಲಾದ ಶಾಸ್ತ್ರಗಳನ್ನು ಅಭ್ಯಾಸ ಮಾಡಿರುತ್ತಾರೆ. ಅಂತಹವರು ಅಹಂಕಾರಿಗಳಾಗದೆ ಇರುವುದು ಅಪರೂಪ. **ವಿದ್ಯಾ ದದಾತಿ ವಿನಯಮ್** ಎಂಬ ಮಾತು ಅವರ ವಿಷಯದಲ್ಲಿ ಸಂಪೂರ್ಣವಾಗಿ ಅನ್ವರ್ಥವಾಗಿದೆ. ಅಂತಹ ಘನವಿದ್ವಾಂಸರಿಗೆ ಹಲವಾರು ಪೀಠಾಧ್ಯಕ್ಷರಿಂದ ಗೌರವವೂ ಪುರಸ್ಕಾರವೂ ದೊರೆತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೂ ಎಲೆಯ ಮರೆಯ ಕಾಯಂತೆ ಇರುವ ಶ್ರೀಯುತರನ್ನು ಸಮಾಜ ಇನ್ನೂ ಹೆಚ್ಚಾಗಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಈಚೆಗೆ ಅವರಿಗೆ **ವೇದರತ್ನ** ಮೊದಲಾದ ಪ್ರಶಸ್ತಿಗಳು ದೊರೆತಿರುವುದು ಸಂತೋಷಕರವಾಗಿದೆ. **ಗುಣಾಃ ಪೂಜಾಸ್ಥಾನಮ್** ಎಂಬಂತೆ ಅವರ ಗುಣಕ್ಕೆ ತಕ್ಕ ಗೌರವವು ಸಿಕ್ಕಿದೆ.*

*ಮಾನ್ಯರು ಹೀಗೆಯೇ ಸಮಾಜಕ್ಕೆ ಸೇವೆ ಮಾಡುತ್ತಾ ಬಹುಕಾಲ ಬಾಳಲಿ. ಭಾರತದಲ್ಲಿ ಉತ್ತಮ ಪಂಡಿತರಾದ ಶ್ರೀಯುತರನ್ನು ಸಮಾಜವು ಹೆಚ್ಚಾಗಿ ಸತ್ಕರಿಸಲಿ.*

*ಸರ್ವೇ ಚ ಸುಖಿನಸ್ಸಂತು ಸರ್ವೇ ಸಂತು ನಿರಾಮಯಾಃ |*
*ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ ಭವೇತ್ ||*

*ಎಂಬುದು ಮಾನ್ಯರಾದ ಶ್ರೀನರಸಿಂಹಮೂರ್ತಿಗಳ ಧ್ಯೇಯವಾಗಿದೆ. ಪರಮಾತ್ಮನ ಅನುಗ್ರಹದಿಂದ ಮಾನ್ಯರು ಹಲವು ಕಾಲ ಹೀಗೇ ನಮಗೆ ಮಾರ್ಗದರ್ಶಕರಾಗಿ ಬಾಳಲಿ. ಹೀಗೆ ಪರಮಾತ್ಮನನ್ನು ಪ್ರಾರ್ಥಿಸಿಕೊಳ್ಳುತ್ತೇನೆ.*

*ಓಮ್ ತತ್ಸತ್!*



**45** *ಶಾಸ್ತ್ರಿಗಳ ಸಹಪಾಠಿಗಳು*

## ಆ. ಅಜಾತಶತ್ರು

*ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು*

***ವೇದಮೂರ್ತಿ, ವೇದರತ್ನ, ವಿದ್ಯಾಸಾಗರ*** *ನರಸಿಂಹಮೂರ್ತಿಗಳಿಗೆ ಅಭಿನಂದನಾಗ್ರಂಥ ಸಮರ್ಪಣೆ, ಅಬ್ಬಾ!*

*ಎಷ್ಟು ಸಂತಸದ ಸಂಗತಿ! ಅದೂ ಆ ಮಹನೀಯರ ವಿಷಯವಾಗಿ ಬರೆಯಬೇಕಾದರೆ ಎಷ್ಟು ಕಷ್ಟ? ಸೂರ್ಯನನ್ನು ಪುಟ್ಟಕನ್ನಡಿಯಲ್ಲಿ ತೋರಿಸಿದಂತಾಗುತ್ತೆ. ದ್ವಾಪರಯುಗದ ಕೊನೆಯಲ್ಲಿ ರಾಜಾಯುಧಿಷ್ಠಿರ ಅಜಾತಶತ್ರು. ಕಲಿಯುಗದಾದಿಯಲ್ಲಿ ಅಶೋಕಚಕ್ರವರ್ತಿಯನ್ನು* ***ಅಜಾತಶತ್ರು*** *ಅಂತ ಕರೆದರು. ಈಗ ಅಜಾತಶತ್ರು ಅನ್ನುವ ಅನ್ವರ್ಥನಾಮ ನಮ್ಮ ಮಾನ್ಯ ನರಸಿಂಹಮೂರ್ತಿಗಳಿಗೆ ಸಲ್ಲುತ್ತೆ. ಪೂಜ್ಯರು ಸಂಕೇತಿ ಸಂಗಮ ಪತ್ರಿಕೆಯಲ್ಲಿ* ***ವೇದಸಂದೇಶ*** *ಅನ್ನುವ ತಲೆಬರಹದಲ್ಲಿ ವೇದಸಾರವನ್ನು ಮಕ್ಕಳಿಗೂ ಗ್ರಾಹ್ಯವಾಗುವಂತೆ ಕೊಡುತ್ತಾ ಬಂದಿದ್ದಾರೆ.*

*ಈ ೯೩ರ ಹರೆಯದ ಶ್ರೀ ನರಸಿಂಹಮೂರ್ತಿಗಳು ಎಲ್ಲೇ ಆಗಲೀ ಎಷ್ಟು ದೂರವೇ ಆಗಲೀ 'ನೀವೇ ಬರಬೇಕು' ಅಂದ್ರೆ, ಹೋಗಿ ಅವರ ಶಾಂತಿಪುಷ್ಟಿಗಳನ್ನು ನೆರವೇರಿಸಿಬರುತ್ತಾರೆ. ಅಲ್ಲಿಯ ವರಮಾನದ ಬಗ್ಗೆ ಚಿಂತೆಯೇ ಇಲ್ಲ. ಎಷ್ಟೋ ಸಾರಿ ಯಜಮಾನರು ಬಡವರಾದರೆ ಕೈಯಿಂದ ಛಾರ್ಜು ಖರ್ಚುಮಾಡಿಕೊಂಡು ಕಾರ್ಯನಡೆಸಿದ್ದಿದೆ. ಹತ್ತಾರು ಮೈಲಿ ಮಳೆಯಲ್ಲಿ, ಬಿಸಿಲಲ್ಲಿ ನಡೆದು ಹೋಗಿ ಕಾರ್ಯಸಾಧಿಸಿಬಂದಿದ್ದಾರೆ. ಮದುವೆಗಳಲ್ಲಿ ಆಶೀರ್ವಾದ ಮಾಡುವಾಗ '****ಇಮೌ ದಂಪತೀ ವಾಣೀಬ್ರಹ್ಮಾಣಾವಿವ, ಲಕ್ಷ್ಮೀನಾರಾಯಣಾವಿವ, ಪಾರ್ವತೀಪರಮೇಶ್ವರಾವಿವ, ಅರುಂಧತೀವಸಿಷ್ಠಾವಿವ****' ಅಂತ ಹೇಳುತ್ತೇವೆ. ಆದರೆ ಅರುಂಧತೀವಸಿಷ್ಠಾವಿವ ಅನ್ನುವ ಹಿರಿಯರ ಆಶೀರ್ವಾದ, ಕಿರಿಯರ ಪ್ರಾರ್ಥನೆ ಸಲ್ಲುವುದು ಈ ನರಸಿಂಹಮೂರ್ತಿ ದಂಪತಿಗಳಿಗೆ ಮಾತ್ರ.*

*ನಾನೆಷ್ಟೋ ವೇಳೆ ಛಾಂದಸ ಪ್ರಯೋಗ, ಸಂಕಲ್ಪಗಳಲ್ಲಿ ವ್ಯಾಕರಣ ಅಭಾವ, ಲಿಂಗ ವಚನದೋಷ ಮಾಡಿದಾಗ ಶಿಷ್ಯವಾತ್ಸಲ್ಯದಿಂದ ತಿದ್ದಿಸಿ, 'ನಮ್ಮ ಅಶ್ವತ್ಥನ ಪ್ರಯೋಗ ಆದರ್ಶವಾಗಿರಬೇಕು, ಶುದ್ಧವಾಗಿರಬೇಕು, ನಾಲ್ಕು ಜನ ಮೆಚ್ಚುವಂತಿರಬೇಕು' ಅಂತ ಸೂಚಿಸಿದ್ದುಂಟು. ಅವರ ವಿಶ್ವಾಸಕ್ಕೆ ನಾನು ಋಣಿ.* ***ಇಮೌ ದಂಪತೀ ಅರುಂಧತೀ ವಸಿಷ್ಠಾವಿವ ಸದಾಚಾರೌ ಸಂಪನ್ನೌ ಶ್ರೌತಸ್ಮಾರ್ತೋಕ್ತ ಕರ್ಮಾನುಷ್ಠಾನತತ್ಪರೌ ಭೂಯಾಸ್ತಾಂ ಇತಿ ಮಹಾಂತೋ ಭವಂತಃ ಪ್ರಾರ್ಥಯಂತು | ಪ್ರಾರ್ಥಯಾಮಹೇ.*** *ಈ ಮಹನೀಯರ ಶತಮಾನ ಶಾಂತಿಯಲ್ಲಿ ನಾವೆಲ್ಲಾ ಪಾಲ್ಗೊಂಡು ಆ ಮಹೋತ್ಸವವನ್ನು ಚೆನ್ನಾಗಿ ಆಚರಿಸುವ ಕಾಲ ಬರಲಿ.*



***46. ಧರ್ಮಪತ್ನಿ ಶ್ರೀಮತಿ ಸೀತಮ್ಮನವರೊಂದಿಗೆ ಶಾಸ್ತ್ರಿಗಳು***

## ಇ. ವಿಶ್ವಮಾನವ

**ಅನುರಂಜಿನಿ ಮಾಧವ ಶಾಸ್ತ್ರಿ**



**47.** *'ನಿಗಮ ಕೌಮುದಿ': ಬಿಡುಗಡೆ: ವೇ. ಬ್ರ. ಶ್ರೀ ಚಂದ್ರಶೇಖರ ಶರ್ಮಾ ಅವಧಾನೀ ಅವರಿಂದ*

*ಹಿಂದೂ, ಮುಸಲ್ಮಾನ, ಕ್ರೈಸ್ತ, ಸಿಕ್ಖ, ಬೌದ್ಧ, ಜೈನ ಮೊದಲಾದ ಧರ್ಮಗಳ ತತ್ತ್ವ, ನೀತಿಗಳು ಕೇವಲ ಬರೆವಣಿಗೆಗಷ್ಟೇ ಸೀಮಿತವಾಗಿ ಆಯಾಯ ಧರ್ಮಗ್ರಂಥಗಳ ಒಳಗೆ ಅಡಗಿ ಕುಳಿತುಬಿಟ್ಟಿವೆ ! ತಮ್ಮ ದೈನಂದಿನ ಬದುಕಿನ ಓಟದಲ್ಲಿ ಈ ನೀತಿ ನಡವಳಿಯನ್ನು ತೋರುವ ಸಾವಧಾನ ಯಾರಲ್ಲೂ ಕಾಣೆ. ಈ ತತ್ತ್ವ ನೀತಿಗಳನ್ನು ಹೊರತೆಗೆದು ತಮ್ಮ ದಿನದ ಬದುಕಿನಲ್ಲಿ ಅಳವಡಿಸಿಕೊಂಡವರು ವಿರಳ. ಈ ವಿರಳ ವ್ಯಕ್ತಿಗಳಲ್ಲಿ ವೇ. ನರಸಿಂಹಮೂರ್ತಿಗಳು ಒಬ್ಬರು. ಆದ್ದರಿಂದಲೇ ಈ ಸಂಭಾವನಾ ಗ್ರಂಥ ಅರ್ಥವತ್ತಾಗಿದೆ.*

*ಒಟ್ಟಿನಲ್ಲಿ ಬದುಕಿಗೊಂದು ಧರ್ಮ. ಅದೇ ಮಾನವಧರ್ಮ. ಈ ಧರ್ಮದಲ್ಲಿ ನಿರಂತರ ವ್ಯವಹಾರಿಗಳು, ನಿರತರು ಪೂಜ್ಯ ನರಸಿಂಹಮೂರ್ತಿಯವರು.*

## ಈ. ವೇದಾಭರಣರು

***ಎಲ್.ಎಸ್.ಸುಧಾಕರ್***

*ದೇವತೆಯರಲ್ಲಾಗಲೀ ಮಾನವರಲ್ಲಾಗಲೀ ಅವರವರ ಗುಣಕ್ಕೆ ತಕ್ಕಂತೆ 'ಆಭರಣ'ಗಳಿರುತ್ತವೆ ಎಂದು ಊಹಿಸಬಹುದು. ಉದಾಹರಣೆಗೆ: ಬ್ರಹ್ಮನು ಸೃಷ್ಟಿಕರ್ತನಾಗಿರುವುದರಿಂದ ಅವನನ್ನು 'ಸೃಷ್ಟಿಕರ್ತಾಭರಣ' ನೆನ್ನಬಹುದು. ವಿಷ್ಣುವು ಸೃಷ್ಟಿಯನ್ನು ಸಮತೋಲನ ಮಾಡುವುದರಿಂದ ಅವನನ್ನು* ***ಸ್ಥಿತ್ಯಾಭರಣ****ನೆನ್ನಬಹುದು. ಶಿವನು, ಭಕ್ತರು ಏನು ಕೇಳಿದರೂ ಕೊಡುವವನಾದ್ದರಿಂದ* ***ಅಭಯಾಭರಣ****ನೆನ್ನಬಹುದು. ಹೀಗೆ ಮನುಕುಲಕ್ಕೆ ಬಂದರೆ 'ಸತ್ಯಹರಿಶ್ಚಂದ್ರ' ಮಹಾರಾಜನು ಸತ್ಯವನ್ನೇ ಆಭರಣ ಮಾಡಿಕೊಂಡು* ***ಸತ್ಯಾಭರಣ****ನಾಗಿದ್ದಾನೆ. ಧರ್ಮರಾಯನು ಧರ್ಮವನ್ನೇ ನಂಬಿಕೊಂಡು ಇದ್ದುದರಿಂದ* ***ಧರ್ಮಾಭರಣ****ನಾಗಿದ್ದಾನೆ.*

*ಹೀಗೆ ಎಲ್ಲರಿಗೂ ಒಂದೊಂದು ವಿಷಯ, ಗುಣ ಆಭರಣವಾಗಿದ್ದಂತೆ, ನಮ್ಮ ಪೂಜ್ಯ ತೀ.ರವರಾದ ವೇ. ಬ್ರ. ಶ್ರೀ ನರಸಿಂಹಮೂರ್ತಿ ಶಾಸ್ತ್ರಿಗಳವರು 'ವೇದವನ್ನೇ' ಆಭರಣ ಮಾಡಿಕೊಂಡು* ***ವೇದಾಭರಣ****ರಾಗಿದ್ದಾರೆ.*



**48.** *ನಿರಂತರ ಅಧ್ಯಯನ*

## ಉ. ಧೀಮಂತ ವ್ಯಕ್ತಿ

***ಆರ್.ಕೃಷ್ಣ ತಂತ್ರಿ***

*ವಸುಂಧರೆಯ ಗರ್ಭದಲ್ಲಿ ಶಿಲಾಪದರದೊಳಗಿದ್ದ ಚಿನ್ನವನ್ನು ತೆಗೆದು ಪುಟವಿಟ್ಟು ಆಭರಣ ತಯಾರಿಸುವ ಅಕ್ಕಸಾಲಿಗನಂತೆ ಮಾನವನನ್ನು ಆಧ್ಯಾತ್ಮಿಕದತ್ತ ಕರೆದೊಯ್ಯಲು ಪ್ರೇರಣಕರ್ತರಾದ* ***ವೇದಬ್ರಹ್ಮ, ವೇದಾಂತವಿದ್ಯಾಸಾಗರ*** *ಬಿರುದಾಂಕಿತ ಶ್ರೀ ಎಲ್.ಎಸ್.ನರಸಿಂಹಮೂರ್ತಿಯವರನ್ನು ತಿಳಿಯದವರು ಬಲು ವಿರಳ.*

*ತರೀಕೆರೆ ತಾಲ್ಲೂಕು ಮಾತ್ರವಲ್ಲದೆ ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಬೆಂಗಳೂರುಜಿಲ್ಲೆಯ ಬಹುತೇಕ ಜನತೆ ತಮ್ಮ ಕಷ್ಟಕಾರ್ಪಣ್ಯಗಳ ನಿವಾರಣೆಗೆ, ಮನೆ'ಗೃಹಪ್ರವೇಶ' ಹಾಗೂ ಮದುವೆ ಮುಂಜಿ ಸಹಿತ ಎಲ್ಲಾ ಶುಭಕಾರ್ಯಗಳ ಪೌರೋಹಿತ್ಯಕ್ಕೆ ವೇದಬ್ರಹ್ಮ ಶ್ರೀ ಎಲ್.ಎಸ್.ನರಸಿಂಹಮೂರ್ತಿಗಳೇ ಬೇಕೆಂದು ಪಟ್ಟು ಹಿಡಿಯುವುದರೊಂದಿಗೆ ಅನೇಕ ಸಂದರ್ಭಗಳಲ್ಲಿ ಶ್ರೀ ನರಸಿಂಹಮೂರ್ತಿಗಳ ಬಿಡುವಿನ ದಿನಕ್ಕೆ ಮುಹೂರ್ತ ಬದಲಾವಣೆ ಮಾಡಿಕೊಂಡ ಅನೇಕ ಉದಾಹರಣೆಗಳಿವೆ.*

## ಊ. ಶಾಂತ ಸ್ವಭಾವ

***ಎಲ್. ಎಸ್. ಮೀನಾಕ್ಷಮ್ಮ***

*ನಮ್ಮ ತಂದೆಯವರು ಡಾಕ್ಟರಾಗಿ ಹಳ್ಳಿಗಳಲ್ಲಿರುತ್ತಿದ್ದುದರಿಂದ ನಮಗೆ ಅವರ ಸಂಪರ್ಕ ಕಡಮೆ. ಆಗಾಗ್ಗೆ ನಾವು ಊರಿಗೆ ಹೋದಾಗ ಅಥವಾ ಅವರು ನಮ್ಮ ಊರಿಗೆ ಬಂದಾಗಲಷ್ಟೇ ಅವರನ್ನು ನಾವು ಕಾಣುತ್ತಿದ್ದುದು. ಆಗೆಲ್ಲಾ ನಮಗೆ ಅವರು ಪುರಾಣದ ಕಥೆಗಳನ್ನೂ ಸಂಸ್ಕೃತದ ಶ್ಲೋಕಗಳನ್ನೂ (ಅರ್ಥಸಹಿತ) ಹೇಳುತ್ತಿದ್ದರು. ಅವು ಈಗಲೂ ನನ್ನ ನೆನಪಿನಲ್ಲಿ ಜೋಪಾನವಾಗಿವೆ.*

*ಈಗ ೯೧ -೯೨ ವಯಸ್ಸಿನ ದೊಡ್ಡಪ್ಪನವರು ಅವರ ಮಕ್ಕಳ ಜತೆಯಾಗಲೀ, ಬೇರೆ ಯಾರ ಹತ್ತಿರವಾಗಲೀ, ಜೋರಾಗಿ ಮಾತಾಡಿದ್ದನ್ನೇ ನಾನು ಕೇಳಿಲ್ಲ. ಅವರ ಈ ಶಾಂತ ಸ್ವಭಾವವೇ ಅವರ ಆರೋಗ್ಯದ ಗುಟ್ಟಿರಬೇಕು. ಪುರದ ಹಿತವನ್ನು ಕಾಯುವ ಪುರೋಹಿತರು ಅವರು. ಸಂಪ್ರದಾಯಗಳ ನಿಜವಾದ ಅರ್ಥವನ್ನು ಅರಿತು, ಆಧುನಿಕ ಮನೋಭಾವದಿಂದ ಅದನ್ನು ಆಚರಿಸುವ ಇಂಥವರು 'ನಮ್ಮ ದೊಡ್ಡಪ್ಪ' ಎಂದು ಹೇಳಿಕೊಳ್ಳಲು ನನಗೆ ತುಂಬಾ ಹೆಮ್ಮೆಯಾಗುತ್ತೆ.*




***49.** ಆಸ್ತಿಕ ವಿವರ್ಧಿನಿ ಸಂಘದ ಅಧ್ಯಕ್ಷರಾದ ಶಾಸ್ತ್ರಿಗಳು : ಶ್ರೀರಾಮಮಂದಿರದ ಮುಂದೆ*

# ೧೨. ಮಹಾನ್ ವಿದ್ವಾಂಸ

*ಮತ್ತೂರು ಕೃಷ್ಣಮೂರ್ತಿ*



*50. ಮತ್ತೂರು ಕೃಷ್ಣಮೂರ್ತಿ ದಂಪತಿಗಳನ್ನು ಸಂಮಾನಿಸುತ್ತಿರುವ ಶಾಸ್ತ್ರಿಗಳು (೨೭.೧೦.೦೨)*

ಲಿಂಗದಹಳ್ಳಿಯ ವೇದಮೂರ್ತಿ ಬ್ರಹ್ಮಶ್ರೀ ನರಸಿಂಹಮೂರ್ತಿಯವರು ನಮ್ಮ ರಾಷ್ಟ್ರದ ಮಹಾನ್ ವಿದ್ವಾಂಸರಲ್ಲಿ ಒಬ್ಬರು. ಸ್ವಾಮಿ ಗಂಗೇಶ್ವರಾನಂದಜೀ ವೇದರತ್ನ ಪುರಸ್ಕಾರಕ್ಕೆ ತಜ್ಞರ ಸಮಿತಿಯು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದ ಸಂದರ್ಭದಲ್ಲಿ, ಶ್ರೀಯುತರ ಕೃತಿ ಕೆಲವನ್ನು ಓದುವ ಸೌಭಾಗ್ಯ ಪಡೆದೆ. ಆಗ 'ಚಿಕ್ಕಂದಿನಲ್ಲಿ ಅವರಲ್ಲಿ ಒಂದೆರಡು ವರ್ಷ ಕಲಿಯಬೇಕಿತ್ತು' ಎನಿಸಿತು!

ಶ್ರೀನರಸಿಂಹಮೂರ್ತಿಯವರ ಜ್ಞಾನದ ಆಳ, ಹರಹು ಅಗಾಧವಾದದ್ದು. ಅವರ ಬರವಣಿಗೆಗಳು ಪಂಡಿತ-ಪಾಮರರಿಗೆ ಪರಿಪೂರ್ಣವಾದ ಅರಿವನ್ನು ಕೊಡುತ್ತವೆ. ಶಾಸ್ತ್ರವೇತ್ತರೂ, ವಿದ್ವಾಂಸರೂ, ಹಿಂದಿನ ಆಚಾರಗಳನ್ನು ಅನುಷ್ಠಾನದಲ್ಲಿ ಇಟ್ಟಿರುವವರೂ, ಶ್ರೀ ಶಾಸ್ತ್ರಿಗಳ ಹಾಗೆ ಸುಲಭರೂ, ಸರಳರೂ, ನಿರ್ಗರ್ವಿಗಳೂ, ಮಿತಭಾಷಿಗಳೂ ಆಗಿರುವವರು ವಿರಳ. 'ತಮಗೆ ತಿಳಿದಿದೆ' ಎಂದು ತೋರಿಸಿಕೊಳ್ಳುವ ಆಸೆ ಹಲವರಿಗೆ ಇರುತ್ತದೆ. ಇದು ಸಹಜ. ಆದರೆ ಶ್ರೀ ಶಾಸ್ತ್ರಿಗಳು ಈ ಪೈಕಿಗೆ ಸೇರಿದವರಲ್ಲ. ಗಹನವಿಷಯಗಳನ್ನು ಸರಳಶೈಲಿಯಲ್ಲಿ ತಿಳಿಸುವುದು ಸುಲಭ ಅಲ್ಲ. **ಸಂಕೇತಿ ಸಂಗಮ** ಮಾಸಪತ್ರಿಕೆಯು ಶ್ರೀಯುತರ ಲೇಖನಗಳನ್ನು ಪ್ರಕಟಿಸಿ ಮಹದುಪಕಾರ ಮಾಡುತ್ತಿದೆ. ಶಾಸ್ತ್ರದಲ್ಲಿ ಹೇಳಿರುವುದು ಬಹುಮಂದಿಗೆ ತಿಳಿಯದು. ತಿಳಿದವರು ಹಲವರು ಇತರರಿಗೆ ತಿಳಿಸುವ ಶ್ರಮ ತೆಗೆದುಕೊಳ್ಳುವುದಿಲ್ಲ. ಇದಕ್ಕೆ ಕಾರಣ, ತಿಳಿದವರಲ್ಲಿ ಬಹುಮಂದಿ, ತಾವು ಹೇಳುವುದನ್ನು ಆಚಾರದಲ್ಲಿ ರೂಢಿಸಿಕೊಂಡಿರುವುದಿಲ್ಲ. ಶ್ರೀ ನರಸಿಂಹ ಮೂರ್ತಿಯವರು ಇಂಥವರ ಪೈಕಿಯೂ ಅಲ್ಲ ಎಂದರೆ ಅತ್ಯುಕ್ತಿ ಆಗದು. ವಿದ್ವಾನ್ ನರಸಿಂಹಮೂರ್ತಿಯವರು ಆಚಾರನಿಷ್ಠರು. ಯಜ್ಞ, ಧ್ಯಾನ, ಜಪ, ಪೂಜೆ ಇವುಗಳಲ್ಲಿ ತಿಳಿಸಿರುವುದನ್ನು ಆಚರಣೆಯಲ್ಲಿ ತಂದಿದ್ದಾರೆ.

ನಮ್ಮ ಜನ ಬ್ರಹ್ಮೋಪದೇಶ, ಸೀಮಂತೋನ್ನಯನ, ಪಾಣಿಗ್ರಹಣ ಇತ್ಯಾದಿ ಸಂಸ್ಕಾರಗಳನ್ನು ತಪ್ಪದೇ ನಡೆಸುತ್ತಾರೆ. ಮಂತ್ರಗಳನ್ನೂ, ಮಂತ್ರಗಳ ಅರ್ಥವನ್ನೂ ತಿಳಿದ ಶ್ರೀಯುತರನ್ನು, ನೆರವೇರಿಸಿಕೊಡಲು ಆಹ್ವಾನಿಸುತ್ತಾರೆ. ಇಂದಿಗೂ, ಈ ಇಳಿವಯಸ್ಸಿನಲ್ಲಿಯೂ ಆಹ್ವಾನವನ್ನು ಸ್ವೀಕರಿಸಿ ಸಂತೋಷದಿಂದ ಬಂದು ನೆರವೇರಿಸಿಕೊಡುತ್ತಾರೆ ಶ್ರೀಯುತರು. ನಮ್ಮ ಜನ ಈ ಶಿಷ್ಟಾಚಾರಗಳನ್ನು ಬಿಡದೇ ಅನುಸರಿಸಬೇಕು ಎಂಬ ಅವರ ಕಳಕಳಿಯೇ ಇದಕ್ಕೆ ಕಾರಣ ಎಂಬುದು ಗಮನಾರ್ಹ.

ಸಭ್ಯತೆ, ಸೌಜನ್ಯ, ಸರಳತೆ ; ಕಿಂಚಿತ್ತೂ ಗರ್ವ ಇಲ್ಲದಿರುವುದು, ಮಾತಿನಲ್ಲೂ ಯಾರ ಮನಸ್ಸನ್ನೂ ನೋಯಿಸದೆ ಇರುವುದು; ಶಾಸ್ತ್ರದಲ್ಲಿ, ಶ್ರುತಿಯಲ್ಲಿ ನಿಷ್ಕೃಷ್ಟ ಜ್ಞಾನ- ಇವೆಲ್ಲದರ ಸಂಗಮವಾಗಿದ್ದಾರೆ ವಿದ್ವಾನ್ ನರಸಿಂಹಮೂರ್ತಿಯವರು.

ಲಿಂಗದಹಳ್ಳಿಯ ಮಹಾಜನರು ಈ ವಿದ್ವಾಂಸರ ಬದುಕು, ಸೇವೆಯನ್ನು ನೆನೆದು ಗೌರವಿಸುವುದೂ, ಈ ಸಂದರ್ಭದಲ್ಲಿ ಒಂದು ಅಭಿನಂದನ ಸಂಚಿಕೆಯನ್ನು ಹೊರತರುವುದೂ, ನಿಜಕ್ಕೂ ಔಚಿತ್ಯಪೂರ್ಣ, ಪ್ರಶಂಸನೀಯ.

ಶ್ರೀಯುತರಿಗೆ ಸಾಷ್ಟಾಂಗ ನಮಸ್ಕಾರಗಳು.

# ೧೩. ಶ್ರೀಶಂಕರಃ ಶರಣಮ್

*ವಿದ್ವಾನ್ ಬಾಲಚಂದ್ರಶಾಸ್ತ್ರಿಗಳು*

ಪ್ರಾಚೀನಪದ್ಧತಿಯಿಂದ ವೇದಶಾಸ್ತ್ರಾಧ್ಯಯನವನ್ನು ಮಾಡುವ ವಿದ್ವಾಂಸರು ಈಗ ತೀರಾ ವಿರಳರಾಗುತ್ತಿದ್ದಾರೆ. ಒಂದೊಂದು ಶಾಸ್ತ್ರದ ಹಾಗೂ ವೇದದ ತಲಸ್ಪರ್ಶ ಪಾಂಡಿತ್ಯವು ಸಾಮಾನ್ಯ ಬುದ್ಧಿವಂತರಿಂದ ಸಾಧ್ಯವಾಗುವುದಿಲ್ಲ. ಅಲಂಕಾರ ಸಾಹಿತ್ಯಾದಿಗಳಲ್ಲಿಯು ಕೂಡ, ಅವು ಸುಲಭವಾಗಿ ತೋರುತ್ತಿದ್ದರೂ, ಸರಿಯಾಗಿ ತಿಳಿದುಕೊಳ್ಳುವುದು ರಸಿಕಲಕ್ಷಣವಾದ್ದರಿಂದ ಅದು ಕೂಡ ಈಗ ಪ್ರಾಯಶಃ ನೋಡಲಿಕ್ಕೆ ದುರ್ಲಭವಾಗಿದೆ. ಬ್ರಾಹ್ಮಣರಿಗೆ ಅತ್ಯವಶ್ಯಕವಾದ ವೇದಾಧ್ಯಯನವು, ಬ್ರಾಹ್ಮಣ್ಯ ರಕ್ಷಣಕ್ಕೆ ಮುಖ್ಯವಾಗಿದೆ. ವೇದಾಂಗಗಳಾದ ಶಿಕ್ಷಾ, ವ್ಯಾಕರಣ ನಿರುಕ್ತಾದಿಗಳ ವಿಷಯವಂತೂ ಕೇವಲ ನಾಮಮಾತ್ರದಿಂದ ಉಳಿಯುವಂತಾಗಿದೆ. ಈ ಎಲ್ಲ ವಿಷಯಗಳನ್ನು ತಿಳಿದವರಂತೂ ಭಾರತದಲ್ಲಿ, ತತ್ರಾಪಿ ಕರ್ನಾಟಕ ಪ್ರಾಂತದಲ್ಲಿಯ ಈಚೆಗಿನ ಬ್ರಾಹ್ಮಣರಲ್ಲಿ ಕಂಡುಬರುವುದಿಲ್ಲ. ಅಂಥ ಎಲ್ಲ ನ್ಯೂನತೆಗಳನ್ನು ಪರಿಹರಿಸಿ, ಪಾಂಡಿತ್ಯವನ್ನು ಉಳಿಸಿಕೊಂಡು ಬಂದವರಲ್ಲಿ ಬ್ರಹ್ಮಶ್ರೀ ವಿದ್ವಾನ್ ನರಸಿಂಹಮೂರ್ತಿಶಾಸ್ತ್ರಿಗಳು ಗಣನೀಯರಾಗಿದ್ದಾರೆ. ಅವರ ಬುದ್ಧಿಮತ್ತೆಯನ್ನು ನಮ್ಮ ಈ ಧಾರವಾಡ ಪಾಠಶಾಲೆಯಲ್ಲಿ ಅವರು ವ್ಯಾಕರಣಾಧ್ಯಯನವನ್ನು ಮಾಡುವಾಗ, ಅವರ ಗುರುಗಳಾದ ಬ್ರಹ್ಮಶ್ರೀ ಪಂಡಿತಪ್ರವರ ಮಲ್ಹಾರಶಾಸ್ತ್ರಿಗಳವರು ತುಂಬಾ ವರ್ಣಿಸುತ್ತಿದ್ದರು. ಅನಂತರ ಅವರು ಮೈಸೂರು ಪಾಠಶಾಲೆಯಿಂದ ವ್ಯಾಕರಣ, ಸಾಹಿತ್ಯಾಲಂಕಾರ, ವೇದಾಂತಶಾಸ್ತ್ರಗಳಲ್ಲಿ ಪ್ರಥಮವರ್ಗದ ವಿದ್ಯಾರ್ಥಿಯಾಗಿ ವಿದ್ವತ್ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಅವರನ್ನು ನಾವು ಅನೇಕ ವಿದ್ವದ್ಗೋಷ್ಠಿಗಳಲ್ಲಿ ಶಾಸ್ತ್ರಾರ್ಥಗಳನ್ನು ಮಾಡುವಾಗ ನೋಡಿ ಸಮಾಧಾನ ಹೊಂದಿದೆವು. **ವಿದ್ವಾಂಸೋ ವಸುಧಾತಲೇ ಪರಗುಣಶ್ಲಾಘಾಸು ವಾಚಂಯಮಾಃ** ಎಂಬಂತೆ, ಬೇರೆ ವಿದ್ವಾಂಸರಲ್ಲಿ ಗುಣಗ್ರಹಣ ಮಾಡತಕ್ಕವರು ವಿರಳವಾಗಿ ಕಾಣಿಸುತ್ತಾರೆ. ಆದರೆ ಅವರು ತುಂಬಾ ಸಾತ್ತ್ವಿಕ ಸದಾಚಾರಗಳಿಂದ ಕೇವಲ ಜನಪ್ರಿಯರಾಗಿರುವರಲ್ಲದೆ ಜಗದ್ಗುರು ಪೀಠಾಧಿಷ್ಠಿತ ಶ್ರೀಗಳವರಿಗು ಕೂಡ ತಮ್ಮ ಸಂಸ್ಕೃತಿಯಿಂದಲೂ ವಿದ್ವತ್ತೆಯಿಂದಲೂ, ಸಾತ್ತ್ವಿಕ



*51. ಅಭಿನಂದಿತ ಶಾಸ್ತ್ರಿಗಳಿಗೆ ಕಿಶೋರಿಯರಿಂದ ನೃತ್ಯಸ್ವಾಗತ*

ಸ್ವಭಾವದಿಂದಲೂ, ಪ್ರೀತ್ಯಾಸ್ಪದರಾಗಿದ್ದಾರೆ. ಅವರ ಸಂಸ್ಕೃತ ಲೇಖನಗಳು ವಿದ್ವನ್ಮಾನ್ಯಗಳು, ಸಾಮಾನ್ಯರಿಗೆ ಉಪದೇಶಪರವಾಗಿಯೂ ಆಗಿರುವವು. ಇಂಥ ಅವರ ವಿಶಿಷ್ಟ ವ್ಯಕ್ತಿತ್ವವನ್ನು ತಿಳಿದು ಭಾರತ ಸರಕಾರದವರು ಅವರನ್ನು ಸತ್ಕರಿಸಿದ್ದು ತುಂಬಾ ಶ್ಲಾಘನೀಯವಾಗಿದೆ. ಅವರನ್ನು ಅನೇಕ ಕಡೆಗೆ ಅಧ್ಯಾಪಕರನ್ನಾಗಿ ಜನರು ಅಪೇಕ್ಷಿಸಿದರೂ ತಮ್ಮ ಮನೆತನದ ಶುದ್ಧವಾದ ವೈದಿಕ ವೃತ್ತಿಯಿಂದಲೇ ಅವರು ಜೀವನವನ್ನು ನಡೆಸುತ್ತಿರುವುದು ಅವರ ಸದಾಚಾರಕ್ಕೆ ಭೂಷಣವಾಗಿದೆ. ನಾವು ಅವರನ್ನು ಬಾಲ್ಯದಿಂದಲೂ ಕಾಣುತ್ತಿದ್ದು, ಈವರೆಗೆ ಒಂದೇ ತರಹದ ಸ್ವಭಾವವನ್ನು ಅವರಲ್ಲಿ ನೋಡುತ್ತಿದ್ದೇವೆ. ಅವರಿಗೆ ಶ್ರೀಭುವನೇಶ್ವರಿಯು ಆಯುರಾರೋಗ್ಯ ಕೀರ್ತಿಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲಾ
ಧಾರವಾಡ, ಕಾರ್ತಿಕ ಶುದ್ಧ ಪ್ರತಿಪದಾ ಭಾನುವಾಸರಃ

## ೧೪. ಅವ್ಯಭಿಚಾರಭಕ್ತಿ

*ರಾಮಸುಬ್ರಾಯಶೇಟ್*

**ಒಡೆಯನಾಣತಿಯಂತೆ ಹನುಮನು**
**ಕಡಲ ಹಾರುತ ಲಂಕೆ ಸೇರುತ**
**ಕಡೆಗೆ ಸೀತೆಯ ವನದಿ ಕಾಣುತ ಕುರುಹ ತಾ ಪಡೆದ**
**ಒಡನೆ ರಾಮನು ಹರ್ಷ ಚಿತ್ತದಿ**
**ಕೊಡುವೆ ವರವನು ಹನುಮ ಕೇಳೆನೆ**
**ಕಡಲ ಶಯನನ ನಾಮ ಸೇವೆಯೆ ತನಗೆ ಸಾಕೆಂದಾ**



*52. ಚಿಕ್ಕಮಗಳೂರು ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಂಮಾನ (೯.೬.೨೦೦೨): ಸಮ್ಮೇಳನಾಧ್ಯಕ್ಷರಾದ ಡಾ. ಜೆ.ಪಿ. ಕೃಷ್ಣೇಗೌಡ ಅವರೊಂದಿಗೆ*

ಸುಗ್ರೀವನ ಆಜ್ಞೆಯಂತೆ ವಾಯುಪುತ್ರನು ರಾವಣನ ಅಂತಃಪುರವನ್ನು ಪ್ರವೇಶಿಸಿ, ಲಂಕೆಯನ್ನೆಲ್ಲ ಶೋಧಿಸಿ, ಕೊನೆಗೂ ಜಾನಕಿಯನ್ನು ಪತ್ತೆಹಚ್ಚಿ, ಅವಳಿಂದ ಚೂಡಾಮಣಿಯನ್ನು ತಂದು ಶ್ರೀರಾಮನಿಗೆ ಒಪ್ಪಿಸಿ ಆತನಿಗೆ ಸಾಂತ್ವನ ಹೇಳುತ್ತಾನೆ. ಅರ್ಧಾಂಗಿಯನ್ನು ಕಳೆದುಕೊಂಡು, ತನ್ನನ್ನೇ ಕಳೆದುಕೊಂಡಂತಾದ ಶ್ರೀರಾಮನಿಗೆ ಆಗ ಆದ ಆನಂದ, ಮಾರುತಿಯ ಮೇಲುಂಟಾದ ಪ್ರೀತಿ, ಅವರ್ಣನೀಯ. ಆಂಜನೇಯನಿಗೆ ಬೇಕಾದ್ದನ್ನು ಕೇಳಲು ಹೇಳಿದ, ಕೇಳಿದ್ದನ್ನು ಕೊಡಲು ಸಿದ್ಧನಿದ್ದ. ಆದರೆ ಹನುಮ ಏನನ್ನೂ ಅಪೇಕ್ಷಿಸಲಿಲ್ಲ. ನಿನ್ನ ನಾಮಸ್ಮರಣೆ ಸೇವೆಯೇ ಸಾಕೆಂದು ತಿಳಿಸಿದ.

ಬಡತನದಲ್ಲಿ ಬೇಯುತ್ತಿದ್ದ ಕುಚೇಲ, ತನ್ನ ಬಾಲ್ಯ ಸ್ನೇಹಿತ ಕೃಷ್ಣನಲ್ಲಿಗೆ ಹೋಗುತ್ತಾನೆ. ದ್ವಾರಕೆಯ ಸೂತ್ರಧಾರನೂ ಆತನೇ. ಕೇಳಿದ್ದನ್ನು ಕೊಡುವ ಸಾಮರ್ಥ್ಯ ಅವನಲ್ಲಿತ್ತು. ಆದರೆ ಕುಚೇಲ ಏನನ್ನೂ ಕೇಳದೆ ಭಕ್ತಿಭಾವದಿಂದ ತೃಪ್ತಿಯಿಂದ ಮರಳುತ್ತಾನೆ. ಇದು **ಅವ್ಯಭಿಚಾರ ಭಕ್ತಿ** , ನಿಷ್ಕಾಮಕರ್ಮ.

ಶ್ರೀರಾಮಕೃಷ್ಣ ಪರಮಹಂಸರು ಶಾರದಾದೇವಿಯನ್ನು ವಿವಾಹವಾದ ಮೇಲೆ ಕೇಳುತ್ತಾರೆ, "ನನಗೆ ಈ ಸಂಸಾರದ ಸುಖದಲ್ಲಿ ಆಸಕ್ತಿಯಿಲ್ಲ. ಸಂನ್ಯಾಸಿಯಾಗಿ ಆತ್ಮೋದ್ಧಾರಕ್ಕೆ ಅಪೇಕ್ಷಿಸುತ್ತೇನೆ. ಆದರೆ ನೀನು ಎಲ್ಲರಂತೆ

ಸಂಸಾರ ಮಾಡುವ ಅಪೇಕ್ಷೆ ಹೊಂದಿದ್ದರೆ ನಾನು ನಿನ್ನ ಜತೆ ಸಂಸಾರ ಮಾಡುತ್ತೇನೆ. ಇಲ್ಲ, ಸಂಸಾರದ ಬಂಧನದಲ್ಲಿ ಬಂದಿಯಾಗುವುದು ಬೇಡವೆಂದರೆ ನನ್ನ ದಾರಿಯಲ್ಲಿ ಸಾಗೋಣ. ಇದಕ್ಕೆ ನನ್ನ ಒತ್ತಾಯವಿಲ್ಲ" ಎನ್ನುತ್ತಾರೆ. ಅದಕ್ಕೆ ಶಾರದಾದೇವಿ ತಾನು ಸಾಮಾನ್ಯಳಂತೆ ಜೀವಿಸಲು ಅಪೇಕ್ಷಿಸುವುದಿಲ್ಲವೆಂದು, ಪರಮಹಂಸರ ದಾರಿಯಲ್ಲಿ ಸಾಗುತ್ತಾಳೆ. ಶಾರದಾಮಾತೆಯಾಗಿ ಜಗತ್ತಿಗೆ ಮಾತೆಯಾಗುತ್ತಾಳೆ!

'ತ್ಯಜಿಸಿ ಭುಜಿಸಲ್ಕಲಿತವನೇ ಜಗಕೆ ಮಾನ್ಯನಹನು.' ಭಗವದ್ಗೀತೆಯ ಶ್ಲೋಕದಂತೆ **ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ.** ಫಲಾಪೇಕ್ಷೆಯಿಲ್ಲದ ಕರ್ತವ್ಯ - ನಿಷ್ಕಾಮಕರ್ಮ - ಇದನ್ನು ಬೋಧಿಸಿದ ಗೀತಾಚಾರ್ಯನು ತಾನೇ ಆಚರಿಸಿ ತೋರಿಸಿದ. ಕಂಸ, ಜರಾಸಂಧರಂಥವರನ್ನು ಮುಗಿಸಿದವ, ಪಾಂಡವರಿಗೆ ಸಂಪೂರ್ಣ ರಾಜ್ಯ ಪ್ರಾಪ್ತವಾಗುವಂತೆ ಮಾಡಿದವ, ಆದರೆ ಎಲ್ಲಿಯೂ ತಾನು ದೊರೆಯಾಗಿ ಆಳಲಿಲ್ಲ. ಯಾವುದನ್ನೂ ಅಪೇಕ್ಷಿಸಲಿಲ್ಲ. ವಿಶ್ವದ ಸಾರಥಿಯು ಪಾರ್ಥನಿಗೆ ಸಾರಥಿಯಾದ! ತ್ರಿಲೋಕದ ಸೇವೆ ಪಡೆಯುವವನು ನರನ ಸೇವಕನಾದ. ಎಲ್ಲವನ್ನೂ ತಾನೇ ಮಾಡಿಸಿದ. ಎಲ್ಲಿಯೂ ಡಂಗುರ ಸಾರಲಿಲ್ಲ. ನಿರ್ಲಿಪ್ತನಾಗಿದ್ದ, ಪದ್ಮಪತ್ರಜಲದಂತೆ. ತುಂಬಿದ ಕೊಡವೆಂದಿಗೂ ತುಳುಕುವುದಿಲ್ಲ. ದೇಶದ ಸ್ವಾತಂತ್ರ್ಯಕ್ಕೆ ಸರ್ವಸ್ವವನ್ನೂ ಧಾರೆಯೆರೆದ ಮಹಾತ್ಮಾ ಅಧಿಕಾರಕ್ಕೆ ಆಸೆ ಪಡಲಿಲ್ಲ. ಕೀರ್ತಿಗೆ ಶರಣಾಗಲಿಲ್ಲ . ಆದರೆ . . .

ಪ್ರಚಾರಪ್ರಪಂಚದ ಪ್ರಸ್ತುತ ದಿನಗಳಲ್ಲಿ - ಅದೆಷ್ಟು ಸ್ಪರ್ಧೆ, ಅಧಿಕಾರಕ್ಕಾಗಿ ಪಿತೂರಿ, ಕಾಲೆಳೆಯುವ ಹುನ್ನಾರ! ಶತಾಯಗತಾಯ, ಶಾಪಾದಪಿ ಶರಾದಪಿ - ಕೀರ್ತಿ, ಅಧಿಕಾರ, ಸಂಪತ್ತು, ಇಂದಿನ ಅನಿವಾರ್ಯತೆ! ಇಷ್ಟು ಹಣಕೊಡದೇ ಶಸ್ತ್ರಚಿಕಿತ್ಸೆ ಮಾಡುವುದಿಲ್ಲವೆಂಬ ವೈದ್ಯ. ಹಣಕ್ಕಾಗಿ ಹಪಹಪಿಸುವ ಪುರೋಹಿತ (ಪುರದ, ಜನರ, ಹಿತ ಮರೆತವ), 'ಗುರು'ತ್ವವನ್ನೇ ಮರೆತು ಕರ್ತವ್ಯಭ್ರಷ್ಟನಾಗಿ ಪ್ರಶಸ್ತಿಗಾಗಿ ಅಧಿಕಾರಿಗಳ ಕಾಲುಹಿಡಿಯುವ ಶಿಕ್ಷಕ, ದೇಶದ ಹಿತಬಲಿಕೊಡುವ ಸ್ವಾರ್ಥ ರಾಜಕಾರಣಿ- ಇವರೇ ತುಂಬಿರುವಾಗ ಅವ್ಯಭಿಚಾರಭಕ್ತಿಗೆ ಇಂಬೆಲ್ಲಿ?

ಲಿಂಗದಹಳ್ಳಿಯ ವೇದಬ್ರಹ್ಮ ಶ್ರೀ ನರಸಿಂಹಮೂರ್ತಿಯವರು, ಹನುಮ, ಪರಮ, ಮಹಾತ್ಮರ ಸಾಲಿಗೆ ಸೇರದಿದ್ದರೂ- ಪ್ರಕಾಂಡ ಪಂಡಿತರಾದರೂ ಪಾಮರರಂತೆ, ಸದಾ ಕರ್ತವ್ಯದಲ್ಲಿ ನಿರತರಾದರೂ ಫಲಾಪೇಕ್ಷೆ ಇಲ್ಲದ ನಿರ್ಲಿಪ್ತರಂತೆ, ಅನೇಕ ಸಾಧನೆಗಳನ್ನು ಮಾಡುತ್ತಿದ್ದರೂ ಪ್ರಚಾರಕ್ಕೆಳೆಸದೆ, ತನ್ನಪ್ಪಂ ಯಿನ್ನ ದೀಯತೇ ಎಂಬಂತೆ ತನ್ನಲ್ಲಿರುವುದೇ ದಾನಕ್ಕೆ ಎಂದು ತಿಳಿದ ಸಜ್ಜನ. ಅಧ್ಯಾತ್ಮಜೀವಿಯನ್ನು ಅಭಿನಂದಿಸುವುದು ಸಜ್ಜನಿಕೆಗೆ, ವಿದ್ವತ್ತಿಗೆ ಸಂದ ವಂದನೆ, ಅಭಿನಂದನೆ.

## ೧೫. ಸರಳತೆ, ಸಜ್ಜನಿಕೆ ಮತ್ತು ಸಹೃದಯತೆಗಳ ಸಾಕಾರಮೂರ್ತಿ

***ಸಿ.ಎಸ್.ವಿಶ್ವನಾಥ್***

ಒಮ್ಮೆ ಅನಂತ್ ಮತ್ತು ಶ್ರೀಯುತರೊಂದಿಗೆ ನಾನು ಧರ್ಮಸ್ಥಳಕ್ಕೆ ಹೋಗಿದ್ದೆ. ಲಿಂಗದಹಳ್ಳಿಯಲ್ಲಿ ಶ್ರೀರಾಮಮಂದಿರ ನಿರ್ಮಾಣದ ಬಗ್ಗೆ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ಕಂಡು ಅವರ ಅನುಗ್ರಹ ಆಶೀರ್ವಾದ ಪಡೆಯುವ ಕಾರ್ಯಕ್ರಮವಿದ್ದಿತು. ಶ್ರೀ ಹೆಗ್ಗಡೆ ಅವರ ಭೇಟಿಯಾಯಿತು. ಶ್ರೀ ನರಸಿಂಹಮೂರ್ತಿಗಳನ್ನು ಶ್ರೀ ಅನಂತ್ ಅವರು ಶ್ರೀ ವೀರೇಂದ್ರ ಹೆಗ್ಗಡೆ ಅವರಿಗೆ ಪರಿಚಯಿಸಿದರು. ಅನಂತರ ಶ್ರೀ ಹೆಗ್ಗಡೆ ಮತ್ತು ಶ್ರೀಯುತರ ನಡುವೆ ಒಂದು ಬಗೆಯ ಸಂವಾದವೇ ನಡೆಯಿತೆನ್ನಬಹುದು. ಅದನ್ನು ಗಮನವಿಟ್ಟು ಆಲಿಸಿದಾಗ ನನಗೆ ಶ್ರೀ ನರಸಿಂಹಮೂರ್ತಿಗಳವರ ಪಾಂಡಿತ್ಯದ ಕಿರುದರ್ಶನವಾಯಿತು. ಶ್ರೀ ಹೆಗ್ಗಡೆ ಅವರು ಶ್ರೀಯುತರ ಬಗ್ಗೆ ಅಪಾರ ಗೌರವ ಮತ್ತು ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀರಾಮ ಮಂದಿರದ ನಿರ್ಮಾಣಕ್ಕೆ ಧನಸಹಾಯ ನೀಡುವ ಇಂಗಿತವನ್ನು ಕೂಡ ವ್ಯಕ್ತಪಡಿಸಿದರು. ಇದಾದನಂತರ ಅವಕಾಶ ದೊರೆತಾಗಲೆಲ್ಲ ಶ್ರೀಯುತರೊಂದಿಗೆ ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದೆ. ನಮ್ಮ ಆಚಾರವಿಚಾರಗಳು, ಸಂಪ್ರದಾಯಗಳು, ಧರ್ಮದ ಬಗ್ಗೆ ಅವರೊಂದಿಗೆ ಚರ್ಚಿಸುತ್ತಿದ್ದೆ. ಅವರು ಸರಳವಾಗಿ ಮತ್ತು ಸ್ಪಷ್ಟವಾಗಿ ಶಾಸ್ತ್ರಾಧಾರಸಹಿತ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಯಾವುದೇ ವಿಧವಾದ ಹಿರಿಮೆ-ಗರಿಮೆಗಳನ್ನು ಪ್ರದರ್ಶಿಸದೇ ಅವರು ಕೊಡುತ್ತಿದ್ದ ವಿವರಣೆಯಿಂದ ನಾನು ತುಂಬಾ ಆಕರ್ಷಿತನಾಗಿದ್ದೆ. ಆದರೆ ಶಾಸ್ತ್ರಜ್ಞಾನದ ಬಗ್ಗೆ ನನಗೆ ಏನೇನೂ ಗೊತ್ತಿಲ್ಲದಿದ್ದುದರಿಂದ ಅವರು ಹೇಳಿದುದನ್ನೆಲ್ಲಾ ಜೀರ್ಣಿಸಿಕೊಳ್ಳುವುದು ನನಗೆ ಸಾಧ್ಯವಿರಲಿಲ್ಲ. ಆದರೆ ಮತ್ತೂರಿನ ಶ್ರೀ ಮಾರ್ಕಂಡೇಯ ಅವಧಾನಿಗಳು, ಮತ್ತೂರು ಶ್ರೀ ಕೃಷ್ಣಮೂರ್ತಿ, ಶ್ರೀ ಅಶ್ವತ್ಥನಾರಾಯಣ ಅವಧಾನಿಗಳೇ ಮೊದಲಾದ ಘನ ವಿದ್ವಾಂಸರು ಅಭಿಮಾನಪೂರ್ವಕವಾಗಿ ಶ್ರೀ ನರಸಿಂಹಮೂರ್ತಿಗಳ ಅಪಾರ ವಿದ್ವತ್

ಪ್ರತಿಭೆ ಬಗ್ಗೆ ಮಾತನಾಡಿರುವುದನ್ನು ಕೇಳಿ ಅವರ ಜ್ಞಾನದ ಆಳದ ಅರಿವು ನನಗಾಯಿತು. ಕ್ಲಿಷ್ಟವಿಷಯಗಳನ್ನು ಸರಳಭಾಷೆಯಲ್ಲಿ ಜನಸಾಮಾನ್ಯರಿಗೆ ತಿಳಿಯಪಡಿಸುವ ಸಾಮರ್ಥ್ಯ ಶ್ರೀಯುತರಿಗೆ ಕರಗತವಾಗಿದೆ. ಶ್ರೀಯುತರು ಉತ್ತಮ ಬರಹಗಾರರು ಕೂಡ.

ಕುಗ್ರಾಮವೆನಿಸಿಕೊಂಡಿದ್ದ ಲಿಂಗದಹಳ್ಳಿಯಲ್ಲಿ ಒಂದು ಸಾಧಾರಣ ಬಡಕುಟುಂಬದಲ್ಲಿ ಜನ್ಮ ತಾಳಿ ಶೃಂಗೇರಿ, ಧಾರವಾಡ, ಮದರಾಸು, ಬೆಂಗಳೂರು ಮೊದಲಾದ ಕಡೆ ವಿದ್ಯಾಭ್ಯಾಸಕ್ಕಾಗಿ ಸುತ್ತಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿ ಸುಮಾರು ಮೂವತ್ತು ವರ್ಷಗಳ ಕಾಲ ಸಂಸ್ಕೃತವನ್ನು ಅಧ್ಯಯನ ಮಾಡಿ ಗಳಿಸಿರುವ ಸಾಧನೆ ನಿಜಕ್ಕೂ ಆಶ್ಚರ್ಯಕರವಾದುದು. ಸಾಹಿತ್ಯ, ಅಲಂಕಾರ, ವೇದಾಂತ, ಮೀಮಾಂಸಾ ಶಾಸ್ತ್ರ, ಜ್ಯೋತಿಶ್ಶಾಸ್ತ್ರ, ಮೊದಲಾದ ಕ್ಷೇತ್ರಗಳಲ್ಲಿ ವಿದ್ವತ್ ಪದವಿಯನ್ನು ಪಡೆದಿದ್ದಾರೆ ಎಂದರೆ ಅದರ ಹಿಂದಿರುವ ಪ್ರತಿಭೆ, ಸಾಮರ್ಥ್ಯ ಮತ್ತು ಪರಿಶ್ರಮ ಎಂತಹವರಿಗೂ ಅರಿವಾಗದಿರದು.

ಅಪಾರ ಪಾಂಡಿತ್ಯ ಮತ್ತು ಜ್ಞಾನವನ್ನು ಪಡೆದಿರುವ ವಿನಯಶೀಲರಾದ ಶ್ರೀ ನರಸಿಂಹಮೂರ್ತಿಗಳಂತಹವರು ನಮ್ಮ ನಡುವೆ ಇದ್ದಾರೆ ಎಂಬುದೇ ನಮಗೆಲ್ಲರಿಗೂ ಅಭಿಮಾನದ ಸಂಗತಿ. ಅವರನ್ನು ಗೌರವಿಸುವುದೆಂದರೆ ನಮ್ಮನ್ನೇ ನಾವು ಗೌರವಿಸಿಕೊಂಡಂತೆ. ಅವರ ಗೌರವಾರ್ಥವಾಗಿ ಈ ಅಭಿನಂದನಾ ಗ್ರಂಥವನ್ನು ಹೊರತರುವುದರ ಮೂಲಕ ಇಂದಿನ ಯುವ ಪೀಳಿಗೆಗೆ ಶ್ರೀಯುತರ ನಡೆ-ನುಡಿ, ಜೀವನ, ಪಾಂಡಿತ್ಯ, ವಿದ್ವತ್ ಎಲ್ಲವೂ ಉತ್ತಮ ಪ್ರೇರಣೆ ನೀಡಲಿ.




***53. ಲಿಂಗದಹಳ್ಳಿ : ಅಭಿನಂದನಾಗ್ರಂಥ ಸಮರ್ಪಣೆಗೆ ಸಜ್ಜಾದ ವೇದಿಕೆ (೨.೧೧.೦೩)***

# ೧೬. ವಿದ್ಯೆಯ ಮೇರು

***ಡಾ. ಜೆ.ಪಿ. ಕೃಷ್ಣೇಗೌಡ***

ಪ್ರಕೃತಿಯ ಸೊಬಗು - ಕಾಫಿ, ತೆಂಗು, ಏಲಕ್ಕಿ, ಮೆಣಸು, ಅಡಕೆ ಬೆಳೆಗಳಿಗೆ ಪ್ರಸಿದ್ಧವಾದ - ಕಲೆ, ಸಾಹಿತ್ಯ, ಸಂಸ್ಕೃತಿ, ಭಾವೈಕ್ಯತೆಯ ಕೇಂದ್ರವಾಗಿರುವ - ಚಿಕ್ಕಮಗಳೂರು ಪ್ರಪಂಚದ ಭೂಪಟದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಹೊಂದಿ, ಭಾರತದೇಶಕ್ಕೆ ಅನೇಕ ರೀತಿಯಲ್ಲಿ ಕೊಡುಗೆ ನೀಡಿದ ಸುಂದರ ನಾಡಾಗಿದೆ. ಇದಕ್ಕೆ ಕಾರಣ ಇಲ್ಲಿಯ ಸಹೃದಯ ಜನತೆ - ದಾನಿಗಳ ನಾಡು, ಕವಿಗಳ ಬೀಡು; ಸಹೃದಯತೆ ಮತ್ತು ಸಹಿಷ್ಣುತೆಯ ಭಾವನೆ ತುಂಬಿರುವ ಜನತೆ. ಖ್ಯಾತ ಸಾಹಿತಿಗಳನ್ನು ತನ್ನ ಒಡಲಿನಲ್ಲಿಟ್ಟುಕೊಂಡು - ಚಿಕ್ಕಮಗಳೂರು ಖ್ಯಾತ ನಾಮರನ್ನು ಬಾಳಿಸಿ ಬೆಳಗಿಸಿದಂತಹ ಜಿಲ್ಲೆ. ಇದೇ ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿಯಲ್ಲಿ ವೇದ ಸಾಹಿತ್ಯಕ್ಕೆ ೧೯೧೨ರಲ್ಲಿ ಒಂದು ಕೊಡುಗೆಯಂತೆ ಜನನ ಪಡೆದವರೇ ಶ್ರೀ ನರಸಿಂಹಮೂರ್ತಿಗಳವರು.

**ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.** ಅನೇಕ ಕಡೆಗಳಲ್ಲಿ ಪೌರೋಹಿತ್ಯ ನಡೆಸಿರುವ ಅವರಿಗೆ ಕಿಂಚಿತ್ 'ಅಹಂ' ಎಂಬುದೇ ಇಲ್ಲ. ಬಡವ ಶ್ರೀಮಂತ ಎಂಬ ಭೇದಭಾವ ತೋರದೆ, ಕರೆದವರ ಮನ ನೋಯಿಸದೆ, ಎಲ್ಲೆಂದರಲ್ಲಿ ಹೋಗುವ ಅವರು ಎಲ್ಲರಿಂದ ಪ್ರಶಂಸೆ ಪಡೆದಿದ್ದಾರೆ. ಶ್ರೀರಾಮಚಂದ್ರ ಭಾರತಿ ಸ್ವಾಮಿಗಳು ಅವರಿಗೆ ನೀಡಿರುವ **ವಿದ್ಯಾಸಾಗರ** ಎಂಬ ಬಿರುದು ಅವರಿಗೆ ನೂರಕ್ಕೆ ನೂರು ಒಪ್ಪುತ್ತದೆ.


**ತನು ವಂಚನೆಯಿಲ್ಲದೆ ಸಮಾಜಸೇವೆ ಮಾಡುವ**
**ಮನ ವಂಚನೆಯಿಲ್ಲದೆ ಸಮಾಜಸೇವೆ ಮಾಡುವ**
**ಧನ ವಂಚನೆಯಿಲ್ಲದೆ ಸಮಾಜಸೇವೆ ಮಾಡುವ**
**ಯಾವ ವಂಚನೆಯೂ ಇಲ್ಲದೆ ಸಮಾಜಸೇವೆ ಮಾಡುವ**
**ವೇ.ಬ್ರ.ಶ್ರೀ ಲಿಂಗದಹಳ್ಳಿ ನರಸಿಂಹಮೂರ್ತಿಗಳ**
**ಕಾಯಕವೇ ಕೈಲಾಸವಯ್ಯಾ**

ವೇ.ಬ್ರ.ಶ್ರೀ ಲಿಂಗದಹಳ್ಳಿ ನರಸಿಂಹಮೂರ್ತಿಗಳು ತಮ್ಮ ಜೀವನದಲ್ಲಿ ಎಂದೂ ಯಾರನ್ನೂ ನೋಯಿಸಿದವರಲ್ಲ. ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿರುವ ಅವರನ್ನು ನೋಡಿದರೆ ಎಂತಹವರಿಗು ಕೂಡ ಆಶ್ಚರ್ಯ ಉಂಟಾಗುವುದು ಸಹಜ. ವಿದ್ಯೆಯ ಸಾಗರದಂತಿರುವ ಶ್ರೀ ನರಸಿಂಹಮೂರ್ತಿಗಳವರು, ಸಮುದ್ರದ ತಳದಲ್ಲಿರುವ ಒಂದು ಮುತ್ತು. ಇಂತಹ ಅಮೂಲ್ಯ ರತ್ನವನ್ನು ಭೂಮಿಗೆ ನೀಡಿರುವ ಭಗವಂತನಿಗೆ ಕೈ ಮುಗಿಯಲೇ ಬೇಕು.

ಎಲೆಯ ಮರೆಯ ಕಾಯಿಯಂತೆ ತಮ್ಮ ಸೇವಾಕೈಂಕರ್ಯವನ್ನು ಸಮಾಜಕ್ಕೆ ಧಾರೆಯೆರೆಯುತ್ತಿರುವ ನರಸಿಂಹಮೂರ್ತಿಗಳು ಎಂದೂ ಪ್ರಚಾರ ಬಯಸಿದವರಲ್ಲ. ಮಾನವ ಶ್ರೀಮಂತನಾಗಿರದಿದ್ದರೂ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬಹುದೆಂಬುದಕ್ಕೆ ಅವರೇ ಸಾಕ್ಷಿ. ತಾವು ಕಲಿತ ವಿದ್ಯೆಯನ್ನು ತಮ್ಮಲ್ಲೇ ಕೊಳೆಯುವಂತೆ ಮಾಡದೆ, ಸಮಾಜಕ್ಕೆ ಧಾರೆಯೆರೆಯುವ, ಅದಕ್ಕೆ ಪ್ರತಿಫಲಾಪೇಕ್ಷೆ ಬಯಸದ, ಸಹೃದಯವಂತಿಕೆ ನರಸಿಂಹಮೂರ್ತಿಗಳವರದು.

**ಫಲ ಬಿಟ್ಟ ಕೊಂಬೆ ಬಾಗುವುದು**
**ತೆನೆ ಪಡೆದ ಬತ್ತ ಬಾಗುವುದು**
**ಗೊನೆ ಹೊತ್ತ ಬಾಳೆ ಬಾಗುವುದು**

ಎಂಬಂತೆ ವಿದ್ಯೆಯ ಮೇರು ನರಸಿಂಹಮೂರ್ತಿಯವರಲ್ಲಿ ಅಹಂ ಎಂಬುದರ ಸುಳಿವಿಲ್ಲ. ವಿನಯದಿಂದ ಎಲ್ಲರೊಡನೆ ತಲೆ ಬಾಗಿ ಮಾತನಾಡುವ ಗುಣ ಅವರದು.



***54. ಲೇಖಕ ಶಾಸ್ತ್ರಿಗಳು***

ಸ್ವಾತಂತ್ರ್ಯ ಪೂರ್ವದಲ್ಲಿ ಜನಿಸಿದ ಅವರು ಸ್ವಾತಂತ್ರ್ಯ ಸೇನಾನಿಗಳು, ಸ್ವದೇಶ ಪ್ರೇಮ ಅವರಲ್ಲಿ ಮೈಗೂಡಿಕೊಂಡಿದೆ. ಎಂದೂ ಅಬ್ಬರದ ವಸ್ತ್ರವನ್ನು ಧರಿಸದ ಅವರು ಸಾಧ್ವಿಗಳಂತೆ ಸರಳವಾದ ವೇಷಭೂಷಣವುಳ್ಳ ಸಹೃದಯ ವ್ಯಕ್ತಿ. ತನು ನಿನ್ನದು ಮನ ನಿನ್ನದು ಎಂಬಂತೆ ಸಮಾಜಕ್ಕೆ ತಮ್ಮನ್ನೇ ತೊಡಗಿಸಿಕೊಂಡು ಸರ್ವರಿಗೂ ತಮ್ಮ ವಿದ್ಯೆಯನ್ನು ಧಾರೆಯೆರೆಯುವಂತಹ ಸಹೃದಯರು ಅವರು.

ಚಿಕ್ಕಮಗಳೂರಿನಲ್ಲಿ ನಡೆದ ಪ್ರಥಮ ಕನ್ನಡ ಸಮ್ಮೇಳನದಲ್ಲಿ ಅವರ ಸೇವಾಕೈಂಕರ್ಯವನ್ನು ಗಮನಿಸಿ ಅವರಿಗೆ ಸನ್ಮಾನ ಮಾಡಿ ಗೌರವಿಸಲಾಯಿತು. ಅನಾವಶ್ಯಕ ಮಾತುಗಳನ್ನು ಆಡದ ಅವರು ಮೌನಿಯಾಗಿ ಎಲ್ಲವನ್ನೂ ಅನುಭವಿಸುವಂತಹವರು. ಅವರನ್ನು ನೋಡಿದಾಕ್ಷಣ ಗೌರವದಿಂದ ತಲೆಬಾಗಬೇಕು ಎಂದು ಮನ ಹೇಳುತ್ತದೆ. ಅಂತಹ ಗೌರವಾದರಗಳಿಗೆ ಪಾತ್ರವಾಗಿರುವ ನರಸಿಂಹಮೂರ್ತಿಗಳವರ ಬಗ್ಗೆ ಈಗ ಒಂದಿಷ್ಟು ಬರೆಯಲು ಅವಕಾಶ ಸಿಕ್ಕಿದ್ದು ನನ್ನ ಪುಣ್ಯವೇ ಸರಿ.

## ೧೭. ವಿದ್ವಾನ್ ನರಸಿಂಹಮೂರ್ತಿಯವರ ಲೇಖನಶೈಲಿಯ ವೈಶಿಷ್ಟ್ಯಗಳು

***ಕೂಡಲಿ ಜಗನ್ನಾಥ ಶಾಸ್ತ್ರೀ***

ವಿದ್ವಾನ್ ನರಸಿಂಹಮೂರ್ತಿಯವರು ವೈದಿಕ ವಿದ್ವತ್ ಕ್ಷೇತ್ರದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿರುವಂತೆ ಲೇಖನ ಕ್ಷೇತ್ರದಲ್ಲಿಯು ಸಹ ವಿಶೇಷ ಛಾಪನ್ನು ಮೂಡಿಸಿಕೊಂಡಿದ್ದಾರೆ. ಅವರ ಲೇಖನಾಭಿವ್ಯಕ್ತಿಯಲ್ಲಿರುವ ಕೆಲವು ವಿಶೇಷಗಳನ್ನು ಈ ಲೇಖನದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ಶ್ರೀಯುತರ ಗದ್ಯರೂಪದ ಅರ್ಥ ನಿರೂಪಣೆ ಅತ್ಯಂತ ಸರಳ. ಸಾಮಾನ್ಯವಾದ ಕನ್ನಡ ಭಾಷಾಜ್ಞಾನವಿರುವವರು ಸಹ ಬೇಗ ಅರ್ಥಮಾಡಿಕೊಳ್ಳಬಹುದಾದ ಸರಳ ನಿರೂಪಣೆ. ಶಾಸ್ತ್ರೀಯ ವಿಷಯಗಳ ಬಗ್ಗೆ ಕೆಲವು ವಿದ್ವಾಂಸರ ಮಾತುಗಳಲ್ಲಿ ಅಥವಾ ಬರಹಗಳಲ್ಲಿ ಇರುವ ಶಬ್ದಕಾಠಿಣ್ಯವೋ ಅಥವಾ ಉಚ್ಚಮಟ್ಟದ ವಿವರಣಾ ವೈಖರಿಯೋ, ಅವು ಸಾಮಾನ್ಯ ಓದುಗನನ್ನು ವಾಚನ ವಿಮುಖನನ್ನಾಗಿಸುತ್ತವೆ; ಅವರ ವಿವರಣೆ ಅರ್ಥವಾಗಬೇಕಾದರೆ ಅದಕ್ಕೆ ಮತ್ತೊಂದು ಸರಳ ನಿರೂಪಣೆಯ ಅಗತ್ಯವಿರುತ್ತದೆ, ಓದುಗರ ಓದುವ ಆಸಕ್ತಿಯನ್ನು ಕುಂಠಿತಗೊಳಿಸುತ್ತವೆ; ವಿಷಯಾನುಭವವನ್ನು ಇಂಗಿಸಿಬಿಡುತ್ತವೆ. ಆದರೆ ವಿದ್ವಾನ್ ನರಸಿಂಹಮೂರ್ತಿಯವರ ಬರಹಗಳು ಮಂದಗತಿಯ ಜಲಪ್ರವಾಹದಂತೆ ಓದುಗನನ್ನು ಸರಳವಾಗಿ ಓದಿಸಿಕೊಂಡು ಹೋಗುವಂತೆ, ವಿಷಯಾನುಭವ ತಾನಾಗಿಯೇ ಮನನವಾಗುವಂತೆ ಮಾಡುತ್ತವೆ. ಅವರ ಬರಹಗಳನ್ನು ಓದುತ್ತಿದ್ದರೆ, ಅವರು ನಮ್ಮ ಪಕ್ಕದಲ್ಲಿಯೇ ಕುಳಿತು ಹೇಳುತ್ತಿರುವರೋ ಎನ್ನುವ ಭಾವನೆಯನ್ನು ಮೂಡಿಸುತ್ತವೆ.

ಬ್ರಾಹ್ಮಣನ ಲಕ್ಷಣವನ್ನು ವಿವರಿಸಬೇಕಾದ ಸಂದರ್ಭ. ತೈತ್ತಿರೀಯ ಸಂಹಿತೆಯ ಆಧಾರದಿಂದ ವಿಷಯವನ್ನು ಎಳೆಎಳೆಯಾಗಿ ಬಿಡಿಸಿ ವಿವರಿಸತೊಡಗಿದ್ದಾರೆ.

**ವಿಪ್ರಃ ಸ ಉಚ್ಯತೇ ಭಿಷಕ್ ರಕ್ಷೋಹಾಮೀವಚಾತನಃ** - ಈ ವಾಕ್ಯವನ್ನು ವಿಶ್ಲೇಷಿಸುತ್ತಾ, ಇದು ಬ್ರಾಹ್ಮಣನ ಲಕ್ಷಣ. ಅದೇನು ವಿಪ್ರನಲ್ಲಿ ಅತಿಶಯ? ಎಂದು ಅವರೇ ಪ್ರಶ್ನೆ ಹಾಕಿಕೊಂಡು, '**ವಿಪ್ರಃಸ ಉಚ್ಯತೇ ಭಿಷಕ್, ಭಿಷಕ್ತ್ವಂ ವಿಪ್ರಸ್ಯ ಲಕ್ಷಣಮ್**', ಭಿಷಕ್ತ್ವ ಎಂದರೆ ಚಿಕಿತ್ಸಕತ್ವ. '**ರಕ್ಷೋಹತ್ವೇ ಸತಿ ಅಮೀವಚಾತನತ್ವಂ ಭಿಷಕ್ತ್ವಂ**'. ಅಮೀವ ಎಂದರೆ ರೋಗ. ಅಮೀವಚಾತನತ್ವ ಎಂದರೆ ರೋಗನಾಶಕತ್ವ. ಅತ್ಯಾಹಾರದಿಂದ ರೋಗಬರುವುದು. ಇಲ್ಲಿ ರಸನೇಂದ್ರಿಯ ಮಾತ್ರವಲ್ಲ, ಎಲ್ಲ ಇಂದ್ರಿಯಗಳಿಗೂ ಅತಿಯಾದ ವಿಷಯ ಸೇವನೆ ಮಾಡಿದರೆ ರೋಗ ಬರುವುದು. ಈ ರೋಗ ಬರದಂತೆ ಇರುವುದು ಬ್ರಾಹ್ಮಣನ ಲಕ್ಷಣ ಎಂದು ವಿವರಿಸುತ್ತಾರೆ (ಸಂಕೇತಿ ಸಂಗಮ).

ಮತ್ತೊಂದು ಸಂದರ್ಭ: ಶ್ರೀಕೃಷ್ಣನ ಬಗ್ಗೆ ಲೋಕದಲ್ಲಿ ಸಲ್ಲದ ಜನಾಪವಾದಗಳಿವೆ. ಶ್ರೀಕೃಷ್ಣ ಸ್ತ್ರೀಲೋಲ, ವಿಲಾಸಪ್ರಿಯ, ಸದಾ ಕಾಮಿನಿಯರೊಂದಿಗೆ ವಿಹರಿಸುವವನು. ತರುಣಿಯರೊಂದಿಗೆ ಓಕುಳಿಯಾಟ, ಜಲಕ್ರೀಡೆ, ಸೀರೆ ಸೆಳೆಯುವುದು- ಇವೆಲ್ಲ ಅವನ ಲಂಪಟತನಕ್ಕೆ ಸಾಕ್ಷಿ. ಕಾಮುಕತಾ ದೋಷವುಳ್ಳ ಕೃಷ್ಣನನ್ನು ದೇವನೆಂಬುವುದು ಹೇಗೆ? ಹೀಗೆ ಶ್ರೀಕೃಷ್ಣನ ದೈವತ್ವವನ್ನೇ ಪ್ರಶ್ನಿಸುವವರು ಈಗ ಸಾಕಷ್ಟು ಜನ ಇದ್ದಾರೆ- ಎಂದು ಹೇಳುತ್ತಾ, ತಾವೇ ಪ್ರಶ್ನೆಗಳನ್ನು ಮುಂದಿಟ್ಟು ಉತ್ತರ ರೂಪದಲ್ಲಿ ಪರಿಹಾರವನ್ನು ನೀಡಿದ್ದಾರೆ. ಪ್ರತಿವಾದಿ ಸಂಶಯ ತೋರಿ ಕೇಳಬಹುದಾದ ಪ್ರಶ್ನೆಗಳನ್ನು ತಾವೇ ಸೃಷ್ಟಿಸಿಕೊಂಡು ಉತ್ತರ ಹೇಳಿ ಸಂದೇಹ ಲೇಶಮಾತ್ರವಿಲ್ಲದಂತೆ ಪರಿಹಾರವೊದಗಿಸುವುದು ಅವರ ಕ್ರಮ.

ಆಚಾರ್ಯ ಶಂಕರಭಗವತ್ಪಾದರ **ಶಿವಪಾದಾದಿ ಕೇಶಾಂತವರ್ಣನಮ್, ವಿಷ್ಣುಪಾದಾದಿಕೇಶಾಂತವರ್ಣನಮ್** - ಈ ಸ್ತೋತ್ರಗಳಿಗೆ

ಶ್ರೀ ಮೂರ್ತಿಯವರು ವೈಶಿಷ್ಟ್ಯಪೂರ್ಣವಾದ ತಾತ್ಪರ್ಯಾರ್ಥವನ್ನು ಬರೆದಿದ್ದಾರೆ. ಅವರ *ಈ* ತಾತ್ಪರ್ಯಾರ್ಥಗಳು ಮೊದಲ ಬಾರಿಗೆ ಇದೇ ಅಭಿನಂದನಾ ಗ್ರಂಥದಲ್ಲಿ ಪ್ರಕಟಗೊಳ್ಳುತ್ತಿವೆ. ಅವರ ತಾತ್ಪರ್ಯಾರ್ಥದ ವಿವಿಧ ಶೈಲಿಗಳನ್ನು ಇಲ್ಲಿ ಗಮನಿಸೋಣ.

ತರಗತಿಗಳಲ್ಲಿ ವಿಷಯವನ್ನು ಬೋಧಿಸುವಾಗ ಪ್ರಧಾನ ವಿಷಯವನ್ನು ಹೇಳಿ, ಅದಕ್ಕೆ ಸಂಬಂಧಿಸಿದ ಪ್ರಶ್ನೆಯೊಂದನ್ನು ಕಲ್ಪಿಸಿ ಕೇಳಿ, ಆ ಪ್ರಶ್ನೆಗೆ ಉತ್ತರರೂಪವಾಗಿ, ಪ್ರಧಾನ ವಿಷಯದ ಅರ್ಥ ವಿಸ್ತಾರವನ್ನು ಹೇಳುವ ಕ್ರಮವಿದೆ. ಇದನ್ನು **ಪಾಠನ ಕ್ರಮ** ಎಂದು ಗುರುತಿಸುತ್ತಾರೆ. ಶ್ರೀಯುತರು ತಾತ್ಪರ್ಯಾರ್ಥದಲ್ಲಿ *ಈ* ಕ್ರಮವನ್ನು ಅನುಸರಿಸಿರುವುದು ಗಮನಾರ್ಹವಾದದ್ದು.

**ಕಲ್ಯಾಣಂ ನೋ ವಿಧತ್ತಾಂ ಕಟಕತಟಲಸತ್ಕಲ್ಪವಲ್ಲೀ ನಿಕುಂಜ -**
**ಕ್ರೀಡಾಸಂಸಕ್ತವಿದ್ಯಾಧರನಿಕರವಧೂಗೀತರುದ್ರಾಪದಾನಃ |**
**ತಾರೈರ್ಹೇರಂಬನಾದೈಸ್ತರಲಿತನಿನದತ್ತಾರಕಾರಾತಿಕೇಶೀ**
**ಕೈಲಾಸಃ ಶರ್ವನಿರ್ವೃತ್ಯಭಿಜನಕಪದಸ್ಸರ್ವದಾ ಪರ್ವತೇಂದ್ರಃ ||**

ಪರ್ವತಶ್ರೇಷ್ಠವಾದ ಕೈಲಾಸವು ನಮಗೆ ಮಂಗಳವನ್ನುಂಟುಮಾಡಲಿ. ಆ ಪರ್ವತ ಯಾವ ರೀತಿ ಇದೆ? ತನ್ನ ತಪ್ಪಲು ಪ್ರದೇಶದಲ್ಲಿ ಶೋಭಿಸುತ್ತಿರುವ ಕಲ್ಪವೃಕ್ಷಗಳ ಲತಾಗೃಹಗಳಲ್ಲಿ, ಕ್ರೀಡಾಮಗ್ನರಾದ ವಿದ್ಯಾಧರ ಸಮೂಹದ ವನಿತೆಯರಿಂದ ಹಾಡಲ್ಪಟ್ಟ ರುದ್ರನ ಸಾಹಸ ಕಮಾನುಗಳುಳ್ಳದ್ದು ಮತ್ತು ಗಣಪತಿಯ ಉಚ್ಚ ಧ್ವನಿಗಳಿಂದ (ಮೇಘ ಧ್ವನಿಯಂತಿರುವ) ಕೆರಳಿ ಕೇಕೆ ಹಾಕುತ್ತಿರುವ ತಾರಕಾಸುರ ವೈರಿಯಾದ ಷಣ್ಮುಖನ (ವಾಹನ) ನವಿಲುಳ್ಳದ್ದು ಮತ್ತು *ಈ*ಶ್ವರನ ಮನಸ್ಸಂತೋಷ ಜನಕವಾದ ಸ್ಥಾನವುಳ್ಳದ್ದು. *ಈ* ತೆರನಾದದ್ದು ಕೈಲಾಸ.

ಪ್ರತಿಪದಗಳಿಗೂ ಅರ್ಥವನ್ನು ಹೇಳಿ, ಆ ಅರ್ಥದಲ್ಲಿಯೇ ವಿವರಣೆಯನ್ನೂ ಅಡಗಿಸುವ ತಾತ್ಪರ್ಯದ ಶೈಲಿಯನ್ನು **ಪ್ರತಿಪದಾತ್ಮಕ ಶೈಲಿ** ಎಂದು ಹೇಳುತ್ತಾರೆ. ಶ್ರೀಯುತರು *ಈ* ಶೈಲಿಯಲ್ಲಿಯೂ ನಿಷ್ಣಾತರು. ಅದಕ್ಕೆ ಒಂದು ಉದಾಹರಣೆ ಹೀಗಿದೆ:

**ವಕ್ರಾಕಾರಃ ಕಲಂಕೀ ಜಡತನುರಹಮಪ್ಯಂಘ್ರಿಸೇವಾನುಭಾವಾ -**
**ದುತ್ತಂಸತ್ವಂ ಪ್ರಯಾತಃ ಸುಲಭತರಘೃಣಾಸ್ಯಂದಿನಶ್ಚಂದ್ರಮೌಳೇಃ |**
**ತತ್ಸೇವಂತಾಂ ಜನೌಘಾಃ ಶಿವಮಿತಿ ನಿಜಯಾವಸ್ಥಯೈವ ಬ್ರುವಾಣಂ**
**ವಂದೇ ದೇವಸ್ಯ ಶಂಭೋರ್ಮುಕುಟಸುಘಟಿತಂ ಮುಗ್ಧಪೀಯೂಷ**
**ಭಾನುಮ್ ||**

ಅವನ ಕಿರೀಟದಲ್ಲಿ ಸೇರಿಸಲ್ಪಟ್ಟ ಸುಂದರನಾದ ಅಮೃತ ಕಿರಣನಾದ ಚಂದ್ರನನ್ನು ನಮಸ್ಕರಿಸುತ್ತೇನೆ. ಎಂಥಾ ಚಂದ್ರನು? ನಾನು ವಕ್ರಾಕಾರನು - ಕುಟಿಲ ಸ್ವಭಾವದವನು, ಕಲಂಕೀ - ಕಪ್ಪು ಚುಕ್ಕೆಯುಳ್ಳವನು; ದೋಷವುಳ್ಳವನು; ಜಡತನುಃ - ಶೀತಲನು, ಜಾಡ್ಯವುಳ್ಳವನು; ಇಂಥಾ ನಾನು ಕೂಡ ಶಿವನ ನಿತ್ಯವಾದ ಸೇವೆಯ ಪ್ರಭಾವದಿಂದ ಅವನ ಶಿರಸ್ಸನ್ನೇ ಏರುವವನಾದೆ. ಏಕೆಂದರೆ ಅವನು ಕರುಣಾಶಾಲಿಯಾದ್ದರಿಂದ ಸುಲಭವಾಗಿ ಒಲಿಸಿಕೊಳ್ಳಲು ಸಾಧ್ಯ. ಆದ್ದರಿಂದ ಜನಗಳಿರಾ, ನೀವು ಕೂಡ ಶಿವನನ್ನು ಸೇವಿಸಿರಿ ಎಂದು ತನ್ನ ಚರ್ಯೆ - ಅವಸ್ಥೆಯಿಂದಲೇ ಜನರಿಗೆ ಹೇಳುವಂತೆ ತೋರುತ್ತಿದ್ದಾನೆ.

ಮೂಲಸ್ತೋತ್ರದ ವಾಕ್ಯಗಳ ಅನ್ವಯ ರೀತಿಯಲ್ಲಿಯೇ ತಾತ್ಪರ್ಯವನ್ನು ಬರೆಯುವ ಶೈಲಿಯೊಂದಿದೆ. ಅದನ್ನು **ವಾಕ್ಯಾನ್ವಯಶೈಲಿ** ಎಂದು ಕರೆಯುತ್ತಾರೆ. ಇದರ ಒಂದು ನಿದರ್ಶನ ಹೀಗಿದೆ.

**ಯಾಭ್ಯಾಂ ಕಾಲವ್ಯವಸ್ಥಾ ಭವತಿ ತನುಮತಾಂ ಯೋ**
**ಮುಖಂ ದೇವತಾನಾಂ**
**ಯೇಷಾಮಾಹುಃ ಸ್ವರೂಪಂ ಜಗತಿ ಮುನಿವರಾ ದೇವತಾನಾಂ**
**ತ್ರಯೀಂ ತಾಮ್ |**
**ರುದ್ರಾಣೀವಕ್ತ್ರಪಂಕೇರುಹಸತತವಿಹಾರೋತ್ಸುಕೇಂದಿಂದಿರೇಭ್ಯ -**
**ಸ್ತೇಭ್ಯಸ್ತ್ರಿಭ್ಯಃ ಪ್ರಣಾಮಾಂಜಲಿಮುಪರಚಯೇ ತ್ರೀಕ್ಷಣಸ್ಯೇಕ್ಷಣೇಭ್ಯಃ ||**

ಯಾವ ಚಂದ್ರಸೂರ್ಯರಿಂದ ಜನರಿಗೆ ಕಾಲವ್ಯವಸ್ಥೆಯಾಗುತ್ತಿದೆಯೋ, ಯಾವ ಅಗ್ನಿಯು ದೇವತೆಗಳಿಗೆ ಮುಖವಾಗಿರುವನೋ, *ಈ* ಚಂದ್ರಸೂರ್ಯಾಗ್ನಿ ದೇವತೆಗಳ ಸ್ವರೂಪವನ್ನು ಶಿವನ ಮೂರು ಕಣ್ಣುಗಳನ್ನಾಗಿ ಮುನಿಗಳು ಹೇಳುತ್ತಿರುವರೋ ಮತ್ತು ಶಿವೆಯ ಮುಖಕಮಲದಲ್ಲಿ ಸರ್ವದಾ ವಿಹರಿಸುವ ದುಂಬಿಗಳಂತಿವೆಯೋ ಅಂಥಾ ಶಿವನ ಮೂರು ಕಣ್ಣುಗಳಿಗೆ ನಮಸ್ಕರಿಸುತ್ತೇನೆ.

ತಾತ್ಪರ್ಯಾರ್ಥವನ್ನು ಬರೆಯುವಾಗ, ಆ ಶ್ಲೋಕದಲ್ಲಿರಬಹುದಾದ ಮುದ್ರಿತ ದೋಷಗಳನ್ನು ಗಮನಿಸಿ ತಾತ್ಪರ್ಯದ ವಿವರಣೆಯಲ್ಲಿ ತಿಳಿಸುವ ಶೈಲಿಯನ್ನು **ವಿಶ್ಲೇಷಣಾತ್ಮಕ** ಎಂದು ಗಣಿಸುತ್ತಾರೆ. ಶ್ರೀಯುತ ಮೂರ್ತಿಗಳು *ಈ* ಶೈಲಿಯಲ್ಲಿಯೂ ನಿಷ್ಣಾತರಾಗಿದ್ದಾರೆ. ಅಂತಹ ಒಂದು ಉದಾಹರಣೆಯನ್ನು ಇಲ್ಲಿ ಗಮನಿಸೋಣ.

**ಜೀಮೂತ ಶ್ಯಾಮಭಾಸಾಮುಹುರಪಿ ಭಗವದ್ಬಾಹುನಾ ಮೋಹಯಂತೀ ಯುದ್ಧೇಷೂದ್ಧೂಯಮಾನಾ ಝುಟಿತಿ ತಡಿದಿವಾಲಕ್ಷ್ಯತೇ ಯಸ್ಯ ಮೂರ್ತಿಃ |**

**ಸೋSಸಿಸ್ತ್ರಾಸಾಕುಲಾಕ್ಷತ್ರಿದಶವಪುರಿಪುಃ ಶೋಣಿತಾಸ್ವಾದದೃಪ್ತೋ ನಿತ್ಯಾನಂದಾಯ ಭೂಯಾನ್ಮಧುಮಥನ ಮನೋನಂದಕೋ ನಂದಕೋ ನಃ ||**

ಯುದ್ಧ ಸಮಯದಲ್ಲಿ ಮೇಘದಂತೆ ಕಪ್ಪುಕಾಂತಿಯುಳ್ಳ ಭಗವಂತನ ಕೈಯಿಂದ ಝುಳಪಿಸಲ್ಪಟ್ಟ ಯಾವ ಖಡ್ಗದ ಮೂರ್ತಿಯು ಮಿಂಚಿನಂತೆ ಹೊಳೆಯುವುದೋ ಅಂತಹ, ಭೀತಿಯಿಂದ ಕಂಗೆಟ್ಟ ಕಣ್ಣುಗಳುಳ್ಳ ಶತ್ರುಗಳ ಶರೀರದ ರಕ್ತದ ಆಸ್ವಾದದಿಂದ ತೃಪ್ತಿಗೊಂಡ ಮತ್ತು ಭಗವಂತನ ಮನೋಲ್ಲಾಸಕರವಾದ 'ನಂದಕ'ವೆಂಬ ಖಡ್ಗವು ನಮಗೆ ಸರ್ವದಾ ಆನಂದದಾಯಕವಾಗಿರಲಿ.

*ಈ* ಶ್ಲೋಕದಲ್ಲಿ "ತ್ರಿದಶವಪುರಿಪುಃ" ಎಂದು ವೃತ್ತಸ್ಥ ಮುದ್ರಿತವನ್ನೂ "ತ್ರಿದಶರಿಪುವಪುಃ" ಎಂದು ಸರಿಪಡಿಸಿಕೊಳ್ಳಬೇಕು.

ಕೆಲವು ಸಲ ತಾತ್ಪರ್ಯವನ್ನು ಬರೆಯುವಾಗ, ಆ ಶ್ಲೋಕದಲ್ಲಿ ಸಂದಿಗ್ಧ ಪದಪ್ರಯೋಗಗಳು ಕಂಡುಬಂದಾಗ, ಸಾಮಾನ್ಯಾರ್ಥವನ್ನು ಹೇಳಿ, ಅನಂತರ, ಆ ವಿಷಯದ ಬಗ್ಗೆ ಚರ್ಚೆಯನ್ನು ನಡೆಸುವ ಶೈಲಿಯನ್ನು **ವಿಮರ್ಶಾತ್ಮಕ** ಎಂದು ಗುರುತಿಸುತ್ತಾರೆ. *ಈ* ಶೈಲಿಯನ್ನೂ ಇವರಲ್ಲಿ ಕಾಣಬಹುದು.

**ವಾಮಂ ವಾಮಾಂಕಗಾಯಾ ವದನಸರಸಿಜೇ ವ್ಯಾವಲದ್‌ವಲ್ಲಭಾಯಾ ವ್ಯಾನಮ್ರೇಷ್ವನ್ಯದನ್ಯತ್ ಪುನರಲಿಕಭವಂ ವೀತನಿಃಶೇಷರೌಕ್ಷ್ಯಮ್ | ಭೂಯೋಭೂಯೋSಪಿ ಮೋದಾನ್ನಿಪತದತಿದಯಾಶೀತಲಂ ಚೂತಬಾಣೇ ದಕ್ಷಾರೇರೀಕ್ಷಣಾನಾಂ ತ್ರಯಮಪಹರತಾದಾಶು ತಾಪತ್ರಯಂ ನಃ ||**

ದಕ್ಷಾರಿಯಾದ ಶಿವನ ಮೂರು ಕಣ್ಣುಗಳು ನಮ್ಮ ತಾಪತ್ರಯವನ್ನು ಶೀಘ್ರವಾಗಿ ಪರಿಹರಿಸಲಿ. ಎಂಥಾ ಮೂರು ಕಣ್ಣುಗಳು ? ಎಡದ ಕಣ್ಣು, ಎಡತೊಡೆಯೇರಿರುವ ಪ್ರಿಯತಮೆಯ ಮುಖ ಕಮಲದ ಮೇಲೆ ಸುತ್ತಾಡುತ್ತಿರುವುದು; ಇನ್ನೊಂದು ಬಲಗಣ್ಣು, ನಮಸ್ಕರಿಸಿದ ಭಕ್ತ ಜನರ ಮೇಲೆ ಸಂಪೂರ್ಣ ಪ್ರೀತಿಯುಳ್ಳದ್ದು; ಇನ್ನೊಂದು ಕಣ್ಣು ಮನ್ಮಥನ ಮೇಲೆ ಅತಿದಯಾಶೀತಲವಾಗಿ ಸಂತೋಷದಿಂದ ಪುನಃ ಪುನಃ ಬೀಳುತ್ತಿದೆ.

ಇಲ್ಲಿ ಸ್ವಲ್ಪ ವಿಚಾರ ಮಾಡತಕ್ಕದ್ದಿದೆ. ಮನ್ಮಥನ ಮೇಲೆ ಅತಿ ಶೀತಲವಾಗಿ ಸಂತೋಷದಿಂದ ಪುನಃ ಪುನಃ ಬೀಳುತ್ತಿದೆ ಎಂಬುದು ವಸ್ತು ಸ್ಥಿತಿಗೆ ವಿರುದ್ಧ. *ಈ* ರೀತಿ ಮನ್ಮಥನ ಮೇಲೆ ದಯೆಯು ಬೇರೆಲ್ಲಿಯ ವರ್ಣನೆಯಲ್ಲೂ ಕಂಡುಬರುವುದಿಲ್ಲ. ಅಥವಾ ಪಾರ್ವತೀವಿವಾಹಪೂರ್ವದಲ್ಲಿ ಮದನದ್ವೇಷವಿದ್ದರೂ ವಿವಾಹಾನಂತರ ಅವನಿಗೆ ಕಾಮವಿಕಾರವಿರುವುದರಿಂದ ಅದನ್ನಿಟ್ಟುಕೊಂಡು *ಈ* ವರ್ಣನೆ ಎಂದರೂ ಸರಿಯಲ್ಲ. ಏಕೆಂದರೆ ಅವನಿಗೆ 'ಮದನಾರಿ' ಎಂತಲೇ ಅಖಂಡ ವ್ಯವಹಾರವಿರುವುದರಿಂದ ಇದೂ ಸರಿಯಲ್ಲ. ಅಥವಾ ಒಂದು ವೇಳೆ *ಈ* ರೀತಿ ಪಾಠವಿದ್ದರೂ ಇರಬಹುದೇನೋ. "**ಭೂಯೋಽಪಮೋದಾತದಪದಯಾ ಶೀತಲಂ ಚೂತಬಾಣೇ**" ಎಂದು. ಅಪಮೋದಾತ್ - ಕ್ರೋಧದಿಂದ, ಅಪದಯಾ ಶೀತಲಂ - ನಿರ್ದಯೆಯಿಂದ ಶೀತಲವಾಗಿದೆ. *ಈ* ವಿಚಾರ ಪಂಡಿತರ ವಿವೇಚನೆಗೆ ಬಿಟ್ಟಿದೆ.

ಹೀಗೆ ವಿದ್ವಾನ್ ನರಸಿಂಹಮೂರ್ತಿಯವರು ತಾತ್ಪರ್ಯಾರ್ಥವನ್ನು ಬರೆಯುವ ಶೈಲಿಯಲ್ಲಿಯು ಸಹ ತಮ್ಮದೇ ಆದ ಹೆಜ್ಜೆಯ ಗುರುತುಗಳನ್ನು ಮೂಡಿಸಿಕೊಂಡಿದ್ದಾರೆ.



**55.** *ಲೇಖನಮಗ್ನ ಶಾಸ್ತ್ರಿಗಳು*

# ೧೮. ಬ್ರಹ್ಮಜ್ಞಾನಿ

***ಕೆ. ವಿ. ಚಂದ್ರಮೌಳಿ***

**"ಶ್ರುತ್ಯರ್ಥಸಂಪ್ರದಾಯಜ್ಞಮ್ ಆಗಮಾರ್ಥವಿದಂ ಪ್ರಭುಮ್ |**
**ವಿದ್ವಾಂಸಂ ಶಂಕರಂ ವಂದೇ ಜ್ವಲಂತಂ ಬ್ರಹ್ಮತೇಜಸಾ ||"**

ಜ್ಞಾನಿಗಳು ಇಂದಿಗೂ ಇದ್ದಾರೆ

**"ಶ್ರುತ್ಯರ್ಥಸಂಪ್ರದಾಯಪರಂಪರಯಾ ಆಗತಮ್**
**ಉಪನಿಷದ್ವಿಜ್ಞಾನಮ್ ಅದ್ಯಾಪಿ ವಿದ್ವತ್ಸು ಅವಗಮ್ಯತೇ ||"**

ಛಾಂದೋಗ್ಯಭಾಷ್ಯ ೮-೧೫-೧

ಇಂದ್ರ, ವರುಣ, ಕುಬೇರ ಮಿತ್ರ ಮುಂತಾದ ದೇವತೆಗಳನ್ನು *ಈ* ಕಣ್ಣುಗಳಿಂದ ಕಂಡ ಧೀರರು ಯಾರೂ ಇಲ್ಲ, *ಈ* ದೇವತೆಗಳನ್ನು ಕಾಣಲು ಸಾಧ್ಯವೂ ಇಲ್ಲ. ಏಕೆಂದರೆ ಅವರೆಲ್ಲರೂ ಶಾಸ್ತ್ರಮಾತ್ರಗಮ್ಯರಾದ ಬರೀ ನಂಬಿಕೆಯ ಮೇಲೆ ನಿಂತಿರುವ ದೇವತೆಗಳು.

ಆದರೆ ಬ್ರಹ್ಮಜ್ಞಾನಿಗಳನ್ನು ನಾವು *ಈ*ಗಲೂ ಕಾಣಬಹುದು. ಕಂಡೂ ಇದ್ದೇವೆ. ಶ್ರುತಿಗಳನ್ನು ಅಧ್ಯಯನ ಮಾಡಿದರೆ, ವೇದಾಂತ ವಾಕ್ಯಾರ್ಥವನ್ನು ಶ್ರವಣ ಮಾಡಿ ಮನನ ಮಾಡಿದರೆ, ಆತ್ಮಜ್ಞಾನವು ಅನುಭವಕ್ಕೇ ಬಂದುಬಿಡುತ್ತದೆ. ಸದ್ಗುರುಗಳ ಉಪದೇಶ ಪರಂಪರೆಯಿಂದ ಹರಿದು ಬರುತ್ತಿರುವ ಜ್ಞಾನಗಂಗೆಯು ಇಂದಿಗೂ, ಮುಂದಿಗೂ ಅವಿರತವಾಗಿ ಹರಿಯುವ ಧ್ರುವನದಿ! ಇಂದಿಗೂ ನೂರಾರು ಬ್ರಹ್ಮಜ್ಞಾನಿಗಳು ಬದುಕಿದ್ದಾರೆ. ನಮ್ಮೊಂದಿಗೇ ಇದ್ದಾರೆ. ಆದರೆ ನಾವು ಅವರನ್ನು ಗುರುತಿಸುವುದೇ ಕಷ್ಟ. ಅವರೂ ನಮ್ಮಂತೆಯೇ ಇರುತ್ತಾರೆ. ಅವರಿಗೇನು ವಿಶೇಷವಾಗಿ ಎರಡು ಕೋಡುಗಳೇನೂ ಇರುವುದಿಲ್ಲ! **"ಆತ್ಮಜ್ಞಾನವೇ ಅವರಲ್ಲಿರುವ ವಿಶೇಷ."** ಅದನ್ನು ನಾವೂ ಪಡೆದು ಬ್ರಹ್ಮನಿಷ್ಠರಾಗೋಣ. ನಮ್ಮ ಮಾನವಜನ್ಮ ಸಾರ್ಥಕಪಡಿಸಿಕೊಳ್ಳೋಣ.

ಜಗದ್ಗುರು ಶ್ರೀಶಂಕರರ *ಈ* ಉಪದೇಶಾಮೃತವನ್ನು ಇಲ್ಲಿ ಉದ್ಧರಿಸಲು ಕಾರಣವಿಷ್ಟೆ. ಮೇಲಿನ ತತ್ತ್ವಾರ್ಥಗಳಿಗೆ ಅನ್ವರ್ಥರಾಗಿ, ಪುರೋಹಿತರೆಂಬ ಅಭಿಧಾನಕ್ಕೆ ತಕ್ಕವರಾಗಿ ಇದ್ದು, ವೇದರತ್ನ ಪ್ರಶಸ್ತಿ ಪುರಸ್ಕೃತರಾದ ವೇ. ಬ್ರ.ಶ್ರೀ ಲಿಂ.ಶಾ. ನರಸಿಂಹಮೂರ್ತಿರವರು ಅಂತಹ ಬ್ರಹ್ಮಜ್ಞಾನಿಯೇ ಸರಿ. ತಮ್ಮ ತುಂಬು ಬದುಕಿನ ಜೀವನದಲ್ಲಿನ ಸಾರ್ಥಕತೆಯನ್ನು ಪರೋಪಕಾರಕ್ಕಾಗಿಯೇ ಮುಡುಪಿಟ್ಟ ಆದರ್ಶಜೀವಿ ಅವರು. *ಈ* ಮೇಲಿನ ಮಾತುಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲವೆಂಬುದನ್ನು ಎಲ್ಲರೂ ಬಲ್ಲರು. ಜ್ಞಾನಿಗಳು ಸರಳ ಜೀವನವನ್ನೇ ನಡೆಸುತ್ತಾ, ನಿಗರ್ವಿಗಳಾಗಿದ್ದು, ತಮ್ಮ ಶ್ರಮವನ್ನು ಗೌಣವಾಗಿಸುತ್ತಾರೆ. ಕೋರಿ ಬಂದ ಶಿಷ್ಯರ ಮನೋಭೀಷ್ಟಗಳನ್ನು ನೆರವೇರಿಸಲು ಅಹರ್ನಿಶಿ ದುಡಿಯುವ, ಹಣಕ್ಕಾಗಿ - ಪದವಿಗಾಗಿ ಆಸೆ ಪಡದ ಇಂತಹ ವ್ಯಕ್ತಿಗಳು ಇಂದಿಗೂ ಇದ್ದಾರೆಂಬುದು ಆಶ್ಚರ್ಯವಾದರೂ ಸತ್ಯ. ಅವರ ಹಸನ್ಮುಖ, ವಾಗ್ವೈಖರಿ, ಸ್ಫುಟವಾದ ಲೋಪವಿಲ್ಲದ ಮಂತ್ರಪಠನ ನಿಜಕ್ಕೂ ಅನನ್ಯವಾದುದು. ಶಾಸ್ತ್ರೋಕ್ತ ಪರಂಪರೆಯನ್ನು ಪ್ರವಹಿಸುವ ಪ್ರವಾಹವೇ ಶಾಸ್ತ್ರಿಗಳು.

ನನ್ನ ಗುರುಗಳು ಆಸ್ಥಾನ ವಿದ್ವಾನ್ ಎಸ್.ವಿಟ್ಠಲಶಾಸ್ತ್ರಿಗಳವರು. ಮುಂದೆ ಅವರು ಜ್ಞಾನಾನಂದೇಂದ್ರ ಸರಸ್ವತಿ ಸ್ವಾಮಿಗಳೆಂಬ ಅಭಿಧಾನದಿಂದ ಪ್ರಖ್ಯಾತರಾಗಿ ಮುಕ್ತರಾದರು. ಬೋಧಾಯನ



***56. ಗೃಹಪ್ರವೇಶದ ಸಂದರ್ಭ***

ಸಂಪ್ರದಾಯಸ್ಥರಾದ ನಮಗೆ ಯಜುರ್ವೇದದಲ್ಲಿ ಪುರೋಹಿತರಾಗಿ ಅಂದಿಗೆ ಹೆಸರು ಗಳಿಸಿದ್ದವರಲ್ಲಿ ತರೀಕೆರೆಯ ಮಳಲಿ ರಾಮಭಟ್ಟರು, ಲಿಂಗದಹಳ್ಳಿ ನರಸಿಂಹಮೂರ್ತಿಯವರು, ಚಿಕ್ಕಮಗಳೂರಿನ ನಾಗಪ್ಪ ಜೋಯಿಸರು ಮತ್ತು ಬುಕ್ಕಾಂಬುಧಿಯ ಶ್ರೀ ರಾಮಕೃಷ್ಣ ಶಾಸ್ತ್ರಿಗಳು ಪ್ರಮುಖರು. ನನ್ನ ತೀ. ಚಿಕ್ಕಪ್ಪನವರಾದ, ಅವಧೂತರೆನಿಸಿ ಕೊಂಡಿರುವ ಶ್ರೀವೆಂಕಟಾಚಲಯ್ಯನವರ ಮನೆಯ ಪೌರೋಹಿತ್ಯಕ್ಕೆ ಶಾಸ್ತ್ರಿಗಳು ಬರುತ್ತಿದ್ದರು. ಅಲ್ಲೇ ಅವರ ಪ್ರಥಮ ಭೇಟಿ. ಶಾಸ್ತ್ರಿಗಳವರನ್ನು ಅತಿ ಹತ್ತಿರದಿಂದ ಅರಿಯುವಂತಹ ಅವಕಾಶಗಳು ಅನೇಕ ಬಾರಿ ಲಭಿಸಿದ್ದು ನನ್ನ ಸುಕೃತವೆಂದೇ ಭಾವಿಸುತ್ತೇನೆ. ಅವರ ಸಂಪರ್ಕ ದೊರೆತಾಗಲೆಲ್ಲ ನನಗೆ ಅವರ್ಣನೀಯ ಆನಂದವಾಗುತ್ತಿದ್ದುದು ಸತ್ಯಸ್ಯಸತ್ಯ. ಪೂಜ್ಯ ಡಿ.ವಿ.ಜಿ.ಯವರ ವಚನವೊಂದು ಇಲ್ಲಿ ಸೂಕ್ತ.

**ವೇದಾಂತವಾಕ್ಯಗಳ ನಮಕಾನುವಾಕಗಳ |**
**ಕೇದಾರಗೌಳ ಮಣಿರಂಗಾರಭಿಗಳ ||**
**ನಾದಂಗಳಲಿ ಮನವ ಬೆರೆಸಿ ನೀನುತ್ಕ್ರಮಿಸೆ |**
**ಸಾಧನವೊ ಮುಕ್ತಿಗದು - ಮಂಕುತಿಮ್ಮ ||**

ಮೋಕ್ಷ ಸಾಧನೆಗೆ ಮಾರ್ಗವಾಗಿ, ಆತ್ಮಾನಂದವನ್ನು ನೀಡುವ ಅವರ ಸನ್ನಿಧಿ ಬಲು ಹಿತವಾದುದು. ಅವರು ಸಿಟ್ಟು ಮಾಡಿದುದನ್ನು, ಪರರನ್ನು ದೂಷಿಸಿರುವುದನ್ನು ನಾನಂತೂ ಕಂಡಿಲ್ಲ. ಕಳೆದ ತಿಂಗಳು ನಮ್ಮ ಗ್ರಾಮದಲ್ಲಿ ಶ್ರೀಯವರನ್ನು ಸತ್ಕರಿಸಿ ಗೌರವವನ್ನು ನೀಡುವ ಒಂದು ಕಾರ್ಯಕ್ರಮಕ್ಕೆ ಕೇವಲ ದೂರವಾಣಿಯಲ್ಲಿ ಅವರನ್ನು ಸಂಪರ್ಕಿಸಿದೆ. ಅನಂತರ ಆಹ್ವಾನ ಪತ್ರಿಕೆಯ ಜತೆಗೆ ಒಂದು ಪತ್ರ ಬರೆದೆ. ಅಷ್ಟೆ. ಆದರೆ ಹತ್ತಿರವಿರುವ ಲಿಂಗದಹಳ್ಳಿಗೆ ಹೋಗಿ ಕರೆಯಲಾಗಲಿಲ್ಲ. ಆದರೆ ಅವರು ಸಮಾರಂಭಕ್ಕೆ ಸಮಯಕ್ಕೆ ಸರಿಯಾಗಿ ಹಾಜರಾಗಿ, ನಮ್ಮನ್ನು ಆಶೀರ್ವದಿಸಿದ್ದು ನಮ್ಮ ಪುಣ್ಯ. ಅವರು ನಿರಹಂಕಾರರು, ಸಮಯಕ್ಕೆ ಬೆಲೆಕೊಡುವ ಪೂಜ್ಯರು ಎಂಬುದನ್ನು ಮನನ ಮಾಡಿಕೊಡಲು ಹೇಳಿದೆ ಅಷ್ಟೆ. ಶಾಸ್ತ್ರಿಗಳನ್ನೂ, ಅವರ ಧರ್ಮಪತ್ನಿ - ಬಾಂಧವರನ್ನೂ ಕರೆತರುವಲ್ಲಿ ಹೆಚ್ಚಿನ ಶ್ರಮವಹಿಸಿದ ಶ್ರೀ ಎಲ್.ಜಿ.ಅನಂತ್‌ರವರನ್ನು ಮರೆಯುವುದು ಸಾಧ್ಯವೇ? ಪೂಜ್ಯ ವೇ. ಬ್ರ. ಶ್ರೀ ಗಳಿಗೆ ಅರ್ಪಿಸುವ ಈ ನೆನಪಿನ ಸಂಚಿಕೆಗೆ ಕಿರಿಯನಾದ ನನಗೆ ಲೇಖನ ನೀಡಲು ಕೋರಿದ ಎಲ್ಲರಿಗೂ ಅನಂತ ಧನ್ಯವಾದಗಳು. ಶ್ರೀಗಳು ಶತಾಯುಷಿಗಳಾಗಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

# ೧೯. ವೇದವಿದ್ಭ್ಯೋ ದಿವೇ ದಿವೇ ನಮಸ್ಕುರ್ಯಾತ್

*ವಿದ್ವಾನ್ ಎಂ. ಸುಬ್ರಹ್ಮಣ್ಯ ಭಟ್*

**ಯಥಾ ವೃಕ್ಷಸ್ಯ ಸಂಪುಷ್ಪಿತಸ್ಯ ದೂರಾತ್ ಗಂಧೋ ವಾತಿ**

ಲಿಂಗದಹಳ್ಳಿಯ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳೊಡನೆ ನನ್ನದು ಬಾದರಾಯಣ ಸಂಬಂಧ. ಅವರು ಶೃಂಗೇರಿಯ ಜಗದ್ಗುರು ಮಠೀಯ 'ಸದ್ವಿದ್ಯಾ ಸಂಜೀವಿನೀ ಮಹಾಪಾಠಶಾಲೆ'ಯಲ್ಲಿ ಓದಿದವರು. ನಾನೂ ಅದೇ ಪಾಠಶಾಲೆಯಲ್ಲಿ ಓದಿದವನು. ಈ ಬಾದರಾಯಣ ಸಂಬಂಧ ಆತ್ಮೀಯ ಸಂಬಂಧವಾಗಿ ಪರಿಣಮಿಸಿದುದು ಬೀರೂರಿನಲ್ಲಿ. ಬೀರೂರಿನ ಪಂಡಿತವರೇಣ್ಯರೂ, ಆಶುಕವಿಗಳೂ, ಜ್ಯೋತಿರ್ವಿದ್ಯಾಪ್ರವೀಣರೂ ಆದ ವೇ.ಬ್ರ.ಶ್ರೀ ಚಿದಂಬರ ಜೋಯಿಸರು ಶ್ರೀ ನರಸಿಂಹಮೂರ್ತಿಗಳಿಗೆ ಪರಮಾಪ್ತರು. ಶ್ರೀ ಚಿದಂಬರ ಜೋಯಿಸರ ಪುತ್ರ ದಿವಾಕರ ಜೋಯಿಸರು ಅಧ್ಯಾಪಕರಾಗಿದ್ದ ಬೀರೂರಿನ ಸರ್ಕಾರಿ ಪ್ರೌಢಶಾಲೆಗೆ ನಾನು ಸಂಸ್ಕೃತ ಅಧ್ಯಾಪಕನಾಗಿ ಬಂದ ಬಳಿಕ ಅವರ ಮನೆಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತಿತ್ತು. ಶ್ರೀ ನರಸಿಂಹಮೂರ್ತಿಗಳು ಶ್ರೀ ಚಿದಂಬರ ಜೋಯಿಸರ ಪರಮಾಪ್ತರಾದುದರಿಂದ ವೇದೋಕ್ತ ಕರ್ಮಗಳೆಲ್ಲವೂ ಅವರ ಪೌರೋಹಿತ್ಯದಲ್ಲೇ ನಡೆಯುತ್ತಿದ್ದವು. ಶೃಂಗೇರಿಯಲ್ಲಿ ನಾನು ಅಧ್ಯಯನ ಮಾಡುತ್ತಿದ್ದಾಗ ಅವರನ್ನು ನೋಡಿದ್ದೆ. ಆಗ ಅವರು ಶೃಂಗೇರಿಯಲ್ಲಿ ಹೊಸದಾಗಿ ಪ್ರಾರಂಭವಾದ ಸಂಸ್ಕೃತ ಕಾಲೇಜೊಂದರ ಆಚಾರ್ಯರಾಗಿ ಕೆಲಕಾಲ ಕರ್ತವ್ಯ ನಿರ್ವಹಿಸಿದ್ದರು. ಆದರೆ ಅವರ ಜ್ಞಾನಸುಗಂಧ ನನ್ನ ಮೂಗಿಗೆ ಅಡರಿದ್ದು ಬೀರೂರಿನಲ್ಲಿ.

**ಜಾನಾತಿ ಮಂಥಾಚಲಃ**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಗಾದೆ ಪ್ರಸಿದ್ಧವಾಗಿದೆ: 'ಹೊರಗೆ ಶೃಂಗಾರ, ಒಳಗೆ ಗೋಣಿಸೊಪ್ಪು.' ಒಳಗೆ ಏನೂ ಸತ್ತ್ವವಿಲ್ಲದೆ ಬಾಹ್ಯಾಡಂಬರ ತೋರಿಸುವವ ಎಂಬುದು ಇದರ ಅರ್ಥ. ಇದೇ ರೀತಿ 'ಶಾಲು ಮಾತ್ರೇಣ ಪಂಡಿತಃ' ವಾಕ್ಯವು ಪಂಡಿತಂಮನ್ಯರನ್ನು ಕುರಿತಾಗಿಯೇ ಇದೆ. ಇದಕ್ಕೆ ವಿರುದ್ಧವಾಗಿ ಶೋಭಿಸಿದವರು

ಶ್ರೀ ನರಸಿಂಹಮೂರ್ತಿಗಳು. ಬಡಕಲು ದೇಹ, ನರೆತ ಗಡ್ಡ, ಶಿಖೆಗಳು, ಸರಳ ಉಡುಗೆ - ಅವರನ್ನು ನೋಡಿದರೆ ಯಾರೂ ಇವರನ್ನು ಪಂಡಿತರೆಂದು ಹೇಳಲಾರರು. ಅದಕ್ಕೆಂದೇ ಕವಿಯೊಬ್ಬನು 'ಸಮುದ್ರದ ಆಳ ಮೇಲಿನಿಂದ ನೋಡಿದ ಕಪಿಗಳಿಗೇನು ಗೊತ್ತು? ಅದರ ಆಳವು ಆಳಕ್ಕಿಳಿದ ಮಂದರ ಪರ್ವತಕ್ಕೆ ಮಾತ್ರ ಗೊತ್ತು ಎಂದು ಹೇಳಿದುದನ್ನು ಅವರಿಗೆ ಅನ್ವಯಿಸಿ ಹೇಳಬೇಕಾಗಿದೆ. ಅವರ ಸಹವಾಸದಲ್ಲಿದ್ದವರಿಗೆ ಮಾತ್ರ ಅವರ ಜ್ಞಾನದ ಅರಿವಾದೀತು. ನಮ್ಮ ಸನಾತನ ಪರಂಪರೆಯವರು ಬಾಹ್ಯಾಡಂಬರಕ್ಕೆ ಮಹತ್ತ್ವ ನೀಡುವವರಲ್ಲ ಎಂಬುದಕ್ಕೆ ಶ್ರೀಯುತರು ಉದಾಹರಣೆ ಯಾಗಬಲ್ಲರು.

**ಪರದ್ರವ್ಯೇಷು ಲೋಷ್ಟವತ್**

ಅವರ ಜ್ಞಾನಕ್ಕೆ, ಅವರ ಸೌಜನ್ಯಕ್ಕೆ, ಅವರ ಸರಳತೆಗೆ ಮಾರು ಹೋಗದವರೇ ಇಲ್ಲ. ಆಡಂಬರಕ್ಕೂ ಅವರಿಗೂ ಅಜಗಜಾಂತರ. ಅವರ ತೂಕವನ್ನು ಬಲ್ಲ ಅನೇಕ ಸಹೃದಯರು ಅವರನ್ನು ತಮ್ಮ ಮನೆಗಳಿಗೆ ಕರೆಸಿಕೊಂಡು ಶ್ರದ್ಧಾಭಕ್ತಿಗಳಿಂದ ವೇದೋಕ್ತ ವಿಧಿ-ವಿಧಾನಗಳನ್ನು ನಡೆಸುತ್ತಾರೆ. ಅವರು ಎಂದೂ ದಾನ ದಕ್ಷಿಣೆಗಾಗಿ ಕಚ್ಚಾಡಿದವರಲ್ಲ. 'ಯಥಾಶಕ್ತಿ ದಕ್ಷಿಣಾಂ ದದ್ಯಾತ್' ಎಂಬ ವಾಕ್ಯವನ್ನು ಉಲ್ಲಂಘಿಸಿದವರಲ್ಲ. ಇರುವ ದ್ರವ್ಯ ವಸ್ತುಗಳಲ್ಲಿ ವಿಧಿಲೋಪ, ಮಂತ್ರಲೋಪವಿಲ್ಲದಂತೆ ಶಾಸ್ತ್ರೋಕ್ತ, ವೇದೋಕ್ತ ಕರ್ಮಗಳನ್ನು ನಡೆಸಿಕೊಡುವುದರಲ್ಲಿ ಅವರು ನಿಸ್ಸೀಮರು. ತಮ್ಮ ಪಾಡಿಗೆ ತಾವಿದ್ದುಕೊಂಡು ತಮಗೆ ನಿರ್ವಹಿಸಿದ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ನಾನೇ ನೋಡಿದಂತೆ ಅವರು ನಮ್ಮ ಪರಿಚಿತರೊಬ್ಬರಲ್ಲಿ "ಷಷ್ಟಿಪೂರ್ತಿ" ಕಾರ್ಯಕ್ರಮವನ್ನು ವಿಧಿವತ್ತಾಗಿ ನಡೆಸಿಕೊಟ್ಟರು. ಆ ಸಂದರ್ಭದಲ್ಲಿ ಷಷ್ಟಿಪೂರ್ತಿ ಮಾಡಿಸಿಕೊಂಡ ಯಜಮಾನರು ಮಡದಿ ಮಕ್ಕಳಿಗೆ, ಬಂಧು-ಬಾಂಧವರಿಗೆ ಅಮೂಲ್ಯವಾದ ಉಡುಗೊರೆಗಳನ್ನು ನೀಡಿದ್ದರು. ಊಟ ಉಪಚಾರಗಳಿಗೆ ಅಪಾರ ವೆಚ್ಚ ಮಾಡಿದ್ದರು. ಪ್ರಧಾನ ಆಚಾರ್ಯರಾಗಿ ಬಂದ ಇವರಿಗೆ ನೀಡಿದ ದಕ್ಷಿಣೆ 'ಶಾಕಾಯ ವಾ ಸ್ಯಾತ್, ಲವಣಾಯ ವಾ ಸ್ಯಾತ್' ಆಗಿತ್ತು. ವೇದೋಕ್ತ ವಿಧಿ ವಿಧಾನಗಳಿಗಿಂತಲೂ ಇತರ ವಿಚಾರಗಳಲ್ಲಿ ಅನಗತ್ಯ ವೆಚ್ಚ ಮಾಡುವುದರಲ್ಲಿ ನಾವು ಮುಂದು! ಮಂಗಲವಾದ್ಯ ನುಡಿಸುವಾತನಿಗೆ, ವೀಡಿಯೋದವನಿಗೆ ನೀಡುವ ಸಂಭಾವನೆಯ ಅಲ್ಪಭಾಗವನ್ನಾದರೂ ನಾವು ವೇದಶಾಸ್ತ್ರ ಪಂಡಿತರಿಗೆ ನೀಡಲು ಮನಸ್ಸು ಮಾಡಿದರೆ ಪುಣ್ಯ ಲಭ್ಯವಾದೀತು!! ವೇದಶಾಸ್ತ್ರಗಳಿಗೆ ಇಂದು ಅಪಮಾನ ಮಾಡುವ ಮೆಕಾಲೆ ಪರಂಪರೆ ನಮ್ಮದಾಗಿದೆ ಎಂಬುದಂತೂ ದುಃಖದ ಸಂಗತಿ.

**ವಯಮಿಹ ಪರಿತುಷ್ಟಾಃ**

ಶೃಂಗೇರಿಯ 'ಸದ್ವಿದ್ಯಾ ಸಂಜೀವಿನೀ ಮಹಾಪಾಠಶಾಲೆ'ಯ ಶತಮಾನೋತ್ಸವದ ಸಂದರ್ಭವದು. ಜಗದ್ವಿಖ್ಯಾತವಾದ ಉನ್ನತ ಪಾಠಶಾಲೆಯ ಶತಮಾನೋತ್ಸವದ ವೈಭವಕ್ಕೆ ಕಳೆಕಟ್ಟುವ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 'ಶಾಲು ಮಾತ್ರೇಣ ಪಂಡಿತ'ರಾಗಿದ್ದ ಅನೇಕರು ಶತಮಾನೋತ್ಸವದ ಮುಂದಾಳತ್ವ ವಹಿಸಿ ಪಾದರಸದಂತೆ ಓಡಾಡುತ್ತಾ ಎಲ್ಲೆಂದರಲ್ಲಿ ಮಿಂಚುತ್ತಿದ್ದರು. ಆದರೆ ಇಂತಹ ವಿದ್ವಾಂಸರು ಸರಳ ಉಡುಪಿನೊಂದಿಗೆ ಎಲೆಯ ಮರೆಯ ಕಾಯಿಯಂತೆ ಹಳೆಯ ವಿದ್ಯಾರ್ಥಿಯಾಗಿಯೇ ತಮ್ಮ ಪಾಡಿಗೆ ತಾವಿದ್ದರು. ಯಾರ ಮುಂದೆಯೂ ತಾವು ಇಂತಹವರು, ಅಂತಹವರು ಎಂದು ಹೇಳಿಕೊಂಡು ಮೆರೆಯಲು ಬಯಸಲೇ ಇಲ್ಲ. ಅವರ ಜ್ಞಾನ ಗುಣಗಳ ಪರಿಚಯವಿದ್ದ ನನಗೆ ಒಮ್ಮೆ ಮನಸ್ಸಿಗೆ ಪಿಚ್ಚೆನಿಸಿತ್ತು. ಆದರೆ 'ಮನಸಿ ಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರಃ?' ಅವರು ಜ್ಞಾನ-ಗುಣಗಳಲ್ಲಂತೂ ದರಿದ್ರರಾಗಿರಲಿಲ್ಲ. ಅಂತಹ ತುಂಬಿದ ಕೊಡವದು!

**ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ**

ಇಂದು ವೇದ-ಶಾಸ್ತ್ರಗಳ ಬಗ್ಗೆ ಅಧಿಕಾರವಾಣಿಯಿಂದ 'ಇದಮಿತ್ಥಮ್' ಎಂದು ಹೇಳಬಲ್ಲ ಬೆರಳೆಣಿಕೆಯಷ್ಟಿರುವ ವಿದ್ವಾಂಸರಲ್ಲಿ ಅವರೂ ಒಬ್ಬರು. ಅವರ ಯಥಾರ್ಥ ಜ್ಞಾನಚಿಂತನೆ ಆಪತ್ತನ್ನು ತಂದುದೂ ಇದೆ.

ಓರ್ವ ಮಹನೀಯರು "ವಿಧವಾವಿವಾಹದ ಬಗ್ಗೆ ವೇದಗಳು ಏನನ್ನು ಹೇಳುತ್ತವೆ?" ಎಂದು ಅವರನ್ನು ಪ್ರಶ್ನಿಸಿದರು. ಅವರು ಯಥಾರ್ಥವನ್ನೇ ನುಡಿದರು - "ವೇದಗಳು ವಿಧವಾವಿವಾಹವನ್ನು ನಿಷೇಧಿಸಿದಂತೆ ತೋರುತ್ತಿಲ್ಲ. ಆದರೆ ಬ್ರಾಹ್ಮಣವರ್ಗದಲ್ಲಿ ಇಂದು ಅದು ರೂಢಿಯಲ್ಲಿಲ್ಲ. ಧಾರ್ಮಿಕ ಮುಖಂಡರೂ, ಗುರುಪೀಠಗಳೂ ವೇದಶಾಸ್ತ್ರ ಪಂಡಿತರೂ ಸೇರಿ ಚರ್ಚೆ ಮಾಡಿ ತೀರ್ಮಾನ ಮಾಡಬೇಕಾದಂತಹ ವಿಷಯವದು. ಆದರೆ ಇವರೆಲ್ಲರೂ ಒಂದೆಡೆ ಸೇರಿ ಸಭೆ ನಡೆಸುವುದೇ ಅಸಂಭವ. ಯಾರೂ ಇಂತಹ ಜವಾಬ್ದಾರಿಯನ್ನು ಹೊರಲು ಸಿದ್ಧರಾಗರು." ಅವರು ನುಡಿದ ಒಂದು ವಾಕ್ಯವನ್ನು ಹಿಡಿದುಕೊಂಡು ಒಂದಷ್ಟು ಮಂದಿ ಪಂಡಿತರು, "ವಿಧವಾ ವಿವಾಹಕ್ಕೆ ವೇದಪ್ರಾಮಾಣ್ಯವಿದೆ ಎಂದು ನರಸಿಂಹಮೂರ್ತಿಗಳು ಪ್ರಚಾರ ಮಾಡುತ್ತಿದ್ದಾರೆ, ಇದರಿಂದ ಬ್ರಾಹ್ಮಣ್ಯವೇ ನಾಶವಾಗಲಿದೆ" ಎಂದು ಡಂಗುರ ಸಾರಿದರು. ಇದು ಯಾವ ಮಟ್ಟಕ್ಕೆ ಹೋಯಿತೆಂದರೆ ಅವರ ಜ್ಞಾನಸಂಪತ್ತಿಗಾಗಿ ಮಾಸಿಕ ಗೌರವಧನ ನೀಡುತ್ತಿದ್ದ ಹಿರಿಯ

ಮಠವೊಂದು ಗೌರವಧನ ನೀಡುವುದನ್ನೇ ನಿಲ್ಲಿಸಿಬಿಟ್ಟಿತು! ವೇದಗಳ ನಿಜಾರ್ಥವನ್ನು ತಿಳಿಸಲು ಹೊರಟರೆ ಅಪಾಯ ತಪ್ಪಿದ್ದಲ್ಲ. ವೇದಾರ್ಥಗಳು ನಮ್ಮ ಮೂಗಿನ ನೇರಕ್ಕೇ ಇರಬೇಕೆಂಬ ಬಯಕೆ ವ್ಯರ್ಥವೇ ಸರಿ.

**ಲೋಭಮೋಹವಿವರ್ಜಿತಃ**

'ಗೌರವ' ಪ್ರದರ್ಶನಕ್ಕಿಟ್ಟ ವಸ್ತುವಾಗಬಾರದು ಎಂದೇ ಅವರು ನಂಬಿದ್ದರು. ಅವರ ಮಗಳ ಮದುವೆಯ ಬಳಿಕ ಅವರ ಮನೆಯಲ್ಲಿ ಲೌಕಿಕ ತೃಪ್ತಿಗಾಗಿ ಸತ್ಯನಾರಾಯಣ ಪೂಜೆಯನ್ನಿಟ್ಟುಕೊಂಡಿದ್ದರು. ಮದುವೆಗೆ ಹೋಗಲು ಅವಕಾಶ ದಕ್ಕದ ಕಾರಣ ನಾನು ಸತ್ಯನಾರಾಯಣಪೂಜೆಗೆ ಹೋಗಿದ್ದೆ. *ಈ* ಸಂದರ್ಭಕ್ಕೆ ಕೆಲವೇ ದಿನಗಳ ಹಿಂದೆ ವೇದಭಕ್ತರೂ ಉದ್ಯಮಪತಿಗಳೂ ಆದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ತಾವು ಸ್ಥಾಪಿಸಿದ 'ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ'ದ ಆಶ್ರಯದಲ್ಲಿ ನಾಡಿನ ಶ್ರೇಷ್ಠ ವೇದವಿದ್ವಾಂಸರೆಂಬ ನೆಲೆಯಲ್ಲಿ ಶ್ರೀ ನರಸಿಂಹಮೂರ್ತಿಗಳನ್ನು ಬೆಂಗಳೂರಿಗೆ ಕರೆಸಿಕೊಂಡು, ಭವ್ಯಸಮಾರಂಭದಲ್ಲಿ ಜರಿಶಾಲು ಹೊದೆಸಿ, ದೊಡ್ಡ ಮೊತ್ತದ ಸಂಭಾವನೆ ನೀಡಿ ಗೌರವಿಸಿದ್ದರು. ಆದರೆ ಅವರು ಇದನ್ನು ಯಾರಲ್ಲೂ ಹೇಳಿಕೊಂಡವರೇ ಅಲ್ಲ. ಪ್ರಚಾರ ಮಾಡಿದವರೂ ಅಲ್ಲ. ಒಂದು ಸಣ್ಣ ಪ್ರಶಸ್ತಿ ಬಂತೆಂದರೆ ಸಾಕು, ಪತ್ರಿಕೆಗಳಲ್ಲಿ ಫೋಟೋ ಬರಲೆಂದು ತಹತಹಿಸುವವರು ಎಷ್ಟೋ ಮಂದಿ! ಪ್ರಶಸ್ತಿ ಪಡೆಯಲೂ ವೆಚ್ಚಮಾಡುವುದು ಮಾತ್ರವಲ್ಲದೆ ಪಡೆದ ಮೇಲೂ ಅನೇಕರಿಗೆ ಔತಣಕೂಟವನ್ನೇರ್ಪಡಿಸುತ್ತಾರೆ. ಆದರೆ ಅವರು ನೀರಿನ ಮೇಲಿನ ಕಮಲಪತ್ರದಂತೆಯೇ ಇದ್ದರು. ಆ ದಿನ ವಧೂ-ವರರು ಕುಳಿತುಕೊಳ್ಳುವ ಹಸೆಮಣೆಗೆ ಆ ಶಾಲನ್ನು ಹಾಸಿದ್ದರು. ಅವರ ಹೆಗಲಿಗೆ ಮೃಚ್ಛಕಟಿಕದ ಚಾರುದತ್ತನು ಧರಿಸಿದ್ದಂತಹ ಉತ್ತರೀಯವು ಜೋತಾಡುತ್ತಿತ್ತು!

**ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್**

ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ 'ಮಹಾಸಾಧಕ'ರಿಗೆ ಪ್ರಶಸ್ತಿ ನೀಡುವ ಅನೇಕ ಸಂಸ್ಥೆಗಳೂ ಸಂಘಟನೆಗಳೂ ಇವೆ. ಇಂತಹ ಪ್ರಶಸ್ತಿಗಳಿಗೆ ಅನೇಕ ರಾಜಕಾರಣಿಗಳೂ ಉದ್ಯಮಿಗಳೂ ಪಾತ್ರರಾಗುವುದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತೇವೆ. ಹಣ ನೀಡಿ ಪ್ರಶಸ್ತಿ ದಕ್ಕಿಸಿಕೊಂಡವರು ಅನೇಕರಿಂದ ಸನ್ಮಾನವನ್ನೂ ಮಾಡಿಸಿಕೊಳ್ಳುತ್ತಾರೆ. ಪತ್ರಿಕೆಗಳಲ್ಲಿ ಅವರ ಬಗ್ಗೆ ಔಚಿತ್ಯ ಮೀರಿದ ಉದ್ದುದ್ದ ವರದಿಗಳೇ ಬರುತ್ತವೆ. ಆದರೆ ಇಂತಹವುಗಳಿಗೆ ಗಾವುದ ದೂರ ನಿಲ್ಲುವ ನರಸಿಂಹಮೂರ್ತಿಗಳನ್ನು ಹುಡುಕಿಕೊಂಡು ಗುರುಗಂಗೇಶ್ವರಾನಂದ 'ವೇದರತ್ನ' ಪ್ರಶಸ್ತಿಯು ಬಂದಿತು. ಪ್ರಶಸ್ತಿಗೊಂದು ಹಿರಿಮೆಯನ್ನು ತಂದುಕೊಟ್ಟ ಭಾರತೀಯ ವಿದ್ಯಾಭವನಕ್ಕೂ ಕೀರ್ತಿ ದಕ್ಕಿತು. ಬೆಂಗಳೂರಿನ ಭಾರತೀಯ



***57. ವೇದರತ್ನಪುರಸ್ಕೃತರಿಗೆ ಅಭಿನಂದನೆ (೨೭.೧೦.೦೭) : ಗಮಕ ವಿದ್ವಾನ್ ಹೊಸಹಳ್ಳಿ ಶ್ರೀ ಕೇಶವಮೂರ್ತಿ, ಪ್ರೊ. ಚಂದ್ರಶೇಖರ್, ಮತ್ತೂರ್‌ಜೀ, ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು ಮತ್ತು ಬಲತುದಿಯಲ್ಲಿ ಶ್ರೀ ಎಲ್.ಜಿ. ಅನಂತ್***

ವಿದ್ಯಾಭವನದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದಾಗ, 'ಯೋಗ್ಯರಿಗೂ ಪ್ರಶಸ್ತಿ ಸಿಗುತ್ತದೆ' ಎಂಬ ಸಂತಸ ಸಜ್ಜನರಲ್ಲಿ ಉಕ್ಕಿ ಹರಿಯಿತು.

**ಪುರಾಣಮಿತ್ಯೇವ ನ ಸಾಧು ಸರ್ವಮ್**

ಲಲಿತಾ ಸಹಸ್ರನಾಮದಲ್ಲಿ ಬರುವ ಕೆಲವು ನಾಮಗಳು ಪುಲ್ಲಿಂಗಗಳೂ, ಅವ್ಯಯಗಳೂ ಆಗಿವೆ. ಅವುಗಳನ್ನು ಸ್ತ್ರೀಲಿಂಗ ರೂಪದಲ್ಲಿ ಬಳಸುವುದು ವ್ಯಾಕರಣಸಮ್ಮತವೇ ಎಂಬ ಜಿಜ್ಞಾಸೆ ಮೂಡಿತು. ಸರಿ. ಸಾಕಷ್ಟು ವಿದ್ವಾಂಸರೊಡನೆ ಚರ್ಚೆ ನಡೆಸಿದರು. 'ಸ್ವಾಹಾ' 'ಸ್ವಧಾ' ಮೊದಲಾದ ಅವ್ಯಯಗಳನ್ನು 'ಸ್ವಾಹಾಯೈ ನಮಃ' 'ಸ್ವಧಾಯೈ ನಮಃ' ಎಂದು ಹೇಳುವುದು ಹೇಗೆ? 'ಘನಾಘನಃ' 'ದವಾನಲಃ' 'ಛಂದಸ್ಸಾರಃ' ಮೊದಲಾದ ಪುಲ್ಲಿಂಗ ಶಬ್ದಗಳನ್ನು 'ಘನಾಯೈ' 'ದವಾನಲಾಯೈ' 'ಛಂದಸ್ಸಾರಾಯೈ' ಎಂದು ಹೇಳಲು ಹೇಗೆ ಸಾಧ್ಯ? ನನ್ನ ಬಳಿ ಲಲಿತಾಸಹಸ್ರನಾಮಕ್ಕೆ ಭಾಸ್ಕರರಾಯರು ಬರೆದ "ಸೌಭಾಗ್ಯಭಾಸ್ಕರ"ವೆಂಬ ಭಾಷ್ಯಗ್ರಂಥವೊಂದಿತ್ತು. "ಸೌಭಾಗ್ಯಭಾಸ್ಕರ"ಭಾಷ್ಯ ವಿಶೇಷಮಹತ್ತ್ವ ಪಡೆದ ಗ್ರಂಥ. ನನ್ನಿಂದ ಅದನ್ನು ಪಡೆದು ಕೂಲಂಕಷ ಅಧ್ಯಯನ ಮಾಡಿದರು. ಪದಗಳ ವ್ಯುತ್ಪತ್ತಿಗಾಗಿ ಭಾಸ್ಕರರಾಯರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಅದರಲ್ಲಿ ಮಾಹಿತಿಗಳ ಸಾಗರವೇ ನಮಗೆ ದೊರಕುತ್ತದೆ. ಆದರೂ ನರಸಿಂಹಮೂರ್ತಿಗಳಿಗೆ 'ಭಾಷ್ಯ' ತೃಪ್ತಿ ತಂದಂತೆ ಕಾಣಲಿಲ್ಲ. ಇಷ್ಟೆಲ್ಲಾ 'ಸರ್ಕಸ್' ಮಾಡುವ ಬದಲು ಭಾಸ್ಕರರಾಯ 'ಆರ್ಷತ್ವಾತ್ ಸಾಧುಃ' ಎಂದು ಹೇಳಿದ್ದರೆ ಸಾಕಿತ್ತು ಎಂದು ನನ್ನ ಬಳಿ ತಿಳಿಸಿದರು. ಈ ರೀತಿಯ ಜ್ಞಾನನಿಧಿಗಳವರು.

**ಪರಗುಣಪರಮಾಣೂನ್ ಪರ್ವತೀಕೃತ್ಯ**

ಅವರ ವಿದ್ವತ್ತನ್ನು ತಿಳಿದುಕೊಳ್ಳುವ ಅನೇಕ ಸಂದರ್ಭಗಳು ನನಗೆ ಒದಗಿ ಬಂದಿವೆ. ಅವರ ಒಡನಾಟವೆಂಬುದು 'ಹೆಜ್ಜೇನು ಸವಿದಂತೆ'! ಅವರ ನೇತೃತ್ವದಲ್ಲಿ ನಡೆದ ಅನೇಕ ವೇದೋಕ್ತ ವಿಧಿಗಳಲ್ಲಿ ನಾನು ಪಾಲ್ಗೊಂಡಿದ್ದೇನೆ. ಒಂದೇ ಒಂದು ಸಂದರ್ಭದಲ್ಲೂ ಅವರು ಇತರರಲ್ಲಿ ದೋಷಗಳನ್ನು ಕಾಣಲಿಲ್ಲ. ಇತರರನ್ನು ಟೀಕಿಸಲಿಲ್ಲ. ಮಂತ್ರಗಳ ಸ್ವರ ತಪ್ಪಿದಾಗ, ಕ್ರಮ ತಪ್ಪಿದಾಗ ಇತರರನ್ನು ಅವಹೇಳನ ಮಾಡಲಿಲ್ಲ. ಯಾವುದೇ ಕಾರ್ಯಕ್ರಮಗಳ ನಡುವೆ 'ಹಾಗಲ್ಲ, ಹೀಗೆ' ಎಂದು ಮೂಗು ತೂರಿಸಿದವರೇ ಅಲ್ಲ. ಆದರೆ ತಿಳಿದುಕೊಳ್ಳಬೇಕೆಂಬ ಆಸಕ್ತಿಯಿಂದ ಅವರ ಬಳಿ ಹೋದಾಗ ಅವರು ನಮ್ಮ ಜ್ಞಾನದಾಹವನ್ನು ತಣಿಸಿಯಾರು, ಸನ್ಮಾರ್ಗದರ್ಶನವನ್ನು ಮಾಡಿಸಿಯಾರು. ಅಂತಹ ವ್ಯಕ್ತಿಗಳು ಲೋಕದಲ್ಲಿ ವಿರಳ. **ಪರಗುಣ ಪರಮಾಣೂನ್ ಪರ್ವತೀಕೃತ್ಯ ನಿತ್ಯಂ ನಿಜಹೃದಿ ವಿಕಸಂತಃ ಸಂತಿ ಸಂತಃ ಕಿಯಂತಃ ?** ಎಂಬ ಪ್ರಶ್ನೆಗೆ 'ಇವರೊಬ್ಬರಿದ್ದಾರೆ' ಎಂದು ಧೈರ್ಯದಿಂದ ಹೇಳಬಹುದು. **ವಿದ್ವಾನ್ ಸರ್ವತ್ರ ಪೂಜ್ಯತೇ** ಎಂಬ ಸುಭಾಷಿತಕ್ಕೆ ಸಂಪೂರ್ಣ ಅರ್ಹರಾಗಿರುವ ಪಂಡಿತವರೇಣ್ಯರ ಸಮಕ್ಷಮಕ್ಕೆ ನುಡಿಪುಷ್ಪಗಳ ನಮನಗಳನ್ನು ಅರ್ಪಿಸುವುದೇ ನಮ್ಮ ಸೌಭಾಗ್ಯ.

## ೨೦. ಲಿಂಗದಹಳ್ಳಿಯ ಅವಧೂತ

*ಡಾ. ಬಿ.ಎಸ್.ಪ್ರಣತಾರ್ತಿಹರನ್*

ಇದು, ಸಂಕೇತಿಗಳು ಪರಸ್ಪರ ಪರಿಚಯಗೊಳ್ಳುತ್ತ ನಡೆದಿರುವ ಕಾಲ. ಸಂಕೇತಿಗಳಲ್ಲಿ ಬಹುದೊಡ್ಡ ಗುಂಪು ಕೌಶಿಕ ಸಂಕೇತಿಗಳದು; ಅನಂತರದ ದೊಡ್ಡ ಗುಂಪು ಬೆಟ್ಟದಪುರ ಸಂಕೇತಿಗಳದು. ಅರ್ಧಶತಮಾನದ ಹಿಂದೆಯೂ ಬೆಳಕಿನ ವೇದಿಕೆಯ ಮೇಲೆ ಇದ್ದುದು ಈ ಎರಡು ಗುಂಪುಗಳೇ. 'ಅಂಚೀಮಾ ಇಂಚೀಮಾ' ಎಂಬ ಪದಗುಚ್ಛವು, 'ಮತ್ತೂರು', ಸಂಕೇತಿಗಳ ಮುಖ್ಯವಾಹಿನಿಯಿಂದ ಬಹುದೂರದಲ್ಲಿತ್ತು ಎಂಬುದನ್ನೇ ಸೂಚಿಸುತ್ತದೆ. ಸಂಪರ್ಕಸಾಧ್ಯತೆಗಳಲ್ಲಿ ಸುಧಾರಣೆ ಆದಂತೆ ಅದು ಕೌಶಿಕಸಂಕೇತಿಗಳ ಮುಖ್ಯವಾಹಿನಿಯಲ್ಲಿ ಸೇರಿತು. ಲಿಂಗದಹಳ್ಳಿಯು 'ಕಗ್ಗತ್ತಲಲ್ಲಿ' ಉಳಿದುದಕ್ಕೆ ಸಂಪರ್ಕಸಾಧ್ಯತೆಯನ್ನೇ ಕಾರಣವಾಗಿ ಹೇಳುವಂತಿಲ್ಲ. ಅದರ ಕಾರಣವು ಇನ್ನೂ ನಿಗೂಢವಾಗಿಯೇ ಇದೆ. ಅದು ಮುಖ್ಯವಾಹಿನಿಗೆ ಸೇರಿದ್ದು ಒಂದೆರಡು ದಶಕಗಳ ಇತಿಹಾಸ. ತಮಿಳುನಾಡು ಮತ್ತು ಕೇರಳದ ಸಂಕೇತಿಗಳ ಬಗೆಗೆ ಈಗ ಬೇಕಾದಷ್ಟು ಮಾಹಿತಿ ಇದೆ. ಅವರೊಡನೆ ನಾವು ಬೇಗ ಸಂಪರ್ಕ ಸಾಧಿಸಬೇಕಾಗಿದೆ.

ಹೀಗೆ ಹೇಳುವುದರ ಅರ್ಥ ಮತ್ತೂರು, ಲಿಂಗದಹಳ್ಳಿ ಅಥವಾ 'ದಕ್ಷಿಣ'ದ ಸಂಕೇತಿಗಳ ಪರಿಚಯವೇ ಮುಖ್ಯವಾಹಿನಿಗೆ ಇರಲಿಲ್ಲ ಎಂದಲ್ಲ. ಕಾಲ ಸನ್ನಿವೇಶಗಳ ಮಿತಸೌಲಭ್ಯಗಳ ಹಿನ್ನೆಲೆಯಲ್ಲಿ ಆ ಸಂಪರ್ಕವು ಬಹು ಮಿತವಾಗಿತ್ತು. ೧೯೮೩ರಲ್ಲಿ ನಾನು ಸಂಕೇತಿಗಳ ಬಗೆಗಿನ ಅಧ್ಯಯನಕ್ಕೆ ತೊಡಗಿದಾಗಲೂ, ಲಿಂಗದಹಳ್ಳಿಯ ಜತೆಗಿನ ಸಂಪರ್ಕ ಅಂಥ ಮಿತಿಯಲ್ಲಿಯೇ ಇತ್ತು ಎಂಬುದು ಈಗ ಆಶ್ಚರ್ಯವಾಗಿ ಕಾಣುತ್ತದೆ.

ಮೊದಲ ಬಾರಿಗೆ ಲಿಂಗದಹಳ್ಳಿಯ ಸಂಕೇತಿಗಳ ಬೀದಿಯಲ್ಲಿ ನಡೆದಾಗ ನನ್ನ ಸಂವೇದನೆ ವಿಶಿಷ್ಟವಾಗಿತ್ತು. ಅಪರಿಚಿತವಾದ ಹಳ್ಳಿಗೆ ಕ್ಷೇತ್ರಕಾರ್ಯಕ್ಕೆ ಹೋದವರಿಗೆಲ್ಲಾ ಕುತೂಹಲ ಮತ್ತು ತುಸು ಆತಂಕ(?) ಬೆರೆತ ಮನಃಸ್ಥಿತಿ ಇದ್ದೇ ಇರುತ್ತದೆ. ನನ್ನ ಆ ಅನುಭವಕ್ಕೆ ಇನ್ನೂ ಒಂದೆರಡು ಅಂಶಗಳು ಅಲ್ಲಿ ಸೇರಿದ್ದವು. ನನ್ನ ಬಾಲ್ಯದಲ್ಲಿ ಲಿಂಗದಹಳ್ಳಿಯ ಬಗೆಗೆ ಕಿವಿಗೆ ಬಿದ್ದಿದ್ದ ಹಿರಿಯರ ಮಾತುಗಳು ಉತ್ತೇಜಕವಾದುವಲ್ಲ. ಅಲ್ಲದೆ, ಪೇಟೆಯ ಬೀದಿಯಿಂದ ಪ್ರವೇಶಿಸಿದ್ದು ಒಂದು ಗಲ್ಲಿಗೆ. ಒಂದು ಗಾಡಿಯು ಸಲೀಸಾಗಿ ಪ್ರವೇಶಿಸಲಾಗದಂಥ ತಿರುವು ಸಿಕ್ಕಿತು. ನೂರಾರು ವರ್ಷ ಹಳತಾದ ಮನೆಗಳು, ಬೀಳಲು ಸಜ್ಜಾಗಿ ಓರೆಯಾದ ಗೋಡೆ, ನಾಡಹಂಚು, ಅಸ್ತವ್ಯಸ್ತ ಸಾಲು, ಬಾವಿ, ಅಲ್ಲಿ ಎಲ್ಲೋ ಮಂಡಿಯೂರಿ ಕುಳಿತ ವೃದ್ಧ ಒಂಟಿ ವಿಧವೆಯರು, ಅಲ್ಲೇ ಕಟ್ಟಿದ್ದ ದನಗಳು, ಗಾಡಿ; ಕಿರುದಾರಿಗೆ ಗುಂಡುಕಲ್ಲುಗಳ ಹಾಸು; ಅಚ್ಚ ರೈತಾಪಿ ಜನ. ಕೃಷ್ಣಾಪುರ, ಪೂಮಗಾಮೆ, ಮುದಲಾಪುರದ ಜ್ಞಾಪಕ ಬಂತು. ಆದರೆ ಅವಕ್ಕಿಂತ ಲಿಂಗದಹಳ್ಳಿ ಹೀನ ಸ್ಥಿತಿಯಲ್ಲಿದೆಯೆ ಎನಿಸಿತು. ನನ್ನ ಊರಿನಿಂದ ತುಂಬ ದೂರದ ಊರಾದುದರಿಂದಲೂ ಹಾಗೆ ಅನಿಸಿರಬಹುದು.

ವೇ.ಬ್ರ.ಶ್ರೀ ನರಸಿಂಹಮೂರ್ತಿ ಶಾಸ್ತ್ರಿಗಳನ್ನು ನೋಡಲೆಂದೇ ಆ ಊರಿಗೆ ಹೋಗಿದ್ದೆ. ಆದರೆ ಅವರು ಮನೆಯಲ್ಲಿರಲಿಲ್ಲ. ಪಕ್ಕದ ಮನೆಯೇ ಮಿತ್ರ ಶ್ರೀ ಎಲ್.ಜಿ.ಪ್ರಕಾಶ್ ಅವರದು. ನಾನು ಆಗ ಅವರಿಗೂ ಅಪರಿಚಿತನೇ. ಆದರೆ ಶಾಸ್ತ್ರಿಗಳನ್ನು ನೋಡಲು ಬಂದಿದ್ದೇನೆ ಮತ್ತು ಅವರಿಂದ ಮಾಹಿತಿ ಸಂಗ್ರಹಿಸಲು ಬಂದಿದ್ದೇನೆ ಎಂಬುದಷ್ಟರಿಂದಲೇ ಪುಳಕಗೊಂಡಿದ್ದರು. ತಕ್ಷಣ ನನ್ನ ಲಗೇಜನ್ನು ತೆಗೆದಿರಿಸಿ ನನ್ನನ್ನು ಎಳೆದುಕೊಂಡು ಬಸ್ ನಿಲ್ದಾಣದ ಕಡೆಗೆ ದಾಪುಗಾಲು ಹಾಕಿದರು. ಬೇರೆಯ ಊರಿಗೆಂದು ಹೊರಟಿದ್ದ ಶಾಸ್ತ್ರಿಗಳಿಗೆ ಬಸ್ಸು ಸಿಕ್ಕಿರದಿದ್ದರೆ (?) ಎಂಬ ಆಸೆ. ನಮ್ಮ ಜತೆ ಇನ್ನೂ ಒಬ್ಬರು ಬಂದಿದ್ದರು. ಶಾಸ್ತ್ರಿಗಳಿಗೆ ಬಸ್ಸು ಸಿಕ್ಕದೆ ಹೋಗಿರಲಿ ಎಂದು ಮೂವರೂ ಸಾಮೂಹಿಕವಾಗಿ ಪ್ರಾರ್ಥಿಸುತ್ತಿದ್ದೆವು!

ನನ್ನ ಈ ಇಬ್ಬರು ಗೆಳೆಯರೂ ಶಾಸ್ತ್ರಿಗಳ ಬಗೆಗೆ ಮಾಹಿತಿ ಕೊಡುತ್ತಲೇ ಸಾಗಿದ್ದರು. 'ಶಾಸ್ತ್ರಿಗಳು ಒಂದಲ್ಲ, ಹಲವು ಶಾಸ್ತ್ರಗಳಲ್ಲಿ ವಿದ್ವಾಂಸರು. ಅವರದು ಮಹಾ ನೆನಪಿನ ಶಕ್ತಿ. ಶೃಂಗೇರಿಯೂ ಸೇರಿದಂತೆ ಹಲವು ಮಠಗಳಲ್ಲಿ ಗುರುಗಳಿಗೆ ಅವರು ವೇದಾಂತದ ಪಾಠ ಹೇಳಿದ್ದಾರೆ. ಅವುಗಳಲ್ಲಿ ದ್ವೈತ ಮಠಗಳೂ ಸೇರಿವೆ. ಆಗಾಗ ಆ ಕಾರಣಕ್ಕೆ ತಮಿಳುನಾಡಿಗೂ ಹೋಗುತ್ತಾರೆ. ಒಂದಲ್ಲ, ಎರಡು ಸೂತ್ರಗಳಲ್ಲಿ ಸಂಸ್ಕಾರಗಳನ್ನು ಮಾಡಿಸುತ್ತಾರೆ. ಸೈಕಲ್ ಮೇಲೇ ಹಳ್ಳಿಹಳ್ಳಿಗೆ ತಿರುಗುತ್ತಾರೆ, ದಕ್ಷಿಣೆಯ ಆಸೆಗಲ್ಲ, ಸಂಸ್ಕಾರ ತಪ್ಪಬಾರದು ಎಂದು. ಈ ಇಳಿವಯಸ್ಸಿನಲ್ಲೂ ಚಳಿ ಇರಲಿ, ಮಳೆ ಇರಲಿ, ಆಲಸ್ಯ ತೋರುವುದಿಲ್ಲ. ಸರಳಜೀವಿ, ವಿನಯಸಂಪನ್ನರು. ಪಟ್ಟಣಗಳಿಗೆ ಹೋದರೆ ಬೇಕಾದ ಹಾಗೆ ದುಡಿಯಬಹುದು; ಹಳ್ಳಿಯನ್ನು ಬಿಡುವುದಿಲ್ಲ ಎನ್ನುತ್ತಾರೆ. ಗುರುಗಳಿಗೆ ಶಾಸ್ತ್ರ ವಿಚಾರಗಳಲ್ಲಿ ಅನುಮಾನ ಬಂದರೆ ಶಾಸ್ತ್ರಿಗಳನ್ನು ಕರೆಸಿಕೊಳ್ಳುತ್ತಾರೆ' ಇದು ಆ ಗೆಳೆಯರ ಮಾತಿನ ಸಾರ. ಅವರಿಬ್ಬರೂ ಒಬ್ಬರ ತಪ್ಪ ಒಬ್ಬರು,



*58. ರಾಜ್ಯಪಾಲ ಶ್ರೀ ಟಿ.ಎನ್. ಚತುರ್ವೇದಿ ಅವರಿಂದ 'ವೇದರತ್ನ' ಪ್ರಶಸ್ತಿ ಪ್ರದಾನ: ಭಾರತೀಯ ವಿದ್ಯಾಭವನ, ಬೆಂಗಳೂರು, ೧೬.೧೧.೦೨*

ಸ್ಪರ್ಧೆಗೆ ನಿಂತ ಹಾಗೆ *ಈ* ವಿಚಾರಗಳನ್ನು ಹೇಳಿದ್ದರು. ಹಳ್ಳಿಯ ಅವಿದ್ಯಾವಂತ ರೈತರು, ಅರೆ ವಿದ್ಯಾವಂತರು, ವಿದ್ಯಾವಂತರಾದರೂ ವಿಮರ್ಶಕರಲ್ಲದವರು ಹೀಗೆ ಮುಗ್ಧ ಭಕ್ತಿಯನ್ನು ಇಟ್ಟುಕೊಂಡಿರುವುದುಂಟು. ಆದರೆ ಶಿವಮೊಗ್ಗೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಪ್ರೊ. ಎಲ್.ಎಂ.ಎಲ್. ಶಾಸ್ತ್ರಿಯವರೂ ಇದೇ ಅಭಿಪ್ರಾಯ ನೀಡಿದ್ದರು. ನರಸಿಂಹಮೂರ್ತಿ ಶಾಸ್ತ್ರಿಗಳ ಸಾಂಪ್ರದಾಯಿಕ ಶಿಕ್ಷಣದ ಆಳ ಮತ್ತು ವಿಮರ್ಶಾದೃಷ್ಟಿ ಕೂಡಿದ ಆಧುನಿಕ ಪ್ರಜ್ಞೆಯನ್ನು ಅವರು ಬಹಳವಾಗಿ ಮೆಚ್ಚಿಕೊಂಡಿದ್ದರು. ಹೀಗೆ ಪಾಮರರಿಂದ ಹಿಡಿದು ಪಂಡಿತರವರೆಗೆ ಮೆಚ್ಚಿಕೊಳ್ಳುವ *ಈ* ವಿದ್ವಾಂಸರ ಬಗೆಗಿನ ನನ್ನ ಕುತೂಹಲ *ಈಗ* ಎರಡು ಪಟ್ಟಾಗಿತ್ತು.

ಬಸ್ಸು ಬಂದಿರಲಿಲ್ಲ. ಶಾಸ್ತ್ರಿಗಳು ಒಂದು ಜಗಲಿಯ ಮೇಲೆ ಕೂತಿದ್ದರು. ಕಚ್ಚೆಪಂಚೆ, ಉತ್ತರೀಯ; ಜತೆಗೆ ಒಂದು ಪ್ರಯಾಣದ ಚೀಲ. ಒಟ್ಟಾಗಿ ವೈದಿಕ ವೇಷ. ಬೆಳೆದ ಕುರುಚಲು ಗಡ್ಡವೂ ಅದರ ಭಾಗ. ಸಾಧಾರಣ ಮೈಕಟ್ಟು. ವಯಸ್ಸಾದರೂ ದೃಢವಾದ ಶರೀರ. ಅದೆಲ್ಲಕ್ಕಿಂತ ಹೆಚ್ಚಾಗಿ ಸ್ಥಿತಪ್ರಜ್ಞತೆ ಎದ್ದುಕಾಣುತ್ತಿತ್ತು. "ಇವರು ಶಿವಮೊಗ್ಗದಿಂದ ಬಂದಿದ್ದಾರೆ. ಸಂಕೇತಿಗಳ ಬಗೆಗೆ ಅಧ್ಯಯನ ಮಾಡುತ್ತಿದ್ದಾರಂತೆ. ನಿಮ್ಮ ಬಳಿ ಏನೋ ಕೇಳಿ ತಿಳಿದುಕೊಳ್ಳಬೇಕೆಂದು ಬಂದಿದ್ದಾರೆ" ಪ್ರಕಾಶ್ ಸಂಕೇತಿ ಭಾಷೆಯಲ್ಲೇ ಹೇಳಿದರು. ಶಾಸ್ತ್ರಿಗಳು, ಕಾಲು ಮುಟ್ಟಿ ನಮಸ್ಕರಿಸಿದ ನನ್ನನ್ನು ಪ್ರೀತಿಯಿಂದ ಅವಲೋಕಿಸಿದರು, ನನಗೆ ಏನು ಬೇಕಾಗಿತ್ತು ಎಂದು ವಿಚಾರಿಸಿದರು. ಅದು ಹಾಗೆ ಒಂದೆರಡು ನಿಮಿಷದಲ್ಲಿ ಮುಗಿಯಬಹುದಾದ ವ್ಯವಹಾರವಾಗಿರಲಿಲ್ಲ. ಕೆಲವು ಗಂಟೆಗಳೇ ಬೇಕಾಗಿತ್ತು. ಯಾವ ಕೃತಕತೆಯಾಗಲಿ, ಡೋಲಾಯಮಾನವಾಗಲಿ ಇಲ್ಲದ ಶಾಸ್ತ್ರಿಗಳು ತಕ್ಷಣ ಎದ್ದರು, "ಬನ್ನಿ, ಮನೆಗೆ ಹೋಗೋಣ" ಎಂದರು. "ಬೇಡ. ನೀವು ಪ್ರಯಾಣ ಹೊರಡಿ. ನಾನು ಇನ್ನೊಮ್ಮೆ ಬರುತ್ತೇನೆ" ಎಂದು ಮತ್ತೆ ಮತ್ತೆ ನಿವೇದಿಸಿಕೊಂಡೆ. "ಮುಂದಿನ ಬಸ್ಸಲ್ಲಿ ಹೋಗುತ್ತೇನೆ, ಬನ್ನಿ. ಯೋಚಿಸಬೇಡಿ" ಎಂದು ಹೇಳಿ ಮನೆಗೆ ಕರೆದುಕೊಂಡು ಹೊರಟೇಬಿಟ್ಟರು. ಮನೆಯಲ್ಲೂ ಅಷ್ಟೆ. ಯಾವ ಚಡಪಡಿಕೆಯೂ ಇಲ್ಲದೆ, ನನ್ನ ಪ್ರಶ್ನೆಗಳಿಗೆ ಸಾವಧಾನವಾಗಿ ಉತ್ತರಿಸಿದರು. ಗಂಟೆಗಳು ಕಳೆದವು. ಇಬ್ಬರೂ ಒಟ್ಟಿಗೆ ಬಸ್ಸಿಗೆ ಹೊರಟೆವು. ನಾನಾದರೋ ಕಲಿಯಲು ಹೋದವನು, ಆದರೆ ಅವರಾದರೋ ನನ್ನಿಂದಲೇ ತಮಗೆ ಉಪಕಾರವಾಗುತ್ತಿದೆ, ನಾನೇ ಒಬ್ಬ ವಿದ್ವಾಂಸ, ನಾನೇ ಅವರಿಗಿಂತ ದೊಡ್ಡವನು ಎಂಬ ಹಾಗೆ ಪ್ರೀತಿಯಿಂದ ನಡೆಸಿಕೊಂಡರು. ಅವರಲ್ಲಿ ಕೀಳರಿಮೆ ಇರಲಿಲ್ಲ; ಆದರೆ ಅವರಿಗೆ ವಿದ್ವತ್ತು ಹೆಗಲ ಮೇಲೆ ಕೂತಿರಲಿಲ್ಲ. ಅದರಾಚೆಯ ದಾರ್ಶನಿಕನ ನೆಲೆಯಲ್ಲಿ ಅವರಿದ್ದರು.

ಲಿಂಗದಹಳ್ಳಿಯಂಥ ಹಿಂದುಳಿದ ಗ್ರಾಮದಲ್ಲಿ, ಮಾಹಿತಿ ನೀಡಲು ಸಮರ್ಥರಾದ ಯಾರು ತಾನೆ ಸಿಗುತ್ತಾರೆ ಎಂಬುದು ನನ್ನ ಬಹುದಿನದ ಆತಂಕವಾಗಿತ್ತು. ಪ್ರೊ. ಎಲ್.ಎಂ.ಎಲ್.ಶಾಸ್ತ್ರಿಯವರೇನೋ ನನ್ನ ಬರಹಗಳನ್ನು ಪರಿಶೀಲಿಸಲು ದಯೆಯಿಟ್ಟು ಒಪ್ಪಿದ್ದರು. ಆದರೆ ನನಗೆ ಸಾಂಪ್ರದಾಯಿಕ ಶಿಕ್ಷಣ ಪಡೆದ, ಸಾಂಪ್ರದಾಯಿಕವಾಗಿಯೇ ಬದುಕಿದ, ವೃದ್ಧವಿದ್ವಾಂಸರು ಬೇಕಾಗಿತ್ತು. ಒಬ್ಬರಲ್ಲ ಮೂರು-ನಾಲ್ಕು ಜನ ವಿದ್ವಾಂಸರು ಸಿಕ್ಕಿದರು. ಅವರಲ್ಲಿ ವೇ.ಬ್ರ.ಶ್ರೀ ಬಸವಾನಿ ರಾಮಶರ್ಮರು ಸ್ವಾತಂತ್ರ್ಯ ಹೋರಾಟ ಮತ್ತು ಸಮಾಜ ಸೇವೆಯಲ್ಲಿ ತೊಡಗಿಕೊಂಡವರು. ವೇ.ಬ್ರ.ಶ್ರೀ ಚಿದಂಬರ ಜೋಯಿಸರೂ, ವೇ.ಬ್ರ.ಶ್ರೀ ಕೃಷ್ಣಮೂರ್ತಿಗಳೂ ಉಪಾಧ್ಯಾಯರು. ವೇ.ಬ್ರ.ಶ್ರೀ ಶಾಸ್ತ್ರಿಗಳು ಕೂಡ ಹಳ್ಳಿಯಲ್ಲೇ ಉಳಿದವರಲ್ಲ, ಹೊರ ಪ್ರಪಂಚದ ಒಡನಾಟ ಇದ್ದವರು. ಆದರೆ ಎಲ್ಲರೂ ಸಾತ್ತ್ವಿಕರು. ಅವರಿಂದ ಮಾಹಿತಿ ಸಂಗ್ರಹಿಸಲು ಹತ್ತಾರು ಬಾರಿ ಸುತ್ತಿದೆ. ಪ್ರತಿ ಬಾರಿಯೂ ಒಬ್ಬ ಋಷಿಯ ಮುಂದೆ ಕೂತ ಅನುಭವವಾಗುತ್ತಿತ್ತು, ತಪೋವನದಲ್ಲಿದ್ದ ಅನುಭವ ಆಗುತ್ತಿತ್ತು. ಸಂಕೇತಿಗಳ ವಿವಿಧ ಉಪಗುಂಪುಗಳಲ್ಲಿ ಲಿಂಗದಹಳ್ಳಿಯ ವಿದ್ವಾಂಸರಷ್ಟು ಸಾತ್ತ್ವಿಕರನ್ನು ಎಲ್ಲಿಯೂ ನೋಡಲಿಲ್ಲ ಎಂದು ವಿನಮ್ರವಾಗಿ ನಾನಿಲ್ಲಿ ನಿವೇದಿಸಿಕೊಳ್ಳಬಹುದು. ಅದಕ್ಕೆ ಉತ್ಪ್ರೇಕ್ಷೆಯ ಭೀತಿ ಇಲ್ಲ, ಅನ್ಯತ್ರ ಅನುದಾತ್ತತೆಯ ಶಂಕೆ ಇಲ್ಲ.

ನನ್ನ ಪಕ್ಕದ ಊರಾದ ರಾಮನಾಥಪುರದ ವಿದ್ವಾಂಸರೊಬ್ಬರು ಪಿಎಚ್.ಡಿ., ಪದವಿಗಾಗಿ ಮಹಾಪ್ರಬಂಧವನ್ನು ಸಿದ್ಧ ಮಾಡುತ್ತಿದ್ದರು. ವೇದಾಂತದ ಸೂಕ್ಷ್ಮಗಳ ಕೆಲ ಸಮಸ್ಯೆಗಳು ಅವರ ಮುಂದಿದ್ದವು. ಆ ಸುತ್ತಲೂ ಹಲವು ವಿದ್ವಾಂಸರಲ್ಲಿ ಅವರು ಚರ್ಚಿಸಿದ್ದರು. ಮಾಹಿತಿಯೇನೋ ಸಿಕ್ಕಿತ್ತು, ಆದರೆ ಬೇರು ಸಿಕ್ಕಿದ ಅನುಭವ ಆಗಲಿಲ್ಲ. ನಾನೆಂದೆ, "ಲಿಂಗದಹಳ್ಳಿಯ ಶಾಸ್ತ್ರಿಗಳನ್ನೇಕೆ ನೀವು ಆಶ್ರಯಿಸಬಾರದು?" ಅದಾಗಲೇ ಮೈಸೂರಿನ ಅನೇಕ ವಿದ್ವಾಂಸರು ಅವರಿಗೆ ಇದೇ ಸಲಹೆಯನ್ನು ನೀಡಿದ್ದರು. ಅವರು ಹೊರಟೂ ಇದ್ದರು. ಅವರಿಗೆ ಶಾಸ್ತ್ರಿಗಳು ಲಿಂಗದಹಳ್ಳಿಯಲ್ಲಿ ಸಿಗಲಿಲ್ಲ. ಅವರು ಆಗ ಭೀಮನಕಟ್ಟೆ ಮಠದಲ್ಲಿ ವೇದಾಂತ ಬೋಧೆ ಮಾಡುತ್ತಿದ್ದರು. ನನ್ನ ಗೆಳೆಯರು ಶಾಸ್ತ್ರಿಗಳನ್ನು ಅಲ್ಲಿಯೇ

ಆಶ್ರಯಿಸಿದರು, ಹದಿನೈದು ದಿನ ಅಲ್ಲಿಯೇ ಉಳಿದರು. ಕೇವಲ ನೆನಪಿನ ಆಧಾರದಿಂದಲೇ ವಿವಿಧ ಗ್ರಂಥಗಳ ಸೂತ್ರಗಳನ್ನು ಉಲ್ಲೇಖಿಸಿ ವಿಷಯಪ್ರತಿಪಾದನೆ ಮಾಡುವ ಅವರ ಸಿದ್ಧಿಯನ್ನು ಕಂಡು ಅವಾಕ್ಕಾದರು. ಅದಕ್ಕಿಂತ ಹೆಚ್ಚಾಗಿ, ವಿಷಯದ ಬೇರನ್ನು ಸರಳವಾಗಿ ಮುಟ್ಟುತ್ತಿದ್ದ ಅವರ ದರ್ಶನಶಕ್ತಿಗೆ ಬೆರಗಾದರು. "ಇಷ್ಟಾದರೂ, ಏಕೆ ಇವರಲ್ಲಿ ಆಡಂಬರವಿಲ್ಲ? ಪ್ರದರ್ಶನಾಸಕ್ತಿ ಇಲ್ಲ? ಏಕೆ ಇವರಿಗೆ ತಲೆ ಭಾರವಾಗಿಲ್ಲ?" ತಿಣುಕಿದರು. "ಇವರೇಕೆ, ವಿದ್ವಾಂಸರಂತೆ ನಡೆದಾಡುವುದಿಲ್ಲ? ವಿಷಯದಲ್ಲಿ ದೃಢತೆ ಇದ್ದರೂ ಇವರೇಕೆ ಅದರಲ್ಲಿ ಮೇಘಧ್ವನಿ ತುಂಬುವುದಿಲ್ಲ? ಇವರೇಕೆ ಅನಾಸಕ್ತರಂತೆ ಕಾಣುತ್ತಾರೆ?" ತಲೆ ಕೆರೆದುಕೊಂಡರು. ಬರುವಾಗ ದೀರ್ಘದಂಡ ನಮಸ್ಕಾರ ಮಾಡಿದರು. ವೇದಾಂತದ ಮರ್ಮವನ್ನು ಕೇವಲ ತಿಳಿಯಲಿಲ್ಲ, ಅನುಭವಿಸಿದರು. ಅವರ ನಿಬಂಧಕ್ಕೆ ಆ ನಾಡಿಮಿಡಿತದ ಅರಿವು ಕೇಂದ್ರಬಿಂದುವಾಯಿತು. ಅವರಿಗನಿಸಿತು, "ಹೌದು! ಅವರು ಅವಧೂತರು!"

ಪ್ರೊ. ಎಲ್.ಎಂ.ಎಲ್.ಶಾಸ್ತ್ರಿಗಳು ನನ್ನ ತಲೆಗೆ ಇನ್ನೊಂದು ಹುಳು ಬಿಟ್ಟಿದ್ದರು : "ವೇ.ಬ್ರ.ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು ಪ್ರಕಾಂಡ ಪಂಡಿತರು. ಅವರಿಗೆ ಸಾಂಪ್ರದಾಯಿಕ ಶಿಕ್ಷಣವಿದೆ, ಜತೆಗೆ ವಿಕಾಸ ಶೀಲ ದೃಷ್ಟಿ ಇದೆ. ಆಧುನಿಕರು ಎತ್ತುತ್ತಿರುವ ಚಿತ್ರವಿಚಿತ್ರವಾದ ಪ್ರಶ್ನೆಗಳನ್ನು ಅವರ ಮುಂದಿಟ್ಟು ಉತ್ತರ ಬರೆಸಬೇಕು." ಅವರು ಕಳಿಸಿಕೊಟ್ಟ ಪ್ರಶ್ನೆಗಳೂ ಸೇರಿದಂತೆ ನೂರಕ್ಕೂ ಹೆಚ್ಚು ಪ್ರಶ್ನೆಗಳನ್ನು ವೇ.ಬ್ರ.ಶ್ರೀ ಶಾಸ್ತ್ರಿಗಳಿಗೆ ಕಳಿಸಿ ಉತ್ತರ ಬರೆದು ಕಳಿಸುವಂತೆ ಸಮುದಾಯ ಅಧ್ಯಯನ ಕೇಂದ್ರ ಕೋರಿತು. ಒಟ್ಟು ಆರು ವಿದ್ವಾಂಸರು ಅದೇ ಪ್ರಶ್ನೆಗಳಿಗೆ ಉತ್ತರಿಸುವಂತೆ ಕೋರಲಾಗಿತ್ತು. ವೇ.ಬ್ರ.ಶ್ರೀ ಶಾಸ್ತ್ರಿಗಳು ಅಷ್ಟಕ್ಕೂ ಅಚ್ಚುಕಟ್ಟಾದ ಉತ್ತರಗಳನ್ನು ಸಕಾಲದಲ್ಲಿ ಬರೆದು ಕಳಿಸಿದರು. ಆದರೆ ಕಾರಣಾಂತರದಿಂದ ಎರಡು ಪ್ರಶ್ನೆಗಳು ತಪ್ಪಿಹೋಗಿದ್ದವು. ಮುದ್ರಣ ಬೇಗ ಆಗಬೇಕಿತ್ತು. ನಾನೇ ಲಿಂಗದಹಳ್ಳಿಗೆ ಹೋದೆ. ಶಾಸ್ತ್ರಿಗಳು ನೆಲದ ಮೇಲೆ ಕೂತರು. ಬಗ್ಗಿ ಉತ್ತರ ಬರೆಯತೊಡಗಿದರು. ಕನ್ನಡಕದ ರೂಢಿ ಇರಲಿಲ್ಲ. ಅರ್ಧ ಗಂಟೆಯಲ್ಲಿ ಎರಡು ಪ್ರಶ್ನೆಗಳಿಗೂ ದೀರ್ಘವಾದ ಉತ್ತರ ಬರೆದುಕೊಟ್ಟರು. ಅದು ತೊಡಕಿನ ಪ್ರಶ್ನೆಯಾಗಿತ್ತು. ಅವರು ಒಮ್ಮೆಯೂ ತಲೆ ಕೆರೆಯದೆ ಚರಚರನೆ ಉತ್ತರ ಬರೆದುಕೊಟ್ಟಿದ್ದರು. ಮಾತ್ರವಲ್ಲ, ಆಗ ತಾನೇ - ಆ ಮಟಮಟ ಮಧ್ಯಾಹ್ನದ ಉರಿಬಿಸಿಲಲ್ಲಿ ಎಲ್ಲಿಂದಲೋ ನಡೆದು ಬಂದಿದ್ದರು. ಕಾಲಿಗೆ ಎಕ್ಕಡವನ್ನೂ ಹಾಕಿರಲಿಲ್ಲ. 'ಇಟ್ಟುಹೋಗಿ. ಬರೆದು ಕಳಿಸಿಕೊಡುತ್ತೇನೆ' ಎನ್ನಬಹುದಾಗಿತ್ತು. ಆದರೆ ಅವರು ಹಾಗೆ ಹೇಳಲಿಲ್ಲ. "ಅಯ್ಯೋ, ಹಾಗಾಯಿತೆ? ಪಾಪ, ನೀವು ಸುತ್ತಿದ ಹಾಗಾಯಿತು. ಕಾಫಿ ಕುಡಿಯಿರಿ. ಅಷ್ಟರಲ್ಲಿ ಬರೆದುಕೊಡುತ್ತೇನೆ" ಎಂದರು. ಹಾಗೇ ಮಾಡಿದರು.

'ಸಂಭೃತಿ' ಎಂಬ ಹೆಸರಿನಲ್ಲಿ ಹೊರಬಂದ ಆ ಪುಸ್ತಕವನ್ನು 'ಬಿಡುಗಡೆ ' ಮಾಡಬೇಕೆಂಬ ಯೋಚನೆ ಸಮುದಾಯ ಅಧ್ಯಯನ ಕೇಂದ್ರಕ್ಕೆ ಇರಲಿಲ್ಲ. ಅದರ ಇಪ್ಪತ್ತೈದು ಪ್ರತಿಗಳನ್ನು ಶಾಸ್ತ್ರಿಗಳಿಗೆ ಒಪ್ಪಿಸಿ ಬರೋಣ ಎಂದು ನಾನೂ ನನ್ನ ಪತ್ನಿಯೂ ಹೋಗಿದ್ದೆವು. ಯೋಗಾಯೋಗವನ್ನು ಕಂಡವರಿಲ್ಲ. ಅಂದೇ ಆ ಊರಿನಲ್ಲಿ ಶ್ರೀರಾಮೋತ್ಸವವು ವೈಭವದಿಂದ ನಡೆದಿತ್ತು. ಊರು ಹಾಗೂ ಹೊರ ಊರುಗಳಿಂದ ಬಂದ ನೂರಾರು ಬಂಧುಗಳು ಶ್ರೀರಾಮಮಂದಿರದಲ್ಲಿ ಸೇರಿದ್ದರು. ಗೆಳೆಯ ಶ್ರೀ ಎಲ್.ಜಿ.ಅನಂತ್ ಮಿಂಚಿನಂತೆ ಎಲ್ಲ ಸಿದ್ಧತೆಯನ್ನೂ ಮಾಡಿದರು. ಶ್ರೀರಾಮನ ಪಾದಗಳಲ್ಲಿಟ್ಟು 'ಸಂಭೃತಿ'ಗೆ ಪೂಜೆ ಮಾಡಿದ್ದಾಯಿತು. ಶಾಸ್ತ್ರಿಗಳಿಂದಲೇ ಮಹಾಮಂಗಳಾರತಿಯೂ ಆಯಿತು. ಪ್ರಸಾದ ವಿನಿಯೋಗವೂ ಆಯಿತು. ಶ್ರೀ ಶಾಸ್ತ್ರಿಗಳು ಶ್ರೀರಾಮಪ್ರಸಾದ ರೂಪವಾಗಿ ಸಂಭೃತಿಯ ಪ್ರತಿಗಳನ್ನು ಗಣ್ಯರಿಗೆ ಕೊಟ್ಟು ಆಶೀರ್ವದಿಸಿದರು. ಅಲ್ಲಿ ನೆರೆದಿದ್ದ ಗಣ್ಯರು ಶ್ರೀರಾಮನಿಗೂ ಶ್ರೀ ಶಾಸ್ತ್ರಿಗಳಿಗೂ ನಮಸ್ಕಾರ ಮಾಡಿದರು. ಅಕ್ಷರಶಃ ಶ್ರೀ ಶಾಸ್ತ್ರಿಗಳ 'ಅಮೃತಹಸ್ತ'ದಿಂದ ಬಿಡುಗಡೆಯಾದ ಆ ಪುಸ್ತಕ ಅಪಾರ ಜನಪ್ರಿಯತೆ ಗಳಿಸಿತು. ಅದರಲ್ಲಿರುವ ಶಾಸ್ತ್ರಿಗಳ ಉತ್ತರಗಳು ಅವರ ವಿದ್ವತ್ತಿಗೂ, ಉದಾತ್ತದೃಷ್ಟಿಗೂ, ನಿಖರ ಚಿಂತನೆಗೂ ಸಾಕ್ಷಿಗಳಾಗಿವೆ.

ಅಂಥ ಶಾಸ್ತ್ರಿಗಳು ನೂರ್ಕಾಲವನ್ನು ಮೀರಿ ನಮ್ಮ ಜತೆ ಇರಬೇಕು, ನಮ್ಮನ್ನು ಆಶೀರ್ವದಿಸುತ್ತ ಇರಬೇಕು. ಅದು ದೇವರಲ್ಲಿ ನಮ್ಮೆಲ್ಲರ ಪ್ರಾರ್ಥನೆ. ಲಿಂಗದಹಳ್ಳಿಯನ್ನು ಶಾಸ್ತ್ರಿಗಳು ಬಿಡಲಿಲ್ಲ. ಅಲ್ಲಿನ ಬಂಧುಗಳು ಪ್ರತಿಯಾಗಿ ಮಾಡಬೇಕಾದ ಕರ್ತವ್ಯವಿದೆ. ಶ್ರೀ ಶಾಸ್ತ್ರಿಗಳಿಂದ ಮಂತ್ರಗಳನ್ನೂ ಪ್ರಯೋಗವನ್ನೂ ಕಲಿಯಬೇಕು. ಯಾವ ಊರು ಪರಂಪರೆಯ ಬೇರನ್ನು ಕಳಚಿಕೊಳ್ಳುತ್ತದೋ ಅದು ಸರಿಯಾದ ದಿಕ್ಕಿನಲ್ಲಿ ವಿಕಾಸವಾಗಲಾರದು. ಅವಧೂತರಾದ ವೇ.ಬ್ರ.ಶ್ರೀ ಶಾಸ್ತ್ರಿಗಳ ಆಶೀರ್ವಾದ ನಮ್ಮನ್ನು ಕಾಯಲಿ.

# ೨೧. ನೆನಪಿನಂಗಳದಲ್ಲಿ

*ಎಲ್. ಜಿ. ಅನಂತ*

ವೇ. ಬ್ರ. ಶ್ರೀ ನರಸಿಂಹಮೂರ್ತಿಗಳು ಕೇವಲ ಲಿಂಗದಹಳ್ಳಿಗೇ ಅಲ್ಲದೆ, ಸಂಕೇತಿ ಜನಾಂಗಕ್ಕೇ ಅಲ್ಲದೆ, ಮನುಕುಲಕ್ಕೇ ನಿಜವಾದ ಮತ್ತು ಶಾಶ್ವತವಾದ ಆಸ್ತಿ ಎಂಬುದರಲ್ಲಿ ಎರಡು ಮಾತಿಲ್ಲ. ಶ್ರೀಯುತರು ವೇದ-ವಿದ್ವಾಂಸರಾಗಿ, ಎಲ್ಲಾ ಜನಾಂಗದವರಿಗೂ ನೆಚ್ಚಿನ ಪುರೋಹಿತರಾಗಿ, ಎಲ್ಲರ ಪ್ರೀತ್ಯಾದರಗಳಿಗೂ ಪಾತ್ರರಾಗಿರುವ 'ಮಾಯ'ನವರಾಗಿ ಬಡವರ ಕಣ್ಣೀರು ಒರೆಸುವ ಹಿತಚಿಂತಕರಾಗಿ, ಪರೋಪಕಾರಿಗಳಾಗಿ, ಸ್ವಾರ್ಥರಹಿತ, ಕಲ್ಮಶರಹಿತ ಚಿಂತಕರಾಗಿ, ಸರಳ ಸಜ್ಜನ ನೇತಾರರಾಗಿ, ವಯೋಮಾನದ ಅರಿವಿಲ್ಲದೇ ದುಡಿಯುವ ಶ್ರಮಜೀವಿಯಾಗಿ, ಅಜಾತಶತ್ರುವಾಗಿ, ವಿಜೃಂಭಿಸುತ್ತಿರುವ ಒಂದು ನಕ್ಷತ್ರ. ಶ್ರೀಯುತರ ಬಗ್ಗೆ ಅಪಾರ ಗೌರವ ಹೊಂದಿರುವ ನಾನು ಸಹ ಏನಾದರೂ ಬರೆಯಲೇಬೇಕೆಂದು ಆಲೋಚಿಸಿ, ನನ್ನ ನೆನಪಿನಂಗಳದಲ್ಲಿ ಬಂದ ಕೆಲವಾರು ಘಟನೆಗಳನ್ನು ಮೆಲುಕಿಹಾಕಿ ವೇ. ಬ್ರ. ಶ್ರೀಯವರಿಗೆ *ಈ* ಲೇಖನವನ್ನು ಭಕ್ತಿಪೂರ್ವಕವಾಗಿ ಸಮರ್ಪಣೆ ಮಾಡುತ್ತಿದ್ದೇನೆ.

ಶ್ರೀ ನರಸಿಂಹಮೂರ್ತಿಗಳವರು ನನಗೆ ಚಿಕ್ಕಪ್ಪನವರಾಗಬೇಕು; ನಮ್ಮ ಪೂಜ್ಯ ತಂದೆ ಗೋಪಾಲಮೂರ್ತಿಯವರ ದೊಡ್ಡಪ್ಪನವರಾದ ವೇ.ಶ್ಯಾಮಶಾಸ್ತ್ರಿಗಳ ಹಿರಿಯ ಪುತ್ರರು. ನಮ್ಮ ತಂದೆಯವರಿಗಿಂತ ವಯಸ್ಸಿನಲ್ಲಿ ಒಂದು ವರ್ಷವಷ್ಟೇ ಚಿಕ್ಕವರು. ನಾವೆಲ್ಲ ಸಂಬೋಧಿಸುವುದು 'ನರಸಿಂಹಮಾಯಾ' ಎಂದೇ. ಅಲ್ಲದೆ ಎಲ್ಲಾ ಬಂಧುಗಳೂ ಹೀಗೆಯೇ ಸಂಬೋಧಿಸುವುದು. ಬ್ರಾಹ್ಮಣೇತರರೆಲ್ಲಾ ಕೂಗುವುದು ನರಸಿಂಹಯ್ಯನವರೆಂದು. ನಮ್ಮ ತಂದೆಯವರಿಗೂ ಶ್ರೀಯುತರ ಬಗ್ಗೆ ಅಪಾರವಾದ ಗೌರವ. ನಾವುಗಳು ಚಿಕ್ಕವರಾಗಿದ್ದಾಗಲೇ, ನಮ್ಮ ತಂದೆ ಹಾಗೂ ತಾಯಿ ಕಮಲಮ್ಮನವರು ನರಸಿಂಹಮೂರ್ತಿಗಳವರ ವಿದ್ಯಾರ್ಜನೆಯ ಬಗ್ಗೆ ವಿವರಣೆ ಕೊಡುವಾಗಲೆಲ್ಲಾ, "ಓದಿದ್ರೆ ನರಸಿಂಹಮಾಯನವರಂತೆ ಓದಬೇಕು. ಸಂಸ್ಕೃತದಲ್ಲಿ ಮಹಾಪಂಡಿತರು, ಹಲವಾರು ಪುರಸ್ಕಾರಗಳನ್ನು ಪಡೆದಿರುತ್ತಾರೆ. ನೀನು ಸಹ, ಏನಾದರೂ ಹೇಳಿಸಿಕೋ" ಅಂತ ಹೇಳುತ್ತಿದ್ದರು. ಎರಡನೇ ಭಾಷೆಯಾಗಿ ಸಂಸ್ಕೃತ ತೆಗೆದುಕೊಂಡಿದ್ದ ನಾನು ಎಂಟು ಮತ್ತು ಒಂಬತ್ತನೇ ತರಗತಿಗಳಲ್ಲಿ ಸಂಸ್ಕೃತ ಪಾಠವನ್ನು ಹೇಳಿಸಿಕೊಳ್ಳುವ ಪ್ರಯತ್ನವನ್ನೇ ಮಾಡಲಿಲ್ಲ. ಆದರೆ ಹತ್ತನೇ ತರಗತಿಗೆ ಬಂದಾಗ ನಮಗಿದ್ದ ಒಂದು ಪಾಠ 'ಶುಕನಾಸೋಪದೇಶಃ' ಎಂಬುದು ಕಬ್ಬಿಣದ ಕಡಲೆಯಾಗಿತ್ತು. ಶಿವಮೊಗ್ಗದಲ್ಲಿ ಓದುತ್ತಿದ್ದ ನಾನು ದಸರಾ ರಜಕ್ಕೆ ಊರಿಗೆ ಬಂದಾಗ ನನ್ನ *ಈ* ಪಾಠವನ್ನು ನರಸಿಂಹಮಾಯನವರ ಹತ್ತಿರ ಹೇಳಿಸಿಕೊಳ್ಳಬೇಕೆಂದು, ಹೋಗಿ ಕೇಳಿದಾಗ "*ಈ* ಪಾಠ ಬಹಳ ಕ್ಲಿಷ್ಟ. ಇದು ನನಗೆ ಸಾಧ್ಯವಿಲ್ಲ" ಎಂದು ಹೇಳಬಹುದೆಂದು ತಿಳಿದಿದ್ದೆ. ಹೋಗಿ ಕೇಳಿದಾಗ, "*ಈ* ಪಾಠವೋ" ಎಂದು ಪುಸ್ತಕವನ್ನು ಹಿಡಿದುಕೊಂಡು ನಿರಾಯಾಸವಾಗಿ ಓದುತ್ತಾ ಪದಶಃ ಅರ್ಥವನ್ನು ನೀಡುತ್ತಾ ಅತ್ಯಂತ ಹಿತವಾಗಿ, ಮನಮುಟ್ಟುವಂತೆ ಪಾಠವನ್ನು ಮಾಡಿ ನನಗಿದ್ದ ಸಂದೇಹಕ್ಕೆ ತೆರೆ ಎಳೆದಿದ್ದನ್ನು ಎಂದಿಗೂ ಮರೆಯುವಂತಿಲ್ಲ. ನಮ್ಮ ಉಪಾಧ್ಯಾಯರು ಸಹ *ಈ* ಪಾಠ ಮಾಡುತ್ತಾ ಹಲವಾರು ಬಾರಿ ಎಡವಿದ್ದುಂಟು. *ಈ* ಪಾಠವನ್ನಂತೂ ನಾನು ನೂರಾರು ಬಾರಿ ಓದಿದ್ದರು ಸಹ ಸರಾಗವಾಗಿ ಓದಲು ಕ್ಲಿಷ್ಟವೆನಿಸುತ್ತಿತ್ತು. ಸುಮಾರು ಐದು-ಆರು ದಿನಗಳು *ಈ* ಪಾಠವನ್ನು ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಿದ ಮೇಲೆ ನಮ್ಮ ತಂದೆ-ತಾಯಿಯವರು ಹೇಳಿದ ಮಾತು ಅಕ್ಷರಶಃ ನಿಜವೇ ಇರಬೇಕೆಂದು ತೀರ್ಮಾನಿಸಿದೆ.

ಅಂದಿನಿಂದ ಶ್ರೀ ನರಸಿಂಹಮಾಯನವರ ಬಗ್ಗೆ ಎಲ್ಲಿಲ್ಲದ ಗೌರವ ಮೂಡಿ ಬಂದು, ಶ್ರೀಯುತರು ಅಪ್ರತಿಮ ಪಂಡಿತರೇ ಇರಬೇಕೆಂಬ ನಿರ್ಣಯಕ್ಕೆ ಬಂದೆ. ಹತ್ತನೇ ತರಗತಿಯಾದನಂತರ ಪಿಯುಸಿಯಲ್ಲಿ ಇಡಲಾಗಿದ್ದ ಭಾಸನ 'ಪಂಚರಾತ್ರಮ್' ನಾಟಕ, ವ್ಯಾಕರಣ ಇತ್ಯಾದಿಗಳನ್ನು ನನ್ನ ಸ್ನೇಹಿತ ಎಲ್.ಎಮ್.ಮಾಧವಶಾಸ್ತ್ರಿಯೊಂದಿಗೆ ಮಾಯನವರ ಬಳಿ ಹೇಳಿಸಿಕೊಂಡಿದ್ದು ಇನ್ನೂ ಹಸಿರಾಗಿಯೇ ಇದೆ. ಇವರ, ಯಾವ ಪೂರ್ವ ತಯಾರಿ ಇಲ್ಲದೆಯೇ ಸುಲಲಿತವಾಗಿ ಓದುವ, ಪರಿಣಾಮಕಾರಿಯಾಗಿ ಅರ್ಥ ವಿವರಣೆ ನೀಡುವ ವಿಧಾನ ನಮಗಂತೂ ಅತ್ಯಂತ ಸಂತಸ ತರುತ್ತಿತ್ತು. *ಈ* ಅನಂತರ ಪ್ರಥಮ ಬಿ.ಎಸ್ಸಿ.,ನಲ್ಲಿ ಇಡಲಾಗಿದ್ದ ಇನ್ನೊಂದು ಕಬ್ಬಿಣದ ಕಡಲೆ ಚಂಪೂರಾಮಾಯಣವೆಂಬ ಗದ್ಯಕಾವ್ಯವನ್ನೂ, ಕಾಳಿದಾಸನ ಕುಮಾರಸಂಭವದ ಐದನೇ ಸರ್ಗವನ್ನೂ ಬೇಸಿಗೆ ರಜದಲ್ಲಿ ಊರಿಗೆ ಬಂದಾಗ ನಾವಿಬ್ಬರೂ ಹೇಳಿಸಿಕೊಂಡಿದ್ದೆವು. ಎರಡನೇ ವರ್ಷದ ಬಿ.ಎಸ್ಸಿ.,ನಲ್ಲಿದ್ದಾಗ ಭಾಸನ 'ಸ್ವಪ್ನವಾಸವದತ್ತಾ' ನಾಟಕವನ್ನು ಪೂರ್ಣವಾಗಿ ಮತ್ತು ವ್ಯಾಕರಣ ಭಾಗವನ್ನೆಲ್ಲಾ ಯಶಸ್ವಿಯಾಗಿ ಹೇಳಿಸಿಕೊಂಡಿದ್ದು ಸದಾ ನನ್ನ ನೆನಪಿನ ಬುತ್ತಿಯಿಂದ ಪ್ರತಿಫಲಿಸುತ್ತದೆ. ಆ ಸಂದರ್ಭದಲ್ಲಿ ಶ್ರೀಯುತರು ತಮ್ಮ ತಂದೆಯವರನ್ನು ಮುಪ್ಪಿನಲ್ಲಿ

ನೋಡಿಕೊಳ್ಳುವುದಕ್ಕೋಸ್ಕರವೇ ಊರಿನಲ್ಲಿರುತ್ತಿದ್ದರು. ತೀರ್ಥರೂಪುಗಳಾದ ವೇ. ಶ್ಯಾಮಶಾಸ್ತ್ರಿಗಳು ದೈವಾಧೀನರಾದನಂತರ ನರಸಿಂಹಮೂರ್ತಿಗಳು ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳಲ್ಲೆಲ್ಲಾ ಸಂಚರಿಸಿ, ತಮ್ಮ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುತ್ತಾ, ಜನಾನುರಾಗಿಗಳಾಗುತ್ತಾ ಬಂದರು.

೧೯೮೨ರ ಅಕ್ಟೋಬರ್ ನವೆಂಬರ್‌ನಲ್ಲಿ ಶ್ರೀ ನರಸಿಂಹಮೂರ್ತಿಗಳಿಗೆ ಒದಗಿದ್ದ ಒಂದು ವಿಪತ್ತನ್ನು ಯಾವತ್ತಿಗೂ ಯಾರೂ ಮರೆಯುವಂತಿಲ್ಲ. ಅದೇನು ಕಾರಣವೋ ಎರಡು ವಾರಗಳಿಗೂ ಹೆಚ್ಚು ಕಾಲ ಬಿಕ್ಕಳಿಕೆಯಿಂದ ಅಸ್ವಸ್ಥರಾಗಿ ಎಲ್ಲರನ್ನೂ ನಡುಗಿಸಿದ್ದ ಆ ಸಂದರ್ಭವನ್ನು ನೆನಸಿಕೊಂಡಾಗಲೆಲ್ಲಾ ಮೈ ಜುಂ ಎನ್ನುತ್ತದೆ. ಇದೇ ಸಂದರ್ಭದಲ್ಲಿ ಆ ದೈವವನ್ನು ಕೊಂಡಾಡುವ ಪರಿಸ್ಥಿತಿ ಉಂಟಾಗುತ್ತದೆ. ಬಿಕ್ಕಳಿಕೆ ನಿರಂತರವಾಗಿ ಮೂರು-ನಾಲ್ಕು ದಿನಗಳು ಬಂದರೆ ಸಾಕು ಮೃತ್ಯುವಿನ ಕೂಪಕ್ಕೆ ಒಳಗಾದಂತೆಯೇ ಎಂದು ಹೇಳಲಾಗುತ್ತಿದ್ದು, ವೈದ್ಯರುಗಳು ಸಹ ಅನುಮಾನಾಸ್ಪದ ರೀತಿಯಲ್ಲಿಯೇ ಚಿಕಿತ್ಸೆ ಕೊಡುತ್ತಿದ್ದರು. ಚಿಕಿತ್ಸೆ ಬೀರೂರಿನ ಶ್ರೀ ಶಿವರಾಮಶಾಸ್ತ್ರಿಗಳ ಮನೆಯಲ್ಲಿ ನಡೆಯುತ್ತಿತ್ತು. ಶ್ರೀಯುತರ ಆರೋಗ್ಯವನ್ನು ವಿಚಾರಿಸುವುದಕ್ಕಾಗಿ ಸಂಬಂಧಿಕರ ದಂಡೇ ಆಗಮಿಸುತ್ತಿತ್ತು. ನೋಡಿದವರಿಗೆಲ್ಲಾ ಮನಸ್ಸಿನಲ್ಲಿ ಅಸಂತೃಪ್ತಿ. ಬರುತ್ತಲೇ ಇದ್ದ ಬಂಧುಗಳಿಗೆಲ್ಲಾ ಅತಿಥಿಸತ್ಕಾರ ನೀಡುವ ಇನ್ನೊಂದು ಕೆಲಸವೂ ಶಿವರಾಮಶಾಸ್ತ್ರಿ ದಂಪತಿಗಳಿಗೆ ಒದಗಿತ್ತು. ಚಿಕಿತ್ಸೆಯಂತೂ ಪ್ರತಿನಿತ್ಯ ನಡೆಯುತ್ತಿತ್ತು. ಎಲ್ಲಾ ನಾಟಿ ಔಷಧಿ, ಅಲೋಪತಿ ಔಷಧಿಗಳು ಲಭ್ಯವಾದರೂ ಬಿಕ್ಕಳಿಕೆ ಮಾತ್ರ ನಿಲ್ಲುತ್ತಿರಲಿಲ್ಲ. ವಿಶೇಷ ಪೂಜೆ ಪುನಸ್ಕಾರಗಳನ್ನು ಮನೆಯಲ್ಲಿ ಮಾಡಲಾಯಿತು. ಚಿಕಿತ್ಸೆಗಾಗಿಯೇ ಶ್ರೀಯುತ ಡಾ.ಶ್ರೀನಿವಾಸನ್ ಅವರು ಶೃಂಗೇರಿಯಿಂದ ಆಗಮಿಸಿ, ಬೀರೂರಿನಲ್ಲಿಯೇ ವಾಸ್ತವ್ಯ ಹೂಡಿದ್ದರು. ಅವರ ಚಿಕಿತ್ಸೆಯಿಂದಲೂ ಗುಣಮುಖರಾಗುವ ಸೂಚನೆ ಕಂಡುಬರಲಿಲ್ಲ. ಇನ್ನೋರ್ವ ತಮ್ಮಂದಿರಾದ ಶ್ರೀ ಎಲ್.ಎಸ್. ಸೀತಾರಾಮ್ (ನಿವೃತ್ತ ಶಿಕ್ಷಕರು) ಭದ್ರಾವತಿಯಿಂದ ಪದೇಪದೇ ಬಂದು ಅಣ್ಣನವರನ್ನು ನೋಡಿಕೊಂಡು ಹೋಗುತ್ತಿದ್ದರು. ಸಮಾಧಾನ ಯಾರಲ್ಲೂ ಇರಲಿಲ್ಲ. ಶ್ರೀ ಸೀತಾರಾಮ್‌ರವರು ಪಂಡಿತರೊಬ್ಬರನ್ನು ನೆನಪಿಸಿಕೊಂಡು, ಅವರಿಂದ ಚಿಕಿತ್ಸೆ ಕೊಡಿಸಿದಲ್ಲಿ ಫಲಕಾರಿಯಾಗಬಹುದೆಂದು ಭಾವಿಸಿ, ಆ ಪಂಡಿತರ ವಿಳಾಸ ಪತ್ತೆ ಮಾಡಿ, ಶಿವಮೊಗ್ಗಕ್ಕೆ ತೆರಳಿದರು. ಆ ಪಂಡಿತರ ಭೇಟಿಯಾಯ್ತು. ತಮ್ಮ ಊರನ್ನು ಹೆಸರಿಸಿ ತಮ್ಮ ಅಣ್ಣನವರಿಗೆ ಈ ರೀತಿ ಅನಾರೋಗ್ಯ ಉಂಟಾಗಿರುವುದನ್ನು ಹೇಳಿದಾಗ ತಕ್ಷಣವೇ ಆ ಪಂಡಿತರು "ಲಿಂಗದಹಳ್ಳಿ ಅಂದ ತಕ್ಷಣ ನನಗೆ ನೆನಪಿಗೆ ಬರುವುದು ನರಸಿಂಹಮೂರ್ತಿಗಳು. ಅವರು ಮಹಾ ವಿದ್ವಾಂಸರು, ನಿಗರ್ವಿಗಳು; ಅವರ ಪರಿಚಯ ನಿಮಗಿದೆಯೇ?" ಎಂದು ಕೇಳಿದಾಗ ಆಶ್ಚರ್ಯ ಕಾದಿತ್ತು. "ಅಯ್ಯೋ! ಆ ವಿದ್ವಾಂಸರಿಗಾಗಿಯೇ ಔಷಧಿಗಾಗಿ ತಮ್ಮಲ್ಲಿ ಬಂದಿರುವುದು" ಎಂದು ಹೇಳಿದಾಗ ಆ ಪಂಡಿತರಿಗೆ ಆಶ್ಚರ್ಯ ಹಾಗೂ ದುಃಖ ಏಕಕಾಲದಲ್ಲಿ ಉಂಟಾಗಿ, ಖಂಡಿತ ಈ ಔಷಧಿಯಿಂದ ಗುಣಮುಖರಾಗುತ್ತಾರೆಂದು ಹೇಳಿ, ನೀರಿಗೆ ಸಕ್ಕರೆ ಹಾಕಿ, ಆಗಾಗ ಕುಡಿಸುತ್ತಿರಬೇಕೆಂಬುದೇ ಔಷಧಿ ಎಂಬುದಾಗಿ ಹೇಳಿದ ಪಂಡಿತರ ಔಷಧಿಯೇ ನರಸಿಂಹಮೂರ್ತಿಯವರನ್ನು ಮೃತ್ಯುಕೂಪದಿಂದ ಹೊರತರಲು ಕಾರಣವಾಯ್ತು. ಅಂತೂ ನರಸಿಂಹ ಮೂರ್ತಿಯವರು ಪುನರ್ಜನ್ಮ ಪಡೆದಂತಾಗಿ ಎಲ್ಲರ ಸೇವೆಗೆ ಸನ್ನದ್ಧ



**59. ಗೌರಿ ಹಬ್ಬ : ೨೦೦೩**

ರಾದುದು ಪೂರ್ವಜನ್ಮದ ಸುಕೃತವೆಂದೇ ಭಾವಿಸಲಾಗುತ್ತಿದೆ.

ಇಂತಹದ್ದೇ ಇನ್ನೊಂದು ಮನಕಲಕುವ ಪ್ರಸಂಗ: ೧೯೯೯ರ ಡಿಸೆಂಬರ್-೨೦೦೦ದ ಜನವರಿಯಲ್ಲಿ ಶ್ರೀ ನರಸಿಂಹಮೂರ್ತಿಗಳ ಅನಾರೋಗ್ಯ ಕುರಿತಾದ ಒಂದು ಪ್ರಸಂಗ ಎಲ್ಲರನ್ನೂ ನಿದ್ರೆಗೆಡಿಸಿತ್ತು. ಏನೊಂದು ಆಹಾರ ಸೇವಿಸಿದರೂ ವಾಂತಿಯಾಗುತ್ತಿತ್ತು. ಯಾವುದೂ ದಕ್ಕುತ್ತಿರಲಿಲ್ಲ. ದಿನೇದಿನೇ ಕೃಶರಾಗುತ್ತಾ ಬಂದರು. ಚಿಕ್ಕಮಗಳೂರಿನಲ್ಲಿ ತಮ್ಮ ಮಗಳ ಮನೆಯಲ್ಲಿದ್ದು ಪರಿಣತ ವೈದ್ಯರಿಂದ ಚಿಕಿತ್ಸೆ ಪಡೆದರೂ ಪ್ರಯೋಜನವಾಗಲಿಲ್ಲ. ಕೊನೆಗೆ ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನ ಸೈಂಟ್ ಜಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯ್ತು. ದೇವರ ರೂಪದಲ್ಲೇ ಸೈಂಟ್ ಜಾನ್ಸ್ ಆಸ್ಪತ್ರೆ ಒದಗಿದಂತಾಗಿ ಶ್ರೀಯುತರು ಸುಮಾರು ಎಂಟು-ಹತ್ತು ದಿನಗಳಲ್ಲಿ ಪೂರ್ಣವಾಗಿ ಗುಣಮುಖರಾದರು. ಕೈ ನೋವಿಗೆ ತೆಗೆದುಕೊಂಡ ಕ್ಯಾಲ್ಸಿಯಂ ಮಾತ್ರೆಯ ಹೆಚ್ಚಳದ ಪರಿಣಾಮದಿಂದ ಅನಾರೋಗ್ಯ ತಾಂಡವವಾಡುತ್ತಿತ್ತು. ಅವರು *ಈ* ವಿಚಾರವನ್ನು ಪತ್ತೆ ಮಾಡಿ, ಗುಣಮುಖರಾಗುವಂತೆ ಮಾಡಿದುದು, ಎಲ್ಲರ ಭಕ್ತಿಪೂರ್ವಕ ದೇವರ ಪ್ರಾರ್ಥನೆಯ ಸಾಫಲ್ಯ ಎನಿಸಿತು. *ಈ* ಸಂದರ್ಭದಲ್ಲಿಯೂ ಶ್ರೀಯುತರು ಪುನರ್ಜನ್ಮ ಪಡೆದಂತಾಯ್ತು. ಆರೋಗ್ಯವನ್ನು ಪಡೆದನಂತರ ಯಾವ ಪೌರೋಹಿತ್ಯ ಕಾರ್ಯವನ್ನೂ ಮಾಡಬಾರದೆಂಬುದು ಎಲ್ಲ ಸಂಬಂಧಿಕರು ಹಾಗೂ ಮೂವರು ಹೆಣ್ಣು ಮಕ್ಕಳ ಕೋರಿಕೆಯಾಗಿತ್ತು. ಆದರೆ ಲಿಂಗದಹಳ್ಳಿಯ ಮತ್ತು ಸುತ್ತಮುತ್ತಲಿನ ವೈದಿಕರ ಅಗತ್ಯ ಮಾತ್ರ ಶ್ರೀ ನರಸಿಂಹಮೂರ್ತಿಯವರನ್ನು ನಿವೃತ್ತಿ ಹೊಂದಲು ಬಿಡಲಿಲ್ಲ. ಮೊದಲಿಗಿಂತಲೂ ಹೆಚ್ಚಿನ ಕಾರ್ಯಭಾರ ವಹಿಸುವ ಸಂದರ್ಭಗಳೇ ಒದಗಿ ಬಂದುದು ಸೋಜಿಗದ ಸಮಾಚಾರವೇ. ಬಿಡುವೇನಾದರೂ ಇದ್ದರೆ 'ಸಂಕೇತಿ ಸಂಗಮ'ಕ್ಕಾಗಿ "ವೇದ ಸಂದೇಶ" ಬರೆಯುವ ಕಾರ್ಯದಲ್ಲಿಯೇ ಮಗ್ನರಾಗಿರುತ್ತಿದ್ದುದನ್ನು ನೋಡಬಹುದಾಗಿತ್ತು. *ಈ*ಗಲೂ ತಮ್ಮ ತೊಂಬತ್ತೆರಡನೇ ವೃದ್ಧಾಪ್ಯದ ವಯಸ್ಸಿನಲ್ಲೂ ಅತ್ಯಂತ ಶ್ರದ್ಧಾ - ಭಕ್ತಿಗಳಿಂದ ಪೌರೋಹಿತ್ಯ ನಡೆಸುತ್ತಾ, ಎಲ್ಲರಲ್ಲೂ ಸ್ಪಂದಿಸುತ್ತಾ ಇರುವುದೇ ಶ್ರೀಯುತರ ಆರೋಗ್ಯದ ಗುಟ್ಟೆಂದು ಎಲ್ಲಾ ಬಂಧು-ಬಾಂಧವರೂ ಭಾವಿಸುತ್ತಿದ್ದಾರೆ. ಹೀಗಾಗಿ ಶತಾಯುಷ್ಯದನಂತರವೂ ಪ್ರತಿಫಲಾಪೇಕ್ಷೆ ಇಲ್ಲದೆ ಪೌರೋಹಿತ್ಯ ಕಾರ್ಯವನ್ನು ಶ್ರದ್ಧಾಭಕ್ತಿಗಳಿಂದ ನಿರ್ವಹಿಸುತ್ತಾರೆಂಬ ಎಲ್ಲರ ಶುಭಹಾರೈಕೆ, ದೇವರ ಆಶೀರ್ವಾದದ ಪರಿಣಾಮದಿಂದ ನೆರವೇರಿಯೇ ತೀರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಮಗದೊಂದು ಪ್ರಸಂಗ ಎಲ್ಲರನ್ನೂ ಅನುಕಂಪದ ಅಲೆಯಲ್ಲಿ ತೇಲಿಸುತ್ತದೆ. ಬೆಂಗಳೂರಿನ ಚಿಕಿತ್ಸೆಯನಂತರ ಸುಮಾರು ಒಂದು ವರ್ಷದನಂತರ ನಡೆದ ಒಂದು ಘಟನೆ. ದರ್ಭೆಯನ್ನೋ ಅಥವಾ ಇನ್ನಾವುದೋ ಪೌರೋಹಿತ್ಯದ ಪರಿಕರವನ್ನೋ ತರಲು, ಸರಸರನೆ ಅಟ್ಟವನ್ನೇರಿ ಬೇಕಾದ್ದನ್ನು ತೆಗೆದುಕೊಂಡು ಹತ್ತಿದ ವೇಗದಲ್ಲೇ ಏಣಿಯಿಂದ ಇಳಿಯುವಾಗ ಕಾಲು ಜಾರಿ, ಅಟ್ಟದ ಮೇಲಿನಿಂದಲೇ ನೆಲಕ್ಕೆ ಬಿದ್ದ ಪರಿಣಾಮದಿಂದ ಬಲ ತೊಡೆಯ ಮೂಳೆ ಮುರಿದು ಜರ್ಝರಿತರಾದರು. ವಯೋಮಾನದ ಕಾರಣದಿಂದ ಮುರಿದ ಮೂಳೆ ಕೂಡುವ ಸಂಭವ ಕಡಮೆ ಎಂಬುದಾಗಿ ತಜ್ಞರ ಅಭಿಪ್ರಾಯವಾಗಿತ್ತು. ಆದರೆ ನಮ್ಮೆಲ್ಲರ ಅದೃಷ್ಟದಿಂದ ಬೀರೂರಿನ ಅರೇಕಲ್ ನರ್ಸಿಂಗ್ ಹೋಂನಲ್ಲಿ ಪರಿಣಾಮಕಾರಿ ಚಿಕಿತ್ಸೆ ದೊರೆತದ್ದರಿಂದ ಪೂರ್ಣವಾಗಿ ಗುಣಮುಖರಾದರು. ಇದು ಎಲ್ಲ ಬಾಂಧವರ ಶುಭಹಾರೈಕೆಗಳಿಗೆ ಸಿಕ್ಕಿದ ಜಯವೇ ಸರಿ ಎಂಬುದು ಸರ್ವರ ಅಭಿಪ್ರಾಯವಾಗಿದೆ.

ಮತ್ತೂ ಒಂದು ಚಿಕಿತ್ಸೆಯ ಪ್ರಸಂಗ ನನ್ನ ನೆನಪಿನಾಳದಲ್ಲಿ ಹುದುಗಿರುವುದು: ಶ್ರೀ ನರಸಿಂಹಮೂರ್ತಿಗಳಿಗೆ ಬಲಗೈ ಅಷ್ಟಾಗಿ ಸ್ವಾಧೀನದಲ್ಲಿಲ್ಲ. ಕೀಲುನೋವಿನಿಂದ ಸದಾ ಮಾನಸಿಕವಾಗಿ ನರಳುತ್ತಿರುವುದುಂಟು. *ಈ* ವಿಚಾರ ಅಷ್ಟಾಗಿ ಯಾರಿಗೂ ಗೊತ್ತಾಗುವುದೇ ಇಲ್ಲ. ಸೂಕ್ಷ್ಮವಾಗಿ ಗಮನಿಸಿದ್ದೇ ಆದರೆ ಮಾತ್ರ *ಈ* ವಿಚಾರ ಗೋಚರವಾಗುತ್ತದೆ. ಪೌರೋಹಿತ್ಯ ಮಾಡುವ ಸಂದರ್ಭದಲ್ಲಿ ಅನಿವಾರ್ಯವಾಗಿ ಬಲಗೈ ಬದಲು ಎಡಗೈಯನ್ನೇ ಬಳಸುವುದುಂಟು. ಕಾಫಿ ಕುಡಿಯುವಾಗ ಬಲಗೈಯಲ್ಲಿ ಸಾಧ್ಯವಾಗದೇ ಇದ್ದ ಸಂದರ್ಭದಲ್ಲಿ ಎಡಗೈಯಲ್ಲೇ ಕುಡಿಯುವುದನ್ನು ನೋಡಬಹುದಾಗಿದೆ. ವಿಚಾರ ತಿಳಿಯದವರು ಇದನ್ನು ಗಮನಿಸಿದಾಗ ಇದೇನು ಶಾಸ್ತ್ರಿಗಳು ಎಡಗೈಯಲ್ಲಿ ಕುಡಿಯುತ್ತಿದ್ದಾರೆಂಬ ಭಾವನೆ ವ್ಯಕ್ತವಾಗುತ್ತದೆ. ವಾಸ್ತವವಾಗಿ ಬಲಗೈನ ಅತೀವ ನೋವಿನ ಪರಿಣಾಮ. *ಈ* ವಿಚಾರವನ್ನು ಯಾರಲ್ಲಿಯೂ ಹೇಳಿಕೊಂಡಿರುವುದಿಲ್ಲ. ತಮಗೆ ಬಂದ ನೋವನ್ನೆಲ್ಲಾ ತಾವೇ ಅನುಭವಿಸಬೇಕೆಂಬುದೂ, ಯಾರಲ್ಲಿಯೂ ಹೇಳದೆ ಏನೂ ಆಗದವರಂತೆ ಸ್ಥಿತಪ್ರಜ್ಞರಂತೆ ಇರುವುದೂ ಶ್ರೀ ನರಸಿಂಹಮೂರ್ತಿಗಳ ಮತ್ತೊಂದು ಮುಖ.

ಕೈನೋವನ್ನು ಶಾಶ್ವತವಾಗಿ ಪರಿಹರಿಸಬೇಕೆಂದು ನಾವೆಲ್ಲರೂ ಮಾತನಾಡಿಕೊಂಡು, ಅದೆಷ್ಟೇ ಖರ್ಚಾದರೂ ನಿಭಾಯಿಸಿ, ಶ್ರೀಯುತರನ್ನು ಬಲಗೈ ನೋವಿನಿಂದ ದೂರವಿಡಬೇಕೆಂಬ ದೃಢ ನಿರ್ಧಾರದಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ತಜ್ಞವೈದ್ಯರಾದ ಡಾ.ಸತೀಶ್ ಎಂಬುವವರನ್ನು ಸಂಪರ್ಕಿಸಿ ಆಪರೇಷನ್ ಮಾಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದೆವು.

ಈ ನಿಮಿತ್ತ ಬೆಂಗಳೂರಿಗೆ ನರಸಿಂಹಮೂರ್ತಿಯವರನ್ನು ಕರೆದುಕೊಂಡು ಹೋಗುವ ನಿರ್ಧಾರ ಮಾಡಿದೆವು. ಆದರೆ ಈ ಚಿಕಿತ್ಸೆ ತಮಗೆ ಬೇಡವೆಂದೂ, ಹಾಗೆಯೇ ಇರುವುದಾಗಿಯೂ ಹೇಳಿದರೂ ನಮ್ಮಗಳ ಒತ್ತಾಯಕ್ಕೆ ಮಣಿದು ಬೆಂಗಳೂರಿಗೆ ಬರುವ ನಿರ್ಧಾರ ಮಾಡಿದರು. ಬೆಂಗಳೂರಿಗೆ ಕೇವಲ ಚಿಕಿತ್ಸೆಗಾಗಿ ಬರದೆ, ಅಲ್ಲಿ ಸಾಗರದ ಶ್ರೀ ವಿಷ್ಣು ಹೆಗ್ಗಡೆ ಎಂಬ ಆಡಿಟರ್‌ರವರ ಮನೆಯಲ್ಲಿ ದೇವತಾ ಕೆಲಸದ ಸಂದರ್ಭದೊಂದಿಗೆ ಬೆಂಗಳೂರಿಗೆ ಬಂದರು. ಮಣಿಪಾಲ್ ಆಸ್ಪತ್ರೆಯ ತಜ್ಞರು ಶ್ರೀಯುತರನ್ನು ಕೂಲಂಕಷವಾಗಿ ಪರೀಕ್ಷಿಸಿ, ಆಪರೇಷನ್ ಮಾಡಿಸಿದರೂ ನೋವು ಕಡಮೆಯಾಗುವುದಿಲ್ಲವೆಂದೂ, ವೃಥಾ ಆಪರೇಷನ್‌ನಿಂದ ಮಾನಸಿಕವಾಗಿ ಹಾಗೂ ದೈಹಿಕವಾಗಿ ಬಳಲುತ್ತಾರೆಂದೂ, ಅಭಿಪ್ರಾಯಪಟ್ಟರು. ನೋವು ಕಡಿಮೆಯಾಗುವಂತೆ ಕೈಯಿನ ಹಲವಾರು ವ್ಯಾಯಾಮಗಳನ್ನು ಮಾಡಬೇಕೆಂದು ತೋರಿಸಿಕೊಟ್ಟರು. ದಿನಕ್ಕೆರಡು ಬಾರಿಯಾದರೂ ವ್ಯಾಯಾಮ ಮಾಡಬೇಕೆಂದು ತಜ್ಞರ ಅಭಿಪ್ರಾಯವಾಗಿತ್ತು. ಆರಂಭದ ದಿನಗಳಲ್ಲಿ ಮಾಡುತ್ತಿದ್ದುದು ಕಂಡು ಬರುತ್ತಿತ್ತು. ಈಗ ಬಹುಶಃ ವ್ಯಾಯಾಮ ಮಾಡಲು ಸಮಯವೇ ಇಲ್ಲ. ನೋವು ಯಥಾಸ್ಥಿತಿ. ಪಾಲಿಗೆ ಬಂದದ್ದು ಪಂಚಾಮೃತವೆಂಬಂತೆ ಅನುಭವಿಸಬೇಕೆಂಬುದು ವೇ.ಬ್ರ.ಶ್ರೀಗಳ ಆಲೋಚನೆ. ಯಾರಲ್ಲಿಯೂ ಈ ವಿಚಾರ ಹೇಳುವುದಿಲ್ಲ. ಚಿಕಿತ್ಸೆಯನ್ನು ಮಾಡಿಸಿಕೊಂಡರೂ ಏನೂ ಪ್ರಯೋಜನವಿಲ್ಲವೆಂದಮೇಲೆ ಅದರ ಬಗ್ಗೆ ಯೋಚನೆಯನ್ನೇ ಮಾಡದೇ ಕೈಂಕರ್ಯದಲ್ಲಿ ಭಾಗಿಯಾಗಬೇಕೆಂಬ ಸ್ಥಿತಪ್ರಜ್ಞೆಯೇ ಶ್ರೀಯುತರ ಗುಟ್ಟು.




***60.** ಎರಡನೆಯ ಅಳಿಯ ಶ್ರೀ ಸುಬ್ರಹ್ಮಣ್ಯ ಅವರ ನೂತನ ಗೃಹಪ್ರವೇಶ ಸಂದರ್ಭ (ಡಿಸೆಂಬರ್, ೨೦೦೧)*

೧೬.೫.೧೯೯೩ ಲಿಂಗದಹಳ್ಳಿಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಸುದಿನ. ಅಂದು ಸಂಜೆ ಆರು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಶ್ರೀರಾಮಮಂದಿರದಲ್ಲಿ ನಡೆದಿದ್ದು ವೇ. ನರಸಿಂಹಮೂರ್ತಿಗಳವರ ಆತ್ಮೀಯ ಸನ್ಮಾನ ಸಮಾರಂಭ. **ನ ಭೂತೋ ನ ಭವಿಷ್ಯತಿ** ಎನ್ನುವಂತೆ ಅಂದಿನ ಸಮಾರಂಭ ಎಲ್ಲರೂ ಜೀವನ ಪರ್ಯಂತ ನೆನಪಿನಂಗಳದಲ್ಲಿ ಇಟ್ಟುಕೊಳ್ಳುವಂತಹ ಮಹೋನ್ನತ, ಆತ್ಮೀಯ ಸಮಾರಂಭ. ಆ ಸಮಾರಂಭಕ್ಕೆ ಅನಿವಾರ್ಯ ಕಾರಣಗಳಿಂದಾಗಿ ಗೈರುಹಾಜರಾದ ಬಂಧು-ಬಾಂಧವರು ಈಗಲೂ ಪರಿತಪಿಸುತ್ತಿದ್ದಾರೆ- ಎಂತಹ ಅಮೋಘ, ಭಕ್ತಿಪೂರ್ವಕ ಆತ್ಮೀಯ ಸನ್ಮಾನ ಸಮಾರಂಭವನ್ನು ತಪ್ಪಿಸಿಕೊಂಡೆವಲ್ಲಾ ಎಂದು. ಸಮಾರಂಭದ ಮೆರುಗು ವೇ. ನರಸಿಂಹಮೂರ್ತಿಗಳು. ತಮ್ಮ ಸುಮಾರು ಐವತ್ತು ವರ್ಷಗಳ ನಿಃಸ್ವಾರ್ಥ ಸಮಾಜ ಸೇವೆಯ ಸವಿನೆನಪಿಗಾಗಿ ಬಂಧು-ಬಾಂಧವರು ನೀಡುತ್ತಿದ್ದ ಕೃತಜ್ಞತೆಯ ಸಮರ್ಪಣೆ. ಶ್ರೀಯುತರ ಮೇಲಿನ ಭಕ್ತಿ, ಪ್ರೀತಿ, ಗೌರವಗಳೇ ಸಮಾರಂಭದ ಯಶಸ್ಸಿಗೆ ಕಾರಣವಾಯ್ತು. ಅವಿಚ್ಛಿನ್ನವಾಗಿ ನಡೆದ ನಾಲ್ಕು ಗಂಟೆಗಳಲ್ಲಿ ಮಕ್ಕಳ ಅಳುವಿಲ್ಲ, ಚಿಣ್ಣರ ಸದ್ದುಗದ್ದಲಗಳಿಲ್ಲ, ದೊಡ್ಡವರ ಸರಸ ಸಂಭಾಷಣೆಗಳಿಲ್ಲ. ಸಮಾರಂಭಕ್ಕೆ ಬೆಂಗಳೂರಿನ ಗಮಕ ವಿದ್ವಾನ್ ಶ್ರೀ ಬಿ.ಎಸ್.ಎಸ್.ಕೌಶಿಕ್, ಚಿಕ್ಕಮಗಳೂರಿನ - ಶ್ರೀ ಕೆ.ವಿ. ಶೇಷಾದ್ರಿಗಳು, ಜನಮಿತ್ರ ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಗಿರಿಜಾಶಂಕರ್, ಆಡಿಟರ್ ಶ್ರೀ ಪಿ.ವಿ. ಭಟ್, ತರೀಕೆರೆಯ -

ಶ್ರೀ ಎ.ವಿ.ಸೂರ್ಯನಾರಾಯಣಸ್ವಾಮಿ ಮುಂತಾದ ಗಣ್ಯರು ಬಂದಿದ್ದು ಸದಾ ನೆನಪಿನಲ್ಲುಳಿಯುತ್ತದೆ. ಶ್ರೀ ನರಸಿಂಹ ಮೂರ್ತಿಗಳ ಆತ್ಮೀಯ ಮಿತ್ರರೂ, ಬಂಧುಗಳೂ ಆದ ವೇ. ಬ್ರ. ಶ್ರೀ ಕೃಷ್ಣಮೂರ್ತಿಯವರು ಭಾವೋದ್ವೇಗದಿಂದ ಮಾತನಾಡಿದಾಗಲಂತೂ ಸಭೆಯಲ್ಲಿ ಆನಂದಬಾಷ್ಪದ ಕೋಡಿಯೇ ಹರಿಯಿತು. ನನ್ನ ಆತ್ಮೀಯ ಮಿತ್ರರಾದ ಶ್ರೀಯುತ ಬಿ.ಲಕ್ಷ್ಮೀನಾರಾಯಣ್‌ರವರು ವೇ.ಬ್ರ.ಶ್ರೀಗಳವರ ಮೇಲೆ ರಚಿಸಿದ ಕವನವನ್ನು ಸುಶ್ರಾವ್ಯವಾಗಿ ಹಾಡಿದ ಲಕ್ಷ್ಮೀ ಮತ್ತು ಸಂಧ್ಯಾ ಅವರ ಹಾಡಂತೂ ಎಲ್ಲರ ಮನಸೂರೆಗೊಂಡು, ಕಣ್ಣಂಚಿನಲ್ಲಿ ಧಾರಾಕಾರವಾಗಿ ನೀರು ಹರಿದು ಭಾವನೆಗಳ ಸಂಘರ್ಷಕ್ಕೆ ನಾಂದಿಯಾಗಿತ್ತು. ಪ್ರಾಸ್ತಾವಿಕ ಭಾಷಣ ಮಾಡಿದ ಪ್ರೊ.ಎಲ್.ಎಮ್.ಎಲ್ ಶಾಸ್ತ್ರಿಗಳು ಶ್ರೀಯುತರ ಸಾಧನೆಗಳನ್ನು ಪಟ್ಟಿ ಮಾಡುತ್ತಾ ಸುಮಾರು ಒಂದು ಗಂಟೆ ಕಾಲವನ್ನು ವಿನಿಯೋಗಿಸಿದ್ದು ಅವಿಸ್ಮರಣೀಯ ಘಟನೆ. ಸಂದರ್ಭಕ್ಕೆ ತಕ್ಕಂತೆ ಡಾ. ಎಲ್.ಹೆಚ್. ಮಂಜುನಾಥ್‌ರವರು ಕಾರ್ಯಕ್ರಮ ನಿರೂಪಣೆ ಮಾಡಿದುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಅಂತೂ ಅದು ಅತ್ಯದ್ಭುತ ಕಾರ್ಯಕ್ರಮವಾಗಿ ವೇ. ನರಸಿಂಹಮೂರ್ತಿಗಳವರ ಬಗ್ಗೆ ಹೆಚ್ಚಿನ ವಿಚಾರ ತಿಳಿಯುವ ಸುಸಂದರ್ಭ ಎಲ್ಲರದ್ದಾಗಿತ್ತು.

ಆಸ್ತಿಕವಿವರ್ಧಿನಿ ಸಂಘವನ್ನು ೧೯೮೧ರಲ್ಲಿ ಹುಟ್ಟುಹಾಕಲಾಯ್ತು. ಯುವಕರೆಲ್ಲರ ಒತ್ತಾಸೆಯ ಮೇರೆಗೆ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ನಿವೇಶನದಲ್ಲೇ ರಾಮಮಂದಿರ ಕಲ್ಯಾಣ ಮಂದಿರವನ್ನು ಕಟ್ಟಬೇಕೆಂಬ ಸರ್ವಾನುಮತದ ಅಭಿಪ್ರಾಯದ ಮೇರೆಗೆ ಈ ಸಂಘ ಸ್ಥಾಪನೆಯಾಯ್ತು. ಹೊಸ ಸಂಘದ ಸ್ಥಾಪನೆಗೆ ಹೆಸರಿಗಾಗಿ ವೇ.ನರಸಿಂಹಮೂರ್ತಿಗಳನ್ನು ಕೇಳಲಾಗಿ ಸುಮಾರು ಎರಡು-ಮೂರು ದಿನಗಳ ಅನಂತರ, **ಆಸ್ತಿಕ ವಿವರ್ಧಿನಿ ಸಂಘ** ಎಂಬುದು ಸೂಕ್ತ, ಸಮಂಜಸ ಹಾಗೂ ಸಕಾಲಿಕವಾಗುತ್ತದೆ ಎಂದು ಅಭಿಪ್ರಾಯಿಸಿದಾಗ ಎಲ್ಲರೂ ಮರುಮಾತನಾಡದೆ ಒಪ್ಪಿಗೆಯನ್ನು ಸೂಚಿಸಿದ್ದೇ ಅಲ್ಲದೆ, ಈ ಸಂಘಕ್ಕೆ ಶ್ರೀ ನರಸಿಂಹಮೂರ್ತಿಗಳನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದಾಗ ಶ್ರೀಯುತರು ಬಹು ಸಂತೋಷದಿಂದ ಒಪ್ಪಿ, ಎಲ್ಲ ರೀತಿಯ ಪ್ರೋತ್ಸಾಹವನ್ನು ಕೊಡುತ್ತಾ ಸಂಘಕ್ಕೆ ದಾರಿದೀಪವಾಗಿರುತ್ತಾರೆ. ವೇ. ಬ್ರ. ಶ್ರೀಗಳ ನಾಮಬಲದಿಂದಲೇ ಎಲ್ಲಾ ಕೆಲಸಗಳೂ ಸುಸೂತ್ರವಾಗಿ ನಡೆದು ಲಿಂಗದಹಳ್ಳಿಯ ಊರೊಳಗೇ ಶ್ರೀಮತಿ ಸರೋಜಮ್ಮ ರಾಮಸ್ವಾಮಿಗಳ ಪೂರ್ಣ ಸಹಕಾರದಿಂದ ಶ್ರೀರಾಮಮಂದಿರ, ಕಲ್ಯಾಣ ಮಂದಿರದ ಭವ್ಯ ಕಟ್ಟಡವು ೧೯೮೮ರಲ್ಲಿ ಸುಮಾರು ಐದಾರು ಲಕ್ಷರೂ.ಗಳ ಬೃಹತ್ ನಿಧಿಯಲ್ಲಿ ರಾರಾಜಿಸುವಂತೆ ಮೂಡಿದುದು ಇತಿಹಾಸ. ಎಲ್ಲಾ ಆಸ್ತಿಕ ಮಹಾಶಯರೂ ಈ ಮಂದಿರವನ್ನು ಎಲ್ಲ ಉಪಯುಕ್ತ ಕಾರ್ಯಗಳಿಗೂ ಬಳಸುವಂತೆ ಆಗಿ, ಲಿಂಗದಹಳ್ಳಿಗೆ ಕಳಸಪ್ರಾಯದಂತಾಗಿದೆ. ಯಾವುದೇ ಸ್ಥಿರಾಸ್ತಿಯನ್ನು ಹೊಂದದ ನೂತನ ಸಂಘದ ಧನಸಂಗ್ರಹ ಕಾರ್ಯವು ಯಾವ ಅಡಚಣೆಯೂ ಇಲ್ಲದೆ ವೇ.ಶ್ರೀಯವರ ನಾಮಬಲದಿಂದಲೇ ಕೈಗೂಡಿ, ಯಶಸ್ಸಿನ ಹಾದಿಯನ್ನು ಹಿಡಿದುದು ಸರ್ವವೇದ್ಯ. ಪೂರ್ಣ ಸಹಕಾರವನ್ನಿತ್ತು ಪೋಷಿಸಿದ ಬಂಧು-ಬಾಂಧವರಿಗೂ, ಹಿತೈಷಿಗಳಿಗೂ, ದಾನಿಗಳಿಗೂ ಸಂಘವು ಎಂದಿಗೂ ಚಿರಋಣಿಯಾಗಿರುತ್ತದೆ.



*61. ಶ್ರೀರಾಮಮಂದಿರದ ವಿಸ್ತೃತ ಕಟ್ಟಡದ ಉದ್ಘಾಟನೆ : ಶ್ರೀ ಭೀಮೇಶ್ವರ ಜೋಷಿಯವರೊಂದಿಗೆ (ಮೇ, ೧೯೯೬)*

ಬಡವರ ಬಂಧು ವೇ. ನರಸಿಂಹಮೂರ್ತಿಗಳು ಊರಿನಲ್ಲಿದ್ದರೆ ಸಾಕು, ಬ್ರಾಹ್ಮಣೇತರರು ಸಾಲು ಸಾಲಾಗಿ ಶ್ರೀಯುತರಲ್ಲಿ ಸಹಾಯಕ್ಕಾಗಿ ಬರುತ್ತಿರುವುದನ್ನು ಪಕ್ಕದ ಮನೆಯವರೇ ಆದ ನಾವುಗಳು ಪ್ರತ್ಯಕ್ಷವಾಗಿ ನೋಡುತ್ತೇವೆ. ಒಂದಲ್ಲ ಮತ್ತೊಂದು ಕಷ್ಟಗಳ ಸರಮಾಲೆಯನ್ನೇ ಸೃಷ್ಟಿಸಿ ಸಾಲವಾಗಿ ಹಣವನ್ನು ಯಾಚಿಸಿ, ಯಶಸ್ಸನ್ನು ಸಂಪಾದಿಸುವವರು ಬಹು ಮಂದಿ. ಪಡೆದ

ಹಣವನ್ನು ಸಕಾಲದಲ್ಲಿ ಹಿಂದಿರುಗಿಸುವವರ ಸಂಖ್ಯೆ ವಿರಳ. ಪ್ರತಿಫಲಾಪೇಕ್ಷೆಯಿಲ್ಲದೆಯೇ ಗಳಿಸಿದ ಅಷ್ಟಿಷ್ಟು ಹಣವನ್ನು, ಕಣ್ಣೀರಿಡುವ ಜನರಿಗೆ ವಿನಿಯೋಗಿಸುವುದರಲ್ಲೇ ಶಾಸ್ತ್ರಿಗಳು ಆತ್ಮಸಂತೋಷವನ್ನು ಕಾಣುತ್ತಾರೆ. ವೇ.ಬ್ರ.ಶ್ರೀಯವರು ಕೈಯಲ್ಲಿಲ್ಲದಿದ್ದರೂ ಸಾಲವಾಗಿ ಪಡೆದಾದರೂ ಬಡವರ ಅಥವಾ ಕಡುಬಡವರಂತೆ ವರ್ತಿಸುವ ಜನರ ಕಣ್ಣೊರೆಸುವ ಬಡವರ ಬಂಧುಗಳಾಗಿರುತ್ತಾರೆ. ಸಕಾಲದಲ್ಲಿ ಹಿಂದಿರುಗಿಸುವುದಿಲ್ಲವೆಂಬುದು ತಿಳಿದಾಗ್ಯೂ ಸಹಾಯಾರ್ಥಿಗಳನ್ನು ನಂಬುವುದು ನರಸಿಂಹ ಮೂರ್ತಿಗಳ ದೌರ್ಬಲ್ಯವೋ ಅಥವಾ ದಾನ ಮಾಡುವುದು ಕರ್ತವ್ಯವೆಂದೇ ಭಾವಿಸಿದ್ದಾರೋ ಯಾರಿಗೂ ಇದುವರೆಗೂ ತಿಳಿದಿಲ್ಲ. ಸಮೀಪದ ಬಂಧುಗಳು - ಮೇಲಾಗಿ ಮಕ್ಕಳು - ಹಲವಾರು ಬಾರಿ ಈ ವಿಚಾರದಲ್ಲಿ ವೇ. ಶ್ರೀಯವರಿಗೆ ಈ ರೀತಿಯ ವ್ಯವಹಾರ ಬೇಡವೆಂದು ಹೇಳಿದರು ಸಹ, ಎಲ್ಲರನ್ನೂ ನಂಬುವುದೇ ಶ್ರೀಯುತರ ಜಾಯಮಾನವಾಗಿದೆ. ಸಾಮಾನ್ಯವಾಗಿ ನರಸಿಂಹಮೂರ್ತಿಗಳ ಬಂಧುಗಳು ಮಾತ್ರ ಶ್ರೀಯುತರಲ್ಲಿ ಯಾವುದೇ ರೀತಿಯ ವ್ಯವಹಾರವನ್ನೂ ಇಟ್ಟುಕೊಂಡಿರುವುದಿಲ್ಲ. ಇದಕ್ಕೆ ಕಾರಣ ಅವರ ಮೇಲಿನ ಪೂಜ್ಯಭಾವನೆ. ವ್ಯವಹಾರಕ್ಕಿಳಿದಾಗ ಪೂಜ್ಯಭಾವನೆಗಳು ನಿರ್ಗಮಿಸುವ ಸನ್ನಿವೇಶಗಳೇ ಹೆಚ್ಚಾಗಿರುವುದರಿಂದ ನಮ್ಮವರು ಸಾಮಾನ್ಯವಾಗಿ ಶ್ರೀಯುತರಲ್ಲಿ ಸಹಾಯಾರ್ಥಿಗಳಾಗಿ ಕೇಳುವ ಸಂದರ್ಭಗಳು ಇಲ್ಲವೆಂದೇ ಹೇಳಬಹುದು.

**ಧರ್ಮಪತ್ನಿ ಸೀತಮ್ಮನವರ ತ್ಯಾಗ:** ವೇ.ಬ್ರ.ಶ್ರೀ ನರಸಿಂಹಮೂರ್ತಿಗಳವರ ಧರ್ಮಪತ್ನಿ ಶ್ರೀಮತಿ ಸೀತಮ್ಮನವರು ನಮಗೆ ಚಿಕ್ಕಮ್ಮನವರಾಗಬೇಕು. ನಾವು ಕೂಗುವುದು 'ಅಮ್ಮಾಮಿ' ಎಂದೇ. ಲಿಂ.ಹಳ್ಳಿ ವೇ. ವೆಂಕಟೇಶ ದೀಕ್ಷಿತರ ಪುತ್ರಿ. ೧೯೩೮ರಲ್ಲಿ ವಿದ್ವಾನ್ ನರಸಿಂಹಮೂರ್ತಿಯವರನ್ನು ಕೈಹಿಡಿದು ಇದುವರೆಗೂ ಸಂತೃಪ್ತ ಜೀವನ ನಡೆಸಿ ಪತಿಗೆ ತಕ್ಕ ಪತ್ನಿಯಾಗಿ ಪತಿಯ ಎಲ್ಲಾ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಸಂಸಾರ ರಥವನ್ನು ಇಲ್ಲಿಯವರೆಗೂ ಸರಾಗವಾಗಿ ಎಳೆದು ಜಯವನ್ನು ಗಳಿಸಿರುತ್ತಾರೆ. ಶ್ರೀಮತಿ ಸೀತಮ್ಮನವರು ಅರ್ಧಾಂಗಿಯಾಗಿ ತಮ್ಮ ಪತಿದೇವರಿಗೆ ಸರ್ವವಿಧದಲ್ಲೂ ಸಹಕಾರವನ್ನು ಕೊಡುತ್ತಾ ಬಂದಿರುತ್ತಾರೆ. ವೇ.ನರಸಿಂಹಮೂರ್ತಿಗಳು ಮದುವೆಯಾದಂದಿನಿಂದಲೂ ಇಲ್ಲಿಯವರೆಗೂ ತಮ್ಮ ಕಾಲುಗಳಿಗೆ ಚಕ್ರ ಕಟ್ಟಿಕೊಂಡಂತೆ ಊರಿಂದೂರಿಗೆ ತಮ್ಮ ಕರ್ತವ್ಯದ ಮೇಲೆ ಸಂಚರಿಸುವಾಗ ಚಿಕ್ಕಮಕ್ಕಳನ್ನು ನಿಭಾಯಿಸಿಕೊಂಡು, ಸಂಸಾರವನ್ನೂ ತೂಗಿಸಿ, ಯಾವತ್ತೂ ತಮ್ಮ ಪತಿಯ ಮೇಲೆ ವೃಥಾ ಸಿಟ್ಟು ಮಾಡದೆ, ಕಾಯಕವೇ ಕೈಲಾಸವೆಂಬಂತೆ ತಮ್ಮ ಭಾಗದ ಕರ್ತವ್ಯಕ್ಕೆ ಚ್ಯುತಿ ಬಾರದಂತೆ ನಿರ್ವಹಿಸಿರುವುದರಲ್ಲಿ ಯಶಸ್ಸನ್ನೂ ಕಂಡಿರುತ್ತಾರೆ. ಸಾಮಾನ್ಯವಾಗಿ ಶ್ರೀಯುತರು ಒಂದು ದಿವಸ ಮನೆಯಲ್ಲಿದ್ದರೆ ಎರಡು-ಮೂರು ದಿನಗಳು ಹೊರಗಡೆ ಇರಬೇಕಾದ ಪರಿಸ್ಥಿತಿ ಇದ್ದಾಗ್ಯೂ ಯಾವುದೇ ರೀತಿಯ ಬೇಸರ ಪಟ್ಟುಕೊಳ್ಳದೆ ಮಕ್ಕಳನ್ನು ನೋಡಿಕೊಂಡು ಅವರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುವಲ್ಲಿಯೂ ಸಹಕರಿಸಿ, ತಮ್ಮ ಪತಿ ಎಂದೂ ಸಂಸಾರ ನಿರ್ವಹಣೆ ಕಡೆ ಯೋಚಿಸದಂತೆ ಮಾಡುತ್ತಿದ್ದುದು ನಿಜಕ್ಕೂ ಶ್ಲಾಘನೀಯ. ಇವತ್ತಿಗೂ ಇದೇ ರೀತಿಯಲ್ಲಿ ನಡೆದುಕೊಂಡು ಬರುತ್ತಿರುವುದು ಎಲ್ಲರಿಗೂ ವೇದ್ಯವೇ ಆಗಿದೆ. ಕೆಲವು ಸಂದರ್ಭಗಳಲ್ಲಿ ವಾರ, ತಿಂಗಳುಗಟ್ಟಳೆ, ಸ್ವಾಮೀಜಿಗಳವರೊಂದಿಗೆ ದೇಶಸಂಚಾರದಲ್ಲಿ ಭಾಗಿಯಾಗಿ ಮನೆಯ ಕಡೆ ಸ್ವಲ್ಪವೂ ಯೋಚಿಸದೆ ಶ್ರೀ ನರಸಿಂಹ ಮೂರ್ತಿಗಳು ಇರುತ್ತಿದ್ದ ಸಂದರ್ಭದಲ್ಲಿ ಸಹನಶೀಲವತಿಯಾದ ಸೀತಮ್ಮನವರು ಯೋಚನಾಕ್ರಾಂತರಾಗದೆ ಸಂಸಾರವನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದರು. ತಮ್ಮ ಮೂರು ಮಂದಿ ಹೆಣ್ಣು ಮಕ್ಕಳಿಗೂ ಒಳ್ಳೆಯ ಕಡೆ ವಿವಾಹ ಮಾಡಿಕೊಟ್ಟ ಮೇಲೆ ಮನೆಯಲ್ಲಿ ವೃದ್ಧ ದಂಪತಿಗಳು ಅಷ್ಟೇ. ಈಗಲು ಸಹ ಮದುವೆ, ಗೃಹಪ್ರವೇಶ ಇತ್ಯಾದಿಗಳಿಗೆ ಪರ ಊರುಗಳಿಗೆ ಪತಿ ತೆರಳಿದಾಗ ಮನೆಯಲ್ಲಿ ಒಬ್ಬರೇ- ತಮ್ಮ ಅನಾರೋಗ್ಯದ ನಡುವೆಯೂ ತಮ್ಮ ಮಡಿ ಕಾರ್ಯಗಳನ್ನು ಚತು ತಪ್ಪದೆ ಮಾಡುತ್ತಾ, ಬಂದ ಅತಿಥಿಗಳ ಸತ್ಕಾರವನ್ನು ಮಾಡುತ್ತಾ, ಸಂತೋಷವನ್ನು ಕಾಣುತ್ತಿದ್ದಾರೆ. ಈ ವಯಸ್ಸಿನಲ್ಲಿ ಹಾಗೂ ಅನಾರೋಗ್ಯದ ನಡುವೆ ವಿಶ್ರಾಂತಿ ಅಗತ್ಯವಾಗಿದ್ದು, ಅದು ಲಭಿಸುತ್ತಿಲ್ಲ. ತಮ್ಮ ಪತಿಯ ಸೇವೆಯಲ್ಲಿಯೇ ಸಂತೋಷ, ಸುಖ, ವಿಶ್ರಾಂತಿಯನ್ನು ಕಾಣುತ್ತಿರುವ ಶ್ರೀಮತಿ ಸೀತಮ್ಮನವರು ನಿಜಕ್ಕೂ ತ್ಯಾಗಮಯಿಯೇ ಎಂದು ಹೇಳುವುದರಲ್ಲಿ ಅರ್ಥಪೂರ್ಣ ಸತ್ಯಾಂಶವಿದೆ.

ಈ ದಂಪತಿಗಳ ಅನ್ಯೋನ್ಯತೆ ಎಲ್ಲರಿಗೂ, ಎಲ್ಲ ಕಾಲಕ್ಕೂ ಮಾದರಿಯಾಗಿದೆ. ವಸಿಷ್ಠ ಅರುಂಧತಿಯಂತಿರುವ ಈ ದಂಪತಿಗಳು ದೀರ್ಘಾಯುಸ್ಸನ್ನು ಗಳಿಸಿ, ಸುಖ-ಸಂತೋಷ ನೆಮ್ಮದಿಯಿಂದ ಬಾಳಿ ಎಲ್ಲರಿಗೂ ಮೇಲ್ಪಂಕ್ತಿಯಾಗಿರಲೆಂದು ಹಾರೈಸಿ, ದಂಪತಿಗಳಿಗೆ ಸಕಲ ಸನ್ಮಂಗಳವನ್ನುಂಟು ಮಾಡಲೆಂದು ಆ ಭಗವಂತನಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ನಮಗೆ ತಿಳಿದಿರುವಂತೆ ಕೆಲವರು ಆತ್ಮತೃಪ್ತಿ ಹಾಗೂ ಸಮಾಜದ ಒಳಿತಿಗಾಗಿ ಕೆಲಸಮಾಡಿ ಯಾವ ಪ್ರಚಾರವನ್ನೂ ಬಯಸದೆ ಬೂದಿ

ಮುಚ್ಚಿದ ಕೆಂಡದಂತಿರುತ್ತಾರೆ. *ಈ* ಗುಂಪಿಗೆ ಸೇರುವವರು ಅತಿ ವಿರಳವೇ. ಶ್ರೀ ನರಸಿಂಹಮೂರ್ತಿಗಳು *ಈ* ಗುಂಪಿಗೆ ಸೇರಿದವರಾಗಿರುತ್ತಾರೆ. 'ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್' ಎನ್ನುವಂತೆ ಭಾರತೀಯ ವಿದ್ಯಾಭವನವು ಕೊಡಮಾಡುವ ಗುರುಗಂಗೇಶ್ವರಾನಂದ ಸ್ವಾಮೀಜಿಯವರ ಸ್ಮರಣಾರ್ಥ ೨೦೦೧ನೇ ಸಾಲಿನ **ವೇದರತ್ನ** ಪ್ರಶಸ್ತಿಯನ್ನು ಶ್ರೀ ನರಸಿಂಹಮೂರ್ತಿಗಳಿಗೆ ನೀಡಿ ಗೌರವಿಸಿರುವುದು, *ಈ* ಪ್ರಶಸ್ತಿಗೇ ಬಹು ದೊಡ್ಡ ಮೌಲ್ಯ ಬಂದಂತಾಗಿದೆ. ಪ್ರಶಸ್ತಿಗಾಗಿ ಅರ್ಜಿಯನ್ನು ಹಾಕುವ ಪರಿಪಾಠ ಇರುವ *ಈ* ದಿನಗಳಲ್ಲಿ ಅರ್ಜಿ ಹಾಕದೆಯೇ ದೊರೆತ ಪ್ರಶಸ್ತಿ ಇದಾಗಿದೆ.

ವೇದರತ್ನ ಪ್ರಶಸ್ತಿಗೆ ಆಯ್ಕೆಯಾದ ಸಂದರ್ಭದಲ್ಲಿ ದಿ.೨೭.೧೦.೦೨ರಂದು ಭಾರತೀಯ ವಿದ್ಯಾಭವನದ ಕಾರ್ಯವಾಹಕ ನಿರ್ದೇಶಕರಾದ ಶ್ರೀ ಮತ್ತೂರು ಕೃಷ್ಣಮೂರ್ತಿಯವರೂ ಅವರ ಧರ್ಮಪತ್ನಿ ಸೌ. ರಾಜಲಕ್ಷ್ಮಿಯವರೂ, ಮತ್ತೂರಿನ ವೇ.ಬ್ರ.ಶ್ರೀ ಮಾರ್ಕಂಡೇಯ ಅವಧಾನಿಗಳು ಮತ್ತು ಸಹೋದರರೂ, ರಾಜ್ಯಪ್ರಶಸ್ತಿ ಪುರಸ್ಕೃತರಾದ ಗಮಕ ವಿದ್ವಾನ್ ಹೊಸಹಳ್ಳಿ ಕೇಶವಮೂರ್ತಿಗಳು ಹಾಗೂ ಇತರರೂ ಲಿಂಗದಹಳ್ಳಿಗೆ ಶ್ರೀ ನರಸಿಂಹಮೂರ್ತಿಗಳನ್ನು ಅಭಿನಂದಿಸುವ ಸಲುವಾಗಿ ಆಗಮಿಸಿದ್ದು ಅತ್ಯಂತ ಸಂಭ್ರಮದ ದಿನವಾಗಿತ್ತು. ವೇದಶಾಸ್ತ್ರಗಳಲ್ಲಿ ಹೆಚ್ಚಿನ ಪ್ರಾವೀಣ್ಯ ಹೊಂದಿದ್ದೇ ಅಲ್ಲದೆ, ಅನೇಕ ಕೃತಿಗಳ ರಚನೆ, ದೀರ್ಘಕಾಲದ ಪೌರೋಹಿತ್ಯದ ಮೂಲಕ ಸಮಾಜಸೇವೆ ಮತ್ತು ಸಂಸ್ಕೃತ ಪ್ರಚಾರ ಮಾಡಿದ್ದಕ್ಕಾಗಿಯೇ *ಈ* ಪುರಸ್ಕಾರ ಲಭಿಸಿತ್ತು. *ಈ* ಪ್ರಶಸ್ತಿಯು ಗುರು ಗಂಗೇಶ್ವರಾನಂದ ಸ್ವಾಮೀಜಿಯವರ ವಿಗ್ರಹ, ಒಂದು ಲಕ್ಷ ರೂಪಾಯಿ ನಗದು ಹಾಗೂ ತಾಮ್ರಪತ್ರಗಳನ್ನೊಳಗೊಂಡಿದ್ದು, ಪ್ರಶಸ್ತಿಯನ್ನು ೧೬.೧೧.೦೨ ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಸನ್ಮಾನ್ಯ ರಾಜ್ಯಪಾಲರಾದ ಚತುರ್ವೇದಿಯವರಿಂದ ವಿತರಿಸಲಾಯ್ತು. ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಲಿಂಗದಹಳ್ಳಿಯಿಂದಲೇ ಸುಮಾರು ನಲವತ್ತು ಮಂದಿ ಬಂದಿದ್ದರು. ಶ್ರೀಯುತರ ಮೇಲಿನ ಅಪಾರ ಭಕ್ತಿ, ವಿಶ್ವಾಸಗಳೇ ಇದಕ್ಕೆ ಕಾರಣ. ಅಂದೇ ಎಲ್ಲರನ್ನೂ ಉದ್ದೇಶಿಸಿ ಐದು ನಿಮಿಷ ಸರಳ ಸಂಸ್ಕೃತದಲ್ಲಿ ಎಲ್ಲರಿಗೂ ಅರ್ಥವಾಗುವಂತೆ ಶ್ರೀ ನರಸಿಂಹ ಮೂರ್ತಿಗಳು ಮಾತನಾಡಿದುದು ವಿಶೇಷ. *ಈ* ಸಮಾರಂಭಕ್ಕೆ ಶತಾಯುಷಿಗಳಾದ ನಿಟ್ಟೂರು ಶ್ರೀನಿವಾಸರಾಯರು ಆಗಮಿಸಿದ್ದು ಹೆಚ್ಚಿನ ವಿಶೇಷವಾಗಿತ್ತು.

ಜ್ಞಾನಪೀಠ ಪ್ರಶಸ್ತಿಗೆ ಸರಿಸಮನಾದ *ಈ* ವೇದರತ್ನ ಪ್ರಶಸ್ತಿಯನ್ನು ನಮ್ಮ ಸಂಕೇತಿ ಜನಾಂಗದವರ ಪೈಕಿ ಪಡೆದ ಮೊದಲಿಗರಾದದ್ದು ಎಲ್ಲ ಬಂಧು-ಬಾಂಧವರಿಗೂ ಹೆಮ್ಮೆಯ ವಿಚಾರವಾಯ್ತು. ಇನ್ನೂ ಇಂತಹ ಹಲವಾರು ಪ್ರಶಸ್ತಿಗಳು ತಾವಾಗಿಯೇ ಲಭಿಸಿ, ಸಂಕೇತಿ ಬಾಂಧವರ ಪ್ರತಿಷ್ಠೆಗೆ ಇನ್ನಷ್ಟು ಗರಿಗಳು ಸೇರಲಿ ಹಾಗೂ ವೇ.ಬ್ರ.ಶ್ರೀ ನರಸಿಂಹಮೂರ್ತಿಗಳವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಶ್ರೇಯೋಭಿವೃದ್ಧಿ ಕಾರ್ಯಗಳು ಉಂಟಾಗಲಿ. ಇದಕ್ಕಾಗಿ ಶ್ರೀಯುತರಿಗೆ ಹೆಚ್ಚಿನ ಆಯುಸ್ಸು, ಆರೋಗ್ಯವನ್ನು ದಯಪಾಲಿಸಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ. ವೇ.ಬ್ರ.ಶ್ರೀ ಯವರ ಆಶೀರ್ವಾದ ಸದಾ ಎಲ್ಲರ ಮೇಲೆ ನಿರಂತರವಾಗಿರಲೆಂದು ಸಹ ಆಶಿಸೋಣ.

## ೨೨. ವೇ. ಬ್ರ. ಶ್ರೀ ವಿದ್ವಾನ್ ನರಸಿಂಹಮೂರ್ತಿಯವರ ಸಂದರ್ಶನ

***ಬೀ. ಚಿ. ಜಗನ್ನಾಥ ಜೋಯಿಸ್***


ತೀರ್ಥರೂಪ ಸ್ವರೂಪರಾದ 'ವೇದರತ್ನ' ನಮ್ಮನೆಗೆ ಬರಬೇಕೆಂಬ ಬಹುದಿನದ ನನ್ನಾಸೆಯನ್ನು *ಈ*ಡೇರಿಸಿಕೊಳ್ಳಬಯಸಿ, ಸಂದರ್ಶನ ಕಾರ್ಯಕ್ರಮಕ್ಕಾಗಿ ನಮ್ಮಲ್ಲಿಗೆ ಬರುವಂತೆ ಸಂಕೋಚದಿಂದ ಬೇಡಿಕೊಂಡೆ. ನಮ್ಮ ಭಾಗ್ಯ! ವಿದ್ಯಾಸಾಗರರು ನಮ್ಮನೆಗೆ ಬಂದಿದ್ದರೆಂಬ ಅಮಿತಾನಂದ ನಮ್ಮ ಪಾಲಾಯ್ತು. ಆ ಸಂದರ್ಭದಲ್ಲಿ ಅವರೊಂದಿಗಿನ ಸಂದರ್ಶನದ ಆಯ್ದ ಭಾಗ ಇಲ್ಲಿದೆ. ಸಂದರ್ಶಿಸಲು ಬೇಕಾದ ಪ್ರಶ್ನೆಗಳ ಪೂರ್ವಸಿದ್ಧತೆಗಾಗಿ ಸಹಕರಿಸಿದ ವಿದ್ವಾನ್ ಶ್ರೀ ಎಂ. ಸುಬ್ರಹ್ಮಣ್ಯಭಟ್, ನನ್ನ ಕುಟುಂಬ ವರ್ಗದವರು ಮತ್ತಿತರ ಎಲ್ಲರನ್ನೂ ಸ್ಮರಿಸುತ್ತೇನೆ. ಪೂಜ್ಯರು ಬಹುಸಂಕೋಚದಿಂದ, ಅತ್ಯಂತ ವಿನಯದಿಂದ, ಆತ್ಮಸ್ತುತಿಯಾಗದಂತೆ ನುಡಿದ ಮಾತುಗಳು ನನ್ನ ಮರುನುಡಿಯಲ್ಲಿ ಒರಟುತನದ್ದೂ, ಅಹಂಕಾರಯುತವೂ ಆಗಿದ್ದರೆ ಅದಕ್ಕೆ ನಾನೇ ಹೊಣೆ. ನನ್ನ ತಪ್ಪನ್ನು ಮನ್ನಿಸಿ ಸ್ವೀಕರಿಸಬೇಕೆಂದು ಕೋರುತ್ತೇನೆ.

**ಇಂದಿನ ಬ್ರಾಹ್ಮಣರ ಜೀವನವಿಧಾನ ಹಿಂದಿನಂತಿಲ್ಲ. ಇಂದಿನ ಔದ್ಯೋಗಿಕ ಯುಗದಲ್ಲಿ ಬ್ರಾಹ್ಮಣ್ಯವನ್ನು ಕಾಪಾಡುವುದು ಹೇಗೆ ? ವೇದಪ್ರತಿಪಾದಿತ ಮಾರ್ಗದಲ್ಲಿ ನಾವಿಂದು ನಡೆಯುವುದು ಸಾಧ್ಯವೇ? ಇಲ್ಲವೆಂದಾದರೆ ನಾವು ವೇದ ಪರಂಪರೆಯುವರೆಂದು ಹೇಳಿಕೊಳ್ಳಬಹುದೇ ?**

ಜೀವನವಿಧಾನ ಬದಲಾದರು ಕೂಡ ವೇದಮಾರ್ಗವನ್ನು ಖಂಡಿತ ಅನುಸರಿಸಬಹುದು. ನ್ಯಾಯ, ನೀತಿ, ಧರ್ಮಗಳನ್ನು ಚಿತು ತಪ್ಪದೇ ಅನುಸರಿಸಬೇಕೆಂಬುದೇ ವೇದೋಪದೇಶ. ವೇಷ-ಭೂಷಣಗಳೇ ಪ್ರಧಾನವಲ್ಲ. ವೇದವನ್ನು ಸಾಧ್ಯವಾದಷ್ಟೂ ಅಧ್ಯಯನ ಮಾಡುವುದು ಬ್ರಾಹ್ಮಣರ ಕರ್ತವ್ಯ. ಅಷ್ಟೇ ಅಲ್ಲದೇ ವೇದೋಪದೇಶದ ಅರ್ಥವರಿತು ಅದನ್ನು ಪಾಲನೆ ಮಾಡಿದರೆ ನಿಜವಾಗಿಯೂ ಸಾರ್ಥಕ. ಇದು ಸರ್ವಥಾ ಸಾಧ್ಯವಿಲ್ಲವೆಂದಾದರೆ ವೇದಪ್ರತಿಪಾದಿತ ಮಾರ್ಗವನ್ನಾದರೂ ಎಂದರೆ ನ್ಯಾಯ ನೀತಿ ಅನುಸರಿಸಬೇಕು. ಲೌಕಿಕ ಜೀವನದಲ್ಲಿ ಯಾವ ಉದ್ಯೋಗದಲ್ಲಿದ್ದರೂ ಸರಿಯೇ, ನೀತಿ ಧರ್ಮಗಳನ್ನು ಬಿಡದಂತೆ ಬದುಕಿದರೆ ವೇದಪ್ರತಿಪಾದಿತ ಮಾರ್ಗವನ್ನು ಅನುಸರಿಸಿದಂತೆಯೇ.

**ಆಧುನಿಕ ಶಿಕ್ಷಣದಿಂದ ಉದ್ಯೋಗ ಸಿಗುತ್ತದೆ. ವೇದಾಧ್ಯಯನ ಮಾಡಿದರೆ ಹೊಟ್ಟೆ ತುಂಬುತ್ತದೆಯೇ?**

ಆಧ್ಯಾತ್ಮಿಕ ಜೀವನವನ್ನು ಸರಿಯಾಗಿ ನಡೆಸಲು ವೇದಾಧ್ಯಾಯನವನ್ನು ಆದಷ್ಟು ಮಾಡಬೇಕು. ಇದರಿಂದ ಧನಸಂಪಾದನೆಯ ನಿರೀಕ್ಷೆ ಮಾಡಲೇಬಾರದು. ಆಧುನಿಕ ಶಿಕ್ಷಣ ಪಡೆದು ಉದ್ಯೋಗ ಗಳಿಸಿದರೂ ವೇದೋಪದಿಷ್ಟ ಮಾರ್ಗವನ್ನಾದರೂ ಆಚರಿಸುವುದಕ್ಕೆ ತೊಂದರೆ ಇಲ್ಲವಷ್ಟೇ.



*62. ದಿನಪತ್ರಿಕೆಯ ಅವಲೋಕನ*

**ವೇದವನ್ನು ಸ್ವರವ್ಯತ್ಯಾಸವಾಗದಂತೆ ಹೇಳಬೇಕು. ಸ್ವರವ್ಯತ್ಯಾಸಮಾಡಿ ಹೇಳಿದರೆ ಅಪಾಯವಂತೆ. ಆದ್ದರಿಂದಲೇ ಇಂದು ಬಹುಮಂದಿ ಹೆದರಿ, ಅಧ್ಯಯನದಿಂದ ದೂರ ಉಳಿದಿದ್ದಾರೆಯೇ?**

ವೇದವನ್ನು ಸ್ವರವ್ಯತ್ಯಾಸವಾಗದಂತೆ ಉಚ್ಚಾರಣೆ ಮಾಡಬೇಕಾದುದು ನಿಜ. ಏಕೆಂದರೆ ಸ್ವರಕ್ಕೆ ಸಹ ಅರ್ಥವಿದೆ. ಉದಾಹರಣೆಗೆ 'ವಿಶ್ವ ರೂಪೋವೈತ್ವಾಷ್ಟ್ರ' ಎಂಬ ಯಜುರ್ವೇದದ ಎರಡನೆಯ ಕಾಂಡದ ಐದನೆಯ ಪ್ರಶ್ನೆಯಲ್ಲಿ ಸ್ವರವ್ಯತ್ಯಾಸದಿಂದ ಅರ್ಥವ್ಯತ್ಯಾಸವಾಗಿ ಅಪಾಯವುಂಟಾದ ವಿಚಾರವಿದೆ. ಇದರಲ್ಲಿ 'ಇಂದ್ರಶತ್ರುರ್ವರ್ಧಸ್ವ' ಎಂಬ ಮಂತ್ರ ಬರುತ್ತದೆ. ಇದಕ್ಕೆ ಎರಡು ಅರ್ಥಗಳಿವೆ. ಇಂದ್ರನೇ ಶತ್ರುವಾಗಿ ಉಳ್ಳವನು ಮತ್ತು ಇಂದ್ರನಿಗೆ ಶತ್ರು ಎಂಬುದು ಎರಡು ಅರ್ಥಗಳು. ಇಂದ್ರಃ ಶತ್ರುಃ ಯಸ್ಯಸಃ ಎಂದು ಬಹುವ್ರೀಹಿ ಸಮಾಸ ಮಾಡಿದರೆ ಇಂದ್ರನಿಂದ ಕೊಲ್ಲಲ್ಪಡುವವನು ಎಂದು ಅರ್ಥವಾಗುತ್ತದೆ. ಇಂದ್ರಸ್ಯ ಶತ್ರುಃ ಎಂದು ತತ್ಪುರುಷ ಸಮಾಸ ಮಾಡಿದರೆ ಇಂದ್ರನನ್ನು ಕೊಲ್ಲುವವನು ಎಂದು ಅರ್ಥವಾಗುತ್ತದೆ. ಅಂತೋದಾತ್ತ ಮಾಡದೇ ಹೇಳಿದ ಕಾರಣ ಇಂದ್ರನಿಂದ ವಿಶ್ವರೂಪ ಹತನಾಗಬೇಕಾಯಿತು. ಆದ್ದರಿಂದ ವೇದವನ್ನು ಸ್ವರಸಹಿತವೇ ಹೇಳುವುದು ಉತ್ತಮ. ಆದರೆ ವೇದಾರ್ಥವನ್ನು ತಿಳಿಯಲು ಸ್ವರದ ಅಗತ್ಯವಿಲ್ಲ.

**ವೇದಾರ್ಥ ತಿಳಿದುಕೊಳ್ಳದೇ ವೇದಪಾರಾಯಣ ಮಾಡುವುದು ಪೂರ್ಣ ಫಲಪ್ರದವಲ್ಲ ಎಂದು ಟೀಕಿಸಲಾಗಿದೆ. ವೇದಾಧ್ಯಯನವೇ ಶ್ರಮಸಾಧ್ಯವಾಗಿರುವಾಗ ಅರ್ಥ ತಿಳಿದುಕೊಳ್ಳಲೂ ವೇದಾಂಗಾದಿಗಳ ಅಧ್ಯಯನ ಮಾಡಲೂ ಅವಕಾಶವೆಲ್ಲಿದೆ?**

ಯಾವ ರೀತಿಯಲ್ಲಾದರೂ ಅರ್ಥವನ್ನು ತಿಳಿದುಕೊಳ್ಳಬೇಕಾದದ್ದು ಅಗತ್ಯ. ಏಕೆಂದರೆ ಅರ್ಥ ತಿಳಿದುಕೊಳ್ಳದೇ ಮಾಡಿದಲ್ಲಿ ಕೆಲವೊಮ್ಮೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುವ ಸಂಭವವಿದೆ. ಉದಾಹರಣೆಗೆ ಯಜುಸ್ಸಂಹಿತೆಯ ಬ್ರಾಹ್ಮಣ ಭಾಗದಲ್ಲಿ **ದೇವಾ ವೈ ವರುಣಮಯಾಜಯನ್** (೨-೩-೫) ಎಂಬ ಮಂತ್ರವಿದೆ. ಋತ್ವಿಜರು ಒಂದಾನೊಂದು ಯಾಗದಲ್ಲಿ ದಾನ ದಕ್ಷಿಣೆಗಳನ್ನು ಸ್ವೀಕಾರ ಮಾಡಿದಾಗ ತೊಂದರೆಗಳುಂಟಾದವು. ಯಾಕೆ ತೊಂದರೆಗಳುಂಟಾದವು? ಪರಾರ್ಥವಾಗಿ ದಾನ

ಸ್ವೀಕಾರ ಮಾಡಿದ್ದಾದರೆ ತೊಂದರೆಯುಂಟಾಗುತ್ತಿರಲಿಲ್ಲ. ಸ್ವಾರ್ಥಕ್ಕಾಗಿ ದಾನ ಸ್ವೀಕರಿಸಿದ ಕಾರಣ ತೊಂದರೆಯುಂಟಾಯಿತು. ದಾನ ಪಡೆದುದನ್ನು ಪರಹಿತಕ್ಕಾಗಿಯೇ ಬಳಸಬೇಕು. ದಕ್ಷಿಣೆಯನ್ನು ತನ್ನ ಸ್ವಂತಕ್ಕೆ ಬಳಸಿಕೊಳ್ಳಬಹುದು. ಇಂತಹ ಅರ್ಥವನ್ನು ತಿಳಿದುಕೊಳ್ಳದ ಕಾರಣ ತೊಂದರೆಗೀಡಾದರು. ಒಟ್ಟಿನಲ್ಲಿ ಬರಿಯ ವೇದಾರ್ಥ ತಿಳಿದುಕೊಳ್ಳುವುದ ಕ್ಕಿಂತಲೂ, ಅದನ್ನು ಅನುಷ್ಠಾನಕ್ಕೆ ತಂದು, ಸಾತ್ವಿಕ ಜೀವನವನ್ನು ನಡೆಸಿ ಉನ್ನತಿ ಸಾಧಿಸಬೇಕೆಂಬುದು ಮುಖ್ಯ ವಿಚಾರ. ವೇದರಕ್ಷಣೆಯ ದೃಷ್ಟಿಯಿಂದ ವೇದಪಾರಾಯಣ ನಡೆಸುವುದು ವಿಹಿತ.

**ಅನಿಷ್ಟಕ್ಕೆಲ್ಲ ಶನೀಶ್ವರ ಎಂಬಂತೆ ಸಮಾಜದ ಅನಿಷ್ಟಕ್ಕೆ ಬ್ರಾಹ್ಮಣನೇ ಕಾರಣ ಎಂದು ಹೇಳುತ್ತಾರೆ. ಆದ್ದರಿಂದ ಬ್ರಾಹ್ಮಣರು ಕ್ಷಾತ್ರವನ್ನು ರೂಢಿಸಿಕೊಳ್ಳಬೇಕೇ ?**

ಇದು ಖಂಡಿತ ಸರಿಯಲ್ಲ. ಇಂದು ವೇದಪ್ರತಿಪಾದಿತವಾದ ನಿಜವಾದ ಅರ್ಥದಲ್ಲಿ ಬ್ರಾಹ್ಮಣ ಇದ್ದಾನೆಯೇ? ಬ್ರಾಹ್ಮಣನ ಲಕ್ಷಣವಾದರೂ ಏನು? ಪ್ರತಿಯೊಂದು ಜಾತಿಯಲ್ಲೂ ಚಾತುರ್ವರ್ಣ್ಯದ ಗುಣಲಕ್ಷಣಗಳು ಕಂಡುಬರುತ್ತವೆ. ಪ್ರತಿಯೊಂದು ಜಾತಿಯಲ್ಲೂ ಈ ನಾಲ್ಕು ವರ್ಗಗಳು ಇದ್ದೇ ಇವೆ. ನಮ್ಮ ಜೀವನ ಶುದ್ಧವಾಗಿರಬೇಕು; ವ್ಯವಹಾರ ಶುದ್ಧವಾಗಿರಬೇಕು. ಸಕಲ ದುರಾಕಾಂಕ್ಷೆಗಳನ್ನೂ ತೊರೆದು, ಪರರ ಹಿತವನ್ನು ಬಯಸಿ ದುಡಿಯುವವನೇ ಬ್ರಾಹ್ಮಣ. ಅವನು ನಿಃಸ್ಪೃಹನಾಗಿರಬೇಕು. ಅದಕ್ಕಾಗಿಯೇ ದಾನ-ದಕ್ಷಿಣೆಗಳನ್ನು ಬ್ರಾಹ್ಮಣನಿಗೆ ನೀಡಬೇಕೆಂದು ಶಾಸ್ತ್ರ ವಿಧಿಸಿದೆ. ಆತ ತಾನು ಪಡೆದ ದಾನವನ್ನು ಪರೋಪಕಾರಕ್ಕಾಗಿಯೇ ಬಳಸುತ್ತಾನೆ. ಕ್ಷತ್ರಿಯಾದಿಗಳಿಗೆ ಸ್ವಾರ್ಥವಿರುತ್ತದೆ. ಬ್ರಾಹ್ಮಣನಿಗೆ ಭೋಗಜೀವನವನ್ನು ವೇದದಲ್ಲಿ ಹೇಳಲಿಲ್ಲ. ಕ್ಷತ್ರಿಯನಾದರೋ, ದುಷ್ಟದಂಡನೆ ಮತ್ತು ಶಿಷ್ಟರಕ್ಷಣೆ ಮಾಡುತ್ತಾ ಧರ್ಮಬದ್ಧವಾದ ಭೋಗಜೀವನವನ್ನು ನಡೆಸಬೇಕೆಂದು ಶಾಸ್ತ್ರ ಹೇಳಿದೆ. ಹೀಗೆ ಎಲ್ಲರೂ ವರ್ಣಾನುಸಾರವಾಗಿ ಧರ್ಮಬದ್ಧವಾದ ಜೀವನ ನಡೆಸಿದರೆ ಲೋಕಕಲ್ಯಾಣ ಖಚಿತ. ಹಾಗಾಗಿ ಬ್ರಾಹ್ಮಣರು ಕ್ಷಾತ್ರ ರೂಢಿಸಿಕೊಳ್ಳುವುದಕ್ಕಿಂತಲೂ, ಬ್ರಾಹ್ಮಣ್ಯವನ್ನು ಪಾಲಿಸುವುದು ಹೆಚ್ಚು ಶ್ರೇಯಸ್ಕರ.

**ಅನಧ್ಯಯನದ ದಿನಗಳನ್ನು ಪ್ರತ್ಯೇಕವಾಗಿ ಗುರುತಿಸಿದ್ದಾರೆ. ಏಕೆ ?**

ಅಮಾವಾಸ್ಯೆ, ಹುಣ್ಣಿಮೆ, ಪಾಡ್ಯ ಇವುಗಳನ್ನು ಅನಧ್ಯಯನವೆಂದು ತಿಳಿಸಿದ್ದಾರೆ. ಆ ಸಮಯದಲ್ಲಿ ಗುರು ಶಿಷ್ಯರು ಸೇರಿ ಇಷ್ಟಿಯೇ ಮೊದಲಾದ ಹೋಮಗಳನ್ನು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಅಧ್ಯಯನಕ್ಕೆ ವಿರಾಮ ಹೇಳಬೇಕಾಗುತ್ತದೆ. ಅದು ಒಂದು ವ್ಯವಸ್ಥೆ. ಅದನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ.

**ದಕ್ಷಿಣಾಯನದಲ್ಲಿ ಉಪನಯನ ಮಾಡಬಾರದೇಕೆ ?**

ಜ್ಯೋತಿಶ್ಶಾಸ್ತ್ರವನ್ನು ಪ್ರಮಾಣಗ್ರಂಥವಾಗಿ ಇಟ್ಟುಕೊಂಡ ಮೇಲೆ ಅದರಂತೆಯೇ ನಡೆಯಬೇಕು. ಇದೂ ಒಂದು ವ್ಯವಸ್ಥೆ. ಹೇಗೆಂದರೆ ಶಾಲಾಮಕ್ಕಳು ಸಮವಸ್ತ್ರ ಧರಿಸುವುದಿಲ್ಲವೇ ಹಾಗೆ. ಎಲ್ಲರೂ ಶಿಸ್ತನ್ನು ಪಾಲಿಸಬೇಕು. ಉತ್ತರಾಯಣದಲ್ಲಿ ಉಪನಯನ ಹಿತಕರವೆಂದು ಹೇಳಿದ್ದಾರೆ. ಅದನ್ನು ಅನುಸರಿಸುವುದು ಶಾಸ್ತ್ರ ಮರ್ಯಾದೆ; ಶಿಸ್ತಿನ, ಏಕರೂಪದ ದೃಷ್ಟಿಯಿಂದ ಉತ್ತಮ.

**ಹೋಮ ಒಂದು ಒಳ್ಳೆಯ ಕಾರ್ಯ ಎಂದು ಹೇಳುತ್ತಾರೆ. ಇದು ಕರ್ತೃವಿಗೆ ಮತ್ತು ಸಮಾಜಕ್ಕೆ ಹಿತಕಾರಿಯೇ ?**

ದೇವತೆಯನ್ನುದ್ದೇಶಿಸಿ ತ್ಯಾಗಮಾಡುವುದೇ ಹೋಮ, ಯಾಗ ಇತ್ಯಾದಿಗಳು. ತ್ಯಾಗವೇ ನಿಜವಾದ ಹವಿಸ್ಸು. ದೇವತೆಗಳು ತಮಗೆ ಅಗತ್ಯವಾದುದಷ್ಟನ್ನು ಸ್ವೀಕರಿಸಿ ಉಳಿದುದನ್ನು ತ್ಯಾಗ ಮಾಡಬೇಕೆಂದು ನಮ್ಮಿಂದ ಬಯಸುತ್ತಾರೆ. ತ್ಯಾಗದಿಂದ ಮಾನಸಿಕ ದಾರ್ಢ್ಯ ಬರುತ್ತದೆ. ತ್ಯಾಗದಿಂದ ದೇವತೆಗಳಿಗೆ ಸಂತೋಷವಾಗುತ್ತದೆ. ಈ ರೀತಿಯ ತ್ಯಾಗದ ಸಂಕೇತವೇ ಅಗ್ನಿಯಲ್ಲಿ ಹೋಮ. ಯಾಗವೆಂದರೆ ತ್ಯಾಗ. ಕರ್ತೃವಿಗೆ ತ್ಯಾಗದಿಂದಲೇ ಹಿತ. ತ್ಯಾಗಮನೋಭಾವದಿಂದ ಸಕಲರಿಗೂ, ಸಮಾಜಕ್ಕೂ ಒಳಿತಾಗುತ್ತದೆಯೇ ವಿನಾ ಸಮಸ್ಯೆಗಳುಂಟಾಗುವುದಿಲ್ಲ. ಹಾಗೆಯೇ ಚಂಡೀಹೋಮದಲ್ಲಿ ಲೋಕದ ಎಲ್ಲಾ ಸ್ತ್ರೀಯರು ಕೂಡ ಮಾತೃಸ್ವರೂಪರೆಂಬ ವಿಶಾಲ ಭಾವನೆಯು ಪ್ರತಿಪಾದಿತವಾಗಿದೆ. ಇಂತಹ ವಿಶಾಲ ಭಾವನೆಯನ್ನು ಹೊಂದಿ ತ್ಯಾಗಮನೋಭಾವವನ್ನು ರೂಢಿಸಿಕೊಂಡರೆ ದೇವರಿಗೆ ತೃಪ್ತಿಯಾಗುತ್ತದೆ.

**ದೇವರು ನಿರಾಕಾರನೆಂಬುದನ್ನು ತಿಳಿದೂ ಸಾಕಾರಮೂರ್ತಿಯನ್ನು ಪೂಜಿಸುತ್ತೇವೆ. ಇದರ ಅಗತ್ಯವಿದೆಯೇ ? ನಮಗೆ ಭಕ್ತಿಯುಂಟಾಗಲು ಸಾಧ್ಯವೇ ?**

ನಿರಾಕಾರವನ್ನು ತಿಳಿಯಲು ಹೆಚ್ಚು ಮನಸ್ಸಿನ ಪರಿಪಕ್ವತೆ ಬೇಕು. ಪರಿಪಕ್ವತೆ ಬಂದಾಗ ನಿರಾಕಾರವನ್ನು ಧ್ಯಾನಿಸಲು ಸಾಧ್ಯ. ಆದರೆ ಸಾಮಾನ್ಯರಿಗೆ ಒಂದು ಆಕಾರವಿದ್ದಲ್ಲಿ ಮಾತ್ರ ಧ್ಯಾನಿಸಲು ಸಾಧ್ಯ. ಇಲ್ಲದಿದ್ದರೆ ಮನಸ್ಸು ಸ್ಥಿರವಾಗಿ ನಿಲ್ಲುವುದಿಲ್ಲ. ಹಾಗಾಗಿ ಈ ಸಾಕಾರ ಪೂಜೆ, ಧ್ಯಾನಗಳು ರೂಢಿಯಲ್ಲಿವೆ. ನಿರಾಕಾರ ಚಿಂತನೆ ಕೇವಲ ಪರಿಪಕ್ವವಾದ ಶಂಕರಾಚಾರ್ಯರಂತಹವರಿಗೆ ಸಾಧ್ಯ.

**ದ್ವೈತ-ಅದ್ವೈತ -ವಿಶಿಷ್ಟಾದ್ವೈತಗಳ ಸ್ಥೂಲ ವ್ಯತ್ಯಾಸಗಳೇನು ?**

ದ್ವೈತ ನಮ್ಮ ಅನುಭವದಲ್ಲಿ ಇರುವಂತಹುದೇ. ನಾವಿರುವುದೇ ದ್ವೈತ ಸ್ಥಿತಿಯಲ್ಲಿ. ಜೀವಾತ್ಮ - ಪರಮಾತ್ಮ ಬೇರೆ ಬೇರೆಯೆಂಬ ಭಾವನೆಯೇ ದ್ವೈತ. ಆದರೆ ವಾಸ್ತವವಾಗಿರುವುದು ಅದ್ವೈತ. ಗಾಢನಿದ್ರೆಯಲ್ಲಿರುವಾಗ ಇರುವ ಆನಂದ ಸ್ಥಿತಿ, ಎಚ್ಚರವಾದಾಗ ಮಾಯವಾಗುತ್ತದೆ. ಜೀವಾತ್ಮನಿಗೂ ಪರಮಾತ್ಮನಿಗೂ ಅಭೇದವನ್ನು ಹೇಳುವುದು ಅದ್ವೈತ. ಪರಮಾನಂದದಾಯಕವಾದ ಅದ್ವೈತ ಸ್ಥಿತಿಯನ್ನು ಪಡೆಯಲು ತುಂಬ ಸಾಧನೆ ಮಾಡಬೇಕು. ಆ ಸ್ಥಿತಿಯನ್ನು ಪಡೆದರೆ ಯಾವ ಕ್ಲೇಶವೂ ಇಲ್ಲ. ಮಾಯಾವಸ್ಥೆಯಲ್ಲಿ ಅನೇಕ ವಸ್ತುಗಳು ಕಾಣುತ್ತವೆ. ಆತ್ಮಾನಂದ ಸ್ಥಿತಿಗೆ ತಲುಪಿದಾಗ ಕೇವಲ ಅದ್ವೈತವೊಂದೇ ಉಳಿಯುತ್ತದೆ. ಆಗಲೇ ಮುಕ್ತಿ. ಜೀವಾತ್ಮ ಪರಮಾತ್ಮರಿಗಿರುವ ಭೇದ ಮತ್ತು ಜೀವಜಡ ವಿಶಿಷ್ಟನಾದ ಪರಮಾತ್ಮನೊಬ್ಬನೇ ಎಂಬುದನ್ನು ಪ್ರತಿಪಾದಿಸುವುದು ವಿಶಿಷ್ಟಾದ್ವೈತ.

**ಸಂಸ್ಕೃತದ ಅಭಿವೃದ್ಧಿಗೆ ನಿಮ್ಮ ಸಲಹೆಗಳೇನು ? ಅದನ್ನು ಸಂಪರ್ಕ ಭಾಷೆಯನ್ನಾಗಿ ಮಾಡಲು ಸುಲಭ ಮಾರ್ಗವಿದೆಯೇ ?**

ನಾವು ನಮ್ಮ ಮನೆಯ ಭಾಷೆ (ಸಂಕೇತಿ) ಮತ್ತು ಹೊರಗಿನ ಸಂಪರ್ಕ ಭಾಷೆಯನ್ನು (ಕನ್ನಡ) ಲೀಲಾಜಾಲವಾಗಿ ಮಾತಾಡುತ್ತೇವೆ. ಹಾಗೆಯೇ ಸಂಸ್ಕೃತದಲ್ಲಿಯೂ ಮಾತನಾಡಲು ಸಾಧ್ಯ. ಅದಕ್ಕೆ ಒಂದಷ್ಟು ಪ್ರಯತ್ನಬೇಕು. ನಾವೆಲ್ಲರೂ ಸ್ವಲ್ಪ ಅವಕಾಶಮಾಡಿಕೊಂಡು ಮಾತನಾಡಲು ಅಗತ್ಯವಾದಷ್ಟು ಕಲಿತುಕೊಂಡು ಬಿಟ್ಟರೆ ಸಂಭಾಷಣೆ ನಡೆಸುವುದು ಕಷ್ಟವೇನಲ್ಲ. ಒಂದು ಕಾಲಕ್ಕೆ ಸಂಸ್ಕೃತ ಆಡುಭಾಷೆಯಾಗಿತ್ತು. ಬಳಿಕ ಅಪಭ್ರಂಶವಾಗಿ ನಾನಾ ಭಾಷಾರೂಪಗಳನ್ನು ತಳೆಯಿತು. ಸಂಸ್ಕೃತಕ್ಕೊಂದು ವ್ಯಾಕರಣದ ಚೌಕಟ್ಟನ್ನು ಅಳವಡಿಸಿದ ಬಳಿಕ ಅದು ಅಪಭ್ರಂಶಗೊಳ್ಳುವುದು ತಪ್ಪಿತು. ಇದರಿಂದ ಮೂಲಸಂಸ್ಕೃತದ ರಕ್ಷಣೆಯಾಯಿತು. ಆದರೆ ಸಂಪರ್ಕಭಾಷೆಯನ್ನಾಗಿಸಲು ಪ್ರಯತ್ನ ಮುಖ್ಯ.

**ಧರ್ಮಜಿಜ್ಞಾಸೆಗಳಲ್ಲಿ ವಿರುದ್ಧಾಭಿಪ್ರಾಯ ಬಂದಲ್ಲಿ ಖಚಿತವಾದ ತೀರ್ಮಾನ ಹೇಗೆ ?**

ಧರ್ಮವನ್ನು ಸಾಮಾಜಿಕ ಧರ್ಮ, ಸನಾತನಧರ್ಮ ಎಂದು ಎರಡು ರೀತಿ ವರ್ಗೀಕರಿಸಬಹುದು. ಆಯಾಯ ಕಾಲಕ್ಕೆ ತಕ್ಕಂತೆ ನೀತಿ ನಿಯಮಗಳ ಅನುಸರಣೆಯೇ ಸಾಮಾಜಿಕ ಧರ್ಮ. ಸತ್ಯ-ಧರ್ಮ-ಅಹಿಂಸೆ-ಅಸ್ತೇಯ ಇತ್ಯಾದಿಗಳು ಸನಾತನಧರ್ಮಗಳು. ನಾವು ಸನಾತನಧರ್ಮಕ್ಕೆ ವಿರುದ್ಧವಲ್ಲದ ಸಾಮಾಜಿಕಧರ್ಮವನ್ನು ಅನುಸರಿಸಬೇಕು. ಹಿಂದೆ ಬಾಲ್ಯವಿವಾಹ ಇತ್ತು. ಈಗ ಪ್ರೌಢ ವಿವಾಹ ಇದೆ. ಇವುಗಳು ಬದಲಾಗುವಂತಹ ಧರ್ಮಗಳು. ಬೇರೆ ಬೇರೆ ಸಮಾಜದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳೂ ಇರಬಹುದು. ಅವುಗಳಲ್ಲಿ ವ್ಯತ್ಯಾಸವಿದ್ದರೆ ಏನೂ ಸಮಸ್ಯೆ ಇಲ್ಲ. ಧರ್ಮ ವಿರುದ್ಧವಾದುದನ್ನು ಮಾತ್ರ ಆಚರಿಸಬಾರದು.

**ಸ್ತ್ರೀಯರಿಗೆ ವೇದಾಧಿಕಾರವಿಲ್ಲವೆಂದು ಹೇಳುತ್ತಾರಲ್ಲವೇ ? ನಿಮ್ಮ ಅಭಿಪ್ರಾಯವೇನು ?**

ವೇದಾಧ್ಯಯನದ ಅಧಿಕಾರವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಕೌಟುಂಬಿಕ ಕಾರಣಗಳೇ ಸ್ತ್ರೀಯರು ವೇದಾಧ್ಯಯನದಿಂದ ದೂರವಾಗಲು ಮುಖ್ಯ ಕಾರಣ. ಎಲ್ಲರೂ ಅಧ್ಯಯನ ಮಾಡಿದರೆ ಗೃಹಕೃತ್ಯದ ಇತರ ಕೆಲಸಗಳನ್ನು ಮಾಡುವವರು ಯಾರು? ಎಲ್ಲರಿಗು ಕೂಡಾ ವೇದ ಬೇಕು. ಅಧ್ಯಯನ ಸಾಧ್ಯವಾಗದಿದ್ದರು ಕೂಡಾ ವೇದೋಕ್ತ ಮಾರ್ಗದಲ್ಲಿ ನಡೆದರೆ ವೇದಾಧ್ಯಯನ ಮಾಡಿದಂತೆಯೇ. ಇದೊಂದು ಸಾಮಾಜಿಕ ವ್ಯವಸ್ಥೆ, ಅಷ್ಟೇ. ಹಾಗೆಯೇ ಸ್ತ್ರೀಯರಿಗೆ ಮಂತ್ರಭಾಗದ ವರ್ಣಸ್ವರಾದಿಗಳ ಉಚ್ಚಾರಣೆ ಕ್ಲೇಶಕರವೆಂಬುದು ಕೂಡಾ ಕೇವಲ ಕಲ್ಪನೆಯಷ್ಟೇ.

**ವೇದ, ಪುರಾಣ, ಉಪನಿಷತ್ತುಗಳು ಪರಸ್ಪರ ಪೂರಕಗಳೇ ? ಇವುಗಳ ಬಗ್ಗೆ ಸ್ವಲ್ಪ ತಿಳಿಸುವಿರಾ ?**

ವೇದದ ಸಾರವನ್ನು ಕಥೆಗಳ ರೂಪದಲ್ಲಿ ತಿಳಿಯಪಡಿಸಲು ಹೊರಟುದೇ ಪುರಾಣಗಳು. ಉಪನಿಷತ್ತುಗಳು ಆತ್ಮಸ್ವರೂಪವನ್ನು ಬೋಧನೆ ಮಾಡುವಂತಹವು. ಅವುಗಳಲ್ಲಿ ಪರಿಪಕ್ವತೆಯ ಅಂಶಗಳಿವೆ. ಯಾಗಗಳಂತೂ ತ್ಯಾಗವನ್ನೇ ಪ್ರತಿಪಾದಿಸುತ್ತವೆ. ವೇದಗಳು ಸಾಮಾನ್ಯರಿಗೆ ಕ್ಲಿಷ್ಟಕರವಾಗಿದ್ದುದರಿಂದ ಅದರ ಸಾರವನ್ನು ಪುರಾಣಗಳ ಮೂಲಕ ಮುನಿಗಳು ಪ್ರತಿಪಾದಿಸಿದರು. ವೇದಗಳು ಪೂರ್ವಕಾಂಡ; ಉಪನಿಷತ್ತು ಉತ್ತರಕಾಂಡ. ಉತ್ತರಕಾಂಡದ ಜ್ಞಾನದಿಂದಲೇ ನಮಗೆ ಮೋಕ್ಷ. ಇದೇ ಮುಖ್ಯವಾದುದು. ಹಾಗಾಗಿ ವೇದ-ಪುರಾಣ-ಉಪನಿಷತ್ತುಗಳು ಪರಸ್ಪರ ಪೂರಕವೇ.

**ವ್ರತ - ಪೂಜೆಗಳ ತಾತ್ಪರ್ಯ ಏನು ?**

ವ್ರತ ಪೂಜೆಗಳೆಲ್ಲ ಆತ್ಮಶುದ್ಧಿಗಾಗಿ. ಆಧ್ಯಾತ್ಮಿಕ ದೃಷ್ಟಿಕೋನವನ್ನಿಟ್ಟುಕೊಂಡೇ ಇವುಗಳನ್ನು ರೂಪಿಸಲಾಗಿದೆ. ಆಯಾಕಾಲದಲ್ಲಿ ಆಯಾ ವ್ರತ ಪೂಜೆಗಳನ್ನು ನಮ್ಮ ಹಿಂದಿನವರು

ರೂಪಿಸಿದ್ದಾರೆ, ನಿಯಮಿಸಿದ್ದಾರೆ. ಅವುಗಳಲ್ಲಿಯೂ ತ್ಯಾಗ ಮನೋಭಾವ, ಸಮರ್ಪಣಾ ಮನೋಭಾವಕ್ಕೇ ಮಹತ್ತ್ವ. ಇಂದು ಉಪವಾಸ, ಏಕಾದಶೀ ಇವುಗಳೆಲ್ಲಾ ಅರ್ಥ ಕಳೆದುಕೊಂಡು ಕೇವಲ ಆಚರಣೆಗಳಾಗಿ ಉಳಿದಿವೆ. ಉಪವಾಸದ ಹೆಸರಿನಲ್ಲಿ ಊಟದ ಎರಡು ಪಟ್ಟು ತಿಂಡಿ ತಿನ್ನುತ್ತೇವೆ. ಆಹಾರ ಜಾಸ್ತಿಯಾದಾಗ ರೋಗಗಳು ಅಂಟಿಕೊಳ್ಳುತ್ತವೆ. ಆದ್ದರಿಂದ ವ್ರತ ಉಪವಾಸಾದಿಗಳಿಂದ ಆರೋಗ್ಯವನ್ನು ನಿಯಂತ್ರಿಸಬೇಕು. ಮನಸ್ಸು ಅಧ್ಯಾತ್ಮದೆಡೆಗೆ ತಿರುಗಲು ಈ ರೀತಿಯ ಉಪವಾಸಗಳು ಸಹಕಾರಿ. ಹಾಗೆಯೇ ವ್ರತಗಳೂ ಮನಸ್ಸನ್ನು ಆಧ್ಯಾತ್ಮಿಕ ನೆಲೆಗಟ್ಟಿನತ್ತ ಒಯ್ಯಲು ಸಹಕಾರಿ.

**ಮಡಿ ಮೈಲಿಗೆ ಸಂಪ್ರದಾಯಗಳ ಹಿಂದಿನ ಪ್ರಮಾಣವೇನು ?**

ಶುದ್ಧವಾದುದೇ ಮಡಿ. ಇನ್ನೊಬ್ಬರು ಮುಟ್ಟಿದ ಮಾತ್ರಕ್ಕೆ ಖಂಡಿತ ಮೈಲಿಗೆಯಾಗುವುದಿಲ್ಲ. ಇದು ಸಂಪ್ರದಾಯವೇ ಹೊರತು ನಿಜವಲ್ಲ. ಕೊಳಕಾದುದನ್ನು ಮಡಿಯೆಂದು ಧರಿಸಿದರೆ ಅದು ಮಡಿ ಎನಿಸುವುದಿಲ್ಲ. ಮನಸ್ಸು ಶುದ್ಧವಾಗಿರಬೇಕು. ಅದೇ ಮಡಿ. ಬಾಹ್ಯಮಡಿ ಗೌಣ, ಮನಶ್ಶುದ್ಧಿಯೇ ಮುಖ್ಯ.

**ವೇದ - ಗಾಯತ್ರೀ ಸಂಧ್ಯಾವಂದನೆ - ಶ್ರಾದ್ಧ ಮೊದಲಾದವುಗಳ ಬಗ್ಗೆ ಇಂದಿನ ಪೀಳಿಗೆಗೂ ಮನದಟ್ಟಾಗುವಂತೆ ಕಿರುಹೊತ್ತಗೆಗಳನ್ನು ನೀವು ಯಾಕೆ ಪ್ರಕಟಿಸಬಾರದು ?**

ಪ್ರಯತ್ನ ಮಾಡಿದ್ದೇನೆ. 'ಸಂಕೇತಿ ಸಂಗಮ'ದಲ್ಲಿ ವೇದ ಸಂದೇಶದಲ್ಲಿ ಇಂತಹ ಅಭಿಪ್ರಾಯಗಳನ್ನು ಪ್ರಕಟಿಸುತ್ತಾ ಬಂದಿದ್ದೇನೆ. ಗಾಯತ್ರಿಯಂತೂ ಬ್ರಾಹ್ಮಣರಿಗೆ ಮಾತ್ರವಲ್ಲದೆ ಸಕಲರಿಗೂ ತಾರಕ ಮಂತ್ರ. ಅದು ಎಲ್ಲರ ಬುದ್ಧಿಗೂ ಪ್ರಚೋದಕವಾದುದು. ಗಾಯತ್ರಿಯ ಸಾರ ತಿಳಿದುಕೊಂಡರೂ ಗಾಯತ್ರಿಯ ಉಪಾಸನೆ ಮಾಡಿದಂತೆಯೇ ಸರಿ. **"ಗಾಯಂತಂ ತ್ರಾಯತೇ ಇತಿ ಗಾಯತ್ರೀ"** (ಜಪಿಸುವವನನ್ನು ರಕ್ಷಿಸುತ್ತದೆ) ಎಂಬುದು ಗಾಯತ್ರಿಯ ಅರ್ಥ ವಿವರಣೆ. ಗಾಯತ್ರೀ ಮಂತ್ರದಲ್ಲೂ **"ಧಿಯೋ ಯೋ ನಃ ಪ್ರಚೋದಯಾತ್"** ಎಂಬ ಭಾಗವಂತೂ ಬಹಳ ಅರ್ಥಗರ್ಭಿತವೇ ಸರಿ. ಎಲ್ಲರ ಬುದ್ಧಿಗಳನ್ನು ಪ್ರಚೋದಿಸುವಾತನೇ ಸೂರ್ಯ. ಆತ ನಮ್ಮ ಕಾಮ ಕ್ರೋಧಾದಿ ದುಷ್ಟಬುದ್ಧಿಗಳನ್ನು ದೂರಮಾಡಿ ಸದ್ಬುದ್ಧಿಗಳನ್ನು ಪ್ರೇರೇಪಿಸಿದಾಗ ನಮ್ಮ ಏಳಿಗೆ ಸಾಧ್ಯ. ಕಾಮವನ್ನು ಶಮದಿಂದಲೂ, ಕ್ರೋಧವನ್ನು ಕ್ಷಮೆಯಿಂದಲೂ, ಲೋಭವನ್ನು ತೃಪ್ತಿಯಿಂದಲೂ, ಮೋಹವನ್ನು ವಿವೇಕದಿಂದಲೂ, ಮದವನ್ನು ವಿನಯದಿಂದಲೂ ಮತ್ತು ಮಾತ್ಸರ್ಯವನ್ನು ಆತ್ಮೀಯತೆಯಿಂದಲೂ ನಾವು ಗೆಲ್ಲಬೇಕು. ಈ ರೀತಿಯಾಗಿ ಸಂಧ್ಯಾವಂದನೆಯಲ್ಲಿ ಮಾಡಿದ ಸಂಕಲ್ಪವನ್ನು ನಾವು ಸಾಧಿಸಬೇಕು. ಅದೇ ನಮ್ಮ ಗುರಿಯಾಗಬೇಕು. ವಿಶ್ವಾಮಿತ್ರನ ಸಾಧನೆಯನ್ನು ನಾವು ನೆನಪಿಸಿಕೊಳ್ಳಬೇಕು.

ಆದರೆ ಬರಿಯ ಗಾಯತ್ರಿ ಮಂತ್ರ ಪಠಣದಿಂದ ಮಾತ್ರವೇ ಪ್ರಯೋಜನವಿಲ್ಲ. ಅದರ ಅಂತರಾರ್ಥ ತಿಳಿದು, ಅನುಷ್ಠಾನಕ್ಕೆ ತಂದಾಗಲೇ, ನಿಜವಾದ ಸಾಧನೆ ಮಾಡಿದಾಗಲೇ, ಮುಕ್ತಿ.

**ನೀವು ಏನಾದರೂ ಸಾಧಿಸಬೇಕೆಂದು ಬಯಸಿದುದು ಇದೆಯೇ?**

ಅಂತಹುದೇನೂ ಇಲ್ಲ. ಅಂತಹ ಆಕಾಂಕ್ಷೆಗಳನ್ನೇನೂ ಇಟ್ಟುಕೊಂಡಿರಲಿಲ್ಲ. ಎಲ್ಲವೂ ಭಗವತ್ಸಂಕಲ್ಪದಂತೆ ನಡೆಯುತ್ತದೆ ಎಂಬುದು ನನ್ನ ಅಚಲ ನಂಬಿಕೆ.

**ಇಂದಿನವರಿಗೆ ನಿಮ್ಮ ಮಾರ್ಗದರ್ಶನವೇನು ?**

ಯಾವ ಉದ್ಯೋಗವನ್ನಾದರೂ ಮಾಡಿಕೊಳ್ಳಿ. ಸತ್ಯ-ನ್ಯಾಯ-ಧರ್ಮಗಳನ್ನು ಪಾಲಿಸಿ. ಯಾವ ಕೆಲಸವೂ ಕೀಳಲ್ಲ. ಆದರೆ ಸಾಧನೆ ಮಾಡಬೇಕೆಂಬ ಛಲವಿರಬೇಕು.

**ನಿಮ್ಮ ಜೀವನದಲ್ಲಿ ಮರೆಯಲಾಗದ ಘಟನೆಗಳು, ವ್ಯಕ್ತಿಗಳ ಬಗ್ಗೆ ತಿಳಿಸುವಿರಾ ?**

ಒಮ್ಮೆ ತರೀಕೆರೆಗೆ ರೈಲು ತಡವಾಗಿ ಬಂದ ಕಾರಣ ರಾತ್ರಿ ವೇಳೆ ತರೀಕೆರೆಯಿಂದ ಲಿಂಗದಹಳ್ಳಿಗೆ ಒಬ್ಬನೇ ಬರುವ ಸಂದರ್ಭ ಒದಗಿ ಬಂದಿತ್ತು. ಎಲ್ಲೆಲ್ಲೂ ಗಾಢಾಂಧಕಾರ, ಧೈರ್ಯಮಾಡಿ ನಡೆದೇ ಬಿಟ್ಟೆ. ಕೆಂಚಾಪುರಕ್ಕೆ ಬಂದಾಗ ಭಯವಾಗತೊಡಗಿತು. ಅಷ್ಟರಲ್ಲಿ ಆಲೋಚಿಸತೊಡಗಿದೆ. ಬದುಕಬೇಕೆಂಬ ಆಕಾಂಕ್ಷೆಯನ್ನಿಟ್ಟುಕೊಂಡರೆ ತಾನೇ ಭಯ? ಯಾವುದಾಗಬೇಕೋ ಅದು ಆಗಿಯೇ ಆಗುತ್ತದೆ. ಹಾಗಾಗಿ, ಆಕಾಂಕ್ಷೆಯನ್ನೇ ತ್ಯಜಿಸಿದರೆ ಭಯವೆಲ್ಲಿಯದು ಎಂಬ ಚಿಂತನೆಯನ್ನು ಮಾಡಿದೆ. ಅಂದಿನಿಂದ ಇಂದಿನವರೆಗೂ ನಾನು ಅತಿಯಾಸೆಯನ್ನು ಯಾವುದರ ಬಗೆಗೂ ಇಟ್ಟುಕೊಂಡಿಲ್ಲ. ಹಾಗಾಗಿಯೇ ನಾನು ಅಂದಿನಿಂದ ಇವತ್ತಿನವರೆಗೂ ಯಾವುದಕ್ಕೂ ಭಯಪಡಲಿಲ್ಲ.

ವ್ಯಕ್ತಿಗಳಲ್ಲಿ, ಗಾಂಧೀಜಿಯವರು ನನ್ನ ಮೇಲೆ ತುಂಬ ಪ್ರಭಾವ ಬೀರಿದರು. ಅವರ ಸರಳ ಜೀವನ ಶೈಲಿ, ನುಡಿದಂತೆ ನಡೆಯುವುದು, ಇವು ನನ್ನ ಮೇಲೆ ಬಹಳ ಪ್ರಭಾವ ಬೀರಿದ ಅಂಶಗಳು. ಇನ್ನು ಸ್ವಾಮಿಗಳಲ್ಲಿ ಶ್ರೀಧರಸ್ವಾಮಿಗಳು ನನ್ನ ಮೇಲೆ ಪ್ರಭಾವ ಬೀರಿದರು. ಅವರು ನಿಜಕ್ಕೂ ವಿರಕ್ತರು.

**ವೇದ ಬೋಧಿಸಿದ ನೀತಿಪಾಠಗಳು ಎಲ್ಲಿಯವರೆಗೆ ಪ್ರಸ್ತುತ ?**

ನೀತಿಪಾಠಗಳು ಸರ್ವಕಾಲಕ್ಕೂ ಪ್ರಸ್ತುತವೇ. ಅವು ಎಲ್ಲಿಂದ ಬಂದರೂ ಗ್ರಾಹ್ಯವೇ. ಉದಾಹರಣೆಗೆ ನಾವು ರಾಮಾಯಣವನ್ನು ಪಾರಾಯಣ ಮಾಡಿದಾಗ, ರಾಮನ ಆದರ್ಶವನ್ನು ಪಾಲಿಸುವತ್ತ ನಮ್ಮ ಗಮನ ಇರಬೇಕೇ ವಿನಾ ಬರಿಯ ದೇವಾಲಯ ಕಟ್ಟಿ ಪೂಜೆ ಮಾಡುವುದರಿಂದ ಮಾತ್ರ ತೃಪ್ತಿಪಡುವುದರಲ್ಲಿ ಅಲ್ಲ. ರಾಮನ ಹೃದಯವೈಶಾಲ್ಯಕ್ಕೆ ಗುಹ-ಸುಗ್ರೀವ ಮೊದಲಾದವರ ಸಖ್ಯವೇ ಉದಾಹರಣೆ. ರಾಮ ಒಬ್ಬ ಮಹಾಚಕ್ರವರ್ತಿ. ಗುಹನಾದರೋ ಅಡವಿಯ ಒಬ್ಬ ಸಣ್ಣ ರಾಜ. ರಾಮ ಅವನನ್ನು ದೂರವಿಟ್ಟು ಸೇವಕನಂತೆ ನೋಡಿಕೊಳ್ಳಬಹುದಿತ್ತು. ಆದರೆ ರಾಮ ಹಾಗೆ ಮಾಡಲಿಲ್ಲ. ಗುಹನನ್ನು ಆತ್ಮೀಯ ಗೆಳೆಯನನ್ನಾಗಿ ಮಾಡಿಕೊಂಡ. ಅಂತೆಯೇ ವಾನರ ರಾಜನಾದ ಸುಗ್ರೀವನ ಜತೆ ಕೂಡಾ ಅಗ್ನಿಸಾಕ್ಷಿಯಾಗಿ ಸ್ನೇಹ ಬೆಳೆಸಿದ. ರಾಮನ ಈ ಗುಣ ಸರ್ವರಿಗೂ ಆದರ್ಶಪ್ರಾಯವಾದುದು. ನಾ ಬೇರೆ ತಾ ಬೇರೆ ಎಂಬ ಹೊಡೆದಾಟ ಸರ್ವಥಾ ಸಲ್ಲದು, ನಾವೆಲ್ಲರೂ ಐಕ್ಯದಿಂದ ಬಾಳಬೇಕು.

## ೨೩. "ವಿದ್ವನ್ಮಣಿಃ ಶ್ರೀ ನೃಸಿಂಹಃ ಜೀಯಾತ್‌ವರ್ಷಶತಂ ಸುಖಮ್"

*ವಿದ್ವಾನ್ ಬಿ. ಲಕ್ಷ್ಮೀನಾರಾಯಣ್*

ಕನೀಯಸ್ತನಯಾಪ್ರಾನ್ತೇ ಕ್ಷೇತ್ರಕಾಸಾರವರ್ತುಲೇ |
ವರ್ತತೇ ಲಿಂಗಪಲ್ಲೀತಿ ಸುಗ್ರಾಮೋ ಜನವಿಶ್ರುತಃ ||

ದ್ಯೋತತೇ ವಿಪ್ರವರ್ಯಾಣಾಂ ಕೃಷಿಕ್ಷೇತ್ರಾದಿಕಂ ಸದಾ |
ವಿಭ್ರಾಜನ್ತೇ ಗೃಹಾಣ್ಯತ್ರ ವೇದವಿದ್ಯಾವಿಶಾರದೈಃ ||

ಪ್ರಾದುರ್ಬಭೂವ ಗ್ರಾಮೇಽಸ್ಮಿನ್ ಶ್ಯಾಮಶಾಸ್ತ್ರೀತಿ ಕರ್ಮಠಃ |
ತಸ್ಯ ಭಾರ್ಯಾ ಫಣಾಂಬೇತಿ ದಯಾದಾಕ್ಷಿಣ್ಯಪೂರಿತಾ ||

ದಂಪತ್ಯೋರನಯೋರ್ಭಾಗ್ಯಂ ಕಿಂ ವಚ್ಮಃ ಭೋ ಮಹಾಶಯಾಃ|
ಜನ್ಮ ಲೇಭೇ ಯದಾ ಪುತ್ರಃ ನೃಸಿಂಹ ಇತಿ ನಾಮಭಾಕ್ ||



***63 ಸಂಮಾನ ಸಮಾರಂಭ***

ಸ ತು ದೀಪ ಇವ ಧ್ವಾನ್ತೇ ಕುಲಂ ಸರ್ವಂ ಪ್ರಕಾಶಯನ್ |
ವೇದವೇದಾನ್ತವಿದ್ಯಾವಾನ್ ಭವಿತುಂ ಗೃಹಮತ್ಯಜತ್ ||

ಮಹಾವಿದ್ಯಾಲಯೇ ಶ್ರೀಶ್ರೀ ಚಾಮರಾಜೇಂದ್ರ ನಾಮಕೇ |
ಅಪಠತ್ ಪಾಣಿನೀಯಂ ಚ ಮೀಮಾಂಸಾಂ ಜ್ಯೌತಿಷಂ ತಥಾ ||

ಸಲಕ್ಷಣಮಲಂಕಾರಂ ಶಾಸ್ತ್ರಂ ಸಮ್ಯಗಧೀತ್ಯ ಚ |
ಲಿಲೇಖ ನೈಕಗ್ರಂಥಾಂಶ್ಚ ಪ್ರತಿಭಾಂ ಸ್ವಾಂ ಪ್ರದರ್ಶಯನ್ ||

ಸೀತಮ್ಮಾಮ್ ಉಪಯಮ್ಯೈಷ ಗಾರ್ಹಸ್ಥ್ಯಂ ಸ್ವೀಚಕಾರ ಚ |
ಶ್ರೀ ಸೀತಾರಾಮದಾಂಪತ್ಯಂ ಜ್ಞಾಪಯತ್ಯನಿಶಂ ಗೃಹೇ ||

ಮಠಾಧೀಶಾನ್ ಬಹೂನೇಷಃಸ್ವಪಾಂಡಿತ್ಯೇನ ಪಾಠಯನ್ |
ದಿನೇ ದಿನೇ ಚ ಕೀರ್ತಿಂ ತು ಪ್ರಾಪ ವಿತ್ತೇ ಚ ನಿಃಸ್ಪೃಹಃ ||

ಮಿತಭಾಷೀ ಮೃದುಃ ಶಾಂತಃ ಸ್ಮಿತಪೂರ್ವಾಭಿಭಾಷಿತಾ |
ಸದಾ ಕರ್ತವ್ಯನಿರತಃ ದೇಹಾಯಾಸೇ ಮಹತ್ಯಪಿ||

ದ್ವಿಚಕ್ರವಾಹನೇ ಗಚ್ಛನ್ ಸಮಯಂ ಚಾನುಪಾಲಯನ್ |
ಮಂತ್ರಭಾಗಮವಿಸ್ಮೃತ್ಯ ಶುಭಕಾರ್ಯಂ ಸಮಾಪಯನ್ ||

ಸಂಕೇತಿಸಮುದಾಯೇ ತು ಯಶಃ ಪ್ರಾಪ ಜನಪ್ರಿಯಃ |
'ವೇದಸಂದೇಶ' ದಾನೇನ ಪೌರೋಹಿತ್ಯೇನ ಕರ್ಮಣಾ ||

ದ್ವಿನವತ್ಯಧಿಕಂ ವರ್ಷಂ ಶ್ರುತಿಸ್ಮೃತ್ಯುಕ್ತಕರ್ಮಸು |
ವೇದಶಾಸ್ತ್ರೋಕ್ತಕಾರ್ಯೇಷು ಸಮಯಂ ಸ್ವಂ ಚ ಯಾಪಯನ್||

'ವಿದ್ಯಾಸಾಗರ' ಸಂಪನ್ನಃ 'ವೇದರತ್ನಮ್' ಪ್ರಶಸ್ತಿ ಭಾಕ್ |
ಸಂಮಾನ್ಯತೇ ಸಮಾರಂಭೇ ಲೇಖನೈಃ ಗೌರವಾನ್ವಿತೈಃ ||

ಅಸ್ಮಭ್ಯಮಾಶಿಷೋ ದತ್ವಾ ಸ್ವೀಕರೋತು ದಯಾನ್ವಿತಃ |
ವಿದ್ವನ್ಮಣಿಃ ಶ್ರೀನೃಸಿಂಹಃ ಜೀಯಾತ್ ವರ್ಷಶತಂ ಸುಖಮ್ ||




***64.** ಶ್ರೀಮತಿ ಸೀತಮ್ಮ ಮತ್ತು ವೇ. ಬ್ರ. ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳಿಗೆ ಸಂಮಾನ : ವೇ. ಬ್ರ. ಶ್ರೀ ಚಂದ್ರಶೇಖರ ಶರ್ಮಾ ಅವಧಾನಿಗಳಿಂದ*

# ಅನುಬಂಧ

## ೧. ಮೂಲಗ್ರಂಥದ ಪರಿವಿಡಿ

**ನಿಗಮ ಕೌಮುದಿ : ವೇದರತ್ನ ವಿದ್ಯಾಸಾಗರ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳ ಅಭಿನಂದನಾ ಗ್ರಂಥ; ಪ್ರಧಾನ ಸಂಪಾದಕರು: ಶ್ರೀ ಎಲ್.ವಿ. ಸೀತಾರಾಮ್, ಲಿಂಗದಹಳ್ಳಿ; ಆಸ್ತಿಕ ವಿವರ್ಧಿನಿ ಸಂಘ, ಲಿಂಗದಹಳ್ಳಿ-೫೭೭ ೧೨೮, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ; ೨೦೦೩; 1/4 ಕ್ರೌನ್,ಪು. 58 + 299**

## ೨. ಹಸ್ತಾಕ್ಷರ



## ೩. ಶುಭಾಶಯಗಳು

### ಅಭಿನಂದನಾಗ್ರಂಥ ಸಮಿತಿ

| | | |
|---|---|---|
| *ಗೌರವಾಧ್ಯಕ್ಷರು* | : | ವೇ. ಬ್ರ. ಶ್ರೀ ಎಲ್.ವಿ. ಕೃಷ್ಣಮೂರ್ತಿಗಳು, ಲಿಂಗದಹಳ್ಳಿ |
| *ಕಾರ್ಯಾಧ್ಯಕ್ಷರು* | : | ಡಾ. ಬಿ.ವಿ. ಸುರೇಶ್, ಚಿಕ್ಕಮಗಳೂರು |
| *ಸಲಹೆಗಾರರು* | : | ವೇ. ಬ್ರ. ಶ್ರೀ ಅಶ್ವತ್ಥ ನಾರಾಯಣಾವಧಾನಿಗಳು, ಮತ್ತೂರು |
| | | ಪ್ರೊ.ಎಲ್.ಎಂ.ಎಲ್. ಶಾಸ್ತ್ರಿ, ಶಿವಮೊಗ್ಗ |
| *ಪ್ರಧಾನ ಸಂಪಾದಕರು* | : | ಶ್ರೀ ಎಲ್.ವಿ. ಸೀತಾರಾಮ್, ಲಿಂಗದಹಳ್ಳಿ |
| *ಸಂಪಾದಕ ಮಂಡಳಿ* | : | ಶ್ರೀ ಬಿ.ಆರ್. ಪದ್ಮನಾಭ್, ಶ್ರೀ ಬಿ.ಸಿ. ಜಗನ್ನಾಥ್, ಶ್ರೀ ಎಲ್.ವಿ. ಸೂರ್ಯನಾರಾಯಣ್, ಶ್ರೀ ಎಲ್.ಜಿ. ಅನಂತ್, ಶ್ರೀ ಎಲ್.ಕೆ. ಶ್ರೀಪತಿ, ಶ್ರೀ ಎಲ್.ಸಿ. ಆನಂದಮೂರ್ತಿ, ಶ್ರೀಮತಿ ಎಲ್.ಕೆ. ತಾರಾ ಪ್ರಸಾದ್ |
| *ಸಂಚಾಲಕರು* | : | ಶ್ರೀ ಎಲ್.ಜಿ. ಅನಂತ್, ಚಿಕ್ಕಮಗಳೂರು |
| *ಕೋಶಾಧ್ಯಕ್ಷರು* | : | ಡಾ. ಡಿ. ರಮೇಶ್, ಲಿಂಗದಹಳ್ಳಿ |

## ಸ್ವಾಗತ ಗೀತೆ

ಬೆನಕನೇ! ಅಡ್ಡಿಗಳ ಬೆಟ್ಟಗಳಿಗೆ ವಜ್ರವೇ!
ಸರಸತಿಯೇ! ನಾಲಗೆಯ ತೊಡರುಗಳ ಔಷಧವೇ!
ಚೆನ್ನಕೇಶವದೇವ! ಸಂಕೇತಿ ಕುಲದಧಿದೈವ
ಹರಸುತ್ತ ಎಲ್ಲರನು ಮಳೆ ಬೆಳೆಯ ಕೊಡಿಸಿರೈ

ಜನವೆಲ್ಲ ಸೇರಿಹುದು ಹರುಷವನು ಹೊಂದಿಹುದು
ಜ್ಞಾನವೃದ್ಧರನು ತಾ ಗೌರವಿಸಲು ಬಯಸಿಹುದು
ಮರೆತಿಹುದು ಮನೆಯನ್ನು ಮೆರೆದಿಹುದು ಸಡಗರವ
ಏನೆಂದು ಬಣ್ಣಿಸುವ ಈ ಜನರ ಪುಳಕವನು

ನರಸಿಂಹಮೂರ್ತಿಗಳನು ಅಭಿನಂದಿಸಲೆನುತ
ನುಡಿಹಾರ ಕಟ್ಟಿಹುದು ಅಭಿಮಾನಿ ಜನತೆಯು
ಆಸ್ತಿಕವಿವರ್ಧಿನಿ ಸಂಘದೀ ಕಾರ್ಯವು
ಲಿಂಗದಹಳ್ಳಿಯ ಚರಿತೆಯಲಿ ಮರೆಯದಂತಿಹುದು

ಸಂಭ್ರಮದ ಕಾರ್ಯಕ್ಕೆ ಘನ ಅಧ್ಯಕ್ಷರಿವರು
ಗುರುಭಕ್ತ ಚಂದ್ರಶೇಖರಶರ್ಮಾವಧಾನಿಗಳು
ಪ್ರೊ.ಸೂರ್ಯನಾರಾಯಣಸ್ವಾಮಿಗಳು ಬಂದಿಹರು
ಮುದದಿ ಉದ್ಘಾಟಿಸಲು ತಾ ಜ್ಯೋತಿಯನು ಬೆಳಗಿಸುತ

ಮತ್ತೂರು ಮಾರ್ಕಂಡೇಯಾವಧಾನಿಗಳನು ಗೌರವದಿ
ಬರಮಾಡಿಕೊಂಡಿಹೆವು ಹಿರಿಚೇತನವೆಂದಾದರಿಸಿ,
ಮತ್ತೋರ್ವ ಮತ್ತೂರು ಹೆಸರನ್ನು ಬೆಳಗಿಸಿಹ
ಶ್ರೀ ಕೃಷ್ಣಮೂರ್ತಿಗಳನು ನಲುಮೆಯಲಿ ಕರೆದಿಹೆವು.

ಅಶ್ವತ್ಥನಾರಾಯಣ ಅವಧಾನಿಗಳು ಚಿತ್ತೈಸಿ
ಕನ್ನಡದ ಪೂಜಾರಿ ಶ್ರೀ ಕಣ್ಣನ್ ಜೊತೆಗಿಹರು
ವಿಪ್ರಸಭೆ ಅಧ್ಯಕ್ಷ ನಟರಾಜರ್ ದಯಮಾಡೆ,
ನಗುಮೊಗದಿ ತವಕದಿ ಕುಳಿತಿಹುದು ಜನವೆಲ್ಲ

ವೇದಿಕೆಯು ತುಂಬಿಹುದು ಮಾನ್ಯಜನ ಪ್ರೀತಿಯಲಿ
ತಮ್ಮಿಯಾ ಕಾರ್ಯವನು ಬದಿಗೊತ್ತಿ ಚಿತ್ತೈಸೆ
ಜೋಡಿಸುತ ಕರಗಳನು ಮಹನೀಯರೆಲ್ಲರನು
ವಿನಯದಿಂ ಸ್ವಾಗತಿಸುತ ಧನ್ಯರಾಗಿಹೆವು

ಲೇಖನವ, ತನು ಮನದ ಧನದ ನೆರವನೀಯುತ್ತ
ಆಗಮಿಸಿ ನಮ್ಮಿಯಾ ಬೆಂಬಲಕೆ ನಿಂತಿರುವ
ಪರವೂರಿನಿಂದಾಗಮಿಸಿ ಸಂತಸವ ಹೆಚ್ಚಿಸಿಹ
ಸರ್ವರನು ಕೈಮುಗಿದು ಬರಮಾಡಿಕೊಳ್ಳುವೆವು.

ಅಭಿನಂದನಾಗ್ರಂಥ ಸಮರ್ಪಣೆಯ ಸಂದರ್ಭದಲ್ಲಿ ಹಾಡಿದ ಸ್ವಾಗತಗೀತೆ

## ಶುಭಮಸ್ತು

ಮಲೆನಾಡ ಬುಡದಲ್ಲಿ ಬಯಲನಾಡ ಅಂಚಲ್ಲಿ
ಹೆಸರೊಂದು ಗ್ರಾಮಕೆ ಅದು ಲಿಂಗದಹಳ್ಳಿ
ನೆಲೆಸಿಹರು ರೈತರು ಸಮಭಾವ ಹೊತ್ತವರು
ಶಾಲಿ, ಕಲ್ಪತರು, ಕೌಂಗು, ರಾಗಿ ಬೆಳೆದಿಹರು

ಅಲ್ಲಿಹರು, ದ್ವಿಜವರರು, ಉಸಿರಿನಲಿ ನಿಃಸ್ಪೃಹರು
ಜೀವನದಿ ಸರಳರು, ಚಿಂತನದಿ ಉನ್ನತರು
ನುಡಿ-ನೂರರ ಬದಲು ನಡೆಯಲ್ಲಿ ನೋಂತವರು
ಹೆಸರಿಗೆ ಮನಸೋಲದಿಹ ಬಾಳ್ಗುರಿಯಲಿ ಸಮರಸರು

ನರಸಿಂಹರೆನಿಸಿಹಿರಿ, ನಸುನಗುತ ನಡೆದಿಹಿರಿ
ನವಸಂಸ್ಕೃತಿಯ ರೂಪದೊಳು ಸುಧಾರಣೆಯ ತಂದಿಹಿರಿ
ವಿಪ್ರರ್ಷಿಯಾಗಿಹಿರಿ, ಮದ-ಮೋಹ ಕೊಳೆ ತೊಳೆದು
ಮೂರ್ತಿವಾಮನವಾದರೂ ಮುಗಿಲೆತ್ತರೇರಿಹಿರಿ

ಸಂಸ್ಕೃತವ ಕಲಿತಿಹಿರಿ, ಶಾಸ್ತ್ರಗಳಲಿ ನುರಿತಿಹಿರಿ
ಗ್ರಂಥಗಳ ಬರೆದಿಹಿರಿ, ಮಂತ್ರಗಳ ಪಠಿಸಿಹಿರಿ
ಭಂಡಿಗಡಿ, ಕೂಡಲೀ ಗುರುಗಳಿಗೆ ಕಲಿಸಿಹಿರಿ
ಭೀಮನಕಟ್ಟೆ ಗುರುಗಳಿಗೂ ಗುರುವಾಗಿ ಬೆಳೆದಿಹಿರಿ

ಸ್ವಗ್ರಾಮ ಕುವರರಿಗು ವೇದ, ಸಂಸ್ಕೃತ ಕಲಿಸಿ
ಇಹಪರಗಳೆರಡರ ಅರಿವ ಮೂಡಿಸಿಹಿರಿ
ನೆರೆನಾಡು ಕೇರಳ, ತಮಿಳುನಾಡಿಗು ಹರಿದಿಹುದು
ಪೂರ್ವೋತ್ತರ ಮೀಮಾಂಸೆ ವಾರ ತುರಿಯಹೊನಲು

ಸಂಘವನು ಕಟ್ಟುತಲಿ ಸಮುದಾಯ ಜೀವನಕೆ
ಸ್ಪಂದಿಸುತ ಶ್ರೀರಾಮ ಮಂದಿರವ ನಿಲಿಸಿಹಿರಿ
ಬಹುಮಾನ ಪ್ರತಿಫಲದಿ ಅನಪೇಕ್ಷೆ ತೋರುತಲಿ
ನಾಡಿನುದ್ದಗಲಕೂ ನಗುಮುಖದಿ ಹೊರಟಿಹಿರಿ

ಊರನ್ನು ಬೆಳಗಿಸಲು, ಜನರನ್ನು ಬೆಳಗಿಸಲು
ಸಂಸ್ಕೃತಿಯನುಳಿಸಲು, ಕೈಂಕರ್ಯ ನಡೆಸಿಹಿರಿ
ಹಿರಿಚೇತನ ನೀವಾಗಿ, ಕಣ್ಮಣಿಯು ನಮಗಾಗಿ
ಬಾಳಿರಿ, ಭಗವಂತನ ಸಂದೇಶವಾಗಿ

ಇದೋ ನಮ್ಮೆಲ್ಲರ ನಮನ ನುಡಿರೂಪ ಸನ್ಮಾನ
ಇದು ನಮ್ಮ ಬಿಗುಮಾನ, ನಿಮಗೇಕೆ ಬಹುಮಾನ ?
ಎಲೆಮರೆಯ ಕಾಯಾಗಿ, ಬಾಳುತಿಹ ನೀವೆಂದೂ
ಹರಸುತಲಿ ನಮ್ಮನ್ನು, ಜಯಿಸಿ ಶತಮಾನ.

೧೬.೫.೧೯೯೩ ರಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ನೀಡಿದ ನುಡಿಹಾರ

***ವಿದ್ವಾನ್ ಬಿ.ಲಕ್ಷ್ಮೀನಾರಾಯಣ್***

# ೪. ಸಂದೇಶಗಳು

## ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ
## ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ - ೫೭೭ ೧೩೯

ದಿನಾಂಕ ೩೦.೭.೨೦೦೩ರ ನಿಮ್ಮ ಪತ್ರ ತಲುಪಿ ಶ್ರೀ ಶ್ರೀಗಳವರ ಚರಣಾರವಿಂದಗಳಲ್ಲಿ ಸಮರ್ಪಿಸಲಾಯಿತು. ವೇದರತ್ನ, ವಿದ್ಯಾಸಾಗರ ವೇ. ಬ್ರ. ಶ್ರೀ ಲಿಂಗದಹಳ್ಳಿ ನರಸಿಂಹಮೂರ್ತಿಯವರ ಅಭಿನಂದನಾ ಸಮಾರಂಭವು ಮುಂಬರುವ ತಿಂಗಳಲ್ಲಿ ನಡೆಯಲಿದ್ದು, ಆ ಸಂದರ್ಭದಲ್ಲಿ ಅಭಿನಂದನಾ ಗ್ರಂಥವೊಂದನ್ನು ಹೊರತರಲಿರುವ ವಿಷಯ ತಿಳಿದು ಶ್ರೀ ಶ್ರೀ ಗಳವರು ಸಂತೋಷಪಟ್ಟಿದ್ದಾರೆ. ಅಭಿನಂದನಾ ಸಮಾರಂಭ ಯಶಸ್ವಿಯಾಗಿ ನಡೆದು, ಅಭಿನಂದನಾ ಗ್ರಂಥವು ಸುಂದರವಾಗಿ ಮೂಡಿಬರಲೆಂದೂ, ಶ್ರೀ ಶಾರದಾ ಚಂದ್ರಮೌಳೀಶ್ವರರ ಕೃಪೆಯಿಂದ ಶ್ರೀಯುತ ನರಸಿಂಹಮೂರ್ತಿಯವರಿಗೆ ದೀರ್ಘಾಯುರಾರೋಗ್ಯಾದಿ ಶ್ರೇಯಸ್ಸು ಲಭಿಸಲೆಂದೂ ಶ್ರೀಶ್ರೀಗಳವರು ಆಶೀರ್ವದಿಸಿರುತ್ತಾರೆ.

ಶ್ರೀಶ್ರೀಗಳವರು ಅನುಗ್ರಹಿಸಿರುವ ಮಂತ್ರಾಕ್ಷತೆ ಮತ್ತು ಶ್ರೀ ಶಾರದಾ ಚಂದ್ರಮೌಳೀಶ್ವರರ ಪ್ರಸಾದವನ್ನು ಇದರೊಂದಿಗೆ ಕಳುಹಿಸಿರುತ್ತೇನೆ.

*ಇಂತು, ಆಪ್ತಕಾರ್ಯದರ್ಶಿ*

## ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦
## ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ
## ಶಿವಾಚಾರ್ಯ ಭಗವತ್ಪಾದರು, ಬಾಳೆಹೊನ್ನೂರು - ೫೭೭ ೧೧೨ (ಚಿಕ್ಕಮಗಳೂರು ಜಿಲ್ಲೆ)

ಕರ್ನಾಟಕದ ಇತಿಹಾಸದಲ್ಲಿ ಚಿಕ್ಕಮಗಳೂರು ಜಿಲ್ಲೆ ಹಲವು ಹತ್ತು ವೈಶಿಷ್ಟ್ಯಗಳಿಗೆ ಕಾರಣವಾಗಿದೆ. ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರಿಂದ ಸಂಸ್ಥಾಪಿಸಲ್ಪಟ್ಟ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರೀ ಪೀಠವು ಭದ್ರಾನದಿಯ ದಡದಲ್ಲಿ ನಿರ್ಮಾಣಗೊಂಡರೆ, ಅದ್ವೈತಮತದ ಶ್ರೀ ಶಂಕರಾಚಾರ್ಯರ ಶಾರದಾಪೀಠವು ತುಂಗಾನದಿಯ ದಡದ ಮೇಲೆ ಶೃಂಗೇರಿಯಲ್ಲಿ ಸ್ಥಾಪಿತಗೊಂಡಿದೆ. ಹಲವು ಸುಪ್ರಸಿದ್ಧವಾದ ದೇವಾಲಯಗಳು, ಮಠಮಂದಿರಗಳು ಹಾಗೂ ಪ್ರೇಕ್ಷಣೀಯ ಸ್ಥಳಗಳು ಇಲ್ಲಿವೆ. ಕನ್ನಡ ನಾಡಿನಲ್ಲಿ ಸಂಸ್ಕೃತ ಪಂಡಿತರ ಮತ್ತು ಸಾಹಿತಿಗಳ ಸಂಖ್ಯೆ ಅಗಣಿತ. ನಾಡುನುಡಿಗಾಗಿ ಮತ್ತು ಧರ್ಮಸಂಸ್ಕೃತಿ ಸಂವರ್ಧನೆಗಾಗಿ ಅನವರತಕಾಲ ಶ್ರಮಿಸಿದವರು ಇಲ್ಲಿದ್ದಾರೆ. ಈ ಅಗ್ರಪಂಕ್ತಿಯಲ್ಲಿ ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಗ್ರಾಮದ ಶ್ರೀ ನರಸಿಂಹಮೂರ್ತಿಗಳವರ ಹೆಸರು ಎದ್ದು ಕಾಣುತ್ತದೆ. ಶ್ರೀಯುತರು ವಿದ್ಯಾನಿಧಿಯಾಗಿ, ವೇದರತ್ನ ಪ್ರವೀಣರಾಗಿ, ಸಂಸ್ಕೃತ ಪ್ರಾಧ್ಯಾಪಕರಾಗಿ, ಜ್ಯೋತಿಶ್ಶಾಸ್ತ್ರ ವಿದ್ವಾಂಸರಾಗಿ, ಸಾಹಿತ್ಯದ ಪ್ರೇಮಿಗಳಾಗಿ, ಅಲಂಕಾರ, ವ್ಯಾಕರಣ, ವೇದಾಂತಗಳ ವಿದ್ವಾಂಸರಾಗಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ತೊಂಬತ್ತೆರಡರ ಹೊಸ್ತಿಲಲ್ಲಿ ಹೆಜ್ಜೆ ಹಾಕುತ್ತಿರುವ ಶ್ರೀಯುತರ ಬದುಕು ಬರಹ - ಜೀವನದ ಸಿದ್ಧಿಸಾಧನೆ ಇನ್ನಿತರರಿಗೆ ಅನುಕರಣೀಯ. ಇಂತಹ ವಿದ್ವಾಂಸರನ್ನು ಲಿಂಗದಹಳ್ಳಿಯ 'ಆಸ್ತಿಕವಿವರ್ಧಿನಿ ಸಂಘ' ಗೌರವಿಸಲಿರುವುದು ಹೆಮ್ಮೆಯ ಸಂಗತಿ. ಈ ಕಾರ್ಯಕ್ರಮದ ಸವಿನೆನಪಿಗಾಗಿ ಸುಂದರ ಸ್ಮರಣ ಸಂಪುಟವನ್ನು ಹೊರತರಲಿರುವುದು ಈ ನಾಡಿನ ಪುಣ್ಯೋದಯವೆಂದೇ ಭಾವಿಸುತ್ತೇನೆ. ಈ ಅಭಿನಂದನಾಗ್ರಂಥದಲ್ಲಿ ಶ್ರೀ ನರಸಿಂಹಮೂರ್ತಿಗಳವರ ಜೀವನ ಸಾಧನೆ ಹಾಗೂ ಅಧ್ಯಾತ್ಮ ಜ್ಞಾನದ ಉತ್ತಮ ಬರಹಗಳು ಮೈದುಂಬಿ ಬರಲಿ. ಈ ಕಾರ್ಯವನ್ನು ಕೈಗೊಂಡ ಸಂಘದ ಎಲ್ಲಾ ಸದಸ್ಯರಿಗೆ ಶುಭ ಹಾರೈಕೆಗಳು.

ಪರಮದಯಾಳು ಶ್ರೀಪಾರ್ವತೀ ಪರಮೇಶ್ವರರು ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಸರ್ವರಿಗೂ ಮಂಗಲಪರಂಪರೆಯನ್ನು ಅನುಗ್ರಹಿಸಲಿ.

## ಶ್ರೀ ಧರ್ಮಸ್ಥಳ - ೫೭೪ ೨೧೬, ದಕ್ಷಿಣ ಕನ್ನಡ, ಕರ್ನಾಟಕ

ಆಸ್ತಿಕ ವಿವರ್ಧಿನಿ ಸಂಘ, ಲಿಂಗದಹಳ್ಳಿ- ಇದರ ಆಶ್ರಯದಲ್ಲಿ ವೇ. ಬ್ರ. ಶ್ರೀ ನರಸಿಂಹಮೂರ್ತಿಯವರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿರುವ ವಿಚಾರ ತಿಳಿದು ಸಂತೋಷವಾಯಿತು. ಶ್ರೀಯುತರು ಸಂಸ್ಕೃತ ವಿದ್ವಾಂಸರಾಗಿ, ಪುರೋಹಿತರಾಗಿ, ಸಲ್ಲಿಸಿರುವ ಸಾಮಾಜಿಕ ಸೇವೆಯನ್ನು

ಗುರುತಿಸಿ, ಸ್ಥಳೀಯ ಸಮಾಜ ಬಾಂಧವರೆಲ್ಲ ಸಂಘಟಿತರಾಗಿ ಅವರನ್ನು ಅಭಿನಂದಿಸಿ ಗೌರವಿಸುತ್ತಿರುವುದು ಔಚಿತ್ಯಪೂರ್ಣವಾಗಿದೆ. *ಈ* ಶುಭ ಸಂದರ್ಭದ ಸವಿನೆನಪಿಗಾಗಿ ಅಭಿನಂದನಾ ಗ್ರಂಥವೊಂದನ್ನು ಸಮರ್ಪಿಸಲಿರುವುದು ಸಮಯೋಚಿತವಾಗಿದೆ. ಶ್ರೀ ನರಸಿಂಹಮೂರ್ತಿಯವರ ಜೀವನ ಸಾಧನೆಯನ್ನು ಪರಿಚಯಿಸಬಲ್ಲ ವೈಚಾರಿಕ ಲೇಖನಗಳಿಂದೊಡಗೂಡಿ ಅಭಿನಂದನಾ ಗ್ರಂಥವು ಆಕರ್ಷಕವಾಗಿ ಪ್ರಕಟವಾಗಲೆಂದು ಆಶಿಸುತ್ತೇನೆ. *ಈ* ದಿಸೆಯಲ್ಲಿ ನಿಮ್ಮೆಲ್ಲ ಪ್ರಯತ್ನ - ಪರಿಶ್ರಮ ಸಫಲವಾಗುವಂತೆ ಶ್ರೀ ಮಂಜುನಾಥಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

***ಡಿ. ವೀರೇಂದ್ರ ಹೆಗ್ಗಡೆಯವರು***

**ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ಅಮ್ಮನವರ ದೇವಸ್ಥಾನ**

ಆಸ್ತಿಕ ವಿವರ್ಧಿನಿ ಸಂಘದವರು ವೇದರತ್ನ, ವಿದ್ಯಾಸಾಗರ, ವೇ. ಬ್ರ. ಶ್ರೀ ಲಿಂಗದಹಳ್ಳಿ ನರಸಿಂಹಮೂರ್ತಿಗಳವರನ್ನು ಸನ್ಮಾನಿಸಿ, ಅವರಿಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸುತ್ತಿರುವ ವಿಚಾರ ಅತ್ಯಂತ ಶ್ಲಾಘನೀಯವಾದುದು. ಪ್ರಕಾಂಡ ಪಂಡಿತರಾದ ಶ್ರೀಯುತರು ನಾಟಕಾಂತ ಸಾಹಿತ್ಯ, ಸಾಹಿತ್ಯ ವಿದ್ವತ್, ಅಲಂಕಾರ ವಿದ್ವತ್, ವೇದಾಂತ, ಮೀಮಾಂಸಾ ಶಾಸ್ತ್ರ, ಜ್ಯೋತಿಶ್ಯಾಸ್ತ್ರ ಹೀಗೆ ಎಲ್ಲಾ ವೈದಿಕ ಶಾಸ್ತ್ರಗಳ ಬಗ್ಗೆ ಅಧಿಕಾರಯುತ ವಿಶೇಷ ಜ್ಞಾನವನ್ನು ಪಡೆದವರು. ಸ್ವತಃ ಸಂಸ್ಕೃತ ಶಾಲೆಯನ್ನು ಆರಂಭಿಸಿ, ಅಧ್ಯಾಪಕರಾಗಿ ವೈದಿಕಲೋಕಕ್ಕೆ ಅನುಪಮ ಸೇವೆಸಲ್ಲಿಸಿದ ಆದರಣೀಯ ವಿಪ್ರರು. ತಮ್ಮ *ಈ* ಇಳಿ ವಯಸ್ಸಿನಲ್ಲಿಯೂ, ಸಮಸ್ತ ಜನಾಂಗದವರಿಗೆ ಪೌರೋಹಿತ್ಯ ಸೇವೆಯನ್ನು ನೀಡುತ್ತಿರುವ, ಸರಳ ಹಾಗೂ ಸಜ್ಜನಿಕೆಯ ಸಾಕಾರ ಮೂರ್ತಿಯಾದ ಶ್ರೀಯುತರ ಸೇವೆಗೆ ನೀಡಲಾಗುವ ಯಾವುದೇ ಪ್ರಶಸ್ತಿಯೂ ತನ್ನ ಮೌಲ್ಯವನ್ನು ಉಳಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಸನ್ಮಾನ ಸಂದರ್ಭದಲ್ಲಿ ಹೊರತರಲಿರುವ ವಿಶೇಷ ಅಭಿನಂದನಾ ಗ್ರಂಥವು ಶ್ರೀಯುತರ ಸಂಪೂರ್ಣ ಸಾಧನೆ, ಅವರು ಪಟ್ಟ ಶ್ರಮ ಹಾಗೂ ಮುಂದಿನ ವೈದಿಕ ಪೀಳಿಗೆಯವರಿಗೆ ಅವರ ಸಂದೇಶ ಇತ್ಯಾದಿ ಎಲ್ಲ ವಿಚಾರಗಳನ್ನೊಳಗೊಂಡ ಒಂದು ಪರಿಚಯಾತ್ಮಕ ಜೀವನಚರಿತ್ರಾಗ್ರಂಥವಾಗಿ, ತನ್ನ ಅಂದವಾದ ಮುದ್ರಣ, ವಿಶೇಷ ವಿನ್ಯಾಸದಿಂದ ಒಂದು ಸಂಗ್ರಹಾತ್ಮಕ ಗ್ರಂಥವಾಗಿ ಮೂಡಿಬರಲೆಂದು ಶುಭಕಾಮನೆಗಳನ್ನು ವ್ಯಕ್ತಪಡಿಸುತ್ತಿದ್ದೇನೆ.

*ಸರ್ವೇ ಜನಾಃ ಸುಖಿನೋ ಭವನ್ತು*
*ಸಮಸ್ತ ಸನ್ಮಂಗಳಾನಿ ಭವನ್ತು*

*ಧರ್ಮಕರ್ತರು, ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ ಅಮ್ಮನವರ ದೇವಸ್ಥಾನ, ಹೊರನಾಡು* ***ಜಿ. ಭೀಮೇಶ್ವರ ಜೋಷಿ***

**ಸಿ.ಆರ್. ಸಗೀರ್ ಅಹ್ಮದ್, ವಸತಿ ಸಚಿವರು, ವಿಧಾನಸೌಧ, ಬೆಂಗಳೂರು**

ವಿದ್ಯಾಸಾಗರ ವೇ.ಬ್ರ.ಶ್ರೀ ಲಿಂಗದಹಳ್ಳಿ ನರಸಿಂಹಮೂರ್ತಿಗಳ ಅಭಿನಂದನಾ ಗ್ರಂಥ ಸಮಿತಿ, ಲಿಂಗದಹಳ್ಳಿ ಇವರ ವತಿಯಿಂದ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳವರಿಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸುತ್ತಿರುವ ವಿಷಯವನ್ನು ತಿಳಿದು ತುಂಬಾ ಸಂತೋಷವಾಯಿತು. ಶ್ರೀಯುತರು ಆಸ್ತಿಕ ವಿವರ್ಧಿನಿ ಸಂಘದ ಅಧ್ಯಕ್ಷರೂ, ಸಮಾಜ ಸೇವಾಕರ್ತ್ಯಗಳೂ, ಪ್ರಕಾಂಡ ಸಂಸ್ಕೃತ-ವಿದ್ವಾಂಸರೂ, ವೇದರತ್ನ ಪ್ರಶಸ್ತಿ ವಿಜೇತರೂ ಆಗಿದ್ದು, ಅವರಿಗೆ ದಯಾಮಯನಾದ ಆ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾ, *ಈ* ಸಂದರ್ಭದಲ್ಲಿ ಹಮ್ಮಿಕೊಂಡಿರುವ ಗ್ರಂಥಸಮರ್ಪಣೆಯು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ,**
**ಪಂಪ ಮಹಾಕವಿ ರಸ್ತೆ, ಬೆಂಗಳೂರು - ೫೬೦ ೦೧೮**

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾ. ಲಿಂಗದಹಳ್ಳಿ ಗ್ರಾಮದ ವಿದ್ವಾನ್ ನರಸಿಂಹಮೂರ್ತಿಗಳವರಿಗೆ ಇದೇ ಗ್ರಾಮದ ಆಸ್ತಿಕ ವಿವರ್ಧಿನಿ ಸಂಘದ ವತಿಯಿಂದ ದಿನಾಂಕ ೨.೧೧.೨೦೦೩ರಂದು ಅಭಿನಂದನಾ ಗ್ರಂಥವೊಂದನ್ನು ಸಮರ್ಪಿಸುವ ವಿಷಯ ತಿಳಿದು ಅತೀವ ಸಂತಸವಾಯ್ತು. ಸಮಾರಂಭವು

ಅತ್ಯಂತ ಯಶಸ್ವಿಯಾಗಿ ನಡೆಯಲೆಂದು ಶುಭ ಹಾರೈಸುತ್ತೇನೆ. ಅಭಿನಂದನಾ ಗ್ರಂಥವು ಸಂಗ್ರಹಯೋಗ್ಯವಾಗಿ, ಮುಂದಿನ ಪೀಳಿಗೆಯವರಿಗೆ ವಿದ್ವಾನ್ ನರಸಿಂಹಮೂರ್ತಿಗಳ ಆದರ್ಶವು, ದಾರಿದೀಪವಾಗಲೆಂದು ಸಹ ಹಾರೈಸುತ್ತೇನೆ. ವೇದರತ್ನ ಪುರಸ್ಕೃತರಾದ ವೇ..ಬ್ರ. ಶ್ರೀ ನರಸಿಂಹಮೂರ್ತಿಗಳವರು ನೂರು ಕಾಲ ಬಾಳಿ, ಶ್ರೀಯುತರ ಮಾರ್ಗದರ್ಶನದಿಂದ ಇಂದಿನ ಪೀಳಿಗೆಯವರು ವೇದ ಮತ್ತು ಸಂಸ್ಕೃತ ಕಲಿಯುವಂತಾಗಿ ಭಾರತ ಸಂಸ್ಕೃತಿಯನ್ನು ಉಳಿಸುವಂತಾಗಲೆಂದು ಆ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.
ನಮಸ್ಕಾರಗಳೊಂದಿಗೆ,

*ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ* ***ಬಿ.ಎನ್.ವಿ. ಸುಬ್ರಹ್ಮಣ್ಯ***

## ಕೌಶಿಕ ಸಂಕೇತಿ ಸಂಘ (ರಿ.), ಬೆಂಗಳೂರು

*ಕೋಟಿ ನಮನಗಳು,*

ಲಿಂಗದಹಳ್ಳಿಯ ಆಸ್ತಿಕ ವಿವರ್ಧಿನಿ ಸಂಘದವರು ಈ ವರ್ಷ ನವೆಂಬರ್ ತಿಂಗಳಿನಲ್ಲಿ ವೇದರತ್ನ, ವಿದ್ಯಾಸಾಗರ ವೇ. ಬ್ರ. ಶ್ರೀ ಲಿಂಗದಹಳ್ಳಿಯ ನರಸಿಂಹಮೂರ್ತಿಯವರಿಗೆ ಒಂದು 'ಅಭಿನಂದನಾ ಗ್ರಂಥ 'ವನ್ನು ಸಮರ್ಪಿಸುವ ಯೋಜನೆ ಪ್ರಶಂಸಾರ್ಹವೂ ಸಮಯೋಚಿತವೂ ಆಗಿದೆ. ಶ್ರೀ ನರಸಿಂಹಮೂರ್ತಿಯವರು ಮಲೆನಾಡಿನ ಸೆರಗಿನಲ್ಲಿರುವ ಲಿಂಗದಹಳ್ಳಿಯಲ್ಲಿ ಜನಿಸಿ, ಅವಿರತ ಅಭ್ಯಾಸದಿಂದ ಪ್ರಕಾಂಡ ಪಂಡಿತರಾಗಿ ನಾಡಿಗೇ ಧಾರ್ಮಿಕ ದಿಗ್ಗಜರಾಗಿ ಹೊರಹೊಮ್ಮಿದ್ದು ನಮ್ಮ ಸುಕೃತ. ಶ್ರೀಯುತರು ಎಲೆಯ ಮರೆಯ ಕಾಯಿನಂತೆ ಸರಳಜೀವನ ಹಾಗೂ ಸತತ ತಪಸ್ಸಿನಿಂದ ಧಾರ್ಮಿಕ ಕ್ಷೇತ್ರದಲ್ಲೇ ಧ್ರುವತಾರೆಯಂತೆ ಬೆಳಗಿದ್ದಾರೆ. ಇಡೀ ಸಂಕೇತಿ ಸಮುದಾಯಕ್ಕೆ ಹೆಮ್ಮೆಯ ಪುತ್ರರಾಗಿ ವಿಜೃಂಭಿಸಿದ್ದಾರೆ. ಶ್ರೀಯುತರ ವಿದ್ವತ್ ಪೂರ್ಣ ಭಾಷಣಗಳು ಎಲ್ಲಾ ಸಭಿಕರನ್ನೂ ಮಂತ್ರಮುಗ್ಧರನ್ನಾಗಿ ಮಾಡುತ್ತಿರುವುದು ಅವರ ಬೃಹತ್ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಅವರ ಜೀವನ ಸಕಲರಿಗೂ ಆದರ್ಶವಾಗಿದೆ. ಅವರಿಗೆ ಪರಮಾತ್ಮನು ಶತಾಯುಸ್ಸನ್ನು ನೀಡಲಿ, ಇನ್ನೂ ನಮ್ಮ ಸಮಾಜಕ್ಕೆ ಹಾಗೂ ಆಧ್ಯಾತ್ಮಿಕ ಪ್ರಪಂಚಕ್ಕೆ ಹೆಚ್ಚಿನ ಸೇವೆ ಅವರಿಂದಾಗಲಿ ಎಂದು ಪ್ರಾರ್ಥಿಸುತ್ತೇನೆ. ಇಡೀ ಸಂಕೇತಿ ಸಮುದಾಯ - ವಿಶೇಷವಾಗಿ ಸಂಕೇತಿ ಸಂಘವು - ಅವರಿಗೆ ಕೋಟಿ ನಮನಗಳನ್ನು ಅರ್ಪಿಸುತ್ತದೆ.

*ಅಧ್ಯಕ್ಷರು, ಕೌಶಿಕ ಸಂಕೇತಿ ಸಂಘ (ರಿ.)* ***ಕೆ.ವಿ. ಅರ್ಕನಾಥ್***

*ಮೈಸೂರು*

## ಎಂ.ಪಿ. ಬಿರ್ಲಾ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಬೆಂಗಳೂರು

ಲಿಂಗದಹಳ್ಳಿ ವಿದ್ವಾನ್ ನರಸಿಂಹಮೂರ್ತಿಯವರು ಸಭ್ಯತೆ, ಸೌಜನ್ಯ, ಸರಳತೆಯ ಸಾಕಾರಮೂರ್ತಿಗಳಾಗಿರುತ್ತಾರೆ. ಶಾಸ್ತ್ರದಲ್ಲಿ, ಕೃತಿಯಲ್ಲಿ ನಿಷ್ಪೃಷ್ಟ ಜ್ಞಾನ ಹೊಂದಿದವರಾಗಿರುತ್ತಾರೆ. ಲಿಂಗದಹಳ್ಳಿಯ ಬಂಧು-ಬಾಂಧವರು ಶ್ರೀಯುತರ ಬದುಕು, ಸೇವೆಯನ್ನು ನೆನೆದು ಗೌರವಿಸುವುದು ಮತ್ತು ಇದೇ ಸಂದರ್ಭದಲ್ಲಿ ಅಭಿನಂದನಾ ಗ್ರಂಥವನ್ನು ಸಮರ್ಪಿಸುತ್ತಿರುವುದು ನಿಜಕ್ಕೂ ಸ್ತುತ್ಯರ್ಹ. ಈ ಮೂಲಕ ಅಲ್ಲಿಯ ಬಂಧು-ಬಾಂಧವರು ತಮ್ಮನ್ನು ತಾವೇ ಗೌರವಿಸಿಕೊಂಡಂತಾಗಿದೆ.

*ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಪಿ.ಬಿರ್ಲಾ ಫೌಂಡೇಶನ್* ***ಮತ್ತೂರು ಕೃಷ್ಣಮೂರ್ತಿ***
*ವೇದ ಸಂಸ್ಕೃತ ಪಾಠಶಾಲೆ, ಬೆಂಗಳೂರು*

## ಜಿಲ್ಲಾ ಬ್ರಾಹ್ಮಣ ಮಹಾಸಭಾ, ಬಸವನಹಳ್ಳಿ, ಚಿಕ್ಕಮಗಳೂರು

ಲಿಂಗದಹಳ್ಳಿ ನಿವಾಸಿ ವೇದಬ್ರಹ್ಮ, ವಿದ್ವತ್ ಶಿಖರ ನರಸಿಂಹಮೂರ್ತಿಯವರ ಅಭಿಮಾನಿಗಳು ಒಂದು ಅಭಿನಂದನಾ ಗ್ರಂಥ ಹೊರತರುತ್ತಿರುವುದು ಸಂತಸದ ಸಂಗತಿ ಅಷ್ಟೇ ಅಲ್ಲ, ಸ್ತುತ್ಯರ್ಹವಾದುದೂ ಹೌದು. ಈ ನಾಡಿನ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ ಹಿರಿಯರಲ್ಲಿ ವಿದ್ವಾನ್ ನರಸಿಂಹಮೂರ್ತಿಯವರೂ ಒಬ್ಬರು. ವೇದ, ವೇದಾಂತ, ಆಗಮ, ಅದ್ವೈತ ಹಾಗೂ ಸಾಹಿತ್ಯ ವಿಷಯಗಳಲ್ಲಿ ಅಗಾಧ

ಜ್ಞಾನವನ್ನು ಸಂಪಾದಿಸಿರುವ ಅವರು, ಲಿಂಗದಹಳ್ಳಿಯಲ್ಲಿ ಒಂದು ಆಧ್ಯಾತ್ಮಿಕ ಪರಂಪರೆಯನ್ನು ಸೃಜಿಸಿದ್ದಾರೆ ಎಂದರೆ ತಪ್ಪಾಗಲಾರದು. **ಕ್ರಿಯಾಸಿದ್ಧಿಸ್ಸತ್ತ್ವೇ ಭವತಿ ಮಹತಾಂ ನೋಪಕರಣೇ** ಎಂಬ ಉಕ್ತಿಯಂತೆ ಜ್ಞಾನವೃದ್ಧ ನರಸಿಂಹಮೂರ್ತಿಯವರು, ಪರಿಸರದ ಉಪಕರಣಗಳಿಂದ ದೊಡ್ಡವರಾಗದೆ, ತಮ್ಮ ಶ್ರದ್ಧಾಸಕ್ತಿಗಳಿಂದ ಕಾರ್ಯದಲ್ಲಿ ಜಯಶೀಲರಾಗಿದ್ದಾರೆ.

ಇಂತಹ ಮಹಾನ್ ವ್ಯಕ್ತಿಗೆ ನವೆಂಬರ್ ಎರಡರಂದು ಅಭಿನಂದನಾ ಸಮಾರಂಭವನ್ನು ಲಿಂಗದಹಳ್ಳಿಯಲ್ಲಿ ಹಮ್ಮಿಕೊಂಡಿರುವುದು ಮಹತ್ತ್ವದ ವಿಷಯವೇ ಸರಿ. ಈ ಸುಸಂದರ್ಭದಲ್ಲಿ ಅವರ ಅಭಿಮಾನಿಗಳು ಹೊರತರುತ್ತಿರುವ ಅಭಿನಂದನಾಗ್ರಂಥ ಮಹತ್ತ್ವಪೂರ್ಣ ಲೇಖನಗಳನ್ನೊಳಗೊಂಡು ವಿದ್ವಜ್ಜನರ ಜ್ಞಾನತೃಷೆಯನ್ನು ತಣಿಸಲಿ ಎಂದು ಆಶಿಸುತ್ತೇನೆ.

ವಿಪ್ರಕುಲಶ್ರೇಷ್ಠ ನರಸಿಂಹಮೂರ್ತಿಯವರಿಗೆ ದಯಾಮಯನಾದ ಭಗವಂತ ಹಾಗೂ ಆದಿಶಂಕರರು ಆಯುರಾರೋಗ್ಯ ದಯಪಾಲಿಸಿ ಶತಾಯುಷಿಯಾಗುವಂತೆ ಹರಸಲಿ.

*ಗೌರವ ಅಧ್ಯಕ್ಷರು, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಚಿಕ್ಕಮಗಳೂರು* ***ಡಿ.ಹೆಚ್. ನಟರಾಜ್***


## ಔಚಿತ್ಯಪೂರ್ಣ

ವೇದರತ್ನ ವಿದ್ಯಾಸಾಗರ ವೇ. ಬ್ರ. ಶ್ರೀ ಪರಮಪೂಜ್ಯ ಲಿಂಗದಹಳ್ಳಿ ನರಸಿಂಹಮೂರ್ತಿಗಳವರಿಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸುವ ವಿಚಾರ ವೇದ್ಯವಾಯಿತು. ಇದು ನಿಜವಾಗಿಯೂ ಔಚಿತ್ಯಪೂರ್ಣವಾಗಿದೆ. ನಾಟಕ, ಸಾಹಿತ್ಯ, ವೇದಶಾಸ್ತ್ರ, ವ್ಯಾಕರಣ ವಿದ್ವತ್, ಸಾಹಿತ್ಯ ವಿದ್ವತ್, ಅಲಂಕಾರ ವಿದ್ವತ್, ವೇದಾಂತ ವಿದ್ವತ್, ಮೀಮಾಂಸಾ ವಿದ್ವತ್, ಜೋತಿಶ್ಯಾಸ್ತ್ರ ವಿದ್ವತ್ ಇಂತಹ ಪ್ರಮುಖ ಶಾಸ್ತ್ರಗಳ ವಿದ್ವಾಂಸರಾಗಿ, ಬಹು ಶ್ರದ್ಧೆಯಿಂದ, ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿರುವುದಲ್ಲದೇ ಅನೇಕ ಮಠಾಧಿಪತಿಗಳಿಗೂ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಅವರು ಅತ್ಯಂತ ಸಜ್ಜನರೂ, ಸದ್ಗುಣವುಳ್ಳವರೂ, ಸರಳರೂ, ಸಹೃದಯತೆ ಹೊಂದಿದ ಅತ್ಯಂತ ಗೌರವಾನ್ವಿತ ವ್ಯಕ್ತಿಯೂ ಆಗಿದ್ದಾರೆ. ಮೂರು ವರ್ಷಗಳ ಕಾಲ ನಮ್ಮ ಮನೆಯಲ್ಲಿ ಅವರು ವಾಸ್ತವ್ಯ ಮಾಡಿದಂತಹ ದಿನಗಳನ್ನು ನಾವೆಂದೂ ಮರೆಯಲಾರೆವು. ಅಂತಹ ಒಬ್ಬ ಪೂಜ್ಯ ವ್ಯಕ್ತಿಯು ನಮ್ಮ ಜೊತೆಯಲ್ಲಿದ್ದದ್ದೂ ನಮ್ಮ ಪೂರ್ವದ ಪುಣ್ಯಫಲವೆಂದೇ ಭಾವಿಸಿದ್ದೇವೆ. ಎಂದೂ ಯಾವುದೇ ಸಹಾಯವನ್ನೂ ಅಪೇಕ್ಷಿಸದ ಅತ್ಯಂತ ಸಂಕೋಚ ಸ್ವಭಾವದ ವ್ಯಕ್ತಿ. **ತುಂಬಿದ ಕೊಡ ತುಳುಕುವುದಿಲ್ಲ** ಎಂಬುದಕ್ಕೆ ಅವರೇ ಒಂದು ನಿದರ್ಶನ. ನಮ್ಮ ಮನೆಯವರೆಲ್ಲರಿಗೂ ಎಂದೂ ಪ್ರಾತಃಸ್ಮರಣೀಯರು. ಅವರು ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದು ಕಾಲುಮುಟ್ಟಿ ನಮಸ್ಕರಿಸುವ ಪೂಜ್ಯ ಭಾವನೆ ಮೂಡಿಸುವಂತಹ ಮೇರು ವ್ಯಕ್ತಿತ್ವ ಅವರದ್ದು. ಅಂತಹವರು ನಮ್ಮ ಸಮಾಜದ ಹೆಮ್ಮೆ. ಅವರಿಗೆ ಭಗವಂತನು ಇನ್ನೂ ಆಯುರಾರೋಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾ, ಅಭಿನಂದನಾ ಗ್ರಂಥವನ್ನು ಅವರಿಗೆ ಸಮರ್ಪಿಸುವ ಈ ಸಂದರ್ಭದಲ್ಲಿ ನಾನು ಅತ್ಯಂತ ಹೃದಯಪೂರ್ವಕವಾಗಿ ನಮಸ್ಕರಿಸಿ, ಶುಭ ಹಾರೈಸುತ್ತೇನೆ.

*ಮತ್ತಿಕೊಪ್ಪ* ***ಎಂ. ಹರನಾಥರಾವ್***

*ಅಂಚೆ : ಉಳ್ಳೂರು, ಸಾಗರ*

## ೫. ವೇ. ಬ್ರ. ಶ್ರೀ ನರಸಿಂಹಮೂರ್ತಿಯವರ ವಂಶವೃಕ್ಷ



# ೬. ವ್ಯಕ್ತಿ ವಿವರ

## ವಿದ್ಯಾಸಾಗರ ವೇ. ಬ್ರ. ಶ್ರೀ ನರಸಿಂಹಮೂರ್ತಿಗಳವರ ಸಂಕ್ಷಿಪ್ತ ಪರಿಚಯ

**ವಂಶ**

ತಂದೆ : ವೇ. ಬ್ರ. ಶ್ರೀ ಶ್ಯಾಮಶಾಸ್ತ್ರಿಗಳು
ತಾಯಿ : ಶ್ರೀಮತಿ ಫಣಿಯಮ್ಮ
ಜನನ : ೧೯೧೨ (ಲಿಂಗದಹಳ್ಳಿ)
ಪತ್ನಿ : ಶ್ರೀಮತಿ ಸೀತಮ್ಮ

**ಮಕ್ಕಳು**

ಶ್ರೀಮತಿ ಸುಂದರಮ್ಮ ವೆಂಕಟರಮಣಶಾಸ್ತ್ರಿ
ಶ್ರೀಮತಿ ಗೌರಿ ಸುಬ್ರಹ್ಮಣ್ಯ
ಶ್ರೀಮತಿ ರಾಜೇಶ್ವರಿ ಶ್ರೀಧರ್

**ವಿದ್ಯಾಭ್ಯಾಸ**

೧೯೨೫ - ಕನ್ನಡ ಎಲ್.ಎಸ್. (ಲಿಂಗದಹಳ್ಳಿ)
೧೯೨೭ - ಇಂಗ್ಲಿಷ್ ಎಲ್.ಎಸ್.(ಚಿಕ್ಕಮಗಳೂರು)
೧೯೨೭-೧೯೩೨ - ನಾಟಕಾಂತ ಸಾಹಿತ್ಯ ಮತ್ತು ವೇದಶಾಸ್ತ್ರ (ಶೃಂಗೇರಿ)
೧೯೩೩-೧೯೩೪ - ವ್ಯಾಕರಣ ವಿದ್ವತ್ (ಧಾರವಾಡ)
೧೯೩೪-೧೯೩೯ - ಸಾಹಿತ್ಯ ಶಿರೋಮಣಿ (ವಿದ್ವತ್), ತರ್ಕವಿದ್ವತ್ (ಧಾರವಾಡ)
೧೯೩೯-೧೯೪೦ - ಸಾಹಿತ್ಯ-ವಿದ್ವತ್
ಅಲಂಕಾರ ವಿದ್ವತ್(ಮದ್ರಾಸ್)
೧೯೪೦-೧೯೪೬ - ವೇದಾಂತ ವಿದ್ವತ್
ಮೀಮಾಂಸಾ ವಿದ್ವತ್ (ಮದ್ರಾಸ್)
೧೯೪೬-೧೯೫೨ - ಜ್ಯೋತಿಶ್ಶ್ಯಾಸ್ತ್ರ ವಿದ್ವತ್ (ಶೃಂಗೇರಿ)
೧೯೫೨-೧೯೫೬ - ಭಂಡಿಗಡಿ ಸ್ವಾಮಿಗಳ ಜತೆಯಲ್ಲಿ ದಕ್ಷಿಣ ಭಾರತ ಪ್ರವಾಸ
ಪ್ರಯಾಣದುದ್ದಕ್ಕೂ ವೇದಾಂತ ಪ್ರವಚನ ಮತ್ತು ಮಠದ ಸ್ವಾಮಿಗಳಿಗೆ ಪಾಠ ಪ್ರವಚನ.

**ವೃತ್ತಿ**

೧೯೫೬-೧೯೬೭ - ಲಿಂಗದಹಳ್ಳಿಯಲ್ಲಿ ಶಾರದಾವಿಲಾಸ ಸಂಸ್ಕೃತ ಪಾಠಶಾಲೆ ಪ್ರಾರಂಭಿಸಿ, ಅಧ್ಯಾಪಕ ವೃತ್ತಿ. ಸಂಸ್ಕೃತ ಪಾಠಶಾಲೆಯ ವತಿಯಿಂದ ಪ್ರತಿವರ್ಷ ಊರಿನಲ್ಲಿನ ಆಸಕ್ತ ಮಕ್ಕಳಿಗೆ ವಿವಿಧ ಸಂಸ್ಕೃತ ಪರೀಕ್ಷೆಗಳನ್ನು ಕಟ್ಟಿಸುವುದು. ಜತೆಗೆ ಪೌರೋಹಿತ್ಯ. ಋಗ್ವೇದ, ಯಜುರ್ವೇದ ಪೌರೋಹಿತ್ಯದಲ್ಲಿ ಲಿಂಗದಹಳ್ಳಿಯಲ್ಲೇ ಅಲ್ಲದೆ ಸುತ್ತಮುತ್ತಲ ಎಲ್ಲಾ ಊರುಗಳಲ್ಲೂ ಅಪಾರವಾದ ಸೇವೆ ಮತ್ತು ಪಿತೃ ಸೇವೆ.
೧೯೬೭-೧೯೭೧ - ಶೃಂಗೇರಿ ಕಾಲೇಜಿನಲ್ಲಿ (ಸಂಸ್ಕೃತ ಕಾಲೇಜು) ಅಲಂಕಾರಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ. ಸಂಸ್ಕೃತ ಕಾಲೇಜು ಮುಚ್ಚಿದ ಪ್ರಯುಕ್ತ ಅಲ್ಲಿಂದ ನಿರ್ಗಮನ
೧೯೭೧-೧೯೭೫ - ಭೀಮನಕಟ್ಟೆ (ಶಿವಮೊಗ್ಗ ಜಿಲ್ಲೆ) ಮಠದ ಸ್ವಾಮಿಗಳವರಿಗೆ ಪಾಠ ಪ್ರವಚನ; ಉತ್ತರ ಭಾರತ ಪ್ರವಾಸ.
೧೯೭೫-೧೯೮೦ - ಹೆಗ್ಗೋಡಿನ ಕೇಡಲಸರ ಸಂಸ್ಕೃತ ವೇದಪಾಠಶಾಲೆಯಲ್ಲಿ ಅಧ್ಯಾಪಕ ವೃತ್ತಿ (ಸಂಸ್ಕೃತ ಮತ್ತು ವೇದ)
೧೯೮೦-೧೯೮೨ - ಮುಳಬಾಗಿಲು ಮಠದ (ಕೋಲಾರ) ಸ್ವಾಮಿಗಳಿಗೆ ಪಾಠ ಪ್ರವಚನ
೧೯೮೮-೧೯೯೧ - ಕೂಡ್ಲಿ ಮಠದ ಸ್ವಾಮಿಗಳಿಗೆ ವೇದ, ಸಂಸ್ಕೃತ ಪಾಠ ಪ್ರವಚನ

೧೯೯೧ರಿಂದ ಇಲ್ಲಿಯವರೆಗೆ ಲಿಂಗದಹಳ್ಳಿಯಲ್ಲೇ ವಾಸ್ತವ್ಯ. ಪೌರೋಹಿತ್ಯ, ಸಾಹಿತ್ಯ ರಚನೆ, ಸಂಕೇತಿ ಸಮಾಜ ಬಾಂಧವರಿಗೇ ಅಲ್ಲದೆ ವಿವಿಧ ಸಮಾಜ ಬಾಂಧವರಿಗೂ ಹತ್ತು ಹಲವು ರೀತಿಯ ಸೇವೆ. ೧೯೯೧ಕ್ಕೆ ಮೊದಲು ಬಿಡುವಿನ ವೇಳೆಯಲ್ಲೆಲ್ಲಾ ಲಿಂಗದಹಳ್ಳಿಯಲ್ಲಿ ವಾಸ್ತವ್ಯ ಮತ್ತು ನಿರಂತರ ಸಮಾಜಸೇವೆ.

**ಬಾಳು**

ಭಂಡಿಗಡಿಯ ಶ್ರೀಶ್ರೀಗಳವರು ೧೯೫೬ರಲ್ಲಿ ಶ್ರೀನರಸಿಂಹಮೂರ್ತಿಗಳನ್ನು ಸನ್ಮಾನಿಸಿ, **ವಿದ್ಯಾಸಾಗರ**ರೆಂಬ ಬಿರುದನ್ನು ದಯಪಾಲಿಸಿರುತ್ತಾರೆ. ಭಾರತೀಯ ಸಂಸ್ಕೃತಿಯ ಪ್ರಚಾರ, ವೇದ ಪ್ರಚಾರ ಮತ್ತು ಸಂಸ್ಕೃತ ಪ್ರಚಾರವೇ ಅವರ ಜೀವನದ ಉಸಿರಾಗಿದೆ. ಪ್ರಾಚೀನ ಪರಂಪರೆಯ ತತ್ತ್ವವನ್ನು ರೂಢಿಸಿಕೊಂಡು, ಆಧುನಿಕತೆಯ ಉಪಯುಕ್ತ ಅಂಶಗಳನ್ನು ಮಾತ್ರ ಗ್ರಹಿಸಿಕೊಂಡು ಮುನ್ನಡೆಯಬೇಕೆಂಬುದೇ ಅವರ ಧ್ಯೇಯವಾಗಿದೆ.

ಅಧ್ಯಯನ-ಅಧ್ಯಾಪನ, ಯಜನ-ಯಾಜನ, ದಾನ-ಪ್ರತಿಗ್ರಹಗಳೆಂಬ ಷಟ್ಕರ್ಮಗಳಲ್ಲಿ ನಿರತರಾಗಿದ್ದು ವೇದೋಕ್ತ ವಿಧಿವಿಧಾನಗಳನ್ನು ಬಹು

ಶ್ರದ್ಧೆಯಿಂದ ಆಚರಿಸಿಕೊಂಡು ಬಂದು, ಎಂತಹ ಕಷ್ಟ ಪರಿಸ್ಥಿತಿಯಲ್ಲೂ ವಿಚಲಿತರಾಗದೆ **'ಸುಖದುಃಖೇ ಸಮೇ ಕೃತ್ವಾ'** ಎಂಬಂತೆ ಬಾಳಿ ಬದುಕುತ್ತಿದ್ದಾರೆ.

**ಸಾಹಿತ್ಯಸೇವೆ**

ವೇ. ನರಸಿಂಹಮೂರ್ತಿಗಳು ತಮ್ಮ ಬಿಡುವಿನ ವೇಳೆಯಲ್ಲಿ, ಬರೆಯುವ ಹವ್ಯಾಸವನ್ನೂ ಬೆಳೆಸಿಕೊಂಡಿರುತ್ತಾರೆ. ಅವುಗಳಲ್ಲಿ ಕೆಲವು ಕೃತಿಗಳು ಮುದ್ರಣ ಭಾಗ್ಯ ಕಂಡಿವೆ. ಬಹಳಷ್ಟು ಲೇಖನಗಳು ಮುದ್ರಣ ಭಾಗ್ಯ ಕಾಣದೆ ಅವರ ಪೆಟ್ಟಿಗೆಯಲ್ಲಿ ನಿದ್ರಾವಸ್ಥೆಯಲ್ಲಿರುತ್ತವೆ.

**ಮುದ್ರಣ ಕಂಡ ಕೃತಿಗಳು**

1) ವಿಷ್ಣುಸೂರಿ ವಿರಚಿತ ರುದ್ರ ಚಮಕಾಧ್ಯಾಯ ಟೀಕೆಯ ಕನ್ನಡ ಅನುವಾದ
2) 'ಏಕಾಗ್ನಿ ಕಾಂಡ' (ವೇದ ಪ್ರಶ್ನೆ) ಕನ್ನಡದಲ್ಲಿ ಅರ್ಥ, ತಾತ್ಪರ್ಯ ವಿವರಣೆ
3) 'ರುದ್ರಾಧ್ಯಾಯ' ಕನ್ನಡ ಅನುವಾದ
4) ವೇದ ಸಂದೇಶಗಳು
5) ಅಶ್ವಮೇಧಯಾಗವನ್ನು (ವೇದ) ಕುರಿತು ತಾತ್ಪರ್ಯ ವಿವರಣೆ
6) ಯಜ್ಞ ಸ್ವರೂಪ
7) ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರವು ಪ್ರಕಟಿಸಿರುವ 'ಸಂಭೃತಿ' ಎಂಬ ಕೃತಿಯಲ್ಲಿ ದಾನ, ಧರ್ಮ, ಸಂಸ್ಕೃತಿ, ಆಚಾರ ವಿಚಾರಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ನೂರಾರು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಮಾಲೆ

**ಮುದ್ರಣ ಕಾಣದ ಕೈಬರಹ ಕೃತಿಗಳು**

1) ಏಕಾಗ್ನಿ ಕಾಂಡದ ಅರ್ಥ, ತಾತ್ಪರ್ಯ ವಿವರಣೆ (ಮುಂದುವರೆದ ಭಾಗ)
2) ವೇದಸಂದೇಶಗಳು (ಮುಂದುವರೆದ ಭಾಗ)
3) ಸಂಸ್ಕೃತ ಕವಿತೆಗಳು, ಕವಿತಾಗುಚ್ಛಗಳು
(ಸುಮಾರು 500ಕ್ಕೂ ಹೆಚ್ಚು)
4) ಮಸೀದಿ - ಮಂದಿರ, ಬೆತ್ತಲೆ ಸೇವೆ, ಬಲಿದಾನ ಇತ್ಯಾದಿ ಹಲವಾರು ಸಣ್ಣ ಸಣ್ಣ ಲೇಖನಗಳು.

**ಸನ್ಮಾನಗಳು**

ಶ್ರೀ ನರಸಿಂಹಮೂರ್ತಿಗಳವರ ಅಪಾರವಾದ ವಿದ್ವತ್ತು ಮತ್ತು ಅವರು ಕೈಗೊಳ್ಳುತ್ತಿರುವ ಶ್ರದ್ಧಾಪೂರ್ವಕ ಪೌರೋಹಿತ್ಯವನ್ನು ಗುರ್ತಿಸಿ ವಿವಿಧ ಸಂಘ ಸಂಸ್ಥೆಗಳು ಅದ್ದೂರಿಯಾಗಿ ಸನ್ಮಾನಿಸಿವೆ. ಅವುಗಳಲ್ಲಿ ಹೆಸರಿಸಬಹುದಾದವು:
ಶ್ರೀ ಜ್ಯೋತಿ ಪ್ರತಿಷ್ಠಾನ, ಬೆಂಗಳೂರು ಅವರ ವತಿಯಿಂದ ಸನ್ಮಾನ; ಬೆಂಗಳೂರಿನ ರಾಮಮಂದಿರದಲ್ಲಿ ಸನ್ಮಾನ; 1993ರಲ್ಲಿ ಸ್ವಗ್ರಾಮದಲ್ಲಿ ಆತ್ಮೀಯವಾದ ಅದ್ದೂರಿಯ ಸನ್ಮಾನ; ಹೊಸಹಳ್ಳಿಯ ಗೆಳೆಯರ ಬಳಗದ ವತಿಯಿಂದ ಸನ್ಮಾನ; ಬೀರೂರಿನ ಶ್ರೀರಾಮ ಭಕ್ತ ಮಂಡಳಿಯಿಂದ, ತರೀಕೆರೆಯ ಬ್ರಾಹ್ಮಣ ಮಹಾಸಭಾದ ವತಿಯಿಂದ, ಮದ್ರಾಸಿನ ಶಕಟಪುರ ಮಠದಲ್ಲಿ ಸನ್ಮಾನ; ಭಂಡಿಗಡಿ ಮಠದಲ್ಲಿ ಸನ್ಮಾನ; ಜಿಲ್ಲಾ ಪ್ರಥಮ ಕನ್ನಡ ಸಮ್ಮೇಳನದಲ್ಲಿ ಚಿಕ್ಕಮಗಳೂರಿನಲ್ಲಿ ಸನ್ಮಾನ; ನವೆಂಬರ್ ೨೦೦೨ರಲ್ಲಿ ಭಾರತೀಯ ವಿದ್ಯಾಭವನದವರು ಕೊಡಮಾಡುವ ಪ್ರತಿಷ್ಠಿತ **ವೇದರತ್ನ** ಪ್ರಶಸ್ತಿಪ್ರದಾನ- ಮಾನ್ಯ ರಾಜ್ಯಪಾಲರಾದ ಶ್ರೀ ಚತುರ್ವೇದಿಯವರಿಂದ. ಇದಕ್ಕೆ ಪೂರ್ವಭಾವಿಯಾಗಿ ಶ್ರೀ ಮತ್ತೂರು ಕೃಷ್ಣಮೂರ್ತಿಗಳು ಹಾಗೂ ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳವರಿಂದ ಲಿಂಗದಹಳ್ಳಿಯಲ್ಲಿ ಸನ್ಮಾನ.

**ಪತ್ನಿ:** ಸೀತಮ್ಮ: ಅವರ ತಂದೆ ವೇ. ಬ್ರ. ಶ್ರೀ ವೆಂಕಟರಮಣ ದೀಕ್ಷಿತ್ ಅವರು ಕಾಶಿಯಲ್ಲಿದ್ದರು; ತಾಯಿ ಮಹಾಲಕ್ಷ್ಮಿ; ಮುತ್ತಜ್ಜ ಸುಬ್ರಹ್ಮಣ್ಯ ದೀಕ್ಷಿತ್: ಮೂಲತಃ ಬಸವಾನಿಯವರು, ವೇದಾಧ್ಯಯನ ಸಂಪನ್ನರು, ಶೃಂಗೇರಿಯಲ್ಲಿದ್ದರು; ಕೇವಲ ವೇದ ಕಲಿತದ್ದರಿಂದ 'ನೀನು ಬ್ರಾಹ್ಮಣಾರ್ಥಕ್ಕೆ ಮಾತ್ರ ಯೋಗ್ಯ' ಎಂಬ ಟೀಕೆಗೆ ಒಳಗಾಗಿ ಕಾಶಿಗೆ ಹೋಗಿ ಶಾಸ್ತ್ರಾಭ್ಯಾಸ ಮಾಡಿ ಇಂದೂರು ಸಂಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾದರು. ಸೀತಮ್ಮನವರು ೮೦ ವರ್ಷಗಳ ಹಿಂದೆ ಇದ್ದ ಸನ್ನಿವೇಶದಲ್ಲೂ ಎಲ್.ಎಸ್.ವರೆಗೆ ಓದಿದ್ದರು. ನಿಧನ: ೨೯.೧೧.೦೪.

## ೭. ಪ್ರಶಸ್ತಿ / ಸಂಮಾನ

### ಸಂಸ್ಕೃತ ವಿದ್ವಾನ್ ಇವರಿಗೆ ಅರ್ಪಿಸಿದ ಸನ್ಮಾನ ಪತ್ರ

*ಪೂಜ್ಯರೇ,*

ಸಂಸ್ಕೃತ ಘನ ವಿದ್ವಾಂಸರ, ಪುರೋಹಿತರ ವಂಶದಲ್ಲಿ ವೇದಬ್ರಹ್ಮ ಶ್ರೀ ಶ್ಯಾಮಶಾಸ್ತ್ರಿಗಳು ಮತ್ತು ಶ್ರೀಮತಿ ಫಣಿಯಮ್ಮನವರ ಹಿರಿಯ ಮಗನಾಗಿ ೧೯೧೨ರಲ್ಲಿ ಲಿಂಗದಹಳ್ಳಿಯಲ್ಲಿ ಜನ್ಮ ತಾಳಿದಿರಿ. ವೇದ ಪುರಾಣಗಳ ಅಧ್ಯಯನ ಮಾಡುತ್ತ, ನಾಲ್ಕಾರು ದಶಕಗಳಲ್ಲಿ ಸಾಧನೆ ಮಾಡಲಾಗದ್ದನ್ನು ಕೇವಲ ಹತ್ತು ವರ್ಷಗಳಲ್ಲಿ ಸಾಧಿಸಿದ್ದೀರಿ. ನಾಟಕಾಂತ ಸಾಹಿತ್ಯ, ತರ್ಕ, ವ್ಯಾಕರಣ, ಮೀಮಾಂಸಾ ಶಾಸ್ತ್ರ ಹಾಗೂ ವೇದಾಂತ ವಿಷಯಗಳಲ್ಲಿ ಸ್ನಾತಕ ಪದವಿ ಮಾತ್ರವಲ್ಲ, ಶಾಸ್ತ್ರಗಳನ್ನು ಕರತಲಾಮಲಕ ಮಾಡಿಕೊಂಡಿದ್ದೀರಿ. ವಿದ್ಯೆಯ ಪರ್ವತವೇ ಆಗಿದ್ದೀರಿ. ಪುರಾಣ, ದರ್ಶನಗಳ ವಿಷಯಗಳಲ್ಲಿ ನಮ್ಮ ಸಂಶಯಗಳಿಗೆ ತಕ್ಷಣ ಪರಿಹಾರ ನೀಡುವ **ಸಂಚರಿಸುವ ವಿಶ್ವಕೋಶವೇ** ಆಗಿದ್ದೀರಿ. ಸಂಸ್ಕೃತ ಮತ್ತು ಆರ್ಷೇಯ ಸಂಸ್ಕೃತ ದೀಪವನ್ನು ಕಳೆದ ಅರ್ಧ ಶತಮಾನದಿಂದ ಬೆಳಗುತ್ತಾ ಮನುಕುಲಕ್ಕೇ ಹೆಮ್ಮೆಯನ್ನೂ, ಲಿಂಗದಹಳ್ಳಿ ಬಂಧು ಜನಕ್ಕೆ ಹಿರಿಮೆಯನ್ನೂ ತಂದುಕೊಟ್ಟಿದ್ದೀರಿ. ನಮ್ಮೂರಿನಲ್ಲಿ **ಆಸ್ತಿಕ ವಿವರ್ಧಿನಿ ಸಂಘ**ವನ್ನು ಸ್ಥಾಪಿಸಿ, ಆರಂಭದಿಂದಲೂ ಅಧ್ಯಕ್ಷರಾಗಿದ್ದು ಮಾರ್ಗದರ್ಶನ ಮಾಡುತ್ತಾ ಆಸ್ತಿಕತೆಯನ್ನು ಪೋಷಿಸಿಕೊಂಡು ಬಂದಿರುತ್ತೀರಿ. ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗುವಂತೆ ಶ್ರೀರಾಮ ಮಂದಿರ ಭವನವನ್ನು ಕಂಡರಿಸಿದ್ದೀರಿ.

*ವಿಚಾರ ಸಂಪನ್ನರೆ,*

ಶ್ರೀ ಪು.ತಿ.ನರಸಿಂಹಾಚಾರ್ ಅವರಂತೆ ಸಂಪ್ರದಾಯಗಳನ್ನು ವೈಜ್ಞಾನಿಕ ಮನೋಭಾವದಿಂದ ಅವಲೋಕನ ಮಾಡುವ ಪ್ರವೃತ್ತಿ ನಿಮ್ಮದಾಗಿದೆ. ವಿಧವಾ ವಿವಾಹ, ಸಗೋತ್ರ ವಿವಾಹ, ವಿಧವೆಯರಿಂದಲೇ ಶ್ರಾದ್ಧಕರ್ಮ ಮಾಡಿಸುವ ವಿಚಾರಗಳನ್ನೂ ಸಮರ್ಥಿಸಿದ್ದೀರಿ. ಇದು ನಿಮ್ಮ ಪ್ರಗತಿಪರ ಧೋರಣೆಗಳಿಗೆ ನಿಚ್ಚಳ ಸಾಕ್ಷಿ. ಬದಲಾದ ಕಾಲಕ್ಕೆ ತಕ್ಕಂತೆ ಆಚರಣೆಗಳಲ್ಲಿ ಬದಲಾವಣೆ ತೋರಲು ತ್ರಿಮತಸ್ಥ ಹಿರಿಯರು ಒಂದೆಡೆ ಕಲೆತು ವಿದ್ವತ್ಸಭೆ ನಡೆಸಬೇಕೆಂಬ ಕ್ರಾಂತಿಕಾರಕ ವಿಚಾರ ಮುಂದಿಟ್ಟಿದ್ದೀರಿ.

*ಆಚಾರ್ಯ ಶ್ರೇಷ್ಠರೆ,*

ನಿಮ್ಮಿಂದ ನೇರವಾಗಿ ಶಿಕ್ಷಣ ಪಡೆದು ಧನ್ಯರಾದವರ ಸಂಖ್ಯೆ ಅಪಾರವಾಗಿದೆ. ಭಂಡಿಗಡಿಯ ಪೀಠಾಚಾರ್ಯ ಸ್ವಾಮಿಗಳು, ಭೀಮನಕಟ್ಟೆಯ ಶ್ರೀಶ್ರೀಗಳವರು ಹಾಗೂ ಕೂಡಲಿ ಶೃಂಗೇರಿ ಮಠದ ಸ್ವಾಮಿಗಳು ನಿಮ್ಮಲ್ಲಿ ಶಿಷ್ಯರಾಗಿ ಕಲಿತು, ಮಹಿಮೋನ್ನತಿ ಗಳಿಸಿದ್ದಾರೆ. ಶೃಂಗೇರಿಯ ಸಂಸ್ಕೃತ ಕಾಲೇಜಿನಲ್ಲಿ, ಸಾಗರದ ಸಮೀಪದ ಕೇಡಲಸರ ಪಾಠಶಾಲೆಯಲ್ಲಿ ಹಲವಾರು ವರ್ಷಗಳ ಕಾಲ ಶಿಕ್ಷಣ ನೀಡಿದ್ದೀರಿ. ಲಿಂಗದಹಳ್ಳಿಯಲ್ಲಿ ವೇದಪಾಠಶಾಲೆ ನಡೆಸಿ ನಮ್ಮಗಳಲ್ಲಿ ಚೈತನ್ಯ ತಂದಿದ್ದೀರಿ. ತಮಿಳುನಾಡು, ಕೇರಳ ನಾಡಿನಲ್ಲಿ ನಾಲ್ಕಾರು ವರ್ಷ ಸಂಚರಿಸುತ್ತಾ ಹಲವು ಹನ್ನೊಂದು ಪಂಡಿತರ ಸಭೆಗಳಲ್ಲಿ ಸಂಸ್ಕೃತದಲ್ಲಿ ಚರ್ಚೆ-ಉಪನ್ಯಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಲ್ಲಿನ ನೂರಾರು ಪಂಡಿತರ ಹೃದಯ ಗೆದ್ದಿದ್ದೀರಿ. ಹಲವಾರು ಕವಿತೆ, ಲೇಖನ ಕೃತಿಗಳನ್ನು ರಚಿಸಿ ಸಾಹಿತ್ಯಸೇವೆಯನ್ನು ಮಾಡಿದ್ದೀರಿ. **ರುದ್ರಚಮಕ, ಭಾಷ್ಯಾನುವಾದ** ಮುದ್ರಿತ ಕೃತಿಗಳಾಗಿವೆ. ಹಸ್ತಪ್ರತಿಗಳ ಸಂಖ್ಯೆ ಅಪಾರವಾಗಿದೆ.

*'ವಿದ್ಯಾಸಾಗರ' ರೆಂಬ ಬಿರುದನ್ನು ಗಳಿಸಿದ ವಿದ್ವನ್ಮಣಿಗಳೆ,*

ಹಿರಿ-ಕಿರಿಯರನ್ನು, ಮಕ್ಕಳನ್ನು, ಒಂದೇ ರೀತಿ ಪ್ರೀತಿ ಗೌರವಗಳಿಂದ ಕಾಣುತ್ತ ವಿದ್ಯೆಗೆ ಮೀರಿದ ವಿನಯಶಾಲಿಗಳಾಗಿ, ಯಾರನ್ನೂ ನೋಯಿಸದ **ಅಜಾತಶತ್ರು**ವಾಗಿ ನಮ್ಮೆಲ್ಲರ ಹೃತ್ಪೂರ್ವಕ ಅಭಿಮಾನ, ಗೌರವ ಸಂಪಾದಿಸಿದ್ದೀರಿ. ಬಡವರು, ದುಃಖಿಗಳನ್ನು ಕಂಡು ಅನುಕಂಪದಿಂದ ನಿಮ್ಮ ಕೈಯಲ್ಲಿ ಇದ್ದುದೆಲ್ಲವನ್ನೂ ಕೊಡುತ್ತಾ ಬರುತ್ತಿದ್ದೀರಿ.

*ವಿಚಾರಪ್ರಿಯರೆ,*

ಪ್ರತಿಫಲಾಪೇಕ್ಷೆಯಿಲ್ಲದೇ ಪೌರೋಹಿತ್ಯವೆಂಬುದನ್ನು 'ದೇವರಪೂಜೆ' ಎಂಬಂತೆ ನಡೆಸಿಕೊಂಡು ಬಂದಿದ್ದೀರಿ. ಶುಭ-ಅಶುಭ ಕಾರ್ಯಗಳಿಗೆಲ್ಲಾ ಅನೇಕ ಸಲ ನೀವೊಬ್ಬರೇ ನಿಂತು ಎಷ್ಟೋ ಕಷ್ಟವಾದರೂ ಬಿಡದೆ ಎಷ್ಟೋ ಬಾರಿ ನೀವೇ ಖರ್ಚು ಮಾಡಿಕೊಂಡು ಪೌರೋಹಿತ್ಯ ನಡೆಸುತ್ತಾ ಬರುತ್ತಿದ್ದೀರಿ. ಎಂಬತ್ತೊಂದರ *ಈ* ವೃದ್ಧಾಪ್ಯದಲ್ಲೂ ಸೈಕಲ್ ತುಳಿಯುತ್ತಾ ಸಂಚರಿಸಿ ಪೌರೋಹಿತ್ಯ ನಡೆಸುವ ನಿಮ್ಮ ಸಜ್ಜನಿಕೆ ವಿಸ್ಮಯ ತರುವಂಥದು. **ಪರೋಪಕಾರಾಯ ಸತಾಂ ವಿಭೂತಯಃ** ಎನ್ನುವಂತೆ ಬೇರೆಯವರಿಗಾಗಿಯೇ ನಿಮ್ಮ ಬದುಕನ್ನು ಮೀಸಲಿಟ್ಟಿದ್ದೀರಿ.

*ಸಜ್ಜನ ಸಂಪನ್ನರೆ,*

ನಿಮ್ಮನ್ನು ಸನ್ಮಾನಿಸುವ ಮೂಲಕ ಸಂಘವೇ ಸನ್ಮಾನಿತವಾಗಿದೆ. ಇದು ನಿಮ್ಮ ಜ್ಞಾನ, ಪಾಂಡಿತ್ಯಕ್ಕೆ, ನಾವು ಮಾಡುತ್ತಿರುವ ಸನ್ಮಾನ; ಇದು ನಿಮ್ಮಲ್ಲಿ ನೆಲೆ ನಿಂತ ಸರಸ್ವತಿಗೆ ಸಂದ ಸನ್ಮಾನ. ದೇವರು ನಿಮಗೆ ಹಾಗೂ ನಿಮ್ಮ ಕುಟುಂಬವರ್ಗಕ್ಕೆ ಆಯುರಾರೋಗ್ಯ ಐಶ್ವರ್ಯವನ್ನೂ, ಸುಖ-ಸಮೃದ್ಧಿಯನ್ನೂ ನೀಡಲೆಂದು ಪ್ರಾರ್ಥಿಸುತ್ತಾ ನಿಮ್ಮ ಚರಣತಲಗಳಿಗೆ ಭಕ್ತಿಭಾವದಿಂದ ವೈಶಾಖ ಬಹುಳ ದಶಮಿ ದಿನಾಂಕ ೧೬.೫.೧೯೯೩ನೇ ಭಾನುವಾರ 'ಆಸ್ತಿಕ ವಿವರ್ಧಿನಿ ಸಂಘ'ದ (ಲಿಂಗದಹಳ್ಳಿ) ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಎಲ್ಲಾ ಆತ್ಮೀಯ ಬಂಧು-ಬಳಗದವರು ಅರ್ಪಿಸಿದ ಸನ್ಮಾನ ಪತ್ರ.

*ಲಿಂಗದಹಳ್ಳಿ* **ಆಸ್ತಿಕ ವಿವರ್ಧಿನಿ ಸಂಘ**

*೧೬-೫-೧೯೯೩*

*||ಭಾರತಸ್ಯ ಪ್ರತಿಷ್ಠೇ ದ್ವೇ ಸಂಸ್ಕೃತಂ ಸಂಸ್ಕೃತಿಸ್ತಥಾ||*

ಯುಗಾಬ್ದ ೫೧೦೧ರ ಶ್ರೀ ರಾಮೋತ್ಸವದ ಶುಭಸಂದರ್ಭದಲ್ಲಿ ಬೀರೂರಿನ ಶ್ರೀ ಪಟ್ಟಾಭಿರಾಮ ಚಂದ್ರಮೌಳೀಶ್ವರ ದೇವಾಲಯದ ಆವರಣದಲ್ಲಿ ವೇದಶಾಸ್ತ್ರವಿಶಾರದರೂ, ಪೂರ್ವಾಪರಪ್ರಯೋಗವಿಚಕ್ಷಣರೂ ಆದ ವೇದಬ್ರಹ್ಮಶ್ರೀ ಲಿಂಗದಹಳ್ಳಿ ನರಸಿಂಹಮೂರ್ತಿಶಾಸ್ತ್ರಿಗಳವರಿಗೆ

## ಸನ್ಮಾನ ಪತ್ರ

*ಪೂಜ್ಯರೇ,*

ವೈದಿಕ ಪರಂಪರೆಯನ್ನು ಉಳಿಸಲೆಂದೇ ಜನ್ಮವೆತ್ತಿದ ತಾವು ವೇದಾಗಮ ಶಾಸ್ತ್ರಾದಿಗಳನ್ನು ಅಧ್ಯಯನ ಮಾಡಿ, ಶಿಷ್ಯಕೋಟಿಗೆ ಜ್ಞಾನರಾಶಿಯನ್ನು ಹಂಚಿ **ಶಿಷ್ಯಚಿತ್ತಾಪಹಾರಕ**ರಾದಿರಿ. ಭೀಮನಕಟ್ಟೆ, ಶೃಂಗೇರಿ ಮೊದಲಾದ ಸ್ಥಳಗಳಲ್ಲಿ ನೂರಾರು ಮಂದಿ ಶಿಷ್ಯರಿಗೆ ವಿದ್ಯಾದಾನ ಮಾಡಿ **ಗುರು** ಎಂಬ ಪದವನ್ನು ಸಾರ್ಥಕಗೊಳಿಸಿದಿರಿ.

*ಪುರೋಹಿತ ಶ್ರೇಷ್ಠರೇ,*

ಅಧ್ಯಯನ-ಅಧ್ಯಾಪನ, ಯಜನ-ಯಾಜನ, ದಾನ-ಪ್ರತಿಗ್ರಹಗಳೆಂಬ ಷಟ್ಕರ್ಮಗಳಲ್ಲಿ ನಿರತರಾಗಿದ್ದು, ವೇದೋಕ್ತ ವಿಧಿ-ವಿಧಾನಗಳನ್ನು ಶ್ರದ್ಧೆಯಿಂದ ಆಚರಿಸಿಕೊಂಡು ಬಂದು ಎಂಥ ಕಷ್ಟದ ಪರಿಸ್ಥಿತಿಯಲ್ಲೂ ವಿಚಲಿತರಾಗದೇ **ಸುಖದುಃಖೇ ಸಮೇ ಕೃತ್ವಾ** ಎಂಬಂತೆ ಬಾಳಿ ಬದುಕಿದಿರಿ.

*ಪ್ರಕಾಂಡ ಪಂಡಿತರೇ,*

ದೇಶದ ಅನೇಕ ಕಡೆಗಳಲ್ಲಿ ನಡೆದ ವೇದಶಾಸ್ತ್ರ ಸಮ್ಮೇಳನಗಳಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಅಲ್ಲಿ ಎಲ್ಲೆಡೆ ಪ್ರದರ್ಶಿಸಿ ನಮ್ಮ ನಾಡಿಗೆ ಕೀರ್ತಿ ತಂದಿರಿ. *ಈ*ಶಾವಾಸ್ಯೋಪನಿಷತ್ ಹೇಳುವಂತೆ **ತೇನ ತ್ಯಕ್ತೇನ ಭುಂಜೀಥಾಃ** ಎಂಬಂತೆ ನಡೆದುಕೊಂಡು ತೃಪ್ತ ಜೀವನವನ್ನು ನಡೆಸಿದಿರಿ.

*ಸನ್ಮಾರ್ಗದರ್ಶಕರೇ,*

ಅನೇಕ ವರ್ಷಗಳಿಂದಲೂ *ಈ* ದೇವಾಲಯದಲ್ಲಿ ನಡೆದುಕೊಂಡು ಬರುತ್ತಿರುವ ವಿಶೇಷ ಕಾರ್ಯಕ್ರಮಗಳಲ್ಲಿ ನೀವು ಪಾಲ್ಗೊಂಡು, ನಮಗೆ ಮಾರ್ಗದರ್ಶನ ಮಾಡುತ್ತಾ, ನಮ್ಮನ್ನು ಹರಸುತ್ತಿರುವುದು ನಮ್ಮ ಸೌಭಾಗ್ಯವೇ ಆಗಿದೆ. ವಿದ್ಯಾ-ವಿನಯ ಸಂಪನ್ನರಾದ ಸರಳ ಜೀವನವನ್ನು ನಡೆಸುತ್ತಿರುವ ತಮಗೆ ಹಾಗೂ ತಮ್ಮ ಕುಟುಂಬವರ್ಗಕ್ಕೆ ಶ್ರೀ ಪಟ್ಟಾಭಿರಾಮ, ಚಂದ್ರಮೌಳೀಶ್ವರರು ಸಮಸ್ತ ಸನ್ಮಂಗಲವನ್ನು ಉಂಟುಮಾಡಲಿ ಎಂದು ಪ್ರಾರ್ಥಿಸುತ್ತಾ *ಈ* ಸನ್ಮಾನಪತ್ರವನ್ನು ಭಕ್ತಿಪೂರ್ವಕವಾಗಿ ಅರ್ಪಿಸುತ್ತೇವೆ.

ಸರ್ವಶಾಸ್ತ್ರಾಯ ತತ್ತ್ವಾಯ ವೇದಮಾರ್ಗಪ್ರದರ್ಶಿನೇ |
ಲಿಂಗಪಲ್ಲೀನಿವಾಸಾಯ ಶಾಸ್ತ್ರಿವರ್ಯಾಯ ತೇ ನಮಃ ||
ವಿದ್ಯಾ ದದಾತಿ ವಿನಯಂ ವಿದ್ವಾನ್ ಸರ್ವತ್ರ ಪೂಜ್ಯತೇ |
ಇತಿ ಪಾದದ್ವಯಂ ಸಮ್ಯಕ್ ಯುಜ್ಯತೇ ತವ ಜೀವನೇ ||

ಪೌರೋಹಿತ್ಯೇ ಸದಾ ನಿಷ್ಠಃ ಸದಾ ಸಂತುಷ್ಟಜೀವಕಃ |
ಅಜ್ಞಾನಾಂ ಜ್ಞಾನದಾತಾ ಚ ಶಿಷ್ಯಸನ್ಮಾರ್ಗದರ್ಶಕಃ ||
ವೇದವೇದಾಂಗವೇದ್ಯಾಯ ನಮೋ ವೇದಸ್ವರೂಪಿಣೇ |
ಭಕ್ತ್ಯಾ ಸಮರ್ಪ್ಯತೇ ಭಕ್ತೈಃ ಇಯಂ ಸಮ್ಮಾನಪತ್ರಿಕಾ ||

*ಪ್ರಮಾಥಿ ಸಂ || ಚೈತ್ರ ಕೃಷ್ಣ ತೃತೀಯಾ*
*ಶನಿವಾಸರಃ; ದಿ. ೦೩.೦೪.೯೯*

*ಇತಿ*
*ಅಧ್ಯಕ್ಷರು ಮತ್ತು ಸದಸ್ಯರು*
*ಶ್ರೀರಾಮ ಭಕ್ತ ಮಂಡಲಿ, ಬೀರೂರು*

*||ಸ್ವಸ್ತಿ||*

***आ नो भद्राः क्रतवो यन्तु विश्वतः ।।***
***Let Noble thoughts come to us from every side - Rigveda***

# BHARATIYA VIDYA BHAVAN

## SRI GURUGANGESHWARANAND VEDARATNA PURASKAR 2001

## *Certificate of Excellence*

We the members of the Bharatiya Vidya Bhavan and the devotees of Sri Gurugangeshwaranandji confer the certificate of excellence on

**VIDWAN L.S. NARASIMHAMURTHY**

for the year 2001 in appreciation of his excellence in the field of VEDA and SANSKRIT and for his contribution for the propagation of Veda.

***N.Ramanuja***
*Chairman*
*Bharatiya Vidya Bhavan*

***Dr.Veerendra Heggade***
*Chairman, Panel of Jury*
*Sri Gurugangeshwaranand vedanta Puraskar*

***Lekhraj Mewani***
*Devotee*
*Sri Gurugangeshwaranand Maharaj*

ಚಿಕ್ಕಮಗಳೂರು ಜಿಲ್ಲಾ ಪ್ರಥಮ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ೯.೬.೨೦೦೨ ರಂದು ಲಿಂಗದಹಳ್ಳಿ ವೇ|| ಬ್ರ|| ಶ್ರೀ ನರಸಿಂಹಮೂರ್ತಿಗಳನ್ನು ಆತ್ಮೀಯವಾಗಿ ಸನ್ಮಾನಿಸಿದಾಗ ಸಮರ್ಪಿಸಿದ

# ಸನ್ಮಾನ ಪತ್ರ

***ವೇದ ವಿದ್ವಾಂಸರೇ, ಆಚಾರ್ಯಶ್ರೇಷ್ಠರೇ, ವಿಚಾರಪ್ರಸನ್ನರೇ, ವಿಚಾರಪ್ರಿಯರೇ,***

ತಾವು ಘನ ವಿದ್ವಾಂಸರಾಗಿಯೂ, ಪೌರೋಹಿತ್ಯವನ್ನು ಸುಮಾರು ಅರುವತ್ತೈದು ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿರುವ ಅಪರೂಪದ ವ್ಯಕ್ತಿಗಳಾಗಿದ್ದೀರಿ. ಪೌರೋಹಿತ್ಯವನ್ನು ಕೇವಲ ಒಂದು ಜನಾಂಗಕ್ಕೇ ಅಲ್ಲದೇ ಮನುಕುಲದ ಎಲ್ಲಾ ಜನಾಂಗದವರಿಗೂ ನಡೆಸುತ್ತಾ ಬಂದಿದ್ದೀರಿ. ಪೌರೋಹಿತ್ಯವೆಂಬುದನ್ನು ದೇವರಪೂಜೆ ಎಂಬಂತೆ ಭಾವಿಸಿ, ಶುಭ, ಅಶುಭ ಕಾರ್ಯಗಳನ್ನು ಹೆಚ್ಚಾಗಿ ಒಬ್ಬರೇ ನಿಂತು ಪ್ರತಿಫಲಾಪೇಕ್ಷೆಯಿಲ್ಲದೇ ಎಷ್ಟೇ ಕಷ್ಟವಾದರೂ ಬಿಡದೆ ಹಲವಾರು ಸಂದರ್ಭಗಳಲ್ಲಿ ತಮ್ಮ ಕೈಯಿಂದಲೇ ಖರ್ಚುಮಾಡಿಕೊಂಡು ನಡೆಸುತ್ತಾ ಬಂದಿರುತ್ತೀರಿ. ತಮ್ಮ

ಎಂಬತ್ತೈದನೇ ವಯಸ್ಸಿನವರೆಗೂ ಸೈಕಲ್ ತುಳಿಯುತ್ತಾ, ಸುತ್ತಮುತ್ತಲಿನ ಹಳ್ಳಿಗಳಿಗೂ ಸಂಚರಿಸಿ ಪೌರೋಹಿತ್ಯ ನಡೆಸುತ್ತಿದ್ದುದು ಶ್ರದ್ಧೆಯ ಪರಮಾವಧಿಯಾಗಿರುತ್ತದೆ. ತಮ್ಮ ನೋವನ್ನು ಎಂದೂ ಬೇರೊಬ್ಬರಲ್ಲಿ ಹೇಳಿಕೊಳ್ಳದೇ, ಬೇರೆಯವರಿಗಾಗಿಯೇ ಜೀವ ತೇಯುತ್ತಿರುವ ತಾವು ನಿಜಕ್ಕೂ **ಚಂದನವೇ** ಆಗಿರುತ್ತೀರಿ. ಬಿಡುವಿಲ್ಲದ ಕಾರ್ಯಕ್ರಮಗಳಲ್ಲೂ ಬಿಡುವು ಮಾಡಿಕೊಂಡು ತಾವು ಬರೆಯುವ ಹವ್ಯಾಸವನ್ನು ರೂಢಿಸಿಕೊಂಡಿರುತ್ತೀರಿ. ತಮ್ಮ ಅನೇಕ ಕೃತಿಗಳು ಮುದ್ರಣಭಾಗ್ಯ ಕಂಡಿವೆ. ಅನೇಕಾನೇಕ ಲೇಖನಗಳು ಮುದ್ರಣಭಾಗ್ಯ ಕಾಣಬೇಕಾಗಿವೆ. **ವಿಷ್ಣುಸೂರಿ ವಿರಚಿತ ರುದ್ರಚಮಕಾಧ್ಯಾಯ ಟೀಕೆಯ ಕನ್ನಡ ಅನುವಾದ, ಏಕಾಗ್ನಿಕಾಂಡಕ್ಕೆ ಕನ್ನಡ ಅರ್ಥ, ತಾತ್ಪರ್ಯ ವಿವರಣೆ, ರುದ್ರಾಧ್ಯಾಯದ ಕನ್ನಡ ಅನುವಾದ, ವೇದಸಂದೇಶಗಳು, ಯಜ್ಞಸ್ವರೂಪ, ಸಂಭೃತಿ** ಮೊದಲಾದವುಗಳು ಮುದ್ರಣ ಭಾಗ್ಯ ಕಂಡು ಸಾಹಿತ್ಯಾಸಕ್ತರ ಮನಸ್ಸನ್ನು ಗೆಲ್ಲುವಂತಾಗಿದೆ. ತಮ್ಮ ಅನೇಕ ಕೈಬರಹದ ಕೃತಿಗಳನ್ನು ಸಮಾಜ ಬಾಂಧವರಾದ ನಾವುಗಳು ಮುದ್ರಿಸಿಕೊಟ್ಟಲ್ಲಿ, ಸಮಾಜಕ್ಕೆ ಖಂಡಿತಾ ದಾರಿದೀಪವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

***ಸಹೃದಯವಂತ ಮಿತಭಾಷಿಗಳೇ,***

ತಮ್ಮನ್ನು *ಈ* ದಿನ ಸನ್ಮಾನಿಸುವ ಮೂಲಕ ಚಿಕ್ಕಮಗಳೂರು ಜಿಲ್ಲಾ ಜನತೆಯನ್ನೇ ಸನ್ಮಾನಿಸಿದಂತಾಗಿದೆ. *ಈ* ಸನ್ಮಾನ ತಮ್ಮ ಜ್ಞಾನ, ಪಾಂಡಿತ್ಯಕ್ಕೆ ಮಾಡುತ್ತಿರುವ ಸನ್ಮಾನ. ತಮ್ಮಲ್ಲಿ ನೆಲೆನಿಂತ ಸರಸ್ವತಿಗೆ ಸಂದ ಸನ್ಮಾನ. ದಯಾಮಯನಾದ ಪರಮಾತ್ಮನು ತಮಗೂ, ತಮ್ಮ ಕುಟುಂಬ ವರ್ಗಕ್ಕೂ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಹೃದಯಪೂರ್ವಕವಾಗಿ ಹಾರೈಸುತ್ತೇವೆ.

*ದಿನಾಂಕ: ೦೯.೦೯.೨೦೦೨*
*ಸ್ಥಳ: ಚಿಕ್ಕಮಗಳೂರು*

***ಚಂದ್ರಯ್ಯನಾಯ್ಡು***
*ಅಧ್ಯಕ್ಷರು ಮತ್ತು ಸದಸ್ಯರು,*
*ಸ್ವಾಗತ ಸಮಿತಿ*
*ಚಿಕ್ಕಮಗಳೂರು ಜಿಲ್ಲಾ ಪ್ರಥಮ ಕನ್ನಡ ಸಮ್ಮೇಳನ*
*ಚಿಕ್ಕಮಗಳೂರು*

## 'ವಿದ್ಯಾಸಾಗರ'ರಿಗೆ ಅದ್ದೂರಿಯ ಸನ್ಮಾನ

**ವೇದ ಸಂದೇಶ**ಗಳಿಂದ ಸಂಕೇತಿಗಳಿಗೆಲ್ಲ ಚಿರಪರಿಚಿತರಾಗಿರುವ ಲಿಂಗದಹಳ್ಳಿಯ **ವಿದ್ಯಾಸಾಗರ** ವೇ. ಶ್ರೀ ನರಸಿಂಹಮೂರ್ತಿಗಳಿಗೆ ದಿನಾಂಕ ೯.೬.೦೨ರಂದು ಭಾನುವಾರ ಚಿಕ್ಕಮಗಳೂರಿನ ಕುವೆಂಪು ಕಲಾ ಮಂದಿರದಲ್ಲಿ **ಚಿಕ್ಕಮಗಳೂರು ಜಿಲ್ಲಾ ಪ್ರಥಮ ಕನ್ನಡ ಸಮ್ಮೇಳನ**ದ ಸಂದರ್ಭದಲ್ಲಿ ಆತ್ಮೀಯವಾದ, ಅದ್ದೂರಿಯ ಸನ್ಮಾನ ನೀಡಿ ಗೌರವಿಸಲಾಯಿತು. ವೇ. ಬ್ರ. ಶ್ರೀ ಯವರ ಸಂಸ್ಕೃತ ಪಾಂಡಿತ್ಯ, ಸಾಹಿತ್ಯ ಕೃಷಿ, ನಿರಂತರವಾದ ಸಮಾಜ ಸೇವೆಯನ್ನು ಗುರ್ತಿಸಿ ಪುರಸ್ಕರಿಸಲಾಯ್ತು. ತೊಂಬತ್ತು ವರ್ಷದ **ಜ್ಞಾನವೃದ್ಧ, ಚಟುವಟಿಕೆಯ ಚಿಲುಮೆ, ಆಸ್ತಿಕ** ವಿವರ್ಧಿನಿ **ಸಂಘದ ಅಧ್ಯಕ್ಷರು, ಪುರೋಹಿತರು,** ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿರುವ ಶ್ರೀ ನರಸಿಂಹಮೂರ್ತಿಗಳ ಸೇವಾಮನೋಭಾವವನ್ನೂ ಸಭೆಯಲ್ಲಿ ಕೊಂಡಾಡಲಾಯ್ತು. ಜಿಲ್ಲಾ ಪ್ರಥಮ ಕನ್ನಡ ಸಮ್ಮೇಳನದ ಅಧ್ಯಕ್ಷರೂ ಜನಾನುರಾಗಿ ಮಕ್ಕಳತಜ್ಞರೂ ಜೋಳದಾಳ್ ನರ್ಸಿಂಗ್ ಹೋಂ ಮಾಲಿಕರೂ ಜಿಲ್ಲಾ ಕನ್ನಡ ಶಕ್ತಿಕೇಂದ್ರದ ಅಧ್ಯಕ್ಷರೂ ಮಲೆನಾಡು ವಿದ್ಯಾಸಂಸ್ಥೆಯ ಉಪಾಧ್ಯಕ್ಷರೂ ಆಶಾಕಿರಣ ಅಂಧಮಕ್ಕಳ ಶಾಲೆಯ ಸಂಸ್ಥಾಪಕರೂ ಆದ ಡಾ. ಜೆ.ಪಿ. ಕೃಷ್ಣೇಗೌಡರು ಆಗಮಿಸಿದ್ದರು. ಕನ್ನಡ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪ ಸಮಾರೋಪ ಭಾಷಣ ಮಾಡಿದರು. ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಚಿದಾನಂದಗೌಡ, ಚಿಕ್ಕಮಗಳೂರಿನ ಲೋಕಸಭಾ ಸದಸ್ಯರಾದ ಶ್ರೀ ಡಿ.ಸಿ. ಶ್ರೀಕಂಠಪ್ಪನವರು ಸಭೆಯಲ್ಲಿ ಉಪಸ್ಥಿತರಿದ್ದರು. ಸಮ್ಮೇಳನದ ಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಚಂದ್ರಯ್ಯ ನಾಯಿಡು ಪ್ರಾಸ್ತಾವಿಕ ಭಾಷಣ ಮಾಡಿದರು. ಸನ್ಮಾನದ ಸಂದರ್ಭದಲ್ಲಿ ಲಿಂಗದಹಳ್ಳಿಯಿಂದ ಅನೇಕ ಸಂಕೇತಿ ಬಂಧುಗಳು ಆಗಮಿಸಿ ಚಿಕ್ಕಮಗಳೂರಿನಲ್ಲಿರುವ ಸಂಕೇತಿ ಬಂಧುಗಳೊಂದಿಗೆ ವೇ. ಬ್ರ. ಶ್ರೀಯವರಿಗೆ ಮಾಲಾರ್ಪಣೆ ಮಾಡಿ ನೆನಪಿನ ಕಾಣಿಕೆಯನ್ನು ನೀಡಿ ತಮ್ಮ ಗೌರವಾರ್ಪಣೆ ಮಾಡಿದುದು ಸ್ತುತ್ಯರ್ಹ. ಶ್ರೀ ನರಸಿಂಹಮೂರ್ತಿಗಳಿಗೆ ಆಯುರಾರೋಗ್ಯವನ್ನು ಆ ದಯಾಮಯನಾದ ಪರಮಾತ್ಮನು ಕೊಟ್ಟು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಸಂಕೇತಿ ಬಾಂಧವರೆಲ್ಲರೂ ಪ್ರಾರ್ಥಿಸೋಣ.

***ಸಂಕೇತಿ ಸಂಗಮ ವಿಶೇಷಾಂಕ, ಜುಲೈ ೨೦೦೨***

## ವಿದ್ವಾನ್ ನರಸಿಂಹಮೂರ್ತಿಗಳಿಗೆ 'ವೇದರತ್ನ' ಪ್ರಶಸ್ತಿ

ಪ್ರಕಾಂಡ ಸಂಸ್ಕೃತ ವಿದ್ವಾಂಸರಾದ ಲಿಂಗದಹಳ್ಳಿಯ ವೇ. ಎಸ್. ನರಸಿಂಹಮೂರ್ತಿಗಳು ೨೦೦೧ನೇ ಸಾಲಿನ 'ವೇದರತ್ನ' ಪ್ರಶಸ್ತಿಗೆ ಆಯ್ಕೆಯಾಗಿರುವುದು ಅತ್ಯಂತ ಸಂತಸದ ವಿಷಯ. ಪ್ರತಿವರ್ಷ ವೇದ ಹಾಗೂ ಸಂಸ್ಕೃತ ವಿದ್ವಾಂಸರಿಗೆ ಭಾರತೀಯ ವಿದ್ಯಾಭವನ ನೀಡುವ *ಈ* ಪ್ರಶಸ್ತಿಯನ್ನು ದಿವಂಗತ ಗುರು ಗಂಗೇಶ್ವರಾನಂದರ ಅನುಯಾಯಿಗಳು ಸ್ಥಾಪಿಸಿದ್ದು, ಪ್ರಶಸ್ತಿ ಒಂದು ಲಕ್ಷ ರೂ. ನಗದು ಹಾಗೂ ಶ್ರೀ ಗುರು ಗಂಗೇಶ್ವರಾನಂದಜೀ ಅವರ ಪ್ರತಿಮೆ ಒಳಗೊಂಡಿದೆ. ವೇದದ ಒಂದೊಂದು ಶಾಖೆಯಲ್ಲಿ ಒಬ್ಬೊಬ್ಬ ವಿದ್ವಾಂಸರಿಗೆ ಹಾಗೂ ವೇದ-ಸಂಸ್ಕೃತ ವಿಭಾಗದಲ್ಲಿ ಮೂವರು ವಿದ್ವಾಂಸರಿಗೆ ೨೦೦೧ರ ಪ್ರಶಸ್ತಿಯನ್ನು ನೀಡಲಾಗಿದ್ದು *ಈ* ವರ್ಷ ಪ್ರಶಸ್ತಿ ಪಡೆದ ಏಳು ಜನ ವಿದ್ವಾಂಸರಲ್ಲಿ ಶ್ರೀ ಲಿಂಗದಹಳ್ಳಿ ನರಸಿಂಹಮೂರ್ತಿಗಳು ಮತ್ತು ಶ್ರೀ ಗುಂಡಾಭಟ್ ಮಾತ್ರ ಕರ್ನಾಟಕದವರಾಗಿದ್ದು ಶಾಸ್ತ್ರಿಗಳು ವೇದ-ಸಂಸ್ಕೃತ ವಿಭಾಗದಲ್ಲಿ *ಈ* ಪ್ರಶಸ್ತಿ ಪಡೆದು ಸಂಕೇತಿಗಳ ಹೆಮ್ಮೆಗೆ ಕಾರಣರಾಗಿದ್ದಾರೆ.

ತೊಂಬತ್ತರ ಇಳಿವಯಸ್ಸಿನಲ್ಲೂ ಕ್ರಿಯಾಶೀಲರಾಗಿರುವ ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು ಇಂದಿಗೂ ಜನರ ಒತ್ತಾಸೆಯನ್ನು ತಳ್ಳಿಹಾಕಲಾಗದೆ ಪೌರೋಹಿತ್ಯ ಮಾಡುತ್ತ ಬಂದಿದ್ದಾರೆ. ಬರಹ, ಭಾಷಣಗಳು ಅವರ ವಿದ್ವತ್ತಿನ ಅವಿಭಾಜ್ಯ ಅಂಗ. ಸಂಕೇತಿ ಸಂಗಮದ ಪ್ರಾರಂಭದಿಂದಲೂ ಅವರು ನಡೆಸಿಕೊಂಡು ಬರುತ್ತಿರುವ ಅಂಕಣ **ವೇದಸಂದೇಶ** ಅವರ ವಿದ್ವತ್ತಿಗೂ, ಶಾಸ್ತ್ರ ವಿಷಯಗಳನ್ನು ಸರಳ ರೀತಿಯಲ್ಲಿ ಅಭಿವ್ಯಕ್ತಿಸುವ ಅನನ್ಯ ಕ್ರಮಕ್ಕೂ, ಶಿಸ್ತುಬದ್ಧ ಬರವಣಿಗೆಗೂ ಸಾಕ್ಷಿಯಾಗಿದೆ.

ಕನ್ನಡ, ಸಂಸ್ಕೃತ ಸಾಹಿತ್ಯ, ಅಲಂಕಾರಶಾಸ್ತ್ರ, ವ್ಯಾಕರಣ, ವೇದಾಂತ ಹಾಗೂ ಮೀಮಾಂಸಾ ವಿಷಯಗಳಲ್ಲಿ ಅಪಾರ ಪಾಂಡಿತ್ಯ ಪಡೆದಿರುವ ಅವರು ಜ್ಯೌತಿಷ ಹಾಗೂ ಸ್ಮಾರ್ತ ಪ್ರಯೋಗಗಳಲ್ಲಿ ಪರಿಣತರು.

ಅವರ ಪಾಂಡಿತ್ಯವನ್ನು ಮೆಚ್ಚಿ ಶ್ರೀ ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳವರು 'ವಿದ್ಯಾಸಾಗರ' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದ್ದಾರೆ. ವೇದಗಳ ಸಾರವಾದ ಲೋಕಹಿತ ಮತ್ತು ಸರ್ವಜನ ಕಲ್ಯಾಣ ಇವುಗಳನ್ನು ಪ್ರಸಾರ ಮಾಡುವಲ್ಲಿ ಶ್ರಮಿಸುತ್ತಿರುವ ಶ್ರೀ ನರಸಿಂಹಮೂರ್ತಿಗಳಿಗೆ ವೇದರತ್ನ ಪ್ರಶಸ್ತಿ ಸಂದಿರುವುದು ಸೂಕ್ತವೂ ಸಕಾಲಿಕವೂ ಆಗಿದೆ. *ಈ* ಸಂದರ್ಭದಲ್ಲಿ ಸಂಕೇತಿ ಸಂಗಮ ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳಿಗೆ ಅಭಿನಂದಿಸುತ್ತ ಸಂಕೇತಿ ಮಂಡಳಿಗೇ ರತ್ನಪ್ರಾಯರಾದ ಅವರ ಮಾರ್ಗದರ್ಶನವು ನಮಗೆಲ್ಲ ಇನ್ನೂ ಹಲವು ಕಾಲ ದೊರಕಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.

***ಸಂಕೇತಿ ಸಂಗಮ, ಅಕ್ಟೋಬರ್ ೨೦೦೨***

# ೮. ವರ್ತಮಾನ

## ಸಂಪಾದಕೀಯ : ಸಂಕೇತಿ ಸಂಗಮ : ನವೆಂಬರ್, ೨೦೦೨

"**ಇಮೌ ದಂಪತೀ ಅರುಂಧತೀವಸಿಷ್ಠಾವಿವ ಸದಾಚಾರಸಂಪನ್ನೌ ಶ್ರೌತಸ್ಮಾರ್ತೋಕ್ತಕರ್ಮಾನುಷ್ಠಾನಬದ್ಧಶ್ರದ್ಧೌ ಭೂಯಾಸ್ತಾಮ್ ಇತಿ ಮಹಾಂತೋ ಭವಂತೋ ಅನುಗೃಹ್ಣಂತು** " - ಇದು ನಮ್ಮಲ್ಲಿ ಪ್ರತಿ ಮದುವೆಯಲ್ಲೂ ಪುರೋಹಿತರು ಯಜಮಾನನ ಪರವಾಗಿ ಮಾಡುವ ಪ್ರಾರ್ಥನೆ. ಅದಕ್ಕೆ ಮಹಾಜನರು "ತಥಾಸ್ತು" ಎಂದು ಆಶೀರ್ವಾದ ಮಾಡುತ್ತಾರೆ. ಸನಾತನ ಋಷಿಗಳು ಮೆಚ್ಚಿದ ಜೀವನದ ಪರಮಾದರ್ಶ ಇದು- ಶ್ರುತಿ ಸ್ಮೃತಿಗಳು ಉಪದೇಶಿಸುವ ಜೀವನಪದ್ಧತಿಯನ್ನು ಅನುಸರಿಸುತ್ತ ಅರುಂಧತೀ ವಸಿಷ್ಠರಂತೆ ಬಾಳುವುದು. ಕಾಮ ಕ್ರೋಧಾದಿ ಅರಿಷಡ್ವರ್ಗಗಳನ್ನು ತನ್ನ ವಶದಲ್ಲಿಟ್ಟುಕೊಂಡವನೇ ವಸಿಷ್ಠ. ಗೃಹಸ್ಥಾಶ್ರಮವು ಆಶ್ರಮಚತುಷ್ಟಯದಲ್ಲಿ ಅತ್ಯಂತ ವಿಶಿಷ್ಟವಾದುದು. ಉಳಿದ ವರ್ಣ-ಆಶ್ರಮದವರಿಗಿಂತ ಮೂರು ಕರ್ತವ್ಯಗಳು ಅಧಿಕ ಗೃಹಸ್ಥನಿಗೆ - ಅವು ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹ. ಸುಖದ ಲೇಪವನ್ನು ಹೊದಿಸಿ ಅತ್ಯಂತ ಕಷ್ಟಕರವಾದ ಅನೇಕ ಜವಾಬ್ದಾರಿಗಳನ್ನು ಗೃಹಸ್ಥನಿಗೆ ನೀಡಿದ್ದಾರೆ ಶಾಸ್ತ್ರಕಾರರು. ಗಾರ್ಹಸ್ಥ್ಯದ ಹುಚ್ಚುಕುದುರೆಯನ್ನು ಏರಿದ ವ್ಯಕ್ತಿ ಸಂಯಮದ ಕಡಿವಾಣವನ್ನು ಭದ್ರವಾಗಿ ಹಿಡಿಯದಿದ್ದಲ್ಲಿ ಪತಿತನಾಗುವುದು ನಿಶ್ಚಿತ. ಉಳಿದ ಆಶ್ರಮದವರಿಗೆ ಇಲ್ಲದ ಅನೇಕ ಸೌಲಭ್ಯಗಳು ಗೃಹಸ್ಥನಿಗುಂಟು. ಆದರೆ ಅದರ ಪ್ರಯೋಜನಗಳು ಮಾತ್ರ ಸಮಾಜಕ್ಕೆ ವಿನಿಯೋಗವಾಗಬೇಕು. ಪರೋಪಕಾರಕ್ಕಾಗಿ ವಿದ್ಯೆ, ಸಂತಾನಕ್ಕಾಗಿ ಕಾಮ, ದಾನಕ್ಕಾಗಿ ಅರ್ಥ, ಇದು ಗೃಹಸ್ಥನ ಧರ್ಮ. *ಈ* ರೀತಿಯ ಅಸಿಧಾರಾವ್ರತದಂತೆ ಇರುವ ಜೀವನವನ್ನು ನಡೆಸುವುದು ಸುಲಭದ ಮಾತಲ್ಲ. "**ಯದೃಚ್ಛಾಲಾಭಸಂತುಷ್ಟಃ ದ್ವಂದ್ವಾತೀತೋ ವಿಮತ್ಸರಃ**" ಎಂದು ಭಗವಂತ ಗೀತೆಯಲ್ಲಿ ಹೇಳಿರುವ ಮಾತು ಇಂಥ ಗೃಹಸ್ಥರಿಗಾಗಿಯೇ. *ಈ* ಸತ್ವಪರೀಕ್ಷೆಯಲ್ಲಿ ಗೆದ್ದವನನ್ನು ಕಂಡಾಗ "ಧನ್ಯೋ ಗೃಹಸ್ಥಾಶ್ರಮಃ" ಎಂದು ನೀತಿಕಾರರು ಕೊಂಡಾಡುತ್ತಾರೆ.

ಲಿಂಗದಹಳ್ಳಿಯ 'ವಿದ್ಯಾಸಾಗರ' ಎಸ್. ನರಸಿಂಹಮೂರ್ತಿಶಾಸ್ತ್ರಿಗಳು ಈ ಮಾತಿಗೆ ಉದಾಹರಣೆಯಂತೆ ಬಾಳುತ್ತಿರುವ ವಿಶಿಷ್ಟ ವ್ಯಕ್ತಿ. ತೊಂಬತ್ತೂರರ ಹರೆಯದ ಶಾಸ್ತ್ರಿಗಳು ಎಪ್ಪತ್ತೈದು ಸಂವತ್ಸರಗಳ ಕಾಲ ಪೌರೋಹಿತ್ಯ ನಡೆಸಿದರೂ ಇಂದಿಗೂ ಸೋರುವ ಮನೆಯಲ್ಲೇ ಹಾಯಾಗಿದ್ದಾರೆ! ಕರೆದೆಡೆಗೆ ಸೈಕಲ್ ತುಳಿಯುತ್ತ ಹೋಗುತ್ತಾರೆ! ಪರಮ ಪಂಡಿತರಾಗಿದ್ದರೂ ಹಣಕ್ಕಿಂತ ಹೆಚ್ಚು ಮಿತವಾಗಿ ಮಾತನ್ನು ಬಳಸುತ್ತಾರೆ! ಕೇಳಿದವರಿಗೆ ಮಾತ್ರ ಹೇಳುತ್ತಾರೆ! ಅತ್ಯಂತ ಕಾರ್ಪಣ್ಯದ ಬದುಕಿನಲ್ಲೂ '**ಕೊಡುವ**' ಮಂತ್ರವನ್ನು ಉಲಿಯುತ್ತಾರೆ! ಅರುಂಧತಿಯಂತಹ ಸುಶೀಲೆಯಾದ ವೃದ್ಧ ಪತ್ನಿಯೊಂದಿಗೆ ನಿಟ್ಟುಸಿರಿಲ್ಲದ ಬದುಕನ್ನು ಬಾಳುತ್ತ ಲಿಂಗದಹಳ್ಳಿಯಲ್ಲಿ "ಸಗ್ಗಕ್ಕೆ ಕಿಚ್ಚು ಹಚ್ಚೆಂದು" ಸಂತೃಪ್ತರಾಗಿದ್ದಾರೆ. . . . ಕೆಲವರು ಪ್ರಶಸ್ತಿಗಳನ್ನು ಗಳಿಸಿ ಲೋಕದಲ್ಲಿ ದೊಡ್ಡವರೆನಿಸಿಕೊಳ್ಳುತ್ತಾರೆ. ಇನ್ನು ಕೆಲವರಿಗೆ ಪ್ರಶಸ್ತಿಗಳು ಬಂದಲ್ಲಿ ಆ ಪ್ರಶಸ್ತಿಗೇ ಒಂದು ವಿಧದ ಗೌರವ ಪ್ರಾಪ್ತವಾಗುತ್ತದೆ. ಈ ರೀತಿ ಪ್ರಶಸ್ತಿಗೆ ಗುರುತ್ವ ನೀಡಬಲ್ಲ ಅಪರೂಪದ ವ್ಯಕ್ತಿ ಲಿಂಗದಹಳ್ಳಿಯ 'ವೇದರತ್ನ' ನರಸಿಂಹಮೂರ್ತಿಶಾಸ್ತ್ರಿಗಳು. ಅಂತಹ ಜ್ಞಾನವೃದ್ಧರಿಗೆ, ವಯೋವೃದ್ಧರಿಗೆ "ಗುರು ಗಂಗೇಶ್ವರಾನಂದ ಪ್ರಶಸ್ತಿ" ನೀಡುವ ಮೂಲಕ ಭಾರತೀಯ ವಿದ್ಯಾಭವನ ಅತ್ಯಂತ ಸಮಂಜಸವಾದ ಲೋಕೋಪಕಾರವನ್ನು ಮಾಡಿದಂತಾಗಿದೆ. ಅದಕ್ಕಾಗಿ ಭವನಕ್ಕೆ ಹಾರ್ದಿಕ ಕೃತಜ್ಞತೆಗಳನ್ನೂ, ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳಿಗೆ ಅಭಿನಂದನೆಗಳನ್ನೂ ಸಲ್ಲಿಸುತ್ತೇವೆ.

## ಲಿಂಗದಹಳ್ಳಿಯಲ್ಲಿ ಅಭಿನಂದನಾ ಸಮಾರಂಭ

**ವರದಿ : ಲಿಂಗದಹಳ್ಳಿ ಸೂರಿ : ಸಂಕೇತಿ ಸಂಗಮ : ಡಿಸೆಂಬರ್, ೨೦೦೨**

ಗುರು ಗಂಗೇಶ್ವರಾನಂದರ ನೆನಪಿನಲ್ಲಿ ಭಾರತೀಯ ವಿದ್ಯಾಭವನ ನೀಡುವ ೨೦೦೧ರ **ವೇದರತ್ನ ಪ್ರಶಸ್ತಿ**ಗೆ ಆಯ್ಕೆಯಾಗಿರುವ ಲಿಂಗದಹಳ್ಳಿಯ ವೇ.ಶ್ರೀ ನರಸಿಂಹಮೂರ್ತಿಯವರನ್ನು ಅಭಿನಂದಿಸುವ ಸುಂದರ ಸಮಾರಂಭವು ದಿ.೨೭.೧೦.೦೨ರ ಮುಂಜಾನೆ ಲಿಂಗದಹಳ್ಳಿಯ ಶ್ರೀರಾಮಮಂದಿರದಲ್ಲಿ ಜರುಗಿತು. ಈ ಸಮಾರಂಭಕ್ಕೆ ಆಗಮಿಸಿದ್ದ ಮಾನ್ಯ ಶ್ರೀ ಮತ್ತೂರು ಕೃಷ್ಣಮೂರ್ತಿಗಳು ಮತ್ತು ಶ್ರೀ ಮಾರ್ಕಂಡೇಯ ಅವಧಾನಿಗಳು, ಹೊಸಹಳ್ಳಿಯ ಗಮಕ ವಿದ್ವಾನ್ ಕೇಶವಮೂರ್ತಿಗಳ ಸಹಿತ ಶ್ರೀ ನರಸಿಂಹಮೂರ್ತಿ ದಂಪತಿಗಳನ್ನು ವೇದಘೋಷಗಳೊಡನೆ ಪೂರ್ಣಕುಂಭ ಸಮೇತ ಸ್ವಾಗತಿಸಿ, ಚಿಕ್ಕಮಕ್ಕಳ ಆರತಿಯೊಂದಿಗೆ ಮಂದಿರದ ಒಳಕ್ಕೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಶ್ರೀ ಎಲ್.ಆರ್. ಶ್ರೀನಿವಾಸ್ ಅವರು ಕಾರ್ಯಕ್ರಮದ ಸಾರಥ್ಯ ವಹಿಸಿದ್ದರು. ವೇ. ಶ್ರೀ ನರಸಿಂಹಮೂರ್ತಿ ದಂಪತಿಗಳನ್ನು ಸನ್ಮಾನಿಸಿ ಮಾತನಾಡಿದ ಶ್ರೀ ಮತ್ತೂರು ಕೃಷ್ಣಮೂರ್ತಿಗಳು, ಇಂತಹ **ಪ್ರಕಾಂಡ ಪಾಂಡಿತ್ಯ**ವುಳ್ಳ ಶ್ರೀ ನರಸಿಂಹಮೂರ್ತಿಗಳಿಗೆ ಈ ಪ್ರಶಸ್ತಿ ಸಿಕ್ಕಿರುವುದಕ್ಕೆ ಅತ್ಯಂತ ಆನಂದ ವ್ಯಕ್ತಪಡಿಸಿ, **'ಇವರು ನಮ್ಮ ಜನಾಂಗದ ಹೆಮ್ಮೆ**'ಯೆಂದು ಬಣ್ಣಿಸಿ 'ಇವರು ಸಂಕೇತಿಸಂಗಮದಲ್ಲಿ ಬರೆಯುವ ವೇದಸಂದೇಶ ಅತ್ಯಂತ ಸುಂದರವೂ ವಿಚಾರ ಪೂರ್ಣವೂ ಆಗಿದ್ದು, ಇದರಿಂದ ತಾವು ಪ್ರಭಾವಿತರಾಗಿರುವುದಾಗಿ' ತಿಳಿಸಿದರು. ಸರಳವಾಗಿ ವಿಶ್ಲೇಷಿಸಲ್ಪಟ್ಟಿರುವ ಈ ಸಂದೇಶಗಳಿಂದ ಭಾರತೀಯ ವಿದ್ಯಾಭವನದ ತಮ್ಮ ಕಾರ್ಯನಿರ್ವಹಣೆಗೆ ಎಷ್ಟು ಸಹಾಯವಾಗಿದೆ ಎಂದು ತಮ್ಮ ಅನುಭವಗಳನ್ನು ಬಣ್ಣಿಸುತ್ತ ತಿಳಿಸಿದರು. ಎಲ್ಲರೂ ಅವರ ವೇದಸಂದೇಶವನ್ನು ಖಂಡಿತ ಓದಲೇಬೇಕೆಂಬ ಕರೆಕೊಟ್ಟರು. ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ವೇ|| ಶ್ರೀ ಮಾರ್ಕಂಡೇಯ ಅವಧಾನಿಗಳು ನರಸಿಂಹಮೂರ್ತಿ ದಂಪತಿಗಳನ್ನು **ಅರುಂಧತೀ ವಸಿಷ್ಠ**ರಿಗೆ ಹೋಲಿಸುತ್ತ **ಇಂತಹವರಿಗೆ ಸಂದ ಪ್ರಶಸ್ತಿಯಿಂದ ಪ್ರಶಸ್ತಿ ಪ್ರದಾನ ಮಾಡಿದವರೇ ಪುರಸ್ಕೃತರಾದಂತಾಗಿದೆ** ಎಂದು ಅಭಿಪ್ರಾಯಪಟ್ಟರು. ಅಷ್ಟೊಂದು ಆಳವಾದ ಜ್ಞಾನ ಹೊಂದಿದ, ಮೇಧಾವಿಗಳಾದರೂ ಕೋಪವನ್ನೇ ಕಾಣದ, ಯಾರನ್ನೂ ಸ್ವಲ್ಪವೂ ನೋಯಿಸದ ಅವರ ಸಜ್ಜನಿಕೆಯು ಅನುಕರಣೀಯ ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತ ಶ್ರೀ ನರಸಿಂಹಮೂರ್ತಿಯವರ ಬಂಧು ಹಾಗೂ ಆತ್ಮೀಯ ಗೆಳೆಯ ಶ್ರೀ ಎಲ್.ವಿ. ಕೃಷ್ಣಮೂರ್ತಿಗಳು ಮಾತನಾಡಿದ್ದು ಹೃದಯಸ್ಪರ್ಶಿಯಾಗಿತ್ತು. ಅಭಿನಂದನೆಗಳನ್ನು ಸ್ವೀಕರಿಸಿ ಮಾತನಾಡಿದ ವೇ. ಶ್ರೀಯವರು 'ಜ್ಞಾನದ ಸೀಮೆ ಅನಂತವಾಗಿದ್ದು, ಎಷ್ಟು ಕಲಿತರೂ ಕಡಮೆಯೇ' ಎನ್ನುವುದನ್ನು ಅತ್ಯಂತ ಸೌಜನ್ಯದಿಂದ ಬಣ್ಣಿಸಿದರು. ತಮ್ಮನ್ನು ಅಭಿನಂದಿಸುವುದಕ್ಕಾಗಿ ಮತ್ತೂರರಂಥ ಮೇರು ಸದೃಶರು ತಮ್ಮ ಮನೆಗೂ, ಲಿಂಗದಹಳ್ಳಿಗೂ ಬಂದಿದ್ದಾರೆನ್ನುವುದೇ ಇನ್ನೂ ಹೆಚ್ಚಿನ ಭಾಗ್ಯದ ವಿಚಾರ ಎಂದು ವಿನಯದಿಂದ ಸಂಭ್ರಮಿಸಿದರು. ವೇದಿಕೆಯಲ್ಲಿ ಆಸೀನರಾಗಿದ್ದ ಶ್ರೀ ಹೊಸಹಳ್ಳಿ ಕೇಶವಮೂರ್ತಿಗಳು ತಮ್ಮ ಮಧುರ ಕಂಠಶ್ರೀಯಿಂದ ನಾಲ್ಕಾರು ಷಟ್ಪದಿಗಳನ್ನು ಕುಮಾರವ್ಯಾಸ ಭಾರತದಿಂದ ಆರಿಸಿ, ಸುಶ್ರಾವ್ಯವಾಗಿ ಹಾಡಿ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದರು. ಈ ಸಂದರ್ಭದಲ್ಲೇ, ಲಿಂಗದಹಳ್ಳಿಗೆ ಮೊದಲ ಬಾರಿಗೆ ಆಗಮಿಸಿದ್ದ ಮತ್ತೂರು ಕೃಷ್ಣಮೂರ್ತಿ ಹಾಗೂ ಅವರ ಶ್ರೀಮತಿ ರಾಜಲಕ್ಷ್ಮೀಯವರನ್ನೂ ಮತ್ತು ವೇ. ಶ್ರೀ ಮಾರ್ಕಂಡೇಯ ಅವಧಾನಿಗಳನ್ನೂ ಆಸ್ತಿಕ ವಿವರ್ಧಿನಿ ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಮೊದಲಿಗೆ ಪ್ರಾರ್ಥನೆಯನ್ನು ಶ್ರೀಮತಿ ಶಾರದಾ ಗೋಪಾಲ ಹಾಗೂ ಕುಮಾರಿ ಮಮತಾ ಮಾಡಿದರು. ಶ್ರೀ ಎಲ್.ವಿ. ಸೂರ್ಯನಾರಾಯಣ ಸ್ವಾಗತ ಕೋರಿದರು. ಶ್ರೀ ಎಲ್.ಆರ್. ಸುಬ್ರಹ್ಮಣ್ಯ ಸಂದೇಶ ವಾಚನ ಮಾಡಿದರು. ಶ್ರೀ ಮತ್ತೂರರನ್ನು ಶ್ರೀ ದಿನಮಣಿಯವರು ಮತ್ತು ಶ್ರೀ ಮಾರ್ಕಂಡೇಯ ಅವಧಾನಿಗಳನ್ನು ಶ್ರೀ ಪದ್ಮನಾಭ ಅವರು ಪರಿಚಯಿಸಿದರು. ಡಾ|| ಶ್ರೀಪತಿ ವಂದನಾರ್ಪಣೆ ನೆರವೇರಿಸಿದರು. ನಿರೂಪಣೆಯ ಸಾರಥ್ಯ ಸಂಘದ ಕಾರ್ಯದರ್ಶಿ ಶ್ರೀ ಎಲ್.ಜಿ. ಅನಂತ ಅವರದಾಗಿತ್ತು.

## 'ವೇದರತ್ನ' ಪ್ರಶಸ್ತಿ ಪ್ರದಾನ ಸಮಾರಂಭ : ಸಂಕೇತಿ ಸಂಗಮ : ಡಿಸೆಂಬರ್, ೨೦೦೨

"ಇದು ವ್ಯಕ್ತಿಗಳಿಗೆ ಮಾಡುತ್ತಿರುವ ಸನ್ಮಾನ ಮಾತ್ರವಲ್ಲ; ಈ ಹಿರಿಯ ವಿದ್ವಾಂಸರ ನೆಪದಲ್ಲಿ ನಮ್ಮ ಸಂಸ್ಕೃತಿಗೆ, ಉಜ್ವಲ ಪರಂಪರೆಗೆ, ಸನಾತನ ಧರ್ಮಕ್ಕೆ ಮಾಡಿದ ಸಂಮಾನ. ಇಂತಹ ಕರ್ತವ್ಯ ನಮ್ಮ ಪಾಲಿಗೆ ಬಂದದ್ದು ನನ್ನ ಭಾಗ್ಯ" ಎಂದು ಕರ್ನಾಟಕದ ರಾಜ್ಯಪಾಲ ಮಾನನೀಯ **ಶ್ರೀ ಟಿ.ಎನ್.ಚತುರ್ವೇದಿ** ಅವರು ತಿಳಿಸಿದರು. ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಖಿಂಚಾ ಸಭಾಂಗಣದಲ್ಲಿ ಏರ್ಪಡಿಸಿದ್ದ **'ವೇದರತ್ನ' ಪುರಸ್ಕಾರ ಸಮಾರಂಭ**ದಲ್ಲಿ ಅವರು ಮಾತನಾಡುತ್ತಿದ್ದರು. ನವೆಂಬರ್ ೧೬ ರಂದು ಸಂಜೆ ನಡೆದ ವರ್ಣರಂಜಿತ ಸಮಾರಂಭದಲ್ಲಿ ಲಿಂಗದಹಳ್ಳಿಯ 'ವಿದ್ಯಾಸಾಗರ' ಎಸ್.ನರಸಿಂಹಮೂರ್ತಿ ಶಾಸ್ತ್ರಿಗಳು (ವೇದಸಂದೇಶ ಖ್ಯಾತಿ), ಘನಪಾಠಿ ಗುಂಡಾಭಟ್ಟರು (ನಮ್ಮವರೇ ಆದ ಬೆಟ್ಟದಪುರದ ವೇ. ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳ ಶಿಷ್ಯರು) ಹಾಗೂ ಇತರ ಐವರು ಹಿರಿಯ ವಿದ್ವಾಂಸರಿಗೆ ತಲಾ ಒಂದು ಲಕ್ಷ ರೂ. ನಗದು ಹಾಗೂ ಖಿಲ್ಲತ್ತುಗಳೊಂದಿಗೆ 'ವೇದರತ್ನ' ಪ್ರಶಸ್ತಿ ನೀಡಿ ಮಾನನೀಯ ರಾಜ್ಯಪಾಲರಾದ ಶ್ರೀ ಚತುರ್ವೇದಿಯವರು ಸನ್ಮಾನಿಸಿದರು. ಸಕಾಲದಲ್ಲಿ ಆಗಮಿಸಿದ ಮಾನ್ಯ ರಾಜ್ಯಪಾಲ ಚತುರ್ವೇದಿ ಅವರನ್ನು ಮತ್ತೂರಿನ ವೇದವಿದರಾದ ಶ್ರೀ ಕೇಶವ ಅವಧಾನೀ, ಪ್ರೊ. ಎಂ.ಎನ್. ಚಂದ್ರಶೇಖರ್ ಮೊದಲಾದವರು ಪೂರ್ಣಕುಂಭದೊಂದಿಗೆ ಬರಮಾಡಿಕೊಂಡರು. ಭಾರತೀಯ ವಿದ್ಯಾಭವನದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಮತ್ತೂರು ಕೃಷ್ಣಮೂರ್ತಿಗಳು ವೇದರತ್ನ ಪುರಸ್ಕಾರಕ್ಕೆ ಕಾರಣಕರ್ತರಾದ ಶ್ರೀ **ಗುರುಗಂಗೇಶ್ವರಾನಂದರ** ಜೀವನ, ಸಾಧನೆ ಹಾಗೂ ಅವರ ಶಿಷ್ಯರ ಬಗೆಗೆ ಪರಿಚಯಮಾಡಿಕೊಟ್ಟರು. ಶ್ರೀಮತಿ ಪ್ರೇಮಾ ತೋತಾದ್ರಿ ಅವರು ಸನ್ಮಾನಿತರ ಪರಿಚಯ ಮಾಡಿಸಿದರು. ಭವನೋತ್ಸವದ ಅಂಗವಾಗಿ ನಡೆದ **'ಪುಸ್ತಕ ಪೂರ್ಣಿಮಾ'** ಪ್ರದರ್ಶಿನಿಯನ್ನು, ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ **ರಾಣಿ ಸತೀಶ್** ಉದ್ಘಾಟಿಸಿದರು. ತಮಗೆ ನೀಡಿದ ಸನ್ಮಾನಕ್ಕೆ ಉತ್ತರವಾಗಿ ನರಸಿಂಹಮೂರ್ತಿಶಾಸ್ತ್ರಿಗಳು ಸಂಸ್ಕೃತದಲ್ಲಿ ಮಾತನಾಡಿ "ಜ್ಞಾನರಾಶಿ ಅಪಾರವಾದುದು; ಜಗತ್ತಿನಲ್ಲಿ ಸರಸ್ವತೀಪುತ್ರರ ಸಂಖ್ಯೆ ವಿಪುಲವಾಗಿದೆ. ನಾವು 'ಕೂಪಮಂಡೂಕ'ರಾಗಬಾರದು; ಇನ್ನೂ ಎತ್ತರಕ್ಕೆ ಬೆಳೆಯುವ ಆಶಯ ಸದಾ ನಮ್ಮದಾಗಬೇಕು" ಎಂದು ವಿನಯದಿಂದ ನುಡಿದರು. ಭವನದ ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕ ಶ್ರೀ ಎಚ್.ಎನ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರೆ, ಭವನದ ಗೌರವ ಕಾರ್ಯದರ್ಶಿಗಳಾದ ಶ್ರೀ ಆರ್. ತೋತಾದ್ರಿ ಅವರು ಎಲ್ಲರನ್ನೂ ವಂದಿಸಿದರು. ಸಕಾಲಕ್ಕೆ ಪ್ರಾರಂಭವಾಗಿ ನಿಗದಿತ ಅವಧಿಯಲ್ಲಿ ಮುಕ್ತಾಯವಾದ ಸುಂದರ ಸಮಾರಂಭ ಎಲ್ಲರ ಮೆಚ್ಚುಗೆಯನ್ನು ಗಳಿಸಿತು.

## ಅನಿಸಿಕೆ : ಎಲ್.ಎಸ್. ಮೀನಾಕ್ಷಮ್ಮ, ಹೈದರಾಬಾದ್ : ಸಂಕೇತಿ ಸಂಗಮ : ಜನವರಿ, ೨೦೦೩

ಲಿಂಗದಹಳ್ಳಿಯ ಶೀ. ನರಸಿಂಹಮೂರ್ತಿಗಳು ನನ್ನ ದೊಡ್ಡಪ್ಪನವರು. ಅವರಿಗೆ ಭಾರತೀಯ ವಿದ್ಯಾಭವನದಿಂದ ಕೊಡಲ್ಪಡುವ ವೇದರತ್ನ ಪ್ರಶಸ್ತಿ ಸಿಕ್ಕಿದ್ದು ಕೇಳಿ ಮನಸ್ಸಿಗೆ ತುಂಬ ಹರ್ಷವಾಯಿತು. ದೊಡ್ಡಪ್ಪನವರು ಶಂಕರಮಠದಲ್ಲಿ ಕಲಿತವರೆಂದೂ, ಶೃಂಗೇರಿ ಮತ್ತು ಕೂಡಲಿಯ ಮಠಾಧಿಪತಿಗಳಿಗೆ ಬೋಧಿಸಿದವರೆಂದೂ ತಿಳಿದಿದ್ದರೂ, ಅವರಿಗೆ ಈ ರೀತಿಯ **ರಾಷ್ಟ್ರೀಯ ಪ್ರಶಸ್ತಿ** ಬರಬಹುದೆಂಬ ಎಣಿಕೆಯೇ ನಮಗೆ ಇರಲಿಲ್ಲ. ಯಾವಾಗಲೂ ಹಾಗೆಯೇ- ನಮ್ಮ ಹತ್ತಿರದವರ ಯೋಗ್ಯತೆ ಇನ್ನೊಬ್ಬರು ಗುರುತಿಸಿದಾಗಲೇ ನಮಗೆ ತಿಳಿಯುವುದು. ಯಾವುದೇ ರೀತಿಯ ಪ್ರಚಾರವನ್ನು ಬಯಸದೇ ತಮ್ಮ ಕಾರ್ಯ ಮಾಡಿಕೊಂಡು ಬಂದಿರುವ ಅವರ ಸಾಧನೆಯನ್ನು ಗುರುತಿಸಿದ **ಭಾರತೀಯ ವಿದ್ಯಾಭವನಕ್ಕೆ** ಧನ್ಯವಾದಗಳು. ಅವರು ಅನೇಕ ವರುಷ ನಮಗೆಲ್ಲ ಮಾರ್ಗದರ್ಶಿಯಾಗಿರಲೆಂದೂ ಇನ್ನೂ ಇಂತಹ ಹಲವು ಸಮ್ಮಾನಗಳು ಅವರನ್ನು ಗೌರವಿಸಲೆಂದೂ ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ.

## ಅಭಿಮಾನಿಗಳ ಅಂತಃಕರಣ ಮಿಡಿದ ಅಭಿನಂದನಾ ಸಮಾರಂಭ

**ವರದಿ : ಕಾತ್ಯಾಯನಿ ಅನಂತ, ಚಿಕ್ಕಮಗಳೂರು : ಸಂಕೇತಿ ಸಂಗಮ: ಡಿಸೆಂಬರ್, ೨೦೦೩**

ಲಿಂಗದಹಳ್ಳಿಯ 'ಆಸ್ತಿಕ ವಿವರ್ಧಿನಿ ಸಂಘ'ದ ವತಿಯಿಂದ ೨.೧೧.೦೩ರ ಭಾನುವಾರ 'ವಿದ್ಯಾಸಾಗರ' 'ವೇದರತ್ನ' ನರಸಿಂಹಮೂರ್ತಿ ಅವರಿಗೆ **"ನಿಗಮ ಕೌಮುದಿ"** ಎಂಬ **'ಅಭಿನಂದನ ಗ್ರಂಥ'** ಸಮರ್ಪಣೆ ಹಾಗೂ ಸನ್ಮಾನ ಕಾರ್ಯಕ್ರಮ ಅಭೂತಪೂರ್ವವಾಗಿ ನಡೆಯಿತು.

ಹಳ್ಳಿಯು ತಳಿರು-ತೋರಣಗಳಿಂದ ಅಲಂಕೃತಗೊಂಡಿದ್ದು, ಹಳ್ಳಿಯಲ್ಲಿ ಹಬ್ಬದ ವಾತಾವರಣ ಮೂಡಿತ್ತು. ಈ ವಾತಾವರಣ ಮೂಡಲು ಮುಖ್ಯ ಕಾರಣ ಎಲ್ಲರಿಗೂ ಶ್ರೀ ನರಸಿಂಹಮೂರ್ತಿಯವರ ಮೇಲಿರುವ ಭಕ್ತಿ, ಅಭಿಮಾನ ಹಾಗೂ ಗೌರವ. ಕಾರ್ಯಕ್ರಮವು ವೇಳೆಗೆ ಸರಿಯಾಗಿ ಬೆಳಗ್ಗೆ ೧೦.೪೫ಕ್ಕೆ ಆರಂಭಗೊಂಡಿತು. ಕಾರ್ಯಕ್ರಮಕ್ಕೆ ಅನೇಕ ಗಣ್ಯರು ಆಗಮಿಸಿದ್ದು, ಅತಿಥಿಗಳನ್ನು **ಪೂರ್ಣಕುಂಭ** ಸ್ವಾಗತದೊಂದಿಗೆ ಶ್ರೀರಾಮಮಂದಿರಕ್ಕೆ


ಕರೆತರಲಾಯಿತು. ಅಧ್ಯಕ್ಷತೆಯನ್ನು ಅಗ್ರಹಾರದ ವೆ. ಶ್ರೀ **'ಗುರುಭಕ್ತರತ್ನ' ಚಂದ್ರಶೇಖರ ಶರ್ಮಾ** ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಮತ್ತೂರು ಕೃಷ್ಣಮೂರ್ತಿಗಳು, ಪ್ರೊ. ಚಂದ್ರಶೇಖರ್, ವೇ. ಶ್ರೀಗಳಾದ ಅಶ್ವತ್ಥನಾರಾಯಣ ಅವಧಾನಿಗಳು, ಕೇಶವ ಅವಧಾನಿಗಳು, ಪ್ರೊ.ಸೂರ್ಯನಾರಾಯಣ ಸ್ವಾಮಿ, ಶ್ರೀ ಹಿರೇಮಗಳೂರು ಕಣ್ಣನ್, ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಡಿ.ಎಚ್. ನಟರಾಜ್ ಆಗಮಿಸಿದ್ದರು. ಗ್ರಂಥದ ಪ್ರಧಾನ ಸಂಪಾದಕರಾದ ಶ್ರೀ ಎಲ್.ವಿ. ಸೀತಾರಾಮ್ ಜತೆಗೆ ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾದ ವೇ. ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು ವೇದಿಕೆಯ ಮೇಲೆ ಆಸೀನರಾಗಿದ್ದರು. ಶ್ರೀ ಜನಾರ್ದನ ಮತ್ತು ಸಂಗಡಿಗರ ವೇದಘೋಷದೊಂದಿಗೆ ಕಾರ್ಯಕ್ರಮ ಶುರುವಾಯಿತು. ಶ್ರೀಮತಿ ಶಾರದಾ ಮತ್ತು ಮಮತಾರಿಂದ ದೇವತಾ ಪ್ರಾರ್ಥನೆಯನಂತರ ಶ್ರೀಮತಿ ಪದ್ಮಾ ಮತ್ತು ಸಂಗಡಿಗರ ಸ್ವಾಗತ ಗೀತೆಯ (ರಚನೆ: **ವಿದ್ವಾನ್ ಬಿ. ಲಕ್ಷ್ಮೀನಾರಾಯಣ್**) ಜತೆಗೆ ಪುಟಾಣಿ ಮಕ್ಕಳು, ವಿವಿಧ ನೃತ್ಯಭಂಗಿಗಳಲ್ಲಿ ಪುಷ್ಪವೃಷ್ಟಿಗೈಯುತ್ತ ಗಣ್ಯರಿಗೆ ಹೃತ್ಪೂರ್ವಕ ಸ್ವಾಗತ ಕೋರಿದ್ದು ವಿಶೇಷವಾಗಿತ್ತು. ಅಭಿನಂದನಾ ಗ್ರಂಥ ಸಮಿತಿಯ ಸಂಚಾಲಕರಾದ **ಶ್ರೀ ಎಲ್.ಜಿ. ಅನಂತ** ಅವರು ಸ್ವಾಗತ ಭಾಷಣದೊಂದಿಗೆ ಅತಿಥಿಗಳನ್ನು ಪರಿಚಯಿಸಿದರು. ಪ್ರೊ. ಸೂರ್ಯನಾರಾಯಣಸ್ವಾಮಿಯವರು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಪ್ರಾಸ್ತಾವಿಕ ನುಡಿಯಲ್ಲಿ **ಪ್ರೊ. ಎಲ್.ಎಂ.ಎಲ್.ಶಾಸ್ತ್ರಿ**ಯವರು **"ನಿಗಮ ಕೌಮುದಿ"** ಗ್ರಂಥದ ಪರಿಚಯ ಹಾಗೂ ಸಮಗ್ರ ಮಾಹಿತಿ ನೀಡಿದರು. ಪ್ರಧಾನ ಸಂಪಾದಕ ಎಲ್.ವಿ. ಸೀತಾರಾಮ್‌ರವರು ಶ್ರೀಯುತರ ಬಗ್ಗೆ ಅಭಿಮಾನದ ನುಡಿಗಳನ್ನಾಡಿದರು. 'ನಿಗಮ ಕೌಮುದಿ'ಯ ಜತೆಗೆ ಶ್ರೀ ನರಸಿಂಹಮೂರ್ತಿ ಅವರು ವಿವರಣೆಸಹಿತ ರಚಿಸಿರುವ **ವಿವಾಹ ಮಂತ್ರಾರ್ಥ** ಎಂಬ ಸಂಗ್ರಹ ಯೋಗ್ಯವಾದ ಹೊತ್ತಗೆಯ ಬಿಡುಗಡೆ ಆಯಿತು. ಈ ಪುಸ್ತಕದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತ ವೇ. ಕೇಶವಾವಧಾನಿಗಳು "ಇದರ ಕರಡು ಪ್ರತಿಯನ್ನು ಏಳು ವರ್ಷದ ಹಿಂದೆ ಅತ್ಯಲ್ಪ ಕಾಲದಲ್ಲಿಯೇ ವೇ. ನರಸಿಂಹಮೂರ್ತಿಯವರು ಮಾಡಿಕೊಟ್ಟರು. ಆದರೆ ಮುದ್ರಣಭಾಗ್ಯ ಒದಗಿರಲಿಲ್ಲ. ಈ ಶುಭ ಸಂದರ್ಭದಲ್ಲಿ ಅದು ಬಿಡುಗಡೆಗೊಳ್ಳುತ್ತಿರುವುದು ಹೆಮ್ಮೆಯ ವಿಷಯ" ಎಂದರು. ಎಲ್ಲರೂ ಕಾತರದಿಂದ ಕಾಯುತ್ತಿದ್ದ ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾದ **ನಿಗಮ ಕೌಮುದಿ** ಗ್ರಂಥವು ಸಮಾರಂಭದ ಅಧ್ಯಕ್ಷರಿಂದ ಬಿಡುಗಡೆಯಾದರೆ, **'ವಿವಾಹ ಮಂತ್ರಾರ್ಥ' ಶ್ರೀ ಮತ್ತೂರ್‌**ಜೀಯವರಿಂದ ಸಮರ್ಪಿಸಲ್ಪಟ್ಟಿತು. ಅನಂತರ ಅಧ್ಯಕ್ಷರು ವೇ. ನರಸಿಂಹಮೂರ್ತಿ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಸೀತಮ್ಮನವರನ್ನು ಆತ್ಮೀಯವಾಗಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಹಲವರು ಪುಷ್ಪಹಾರಗಳೊಂದಿಗೆ ಶಾಲು ಹೊದಿಸಿ ತಮ್ಮ ಅಭಿನಂದನೆ ಸಲ್ಲಿಸಿದರು. ಸಂಕೇತಿ ಸಂಘದ ಪದಾಧಿಕಾರಿಗಳು ಭಾರೀ ಹಾರ ಸಮರ್ಪಿಸಿದರು. ವಿದ್ವಾನ್ ನರಸಿಂಹಮೂರ್ತಿಗಳ ಬಗ್ಗೆ ರಚಿತವಾದ ಸಂಸ್ಕೃತಗೀತೆಯನ್ನು ಶ್ರೀಮತಿ ಸುಜಾತಾ ಸುಶ್ರಾವ್ಯವಾಗಿ ಹಾಡಿ ಎಲ್ಲರ ಮನಗೆದ್ದರು. ಮುಖ್ಯ ಅತಿಥಿಗಳಾದ ವೇ. ಅಶ್ವತ್ಥ ನಾರಾಯಣ ಅವಧಾನಿಗಳು ಶ್ರೀಯುತರ ಸರಳತೆಯ ಬಗ್ಗೆ ಮಾತನಾಡಿ, ಕೆಲವು ಸಂದರ್ಭಗಳನ್ನು ಮೆಲುಕು ಹಾಕಿದರು. **ಹಿರೇಮಗಳೂರು ಕಣ್ಣನ್** ಒಂದೆರಡು ಹಾಸ್ಯಚಟಾಕಿಗಳನ್ನು ಹಾರಿಸಿದರು. ಡಿ.ಎಚ್. ನಟರಾಜ್ ಶುಭಕೋರಿದರು. ಶ್ರೀ ಮತ್ತೂರು ಕೃಷ್ಣಮೂರ್ತಿ ಅವರು ಮಾತನಾಡುತ್ತ "ಶ್ರೀ ನರಸಿಂಹಮೂರ್ತಿಗಳ ಆದರ್ಶಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಅಗತ್ಯ ಇದೆ. ಈ ಸಲುವಾಗಿ ಅವರ ಮಾರ್ಗದರ್ಶನದಲ್ಲಿ ಇಲ್ಲೊಂದು **ವೇದಪಾಠಶಾಲೆ** ನಡೆಸಿ. ವೇದಗಳಿಗೆ ಪುನರುಜ್ಜೀವನ ಕೊಡುವ ಯತ್ನ ಸಾಗಲಿ" ಎಂದರು. ಶ್ರೀ ನರಸಿಂಹಮೂರ್ತಿಗಳು ತಮಗೆ ನೀಡಿದ ಸಂಮಾನಕ್ಕೆ ಉತ್ತರವಾಗಿ "ಋಷಿಪರಂಪರೆ ನಮಗೆ ನೀಡಿದ ಉತ್ಕೃಷ್ಟ ಧರ್ಮದ ಉಳಿವಿಗಾಗಿ ನನ್ನ ಅಳಿಲಸೇವೆ ಸಂದಿದ್ದರೆ ಅದು ನನ್ನ ಭಾಗ್ಯ. ಮಾಡಬೇಕಾದ ಕಾರ್ಯ ಇನ್ನೂ ಸಾಕಷ್ಟಿದೆ. ಭಗವಂತ ಆಯುರಾರೋಗ್ಯವನ್ನು ಕೊಟ್ಟಲ್ಲಿ ಅದೆಲ್ಲವನ್ನೂ ಅವನ ಸೇವೆಗೆ ಮುಡಿಪಾಗಿಡುವೆ" ಎಂದು ಕೃತಜ್ಞತಾಪೂರ್ವಕವಾಗಿ ನುಡಿದರು. ಕಡೆಯಲ್ಲಿ ಅಧ್ಯಕ್ಷರು ತಮ್ಮ ಕಂಚಿನ ಕಂಠಸಿರಿಯಿಂದ ವಾಗ್ಝರಿ ಹರಿಸಿದರು. ಅವರು ಮಾತನಾಡುತ್ತ "ಶ್ರೀ ನರಸಿಂಹಮೂರ್ತಿಯವರ ಪ್ರಗತಿಪರ ಆಲೋಚನೆ ಆಧುನಿಕ ಜೀವನಶೈಲಿಯ ಆವಿಷ್ಕಾರವಾಗಿದೆ" ಎಂದರು. ಡಾ. ರಮೇಶ್ ಸಂದೇಶಗಳನ್ನು ವಾಚಿಸಿದರು. ಶ್ರೀ ಬಿ.ಆರ್. ಪದ್ಮನಾಭ್ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಬಿ.ಸಿ. ಜಗನ್ನಾಥ್ ಹಾಗೂ ಶ್ರೀ ಎಲ್.ವಿ. ಸೂರ್ಯನಾರಾಯಣ್ ಅಚ್ಚುಕಟ್ಟಾಗಿ ಮಾಡಿದರು. ಕಾರ್ಯಕ್ರಮವು ೧೦.೪೫ಕ್ಕೆ ಪ್ರಾರಂಭವಾಗಿ ೩.೪೫ಕ್ಕೆ ಮುಗಿಯಿತು. ಇಷ್ಟು ಸುದೀರ್ಘವಾದ ಕಾರ್ಯಕ್ರಮದಲ್ಲಿ ಸಭಿಕರು ಮಕ್ಕಳಾದಿಯಾಗಿ ಎಲ್ಲರೂ ತದೇಕಚಿತ್ತದಿಂದ ಕಾರ್ಯಕ್ರಮ ವೀಕ್ಷಿಸಿದ್ದು ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಯ್ತು. ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲ ಬಂಧು-ಬಾಂಧವರಿಗೂ, ಹಿತೈಷಿಗಳಿಗೂ 'ಅಭಿನಂದನಾ ಗ್ರಂಥ ಸಮಿತಿ'ಯ ಸಂಚಾಲಕ ಶ್ರೀ **ಅನಂತ** ಈ ಮೂಲಕ ಕೃತಜ್ಞತೆ ಸಲ್ಲಿಸಿದ್ದಾರೆ.

# ೯. ಲೇಖಕರು

1. ಪ್ರೊ. ಎ. ವಿ. ಸೂರ್ಯನಾರಾಯಣಸ್ವಾಮಿ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಶಾರದಾ ವಿಲಾಸ ಕಾಲೇಜು, ಮೈಸೂರು-೫೭೦ ೦೦೪
2. ರಾಮಶರ್ಮಾ, ಸ್ವಾತಂತ್ರ್ಯ ಹೋರಾಟಗಾರರು, ಬಸವಾನಿ
3. ಸಾವಿತ್ರಮ್ಮ ರಾಮಶರ್ಮಾ, ಸಮಾಜಸೇವಕಿ, ಬಸವಾನಿ
4. ವಿದ್ವಾನ್ ಕೆ. ಎಸ್. ಭಾಸ್ಕರಭಟ್ಟ, ಭೀಮನಕೋಣೆ, ಸಾಗರ ತಾಲ್ಲೂಕು
5. ಎ. ಸಿ. ಆಶಾ, ನಂ.೧೪೨, 'ಬೆಳಕು', ವಿಶ್ವ ಬಡಾವಣೆ, ನಾಗಸಂದ್ರ ಅಂಚೆ, ಬೆಂಗಳೂರು-೫೬೦ ೦೭೩
6. ಪೂರ್ಣಿಮಾ ರಂಗನಾಥ್, ಲಿಂಗದಹಳ್ಳಿ
7. ಡಾ. ಎಲ್.ಎಚ್.ಮಂಜುನಾಥ್, ಧರ್ಮಸ್ಥಳ
8. ಅಜ್ಜಂಪುರ ಜಿ.ಸೂರಿ, ಅಧ್ಯಕ್ಷರು, ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಚಿಕ್ಕಮಗಳೂರು
9. ಕಾತ್ಯಾಯಿನಿ ಅನಂತ್, ಚಿಕ್ಕಮಗಳೂರು
10. ವಿದ್ವಾನ್ ಬಿ. ಲಕ್ಷ್ಮೀನಾರಾಯಣ್, ಆಸ್ತಿಕ ವಿವರ್ಧಿನಿ ಸಂಘ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
11. ವೇ. ಬ್ರ. ಶ್ರೀ ರಾಮೇಶ್ವರಾವಧಾನಿಗಳು, ವೇದವಿದ್ವಾಂಸರು, ಬೆಂಗಳೂರು
12. ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು, ವೇದವಿದ್ವಾಂಸರು, ಮತ್ತೂರು
13. ಅನುರಂಜಿನಿ ಮಾಧವ ಶಾಸ್ತ್ರಿ, ಬೆಂಗಳೂರು
14. ಎಲ್.ಎಸ್.ಸುಧಾಕರ್, ಲಿಂಗದಹಳ್ಳಿ
15. ಆರ್.ಕೃಷ್ಣ ತಂತ್ರಿ, ಪತ್ರಕರ್ತರು ಹಾಗೂ ಲೇಖಕರು, ಲಿಂಗದಹಳ್ಳಿ
16. ಎಲ್. ಎಸ್. ಮೀನಾಕ್ಷಮ್ಮ, ಹೈದರಾಬಾದ್
17. ಮತ್ತೂರು ಕೃಷ್ಣಮೂರ್ತಿ, ಭಾರತೀಯ ವಿದ್ಯಾಭವನ, ಬೆಂಗಳೂರು
18. ವಿದ್ವಾನ್ ಬಾಲಚಂದ್ರಶಾಸ್ತ್ರಿಗಳು, ವೇದವಿದ್ವಾಂಸರು, ಧಾರವಾಡ
19. ರಾಮಸುಬ್ರಾಯಶೇಟ್, ಕನ್ನಡ ಪ್ರಾಧ್ಯಾಪಕರು, ಶ್ರೀ ಸರಸ್ವತಿ ವಿಜಯಪುರ
20. ಸಿ.ಎಸ್.ವಿಶ್ವನಾಥ್, ಚಿಕ್ಕಮಗಳೂರು

2.1 ಡಾ. ಜೆ.ಪಿ. ಕೃಷ್ಣೇಗೌಡ, ಜೋಳ್‌ದಾಳ್ ನರ್ಸಿಂಗ್ ಹೋಂ, ರತ್ನಗಿರಿ ರಸ್ತೆ, ಚಿಕ್ಕಮಗಳೂರು-೫೭೧ ೧೦೧

22. ಕೂಡಲಿ ಜಗನ್ನಾಥ ಶಾಸ್ತ್ರೀ
23. ಕೆ. ವಿ. ಚಂದ್ರಮೌಳಿ, ಸಖರಾಯಪಟ್ಟಣ
24. ವಿದ್ವಾನ್ ಎಂ. ಸುಬ್ರಹ್ಮಣ್ಯ ಭಟ್, ಬೀರೂರು
25. ಡಾ. ಬಿ.ಎಸ್.ಪ್ರಣತಾರ್ತಿಹರನ್, ಕನ್ನಡ ಪ್ರಾಧ್ಯಾಪಕರು, ಹಾಸನ
26. ಎಲ್.ಜಿ. ಅನಂತ, ಅಧ್ಯಾಪಕರು, ಚಿಕ್ಕಮಗಳೂರು
27. ಬೀ.ಚಿ. ಜಗನ್ನಾಥ ಜೋಯಿಸ್, ಬೀರೂರು




## ಜ್ಯೋತಿಶ್ರೀ

**ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅಭಿನಂದನ**

*ಪ್ರಧಾನ ಸಂಪಾದಕರು*

**ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ**

# ಜ್ಯೋತಿಶ್ರೀ

*ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಷಷ್ಟ್ಯಬ್ದಪೂರ್ತಿ*
*ಅಭಿನಂದನಾ ಸಂಚಿಕೆ*

**ದಿನಾಂಕ ೧.೧೨.೨೦೦೨ನೇ ಭಾನುವಾರ**
**ಸಂಜೆ : ೪.೦೦ ಗಂಟೆ**

ಓಂ
ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ
ಓಂ ಶಾಂತಿಃ ಶಾಂತಿಃ ಶಾಂತಿಃ

*ಪ್ರಕಾಶಕರು*
**ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅಭಿನಂದನಾ ಸಮಿತಿ**
*ಕಛೇರಿ : ಪವಸಿಷ್ಠಪ, ಬೆಂಗಳೂರು ೫೬೦ ೦೧೯*
*ದೂರವಾಣಿ : ೨೬೫೨೧೦೨೪, ೨೬೫೨೦೮೭೫*

**JYOTHISREE** - A Felicitation Souvenir released on the occasion of Sri B.N.V. Subrahmanya Shashtyabdi Celebrations

Sunday, the 1st December 2002

*Published by*

**Sri B.N.V. Subrahmanya Abhinandana Samithi,** Bangalore - 19. Ph: 26521024, 26520395;
**Sri Master Hirannaiah,** President; **Sri M.V. Sathyanarayana,** Chairman, Souvenir Committee;
**Sri K.N. Venkatanarayana,** Secretary; **Sri D.S. Honnappa,** Treasurer

*Editorial Committee*

**Prof. H.S. Lakshminarayana Bhatta, Sri B.G. Srirangaiah, Dr. B.S. Ramakrishna Rao,**
**Sri G.K. Gundu Rao, Sri K.C. Prabhakar, Sri S.T. Nagaraj, Sri Prasanna** K.A.S.**, Sri M. Srinivasa Murthy**

*Printed at*

**PARIMALA MUDRANALAYA,** Hanumanthanagar, Bangalore - 560 019, Ph: 26525516

# ಸಂಪಾದಕೀಯ

ವಿಪ್ರಭಾಸ್ಕರ, ಧರ್ಮಸಂರಕ್ಷಕ, ಸಮಾಜ ಸೇವಾವ್ರತಿ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ಅರುವತ್ತು ಸಂವತ್ಸರಗಳ ಸಾರ್ಥಕ ಬದುಕನ್ನು ಪೂರ್ತಿಗೊಳಿಸಿರುವ, ಚಿತ್ರಭಾನು ಸಂವತ್ಸರದ ಕಾರ್ತಿಕ ಮಾಸದ ದ್ವಾದಶಿ ತಿಥಿಯಂದು ಅಂದರೆ ದಿನಾಂಕ ೧.೧೨.೨೦೦೨ರಂದು ಅಭಿನಂದನಾ ಸಮಾರಂಭವನ್ನು ಬೆಂಗಳೂರಿನಲ್ಲಿ ಏರ್ಪಡಿಸಲಾಗಿದೆ. ಇದಕ್ಕಾಗಿಯೇ ರಚಿಸಲಾದ ಬಿ.ಎನ್.ವಿ. ಅಭಿನಂದನಾ ಸಮಿತಿಯು, ಶುಭಸಮಾರಂಭದ ನೆನಪಿಗಾಗಿ 'ಜ್ಯೋತಿಶ್ರೀ' ಎಂಬ ಶೀರ್ಷಿಕೆಯ ಈ ಸ್ಮರಣಸಂಚಿಕೆಯನ್ನು ಪ್ರಕಟಿಸಿದೆ.

ಈ ಸಂಚಿಕೆಗೆ, ಲೇಖನಗಳನ್ನು ಸಕಾಲದಲ್ಲಿ ಬರೆದುಕೊಟ್ಟು ಸಹಕರಿಸಿದ ಶ್ರೀಯುತ ಮಾಸ್ಟರ್ ಹಿರಣ್ಣಯ್ಯ, ಎ.ಎಸ್.ಪ್ರಸನ್ನ, ಜಿ.ಕೆ.ಗುಂಡುರಾವ್, ಕೋಟೇಶ್ವರ ಸೂರ್ಯನಾರಾಯಣರಾವ್, ಡಾ. ಬಿ.ಎಸ್. ರಾಮಕೃಷ್ಣರಾವ್, ವಿದ್ವಾನ್ ಹರಿಹರಪುರ ಸುಬ್ರಹ್ಮಣ್ಯಂ, ಸೋ.ತಿ. ನಾಗರಾಜ್, ನರಸಿಂಹನ್, ಜರಗನಹಳ್ಳಿ ಶಿವಶಂಕರ್, ಬಿ.ವಿ. ಶೇಷ ಮತ್ತು ಶ್ರೀಮತಿ ಗೀತಾಮಣಿ, ಸುಮಾ ಜಗದೀಶ್ ಅವರಿಗೂ, ಅಪರೂಪದ ಭಾವಚಿತ್ರಗಳನ್ನು ಸಂಗ್ರಹಿಸಿಕೊಟ್ಟ ಶ್ರೀ ರಮೇಶ್ ಮತ್ತು ಶ್ರೀ ಸತ್ಯೇಂದ್ರ ಅವರಿಗೂ ನಮ್ಮ ಅಭಿವಂದನೆಗಳು. ವಿಶ್ವಾಸಪೂರ್ವಕವಾಗಿ ಶುಭವನ್ನು ಕೋರಿ, ಜಾಹಿರಾತುಗಳನ್ನು ನೀಡಿದ ಅಭಿಮಾನಿ ವೃಂದದವರಿಗೆ ಕೃತಜ್ಞತೆಗಳು. ಸಂಚಿಕೆಯ ತೋರಣ ಮತ್ತು ಹೂರಣಗಳಿಗೆ ಮೆರುಗು ನೀಡಿ, ವಿಶೇಷ ಆಸ್ಥೆಯಿಂದ ಶ್ರಮ ವಹಿಸಿದ ಪರಿಮಳ ಮುದ್ರಣಾಲಯದ ಶ್ರೀ ಪ್ರಭಾಕರ್ ಅವರಿಗೆ ನಾವು ಆಭಾರಿಗಳಾಗಿದ್ದೇವೆ. **ಜ್ಯೋತಿಶ್ರೀ** ಸಂಚಿಕೆಯು ಬಿ.ಎನ್.ವಿ. ಸುಬ್ರಹ್ಮಣ್ಯರವರ ಷಷ್ಟ್ಯಬ್ದಪೂರ್ತಿ ಸಮಾರಂಭವನ್ನು ಚಿರಸ್ಮರಣೀಯವನ್ನಾಗಿಸಿದೆ ಎಂದು ನಂಬಿದ್ದೇವೆ. ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಮತ್ತು ಶ್ರೀಮತಿ ಸೀತಾ ಸುಬ್ರಹ್ಮಣ್ಯ ಅವರಿಗೆ ಭಗವಂತನು ಆರೋಗ್ಯ ಮತ್ತು ಆಯುಸ್ಸನ್ನು ನೀಡಲೆಂದು ಪ್ರಾರ್ಥಿಸುತ್ತೇವೆ.

***ಎಂ.ವಿ.ಸತ್ಯನಾರಾಯಣ***
***ಅಧ್ಯಕ್ಷರು, ಸ್ಮರಣ ಸಂಚಿಕೆ ಸಮಿತಿ***

***ಪ್ರೊ. ಎಚ್.ಎಸ್.ಲಕ್ಷ್ಮೀನಾರಾಯಣ ಭಟ್ಟ***
***ಬಿ.ಎನ್.ವಿ. ಅಭಿನಂದನಾ ಸಮಿತಿಯ ಪರವಾಗಿ***

# ೧. ಬಿ.ಎನ್.ವಿ.ಯವರೊಂದಿಗೆ ಒಂದು ಸಂವಾದ

*ಎ.ವಿ.ಪ್ರಸನ್ನ, ಕೆ.ಎ.ಎಸ್.*

*ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರಿಗೆ ಅರುವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ಶ್ರೀ ಎ.ವಿ. ಪ್ರಸನ್ನರವರು ನಡೆಸಿದ ಸಂದರ್ಶನ*

**ನಿಮಗೆ ನೆನಪಿರುವ ಬಾಲ್ಯಜೀವನದ ಮುಖ್ಯ ಘಟ್ಟಗಳ ಬಗ್ಗೆ ಹೇಳುವಿರಾ?**


ನನಗೆ ಒಂದೂವರೆ ವರ್ಷವಾಗಿದ್ದಾಗಲೇ ನನ್ನ ತಂದೆಯವರು ನಿಧನ ಹೊಂದಿದ ಕಾರಣದಿಂದ ನಾವುಗಳು ಬೀದಿಪಾಲಾಗುವುದನ್ನು ತಪ್ಪಿಸಿ ನಮ್ಮ ತಾಯಿಯ ತಾಯಿ ಪುಟ್ಟಕ್ಕಯ್ಯನವರು ನಮ್ಮಗಳನ್ನು ಬೆಟ್ಟದಪುರದ ನಮ್ಮ ತಂದೆಯ ಮನೆಯಿಂದ ಸಾಲಿಗ್ರಾಮಕ್ಕೆ ಕರೆದುಕಂಡು ಹೋದರಂತೆ. ಅವರು ಸಹ ಆ ವೇಳೆಗಾಗಲೇ ವಿಧವೆಯಾಗಿದ್ದರು. ನನ್ನನ್ನೂ, ನನ್ನ ಇಬ್ಬರು ಅಕ್ಕಂದಿರು ಮತ್ತು ನಮ್ಮ ತಾಯಿಯನ್ನೂ ಅವರೇ ಸಾಕಿ ಬೆಳೆಸಿದರು. ಅವರೇನೂ ಅಂತಹ ಸ್ಥಿತಿವಂತರಾಗಿರಲಿಲ್ಲ. ಅವರಿವರ ಮನೆಯಲ್ಲಿ ಅಡುಗೆ ಕೆಲಸ ಮಾಡಿಕೊಂಡು ನಮ್ಮನ್ನು ಸಾಕಿದರು. ನಮ್ಮ ತಂದೆ ಶ್ರೀ ನಾರಾಯಣಸ್ವಾಮಿಯವರು ಶ್ಯಾನುಭೋಗರಾಗಿ ಕೆಲಸ ಮಾಡುತ್ತಿದ್ದು ಗ್ರಾಮದಲ್ಲಿ ಧೀಮಂತವಾಗಿ ಬದುಕಿದವರು.



*65. ಬಿ.ಎನ್.ವಿ.ಪರಿವಾರ: ನಿಂತವರು - ಬಿ.ಎನ್.ವಿ., ಚಿಕ್ಕ ಅಕ್ಕ ಶಾಂತಲಕ್ಷ್ಮಿ, ದೊಡ್ಡ ಅಕ್ಕ ನಾಗಲಕ್ಷ್ಮಿ. ಕುಳಿತವರು-ಪುಟ್ಟಕ್ಕಯ್ಯ(ಅಜ್ಜಿ), ಕಾವೇರಮ್ಮ( ತಾಯಿ)*

ಬೆಟ್ಟದಪುರದಲ್ಲಿ ಸಾಕಷ್ಟು ವ್ಯವಸಾಯದ ಜಮೀನುಗಳು ಅವರಿಗೆ ಇದ್ದುವು. ಆದರೆ ಅವರ ನಿಧನದನಂತರ ನಮಗೆ ಏನೂ ದಕ್ಕಲಿಲ್ಲ.

ಸಾಲಿಗ್ರಾಮದ ಹೈಸ್ಕೂಲಿನಲ್ಲಿ ನಮಗೆ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಬಸವರಾಜ ಅರಸ್ ಅವರನ್ನು ನಾನು ಮರೆಯುವಂತೆಯೇ ಇಲ್ಲ. ಅವರು, ಪ್ರಸಿದ್ಧ ಚಲನಚಿತ್ರ ನಟರಾಗಿದ್ದ ಶ್ರೀ ಸುಂದರಕೃಷ್ಣ ಅರಸ್‌ರವರ ತಂದೆ. ನನ್ನ ಬಡತನವನ್ನು ಕಂಡು ಮರುಗಿದ ಅವರು ನನಗೆ ಬೇಕಾದ ಪುಸ್ತಕ, ಬಟ್ಟೆ ಮುಂತಾದವುಗಳನ್ನು ತೆಗೆಸಿಕೊಡುತ್ತಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹದಿನೈದು ರೂಪಾಯಿಗಳ ಶುಲ್ಕವನ್ನುಕಟ್ಟಲು ಅವರೇ ಒಂದು ಪತ್ರವನ್ನು ತಯಾರಿಸಿಕೊಟ್ಟು ಊರಿನಲ್ಲಿ ಇಂತಿಂಥವರ ಮನೆಗೆ ಹೋಗಿ ಆ ಪತ್ರವನ್ನು ಕೊಟ್ಟು ಹಣವನ್ನು ಕೇಳುವಂತೆ ತಿಳಿಸಿ, ಆ ಮೂಲಕ ಎಸ್.ಎಸ್.ಎಲ್.ಸಿ. ಪರೀಕ್ಷೆ ಕಟ್ಟಲು ನನಗೆ ಸಹಾಯ ಮಾಡಿದರು. ಎಸ್.ಎಸ್.ಎಲ್.ಸಿ. ಆದ ಮೇಲೆ ನನ್ನ ಅಕ್ಕ ಶಾಂತಲಕ್ಷ್ಮಿ ನನ್ನನ್ನು ಮಡಿಕೇರಿಗೆ ಕರೆಸಿಕೊಂಡಳು. ಆಗ ಅವಳು ಮಡಿಕೇರಿಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದಳು. ಅಲ್ಲಿನ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ನನ್ನನ್ನು ಸೇರಿಸಿ ಡ್ರಾಫ್ಟ್ಸ್‌ಮನ್ ಟ್ರೇಡಿನಲ್ಲಿ ನನಗೆ ತರಬೇತಿ ಕೊಡಿಸಿದಳು. ಇದು ನನ್ನ ಜೀವನದ ಪ್ರಮುಖ ತಿರುವು ಎಂದು ಭಾವಿಸುತ್ತೇನೆ.




**66.** *ಬಿ.ಎನ್.ವಿ.ಪರಿವಾರ : ಎಡದಿಂದ ಬಲಕ್ಕೆ : ಭಾವ- ಕೇಶವಮೂರ್ತಿ, ಅಕ್ಕ- ನಾಗಲಕ್ಷ್ಮಿ; ಬಿ.ಎನ್.ವಿ., ಸೀತಾ; ಅಕ್ಕ-ಶಾಂತಲಕ್ಷ್ಮಿ, ಡಾ.ಮೋಹನ ರಾಂ*
*ಕುಳಿತವರು : ಪುಟ್ಟಕ್ಕಯ್ಯಮ್ಮ (ತಾಯಿಯ ತಾಯಿ), ಕಾವೇರಮ್ಮ (ತಾಯಿ)*
*ಮಕ್ಕಳು : ಸತ್ಯ, ಜ್ಯೋತಿ, ಸುಬ್ಬು, ನಳಿನಿ, ಎದುರುಗಡೆಯ ಮನೆಯ ಮಗು ಪ್ರಸಾದ್*

**ನಿಮ್ಮ ವೃತ್ತಿಜೀವನದ ಪ್ರಾರಂಭದ ದಿನಗಳು ಹೇಗೆ ಇದ್ದವು?**

೧೯೫೯ರಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ ಮಡಿಕೇರಿಯ ಐ.ಟಿ.ಐ.ನಲ್ಲಿ ಡ್ರಾಫ್ಟ್ಸ್‌ಮನ್ ತರಬೇತಿಯನ್ನು ೧೯೬೦-೬೧ ರಲ್ಲಿ ಮುಗಿಸಿದೆ. ೧೯೬೨ರ ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರಿಗೆ ಬಂದು ರಾಜಾಜಿನಗರದಲ್ಲಿದ್ದ ಟಿ.ಟಿ.ಕೆ. ಪ್ರಿಸಿಶನ್ಸ್ ಕಂಪೆನಿಯಲ್ಲಿ ಡ್ರಾಫ್ಟ್ಸ್‌ಮನ್ ಆಗಿ ಕೆಲಸಕ್ಕೆ ಸೇರಿದೆ. ಈಗ ನಾನು ಇರುವ ಮನೆಯ ವಠಾರದಲ್ಲಿ, ಆಗ ಇದ್ದ ಒಂದು ಸಣ್ಣ ಕೊಠಡಿಯನ್ನು ಬಾಡಿಗೆಗೆ ಹಿಡಿದಿದ್ದೆ. ಅದರ ಮಾಲಿಕರು ಘನವಿದ್ವಾಂಸರಾದ ಮಲ್ಲಿಕಾರ್ಜುನ ಶಾಸ್ತ್ರಿಗಳು- ಅವರು ನಮ್ಮ ಅಜ್ಜಿಯ ಸಂಬಂಧಿಕರು ಮತ್ತು ಅವರ ಮೇಲೆ ವಿಶೇಷ ಅಭಿಮಾನವಿಟ್ಟವರು. ಈ ಕಾರಣದಿಂದ ಆ ಕೊಠಡಿಯನ್ನು ನಮಗೆ ಬಾಡಿಗೆಗೆ ಕೊಟ್ಟಿದ್ದರು. ಅವರು ಬೆಂಗಳೂರಿನ ಸರಕಾರೀ ಸಂಸ್ಕೃತ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದರು. ಅವರ ಊರು ಕೆ.ಆರ್. ನಗರ ತಾಲ್ಲೂಕಿನ ಹರವೆ.

ಟಿ.ಟಿ.ಕೆ. ಕಂಪೆನಿಯಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿ ಅನಂತರ ಸರಸ್ವತಿ ಐರನ್ ಫೌಂಡ್ರಿ ಮತ್ತು ಗೌರಿಬಿದನೂರು ಸಕ್ಕರೆ ಕಾರ್ಖಾನೆ ಮುಂತಾದ ಕಾರ್ಖಾನೆಗಳಲ್ಲಿ ಕೆಲಸ ಮಾಡಿದೆ. ಕಡೆಗೆ, ರಾಜಾಜಿನಗರದ ಕೆ.ಎಸ್.ಸೀತಾರಾಮಯ್ಯ ಅಂಡ್ ಸನ್ಸ್‌ರವರ ಫ್ಯಾಬ್ರಿಕೇಷನ್ ಯುನಿಟ್‌ನಲ್ಲಿ ಫೋರ್‌ಮನ್ ಆಗಿ ಕೆಲಸಕ್ಕೆ ಸೇರಿದೆ. ಹೀಗೆ ಸುಮಾರು ಹತ್ತು ವರ್ಷಗಳ ಕಾಲ ಅನುಭವ ಪಡೆದೆ. ಈ ಸಂದರ್ಭದಲ್ಲಿ ನಾನು- ನಮ್ಮ ತಾಯಿ ಮತ್ತು ಅಜ್ಜಿಯವರನ್ನು ಸಹ ಬೆಂಗಳೂರಿಗೇ ಕರೆದುಕೊಂಡು ಬಂದೆ. ನನ್ನನ್ನು ಹತ್ತಿರದಿಂದ ಕಂಡಿದ್ದ ಪೂಜ್ಯರಾದ ಮಲ್ಲಿಕಾರ್ಜುನ ಶಾಸ್ತ್ರಿಗಳು ತಮ್ಮ ಏಕೈಕ ಪುತ್ರಿ ಸೀತಾಳನ್ನು ನನಗೆ ಮದುವೆ ಮಾಡಿಕೊಡಲು ನಮ್ಮ ಅಜ್ಜಿಯಲ್ಲಿ ಪ್ರಸ್ತಾಪ ಮಾಡಿದ್ದರಂತೆ. ಅದೇ ವೇಳೆಯಲ್ಲಿ ನನಗೂ ಸೀತಾಳಿಗೂ ಪರಸ್ಪರ ಸ್ನೇಹ ಉಂಟಾಗಿದ್ದುದು ಕಾಕತಾಳೀಯವೇ ಸರಿ. ೧೯೬೮ರಲ್ಲಿ ನನ್ನ ಮದುವೆಯಾಯಿತು. ೧೯೭೧ರಲ್ಲಿ ಮಗಳು ಹುಟ್ಟಿದಳು. ಅವಳಿಗೆ **ಜ್ಯೋತಿ** ಎಂದು ಹೆಸರಿಟ್ಟೆವು. ಅದೇ ವರ್ಷ ನಾನು 'ಸೀತಾರಾಮಯ್ಯ ಅಂಡ್ ಸನ್ಸ್'ರವರ ಉದ್ಯೋಗವನ್ನು ಬಿಟ್ಟು **ಜ್ಯೋತಿ ಇಂಡಸ್ಟ್ರೀಸ್** ಎಂಬ ಒಂದು ಕೈಗಾರಿಕೆಯನ್ನು ಪ್ರಾರಂಭಿಸಿದೆ. ನನ್ನ ಮಾವನವರ ಮನೆಯ ಮುಂದೆ ಇದ್ದ ಅವರದೇ ಸ್ಥಳದಲ್ಲಿ ಪ್ರಾರಂಭವಾದ ಈ ಕೈಗಾರಿಕೆಯನ್ನು ಎಂಟು ವರ್ಷಗಳ ಕಾಲ ನಡೆಸಿ, ಅನಂತರ ಅದನ್ನು ಕನಕಪುರ ರಸ್ತೆಯ ನನ್ನ ಕಟ್ಟಡಕ್ಕೆ ವರ್ಗಾವಣೆ ಮಾಡಿದೆ. ಆ ವೇಳೆಗಾಗಲೇ ರಾಜಾಜಿನಗರದಲ್ಲಿ ಸಹ ಒಂದು ಘಟಕವನ್ನು ಸ್ಥಾಪಿಸಿದ್ದೆ. ಅದನ್ನು ಸಹ ಕನಕಪುರ ರಸ್ತೆಯ ಕಟ್ಟಡಕ್ಕೆ ವರ್ಗಾಯಿಸಿದೆ. ನಮ್ಮ ಮಾವನವರ ಮನೆಯ ಕಾಂಪೌಂಡಿನಲ್ಲಿ ನನ್ನ ಕೈಗಾರಿಕೆಯಿದ್ದ ಸ್ಥಳದಲ್ಲಿ ಇಪ್ಪತ್ತು ವರ್ಷಗಳ ಹಿಂದೆ ವೇದಪಾಠಶಾಲೆಯನ್ನು ಪ್ರಾರಂಭಿಸಿದೆ. ಅದಕ್ಕೆ **ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆ** ಎಂದು ಅವರ ಹೆಸರನ್ನೇ ಇಟ್ಟೆ. ೧೯೮೨ರಲ್ಲಿ ನಾನೇ ಸ್ಥಾಪಿಸಿದ **ಜ್ಯೋತಿ ಚ್ಯಾರಿಟೆಬಲ್ ಟ್ರಸ್ಟ್‌**ನ ಮೂಲಕ ಈ ಪಾಠಶಾಲೆ ಪ್ರಾರಂಭವಾಯಿತು.

**ವೃತ್ತಿಜೀವನದ ಹೊರಗೆ ವಿವಿಧ ಕ್ಷೇತ್ರಗಳಲ್ಲಿ ತೊಡಗಲು ನಿಮಗೆ ಒತ್ತಾಸೆಯಾಗಿ ಬಂದ ಸ್ಫೂರ್ತಿ ಯಾವುದು ?**



*67. ಸೀತಾಸುಬ್ರಹ್ಮಣ್ಯ ಅವರ ತಂದೆ : ವೇ. ಬ್ರ. ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳು*

ವಿದ್ಯಾರ್ಥಿ ದೆಸೆಯಲ್ಲಿ ತುಂಬ ಕಷ್ಟಪಟ್ಟಿದ್ದ ನನ್ನ ಅನುಭವ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಮೂಲ ಪ್ರೇರಣೆಯಾಯಿತು. ಸಹಾಯ ಕೇಳಿ ಬಂದ ಯಾವ ವಿದ್ಯಾರ್ಥಿಯನ್ನೂ ನಾನು ಬರಿಗೈಯಲ್ಲಿ ಹಿಂದೆ ಕಳಿಸಿಲ್ಲ. ಈ ಸಮಾಜದ ಋಣದಿಂದ ಬೆಳೆದು ಬಂದು ಒಂದು ಹಂತವನ್ನು ನಾನು ತಲುಪಿರುವುದನ್ನು ನೆನಪಿಸಿಕೊಂಡು, ಸಮಾಜಕ್ಕೆ ನನ್ನ ಕೈಲಾದ ಸಹಾಯ ನೀಡಲು ಪ್ರಯತ್ನಿಸುತ್ತಿದ್ದೇನೆ. ನನ್ನ ಏಕೈಕ ಪುತ್ರಿ ಜ್ಯೋತಿಯ ಅಕಾಲ ನಿಧನದಿಂದ ದಿಕ್ಕು ತಪ್ಪಿ ಹೋಗಬಹುದಾಗಿದ್ದ ನನ್ನ ಮನಸ್ಸನ್ನು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡೆ. ಇದಕ್ಕೆ ಅವಳೇ ಸ್ಫೂರ್ತಿ. ಅವಳ ಹೆಸರಿನಲ್ಲಿಯೇ **ಜ್ಯೋತಿ ಕೇಂದ್ರೀಯ ವಿದ್ಯಾಲಯ**ವೆಂಬ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದೆ. ೧೯೮೯-೯೦ರಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ಮತ್ತು ಮೊದಲನೇ ತರಗತಿಗಳಿಂದ ಪ್ರಾರಂಭವಾದ ಈ ವಿದ್ಯಾಲಯವು ಈಗ ಪಿ.ಯು.ಸಿ. ಮತ್ತು ಕೇಂದ್ರೀಯ ಪಠ್ಯಕ್ರಮದ ಹತ್ತನೇ ತರಗತಿವರೆಗಿನ ಶಿಕ್ಷಣವನ್ನು ನೀಡುತ್ತಿದೆ. ಈಗ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಕಲಿಯುತ್ತಿದ್ದಾರೆ.

ಶಿಕ್ಷಣಕ್ಷೇತ್ರದ ಜತೆಜತೆಗೇ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಕೆಲಸ ಮಾಡಲು ನನ್ನ ಸ್ನೇಹಿತರುಗಳಿಂದ ಆಗ್ರಹಪೂರ್ವಕ ಒತ್ತಾಯಗಳು ಬರತೊಡಗಿದಂತೆ ನಾನು ಕ್ರಮೇಣ ಆ ಕ್ಷೇತ್ರಗಳಲ್ಲೂ ಕೆಲಸ ಮಾಡತೊಡಗಿದೆ.

**ನಿಮಗೆ ತೃಪ್ತಿ ತಂದಿರುವ ಕ್ಷೇತ್ರ ಯಾವುದು ?**

ನನಗೆ ಹೆಚ್ಚಿನ ತೃಪ್ತಿ ತಂದಿರುವುದು ಶಿಕ್ಷಣ ಕ್ಷೇತ್ರ. ಇತರ ಕ್ಷೇತ್ರಗಳಲ್ಲಿ ಏನು ಮಾಡಿದರೂ ಕೊರತೆ, ಆಕ್ಷೇಪಣೆಗಳು ಇದ್ದೇ ಇರುತ್ತವೆ. ಆದರೆ ಜಾತಿ ಜನಾಂಗಗಳ ವ್ಯತ್ಯಾಸವಿಲ್ಲದೇ ಎಲ್ಲ ಮಕ್ಕಳನ್ನೂ ನಮ್ಮ ಮಕ್ಕಳಂತೆಯೇ ನೋಡುತ್ತಾ ಅವರ ಶೈಕ್ಷಣಿಕ ಏಳಿಗೆಗೆ ಸಹಾಯ ಮಾಡುವುದು ಹೆಚ್ಚಿನ ಸಂತೋಷವನ್ನು ಕೊಡುತ್ತದೆ. ನಮ್ಮ ಶಾಲೆಯಲ್ಲಿ ನಗರಪ್ರದೇಶದ ಮಕ್ಕಳೇ ಅಲ್ಲದೆ ಗ್ರಾಮೀಣ ಭಾಗದ ಮಕ್ಕಳು ಸಹ ಕಲಿಯುತ್ತಿದ್ದಾರೆ. ತಲಘಟ್ಟಪುರ, ರಘುವನಹಳ್ಳಿ, ದೊಡ್ಡಕಲ್ಲಸಂದ್ರ ಮುಂತಾದ ಊರುಗಳಿಂದ ನಮ್ಮ ಶಾಲೆಗೆ ವಿದ್ಯಾರ್ಥಿಗಳು ಬರುತ್ತಾರೆ. ತುಂಬಾ ಬಡ ಮಕ್ಕಳಿಂದ ಫೀಸನ್ನು ತೆಗೆದುಕೊಳ್ಳುವುದಿಲ್ಲ. ಕೆಲವು ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯಪುಸ್ತಕಗಳನ್ನು ಉಚಿತವಾಗಿ ಕೊಡುತ್ತೇವೆ. ನಮ್ಮ ಕಾರ್ಖಾನೆಯಲ್ಲಿ ಕೆಲಸ




*68. ಪಾರ್ವತಮ್ಮ (ಸೀತಾ ಅವರ ತಾಯಿ ) ಮಮ್ಮಗಳ ಮಗ ಸುಜಯ್ ಒಡನೆ*

ಮಾಡುವವರ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಲಾಗುತ್ತಿದೆ. ನಮ್ಮ ಕಾರ್ಖಾನೆಯ ಕಾವಲುಗಾರನ ಮಗಳು ಕಳೆದ ಸಾಲಿನಲ್ಲಿ ಸಿ.ಬಿ.ಎಸ್.ಇ.ಯ ಹತ್ತನೇ ತರಗತಿಯಲ್ಲಿ ಶೇ.೭೮ರಷ್ಟು ಅಂಕಗಳನ್ನು ಗಳಿಸಿ ಉತ್ತೀರ್ಣಳಾಗಿದ್ದಾಳೆ. ಇದು ನನಗೆ ಹೆಮ್ಮೆ ತಂದ ಸಂಗತಿ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ ೧೯೮೮ರಲ್ಲಿ **ಕೃಷ್ಣಯಜುರ್ವೇದದ** ಮೊದಲ ಸಂಪುಟವನ್ನು ಪ್ರಕಟಿಸಲಾಯಿತು. ಕನ್ನಡ ಅರ್ಥವಿವರಣೆಯೊಂದಿಗೆ ಸಂಪೂರ್ಣ ಕೃಷ್ಣ ಯಜುರ್ವೇದವನ್ನು ಪ್ರಕಟಿಸುವ ನಮ್ಮ ಯೋಜನೆಯಂತೆ ಈಗ ನಾಲ್ಕು ಸಂಪುಟಗಳು ಪ್ರಕಟಗೊಂಡಿವೆ. ಇದಕ್ಕೆ ಮೂಲ ಪ್ರೇರಣೆ **ಶ್ರೀ ಬಸವಾನಿ ರಾಮಶರ್ಮಾ**ರವರು. "ಮೈಸೂರು ಮಹಾರಾಜರು ಋಗ್ವೇದ ಸಂಪುಟಗಳನ್ನು ಪ್ರಕಟಿಸಿದರು; ನೀನು ಯಜುರ್ವೇದ ಸಂಪುಟಗಳನ್ನು ಪ್ರಕಟಿಸಬೇಕು" ಎಂದು ಹೇಳಿದ ಅವರ ಮಾತು ನನ್ನ ಈ ಕೆಲಸಕ್ಕೆ ಸ್ಫೂರ್ತಿ. ಇದಕ್ಕೆ **ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ** ಸಂಪೂರ್ಣ ಆಶೀರ್ವಾದ ದೊರಕಿದುದು ನನ್ನ ಅದೃಷ್ಟವೆಂದೇ ಭಾವಿಸುತ್ತೇನೆ. ಈ ಗ್ರಂಥದ ಬಿಡುಗಡೆಯ ಸಂದರ್ಭದಲ್ಲಿ ವೇದವಿದ್ವಾಂಸರಿಗೆ ಮತ್ತು ಪಂಡಿತೋತ್ತಮರುಗಳಿಗೆ ಸನ್ಮಾನ ಮಾಡಿದುದು ನನಗೆ ಸಿಕ್ಕಿದ ದೊಡ್ಡ ಭಾಗ್ಯವೆಂದು ಭಾವಿಸುತ್ತೇನೆ.

**ಸರಕಾರದ ಈಗಿನ ಶಿಕ್ಷಣನೀತಿಯ ಬಗ್ಗೆ ನಿಮ್ಮ ಅನಿಸಿಕೆಯೇನು ? ಈ ದಿಸೆಯಲ್ಲಿ ನಿಮ್ಮ ಸಲಹೆಗಳಿವೆಯೆ ?**

"ತಾನೂ ಮಾಡ, ಪರರಿಗೂ ಬಿಡ" ಎಂಬ ಗಾದೆಯ ಮಾತು ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡುತ್ತದೆ. ದೇಶದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡುವುದು ಸರ್ಕಾರದ ಜವಾಬ್ದಾರಿ. ಆದರೆ, ಅದನ್ನು ನಿರ್ವಹಿಸುವ ಸಂಪೂರ್ಣ ಸಾಮರ್ಥ್ಯ ಸರಕಾರಕ್ಕಿಲ್ಲ. ಈ ದಿಸೆಯಲ್ಲಿ ಖಾಸಗಿಯವರು ಸರಕಾರದ ಹೊರೆಯನ್ನು ಕಡಮೆ ಮಾಡಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಸಾಮಾನ್ಯವಾಗಿ ಸರಕಾರದ ಶಾಲೆಗಳಿಗಿಂತ ಖಾಸಗಿ ಶಾಲೆಗಳ ಗುಣಮಟ್ಟ ಉತ್ತಮವಾಗಿದೆ. ಖಾಸಗಿ ಶಾಲಾ-ಕಾಲೇಜುಗಳ ಶಿಕ್ಷಕರು ಹೆಚ್ಚು ಶಿಸ್ತಿನಿಂದ ಮತ್ತು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಖಾಸಗೀ ಶಾಲೆಗಳಿಗೆ ಸರ್ಕಾರದಿಂದ ನೂರೆಂಟು ವಿಘ್ನಗಳು. ಉತ್ತಮವಾಗಿ ನಡೆಯುತ್ತಿರುವ ಖಾಸಗಿ ಶಾಲೆಗಳ ಮಟ್ಟಕ್ಕೆ ಸರಕಾರೀ ಶಾಲೆಗಳನ್ನು ತರುವ ಬಗ್ಗೆ ಕೆಲಸ ಮಾಡುವುದನ್ನು ಬಿಟ್ಟು, ಖಾಸಗಿ ಶಾಲೆಗಳನ್ನು ಸಹ ಸರಕಾರೀ ಶಾಲೆಗಳಂತೆ ಮಾಡುವುದರಲ್ಲೇ ಸರ್ಕಾರಕ್ಕೆ ಹೆಚ್ಚಿನ ಆಸಕ್ತಿ ಇದ್ದಂತಿದೆ. ಶಿಕ್ಷಕರ ಸಂಬಳವನ್ನು ಸರಕಾರವು ಅನುದಾನದ ಮೂಲಕ ನೀಡಿ ಎಲ್ಲಾ ಶಾಲೆಗಳನ್ನೂ ಖಾಸಗೀಯವರಿಗೆ ಒಪ್ಪಿಸುವುದೇ ಒಳ್ಳೆಯದು. ಸರಕಾರಿ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವಾಗಲೇ ಸರಕಾರ ದಾರಿ ತಪ್ಪುತ್ತದೆ. ಶಿಕ್ಷಕರ ಕೆಲಸವು ಕೇವಲ ಉದ್ಯೋಗವಲ್ಲ. ಅರ್ಪಣಾ ಭಾವದಿಂದ, ಆಸಕ್ತಿಯಿಂದ ಕೆಲಸ ಮಾಡುವವರು ಮಾತ್ರ ಶಿಕ್ಷಕರಾಗಬೇಕು. ಅನೇಕ ಸರಕಾರಿ ಶಿಕ್ಷಕರುಗಳು ಕೇವಲ ಹಣ ಸಂಪಾದಿಸುವ ಉದ್ಯೋಗದ ದೃಷ್ಟಿಯಿಂದ ಕೆಲಸ ಮಾಡುತ್ತಾರೆ. ಶಿಕ್ಷಕರ ನೇಮಕಾತಿಯಲ್ಲಿ ಮಾತ್ರ ಯಾವುದೇ ಮೀಸಲಾತಿ ಇರಬಾರದು. ಇದರಿಂದ ತೊಂದರೆಯಾಗುತ್ತಿರುವುದು ಹಿಂದುಳಿದ ವಿದ್ಯಾರ್ಥಿಗಳಿಗೇ ಹೆಚ್ಚು. ನಿಜವಾಗಿಯೂ ಉತ್ತಮ ಶಿಕ್ಷಕರ ಆವಶ್ಯಕತೆಯಿರುವುದು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹೆಚ್ಚು ಇರುವಲ್ಲಿ. ಆದರೆ, ಹಿಂದುಳಿದ ಹತ್ತು ಜನಕ್ಕೆ ಕೆಲಸ ಕೊಡುವ ನೆಪದಲ್ಲಿ ಅದೇ ವರ್ಗದ ಸಾವಿರ



*69. ಜ್ಯೋತಿ ಇಂಡಸ್ಟ್ರೀಸ್ ಹೊಸ ಕಟ್ಟಡದ ಉದ್ಘಾಟನೆ (೧೪.೧೧.೧೯೮೩)*

ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿದೆ. ಸರಕಾರವು ತನ್ನ ಸ್ವಾಮ್ಯದ ಅನೇಕ ಕ್ಷೇತ್ರಗಳನ್ನು ಖಾಸಗೀಕರಣಗೊಳಿಸುತ್ತಿರುವಾಗ ಶಿಕ್ಷಣಕ್ಷೇತ್ರವನ್ನು ಸಹ ಖಾಸಗೀಕರಣಗೊಳಿಸಿದರೆ ಉತ್ತಮ ಪರಿಣಾಮ ಬಂದೀತು. ಅನೇಕ ದೊಡ್ಡದೊಡ್ಡ ಕಂಪನಿಗಳು, ಕೈಗಾರಿಕೆಗಳು ಸರಕಾರೀ ಶಾಲೆಗಳನ್ನು ವಹಿಸಿಕೊಳ್ಳಲು ಖಂಡಿತವಾಗಿಯೂ ಮುಂದೆ ಬರುತ್ತವೆ.

**ಬ್ರಾಹ್ಮಣ ಸಮಾಜದ ಮುಂದಾಳತ್ವ ವಹಿಸಿರುವ ನಿಮಗೆ ಬ್ರಾಹ್ಮಣ ಮಠಗಳ ಬಗ್ಗೆ ಇರುವ ಅಭಿಪ್ರಾಯವೇನು ?**

ಎಲ್ಲ ಮಠಾಧೀಶರುಗಳ ಬಗ್ಗೆ ನನಗೆ ಅಪಾರ ಗೌರವವಿದೆ. ನಮ್ಮ ಸಮಾಜವನ್ನು ತಿದ್ದುವತ್ತ ಮಠಗಳು ಗಮನ ಹರಿಸಬೇಕು. ನಮ್ಮ ಸನಾತನ ಧರ್ಮ ಮತ್ತು ಪರಂಪರೆಯನ್ನು ಉಳಿಸಲು ಮಠಾಧೀಶರುಗಳಿಂದ ಮಾತ್ರ ಸಾಧ್ಯ. ಜನತೆಯು ಅವರಲ್ಲಿ ಇಟ್ಟಿರುವ ಗೌರವ ಭಾವನೆಯನ್ನು ಉಪಯೋಗಿಸಿಕೊಂಡು ಮಠಗಳು ನಮ್ಮ ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕು. ವೇದಪಾಠಶಾಲೆಗಳನ್ನು ನಡೆಸಬೇಕು. ವಿವಿಧ ಪಂಗಡಗಳ ಮಠಾಧೀಶರುಗಳು ತಮ್ಮ ತಮ್ಮ ಮಠಗಳಲ್ಲಿ ತಮ್ಮ ಸಂಪ್ರದಾಯಗಳನ್ನು ಆಚರಿಸಿಕೊಂಡು ಆಗಿಂದಾಗ್ಗೆ ಒಂದೇ ವೇದಿಕೆಯಲ್ಲಿ ಸೇರಿ ಸಮಾಜದ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಮಾರ್ಗದರ್ಶನ ಮಾಡಬೇಕು. ಆಗ ಸಹಜವಾಗಿ ಬ್ರಾಹ್ಮಣಜಾತಿಯೊಳಗಿರುವ ಆಂತರಿಕ ಅಸಮಾಧಾನಗಳು ದೂರವಾಗುತ್ತವೆ.



*70. ಸೀತಾ, ಬಿ.ಎಸ್.ವಿ., ನರಸಿಂಹನ್, ಉಷಾ*

**ಅಂತರ್ಜಾತೀಯ ವಿವಾಹದ ಬಗ್ಗೆ...**


ಬ್ರಾಹ್ಮಣರ ವಿವಿಧ ಪಂಗಡಗಳ ಒಳಗೆ ನಡೆಯುವ ಅಂತರ್ಜಾತೀಯ ವಿವಾಹವನ್ನು ನಾನು ಸ್ವಾಗತಿಸುತ್ತೇನೆ. ಇದರಿಂದಲಾದರೂ ನಮ್ಮೊಳಗಿನ ಭೇದಭಾವ ಕಡಮೆಯಾಗಬಹುದು.

**ಬ್ರಾಹ್ಮಣ ಮಠಗಳು ಬಿ.ಇ., ಎಂಬಿಬಿಎಸ್., ನಂತಹ ವೃತ್ತಿ ಶಿಕ್ಷಣ ಕಾಲೇಜುಗಳನ್ನು ಸ್ಥಾಪಿಸಿಲ್ಲ ಎಂಬ ಆಕ್ಷೇಪಣೆಯ ಬಗ್ಗೆ ನಿಮ್ಮ ಅನಿಸಿಕೆ ಏನು ?**

೧೦-೧೫ ವರ್ಷಗಳ ಹಿಂದೆಯೇ ಈ ಕೆಲಸ ಆಗಬೇಕಿತ್ತು. ಈಗ ಆವಶ್ಯಕತೆ ಇಲ್ಲವೆನ್ನಿಸುತ್ತದೆ. ಆದರೂ ಯಾವುದಾದರೂ ಮಠಗಳು ಮುಂದೆ ಬಂದಲ್ಲಿ ನಮ್ಮ ಸಹಕಾರ ಇದೆ.

**ಬ್ರಾಹ್ಮಣ ಜಾತಿಯೂ ಸೇರಿದಂತೆ ಎಲ್ಲ ಜಾತಿಗಳು ಸಹ ತಮ್ಮ ತಮ್ಮ ಜಾತಿಗಳ ಸಂಘಟನೆಗೆ ಹೋರಾಡುತ್ತಿವೆ. ಜಾತ್ಯತೀತ ರಾಷ್ಟ್ರದಲ್ಲಿ ಇದು ವಿಪರ್ಯಾಸವಲ್ಲವೇ ?**

ಅಲ್ಲ. ಜಾತಿ-ಸಮುದಾಯಗಳು ನಮ್ಮ ಪರಂಪರೆಯಲ್ಲಿ ಎಷ್ಟು ಆಳವಾಗಿ ಬೇರೂರಿವೆ ಎಂಬುದರ ಗುರುತು ಇದು. ಮನುಷ್ಯನು ಸಮಾಜಜೀವಿ. ತಾನು ಒಂದುಗೂಡುವುದು ತನಗೆ ಸಮಾನ ಆಸಕ್ತಿ ಇರುವ ಕಡೆಯಲ್ಲಿ. ಈ ಹಿನ್ನೆಲೆಯಲ್ಲಿ ಜಾತಿಗಳ ಮೂಲಕ ತಮ್ಮ ಅಭಿವೃದ್ಧಿಯನ್ನು ಸಾಧಿಸುವುದು ಸ್ವಾಗತಾರ್ಹವೇ. ಜಾತಿಯೆಂದರೆ ಒಂದು ಮನೆಯಿದ್ದಂತೆ. ಮನೆಯಲ್ಲಿನ ಎಲ್ಲರೂ ಅಭಿವೃದ್ಧಿ ಹೊಂದಬೇಕು ಎಂದು ಆಲೋಚಿಸುವುದು ಹೇಗೆ ತಪ್ಪಲ್ಲವೋ, ಹಾಗೆಯೇ ಒಂದು ಜಾತಿಗೆ ಸೇರಿದ ತಾವೆಲ್ಲರೂ ಒಂದುಗೂಡಿ ಅಭಿವೃದ್ಧಿ ಹೊಂದಬೇಕೆಂಬುದು ತಪ್ಪಲ್ಲ. ಹೀಗೆ ಪ್ರತಿಯೊಂದು ಜಾತಿಯೂ ಅಭಿವೃದ್ಧಿ ಹೊಂದಿದರೆ ದೇಶ ತಾನಾಗಿಯೇ ಅಭಿವೃದ್ಧಿ ಹೊಂದುತ್ತದೆ. ಆದರೆ ಈ ಜಾತಿ, ಸಂಘಟನೆಗಳು ಮತ್ತೊಂದು ಜಾತಿಯ ವಿರುದ್ಧ ಹೋರಾಟ ಮಾಡಿದಲ್ಲಿ ಅದರಿಂದ ಸಮಾಜ ಜೀವನ ಹದಗೆಡುತ್ತದೆ. ಈ ವಿಷಯವನ್ನು ಮುಖಂಡರುಗಳು ಅರಿತಷ್ಟೂ ಒಳ್ಳೆಯದು. ದೇಶದ ಹಿತದೃಷ್ಟಿಯ ಪ್ರಶ್ನೆ ಬಂದಾಗ ನಮ್ಮಲ್ಲಿನ ಜಾತಿಯು ಗೌಣವಾಗುವುದನ್ನು ನಾವು ಅನೇಕ



71. ಜ್ಯೋತಿ ಇಂಡಸ್ಟ್ರೀಸ್ : ಹೊಸಕಟ್ಟಡ : ಯಂತ್ರಚಾಲನೆ : ಯುನೈಟೆಡ್ ಬ್ರೂಯರೀಸ್‌ನ ಛೇರ್‌ಮನ್ ಶ್ರೀ ವಿಠಲಮಲ್ಯ ಅವರಿಂದ

ಆದರೆ ಈಗ ಹಾಗೆ ಇಲ್ಲ. ಯಾವ ಕಾಲದಲ್ಲೇ ಆಗಲಿ ಪರಿಶಿಷ್ಟರ ಮೇಲೆ ಹಲ್ಲೆ ಮಾಡುವ, ಅವರಿಗೆ ಹಿಂಸೆ ನೀಡುವ, ಅವರ ಮನೆಗಳಿಗೆ, ಕೇರಿಗಳಿಗೆ ಬೆಂಕಿ ಹಚ್ಚುವ, ಅವರ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸುವ ಕೆಲಸಗಳನ್ನು ಬ್ರಾಹ್ಮಣರು ಮಾಡಿಲ್ಲ ಮತ್ತು ಮಾಡುವುದೂ ಇಲ್ಲ. ಅವರನ್ನು ಸಮಾನವಾಗಿ ಕಾಣಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಅವರಿಗೆ ಶಿಕ್ಷಣದಲ್ಲಿ ವಿಶೇಷವಾದ ನೆರವನ್ನು ನಾನು ನೀಡುತ್ತಿರುವುದು ನಿಮಗೂ ತಿಳಿದೇ ಇದೆ.

**ನಮ್ಮ ರಾಜ್ಯದ ಮತ್ತು ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ಬ್ರಾಹ್ಮಣರ ಪಾತ್ರದ ಬಗ್ಗೆ ನಿಮ್ಮ ಚಿಂತನೆಗಳೇನು ?**

ಸ್ವಾತಂತ್ರ್ಯಪೂರ್ವದಿಂದಲೂ ಬ್ರಾಹ್ಮಣರು ದೇಶಕ್ಕೆ ಸಲ್ಲಿಸಿರುವ ಸೇವೆ ಚರಿತ್ರಾರ್ಹವಾದುದು. ಎಷ್ಟು ಜನ ಬ್ರಾಹ್ಮಣರು ದೇಶಕ್ಕಾಗಿ ಪ್ರಾಣ ತೆತ್ತಿದ್ದಾರೆ ಎಂಬುದು ಲೆಕ್ಕಕ್ಕೆ ಸಿಗುವುದಿಲ್ಲ. ನೆಹರೂ, ಇಂದಿರಾಗಾಂಧಿ, ನರಸಿಂಹರಾವ್, ರಾಜೀವ್‌ಗಾಂಧಿ, ಅಟಲ್ ಬಿಹಾರಿ ವಾಜಪೇಯಿಯವರಂತಹ ವ್ಯಕ್ತಿಗಳು ಪ್ರಧಾನಿಗಳಾಗಿ ನಮ್ಮ ದೇಶವನ್ನು ಮುನ್ನಡೆಸಿರುತ್ತಾರೆ. ಬ್ರಾಹ್ಮಣ ನಾಯಕರು, ವಿವಿಧ ಅಧಿಕಾರಿಗಳು, ಸಾರ್ವಜನಿಕ ಕ್ಷೇತ್ರದಲ್ಲಿರುವವರು ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲಸ ಮಾಡಿರುತ್ತಾರೆ. ಸರ್.ಎಂ. ವಿಶ್ವೇಶ್ವರಯ್ಯ, ಡಾ.ರಾಜಾರಾಮಣ್ಣ, ಪ್ರೊ. ಯು.ಆರ್. ರಾವ್ ಮುಂತಾದವರ ಬಗ್ಗೆ ಎಲ್ಲರಿಗೂ ತಿಳಿದಿದೆ. **ಸರ್ವೇ ಜನಾಃ ಸುಖಿನೋ ಭವಂತು** ಎಂಬುದೇ ನಮ್ಮ ಬೀಜಮಂತ್ರ. ಇನ್ನು ಮುಂದೆ ಸಹ ಬ್ರಾಹ್ಮಣ ಯುವಕರು ತಮ್ಮ ಜ್ಞಾನವನ್ನು ದೇಶದ ಹಿತಕ್ಕಾಗಿ, ಸಮಾಜದ ಹಿತಕ್ಕಾಗಿ, ಉಪಯೋಗಿಸಬೇಕೆಂಬುದೇ ನನ್ನ ಅಭಿಲಾಷೆ. ಇತರ ಸಮಾಜದ ಅನೇಕ ನಾಯಕರು ಮುಂದೆ ಬರಲು ಅನೇಕ ಬ್ರಾಹ್ಮಣರು ಶ್ರಮಿಸಿರುವುದನ್ನು ಸಹ ನಾವು ಮರೆಯಬಾರದು.

**ಬ್ರಾಹ್ಮಣ ಜನಾಂಗದ ಹೆಚ್ಚಿನ ಯುವಕರು ವಿದೇಶದ ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಈ ವಿಚಾರದಲ್ಲಿ...**

ಸಂದರ್ಭಗಳಲ್ಲಿ ಕಂಡಿದ್ದೇವೆ. ಇದು ಉತ್ತಮ ಬೆಳವಣಿಗೆ.

**ಪರಿಶಿಷ್ಟ ಜಾತಿಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ಎಂಬ ವಿವಿಧ ರೀತಿಯ ಜನಾಂಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುತ್ತಿರುವ ಬಗ್ಗೆ ನಿಮ್ಮ ಅಭಿಪ್ರಾಯ ?**

ಇದಕ್ಕೆ ನನ್ನ ವಿರೋಧವಿಲ್ಲ. ಆದರೆ ಅದಕ್ಕೆ ಕಾಲಮಿತಿ ಇರಬೇಕು. ಸುಲಭವಾಗಿ ಸಿಕ್ಕಿದ ಯಾವುದಕ್ಕೂ ಬೆಲೆ ಇರುವುದಿಲ್ಲ. ಎಲ್ಲ ಕ್ಷೇತ್ರಗಳಲ್ಲೂ ಮೀಸಲಾತಿಯನ್ನು ಅತಿಯಾಗಿ ನೀಡುತ್ತಾ ಹೋದರೆ ಆ ಜನಾಂಗದ ಸೃಜನಶೀಲ ಶಕ್ತಿಯನ್ನೇ ನಾಶ ಮಾಡಿದಂತಾಗುತ್ತದೆ. ವೇಗವಾಗಿ ಬದಲಾಗುತ್ತಿರುವ, ಜಾಗತೀಕರಣ ಖಾಸಗೀಕರಣಗಳ ಈಯುಗದಲ್ಲಿ ಮೀಸಲಾತಿಯನ್ನು ನಂಬಿದವರು ಖಂಡಿತವಾಗಿಯೂ ಹಿಂದೆ ಬೀಳುತ್ತಾರೆ. ಶಿಕ್ಷಣದಲ್ಲಿ ಅಂತಹವರಿಗೆ ಎಲ್ಲ ರೀತಿಯ ಉತ್ತೇಜನ, ಪ್ರೋತ್ಸಾಹ ನೀಡಬೇಕು. ಚೆನ್ನಾಗಿ ಅಭ್ಯಾಸ ಮಾಡಲು ಒತ್ತು ನೀಡಬೇಕು. ಉತ್ತಮ ಮೆರಿಟ್ ಗಳಿಸಲು ಸಹಾಯ ಮಾಡಿ ಅವರು ಸಹ ಇತರರೊಂದಿಗೆ ಸ್ಪರ್ಧಿಸುವ ಶಕ್ತಿಯನ್ನು ತುಂಬಬೇಕು.

**ಪರಿಶಿಷ್ಟ ಜಾತಿ, ಪಂಗಡಗಳವರನ್ನು ಬ್ರಾಹ್ಮಣರು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲವೆಂಬ ಆರೋಪಕ್ಕೆ ನಿಮ್ಮ ಉತ್ತರ ?**

ಬಹಳ ಹಿಂದೆ ಇಂತಹ ವ್ಯವಸ್ಥೆ ಇತ್ತು. ಅದು ಆಗಿನ ಕಾಲಧರ್ಮ.




***72. ಜ್ಯೋತಿ ಇಂಡಸ್ಟ್ರೀಸ್ ಹೊಸ ಕಟ್ಟಡದ ಉದ್ಘಾಟನೆ: ಎಡನೀರು ಮಠಾಧೀಶರಾದ ಪೂಜ್ಯ ಶ್ರೀ ಕೇಶವಾನಂದ ಭಾರತೀ ಅವರಿಂದ***

ಇಲ್ಲಿ ಅವರ ಜ್ಞಾನಕ್ಕೆ ಬೆಲೆ ಇಲ್ಲವಾದರೆ, ಎಲ್ಲಿ ಹೋಗಬೇಕು? ಅವರ 'ಮೆರಿಟ್' ಅನ್ನು ನಮ್ಮ ದೇಶದಲ್ಲಿ ಉಪಯೋಗಿಸಿಕೊಳ್ಳುವ ಪರಿಸ್ಥಿತಿ ಬರಬೇಕು. ವಿದೇಶಕ್ಕೆ ಹೋಗಿ ನಮ್ಮ ಸಂಸ್ಕೃತಿಯನ್ನು ಮರೆಯಬಾರದೆಂಬುದು ನನ್ನ ಕಳಕಳಿಯ ಮನವಿ. ತಮ್ಮ ಸಂಪಾದನೆಯು ನಮ್ಮ ಸಮಾಜಕ್ಕೆ, ನಮ್ಮ ದೇಶಕ್ಕೆ ಉಪಯುಕ್ತವಾಗುವಂತೆ ಅವರುಗಳು ಕೆಲಸ ಮಾಡಲಿ ಎಂಬುದು ನನ್ನ ಕೋರಿಕೆ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ, ನಿಮ್ಮ ಈವರೆಗಿನ ಸಾಧನೆಗಳನ್ನು ತಿಳಿಸುತ್ತೀರಾ ?**

ಈಗ ನಾನು ನಾಲ್ಕನೆಯ ಅವಧಿಗೆ ಅಧ್ಯಕ್ಷನಾಗಿದ್ದೇನೆ. ಮೊದಲು ಸತತವಾಗಿ ಮೂರು ಅವಧಿಗೆ ಅಧ್ಯಕ್ಷನಾಗಿದ್ದೆ. ಈ ಅವಧಿಯಲ್ಲಿ ಎರಡು ರಾಜ್ಯಮಟ್ಟದ ಸಮ್ಮೇಳನಗಳನ್ನು ಅಭೂತಪೂರ್ವವಾಗಿ ನಡೆಸಲಾಯಿತು. ಇದರಿಂದ ನಮ್ಮ ಮಹಾಸಭೆಗೆ ನಿಧಿಸಂಗ್ರಹಣೆಯಾದುದರ ಜತೆಗೆ ಹೆಚ್ಚಿನ ಸಂಖ್ಯೆಯ ಸದಸ್ಯರುಗಳೂ ನೋಂದಾಯಿತರಾದರು. ಅನಂತರ ಬ್ರಾಹ್ಮಣ ಸಮಾಜದ ಉಪಯೋಗಕ್ಕಾಗಿ ಕೇಂದ್ರನಿಧಿಯನ್ನು ಸ್ಥಾಪಿಸಲಾಯಿತು. ಈ ನಿಧಿಯ ಮೂಲಕ ಬಡ ವಿಧವೆಯರಿಗೆ, ಪುರೋಹಿತರಿಗೆ ಸಹಾಯಧನ ಮತ್ತು ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳನ್ನು ನೀಡಲಾಗುತ್ತಿದೆ. ಈ ಅವಧಿಯಲ್ಲಿ ನಾನು ಮೂರು ಬಾರಿ ರಾಜ್ಯದಾದ್ಯಂತ ಸಂಚರಿಸಿ ಬ್ರಾಹ್ಮಣ ಸಂಘಟನೆಯ ಕಾರ್ಯವನ್ನು ಮಾಡಿರುವುದು ನನಗೆ ತೃಪ್ತಿ ತಂದಿದೆ. ಈ ಎಲ್ಲ ಕೆಲಸಗಳಲ್ಲಿ ನನಗೆ ನೆರವಾದ ಮಹಾಸಭೆಯ ಎಲ್ಲ ಪದಾಧಿಕಾರಿಗಳಿಗೆ, ನಮ್ಮ ಸಮಾಜದ ಎಲ್ಲ ರಾಜಕೀಯ ನಾಯಕರಿಗೆ ಮತ್ತು ಸ್ನೇಹಿತರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕು.

ನಾಲ್ಕನೆಯ ಬಾರಿಗೆ ಅಧ್ಯಕ್ಷನಾಗಿರುವ ಈ ಅವಧಿಯಲ್ಲಿ, ಗಾಯತ್ರಿಭವನ ನಿರ್ಮಾಣದ ಬಾಕಿ ಕೆಲಸಗಳು ಮತ್ತು ಬಾಕಿ ಇದ್ದ ಬಿಲ್ಲುಗಳ ಪಾವತಿಗಾಗಿ ಸುಮಾರು ಐವತ್ತು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಸಾಲ ತೀರಿಸುವ ದೊಡ್ಡ ಹೊರೆಯನ್ನು ನಿಭಾಯಿಸಿದ್ದೇನೆ. ಗಾಯತ್ರಿಭವನದ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಿ, ನೀರು ಮತ್ತು ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಿ ಈಗ ಅದನ್ನು ಉಪಯೋಗಕ್ಕೆ ಬಿಟ್ಟುಕೊಡಲಾಗಿದೆ. ಇನ್ನು ಕೇವಲ ನಾಲ್ಕು ಲಕ್ಷ ರೂಪಾಯಿಗಳ ಸಾಲ ಇದೆ. ಅದನ್ನು ಶೀಘ್ರವಾಗಿ ತೀರಿಸುವ ಭರವಸೆ ಇದೆ. ಈಗ ಮಹಾಸಭೆಯ ಹಣಕಾಸಿನ ಸ್ಥಿತಿ ಉತ್ತಮವಾಗಿದೆ.

**ನಿಮ್ಮ ಅರುವತ್ತು ವರ್ಷಗಳ ಅನುಭವದಲ್ಲಿ ನಿಮ್ಮ ಜೀವನದ ಪ್ರಮುಖವಾದ ಕೆಲವು ಘಟನೆಗಳನ್ನು ತಿಳಿಸಬಹುದೇ ?**

ಸೀತಾಳೊಂದಿಗಿನ ನನ್ನ ವಿವಾಹವೇ ನನ್ನ ಜೀವನದಲ್ಲಿ ಪ್ರಮುಖ ತಿರುವು ನೀಡಿದ ಘಟನೆ. ಅನಂತರದ್ದು ನನ್ನ ಮಗಳು ಜ್ಯೋತಿಯ ಅಕಾಲ ಮರಣ. ಸಾಮಾನ್ಯ ವ್ಯಕ್ತಿಯಾಗಿ ಜನಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷನಾಗಿ, ಸಮಾಜಸೇವೆ ಮಾಡುವ ಅವಕಾಶ ಸಿಕ್ಕಿದುದು ಅಪೂರ್ವ ಘಟನೆ. ರಾಜ್ಯೋತ್ಸವ ಪ್ರಶಸ್ತಿ ಬಂದುದು, ಆಗಿನ ಪ್ರಧಾನಮಂತ್ರಿಗಳಾಗಿದ್ದ ರಾಜೀವಗಾಂಧಿಯವರ ಭೇಟಿ ಮುಂತಾದ ಅನೇಕ ಘಟನೆಗಳು ಸ್ಮರಣಾರ್ಹ. ನನ್ನಂತಹ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಬ್ರಾಹ್ಮಣ ಸಮಾಜವು ಅಭಿನಂದಿಸುತ್ತಿರುವ ಈ ಸಮಾರಂಭವು ನನ್ನ ಎಲ್ಲ ಸೇವೆಗಳಿಗೂ ಸಂದ ಗೌರವವೆಂದು ನಾನು ಭಾವಿಸುತ್ತೇನೆ. ಈ ಸಂದರ್ಭವು ನನ್ನ

ಮನಸ್ಸಿನಲ್ಲಿ ಚಿರಕಾಲ ಉಳಿಯುತ್ತದೆ.

**ಸಾರ್ವಜನಿಕ ಜೀವನದ ನಿಮ್ಮ ಪಯಣದಲ್ಲಿ ನಿಮ್ಮ ಶ್ರೀಮತಿಯವರ ಪಾತ್ರದ ಬಗ್ಗೆ ಹೇಳುತ್ತಿರಾ ?**


ನನ್ನ ಎಲ್ಲ ಸಾಧನೆಗಳ ಸ್ಫೂರ್ತಿ ನನ್ನ ಶ್ರೀಮತಿಯೆ. ಅವಳ ಸಂಪೂರ್ಣ ಸಹಕಾರದಿಂದ ಮಾತ್ರ ನನಗೆ ಇದೆಲ್ಲ ಸಾಧ್ಯವಾಯಿತು. ನಾನು ವೇದಪಾಠಶಾಲೆಯನ್ನು ಪ್ರಾರಂಭಿಸಿದ್ದೇನೋ ಸರಿ. ಆದರೆ, ಅಲ್ಲಿನ ಮೂವತ್ತೂ ವಿದ್ಯಾರ್ಥಿಗಳನ್ನು ತನ್ನ ಮಕ್ಕಳಂತೆ ನೋಡಿಕೊಂಡು ಅವರ ಊಟ, ತಿಂಡಿ, ವಸತಿ, ಬಟ್ಟೆ ಮುಂತಾದ ಎಲ್ಲ ವ್ಯವಸ್ಥೆಯನ್ನು ನಿರ್ವಹಿಸುತ್ತಿರುವುದೇ ನನ್ನ ಶ್ರೀಮತಿ ಸೀತಾ. ಇದೆಲ್ಲವನ್ನೂ ಜೀವನದಲ್ಲಿ ಒಂದು ತಪಸ್ಸೆಂಬಂತೆ ನಿರ್ವಹಿಸುತ್ತಿದ್ದಾಳೆ. ಎಂತಹ ಕಷ್ಟಕಾಲದಲ್ಲೂ ಅವಳು ಧೃತಿಗೆಡದೆ ಪಾಸಿಟೀವ್ ಆಗಿ ಆಲೋಚಿಸುತ್ತಾಳೆ. ಇದರಿಂದ ನನ್ನ ಎಷ್ಟೋ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ದೊರೆತಿದೆ. ನನಗೆ ಇಂತಹ ಸಂಗಾತಿಯನ್ನು ನೀಡಿದ ಭಗವಂತನನ್ನು ಯಾವಾಗಲೂ ಸ್ಮರಿಸುತ್ತೇನೆ.

**ನೀವು ಆದರ್ಶವೆಂದು ಭಾವಿಸುವ ಕೆಲವು ವ್ಯಕ್ತಿಗಳ ಹೆಸರನ್ನು ಹೇಳಬಹುದೇ ?**

ನಮ್ಮ ಮಾವನವರೂ, ಘನವಿದ್ವಾಂಸರೂ, ಸಹೃದಯಿಗಳೂ ಆದ ವೇ. ಬ್ರ. ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳು, ಹಿರಿಯ ಚೇತನ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರು... ಹೀಗೆಯೇ ಅನೇಕರು.

**ಬಲವಂತ ಮತಾಂತರದ ವಿರುದ್ಧ ತಮಿಳುನಾಡು ಸರಕಾರವು ಒಂದು ಕಾಯಿದೆಯನ್ನು ತಂದಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

ಇದನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಯಾವುದಕ್ಕೂ ಬಲವಂತ ಸಲ್ಲ. ಜನತೆಯ ಬಡತನ, ಅಜ್ಞಾನ ಉಪಯೋಗಿಸಿಕೊಂಡು ಮತಾಂತರ ಮಾಡುವುದು ಬಲವಂತ ಮತಾಂತರವೇ ಸರಿ. ನಮ್ಮ ಸಂವಿಧಾನವು ತಮಗೆ ಬೇಕಾದ ಧರ್ಮವನ್ನು ಆಚರಿಸುವ ಹಕ್ಕನ್ನು ಜನತೆಗೆ ನೀಡಿದೆಯೇ ಹೊರತು, ಮತಾಂತರ ಮಾಡಿಸುವವರಿಗೆ ಯಾವುದೇ ಹಕ್ಕನ್ನು ನೀಡಿಲ್ಲವೆಂಬುದನ್ನು *ಈ* ಶಾಸನವನ್ನು ವಿರೋಧಿಸುತ್ತಿರುವವರು ಗಮನಿಸಬೇಕು.



***73. ಧರ್ಮಪತ್ನಿ ಸೀತಾ ಅವರೊಂದಿಗೆ ಬಿ.ಎಸ್.ವಿ.***

# ೨. ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ (ರಿ.), ಬೆಂಗಳೂರು

*ಎಸ್. ಟಿ. ನಾಗರಾಜ್*

## *ಹಿನ್ನೆಲೆ*

ಸನಾತನ ಆರ್ಯ ವೈದಿಕ ಪರಂಪರೆಯ ನೆಲೆವೀಡು ಭಾರತ. ವೈದಿಕ ಪರಂಪರೆಯ ಪ್ರಾಶಸ್ತ್ಯ - ಸನಾತನ ಧರ್ಮದ ಪ್ರಮಾಣಗ್ರಂಥಗಳಾದ ವೇದಗಳು - ವೇದಾಧ್ಯಯನದ ಮಹತ್ತ್ವ - ಇಂದು ಕ್ಷೀಣಿಸಿದ ವೇದಾಧ್ಯಯನ - ಹಿರಿಯ ವೈದಿಕ ವಿದ್ವಾಂಸರನ್ನು ಸಮಾಜದಲ್ಲಿ ಗುರುತಿಸಿ ಗೌರವಿಸುವುದು - ಸಾರ್ವಜನಿಕರಲ್ಲಿ ಆರ್ಯ ವೈದಿಕ ಧರ್ಮದ ಪರಿಚಯದ ಕೊರತೆ - ವೈದಿಕ ಕ್ಷೇತ್ರದಲ್ಲಿ ಪರಿಶ್ರಮ ಮಾಡುತ್ತಿರುವವರ ಸಂಘಟನೆಯ ಕೊರತೆ ಇದು ಪ್ರಸ್ತುತ ಸನ್ನಿವೇಶ. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ಒಂದು ಹೊಸ ಪರಿವರ್ತನೆಯನ್ನು ತರಲು ಅನೇಕ ಸಂಸ್ಥೆಗಳು ನಡೆಸಬೇಕಾದ ಕಾರ್ಯ ಚಟುವಟಿಕೆಗಳನ್ನು ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರ ಅನುಗ್ರಹ ಹಾಗೂ ಆಶೀರ್ವಾದಗಳೊಡನೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರೂ, ನಾಡಿನ ಪ್ರಸಿದ್ಧ ಕೈಗಾರಿಕೋದ್ಯಮಿಗಳೂ ಆದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಮತ್ತು ಪರಿವಾರದವರೆಲ್ಲರೂ ಸಂಪೂರ್ಣವಾಗಿ ತೊಡಗಿಸಿಕೊಂಡು ಮಾಡುತ್ತಿರುವುದು ಉಲ್ಲೇಖನೀಯ ಹಾಗೂ ಅಭಿನಂದನೀಯ. ಈ ಉದ್ದೇಶದಿಂದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ದಂಪತಿಗಳ ಏಕಮಾತ್ರ ಪುತ್ರಿಯಾಗಿದ್ದ ಕು. ಜ್ಯೋತಿ ಹೆಸರಿನಲ್ಲಿ **ಜ್ಯೋತಿ ಚಾರಿಟಬಲ್ ಟ್ರಸ್ಟ್** ಅನ್ನು ೧೯೮೨ರಲ್ಲಿ ಆರಂಭಗೊಳಿಸಿ ಅದರ ಆಶ್ರಯದಲ್ಲಿ ಸನಾತನ ಧರ್ಮದ ಪುನರುತ್ಥಾನದ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಈ ಟ್ರಸ್ಟಿನ ಆಶ್ರಯದಲ್ಲಿ ಕಾರ್ಯ ನಡೆಸುತ್ತಿರುವ ಮುಖ್ಯ ಸಂಸ್ಥೆಯೇ **ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ.**

## *ಪ್ರತಿಷ್ಠಾನದ ಉದ್ದೇಶ*

* ವೈದಿಕ ಪರಂಪರೆಗೆ ಪ್ರಾಚೀನ ಭಾರತದಲ್ಲಿ ಇದ್ದ ಗೌರವ ಭಾವನೆಯನ್ನು ಜನರಲ್ಲಿ ಜಾಗೃತಗೊಳಿಸುವುದು.
* ಇದಕ್ಕೆ ಪೋಷಕವಾಗಿ ಧಾರ್ಮಿಕ ಗ್ರಂಥಗಳ ಪ್ರಕಾಶನ
* ಪ್ರಥಮ ಹಂತದಲ್ಲಿ ಪರಮ ಪ್ರಮಾಣಗಳೆನಿಸಿದ ವೇದಗ್ರಂಥವನ್ನು ಸಾಮಾನ್ಯಜನರಿಗೂ ಅರಿವಾಗುವಂತೆ ಕನ್ನಡದಲ್ಲಿ ಪ್ರಕಾಶನಗೊಳಿಸುವುದು.
* ಸನಾತನ ಗುರುಕುಲ ಪದ್ಧತಿಯಂತೆ ವೇದಾಧ್ಯಯನ ಮಾಡುವವರಿಗಾಗಿ ಸೂಕ್ತ ಶಿಕ್ಷಣವನ್ನು ನೀಡಿ ಸಮಾಜಕ್ಕೆ ನೀಡುವುದು.
* ಸಾಂದರ್ಭಿಕವಾಗಿ ಹಿರಿಯ ನುರಿತ ವೇದಶಾಸ್ತ್ರ ವಿದ್ವಾಂಸರನ್ನು ಗುರುತಿಸಿ ಗೌರವಿಸುವುದು.
* ಆಗಾಗ ಸಾರ್ವಜನಿಕರಿಗಾಗಿ ಸಭೆ, ಸಮಾರಂಭಗಳನ್ನು ಏರ್ಪಡಿಸಿ ಧಾರ್ಮಿಕ ಪ್ರವಚನ, ಪ್ರಶ್ನೋತ್ತರಗಳ ಮುಖಾಂತರ ಅವರಲ್ಲಿ ಧರ್ಮಜಾಗೃತಿಯನ್ನು ಉಂಟು ಮಾಡುವುದು.
* ವೈದಿಕ ಕ್ಷೇತ್ರದಲ್ಲಿ ವ್ಯವಸಾಯ ಮಾಡುತ್ತಿರುವವರಿಗಾಗಿ ಆಗಾಗ ಸಮಾವೇಶಗಳನ್ನು ಏರ್ಪಡಿಸುವುದು.




***74.** ವೇದದರ್ಶನ ಸಮಾರಂಭ : ಪೂಜ್ಯ ಶ್ರೀ ಶ್ರೀ ವರದದೇಶಿಕಾಚಾರ್ಯ ರಂಗಪ್ರಿಯ ಸ್ವಾಮೀಜೀ ಅವರಿಗೆ ವೇದಗ್ರಂಥ ಸಮರ್ಪಣೆ - ಬಿ.ಎನ್.ವಿ. ಅವರಿಂದ*



***75. ವೇದದರ್ಶನ : ಗ್ರಂಥ ಬಿಡುಗಡೆಗಾಗಿ ಆಗಮಿಸುತ್ತಿರುವ ರಾಜ್ಯಪಾಲೆ ಶ್ರೀಮತಿ ರಮಾದೇವಿ***

* ನಾಡಿನಾದ್ಯಂತ ಮನೆ-ಮಂದಿರಗಳಲ್ಲಿ ವೇದಪಾರಾಯಣ ಪದ್ಧತಿಯನ್ನು ಪುನರ್ಜಾಗರಣಗೊಳಿಸಿ ತನ್ಮೂಲಕ ವೇದಾಧ್ಯಯನವನ್ನು ಮಾಡುವ ತರುಣ ಪೀಳಿಗೆಗೆ ಆಶ್ರಯ ಮತ್ತು ಪ್ರೋತ್ಸಾಹವನ್ನು ಕಲ್ಪಿಸುವುದು.

### *ಪ್ರತಿಷ್ಠಾನದ ಚಟುವಟಿಕೆ*

**ಶ್ರೀ ಮಲ್ಲಿಕಾರ್ಜುನ ವೇದ-ಸಂಸ್ಕೃತ ಪಾಠಶಾಲೆ:** ಸನಾತನ ವೇದಾಧ್ಯಯನ ಪರಂಪರೆಯನ್ನು ಉಳಿಸಿ, ಬೆಳೆಸುವ ದೃಷ್ಟಿಯಿಂದ ಕಳೆದ ಇಪ್ಪತ್ತು ವರ್ಷಗಳಿಂದ ಈ ಪಾಠಶಾಲೆಯನ್ನು ನಡೆಸಲಾಗುತ್ತಿದೆ.

**ಕೃಷ್ಣಯಜುರ್ವೇದ ಕನ್ನಡ ಪ್ರಕಾಶನ:** ಮಾತೃಭಾಷೆಯಲ್ಲಿ ವೈದಿಕ ಸಾಹಿತ್ಯವನ್ನು ತಿಳಿಯುವ ಹಂಬಲವು ನಾಡಿನ ಜನತೆಗೆ ಸಹಜ. ಈ ಹಿನ್ನೆಲೆಯಲ್ಲಿ ಮೈಸೂರಿನ ರಾಜಮನೆತನದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಋಗ್ವೇದ ಸಾಯಣ ಭಾಷ್ಯದ ಕನ್ನಡಾನುವಾದವನ್ನು ಮೂವತ್ತೂರು ಸಂಪುಟಗಳಲ್ಲಿ ಪ್ರಕಾಶಿಸಿದ್ದಾರೆ. ಅದೇ ಹೆಜ್ಜೆಯಲ್ಲಿ ಕೃಷ್ಣ ಯಜುರ್ವೇದದ ಸಾಯಣ ಭಾಷ್ಯದ ಕನ್ನಡಾನುವಾದವನ್ನು ಪ್ರತಿಷ್ಠಾನವು ಕಳೆದ ಹದಿನೈದು ವರ್ಷಗಳಿಂದ ಕೈಗೊಂಡಿದೆ. ಶೃಂಗೇರಿ ಶಾರದಾ ಪೀಠಾಧೀಶ್ವರರ ಪೂರ್ಣಾನುಗ್ರಹ, ಆಶೀರ್ವಾದಗಳು ಈ ಕಾರ್ಯಕ್ಕೆ ದೊರೆತಿವೆ. ಇದುವರೆಗೆ ಪ್ರಕಾಶನಗೊಂಡ ಸಂಪುಟಗಳು ನಾಲ್ಕು.

ಸಂಪುಟ ೧ - ೧೯೮೮ ಮತ್ತು ೧೯೯೦ ರಲ್ಲಿ ಬಿಡುಗಡೆ
ಸಂಪುಟ ೨ - ೧೯೯೪ರಲ್ಲಿ ಬಿಡುಗಡೆ
ಸಂಪುಟ ೩ - ೧೯೯೭ರಲ್ಲಿ ಬಿಡುಗಡೆ
ಸಂಪುಟ ೪ - ೨೦೦೦ ಏಪ್ರಿಲ್‌ನಲ್ಲಿ ಬಿಡುಗಡೆ
ಸಂಪುಟ ೫ - ಇದೀಗ ಬರಲಿರುವ ಡಿಸೆಂಬರ್ ೨೨ರಂದು ಬಿಡುಗಡೆಯಾಗಲಿದೆ (೨೦೦೨).

**ವೇದದರ್ಶನ ಸಮಾರಂಭ:** ಕೃಷ್ಣಯಜುರ್ವೇದ ಸಾಯಣ ಭಾಷ್ಯ ಕನ್ನಡ ಅನುವಾದದ ಬಿಡುಗಡೆ, ವಿದ್ವಾಂಸರ ಸತ್ಕಾರ, ರಾಜ್ಯಮಟ್ಟದ



***76. ಬೆಟ್ಟದಪುರದಲ್ಲಿ ಕಲ್ಯಾಣಮಂದಿರದ ಉದ್ಘಾಟನೆ: ಶೃಂಗೇರಿ ಜಗದ್ಗುರುಗಳಾದ ಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅಮೃತಹಸ್ತದಿಂದ (೧೦.೫.೧೯೯೯)***

ವೇದ ಕಂಠಪಾಠ ಸ್ಪರ್ಧೆಗಳು, ವಿಜೇತರಿಗೆ ಪಾರಿತೋಷಿಕಗಳ ವಿತರಣೆ ಹಾಗೂ ಶ್ರುತಿ ಸಪ್ತಾಹ (ವೇದಪಾರಾಯಣ).

**ವ್ಯಾಸವಂದನಾ:** ಆಸ್ತಿಕ ಲೋಕಕ್ಕೆ ಮಹರ್ಷಿ ವೇದವ್ಯಾಸರ ಲೋಕೋತ್ತರ ಕೊಡುಗೆಯ ಸ್ಮರಣೆ ಮತ್ತು ನಮನ. ಈ ಕಾರ್ಯಕ್ರಮವನ್ನು ಕಳೆದ ಎರಡು ವರ್ಷಗಳಿಂದ (೨೦೦೧, ೨೦೦೨) ನಡೆಸಿಕೊಂಡು ಬರಲಾಗುತ್ತಿದೆ.

**ಪ್ರತಿಷ್ಠಾನದ ಮುಂದಿನ ಯೋಜನೆ:** ಕೃಷ್ಣ ಯಜುರ್ವೇದದ ತೈತ್ತಿರೀಯ ಶಾಖೆಯ ಉಳಿದ ಸಮಗ್ರ ಭಾಗವನ್ನು ಸಾಯಣ ಭಾಷ್ಯದ ಕನ್ನಡಾನುವಾದದಲ್ಲಿ ಪ್ರಕಟಿಸುವುದು.

ಷೋಡಶಸಂಸ್ಕಾರಗಳ ಹಿನ್ನೆಲೆ, ಸ್ವರೂಪ, ಪ್ರಯೋಗಗಳನ್ನು ಚೆನ್ನಾಗಿ ಅರಿತು ನಿರ್ವಹಿಸಲು ಅನುಕೂಲವಾಗುವಂತೆ ಪೂರ್ವಾಪರ ಪ್ರಯೋಗದ ಗ್ರಂಥವನ್ನು ಕನ್ನಡಾನುವಾದದೊಡನೆ ವಿಶೇಷವಾಗಿ ಟಿಪ್ಪಣಿಗಳ ಸಹಿತವಾಗಿ ಪ್ರಕಟಗೊಳಿಸುವುದು.

ವೇದಪಾರಾಯಣ ಪದ್ಧತಿಯನ್ನು ಜಾಗರಣಗೊಳಿಸಿ ಅದಕ್ಕೆ ಸೂಕ್ತ ನೆಲೆಯನ್ನು ಕಲ್ಪಿಸಲು ಅಗತ್ಯವಾದ ಒಂದು ಸಂಸ್ಥೆಯನ್ನು ಸ್ಥಾಪಿಸುವುದು.

## ೩. ಶ್ರೀ ಮಲ್ಲಿಕಾರ್ಜುನ ವೇದ - ಸಂಸ್ಕೃತ ಪಾಠಶಾಲೆ

*ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವರ್ಗ*

ಇಂದು ಸನಾತನ ಭಾರತೀಯ ಮೌಲ್ಯಗಳು ಕುಗ್ಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಮೌಲ್ಯಗಳ ಪುನರುತ್ಥಾನವು ಇಂದಿನ ಕಾಲದ ಕರೆಯಾಗಿದೆ.

ನಮ್ಮೆಲ್ಲ ಮೌಲ್ಯಗಳು ರೂಪುಗೊಳ್ಳಲು ಆಧಾರವಾದ ಗ್ರಂಥಗಳೇ ವೇದಗಳು. ಜಗತ್ತಿನ ಜನತೆಯೇ ನಿಬ್ಬೆರಗಾಗುವಂತಹ ಜೀವನಕ್ರಮವನ್ನು ಒದಗಿಸಿದ ಸೆಲೆ ಅದು. ಈ ಸೆಲೆಯನ್ನು ಸಮೃದ್ಧಗೊಳಿಸಲು ವೇದಾಧ್ಯಯನ ಪದ್ಧತಿಯನ್ನು ಚೆನ್ನಾಗಿ ರೂಢಿಸಬೇಕಾದದ್ದು ನಮ್ಮ ಮುಂದಿನ ಪೀಳಿಗೆಗೆ ನಾವು ಕೊಡಬಹುದಾದ ಕಾಣಿಕೆ.

ಈ ಹಿನ್ನೆಲೆಯಲ್ಲಿ ವೇದಾಧ್ಯಯನವನ್ನು ಕ್ರಮವರಿತು ನಡೆಸುವ ಈ ಪಾಠಶಾಲೆಯಲ್ಲಿ **ಕೃಷ್ಣ ಯಜುರ್ವೇದ**ದ ಸಂಪೂರ್ಣ ಅಧ್ಯಯನ, **ಕರ್ಮಾನುಷ್ಠಾನ**ಕ್ಕೆ ಅಗತ್ಯವಾದ ಪ್ರಯೋಗಭಾಗದ ಶಿಕ್ಷಣ, ಅದಕ್ಕಾಗಿ ಅತ್ಯಗತ್ಯವಾಗಿರುವ ಸಂಸ್ಕೃತ ಭಾಷೆಯ ಹದವರಿತ ಪಾಠ ಈ ಮೂರೂ ನಡೆಯುತ್ತಿವೆ.

ಬೆಂಗಳೂರಿನ ಪ್ರಸಿದ್ಧವಾದ ಶ್ರೀ ಚಾಮರಾಜೇಂದ್ರ ವೇದ ಮಹಾಪಾಠಶಾಲೆಯ ಪ್ರಾಂಶುಪಾಲರಾಗಿ, ಸದಾಚಾರ ಸಂಪನ್ನರಾಗಿದ್ದ ವೇ.ಬ್ರ. ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳ ಪುಣ್ಯ ಸ್ಮೃತಿಗಾಗಿ ಅವರ ನಾಮಧೇಯದಿಂದ ಅಂಕಿತವಾದ ಈ ಪಾಠಶಾಲೆಯು ೧೯೮೩ರ ಫೆಬ್ರವರಿಯಲ್ಲಿ ಶೃಂಗಗಿರಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರಿಂದ ಉದ್ಘಾಟಿಸಲ್ಪಟ್ಟಿತು.

ಈ ಪಾಠಶಾಲೆಯ ಸ್ಥಾಪಕ-ಅಧ್ಯಕ್ಷರಾಗಿರುವ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು ತಮ್ಮ ಪುತ್ರಿ ಕುಮಾರಿ ಜ್ಯೋತಿ ಹೆಸರಿನಲ್ಲಿ ಆರಂಭಿಸಿರುವ **ಜ್ಯೋತಿ ಚಾರಿಟಬಲ್ ಟ್ರಸ್ಟ್** ಆಶ್ರಯದಲ್ಲಿ ಈ ಪಾಠಶಾಲೆಯು ನಡೆಯುತ್ತಿದೆ. ಇದಲ್ಲದೆ ಇದರ ಆಶ್ರಯದಲ್ಲಿ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನವೂ ಕೆಲಸ ಮಾಡುತ್ತಿದ್ದು ಕೃಷ್ಣಯಜುರ್ವೇದ ಕನ್ನಡ ಪ್ರಕಾಶನ, ವೇದ ವಿದ್ವಾಂಸರ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ವೇ.ಬ್ರ.ಶ್ರೀ ಚನ್ನಕೇಶವಾವಧಾನಿಗಳು ಆರಂಭದ ಅಧ್ಯಾಪಕರಾಗಿದ್ದು ತುಂಬ ಪರಿಶ್ರಮದಿಂದ ಇಲ್ಲಿಯ ವಿದ್ಯಾರ್ಥಿಗಳಿಗೆ ಅಧ್ಯಾಪನವನ್ನು ನಡೆಸಿದರು. ಅವರು ಕೃಷ್ಣ ಯಜುರ್ವೇದದ ಸಂಹಿತಾ-ಬ್ರಾಹ್ಮಣ-ಆರಣ್ಯಕ ಭಾಗಗಳನ್ನೊಳಗೊಂಡ ವೇದಾಧ್ಯಯನವನ್ನು ವಿಧಿವತ್ತಾಗಿ ಆರಂಭಿಸಿದರು. ಮೊದಲ ತಂಡದಲ್ಲಿ ಅನೇಕ ವಿದ್ಯಾರ್ಥಿಗಳು ಬಂದರೂ ಸಂಸ್ಕಾರ, ಪರಿಶ್ರಮದಿಂದ ಮಾತ್ರ ಸಾಧ್ಯವಾಗುವ ಸಂಪೂರ್ಣ ಅಧ್ಯಯನವನ್ನು ಮೂರು ವಿದ್ಯಾರ್ಥಿಗಳು ಮಾಡಿರುತ್ತಾರೆ. ಸಂಸ್ಕೃತ ಭಾಷೆಯ ಶಿಕ್ಷಣಕ್ಕಾಗಿ ಮೊದಲಿಗೆ ವಿದ್ವಾನ್ ವೆಂಕಟರಮಣ ತಿಮ್ಮಣ್ಣ ಭಟ್ಟರು ಮತ್ತು ವಿದ್ವಾನ್ ಶ್ರೀಧರಭಟ್ಟರು ಇಲ್ಲಿ ಅಧ್ಯಾಪನವನ್ನು ನಡೆಸಿದರು.

ಗುರುಕುಲ ಪದ್ಧತಿಯ ಇದೇ ತೆರನಾದ ಅಧ್ಯಾಪನ ಪರಂಪರೆಯನ್ನು ವೇ.ಬ್ರ.ಶ್ರೀ ಪ್ರಕಾಶ ಸುಬ್ರಾಯಭಟ್ಟರು, ವಿದ್ವಾನ್ ವೆಂಕಟರಮಣದೇವಭಟ್ಟರು ಈಗ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಪಾಠಶಾಲೆಯ ವಿದ್ಯಾಭ್ಯಾಸದ ಸಮಸ್ತ

ನಿರ್ವಹಣೆಯನ್ನು ವಿದ್ವಾನ್ ಸೋ.ತಿ.ನಾಗರಾಜರು ವಹಿಸಿಕೊಂಡು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಈ ಪಾಠಶಾಲೆಯಲ್ಲಿ, ಉಪನೀತರಾದ ಹದಿನೈದು ವಯಸ್ಸಿನ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಪ್ರವೇಶಾವಕಾಶವಿದ್ದು ಸರಾಸರಿ ಏಳು ವಿದ್ಯಾರ್ಥಿಗಳ ಸೇರ್ಪಡೆಯಾಗುತ್ತಿದೆ. ಈ ವಿದ್ಯಾರ್ಥಿಗಳು ಕರ್ನಾಟಕದ ಮೂಲೆಮೂಲೆಯಿಂದ ಬರುವುದು ಮಾತ್ರವಲ್ಲದೆ ಹೊರ ರಾಜ್ಯಗಳಿಂದಲೂ ಬಂದಿರುತ್ತಾರೆ.

ಪಾಠಶಾಲೆಯಲ್ಲಿ, ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯು ಅಳವಡಿಸಲ್ಪಟ್ಟಿದ್ದು ಸನಾತನ ವೇಷದಿಂದ ಶೋಭಿತರಾದ ವಿದ್ಯಾರ್ಥಿಗಳು ವೈದಿಕ ಸಂಸ್ಕೃತಿಯ ಕುರುಹುಗಳಾಗಿದ್ದಾರೆ. ವಿದ್ಯಾರ್ಥಿಗಳು ನಿರಂತರವಾಗಿ ಮಂತ್ರಗಳ ಆವರ್ತನೆ, ಕಂಠಪಾಠ ಇವುಗಳಲ್ಲಿಯೇ ತೊಡಗಿರುವ ದೃಶ್ಯ ನಿಜಕ್ಕೂ ಹೃದ್ಯವೆನಿಸುತ್ತದೆ.

ನಗರದ ಅನೇಕ ಭಾಗಗಳಲ್ಲಿ ನಡೆಯುವ ವೇದ-ಸ್ಪರ್ಧೆಯಲ್ಲಿ ಪಾಠಶಾಲಾ ವಿದ್ಯಾರ್ಥಿಗಳು ಅನೇಕ ಬಹುಮಾನಗಳನ್ನೂ, ಪ್ರಶಸ್ತಿಗಳನ್ನೂ ಗಳಿಸಿರುವುದು ಅವರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಸಮ್ಮೇಳನ, ಶಾರದಾ ರಥೋತ್ಸವ, ವೇದಪಾಠಶಾಲೆಗಳ ವಾರ್ಷಿಕೋತ್ಸವ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಘಟಿಕೋತ್ಸವ ಮುಂತಾದ ಸಾರ್ವಜನಿಕ ಸಮಾರಂಭಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿರುವುದು ಹೆಮ್ಮೆಯನ್ನು ತಂದಿದೆ. ರಾಜ್ಯದ ಅನೇಕ ಕಡೆ ನಡೆಯುವ ವೇದಶಿಬಿರಗಳಲ್ಲಿ ಇಲ್ಲಿಯ ವಿದ್ಯಾರ್ಥಿಗಳು ಅಲ್ಪಕಾಲಿಕ ಶಿಕ್ಷಕರಾಗಿ ಸಾರ್ವಜನಿಕ ಸೇವೆಯಲ್ಲಿಯೂ ಮುಂದಿದ್ದಾರೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿಯು ನಡೆಸುವ ವಿವಿಧ ವೇದ-ಸಂಸ್ಕೃತ ಪರೀಕ್ಷೆಗಳಲ್ಲಿಯೂ ತೇರ್ಗಡೆ ಹೊಂದಿದ್ದಾರೆ. ಇದಲ್ಲದೆ ಶೃಂಗೇರಿಯ ಶ್ರೀ ಸುರಸರಸ್ವತೀ ಸಭಾ ನಡೆಸುವ ಸರಳ ಸಂಸ್ಕೃತ ಪರೀಕ್ಷೆಗಳಲ್ಲಿಯೂ ಇಲ್ಲಿನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಪಾಠಶಾಲೆಯ ಅಧ್ಯಕ್ಷರಾದ ಶ್ರೀ ಬಿ.ಎಸ್.ವಿ. ಸುಬ್ರಹ್ಮಣ್ಯರವರ ಪರಿವಾರವೇ ಈ ಪಾಠಶಾಲೆಯಲ್ಲಿ ತೊಡಗಿಕೊಂಡಿದ್ದು, ಪಾಠಶಾಲೆಯು ಕೇವಲ ಸಂಸ್ಥೆಯಾಗದೇ ಸುಬ್ರಹ್ಮಣ್ಯರವರ ಧರ್ಮಪತ್ನಿಯವರಾದ ಸೌ. ಶ್ರೀಮತಿ ಸೀತಮ್ಮನವರ ಮಾತೃವಾತ್ಸಲ್ಯದಿಂದ ಕೌಟುಂಬಿಕ ಪರಿಸರವನ್ನು ತಳೆದಿರುವುದು ಉಲ್ಲೇಖನೀಯ. ಇವರ ಜತೆಗೆ ಸತತ ಹತ್ತು ವರ್ಷಗಳಿಂದ ಶ್ರೀ ರಾಮಮೂರ್ತಿಯವರು ಸಮಯಕ್ಕೆ ಸರಿಯಾಗಿ ಊಟೋಪಚಾರಗಳನ್ನು ಒದಗಿಸುವ ಕೆಲಸದಲ್ಲಿ ಸಹಾಯಕರಾಗಿದ್ದಾರೆ.

ಹೀಗೆ ಸಾರ್ಥಕವಾದ ಹತ್ತೊಂಬತ್ತು-ಇಪ್ಪತ್ತನೆಯ ವಸಂತಗಳನ್ನು ಕಳೆದಿರುವ ಪಾಠಶಾಲೆಯು ಈಗ ಇಪ್ಪತ್ತೊಂದನೆಯ ವರ್ಷಕ್ಕೆ ಅಡಿಯಿಡುತ್ತಿದೆ. ಈ ಸಂದರ್ಭದಲ್ಲಿ, ಶೃಂಗೇರಿಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ದಿವ್ಯಾನುಗ್ರಹದಿಂದ ವೇದಮಾತೆಯ ಸೇವೆಯಲ್ಲಿ ದೊಡ್ಡ ಹೆಜ್ಜೆಯನ್ನಿಡಲು ಮಹಾಜನಗಳ ಹಾರೈಕೆ, ಪ್ರೋತ್ಸಾಹಗಳನ್ನು ಪಾಠಶಾಲೆಯು ಕೋರುತ್ತದೆ.



*77. ವಟುಗಳು : ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆ*

# ೪. ವೇದಪಾರಾಯಣ ಪ್ರತಿಷ್ಠಾನ

## (ವೇದ ಪಾರಾಯಣದ ಹಿನ್ನೆಲೆ, ಮಹತ್ತ್ವ, ಪುನರ್ಜಾಗರಣ)

**ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ**
**ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ**

ಎಂಬ ಶ್ರುತಿವಚನವು ಸಮಸ್ತ ಸೃಷ್ಟಿಗೆ ಶ್ರುತಿಗಳು ಆಧಾರವೆಂದು ತಿಳಿಸುತ್ತದೆ.

ಅನಾದಿ ಕಾಲದಿಂದ ಶ್ರುತಿಯನ್ನು ಕಿಂಚಿತ್ತೂ ಲೋಪವಿಲ್ಲದಂತೆ ಗುರು-ಶಿಷ್ಯ ಪರಂಪರೆಯಿಂದ ಉಳಿಸಿಕೊಂಡು ಬಂದಿರುವ ನಮ್ಮ ಪೂರ್ವಿಕರ ತಪಸ್ಸು ಸಾಧಾರಣವಾದುದಲ್ಲ. *"ಬ್ರಾಹ್ಮಣೇನ ನಿಷ್ಕಾರಣಂ ಷಡಂಗೋ ವೇದೋಽಧ್ಯೇಯೋ ಜ್ಞೇಯಶ್ಚ"* ಎಂಬುದನ್ನು ಅವರು ದೃಢವಾಗಿ ನಂಬಿದ್ದರು.

ಶ್ರುತಿಯನ್ನು ಸಂರಕ್ಷಿಸಿ ಉಳಿಸಿಕೊಂಡು ಬರುವುದೆಂದರೆ ಪಾರಾಯಣದ ಮೂಲಕ ವೇದದ ಆನುಪೂರ್ವಿಯನ್ನು, ವ್ಯತ್ಯಾಸಗೊಳ್ಳದಂತೆ ಇಟ್ಟುಕೊಳ್ಳುವುದು; ಇದಲ್ಲದೆ ಶ್ರುತಿಯನ್ನೇ ಕೇಂದ್ರವಾಗಿಟ್ಟುಕೊಂಡಿರುವ ನಮ್ಮ ಸಮಸ್ತ ವಿದ್ಯಾಸ್ತೋಮವನ್ನು ಅಭ್ಯಸಿಸುವುದೇ ಆಗಿದೆ.

*"ವೇದಸ್ವೀಕರಣಂ ಪೂರ್ವಂ ವಿಚಾರೋಽಭ್ಯಸನಂ ಜಪಃ |*
*ತದ್ದಾನಂ ಚೈವ ವಿಪ್ರೇಭ್ಯಃ ವೇದಾಭ್ಯಾಸೋ ಹಿ ಪಂಚಧಾ ||*

ಎಂಬ ಉಕ್ತಿಯೂ ಇದನ್ನೇ ಸ್ಪಷ್ಟವಾಗಿ ಸಾರುತ್ತಿದೆ. ವೇದವನ್ನೇ ನಿರಂತರ ಪಾರಾಯಣ ಮಾಡುತ್ತಾ ವೇದರಾಶಿಯನ್ನು ಪೂರ್ವಿಕರು ಉಳಿಸಿಕೊಂಡು ಬಂದಿರುವರೆಂದೂ, ಈ ರೀತಿಯ ನಿರಂತರ ಪಾರಾಯಣವನ್ನು **ಸಂಪಾಠ** ಎನ್ನುತ್ತಿದ್ದರೆಂದೂ ಅತ್ಯಂತ ಪ್ರಾಚೀನ ಗ್ರಂಥವಾದ ಪತಂಜಲಿ ಮಹರ್ಷಿಗಳ ಮಹಾಭಾಷ್ಯದಿಂದ ತಿಳಿದು ಬರುತ್ತದೆ. ಶ್ರುತಿಯ ಆನುಪೂರ್ವಿಗೆ ಇರುವ ಅತ್ಯಂತ ಮಹತ್ತ್ವದ ಸ್ಥಾನವು ಜೈಮಿನಿ ಮಹರ್ಷಿಗಳ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಚೆನ್ನಾಗಿ ನಿರೂಪಿತವಾಗಿದೆ. ತೈತ್ತಿರೀಯಆರಣ್ಯಕದ **ಸಹ ವೈ** ಪ್ರಪಾಠಕದಲ್ಲಿನ ಸ್ವಾಧ್ಯಾಯಬ್ರಾಹ್ಮಣದಲ್ಲಿ ಬ್ರಹ್ಮಯಜ್ಞದ ಬಗೆಗಿನ ಬಹುವಿಧ ಪ್ರಶಂಸೆಯು ವೇದದ ಆನುಪೂರ್ವಿಯನ್ನು ರಕ್ಷಿಸುವ ಬಗ್ಗೆಯೇ ಆಗಿದೆ.

**ಇಂದಿನ ಸ್ಥಿತಿ**

ಅತ್ಯಂತ ನಿಷ್ಠೆಯಿಂದಲೂ ಭಕ್ತಿಶ್ರದ್ಧೆಯಿಂದಲೂ ಉಳಿಸಿಕೊಂಡು ಬಂದಿರುವ ವೇದರಾಶಿಯ ಬಗ್ಗೆ ಇಂದು ಅನಾದರವು ಕಂಡುಬರುತ್ತಿದೆ. ತಮ್ಮ ತಮ್ಮ ವೇದದ ಶಾಖೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿದವರ ಸಂಖ್ಯೆ ಅತ್ಯಲ್ಪವಾಗಿದೆ. ಅಧ್ಯಯನ ಮಾಡಿರುವವರಲ್ಲಿಯು ಸಹ ಅದನ್ನು ಉಳಿಸಿಕೊಂಡು ಬರುವ ಪ್ರವೃತ್ತಿ ಅತಿ ಕುಂಠಿತವಾಗಿದೆ.





***78.** ಬಿ.ಎಸ್.ವಿ. ಷಷ್ಟ್ಯಬ್ದಪೂರ್ಣ ಸಮಾರಂಭ : ಕಂಗೊಳಿಸುತ್ತಿದ್ದ ವೇದಿಕೆ - ಸಭಾಮಂಟಪ*



*79. ಷಷ್ಟ್ಯಬ್ದ ಪೂರ್ತಿ ಸಮಾರಂಭ : ಅಭಿನಂದನೆ : 'ಬೆಳ್ಳಿಪತ್ರ' ಸಮರ್ಪಣೆ*

ಸ್ವರನಿರ್ಣಯವು ಇಲ್ಲದೆ, ಸ್ವರವರ್ಣ ದೋಷಗಳು ಅನೇಕರ ಉಚ್ಚಾರಣೆಯಲ್ಲಿ ಮೂಡಿ ಬರುತ್ತಿವೆ.

ಈ ಹಿನ್ನೆಲೆಯಲ್ಲಿ ವೇದಪಾರಾಯಣ ಪದ್ಧತಿಯ ಪುನರ್ಜಾಗರಣವು ಅತ್ಯಗತ್ಯವಾಗಿದೆ.

**ವೇದಪಾರಾಯಣ - ಹೇಗೆ ?**

ವೇದಪಾರಾಯಣದ ಕಾರ್ಯಕ್ರಮವು ಸರಳ ವೈದಿಕ ಕರ್ಮವಾಗಿದ್ದು ಇದಕ್ಕೆ ಹೆಚ್ಚಿನ ಪೂರ್ವ ತಯಾರಿಯು ಬೇಕಾಗುವುದಿಲ್ಲ. ಬೋಧಾಯನ ಧರ್ಮಸೂತ್ರದಲ್ಲಿ ವೇದಪಾರಾಯಣದ ವಿಧಿಯು ಉಕ್ತವಾಗಿದೆ.


ಗೃಹಸ್ಥರು ತಮ್ಮ ಮನೆಗಳಲ್ಲಿ ತಮ್ಮ ಕುಲಕ್ರಮಾನುಗತವಾಗಿ ಬಂದಿರುವ ವೇದದ ಶಾಖೆಯ ಸಮಗ್ರ ಪಾರಾಯಣವನ್ನು ಎರಡು ಮೂರು ವರ್ಷಗಳಿಗೊಮ್ಮೆ ಏರ್ಪಡಿಸಿ ವೇದದ ಶಾಖೆಯ ಸಂಪೂರ್ಣ ಶ್ರವಣ ಮಾಡಬಹುದಾಗಿದೆ. **ಶ್ರುತಂ ಹರತಿ ಪಾಪಾನಿ** ಎಂಬಂತೆ, ವೇದಮಂತ್ರಗಳು ಭಗವಂತನ ಉಸಿರಾಗಿದ್ದು ಅವುಗಳ ಶ್ರವಣವೇ ಪಾಪವನ್ನು ನಿರ್ಮೂಲಗೊಳಿಸುತ್ತದೆ.

ಇದಕ್ಕೆ ಸಾಮಾಜಿಕ ಸನ್ನಿವೇಶವೂ ಕಾರಣ. ವೇದಾಧ್ಯಯನ ಮಾಡಿದವನಿಗೆ ಅದನ್ನು ಸಂಪೂರ್ಣ ಪಾರಾಯಣ ಮಾಡುವ ಅವಕಾಶವೇ ದೊರೆಯದಂತಾಗಿದೆ. ಶ್ರೌತಕರ್ಮಗಳು ಅತಿ ವಿರಳವಾಗಿದ್ದು, ಗೃಹ್ಯೋಕ್ತ ಕರ್ಮಗಳಿಗೆ ಅವಶ್ಯವಿರುವಷ್ಟು ವೇದ ಮಂತ್ರಗಳಿಗೆ ಮಾತ್ರ ಪುನರಾವರ್ತನೆಯ ಅವಕಾಶವು ದೊರೆಯುತ್ತಿದ್ದು, ವೇದದ ಬಹುಪಾಲು ಮಂತ್ರಗಳಿಗೆ ವಿನಿಯೋಗವೇ ಇಲ್ಲದಂತಾಗಿದೆ. ಹೀಗಾಗಿ ವೇದಾಧ್ಯಯನ ಮಾಡಿದವರಿಗು ಸಹ ಅದರ ವಿಸ್ಮರಣೆ ಉಂಟಾಗುವುದು ಸಹಜವೇ ಆಗಿದೆ.

**ಪರಿಹಾರವೇನು?**

ಈ ರೀತಿಯ ಸನ್ನಿವೇಶದಲ್ಲಿ ಇಡೀ ವೇದದ ಮಂತ್ರಗಳಿಗೆ ಆವರ್ತನೆಯ ಸಂದರ್ಭವನ್ನು ಕಲ್ಪಿಸಿದರೆ ಮಾತ್ರ ಅವು ಯಥಾವತ್ತಾಗಿ ಉಳಿದಾವು.

ಪುಸ್ತಕಗಳಿಂದಾಗಿ ವೇದಾಧ್ಯಯನಕ್ಕೆ ಅನುಕೂಲ ಒದಗಿರುವುದು ದಿಟ. ಆದರೆ ಎಲ್ಲರೂ ಪುಸ್ತಕಾವಲಂಬಿಗಳೇ ಆಗಿ ಕಂಠಸ್ಥ ಮಾಡುವ ಪ್ರಯತ್ನವು ಶಿಥಿಲವಾಗಿದೆ. ಬಹುಬಾರಿ ವೇದಾವರ್ತನವು ಇಲ್ಲದ ಕಾರಣ,



*80. ಅಭಿನಂದನಾಸಮಿತಿಯ ಸದಸ್ಯರೊಂದಿಗೆ ಬಿ.ಎನ್.ವಿ.*

ಮೂರು-ನಾಲ್ಕು ಗೃಹಸ್ಥರು ಸಂಯುಕ್ತವಾಗಿ ಪಾರಾಯಣ ಕ್ರಮವನ್ನು ಏರ್ಪಡಿಸಬಹುದು. ಇದಲ್ಲದೆ ಧಾರ್ಮಿಕ ಸಂಸ್ಥೆಗಳಲ್ಲಿ ನಾಲ್ಕಾರು ವರ್ಷಗಳಿಗೊಮ್ಮೆ, ವಾರ್ಷಿಕ ರಥೋತ್ಸವಗಳಲ್ಲಿಯೂ ಪಾರಾಯಣವನ್ನು ಏರ್ಪಡಿಸಬಹುದು.

**ಎಷ್ಟು ಜನ ?**

ಗೃಹಸ್ಥರ ಮನೆಯಲ್ಲಿ ಕನಿಷ್ಠ ಇಬ್ಬರು, ಗೃಹಸ್ಥರ ಸಮೂಹವಿದ್ದರೆ ಕನಿಷ್ಠ ನಾಲ್ಕು, ಧಾರ್ಮಿಕ ಸಂಸ್ಥೆಗಳಲ್ಲಿ ಆರು ಅಥವಾ ಎಂಟು ಜನರು ಪಾರಾಯಣ ಮಾಡಬಹುದಾಗಿರುತ್ತದೆ.

**ಅವಧಿ ಎಷ್ಟು ?**

ಋಗ್ವೇದವಾಗಲಿ, ಯಜುರ್ವೇದವಾಗಲಿ, ಸಮಗ್ರ ಪಾರಾಯಣ ಮಾಡಲು ದಿನಕ್ಕೆ ಏಳು ಗಂಟೆಗಳಂತೆ ಎಂಟು ದಿನಗಳು ಅಗತ್ಯ. ಪಾರಾಯಣಕರ್ತರೆಲ್ಲರೂ ವೇದದ ಎಲ್ಲ ಭಾಗವನ್ನೂ ಪಾರಾಯಣ ಮಾಡುವಂತಿರಬೇಕು. ಮಧ್ಯಮ ಸ್ವರದಲ್ಲಿ ವೇಗವಿಲ್ಲದೇ ಪಾರಾಯಣ ನಡೆಯಲಿ. ಪಾರಾಯಣಕ್ಕಾಗಿ ಕಲ್ಪಿಸಿರುವ ಸ್ಥಳ ಶುಚಿಯಾಗಿರಲಿ. ಅಲ್ಲಿ ಸರಸ್ವತಿಯ, ವೇದವ್ಯಾಸರ ಅಥವಾ ಮತಾಚಾರ್ಯರ ಭಾವಚಿತ್ರಗಳನ್ನಿಡಬಹುದು. ವೇದಗಳ ಪರಿಚಯ ದೃಷ್ಟಿಯಿಂದ ಪಾರಾಯಣದ ಆರಂಭದ ದಿನ ಹಾಗೂ ಅಂತಿಮ ದಿನದಲ್ಲಿ ಒಂದೊಂದು ಘಂಟೆಯ ಪ್ರವಚನವಿರಲಿ. ವೇದಪಾರಾಯಣವನ್ನು ಮನೆಯವರೆಲ್ಲರೂ ದಿನವೂ ಕೇಳುವುದು ಅಪೇಕ್ಷಣೀಯ. ಕನಿಷ್ಠ ಒಂದು ಘಂಟೆಯಾದರೂ ಕೇಳುವಂತಿರಲಿ. ಮೊದಲು ಮತ್ತು ಕಡೆಯ ದಿನಗಳಲ್ಲಿ ದಿನಪೂರ್ತಿ ಎಲ್ಲರ ಉಪಸ್ಥಿತಿಯಿರಲಿ.

ವೇದಪಾರಾಯಣ ಮಾಡುವುದರಿಂದ ಅಧ್ಯಯನ ಮಾಡಿದವರಿಗೆ ಇಡೀ ವೇದದ ಆವರ್ತನೆಯು ಆಗಿ ಅದು ಚೆನ್ನಾಗಿ ದೃಢಗೊಳ್ಳುತ್ತದೆ. ವೇದದ ಬಗೆಗಿನ ವಿಶೇಷ ಅಧ್ಯಯನಕ್ಕೆ ಅದು ಸಹಕಾರಿ. ಪಾರಾಯಣಕರ್ತನು ಶುಚಿಯಾಗಿಯೂ, ಸನಾತನವೇಷದಿಂದ ಕೂಡಿದವನೂ, ಕಂಠಸ್ಥ ಪಾರಾಯಣ ಮಾಡುವವನೂ ಆದರೆ ಪಾರಾಯಣವು ಪರಿಣಾಮಕಾರಿಯಾಗುತ್ತದೆ.

ಪಾರಾಯಣಕರ್ತರಿಗೆ ಸೂಕ್ತ ಸಂಭಾವನೆಯು ಅತ್ಯಗತ್ಯ. ಇದು ಅವರ ತಪಸ್ಸಿನ ಪ್ರತಿಫಲದಷ್ಟಲ್ಲ. ಒಂದು ವ್ಯವಸ್ಥೆಯಷ್ಟೆ. ಅದು ಕಾಲ, ದೇಶ, ವರ್ತಮಾನಗಳನ್ನು ಅನುಸರಿಸಲಿ. ಪಾರಾಯಣ ಕರ್ತರು ಸಂಭಾವನೆಯನ್ನೇ ಮುಖ್ಯವಾಗಿರಿಸದೆ ಪಾರಾಯಣ ನಡೆಸುವಂತಿರಲಿ.

ವೇದವನ್ನು ಅಧ್ಯಯನ ಮಾಡಿರುವವರೂ ಸಮಾಜದ ಅಂಗವೇ ಸರಿ. ಅವರಿಗೂ ಸಾಮಾಜಿಕ ಹೊಣೆಯಿದೆ. ಅವರು ಅದನ್ನು ಮನಗಂಡು ಪ್ರವೃತ್ತರಾಗುವಂತಾಗಲಿ. ವೇದ ಬಲ್ಲವರನ್ನು ರಕ್ಷಿಸಿ, ಪೋಷಿಸುವುದು ಸಮಾಜದ ಉಳಿದವರೆಲ್ಲರ ಹೊಣೆಗಾರಿಕೆಯೂ ಹೌದು. ಸಮಾಜವೂ, ವೇದಜ್ಞರೂ, ಈ ವೇದರಕ್ಷಣೆಯ ಕಾರ್ಯಕ್ಕೆ ಮುಂದಾಗಲಿ. ಉಭಯತ್ರರ ಪ್ರಯತ್ನದಿಂದ ಸನಾತನ ಆರ್ಯ-ವೈದಿಕ ಧರ್ಮ ಪರಂಪರೆಯು ಉಳಿಯಲಿ, ಬೆಳೆಯಲಿ. ನಮ್ಮೆಲ್ಲರ ಪ್ರಯತ್ನವನ್ನು ಸರ್ವೇಶ್ವರನು ಹರಸಲಿ.



*81. ಅಭಿನಂದನಾ ಸಂಚಿಕೆ ಸಂಪಾದಕರಾದ ಪ್ರೊ. ಎಚ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಅವರಿಂದ ಸ್ವಾಗತ*

# ೫. ಗುರುಕುಲಮಾತೆ ಸೀತಾಮಾತೆ

*ರು.ಕೃ. ಗೀತಾಮಣಿ*

ಶೀರ್ಷಿಕೆ ನೋಡುತ್ತಿದ್ದಂತೆಯೇ ಇದು ರಾಮಾಯಣದ ಕಥೆ ಎಂದುಕೊಂಡಿರಾ? ಖಂಡಿತಾ ಅಲ್ಲ. ಮೊದಲನೆಯದಾಗಿ ಇದು ಕಥೆಯೇ ಅಲ್ಲ. ವರ್ತಮಾನದ ವಿದ್ಯಮಾನ.

ಕೈಗಾರಿಕಾ ನಗರವೆಂದೇ ಪ್ರಖ್ಯಾತವಾಗಿರುವ ಬೆಂಗಳೂರಿನಲ್ಲಿ **ಮಲ್ಲಿಕಾರ್ಜುನ ವೇದ ಪಾಠಶಾಲಾ** ಎಂಬ ಸಂಸ್ಕೃತ ಪಾಠಶಾಲೆ ಇದೆ. ಇದರ ಸಂಸ್ಥಾಪಕರು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಮತ್ತು ಶ್ರೀಮತಿ ಬಿ.ವಿ. ಸೀತಾ ಅವರು.

ಹದಿನಾರು ವರ್ಷಗಳ ಹಿಂದೆ ಶಾಲೆಯು ಮಕ್ಕಳ ಊಟೋಪಚಾರದ ವ್ಯವಸ್ಥೆಗಾಗಿ ಪರದಾಡುತ್ತಿದ್ದಾಗ, ಸೀತಾ ಅವರು ತಾವೇ ನಿರ್ವಹಿಸುವುದಾಗಿ ಅದರ ಜವಾಬ್ದಾರಿಯನ್ನು ಕೈಗೆ ತೆಗೆದುಕೊಂಡರು. ನಿಜ ಹೇಳಬೇಕೆಂದರೆ ಆಗ ಸೀತಾ ಅವರಿಗೆ ಒಂದು ಲೋಟ ಕಾಫಿಯನ್ನೂ ಮಾಡಲು ಬರುತ್ತಿರಲಿಲ್ಲ. ಇದರಿಂದಾಗಿಯೇ ಹಲವಾರು ಜನರ ಅಪಹಾಸ್ಯಕ್ಕೆ ಗುರಿಯಾಗಿದ್ದೂ ಉಂಟು. ಆದರೆ ಕಲಿಯಬೇಕು, ಕಲಿತು ಎಲ್ಲರಿಗೂ ಕಾಲ ಕಾಲಕ್ಕೆ ಆಹಾರವನ್ನು ಒದಗಿಸಿ, ಅವರ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂಬ ಶ್ರದ್ಧೆ, ಛಲ ಸೀತಾ ಅವರು ಈ ಜವಾಬ್ದಾರಿ ಹೊರುವಂತೆ ಮಾಡಿತು. ಪ್ರಥಮದಲ್ಲಿ ಎಷ್ಟೋ ದಿನ ತಿಂಡಿ, ಊಟ ಸಾಕಾಗದೆ ಮತ್ತೆ ಮತ್ತೆ ಮಾಡಿದ್ದುಂಟು. ಮತ್ತೆ ಎಷ್ಟೋ ದಿನ ರುಚಿ ವ್ಯತ್ಯಾಸವಾಗುತ್ತಿತ್ತು. ಆದರೂ ಧೃತಿಗೆಡದೆ ಬಹು ಬೇಗ ಪಾಕಶಾಸ್ತ್ರದಲ್ಲಿ ಪ್ರಾವೀಣ್ಯವನ್ನು ಪಡೆದರು. ಅಡುಗೆ 'ಚೆನ್ನಾಗಿದೆ' ಎಂದು ಹೇಳಿ ವಿದ್ಯಾರ್ಥಿಗಳು ಊಟ ಮಾಡುವಾಗ ತಮ್ಮ ಶ್ರಮದ ಸಾರ್ಥಕತೆಯನ್ನು ಕಂಡರು, ಸೀತಾ.

ಪ್ರಾರಂಭಿಕ ವರ್ಷಗಳಲ್ಲಿ ಶಾಲೆಯಲ್ಲಿ ಎಂಟು-ಹತ್ತು ಜನ ವಿದ್ಯಾರ್ಥಿಗಳಿದ್ದರು. ಕಾಲಕ್ರಮೇಣ ಸಂಖ್ಯೆ ವೃದ್ಧಿಯಾಗಿ, ಅದು ಈಗ ಮೂವತ್ತಕ್ಕೆ ನಿಂತಿದೆ. ಮೂವತ್ತು ಜನ ವಿದ್ಯಾರ್ಥಿಗಳ ಆಗುಹೋಗುಗಳೆಲ್ಲದರ ಗಮನ ಸೀತಾ ಅವರಿಗೆ. ಹುಡುಗರ ನೋವು ನಲಿವುಗಳಲ್ಲಿ ಭಾಗಿಯಾಗುತ್ತಾರೆ, ಬಿಗುಮಾನವಿಲ್ಲದೆ. ಒಮ್ಮೆ ಒಬ್ಬ ಹುಡುಗನಿಗೆ 'ಕಾಮಾಲೆ' ಆಗಿದ್ದಾಗ, ಅವನಿಗೆ ತಕ್ಕಂತಹ ಪಥ್ಯದ ಅಡುಗೆಯನ್ನೇ ಮಾಡಿ, ಕಾಲಕಾಲಕ್ಕೆ ಅವನನ್ನು ಉಪಚರಿಸುತ್ತಾ, ಅವನ 'ಅಮ್ಮ'ನ ಗೈರುಹಾಜರಿ ಯಾವುದೇ ರೀತಿಯಲ್ಲಿಯೂ ಆ ಹುಡುಗನಿಗೆ ನೆನಪು ಬಾರದಂತೆ ನೋಡಿಕೊಂಡಂತಹ ಮಮತಾಮಯಿ ಸೀತಾ ಅವರು. ಮತ್ತೊಂದು ಬಾರಿ ಹುಡುಗನೊಬ್ಬ ಮರದ ಮೇಲಿಂದ ಬಿದ್ದು ಕಾಲಿಗೆ ಪೆಟ್ಟು ಮಾಡಿಕೊಂಡು ಆಸ್ಪತ್ರೆ ಸೇರಿದಾಗ, ಅವನ ಅವಸ್ಥೆಗಾಗಿ ಮಮ್ಮಲ ಮರುಗಿದ್ದೂ ಉಂಟು. ಹೀಗೆ ವಿದ್ಯಾರ್ಥಿಗಳ ನೋವಿನಲ್ಲಿ ತಾವೇ ನೋವನ್ನು ಅನುಭವಿಸುವ ಮಾತೃಹೃದಯಿ ಸೀತಾ ಅವರು.

ಸಾಮಾನ್ಯವಾಗಿ ಮಕ್ಕಳಿಗೆ ಅತ್ಯಂತ 'ಸಂಭ್ರಮದ ದಿನ' ಎಂದರೆ ಅವರ 'ಹುಟ್ಟುಹಬ್ಬದ ದಿನ'. ಆದರೆ ಇಲ್ಲಿ ಅದನ್ನು ಆಚರಿಸಲು



*82. ಅಡುಗೆ ಮಾಡುವುದರಲ್ಲಿ ನಿರತರಾದ ಸೀತಾ ಅವರು*

ಅವರ ಜತೆ ಅಪ್ಪ-ಅಮ್ಮ ಇಲ್ಲವಲ್ಲಾ ಎಂದು ಹುಡುಗರು ಪೆಚ್ಚಾಗುವಂತಿಲ್ಲವೇ ಇಲ್ಲ. ಅದನ್ನೂ ಸೀತಾ ಅವರು ತುಂಬಿದ್ದಾರೆ. ಪ್ರತಿ ಹುಡುಗನ ಹುಟ್ಟುಹಬ್ಬದ ದಿನದಂದು, ಅವನಿಗಿಷ್ಟವಿರುವ ಸಿಹಿ ಮಾಡಿ, ಅವನಿಗೆ ಶುಭ ಕೋರಿ, ಅವನನ್ನು ಸಂತಸಪಡಿಸಿ, ತೃಪ್ತಿಯನ್ನು ಕಾಣುತ್ತಾರೆ ಸೀತಾ ಅವರು.

ಹುಡುಗರೊಡನೆ ಸದರವಾಗಿ, ತಮಾಷೆಯಾಗಿ ಇರುವ ಸೀತಾ ಅವರು, ಯಾವುದೇ ಹುಡುಗ ಶಿಸ್ತು-ನಿಯಮಗಳನ್ನು ಪಾಲಿಸದೇ ಇದ್ದಾಗ, ಅಷ್ಟೇ ಕಟುವಾಗಿ, ನೇರವಾಗಿ ಅವನಿಗೆ ಎಚ್ಚರಿಕೆ ನೀಡುತ್ತಾರೆ.

ಆದ್ದರಿಂದ ಸೀತಾ ಅವರ ಸರಳತೆ ಸದರಕ್ಕೆ ಕಾರಣವಾದರೆ, ಅವರ ಶಿಸ್ತು, ಶ್ರದ್ಧೆ, ಛಲ ಇವುಗಳು ಅವರನ್ನು ಗೌರವದಿಂದ ಕಾಣಲು ಕಾರಣವಾಗಿವೆ.

ಹುಡುಗರ ಸೃಜನಶೀಲತೆ ವಿಕಾಸವಾಗಲು ಅವಕಾಶ ಕೊಡಬೇಕೆಂಬ ಕಾರಣದಿಂದ ಗಣಪತಿ ಮಂಗಳಾರತಿಯ ಸಂದರ್ಭದಲ್ಲಿ ಅವರ ಕಲಾವಂತಿಕೆಗೆ ಪ್ರೋತ್ಸಾಹಿಸುತ್ತಾರೆ. ಮಂಟಪ ಕಟ್ಟುವುದು, ಅಲಂಕಾರ ಮಾಡುವುದು, ರಂಗೋಲಿ ಹೀಗೆ ಹಲವು ವಿಧಗಳಲ್ಲಿ ಹುಡುಗರು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಮತ್ತು ಹೊಸ ವರ್ಷವನ್ನು ಬರಮಾಡಿಕೊಳ್ಳುವ ನೆಪದಲ್ಲಿ ಹುಡುಗರ ಚಟುವಟಿಕೆಗಳಿಗೆ ಒಂದು ವೇದಿಕೆಯನ್ನು ಕಲ್ಪಿಸಿ ಕೊಟ್ಟು, ಅವರ ರಂಗ ಚಟುವಟಿಕೆಗಳಿಗೂ ಉತ್ತೇಜನ ಕೊಡುತ್ತಾರೆ. "ಕೇವಲ ಪುಸ್ತಕದ ಜ್ಞಾನವಿದ್ದರೆ ಸಾಲದು; ಮನೋಲ್ಲಾಸ, ಮನೋವಿಕಾಸಕ್ಕೆ ಕೂಡ ಅವಕಾಶವಿರಲೇ ಬೇಕು. ಆಗಲೇ ಅದು ಸಂಪೂರ್ಣವಾದ ಶಾಲೆ" ಎಂದು ಹೆಮ್ಮೆಯಿಂದಲೇ ಹೇಳುತ್ತಾರೆ ಸೀತಮ್ಮ.

ತಾವು ಎಲ್ಲೇ ಹೋಗಲಿ, ಅವರ ಗೈರುಹಾಜರಿಯಲ್ಲಿಯೂ ಶಾಲೆಯ ಯಾವುದೇ ವ್ಯವಸ್ಥೆಯಲ್ಲಿಯೂ ಅವ್ಯವಸ್ಥೆ ಉಂಟಾಗದಂತೆ ಕೆಲವು ಹುಡುಗರನ್ನು ತಯಾರು ಮಾಡಿದ್ದಾರೆ. ಅಂದರೆ ಅವರು ಎಲ್ಲಿಯೇ ಇದ್ದರೂ ಆ ಮಕ್ಕಳದೇ ಚಿಂತೆ ಅವರಿಗೆ. ಅಷ್ಟೇ ಅಲ್ಲ, ಅಲ್ಲಿಂದ ಬರುವಾಗ ಪ್ರತಿಯೊಬ್ಬ ಹುಡುಗನಿಗೂ ಏನಾದರೂ ಒಂದು ಉಡುಗೊರೆಯನ್ನು ತಂದುಕೊಡುವ ಪರಿಪಾಠವಿದೆ ಸೀತಾ ಅವರಿಗೆ. ತಾವು ತಂದುಕೊಟ್ಟ ಉಡುಗೊರೆಗಳನ್ನು ನೋಡಿದಾಗ, ಆ ಹುಡುಗರ ಮುಖದಲ್ಲಿ ಮೂಡುವ ಆ ನಗುವಿನಲ್ಲಿ ತಮ್ಮ ಸಂತಸವನ್ನು ಬೆರೆಸುತ್ತಾರೆ, ಸೀತಾ.

'ತಮ್ಮ ಮನೆಯ ಜ್ಯೋತಿ ಆರಿದ್ದರು ಕೂಡ, ಇಷ್ಟೊಂದು ಬೇರೆ ಮನೆಯ ಜ್ಯೋತಿಗಳ ಬೆಳಕಿನಲ್ಲಿ ತಮ್ಮ ಮನೆಯ ಕತ್ತಲನ್ನು ಹೋಗಲಾಡಿಸಿಕೊಳ್ಳಲು ತಾವು ಕಂಡುಕೊಂಡ ಒಂದು ಉತ್ತಮ ಮಾರ್ಗ ಇದು' ಎಂದು ಹೆಮ್ಮೆಯಿಂದ ಹೇಳುತ್ತಾರೆ ಸೀತಾ ಅವರು.

ಒಟ್ಟಿನಲ್ಲಿ ಮಕ್ಕಳ ಸಂತಸಕ್ಕೆ ಹಿಗ್ಗುವ, ದುಃಖಕ್ಕೆ ಕುಗ್ಗುವ, ನೋವಿಗೆ ಮಿಡಿಯುವ, ಪ್ರೀತಿಗೆ ಒಲಿಯುವ, ವಿಶ್ವಾಸಕ್ಕೆ ಮಣಿಯುವ, ಉತ್ಸಾಹಕ್ಕೆ ಪ್ರೋತ್ಸಾಹ ನೀಡುವ, ಆಸೆಗಳಿಗೆ ಭರವಸೆ ನೀಡುವ ಮಮತಾಮಯಿಯಾಗಿದ್ದಾರೆ, ಸೀತಾ. ಈಗ ಹೇಳಿ ಈಕೆ ಕಲಿಯುಗದ 'ಸೀತಾಮಾತೆ' ಅಲ್ಲವೇ?

## ೬. ಜ್ಯೋತಿ ಕೇಂದ್ರೀಯ ವಿದ್ಯಾಲಯದ ಯಶೋಗಾಥೆ

*ಸುಮಾ ಜಗದೀಶ್*



***83.** ಜ್ಯೋತಿ ಕೇಂದ್ರೀಯ ವಿದ್ಯಾಲಯ ಕಚೇರಿಯಲ್ಲಿ ಬಿ.ಎನ್.ವಿ.*

**ಅನ್ನದಾನಂ ಪರಂ ದಾನಂ, ವಿದ್ಯಾದಾನಮ್**
**ಅತಃ ಪರಮ್ |**
**ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ಚ**
**ವಿದ್ಯಯಾ ||**

ಅನ್ನದಾನವು ಪರಮ ಶ್ರೇಷ್ಠವಾದುದು. ಅದಕ್ಕಿಂತಲೂ ಶ್ರೇಷ್ಠವಾದದ್ದು ವಿದ್ಯಾದಾನ. ಅನ್ನದಾನವು ವ್ಯಕ್ತಿಯ ಹಸಿವನ್ನು ನೀಗಿಸಿ ಕ್ಷಣಿಕ ತೃಪ್ತಿಯನ್ನು ಕೊಟ್ಟರೆ ಉತ್ತಮವಾದ ವಿದ್ಯಾದಾನವನ್ನು ಪಡೆದ ವ್ಯಕ್ತಿ ಜೀವನಪರ್ಯಂತ ಸಂತೃಪ್ತನಾಗಿರುತ್ತಾನೆ. ವಿದ್ಯಾವಂತನಾದ ವ್ಯಕ್ತಿ ಒಳ್ಳೆಯ ಗುಣಗಳನ್ನು ಬೆಳೆಸಿಕೊಂಡು ಸಮಾಜದಲ್ಲಿ ಸತ್ಪ್ರಜೆಯಾಗಿ ಬಾಳುತ್ತಾನೆ.

ಇಂತಹ ಮಹೋನ್ನತವಾದ ಧ್ಯೇಯ ಹಾಗೂ ಭಾವೀ ಜನಾಂಗವಾದ ಇಂದಿನ ಮಕ್ಕಳನ್ನು ಉತ್ತಮವಾದ ಮಾನವರನ್ನಾಗಿ ಮಾಡುವ ಉದ್ದೇಶದಿಂದ ಪ್ರಾರಂಭಿಸಲ್ಪಟ್ಟ ವಿದ್ಯಾಸಂಸ್ಥೆ **ಜ್ಯೋತಿ ಕೇಂದ್ರೀಯ ವಿದ್ಯಾಲಯ**. *ಈ* ಸಂಸ್ಥೆಯು ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಲಿ (ಸಿ.ಬಿ.ಎಸ್.ಇ.) ನವದೆಹಲಿಯಿಂದ ಮಾನ್ಯತೆ ಪಡೆದಿದೆ. *ಈ* ಸಂದರ್ಭದಲ್ಲಿ ನಮ್ಮ ಸಂಸ್ಥೆಗೆ ಮಾನ್ಯತೆ ದೊರಕಿಸಲು ಪ್ರಮುಖ ಕಾರಣಕರ್ತರಾದ ಶ್ರೀಯುತ ಹಾರನಹಳ್ಳಿ ರಾಮಸ್ವಾಮಿ ಹಾಗೂ ಶ್ರೀಮತಿ ಮನೋರಮಾ ಮಧ್ವರಾಜ್‌ರವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ. ಶ್ರೀಯುತ ಬಿ.ಎನ್.ವಿ. ಸುಬ್ರಹ್ಮಣ್ಯ ಮತ್ತು ಶ್ರೀಮತಿ ಸೀತಾ ಸುಬ್ರಹ್ಮಣ್ಯ ಇವರ ಕಲ್ಪನೆಯ ಕೂಸು *ಈ* ವಿದ್ಯಾಸಂಸ್ಥೆ. ಇದು ತಮ್ಮ ಏಕೈಕ ಪುತ್ರಿ ಕುಮಾರಿ ಜ್ಯೋತಿಯ ಅಕಾಲಿಕ ಅಗಲಿಕೆಯ ನೋವನ್ನು ಮರೆಸಿದ ಸಂಜೀವಿನಿಯೆಂದರೂ ಉತ್ಪ್ರೇಕ್ಷೆಯಲ್ಲ. ಶಾಲೆಯ ಎಲ್ಲಾ ಮಕ್ಕಳನ್ನು ತಮ್ಮ ಪ್ರೀತಿಯ ಪುತ್ರಿಯಂತೆ ಪ್ರೀತಿಸುವ, ಸಂಸ್ಥೆಯ ಎಲ್ಲಾ ಅಧ್ಯಾಪಕರು ಹಾಗೂ ಇತರ ಸಿಬ್ಬಂದಿ ವರ್ಗದವರನ್ನು ತಮ್ಮ ಪರಿವಾರದ ಒಂದು ಅಂಗವೆಂದು ಪರಿಗಣಿಸಿ ಸಂಸ್ಥೆಯ ಬೆಳವಣಿಗೆಗೆ ಸದಾ ಶ್ರಮಿಸುವ, ನಮ್ಮೆಲ್ಲರಿಗೂ ಅತ್ಯಂತ ಪ್ರೀತಿಪಾತ್ರರಾದ ಅಪರೂಪದ ಜೋಡಿ ಸುಬ್ರಹ್ಮಣ್ಯ ದಂಪತಿಗಳು. ಅವರ ಹನ್ನೆರಡು ವರ್ಷಗಳ ಸತತವಾದ ಪರಿಶ್ರಮದ ಪ್ರತಿಫಲವೇ *ಈ* ವಿದ್ಯಾದೇಗುಲ- ಜ್ಯೋತಿ ಕೇಂದ್ರೀಯ ವಿದ್ಯಾಲಯ. *ಈ*ಗ *ಈ* ನಮ್ಮ ಶಾಲೆಯು ಬೆಂಗಳೂರಿನ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾಗಿದೆ ಎಂದು ಹೇಳಿಕೊಳ್ಳಲು ಬಹಳ ಹೆಮ್ಮೆ ಎನಿಸುತ್ತದೆ.

*ಈ* ಸಂಸ್ಥೆಯ ಸ್ಥಾಪನೆಗೆ ಕಾರಣಳಾದ ಕುಮಾರಿ ಜ್ಯೋತಿ ನನ್ನ ಆತ್ಮೀಯ ಗೆಳತಿ. ಅವಳೊಂದಿಗೆ ನಾನು ಕಳೆದ ವರ್ಷಗಳು ನನ್ನ ನೆನಪಿನಲ್ಲಿ ಚಿರಸ್ಮರಣೀಯವಾಗಿವೆ. ಅವಳೀಗ ನಮ್ಮ ಮಧ್ಯೆ ಇಲ್ಲದಿದ್ದರೂ ಅವಳ ಆತ್ಮ ನಮ್ಮೊಂದಿಗೆ ಸದಾ ಇದೆ; *ಈ* ಸಂಸ್ಥೆಯು *ಈ* ಮಟ್ಟಕ್ಕೆ ಏರಲು ನಾವೆಲ್ಲರೂ ಕೆಲಸ ಮಾಡಲು ಬೇಕಾದ ಸ್ಫೂರ್ತಿ ಹಾಗೂ ಮನಃಸ್ಥೈರ್ಯವನ್ನು ನೀಡುತ್ತ ಸಂಸ್ಥೆಯ ಉನ್ನತಿಯನ್ನು ಹಾರೈಸುತ್ತಿದೆ- ಎಂದು ನನ್ನ ಅನಿಸಿಕೆ.

ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು ೧೯೮೨ರಲ್ಲಿ ಹುಟ್ಟುಹಾಕಿದ ಸಂಸ್ಥೆ ಜ್ಯೋತಿ ಚಾರಿಟಬಲ್ ಟ್ರಸ್ಟ್, ಜ್ಯೋತಿ ವಿದ್ಯಾಸಂಸ್ಥೆಯ ಪ್ರಾರಂಭಕ್ಕೆ ನಾಂದಿಯಾಯಿತು. ಅತ್ಯಂತ ಕಡಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸವನ್ನು ನೀಡಬೇಕೆಂಬುದೇ *ಈ* ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯ ರವರ ಪ್ರಮುಖ ಉದ್ದೇಶ. ಇಷ್ಟೇ ಅಲ್ಲದೆ ವಿಜ್ಞಾನ, ಕಲೆ, ಕ್ರೀಡೆ ಮುಂತಾದ ವಿಭಾಗಗಳಲ್ಲಿ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ತರಬೇತುಗೊಳಿಸುವ ಉದ್ದೇಶವನ್ನೂ *ಈ* ಸಂಸ್ಥೆ ಹೊಂದಿದೆ. *ಈ* ಸದುದ್ದೇಶಗಳಿಂದ *ಈ* ಟ್ರಸ್ಟ್‌ನ ಆಶ್ರಯದಲ್ಲಿ ೧೯೯೦ರಲ್ಲಿ ಜ್ಯೋತಿ ವಿದ್ಯಾಸಂಸ್ಥೆಯು ಜನ್ಮ ತಳೆದು ಎಲ್.ಕೆ.ಜಿ.ಯಿಂದ ಒಂದನೇ ತರಗತಿಯವರೆಗೆ ಸುಮಾರು ನೂರು ಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಪ್ರಾರಂಭಿಸಿತು. ಯಲಚೇನಹಳ್ಳಿಯ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಮನೆಮನೆಗೂ ಹೋಗಿ ಶಾಲೆಯ ಬಗ್ಗೆ ಮಾಹಿತಿ ನೀಡಿ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲಾಯಿತು. ನಾಲ್ಕು ಕೊಠಡಿಗಳ ಕಟ್ಟಡದಲ್ಲಿ ಪ್ರಾರಂಭವಾದ ಶಾಲೆಯ ಕೆಲಸ ನಿರ್ವಹಿಸಲು ನಾಲ್ಕು ಉಪಾಧ್ಯಾಯಿನಿಯರ ಜೊತೆ ಐದು ಜನ ಬೋಧಕೇತರ ಸಿಬ್ಬಂದಿ ವರ್ಗದವರು ಇದ್ದು ಶ್ರೀ ಗೋಪಾಲಕೃಷ್ಣರವರು ಪ್ರಾಂಶುಪಾಲರಾಗಿದ್ದರು.

೧೯೯೨ರಲ್ಲಿ ಸಂಸ್ಥೆಯ ನೂತನ ಕಟ್ಟಡ ಮತ್ತು ರಂಗಮಂದಿರ ಉದ್ಘಾಟನೆಯನ್ನು ಶೃಂಗೇರಿ ಮಹಾ ಸಂಸ್ಥಾನದ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅಮೃತಹಸ್ತದಿಂದ ನೆರವೇರಿಸಲಾಯಿತು.



***84.** ಅಖಿಲ ಕರ್ನಾಟಕ ಬ್ರಾಹ್ಮಣ ಸಮ್ಮೇಳನ :*
*ಮಾಜಿ ಸಚಿವ ಶ್ರೀ ವಿ.ಎಸ್. ಕೃಷ್ಣ ಅಯ್ಯರ್ ಅವರಿಂದ ಶುಭಾಶಯ*



***85. ಜ್ಯೋತಿ ಕೇಂದ್ರೀಯ ವಿದ್ಯಾಲಯ : ಪಾರಿತೋಷಿಕ ವಿಜೇತ ಮಕ್ಕಳೊಡನೆ ಬಿ.ಎನ್.ವಿ.***

೧೯೯೫-೯೬ರಲ್ಲಿ ಐದು ವರ್ಷಗಳನ್ನು ಪೂರ್ಣಗೊಳಿಸಿದ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ಸಂಖ್ಯೆ ನರ್ಸರಿಯಿಂದ ಎಂಟನೇ ತರಗತಿಯವರೆಗೆ ೯೬೫ಕ್ಕೆ ಏರಿತು. ಆಗ ಸುಮಾರು ನಲವತ್ತೆರಡು ಜನ ಸಿಬ್ಬಂದಿ ವರ್ಗದವರು ಸಂಸ್ಥೆಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆ ಹೊತ್ತಿಗೆ ಶಾಲೆಯ ಕಟ್ಟಡದ ವಿಸ್ತರಣೆ ನಡೆದು ಸುಮಾರು ಮೂವತ್ತು ಕೊಠಡಿಗಳನ್ನು ಒಳಗೊಂಡಿತ್ತು. ಅದೇ ವರ್ಷ ರಾಜ್ಯ ಪಠ್ಯಕ್ರಮದ ಎಂಟನೇ ತರಗತಿಯನ್ನು ಸಹ ರಾಜ್ಯಸರ್ಕಾರದ ಅನುಮತಿಯ ಮೇರೆಗೆ ಪ್ರಾರಂಭಿಸಲಾಯಿತು. ೧೯೯೭ರಲ್ಲಿ **ಜ್ಯೋತಿ ಕೇಂದ್ರೀಯ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು** ಆರಂಭವಾಯಿತು.

ವರ್ಷವರ್ಷವೂ ಹಂತಹಂತವಾಗಿ ಬೆಳೆದ ಈ ಸಂಸ್ಥೆಯು ಪ್ರಸ್ತುತ ಸಾಲಿನಲ್ಲಿ ಪೂರ್ವಪ್ರಾಥಮಿಕ ಹಂತದಿಂದ ಪದವಿಪೂರ್ವ ಹಂತದವರೆಗೆ ವಿಸ್ತರಿಸಲ್ಪಟ್ಟು ಸುಮಾರು ೧೭೫೦ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಕಲಿಯುತ್ತಿದ್ದಾರೆ ಎಂದು ತಿಳಿಸಲು ಅತ್ಯಂತ ಸಂತಸವೆನಿಸುತ್ತದೆ.

ಎರಡೂವರೆ ಎಕರೆ ವಿಸ್ತೀರ್ಣದ ನಿವೇಶನದಲ್ಲಿ ಕಟ್ಟಲ್ಪಟ್ಟ ಸುಸಜ್ಜಿತವಾದ ಶಾಲಾ ಕಟ್ಟಡವು - ಸುಮಾರು ನೂರು ಕೊಠಡಿಗಳು, ಪ್ರತ್ಯೇಕವಾದ ಮತ್ತು ವಿಶಾಲವಾದ ಪ್ರಯೋಗಶಾಲೆಗಳು, ವಾಚನಾಲಯ, ಸಭಾಂಗಣ, ರಂಗಮಂದಿರ, ವಿಶಾಲವಾದ ಆಟದ ಮೈದಾನ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಶೌಚಾಲಯಗಳು, ವಾಹನಗಳನ್ನು ನಿಲ್ಲಿಸಲು ಸೂಕ್ತ ಸ್ಥಳ - ಈ ಎಲ್ಲವನ್ನೂ ಒಳಗೊಂಡಿದೆ.

ಈ ಎಲ್ಲಾ ಅನುಕೂಲಗಳೊಂದಿಗೆ ಉತ್ತಮ ವಿದ್ಯಾರ್ಹತೆ ಹಾಗೂ ಅನುಭವ ಹೊಂದಿರುವ ಅಧ್ಯಾಪಕವೃಂದವು ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಎಲ್ಲ ಹಂತಗಳಲ್ಲೂ ನಿರಂತರವಾಗಿ ಶ್ರಮಿಸುತ್ತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದೆ. ವಿದ್ಯಾರ್ಥಿಗಳಿಗೆ ವೈಯಕ್ತಿಕ ಗಮನ ಕೊಟ್ಟು ಅವರನ್ನು ಉನ್ನತ ಮಟ್ಟದಲ್ಲಿ ತರಬೇತುಗೊಳಿಸುವ ಸಲುವಾಗಿ ಪ್ರತಿಯೊಂದು ತರಗತಿಯ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ನಲವತ್ತಕ್ಕೆ ಸೀಮಿತಗೊಳಿಸಲಾಗಿದೆ.

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುವ ಪಠ್ಯೇತರ ಚಟುವಟಿಕೆಗಳಾದ ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆ, ರಸಪ್ರಶ್ನೆ, ನಾಟಕ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ವಿಜ್ಞಾನ ಮತ್ತು ಕಲಾವಸ್ತುಪ್ರದರ್ಶನ, ಸಂಗೀತ ಸ್ಪರ್ಧೆ ಇನ್ನೂ ಮುಂತಾದ ಸ್ಪರ್ಧೆಗಳನ್ನು ವರ್ಷದುದ್ದಕ್ಕೂ ಹಂತ ಹಂತವಾಗಿ ನಡೆಸಿ ಆಕರ್ಷಕ ಬಹುಮಾನಗಳನ್ನು ನೀಡಲಾಗುತ್ತಿದೆ. ಇದರೊಂದಿಗೆ ಕ್ರೀಡಾ ಸ್ಪರ್ಧೆಗಳು ಹಾಗೂ ಆಟೋಟ ಸ್ಪರ್ಧೆಗಳನ್ನು ಸಹ ನಡೆಸಲಾಗುತ್ತಿದೆ. ಇದಲ್ಲದೆ ನಾಡಹಬ್ಬ, ರಾಷ್ಟ್ರೀಯ ಹಬ್ಬಗಳನ್ನು ಸಹ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿ ಶಿಕ್ಷಣಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಿಟ್ಟ ಪ್ರತಿಭಾನ್ವಿತರಾದ ಇಬ್ಬರು ಶಿಕ್ಷಕರನ್ನು ಆರಿಸಿ ಪ್ರತಿ ವರ್ಷ ಶಿಕ್ಷಕರ ದಿನಾಚರಣೆಯಂದು ಸನ್ಮಾನಿಸುವ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದ್ದೇವೆ.

ಮಕ್ಕಳ ದಿನಾಚರಣೆಯಂದು ಮಕ್ಕಳನ್ನು ವಿಶೇಷವಾಗಿ ರಂಜಿಸಲು ಉಪಾಧ್ಯಾಯ ವೃಂದದವರೇ ಮನರಂಜನೆ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ. ಅಂದು ಎಲ್ಲ ಮಕ್ಕಳಿಗೂ ಉಚಿತ ಭೋಜನವನ್ನು ನೀಡಲಾಗುತ್ತದೆ.

Fst01: D:\Sanketi Uma Mysore\Book 3 Photos - Proof 1 19.05.05

ಬೇರೆ ಬೇರೆ ಶಾಲೆಗಳಿಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ನಮ್ಮ ಸಂಸ್ಥೆಗೆ ಆಹ್ವಾನಿಸಿ, ಅವರ ಜತೆ ಬೆರೆತು ಅವರೊಂದಿಗೆ ನಮ್ಮ ವಿದ್ಯಾರ್ಥಿಗಳ ಪ್ರತಿಭೆಯ ತುಲನೆಗೆ ಹಾಗೂ ರಚನಾತ್ಮಕ ಬೆಳವಣಿಗೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಪ್ರತಿವರ್ಷವೂ ಅಂತರಶಾಲಾ ಸಂಗೀತ ಸ್ಪರ್ಧೆಗಳು, ಅಂತರ ಶಾಲಾ ವಿಜ್ಞಾನ ಭಾಷಣ ಸ್ಪರ್ಧೆಗಳು ಹಾಗೂ ಅಂತರಶಾಲಾ ಕ್ರೀಡಾಸ್ಪರ್ಧೆಗಳನ್ನು ನಡೆಸಲಾಗುತ್ತಿದ್ದು, ವಿಜೇತರಿಗೆ ಸೂಕ್ತ ಬಹುಮಾನಗಳನ್ನು ನೀಡಲಾಗುತ್ತಿದೆ. ನಮ್ಮ ಶಾಲೆಯ ಮಕ್ಕಳು ವಾಲಿಬಾಲ್, ಥ್ರೋಬಾಲ್ ಮತ್ತು ಅಥ್ಲೆಟಿಕ್ಸ್‌ನಲ್ಲಿ ಒಳ್ಳೆಯ ಪರಿಣತಿ ಪಡೆದಿದ್ದು, ಅನೇಕ ವಿದ್ಯಾರ್ಥಿಗಳು ಜಿಲ್ಲಾಮಟ್ಟ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪಾರಿತೋಷಿಕಗಳನ್ನು ಗಳಿಸಿದ್ದಾರೆ.



*87. ಮಕ್ಕಳ ನಡುವೆ ಮುದ : ಸೀತಾಸುಬ್ರಹ್ಮಣ್ಯ*

ನಮ್ಮ ಪವಿತ್ರ ಗ್ರಂಥಗಳಲ್ಲೊಂದಾದ ಭಗವದ್ಗೀತೆಯ ಮಹತ್ತ್ವವನ್ನು ಮಕ್ಕಳಿಗೆ ತಿಳಿಯಪಡಿಸಲು, ಪ್ರತಿವರ್ಷವೂ ಗೀತಾಜಯಂತಿಯನ್ನು ಆಚರಿಸಲಾಗುತ್ತಿದ್ದು ಇದರ ಅಂಗವಾಗಿ ಗೀತಾಗಾಯನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.



*86. ಮತ್ತೂರು ಸಮೀಪದ ಶಾಲೆಯೊಂದರ ಅಂಗನವಾಡಿ ಮಕ್ಕಳೊಡನೆ ಬಿ.ಎನ್.ವಿ. ದಂಪತಿ*

ಪ್ರತಿವರ್ಷವೂ ಡಿಸೆಂಬರ್ ತಿಂಗಳಿನಲ್ಲಿ ಶಾಲೆಯ ವಾರ್ಷಿಕೋತ್ಸವ ಹಾಗೂ ಪೋಷಕರ ದಿನಾಚರಣೆಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತೇವೆ. ಈ ಸಮಾರಂಭಗಳಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಅತ್ಯಂತ ಉತ್ಸಾಹದಿಂದ ಭಾಗವಹಿಸಿ ಉತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಸಮಾರಂಭವನ್ನು ಯಶಸ್ವಿಗೊಳಿಸುವಲ್ಲಿ ಸಹಕರಿಸುತ್ತಾರೆ.

ಗಣರಾಜ್ಯೋತ್ಸವವನ್ನು ಅತ್ಯಂತ ವಿಶಿಷ್ಟ ರೀತಿಯಲ್ಲಿ ಆಚರಿಸುವ ಪರಿಪಾಠ ಇದ್ದು, ಆ ಸಮಾರಂಭಕ್ಕೆ ಯಾವುದಾದರೂ ಅನಾಥಾಶ್ರಮ ಅಥವಾ ಕೊಳೆಗೇರಿಯ ಮಕ್ಕಳನ್ನು ಶಾಲೆಗೆ ಆಹ್ವಾನಿಸಿ ಅವರಿಗೆ

ಆಟಗಳನ್ನು ಆಡಿಸಿ, ಬಹುಮಾನ, ಊಟ ಹಾಗೂ ವಸ್ತ್ರಗಳನ್ನು ಕೊಡಲಾಗುತ್ತಿದೆ. ನಮ್ಮ ವಿದ್ಯಾರ್ಥಿಗಳಲ್ಲಿ ಎಲ್ಲರನ್ನೂ ಸಮತಾಭಾವದಿಂದ ಕಾಣುವ ಮನೋಭಾವನೆಯನ್ನು ಬೆಳೆಸಲು ಇದು ಅತ್ಯಂತ ಸಹಕಾರಿಯಾಗಿದೆ.

ಶ್ರೀಮಂತವಾದ ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಬೆಳೆಸುವ ಉದ್ದೇಶದಿಂದ ಪ್ರಾರಂಭಿಸಲ್ಪಟ್ಟ **ಜ್ಯೋತಿ ಕಲಾ ಕೇಂದ್ರ**ವು ಶಾಸ್ತ್ರೀಯ ಸಂಗೀತ, ಭರತನಾಟ್ಯ, ಮೃದಂಗ, ಕೀಬೋರ್ಡ್, ಯೋಗ ಮತ್ತು ಕಂಪ್ಯೂಟರ್ ತರಗತಿಗಳನ್ನು ಶಾಲಾ ಸಮಯದ ಅನಂತರ ನಡೆಸುತ್ತಿದ್ದು, ಈ ವಿಷಯಗಳಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳಿಗೆ ಸದವಕಾಶವನ್ನು ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಸಂಗೀತಾಭಿಮಾನಿ ಪೋಷಕರಿಗೂ ಉತ್ತಮ ಸಂಗೀತ ಕೇಳುವ ಅವಕಾಶ ಕಲ್ಪಿಸುವ ಉದ್ದೇಶದಿಂದ, ಪ್ರತಿವರ್ಷವೂ ಕಲಾಕೇಂದ್ರದ ವತಿಯಿಂದ ರಾಮೋತ್ಸವ ಸಂಗೀತ ಕಾರ್ಯಕ್ರಮವನ್ನು ಏಪ್ರಿಲ್ ತಿಂಗಳಿನಲ್ಲಿ ಏರ್ಪಡಿಸಲಾಗುತ್ತಿದೆ. ಇದುವರೆಗೂ ಕರ್ನಾಟಕದ ಹೆಸರಾಂತ ಸಂಗೀತಗಾರರಾದ ವಿದ್ವಾನ್ ಆರ್.ಕೆ.ಶ್ರೀಕಂಠನ್, ವಿದುಷಿ ವಸಂತ ಮಾಧವಿ, ವಿದುಷಿ ಸುಕನ್ಯಾ ಪ್ರಭಾಕರ್, ವಿದುಷಿ ಎಂ.ಎಸ್.ಶೀಲಾ ಮುಂತಾದವರು ನಮ್ಮ ಸಂಸ್ಥೆಗೆ ಆಗಮಿಸಿ ಕಾರ್ಯಕ್ರಮ ನಡೆಸಿಕೊಟ್ಟಿರುತ್ತಾರೆ.

ವಿದ್ಯಾರ್ಥಿಗಳು ಮಾನಸಿಕವಾಗಿ, ದೈಹಿಕವಾಗಿ ಹಾಗೂ ನೈತಿಕವಾಗಿ ಆರೋಗ್ಯಪೂರ್ಣವಾಗಿ ಬೆಳೆಯಲು ಸಹಾಯಕವಾಗುವ ಭಾರತ್ ಸ್ಕೌಟ್ಸ್ ಹಾಗೂ ಗೈಡ್ಸ್ ಮತ್ತು ಎನ್.ಸಿ.ಸಿ. ತರಗತಿಗಳನ್ನು ಶಾಲೆಯಲ್ಲಿ ನಡೆಸಲಾಗುತ್ತಿದೆ. ತರಬೇತಿ ಹೊಂದಿದ ಅಧ್ಯಾಪಕರು ಈ ತರಗತಿಗಳನ್ನು ನಡೆಸುತ್ತಿದ್ದು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಬೆಳೆಸುತ್ತಿದ್ದಾರೆ. ಇದರ ಜತೆಗೆ ಯೋಗಾಸನ ತರಬೇತಿಯನ್ನು ಸಹ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಕಡ್ಡಾಯವಾಗಿ ನೀಡಲಾಗುತ್ತಿದ್ದು, ಮಕ್ಕಳ ದೈಹಿಕ ಆರೋಗ್ಯ ಉತ್ತಮಗೊಂಡು ಅವರು ಕಲಿಕೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಅನುಕೂಲವಾಗುತ್ತಿದೆ. ತನ್ನ ಮನೆ ಹಾಗೂ ಶಾಲೆಯ ವಾತಾವರಣಗಳಿಗಷ್ಟೇ ಸೀಮಿತವಾಗದೆ ನಮ್ಮ ಸಂಸ್ಥೆಗೆ ಬರುವ ಪ್ರತಿಯೊಂದು ಮಗುವು ಸಹ ಅನೇಕ ಐತಿಹಾಸಿಕ ಹಾಗೂ ಶೈಕ್ಷಣಿಕ ಸ್ಥಳಗಳಿಗೆ ಭೇಟಿ ನೀಡಿ, ಜ್ಞಾನಾರ್ಜನೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಎಲ್ಲ ತರಗತಿಯ ಮಕ್ಕಳಿಗೂ ಪ್ರತಿವರ್ಷ ಶೈಕ್ಷಣಿಕ ಪ್ರವಾಸವನ್ನು ಉಚಿತವಾಗಿ ಏರ್ಪಡಿಸಲಾಗುತ್ತಿದೆ. ಇಷ್ಟೇ ಅಲ್ಲದೆ ಪ್ರವಾಸಕ್ಕೆ ಹೋಗುವ ಎಲ್ಲ ಮಕ್ಕಳಿಗೂ ತಿಂಡಿ, ಊಟದ ವ್ಯವಸ್ಥೆಯನ್ನು ಸಹ ಉಚಿತವಾಗಿ ಮಾಡುತ್ತಿದ್ದು, ಶ್ರೀಮತಿ ಸೀತಾ ಸುಬ್ರಹ್ಮಣ್ಯರವರು ತಾವೇ ಸ್ವತಃ ತಯಾರಿಸಿ ಕಳುಹಿಸಿಕೊಡುತ್ತಾರೆ.

ಇಂದಿನ ಪರಿಸರದಲ್ಲಿ ಯಶಸ್ವಿಯಾಗಿ ಜೀವನ ನಿರ್ವಹಿಸಲು ಪ್ರಮುಖವಾಗಿ ಬೇಕಾದ ಕೌಶಲವನ್ನು ಬೆಳೆಸಲು ಕಂಪ್ಯೂಟರ್ ಶಿಕ್ಷಣವನ್ನು ಸಹ ಎಲ್ಲ ಮಕ್ಕಳಿಗೂ ನೀಡಲಾಗುತ್ತಿದೆ. ಇದಕ್ಕಾಗಿ ಸುಸಜ್ಜಿತವಾದ, ಪ್ರತ್ಯೇಕವಾದ ಕಂಪ್ಯೂಟರ್ ಪ್ರಯೋಗಾಲಯಗಳನ್ನು ನಿರ್ಮಿಸಲಾಗಿದೆ. ಐದನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣವನ್ನು ಕೊಡುವ ಉದ್ದೇಶದಿಂದ ಎಲೆಕ್ಟ್ರಾನಿಕ್ಸ್, ಟೈಲರಿಂಗ್ ಮತ್ತು ಚಿತ್ರಕಲೆಗಳನ್ನು ಐಚ್ಛಿಕ ವಿಷಯಗಳಾಗಿ ಕಲಿಸಲಾಗುತ್ತಿದೆ.

ಪ್ರತಿವರ್ಷವೂ ಸಂಸ್ಥೆಯ ಎಲ್ಲ ಮಕ್ಕಳಿಗೂ ಉಚಿತ ವೈದ್ಯಕೀಯ ತಪಾಸಣೆ ನಡೆಸಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕದಲ್ಲಿ ಸೂಕ್ತವಾದ ವಿನಾಯಿತಿಯನ್ನೂ ನೀಡಲಾಗುತ್ತಿದೆ.




***88. ಶಾರದಾ ಧನ್ವಂತರಿ ಹೀಮೋಡಯಾಲಿಸಿಸ್ ಸೆಂಟರ್‌ನ ಎರಡನೆಯ ವಾರ್ಷಿಕೋತ್ಸವ : ರಾಜ್ಯಪಾಲ ಶ್ರೀ ಟಿ.ಎನ್. ಚತುರ್ವೇದಿ ಅವರಿಂದ ಸಂಮಾನ***

ನಮ್ಮ ಸಂಸ್ಥೆಯ ಸುತ್ತಮುತ್ತ ಇರುವ ಎಲ್ಲ ಸರ್ಕಾರಿ ಹಾಗೂ ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉಚಿತ ಬೋಧನಾ ತರಗತಿಗಳನ್ನು ಅನುಭವೀ ಅಧ್ಯಾಪಕರಿಂದ ಪ್ರತಿವರ್ಷವೂ ಏರ್ಪಡಿಸುವ ಪರಿಪಾಠವನ್ನು ಸುಮಾರು ಎಂಟು ವರ್ಷಗಳಿಂದ ನಡೆಸಿಕೊಂಡು ಬಂದಿದ್ದು, ಸಾವಿರಾರು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಇದುವರೆಗೂ ಹತ್ತನೇ ತರಗತಿ ಸಿ.ಬಿ.ಎಸ್.ಇ. ಪಠ್ಯಕ್ರಮದಲ್ಲಿ ಐದು ತಂಡಗಳು ಹಾಗೂ (ಎಸ್.ಎಸ್.ಎಲ್.ಸಿ.) ರಾಜ್ಯ ಪಠ್ಯಕ್ರಮದಲ್ಲಿ ನಾಲ್ಕು ತಂಡಗಳ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು ಪ್ರತಿವರ್ಷವೂ ನೂರಕ್ಕೆ ನೂರು ಫಲಿತಾಂಶವನ್ನು ತಂದುಕೊಟ್ಟು ಸಂಸ್ಥೆಯ ಗೌರವ ಪ್ರತಿಷ್ಠೆಗಳನ್ನು ಹೆಚ್ಚಿಸಿದ್ದಾರೆ. ದ್ವಿತೀಯ ಪಿ.ಯು.ಸಿ.ಯಲ್ಲು ಸಹ ನಾಲ್ಕು ತಂಡಗಳ ವಿದ್ಯಾರ್ಥಿಗಳು ಉತ್ತಮ ಫಲಿತಾಂಶವನ್ನು ತಂದುಕೊಟ್ಟಿರುತ್ತಾರೆ. ಕಳೆದ ವರ್ಷದಲ್ಲಿ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಾದ ಮಾಸ್ಟರ್ ಅಜಯ್ ಸಿ.ಇ.ಟಿ.ಯಲ್ಲಿ ಆರನೇ ರ‍್ಯಾಂಕ್ ಹಾಗೂ ಮಾಸ್ಟರ್ ಅನಿಲ್‌ಕುಮಾರ್‌ಕಟ್ಟೆ ಏಳನೇ ರ‍್ಯಾಂಕನ್ನು ಪಡೆದು ಸಂಸ್ಥೆಯ ಪ್ರತಿಷ್ಠೆಗೆ ಗರಿಗಳನ್ನು ಮೂಡಿಸಿದ್ದಾರೆ. ರಾಷ್ಟ್ರೀಯ ಪ್ರತಿಭಾನ್ವೇಷಣ ಪರೀಕ್ಷೆ (ಎನ್.ಟಿ.ಎಸ್.ಇ.)ಯನ್ನು ಯಶಸ್ವಿಯಾಗಿ ಪೂರೈಸಿದ ನಮ್ಮ ಅನೇಕ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ತೇರ್ಗಡೆ ಹೊಂದಿ ವಿದ್ಯಾರ್ಥಿವೇತನವನ್ನು ಪಡೆಯುತ್ತಿದ್ದಾರೆ.

ನಮ್ಮ ಸಂಸ್ಥೆಯಲ್ಲಿ ನಡೆಸಲಾದ ಅನೇಕ ಪ್ರಮುಖ ಸಮಾರಂಭಗಳಲ್ಲಿ ಭಾಗವಹಿಸಿದ ಗಣ್ಯವ್ಯಕ್ತಿಗಳಾದ ಶ್ರೀ ನಿಟ್ಟೂರು ಶ್ರೀನಿವಾಸರಾವ್, ಪ್ರೊ. ಎಸ್.ಕೆ. ರಾಮಚಂದ್ರರಾವ್, ಡಾ. ಹೆಚ್.ನರಸಿಂಹಯ್ಯ, ಮಾಸ್ಟರ್ ಹಿರಣ್ಣಯ್ಯ, ಡಾ. ಗುರುರಾಜ ಕರಜಗಿ, ಪ್ರೊ.ಎಸ್.ವಿ.ಸುಬ್ರಹ್ಮಣ್ಯ, ಶ್ರೀ ನಾರಾಯಣಮೂರ್ತಿ, ಸ್ವಾಮಿ ಪುರುಷೋತ್ತಮಾನಂದಜೀ, ಪ್ರೊ. ನರಹರಿ, ಶ್ರೀ ವಿದ್ಯಾಭೂಷಣ, ಪ್ರೊ. ಹೆಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ.ಬಿ.ಕೆ.ಎಸ್.ವರ್ಮ, ನಿಶಾ ಮಿಲೆಟ್, ಜಾವಗಲ್ ಶ್ರೀನಾಥ್, ಶತಾವಧಾನಿ ಡಾ. ಆರ್. ಗಣೇಶ್, ಶ್ರೀಯುತ ಅನಂತಕುಮಾರ್, ಪ್ರೊ. ಬಿ.ಕೆ.ಚಂದ್ರಶೇಖರ್ ಮೊದಲಾದವರು ಇಲ್ಲಿನ ಚಟುವಟಿಕೆಗಳನ್ನು ನೋಡಿ, ಆನಂದಿಸಿ ಶುಭ ಹಾರೈಸಿದ್ದಾರೆ.

ಶಾಲೆಯು *ಈ* ಮಟ್ಟಕ್ಕೆ ಬರಲು ಶ್ರಮಿಸಿದ ಅನೇಕ ವ್ಯಕ್ತಿಗಳ ಪಾತ್ರ ಯಶೋಗಾಥೆಯ ಹಿಂದಿದೆ. ಶ್ರೀಯುತ ಬಿ.ಆರ್.ಸತ್ಯನಾರಾಯಣ್, ಡಾ. ಕೆ.ಸಮೀರ ಸಿಂಹ, ಶ್ರೀಬಿ.ಎನ್.ಕೃಷ್ಣಮೂರ್ತಿ, ಶ್ರೀಮತಿ ಎಸ್.ಸರಸ್ವತಿ, ಪ್ರೊ. ಎಂ.ಆರ್.ನಾಗರಾಜರಾವ್ ಇನ್ನೂ ಅನೇಕರ ನಿಃಸ್ವಾರ್ಥ ಸೇವೆಯಿಂದ ಶಾಲೆಯು ಸರ್ವಾಂಗೀಣವಾಗಿ ಬೆಳೆದು ಒಂದು ಅತ್ಯುತ್ತಮ ವಿದ್ಯಾಸಂಸ್ಥೆಯಾಗಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದೆ. ಇಷ್ಟೇ ಅಲ್ಲದೆ ಸದಾ ನಮ್ಮ ಹಿಂದಿದ್ದು ಪ್ರೋತ್ಸಾಹಿಸುತ್ತಿರುವ ಆಡಳಿತ ಮಂಡಳಿಯ ಹಾಗೂ ಸಲಹಾ ಮಂಡಳಿಯ ಎಲ್ಲಾ ಸದಸ್ಯರು, ಪೋಷಕರು ಮತ್ತು ಹಿತೈಷಿಗಳ ಶುಭಾಕಾಂಕ್ಷೆಗಳು ನಮ್ಮನ್ನು ಹುರಿದುಂಬಿಸಿ ಸದಾ *ಈ* ಸಂಸ್ಥೆಯ ಒಳಿತಿಗಾಗಿ ಕಾರ್ಯತತ್ಪರರಾಗಿರಲು ಸಹಕರಿಸುತ್ತಿವೆ.

ಮಕ್ಕಳಿಗೆ ವಿದ್ಯೆಯನ್ನು ಅನುಶಾಸನ ರೂಪದಲ್ಲಿ ಕಲಿಸುತ್ತಿರುವ *ಈ* **ಜ್ಯೋತಿ** ವಿದ್ಯಾಸಂಸ್ಥೆಯು ಸಾಧನೆಯ ಹಾದಿಯಲ್ಲಿ ಒಂದು ದಶಕವನ್ನು ದಾಟಿದೆ. ಸಾಧಿಸುವುದು ಇನ್ನೂ ಬಹಳಷ್ಟಿದೆ. *ಈ* ಸಂಸ್ಥೆಯು ಚಿರಕಾಲ ಇದೇ ರೀತಿಯಲ್ಲಿ ಸೇವೆ ಸಲ್ಲಿಸಿ ಇನ್ನೂ ಎತ್ತರೆತ್ತರಕ್ಕೆ ಬೆಳೆದು ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ವಿದ್ಯಾಸಂಸ್ಥೆಯಾಗಲಿ ಎಂದು ಆಶಿಸುತ್ತೇನೆ.





***89.*** *ಜ್ಯೋತಿ ಕೇಂದ್ರೀಯ ವಿದ್ಯಾಲಯಕ್ಕೆ ಸಚಿವ ಶ್ರೀ ಅನಂತಕುಮಾರ್ ಭೇಟಿ ಇತ್ತಾಗ : ಬಲಗಡೆ ಆರ್.ಬಿ.ಐ.ನ ಚೀಫ್ ಜನರಲ್ ಮ್ಯಾನೇಜರ್ ಶ್ರೀ ಎಸ್.ಆರ್.ಸುಬ್ರಹ್ಮಣ್ಯ*

# ೭. ಜ್ಯೋತಿ ಬೆಳಗುತಿದೆ!

*ಜರಗನಹಳ್ಳಿ ಶಿವಶಂಕರ್*

*ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ*
*ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯಾ*
*ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ*
*ಪರುಷದ ಬಲದಿಂದ ಅವಲೋಹದ ಕೇಡ*
*ನೋಡಯ್ಯಾ*
*ಕೂಡಲ ಸಂಗನ ಶರಣರ ಅನುಭಾವದ ಬಲದಿಂದ*
*ಎನ್ನ ಭವದ ಕೇಡ ನೋಡಯ್ಯಾ - ಬಸವಣ್ಣ*



*90. ಜ್ಯೋತಿ, ತಾಯಿಯ ಮಡಿಲಲ್ಲಿ*

**ಜ್ಯೋತಿ** ಎಂಬ ಪದ ಇಲ್ಲಿ ಪ್ರತಿಮಾ ವಿಧಾನವಾಗಿ, ಅವಲೋಕಿಸುವವರ ಮನಗಳಲ್ಲಿ ಅನೇಕ ಅರ್ಥಗಳನ್ನು ಹೊಮ್ಮಿಸುತ್ತದೆ. ಸಾಮಾನ್ಯ ಕಣ್ಣುಗಳಿಗೆ, ಲೌಕಿಕವಾಗಿ ಜ್ಯೋತಿ ಕತ್ತಲಲ್ಲಿ ಉಪಯೋಗಿಸುವ ಒಂದು ಸಾಧನ ಅಷ್ಟೆ. ಆದರೆ ಕೃತಿಯಲ್ಲಿ ಕತ್ತಲನ್ನು ದೂಡುವ ಶಕ್ತಿ ಅದಕ್ಕೆ ಮಾತ್ರ ಇದೆ. ಪ್ರಕೃತಿಯಲ್ಲಿ ಬೇರಾವುದಕ್ಕೂ - ಅಶ್ವಬಲ, ಆನೆಬಲ, ಮನುಷ್ಯಬಲ ಇವುಗಳಿಗೂ - ಕತ್ತಲನ್ನು ಅಲುಗಾಡಿಸಲು ಸಾಧ್ಯವಿಲ್ಲ. ಕಿರುಹಣತೆಯ ಬೆಳಕಾದರೂ ದಟ್ಟ ಕತ್ತಲೆಯನ್ನೂ ಹೋಗಲಾಡಿಸಬಲ್ಲುದು ಎಂಬುದು ಸೋಜಿಗದ ಸಂಗತಿ.

ಕತ್ತಲೆ ಎಂದರೆ ಇರುಳನ್ನು ಆವರಿಸಿಕೊಳ್ಳುವ ಸ್ಥಿತಿ ಮಾತ್ರ ಅಲ್ಲ. ಮಾನವನ ನಿರಾಶೆ, ಅಸಹಾಯಕತೆ, ಕಷ್ಟಕೋಟಲೆ, ಅಜ್ಞಾನ, ದಾರಿದ್ರ್ಯ, ಅವಕಾಶ ವಂಚನೆ ಇತ್ಯಾದಿಗಳೆಲ್ಲವೂ ಅಂಧಕಾರವೆಂದೇ ತಿಳಿಯಲ್ಪಡುತ್ತವೆ. ಈ ಅಂಧಕಾರವನ್ನು ನಿವಾರಿಸುವ ದಯೆ, ಉಪಕಾರಬುದ್ಧಿ, ಸಹಾಯಹಸ್ತ, ಸಹಕಾರ, ಇವು ಬೆಳಕು ಚೆಲ್ಲುವ ಜ್ಯೋತಿಯಾಗಿ ಕಾರ್ಪಣ್ಯದ ಕತ್ತಲೆಯಿಂದ ಮುಕ್ತಗೊಳಿಸುವ ತಾರಕ ಸ್ವರೂಪವಾಗಿ ಮಾನವ ಸಮಾಜವನ್ನು ಮೇಲೆತ್ತುತ್ತವೆ. ಅಂತಹದೊಂದು ಜ್ಯೋತಿಯ ಪ್ರತಿಮಾ ವಿಧಾನ ನಮ್ಮ ಕಣ್ಣ ಮುಂದೆ ಸುಳಿಯುತ್ತ ಅನೇಕರ ಬಾಳಿಗೆ ಬೆಳಕೂಡಿಸುತ್ತ - ತನ್ನನ್ನೇ ನಿಮಿತ್ತ ಮಾಡಿಕೊಂಡು ಪರೋಕ್ಷವಾಗಿ ಉಪಕಾರವನ್ನು ವಿಸ್ತರಿಸುತ್ತ ಬೆಳಗುತ್ತ ಗೋಚರಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಕುಮಾರಿ 'ಜ್ಯೋತಿ' ಅಂತಹ ಆಶಾದೀಪವಾಗಿ ತನ್ನ ಅಮರ ಸ್ವರೂಪವನ್ನು ನಾನಾರೂಪವಾಗಿ ಪ್ರಕಟಿಸುತ್ತಿದ್ದಾಳೆ!

ಶ್ರೀಮತಿ ಸೀತಾ ಮತ್ತು ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯ ದಂಪತಿಗಳಿಗೆ ಮಗಳಾಗಿ ಜನ್ಮತಳೆದಾಗ ಮಗುವಿಗೆ ಪ್ರಿಯವಾದ ಹೆಸರಿಡಲು ಅವರು ಬಯಸಿದ್ದು '**ಜ್ಯೋತಿ.**' ನಮ್ಮ ಪರಂಪರೆಯಲ್ಲಿ **ಜ್ಯೋತಿ** ಯನ್ನು ಸದಾ ಜ್ಞಾನದ, ನಾಡುನುಡಿಯ, ಸಂಸ್ಕೃತಿಯ ಸಂಕೇತವಾಗಿ ನೋಡುತ್ತಾ ಬಂದಿದ್ದೇವೆ. ಈ ಹಿನ್ನೆಲೆಯಲ್ಲಿ ಅವರು ಈ ಹೆಸರನ್ನಿಡಲು ಆರಿಸಿಕೊಂಡರೆಂದು ತೋರುತ್ತದೆ. ಮಕ್ಕಳಿಲ್ಲದ ಮನೆಯಲ್ಲಿ ಮಗಳು ನಿಜವಾದ ಬೆಳಕಿನ ಸಿರಿಯಾದಳು. ಅವಳು ಜನ್ಮ ತಳೆದದ್ದು ೨೫.೬.೧೯೭೧ರಲ್ಲಿ. ಭಗವಂತನ ಇಚ್ಛೆಯಂತೆ ಮುಂದೆ ಈ ಜ್ಯೋತಿ ಎಂಬ ಹೆಸರು ಅನೇಕ ಲೋಕಕಲ್ಯಾಣ ಕಾರ್ಯಗಳಿಗೆ ಮುಡುಪಾಗಿ ಬೆಳಕು ಬೀರುತ್ತಿರುವುದು ಸರ್ವವಿದಿತ ಸಂಗತಿಯಾಗಿದೆ.

ಜ್ಯೋತಿಯನ್ನು ಹಡೆದ ತಂದೆತಾಯಿಯರಲ್ಲಿ ಅವಳ ಹುಟ್ಟು ಅವ್ಯಕ್ತ ಹೊಸ ಚೈತನ್ಯವೊಂದನ್ನು ಬಾಳಿನಲ್ಲಿ ತುಂಬಿತು. ಸುಬ್ರಹ್ಮಣ್ಯ ಅವರ ದುಡಿಮೆಯ ಆಲೋಚನಾ ಕ್ರಮವೇ ಬದಲಾಯಿತು. ಅನೇಕ ಖಾಸಗಿ ಕಾರ್ಖಾನೆಗಳಲ್ಲಿ ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದ

ಅವರು ನೌಕರಿಗೆ ವಿದಾಯ ಹೇಳಿ ತನ್ನ ಕಾಲ ಮೇಲೆ ತಾನು ನಿಲ್ಲಬೇಕೆಂಬ ಆತ್ಮವಿಶ್ವಾಸ ಮೂಡಿದ್ದು ಈ ಘಳಿಗೆಯಲ್ಲೇ. ೧೯೭೧ ಮಗಳು ಜ್ಯೋತಿ ಹುಟ್ಟಿದ ವರ್ಷ; ಸುಬ್ರಹ್ಮಣ್ಯ ಪ್ರಾರಂಭಿಸಿದ ಜ್ಯೋತಿ ಗ್ರೂಪ್ ಆಫ್ ಇಂಡಸ್ಟ್ರೀಸ್‌ನ ಸ್ಥಾಪನೆಯ ವರ್ಷವೂ ಹೌದು. ಸುಬ್ರಹ್ಮಣ್ಯ ಅವರ ನಿಷ್ಠಾವಂತ ದುಡಿಮೆಗೆ ತಕ್ಕ ಪ್ರತಿಫಲ ಸಿಗುವುದು ಸುಳ್ಳಾಗಲಿಲ್ಲ. ಅವರು ತಯಾರಿಸುತ್ತಿದ್ದ ಸ್ಟೀಲ್ ವಸ್ತುಗಳ ಪ್ರಾಮಾಣಿಕತೆಯ ಮೇಲೆ ಅಪಾರ ಬೇಡಿಕೆ ಬರಲಾರಂಭಿಸಿತು. ರಾಜ್ಯ ಮತ್ತು ರಾಷ್ಟ್ರಮಟ್ಟದ ಉತ್ತಮ ತಯಾರಕರು ಎಂಬ ಬಿರುದು ಬಾವಲಿಗಳೂ ಬಂದವು. ಸಾಕಷ್ಟು ಹಣವನ್ನೂ ಆ ಕ್ಷೇತ್ರದಲ್ಲಿ ಸಂಪಾದಿಸಿ ಒಬ್ಬ ಶ್ರೀಮಂತ ಕೈಗಾರಿಕೋದ್ಯಮಿ ಎಂದೂ ಗುರುತಿಸಿಕೊಂಡರು.

ಅವರ ಬದುಕಿನ ಆಶಾಗೋಪುರ ಕಳಚಿ ಬಿದ್ದದ್ದು ೨೮.೧೦.೧೯೮೭ರಲ್ಲಿ. ಆರೋಗ್ಯವಾಗಿದ್ದ ಏಕೈಕ ಪ್ರೀತಿಯ ಮಗಳು ಜ್ಯೋತಿಗೆ ಸಣ್ಣಜ್ವರ ಕಾಣಿಸಿಕೊಂಡು ಒಂದೇ ದಿನದಲ್ಲಿ ಜ್ಯೋತಿ ಆರಿಹೋಗಿ ಮನೆಯ ತುಂಬ ಕತ್ತಲು ಕವಿದಿತ್ತು. ಎಲ್ಲ ತಾಯಿ ತಂದೆಯರಂತೆ ಈ ನತದೃಷ್ಟ ದಂಪತಿಗಳು ನೋವನ್ನು ನುಂಗಿಕೊಂಡರು; ಚೇತರಿಸಿಕೊಂಡು ಜ್ಯೋತಿ ಬಿಟ್ಟು ಹೋದ ಬೆಳಕಿನ ಚೈತನ್ಯವನ್ನು ಸಮಾಜಕ್ಕೆ ನೀಡಲು ಪ್ರಯತ್ನಿಸಿದರು. ಇದು ಅವರ ಬದುಕಿನಲ್ಲಿ ಕಂಡುಕೊಂಡ ಆದರ್ಶದ ನಿಲುವು. ಅನಂತರ ಧೃತಿಗೆಡದ ಬದುಕು ಅವರದಾಯಿತು.

"ಜ್ಯೋತಿ ಅದೃಷ್ಟ ದೇವತೆಯಾಗಿ ನಮ್ಮ ಬಾಳಿನಲ್ಲಿ ಘಳಿಗೆ ಬಂದು ಹೋದಳು. ಬದುಕಿನ ಮೌಲ್ಯಗಳನ್ನು ಬಿಟ್ಟು ಹೋದಳು" ಎಂದು ಸ್ಮರಿಸಿಕೊಳ್ಳುತ್ತಾರೆ ಸುಬ್ರಹ್ಮಣ್ಯ ಅವರು.

ವಿದ್ಯೆಯನ್ನು ಅರಸಿ ಬರುವ ಮಕ್ಕಳ ಮುಖದಲ್ಲಿ 'ಜ್ಯೋತಿ'ಯ ಮುಖವನ್ನು ಕಾಣಬಹುದೆಂದು ಗಂಡ-ಹೆಂಡತಿ ನಂಬಿದರು. ಮನೆಯ ತುಂಬ ಮಕ್ಕಳನ್ನು ತುಂಬಿಕೊಂಡರು. ಇವರದು ನಿರ್ಮಲ, ನಿಃಸ್ವಾರ್ಥ ಬದುಕಿನ ಒಂದು ಆದರ್ಶ ಗಾಥೆ.

ವಿಶೇಷ ಸಂಗತಿ ಏನೆಂದರೆ, ಅಂದಿನಿಂದ ಇಂದಿನವರೆವಿಗೂ ವೇದಪಾಠಶಾಲೆಯ ಮಕ್ಕಳು ಮನೆಯ ಮಕ್ಕಳಾಗಿ ಶ್ರೀಮತಿ ಸೀತಾಸುಬ್ರಹ್ಮಣ್ಯ ಅವರ ಒಟ್ಟಿಗೆ ಬೆಳಗ್ಗೆ ನಾಲ್ಕರ ವೇಳೆಗೆ ಎದ್ದು ಅಡುಗೆ ಮಾಡಲು ಸಹಕರಿಸುತ್ತಾರೆ. ಸುಬ್ರಹ್ಮಣ್ಯ ಅವರೂ ಸೇರಿಕೊಂಡು ಎಲ್ಲರೂ ಒಟ್ಟಿಗೆ ತಿಂಡಿ, ಊಟ ಮುಗಿಸುತ್ತಾರೆ. ಹಾಗಾಗಿ, 'ನಮ್ಮ ಮನೆಯಲ್ಲಿ ಜ್ಯೋತಿಯ ಜಾಗದಲ್ಲಿ ಮೂವತ್ತು ಮಕ್ಕಳಿದ್ದಾರೆ' ಎಂದು ಸಂತೋಷ ಪಡುತ್ತಾರೆ. ಬೆಳಕು ಪಟ್ಟಕದ ಮೇಲೆ ಬಿದ್ದು ಕಾಮನಬಿಲ್ಲಾಗುವಂತೆ 'ಜ್ಯೋತಿ' ಈ ಮಕ್ಕಳ ಮುಖಗಳಲ್ಲಿ ಕಾಮನಬಿಲ್ಲಾಗಿ ಮೂಡುತ್ತಾಳೆ ಎಂಬುದು ಅವರ ನಂಬಿಕೆ.



**91.** *ಅಖಿಲ ಕರ್ನಾಟಕ ಬ್ರಾಹ್ಮಣ ಏಳನೆಯ ಸಮ್ಮೇಳನ :*
*ಆಗಿನ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿ ಅವರೊಂದಿಗೆ ಸಮಾಲೋಚನೆ*

ಸುಬ್ರಹ್ಮಣ್ಯ ಅವರಿಗೆ ಕನಕಪುರದ ಹೆದ್ದಾರಿಯಲ್ಲಿ ಒಂದು ಪುಟ್ಟ ಸುಂದರ ತೋಟವಿದೆ. ಅಲ್ಲಿ ತೆಂಗು, ಮಾವು, ಅಡಕೆ, ಕಾಫಿ ಹಾಗೂ ವಿಧವಿಧವಾದ ಹಣ್ಣು ತರಕಾರಿಗಳನ್ನು ಸಾವಯವ ಗೊಬ್ಬರ ಬಳಸಿ ಬೆಳೆಯುತ್ತಾರೆ. ಅವೆಲ್ಲವನ್ನೂ ಈ ಮಕ್ಕಳಿಗಾಗಿ- ಅರ್ಥಾತ್ ಅವಿಭಾಜ್ಯ ಕುಟುಂಬಕ್ಕಾಗಿ ಉಪಯೋಗಿಸುತ್ತಾರೆ. ವೇದಪಾಠಶಾಲೆಯ ಪಕ್ಕದಲ್ಲಿ ಹಸುಗಳನ್ನೂ ಸಾಕುತ್ತಿದ್ದಾರೆ. ಹಾಲು ಸಮೃದ್ಧಿಯಾಗಿದೆ. ಅಲ್ಲಿ ಬೀಳುವ ಸಗಣಿಯನ್ನು ಒಂದು ದೊಡ್ಡ ಮಂಕರಿಯಲ್ಲಿ ಪ್ರತಿದಿನ ತೋಟಕ್ಕೆ ಗೊಬ್ಬರವಾಗಲು ಸುಬ್ರಹ್ಮಣ್ಯ ತಮ್ಮ ಜೀಪಿನಲ್ಲಿ ತೆಗೆದುಕೊಂಡು ಹೋಗುತ್ತಾರೆ. ಸಗಣಿಯ ಮಹತ್ತ್ವವನ್ನೂ ಚೆನ್ನಾಗಿ ಬಲ್ಲವರು ಅವರು.

ಹಿಂದೊಮ್ಮೆ ಜ್ಯೋತಿ ಕೇಂದ್ರೀಯ ವಿದ್ಯಾಲಯ



**92. ಜ್ಯೋತಿ : ಹೆರಳದಂಡೆಯ ಪ್ರತಿಫಲನ**

ಶಾಲೆಗೆ ತಮ್ಮ ಮಕ್ಕಳನ್ನು ಎಲ್.ಕೆ.ಜಿ.ಗೆ ಸೇರಿಸಲು ಬಯಸಿದ ತಂದೆ ತಾಯಂದಿರು ಅರ್ಜಿಗಾಗಿ ಎರಡು ದಿನಗಳಿಗೂ ಮುಂಚಿತವಾಗಿ ಸರತಿ ಸಾಲು ಕಟ್ಟಿ ನಿಂತಿದ್ದನ್ನೂ, ಅವರನ್ನು ನಿಯಂತ್ರಿಸಲು ಪೊಲೀಸರು ಮಧ್ಯ ಪ್ರವೇಶಿಸಿದ್ದನ್ನೂ ನಾನು ಕಂಡಿದ್ದೇನೆ. ಆ ಶಾಲೆಯ ಬಗ್ಗೆ ಈ ಪ್ರದೇಶದ ತಂದೆ-ತಾಯಂದಿರಿಗೆ ಇರುವ ವಿಶ್ವಾಸವನ್ನು ಅದು ತೋರುತ್ತದೆ. ರಾಜಕಾರಣಿಗಳ ಮತ್ತು ಪ್ರಭಾವಶಾಲಿಗಳ ಹಸ್ತಕ್ಷೇಪಕ್ಕೆ ಸುಬ್ರಹ್ಮಣ್ಯ ಎಂದೂ ತಲೆ ಕೆಡಿಸಿಕೊಂಡವರಲ್ಲ.

ಅನೇಕ ಪ್ರಾಮಾಣಿಕ, ಆಶ್ರಿತ ಬಡ ವಿದ್ಯಾರ್ಥಿಗಳಿಗೆ ಇಂದಿಗೂ ಸುಬ್ರಹ್ಮಣ್ಯ ಆರ್ಥಿಕವಾಗಿ ನೆರವಾಗುತ್ತಿದ್ದಾರೆ. ತಾಯಿ ತಂದೆಯರಿಗೆ ಹೊರೆಯಾಗದಂತೆ ಚಿಂತಿಸಿ ಫೀಸಿನ ನಿಗದಿಪಡಿಸಲಾಗುತ್ತಿದೆ.

ಜ್ಯೋತಿ ಕೇಂದ್ರೀಯ ವಿದ್ಯಾಲಯವು ಒಂದು ಮಾದರಿ ಶಾಲೆಯಾಗಿ, ಹತ್ತು ಹಲವು ಸಾಮಾಜಿಕ ಕಾಳಜಿಗಳನ್ನು ಹೊಂದಿದೆ ಎನ್ನುವುದಕ್ಕೆ ಕೆಳಗಿನ ಕೆಲವು ವಿಶಿಷ್ಟ ಉದಾಹರಣೆಗಳು ಸಾಕ್ಷಿಯಾಗಿವೆ:

ಪ್ರತಿ ಗಣರಾಜ್ಯೋತ್ಸವದಂದು ಸುತ್ತಮುತ್ತಲ ಸರ್ಕಾರಿ ಶಾಲೆಯ ಮಕ್ಕಳನ್ನು ಕರೆತಂದು, ಅವರನ್ನು ಅತಿಥಿಗಳಾಗಿ ಸತ್ಕರಿಸಿ, ಅವರ ಕೈಯಿಂದಲೇ ಧ್ವಜಾರೋಹಣ ಮಾಡಿಸುತ್ತಾರೆ. ಊಟವಿಟ್ಟು ಬಟ್ಟೆ ಕೊಟ್ಟು ಕಳುಹಿಸುತ್ತಾರೆ.

ನವೆಂಬರ್ ಹದಿನಾಲ್ಕು ಮಕ್ಕಳ ದಿನಾಚರಣೆ. ಅಂದು ಶಾಲೆಯ ಎಲ್ಲ ಮಕ್ಕಳಿಗೂ ಪುಷ್ಕಳ ಭೋಜನ ಬಡಿಸುತ್ತಾರೆ.

ಸೆಪ್ಟೆಂಬರ್ ಐದು ಉಪಾಧ್ಯಾಯರ ದಿನಾಚರಣೆ. ಅಂದು ಬೇರೆ ಬೇರೆ ಶಾಲೆಗಳ ಪ್ರಾಮಾಣಿಕ ಉಪಾಧ್ಯಾಯರುಗಳನ್ನು ಗುರುತಿಸಿ ಸತ್ಕರಿಸುತ್ತಾರೆ.

ಶಾಲಾ ಸಿಬ್ಬಂದಿ ವರ್ಗದವರ ಮಕ್ಕಳು ತೆರಬೇಕಾದ ಎಲ್ಲ ಫೀಸುಗಳಲ್ಲೂ, ಶೇಕಡ ಐವತ್ತರಷ್ಟು ರಿಯಾಯಿತಿ ನೀಡಿದ್ದಾರೆ.

ಈ ಶಾಲೆಯಲ್ಲಿ ಸುಮಾರು ಒಂದು ಸಾವಿರದ ಏಳುನೂರು ಮಕ್ಕಳಿದ್ದಾರೆ. ಎಲ್ಲ ಮಕ್ಕಳನ್ನೂ ಪ್ರತಿ ವರ್ಷ ಎಂಟು ಹತ್ತು ತಂಡಗಳಾಗಿ ವಿಂಗಡಿಸಿ, ಇನ್ನೂರು ಕಿಲೋಮೀಟರ್ ಒಳಗೆ ಬರುವ ಪ್ರವಾಸ ತಾಣಗಳಿಗೆ ಉಚಿತವಾಗಿ ಪ್ರವಾಸ ಮಾಡಿಸುತ್ತಾರೆ. ಅಂದು ಸಹ ಶ್ರೀಮತಿ ಸೀತಾ ಸುಬ್ರಹ್ಮಣ್ಯ ಅವರು ಎಲ್ಲರಿಗೂ ಲಂಚ್ ಬಾಕ್ಸ್ ರೆಡಿ ಮಾಡಿರುತ್ತಾರೆ.

ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಮಕ್ಕಳಿಗೆ ವಿಶೇಷವಾಗಿ ಸ್ವಯಂ ಉದ್ಯೋಗದ ಪರಿಕಲ್ಪನೆಯ ದೃಷ್ಟಿಯಿಂದ - ಹೊಲಿಗೆ, ಬಡಿಗೆ ಮತ್ತು ಎಲೆಕ್ಟ್ರಾನಿಕ್ಸ್ ವಿಷಯಗಳಿಗೆ ವಿಶೇಷ ತರಗತಿಗಳನ್ನು ಹಮ್ಮಿಕೊಂಡಿದ್ದಾರೆ.

'ಜ್ಯೋತಿ ಕೇಂದ್ರೀಯ ವಿದ್ಯಾಲಯ ಸಂಯುಕ್ತ ಪದವಿಪೂರ್ವ ಕಾಲೇಜು' ಸಿ.ಇ.ಟಿ. ಪರೀಕ್ಷೆಯಲ್ಲಿರುವ ಆರು ಮತ್ತು ಏಳನೆಯ ರ್‍ಯಾಂಕುಗಳನ್ನು ಈ ಬಾರಿ ತನ್ನ ಮಡಿಲಿಗೆ ಹಾಕಿಕೊಂಡಿದೆ. ಹಿಂದಿನ ಸತತ ಆರು ವರ್ಷಗಳಲ್ಲಿ ಸಿ.ಬಿ.ಇಸ್.ಇ. ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಪ್ರತಿಶತ ನೂರಕ್ಕೆ ನೂರು ಅಭ್ಯರ್ಥಿಗಳು ತೇರ್ಗಡೆಯಾಗಿರುವ ದಾಖಲೆ ಈ ಶಾಲೆಗಿದೆ.

ಇನ್ನು, ಬಿ.ಎನ್.ವಿ. ಸುಬ್ರಹ್ಮಣ್ಯರವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾಲಿ ಅಧ್ಯಕ್ಷರಾಗಿ ನಾಲ್ಕನೇ ಬಾರಿ ಆಯ್ಕೆಯಾಗಿದ್ದಾರೆ. ಮಾನವೀಯತೆ ಮೊದಲು; ಅನಂತರ ಜಾತಿ, ವೈಯಕ್ತಿಕ ನಂಬಿಕೆ ಎನ್ನುತ್ತಾರೆ. ದುಡಿಯುವ ಪ್ರತಿ ಕಾಯಕಕ್ಕೂ ತನ್ನದೇ ಆದ ವೈಶಿಷ್ಟ್ಯ ಇರುತ್ತದೆ. ಯಾವ ವೃತ್ತಿಯಲ್ಲೂ ಉತ್ತಮ ಮತ್ತು ಅಧಮ ಎನ್ನುವುದು ಇರುವುದಿಲ್ಲ. ಅಲ್ಲಿನ ಉತ್ತಮ ಪ್ರತಿಭೆಗಳನ್ನು ಪ್ರಾಮಾಣಿಕವಾಗಿ ಗುರುತಿಸುವ ಜವಾಬ್ದಾರಿ ಇಂದಿನ



*93. ಜ್ಯೋತಿ : ಜ್ಯೋತಿಯೊಡನೆ ಸಂವಾದ*

ಎಂಬುವಂತೆ ಕಷ್ಟಕಾರ್ಪಣ್ಯಗಳನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಸದಾ ಹಸನ್ಮುಖರಾಗಿರುತ್ತಾರೆ.

ಈಗಷ್ಟೇ ಅರುವತ್ತು ತುಂಬಿರುವ (ಜನನ- ೧೫.೧೦.೧೯೪೨) ಸುಬ್ರಹ್ಮಣ್ಯರನ್ನು ಅವರ ಆಪ್ತ ಗೆಳೆಯರು ಕೂಡಿಕೊಂಡು ಗೌರವಿಸಲು ಮುಂದಾಗಿದ್ದಾರೆ. ಅದನ್ನು ನಿರಾಕರಿಸುತ್ತಿರುವ ಸುಬ್ರಹ್ಮಣ್ಯ ವಿದ್ಯಾರ್ಥಿನಿಯರ ಒಂದು ಹಾಸ್ಟೆಲ್ ತೆರೆಯಲು ಅವರೆಲ್ಲರ ಆರ್ಥಿಕ ನೆರವನ್ನು ಪ್ರತಿಯಾಗಿ ಕೋರುತ್ತಿದ್ದಾರೆ. ಸರಳಜೀವನ, ಸ್ನೇಹಪರತೆ, ಸಜ್ಜನಿಕೆ, ನಿಷ್ಠಾವಂತ ದುಡಿಮೆ ಇವನ್ನು ಪರಿಪಾಲಿಸುವ ಅವರನ್ನು ಆದರ್ಶವಾಗಿ ಪರಿಭಾವಿಸುವ ಒಂದು ದೊಡ್ಡ ಸಹೃದಯರ ದಂಡು ಅವರ ಹಿಂದೆ ಇದೆ. ಅದು ಸಮಗ್ರ ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸುವ ಶಕ್ತಿಸ್ವರೂಪವಾಗಲಿ, ಅದಕ್ಕೆ ಮಾರ್ಗದರ್ಶಕರಾಗಿ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ದಂಪತಿ ದೀರ್ಘಾಯುಗಳಾಗಿ ಬಾಳಲಿ ಎಂದು ಹಾರೈಸೋಣ.

ಸಮಾಜಕ್ಕೆ ಅಗತ್ಯವಾಗಿ ಬೇಕಾಗಿದೆಯೆಂದು ಪ್ರತಿಪಾದಿಸುತ್ತಾರೆ. ಅಬಲಾಶ್ರಮ, ಸರ್.ಎಂ.ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್, ಬ್ರಾಹ್ಮಣ ವೈದಿಕ ಧರ್ಮ ಮಹಾಸಭಾ, ನ್ಯಾಷನಲ್ ಎಜುಕೇಷನ್ ಟ್ರಸ್ಟ್, ಶ್ರೀ ಸುರಸರಸ್ವತೀ ಸಭಾ - ಶೃಂಗೇರಿ ಹೀಗೆ ಅನೇಕ ಸಂಘಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿಃಸ್ವಾರ್ಥ ಸೇವೆಯನ್ನು ಸುಬ್ರಹ್ಮಣ್ಯ ಸಲ್ಲಿಸುತ್ತಿದ್ದಾರೆ.

**ಬೆಳಕು ನೀಡುವ ಬತ್ತಿಯ ಜೊತೆಗೆ**
**ಬೇವಿನ ಎಣ್ಣೆಯಾದರೇನು**
**ಗೋವಿನ ತುಪ್ಪವಾದರೇನು**



*94. ಶತಾಯುಷಿ ಶ್ರೀ ಎಚ್.ಎನ್. ಶ್ರೀನಿವಾಸಯ್ಯ ಅವರಿಂದ ಬಿ.ಎನ್.ವಿ. ದಂಪತಿಗೆ ಆಶೀರ್ವಾದ : ಷಷ್ಠ್ಯಬ್ದಪೂರ್ತಿ ಸಮಾರಂಭ*

## ೮. ಬದುಕಿನ ವಾತಾಯನಗಳು


*ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯ*

*ಯಾರು ಆತ್ಮದರ್ಶನ ಮಾಡಿಕೊಳ್ಳಲಾರರೋ, ಅವರಿಗೆ ಅನ್ಯದರ್ಶನಗಳೆಲ್ಲಾ ಶೂನ್ಯ*
*ಯಾರು ಆತ್ಮಗೌರವವನ್ನು ಕಾಪಾಡಿಕೊಳ್ಳಲಾರರೋ, ಅವರಿಗೆ ಗೌರವಾರ್ಥವೇ ಶೂನ್ಯ*
*ಯಾರು ಆತ್ಮಸಾಕ್ಷಿಯನ್ನು ವಂಚಿಸಿಕೊಳ್ಳುವರೋ, ಅವರಿಗೆ ಸತ್ಯದರ್ಶನವೇ ಶೂನ್ಯ*
*ಯಾರು ಆತ್ಮಶುದ್ಧಿಯನ್ನು ಹೊಂದಿರುವುದಿಲ್ಲವೋ, ಅವರಿಗೆ ಸಕಲ ಪುಣ್ಯಗಳೂ ಶೂನ್ಯ*
*ಯಾರು ಆತ್ಮನಿಂದನೆಯನ್ನು ಮಾಡಿಕೊಳ್ಳುವರೋ ಅವರಿಗೆ ನಾಕಪ್ರಾಪ್ತಿಯೇ ಶೂನ್ಯ*

ನಮ್ಮ ವೇದೋಪನಿಷತ್‌ಗಳ ಸಾರ ಹೀಗಿದೆ. ಇದನ್ನೇ ಆತ್ಮಸಾಕ್ಷಾತ್ಕಾರವೆಂದು ಕರೆದು, ಪರಮಾತ್ಮನಿಗೆ ಸರಿಸಮಾನ ಸ್ಥಾನವನ್ನು ಆತ್ಮಕ್ಕೆ ನೀಡಿ, ಸೃಷ್ಟಿಯ ಸಕಲ ಆತ್ಮಧಾರಿಗಳನ್ನೂ ಗುರುತಿಸುವ, ಗೌರವಿಸುವ ಪರಿಯನ್ನು ತಿಳಿಸಿದ್ದಾರೆ ನಮ್ಮ ಋಷಿಮುನಿಗಳು. ಅದಕ್ಕೆ ಸಾಕ್ಷಿಯೋ ಎಂಬಂತೆ, *ಈ* ಕಲಿಯುಗದಲ್ಲಿ ಪರಮಾತ್ಮನು ಕಲ್ಲಾಗಿ - ಸ್ಪಂದನರಹಿತನಾಗಿ ಕೂತು, ಮಾನವನಿಗೆ ಆತ್ಮನ ಸ್ಥಾನಮಾನಗಳನ್ನು ಪರಿಚಯಿಸುತ್ತಿದ್ದಾನೆ. ಅದನ್ನು ಮರೆತ ಮಾನವ ಅನ್ಯರಿಗೆ ನೋವಿತ್ತು, ತಾ ನಲಿಯುತ್ತಾ, ಪಾಪಪ್ರಜ್ಞಾಶೂನ್ಯನಾಗಿ ಬದುಕಿ, ದೈವಾರಾಧನೆಯಲ್ಲೇ ಮೋಕ್ಷಪ್ರಾಪ್ತಿ ಇದೆಯೆಂಬ ಭ್ರಮೆಯಲ್ಲಿ ಬಾಳುತ್ತಿದ್ದಾನೆ. ಇದೇ ಇಂದಿನ ವಿಪರ್ಯಾಸ, ಸಕಲ ಅನಾಹುತಗಳ ಆಗರ, ಸರ್ವ ಸಮಸ್ಯೆಗಳಿಗೂ ಮೂಲಾಧಾರ. **ಪಾಪೋऽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ** ಎಂದು ಪರಮಾತ್ಮನಿಗೆ, ಪ್ರತಿದಿನ ಉಚ್ಚರಿಸುತ್ತಾ ಉದ್ದಂಡ ಪ್ರಣಾಮ ಮಾಡಿ, ಪಶ್ಚಾತ್ತಾಪದಿಂದ ಪ್ರಾಯಶ್ಚಿತ್ತ ಆಯ್ತೆಂದು ತೃಪ್ತಿ ಪಡುತ್ತಿದ್ದಾನೆ - ಮಳೆಯಲ್ಲಿನೆಂದು ಬಿಸಿಲಲ್ಲಿ ಒಣಗಿಸಿಕೊಂಡವನಂತೆ. ನಿಜ, ಪಾಪದ ಜಲದಲ್ಲಿ ನೆಂದಿರುವುದು ಕೇವಲ ವಸ್ತ್ರ-ಮೈಗಳಾದರೆ ಒಣಗಬಹುದೇನೋ. ಆದರೆ ನೆನೆಯುವುದು ಅವನ ಬದುಕು, ಬಾಳು. ಉಳಿಯುವುದು ಅದರ ನೆನಪುಗಳು ಮಾತ್ರ.

ಆದ್ದರಿಂದಲೇ ಅನುಭವೋಕ್ತ ಲೋಕೋಕ್ತಿ ಇರುವುದು - ಎಲ್ಲಾ ಜನ್ಮಗಳಿಗಿಂತಾ ಮನುಷ್ಯ ಜನ್ಮವೇ ಅತಿ ಶ್ರೇಷ್ಠ ಎಂದು. ಕಾರಣ: ವಿವೇಚನೆ, ರಸಾನುಭೂತಿಗಳು ಇರುವುದು ಮನುಷ್ಯನಿಗೆ ಮಾತ್ರ. ಅಷ್ಟು ಮಾತ್ರವಲ್ಲ, ಅವುಗಳನ್ನು ಬಳಸಲೂ ಬಲ್ಲ, ತಿಳಿಸಲೂ ಬಲ್ಲ. ಇಂಥಾ ಮನುಷ್ಯನಿಗೆ ಆಯುಸ್ಸು ನೂರು ವಸಂತಗಳು ಎಂಬುದೊಂದು ಸಾಮಾನ್ಯ ತಿಳುವಳಿಕೆ. ಅದರ ಘಟ್ಟಗಳು, ಮಜಲುಗಳು, ಅನುಭವಗಳು ಇವೆಲ್ಲವನ್ನೂ ಬಹುಶಃ ಹೀಗೆ ವಿಂಗಡಿಸಬಹುದೇನೋ.

**ಬಾಲ್ಯದಲಿ ಕನಸುರಹಿತ ಮನಸು**
**ಸುಲಭದಾಟಪಾಠಗಳೇ ಅದರ ತಿನಿಸು**
**ಕಲರವದ ಕೇಳಿಯಲಿ**
**ಕಳೆಯುವುದು ದಿವಸ**
**ಕೆಲವು ವಸಂತಗಳು ಉರುಳೆ -**
**ಕಾಣುವುದು ಬದುಕಿನಾ ರಭಸ (ಲಂಚಾವತಾರಿ)**




**95.** *ಶೃಂಗೇರಿ ಜಗದ್ಗುರು ಪೂಜ್ಯ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳಿಂದ ಪ್ರಸಾದ ವಿತರಣೆ*



***97.** ಬೆಂಗಳೂರಿನಲ್ಲಿ ಶ್ರೀ ಶಾರದಾ ರಥೋತ್ಸವಕ್ಕೆ ಮತ್ತೆ ಚಾಲನೆ : ಶೃಂಗೇರಿ ಜಗದ್ಗುರುಗಳಾಗಿದ್ದ ಪೂಜ್ಯ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರ ಆದೇಶ : ೨೦ ವರ್ಷಗಳಿಂದ ನಿರಂತರ ಆಚರಣೆ*

ಎಂಬಂತೆ ಹುಟ್ಟಿದ ನಾಲ್ಕೈದು ವರ್ಷ ದೈವರೂಪಿಯಾದ ಮನುಷ್ಯ, ಬಹುಬೇಗ ಆಟಪಾಠಗಳ ಗಡಿ ದಾಟಿ, ಸಾಗರದ ಹೆಣ್ಣಲೆಯ ಹಿಂದೆ ಗಂಡಲೆಯು ಭೋರ್ಗರೆಯುತ್ತಾ ಬರುವಂತೆ, ಬದುಕಿನ ಬಹುಮುಖದ ಜವಾಬ್ದಾರಿಗೆ ಎದುರಾಗುವನು. ಸೃಷ್ಟಿಕರ್ತನ ಚಮತ್ಕಾರ ಅರಿವಾಗುವುದು ಆಗಲೇ. ಕತ್ತಲೆಯ ಕಂಡರೆ ಅಂಜುವವನಿಗೆ ಭವಿಷ್ಯದ ಕಗ್ಗತ್ತಲೆಯಲ್ಲಿ ದಾಪುಗಾಲು ಹಾಕುವ ಧೈರ್ಯ, ಅಕ್ಕಪಕ್ಕದಲ್ಲಿ ಸಣ್ಣ ಪುಟ್ಟ ಸದ್ದು ಸಪ್ಪಳಗಳಿಗೆ ಅಂಜಿ ಅಳುಕುವಾತನಿಗೆ ಮುಂಬರುವ ಅಬ್ಬರದ ಲೋಕಾಪವಾದಗಳಿಗೆ ಕಿವಿಯೊಡ್ಡಿ ನಿಂತು ಧ್ವನಿಯೇರಿಸಿ ಗುಡುಗುವ ಸಾಮರ್ಥ್ಯ, ಏಕಾಂತವ ನೆನೆದರೇ ನಡುಗುವಾತನಿಗೆ ನಾಳಿನ ಏಕತೆ-ಏಕಾಗ್ರತೆಗಳಿಗೆ ಮನಸ್ಸಿತ್ತು ಮೆಟ್ಟಿ ನಿಲ್ಲುವ ಎದೆಗಾರಿಕೆ - ಇವೆಲ್ಲವೂ ಮನುಷ್ಯನಿಗೆ ಇದ್ದಕ್ಕಿದ್ದಂತೆ ಎದ್ದು ಮೂಡುವುದು ದೈವಚಿತ್ತ - ದೈವದತ್ತವಲ್ಲದೆ ಮತ್ತೇನು ಹೇಳಿ?



***96.** ಬಿ.ಎನ್.ವಿ. ಷಷ್ಟ್ಯಬ್ದ ಪೂರ್ತಿ ಸಮಾರಂಭ:*
*ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರಿಗೆ ಸಂಮಾನ*

ಮುಂದೆ ಯೌವನ, ಕೌಟುಂಬಿಕಗಳ ಮಜಲು - ಜವಾಬ್ದಾರಿ ಜಂಜಾಟಗಳ ಗೋಜಲು ಆರಂಭ. ಆಗ....

*ಕಳೆಯುವುದು ಕೆಲವು ದಶಕಗಳು*
*ಪೂರ್ಣಾಯುಸ್ಸಿನಲಿ*
*ಉಳಿಯುವುದು ಎಷ್ಟೆಂದು ತಿಳಿಯಲಾಗದು*
*ಭವಿಷ್ಯದಲಿ*
*ಸೆಳೆಯಲಾರಂಭಿಸುವುದು ಕಾಮ-ಕಾಮನೆಗಳು ಪ್ರತಿ*
*ನಿಮಿಷದಲಿ*
*ಮುಳುಗುವನು ಮುಂಬರುವ ಮುಪ್ಪು ಮೌನಗಳ*
*ಪ್ರತಿಧ್ವನಿಯಲಿ (ಲಂಚಾವತಾರಿ)*

ಹೀಗೆ ಬಾಲ್ಯದ ಗಡಿ ದಾಟಿ, ಯೌವನದ ಮೃದು ಮಧುರ ಹೊರೆ ಮೀಟಿ, ಮುಟ್ಟುವನು ಅರುವತ್ತರ ಆಚೆಯ ಅಂಗಳವನ್ನು. ಅಲ್ಲಿಯ ಒಂಟಿತನವನ್ನು

ತಾಳಲಾರದೆ, ನೆನಪಿನ ಜಂಟಿಹಾಕಿ, ಅದನ್ನು ಹಸಿರಾಗಿಸಿಕೊಳ್ಳುವ ಹೋರಾಟ ಆರಂಭಿಸುವನು. *ಈ* ಘಟ್ಟದಲ್ಲೇ, ಬಾಳಸಂಜೆಯ ಮೈದಾನ ಹಸಿರ ಹುಲ್ಲುಗಾವಲೋ ಇಲ್ಲಾ ದಹಿಸಿಹಾಕುವ ಮರಳುಗಾಡೋ ಆಗುವ ಸುಸಂಧಿ. ಆಗ ಯಾವುದನ್ನು ಸಾಧಿಸಿಕೊಳ್ಳಬೇಕಾದರೂ, ಅವನ ಯತ್ನಕ್ಕೆ ಮೂಲಭೂತವಾದದ್ದೇ ಅವನ ಭೂತ ಕಾಲದ ಬದುಕು, ಘಟನೆಗಳು, ಅದರ ನೆನಪುಗಳು. ಅವು ಸಾರ್ಥಕಸ್ವರೂಪದ್ದಾಗಿದ್ದರೆ, ಮುಪ್ಪಿನ ಆಗಸವೆಲ್ಲಾ ಆನಂದದ ಬೆಳುದಿಂಗಳು. ಅವೇನಾದರೂ ನಿರರ್ಥಕ ಘೋರರೂಪದ್ದಾಗಿದ್ದರೆ, ಮುಪ್ಪಿನಂಗಳ ಚೈತ್ರ-ವೈಶಾಖದ ಅಪರಾಹ್ನದ ಬಿಸಿಲಬೇಗೆ. ಇದರ ಅರಿವು - ಪ್ರಜ್ಞೆಯನ್ನು, ಅಧ್ಯಯನದಿಂದಲೋ, ಇಲ್ಲಾ ಅಪರೋಕ್ಷ ಸಂಸ್ಕಾರ ಪ್ರೇರಣೆಯಿಂದಲೋ ಮೂಡಿಸಿಕೊಂಡವರೇ, ತಮ್ಮ ಬದುಕನ್ನು ಸಕಾಲದಲ್ಲಿ ಸಾರ್ಥಕತೆಯತ್ತ ನುಗ್ಗಿಸಿ, ನಡೆಸಿ, ಆಯುಸ್ಸಿನ ಪ್ರತಿಕ್ಷಣವನ್ನೂ, ಅನುಗಾಲವೂ ಆತ್ಮಸಂತೋಷಕ್ಕೂ, ಸಾರ್ಥಕ ಬದುಕಿಗೂ ಸಮರ್ಪಣೆ ಮಾಡಿಕೊಳ್ಳಬಲ್ಲರು. ಅಂಥವರೇ ಆ ಇಳಿವಯಸ್ಸಿನ ಮನಶ್ರುತಿಗೆ ತನುಶ್ರುತಿಯನ್ನು ಸೇರಿಸಿ ಹೀಗೆ ಹಾಡಬಲ್ಲರೇನೋ...

**ಕ್ಷಣಿಕ ಸಂಕೋಲೆ ಬಿಗಿದಿತ್ತು ಇಪ್ಪತ್ತೈದರಲಿ**
**ಕಣ್ಸೆಳೆವ ರಜತ ಸಂಕೋಲೆಯಾಯ್ತು ಐವತ್ತರಲಿ**
**ಸ್ವರ್ಣ ಸಂಕೋಲೆ ಸುತ್ತಿಹುದು ಈ ಎಪ್ಪತ್ತೈದರಲಿ**
**ಪೂರ್ಣಾನಂದವನು ಪಡೆದು ನುಡಿಯಲೆಳೆಸುವನು ಶತಮಾನದಲಿ**
**||ಲಂಚಾವತಾರಿ||**

ಅಂತಹ ವ್ಯಕ್ತಿಗಳೇ ಇದ್ದಾಗಲೂ ಉಳಿದಿದ್ದು, ಅಳಿದ ಮೇಲೂ ಉಳಿಯುವ ಸೌಭಾಗ್ಯಶಾಲಿಗಳು. ಇದನ್ನೆಲ್ಲಾ ಒಟ್ಟಾಗಿಸಿ ಹೇಳಬೇಕೆಂದರೆ, ಮಾನವಜನ್ಮವೇ ಅತ್ಯಂತ ಶ್ರೇಷ್ಠವಾದದ್ದು. ಅದಕ್ಕಾಗಿಯೇ ನಾವು ಜೀವನವನ್ನು ಪ್ರೀತಿಸಬೇಕು, ಜೀವವನ್ನು ಗೌರವಿಸಬೇಕು. ಅದೇ ನೈಜ ದೈವಾರಾಧನೆ. ಇಂತಹ ಪವಿತ್ರ ಜೀವನ, ಯಾರಿಗಾಗಿಯೋ ಆಡುವ ನಾಟಕವಾಗಬಾರದು. ಇದನ್ನು ತಿಳಿದಂಥವರು ಬಹಳ ವಿರಳವಾಗುತ್ತಿದ್ದಾರೇನೋ ಎಂಬ ಸಂಶಯ ಇಂದಿನ ಸಮಾಜವನ್ನು ಕಂಡಾಗ ಹುಟ್ಟುವುದು ಸಹಜ. ಜತೆಗೆ ಅಲ್ಲಲ್ಲಿ ಆಗಾಗ ಕಾಣುತ್ತಿರುವ ಅಂಥವರುಗಳೂ, ಕಳೆದು ಹೋಗಿಬಿಡುವರೇನೋ ಎಂಬ ಭಯ. ಹಾಗಾಗಲಾರದೆಂಬ ಭರವಸೆ ಮೂಡಿ ಬರುವುದು ನಮ್ಮ - ಸನ್ಮಾನ್ಯ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರನ್ನು ಕಂಡಾಗ. ಅವರೊಂದು ಬಗೆಯ ಮಾನವ



*98. ಶ್ರೀ ಶಾರದಾ ರಥೋತ್ಸವ : ಬಿ.ಎನ್.ವಿ. ಅವರಿಂದ ನಿವೇದನೆ*

ಸ್ಪರ್ಶಮಣಿ ಇದ್ದಂತೆ. ಅವರ ಕಕ್ಷೆಯೊಳಗೆ ಬಂದವರನ್ನೆಲ್ಲಾ ಅವರಂತೆಯೇ ಮಾಡಿಬಿಡುವ ಶಕ್ತಿ ಅವರಲ್ಲಿ ಇದೆ. ಆದರ್ಶಗಳನ್ನು ಅನುಷ್ಠಾನಗೊಳಿಸಲು, ಅವಕಾಶ ಹಾಗೂ ಅದೃಷ್ಟಗಳಿಗೆ ಕಾಯುವುದಲ್ಲ, ಬದಲಿಗೆ ಅವರೆಡನ್ನೂ ಎಳೆದು ಕೂಡಿಸಿಕೊಂಡು ತೊಡಗಿಸಿಕೊಳ್ಳುವುದರಲ್ಲೇ, ಮನುಷ್ಯನ ಷಡ್ಯತ್ನಗಳೂ, ಷಡ್ಯಂತ್ರಗಳೂ ಅಡಗಿರುವುದು ಎಂದು ನಂಬಿ ನಡೆಯುವವರು ಅವರು. **ಕ್ರಿಯಾಸಿದ್ಧಿಸ್ಸತ್ತ್ವೇ ಭವತಿ ಮಹತಾಂ ನೋಪಕರಣೇ** ಎಂಬ ಕವಿವಾಣಿಯ ಅಭಿವ್ಯಕ್ತಿ ಅವರು.

ಅಂಥವರ ಸಂಗ, ಸಾಮೀಪ್ಯಗಳು, **ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ** ಎಂಬ ಸರ್ವಜ್ಞನ ವಾಣಿಗೆ ಸಾಕ್ಷಿ. ಅವರು ಶತಾಯುಗಳಾಗಿ, ನಮ್ಮನ್ನೂ ಅವರೊಂದಿಗೆ ನಡೆಸಿಕೊಂಡು ಹೋಗುವಂತೆ ಶ್ರೀಮಾತಾಳಲ್ಲಿ ಬೇಡೋಣ. ಶುಭಮಸ್ತು. ಶ್ರೇಯೋಽಸ್ತು.

# ೯. ಸಂಸ್ಕೃತ ಸಂವರ್ಧನೆಗೆ ಶ್ರೀ ಸುಬ್ರಹ್ಮಣ್ಯರ ಕೊಡುಗೆ

*ಡಾ. ಬಿ.ಎಸ್. ರಾಮಕೃಷ್ಣ ರಾವ್*

ವಿಶ್ವದ ಅತಿ ಪ್ರಾಚೀನವೂ ಅತ್ಯಂತ ಸಮೃದ್ಧವೂ ಆದ ಭಾಷೆ ಸಂಸ್ಕೃತ. ಭಾರತ ದೇಶದ ಆತ್ಮವಾದ *ಈ* ಭಾಷೆಯು ದೇವಭಾಷೆಯೆಂದೇ ಪ್ರಸಿದ್ಧವಿದೆ. ಕಳೆದ ಅನೇಕ ಸಹಸ್ರಮಾನಗಳಲ್ಲಿ ಇದು ಮಾನವ ಜನಾಂಗದ ಮೇಲೆ ಬೀರಿರುವ ಪ್ರಭಾವವು ಊಹಾತೀತ. ಭಾರತೀಯರಿಗಂತೂ ಇದು ಇಲ್ಲದಿದ್ದರೆ ತಮ್ಮತನವೇ ಸಿದ್ಧಿಸುವುದಿಲ್ಲ. ನಮ್ಮನ್ನು ಭಾರತೀಯರನ್ನಾಗಿಸಿರುವುದೇ ಸಂಸ್ಕೃತ. ಭಾರತದ ಕಲ್ಪನೆಯನ್ನು ತಂದುಕೊಟ್ಟಿರುವುದೂ ಇದರ ಏಕತೆ-ಅಖಂಡತೆ-ಸಮಗ್ರತೆಗಳನ್ನು ಸೃಷ್ಟಿಸಿರುವುದೂ, ಸಂರಕ್ಷಿಸಿರುವುದೂ, ಸಂವರ್ಧನೆಗೊಳಿಸಿರುವುದೂ ಸಂಸ್ಕೃತವೇ. ನಮ್ಮ ಧರ್ಮ, ಸಾಹಿತ್ಯ, ಸಂಸ್ಕೃತಿ, ಜ್ಞಾನ - ವಿಜ್ಞಾನಗಳೆಲ್ಲ ಅಭಿವ್ಯಕ್ತವಾಗಿರುವುದೂ, ಉಳಿದಿರುವುದೂ ಸಂಸ್ಕೃತದಲ್ಲಿ.

ವೇದಕಾಲದಿಂದ ಆರಂಭಿಸಿ ಇಂದಿನವರೆಗೂ ಅನುಸ್ಯೂತವಾಗಿ ಮುಂದುವರೆದುಕೊಂಡು ಬಂದಿರುವುದೂ, ತನ್ನ ಉಪಯುಕ್ತತೆಯನ್ನು ಉಳಿಸಿಕೊಂಡು ಬಂದಿರುವುದೂ, ಭೂತ ಭವಿಷ್ಯಗಳ ಬೆಸುಗೆಯಾಗಿರುವುದೂ ಸಂಸ್ಕೃತವೇ. ಯಾವೊಂದು ಸೀಮಿತ ಪ್ರದೇಶದ ಆಡುಭಾಷೆಯ ಸ್ಥಾನವನ್ನು ಅಲಂಕರಿಸಿಲ್ಲದಿದ್ದರೂ ಸಮಸ್ತ ರಾಷ್ಟ್ರದ ಏಕೈಕ ಪಿತ್ರಾರ್ಜಿತ ಸಂಪತ್ತಾಗಿ ಗೌರವವನ್ನು ಪಡೆದಿರುವುದು ಇದರ ಹೆಗ್ಗಳಿಕೆ. ತಾಯಿನುಡಿಯಾಗಿ ನಲಿಯದೇ ನೂರಾರು ವರ್ಷಗಳು ಸಂದಿದ್ದರೂ ಶಿಷ್ಟರೆಲ್ಲರ ಸಂಪರ್ಕ ಭಾಷೆಯಾಗಿ, ಧಾರ್ಮಿಕ ಭಾಷೆಯಾಗಿ, ಭಾಷೆಗಳ ಮಾತೆಯಾಗಿ ನಮ್ಮ 'ಅಸ್ಮಿತೆಗೆ ಕನ್ನಡಿ'ಯಾಗಿ ಸಂಸ್ಕೃತವು ವಿಜೃಂಭಿಸುತ್ತಿದೆ.

ಕಳೆದ ಒಂದು ಸಾವಿರ ವರ್ಷಗಳಲ್ಲಿ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕಾರಣಗಳಿಂದಾಗಿ ಅನೇಕ ಸ್ಥಿತ್ಯಂತರಗಳನ್ನು ಪಡೆದ ಸಂಸ್ಕೃತವು, ಸುಮಾರು ಎರಡು ಶತಮಾನಗಳ ಹಿಂದೆ ಬ್ರಿಟಿಷರು ಬಂದು ಸ್ಥಾನಪಲ್ಲಟ ಮಾಡಿ ಇಂಗ್ಲಿಷನ್ನು ನೆಲೆಗೊಳಿಸುವವರೆಗೆ, ಸಾರ್ವಭೌಮ ಸ್ಥಾನವನ್ನು ಅಲಂಕರಿಸಿತ್ತು. ರಾಜ-ಮಹಾರಾಜರು, ಮಠ-ಮಂದಿರಗಳು, ವಿದ್ಯಾವಂತರು, ಸ್ಥಿತಿವಂತರೆಲ್ಲ ಸಂಸ್ಕೃತವನ್ನು ಪೋಷಿಸುತ್ತಲೇ ಬಂದ ಕಾರಣ ಸಂಸ್ಕೃತವು ಸ್ಥಾನಭ್ರಷ್ಟವಾದರೂ ಸಾವನ್ನಪ್ಪಲಿಲ್ಲ. ಸ್ವಾತಂತ್ರ್ಯ ಸಮರದ ಸಂದರ್ಭದಲ್ಲಿ ಸಂಸ್ಕೃತ ಸಾಹಿತ್ಯವು ಸ್ಫೂರ್ತಿ ಪ್ರೇರಣೆಗಳನ್ನೊದಗಿಸಿತು. ಸ್ವಾತಂತ್ರ್ಯ ದೊರೆತ ಮೇಲೆ ಮಾತ್ರ ಸಂಸ್ಕೃತವು ಮೂಲೆ ಗುಂಪಾಯಿತು. ಪ್ರಾದೇಶಿಕತೆಯ ಭಾವನೆಯು ಹೆಚ್ಚಿದುದರ ಪರಿಣಾಮವಾಗಿ ಹಾಗೂ ನಮ್ಮ ರಾಜಕೀಯ ನೇತಾರರು ಸಂಸ್ಕೃತದ ಅಗತ್ಯ ಮಹತ್ತ್ವಗಳನ್ನು ಅರಿಯದ ಕಾರಣ ಸಂಸ್ಕೃತ ಶಿಕ್ಷಣವು ಕ್ಷೀಣಿಸಿತು. ದೇಶವು ಸೊರಗಿತು. ಛಿದ್ರವೂ ಆಯಿತು. ವಿದೇಶೀಯರ ಆಕ್ರಮಣ ಆಳ್ವಿಕೆಗಳ ಕಾಲದಲ್ಲೂ ಸಂಸ್ಕೃತಕ್ಕೆ *ಈ* ದುರವಸ್ಥೆ ಉಂಟಾಗಿರಲಿಲ್ಲ.

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕರ ಸಂಸ್ಕೃತ ಪ್ರೀತಿಯು ಎಳ್ಳಷ್ಟೂ ಕುಂದಿಲ್ಲವಾದರೂ ಕಳೆದ ಕಾಲು ಶತಮಾನದಿಂದ ಸರಕಾರವು ಕೈಗೊಂಡ ಅನೇಕ 'ಸುಧಾರಣಾ' ಕಾರ್ಯಕ್ರಮಗಳು ಸಂಸ್ಕೃತಕ್ಕೆ ಸಂಚಕಾರ



***99.** ಪೂಜ್ಯ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಶ್ರೀಪಾದರಿಂದ ಬಿ.ಎನ್.ವಿ. ಅವರಿಗೆ ಸಂಮಾನ*

ತಂದಿವೆ. ಕನ್ನಡಕ್ಕೆ, ಕನ್ನಡಿಗರಿಗೆ ಸಂಸ್ಕೃತದ ಉಪಯೋಗ, ಆವಶ್ಯಕತೆಗಳನ್ನು ಅರಿಯದ ಅಧಿಕಾರಿಗಳೂ ಮತ್ತು ಒಂದು ಸೀಮಿತ ಪ್ರಮಾಣದಲ್ಲಿ ಸಂಸ್ಕೃತ ಕಲಿತವರೂ, ಕಲಿಸುತ್ತಿರುವವರೂ ಸಂಸ್ಕೃತದ ದುರ್ದಶೆಗೆ ಕಾರಣಕರ್ತರಾಗುತ್ತಿರುವುದು ಶೋಚನೀಯವಾದರೂ ಸತ್ಯಸಂಗತಿ.



*100. ಜ್ಯೋತಿ ಇಂಡಸ್ಟ್ರೀಸ್ ಉದ್ಘಾಟನೆ; ಎಡನೀರು ಮಠಾಧೀಶರಾದ ಪೂಜ್ಯಶ್ರೀ ಕೇಶವಾನಂದ ಭಾರತೀ ಸ್ವಾಮೀಜಿಯೊಂದಿಗೆ ಮಂತ್ರಾಲೋಚನೆಯಲ್ಲಿ ಬಿ.ಎನ್.ವಿ. ಜತೆಗೆ ಮಗಳು ಜ್ಯೋತಿ*

ಇಂತಹ ಸಂದರ್ಭದಲ್ಲಿ ಸಂಸ್ಕೃತ ಪ್ರಚಾರ ಪ್ರಸಾರಗಳ ಅಗತ್ಯಗಳನ್ನು ಮನಗಂಡ ಶೃಂಗೇರಿ ಮಠದ ಪೀಠಾಧಿಪತಿಗಳಾಗಿದ್ದು ಮುಕ್ತರಾಗಿರುವ, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು - ಇನ್ನಿತರ ಅನೇಕ ಉಪಯುಕ್ತ ಯೋಜನೆಗಳಂತೆಯೇ,ಶ್ರೀಸಾಮಾನ್ಯರಲ್ಲಿ ಸಂಸ್ಕೃತಾಭಿರುಚಿಯನ್ನು ಹುಟ್ಟಿಸುವ ಸಲುವಾಗಿ (ಸುಮಾರು ಮೂವ್ವತ್ತಮೂರು ವರ್ಷಗಳ ಹಿಂದೆ) **ಶ್ರೀ ಸುರಸರಸ್ವತೀ ಸಭಾ** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅಂದಿನಿಂದ *ಈ* ಸಂಸ್ಥೆಯು ವರ್ಷಕ್ಕೆ ಎರಡು ಬಾರಿಯಂತೆ ಐದು ಹಂತದ ಪರೀಕ್ಷೆಗಳನ್ನು ನಿಯತವಾಗಿ ನಡೆಸುತ್ತ ಬಂದಿದ್ದು ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ಸಂಸ್ಕೃತ ಪ್ರೀತಿಯನ್ನು ಬಿತ್ತಿದೆ, ಬೆಳೆಸಿದೆ.

ಹಿಂದೆ *ಈ* ಸಂಸ್ಥೆಗೆ ಅಧ್ಯಕ್ಷರಾಗಿ ಇಬ್ಬರು ಮಹನೀಯರು - ನ್ಯಾಯಮೂರ್ತಿ ಶ್ರೀ ಕೆ.ಆರ್. ಗೋಪೀವಲ್ಲಭ ಅಯ್ಯಂಗಾರ್ ಹಾಗೂ ನ್ಯಾಯವಾದಿ ಶ್ರೀ ಎಸ್.ಜಿ. ಸುಂದರಸ್ವಾಮಿಯವರು ಎರಡು ದಶಕಗಳವರೆಗೆ ಸೇವೆ ಸಲ್ಲಿಸಿದರು. ಮೂರನೆಯ ಅಧ್ಯಕ್ಷರಾಗಿ ಹತ್ತಾರು ವರ್ಷಗಳಿಂದ ಸದ್ದುಗದ್ದಲವಿಲ್ಲದೆ ಸ್ತುತ್ಯ ಸೇವೆಯನ್ನು ಸಲ್ಲಿಸುತ್ತಿರುವವರು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು. ಇವರ ಕಾಲದಲ್ಲಿ ಸಾರ್ವಜನಿಕ ಸಂಸ್ಕೃತ ಶಿಕ್ಷಣಕ್ಕೆ ಹೆಚ್ಚಿನ ಆಘಾತಗಳುಂಟಾದರೂ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಆಶೀರ್ವಾದ ಅನುಗ್ರಹಗಳ ಶ್ರೀರಕ್ಷೆ, ಶೃಂಗೇರಿ ಮಠದ ಮಾನ್ಯ ಆಡಳಿತಾಧಿಕಾರಿಗಳಾಗಿರುವ ಗುರುಸೇವಾಧುರೀಣ ಶ್ರೀ ವಿ.ಆರ್. ಗೌರೀಶಂಕರ್ ಅವರ ಬೆಂಬಲ ಹಾಗೂ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಒತ್ತಾಸೆಯಿಂದಾಗಿ ಶ್ರೀಸುರಸರಸ್ವತೀ ಸಭೆಯು ಅಭೂತಪೂರ್ವ ಯಶಸ್ಸನ್ನು ಗಳಿಸುತ್ತಿದೆ.

ಸಂಸ್ಕೃತದಲ್ಲಿ **ಪ್ರದಾನಂ ಪ್ರಚ್ಛನ್ನಂ, ಪ್ರಿಯಂ ಕೃತ್ವಾ ಮೌನಮ್** ಎಂಬೆಲ್ಲ ಮಾತುಗಳಿವೆ. **'ದಾನ ಮಾಡಬೇಕು, ಆದರೆ ಗುಟ್ಟಾಗಿ'. 'ಹಿತವನ್ನು ಉಂಟುಮಾಡಬೇಕು, ಆದರೆ ಮಾತನಾಡದೇ'** ಎಂಬುದು *ಈ* ಮಾತುಗಳ ಅರ್ಥ. ಕಳೆದ ಇಪ್ಪತ್ತು ವರ್ಷಗಳಿಂದ ನಾನು ಕಂಡಿರುವ ಶ್ರೀ ಬಿ.ಎನ್.ವಿ.ಯವರ ಸಂಸ್ಕೃತ ಸೇವೆಯು *ಈ* ತೆರನಾದದ್ದು. ವೇದ ಸಂಸ್ಕೃತಗಳಿಗಾಗಿ ಅವರು ಅಪಾರವಾಗಿ ದಾನ ಮಾಡಿದ್ದಾರೆ. ದಾನ ಮಾಡಿದ್ದರ ಬಗ್ಗೆ ಮೌನ ವಹಿಸಿದ್ದಾರೆ.

ನನಗೆ ಬಿ.ಎನ್.ವಿ. ಅವರ ಪರಿಚಯವಾಗಿದ್ದೇ ಸಂಸ್ಕೃತದ ಮೂಲಕ. ಅವರ ಮಗಳು ಚಿ. ಬಿ.ವಿ.ಜ್ಯೋತಿಯು ಪ್ರಥಮ ಪಿಯುಸಿ.ಯ ವಿದ್ಯಾರ್ಥಿನಿಯಾಗಿ ನ್ಯಾಷನಲ್ ಕಾಲೇಜಿನಲ್ಲಿ ಕೆಲವು ದಿನ ನನ್ನ ಶಿಷ್ಯೆಯಾಗಿದ್ದರೂ ಆಗ ಆ ಕಾರಣದಿಂದೇನೂ ಇವರು ನನಗೆ ಅಷ್ಟು ಹತ್ತಿರದವರಾಗಿರಲಿಲ್ಲ. ಆದರೆ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ತಿನ ಬೆಂಗಳೂರು ಶಾಖೆಯ ಆಶ್ರಯದಲ್ಲಿ ಪ್ರತಿವರ್ಷ ಸಂಸ್ಕೃತೋತ್ಸವದಂದು ಹೊರತರುತ್ತಿದ್ದ **ಶ್ರಾವಣ ಪೂರ್ಣಿಮೆ** ಎಂಬ ಸ್ಮರಣ ಸಂಚಿಕೆಗೆ ಜಾಹಿರಾತು ಕೇಳಲು ಹೋದಾಗ ಯಾವುದೇ ತಕರಾರು ಮಾಡದೇ ಜ್ಯೋತಿ ಇಂಡಸ್ಟ್ರೀಸ್‌ನ ಒಂದು ಪುಟದ ಜಾಹಿರಾತನ್ನು ಇವರು ಆ ಕೂಡಲೇ ಕೊಟ್ಟು ಬಿಡುತ್ತಿದ್ದರು. ಹೀಗೆ ಹತ್ತಾರು ವರ್ಷ ನಾನು *ಈ* **ವಾರ್ಷಿಕಭಿಕ್ಷೆ**ಯನ್ನು ಸಂಸ್ಕೃತಕ್ಕಾಗಿ




*101. ರಾಜ್ಯೋತ್ಸವ ಪ್ರಶಸ್ತಿ ಸಂದಾಗ ಅಖಿಲ ಕರ್ನಾಟಕ ಬ್ರಾಹ್ಮಣಮಹಾಸಭಾದ ಅಧ್ಯಕ್ಷ ಬಿ.ಎನ್.ವಿ. ಅವರಿಗೆ ಸಂಮಾನ : 'ವಿಪ್ರಭಾಸ್ಕರ' ಬಿರುದಿನ ಕಾಣಿಕೆ ಶ್ರೀ ಆರ್. ಗುಂಡೂರಾವ್ ಅವರಿಂದ (೨.೨.೧೯೯೨)*

ಸಾಮಾಜಿಕ ಸೇವೆಯು ಅನ್ಯಾದೃಶವಾದುದು.

ಶ್ರೀಸುರಸರಸ್ವತೀ ಸಭೆಯ ಅಧ್ಯಕ್ಷರಾಗಿ ಅವರ ಸಂಸ್ಕೃತ ಕಳಕಳಿಯು ಎಷ್ಟೆಂಬುದು ಕಾರ್ಯದರ್ಶಿಯಾದ ಮೇಲೆ ನನಗೆ ಹೆಚ್ಚಾಗಿ ಮನವರಿಕೆಯಾಯಿತು. ಎಲ್ಲ ಸಭೆಗಳಲ್ಲೂ ಅವರು ಯಾವಾಗಲೂ ಹೇಳುವುದು ಏನೆಂದರೆ, 'ವಿದ್ಯಾರ್ಥಿಗಳಿಗೆ ಹೆಚ್ಚಿನ ಹೊರೆಯಾಗಬಾರದು. ಅವರಿಗೆ ಇನ್ನೂ ಹೆಚ್ಚು ಪದಕ-ಬಹುಮಾನಗಳನ್ನು ನೀಡಬೇಕು. ಅಧ್ಯಾಪಕರೆಲ್ಲ ಒಟ್ಟು ಸೇರಿ ಸಂಸ್ಕೃತವನ್ನು ಇನ್ನಷ್ಟು ಬೆಳಸಬೇಕು.' ಸಂಸ್ಕೃತ ಅಧ್ಯಾಪಕರನ್ನೆಲ್ಲ ನಾನು ಎರಡು ಮೂರು ಬಾರಿ ಸೇರಿಸಿದೆ. ಅವರಿಗೆ ಕಾಫಿ, ತಿಂಡಿ, ಊಟದ ಖರ್ಚನ್ನೆಲ್ಲ ಭರಿಸಿದವರು ಶ್ರೀ ಬಿ.ಎನ್.ವಿ. ಅವರೇ. 'ಇದೇಕೆ ಸ್ವಂತ ದುಡ್ಡು ಖರ್ಚು ಇವರಿಂದ ಪಡೆದುಕೊಂಡಿದ್ದೇನೆ. ಸಂಸ್ಕೃತ ಪರಿಷತ್ತು, ವಿಶ್ವಸಂಸ್ಕೃತ ಪ್ರತಿಷ್ಠಾನಗಳಿಗೆ ಮಾತ್ರವಲ್ಲದೇ ಇನ್ನೂ ಇಂತಹ ಅನೇಕ ಸಂಘಸಂಸ್ಥೆಗಳಿಗೆ ಶ್ರೀಯುತ ಸುಬ್ರಹ್ಮಣ್ಯ ಅವರು ನಾನಾ ರೀತಿಯ ಸಹಾಯ ಮಾಡಿದ್ದಾರೆ. ನಮ್ಮ ಕಾರ್ಯಕ್ರಮಗಳಿಗೆ ತಮ್ಮ ಪಾಠಶಾಲೆಯ ವಿದ್ಯಾರ್ಥಿಗಳನ್ನು ಸದಾ ತಮ್ಮ ಖರ್ಚಿನಲ್ಲಿ ವೇದಘೋಷಕ್ಕೆ, ಸಾಹಿತ್ಯ ಸ್ಪರ್ಧೆಗಳಿಗೆ ಹಾಗೂ ಸಂಸ್ಕೃತ ಪರೀಕ್ಷೆಗಳಿಗೆ ಕೂಡ ಕಳುಹಿಸಿಕೊಟ್ಟಿದ್ದಾರೆ.

ಸಂಸ್ಕೃತಸಂಬಂಧ ಗ್ರಂಥಗಳ ಪ್ರಕಟಣೆಗೆ ಇವರು ಆರ್ಥಿಕ ಸಹಾಯವನ್ನು ನೀಡಿದ್ದಾರೆ. ಸಂಸ್ಕೃತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಬಹುಮಾನಕ್ಕೆಂದು ದತ್ತಿಹಣ ನೀಡಿದ್ದಾರೆ. ವೇದ ಸಂಸ್ಕೃತಗಳಿಗೆ ಇವರು ಮಾಡಿರುವ ಉಪಕಾರ ಅಷ್ಟಿಷ್ಟಲ್ಲ (ವೇದದ ಬಗ್ಗೆ ಪ್ರತ್ಯೇಕ ಲೇಖನವಿರುವ ಕಾರಣ ನಾನು ಅದನ್ನು ಇಲ್ಲಿ ವಿಸ್ತರಿಸುತ್ತಿಲ್ಲ). ಜ್ಯೋತಿ ಕೇಂದ್ರೀಯ ವಿದ್ಯಾಲಯದಲ್ಲಿ ಸಂಸ್ಕೃತ ಶಿಕ್ಷಣಕ್ಕೆ ಆದ್ಯತೆ ನೀಡಿದ್ದಾರೆ. ಅಲ್ಲಿನ ಮತ್ತು ಶ್ರೀಮಲ್ಲಿಕಾರ್ಜುನ ವೇದ ಸಂಸ್ಕೃತ ಪಾಠಶಾಲೆಯ ಗ್ರಂಥಾಲಯದ ಅಭಿವೃದ್ಧಿಗೆ ಅಪಾರ ಹಣವನ್ನು ವ್ಯಯ ಮಾಡಿದ್ದಾರೆ. ಹಲವು ಸ್ಪರ್ಧೆಗಳನ್ನೂ, ಸಭೆ ಸಮಾರಂಭಗಳನ್ನೂ ಏರ್ಪಡಿಸಿದ್ದಾರೆ. ತಾವು ದಾನ ಅಥವಾ ಕೊಡುಗೆ ನೀಡಲು ಸಾಧ್ಯವಿರುವಲ್ಲಿ ಮಾತ್ರ ಇವರು ಪಾಲ್ಗೊಳ್ಳುತ್ತಾರೆ. ಇಂತಹ



*102. ಜ್ಯೋತಿ ಇಂಡಸ್ಟ್ರೀಸ್ ಉದ್ಘಾಟನೆ : ಚಂಡೀಹೋಮದ ಅಂಗವಾಗಿ ಬಿ.ಎನ್.ವಿ. ದಂಪತಿಗಳಿಂದ ಕುಮಾರೀ ಪೂಜಾ : ವೇ. ಬ್ರ. ಶ್ರೀ ಶ್ರೀಕಂಠಕುಮಾರಸ್ವಾಮಿ ಅವರ ಪೌರೋಹಿತ್ಯ*

ಮಾಡಿದಿರಿ' ಎಂದರೆ 'ಸಭೆಯಲ್ಲಿ ಹೆಚ್ಚಿನ ಹಣವಿಲ್ಲ. ನಾಲ್ಕಾರು (ವಾಸ್ತವವಾಗಿ ಇದು ನೂರಾರು) ಸಂಸ್ಕೃತ ವಿದ್ವಾಂಸರಿಗೆ ಒಮ್ಮೆ ಊಟ ಹಾಕಿದರೆ ಅದೊಂದು ಪುಣ್ಯದ ಕೆಲಸ. ಅದಕ್ಕೆಲ್ಲ ನೀವು ಯೋಚನೆ ಮಾಡಬೇಡಿ' ಎಂದುಬಿಡುತ್ತಾರೆ. ಹೀಗೆ ವೇದ ಸಂಸ್ಕೃತ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ, ಗ್ರಂಥ ಪ್ರಕಟಣೆಗೆ ಹಾಗೂ ಶಿಕ್ಷಣಕ್ಕೆ ಶ್ರೀ ಸುಬ್ರಹ್ಮಣ್ಯ ಅವರು ಗಮನಾರ್ಹ ಕೊಡುಗೆ ನೀಡಿದ್ದಾರೆ. ಸಂಕ್ಷೇಪವಾಗಿ ಹೇಳಬಹುದಾದರೆ ಆಗರ್ಭ ಶ್ರೀಮಂತರಲ್ಲದ ಶ್ರೀಸಾಮಾನ್ಯರೊಬ್ಬರು, ತಾವು ನಂಬಿದ ತತ್ತ್ವಕ್ಕಾಗಿ, ಆದರ್ಶಗಳಿಗಾಗಿ, ಬೆವರು ಸುರಿಸಿ ದುಡಿದ ಹಣವನ್ನು ಈ ಪ್ರಮಾಣದಲ್ಲಿ ಸಾರ್ವಜನಿಕರಿಗೆಂದು ಸದ್ವಿನಿಯೋಗ ಮಾಡಿರುವ, ಮಾಡುತ್ತಿರುವ ಇನ್ನೊಂದು ಜ್ವಲಂತ ಉದಾಹರಣೆಯನ್ನು ನಾನು ಸಾಕ್ಷಾತ್ಕರಿಸಿಕೊಂಡಿಲ್ಲ. ಶ್ರೀಯುತ ಸುಬ್ರಹ್ಮಣ್ಯ ದಂಪತಿಗಳಿಗೆ ಇನ್ನಷ್ಟು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು, ಭಗವಂತನು ಅವರ ಮೂಲಕ ಮತ್ತಷ್ಟು ಸಂಸ್ಕೃತ-ಸಂಸ್ಕೃತಿ ಸೇವೆಯು ನಡೆಯುವ ಅವಕಾಶವನ್ನು ಉಂಟು ಮಾಡಲಿ ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

**ವೇದ ಸಂಸ್ಕೃತ ಸೇವಾರ್ಥಂ ಸ್ವಕಂ ಸರ್ವಂ ಸಮರ್ಪಯನ್ |**
**ಸುಖಂ ಜೀಯಾತ್ ಶತಂ ಚೈತ್ರಾನ್ ಸುಬ್ರಹ್ಮಣ್ಯಶ್ಚ ಸೀತಯಾ ||**

## ೧೦. ಬೆ.ನಾ.ವೆಂ. ಸುಬ್ರಹ್ಮಣ್ಯ - ಜನಸೇವೆಯ ಆದರ್ಶ ವ್ಯಕ್ತಿತ್ವ

***ಧರ್ಮಭೂಷಣ ಕೋಟೇಶ್ವರ ಸೂರ್ಯನಾರಾಯಣರಾವ್***

ಭಾರತ ವರ್ಷದ ಯಾವುದೇ ಹೆದ್ದಾರಿಯಾಗಲಿ, ಸಾಮಾನ್ಯ ರಸ್ತೆಯಾಗಲಿ ಇಕ್ಕೆಲಗಳಲ್ಲಿ ಎಂತಹ ಕಡು ಬೇಸಿಗೆಯಲ್ಲಿಯೂ ತಂಪು ನೀಡುವ ಆಜಾನುಬಾಹು ಸಾಲುಮರಗಳು ಯಾವ ಸ್ವಾರ್ಥವಿಲ್ಲದೆ ನಿರಂತರ ಜನಸೇವೆಯನ್ನು ಮಾಡುತ್ತಾ ನಿಂತಿರುವುದನ್ನು ನೋಡಿದರೆ ಮರವಾಗಿ ಸರ್ವರಿಗೂ ನೆರಳು ನೀಡುವ ಬೆ.ನಾ.ವೆಂ. ಸುಬ್ರಹ್ಮಣ್ಯರವರ ವ್ಯಕ್ತಿತ್ವ ನೆನಪಿಗೆ ಬಾರದಿರದು.

'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬ ಸುಭಾಷಿತದ ಉಕ್ತಿಯನ್ನು ತಮ್ಮ ಜೀವನದುದ್ದಕ್ಕೂ ಪಾಲಿಸಿದ ಶ್ರೀಯುತರು ಅರುವತ್ತೊಂದನೆಯ ವರ್ಷಕ್ಕೆ ಪದಾರ್ಪಣ ಮಾಡುತ್ತಿರುವ ಈ ಶುಭ ಪರ್ವಕಾಲದಲ್ಲಿ ಅವರ ನಿಃಸ್ವಾರ್ಥ ಬದುಕಿನ ಅವಲೋಕನ ಮಾಡುವುದು ಸನಾತನ ಧರ್ಮ ಪ್ರೇಮಿಗಳ ಆದ್ಯ ಕರ್ತವ್ಯವಾಗಿದೆ.

ವಿಧಿಲಿಖಿತವೆಂದರೆ - ಶ್ರೀಮಂತಿಕೆ ಬರಬಹುದು, ಆದರೆ ಶ್ರೀಮಂತ ಹೃದಯವನ್ನು ಹೊಂದುವುದು ದುಃಸಾಧ್ಯವಾದ ಮಾತು. ಆದರೆ ಶ್ರೀಯುತ ಸುಬ್ರಹ್ಮಣ್ಯರವರು ಶ್ರೀಮಂತಿಕೆಯೊಡನೆ ಶ್ರೀಮಂತ ಹೃದಯವನ್ನೂ ಹೊಂದಿ ಸಮಾನ ಮನೋಧರ್ಮದೊಂದಿಗೆ ಪತಿಯ ಸತ್ಕಾರ್ಯದಲ್ಲಿ ನಿರ್ವ್ಯಾಜ ಪ್ರೇಮದೊಂದಿಗೆ ಸ್ಪಂದಿಸುವ ಧರ್ಮಪತ್ನಿ ಶ್ರೀಮತಿ ಬಿ.ವಿ.ಸೀತಾರವರ ಸ್ಪಂದನದೊಡನೆ ಮಾನವ ಪ್ರೇಮಿಯಾದುದು ಕಣ್ಣಿಗೆ ರಾಚುವ ಸತ್ಯ.

ತನ್ನ ಮನೆಯ ಪರಿಧಿಯಲ್ಲಿ ಮಲ್ಲಿಕಾರ್ಜುನ ವೇದ ಸಂಸ್ಕೃತ ಪಾಠಶಾಲಾವನ್ನು ಸ್ಥಾಪಿಸಿ ಹನ್ನೆರಡರಿಂದ ಹದಿನೈದು ವರ್ಷಗಳೊಳಗಣ ವಯಸ್ಸಿನ ಮೂವತ್ತು ಮಂದಿ ವಿದ್ಯಾರ್ಥಿಗಳನ್ನು



***103. ಮತ್ತೂರಿನ ಗೋಶಾಲೆ : ಗೋಪಾಲನೆ, ಕೃಷಿಯ ಅವಿಭಾಜ್ಯ ಅಂಗ***



*104. ಅಡಕೆ ಎಡೆಯುತ್ತಿರುವ ಸೀತಾಸುಬ್ರಹ್ಮಣ್ಯ*

ತನ್ನ ಮನೆಯಲ್ಲಿ ಸಾಕಿ ಸಲಹುತ್ತಾ, ಪ್ರಾಚೀನ ಗುರುಕುಲ ಪರಂಪರೆಯ ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಸೂಕ್ತ ಗುರುಗಳಿಂದ ದೊರಕಿಸುವ ಮಹೋನ್ನತ ಕಾರ್ಯವನ್ನು ಇಂದಿನ ಕಾಲದಲ್ಲಿ ಏಕವ್ಯಕ್ತಿಯಾಗಿ ನಿರ್ವಹಿಸುತ್ತಿದ್ದಾರೆಂದರೆ ನಂಬಲಾಗುತ್ತಿಲ್ಲ.

ಕೇವಲ ಸಮಾಜಸೇವಾ ಸಂಸ್ಥೆ ಯಾ ಮಠ ಮಾನ್ಯಗಳ ಆಶ್ರಯದಲ್ಲಿ ನಿರ್ವಹಿಸಬಹುದಾದ ಇಂತಹ ಧರ್ಮೋದ್ಧಾರ ಕಾರ್ಯವನ್ನು ತನ್ನ ಗತಿಸಿದ ಪ್ರೀತಿಯ ಪುತ್ರಿ ಚಿ. ಜ್ಯೋತಿಯ ನೆನಪಿನಲ್ಲಿ ನೀಡುತ್ತಿದ್ದಾರೆ. ಅದೂ ಪ್ರತಿ ವಿದ್ಯಾರ್ಥಿಗೂ ಹನ್ನೆರಡು ವರ್ಷದ ಪ್ರಥಮ, ದ್ವಿತೀಯ, ಕಾವ್ಯ, ಸಾಹಿತ್ಯ ಹಾಗೂ ವಿದ್ವತ್ ಪರೀಕ್ಷೆಗಳವರೆಗಿನ ವಿದ್ಯಾದಾನದ ಸಂಪೂರ್ಣ ಖರ್ಚನ್ನು ಭರಿಸುತ್ತಿರುವ ಅದ್ಭುತ ಕಾರ್ಯದ ರೂವಾರಿ ಬೆ.ನಾ.ವೆಂ.ಸುಬ್ರಹ್ಮಣ್ಯ.

ಅವರ ಮನೆಯಲ್ಲಿ ಪ್ರಾತಃಕಾಲ ಸಂದರ್ಭ ಸ್ವಲ್ಪ ಹೊತ್ತು ಕುಳಿತರೂ ವೇದಾಧ್ಯಯನ ಮಾಡುತ್ತಿರುವ ಕಂಚಿನ ಕಂಠದ ವಿದ್ಯಾರ್ಥಿಗಳಿಂದ ಹೊರಹೊಮ್ಮುವ ವೇದನಾದ ಮಾಧುರ್ಯವನ್ನು ಸವಿಯಬಹುದಾಗಿದೆ. ಈ ಸುಶ್ರಾವ್ಯ ಪಠಣವು ನಮಗೆ ೨,೩೦೦ ವರ್ಷಗಳ ಹಿಂದೆ ತಕ್ಷಶಿಲಾ ಮಹಾವಿದ್ಯಾಲಯದಲ್ಲಿ ಜಗತ್ತಿಗೆ ಭಾರತದ ಸಂಸ್ಕೃತಿಯ ಕಂಪನ್ನು ಪಸರಿಸಿದ ಬ್ರಾಹ್ಮಣ ಶ್ರೇಷ್ಠ ಚಾಣಕ್ಯನ ನೆನಪು ತಾರದಿರದು. ಅಂದು ಆ ಮಹಾವಿದ್ಯಾಲಯದಲ್ಲಿ ಏಳುನೂರು ಅಧ್ಯಾಪಕರು ಭಾರತೀಯ ನಾಗರಿಕ ಸಂಸ್ಕೃತಿಯ ಪಥದರ್ಶಕರಾಗಿದ್ದರು. ಇದು ಚರಿತ್ರೆಯಲ್ಲಿ ದಾಖಲಿಸಲ್ಪಟ್ಟ ಮಹೋನ್ನತ ಕಾರ್ಯ.

ಮೂವತ್ತು ಮಂದಿ ವಿದ್ಯಾರ್ಥಿಗಳು ಶುಭ್ರ ಪಂಚೆ, ಧೋತಿ, ಶಿಖೆ, ಲಾಂಛನದೊಂದಿಗೆ ಶೋಭಿಸುತ್ತಾ ವೇದಪಠನ ಮಾಡುತ್ತಿದ್ದರೆ ನಾವು ಭಾವುಕರಾಗುತ್ತೇವೆ.

ತಂದೆ ನಾರಾಯಣಸ್ವಾಮಿ, ತಾಯಿ ಶ್ರೀಮತಿ ಕಾವೇರಮ್ಮನವರ ಸುಪುತ್ರನಾಗಿ ಹುಟ್ಟೂರು ಬೆಟ್ಟದಪುರದಲ್ಲಿ ೧೯೪೨ರಲ್ಲಿ ಧರೆಗಿಳಿದ ಬಾಲಕ ಸುಬ್ರಹ್ಮಣ್ಯ, ಮುಂದೆ ತಾಂತ್ರಿಕ ಶಿಕ್ಷಣ ಹೊಂದಿ ಬ್ರಾಹ್ಮಣ ಸಮಾಜದಲ್ಲಿ ಅಪರೂಪವೆನಿಸಿದ ಸ್ವಂತ ಉದ್ಯಮ ಜ್ಯೋತಿ ಇಂಡಸ್ಟ್ರೀಸ್ ಹಾಗೂ ಇತರ ಉದ್ಯಮಗಳನ್ನು ಸ್ಥಾಪಿಸಿದರು, ಕಟ್ಟಿ ಬೆಳೆಸಿದರು. ವಿಪ್ರರಾಗಿ ಬ್ರಾಹ್ಮಣ ಜನಾಂಗವೇ ಹೆಮ್ಮೆ ಪಡುವಂಥಾ ಕಾರ್ಯಧುರಂಧರತೆ ಅವರದಾಗಿದೆ.

ಉದ್ಯಮದಲ್ಲಿ ಬೆಳಗಿದಂತೆ ಸಮಾಜಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡು, ವಿದ್ಯಾದಾನದಲ್ಲಿ ಮುಂಚೂಣಿಯಲ್ಲಿ ಮಿನುಗಿದ ವಿಪ್ರರಾಗಿ, **ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ**ದ ಮೂಲಕ ಧರ್ಮಪತ್ನಿ ಶ್ರೀಮತಿ ಬಿ.ವಿ. ಸೀತಾರವರ ಸಂಪೂರ್ಣ ಸಹಭಾಗಿತ್ವ ಪಡೆದು ಅವನ್ನೆಲ್ಲ ನಿರ್ವಹಿಸುತ್ತಿರುವುದು ಅನುಕರಣೀಯ.

ವಿದ್ಯೆಯಲ್ಲಿ ವ್ಯಾಪಾರವನ್ನು ಅಳವಡಿಸಿ, ಪೋಷಕರಿಂದ ವಿವಿಧ ರೂಪದಲ್ಲಿ ಹಣ ಸೆಳೆಯುವ ಶಾಲೆಗಳೆಂಬ ವ್ಯಾಪಾರ ಮಳಿಗೆಗಳೇ ಎಲ್ಲೆಡೆ ತುಂಬಿವೆ. ಹಾಗಿರುವಾಗ ಲಾಭ ನಷ್ಟರಹಿತ ಜ್ಯೋತಿ ಕೇಂದ್ರೀಯ ವಿದ್ಯಾಲಯದ ಆಡಳಿತದಲ್ಲಿ ಎಲ್.ಕೆ.ಜಿ. ಯಿಂದಾರಂಭಿಸಿ ಎರಡನೆ ಪಿಯುಸಿ ವರೆಗಿನ ಬೃಹತ್ ವಿದ್ಯಾಕೇಂದ್ರವನ್ನು ನಡೆಸಲಾಗುತ್ತಿದೆ. ಒಂದು ಸಾವಿರದ ಎಂಟು ನೂರು ವಿದ್ಯಾರ್ಥಿಗಳ ಸಮೂಹ ಇಲ್ಲಿದೆ. ಈ ವಿದ್ಯಾಲಯ ಜಾತ್ಯತೀತ ನೆಲೆಯಲ್ಲಿ ಕಾರ್ಯವೆಸಗುತ್ತಿದೆ.

ಮಾತೆ ಸರಸ್ವತಿಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರೀಯುತರು **ಕೃಷ್ಣ ಯಜುರ್ ವೇದ ಕನ್ನಡ ಪ್ರಕಾಶನ**ದ ವತಿಯಿಂದ ಕೃಷ್ಣ ಯಜುರ್ವೇದವನ್ನು ಸೂಕ್ತ ವಿದ್ವಾಂಸರಿಂದ ಕನ್ನಡಕ್ಕೆ ತರ್ಜುಮೆ ಮಾಡಿಸಿ ಪ್ರಸ್ತುತ ನಾಲ್ಕು ಸಂಪುಟಗಳನ್ನು ಧರ್ಮಶ್ರದ್ಧಾಳುಗಳಿಗೆ ಒದಗಿಸಿದ್ದಾರೆ. ಅಲ್ಲದೆ ಹಲವಾರು ವಿದ್ವಾಂಸರ ಕೃತಿಗಳನ್ನು ಬೆಳಕು



*105. ರಾಜ್ಯಮಟ್ಟದ ಏಳನೆಯ ಬ್ರಾಹ್ಮಣ ಸಮ್ಮೇಳನ : ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರಿಗೆ ಸಂಮಾನ*

ಕಾಣಿಸಲು ಧನಸಹಾಯ ನೀಡಿದ ಮಹತ್ಕಾರ್ಯ ಇವರಿಂದಾಗಿದೆ.

ಸಂಗೀತಕ್ಷೇತ್ರಕ್ಕೂ ತಮ್ಮ ಸಹಾಯಹಸ್ತವನ್ನು ವಿಸ್ತರಿಸಿದ ಶ್ರೀಯುತರು ಗಾಯನಸಮಾಜ, ಕರ್ನಾಟಕ ಗಾನಕಲಾ ಪರಿಷತ್ ಮೂಲಕ ಅರ್ಹ ಘನ ವಿದ್ವಾಂಸರನ್ನು ಸನ್ಮಾನಿಸಿ ನಿಧಿ ಅರ್ಪಿಸಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರಿಂದ ನಲವತ್ತಕ್ಕೂ ಹೆಚ್ಚು ವಿದ್ವಾಂಸರು ಸನ್ಮಾನಿತರಾಗಿದ್ದಾರೆ.


ತಮ್ಮ ದಾನಕಾರ್ಯಕ್ಕಾಗಿಯೇ **ಜ್ಯೋತಿ ಚಾರಿಟಬಲ್ ಟ್ರಸ್ಟ್** ಎಂಬ ವಿಶ್ವಸ್ತಮಂಡಳಿಯನ್ನು ಸ್ಥಾಪಿಸಿದ್ದಾರೆ. ತನ್ಮೂಲಕ ಆರ್ಥಿಕವಾಗಿ ಹಿಂದುಳಿದವರ ವಿದ್ಯಾಭ್ಯಾಸ, ಮದುವೆ ಇತ್ಯಾದಿ ಶುಭಕಾರ್ಯಗಳು, ಚಿಕಿತ್ಸಾ ವೆಚ್ಚಗಳನ್ನು ಭರಿಸುತ್ತಿದ್ದಾರೆ. ಕೊಡುಗೈ ಗುಪ್ತದಾನಿಗಳಾಗಿದ್ದಾರೆ.

ಈ ಹಿಂದೆ ಮೊದಲ ಬಾರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾಗ ಸೇವೆಯಲ್ಲಿ ಆದ್ಯತೆ ನೀಡಿದುದು ಬ್ರಾಹ್ಮಣ ಸಮಾಜದ ಅಸಹಾಯ ವಿಧವೆಯರು, ಅಂಗವಿಕಲರು, ಆರ್ಥಿಕವಾಗಿ ಹಿಂದುಳಿದವರಿಗೆ. ಮಹಾಸಭೆಯ ವತಿಯಿಂದ ಪಿಂಚಣಿ ರೂಪದಲ್ಲಿ ಪ್ರತಿ ಮಾಸವೂ ಒಂದು ನೂರು ರೂಪಾಯಿಯಂತೆ ಕಳಿಸುವ ಮಹೋನ್ನತ ಕಾರ್ಯವನ್ನು ಕೈಗೊಂಡರು. ಅದಕ್ಕಾಗಿ ಉಳ್ಳವರಿಂದ ಧನ ಸಂಗ್ರಹಿಸಿ ಮಹಾಸಭಾದ ಖಾತೆಯಲ್ಲಿರಿಸಿ ಅದರ ಬಡ್ಡಿಯಿಂದ ಈ ಮಾನವೀಯ ಸೇವೆಯನ್ನು ಆರಂಭಿಸಿ ಬ್ರಾಹ್ಮಣ ಸಮಾಜದಲ್ಲಿ ಹೊಸ ಶಕೆಯೊಂದನ್ನಾರಂಭಿಸಿದವರಾಗಿ ಸರ್ವರ ಮೆಚ್ಚುಗೆಗೆ ಪಾತ್ರರಾದರು.

ಬ್ರಾಹ್ಮಣ ಸಮಾಜದ ತ್ರಿಮತಸ್ಥ ಮಠಾಧಿಪತಿಗಳನ್ನು ಗೌರವದಿಂದ ಕಾಣುವ ಅವರ ಸ್ವಭಾವ ಅನುಕರಣೀಯ.

ಅವರು ಹೆಚ್ಚುಹೆಚ್ಚಾಗಿ ವೈರಾಗ್ಯ ಭಾವವನ್ನು ಹೊಂದುತ್ತಾ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ತಮ್ಮ ಪ್ರೀತಿಯ ಪುತ್ರಿ ಜ್ಯೋತಿಯನ್ನು ಕಾಣುತ್ತಾ ವಿದ್ಯಾದಾನದಂಥ ಮಹತ್ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಧಾರ್ಮಿಕ ಜಗತ್ತಿನಲ್ಲಿ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಪರಂಪರೆಯನ್ನು ಗೌರವಿಸುವ ಬೆ.ನಾ.ವೆಂ.ಸುಬ್ರಹ್ಮಣ್ಯ ನಿರಾಡಂಬರ ವ್ಯಕ್ತಿಯಾಗಿ ಗುರ್ತಿಸಲ್ಪಡುತ್ತಿದ್ದಾರೆ.

ನನ್ನ ಮತ್ತು ಅವರ ಪರಿಚಯದ ಮೂರು ದಶಕಗಳ ಬಾಂಧವ್ಯದಲ್ಲಿ



*106. "ಅಡಕೆ ಒಣಗಿದ್ದು ಸಾಕೆ, ನೋಡಿ"*

ಅವರನ್ನು ಅತಿ ಹತ್ತಿರದಿಂದ ಗಮನಿಸಿದ್ದೇನೆ. ಯಾವ ಸಂಸ್ಥೆಯಲ್ಲಿ ಅವರು ಪದಾಧಿಕಾರಿಯಾಗಿದ್ದರೂ ಆ ಸಂಸ್ಥೆಯ ಕಾರ್ಯಕ್ಕಾಗಿ ಖರ್ಚು ಮಾಡುವ ಹಣವನ್ನು ಲೆಕ್ಕದಿಂದ ಹೊರತಾಗಿ ವ್ಯಯಿಸುವ ಅವರ ಪರಿ ಉಲ್ಲೇಖನೀಯ. ಶ್ರೀಯುತರ ಷಷ್ಟ್ಯಬ್ದಪೂರ್ತಿಯ ಈ ಶುಭ ಸಂದರ್ಭದಲ್ಲಿ ಸಮಾಜಸೇವೆಗಾಗಿ ಮುಂದಿಟ್ಟ ಅವರ ದಿಟ್ಟ ಹೆಜ್ಜೆಯ ಪಥವು ಹೂವಿನ ದಾರಿಯಾಗಲಿ. ದೇವರು ಅವರಿಗೆ ಆಯುರಾರೋಗ್ಯ, ಭಾಗ್ಯಾದಿಗಳನ್ನು ಕರುಣಿಸಲೆಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ. ನನ್ನ ಸಾಹಿತ್ಯಸೇವೆಗೆ ಒಂದು ವಿಧದಲ್ಲಿ ಪ್ರೇರಕಶಕ್ತಿ ಸುಬ್ರಹ್ಮಣ್ಯರವರು.

## ೧೧. ಸಂಗೀತಕಲಾಪೋಷಕ ಬಿ.ಎನ್.ವಿ.

***ಜಿ.ಕೆ. ಗುಂಡುರಾವ್***

ಬೆಟ್ಟದಪುರ, ರುದ್ರಪಟ್ಟಣ ಊರುಗಳ ಸಂಕೇತಿ ವಿಪ್ರ ಜನಾಂಗ ಸಂಗೀತಕ್ಕೆ ನೀಡಿರುವ ಕೊಡುಗೆ ಅಪಾರವಾದುದು. ಅನೇಕ ಸುಪ್ರಸಿದ್ಧ ವಿದ್ವಾಂಸರು, ಸಂಗೀತಶಾಸ್ತ್ರಜ್ಞರು, ಸಂಗೀತ ಪೋಷಕರು, ಸಂಗೀತಾಭಿಮಾನಿಗಳು ಈ ಊರುಗಳವರು. ಬೆಟ್ಟದಪುರದವರೇ ಆದ ಸುಬ್ರಹ್ಮಣ್ಯ ಸಂಗೀತಾಸಕ್ತರು; ಸಂಗೀತವನ್ನು ಕೇಳುವ, ಆಸ್ವಾದಿಸುವ ಗುಣವನ್ನು ಚಿಕ್ಕಂದಿನಿಂದಲೂ ಬೆಳೆಸಿಕೊಂಡವರು.

ತಮ್ಮ ಮನೆಯಲ್ಲೂ ಸಂಗೀತಕ್ಕೆ ಸ್ಥಾನ ದೊರಕಬೇಕು, ಸಂಗೀತಗಾರರಿಬೇಕು ಎಂಬ ಆಶಯಕ್ಕೆ ಫಲ ದೊರೆತದ್ದು ಸುಬ್ರಹ್ಮಣ್ಯ-ಸೀತಮ್ಮ ದಂಪತಿಗಳ ಏಕೈಕ ಪುತ್ರಿ ಜ್ಯೋತಿಯು ವೀಣೆ ಕಲಿಯುವ ಆಸಕ್ತಿ ತೋರಿದಂದು. ವೀಣಾ ವಾದನದಲ್ಲಿ ಹೆಸರಾಂತ ವೈಣಿಕ, ವಿದ್ವಾನ್ ಆರ್.ಕೆ.ಸೂರ್ಯನಾರಾಯಣ ಅವರಿಂದ ಮಗಳಿಗೆ ಪಾಠ ಹೇಳಿಸಿದರು. ಆಕೆಯ ಕಲಿಕೆಯ ಆಸಕ್ತಿ, ಸೂಕ್ಷ್ಮಗ್ರಹಣ ಶಕ್ತಿ ಎಷ್ಟಿತ್ತೆಂದರೆ ಕೆಲವೇ ವರ್ಷಗಳಲ್ಲಿ ತಮ್ಮ ಗುರುಗಳೊಡನೆ ಶ್ರೀರಾಮ ಮಂಡಳಿಯ ರಾಮೋತ್ಸವ ಸಂದರ್ಭದಲ್ಲಿ ಚೊಚ್ಚಲ ಕಛೇರಿಯನ್ನು ನಡೆಸಿಕೊಟ್ಟರು. ಅದೇ ಮುಂದೆ ಸುಬ್ರಹ್ಮಣ್ಯ ಅವರಿಗೆ ಸಂಗೀತದ ಬಗ್ಗೆ ಗೌರವಾದರ, ಭಕ್ತಿ ಮೂಡಿಸಿತ್ತು. ಅವರು ಹಿರಿಯರು ಹೇಳುವಂತೆ ವೇದಕ್ಕೆ ನೀಡುವ ಗೌರವ ಸ್ಥಾನಮಾನವನ್ನು ಪಂಚಮವೇದ ಸಂಗೀತಕ್ಕೂ ನೀಡಲಾರಂಭಿಸಿದರು. ಸಂಗೀತ ಕಲಿಯುವ ಆಶಯ, ಆಸಕ್ತಿ ಇದ್ದವರಿಗೆ ತಮ್ಮ ಪಾಲನೆ, ಪೋಷಣೆ ನೀಡಿ ಅವರ ಕಲಿಕೆಗೆ ನೆರವಾದ ತೃಪ್ತಿ ಒಂದೆಡೆ. ಹಾಗೆ ಕಲಿತವರು ಸುಪ್ರಸಿದ್ಧ ವಿದ್ವಾಂಸರಾಗಿ ಸಂಗೀತ ಕ್ಷೇತ್ರದಲ್ಲಿ ಅತ್ಯಂತ ಮಹತ್ತ್ವದ ಸಾಧನೆ ಮಾಡಿದಾಗ ಅಪಾರ ಸಂತಸ ಪಟ್ಟುದು ಇನ್ನೊಂದೆಡೆ.

ಸಂಗೀತಕ್ಷೇತ್ರದಲ್ಲಿ ಉತ್ತಮಸೇವೆ ಸಲ್ಲಿಸುತ್ತಿರುವ ಪ್ರತಿಷ್ಠಿತ ಸಂಸ್ಥೆಗಳಾದ ಬೆಂಗಳೂರು ಗಾಯನ ಸಮಾಜ, ಕರ್ನಾಟಕ ಗಾನಕಲಾ ಪರಿಷತ್ ಪ್ರತಿವರ್ಷ ಅದ್ದೂರಿಯಿಂದ ನಡೆಸುವ ಸಂಗೀತ ಸಮ್ಮೇಳನಗಳಲ್ಲಿ ತಮ್ಮ ಮಗಳ ನೆನಪು ಸದಾ ಉಳಿಯುವಂತಹ ಶ್ರೇಷ್ಠಕಾರ್ಯ ನಡೆಸುತ್ತಿರುವ ಶ್ರೀ ಬಿ.ಎನ್.ವಿ. ಅವರು ಸಮ್ಮೇಳನಾಧ್ಯಕ್ಷರಿಗೆ ೧೦,೦೦೦ ರೂ ಗಳ **ಜ್ಯೋತಿ ಮೆಮೋರಿಯಲ್ ಅವಾರ್ಡ್** ನೀಡಿ ಸತ್ಕರಿಸುತ್ತಿದ್ದಾರೆ. ಅಂತೆಯೇ ಸಂಗೀತ ಸಂವರ್ಧನೆಗೆಂದೇ ಖ್ಯಾತ ಸಂಗೀತಗಾರ ಸಂಗೀತಶಾಸ್ತ್ರಜ್ಞ ವಿದ್ವಾನ್ ಡಿ. ಸುಬ್ಬರಾಮಯ್ಯ ಅವರ ಹೆಸರಿನಲ್ಲಿ ಸ್ಥಾಪಿತವಾಗಿ ಉತ್ತಮ ಕಾರ್ಯನಿರ್ವಹಿಸುತ್ತಿರುವ ಶ್ರೀ **ಡಿ.ಸುಬ್ಬರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್ (ರಿ.)** ಸಂಸ್ಥೆಯ ಅಧ್ಯಕ್ಷರಾಗಿ ಹತ್ತು ವರ್ಷದಿಂದ ಅನುಪಮ ಸೇವೆ ಸಲ್ಲಿಸುತ್ತಿರುವ ಹಿರಿಮೆ ಬಿ.ಎನ್.ವಿ. ಅವರದು. ಅಲ್ಲಿನ ಅವರ ಮಾರ್ಗದರ್ಶನ, ನೆರವು, ಇತರೇ ಆಸಕ್ತರನ್ನು ತೊಡಗಿಸುತ್ತಿರುವ ಪರಿ ಅತ್ಯಂತ ಸ್ತುತ್ಯರ್ಹ. ಪ್ರತಿವರ್ಷ ಅವರು ನಡೆಸಿಕೊಡುವ ಸಂಗೀತ ಸಂಬಂಧಿತ ಕಾರ್ಯಕ್ರಮಗಳು ಸಂಗೀತ ಪೋಷಕರಾಗಿ ಅವರ ಸೇವೆಗೆ ದ್ಯೋತಕ.

ಸಂಗೀತ ವಿದ್ವಾನ್ ಆರ್.ಕೆ.ಪದ್ಮನಾಭ ಹುಳಿಮಾವಿನಲ್ಲಿ ಕಲ್ಪಿಸಿರುವ **ವಾದಿರಾಜ ಭವನ**ದ ಬಗೆಗೆ ಮೊದಲಿನಿಂದಲೂ ಅಪಾರ ಆಸಕ್ತಿ ತೋರಿಸಿ, ಪ್ರೋತ್ಸಾಹ ನೀಡಿ, ಕು. ಜ್ಯೋತಿಯ ಹೆಸರಿನಲ್ಲಿ ಕೊಡುಗೆ ನೀಡಿ ಕಲಾ ಪೋಷಕತೆಗೆ ಸದೃಢ ಸೇರ್ಪಡೆ ಮಾಡಿದ್ದಾರೆ.

ಸಂಗೀತಗಾರರಿಗೆ 'ವೈದ್ಯಕೀಯ ನೆರವು' ಎಂದು ಇದಕ್ಕಾಗಿ ಒಂದು ನಿಧಿ ಸ್ಥಾಪಿತವಾಗುತ್ತದೆ ಎಂದಾಗ ಬಹಳ ಸಂತಸಪಟ್ಟ ಹಿರಿಮೆ ಬಿ.ಎನ್.ವಿ. ಅವರದು. ಆ ನಿಧಿಗೆ ಅವರು ನೀಡಿರುವ ಸಹಾಯ ಸಂಗೀತಗಾರರ ಬಗೆಗಿನ ಅವರ ಕಾಳಜಿಗೆ ಪ್ರತ್ಯಕ್ಷ ನಿದರ್ಶನ.

ಆಗಿಂದಾಗ್ಗೆ ನಡೆಯುವ ಸಂಗೀತ ಕಾರ್ಯಕ್ರಮಗಳು, ಶ್ರೀರಾಮನವಮಿ, ಗಣೇಶೋತ್ಸವ ಹೀಗೆ ಹತ್ತು ಹಲವು ಸಂಗೀತ ಕಾರ್ಯಕ್ರಮಕ್ಕೆ ಇವರ ಕುಟುಂಬದ ವತಿಯಿಂದ ಅಥವಾ ಇವರ



**107.** *ವಿದ್ವಾನ್ ಆರ್.ಕೆ. ಪದ್ಮನಾಭ ಅವರೊಂದಿಗೆ ಬಿ.ಎನ್.ವಿ.*

ಉದ್ಯಮದಿಂದ ನೀಡುವ ಸಹಾಯ ಅನೇಕ. ಮಲ್ಲೇಶ್ವರಂ ಸಂಗೀತ ಸಭೆಯಂತಹ ಅನೇಕ ಸಭಾಗಳು ಇವರ 'ಪೋಷಕತ್ವ', 'ಪ್ರಾಯೋಜಕತ್ವ' ಪಡೆದಿವೆ.

ಸಂಗೀತಕ್ಕೆಂದೇ ಒಂದು ವಿಶ್ವವಿದ್ಯಾಲಯ ಮತ್ತು ಹಲವಾರು ಕಾಲೇಜುಗಳು ಇದ್ದರೆ ಸಂಗೀತವು ಕಲೆಯಾಗಿ, ಶಾಸ್ತ್ರವಾಗಿ ಬೆಳೆಯುವ ಸಾಧ್ಯತೆ ಹೆಚ್ಚು. ಹೀಗೆ ಸಂಗೀತ ಕಲಿತವರಿಗೆ ಉತ್ತಮ ಉದ್ಯೋಗಾವಕಾಶ, ಸ್ಥಾನಮಾನ ದೊರಕಬೇಕು. ಸಂಗೀತಕ್ಕೆ ಶಾಲಾಕಾಲೇಜುಗಳಲ್ಲೂ ಕಲಿಕೆಗೆ ಅವಕಾಶವಿರಬೇಕು. ಐಚ್ಛಿಕ ವಿಷಯಗಳಲ್ಲಿ ಸಂಗೀತವೂ ಆಯ್ಕೆಯ ವಿಷಯವಾಗಬೇಕು. ಅಂತೆಯೇ ಸಂಗೀತಕ್ಕೆ - ಶಾಸ್ತ್ರೀಯ ಸಂಗೀತಕ್ಕೆ ಕ್ರಮಬದ್ಧವಾಗಿ 'ಶ್ರೋತೃ'ಗಳನ್ನು ಕೂಡ ತಯಾರು ಮಾಡಬೇಕು. ಅಂದರೆ ಸಂಗೀತ ಕಲಿಯುವ ಪ್ರತಿಯೊಬ್ಬರೂ, ಸಂಗೀತ ಹಾಡುವವರೂ, ತಮಗೆ ಸಮೀಪದ ಸ್ಥಳದಲ್ಲಿ ನಡೆಯುವ ಕಛೇರಿಗಳಿಗೆ ಕಡ್ಡಾಯವಾಗಿ ಹೋಗಿ ಸಂಗೀತ ಕೇಳಬೇಕು. ಇದನ್ನು ಸಂಗೀತ ಹೇಳಿಕೊಡುವವರು ತಮ್ಮ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು.

ಈ ದಿಶೆಯಲ್ಲಿ 'ಸಂಗೀತ'ಕ್ಕೆಂದೇ ಯಾವುದೇ ಸಂಸ್ಥೆ ಯಾವುದೇ ರೀತಿಯ ಉಪಯುಕ್ತ ಯೋಜನೆ ಸಿದ್ಧಪಡಿಸಿದರೆ "ನಾನು ಸಂಪೂರ್ಣವಾಗಿ ಸಹಾಯ, ಸಹಕಾರ ನೀಡುತ್ತೇನೆ" - ಎನ್ನುತ್ತಾರೆ ಬಿ.ಎನ್.ವಿ. ಅವರ ಸಂಗೀತ-ಕಲೆಗಳ ಬಗೆಗಿನ ಆಸಕ್ತಿ, ಆಶಯ ಬರಿಯ ಮಾತಿಗಷ್ಟೇ ಸೀಮಿತವಾಗಿರದೆ, ಕಾರ್ಯರೂಪಕ್ಕೂ ಬಂದಿದೆ. ಅವರ ಜ್ಯೋತಿ ಸಮೂಹ ಶಾಲೆಗಳಲ್ಲಿ ಸಂಗೀತ, ನೃತ್ಯ ಹೇಳಿಕೊಡುವ ವ್ಯವಸ್ಥೆ ಮಾಡಿದ್ದಾರೆ. ಇದಕ್ಕಾಗಿ ಶಿಕ್ಷಕರನ್ನು (ಸಿಕ್ಕುವುದೇ ಪರಿಶ್ರಮವಾದರೂ) ನೇಮಕ ಮಾಡಿದ್ದಾರೆ. ಆದರೆ ಕೊರತೆಯೆಂದರೆ ಆಸಕ್ತಿಯಿಂದ ಬಂದು ಕಲಿಯುವವರದು. ಆದರೂ ಧೃತಿಗೆಡದೆ ಮುಂದುವರಿದಿದೆ ಬಿ.ಎನ್.ವಿ. ಪ್ರಯತ್ನ.

ಶಾಲೆಯ ಸಭಾಂಗಣದಲ್ಲಿ ಪ್ರತಿ ವರ್ಷ ಎರಡು ದಿನ ರಾಮೋತ್ಸವ ಕಾರ್ಯಕ್ರಮ ನಡೆಸಿ ಸಂಗೀತ ಏರ್ಪಡಿಸುತ್ತಾರೆ. ಮತ್ತೆ ಶ್ರೋತೃಗಳ ಕೊರತೆ; ಪರ್ಯಾಯ ವ್ಯವಸ್ಥೆ: ಶಾಲೆಯ ಎಲ್ಲ ಶಿಕ್ಷಕರೂ ಸಂಗೀತಕ್ಕೆ ಬರಲೇಬೇಕೆಂಬ ನಿಯಮ.



**108.** *ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಸಮಾರಂಭ : ಆಗಿನ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅಭಿನಂದನೆ*

ನೃತ್ಯ ಕೂಡ ಬಿ.ಎನ್.ವಿ. ಅವರಿಗೆ ಆಸಕ್ತಕಲೆ. ಅಲ್ಲೂ ಮಗಳು ಜ್ಯೋತಿಯದೇ ನೆನಪು. ನೃತ್ಯಪಟು - ಗುರು ನರ್ಮದಾ ಅವರಲ್ಲಿ ಅವರ ಮಗಳು ಕಲಿತ ನೃತ್ಯದ ನೆನಪು. ಅದರದೇ ಸ್ಮರಣೆಗೆ ತಮ್ಮ ಶಾಲೆಯಲ್ಲಿ ಅಂತರ ಶಾಲಾ ನೃತ್ಯ-ಸಂಗೀತ ಸ್ಪರ್ಧೆ ಅನೂಚಾನವಾಗಿ ನಡೆದು ಬಂದಿದೆ.

ಇಂತಹದೊಂದು ಶ್ರೇಷ್ಠ ವ್ಯಕ್ತಿತ್ವದ ಪೋಷಕತ್ವ ಸಂಗೀತ ದೇವತೆ ಸರಸ್ವತಿಯ ಕೊಡುಗೆ. ಆಡಂಬರ, ತೋರ್ಪಡಿಕೆ ಇಲ್ಲದಂತಹ ಸೇವಾಮನೋಭಾವ ಶ್ರೀ ಬಿ.ಎನ್.ವಿ. ದಂಪತಿಗಳ ವೈಶಿಷ್ಟ್ಯ.

ಕೊನೆಯಲ್ಲಿ ಅವರ ನಿರ್ಧಾರದತ್ತ ಗಮನ ಹರಿಸಿದರೆ ಆಸಕ್ತಿಗೆ ಕಾರಣ ಗೊತ್ತಾಗುತ್ತದೆ.

"ವಿಪ್ರರೇ ಸಂಗೀತದ ಕ್ಷೇತ್ರದಲ್ಲಿ ರಾರಾಜಿಸುವ ನಕ್ಷತ್ರಗಳು. ಅವರೇ ರೂಢಿಸಿಕೊಂಡಿರುವಂಥವು ಸಂಸ್ಕೃತಿಪ್ರತೀಕವಾದ ಸಂಗೀತ, ನೃತ್ಯದಂತಹ ಸೂಕ್ಷ್ಮಮತಿಗಳ ಕಲೆಗಳು. *ಈ* ಸಂಸ್ಕೃತಿಯನ್ನು ವಿಪ್ರರು ಬೆಳೆಸಬೇಕು, ಪೋಷಿಸಬೇಕು. ಎಂದೂ ನಶಿಸದ ಕಲೆಗಳಿವು. ಪ್ರಸ್ತುತ ಜನಾಕರ್ಷಕವಲ್ಲ ಎಂದೆನಿಸಿದರೂ ದೃಢ ಬೇರಿನೊಂದಿಗೆ ಸದೃಢವಾಗಿ ಬೆಳೆದಿರುವ ಸಂಗೀತಚಕ್ರ ತಿರುಗುತ್ತಾ ಮತ್ತೆ ಮುಂದೊಂದು ದಿನ 'ಔನ್ನತ್ಯ' ತಲುಪಿಯೇ ತಲುಪುತ್ತದೆ. ಅಂತಹ ಆಶಾಭಾವನೆ ನಮ್ಮೆಲ್ಲರದಾಗಬೇಕು. ಅದೇ ನನ್ನ ಆಶಯ, ಸದಾಶಯ".

ಅರ್ಥಪೂರ್ಣ ಬಾಳ್ವೆಯ ಅರುವತ್ತು ವಸಂತಗಳನ್ನು ಸಾರ್ಥಕವಾಗಿ ಪೂರೈಸಿರುವ ನಮ್ಮೆಲ್ಲರ ಆದರ್ಶವ್ಯಕ್ತಿ ಶ್ರೀ ಬಿ.ಎನ್.ವಿ. ಇನ್ನೂ ಅನೇಕ ದಶಕಗಳು ನಮ್ಮೊಡನಿದ್ದು ಕಲಾಪೋಷಕರಾಗಿ, ಕಲೋದ್ಧಾರಕರಾಗಿ ವಿರಾಜಿಸಲಿ.



***109.** ಬಿ.ಎನ್.ವಿ. : ಆಗಿನ ಸಚಿವ ಶ್ರೀ ಬಂಗಾರಪ್ಪ ಅವರೊಡನೆ : ಶೃಂಗೇರಿ ಪೂಜ್ಯ ಜಗದ್ಗುರುಗಳ ದಿವ್ಯ ಸನ್ನಿಧಿ*

# ೧೨. ಸಮಾಜಸೇವಾಧುರೀಣ ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯ

*ಜಿ.ಶ್ರೀಧರ್*

ಮಾನವೀಯ ಮೌಲ್ಯಗಳಲ್ಲಿ ಸೇವೆ ಮಹತ್ತರವಾದುದು. ಆದರೆ ಈ ಮೌಲ್ಯ ಎಲ್ಲರಲ್ಲೂ ಅದು ತನ್ನಷ್ಟಕ್ಕೆ ತಾನೇ ಬಾರದು. ಅದು ಸಂಸ್ಕೃತಿಯುತವಾದ ಬೆಳವಣಿಗೆಯಿಂದ ಮಾತ್ರ ವ್ಯಕ್ತಿಗತವಾಗಿ ರೂಪುಗೊಳ್ಳುತ್ತದೆ. ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಇತರರಂತೆ ತಮ್ಮಷ್ಟಕ್ಕೆ ತಾವೇ ಇದ್ದು, ನಮ್ಮೆಲ್ಲರ ರೀತಿಯಲ್ಲಿ ಇದ್ದುಬಿಡಬಹುದಾಗಿತ್ತು. ಆದರೆ ಹಾಗಾಗಲು ಅವರಲ್ಲಿನ ಸಂಸ್ಕೃತಿಜನ್ಯವಾದ ಗುಣ ಬಿಡಲಿಲ್ಲ. ವಿಪ್ರಸಮುದಾಯದ ಜವಾಬ್ದಾರಿ ಹೊರುವ ಅವರ ನೈತಿಕ ಸಾತ್ವಿಕತೆಯು ನಾಯಕತ್ವದ ಗುಣವನ್ನು ಸಾಂದ್ರತೆಯಾಗಿ ಮೂಡಿಸಿ, ಸಮಾಜದಲ್ಲಿ ಸುಧಾರಣೆಗೆ ಕಾರಣವಾಯಿತು ಎಂದು ಹೇಳಿದರೆ ಅತಿಶಯವೇನಿಲ್ಲ.

ವಿಪ್ರ ಸಮುದಾಯದ ಬಗ್ಗೆ ಅವರು ಹೊಂದಿರುವ ಈ ಕಲ್ಪನೆಗಳು ಸಹ ಉದಾತ್ತವಾದುವು.

* ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದಲ್ಲಿನ ಕಡಮೆ/ಮಧ್ಯಮ ಆದಾಯದ ಬ್ರಾಹ್ಮಣರನ್ನು ಸಂಘಟಿಸಿ, ಅವರುಗಳನ್ನು ಆರ್ಥಿಕವಾಗಿ ಸುದೃಢಗೊಳಿಸುವುದು.
* ಸಾಂಸ್ಕೃತಿಕವಾದ ಮೇಳ, ಸಮ್ಮೇಳನ ಹಾಗೂ ಒಕ್ಕೂಟಗಳನ್ನು ನಡೆಸಿ, ವಿಪ್ರ ಸಂಘಟನೆಯನ್ನು ವರ್ಧಿಸುವುದು.
* ರಾಜಕೀಯವಾಗಿ, ಸಾಮಾಜಿಕವಾಗಿ ವಿಪ್ರರನ್ನು ಪ್ರೇರೇಪಿಸಿ, ಒಟ್ಟಾರೆಯಾಗಿ ದೇಶದ ಸಮಗ್ರತೆ, ಏಕೀಕರಣವನ್ನು ಮುನ್ನಡೆಸುವುದು.


ಅವರ ಕಲ್ಪನೆಗಳೂ ಗುರಿಗಳೂ ಉದಾತ್ತವಾಗಿವೆ ಹಾಗೂ ಈ ಬಗ್ಗೆ ಎಲ್ಲಾ ಸಭೆ, ಸಮಾರಂಭಗಳಲ್ಲಿ ವಿನಯಪೂರ್ವಕವಾಗಿ ಇರಿಸುವ ಅವರ ಮನವಿ ಭಾವಪೂರ್ಣವಾಗಿದೆ.

ಇತ್ತೀಚೆಗೆ, ಬೆಂಗಳೂರು ಜಯನಗರದ ನ್ಯಾಷನಲ್ ಕಾಲೇಜ್‌ನಲ್ಲಿ ಬೆಂಗಳೂರು ನಗರ ವಿಪ್ರ ಸಮುದಾಯದ ಎಂಬತ್ತೈದು ವರ್ಷದ ವೃದ್ಧ ದಂಪತಿಗಳನ್ನು ಗೌರವಿಸುವ ಕಾರ್ಯಕ್ರಮವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಬೆಂಗಳೂರು ಮಹಾನಗರ ಬ್ರಾಹ್ಮಣ ಸಭಾ ವತಿಯಿಂದ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿದ್ದು, ಅವರ ನಾಯಕತ್ವದ ಹೆಮ್ಮೆಯ ಗರಿಯಾಗಿದೆ. ಇಂತಹ ಕಾರ್ಯಕ್ರಮಗಳಿಗೆ ಉತ್ತಮ ಪ್ರಚಾರವು ಪತ್ರಿಕಾಮಾಧ್ಯಮಗಳಿಂದ ದೊರೆಯದೆ ಹೋದರೂ, ಹತಾಶರಾಗಬೇಕಿಲ್ಲ. ಏಕೆಂದರೆ ಸಮಾಜದಲ್ಲಿನ ಇತರ ಜನಾಂಗಗಳ ಸಂಘದವರೂ ಈ ಕಾರ್ಯಕ್ರಮಗಳನ್ನು ನಡೆಸಲು ಮುನ್ನುಗ್ಗಿರುವುದು ಶುಭದ ಸಂಕೇತ. ವೃದ್ಧಾಪ್ಯದ ಜನರನ್ನು, ಯುವಜನರು ಹೇಗೆ ಕಾಣಬೇಕೆಂಬ ಸಂದೇಶ ಅರ್ಥಪೂರ್ಣವಾಗಿ ಸಾಧಿತವಾಗಿದೆ. ಅಂತಹ ಮಾನವೀಯ ಸಂದೇಶದ ರೂವಾರಿಗಳಾದ ನಮ್ಮ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರಿಗೆ ನಾವೆಲ್ಲಾ ಚಿರಋಣಿಗಳು.




**110.** *ಅಖಿಲ ಕರ್ನಾಟಕ ಬ್ರಾಹ್ಮಣ ಏಳನೆಯ ಸಮ್ಮೇಳನ : ಮಾಜಿ ಸಚಿವ ಶ್ರೀ ಹಾರನಹಳ್ಳಿ ರಾಮಸ್ವಾಮಿ ಅವರಿಗೆ ಸಂಮಾನ*

ನಾಯಕತ್ವ ವಹಿಸಲು ಬಂದಾಗ ಎಲ್ಲರೂ ಹಿಂಜರಿದು, ಒಳಗೊಳಗೆ ಹಿಗ್ಗುವವರೂ ಇದ್ದಾರೆ. ಆದರೆ ಸ್ವಯಂಪ್ರೇರಿತವಾಗಿ ನಾಯಕತ್ವ ವಹಿಸಿಕೊಂಡು 'ನಾಯಕನ ಲಕ್ಷಣಗಳು ಹೀಗೆ' ಎಂದು ಸಮರ್ಥ ನಾಯಕತ್ವವನ್ನು ರುಜುವಾತು ಪಡಿಸಿದ ವ್ಯಕ್ತಿತ್ವ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರದು. ಹಾಗಾಗಿ ಪುನಃ ನಾಯಕತ್ವವು ವಿವಾದಗಳಿಂದ ದೂರವಾದ ಅವರ ಕೊರಳಿಗೆ ವಿಜಯಮಾಲೆಯಾಗಿ ಬಂದು ಸೇರಿತು. ಹಿಂದಿನಿಂದಲೂ ವಿನಯಪೂರ್ವಕವಾದ ಮುಖಭಾವ. ಮಾತು ತೀರಾ ಕಡಮೆ. ಆದರೆ ಅವರು ಮಾತನಾಡಿದಾಗಲೂ ಸೌಜನ್ಯ ಮೀರದ ಮೊನಚು ಮಾತು ಅರ್ಥಪೂರ್ಣ. ಮೊನಚಿನ ಮಾತಿನ



**111.** *ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಸಮಾರಂಭ : ಆತ್ಮೀಯ ಮಿತ್ರ, ಚಿತ್ರ ನಿರ್ಮಾಪಕ ಶ್ರೀ ಚಿನ್ನೇಗೌಡ ಅವರೊಂದಿಗೆ ಸಂತೋಷದ ಗಳಿಗೆ*

ಅನುಭವ ಪಡೆದವರು ಅವರ ವ್ಯಕ್ತಿತ್ವದ ಬಗ್ಗೆ ಚಿಂತಿಸಿದರೆ ಅವರುಗಳು ಅವರ ಸ್ನೇಹ ಪರಿವಾರದಲ್ಲಿ ಒಬ್ಬರಾಗುವರು. ಅಂತಹ ಚಿಂತನೆ ನಡೆಸದಿದ್ದಲ್ಲಿ ಅವರುಗಳು ಅವರ ಸ್ನೇಹಸೇತುವಿನಲ್ಲಿ ಲೀನವಾಗುವ ಅವಕಾಶದಿಂದ ವಂಚಿತರಾಗುತ್ತಾರೆ.

ವಿಪ್ರನಾಯಕತ್ವ ಶಿಬಿರವನ್ನು ಶಿಕಾರಿಪುರದ ಕೃಷ್ಣಮೂರ್ತಿಯವರ ಮಾರ್ಗದರ್ಶನದಲ್ಲಿ ಮೊದಲು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯಿಂದ ನಿರ್ವಹಿಸಿದಾಗಲೇ, ನನ್ನಂಥವರಿಗೆ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಪರಿಚಯವಾಯಿತು. ಸುಮಾರು ಹತ್ತು ವರ್ಷಗಳಿಂದ ಇಂತಹ ಕಾರ್ಯಕ್ರಮ ಹಮ್ಮಿಕೊಂಡ ಅವರ ದೂರದೃಷ್ಟಿಯ ಫಲವಾಗಿ ಈಗ ಎಲ್ಲಾ ಜಿಲ್ಲಾ, ತಾಲ್ಲೂಕು ಸಂಘಗಳೂ ಅವರ ಮಾದರಿ ಅನುಸರಿಸಿರುವುದು ಪ್ರಶಂಸನೀಯ.

ಅವರ ಷಷ್ಟ್ಯಬ್ದಪೂರ್ತಿ ಸಮಾರಂಭವನ್ನು ನಡೆಸುತ್ತಿರುವುದರಿಂದಲೇ, ಅವರಿಗೆ ಅರುವತ್ತು ವರ್ಷಗಳು ಸಂದಿವೆ ಎಂಬ ಅರಿವು ನಮಗೆಲ್ಲಾ ಉಂಟಾಗುತ್ತದೆ. ಆದರೆ ಅವರ ಕ್ರಿಯಾಶೀಲತೆ ಹಾಗೂ ಸಾಮಾಜಿಕ ಚಟುವಟಿಕೆ ನೋಡಿದರೆ ಅವರಿನ್ನೂ ಯುವಕರು. ಯುವಕರ ಸ್ಫೂರ್ತಿ ಕೇಂದ್ರಬಿಂದುವಾಗಿದ್ದಾರೆ. ಆದುದರಿಂದಲೇ ಶ್ರೀ ವೆಂಕಟನಾರಾಯಣ್ ಹೇಳುವ ಮಾತು ಸತ್ಯ. ಅದೇನೆಂದರೆ "ಬ್ರಾಹ್ಮಣರನ್ನು (ಬಿ)- ನೈತಿಕವಾಗಿ (ಎನ್)- ವರ್ಧಿಸುವ (ವಿ) - ಸುಬ್ರಹ್ಮಣ್ಯ" ಎಂಬ ವಾಕ್ಯೋಕ್ತಿ ಸಮಯೋಚಿತವಾದುದು.

ಸಮಾಜದ ಓರೆಕೋರೆಗಳನ್ನು ಸರಿಪಡಿಸುವಲ್ಲಿ ಅವರು ಶ್ರಮಿಸುತ್ತಿರುವ ರೀತಿ, ರಿವಾಜು ಮೆಚ್ಚುವಂತುಹುದು. ಜ್ಯೋತಿ ಚಾರಿಟಬಲ್ ಟ್ರಸ್ಟ್, ಜ್ಯೋತಿ ಕೇಂದ್ರೀಯ ವಿದ್ಯಾಲಯ, ಜ್ಯೋತಿ ಕಾಂಪೊಸಿಟ್ ಜೂನಿಯರ್ ಕಾಲೇಜು, ಜ್ಯೋತಿ ಕಲಾ ಕೇಂದ್ರ, ಮಲ್ಲಿಕಾರ್ಜುನ ವೇದ ಸಂಸ್ಕೃತ ಪಾಠಶಾಲೆ, ಕೃಷ್ಣ ಯಜುರ್ವೇದ ಕನ್ನಡ ಪ್ರಕಾಶನ - ಇವರಿಂದ ಸ್ಥಾಪನೆಯಾಗಿ, ಮುಂದುವರೆದಿವೆ. **ವ್ಯಾಸಜ್ಯೋತಿ** ಎಂಬ ಪ್ರಶಸ್ತಿಯನ್ನು ಪ್ರಾರಂಭಿಸಿರುವ ಅವರ ಮನೋವೈಶಾಲ್ಯ ಪ್ರಶಂಸನೀಯವಾದುದು.

ವಿಪ್ರ ಸಮುದಾಯದಲ್ಲಿ ಭಿನ್ನತೆಗಳನ್ನು ನಿವಾರಿಸಬೇಕು. ವಿಪ್ರರು ಲೋಭಿಗಳಾಗುವುದನ್ನು ತಪ್ಪಿಸಬೇಕು. ಆದುದರಿಂದ ಉಳ್ಳವರಾದ ವಿಪ್ರರು ಏನೂ ಇಲ್ಲದ ವಿಪ್ರರ ನೆರವಿಗೆ ಬರಬೇಕು ಎಂಬುದೇ ಸಾಕಾರವಾಗಬೇಕಾದ ಅವರ ಕನಸು.



**112.** *ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಸಮಾರಂಭ : ಖ್ಯಾತ ಶಿಕ್ಷಣತಜ್ಞ ಶ್ರೀ ಹೆಚ್.ಎನ್. ಅವರಿಗೆ ಸಂಮಾನ*

# ೧೩. ಸಂಕೇತಿಗಳ ಸಂಘಟನೆಯಲ್ಲಿ ಬಿ.ಎನ್.ವಿ. ಅವರ ಪಾತ್ರ

*ನರಸಿಂಹನ್*

ಸಾಮರ್ಥ್ಯ, ಸಹಾಯ ಹಾಗೂ ಸೇವೆಗಳಿಗೆ ಪರ್ಯಾಯ ಎನಿಸಿರುವ ಶ್ರೀ ಬಿ.ಎನ್.ವಿ. ಅವರ ಬಹುಮುಖ ವ್ಯಕ್ತಿತ್ವದ ಒಂದು ಮುಖ್ಯ ಅಂಶವನ್ನು ಬಿಂಬಿಸುವುದು ಈ ಲೇಖನದ ಉದ್ದೇಶ.

ಬ್ರಾಹ್ಮಣ ಸಮಾಜದ ಸಾವಿರಾರು ಪಂಗಡಗಳಲ್ಲಿ ಸಂಖ್ಯೆಯ ದೃಷ್ಟಿಯಿಂದ ಅತ್ಯಂತ ಕಿರಿದು ಎನ್ನಬಹುದಾದುದು ಬೆಟ್ಟದಪುರ ಸಂಕೇತಿ ಜನಾಂಗದ ಪಂಗಡ. ಅದರ ಹೆಮ್ಮೆಯ ಪ್ರತಿನಿಧಿಗಳಲ್ಲೊಬ್ಬರು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು. ಸಂಕೇತಿ ಬಾಂಧವರ ವಿದ್ವತ್ತು, ಪ್ರತಿಭೆಗಳು ಲೋಕವಿಖ್ಯಾತವಾಗಿದ್ದರೂ, ಒಗ್ಗಟ್ಟು ಹಾಗೂ ಸಾಧಿಸಬೇಕಿರುವ ಗುರಿಗಳ ದೃಷ್ಟಿಯಿಂದ ಇನ್ನೂ ಸಾಕಷ್ಟು ಹಾದಿ ತುಳಿಯಬೇಕಿರುವ ಸಂಕೇತಿಗಳಿಗೆ ಸಂಘವೊಂದರ ಆವಶ್ಯಕತೆ ಇದ್ದುದು, ದಶಕಗಳ ಹಿಂದೆಯೇ ಕಂಡುಬಂದುದೂ ಸಂತಸದ ಸಂಗತಿಯೇ. ಪ್ರಾರಂಭಿಕ ದಿನಗಳಲ್ಲಿ ಸಾಕಷ್ಟು ಸವಾಲುಗಳನ್ನು ಸಂಘ ಎದುರಿಸಬೇಕಾಯಿತು. ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ತಮ್ಮ ಜ್ಯೋತಿ ಇಂಡಸ್ಟ್ರೀಸ್‌ನ ಜವಾಬ್ದಾರಿಯನ್ನು ಆಗತಾನೇ ವಹಿಸಿಕೊಂಡಿದ್ದ ಸಮಯದಲ್ಲಿಯೇ ಸಂಘದ ಒಂದು ಆರ್ಥಿಕ ಬಿಕ್ಕಟ್ಟಿನ ನಿವಾರಣೆಗೆ ತಮ್ಮ ಸಹಾಯಹಸ್ತವನ್ನು ನೀಡಿದರು. ಸಂಘದೊಂದಿಗೆ ಬಾಂಧವ್ಯಕ್ಕೆ ನಾಂದಿ ಹಾಕಿದರು. ಅಂದಿನಿಂದ ಅವರ ಕೊಡುಗೆಗಳ ಧಾರೆ ನಿರಂತರವಾಗಿ ಸಂಘಕ್ಕೆ ಹರಿದುಬರುತ್ತಿದೆ.

ಬೆಂಗಳೂರಿನ ಸಂಘಕ್ಕೊಂದು ಸ್ವಂತ ಕಟ್ಟಡದ ಆವಶ್ಯಕತೆಯಿದೆಯೆಂಬುದನ್ನು ಬಹಳ ಹಿಂದೆಯೇ ಮನಗಂಡ ಶ್ರೀಯುತರು ವಿಶಾಲವಾದ ನಿವೇಶನವೊಂದನ್ನು ಕೊಡುಗೆಯಾಗಿ ನೀಡಿದ್ದಾರೆ. ಕಾರಣಾಂತರಗಳಿಂದ ಸಂಘವು ಈ ಉದಾತ್ತ ಕೊಡುಗೆಯ ಲಾಭವನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಸದ್ಯದಲ್ಲಿಯೇ ಇದು ಸಾಧ್ಯವಾದೀತೆಂಬ ಆಶಯವಿರಿಸಿಕೊಳ್ಳೋಣ.

ಶ್ರೀಯುತರು ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆಯನ್ನು ಪ್ರಾರಂಭಿಸಿದ್ದೂ, ನಮ್ಮ ಸಂಕೇತಿ ಬಾಂಧವರು ನಮ್ಮ ಸಮೃದ್ಧ ಪರಂಪರೆಯನ್ನು ಬೆಳೆಸುವ ಉದ್ದೇಶದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲಿ ಎಂಬ ಆಸೆಯಿಂದಲೇ. ವೇದಪಾಠಶಾಲೆಯಲ್ಲಿ ಆಸಕ್ತ ವಿದ್ಯಾರ್ಥಿಗಳಿರುವುದು ನಿಜವಾದರೂ ಸಂಕೇತಿ ವಿದ್ಯಾರ್ಥಿಗಳು ತೀರಾ ವಿರಳ ಎಂಬುದು ಆಶ್ಚರ್ಯದ ಸಂಗತಿ.

ಸಂಕೇತಿ ಜನಾಂಗದ ಎರಡು ಶಾಖೆಗಳಾದ ಬೆಟ್ಟದಪುರ ಮತ್ತು ಕೌಶಿಕ ಸಂಘಗಳಿಗೆರಡಕ್ಕೂ ಅನುಕೂಲವಾಗುವಂತೆ ವೃದ್ಧಾಶ್ರಮದ ನಿರ್ಮಾಣಕ್ಕೆ ಕನಕಪುರದ ರಸ್ತೆಯಲ್ಲಿ ಪ್ರತ್ಯೇಕವಾದ ನಿವೇಶನವನ್ನು ಶ್ರೀ ಬಿ.ಎನ್.ವಿ. ಅವರು ನೀಡಿರುವುದು ಮತ್ತೊಂದು ಮಹತ್ತರ ಕೊಡುಗೆಯಾಗಿದೆ. ಇಂತಹ ಸದುದ್ದೇಶಕ್ಕಾಗಿ ನೀಡಿರುವ ಕೊಡುಗೆಯನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಎರಡೂ ಸಂಘಗಳ ಜವಾಬ್ದಾರಿಯಾಗಿದೆ.



**113.** *ಪೂಜಾನಿರತ ಸೀತಾಸುಬ್ರಹ್ಮಣ್ಯ*

ಸಂಘದ ಪ್ರತಿಷ್ಠೆಯ ಚಿಹ್ನೆಗಳಾಗಿರುವ ಕಲ್ಯಾಣ ಮಂಟಪ ಮತ್ತು ವಿದ್ಯಾರ್ಥಿನಿಲಯಗಳ ಬೆಳವಣಿಗೆಯಲ್ಲಿಯೂ ಶ್ರೀ ಬಿ.ಎನ್.ವಿ ಅವರ ಪಾತ್ರ ಅತ್ಯಂತ ಮಹತ್ತ್ವದ್ದಾಗಿದೆ. ಕಲ್ಯಾಣ ಮಂಟಪದ ಊಟದ ಮನೆ (ಡೈನಿಂಗ್ ಹಾಲ್)ಗಾಗಿ ಟ್ರಸ್ಟ್‌ನ ವತಿಯಿಂದ ಅವರ ಅಜ್ಜಿಯವರಾದ ಪುಟ್ಟಕ್ಕಯ್ಯನವರ ಹೆಸರಿನಲ್ಲಿ ದಾನ ನೀಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಉಲ್ಲೇಖಿಸಬಹುದಾಗಿದೆ. ಇನ್ನು ವಿದ್ಯಾರ್ಥಿನಿಲಯದ ಸರ್ವತೋಮುಖ

Fct01: D:\Sanketi Uma Mysore\Book 3 Photos - Proof 1, 19.05.05

ಅಭಿವೃದ್ಧಿಯಲ್ಲಿ ಅವರು ತೀವ್ರವಾದ ಆಸಕ್ತಿ ವಹಿಸಿ ವಿಶಿಷ್ಟವಾದ ಭಾರೀ ಕೊಡುಗೆಗಳನ್ನು ನೀಡುತ್ತಲೇ ಬಂದಿದ್ದಾರೆ. ಸಂಘದ ಉದಾತ್ತ ಯೋಜನೆಗಳಲ್ಲಿ ಮುಖ್ಯವಾದ ಅನ್ನದಾನ ನಿಧಿಗೆ ಶ್ರೀಯುತರು ಪ್ರಮುಖ ದಾನಿಗಳಾಗಿರುವುದಷ್ಟೇ ಅಲ್ಲ, ವರ್ಷವಿಡೀ ನಿರಂತರವಾಗಿ ಅನ್ನದಾನ ನಡೆಯುವಂತಾಗಲು ತಮ್ಮ ಮತ್ತೊಂದು ಹಿರಿದಾದ ಕೊಡುಗೆಯನ್ನು ಇತ್ತೀಚೆಗೆ ಘೋಷಿಸಿದ್ದಾರೆ. ಹಾಗೆಯೇ ವಿದ್ಯಾರ್ಥಿ ನಿಲಯವು ಸುಂದರವಾದ ವಿಸ್ತೃತ ಕಟ್ಟಡವೊಂದನ್ನು ಕೆಲ ತಿಂಗಳ ಹಿಂದೆ ಪಡೆದುಕೊಂಡಿದೆ. ಅದರ ಮುಖ್ಯ ಪ್ರೇರಕಶಕ್ತಿ ಶ್ರೀ ಬಿ.ಎನ್.ವಿ. ಅವರೇ ಎಂಬುದನ್ನು ಮತ್ತೆ ಒತ್ತಿ ಹೇಳಬೇಕಿಲ್ಲ. ಒಂದೇ ಕಂತಿನಲ್ಲಿ ನಾಲ್ಕು ಲಕ್ಷ ರೂ.ನಷ್ಟು ಬೃಹತ್ ಕೊಡುಗೆಯನ್ನು ನೀಡಿರುವ ಶ್ರೀಯುತರ ಹೃದಯವೈಶಾಲ್ಯಕ್ಕೆ ನಮೋನಮಃ ಎಂದಷ್ಟೇ ನಾವು ಹೇಳಬಹುದೇನೋ.

ಹೀಗೆ ಶ್ರೀ ಬಿ.ಎನ್.ವಿ. ಅವರ ಕೊಡುಗೆಗಳ ಪಟ್ಟಿ ಕೊನೆಯೇ ಇಲ್ಲದಂತೆ ಮುಂದುವರೆಯುತ್ತಿರುವುದು ನಮ್ಮ ಸಂಘದ ಅಪೂರ್ವಪುಣ್ಯ. ಇಂತಹ ಸತ್ಪರಂಪರೆಯ ಹರಿಕಾರರಾಗಿರುವ ಶ್ರೀ ಬಿ.ಎನ್.ವಿ. ಅವರು ನಮ್ಮ ಸಂಕೇತಿ ಬಂಧುಗಳು ಎಂಬುದು ರೋಮಾಂಚನಗೊಳಿಸುವ, ನಮ್ಮ ಹೆಮ್ಮೆಯನ್ನು ವರ್ಧಿಸುವ ಸಂಗತಿ. ಜತೆಗೇ, ಶ್ರೀ ಬಿ.ಎನ್.ವಿ. ಅವರು ಕೆಲವು ಪ್ರಮುಖ ಅಂಶಗಳತ್ತ ನಮ್ಮೆಲ್ಲರ ಗಮನ ಸೆಳೆದು ಅವುಗಳನ್ನು ಕಾರ್ಯಗತ ಮಾಡುವ ದಿಕ್ಕಿನಲ್ಲಿ ನಮ್ಮನ್ನು ಪ್ರೇರೇಪಿಸುತ್ತಿದ್ದಾರೆ.

ಶ್ರೀ ಬಿ.ಎನ್.ವಿ. ಅವರ ಒತ್ತು- ಒಗ್ಗಟ್ಟು ಮತ್ತು ಸೇವೆಗಳ ಕುರಿತಾಗಿದೆ. ಅಂದರೆ ನಮ್ಮ ಸಮುದಾಯದ ಯಾವುದೇ ಕೊರತೆ, ದೋಷಗಳಿಗೆ ನಮ್ಮನಮ್ಮಲ್ಲಿರುವ ಅರ್ಥವಿಲ್ಲದ ಭಿನ್ನಾಭಿಪ್ರಾಯ ಮತ್ತು ಸಣ್ಣತನಗಳು ಕಾರಣ ಎಂಬುದು ಅವರ ಖೇದ. ಇವುಗಳನ್ನು ನಿವಾರಿಸಿಕೊಂಡರೆ ಸಾಮರ್ಥ್ಯ ಮತ್ತು ಅರ್ಹತೆಗಳಿಗೆ ಕೊರತೆಯೇ ಇರದ ನಮ್ಮ ಬಾಂಧವರೆಲ್ಲರೂ ಸುಖ ಸಮೃದ್ಧಿಯನ್ನು ಹೊಂದುವುದು ಖಂಡಿತ ಸಾಧ್ಯವೆಂಬುದು ಶ್ರೀ ಬಿ.ಎನ್.ವಿ. ಅವರ ಖಚಿತ ನಿಲುವು.

ಇನ್ನೊಂದು ಅಂಶವನ್ನು ಅವರು ಪ್ರಸ್ತಾಪಿಸುವುದು **ಸೇವೆ.** ಸಮಾಜದಿಂದ ಪಡೆದುಕೊಂಡ ಲಾಭದಲ್ಲಿ ಕಿಂಚಿತ್ತಾದರೂ ಸಮಾಜಕ್ಕೇ ಮರಳಿಸುವುದು ಪ್ರತಿಯೊಬ್ಬ ನಾಗರಿಕನ ಧ್ಯೇಯವಾಗಬೇಕೆಂಬುದು ಶ್ರೀ ಬಿ.ಎನ್.ವಿ. ಅವರ ಮನದ ಇಂಗಿತ. ಸಮಾಜಸೇವೆಗೆಂದೇ ಹಲವು ಹತ್ತು ಪ್ರಕಾರಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡಿರುವ ಶ್ರೀ ಬಿ.ಎನ್.ವಿ. ಅವರ *ಈ* ಕಾಳಜಿ ಅತ್ಯಂತ ಸಮರ್ಪಕವೂ, ಅತ್ಯವಶ್ಯಕವೂ ಆಗಿದೆ. ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಪ್ರಾರಂಭಿಸಿ ತಮ್ಮ ದಕ್ಷತೆ, ತ್ಯಾಗ, ಶ್ರದ್ಧೆ ಹಾಗೂ ಸೇವಾಮನೋಭಾವದಿಂದ ಒಂದು ಸಂಸ್ಥೆಯೇ ಆಗಿರುವ ಶ್ರೀ ಸುಬ್ರಹ್ಮಣ್ಯ ಅವರು ವ್ಯಕ್ತಿಗಿಂತ ಸಮಷ್ಟಿ ಶ್ರೇಷ್ಠ ಎಂದು ಪ್ರತಿಪಾದಿಸಿದ್ದಾರೆ. ಅವರು ಅಂತಹ ಅಪೂರ್ವ ಪರಿಪೂರ್ಣ ವ್ಯಕ್ತಿತ್ವದ **ತುಂಬಿದ ಕೊಡ**ವೇ ಆಗಿರುವುದು ನಮ್ಮ ಸಮಾಜದ ಭಾಗ್ಯವೇ ಸರಿ.



***114.** ನಾಗಲಕ್ಷ್ಮಿ ಅವರ ಮಗ ರಮೇಶ್ : ಉಪನಯನ : ಭಿಕ್ಷೆ : ಪಾರ್ವತಮ್ಮನವರಿಂದ*

# ೧೪. ಸದ್ಗೃಹಸ್ಥ ಬಿ.ಎನ್.ವಿ.ಯವರ ಸಾರ್ಥಕ ಅರುವತ್ತು

*ಹರಿಹರಪುರ ಬಿ.ಸುಬ್ರಹ್ಮಣ್ಯಂ*

ಸಮಾಜದಲ್ಲಿ ಗೃಹಸ್ಥರೆನ್ನಿಸಿಕೊಳ್ಳುವವರ ಸಂಖ್ಯೆಗೆ ಮಿತಿಯಿಲ್ಲ. ಆದರೆ ಸದ್ಗೃಹಸ್ಥ ಎಂದು ಹೆಸರಿಸಬಹುದಾದವರು ಮಾತ್ರ ತೀರಾ ವಿರಳ. ಅಂತಹ ವಿರಳರಲ್ಲೊಬ್ಬರು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು.

ಮನುಷ್ಯ ಹುಟ್ಟುತ್ತಾನೆ; ಬೆಳೆಯುತ್ತ, ೬೦-೭೦-೮೦ ಹೀಗೆ ಪಡೆದು ಬಂದ ಆಯುಸ್ಸನ್ನು ಸವೆಸಿ ಹೊರಟು ಹೋಗುತ್ತಾನೆ. ಮಾನವನ ಈ ಆಯುರ್ಮಾನದಲ್ಲಿ ಅರುವತ್ತು ವಯಸ್ಸು ತುಂಬಿತು ಎಂಬುದು ಒಂದು ಮುಖ್ಯವಾದ ಘಟ್ಟವೇನೋ ನಿಜ. ಆದರೆ ಅದು ಹೇಗೆ ಸಾರ್ಥಕವಾಯಿತು ಎಂಬುದು ಅದಕ್ಕಿಂತ ಮುಖ್ಯ. ಬದುಕು ಎಂಬುದು ಒಂದು ದಾರಿಯಿದ್ದಂತೆ. ಬದುಕು ಸಾರ್ಥಕವೆನಿಸಬೇಕಾದರೆ ಈ ಹಾದಿಯಲ್ಲಿ ಹೆಜ್ಜೆಯ ಗುರುತುಗಳು ಸ್ಪಷ್ಟವಾಗಿ ಮೂಡಿಬರಬೇಕು. ಆಗಲೇ ಅದುವರೆಗೆ ಬಾಳಿದ ಬದುಕು ಸಾರ್ಥಕವೆನಿಸುತ್ತದೆ. ಮತ್ತು ಉಳಿದಿರುವ ಬದುಕಿನ ದಾರಿಯ ಪಯಣ ಆ ಸಾರ್ಥಕತೆಯನ್ನು ಪರಮಾವಧಿಗೆ ಕೊಂಡೊಯ್ಯುತ್ತದೆ. ಪೂರ್ವಪುಣ್ಯ, ಸ್ವಂತ ಪರಿಶ್ರಮಗಳಿಂದ ಶ್ರೀ ಬಿ.ಎನ್.ವಿಯವರ ಈ ಅರುವತ್ತು ವರ್ಷ ಸಾರ್ಥಕವೂ ಆಗಿದೆಯೆಂಬುದು ಅವರಿಗೆ ಪ್ರಿಯರಾಗಿರುವ ಸಮಸ್ತರಿಗೂ ಹೆಮ್ಮೆಯ ವಿಷಯವೇ ಸರಿ.



**116.** *ಬಿ.ಎನ್.ವಿ.: ತೀರ್ಥಯಾತ್ರೆ : ಬದರಿಯಲ್ಲಿ*



**115.** *ಹರಿದ್ವಾರದಲ್ಲಿ ಸೀತಾ ಮತ್ತು ಉಷಾ ಅವರಿಂದ ಗಂಗಾಪೂಜೆ*

ನಮ್ಮ ಪ್ರಾಚೀನ ವೈದಿಕ ಸಂಸ್ಕೃತಿಯು ಮಾನವನ ಬದುಕಿನ ಮಾರ್ಗವು ಹೇಗಿದ್ದರೆ ಚೆನ್ನ ? ಎಂಬುದನ್ನು ಬಹು ಸೊಗಸಾಗಿ ನಿರ್ದೇಶಿಸುತ್ತಿದೆ. ಬಾಲ್ಯದಲ್ಲಿ ಬ್ರಹ್ಮಚಾರಿಯಾಗಿ (ಅಂದರೆ ಸಂಯಮವನ್ನು ಕಾಪಾಡಿಕೊಂಡು) ವಿದ್ಯಾಭ್ಯಾಸವನ್ನು ಶ್ರದ್ಧೆಯಿಂದ ನಡೆಸುತ್ತ ಪರಿಣತಿ ಪಡೆದು, ಯೌವನವಂತನಾದಾಗ ವಿವಾಹಿತನಾಗಿ ಸದ್ವೃತ್ತಿಯನ್ನಾಶ್ರಯಿಸಿ, ಗೃಹಸ್ಥ ಧರ್ಮವನ್ನು ಪರಿಪಾಲಿಸಬೇಕು. ಮುಪ್ಪು ಬಂದೊಡನೆ ಎಲ್ಲ ಚಪಲತೆಗಳನ್ನು ದೂರ ಮಾಡಿ ಭಗವಚ್ಚಿಂತನೆಯಲ್ಲಿ ನಿರತನಾಗಿ ಕೊನೆಗೆ ಎಲ್ಲವನ್ನೂ ಬಿಟ್ಟು ಸಂನ್ಯಾಸಿಯಂತಿದ್ದು ಹೊರಟು ಹೋಗಬೇಕು.

**ಶೈಶವೇऽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಮ್ |**
**ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್ ||**
(ಕಾಳಿದಾಸನ 'ರಘುವಂಶ')

ನಾಲ್ಕು ಆಶ್ರಮಗಳಲ್ಲಿ ಸಮಾಜಕ್ಕೆ ಆಧಾರಸ್ವರೂಪವಾದ ಗೃಹಸ್ಥಾಶ್ರಮದ ಹೊಣೆಗಾರಿಕೆ ಗುರುತರವಾದದ್ದು. ತೈತ್ತಿರೀಯ ಉಪನಿಷತ್ತು ಹೇಳುತ್ತದೆ:- **ಅನ್ನಂ ಬಹುಕುರ್ವೀತ ತದ್ವ್ರತಮ್||** ಗೃಹಸ್ಥನಾದವನು ಅನ್ನದ ಉತ್ಪಾದನೆಯನ್ನು ಹೆಚ್ಚಿಸಬೇಕು. ಅದು ಅವನ ಕರ್ತವ್ಯ. ಅನ್ನವನ್ನು ಹೆಚ್ಚಿಸುವುದೆಂದರೆ ಆಹಾರ ಧಾನ್ಯಗಳನ್ನು ಅಧಿಕವಾಗಿ ಬೆಳೆಯುವುದೆಂದಷ್ಟೇ ಅರ್ಥವಲ್ಲ. ಜನರ ಜೀವನಕ್ಕೆ ಬಹುಮುಖ್ಯವಾದ ಅನ್ನಸಂಪಾದನೆಯ ಮಾರ್ಗಗಳನ್ನು ಕಲ್ಪಿಸುವುದು. ಅದೂ ಈಗಿನ ದಿನಗಳಲ್ಲಿ ಅತಿ ಮುಖ್ಯ. 'ಜ್ಯೋತಿ ಇಂಡಸ್ಟ್ರೀಸ್' ಪ್ರಾರಂಭಿಸಿ, ನಡೆಸಿಕೊಂಡು ಬರುತ್ತ, ಬಿ.ಎನ್.ವಿ.ಯವರು ಅನೇಕರಿಗೆ ಅನ್ನಸಂಪಾದನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಂತಹ ಉದ್ಯಮಗಳ ಮೂಲಕ ಸಂಪಾದನೆಯೂ ಆಗುತ್ತದೆ. ಹಣ ಕೈ ಸೇರುತ್ತ ಹೋದಾಗ ಮಜಾ ಉಡಾಯಿಸಲು ಅಥವಾ ಮತ್ತೂ ಮತ್ತೂ ಸಂಪತ್ತನ್ನು ಕೂಡಿ ಹಾಕುತ್ತಲೇ ಹೋಗಲು ಹಲವು ಮಾರ್ಗಗಳಿವೆ. ಆದರೆ ಅಂತಹ ದಾರಿಯನ್ನು ಹಿಡಿಯದೆ ಕಾಲಕ್ಕೆ ತಕ್ಕಂತೆ ಕಾರ್ಪಣ್ಯವಿಲ್ಲದ ಸರಳ ಜೀವನ ನಡೆಸುತ್ತ ಸರ್ವಜನೋಪಯೋಗಕ್ಕಾಗಿ ಸಂಚಿತ ಧನವನ್ನು ವಿನಿಯೋಗಿಸುವುದು ಅಗತ್ಯ. **ತ್ಯಾಗಾಯ ಸಂಭೃತಾರ್ಥಾನಾಮ್** ರಘುವಂಶದ ರಾಜರು ಹಣವನ್ನು ಶೇಖರಿಸುತ್ತಿದ್ದುದು ಸದ್ವಿನಿಯೋಗಕ್ಕಾಗಿ ಎಂದು ಮಹಾಕವಿ ಕಾಳಿದಾಸ ಹೇಳುತ್ತಾನೆ. ವೇದವಿದ್ಯಾಶಾಲೆ-ಆಧುನಿಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ನಡೆಸುತ್ತಿರುವ ಬಿ.ಎನ್.ವಿ.ಯವರು ಅದೇ ಆದರ್ಶವನ್ನು ಅನುಸರಿಸುತ್ತಿರುವುದು ಸರ್ವವೇದ್ಯ.

ಎರಡನೆಯ ಬಾರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾಗಿ ಬ್ರಾಹ್ಮಣ ಸಮಾಜಕ್ಕೆ ಅವರಿಂದ ಸಲ್ಲುತ್ತಿರುವ ನಿಃಸ್ವಾರ್ಥ ಸೇವೆಯ ಮಹತ್ತನ್ನು ಹೇಳತೀರದು.

ಶ್ರೀ ಬಿ.ಎನ್.ವಿ.ಯವರು ಸ್ವಪರಿಶ್ರಮದಿಂದ ಮೇಲಕ್ಕೆ ಬಂದವರು. ಜೀವನದಲ್ಲಿ ಕಷ್ಟ-ದುಃಖಗಳನ್ನೂ ಅನುಭವಿಸಿದವರು. ಆದರೆ ಅವು ಅವರ ಧೃತಿಯನ್ನು ಕೆಡಿಸಲಿಲ್ಲ. ಅದರಿಂದ ಅವರ ಸಾಮಾಜಿಕ ಸೇವಾಭಾವನೆ ಮತ್ತಷ್ಟು ಹೆಚ್ಚಿತು. ಇದು ಸಮಾಜದ ಭಾಗ್ಯ.

ಇಲ್ಲಿ ಉಪಯೋಗಿಸಿರುವ ಯಾವ ಮಾತೂ ಬಿ.ಎನ್‌ವಿ.ಯವರ ಬಗ್ಗೆ ಅತಿ ಪ್ರಶಂಸೆಯ ಉದ್ದೇಶದ್ದಲ್ಲ ಎಂಬುದು ಅವರನ್ನು ಬಲ್ಲವರಿಗೆಲ್ಲ ತಿಳಿದೇ ಇದೆಯೆಂದು ನನ್ನ ನಂಬಿಕೆ.

ಈಗಿನ ದಿನಗಳಲ್ಲಿ ಅರುವತ್ತು ವಯಸ್ಸು ಆದ ಮಾತ್ರಕ್ಕೆ ಹಿಂದೆ ಚಾಲತಿಯಲ್ಲಿದ್ದಂತೆ ಮುಪ್ಪು ಅಡರಿತು ಎಂದೇನೂ ಅಲ್ಲ. ಸಮಗ್ರ ಸಮಾಜದ ಹಿತಕ್ಕಾಗಿಯೇ ತಮ್ಮಿಂದ ಸಾಧ್ಯವಾದಷ್ಟು ಶ್ರಮಿಸುತ್ತಿರುವ ಶ್ರೀ ಬಿ.ಎನ್.ವಿ.ಯವರ ಬದುಕು ಋಗ್ವೇದದ ಈ ಆಶೀರ್ವಚನ ಮಂತ್ರದಂತೆ ಆಗಲಿ.

**ಶತಂ ಜೀವ ಶರದೋ ವರ್ಧಮಾನಃ |**
**ಶತಂ ಹೇಮಂತಾನ್ ಶತಮುವಸಂತಾನ್ ||**

ನೂರು ವರ್ಷ ಬಾಳಬೇಕು. ಅದರಲ್ಲಿಯೂ 'ವರ್ಧಮಾನ' ಅಂದರೆ ಅಭಿವೃದ್ಧಿ ಹೊಂದುತ್ತ ಅಂದರೆ ರೋಗ-ರುಜಿನ, ವ್ಯಸನ-ಹಿನ್ನಡೆಗಳಿಲ್ಲದೆ ಸಂತೋಷದಿಂದ ಬದುಕಬೇಕು. ಹೀಗೆಂದು ನಾವೆಲ್ಲರೂ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರ ಸಾರ್ಥಕ ಷಷ್ಟಿಪೂರ್ತಿಯಲ್ಲಿ ಪರಮೇಶ್ವರನನ್ನು ಪ್ರಾರ್ಥಿಸೋಣ.

*ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು*
*ಶತಾಯುಷಿಗಳಾಗಿ ನಾಡಿನಾದ್ಯಂತ*
*ವಿದ್ಯೆಯನ್ನು ಪಸರಿಸಲಿ ಎಂದು ಆಶಿಸೋಣ.*



***117.*** *ಬಿ.ಎನ್.ವಿ. ಬದರೀಯಾತ್ರೆಯಿಂದ ಹಿಂದಿರುಗಿದಾಗ ಬೆಂಗಳೂರು ಶ್ರೀ ಶಂಕರಮಠದಲ್ಲಿ ಶ್ರೀ ಲಲಿತಾ ಸಹಸ್ರನಾಮ, ಗಂಗಾ ಸಂತರ್ಪಣೆ*

# ೧೫. ಅಬಲಾಶ್ರಮದಲ್ಲಿ ಶ್ರೀ ಬಿ.ಎನ್.ವಿ.ಯವರ ಸಕ್ರಿಯ ಪಾತ್ರ

***ಬಾ. ವೆಂ.ಶೇಷ***

೨೦೦೨ ಅಕ್ಟೋಬರ್ ೩೧ರಂದು ನನಗೊಂದು ದೂರವಾಣಿ ಕರೆ ಬಂತು: "ನಾಳೆ ನಮ್ಮ ತೋಟದಲ್ಲಿ ನಾವೆಲ್ಲಾ ಸೇರ್ತಾ ಇದೀವಿ. ನೀವೂ ಬನ್ನಿ. ಕಳೆದ ವರ್ಷದಂತೆ ಆಶ್ರಮದ ಹುಡುಗಿಯರೆಲ್ಲರೂ ಬರಬೇಕು. ಬಸ್ ಕಳಿಸ್ತೀನಿ" - ತಮ್ಮ ಮಗಳು ಜ್ಯೋತಿಯ ನೆನಪಿನಲ್ಲಿ ನಡೆಯುವ ವಾರ್ಷಿಕ 'ಮಿಲನ' ಕಾರ್ಯಕ್ರಮಕ್ಕೆ ಶ್ರೀ ಬಿ.ಎನ್.ವಿ.ಯವರ ಆತ್ಮೀಯ ಆಮಂತ್ರಣ ಅದಾಗಿತ್ತು.

ಬೆಂಗಳೂರಿನ ಅನೇಕ ಅನಾಥಾಲಯಗಳಿಗೆ ಶ್ರೀಯುತರು ಪರಿಚಿತರು. ಅಂತೆಯೇ ಅಬಲಾಶ್ರಮಕ್ಕೂ ಸಹ ಅನೇಕ ವರ್ಷಗಳಿಂದ ಪರಿಚಿತರು. *ಈ* ಪರಿಚಯ ಘನಿಷ್ಠವಾಗಿ ಕೆಲ ವರ್ಷಗಳಿಂದ ಅವರು ಅದರ ಉಪಾಧ್ಯಕ್ಷರೂ ಹೌದು.

ಅಬಲಾಶ್ರಮದಲ್ಲಿ ಅನಾಥ ಹೆಣ್ಣುಮಕ್ಕಳ ಸಂಪೂರ್ಣ ಪುನರ್ವಸತಿಯ ಭಾಗವಾಗಿ, ಅವಕಾಶವಾದಾಗ ಅವರ ವಿವಾಹವನ್ನೂ ಹಮ್ಮಿಕೊಳ್ಳಲಾಗಿದೆ. ಆ ಸಮಯದಲ್ಲಿ ಪಾಣಿಗ್ರಹಣ ಮಾಡಿಕೊಡಲು, ಪದ್ಧತಿಯಂತೆ ಆಶ್ರಮದ ಅಧ್ಯಕ್ಷರಿಗೆ ಅನಾನುಕೂಲವಾದಾಗ, ಉಪಾಧ್ಯಕ್ಷರಾದ ಶ್ರೀ ಬಿ.ಎನ್.ವಿ. ಯವರಿಗೆ ವಿನಂತಿಸಿದೆ. ಅವರು ವಿಷಯ ತಿಳಿದು ಸಂತೋಷದಿಂದ ಭಾವಪರವಶರಾದರು. ಕಣ್ಣಲ್ಲಿ ನೀರು ತುಂಬಿ ಬಂದು, "*ಈ* ಜನ್ಮದಲ್ಲಿ ನನಗೆ 'ಕನ್ಯಾಸೆರೆ' ಬಿಡಿಸುವ ಅವಕಾಶ ಸಿಗುವುದಿಲ್ಲ ಎಂದುಕೊಂಡಿದ್ದೆ. *ಈ*ಗ ಏನು ಹೇಳಬೇಕು ಎಂದು ತಿಳಿಯುತ್ತಿಲ್ಲ. ಖಂಡಿತವಾಗಿಯೂ ಪಾಲ್ಗೊಳ್ಳುತ್ತೇನೆ" ಎಂದು ತಿಳಿಸಿ ಬಂದು ಸಕ್ರಿಯವಾಗಿ ಭಾಗವಹಿಸಿದರು. ಹೀಗೆ ಅವರು ವಿವಾಹಗಳಲ್ಲಿ ಅನಾಥಬಾಲೆಯರ ಪಿತೃಸ್ಥಾನದಲ್ಲಿ ನಿಂತು ಪ್ರಮುಖಪಾತ್ರ ವಹಿಸಿದರು. ಅಷ್ಟೇ ಅಲ್ಲ, ತಾವು ಧಾರೆ ಎರೆದುಕೊಟ್ಟ ಎಲ್ಲ ಹೆಣ್ಣು ಮಕ್ಕಳ ಯೋಗಕ್ಷೇಮವನ್ನೂ ಪದೇಪದೇ ವಿಚಾರಿಸಿ ತಿಳಿದುಕೊಳ್ಳುತ್ತಿರುತ್ತಾರೆ.



***118.** ಡಿವಿಜಿ ರಸ್ತೆಯಲ್ಲಿರುವ ಅಬಲಾಶ್ರಮದಲ್ಲಿ ವಿವಾಹ ನೆರವೇರಿಸಿದ ಬಿ.ಎನ್.ವಿ. ದಂಪತಿ*

## ೧೬. ಸಂಕೇತಿ ಮಹಾಪುರುಷ ಬಿ.ಎನ್.ವಿ. ಸುಬ್ರಹ್ಮಣ್ಯ

*ಬಿ.ಆರ್. ನಾಗರಾಜ್*

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ** ಕಳೆದ ಆರು ವರ್ಷಗಳಿಂದ ಅವರ ನೇತೃತ್ವದಲ್ಲಿ ಬ್ರಾಹ್ಮಣರ ಒಗ್ಗಟ್ಟಿಗಾಗಿ ಶ್ರಮಿಸುತ್ತಿದೆ. ನಿರಾಶ್ರಿತರಿಗೆ ಸಹಾಯ, ನಿರುದ್ಯೋಗಿಗಳಿಗೆ ಸ್ವಂತ ಉದ್ಯೋಗಕ್ಕಾಗಿ ಸಹಾಯ ಅವರ ಧ್ಯೇಯವಾಗಿದೆ. ಹಾಗೆಯೇ ಮಹಿಳೆಯರಿಗೂ ಸಹ ಉದ್ಯೋಗಕ್ಕಾಗಿ ಸಹಾಯ ಮಾಡುವುದೂ ಅಷ್ಟೇ ಮುಖ್ಯ ಎಂದು ಅವರು ಭಾವಿಸುತ್ತಾರೆ.

ಶ್ರೀಯುತರ ಅಧ್ಯಕ್ಷತೆಯಲ್ಲಿ **ಏಳನೇ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಮ್ಮೇಳನ** ಯಶಸ್ವಿಯಾಗಿ ನಡೆಯಿತು. ಧಾರ್ಮಿಕ ಕಾರ್ಯಗಳಲ್ಲಿ ಬಹಳ ಆಸಕ್ತಿಯುಳ್ಳ ಅವರ ಅಧ್ಯಕ್ಷತೆಯಲ್ಲಿ **ಮಹಾರುದ್ರಯಾಗ** ವಿಜೃಂಭಣೆಯಿಂದ ನಡೆಯಿತು. ಇದರ ಅಂಗವಾಗಿ ಮರುದಿನ ಅವರ ನೇತೃತ್ವದಲ್ಲಿ ನಡೆದ ಬೃಹತ್ ಮೆರವಣಿಗೆಯಲ್ಲಿ ಕರ್ನಾಟಕದ ಸಾವಿರಾರು ಬ್ರಾಹ್ಮಣರು ಪಾಲ್ಗೊಂಡಿದ್ದರು.

ಬೆಟ್ಟದಪುರಸಂಕೇತಿಗಳಾದ ಶ್ರೀ ಸುಬ್ರಹ್ಮಣ್ಯರವರು ನಮ್ಮ ಸಂಘವನ್ನು ಬೇರೆ ಎಂದು ಭಾವಿಸದೆ, ಪ್ರತಿ ವರ್ಷವೂ ಉದಾರವಾಗಿ ಧನಸಹಾಯ ಮಾಡುತ್ತಿದ್ದಾರೆ. ಅವರು ತಮ್ಮ ಜಮೀನಿನಲ್ಲಿ ವೃದ್ಧಾಶ್ರಮವನ್ನು ಕಟ್ಟಲು ನಮ್ಮ ಕೌಶಿಕ ಸಂಕೇತಿ ಸಂಘಕ್ಕೆ ಜಾಗ ಕೊಡಲು ಸಿದ್ಧರಾಗಿದ್ದಾರೆ. ಅವರು ರಾಮನಾಥಪುರದ ಬ್ರಾಹ್ಮಣ ಕಲ್ಯಾಣ ಮಂಟಪಕ್ಕೆ ಬಹಳ ಉದಾರವಾಗಿ ಧನಸಹಾಯ ಮಾಡಿದ್ದಾರೆ.

ಶ್ರೀ ಸುಬ್ರಹ್ಮಣ್ಯರವರಿಗೆ ೧೯೯೧ರಲ್ಲಿ ಶಿಕ್ಷಣಕ್ಷೇತ್ರದ ಸೇವೆಗಾಗಿ ರಾಜ್ಯಪ್ರಶಸ್ತಿ ದೊರೆತದ್ದು, ಕರ್ನಾಟಕದ ಬ್ರಾಹ್ಮಣರಿಗೆಲ್ಲ ಅತ್ಯಂತ ಸಂತೋಷವನ್ನುಂಟುಮಾಡಿದೆ. ಇಂಥ ಒಬ್ಬ ಮಹಾಪುರುಷರನ್ನು **ಸಂಕೇತಿ** ಎಂದು ಹೇಳಿಕೊಳ್ಳುವುದು ನಮಗೆಲ್ಲ ಬಹಳ ಹೆಮ್ಮೆಯ ಸಂಗತಿಯಾಗಿದೆ.

## ೧೭. ಜ್ಯೋತಿ ಬೆಳಗುವ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ

*ಡಾ. ಬಿ.ಎಸ್. ಪ್ರಣತಾರ್ತಿಹರನ್*

ಸಮಾಜಸೇವಾ ವ್ರತಿ, ಧರ್ಮಸಂರಕ್ಷಕ, ವಿಪ್ರಭಾಸ್ಕರ ಶ್ರೀ ಬೆಟ್ಟದಪುರ ನಾರಾಯಣಸ್ವಾಮಿ ವೆಂಕಟ ಸುಬ್ರಹ್ಮಣ್ಯ (ಜ. ೧೫.೧೦.೧೯೪೨) ಅವರದು ಜ್ಯೋತಿ ಬೆಳಗುವ ಜೀವನ. ಶ್ರೀ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ, ಶ್ರೀ ಜ್ಯೋತಿ ಕೇಂದ್ರೀಯ ವಿದ್ಯಾಲಯ, ಶ್ರೀ ಜ್ಯೋತಿ ಚಾರಿಟಬಲ್ ಟ್ರಸ್ಟ್, ಶ್ರೀ ಮಲ್ಲಿಕಾರ್ಜುನ ವೇದ-ಸಂಸ್ಕೃತ ಪಾಠಶಾಲಾ, ವೈದಿಕ ಧರ್ಮಸಹಾಯಸಭಾ ಟ್ರಸ್ಟ್ ... ಬಿ.ಎನ್.ವಿ. ಅವರು ಸಮಾಜಸೇವೆಗೆಂದೇ ಸ್ಥಾಪಿಸಿ ಪೋಷಿಸುತ್ತಿರುವ ಸಂಸ್ಥೆಗಳ ಪಟ್ಟಿ ಹೀಗೆ ಬೆಳೆಯುತ್ತದೆ. ಅದರ ಜತೆಗೆ ಅಬಲಾಶ್ರಮ, ಸರ್. ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್, ನ್ಯಾಷನಲ್ ಎಜುಕೇಷನ್ ಟ್ರಸ್ಟ್, ಶ್ರೀ ಸುರಸರಸ್ವತೀ ಸಭಾ ಶೃಂಗೇರಿ, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು - ಹೀಗೆ ಅನೇಕ ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿಃಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಅಮೃತಸ್ಪರ್ಶದಿಂದ ಜೀವ ಪಡೆದ, ಮುನ್ನಡೆದ, ಮಿಂಚಿ ಮೆರೆದ ವ್ಯಕ್ತಿಗಳಿಗೆ, ಕುಟುಂಬಗಳಿಗೆ, ಸಂಘ-ಸಂಸ್ಥೆಗಳಿಗೆ ಲೆಕ್ಕವಿಲ್ಲ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಐದನೆಯ ಬಾರಿ ಸರ್ವಾನುಮತದಿಂದ ಪ್ರತಿಷ್ಠಾಪನೆಗೊಂಡ ಗೌರವ ಅವರದು. ಸಾರ್ವತ್ರಿಕ ಸಮಾಜಕ್ಕೆ ಅವರು ಸಲ್ಲಿಸಿದ ಸೇವೆ ಅದಕ್ಕಿಂತ ದೊಡ್ಡದು. ಅದಕ್ಕಾಗಿ ರಾಜ್ಯೋತ್ಸವ ಪ್ರಶಸ್ತಿ (೧೯೯೧), ರಾಜೀವಗಾಂಧಿ ಪ್ರಶಸ್ತಿ (೧೯೯೫) ಅವರನ್ನು ಅಲಂಕರಿಸಿವೆ. ಅವೆಲ್ಲಕ್ಕಿಂತ ಹೆಚ್ಚಾಗಿ ಸಮಗ್ರ ಸಮಾಜದ ಪ್ರೀತಿಯ, ಗೌರವದ, ಆತ್ಮೀಯತೆಯ, ಆರಾಧ್ಯಮೂರ್ತಿ ಅವರಾಗಿದ್ದಾರೆ; ಆದರೆ ಎಲೆಮರೆಯಲ್ಲಿ ಉಳಿಯುವುದರಲ್ಲಿ ತೃಪ್ತರಾಗಿದ್ದಾರೆ.

ಬಿ.ಎನ್.ವಿ. ಪುಟಗೊಂಡದ್ದು ಬಡತನದ ಮೂಸೆಯಲ್ಲಿ. ತಂದೆ ನಾರಾಯಣಸ್ವಾಮಿ ಅವರು ಸ್ವರ್ಗಸ್ಥರಾದಾಗ ಬಿ.ಎನ್.ವಿ. ಹದಿನೆಂಟು ತಿಂಗಳ ಮಗು. ಆಗ ಅವರ ಮನೆಗೆ ದಿಕ್ಕಾದವರು ತಾಯಿ ಕಾವೇರಮ್ಮನವರ ತಾಯಿ ಪುಟ್ಟಕ್ಕಯ್ಯಮ್ಮ. ಆಕೆಯೇ ವೃದ್ಧೆ, ವಿಧವೆ, ಬಡವಿ; ಮಂದಿಯ ಮನೆಯಲ್ಲಿ ಅಡುಗೆ ಕೆಲಸ ಮಾಡಿ ಐದು ಜನರ ಸಂಸಾರ ಪೋಷಿಸಿದರು. ಬೆಟ್ಟದಪುರದ ಶ್ಯಾನುಭೋಗರ ಧೀಮಂತ ಮನೆತನಕ್ಕೆ ಸಾಲಿಗ್ರಾಮ, ಕೃಷ್ಣರಾಜನಗರದಲ್ಲಿ ಹೀಗೆ




***119.*** *ಬಿ.ಎನ್.ವಿ.: ಆಗಿನ ರಾಷ್ಟ್ರಪತಿ ಶಂಕರದಯಾಳಶರ್ಮಾ ಅವರೊಂದಿಗೆ*

ಅನಾಥ ಮುದುಕಿಯೊಬ್ಬಳ ಮಡಿಲು ಆಸರೆಯಾಯಿತು; ಬಿ.ಎನ್.ವಿ. ಕಣ್ಣು ಬಿಡುವಾಗಲೇ ಬಡತನದ ಬೇಗೆಯ ಅನುಭವ ಪಡೆದರು, ಅಜ್ಜಿಯ ಛಲ ಮತ್ತು ಸೇವೆಯ ಸಂಜೀವಿನೀಮಂತ್ರದ ಉಪದೇಶ ಪಡೆದರು. ಮುಂದೆ ಮಡಿಕೇರಿಯಲ್ಲಿ ಅಕ್ಕನ ಆಶ್ರಯದಲ್ಲಿ ಡ್ರಾಫ್ಟ್ಸ್‌ಮನ್ ತರಪೇತಿ (೧೯೬೦-೬೧), ಬೆಂಗಳೂರಿನ ಕೈಗಾರಿಕೆಗಳಲ್ಲಿ ೧೦ ವರ್ಷ ಅನುಭವ, ಬೆಂಗಳೂರಿನ ಸರಕಾರಿ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯ ವಿದ್ವಾನ್ ಹರವೆ ಮಲ್ಲಿಕಾರ್ಜುನಶಾಸ್ತ್ರಿಗಳ ಏಕಮಾತ್ರ ಪುತ್ರಿ ಸೀತಾ ಅವರೊಂದಿಗೆ ವಿವಾಹ (೧೯೬೮), ಬೆಳಕಾಗಿ ಬಂದ ಮಗಳು ಜ್ಯೋತಿಯ ಜನನ (೨೫.೬.೧೯೭೧); ಜೀವನದ ಮಹಾ ತಿರುವು.

ಅದು ಮೆಕ್ಯಾನಿಕಲ್ ಇಂಜಿನಿಯರ್ ಬಿ.ಎನ್.ವಿ.ಗೆ ಆತ್ಮವಿಶ್ವಾಸ ತುಂಬಿದ ವರ್ಷ (೧೯೭೧). ಜ್ಯೋತಿ ಗ್ರೂಪ್ ಆಫ್ ಇಂಡಸ್ಟ್ರೀಸ್ ಸ್ಥಾಪನೆ, ಶ್ರೀಮಂತಿಕೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಉತ್ತಮ ಸ್ಟೈಯಿನ್‌ಲೆಸ್ ಸ್ಟೀಲ್ ಕೈಗಾರಿಕಾ ಉಪಕರಣಗಳ ತಯಾರಕರು ಎಂಬ ಬಿರುದುಬಾವಲಿ. ಅದೃಷ್ಟದೇವತೆಯಾಗಿ ಬಂದಿದ್ದ ಮಗಳು ಜ್ಯೋತಿ ಬದುಕಿನ ಮೌಲ್ಯಗಳನ್ನು ತುಂಬಿ ಅನಂತ ಜ್ಯೋತಿಯಾದಾಗ (೨೮.೧೦.೮೬) ತತ್ತರಿಸಿದ ಸಂಸಾರದ ದೋಣಿ; ಜ್ಯೋತಿಯದೇ ಸ್ಫೂರ್ತಿ; ಸಮಾಜ ಸೇವಾದೀಕ್ಷೆ; ಶೈಕ್ಷಣಿಕಸೇವೆ-ಸಾಮಾಜಿಕಸೇವೆ -ಧಾರ್ಮಿಕ ಸೇವೆ: ಬೆಳಕಿನ ಹಲವು ಹೆಬ್ಬಾಗಿಲುಗಳ ಅನಾವರಣ.

ಸಾಂಸ್ಕೃತಿಕ ಪುನರುತ್ಥಾನ, ವೈದಿಕ ಪರಂಪರೆಯ ಜಾಗೃತಿ: ಧಾರ್ಮಿಕ ಗ್ರಂಥಗಳ ಪ್ರಕಾಶನ, ವೇದಕ್ಕಾಗಿ ಗುರುಕುಲ, ಅಧ್ಯಯನಾಸಕ್ತರಿಗೆ ಆಶ್ರಯ, ವೇದಶಾಸ್ತ್ರ ವಿದ್ವಾಂಸರಿಗೆ ಸಂಮಾನ, ವಿದ್ವತ್‌ಗೋಷ್ಠಿ, ವೇದಪಾರಾಯಣ ಪದ್ಧತಿಯ ಪುನರುಜ್ಜೀವನ, ಕೃಷ್ಣ ಯಜುರ್ವೇದ ಕನ್ನಡ ಪ್ರಕಾಶನ, ವೇದದರ್ಶನ ಸಮಾರಂಭ, ವ್ಯಾಸವಂದನಾ. ಸಂಗೀತ, ನೃತ್ಯಕ್ಕೆ ಪ್ರೋತ್ಸಾಹ: ಗಾಯನ ಸಮಾಜ ಹಾಗೂ ಕರ್ನಾಟಕ ಗಾನಕಲಾ ಪರಿಷತ್ ಮೂಲಕ ವಿದ್ವಾಂಸರಿಗೆ ಸಂಮಾನ, ನಿಧಿಸಮರ್ಪಣೆ, ಸಮ್ಮೇಳನಾಧ್ಯಕ್ಷರಿಗೆ ಹತ್ತು ಸಹಸ್ರ ರೂಪಾಯಿಗಳ ನಿಧಿಯೊಂದಿಗೆ ಜ್ಯೋತಿ ಮೆಮೋರಿಯಲ್ ಅವಾರ್ಡ್, ಕಲಾ ಸಂಸ್ಥೆಗಳ ಪೋಷಣೆ, ಡಿ.ಸುಬ್ರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್‌ನ ಅಧ್ಯಕ್ಷತೆ. ಅನಾಥಸೇವೆ: ಆರ್ಥಿಕವಾಗಿ ಹಿಂದುಳಿದ ಎಲ್ಲ ಜಾತಿಗಳವರಿಗೆ ಉಚಿತ ವಿದ್ಯಾಭ್ಯಾಸ, ವಿವಾಹ, ಚಿಕಿತ್ಸೆ, ಶುಭಕಾರ್ಯಗಳು; ಅಲಕ್ಷಿತರಿಗೆ ಮಾಸಿಕ ೧೦೦ ರೂ. ಪಿಂಚಣಿ;



***120.*** *ಬಿ.ಎನ್.ವಿ.: ನ್ಯಾಯಮೂರ್ತಿ ಶ್ರೀ ರಾಮಾ ಜೋಯಿಸ್ ಅವರೊಂದಿಗೆ*



*121. ಬಿ.ಎನ್.ವಿ.: ಆಗಿನ ಮುಖ್ಯಮಂತ್ರಿ ಶ್ರೀ ಎಸ್.ಎಂ.ಕೃಷ್ಣ ಅವರಿಗೆ ಸಂಮಾನ*

ಅಬಲಾಶ್ರಮದ ಅನಾಥ ಹೆಣ್ಣುಮಕ್ಕಳ ಪುನರ್ವಸತಿ ಅಭಿಯಾನದಲ್ಲಿ ಸಹಯೋಗ. ಶಿಕ್ಷಣ: ಅತ್ಯಂತ ಕಡಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವಿದ್ಯಾದಾನ, ಎಲ್.ಕೆ.ಜಿ.ಯಿಂದ ಪದವಿಪೂರ್ವ ಹಂತದವರೆಗೆ ೨೦೦೦ ಮಕ್ಕಳ ಯೋಗಕ್ಷೇಮ, 'ಶಾಲಾ ಮಕ್ಕಳು ತಮ್ಮ ಮಕ್ಕಳಂತೆ, ಸಿಬ್ಬಂದಿ ತಮ್ಮ ಪರಿವಾರದಂತೆ' ಎಂಬ ಕೀರ್ತಿ; ಎಲ್ಲರಿಗೆ ಉಚಿತ ಪ್ರವಾಸ, ಉಚಿತ ವೈದ್ಯಕೀಯ ತಪಾಸಣೆ, ಉಚಿತ ವಿಶೇಷ ಬೋಧನಾತರಗತಿಗಳು; ಹಿಂದುಳಿದ ಮಕ್ಕಳಿಗೆ ಕಲಿಸಿ ಸತತವಾಗಿ ಶೇ.೧೦೦ ಫಲಿತಾಂಶ. ಸಾಮಾಜಿಕ ಕಾಳಜಿ: ಗಣರಾಜ್ಯೋತ್ಸವ: ಅನಾಥಾಶ್ರಮ ಮತ್ತು ಕೊಳೆಗೇರಿ ಮಕ್ಕಳಿಗಾಗಿಯೇ ಆಹ್ವಾನ, ಆಟ, ಊಟ, ಬಹುಮಾನ, ವಸ್ತ್ರದಾನ; ಸಮತಾಭಾವದ ಅನುಷ್ಠಾನ. ಸಮಾಜ ಸಂಘಟನೆ: ರಾಜ್ಯಮಟ್ಟದ ಬ್ರಾಹ್ಮಣರ ಸಮ್ಮೇಳನ, ಬಡವರಿಗಾಗಿ ನಿಧಿ ಸ್ಥಾಪನೆ, ಹಣಕಾಸು ಸುಧಾರಣೆ, ಸದಸ್ಯ ಬಲ ಹೆಚ್ಚಳ; ಬೆಟ್ಟದಪುರ ಸಂಕೇತಿ ಸಂಘದ ಬಲವರ್ಧನೆ. ಜಾತ್ಯತೀತ ನೆಲೆಯಲ್ಲಿ ಸಾರ್ವತ್ರಿಕ ಸೇವೆ ಮಾಡುತ್ತಲೇ ಜಾತಿ ಸಂಘಟನೆಯು ಜಾತೀಯವಾಗದಂತೆ ಸಮನ್ವಯ; ಜಾತಿ ಜನರ ವಿಕಾಸವು ದೇಶವಿಕಾಸಕ್ಕೆ ಪೂರಕವಾಗಲೆಂಬ ಆಶಯ. ಒಟ್ಟಾಗಿ ಶೃಂಗೇರಿಯ ಶ್ರೀಸುರಸರಸ್ವತೀ ಸಭಾದ ಕಾರ್ಯದರ್ಶಿ ಡಾ.ಬಿ.ಎಸ್.ರಾಮಕೃಷ್ಣರಾವ್ ಅವರ ಸಾರಭೂತವಾಣಿ ಇದು, "... ಅವರು ಅಪಾರವಾಗಿ ದಾನ ಮಾಡಿದ್ದಾರೆ, ದಾನ ಮಾಡಿದ್ದರ ಬಗ್ಗೆ ಮೌನ ವಹಿಸಿದ್ದಾರೆ. ಸಂಕ್ಷೇಪವಾಗಿ ಹೇಳಬಹುದಾದರೆ - ಆಗರ್ಭ ಶ್ರೀಮಂತರಲ್ಲದ ಶ್ರೀಸಾಮಾನ್ಯ ರೊಬ್ಬರು, ತಾವು ನಂಬಿದ ತತ್ತ್ವಕ್ಕಾಗಿ, ಆದರ್ಶಗಳಿಗಾಗಿ, ಬೆವರು ಸುರಿಸಿ ದುಡಿದ ಹಣವನ್ನು ಈ ಪ್ರಮಾಣದಲ್ಲಿ ಸಾರ್ವಜನಿಕರಿಗೆಂದು ಸದ್ವಿನಿಯೋಗ ಮಾಡಿರುವ, ಮಾಡುತ್ತಿರುವ ಇನ್ನೊಂದು ಜ್ವಲಂತ ಉದಾಹರಣೆಯನ್ನು ನಾನು ಸಾಕ್ಷಾತ್ಕರಿಸಿ ಕೊಂಡಿಲ್ಲ."

ಸಾಮರ್ಥ್ಯ, ಸಹಾಯ, ಸೇವೆಗೆ ಪರ್ಯಾಯ ಹೆಸರು ಬಿ.ಎನ್.ವಿ. 'ಸಮಾಜದಿಂದ ಪಡೆದುಕೊಂಡ ಲಾಭದಲ್ಲಿ ಕಿಂಚಿತ್ತಾದರೂ ಸಮಾಜಕ್ಕೆ ಮರಳಿಸುವುದು' ಎಂಬುದು ಅವರ ಘೋಷವಾಕ್ಯ. ಅವರಂತೂ ಸರ್ವಸ್ವವನ್ನೂ ಸಮಾಜಕ್ಕಾಗಿ ಸಮರ್ಪಿಸಿದ್ದಾರೆ. ಅದು ಸದ್ದುಗದ್ದಲವಿಲ್ಲದ ಅವರ ಭಗವಂತನ ಪೂಜೆ. ಸರಳಜೀವನ, ಸ್ನೇಹಪರತೆ, ಸಜ್ಜನಿಕೆ, ನಿಷ್ಠಾವಂತ ದುಡಿಮೆ ಅವರ ರೀತಿ; ನಗುಮೊಗದ ಇರವು, ಹೃದಯ ಶ್ರೀಮಂತಿಕೆ, ನಿರಾಡಂಬರ ಅವರ ಗುಣ; '**ಕ್ರಿಯಾಸಿದ್ಧಿಸ್ಸತ್ತ್ವೇ ಭವತಿ ಮಹತಾಂ ನೋಪಕರಣೇ**' ಎಂಬ ಕವಿವಾಣಿಯ ಅಭಿವ್ಯಕ್ತಿ ಅವರು. ಪ್ರೊ.ಎಚ್.ಎಸ್.ಎಲ್. ಅವರು ಹೇಳುವಂತೆ, 'ಕರ್ಮಯೋಗಿಯ ರೀತಿ ಸೇವೆಗೈಯುತ್ತ ಧರ್ಮಮಾರ್ಗದಿ ನಡೆವ ಕೃತಕೃತ್ಯರಿವರು'. ಬಿ.ಎನ್.ವಿ. ಅವರಿಂದ ಸಮಾಜದ ದೀನದಲಿತರ, ವಿದ್ಯಾರ್ಥಿಗಳ, ಅನಾರೋಗ್ಯ ಪೀಡಿತರ, ಅಶಕ್ತರ ಕಲ್ಯಾಣಕಾರ್ಯ ನಡೆಯುತ್ತಿದೆ. ನಿಜ. ಅದು ಸಾಧ್ಯವಾಗಿರುವುದು ಅವರ ಪಕ್ಕದಲ್ಲಿ 'ಎಲ್ಲ ಮಕ್ಕಳ ಮಾತೆ ಪ್ರಿಯ ಮಡದಿ ಸೀತಾ' ಇರುವುದರಿಂದ. ಉದಾಹರಣೆಗೆ ವೇದಪಾಠಶಾಲೆಯ ಎಲ್ಲ ಮೂವತ್ತು ಮಕ್ಕಳ ಊಟ ತಿಂಡಿ ತಯಾರಿಸಿ ನಿರ್ವಹಿಸುವವರು ಅವರು, ಅವರ ಖಾಯಿಲೆ ಕಸಾಲೆಗೆ ಚಿಕಿತ್ಸೆ ನೋಡಿಕೊಳ್ಳುವವರು ಅವರು, ಒಬ್ಬೊಬ್ಬರ ಹುಟ್ಟುಹಬ್ಬಕ್ಕೂ ಸಿಹಿ ಉಣಿಸಿ ಉಡುಗೊರೆ ನೀಡುವವರು ಅವರು... ಅದೊಂದು ತಪಸ್ಸು. ಬಿ.ಎನ್.ವಿ. ಅವರ ಎಲ್ಲ ಸಾಧನೆಗಳ ಹಿಂದಿನ ಕನಸು, ಜತೆಗಿನ ಸ್ಫೂರ್ತಿ, ಮುನ್ನಡೆಯ ಸ್ಪಂದನಶಕ್ತಿ ಅವರು, "ಜೀವವಿರುವವರೆಗೂ ಸಮಾಜಸೇವಾಕಾರ್ಯ ಮುಂದುವರಿಸುತ್ತೇವೆ" ಎಂಬ ಬಿ.ಎನ್.ವಿ. ಅವರ ವಾಕ್ಕಿನ ಅಂತಃಶಕ್ತಿ ಸೀತಾ ಅವರು.

ಬಿ.ಎನ್.ವಿ. ಅವರ ಷಷ್ಟ್ಯಬ್ದಪೂರ್ತಿ ಸಂಬಂಧದ ಅಭಿನಂದನೆಗಾಗಿ ಸಹಸ್ರ ಸಹಸ್ರಸಂಖ್ಯೆಯಲ್ಲಿ ಸಾಮಾನ್ಯರಿಂದ ಹಿಡಿದು ಅತಿ ಗಣ್ಯರವರೆಗೆ ಸೇರಿದ್ದ ಸುಂದರವಾದ ಬೃಹತ್ ಸಮಾವೇಶದಲ್ಲಿ (೧.೧೨.೨೦೦೨) ನಡೆದದ್ದು ಇದು: ಬಿ.ಎನ್.ವಿ. ದಂಪತಿಗೆ ಹಾರ

ಅರ್ಪಿಸಿ ಶುಭ ಹೇಳಲು ಇಡೀ ಸಭೆ - ಇಡೀ ಸಹಸ್ರಾರು ಅಭಿಮಾನಿಗಳು - ಸಾಲುಗಟ್ಟಿ ನಿಂತರು. ಹಾಗೆ ನಿಂತ ಹಿಂದೂ, ಕ್ರಿಶ್ಚಿಯನ್, ಮುಸಲ್ಮಾನ ಬಂಧುಗಳ ನಡುವೆ ಖ್ಯಾತನಟ ಶಿವರಾಂ ಕೂಡ ಇದ್ದರು. ಅವರು ಪುಳಕಗೊಂಡಿದ್ದರು. ಕೊನೆಯಲ್ಲಿ ವೇದಿಕೆಯಿಂದ, ಕೂಗಿ ತಮ್ಮ ಸಂತಸ ಹಂಚಿಕೊಂಡರು, "ಇಂಥ ಸಭೆಯನ್ನು ... ಹೀಗೆ ಇಡೀ ಸಭೆಗೆ ಸಭೆಯೇ ಸಾಲುಗಟ್ಟಿ ನಿಂತು ಹಾರ ತುರಾಯಿ ಸಮರ್ಪಿಸಿ ಶುಭ ಹೇಳಲು ಹಾತೊರೆದುದನ್ನು ನನ್ನ ಜೀವನದಲ್ಲಿ ಕಂಡಿರಲಿಲ್ಲ ...". ಅದು ನಿಜ. ಬಿ.ಎನ್.ವಿ. ದಂಪತಿ ಬದುಕಿರುವುದೇ ಹಾಗೆ. ಏಕೆಂದರೆ, ಅವರ ಬಾಳನ್ನು ಜ್ಯೋತಿ ಬೆಳಗುತ್ತಿದೆ.

## ೧೮. ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಸಮಾರಂಭದ ಪಕ್ಷಿನೋಟ

*ವರದಿ: ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ*

**ಹಿನ್ನೆಲೆ:** ಸದ್ದುಗದ್ದಲವಿಲ್ಲದೆ, ಭಗವಂತನ ಪೂಜೆ ಎಂದು ತಿಳಿದು ವಿವಿಧ ಕ್ಷೇತ್ರಗಳಲ್ಲಿ ನಿಃಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿರುವ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರಿಗೆ ಅರುವತ್ತು ವರ್ಷಗಳು ತುಂಬಲಿರುವ ಸುದ್ದಿ ಮೂರು ತಿಂಗಳ ಮುಂಚೆಯೇ ಕೆಲವು ಅಭಿಮಾನಿಗಳ ಗಮನಕ್ಕೆ ಬಂದಿತು. ಈ ಸಂದರ್ಭದಲ್ಲಿ ಅವರನ್ನು ಸಮಸ್ತ ಸಮಾಜದ ಪರವಾಗಿ ಅಭಿನಂದಿಸಬೇಕೆಂದು ಸಂಕಲ್ಪಿಸಲಾಯಿತು. ಆದರೆ ಈ ಸಮಾರಂಭವನ್ನು ನಡೆಸುವ ಬಗ್ಗೆ ಶ್ರೀ ಬಿ.ಎನ್.ವಿ. ಅವರ ಅನುಮತಿಯನ್ನು ಪಡೆದುಕೊಳ್ಳಲು ಬಹಳ ಶ್ರಮ ಪಡಬೇಕಾಯಿತು. ಒಲ್ಲದ ಮನಸ್ಸಿನ ಒಪ್ಪಿಗೆಯನ್ನು ಪಡೆದ ಅನಂತರ ಹಿರಿಯ ರಾಜಕಾರಣಿ ವಿ.ಎಸ್.ಕೃಷ್ಣಯ್ಯರ್ ಮತ್ತು ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯ ಅವರ ನೇತೃತ್ವದಲ್ಲಿ ಸ್ವಾಗತ ಸಮಿತಿ ಮತ್ತು ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಮೂರು-ನಾಲ್ಕು ಸರ್ತಿ ಸಭೆ ಸೇರಿ, ಸೂಕ್ತ ನಿರ್ಣಯಗಳನ್ನು ಕೈಗೊಂಡಿತು.

**ಮಂಗಳ ಕಾರ್ಯಗಳು:** ಸಮಾರಂಭದ ಹಿಂದಿನ ದಿನ ಅಂದರೆ ದಿನಾಂಕ ೩೦.೧೧.೨೦೦೨ ಶನಿವಾರದಂದು ಬೆಳಗ್ಗೆ ಆರು ಗಂಟೆಯಿಂದ ಹನ್ನೊಂದು ಗಂಟೆಯವರೆಗೆ ವಿವಿಧ ದೇವತಾ ಪಾರಾಯಣಗಳನ್ನು ವಿಪ್ರೋತ್ತಮರು ನಡೆಸಿಕೊಟ್ಟರು. ಅನಂತರ ಬಿ.ಎನ್.ವಿ. ಕುಟುಂಬದವರ ಹಾಗೂ ಸಮಸ್ತ ಜನತೆಯ ಕಲ್ಯಾಣಕ್ಕಾಗಿ ನವಗ್ರಹ ಹೋಮ ಮತ್ತು ಏಕಾದಶರುದ್ರ ಹೋಮಗಳನ್ನು ನೆರವೇರಿಸಲಾಯಿತು. ಪೂರ್ಣಾಹುತಿ, ಮಂಗಳಾರತಿಯನಂತರ ಬಿ.ಎನ್.ವಿ. ದಂಪತಿಗಳಿಗೆ ಆಪ್ತೇಷ್ಟರು ಮತ್ತು ಅಭಿಮಾನಿಗಳಿಂದ ಮಂಗಳಸ್ನಾನವನ್ನು ನೆರವೇರಿಸಲಾಯಿತು. ಮಾಂಗಲ್ಯಧಾರಣೆ, ಬಾಗಿನ, ಆರತಿಯ ಅನಂತರ ವೇದೋಕ್ತ ಆಶೀರ್ವಾದ ನಡೆಯಿತು. ಪ್ರಸಾದ ಭೋಜನದಿಂದ ಎಲ್ಲರ ಉದರದೈವದ ಸಂತೃಪ್ತಿಯಾಯಿತು. ಇದೇ ದಿನ ಸಂಜೆ ಉದಕಶಾಂತಿ ಪಾರಾಯಣವನ್ನು ಮಾಡಲಾಯಿತು.

ದಿನಾಂಕ ೧.೧೨.೨೦೦೨ ಭಾನುವಾರ ಬೆಳಗ್ಗೆ ಬಿ.ಎನ್.ವಿ. ದಂಪತಿಗಳು ಮೃತ್ಯುಂಜಯ ಹೋಮವನ್ನು ನೆರವೇರಿಸಿದರು.



*122. ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಸಮಾರಂಭ : ಹೋಮನಿರತ ಋತ್ವಿಕರು*

ನೂರಾರು ಜನ ಅಭಿವಾನಿಗಳು, ಆತ್ಮದಾಂಪತ್ಯಕ್ಕೆ ಹೊಸಹೆಜ್ಜೆ ಹಾಕಿದ ಬಿ.ಎನ್.ವಿ. ಜೋಡಿಗೆ ಫಲಪುಷ್ಪ, ಉಡುಗೊರೆಗಳನ್ನು ನೀಡಿ ಶುಭವನ್ನು ಕೋರಿದರು. ಪುಷ್ಕಳವಾದ, ರಸವತ್ತಾದ ಭೋಜನದ ವ್ಯವಸ್ಥೆ ಮಾಡಲಾಗಿತ್ತು.



123. ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಸಮಾರಂಭ : ವೈದಿಕರಿಂದ ಮಂತ್ರಘೋಷ

**ಷಷ್ಟ್ಯಬ್ದಪೂರ್ತಿ ಸಮಾರಂಭ:** ಅರಮನೆಯಂತೆ ಸಿಂಗಾರಗೊಂಡ ವಿದ್ಯಾವಿಹಾರ ಸಭಾಂಗಣದಲ್ಲಿ ಮಧ್ಯಾಹ್ನ ೩.೩೦ಕ್ಕೆ ಅಭಿಮಾನಿಗಳು ಕಿಕ್ಕಿರಿದು ಸಮಾವೇಶಗೊಂಡಿದ್ದರು. ೩.೪೫ಕ್ಕೆ ಸರಿಯಾಗಿ ಬಿ.ಎನ್.ವಿ. ಅವರು ತಮ್ಮ ಪ್ರೀತಿಯ ಮಡದಿಯೊಡನೆ, ಪೂರ್ಣಕುಂಭ ಸ್ವಾಗತದೊಂದಿಗೆ ವೇದವಿದ್ವಾಂಸರ ವೇದಘೋಷ ಮತ್ತು ಸುಮಧುರವಾದ ನಾದಸ್ವರದ ಹಿಮ್ಮೇಳದೊಡನೆ ಸಭಾಂಗಣವನ್ನು ಪ್ರವೇಶಿಸಿದರು. ಸಭಾಸದರು ಎದ್ದು ನಿಂತು ದೀರ್ಘ ಕರತಾಡನದೊಂದಿಗೆ ಗೌರವಪೂರ್ವಕ ಸ್ವಾಗತ ನೀಡಿದರು. ವಿಶಾಲವಾದ ವೇದಿಕೆಯ ಬಲಭಾಗದಲ್ಲಿ ಬಿ.ಎನ್.ವಿ. ಅವರ ನಗು ಮೊಗದ ಭಾವಚಿತ್ರ, ಎಡಭಾಗದಲ್ಲಿ ಕು. ಜ್ಯೋತಿಯ ಭಾವಚಿತ್ರದ ಹಿನ್ನೆಲೆಯಲ್ಲಿ ಬಣ್ಣಗಳ ಚಿತ್ತಾರ ಬಿಡಿಸಿದ್ದ ಅರುವತ್ತು ಕುಂಭಗಳು ಮತ್ತು ಅದರ ಮೇಲೆ ಅರುವತ್ತು ಸೊಡರುಗಳನ್ನಿರಿಸಿದ್ದು ಸಮಾರಂಭದ ಸಂಕೇತವಾಗಿ ಕಂಗೊಳಿಸಿತ್ತು ಮತ್ತು ಅರ್ಥಪೂರ್ಣವಾಗಿತ್ತು. ಮಾಜಿ ಮಹಾಸಭಾಧ್ಯಕ್ಷ ಶ್ರೀ ಎಚ್.ಎಸ್.ಶಿವಶಂಕರ್ ಮತ್ತು ಶ್ರೀ ಲೋಕನಾಥ್ ಅವರ ಕಲ್ಪನೆ ಇಲ್ಲಿ ಸಾಕಾರಗೊಂಡು ಸಭಾಸದರ ಹಾಗೂ ಮುಖ್ಯ ಅತಿಥಿಗಳ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ಖ್ಯಾತ ಸುಗಮ ಸಂಗೀತಗಾರರಾದ ಶ್ರೀಮತಿ ಮಾಲತಿಶರ್ಮಾ ಮತ್ತು ರತ್ನಮಾಲಾ ಪ್ರಕಾಶ್ ಅವರು ಸುಶ್ರಾವ್ಯವಾಗಿ ಪ್ರಾರ್ಥನೆ ಸಲ್ಲಿಸಿದರು. ವೇದವಿದ್ವಾಂಸರಾದ ಶ್ರೀ ಗಣೇಶ ಘನಪಾಠಿ ಮತ್ತು ತಂಡದವರಿಂದ ವೇದಘೋಷ ಕಾರ್ಯಕ್ರಮ ನಡೆಯಿತು. ಶ್ರೀ ಎಚ್.ಎಸ್. ಲಕ್ಷ್ಮೀನಾರಾಯಣಭಟ್ಟರು ಅಭಿನಂದನಾ ಸಮಿತಿಯ ಪರವಾಗಿ ಸಕಲರನ್ನೂ ಸ್ವಾಗತಿಸಿದರು. ಸಮಾರಂಭಕ್ಕೆ ಶುಭವನ್ನು ಕೋರಿ ಮಠಾಧಿಪತಿಗಳು ಹಾಗೂ ಇತರ ಪ್ರಮುಖರು ಕಳುಹಿಸಿದ ಸಂದೇಶವನ್ನು ಶ್ರೀ ಡಿ.ಎಸ್. ಹೊನ್ನಪ್ಪ ವಾಚಿಸಿದರು.

ಮುಖ್ಯ ಅತಿಥಿಗಳು ಬಿ.ಎನ್.ವಿ. ದಂಪತಿಗಳೊಂದಿಗೆ ಜ್ಯೋತಿಯನ್ನು ಬೆಳಗಿಸಿ ಷಷ್ಟಿಪೂರ್ತಿ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿದರು. ಜತೆಯಲ್ಲಿಯೇ ವೇದಿಕೆಯ ಮುಂಭಾಗದಲ್ಲಿ ಬಣ್ಣದ ಚಿತ್ತಾರವಿರುವ ೬೦ ಕುಂಭಗಳ ಮೇಲಿರಿಸಿದ ಸೊಡರುಗಳನ್ನು ಬೆಳಗಿಸಲಾಯಿತು. ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಮಾಸ್ಟರ್ ಹಿರಣ್ಣಯ್ಯ ಅವರು ಅಭಿನಂದನಾ ಭಾಷಣ ಮಾಡುತ್ತಾ "ಬಿ.ಎನ್.ವಿ. ಅವರಿಗೆ ಸಲ್ಲುತ್ತಿರುವುದು ಇಡೀ ಸಮಾಜಕ್ಕೆ ಸಲ್ಲುತ್ತದೆ. ಅವರಿಗೆ ನಾವೇನನ್ನೂ ಕೊಡುತ್ತಿಲ್ಲ. ಏಕೆಂದರೆ ಅವರದು ಯಾವಾಗಲೂ ಮೇಲೆ ನಿಂತಿರುವ ಕೊಡುವ ಕೈ. ಅವರಿಂದ ಸಮಾಜದ ದೀನದಲಿತರ, ವಿದ್ಯಾರ್ಥಿಗಳ, ಅನಾರೋಗ್ಯಪೀಡಿತರ, ಅಶಕ್ತರ ಕಲ್ಯಾಣಕಾರ್ಯ ನಡೆಯುತ್ತಿದೆ. ಧರ್ಮಸಂರಕ್ಷಕರಾಗಿ ಅನೇಕ ಮಠಗಳಿಗೆ, ದೇವಾಲಯಗಳಿಗೆ, ವೇದ ವಿದ್ವಾಂಸರಿಗೆ, ವೇದಾಭ್ಯಾಸನಿರತರಾದ ವಟುಗಳಿಗೆ, ಸಂಸ್ಕೃತ ಪಾಠಶಾಲೆಗಳಿಗೆ ಉದಾರವಾದ ಆರ್ಥಿಕ ನೆರವನ್ನು ನೀಡುತ್ತಾ ಬಂದಿದ್ದಾರೆ. ಅವರೊಂದಿಗೆ ನಾವೆಲ್ಲರೂ ಇದ್ದೇವೆ ಎಂಬುದೇ ನಮ್ಮ ಹೆಗ್ಗಳಿಕೆ. ಸನ್ಮಾನಿತರಾಗಲಿರುವ ಹಿರಿಯರ ಮೇಧಾಶಕ್ತಿ, ಮುಖ್ಯ ಅತಿಥಿಗಳಾಗಿ ಬಂದಿರುವ ರಾಜಕೀಯ ನಾಯಕರುಗಳ ಸಂಘಟನಾಶಕ್ತಿ, ಶ್ರೀ ಬಿ.ಎನ್.ವಿ. ಅವರಲ್ಲಿ ಮೇಳವಿಸಿದೆ ಎಂಬುದಕ್ಕೆ ವೇದಿಕೆಯಲ್ಲಿರುವ ಗಣ್ಯರ ಉಪಸ್ಥಿತಿಯೇ ಸಾಕ್ಷಿ. ವಿಪ್ರಬಂಧುಗಳ



*124 ಬಿ.ಎನ್.ವಿ. ಅಭಿನಂದನ ಸಮಾರಂಭಕ್ಕೆ ಚಾಲನೆ : ಸಚಿವ ಆರ್.ವಿ.ದೇಶಪಾಂಡೆ ಅವರಿಂದ*

ಹಾಗೂ ಸಾರ್ವಜನಿಕರ ಪ್ರೀತಿ ವಿಶ್ವಾಸಗಳು ತಮ್ಮ ಮೇಲೆ ಸದಾ ಇರಲಿ ಎಂದು ಆಶಿಸುತ್ತೇನೆ" ಎಂದು ಹಾಸ್ಯಮಿಶ್ರಿತ ಗಂಭೀರ ನುಡಿಗಳಿಂದ ಹಾರೈಸಿದರು. ಸಮಿತಿಯ ಅಧ್ಯಕ್ಷ ಸನ್ಮಾನ್ಯ ಶ್ರೀ ಕೃಷ್ಣಯ್ಯರ್ ಅವರು ಸಂಕ್ಷಿಪ್ತವಾಗಿ, ಸಮಿತಿಯು ಮಾಡಿದ ಏರ್ಪಾಡುಗಳನ್ನು ವಿವರಿಸಿ, ಸಹಕಾರ ನೀಡಿದ ಮಹನೀಯರನ್ನು ಅಭಿವಂದಿಸಿ, ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಸೇವಾ ಕಾರ್ಯಗಳನ್ನು ಪ್ರಶಂಸಿಸಿದರು.

ಕರ್ನಾಟಕ ಸರ್ಕಾರದ ಬೃಹತ್ ಕೈಗಾರಿಕಾ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆ ಅವರು **ಜ್ಯೋತಿಶ್ರೀ** ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ ಶುಭ ಕೋರಿದರು. ಹಿರಿಯ ರಾಜಕೀಯ ನೇತಾರ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಬಿ.ಎನ್.ವಿ. ಅವರನ್ನು ಅಭಿನಂದಿಸಿದರು ಹಾಗೂ ತಾವು ಅಧ್ಯಕ್ಷರಾಗಿರುವ ಲೋಕಶಿಕ್ಷಣಟ್ರಸ್ಟಿನ ವತಿಯಿಂದ ಪ್ರಕಟವಾಗುವ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಆ ದಿನದ ಸಂಚಿಕೆಯಲ್ಲಿ ಅರ್ಧಪುಟದಷ್ಟು ಜಾಗದಲ್ಲಿ ಬಿ.ಎನ್.ವಿ. ಅವರ ಜೀವನ, ಸಾಧನೆಯನ್ನು ವಿವರಿಸಿರುವ ಲೇಖನವನ್ನು ಮುದ್ರಿಸಿದ್ದಲ್ಲದೇ, ಸುಮಾರು ೧೦೦೦ ಪ್ರತಿಗಳನ್ನು ಸಭಾಸದರಿಗೆ ಉಚಿತವಾಗಿ ವಿತರಿಸುವ ಮಹತ್ ಕಾರ್ಯವನ್ನು ನಡೆಸಿ ಎಲ್ಲರ ಪ್ರಶಂಸೆಗೆ, ಸಮಿತಿಯ ಕೃತಜ್ಞತೆಗೆ ಪಾತ್ರರಾದರು. ಪತ್ರಿಕೆಯ ಸಂಪಾದಕರಾದ ಶ್ರೀ ವಿ.ಎನ್.ಸುಬ್ಬರಾವ್ ಅವರಿಗೆ ನಮ್ಮ ಧನ್ಯವಾದಗಳು.

ಬಿ.ಎನ್.ವಿ. ಅವರನ್ನು ಆತ್ಮೀಯವಾಗಿ ಬಲ್ಲಂತಹ ಡಾ. ಎಚ್. ನರಸಿಂಹಯ್ಯ, ಶ್ರೀ ಎಸ್. ರಮೇಶ್, ಶ್ರೀಮತಿ ಮನೋರಮಾ ಮಧ್ವರಾಜ್, ಪ್ರಾಥಮಿಕ ಶಿಕ್ಷಣ ಸಚಿವರಾದ ಪ್ರೊ. ಶ್ರೀ ಬಿ.ಕೆ. ಚಂದ್ರಶೇಖರ್ ಅವರುಗಳು ಮಾತನಾಡಿ, ಬಿ.ಎನ್.ವಿ. ಅವರ ಸಮಾಜ ಸೇವೆಯ ವಿವಿಧ ಕಾರ್ಯಗಳನ್ನು ಪ್ರಶಂಸಿಸಿ, "ಇವರ ಬದುಕು, ನಮಗೆಲ್ಲರಿಗೂ ಆದರ್ಶಪ್ರಾಯವಾಗಲಿ" ಎಂದು ತಿಳಿಸಿದರು.

ವಯೋವೃದ್ಧರಾಗಿದ್ದು, ತಮಗಿಂತ ಹಿರಿಯರಾದವರನ್ನು ಮೊದಲು ಸನ್ಮಾನಿಸುವುದು ಸೂಕ್ತ ಎಂದು ಬಿ.ಎನ್.ವಿ. ಅವರು ಅಪೇಕ್ಷಿಸಿದರು. ಅಂತೆಯೇ ಶತಾಯುಷಿಗಳಾದ ಶ್ರೀಮತಿ ಅನ್ನಪೂರ್ಣಮ್ಮ, ಶ್ರೀ ಶ್ರೀನಿವಾಸಯ್ಯ, ಶ್ರೀ ನಿಟ್ಟೂರು ಶ್ರೀನಿವಾಸರಾವ್ ಹಾಗೂ ಪದ್ಮಭೂಷಣ ಡಾ. ಎಚ್.ನರಸಿಂಹಯ್ಯ, ಶ್ರೇಷ್ಠ ಸಂಗೀತ ವಿದ್ವಾಂಸ ಶ್ರೀ ಆರ್.ಕೆ. ಶ್ರೀಕಂಠನ್ ಮತ್ತು ವೇ.ಬ್ರ.ಶ್ರೀ ರಾಮೇಶ್ವರ ಅವಧಾನಿಗಳವರನ್ನು ಬಿ.ಎನ್.ವಿ.




*125. ಷಷ್ಟ್ಯಬ್ದ ಪೂರ್ತಿ ಸಮಾರಂಭ : ಮುತ್ತೈದೆಯರಿಂದ ಮೊರಬಾಗಿನ*

ದಂಪತಿಗಳು ಶಾಲು ಹೊದೆಸಿ ಫಲಪುಷ್ಪ ತಾಂಬೂಲಗಳನ್ನು ನೀಡಿ ಗೌರವಿಸಿ, ಆಶೀರ್ವಾದ ಪಡೆದರು.

ಸನ್ಮಾನ ಕಾರ್ಯಕ್ರಮದ ಪ್ರಥಮ ಹಂತವಾಗಿ ಶ್ರೀಮತಿ ಸೀತಾ ಸುಬ್ರಹ್ಮಣ್ಯ ಅವರಿಗೆ, ಶ್ರೀಮತಿ ಶಾಂತಾ ಹಿರಣ್ಣಯ್ಯ ಪ್ರಥಮ ಬಾಗಿನ ನೀಡಿ, ಸಂಪ್ರದಾಯಪೂರ್ವಕವಾಗಿ ಶ್ರೇಯಸ್ಸನ್ನು ಕೋರಿದರು. ಮತ್ತೂ ನಾಲ್ಕು ಬಾಗಿನಗಳನ್ನು ಮಹಿಳೆಯರು ನೀಡಿ ಶ್ರೀಮತಿಯವರಿಗೆ ಶುಭ ಹಾರೈಸಿದರು. ಅನಂತರ, ಶ್ರೀಮಠಗಳಿಂದ ಆಶೀರ್ವದಿಸಿ ಕಳುಹಿಸಲಾಗಿದ್ದ ವಸ್ತ್ರ, ಫಲ ಮಂತ್ರಾಕ್ಷತೆಯನ್ನು ಆಯಾ ಮಠಗಳ ಪ್ರತಿನಿಧಿಗಳು ಬಿ.ಎನ್.ವಿ. ಅವರಿಗೆ ಸಮರ್ಪಿಸಿದರು. ಅನಂತರ ಸುಂದರವಾದ ಪೆಟ್ಟಿಗೆಯಲ್ಲಿ ಅಳವಡಿಸಿದ, ಅಭಿನಂದನಾ ಮಾತುಗಳಿರುವ ಬೆಳ್ಳಿ ಫಲಕವನ್ನು, ಉಪಾಧ್ಯಕ್ಷ ಶ್ರೀ ಹೊ.ನಾ. ಹಿರಿಯಣ್ಣಸ್ವಾಮಿ, ಬಿ.ಎನ್.ವಿ. ಅವರಿಗೆ ಸಮಿತಿಯ ಪರವಾಗಿ ಸಲ್ಲಿಸಿದರು. ಮಾಸ್ಟರ್ ಹಿರಣ್ಣಯ್ಯ ದಂಪತಿಗಳು ಬಿ.ಎನ್.ವಿ. ದಂಪತಿಗಳಿಗೆ ಏಲಕ್ಕಿಹಾರ, ವಸ್ತ್ರಗಳು ಮತ್ತು ಫಲ ಪುಷ್ಪವನ್ನು ವೇದಾಶೀರ್ವಾದದ ಹಿಮ್ಮೇಳದಲ್ಲಿ ಅಭಿಮಾನಿಗಳ ಪರವಾಗಿ ಸಮರ್ಪಿಸಿ, ಗೌರವಿಸಿದರು. ಸಭಾಸದರ ಕರತಾಡನ, ಜೈಕಾರಗಳು ಸಭೆಯಲ್ಲಿ ವಿದ್ಯುತ್ ಸಂಚಾರ ಮೂಡಿಸಿದವು.




127. ವೇ. ಬ್ರ. ಶ್ರೀ ವೆಂಕಟಸುಬ್ಬಾಜೋಯಿಸ್ ಅವರಿಂದ ಆಶೀರ್ವಾದ


ಷಷ್ಟ್ಯಬ್ದಪೂರ್ತಿಯ ಸಂದರ್ಭದಲ್ಲಿ ತಮ್ಮನ್ನು ಅಭಿನಂದಿಸಿದ ಅಭಿಮಾನೀ ವೃಂದಕ್ಕೆ ತಮ್ಮ ಕೃತಜ್ಞತೆಯನ್ನು ತಿಳಿಸಲೆಂದು ಮಾತನಾಡಲು ಪ್ರಾರಂಭಿಸಿದ ಶ್ರೀ ಬಿ.ಎನ್.ವಿ. ಅವರು ಭಾವಪರವಶರಾಗಿ "ನನ್ನ ಹೃದಯ, ಮನಸ್ಸು ತುಂಬಿ ಹೋಗಿದೆ. ಕಣ್ಣುಗಳಲ್ಲಿ ಆನಂದಬಾಷ್ಪವಿದೆ. ಮಾತುಗಳೇ ಹೊರಡದೆ ಮೂಕನಾಗುವಂತಾಗಿದೆ. ನಾನು ಮಾಡಿರುವ ಅತ್ಯಲ್ಪ ಸೇವೆಗೆ ತಾವುಗಳು ತೋರಿರುವ ಆದರ, ಅಭಿಮಾನಗಳಿಗೆ ಸದಾ ಕೃತಜ್ಞನಾಗಿರುತ್ತೇನೆ. ನನಗೆ ಕೇವಲ ಒಂದು ವರ್ಷವಾಗಿದ್ದಾಗ ನಮ್ಮ ತಂದೆಯವರು ತೀರಿಕೊಂಡರು. ನನ್ನ ಅಜ್ಜಿಯ ಆರೈಕೆಯಲ್ಲೇ ನಾನು ಬೆಳೆದೆ. ಅವರ ಋಣವನ್ನು ನಾನೆಂದೂ ತೀರಿಸಲಾರೆ. ಸೀತಾಳನ್ನು ಮದುವೆಯಾಗಿ 'ಜ್ಯೋತಿ' ಹೆಸರಿನ ಸುಂದರ ಮಗಳನ್ನು ಪಡೆದೆ. ದೈವವಶಾತ್ ಆಕೆ ತನ್ನ ಎಳೆಯ ವಯಸ್ಸಿನಲ್ಲಿಯೇ ನಿಧನಳಾದಳು. ಜೀವನದಲ್ಲಿ ಅಂಧಕಾರ ಆವರಿಸಿತು. ಆದರೆ ಮತ್ತೆ ಆ ಜ್ಯೋತಿಯೇ ಸಮಾಜಸೇವೆಯ ದಾರಿಯನ್ನು ಬೆಳಗಿಸಿತು. ಅವಳ ಹೆಸರಿನ ಬಲದಿಂದಲೇ ಕಾರ್ಯ ನಿರ್ವಹಿಸುತ್ತಿರುವ ಅನೇಕ ಸಂಸ್ಥೆಗಳು ದೇವತಾಸ್ವರೂಪಿಯಾಗಿರುವ ಜ್ಯೋತಿಯ ಶಕ್ತಿಸ್ಥಳಗಳೆಂದು ಭಾವಿಸಿದ್ದೇನೆ.




126. ಬಿ.ಎನ್.ವಿ. ಷಷ್ಟ್ಯಬ್ದ ಪೂರ್ತಿ ಸಮಾರಂಭ : ಮಾಸ್ಟರ್ ಹಿರಣ್ಣಯ್ಯನವರ ಸ್ನೇಹ ಹಾರ

**ಭಗವಂತನು ದಯಪಾಲಿಸಿರುವ ಐಶ್ವರ್ಯವನ್ನು ಅವನ ಸೇವೆಗಾಗಿಯೇ ವಿನಿಯೋಗಿಸುತ್ತಿದ್ದೇನೆ. ನನ್ನ ಬಾಳಹಾದಿಯಲ್ಲಿ ನೆರವಾದವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಬಹಳ ಅದ್ದೂರಿಯಿಂದ ಏರ್ಪಾಡಾಗಿರುವ *ಈ* ಸಮಾರಂಭವನ್ನು ಬಹಳ ಸಮರ್ಥವಾಗಿ ಏರ್ಪಡಿಸಿರುವ ಅಭಿಮಾನಿ ಮಿತ್ರವೃಂದಕ್ಕೆ ನಾನು ಆಭಾರಿಯಾಗಿದ್ದೇನೆ. ಜೀವವಿರುವವರೆಗೂ ಸಮಾಜ ಸೇವಾಕಾರ್ಯವನ್ನು ಮುಂದುವರಿಸುತ್ತೇನೆ. ತಮಗೆಲ್ಲರಿಗೂ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು"** ಎಂದು ತಿಳಿಸಿದರು.

ಬಹಳ ಹೊತ್ತಿನವರೆಗೂ ತುದಿಗಾಲಿನಲ್ಲಿ ನಿಂತಿದ್ದ ಅಭಿಮಾನಿಗಳ ಮಹಾಪೂರ, ನಾ ಮುಂದು ತಾ ಮುಂದು ಎಂಬ ಹುಮ್ಮಸ್ಸಿನಿಂದ ವೇದಿಕೆಯ ಮೇಲೆ ಹರಿದು ಬಂದಿತು. ಹಾರ, ತುರಾಯಿಗಳ, ಉಡುಗೊರೆಗಳ ಒಂದು ಸಣ್ಣ ಗುಡ್ಡವೇ ವೇದಿಕೆಯನ್ನು ಹಬ್ಬಿಕೊಂಡಿತ್ತು. ಪ್ರತಿಯೊಬ್ಬರನ್ನೂ ಬಿ.ಎನ್.ವಿ. ಅವರು ಪ್ರೀತಿಯಿಂದ ಮಾತನಾಡಿಸಿ, ಹಸ್ತಲಾಘವ ನೀಡಿ ಆನಂದಿಸಿದರು.



**128.** *ವೇ. ಬ್ರ. ಶ್ರೀ ರಾಮೇಶ್ವರ ಅವಧಾನೀ ಅವರಿಂದ ಬಿ.ಎನ್.ವಿ. ದಂಪತಿಗಳಿಗೆ ಆಶೀರ್ವಾದಪೂರ್ವಕ ಮಂಗಳಸ್ನಾನ*

ಅಭಿನಂದನಾ ಸಮಿತಿಯ ಯೋಜನೆಯ ಎಲ್ಲಾ ಸಿದ್ಧತೆಯ ಉಸ್ತುವಾರಿಯನ್ನು ವಿಕೇಂದ್ರೀಕರಣಗೊಳಿಸಿ, ಏಕಸೂತ್ರದಲ್ಲಿ ಬಂಧಿಸಿ, ಸಮಾರಂಭದ ಸಂಪೂರ್ಣ ಯಶಸ್ಸಿಗೆ ಕಾರಣರಾದವರು ಸಮಿತಿಯ ಕಾರ್ಯದರ್ಶಿ ಶ್ರೀ ಕೆ.ಎನ್. ವೆಂಕಟನಾರಾಯಣ. ಸಮಾರಂಭದ ನಿರೂಪಣೆಯನ್ನು ಅಗತ್ಯವಾದ ಹಾಸ್ಯೋಕ್ತಿಗಳೊಡನೆ ನಿರ್ವಹಿಸಿ, ಡಾ.ಎಚ್.ಎನ್. ಅವರು ಹಾಗೂ ಎಲ್ಲರ ಪ್ರಶಂಸೆಗೆ ಪಾತ್ರರಾದವರು ಶ್ರೀ ಕೆ.ಎನ್. ವೆಂಕಟನಾರಾಯಣ. ಊಟೋಪಚಾರದ ಖರ್ಚನ್ನು ಭರಿಸಿದ್ದಲ್ಲದೇ ಖುದ್ದಾಗಿ ವಿತರಣೆಯ ಜವಾಬ್ದಾರಿಯನ್ನು ನಿರ್ವಹಿಸಿದ ಶ್ರೀ ಮೋಹನಮೂರ್ತಿ ಹಾಗೂ ಶ್ರೀ ಬಿ.ಎನ್. ನಾಗರಾಜ್ ಮತ್ತು ಶ್ರೀ ಅನಂತರಾಮಯ್ಯ ಅವರ ಸೇವೆ ಶ್ಲಾಘನೀಯ. ಎರಡೂ ದಿವಸಗಳಲ್ಲಿ ಧಾರ್ಮಿಕ ಕಾರ್ಯಕ್ರಮ ಸೇವೆ ನಡೆಸಿದ ಶ್ರೀ ಬಿ.ಕೆ. ರಮೇಶ್, ಶ್ರೀ ಸತ್ಯನಾರಾಯಣ್ ಮತ್ತು ಮನೆಯವರ ಸೇವೆ ಅನುಪಮವಾದುದು. ಪ್ರಚಾರ ಮತ್ತು ಹಣ ಸಂಗ್ರಹಣೆಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ, ಪೂರ್ಣವಾಗಿ ಸಹಕರಿಸಿದ ಉಪಾಧ್ಯಕ್ಷರುಗಳಾದ ಶ್ರೀ ಹೊ.ನಾ. ಹಿರಿಯಣ್ಣ ಸ್ವಾಮಿ ಮತ್ತು ಶ್ರೀ ಚಿನ್ನೇಗೌಡರ ತಾಳಮೇಳ ಮೆಚ್ಚುವಂತಿತ್ತು. ಶ್ರೀಯುತ ನರಸಿಂಹನ್, ಮುರಳೀಧರ್, ರಮೇಶ್, ಸತ್ಯನಾರಾಯಣ್ ಹಾಗೂ ಶ್ರೀನಿವಾಸ್ ಅವರುಗಳು ನೀಡಿದ ಎಲ್ಲ ರೀತಿಯ ನೆರವು ಹಾಗೂ ಸಹಕಾರಗಳು ಪ್ರಶಂಸನೀಯ. ಬೃಹತ್ ಕಾರ್ಯದ ಅಧೀಕ್ಷರಾಗಿ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದ ಹಿರಿಯರೂ ಗಣ್ಯರೂ ಆದ ಶ್ರೀ ವಿ.ಎಸ್. ಕೃಷ್ಣಯ್ಯರ್ ಮತ್ತು ಶ್ರೀ ಮಾಸ್ಟರ್ ಹಿರಣ್ಣಯ್ಯ ದಂಪತಿಗಳಿಗೆ ಗೌರವ ಪೂರ್ವಕ ಅಭಿನಂದನೆಗಳು.

**ಮನರಂಜನಾ ಕಾರ್ಯಕ್ರಮ:** ಶ್ರೀಮತಿ ಮಾಲಿನೀ ಪ್ರಸಾದ್ ಅವರು ತಮ್ಮ ಸುಮಧುರ ಕಂಠದಿಂದ ಸುಮಾರು ಒಂದು ಗಂಟೆಯ ಕಾಲ ಶಾಸ್ತ್ರೀಯ ಸಂಗೀತ ಗಾಯನ ಕಾರ್ಯಕ್ರಮವನ್ನು ಪಕ್ಕವಾದ್ಯದ ಸಂಗಡ ನಡೆಸಿಕೊಟ್ಟರು.

ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆಯ ಶಿಷ್ಯರುಗಳು ಅಭಿನಯಿಸಿದ **ಕಲ್ಯಾಣೀ ಮದುವೆ** ಹಾಸ್ಯಭರಿತವಾಗಿದ್ದು ಎಲ್ಲರ ಮನಸ್ಸನ್ನೂ ಅರಳಿಸಿ, ಬೆಳಗಿನಿಂದ ಆಗಿದ್ದ ದೇಹಶ್ರಮವನ್ನು ತಗ್ಗಿಸಿತು. ವಿಶ್ವೇಶ್ವರ ಭಟ್ಟ ಅವರು ಬರೆದ *ಈ* ನಾಟಕವನ್ನು ಶ್ರೀ ಆರ್.ನರಸಿಂಹನ್ ಪರಿಣಾಮಕಾರಿಯಾಗಿ ನಿರ್ದೇಶಿಸಿದರು.

ಶಾಂತಿಸೂಕ್ತದೊಡನೆ ಸಭೆ ಮುಕ್ತಾಯವಾಯಿತು. ಒಬ್ಬೊಬ್ಬರೇ ಸಭಾಭವನದಿಂದ ನಿರ್ಗಮಿಸುತ್ತಿದ್ದಂತೆ, ಸುಂದರ ಕನಸಿನ ಲೋಕ ಬಹು ಬೇಗ ಮರೆಯಾಗುತ್ತಿರುವಂತೆ ಭಾಸವಾಗುತ್ತಿತ್ತು. ಯಾವುದೇ ರೀತಿಯ ಅನುಚಿತ ವರ್ತನೆ, ಅಸಂಬದ್ಧ ಪ್ರಲಾಪ, ಅವಘಡಗಳು, ಅಸಹನೆ, ಅತೃಪ್ತಿ, ಅಚಾತುರ್ಯಗಳು ತಲೆದೋರದೆ ಶತಪ್ರತಿ ಶತದಷ್ಟು ತೃಪ್ತಿಕರವಾಗಿ ನೆರವೇರಿದ 'ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಸಮಾರಂಭ'ವು ಎಲ್ಲರ ಮನಸ್ಸಿನಲ್ಲಿ ಚಿರಸ್ಮರಣೀಯವಾಗಿರುತ್ತದೆ ಎಂಬುದರಲ್ಲಿ ಅತಿಶಯೋಕ್ತಿ ಇಲ್ಲ.

## ೧೯. ಷಷ್ಟ್ಯಬ್ದಪೂರ್ತಿ - ಬಿ.ಎನ್.ವಿ. ಕೀರ್ತಿ

***ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ***

ಅರುವತ್ತು ತುಂಬಿಹುದು ಬಿಎನ್‌ವಿ ಅವರಿಗೆ
ಕೋರುವೆವು ಶುಭವನ್ನು ಸಂತಸದ ಈಗಳಿಗೆ
ಹೋರುವುದೆ ಸಮಾಜದ ಸಮೃದ್ಧಿ ಸಂತಸಕೆ
ದಾರಿಯಾತ್ಮೋನ್ನತಿಗೆ ಬಿಎನ್‌ವಿ ಅವರಿಗೆ

ಜ್ಯೋತಿ ಆರಿತು ಮಗಳು ಜ್ಯೋತಿ ಸಾವಿಂದ
ಜ್ಯೋತಿ ಬೆಳಗಿತು ಮತ್ತೆ ಅವಳ ನೆನಪಿಂದ
ಜ್ಯೋತಿ ಶಾಲೆಯು ಇಂದು ಜ್ಞಾನದೀವಿಗೆಯಾಗಿ
ಜ್ಯೋತಿ ಕೈಗಾರಿಕೆಯು ಕರ್ಮದೇಗುಲವಾಗಿ

ಸಾಂಸ್ಕೃತಿಕ ಸೇವೆಗೆ ಜ್ಯೋತಿ ಪ್ರತಿಷ್ಠಾನ
ಐದು ಸಂಪುಟಗಳಲಿ ವೇದ ಪ್ರಕಾಶನ
ವೇದ ಪಂಡಿತರಿಗೆ ಬಿರುದು ಸನ್ಮಾನ
ಧರ್ಮಪ್ರಚಾರಕ್ಕೆ ದ್ರವ್ಯ ಪ್ರದಾನ

ವೇದಘೋಷವು ನಿತ್ಯ, ಮನೆಯಲ್ಲೆ ಗುರುಕುಲ
ಉಚಿತ ಶಿಕ್ಷಣವಿಲ್ಲಿ ಹನ್ನೆರಡು ವರುಷ
ಮಲ್ಲಿಕಾರ್ಜುನ ವೇದಪಾಠಶಾಲೆಯಲಿರುವ
ಎಲ್ಲ ಮಕ್ಕಳಮಾತೆ, ಪ್ರಿಯ ಮಡದಿ ಸೀತಾ

ವಿಪ್ರರೆಲ್ಲರ ಮಿತ್ರ, 'ವಿಪ್ರಭಾಸ್ಕರ'ರೆನಿಸಿ
ಅಪ್ರತಿಮರಾಗಿಹರು ವಿಪ್ರವೃಂದದಲಿ
ಕರ್ಮಯೋಗಿಯ ರೀತಿ ಸೇವೆಗೈಯುತ್ತ
ಧರ್ಮಮಾರ್ಗದಿ ನಡೆವ ಕೃತಕೃತ್ಯರಿವರು

# ಅನುಬಂಧ

## ೧. ಮೂಲಗ್ರಂಥದ ಪರಿವಿಡಿ

**ಜ್ಯೋತಿಶ್ರೀ: ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಷಷ್ಟ್ಯಬ್ದಪೂರ್ತಿ ಅಭಿನಂದನಾ ಸಂಚಿಕೆ; ಸಂಪಾದಕರು: ಪ್ರೊ|| ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ; ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅಭಿನಂದನಾ ಸಮಿತಿ, 'ವಸಿಷ್ಠ', ಬೆಂಗಳೂರು-೫೬೦ ೦೧೯; 1/4 ಕ್ರೌನ್ ; ೨೦೦೨; XXXX + 90.**

## ೨. ಶುಭಾಶಯಗಳು

### ಅ. ಆಹ್ವಾನ ಪತ್ರಿಕೆಯ ಪ್ರತಿ

ಶ್ರೀ

**ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅಭಿನಂದನಾ ಸಮಿತಿ**

ಕಛೇರಿ: 'ವಸಿಷ್ಠ' ಆಫೀಸ್, ನಂ. ೭೯/೧, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004,
ದೂರವಾಣಿ: ೨೬೫೨೧೦೨೪, ೨೬೫೨೦೭೯೫

*ಮಾನ್ಯರೇ,*

*ಶ್ರೀ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ, ಶ್ರೀ ಜ್ಯೋತಿ ಕೇಂದ್ರೀಯ ವಿದ್ಯಾಲಯ, ಶ್ರೀ ಮಲ್ಲಿಕಾರ್ಜುನ ವೇದ-ಸಂಸ್ಕೃತ ಪಾಠಶಾಲಾ ಸಂಸ್ಥೆಗಳ ಸ್ಥಾಪಕರೂ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಧ್ಯಕ್ಷರೂ, ಮತ್ತಿತರ ಅನೇಕ ಸಂಘ-ಸಂಸ್ಥೆಗಳ ನೇತಾರರೂ, ದಾನಿಗಳೂ ಆದ*

**ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಷಷ್ಟ್ಯಬ್ದಪೂರ್ತಿ ಅಂಗವಾಗಿ ಅಭಿನಂದನಾ ಕಾರ್ಯಕ್ರಮ**

*ಮುಖ್ಯ ಅತಿಥಿಗಳು*

**ಶ್ರೀ ಎಚ್.ಎನ್. ಅನಂತಕುಮಾರ್,** *ಮಾನ್ಯ ಕೇಂದ್ರ ನಗರಾಭಿವೃದ್ಧಿ ಸಚಿವರು* ; **ಶ್ರೀ ಆರ್.ವಿ.ದೇಶಪಾಂಡೆ,** *ಮಾನ್ಯ ಕೈಗಾರಿಕಾ ಸಚಿವರು* ;
**ಶ್ರೀ ಬಿ.ಕೆ.ಚಂದ್ರಶೇಖರ್,** *ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು* ; **ಶ್ರೀ ಹಾರನಹಳ್ಳಿ ರಾಮಸ್ವಾಮಿ,** *ಮಾಜಿ ಸಚಿವರು* ;
**ಶ್ರೀ ಎಸ್. ರಮೇಶ್,** *ಮಾಜಿ ಸಚಿವರು* ; **ಶ್ರೀಮತಿ ಮನೋರಮಾ ಮಧ್ವರಾಜ್,** *ಮಾಜಿ ಸಚಿವೆ, ಅಧ್ಯಕ್ಷೆ- ಪ್ರವಾಸೋದ್ಯಮ ನಿಗಮ*

*ಸನ್ಮಾನಿತರು*

*ಶತಾಯುಷಿ* **ಶ್ರೀ ಎಚ್.ಎನ್. ಶ್ರೀನಿವಾಸಯ್ಯ,** *ಶತಾಯುಷಿ* **ಶ್ರೀ ನಿಟ್ಟೂರು ಶ್ರೀನಿವಾಸರಾವ್, ವಿದ್ವಾನ್ ರಾಮೇಶ್ವರ ಅವಧಾನಿಗಳು,** *ಸಂಗೀತ ಕಲಾನಿಧಿ* **ಶ್ರೀ ಆರ್.ಕೆ. ಶ್ರೀಕಂಠನ್,** *ಶಿಕ್ಷಣ ತಜ್ಞ* **ಡಾ. ಎಚ್.ನರಸಿಂಹಯ್ಯ,** *ಶತಾಯುಷಿ* **ಶ್ರೀಮತಿ ಅನ್ನಪೂರ್ಣಮ್ಮ**

**ದಿನಾಂಕ : ೧.೧೨.೨೦೦೨ನೇ ಭಾನುವಾರ ಸಂಜೆ ೪ಕ್ಕೆ**

***ಸ್ಥಳ : ಶ್ರೀ ಚಂದ್ರಶೇಖರ ಭಾರತೀ ಕಲ್ಯಾಣಮಂದಿರದ ಆವರಣ***
*ಶಂಕರಪುರಂ, ಬೆಂಗಳೂರು - ೫೬೦ ೦೦೪*

**ಸಾಂಸ್ಕೃತಿಕ ಕಾರ್ಯಕ್ರಮ: ಸಂಜೆ ೭ ಗಂಟೆಗೆ**

| | | |
|---|---|---|
| **ಮಾಸ್ಟರ್ ಹಿರಣ್ಣಯ್ಯ** | **ಕೆ.ಎನ್. ವೆಂಕಟನಾರಾಯಣ** | **ಡಿ.ಎಸ್. ಹೊನ್ನಪ್ಪ** |
| *ಅಧ್ಯಕ್ಷರು* | *ಕಾರ್ಯದರ್ಶಿ* | *ಖಜಾಂಚಿ* |

## ಆ. ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಷಷ್ಟ್ಯಬ್ದಪೂರ್ತಿ ಅಭಿನಂದನಾ ಸಮಿತಿ

ಅಧ್ಯಕ್ಷರು : **ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯ**

ಉಪಾಧ್ಯಕ್ಷರು : **ಶ್ರೀ ಚಿನ್ನೇಗೌಡ, ಚಲನಚಿತ್ರ ಉದ್ಯಮಿ, ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ**

ಕಾರ್ಯದರ್ಶಿ : **ಶ್ರೀ ಕೆ.ಎನ್. ವೆಂಕಟನಾರಾಯಣ**

ಖಜಾಂಚಿ : **ಶ್ರೀ ಡಿ.ಎಸ್. ಹೊನ್ನಪ್ಪ**

ಅಭಿನಂದನಾ ಸಂಚಿಕೆ ಸಂಪಾದಕ : **ಪ್ರೊ|| ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ**

ಉಪಸಮಿತಿ ಅಧ್ಯಕ್ಷರು : **ಶ್ರೀ ಎಚ್.ಎಸ್.ಶಿವಶಂಕರ್, ಶ್ರೀ ಮೋಹನಮೂರ್ತಿ, ಶ್ರೀ ಎಂ.ವಿ. ಸತ್ಯನಾರಾಯಣ, ಶ್ರೀ ವೈ.ಎನ್. ಶ್ರೀನಿವಾಸ್**

ಅಭಿನಂದನಾ ಸಂಚಿಕೆ ಸಮಿತಿ ಸದಸ್ಯರು : **ಶ್ರೀಯುತರುಗಳಾದ ಎ.ವಿ. ಪ್ರಸನ್ನ, ಬಿ.ಜಿ. ಶ್ರೀರಂಗಯ್ಯ, ಜಿ.ಕೆ. ಗುಂಡುರಾವ್, ಡಾ|| ಬಿ.ಎಸ್. ರಾಮಕೃಷ್ಣರಾವ್, ಶ್ರೀಮತಿ ಸುಮಾ**

ವೇದಿಕೆ ಏರ್ಪಾಟು ಸಮಿತಿ : **ಶ್ರೀಯುತರುಗಳಾದ ಎಚ್.ಎಸ್. ಶ್ರೀಕಂಠ, ಲೋಕನಾಥ್**

ಊಟೋಪಚಾರ ಸಮಿತಿ : **ಶ್ರೀಯುತರುಗಳಾದ ಮೋಹನಮೂರ್ತಿ, ಬಿ.ಎನ್. ನಾಗರಾಜ್, ಎಚ್.ಎಸ್. ಅನಂತರಾಮಯ್ಯ**


ಧಾರ್ಮಿಕ ಕಾರ್ಯಕ್ರಮ ಸಮಿತಿ : **ಶ್ರೀಯುತರುಗಳಾದ ಎಂ.ನರಸಿಂಹನ್, ವೈ.ಎನ್. ಶ್ರೀನಿವಾಸ್, ಬಿ.ಕೆ.ರಮೇಶ್, ಬಿ.ಕೆ. ಸತ್ಯನಾರಾಯಣ**

ಸಾಂಸ್ಕೃತಿಕ ಕಾರ್ಯಕ್ರಮ : **ಶ್ರೀಯುತರುಗಳಾದ ಡಾ||ಎಂ.ಆರ್.ವಿ. ಪ್ರಸಾದ್, ವಿದ್ಯಾಶಂಕರ್**

ಸದಸ್ಯರು : **ಶ್ರೀಯುತರುಗಳಾದ ವಿ.ಎಸ್. ಕೃಷ್ಣಯ್ಯರ್, ಎಸ್.ರಮೇಶ್, ಸಿ.ಹೆಚ್. ಸುಬ್ರಹ್ಮಣ್ಯ ಜೋಯಿಸ್, ಸಿ.ವಿ.ನಾಗೇಶ್, ಎಚ್.ಕೆ. ನರಹರಿ, ಹರಿಕೃಷ್ಣ ಪುನರೂರು, ಅಶ್ವತ್ಥನಾರಾಯಣ ಶಾಸ್ತ್ರಿ, ಬಿ.ಎಸ್. ದ್ವಾರಕಾನಾಥ್, ಎಂ.ಪಿ.ಮೋಹನ್, ಶೃಂಗೇಶ್ವರ ಶೃಂಗೇರಿ, ನೀರುಳ್ಳಿ ಶೃಂಗೇಶ್ವರ್ - ಶೃಂಗೇರಿ, ಡಾ|| ನಾರಾಯಣಸ್ವಾಮಿ -ಮಂಡ್ಯ, ಎಸ್.ಪಿ. ಸಹದೇವ್, ಯು.ವಿ. ಶ್ರೀನಿವಾಸಮೂರ್ತಿ, ಲಕ್ಷ್ಮೀಕಾಂತ್, ರವಿ ಸುಬ್ರಹ್ಮಣ್ಯ, ಮುರಳೀಧರ್, ಎನ್.ಕೆ.ನಾಗರಾಜ್, ಜಯಸಿಂಹ, ಶ್ರೀಪತಿ, ವೆಂಕಟಸುಬ್ರಹ್ಮಣ್ಯ, ಎಂ.ಎಸ್. ಶಿವಶಂಕರ್, ಶ್ರೀಧರರಾವ್, ವೈ.ಎನ್.ಕೃಷ್ಣಭಟ್, ವೈ.ಎನ್.ವಾಮನಮೂರ್ತಿ, ಉದಯಕುಮಾರ್, ಕೆ.ಹೆಚ್.ಪ್ರಸನ್ನ, ಕೆ.ವಿ.ಮೂರ್ತಿ, ಡಾ|| ಕೆ.ಪಿ. ಪುತ್ತೂರಾಯ, ಕೋಟೇಶ್ವರ ಸೂರ್ಯನಾರಾಯಣರಾವ್, ಆರ್.ಎನ್.ಸ್ವಾಮಿ, ಈಶ್ವರ್, ಅನಂತ್, ಎ.ಎನ್. ಚಂದ್ರಮೌಳಿ, ಎ.ಸತ್ಯೇಂದ್ರ, ಕೆ.ಸಿ. ಪ್ರಭಾಕರ್, ಬಿ.ಕೆ. ಸುಬ್ಬರಾವ್, ಹೆಚ್.ಕೆ. ಶ್ರೀನಿವಾಸ್, ಹೆಚ್.ಕೆ.ಚಂದ್ರಶೇಖರ್, ಶ್ರೀಧರ್, ಸುರೇಶ್, ನರಸಿಂಹಮೂರ್ತಿ, ಶಂಕರನಾರಾಯಣ, ನಾರಾಯಣರಾವ್ ಎನ್.ಆರ್., ಎಂ.ಎಸ್.ವೆಂಕಟಾಚಲ- ತುಮಕೂರು, ಭಾರದ್ವಾಜ್-ಶಿವಮೊಗ್ಗ**

*******

## ಇ. ಶ್ರೀ ಬಿ.ಎನ್.ವಿ ಸುಬ್ರಹ್ಮಣ್ಯ ಅವರ ವಂಶವೃಕ್ಷ



# ೪. ವ್ಯಕ್ತಿ ವಿವರ

## ಬಿ.ಎನ್.ವಿ. ಸುಬ್ರಹ್ಮಣ್ಯ

(ಬೆಟ್ಟದಪುರ ನಾರಾಯಣಸ್ವಾಮಿ ವೆಂಕಟಸುಬ್ರಹ್ಮಣ್ಯ)

**ಜನನ :** ೧೫ನೆಯ ಅಕ್ಟೋಬರ್, ೧೯೪೨

**ತಂದೆ:** ನಾರಾಯಣ ಸ್ವಾಮಿ, ಶ್ಯಾನುಭೋಗರು, ಬೆಟ್ಟದಪುರ

**ತಾಯಿ:** ಕಾವೇರಮ್ಮ; ತಾಯಿಯ ತಾಯಿ ಪುಟ್ಟಕ್ಕಯ್ಯಮ್ಮ (ಸಾಲಿಗ್ರಾಮ)

**ಬಾಲ್ಯ ವಿದ್ಯಾಭ್ಯಾಸ:** ಸಾಲಿಗ್ರಾಮ; ಎಸ್.ಎಸ್.ಎಲ್.ಸಿ, ೧೯೫೯.

**ಡಿಪ್ಲೊಮಾ:** ಮಡಿಕೇರಿ, ಡ್ರಾಫ್ಟ್ಸ್‌ಮನ್, ೧೯೫೯-೬೧

**ಬೆಂಗಳೂರಿಗೆ:** ವಿವಿಧ ಕಾರ್ಖಾನೆಗಳಲ್ಲಿ ನೌಕರಿ: ಟಿ.ಟಿ.ಕೆ ಪ್ರಿಸಿಶನ್ ಕಂಪನಿಯಲ್ಲಿ ಡ್ರಾಫ್ಟ್ಸ್‌ಮನ್; ಸರಸ್ವತಿ ಐರನ್ ಫೌಂಡ್ರಿ; ಗೌರಿಬಿದನೂರು ಸಕ್ಕರೆ ಕಾರ್ಖಾನೆ; ರಾಜಾಜಿನಗರದ ಕೆ.ಎಸ್.ಸೀತಾರಾಮಯ್ಯ ಅಂಡ್ ಸನ್ಸ್‌ರವರ ಫ್ಯಾಬ್ರಿಕೇಷನ್ ಯೂನಿಟ್‌ನಲ್ಲಿ ಫೋರ್‌ಮನ್: ೧೯೬೨-೭೧

**ವಿವಾಹ:** ಸೀತಾ(ಜ: ೯.೧೧.೫೧) ಅವರೊಂದಿಗೆ ೧೮ನೇ ಮೇ, ೧೯೬೮ (ಮಾವ: ವೇ. ಬ್ರ. ಶ್ರೀ ಹರವೆ ಮಲ್ಲಿಕಾರ್ಜುನ ಶಾಸ್ತ್ರಿ, ಅತ್ತೆ: ಪಾರ್ವತಮ್ಮ)

**ಮಗಳು ಜ್ಯೋತಿ ಜನನ:** ೨೫ ಜೂನ್, ೧೯೭೧

**ಜ್ಯೋತಿ ಇಂಡಸ್ಟ್ರೀಸ್ ಪ್ರಾರಂಭ:** ಸೆಪ್ಟೆಂಬರ್ '೭೧

**ಜ್ಯೋತಿ ಚಾರಿಟಬಲ್ ಟ್ರಸ್ಟ್ ಸ್ಥಾಪನೆ:** ೧೯೮೨

**ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ:** ೧೯೮೨

**ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆ:** ೧೯೮೩

**ಕಾರ್ಖಾನೆಗೆ ಸ್ವಂತ ಕಟ್ಟಡ:** ೧೯೮೩ (ಕನಕಪುರ ರಸ್ತೆ, ಸ್ಟೆಯಿನ್‌ಲೆಸ್ ಸ್ಟೀಲ್ ಕೈಗಾರಿಕಾ ಉಪಕರಣ)

**ಮಗಳು ಜ್ಯೋತಿ ಮರಣ:** ೨೮.೧೦.೧೯೮೬

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ:** ೧೯೮೮

**ಜ್ಯೋತಿ ಕೇಂದ್ರೀಯ ವಿದ್ಯಾಲಯ ಸ್ಥಾಪನೆ:** ೧೯೮೯-೯೦ (ನೂತನ ಕಟ್ಟಡ: ೧೯೯೨)

**ಕೃಷ್ಣಯಜುರ್ವೇದ ಪ್ರಕಾಶನ:** ೧೯೮೮

**ಬ್ರಾಹ್ಮಣ ವೈದಿಕ ಧರ್ಮಸಹಾಯ ಸಭಾ ಟ್ರಸ್ಟ್ ಜೀರ್ಣೋದ್ಧಾರ:** ೧೯೮೯

**ರಾಜ್ಯೋತ್ಸವ ಪ್ರಶಸ್ತಿ :** ೧೯೯೧

**ಪ್ಲಾಸ್ಟಿಕ್ ಕಾರ್ಖಾನೆ:** ೧೯೯೪

**ರಾಜೀವ್‌ಗಾಂಧಿ ನ್ಯಾಷನಲ್ ಯೂನಿಟಿ ಅವಾರ್ಡ್ :** ೧೯೯೫

**ಜ್ಯೋತಿ ಕೇಂದ್ರೀಯ ವಿದ್ಯಾಲಯ ಸಂಯುಕ್ತ ಪದವಿಪೂರ್ವ ಕಾಲೇಜು:** ೧೯೯೭


**ಷಷ್ಟ್ಯಬ್ದಪೂರ್ತಿ ಸಮಾರಂಭ;** ಅಭಿನಂದನಾ ಸಂಚಿಕೆ 'ಜ್ಯೋತಿಶ್ರೀ' ಸಮರ್ಪಣೆ: ೧.೧೨.೨೦೦೨


**ಜ್ಯೋತಿ ವಿದ್ಯಾರ್ಥಿನಿ ನಿಲಯ ವಸತಿಗೃಹ ಉದ್ಘಾಟನೆ :** ೨೯.೭.೦೪

**ವಿವಿಧ ಸಂಸ್ಥೆಗಳಿಗಾಗಿ ಸೇವೆ:** ಅಬಲಾಶ್ರಮ, ಸರ್.ಎಂ.ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್, ನ್ಯಾಷನಲ್ ಎಜುಕೇಷನ್ ಟ್ರಸ್ಟ್, ಶ್ರೀ ಸುರಸರಸ್ವತೀ ಸಭಾ-ಶೃಂಗೇರಿ, ಶ್ರೀ ಡಿ. ಸುಬ್ಬರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್ (ರಿ), ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.), ಮೈಸೂರು, ಇ.

**ಪ್ರಶಸ್ತಿ:** ವಿಪ್ರಭಾಸ್ಕರ, ಸಮಾಜಸೇವಾವ್ರತಿ, ಧರ್ಮಸಂರಕ್ಷಕ, ವಿಪ್ರತೇಜ.

## ೫. ಹಸ್ತಾಕ್ಷರ


9/1/05



## ೬. ಪ್ರಶಸ್ತಿ / ಸಂಮಾನ

**ಕರ್ನಾಟಕ ಸರ್ಕಾರ**

**ರಾಜ್ಯೋತ್ಸವ ಪ್ರಶಸ್ತಿ - ೧೯೯೧**

**ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ**

*ಸನ್ಮಾನ್ಯರೆ,*

ತಾವು ಶಿಕ್ಷಣಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತ ಕರ್ನಾಟಕ ಸರ್ಕಾರವು ೧೯೯೧ನೆಯ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ತಮಗೆ ನೀಡಿ ಗೌರವಿಸಲು ಹರ್ಷಿಸುತ್ತದೆ.

***ಹ. ನಾಗರಾಜಶೆಟ್ಟಿ***
*ಆಯುಕ್ತರು ಹಾಗೂ ಕಾರ್ಯದರ್ಶಿಗಳು*
*ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನಸೇವೆಗಳು*
*ಬೆಂಗಳೂರು*

***ಡಾ. ಪಿ.ಎಸ್.ರಾಮಾನುಜಂ***
*ಆಯುಕ್ತರು*
*ಕನ್ನಡ ಮತ್ತು ಸಂಸ್ಕೃತಿ ಇಲಾಖೆ*
*೧ ನವೆಂಬರ್ ೧೯೯೧*

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ, ಪದವಾಕ್ಯಪ್ರಮಾಣಪಾರಾವಾರಪಾರೀಣ, ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರ - ಧ್ಯಾನಧಾರಣಸಮಾಧಿಮುಖ್ಯಾಷ್ಟಾಂಗಯೋಗನಿರತ, ತಪಶ್ಚಕ್ರವರ್ತ್ಯನಾದ್ಯಂತಗುರುಭೂಮಂಡಲಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ವೈದಿಕಮಾರ್ಗಪ್ರವರ್ತಕ, ವೇದವೇದಾಂತಪಾರಗ, ಷಣ್ಮತೋದ್ಧಾರಕ, ತತ್ತ್ವಮಸಿಮಹಾವಾಕ್ಯಾರ್ಥನಿರ್ಣಾಯಕ, ಡಂಭಾಬ್ಧಿಕುಂಭೋದ್ಭವ, ಈಷಣತ್ರಯಾದಿವಿಷಯಕಲ್ಪಾಂತರುದ್ರಾವತಾರ, ಶ್ರೀಮಚ್ಛಂಕರಾಚಾರ್ಯಮುಖ್ಯಶಿಷ್ಯಶ್ರೀತೋಟಕಾಚಾರ್ಯಪರಂಪರಾಗತ ಶ್ರೀಶಂಬರ ಪಶ್ಚಿಮಮಠಾಧಿವಾಸ, ಶ್ರೀದಕ್ಷಿಣಾಮೂರ್ತಿಗೋಪಾಲಕೃಷ್ಣದೇವಪಾದಪದ್ಮಾರಾಧಕ, ಶ್ರೀಮದದ್ವೈತಮತಾವಲಂಬಿ ಶಿವಳ್ಳಿದೇಶೀಯ ವಿಪ್ರಾಚಾರವಿಚಾರಕ, ಶ್ರೀಎಡನೀರುಮಠಾಧಿಪಶ್ರೀಮದೀಶ್ವರಾನಂದಭಾರತೀಕರಕಮಲಸಂಜಾತರಾದ ಶ್ರೀ ಶ್ರೀ ಕೇಶವಾನಂದಭಾರತೀ ಶ್ರೀಪಾದಂಗಳವರು ಬೆಂಗಳೂರಿನ ವಿಖ್ಯಾತ ಕೈಗಾರಿಕೋದ್ಯಮಿಗಳೂ, ಪರಮದೈವಭಕ್ತರೂ, ಶ್ರೀಮಠದ ಅಭಿಮಾನಿಗಳೂ ಆದ

## ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ

*ಇವರಿಗೆ ಶುಭಾಶಂಸನ ಪೂರ್ವಕ ಅನುಗ್ರಹಿಸಿದ*

## ಅಭಿನಂದನ ಪತ್ರ

ಕೃಷಿಯಲ್ಲಿ ಹೆಸರಾಂತ 'ಸಂಕೇತಿ' ಕುಟುಂಬದಲ್ಲಿ, ಬೆಟ್ಟದಪುರ ಶ್ರೀ ನಾರಾಯಣಸ್ವಾಮಿಯವರ ಸುಪುತ್ರರಾಗಿ ಜನಿಸಿದ ನೀವು ನಿಮ್ಮ ಬಾಲ್ಯಕಾಲವನ್ನು ಬಡತನದಲ್ಲೇ ಕಳೆದವರಾದರೂ, ಮುಂದೆ ಪ್ರಾಪ್ತವಯಸ್ಕರಾದ ಮೇಲೆ ಸ್ವಸಾಮರ್ಥ್ಯ ಮತ್ತು ಸ್ವಕೀಯ ಪ್ರತಿಭಾವಿಶೇಷದಿಂದ ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿ, ಅಗ್ರಸ್ಥಾನವನ್ನು ಗಳಿಸಿದ ಕೆಲವೇ ಮಂದಿ ಖ್ಯಾತ ಉದ್ಯಮಿಗಳಲ್ಲಿ ಒಬ್ಬರಾಗಿ ಕೀರ್ತಿ ಗಳಿಸಿದುದು ಆಶ್ಚರ್ಯಕರವೂ ಅಭಿನಂದನೀಯವೂ ಆಗಿದೆ. ತಾಂತ್ರಿಕ ನೈಪುಣ್ಯದಲ್ಲಿ ಸರ್ವಶ್ರೇಷ್ಠವಾದ ಸಂಸ್ಥೆ ಎಂಬ ಕೀರ್ತಿಯನ್ನೂ ಗಳಿಸಿದಿರಿ. ಬಾಲ್ಯದಲ್ಲಿ ಬಡತನದ ದಾರುಣ ಕಷ್ಟಗಳನ್ನು ಚೆನ್ನಾಗಿ ಅನುಭವಿಸಿದ್ದರಿಂದಲೇ ಪ್ರಾಯಶಃ ಶ್ರೀಮಂತಿಕೆಯ ಶಿಖರವನ್ನೇರಿದ ನಿಮ್ಮ ಉದಾರ ಹೃದಯವು ಪರೋಪಕಾರಕ್ಕಾಗಿ ಹಂಬಲಿಸಿ, ಸದಾಕಾಲವೂ ಬಡವರ ಸಹಾಯಕ್ಕೆ ಧಾವಿಸುತ್ತಿರಬೇಕು. **ಪರೋಪಕಾರಃ ಪುಣ್ಯಾಯ** ಎಂಬ ನೀತಿವಾಕ್ಯವನ್ನು ದೃಢವಾಗಿ ಮನಸ್ಸಿನಲ್ಲಿ ನೆಲೆಗೊಳಿಸಿ ಜೀವನದಲ್ಲಿ ಹೆಜ್ಜೆಹೆಜ್ಜೆಗೂ ನೀವು ಅಕ್ಷರಶಃ ಅದನ್ನು ಪಾಲಿಸುತ್ತಿದ್ದೀರಿ. ಪರಮದೈವಭಕ್ತರಾದ ನೀವು ಸನಾತನ ವೈದಿಕಧರ್ಮ ಹಾಗೂ ಶಿಕ್ಷಣಕ್ಷೇತ್ರದಲ್ಲಿ ಅಪಾರ ಶ್ರದ್ಧೆಯುಳ್ಳವರಾಗಿದ್ದೀರಿ. **ದಾನಶೂರ** ಎಂಬ ಉಪಾಧಿಯೊಂದಿರುವುದಾದರೆ ಅದು ನಿಮಗೇ ಸಲ್ಲತಕ್ಕದ್ದೆಂಬುದರಲ್ಲಿ ಸಂದೇಹವಿಲ್ಲ. ನಿಮ್ಮ ಸೇವಾಕಾರ್ಯಗಳ ಪಟ್ಟಿಯು ಬೆಳೆಸಿದಷ್ಟೂ ಬೆಳೆಯಬಹುದಾದ ಸಾಮರ್ಥ್ಯವನ್ನು ಹೊಂದಿದೆ. ನಮ್ಮ ಶ್ರೀ ಎಡನೀರು ಮಠಕ್ಕೆ ಸಂಬಂಧಿಸಿದ **ಶ್ರೀ ಗೋಪಾಲಕೃಷ್ಣ ಸೇವಾ ಸಂಸ್ಥೆ**ಯ ಕೋಶಾಧಿಕಾರಿಗಳಾಗಿದ್ದು, ನೀವು ಪ್ರತಿಯೊಂದು ಕೆಲಸಕಾರ್ಯದಲ್ಲಿಯೂ ಸಹಾಯಸಂಪತ್ತನ್ನಿತ್ತು ಸಹಕರಿಸುತ್ತಿರುವುದು ನಿಜವಾಗಿಯೂ ಶ್ರೀಮಠದ ಅಭಿಮಾನೀವರ್ಗಕ್ಕೊಂದು ಸಂತಸದ ವಿಷಯವಾಗಿದೆ. ನಮ್ಮ ಆರಾಧ್ಯಮೂರ್ತಿಗಳಾದ ಶ್ರೀ ದಕ್ಷಿಣಾಮೂರ್ತಿ ಗೋಪಾಲಕೃಷ್ಣಸ್ವಾಮಿಯವರು ನಿಮಗೆ ಆಯುರಾರೋಗ್ಯ ಸೌಭಾಗ್ಯ ಸಂಪತ್ತುಗಳನ್ನು ನೀಡಿ ಹರಸಲೆಂದು ಪ್ರಾರ್ಥಿಸುತ್ತೇವೆ.

*ಶ್ರೀ ಎಡನೀರು ಮಠ* *ಶ್ರೀಮನ್ನಾರಾಯಣ ಸ್ಮರಣೆಗಳು*
*ಆರಾಧನಾ ಮಹೋತ್ಸವ* *ಶ್ರೀ ಶ್ರೀ ಸ್ವಾಮಿಭಿಃ*
*೦೨.೧೨.೧೯೯೧*

## ಬ್ರಾಹ್ಮಣ ಸಂಘ, ಕೋಲಾರ

*ಸಮಾಜಸೇವಾಧುರೀಣ*
***ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ***

ಬ್ರಾಹ್ಮಣ ಸಮಾಜದ ಸರ್ವಾಂಗೀಣ ಪ್ರಗತಿಗಾಗಿ, ಕಂಕಣಬದ್ಧರಾಗಿ ನಿರಂತರ ಸೇವೆ ಸಲ್ಲಿಸುತ್ತ ಬಂದಿರುವ ಕ್ರಿಯಾಶೀಲ ಸಂಘಟನಾ ಚತುರ, ರಾಜ್ಯ ರಾಷ್ಟ್ರ ಮಟ್ಟದಲ್ಲಿ ಬ್ರಾಹ್ಮಣರ ಸುಸಂಘಟನೆಗೆ ಹೊಸ ಆಯಾಮ ನೀಡಿದ ಸ್ಫೂರ್ತಿ ಚೇತನ, ಸಮಾಜಸೇವೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಸರ್ವಮಾನ್ಯ ಧೀಮಂತನಾಯಕ, ಧೀರೋದಾತ್ತ ನಡೆ, ಸರಳ ಸಹೃದಯವಂತಿಕೆಯಿಂದ ಎಲ್ಲರಲಿ ಒಂದಾಗಿ ಬೆರೆತ, ನಮ್ಮೆಲ್ಲರ ಅಭಿಮಾನ ಬಂಧು - ಮಹಾಮಂಗಳ ಸ್ವರೂಪಿ ಗಾಯತ್ರೀ ಜಗನ್ಮಾತೆಯ ದಿವ್ಯಾನುಗ್ರಹದಿಂದ ಮುನ್ನಡೆಯುತ್ತ ಆಯುರಾರೋಗ್ಯದಿಂದ ಸಂತಸದಿ ಬಾಳುತಲಿರಿ ಎಂದಾಶಿಸುತ್ತ **ವಿಪ್ರತೇಜ** ಎಂಬ ಬಿರುದಿನೊಡನೆ ಅರ್ಪಿಸಿದ ಗೌರವ ಸನ್ಮಾನ ಪತ್ರ.

*೨೫.೧೨.೯೧* *ಅಧ್ಯಕ್ಷರು, ಸದಸ್ಯರು, ಬ್ರಾಹ್ಮಣ ಸಂಘ, ಕೋಲಾರ*

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

*ಅಭಿನವ ಮಂದಿರ, ಶಂಕರಪುರಂ, ಶಂಕರಮಠದ ರಸ್ತೆ, ಬೆಂಗಳೂರು-೫೬೦ ೦೦೪*

***ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ***

***ಮಹಾಸಭಾಧ್ಯಕ್ಷ* ಶ್ರೀ ಬಿ.ಎಸ್.ವಿ. ಸುಬ್ರಹ್ಮಣ್ಯ**

ಅವರಿಗೆ

### ಅಭಿನಂದನಾ ಪತ್ರ

*ಆತ್ಮೀಯರೇ,*

ತಾವು ಶಿಕ್ಷಣಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ೧೯೯೧ರ **ರಾಜ್ಯೋತ್ಸವ ಪ್ರಶಸ್ತಿ**ಯನ್ನು ಕರ್ನಾಟಕ ಸರ್ಕಾರದಿಂದ ಪಡೆದ *ಈ* ಶುಭ ಸಂದರ್ಭದಲ್ಲಿ ರಾಜ್ಯದ ಸಮಸ್ತ ಬ್ರಾಹ್ಮಣ ಸಮಾಜದ ಪರವಾಗಿ ಹಾರ್ದಿಕವಾಗಿ ಅಭಿನಂದಿಸುತ್ತೇವೆ. ತಾವು ಸಂಸ್ಕೃತ, ಸಂಗೀತ, ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಪರಂಪರೆಯುಳ್ಳ ಸಂಕೇತಿ ಉಪಪಂಗಡಕ್ಕೆ ಸೇರಿದ ಕೃಷಿಕರಾದ ಬೆಟ್ಟದಪುರ ಶ್ರೀ ನಾರಾಯಣ ಸ್ವಾಮಿ ದಂಪತಿಗಳಿಗೆ ೧೯೪೨ರಲ್ಲಿ ಜನಿಸಿದಿರಿ. ಅದಮ್ಯ ಚೇತನರಾದ ತಾವು ಊಳಿಗಮಾನ್ಯ ಬದುಕಿಗೆ ವಿದಾಯ ಹೇಳಿ, ಸ್ವಂತ ಉದ್ಯಮ ಸ್ಥಾಪಿಸುವ ದೃಢ ಸಂಕಲ್ಪ ಮಾಡಿ, ಹಂತಹಂತವಾಗಿ ಪ್ರಗತಿ ಸಾಧಿಸುತ್ತಾ, ಸಣ್ಣಕೈಗಾರಿಕಾಕ್ಷೇತ್ರದಲ್ಲಿ ಅಚ್ಚರಿಪಡುವಂತಹ ಸ್ಥಾನವನ್ನು ಪಡೆದಿರುತ್ತೀರಿ. ಕಠಿಣ ಪರಿಶ್ರಮ, ನಿಶ್ಚಲ ಆತ್ಮಪ್ರತ್ಯಯ ಮತ್ತು ಅಮಿತ ಶ್ರದ್ಧೆಯಿಂದ ಒಬ್ಬ ವ್ಯಕ್ತಿ ಎಂತಹ ಪ್ರಗತಿ ಸಾಧಿಸಬಹುದೆಂಬುದನ್ನು ತಮ್ಮ ಜೀವನ ಕ್ರಮದಿಂದ ಸೋದಾಹರಣ ರೂಪದಲ್ಲಿ ವೇದ್ಯಪಡಿಸಿ ನಮ್ಮ ಬ್ರಾಹ್ಮಣ ಯುವಕರಿಗೆ ಆದರ್ಶಪ್ರಾಯರಾಗಿರುತ್ತೀರಿ. ವೈದಿಕ ಮನೆತನದ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರೂ ಆಗಿದ್ದ ವೇ|| ಬ್ರ|| ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳವರ ಸುಪುತ್ರಿ ಶ್ರೀಮತಿ ಸೀತಾದೇವಿ ಅವರನ್ನು ಧರ್ಮಪತ್ನಿಯಾಗಿ ಸ್ವೀಕರಿಸಿ ಸಮರಸ ಜೀವನವನ್ನು ನಡೆಸುತ್ತಿರುವಿರಿ. ಪ್ರತಿಯೊಬ್ಬ ಶ್ರೇಷ್ಠ ವ್ಯಕ್ತಿಯ ಹಿನ್ನೆಲೆಯಲ್ಲಿ ಓರ್ವ ಮಹಿಳೆಯ ಸತತ ಸಹಕಾರ ಮತ್ತು ಉತ್ತೇಜನವಿರುತ್ತದೆ ಎಂಬ ನಾಡುನುಡಿಗೆ ತಮ್ಮ ಅರ್ಧಾಂಗಿ ಅನ್ವರ್ಥವಾಗಿರುತ್ತಾರೆ. ತಮ್ಮಿಬ್ಬರ ಮಧುರ ದಾಂಪತ್ಯದ ಕುರುಹಾಗಿ ಜನಿಸಿದ ಕುಮಾರಿ ಜ್ಯೋತಿ ಅವರ ಸವಿನೆನಪಿಗಾಗಿ ತಾವೀರ್ವರೂ ಆ ಪುತ್ರಿಪ್ರೇಮವನ್ನು ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ಜ್ಯೋತಿಯಂತೆ ಸರ್ವತ್ರ ಪಸರಿಸುವಂತೆ, ಕಾರ್ಯೋನ್ಮುಖರಾದದ್ದು ಆದರ್ಶಪ್ರಾಯ ಹಾಗೂ ಅನುಕರಣೀಯ. ಶೃಂಗೇರಿ ಶ್ರೀ ಶಾರದಾ ಪೀಠದ ಕೃಪಾಶ್ರಯದಲ್ಲಿ ಸಾಮಾಜಿಕ ಸೇವಾಕಾರ್ಯದ ಅಂಗವಾಗಿ ಶ್ರೀಮಠವು ನಡೆಸುತ್ತಿರುವ ಆಸ್ಪತ್ರೆ ಹಾಗೂ ಸಂಸ್ಕೃತ ಪ್ರಚಾರ ಸಂಸ್ಥೆಯಾದ ಸುರಸರಸ್ವತೀ ಸಭೆಗೆ ಟ್ರಸ್ಟಿಗಳಾಗಿ, ಎಡನೀರು ಮಠದ ಶ್ರೀ ಗೋಪಾಲಕೃಷ್ಣ ಸೇವಾಸಂಸ್ಥೆಯ ಕೋಶಾಧಿಕಾರಿಗಳಾಗಿ, ತಮ್ಮ ಸೇವೆ ಉಲ್ಲೇಖನೀಯ. ಅನೇಕ ಗುರುಪೀಠಗಳ ಧಾರ್ಮಿಕ ಕಾರ್ಯಗಳಿಗೂ, ಅಸಂಖ್ಯ ದೇವಾಲಯಗಳ ಅನ್ನಸತ್ರಗಳ ಜೀರ್ಣೋದ್ಧಾರಕ್ಕಾಗಿಯೂ, ಧರ್ಮ ಸಂಸ್ಕೃತಿಗಳಿಗೆ ಮೀಸಲಾದ ಅನೇಕ ಗ್ರಂಥಗಳ ಪ್ರಕಾಶನಕ್ಕೂ, ವಿದ್ಯಾಸಂಸ್ಥೆ ಹಾಗೂ ವಿದ್ಯಾರ್ಥಿ ನಿಲಯಗಳಿಗೂ, ನಿರುದ್ಯೋಗಿ ತರುಣರಿಗೂ, ಕಡುಬಡವರಿಗೂ ತಾವು ತೆರೆದ ಮನಸ್ಸಿನಿಂದ ಭಗವಂತನ ಉಪಾಸನೆಯೆಂದು ತಿಳಿದು ನೀಡುತ್ತಿರುವ ಆರ್ಥಿಕ ನೆರವಿನ ಮೂಲಕ ಆಧುನಿಕ **ದಾನಶೂರಕರ್ಣ**ರೆಂದು ಖ್ಯಾತನಾಮರಾಗಿದ್ದೀರಿ. ಇಂತಹ ಎಲ್ಲಾ ಸೇವಾಕಾರ್ಯಗಳಿಗೂ ಕಳಶಪ್ರಾಯದಂತೆ, ಬ್ರಾಹ್ಮಣ ಸಮಾಜಕ್ಕೆ ತಾವು ಮಾಡುತ್ತಾ ಬಂದಿರುವ ತನು, ಮನ, ಧನ ರೂಪದ ಸೇವೆ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ. ಮಹಾಸಭೆಯ ಸಾಮಾನ್ಯ ಸದಸ್ಯನಾಗಿ ಪ್ರವೇಶಿಸಿ, ಕೋಶಾಧಿಕಾರಿಯಾಗಿ, ಅನಂತರ ೧೯೮೮ರಲ್ಲಿ ಮಹಾಸಭಾ ಅಧ್ಯಕ್ಷರಾಗಿ ನೇತೃತ್ವ ವಹಿಸಿಕೊಂಡಿರಿ. ತಮ್ಮ ಅಧಿಕಾರಾವಧಿಯ ನಾಲ್ಕು ವರ್ಷಗಳಲ್ಲಿ ಬ್ರಾಹ್ಮಣ ಸಮಾಜದ ಸಂಘಟನೆಗೆ ಅಮೃತ ಸೇಚನ ಮಾಡಿ ರಾಜ್ಯಾದ್ಯಂತ ಬ್ರಹ್ಮತೇಜಸ್ಸಿನ ಸಂಚಾರವಾಗುವಂತೆ ಮಾರ್ಗದರ್ಶನ ನೀಡಿರುತ್ತೀರಿ. ಅಭೂತಪೂರ್ವವಾದ ಆರನೆಯ ರಾಜ್ಯಮಟ್ಟದ ಬ್ರಾಹ್ಮಣ ಸಮ್ಮೇಳನ ಇಂದಿಗೂ ಜನಮನದಲ್ಲಿ ಹಸಿರಾಗಿದೆ. ಕೇಂದ್ರಸಭೆಯ ಆರ್ಥಿಕ ಪರಿಸ್ಥಿತಿಯನ್ನು ಗಮನಾರ್ಹವಾಗಿ ಉತ್ತಮಪಡಿಸಿ, ನಗರದ ಕರ್ಮಾಂತರವನವನ್ನು ಸುಸಜ್ಜಿತಗೊಳಿಸಿ, ಪೂಜಾರಿ ಕೃಷ್ಣ ದೂರದರ್ಶನ ಚಲನಚಿತ್ರದ ವಿರುದ್ಧ ನಡೆದ ಪ್ರತಿಭಟನಾ ಜಾಥಾದ ನೇತೃತ್ವವನ್ನು ಯಶಸ್ವಿಯಾಗಿ ನಿರ್ವಹಿಸಿ, ಬ್ರಾಹ್ಮಣರು ಪರಶುರಾಮರಾಗಬಲ್ಲರೆಂದು ಸಿದ್ಧಪಡಿಸಿದಿರಿ. 'ನಾನೊಬ್ಬ ಬ್ರಾಹ್ಮಣ' ಎಂದು ಹೇಳಿಕೊಳ್ಳಲು ಹಿಂಜರಿಯದೆ, ಆಂತರಿಕ ಮತಭೇದಗಳನ್ನು ಮರೆತು, ಒಗ್ಗಟ್ಟಾಗಿ ಪ್ರಗತಿ ಪಡೆಯೋಣ ಎಂದು ಆದೇಶ ನೀಡಿ ವಿಪ್ರ ಸಮಾಜದ ಪ್ರಗತಿಪಥದ ಅರುಣೋದಯಕ್ಕೆ ಕಾರಣರಾದ ತಮ್ಮನ್ನು **ವಿಪ್ರಭಾಸ್ಕರ** ಎಂದು ಸಂಬೋಧಿಸುತ್ತಾ ರಾಜ್ಯದ ಸಮಸ್ತ ಬ್ರಾಹ್ಮಣ ಸಮಾಜದ ಪರವಾಗಿ ಅಭಿನಂದಿಸುತ್ತೇವೆ. ಬ್ರಾಹ್ಮಣ ಸಮಾಜವು ಎಚ್ಚರವಾಗಿರುವ *ಈ* ಪರ್ವಕಾಲದಲ್ಲಿ ತಮ್ಮ ಅದ್ವಿತೀಯ ನೇತೃತ್ವ ಸದಾಕಾಲ ಇರಲಿ ಹಾಗು ತಮಗೂ ತಮ್ಮ ಕುಟುಂಬಕ್ಕೂ ಭಗವಂತನು ಶ್ರೇಯಸ್ಸನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

*ಶ್ರೀಪ್ರಜೋತ್ಪತ್ತಿ ನಾಮಸಂವತ್ಸರ*
*ಪುಷ್ಯ ಬಹುಳ ಚತುರ್ದಶಿ*
*೨.೨.೧೯೯೨*

*ಸಮಸ್ತ ಬ್ರಾಹ್ಮಣ ಸಮುದಾಯದ ಪರವಾಗಿ*
*ಕಾರ್ಯಕಾರಿ ಸಮಿತಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ*
*ಬೆಂಗಳೂರು*

## ಸನ್ಮಾನ ಪತ್ರ

|| *ಓಂ* ||

***ಧಿಯೋ ಯೋ ನಃ ಪ್ರಚೋದಯಾತ್***

***ತುಮಕೂರು ಜಿಲ್ಲಾ ಬ್ರಾಹ್ಮಣ ಸಭಾ, ತುಮಕೂರು***

**ಶ್ರೀ ಬಿ.ಎಸ್.ವಿ. ಸುಬ್ರಹ್ಮಣ್ಯ** ಖ್ಯಾತ ಕೈಗಾರಿಕೋದ್ಯಮಿ ಮತ್ತು ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು ಇವರಿಗೆ ದಿನಾಂಕ ೮.೮.೧೯೯೩ನೇ ಭಾನುವಾರ, ತುಮಕೂರಿನಲ್ಲಿ **ಶ್ರೀ ವಿ. ಕೃಷ್ಣರಾವ್**, ಅಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಸಮಿತಿ; **ಶ್ರೀ ಹಾರ್ನಹಳ್ಳಿ ರಾಮಸ್ವಾಮಿ,** ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು- ಇವರುಗಳ ನೇತೃತ್ವದಲ್ಲಿ ತುಮಕೂರು ಜಿಲ್ಲಾ ವಿಪ್ರ ಬಾಂಧವರ ಪರವಾಗಿ ಪರಮಪೂಜ್ಯ **ಶ್ರೀ ಶ್ರೀ ವಿದ್ಯಾ ಪಯೋನಿಧಿ ತೀರ್ಥ ಶ್ರೀ ಪಾದಂ**ಗಳವರು ಇವರ ಅಮೃತ ಹಸ್ತದಿಂದ ಆಶೀರ್ವಾದಪೂರ್ವಕವಾಗಿ ಸಲ್ಲಿಸಿದ **ಸನ್ಮಾನ ಪತ್ರ**

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವ **ಬಿ.ಎಸ್.ವಿ.** ಎಂದೇ ಮನೆಮಾತಾಗಿರುವ, ಬೆಟ್ಟದಪುರ ನಾರಾಯಣಸ್ವಾಮಿ ವೆಂಕಟಸುಬ್ರಹ್ಮಣ್ಯರವರೆ,

ತಾವು ಕೃಷಿ, ಕೈಗಾರಿಕೆ, ಶಿಕ್ಷಣಗಳನ್ನು ವೃತ್ತಿಯನ್ನಾಗಿಸಿಕೊಂಡು, ಈ ಎಲ್ಲಾ ಕ್ಷೇತ್ರಗಳಲ್ಲೂ ವಿಶಿಷ್ಟ ಛಾಪನ್ನು ಒತ್ತಿದ್ದೀರಿ. ಎಲ್ಲಕ್ಕಿಂತ ಮಿಗಿಲಾಗಿ ದಯೆಯೇ ಮೂರ್ತಿವೆತ್ತಂತಿರುವ ತಾವು, ಸಂಕಷ್ಟದಲ್ಲಿರುವ ಹಲವು ಹತ್ತು ಸಂಸ್ಥೆಗಳಿಗೆ, ವ್ಯಕ್ತಿಗಳಿಗೆ ಉದಾರ ದಾನ ನೀಡಿ ಕೊಡುಗೈ ದೊರೆ ಎನ್ನಿಸಿದ್ದೀರಿ. ತಾವು ತಮ್ಮ ಪ್ರಾರಂಭಿಕ ಬಡತನವನ್ನು ಲೆಕ್ಕಿಸದೆ ಸ್ವಯಂಪ್ರತಿಭೆಯಿಂದಲೂ, ಕಠಿಣಪರಿಶ್ರಮ ಮತ್ತು ಕಾರ್ಯಕ್ಷಮತೆಗಳಿಂದಲೂ ಕಷ್ಟದ ದೂರಹಾದಿಯನ್ನು ಕ್ರಮಿಸಿ ಉಜ್ವಲ ಭವಿಷ್ಯವನ್ನು ರೂಪಿಸಿಕ್ಕೊಂಡಿರಿ. ಜೀವನದ ಕಷ್ಟ ಕೋಟಲೆಗಳಿಂದ ನೊಂದು ನಲುಗಿದವರ ಆಶಾಕಿರಣವಾಗಿ ಸಣ್ಣದಾಗಿ ಪ್ರಾರಂಭಿಸಿದ 'ಜ್ಯೋತಿ' ಗುಂಪಿನ ತಮ್ಮ ಸುಪುತ್ರಿಯ ನಾಮಾಂಕಿತ ಸಂಸ್ಥೆಗಳಾದ ಜ್ಯೋತಿ ಇಂಡಸ್ಟ್ರೀಸ್, ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ, ಜ್ಯೋತಿ ಚಾರಿಟಬಲ್ ಟ್ರಸ್ಟ್‌ಗಳು ಬೆಳೆದು ಹೆಮ್ಮರವಾಗಿ, ಹಲವರ ಜೀವನ ಜ್ಯೋತಿಗಳಾಗಿವೆ. ರಾಜ್ಯ ಸರ್ಕಾರ ತಮ್ಮ ಸಮಾಜಸೇವೆಯನ್ನು ಗುರುತಿಸಿ **ರಾಜ್ಯೋತ್ಸವ ಪ್ರಶಸ್ತಿ** ನೀಡಿ ಗೌರವಿಸಿರುವುದು ಅತೀವ ಸಂತೋಷದ ವಿಷಯವಾಗಿದೆ. ಕೇಂದ್ರೀಯ ಶಾಲೆ ಮಾದರಿಯ **ಮಾದರಿ ಶಿಕ್ಷಣ ಸಂಸ್ಥೆ**ಯನ್ನು ಡೊನೇಷನ್ ಕೃಪಾಭಿಕ್ಷೆ ಇಲ್ಲದೆ ನಡೆಸಿ ನೈಜ ಶಿಕ್ಷಣತಜ್ಞರೆನಿಸಿದ್ದೀರಿ. ಖಿಲವಾಗುತ್ತಿರುವ ಬ್ರಾಹ್ಮಣ್ಯ ಮತ್ತು ನೈಮಿತ್ತಿಕ ಕರ್ಮಗಳನ್ನು ನೋಡಿ ಮನ ನೊಂದು ಪರಂಪರಾಗತ ವೇದವಿದ್ಯೆಯನ್ನು ಉಳಿಸಿ ಬೆಳೆಸುವ ದೃಢ ನಿರ್ಧಾರದಿಂದ **ಮಲ್ಲಿಕಾರ್ಜುನ ಉಚಿತ ವೇದಪಾಠಶಾಲೆ**ಯನ್ನು ಸ್ಥಾಪಿಸಿ ನಮ್ಮ ಸಾಂಸ್ಕೃತಿಕ ಪರಂಪರೆಯ ನಿಜರಕ್ಷಕರಾಗಿದ್ದೀರಿ. ನಮ್ಮ ಉಜ್ವಲ ಇತಿಹಾಸದ ಮೇಲೆ ಬೆಳಕು ಬೀರುವ ವೈದಿಕಸಾಹಿತ್ಯ ಕೃತಿರತ್ನಗಳನ್ನು ಹೊರತರಲು **ಕೃಷ್ಣಯಜುರ್ವೇದ ಪ್ರಕಾಶನ**ವನ್ನು ಪ್ರಾರಂಭಿಸಿ ಉತ್ತಮ ಮೇಲ್ಪಂಕ್ತಿ ಹಾಕಿರುತ್ತೀರಿ. ತಮ್ಮ ನಡೆ-ನುಡಿ, ಆಚಾರ-ವಿಚಾರ, ಶುದ್ಧ ಚಾರಿತ್ರ್ಯಗಳಿಂದ ಯಶೋವಂತರೂ, ಕೀರ್ತಿವಂತರೂ ಆದ ತಮ್ಮನ್ನು ಬ್ರಾಹ್ಮಣ ಸಮಾಜದ ಮುಂಚೂಣಿ ನಾಯಕರಾಗಿ ಪಡೆದ ನಾವು ಧನ್ಯರೇ ಸರಿ. ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಕೃತನಿಶ್ಚಯರಾಗಿ ಹೊರಟ ತಮ್ಮ ಅಭಿಮಾನಿಗಳ ಅಹರ್ನಿಶಿ ಪ್ರಯತ್ನದಿಂದ ಎರಡು ಸಹಸ್ರವಿದ್ದ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಈಗಾಗಲೇ ಹತ್ತು ಸಹಸ್ರಕ್ಕೆ ಮುಟ್ಟಿದೆ. ತ್ವರಿತಗತಿಯಲ್ಲಿ ಒಂದು ಲಕ್ಷಕ್ಕೇರಿಸುವ ಆಕಾಂಕ್ಷೆಯಿದೆ. ಇಡೀ ಬ್ರಾಹ್ಮಣ ಸಮಾಜದ ಸರ್ವತೋಮುಖ ಉನ್ನತಿಗಾಗಿ ತಾವು ತನು-ಮನ-ಧನಗಳನ್ನು ಅರ್ಪಿಸಿ ಛಲದಿಂದ ಮುನ್ನುಗ್ಗುತ್ತಿರುವುದು ಇಡೀ ವಿಪ್ರಸಮಾಜಕ್ಕೆ ಸಂತೋಷ ತರುವ ವಿಷಯ. ಆದರಣೀಯರಾದ ತಮಗೂ, ತಮ್ಮ ಪತ್ನಿ ಶ್ರೀಮತಿ ಸೀತಾರವರಿಗೂ, **ವೇದಮಾತೆ ಗಾಯತ್ರಿ**ಯು ಸದಾ ಸಕಲ ಸನ್ಮಂಗಳವನ್ನು ಕರುಣಿಸಲಿ ಎಂದು ತುಮಕೂರು ಜಿಲ್ಲಾ ಸಮಸ್ತ ವಿಪ್ರ ಬಾಂಧವರು ಹಾರೈಸುತ್ತಾರೆ.

*ದಿನಾಂಕ: ೮ನೇ ಆಗಸ್ಟ್ ೧೯೯೩*
*ತುಮಕೂರು*

***ಎಂ.ಎಸ್.ವೆಂಕಟಾಚಲ,*** *ಅಧ್ಯಕ್ಷ*
*ಮತ್ತು ಕಾರ್ಯಕಾರಿ ಮಂಡಲಿ ಸದಸ್ಯರು*
*ತುಮಕೂರು ಜಿಲ್ಲಾ ಬ್ರಾಹ್ಮಣ ಸಂಘ*

# RAJIV GANDHI NATIONAL UNITY AWARD '95

***For Excellence***

***presented to***

***B.N.V. SUBRAMANYA***

For outstanding services, achievemens and contributions

By Sri BALRAM JAKHAR, Minister for Agriculture

on the eve of 51st Birth Anniversary of Late Shri Rajiv Gandhi on 19th August 95, New Delhi

***Harbhajan Singh***
*General Secretary*

***All India National Unity Conference***

ಶ್ರೀ

ದಿನಾಂಕ ೧೪.೫.೨೦೦೧ನೇ ಸೋಮವಾರ ಬೆಳಗ್ಗೆ ೧೧ ಗಂಟೆಗೆ ಲಿಂಗದಹಳ್ಳಿ ಆಸ್ತಿಕ ವಿವರ್ಧಿನಿ ಸಂಘದ ವತಿಯಿಂದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು ಇವರನ್ನು ಆತ್ಮೀಯವಾಗಿ ಸನ್ಮಾನಿಸಿದಾಗ ಸಮರ್ಪಿಸಿದ

## ಸನ್ಮಾನ ಪತ್ರ

*ಸನ್ಮಾನ್ಯ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರೇ, ಕ್ರಾಂತಿಪುರುಷರೆ,*
. . . ದೇಶದ ವಿವಿಧ ಕೈಗಾರಿಕಾ ಸಂಸ್ಥೆಗಳಿಗೆ ಬೇಕಾಗುವ ಯಂತ್ರಗಳ ಬಿಡಿ ಭಾಗಗಳನ್ನು ತಯಾರಿಸುತ್ತಾ ಕೈಗಾರಿಕಾ ಯುಗದಲ್ಲಿ ಕ್ರಾಂತಿಯನ್ನೇ ಮಾಡುತ್ತಾ ಬಂದಿದ್ದೀರಿ. . .

*ಸಂಸ್ಕೃತಾಭಿಮಾನಿಗಳೇ, ವಿದ್ಯಾಭಿಮಾನಿಗಳೇ,*
ಜ್ಯೋತಿ ಕೇಂದ್ರೀಯ ವಿದ್ಯಾಲಯವು ಬೆಂಗಳೂರಿನಲ್ಲಿಯೇ ಮಾದರಿ ಶಾಲೆ ಎಂಬ ಹೆಗ್ಗಳಿಕೆಗೆ ಕಾರಣಕರ್ತರಾಗಿರುತ್ತೀರಿ.

*ಸಮಾಜಸೇವಾ ಸುಧಾರಕರೇ,*
೧೯೮೮ರಿಂದ ೧೯೯೪ರವರೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ತನ್ಮೂಲಕ ಎರಡು ರಾಜ್ಯಮಟ್ಟದ ಮಹಾಸಮ್ಮೇಳನಗಳನ್ನು ನಡೆಸಿ, ಕೇಂದ್ರ ನಿಧಿಯನ್ನು ಸಂಗ್ರಹಿಸಿ ಬಡ ವಿದ್ಯಾರ್ಥಿಗಳಿಗೆ, ನಿರಾಶ್ರಿತ ಮಹಿಳೆಯರಿಗೆ ಹಾಗೂ ಪುರೋಹಿತರುಗಳಿಗೆ ಹೆಚ್ಚಿನ ಸಹಾಯ ಮಾಡಿದ್ದೀರಿ...

*ಬಹುಮುಖ ಪ್ರತಿಭೆಯುಳ್ಳವರೇ,*
ಜ್ಯೋತಿ ಕಲಾ ಕೇಂದ್ರದ ಸ್ಥಾಪನೆಗೆ ಕಾರಣಕರ್ತರಾಗಿ, ತನ್ಮೂಲಕ ಕರಕುಶಲತೆಯಲ್ಲಿ ಮಕ್ಕಳಿಗೆ ಅಭಿರುಚಿ ಹುಟ್ಟುವಂತೆ ಮಾಡುತ್ತಿದ್ದೀರಿ. ಶೃಂಗೇರಿ ಶಾರದಾ ಪೀಠದ ಕೊಡುಗೆಯಾದ ಸುರಸರಸ್ವತೀ ಸಭಾದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದು, ಪ್ರತಿವರ್ಷವೂ ಸುಮಾರು ಹತ್ತು ಸಾವಿರ ವಿದ್ಯಾರ್ಥಿಗಳು ಪ್ರಥಮಾ ಪರೀಕ್ಷೆಯಿಂದ, ವಿದ್ವತ್ ಪರೀಕ್ಷೆಗಳನ್ನು ಕಟ್ಟಿ, ಉತ್ತೀರ್ಣರಾಗುತ್ತಿರುವುದು ತಮ್ಮ ಸಂಸ್ಕೃತಾಭಿಮಾನಕ್ಕೆ ಹಿಡಿದ ಕನ್ನಡಿಯಾಗಿರುತ್ತದೆ.

*ಸಂಗೀತಾಭಿಮಾನಿಗಳೇ, ಆಪದ್ಬಾಂಧವರೇ,*
ಬೆಂಗಳೂರಿನ ಬಸವನಗುಡಿಯಲ್ಲಿರುವ ಅಬಲಾಶ್ರಮದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದು, ನಿರಾಶ್ರಿತ ಮಹಿಳೆಯರು ಸ್ವಾವಲಂಬಿಗಳಾಗುವ ಆತ್ಮವಿಶ್ವಾಸವನ್ನು *ಈ* ಆಶ್ರಮದ ಮೂಲಕ ನೀಡುತ್ತಿದ್ದೀರಿ. ದಯಾಮಯನಾದ ಪರಮಾತ್ಮನು ತಮಗೂ, ತಮ್ಮ ಕುಟುಂಬವರ್ಗಕ್ಕೂ ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತಾ ಆತ್ಮೀಯತೆಯಿಂದ ಕೂಡಿದ *ಈ* ಸನ್ಮಾನಪತ್ರವನ್ನು ಬಹು ಸಂತೋಷ, ಸಂಭ್ರಮದಿಂದ ಸಮರ್ಪಿಸುತ್ತಿದ್ದೇವೆ.

*ದಿನಾಂಕ: ೧೪.೫.೨೦೦೧*

*ಇಂತಿ ತಮ್ಮ ಹಿತೈಷಿಗಳು*
*ಆಸ್ತಿಕ ವಿವರ್ಧಿನಿ ಸಂಘ, ಲಿಂಗದಹಳ್ಳಿ, ತರೀಕೆರೆ ತಾಲ್ಲೂಕು*

## ೭. ವರ್ತಮಾನ

### ಅಮರಜ್ಯೋತಿ ! : ಸಂಕೇತಿ ಸಂಗಮ : ನವೆಂಬರ್ ೨೦೦೦




*129. ತಮ್ಮ ತೋಟದಲ್ಲಿ ಪುಷ್ಪಿತ ಕಾಫಿ ಬೆಳೆಯೊಡನೆ ಬಿ.ಎನ್.ವಿ.*

೧೯೮೬ನೆಯ ಇಸವಿ, ವರ್ಷ ಋತು. ಹದಿನಾರಕ್ಕೆ ಕಾಲಿಡುತ್ತಿದ್ದ ಹದಿಹರೆಯದ, ಬೆಡಗುಗಂಗಳ, ಉಬ್ಬಿದ ಕೆನ್ನೆಗಳ, ಮುಗ್ಧೆ ಜ್ಯೋತಿ ತನ್ನ ಸ್ನಿಗ್ಧ ಸೌಂದರ್ಯದಿಂದ ತನ್ನ ಪರಿಸರವನ್ನೆಲ್ಲ ಬೆಳಗುತ್ತ ಅರಳು ಹುರಿದಂತೆ ನುಡಿಯುತ್ತ ನಗೆಮಲ್ಲಿಗೆಯನ್ನು ಚೆಲ್ಲುತ್ತ ತುಂಟಿಯಾಗಿ, ತಾಯಿ ಸೀತಮ್ಮ, ತಂದೆ ಬಿ.ಎನ್.ವಿ. ಅವರ ಕಣ್ಮಣಿಯಾಗಿ ಬೆಳಗುತ್ತಿರುವಾಗಲೇ 'ಅಮೂಲ್ಯ ಪುಷ್ಪ'ವೆಂದು ಭಗವಂತ ತನ್ನ ಮುಡಿಗೇರಿಸಿಕೊಂಡ. ಬದುಕಿದ್ದಾಗ ತನ್ನ ಪರಿಸರವನ್ನು ತನ್ನ ಬಾಲಲೀಲೆಗಳಿಂದ ಸದಾ ಚೈತನ್ಯಪೂರ್ಣವಾಗಿಟ್ಟಿದ್ದ ಜ್ಯೋತಿ ಆರಿದಾಗ, ಆ ಪರಿವಾರದವರು ಅನುಭವಿಸಿದ ನೋವಿಗೆ ಪಾರವಿಲ್ಲ. ಆದರೆ ಬದುಕಿದ್ದಾಗ ಸಾಧಿಸಿದ್ದಕ್ಕಿಂತ ನೂರುಪಟ್ಟು ಅಧಿಕ ಸಾಧನೆಗಳನ್ನು ಜ್ಯೋತಿ ಕೀರ್ತಿಶೇಷಳಾಗಿ ಸಾಧಿಸಿ ಅಮರಳಾಗಿದ್ದಾಳೆ. ಇಂದು ಜ್ಯೋತಿ ನಮ್ಮೊಂದಿಗಿಲ್ಲ. ಆದರೆ ಅವಳ ಕಂಗಳ ಹೊಳಪು, ನಗೆಮಲ್ಲಿಗೆಯ ಸ್ಮರಣೆಯಲ್ಲಿ ಅವಳ ಆದರ್ಶಗಳೆಲ್ಲವನ್ನೂ ಸಾಕಾರಗೊಳಿಸಿ ಜಗತ್ತು ಜ್ಯೋತಿಯನ್ನು ಮರೆಯದಂತೆ ಅದ್ಭುತವಾದದ್ದನ್ನು ಸಾಧಿಸಿ ಆಕೆಯ ತಾಯ್ತಂದೆಯರು ಧನ್ಯರಾಗಿದ್ದಾರೆ.



*130. ೧೯೯೮ : ಮೂವತ್ತನೆಯ ವರ್ಷದ ವಿವಾಹ ವಾರ್ಷಿಕೋತ್ಸವ*

ಜ್ಯೋತಿ ಎಂಬ ಎರಡಕ್ಷರದ ಮಂತ್ರವನ್ನು ಜಪಿಸುತ್ತ ಬಿ.ಎನ್.ವಿ. ಮಾಡಿದುದೆಲ್ಲವೂ ಅದ್ಭುತ ಕಾರ್ಯಗಳೇ! ಅವುಗಳಲ್ಲಿ ಕೃಷ್ಣಯಜುರ್ವೇದದ ಕನ್ನಡ ಪ್ರಕಾಶನ ಕಾರ್ಯ ಮೊದಲನೆಯದು. ವೇದಾಧ್ಯಾಯನ ಸಂಪನ್ನರೂ ಸದಾಚಾರನಿಷ್ಠರೂ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಪರಿಣತರೂ ಆದ ವಿದ್ವಾನ್ ರಾಮೇಶ್ವರ ಅವಧಾನಿಗಳು ಈ ಪ್ರಕಾಶನದ ಸಂಪಾದಕರಾಗಿಯೂ ನಾಡಿನ ಹಲವಾರು ಖ್ಯಾತ ವಿದ್ವಾಂಸರು ಮಾರ್ಗದರ್ಶಕರಾಗಿಯೂ ನಿಂತರು. ಸುಮಾರು ಹತ್ತು ಸಂಪುಟಗಳಲ್ಲಿ ನಲವತ್ತೆರಡು ಪ್ರಶ್ನೆಗಳನ್ನುಳ್ಳ ಕೃಷ್ಣ ಯಜುರ್ವೇದದ ಏಳು ಕಾಂಡಗಳನ್ನೊಳಗೊಂಡ ಸಂಹಿತೆಯನ್ನು ಭಾಷ್ಯ ಸಹಿತ ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಈ ಬೃಹತ್ ಕಾರ್ಯದಲ್ಲಿ ಈಗಾಗಲೇ ನಾಲ್ಕು ಸಂಪುಟಗಳು ಹೊರಬಂದಿವೆ. ಅರ್ಧದಷ್ಟು ಕಾರ್ಯ ತ್ವರಿತವಾಗಿ ಮುಗಿದಿದ್ದು ಇನ್ನು ಎರಡು ವರ್ಷಗಳಲ್ಲಿ ಪೂರ್ಣವಾಗುವ ಸಂಭವವಿದೆ.



**131.** *ಬಿ.ಎನ್.ವಿ. ಷಷ್ಠ್ಯಬ್ದ ಪೂರ್ತಿ : ಚಿತ್ರನಟ ಶಿವರಾಂ ಅಭಿನಂದನೆ*

ಸುಮಾರು ಎರಡು ಸಾವಿರ ಪುಟಗಳು ಅಂದವಾಗಿ ದ್ವಿವರ್ಣದಲ್ಲಿ ಮುದ್ರಿತವಾಗಿದ್ದು ನಾಲ್ಕು ಸಂಪುಟಗಳ ಕಾರ್ಯ ವಿಹಿತವಾಗಿ ಮುಗಿದಿದೆ. ವೇದಗಳ ಪರಿಚಯ, ಯಜ್ಞಗಳ ಪರಿಚಯವನ್ನು ಒಳಗೊಂಡ ಈ ಗ್ರಂಥಗಳ ಪ್ರಕಟನೆ- ಪ್ರಕಾಶಕರು ತಿಳಿಸುವಂತೆ ಯಾವುದೇ ವಾಣಿಜ್ಯದೃಷ್ಟಿ ಇಲ್ಲದೆ, ಸೇವಾ ಭಾವನೆಯೇ ಪ್ರಮುಖವಾಗಿ ವೇದಾರ್ಥ ಹೇಳುವವರಿಗೂ ವೇದಾಧ್ಯಯನ ಮಾಡುವವರಿಗೂ ವೇದವನ್ನು ತಿಳಿಯಬಸುವವರಿಗೂ ಅನುಕೂಲ ವಾಗುವಂತೆ- ನಮ್ಮ ಹಿರಿಯರ ಕೊಡುಗೆಯನ್ನು ಗ್ರಂಥರೂಪದಲ್ಲಿಡುವ ಪ್ರಯತ್ನವಾಗಿದೆ.

ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಎಲಚೇನಹಳ್ಳಿಯಲ್ಲಿ ಎರಡು ಎಕರೆ ಜಾಗದಲ್ಲಿ ಭವ್ಯವಾಗಿ ಎದ್ದಿರುವ, ಕಣ್ಸೆಳೆಯುವ ಕಟ್ಟಡವೇ 'ಜ್ಯೋತಿ ಕೇಂದ್ರೀಯ ವಿದ್ಯಾಲಯ.' ಸುಮಾರು ೫೦೦೦ ಪುಸ್ತಕಗಳನ್ನೊಳಗೊಂಡ ಪುಸ್ತಕ ಭಂಡಾರ ವಿದ್ಯಾಲಯಕ್ಕೆ ಕಳಶವಿಟ್ಟಂತಿದೆ. ಕಂಪ್ಯೂಟರ್ ಪ್ರಯೋಗಾಲಯವೂ ಸೇರಿದಂತೆ ಎಲ್ಲ ಪ್ರಯೋಗಾಲಯಗಳೂ ಅತ್ಯಂತ ಆಧುನಿಕವಾಗಿದ್ದು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ. ಐದನೇ ತರಗತಿಯಿಂದಲೇ ಕಂಪ್ಯೂಟರ್ ಪ್ರಪಂಚಕ್ಕೆ ಮಕ್ಕಳನ್ನು ಕರೆದೊಯ್ಯುವ ಇಲ್ಲಿನ ವ್ಯವಸ್ಥೆ ಸಕಾಲಿಕವಾಗಿದೆ. ಸ್ವತಃ ಉತ್ತಮ ಯೋಜಕರಾಗಿರುವ ಶ್ರೀ ಬಿ.ಎನ್.ವಿ.ಯವರು ಸಂಸ್ಥೆಯ ಬೆಳವಣಿಗೆಯಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಹತ್ತಾರು ಶಿಕ್ಷಣ ತಜ್ಞರ ಹಾಗೂ ಸಂಬಂಧಪಟ್ಟ ವಿಷಯದಲ್ಲಿ ನುರಿತವರ ಸಲಹೆ, ಮಾರ್ಗದರ್ಶನಗಳನ್ನು ಪಡೆಯುತ್ತಾರೆ.

ಈವರೆಗೆ ಶಾಲೆಯಿಂದ ಹೊರ ಬಂದಿರುವ ಎಸ್.ಎಸ್.ಎಲ್.ಸಿ. ಸಿ.ಬಿ.ಎಸ್.ಇ.ಪಠ್ಯಕ್ರಮದ ಮೂರು ತಂಡಗಳು, ಎಸ್.ಎಸ್.ಎಲ್.ಸಿ. ರಾಜ್ಯ ಪಠ್ಯಕ್ರಮದ ಎರಡು ತಂಡಗಳು ಶೇ.೧೦೦ ಫಲಿತಾಂಶ ಪಡೆದಿದ್ದರೆ, ಎರಡು ಪಿ.ಯು.ಸಿ. ತಂಡಗಳು ಶೇಕಡ ೯೮ ಫಲಿತಾಂಶ ಪಡೆದಿದ್ದು ಜ್ಯೋತಿ ಕೇಂದ್ರೀಯ ವಿದ್ಯಾಲಯ ಒಂದು ದಾಖಲೆಯನ್ನೇ ನಿರ್ಮಿಸಿದೆ.

ಸರ್ಕಾರದಿಂದ ಯಾವುದೇ ರೀತಿಯ ಅನುದಾನ ಪಡೆಯದೆ, ಅತ್ಯಂತ ವ್ಯವಸ್ಥಿತವಾಗಿ ಈ ಕೇಂದ್ರೀಯ ವಿದ್ಯಾಲಯವನ್ನು ಶ್ರೀಯುತ ಬಿ.ಎನ್.ವಿ. ಅವರು ನಡೆಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳು ಲಾಭದಾಯಕ ಉದ್ಯಮವಾಗಿರುವ ಇಂದಿನ ದಿನಗಳಲ್ಲಿ, ಬಿಡಿಗಾಸನ್ನೂ ಅಪೇಕ್ಷಿಸದೆ ಸೇವಾಮನೋಭಾವದಿಂದ ಸಂಸ್ಥೆಯನ್ನು ಕಟ್ಟಿ ಬೆಳೆಸುತ್ತಿದ್ದಾರೆ. ಸುಮಾರು ೪೦ ಸುವ್ಯವಸ್ಥಿತ ಶಾಲಾ ಕೊಠಡಿ, ಐದು ಪ್ರಯೋಗಾಲಯಗಳು, Audio-Visual Room, ಕ್ರೀಡಾಕೊಠಡಿ, ಶಿಕ್ಷಕರ ಕೊಠಡಿ, ಬಯಲು ರಂಗಮಂದಿರ ಇವುಗಳನ್ನೊಳಗೊಂಡ ಬೃಹತ್ ಜ್ಞಾನದೇಗುಲ **ಜ್ಯೋತಿ ಕೇಂದ್ರೀಯ ವಿದ್ಯಾಲಯ.** ಇದು ವಿದ್ಯಾರ್ಥಿಗಳಿಂದ ವಿದ್ಯಾಲಯದ ನಿರ್ವಹಣೆಗೆ ಅಗತ್ಯವಿರುವಷ್ಟು ಮಾತ್ರ ಶುಲ್ಕ ಪಡೆಯುವ ಮಾದರಿ ಸಂಸ್ಥೆಯಾಗಿದೆ. ಕಟ್ಟಡ ಹಾಗೂ ಇನ್ನಿತರ ಸೌಲಭ್ಯಗಳ ಖರ್ಚು ವೆಚ್ಚಗಳನ್ನು ನಿರ್ವಾಹಕರಾದ ಶ್ರೀ ಬಿ.ಎನ್.ವಿ. ಅವರೇ ಭರಿಸುತ್ತಿದ್ದಾರೆ.

ಇಂತಹ ಬೃಹತ್ ವಿದ್ಯಾಲಯದ ಮುಖ್ಯಸ್ಥರಾದ ಶ್ರೀ ಬಿ.ಎನ್.ವಿ.ಯವರು ಅತ್ಯಂತ ಸರಳ ಹಾಗೂ ಸಜ್ಜನಿಕೆಯ ಸಾಕಾರಮೂರ್ತಿ! ಶಾಲಾ ಸಿಬ್ಬಂದಿಯವರೊಂದಿಗೆ ಮನೆಯ ಹಿರಿಯಣ್ಣನಂತೆ ಆತ್ಮೀಯವಾಗಿ ನಡೆದುಕೊಳ್ಳುವ ಶ್ರೀಯುತರು ಶಾಲೆಯ ಸಮಸ್ತ ವಿದ್ಯಾರ್ಥಿಗಳಿಗೆ ಪೋಷಕರಾಗಿದ್ದಾರೆ.

ತಾವು ಕಟ್ಟಿ ಬೆಳೆಸಿರುವ ಸಂಘ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ನಡೆಸುತ್ತಿರುವುದೇ ಅಲ್ಲದೆ, ಇತರ ಹಲವಾರು ಸಂಸ್ಥೆಗಳಿಗೆ ಉದಾರ ಧನಸಹಾಯ ಮಾಡಿದ್ದಾರೆ. ಶ್ರೀ ಬಿ.ಎನ್.ವಿ. ಅವರ ಬಳಿ ಸಹಾಯ ಯಾಚಿಸಿದವರು ಬರಿಗೈಯಲ್ಲಿ ಬಂದುದಿಲ್ಲ. ಘಾಟಿ ಸುಬ್ರಹ್ಮಣ್ಯದ ವಸಂತ ಮಂಟಪ ನಿರ್ಮಾಣ, ಬೆಟ್ಟದಪುರದಲ್ಲಿ ಕಲ್ಯಾಣ ಮಂಟಪ, ಬೆಂಗಳೂರು ಹವ್ಯಕ ಮಹಾಸಭಾದ Girl's Hostel... ಹೀಗೆ ಹತ್ತು ಹಲವು ಸದುದ್ದೇಶದ ಯೋಜನೆಗಳಿಗೆ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ ನೆರವು ನೀಡಿದೆ. ಇದಲ್ಲದೆ ಪ್ರತಿಷ್ಠಾನ ಹಲವು ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳೂ ವಿದ್ಯಾರ್ಥಿ ವೇತನ ನೀಡಿ ಉತ್ತಮ ಶಿಕ್ಷಣ ಪಡೆಯಲು ಸಹಾಯ ಮಾಡುತ್ತಿದೆ. ಮತ್ತೂರಿನಲ್ಲಿ ನಡೆಯುತ್ತಿರುವ ಅಂಗನವಾಡಿ ಶಾಲೆಯ ಇಬ್ಬರು ಶಿಕ್ಷಕರ

ಸಂಬಳವನ್ನು ಪ್ರತಿಷ್ಠಾನದ ವತಿಯಿಂದ ಕೊಡುತ್ತಿರುವುದು ಒಂದು ವಿನೂತನ ವ್ಯವಸ್ಥೆಯಾಗಿದೆ.

ದುರ್ಭರವಾದ ಪುತ್ರೀಶೋಕದ ಹಾಲಾಹಲವನ್ನು ನುಂಗಿಕೊಂಡು, ಸಮಾಜಕ್ಕೆ ಅಮೃತವರ್ಷವನ್ನು ಕರೆದ ಶ್ರೀ ಬಿ.ಎನ್.ವಿ. ದಂಪತಿಗಳಿಗೆ, ಅವರ ಅಂತಃಸತ್ತ್ವ 'ಜ್ಯೋತಿ'ಗೆ "ನಮೋವಾಕ"ವಲ್ಲದೆ ನಾವು ಬೇರೇನು ಹೇಳಲು ಸಾಧ್ಯ!

ಜ್ಯೋತಿ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರಾಗಿ ಸಂಸ್ಥೆಯ ಸಾರಥ್ಯ ವಹಿಸಿರುವ ಶ್ರೀಮತಿ ಸುಮಾ ಜಗದೀಶ್ ನಮ್ಮವರೇ ಎಂದು ಪರಿಚಯಿಸಲು ಹೆಮ್ಮೆಯಾಗುತ್ತದೆ.  ಬೆಂಗಳೂರಿನಲ್ಲಿರುವ ಶ್ರೀಮತಿ ಮತ್ತೂರು ಸಾವಿತ್ರಿ ಹಾಗೂ ಶ್ರೀ ಸುಬ್ಬರಾವ್ ಅವರ ಪುತ್ರಿ ಸುಮಾ, ಕಂಪ್ಯೂಟರ್ ಇಂಜಿನಿಯರ್ ಶ್ರೀ ಜಗದೀಶ್‌ರವರ ಪತ್ನಿ. ಜಗದೀಶ್‌ರವರ ತಂದೆ ಶ್ರೀ ಅನಂತಯ್ಯ ಬ್ಯಾಗತವಳ್ಳಿಯವರಾದರೆ ತಾಯಿ ಶ್ರೀಮತಿ ನಾಗರತ್ನ ಪೂಮಗಾಮೆಯವರು.

ಜ್ಯೋತಿಯ ಸ್ಥಾನವನ್ನು ಅವರ ಆಪ್ತ ಗೆಳತಿ ಸುಮಾ ತುಂಬಿದ್ದಾಳೆ. ಬಿ.ಎನ್.ವಿ. ದಂಪತಿಗಳಿಗೆ ಅಚ್ಚುಮೆಚ್ಚಿನ 'ಮಾನಸಪುತ್ರಿ'ಯಾಗಿರುವ ಸುಮಾ ಅತ್ಯಂತ ದಕ್ಷತೆಯಿಂದ ಸಂಸ್ಥೆಯ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ.

## ಬ್ರಾಹ್ಮಣರ ಮುಂದಾಳಾಗಿ ಮತ್ತೆ ಬಿ.ಎನ್.ವಿ. : ಸಂಕೇತಿ ವಾರ್ತಾ : ಫೆಬ್ರವರಿ ೨೦೦೧

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ನೂತನ ಅಧ್ಯಕ್ಷರಾಗಿ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ಭಾರಿ ಬಹುಮತದಿಂದ ಆಯ್ಕೆಯಾಗಿದ್ದಾರೆಂದು ತಿಳಿಸಲು ಅತೀವ ಸಂತೋಷವಾಗುತ್ತದೆ. ಜನಸೇವೆಯಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡು, ಕೊಡುಗೈ ದಾನಿಗಳಾಗಿ, ಸಮಾಜದ ಪ್ರಮುಖ ಸೇವಾನಿರತ ವ್ಯಕ್ತಿಗಳಾಗಿರುವ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ಸಂಕೇತಿ ಬಾಂಧವರೆಲ್ಲರಿಗೂ ಚಿರಪರಿಚಿತರು. ಬ್ರಾಹ್ಮಣ ಮಹಾಸಭೆಯ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀಯುತರು ಅವರ ಅವಧಿಯಲ್ಲಿ ಹಲವಾರು ಶ್ರೇಯೋಭಿವೃದ್ಧಿ ಕಾರ್ಯಗಳ ಮೂಲಕ ಜನಪ್ರಿಯತೆಯನ್ನು ಗಳಿಸಿದವರು. ಈಗಲೂ ಬಹುಜನರ ಒತ್ತಾಯದ ಮೇರೆಗೆ ಅವರು ಮತ್ತೆ ಅಧ್ಯಕ್ಷರಾಗಿದ್ದಾರೆ. ಶ್ರೀ ಬಿ.ಎನ್.ವಿ.ಯವರನ್ನು ಸಂಘವು ಹಾರ್ದಿಕವಾಗಿ ಅಭಿನಂದಿಸುತ್ತಾ, ಅವರ ಉತ್ಕೃಷ್ಟ ಮುಂದಾಳತ್ವದಲ್ಲಿ ಬ್ರಾಹ್ಮಣ ಮಹಾಸಭೆಯು ಹಲವಾರು ಮಾದರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದ ಏಳಿಗೆಯಲ್ಲಿ ಇತರರಿಗೆ ಮೇಲ್ಪಂಕ್ತಿಯಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತದೆ.



*132. ನಂಜನಗೂಡು ವೇ. ಬ್ರ. ಶ್ರೀ ಕೃಷ್ಣ ದೀಕ್ಷಿತರಿಂದ ಮಂತ್ರಪುರಸ್ಸರ ಪ್ರಸಾದ*

## ಸಂಪಾದಕೀಯ : ಸಂಕೇತಿ ಸಂಗಮ : ಮಾರ್ಚ್ ೨೦೦೧


ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ನಮ್ಮವರೇ ಆದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ಚುನಾಯಿತರಾಗಿರುವುದು ಸಂಕೇತಿಗಳೆಲ್ಲ ಹೆಮ್ಮೆಪಡುವ ವಿಚಾರವಾಗಿದೆ.

ಸ್ವತಃ ಬಿ.ಎನ್.ವಿ. ಕೇವಲ ಒಬ್ಬ ವ್ಯಕ್ತಿಯಲ್ಲ, ಅವರೊಂದು ಶಕ್ತಿ. ಹಾಗಾಗಿಯೇ ಒಂದು ಸರ್ಕಾರದ ಅಥವಾ ಪ್ರಬಲ ಸಂಘಟನೆಗಳು ಮಾತ್ರ

ಮಾಡಬಹುದಾದಂತಹ- ವೇದ ಪುಸ್ತಕಗಳ ಪ್ರಕಟಣೆ, ಸಂಸ್ಕೃತ - ವೇದ ಪಾಠಶಾಲೆ ಹಾಗೂ ಜ್ಯೋತಿ ಕೇಂದ್ರೀಯ ವಿದ್ಯಾಲಯವೆಂಬ ಬೃಹತ್ ಶಿಕ್ಷಣ ಸಂಸ್ಥೆಗಳನ್ನೂ ಅತ್ಯಂತ ವ್ಯವಸ್ಥಿತವಾಗಿ ತಾವೊಬ್ಬರೇ ನಿಂತು ನಡೆಸುತ್ತಿದ್ದಾರೆ. ಇಂತಹ ದೂರದೃಷ್ಟಿಯ, ಕ್ರಿಯಾಶೀಲ ನೇತಾರರು ದೊರೆತಿರುವುದು ಬ್ರಾಹ್ಮಣ ಸಂಘಟನೆಯ ಸುಯೋಗ ಎಂದೇ ಹೇಳಬೇಕು.

ಬ್ರಾಹ್ಮಣ ಸಂಘಟನೆಯ ಬಲವೃದ್ಧಿಯಾಗಬೇಕು, ಅಷ್ಟೇನೂ ಉತ್ತಮವಾಗಿಲ್ಲದ ಅದರ ಆರ್ಥಿಕ ಸ್ಥಿತಿ-ಗತಿಗಳು ಸುಧಾರಣೆಗೊಳ್ಳಬೇಕು; ತ್ರಿಮತಸ್ಥ ಬ್ರಾಹ್ಮಣ ಬಂಧುಗಳು ಅಪೇಕ್ಷಿಸುವ ಯಾವುದೇ ತೆರನಾದ ಸಹಾಯ - ಸಹಕಾರಗಳನ್ನು ಬ್ರಾಹ್ಮಣ ಮಹಾಸಭಾ ನೀಡುವಂತಹ ಸ್ಥಿತಿಗೇರಬೇಕು ಎಂಬ ಉನ್ನತ ಆದರ್ಶಗಳನ್ನು ಹೊಂದಿರುವ ಶ್ರೀ ಬಿ.ಎನ್.ವಿ. ಯವರು ಇವುಗಳನ್ನು ಸಾಕಾರಗೊಳಿಸುವ ಛಲ ಹೊತ್ತು ಚುನಾವಣೆ ಎದುರಿಸಿ ಭಾರೀ ಬಹುಮತದಿಂದ ಆಯ್ಕೆಯಾಗಿದ್ದಾರೆ. ಸಂಕೇತಿ ಪ್ರಮುಖರೊಬ್ಬರು ಬ್ರಾಹ್ಮಣ ಸಂಘಟನೆಯ ಮುಂಚೂಣಿಯಲ್ಲಿ ನಿಂತು ಅದರ ಒಳಿತಿಗಾಗಿ ಶ್ರಮಿಸಬೇಕಾಗಿರುವ ಸದುದ್ದೇಶದ ಯೋಜನೆಗಳಿಗೆ ನಮ್ಮ ಪೂರ್ಣ ಸಹಕಾರವನ್ನು ನೀಡೋಣ. ಬ್ರಾಹ್ಮಣ ಸಂಘಟನೆಯ ಕೆಲಸ-ಕಾರ್ಯಗಳಲ್ಲಿ ಸಂಕೇತಿಗಳಿಗೆ ದೊರೆತಿರುವ **ಪರ್ಯಾಯ** ಇದು ಎಂದು ಭಾವಿಸೋಣ.

ನೂತನ ಜವಾಬ್ದಾರಿಯಲ್ಲಿ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರಿಗೆ ಎಲ್ಲ ರೀತಿಯ ಯಶಸ್ಸುಗಳೂ ಸಿಗಲಿ, ಸಂಘಟನೆಯ ಮುಂದಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಸಂಕೇತಿಗಳ ಹೆಮ್ಮೆ ಹೆಚ್ಚುವಂತೆ ಮಾಡಲಿ ಎಂದು ಪತ್ರಿಕೆ ಹೃದಯತುಂಬಿ ಹಾರೈಸುತ್ತದೆ.




***133.*** *ಅಭಿನಂದನೆ : ಸಮಸ್ತ ಸಮುದಾಯಗಳಿಂದ*

## ರಾಮೋತ್ಸವ - ಸಂಮಾನ

**ವರದಿ : ಎ.ಸಿ.ಆಶಾ, ಬೆಂಗಳೂರು : ಸಂಕೇತಿ ಸಂಗಮ ವಿಶೇಷಾಂಕ : ಜುಲೈ ೨೦೦೧**

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿಯು ಒಂದು ಸಂಕೇತಿ ಗ್ರಾಮವಾಗಿದ್ದು, ಅಲ್ಲಿ ಶ್ರೀರಾಮ ಸೇವಾ ಸಂಘದ ವತಿಯಿಂದ ವೈಶಾಖ ಶುದ್ಧ ಏಕಾದಶಿ ದಿನದಿಂದ ಬಹುಳ ಸಪ್ತಮಿಯವರೆಗೆ ಶ್ರೀರಾಮೋತ್ಸವವು ವೇ. ಶ್ರೀ ನರಸಿಂಹಮೂರ್ತಿಯವರ ನೇತೃತ್ವದಲ್ಲಿ ನೆರವೇರಿತು.

ಅನಂತರ ನಡೆದ ಕಾರ್ಯಕ್ರಮ 'ಶ್ರೀ ಬಿ.ಎನ್.ವಿ. ನಾ ಕಂಡಂತೆ' - ಇದರಲ್ಲಿ ಗ್ರಾಮದ ಹಿರಿಯರಾದ ಶ್ರೀ ಎಲ್.ವಿ. ಕೃಷ್ಣಮೂರ್ತಿಗಳು, ಸಂಕೇತಿ ಸಂಗಮದ ಸಂಪಾದಕ ಶ್ರೀ ರಾಜಾರಾಮಮೂರ್ತಿ, ಅಬಲಾಶ್ರಮದ ಶ್ರೀಮತಿ ತಾರಾ ಪ್ರಸಾದ್, ವಯೋವೃದ್ಧ ಜ್ಞಾನವೃದ್ಧ ಶ್ರೀ ಕೌಶಿಕ್, ಶ್ರೀಮತಿ

ರಾಧಾ ವೈದ್ಯನಾಥನ್ (ತಮ್ಮ ದೊಡ್ಡಪ್ಪ ವೇದಮೂರ್ತಿ ಶ್ರೀ ನರಸಿಂಹ ಮೂರ್ತಿಯವರು ಬರೆದ ಸಂಸ್ಕೃತ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ) ಪಾಲ್ಗೊಂಡಿದ್ದರು. ಶ್ರೀ ಪದ್ಮನಾಭ ಜೋಯಿಸರು ಸನ್ಮಾನಪತ್ರವನ್ನು ವಾಚಿಸಿದನಂತರ ಶ್ರೀ ಬಿ.ಎಸ್.ವಿ. ಸುಬ್ರಹ್ಮಣ್ಯರವರಿಗೆ ಸಭಾಧ್ಯಕ್ಷರು ಶಾಲುಹೊದಿಸಿ, ನೆನಪಿನ ಕಾಣಿಕೆ ನೀಡಿ ಸಂಮಾನಿಸಿದರು. ಅನಂತರ, ಸನ್ಮಾನಿತರಾದ ಶ್ರೀ ಬಿ.ಎಸ್.ವಿ. ತಮಗೆ ಸಂದ ಸನ್ಮಾನಕ್ಕೆ ಉತ್ತರವಾಗಿ - "ನಾವೆಲ್ಲ ಒಂದೇ. ಬ್ರಾಹ್ಮಣರು ರಾಜಕೀಯವಾಗಿ, ಆರ್ಥಿಕವಾಗಿ ಸಾಮಾಜಿಕವಾಗಿ ಮುಂದುವರಿಯುವ ಅಗತ್ಯ ತುಂಬ ಇದೆ. 'ತ್ರಿಮತಸ್ಥ ಬ್ರಾಹ್ಮಣ' ಎಂಬ ಪದವೇ ಇರಕೂಡದು, ಬ್ರಾಹ್ಮಣರೆಲ್ಲ ಒಂದೇ, ನಾವು ದುಡಿದಿದ್ದರಲ್ಲಿ ಸಮಾಜಕ್ಕೊಂದು ಭಾಗ ವಿನಿಯೋಗಿಸಿದರೆ ಆ ದೇವರು ಅದಕ್ಕಿಂತ ಹೆಚ್ಚಿಗೆ ದಯಪಾಲಿಸುತ್ತಾನೆ" ಎಂದರು.

ಶ್ರೀ ಅರ್ಕನಾಥ್‌ರವರು ಮಾತನಾಡಿ, "ಸಂಕೇತಿಗಳೆಲ್ಲ ಒಂದೇ- ಕೌಶಿಕ, ಬೆಟ್ಟದಪುರ, ಮಲೆನಾಡು ಇತ್ಯಾದಿ ಭೇದ ಕೂಡದು. ಎಲ್ಲರೂ ಒಂದಾಗಬೇಕು. ಇನ್ನು ಮುಂದೆ ಸಂಕೇತಿ ವಿದ್ಯಾರ್ಥಿನಿಲಯಕ್ಕೆ ಸೇರಬಯಸುವ ವಿದ್ಯಾರ್ಥಿಗಳು ಯಾವ ಪ್ರಭೇದವನ್ನೂ ಬಳಸದೆ ಕೇವಲ 'ಸಂಕೇತಿ' ಎಂದು ಸೂಚಿಸಿದರೆ ಸಾಕು ಎಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ" ಎಂದರು.



**134. ಮಂಗಳಸ್ನಾನ : ಕನಕಾಭಿಷೇಕ**

ಅಧ್ಯಕ್ಷೀಯ ಭಾಷಣದಲ್ಲಿ "ಶ್ರೀ ಬಿ.ಎಸ್.ವಿ. ಅವರು ಮಾಡಿದ ಸಮಾಜ ಸೇವೆಯ ಮುಂದೆ ನಾವು ಅವರಿಗೆ ಮಾಡಿದ ಸಂಮಾನ ಏನೂ ಅಲ್ಲ. ಬದಲಿಗೆ ನಮಗೆ ನಾವೇ ಸಂಮಾನಿಸಿಕೊಂಡಂತಾಗಿದೆ" ಎಂದರು ವೇ. ನರಸಿಂಹಮೂರ್ತಿಗಳು. ಡಾ.ಎಲ್.ಕೆ. ಶ್ರೀಪತಿ ಅವರ ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಇಡೀ ಸಮಾರಂಭಕ್ಕೆ ಪ್ರಮುಖ ಆಕರ್ಷಣೆಯಾಗಿದ್ದುದು ಶ್ರೀಮತಿ ಸೀತಾ ಸುಬ್ರಹ್ಮಣ್ಯರವರ ಉಪಸ್ಥಿತಿ. ಸಭೆಯಲ್ಲಿದ್ದ ಪ್ರತಿಯೊಬ್ಬರೂ ತೋರಿದ ಶಿಸ್ತು, ಸಂಯಮ ಮತ್ತು ಉತ್ಸಾಹ ಅವಿಸ್ಮರಣೀಯವಾಗಿತ್ತು.

## ಸರ್ವಸದಸ್ಯರ ಸಭೆಯಲ್ಲಿ ಸನ್ಮಾನಿತರು : ಸಂಕೇತಿ ವಾರ್ತಾ : ಫೆಬ್ರವರಿ ೨೦೦೨

ಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾಗಿ, ಅದರ ಮುಖ್ಯ ಅಂಗವಾದ ಜ್ಯೋತಿ ಕೇಂದ್ರೀಯ ವಿದ್ಯಾಲಯದ ರೂವಾರಿಯಾಗಿ, ಸಾವಿರಾರು ಅರ್ಹ ವಿದ್ಯಾರ್ಥಿಗಳನ್ನು ರೂಪಿಸುವಲ್ಲಿ ಅನತಿ ಕಾಲದಲ್ಲಿಯೇ ಅಪಾರ ಮನ್ನಣೆಗೆ ಪಾತ್ರವಾಗಿರುವ, ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆಯ ಮೂಲಕ ಇಂದಿನ ಯುವಪೀಳಿಗೆಯವರಲ್ಲಿ ನಮ್ಮ ಸನಾತನ ಧರ್ಮದ ವೇದಾಧ್ಯಯನದ ಬಗ್ಗೆ ಆಸಕ್ತಿ, ಅಭ್ಯಾಸ ಮೂಡಿಸುವತ್ತ ಶ್ರೇಷ್ಠ ಹೆಜ್ಜೆ ಇಟ್ಟಿರುವ, ಖ್ಯಾತ ಉದ್ಯಮಿಗಳೂ, ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ಅಧ್ಯಕ್ಷರೂ, ಕೊಡುಗೈ ದಾನಿಗಳೂ, ಆಗಿರುವ ಶ್ರೀ ಬಿ.ಎಸ್.ವಿ. ಸುಬ್ರಹ್ಮಣ್ಯ ಅವರು ನಮ್ಮ ಸಂಘದ ಚಟುವಟಿಕೆಗಳಲ್ಲಿ ವಿಶೇಷ ಆಸ್ಥೆ ಉಳ್ಳವರು. ಸಂಘದ ಹತ್ತಾರು ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳಿಗೆ ಅಧಿಕ ಮೊತ್ತದ ಕೊಡುಗೆಗಳನ್ನು ನೀಡುತ್ತಲೇ ಬಂದಿರುವ ಶ್ರೀಯುತರು ಈಗ ಸಂಘವು ಆರಂಭಿಸಿರುವ ವಿದ್ಯಾರ್ಥಿನಿಲಯದ ವಿಸ್ತರಣಾ ಕಾರ್ಯಕ್ಕೆ ಒಂದೇ ಬಾರಿಗೆ ನಾಲ್ಕು ಲಕ್ಷ ರೂ.ಗಳ ಭಾರೀ ಕೊಡುಗೆಯನ್ನು ನೀಡಿ ನಮ್ಮೆಲ್ಲರ ಮನದುಂಬುವಂತೆ ಮಾಡಿದ್ದಾರೆ. ಸಂಘದ ಮೇಲಿರುವ ಅವರ ಈ ಅಪಾರ ಅಭಿಮಾನಕ್ಕೆ ನಾವು ಅವರಿಗೆ ಸದಾ ಕೃತಜ್ಞರಾಗಿದ್ದೇವೆ. ನಮ್ಮೆಲ್ಲರ ಕೃತಜ್ಞತೆಯ ಕುರುಹಾಗಿ ಶ್ರೀಮತಿ ಸೀತಾ ಸುಬ್ರಹ್ಮಣ್ಯ ಹಾಗೂ ಶ್ರೀ ಸುಬ್ರಹ್ಮಣ್ಯ ಅವರಿಗೆ ತಾ. ೨೭.೧.೦೨ರಂದು ಆತ್ಮೀಯವಾಗಿ ಸನ್ಮಾನಿಸಲಾಯಿತು.

## ಸಂಪಾದಕೀಯ : ಸಂಕೇತಿ ಸಂಗಮ : ಡಿಸೆಂಬರ್ ೨೦೦೨



*135. 'ಜ್ಯೋತಿಶ್ರೀ' ಅಭಿನಂದನಾ ಗ್ರಂಥ ಬಿಡುಗಡೆ : ಶ್ರೀ ಆರ್.ವಿ.ದೇಶಪಾಂಡೆ ಅವರಿಂದ*

ತಾನು ಬಹುಕಾಲ ಬದುಕಬೇಕೆಂಬುದು ಮನುಷ್ಯನ ಹೆಬ್ಬಯಕೆಗಳಲ್ಲಿ ಒಂದು. ದೀರ್ಘಕಾಲ ಬದುಕುವುದರ ಮೂಲಕ ಮೃತ್ಯುವನ್ನು ಗೆಲ್ಲುವ ಛಲ ಆತನದು. ಅದಕ್ಕಾಗಿ ಅವನು ಅನೇಕ ಪ್ರಯತ್ನಗಳನ್ನು ಮಾಡುತ್ತಿರುತ್ತಾನೆ. 'ಜೀವನ್ ಭದ್ರಾಣಿ ಪಶ್ಯತಿ' ಎಂಬುದೇ ನಮ್ಮ ಬಾಳಿನ ಸೂತ್ರ.

ಮನುಷ್ಯನ ಜೀವಿತಾವಧಿಯ ಬಗೆಗೆ ನಮ್ಮ ಶಾಸ್ತ್ರಗಳು ಹಲವು ಮೈಲಿಗಲ್ಲುಗಳನ್ನು ನಿರ್ದೇಶಿಸಿವೆ. ಸಂಪೂರ್ಣ ಬದುಕೆಂದರೆ ೧೨೦ ವರ್ಷಗಳು ಎಂದು ಒಂದೆಡೆ ಸಾರಿದರೆ, ಗ್ರಹದತ್ತ ಆಯುರ್ದಾಯ ಎಂದರೆ ಎಲ್ಲ ಗ್ರಹಗಳ ದಶಾಭುಕ್ತಿಗಳ ಒಟ್ಟು ಮೊತ್ತ ೧೧೬ ವರ್ಷಗಳು. **'ಶತಾಯುಃ ಪುರುಷಃ ಶತೇಂದ್ರಿಯಃ'** ಎಂದೂ **'ಜೀವೇಮ ಶರದಃ ಶತಮ್'** ಎಂದೂ ವೇದಗಳು ಸಾರಿದರೆ, ಸಾವಿರ ಹುಣ್ಣಿಮೆಗಳನ್ನು ನೋಡುವ ಅವಧಿ - ಎಂಬತ್ತು ವರ್ಷಗಳು - ಎಂದು ಇನ್ನೊಬ್ಬರ ಮತ. ಪ್ರಭವಾದಿ ಅರುವತ್ತು ಸಂವತ್ಸರಗಳ ಚಕ್ರದ ಒಂದು ಪರಿಭ್ರಮಣವೇ ಒಂದು ಮೈಲಿಗಲ್ಲು ಎಂದು ಜ್ಯೋತಿಶ್ಶಾಸ್ತ್ರ ಸಾರುತ್ತದೆ.

ಯಾವುದೇ ಇಂದ್ರಿಯ ವೈಕಲ್ಯವಿಲ್ಲದೆ ಮನುಷ್ಯ ಅರುವತ್ತು ವರ್ಷಗಳ ಕಾಲ ಬಾಳಿಯಾನು. ಅದೊಂದು ದೊಡ್ಡ ಮಜಲು. ಪೂರ್ಣಾಯುಷ್ಯವನ್ನು ೧೨೦ ವರ್ಷಗಳೆಂದು ಭಾವಿಸಿದರೆ ಅರುವತ್ತು ವರ್ಷಕ್ಕೆ ಅರ್ಧಾಯುಷ್ಯ ತೀರಿದಂತಾಯಿತು. ಅಲ್ಲಿಂದ ಮುಂದೆ ಒಂದೊಂದೇ ಇಂದ್ರಿಯಗಳು ಕೈಕೊಡುತ್ತ ಬರುತ್ತವೆ. ಅವನ ಮಾತನ್ನು ಇತರರಿರಲಿ, ತನ್ನ ಶರೀರವೇ ಕೇಳುವುದಿಲ್ಲ! ಮುಪ್ಪು ಬಿಳಿಗೂದಲಾಗಿ ಬಂದು ಕಿವಿಯ ಬಳಿ ಚಾಡಿ ಹೇಳಲು ತೊಡಗುತ್ತದೆ. ಇಂತಹ ಸಂದರ್ಭದಲ್ಲಿ ಮೃತ್ಯುವು ಉಗ್ರ ಸ್ವರೂಪದಿಂದ ರಥವೇರಿ ಮನುಷ್ಯನನ್ನು ಕೊಂಡೊಯ್ಯಲು ಬರುವನಂತೆ. ಅಂತಹ ಮೃತ್ಯುವನ್ನು ಮೃತ್ಯುಂಜಯನ ನೆರವಿನಿಂದ ಸಂತೈಸಿ ಕಳುಹಿಸಬೇಕು. ಆಗ ಮೃತ್ಯುವಿನೊಂದಿಗೆ ಒಂದು 'ಒಡಂಬಡಿಕೆ'ಯನ್ನು ಮಾಡಿಕೊಳ್ಳಲು ಶಾಸ್ತ್ರಗಳು ಉಪದೇಶಿಸುತ್ತವೆ - "ಇಷ್ಟು ದಿನ ಲೌಕಿಕ



*136. ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ : ಮಂಗಳಸ್ನಾನ : ಸರ್ವಜನ ಸಂಭ್ರಮ*

ಸುಖೋಪಭೋಗಗಳಲ್ಲಿ ಮೈಮರೆತು ಆತ್ಮೋನ್ನತಿಯ ಮಾರ್ಗವನ್ನು ಸಾಧಿಸಲಾರದೆ ಹೋದೆ; ಈಗೊಂದಿಷ್ಟು ಅವಕಾಶ ಕೊಡು. ಇನ್ನು ಮುಂದೆ ಪಾರಮಾರ್ಥಿಕಕ್ಕಾಗಿ ಬದುಕುತ್ತೇನೆ; ಸ್ವಾರ್ಥವನ್ನು ಬಿಟ್ಟು ಪರಾರ್ಥಕ್ಕಾಗಿ ಜೀವಿಸುತ್ತೇನೆ" ಎಂದು. ಇದರಿಂದ ಸುಪ್ರೀತನಾದ ಉಗ್ರನು "ಕೊಟ್ಟ ಮಾತಿನಂತೆ ನಡೆ" ಎಂದು ಎಚ್ಚರಿಸಿ, ಹೊಸ ಬದುಕಿಗೆ ಅವಕಾಶವಿತ್ತು ಹಿಂದಿರುಗುವನಂತೆ. ಮುಂದೆ ಪ್ರತಿ ದಶಕಕ್ಕೊಮ್ಮೆ ಪರೀಕ್ಷಿಸಲು ಬರುವನಂತೆ; ಮನುಷ್ಯ ತನ್ನ ಮಾತನ್ನು ಪಾಲಿಸಿದಲ್ಲಿ ಮೃತ್ಯುವಿಗೂ ಮೃತ್ಯುಂಜಯನಿಗೂ ತುಂಬ ಸಂತೋಷವಾಗುತ್ತದೆ ಎನ್ನುವುದು ಆರ್ಷೇಯ ನಂಬಿಕೆ.

ಸಾಮಾನ್ಯರಲ್ಲಿ ಬದುಕಿನ ಪೂರ್ವಾರ್ಧಕ್ಕೂ ಉತ್ತರಾರ್ಧಕ್ಕೂ ನಡುವೆ ಇಂತಹದೊಂದು 'ಒಡಂಬಡಿಕೆ' ಅಗತ್ಯವಾದರೆ ಮಹಾಪುರುಷರ ಬದುಕಿನಲ್ಲಿ ಇದರ ಅಗತ್ಯವೇ ಕಾಣುವುದಿಲ್ಲ. ಅವರು ಬದುಕಿನ ಪೂರ್ವಾರ್ಧದಲ್ಲೂ ಹೀಗೆಯೇ ಇದ್ದುಬಿಡುತ್ತಾರೆ. ಅಂತಹ ಅಪರೂಪದ ವ್ಯಕ್ತಿಗಳಲ್ಲೊಬ್ಬರು ನಮ್ಮ ಬಿ.ಎನ್.ವಿ! ಅವರಿಗೆ ಈಗ ಅರುವತ್ತು ತುಂಬುತ್ತಿದೆ. ಅಭಿಮಾನಿಗಳು ಅವರ ಅರುವತ್ತರ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ (೧.೧೨.೦೨). ಪರೋಪಕಾರಕ್ಕಾಗಿ ಅನೇಕ ಸತ್ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಮಹಾದಾನಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಶ್ರೀ ಬಿ.ಎನ್.ವೆಂಕಟಸುಬ್ರಹ್ಮಣ್ಯ ಅವರು ನಮ್ಮವರೆಂದು ಹೇಳಿಕೊಳ್ಳುವುದೇ ನಮಗೊಂದು ಹೆಮ್ಮೆ. ಅಂತಹ ಸತ್ಪುರುಷ ದಂಪತಿಗಳಿಗೆ ಈ ಷಷ್ಟಿಪೂರ್ತಿಶಾಂತಿಯ ಸುಸಂದರ್ಭದಲ್ಲಿ ಸಂಕೇತಿ ಮಹಾಜನತೆಯ ಪರವಾಗಿ ಅನೇಕ ಶುಭಹಾರೈಕೆಗಳನ್ನು ಪತ್ರಿಕೆ ಕೋರುತ್ತದೆ.

## ಬಿ.ಎನ್.ವಿ.ಗೆ ಅದ್ದೂರಿಯ ಅಭಿನಂದನೆ : ನಿರ್ಮಲಾ ಪ್ರಸನ್ನ : ಸಂಕೇತಿ ಸಂಗಮ, ಜನವರಿ ೨೦೦೩

ಶ್ರೀ ಬಿ.ಎನ್.ವಿ. ಷಷ್ಟ್ಯಬ್ದಪೂರ್ತಿ ಅಭಿನಂದನಾ ಕಾರ್ಯಕ್ರಮಗಳನ್ನು ರಾಜ್ಯದ ಬೃಹತ್ ಕೈಗಾರಿಕಾ ಸಚಿವರಾದ ಶ್ರೀ **ಆರ್.ವಿ. ದೇಶಪಾಂಡೆಯವರು** ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಉದ್ಘಾಟನೆಯನಂತರ ಅವರು **ಜ್ಯೋತಿಶ್ರೀ** ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆಮಾಡಿದರು. ತಮ್ಮ ಭಾಷಣದಲ್ಲಿ ಅವರು ತಾಲ್ಲೂಕು ಮಟ್ಟದಿಂದ ಅಂತಾರಾಷ್ಟ್ರೀಯ ಮಟ್ಟದವರೆಗೂ ಬ್ರಾಹ್ಮಣರು ತಮ್ಮ ಪ್ರಾಮುಖ್ಯವನ್ನು ಮೆರೆದು, ನಾಯಕತ್ವವನ್ನು ರೂಢಿಸಿಕೊಂಡಿದ್ದಾರೆಂದು ತಿಳಿಸಿ, ಬಡಬ್ರಾಹ್ಮಣರ ಸಹಾಯಕ್ಕಾಗಿ ಶ್ರೀ ಬಿ.ಎನ್.ವಿ. ಅವರು ನಿಧಿ ಸ್ಥಾಪಿಸಿದಲ್ಲಿ ಅದಕ್ಕೆ ತಾವು ಹೃತ್ಪೂರ್ವಕ ಸಹಕಾರವನ್ನು ನೀಡುವುದಾಗಿ ಹೇಳಿದರು. ರಾಜ್ಯದ ಹಿರಿಯ ರಾಜಕಾರಣಿಗಳೂ, ಮಾಜಿ ಸಚಿವರೂ ಆದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಮಾತನಾಡಿ - ಬಿ.ಎನ್.ವಿ. ಸುಬ್ರಹ್ಮಣ್ಯರವರು ಶೃಂಗೇರಿ ಶಾರದಾ ಪೀಠದ ಪರಮಭಕ್ತರಾಗಿದ್ದು ಶ್ರೀ ಶ್ರೀ ಗಳ ಪೂರ್ಣಾನುಗ್ರಹಕ್ಕೆ ಪಾತ್ರರಾಗಿರುವರೆಂದು ಶ್ಲಾಘಿಸಿದರು. ಆ ಕಾರಣದಿಂದ ಬಿ.ಎನ್.ವಿ.ಯವರ ಧಾರ್ಮಿಕ - ಸಾಮಾಜಿಕ - ಶೈಕ್ಷಣಿಕ ಸೇವೆಗಳಿಗೆ ಒಂದು ಮೆರುಗು ಬಂದಿದೆಯೆಂದೂ ಅವರು ಹೇಳಿದರು. ಬ್ರಾಹ್ಮಣ ಸಮಾಜ ಹಾಗೂ ಎಲ್ಲ ಸಮಾಜಗಳು ಸಹ ಬಿ.ಎನ್.ವಿ.ಯವರಿಗೆ ಕೃತಜ್ಞರಾಗಿರಬೇಕೆಂದು ಅವರು ಅಭಿಪ್ರಾಯಪಟ್ಟರು.



**137. *ಸಂತಸದ ಕ್ಷಣ : ಬಿ.ಎನ್.ವಿ. ದಂಪತಿ : ಪರಸ್ಪರ ಮಾಲಾರ್ಪಣೆ***

ಮಾಜಿ ಸಚಿವರಾದ ಶ್ರೀ ಎಸ್. ರಮೇಶ್ ಅವರು ಮಾತನಾಡಿ ಬ್ರಾಹ್ಮಣ ಸಂಘಟನೆಗೆ ಆರ್. ಗುಂಡೂರಾವ್ ಅವರ ಆದರ್ಶದಲ್ಲಿ ಮುಂದುವರೆಯಬೇಕೆಂದು ಕರೆಕೊಟ್ಟರು. ಬ್ರಾಹ್ಮಣ ಸಮಾಜದಲ್ಲಿದ್ದ ಕೆಲವು ಭಿನ್ನಾಭಿಪ್ರಾಯಗಳು ಮರೆಯಾಗಿ ಶ್ರೀ ಬಿ.ಎನ್.ವಿ. ಅವರು

ಪುನಃ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿರುವುದಕ್ಕೆ ಹರ್ಷವ್ಯಕ್ತಪಡಿಸಿದ ಅವರು, ಬಿ.ಎನ್.ವಿ.ಯವರ ನಾಯಕತ್ವ ಚಿರಕಾಲ ದೊರಕಲಿ ಎಂದು ಹಾರೈಸಿದರು.

ಮಾಜಿ ಸಚಿವರೂ, ಈಗಿನ ಕರ್ನಾಟಕ ಪ್ರವಾಸೋದ್ಯಮ ನಿಗಮದ ಅಧ್ಯಕ್ಷರೂ, ಬ್ರಾಹ್ಮಣ ಸಮಾಜದ ಹಿತೈಷಿಗಳೂ ಆದ ಶ್ರೀಮತಿ ಮನೋರಮಾ ಮಧ್ವರಾಜ್‌ರವರು - 'ರಾಜಕಾರಣಿಗಳು ತಾವು ನಾಯಕತ್ವವನ್ನು ಗಳಿಸಿ, ಉಳಿಸಿಕೊಳ್ಳುವ ದೃಷ್ಟಿಯಿಂದಲೇ ಸಮಾಜಸೇವೆ ಮಾಡುತ್ತಾರೆ. ಆದರೆ ಬಿ.ಎನ್.ವಿ. ಯಾವುದೇ ಸ್ವಾರ್ಥವಿಲ್ಲದೆ ಸಮಾಜಕ್ಕೆ ತನ್ನದೆಲ್ಲವನ್ನೂ ದಾನಮಾಡಿದ್ದಾರೆ. ಅವರ ಆದರ್ಶವನ್ನು ನಾವು ಪಾಲಿಸಬೇಕು' ಎಂದು ಕರೆ ನೀಡಿದರು.

ಶಿಕ್ಷಣ ಸಚಿವರಾದ ಪ್ರೊ. ಬಿ.ಕೆ. ಚಂದ್ರಶೇಖರ್‌ರವರು ಮಾತನಾಡುತ್ತ - 'ರಾಜಕಾರಣಿಗಳು ಅನಿವಾರ್ಯವಾಗಿ ಆಷಾಢಭೂತಿಗಳಾಗುತ್ತಾರೆ. ಆದರೆ ಬಿ.ಎನ್.ವಿ.ಯವರು ಅಂತಹ ಕಪಟ ಇಲ್ಲದ, ನೇರ ನಡೆ ನುಡಿಯಿಂದ ನಮ್ಮನ್ನು ಗೆದ್ದಿದ್ದಾರೆ. ಅವರಲ್ಲಿನ ಉತ್ತಮ ಗುಣಗಳ ಸ್ವಲ್ಪ ಭಾಗವನ್ನಾದರೂ ಮೈಗೂಡಿಸಿಕೊಂಡರೆ ದೇಶಕ್ಕೆ ಎಷ್ಟೋ ಒಳ್ಳೆಯದಾಗುತ್ತದೆ' ಎಂದರು.

ಸನ್ಮಾನಿತರ ಪರವಾಗಿ ಮಾತನಾಡಿದ ಶಿಕ್ಷಣತಜ್ಞ ಡಾ. ಎಚ್.ನರಸಿಂಹಯ್ಯನವರು - ಬಿ.ಎನ್.ವಿ ಯವರು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಕೊಂಡಾಡಿದರು.

## ಸಂಪಾದಕೀಯ : ಸಂಕೇತಿ ಸಂಗಮ : ಏಪ್ರಿಲ್ ೨೦೦೩

ಸ್ವಭಾನು ಸಂವತ್ಸರದ ಉದಯದೊಂದಿಗೆ ಸಂಕೇತಿ ಸಮುದಾಯದ ವಿಲೀನ ಪ್ರಕ್ರಿಯೆಗೆ ಹೊಸ ಬೆಳಕೊಂದು ಮೂಡುವ ಲಕ್ಷಣಗಳು ಕಾಣಿಸಿವೆ. ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ.



138. ಸೀತಾ : ಪತಿಗೆ ಮಾಲಾರ್ಪಣೆ

ಮಾರ್ಚ್ ೧೬ರ ಭಾನುವಾರ ಮೈಸೂರಿನಲ್ಲಿ ಕೌಶಿಕ ಸಂಕೇತಿ ಸಂಘದ ವಿದ್ಯಾರ್ಥಿನಿ ನಿಲಯದ ನೂತನ ಕಟ್ಟಡದ ಪ್ರಾರಂಭೋತ್ಸವ ನಡೆಯಿತು. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಭಾರತೀಯ ವಿದ್ಯಾಭವನದ ಮುಖ್ಯಸ್ಥ ಶ್ರೀ ಮತ್ತೂರು ಕೃಷ್ಣಮೂರ್ತಿ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ, ಕೊಡುಗೈ ದಾನಿ, ಶ್ರೀ ಬಿ.ಎನ್.ವಿ ಸುಬ್ರಹ್ಮಣ್ಯ ಅವರು ಆಗಮಿಸಿದ್ದರು. ಇಬ್ಬರೂ ಸಂಕೇತಿ ಏಕೀಕರಣದ ಬಗೆಗೇ ಮಾತನಾಡಿದರು. ಬಿ.ಎನ್.ವಿ. ತಮ್ಮ ಮಾತಿನ ಕೊನೆಯಲ್ಲಿ "ಬೆಂಗಳೂರಿನ ಎಲಚೇನಹಳ್ಳಿಯಲ್ಲಿ ನಾನು ನಡೆಸುತ್ತಿರುವ 'ಜ್ಯೋತಿ ವಿದ್ಯಾಲಯ' ೧೮೦೦ ವಿದ್ಯಾರ್ಥಿಗಳನ್ನು ಹೊಂದಿರುವ ಪ್ರತಿಷ್ಠಿತ ವಿದ್ಯಾಸಂಸ್ಥೆ. ಅದು ಸುಮಾರು ಹತ್ತು ಕೋಟಿ ರೂ. ಬೆಲೆಬಾಳುವ ಆಸ್ತಿ. ಉಭಯ ಸಂಕೇತಿ ಸಂಘಗಳೂ ಒಂದಾಗಿ ನಡೆಸಿಕೊಂಡು ಹೋಗುವುದಾದಲ್ಲಿ ಅದನ್ನು ನಾನು ಸಂಘಕ್ಕೆ ಬಿಟ್ಟುಕೊಡಲು ಸಿದ್ಧನಾಗಿದ್ದೇನೆ. ಈ ಸವಾಲನ್ನು ಸ್ವೀಕರಿಸಿ ಸಂಕೇತಿ ಸಂಘಗಳು ಒಂದಾಗಲಿ ಎಂದು ಹಾರೈಸುತ್ತೇನೆ" ಎಂದು ಕರೆ ನೀಡಿದರು.

ಸಂಕೇತಿ ಸಂಘಗಳ ಏಕೀಕರಣದ ಪ್ರಶ್ನೆ ಇಂದು ನಿನ್ನೆಯದಲ್ಲ. ಸುಮಾರು ಅರ್ಧ ಶತಮಾನದಷ್ಟು ಹಿಂದಿನಿಂದಲೂ *ಈ* ಬಗೆಗೆ ಚರ್ಚೆ ವಿವಿಧ ವೇದಿಕೆಗಳಲ್ಲಿ ನಡೆಯುತ್ತಲೇ ಬಂದಿದೆ. ಜನಾಂಗದ ಅಭಿವೃದ್ಧಿಗೆ ಸಂಘಗಳು ಎಷ್ಟಿದ್ದರೂ ತಪ್ಪಿಲ್ಲ. ಆದರೆ, 'ನಾವೆಲ್ಲ ಒಂದೇ' ಎಂಬ ಮೂಲ ಭಾವನೆಗೇ ಪೆಟ್ಟು ಬೀಳುವುದಾದಲ್ಲಿ ಎರಡು ಸಂಘಗಳು ಎಂದೂ ಅಪಾಯಕಾರಿಯೇ ಸರಿ. ಹಾಗಾಗಿ ಏಕೀಕರಣವಾದಿಗಳು *ಈ*ಗ ಹೆಚ್ಚಾಗುತ್ತಿದ್ದಾರೆ. ಬ್ರಾಹ್ಮಣರೆಲ್ಲ ಒಂದಾಗಲೇಬೇಕಾದ ಅಗತ್ಯ ಅಧಿಕತಮವಾಗಿರುವ *ಈ* ದಿನಗಳಲ್ಲಿ ಕೇವಲ ೨೫-೩೦ ಸಾವಿರದಷ್ಟಿರುವ ನಾವು ಒಂದಾಗದಿದ್ದಲ್ಲಿ ನಮ್ಮ ಭವಿಷ್ಯ ನಿಜಕ್ಕೂ ಘೋರ. *ಈ* ಸತ್ಯವನ್ನು ನಾವು ಎಷ್ಟು ಬೇಗ ಅರಿತರೆ ಅಷ್ಟೂ ಒಳ್ಳೆಯದು. ಜನಾಂಗದ ಒಳಿತಿಗಾಗಿ, ದೂರದರ್ಶಿಗಳಾದ ಶ್ರೀ ಬಿ.ಎನ್.ವಿ. ಮಾಡಿರುವ ಸಲಹೆ ಅತ್ಯಂತ ಸಮಯೋಚಿತವೂ ಸಾಧುವೂ ಆಗಿದೆ. ಸ್ವಾರ್ಥರಹಿತರಾಗಿ, ಬಹುದೊಡ್ಡ ಮೊತ್ತದ ಆಮಿಷವನ್ನು ಒಡ್ಡುವ ಮೂಲಕ ಬಿ.ಎನ್.ವಿ. ಏಕೀಕರಣಕ್ಕೆ ಉತ್ತಮ ಚಾಲನೆ ನೀಡಿ ಸಂಕೇತಿ ಇತಿಹಾಸದಲ್ಲಿ ಅವಿಸ್ಮರಣೀಯರಾಗಿದ್ದಾರೆ.

ಆದರೆ ಇದು ಇಷ್ಟಕ್ಕೇ ನಿಲ್ಲದಂತೆ, ಬೇಗ ಕಾರ್ಯರೂಪಕ್ಕೆ ಬರುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ನಾವು ಪ್ರತಿಯೊಬ್ಬರೂ ನಮ್ಮ ಊರಿನ ಹಿರಿಯರ, ಸಂಘಗಳ ಪ್ರತಿನಿಧಿಗಳ, ಪದಾಧಿಕಾರಿಗಳ ಮನ ಒಲಿಸಿ, ಸಂಘಗಳಿಗೆ ಪತ್ರ ಬರೆದು, ದೂರವಾಣಿ ಮೂಲಕ ವಿಚಾರಿಸಿ, ಏಕೀಕರಣ ಬೇಗ ನಡೆಯುವಂತೆ ಕ್ರಮ ಕೈಗೊಳ್ಳಲು ಆಗ್ರಹಿಸಬೇಕು. ಇಂಥ ಅವಕಾಶ ಮತ್ತೆ ಮತ್ತೆ ದೊರೆಯಲಾರದು. ಇದು ನಮ್ಮೆಲ್ಲರ ವೈಯಕ್ತಿಕ ಹಾಗೂ ಸಾಮೂಹಿಕ ಜವಾಬ್ದಾರಿ ಎಂಬುದನ್ನು ಮರೆಯದಿರೋಣ. ಶ್ರೀ ಬಿ.ಎನ್.ವಿ. ಒಡ್ಡಿರುವ ಪಂಥಾಹ್ವಾನವನ್ನು ಸ್ವೀಕರಿಸಿ ಏಕೀಕರಣವನ್ನು ಸಾಧಿಸೋಣ. ಇದೇ ಹೊಸ ವರ್ಷದ ಮಂತ್ರವಾಗಲಿ.

## 'ಜ್ಯೋತಿ' ವಿದ್ಯಾರ್ಥಿನಿಯರ ವಸತಿಗೃಹ ಉದ್ಘಾಟನೆ

**ವರದಿ : ಶ್ರೀವಲ್ಲೀ ಮಂಜುನಾಥ, ಬೆಂಗಳೂರು : ಸಂಕೇತಿ ಸಂಗಮ : ಆಗಸ್ಟ್, ೨೦೦೫**

ಬೆಂಗಳೂರಿನ ಎಲಚೇನಹಳ್ಳಿಯಲ್ಲಿ **ಜ್ಯೋತಿ ಚಾರಿಟಬಲ್ ಟ್ರಸ್ಟ್**ನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು ನಿರ್ಮಿಸಿರುವ ಮೂರು ಅಂತಸ್ತಿನ ಸುಸಜ್ಜಿತವಾದ **ಜ್ಯೋತಿ ವಿದ್ಯಾರ್ಥಿನಿಯರ ವಸತಿ ಗೃಹ**ದ ಕಟ್ಟಡವನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ **ಎನ್.ಧರ್ಮಸಿಂಗ್**ರವರು ದಿನಾಕ ೨೯.೭.೦೫ರ ಗುರುವಾರ ಸಂಜೆ ೬.೩೦ಕ್ಕೆ ಉದ್ಘಾಟಿಸಿದರು. ಹಲವಾರು ಕಾರ್ಯಕ್ರಮದ ನಡುವೆ ಬಿಡುವು ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳು *ಈ* ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಎಲ್ಲರಿಗೂ ಸಂತೋಷ ನೀಡಿತು. ವೇದಘೋಷ ಮತ್ತು ಪೂರ್ಣಕುಂಭದೊಡನೆ ಅವರನ್ನು ಸ್ವಾಗತಿಸಲಾಯಿತು. ಜ್ಯೋತಿ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರಾದ **ಶ್ರೀಮತಿ ಸುಮಾ ಜಗದೀಶ್**ರವರು ಸ್ವಾಗತ ಭಾಷಣ ಮಾಡಿದನಂತರ ಮಾತನಾಡಿದ ಶ್ರೀ ಧರ್ಮಸಿಂಗ್ ಅವರು- ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಸಮಾಜ ಸೇವೆಯನ್ನು ಮುಕ್ತಕಂಠದಿಂದ ಹೊಗಳಿದರು. ಒಂದು ಕಡೆ Medical ಮತ್ತು Engineering ಕಾಲೇಜು ನಡೆಸುತ್ತಿರುವವರು ಶಿಕ್ಷಣವನ್ನು ವ್ಯಾಪಾರವನ್ನಾಗಿಸಿಕೊಂಡಿರುವಾಗ ಇಲ್ಲಿ ಶ್ರೀ ಬಿ.ಎನ್.ವಿ. ಅವರು ಶಿಕ್ಷಣಕ್ಕೆ ಕೊಡುತ್ತಿರುವ ಮಹತ್ತ್ವವನ್ನು ಪ್ರಶಂಸಿಸಿದರು. ಸರ್ಕಾರಕ್ಕೆ, ಸಮಾಜಕ್ಕೆ, ದೇಶಕ್ಕೆ ಬೆಂಬಲ ನೀಡುವ ರೀತಿಯಲ್ಲಿ ಶ್ರೀ ಬಿ.ಎನ್.ವಿ.ಯವರು ಪುಣ್ಯದ ಕೆಲಸ ಮಾಡುತ್ತಿದ್ದಾರೆಂದು ಹೇಳಿ, ವಿದ್ಯಾರ್ಥಿನಿಯರ ವಸತಿಗೃಹವನ್ನು ನಿರ್ಮಿಸಿದ ಶ್ರೀ ಬಿ.ಎನ್.ವಿ.ಯವರಿಂದ ಹೆಚ್ಚಿನ ಒಳ್ಳೆಯ ಕೆಲಸಗಳಾಗಲಿ ಎಂದು ಆಶಿಸಿ ಶುಭಕೋರಿದರು.

ಇವಿಷ್ಟೂ ಕಾರ್ಯಕ್ರಮಗಳು ಜ್ಯೋತಿ ಶಾಲೆಯ ತೆರೆದ ಬಯಲಿನಲ್ಲಾಯಿತು. ಅನಂತರ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿದೆಯೆಂದು ಮುಖ್ಯಮಂತ್ರಿಗಳು ಹೊರಟರು.  ಅಲ್ಲಿಯ ತನಕ ಬಿಡುವು ನೀಡಿದ್ದ ಮಳೆ ಜೋರಾಗಿ ಬಂದಿದ್ದರಿಂದ ಕಾರ್ಯಕ್ರಮವನ್ನು ಜ್ಯೋತಿ ಸಭಾಂಗಣಕ್ಕೆ ಸ್ಥಳಾಂತರಿಸಲಾಯಿತು. ಅಲ್ಲಿ ಮೊದಲೇ ಎಲ್ಲ ಸಿದ್ಧತೆಗಳೂ ಆಗಿದ್ದರಿಂದ ಯಾವ ಗೊಂದಲವಿಲ್ಲದೆ ಕಾರ್ಯಕ್ರಮ ಸುಸೂತ್ರವಾಗಿ ನಡೆಯಿತು. *ಈ* ಒಂದು ಸಣ್ಣ ಉದಾಹರಣೆ ಸಾಕು- ಶ್ರೀ ಸುಬ್ರಹ್ಮಣ್ಯ ಅವರ ದೂರದರ್ಶಿತ್ವ ಮತ್ತು ಯಶಸ್ಸಿನ ಗುಟ್ಟನ್ನು ತಿಳಿಸಲು.

ಜ್ಯೋತಿ ಕಲಾಕೇಂದ್ರದ ಮಕ್ಕಳು ಸುಮಧುರವಾಗಿ ಭಕ್ತಿಗೀತೆ ಮತ್ತು ನಾಡಗೀತೆಗಳನ್ನು ಹಾಡಿ ನೆರೆದವರನ್ನು ರಂಜಿಸಿದರು. ಅತಿಥಿಗಳಾಗಿ ಆಗಮಿಸಿದ್ದ ಬೊಮ್ಮನಹಳ್ಳಿ ನಗರಸಭಾ ಸದಸ್ಯ ಶ್ರೀ ಮುನಿರಾಮ್ ಮತ್ತು ತುಮಕೂರು ನಗರಸಭಾ ಅಧ್ಯಕ್ಷ ಶ್ರೀ ಸತ್ಯನಾರಾಯಣ ಅವರು ಮಾತನಾಡುತ್ತ ಸುತ್ತಮುತ್ತಲಿನ ಸಾಮಾನ್ಯ ವರ್ಗದ ಜನರಿಗೆ ಜ್ಯೋತಿ ಶಾಲೆಯಿಂದಾಗಿರುವ ಅನುಕೂಲವನ್ನು ಪ್ರಶಂಸಿಸಿ ಅದೇ ರೀತಿ ಸುಬ್ರಹ್ಮಣ್ಯರವರು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಬೇಕೆಂದು ಸಲಹೆ ನೀಡಿದರು.

ಅನಂತರ ವಸತಿಗೃಹದ ನಿರ್ಮಾಣದ ಕೆಲಸದಲ್ಲಿ ಸಹಾಯಹಸ್ತ ನೀಡಿದ Construction Engineer ವೆಂಕಟಸುಬ್ರಹ್ಮಣ್ಯ, Architect ಸತೀಶ್, Electrical Engineer ಕೃಷ್ಣನ್ ನಾಯ್ಡು, Contractor ಹೊನ್ನಪ್ಪ, Painter ಶ್ರೀನಿವಾಸ್, Plumber ವೆಂಕಟೇಶ್, Carpenter ಸಂಪಂಗಿ ಅವರನ್ನು ಶ್ರೀ ಸುಬ್ರಹ್ಮಣ್ಯರವರು ಸನ್ಮಾನಿಸಿದರು. ಅನಂತರ ಮಾತನಾಡಿದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ **"ಇದು ನನ್ನ ಜೀವನದಲ್ಲಿ ಮರೆಯಲಾರದ ಕಾರ್ಯಕ್ರಮ. ಹುಟ್ಟು-ಸಾವಿನ ನಡುವೆ ನಾವು ಮಾಡುವ ಸಾಧನೆ ಮುಖ್ಯ. ಅದಕ್ಕೆ ಅನುವು ಮಾಡಿಕೊಟ್ಟ ಆ ದೇವರಿಗೆ ನಾನು ಕೃತಜ್ಞ. ಹಳ್ಳಿಗಳಿಂದ ಪಟ್ಟಣಕ್ಕೆ ಓದಲೆಂದು ಬರುವ ಹೆಣ್ಣುಮಕ್ಕಳಿಗೆ ಸರಿಯಾದ ವಸತಿ, ಊಟ - ಉಪಚಾರ ಸಿಗಲಿ ಎಂದು ನಾನು ಈ ವಸತಿಗೃಹ ನಿರ್ಮಿಸಿದ್ದೇನೆ. ಯಾವುದೇ ಲಾಭದ ಆಸೆಗಾಗಿ ನಾನು ಇದನ್ನು ಮಾಡಿಲ್ಲ. ಆ ಭಗವಂತ ನನ್ನ ಮಗಳನ್ನು ನನ್ನಿಂದ ದೂರಮಾಡಿದ. ಆದರೆ ನಾನು ಶಾಲೆಯಲ್ಲಿ ಓದುತ್ತಿರುವ ಎಲ್ಲ ಮಕ್ಕಳಲ್ಲೂ ಜ್ಯೋತಿಯನ್ನು ಕಾಣುತ್ತಿದ್ದೇನೆ. ಇಲ್ಲಿರುವವರೆಲ್ಲ ನನ್ನ ಮಕ್ಕಳೇ. ಇಂತಹ ಭಾಗ್ಯ ಎಲ್ಲರಿಗೂ ದೊರಕುವುದಿಲ್ಲ. ಜೀವನದಲ್ಲಿ ನಾನು ಅತ್ಯಂತ ಸಂತೋಷವಾಗಿದ್ದೇನೆ. ಎಲ್ಲರಿಗೂ ನನ್ನ ಕೃತಜ್ಞತೆಗಳು, ಎಲ್ಲರಿಗೂ ಒಳ್ಳೆಯದಾಗಲಿ"** ಎಂದು ಹೇಳಿದಾಗ, ನೋವನ್ನು ನಲಿವಾಗಿ ಪರಿವರ್ತಿಸಿಕೊಂಡ ಅವರ ಸ್ಥೈರ್ಯಕ್ಕೆ ಎಲ್ಲರ ಮನಸ್ಸೂ ತುಂಬಿ ಬಂದದ್ದು ಸುಳ್ಳಲ್ಲ. ಅನಂತರ ಜ್ಯೋತಿ ಟ್ರಸ್ಟ್‌ನ ಟ್ರಸ್ಟಿಗಳಲ್ಲೊಬ್ಬರಾದ **ಶ್ರೀ ರಮೇಶ್** ವಂದನಾರ್ಪಣೆ ಮಾಡಿದರು. *ಈ* ಅಚ್ಚುಕಟ್ಟಾದ ಕಾರ್ಯಕ್ರಮವನ್ನು ಅಷ್ಟೇ ಸೊಗಸಾಗಿ ನಿರೂಪಿಸಿದವರು **ಶ್ರೀಮತಿ ಉಷಾ.** ಅನಂತರ ಎಲ್ಲರಿಗೂ ಸಿಹಿ ಹಂಚಲಾಯಿತು.

## ಅರ್ಜಿಗಳಿಗೆ ಆಹ್ವಾನ

ವಸತಿಗೃಹದಲ್ಲಿ ೫೦ ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸಲಾಗುತ್ತದೆ. ಒಟ್ಟು ೧೨ ಕೊಠಡಿಗಳಿದ್ದು, ಒಂದರಲ್ಲಿ ನಾಲ್ವರು ಇರುವಂತೆ ವ್ಯವಸ್ಥೆ ಮಾಡಲಾಗಿದೆ. ಕೆಳ ಅಂತಸ್ತಿನಲ್ಲಿ ಅಡುಗೆ ಕೋಣೆ, ಸ್ಟೋರ್ ರೂಂ, ಆಫೀಸ್ ರೂಂ, ಡೈನಿಂಗ್ ಹಾಲ್ ಇದೆ. ಒಂದು ಮತ್ತು ಎರಡನೇ ಅಂತಸ್ತಿನಲ್ಲಿ ಕೊಠಡಿಗಳಿವೆ. ಮೂರನೇ ಅಂತಸ್ತಿನಲ್ಲಿ ಒಳಾಂಗಣ ಕ್ರೀಡಾಂಗಣ ಮತ್ತು ಟಿ.ವಿ. ಇವುಗಳ ವ್ಯವಸ್ಥೆಗೆ ಅನುಕೂಲ ಕಲ್ಪಿಸಲಾಗಿದೆ. ಪಿಯುಸಿ, ಡಿಪ್ಲೊಮಾ, ಪದವಿ ಓದುತ್ತಿರುವ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

**ವಿಳಾಸ : ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ,** ಅಧ್ಯಕ್ಷರು, ಜ್ಯೋತಿ ಛಾರಿಟಬಲ್ ಟ್ರಸ್ಟ್, ೩೧, ಪಂಪ ಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು - ೫೬೦ ೦೦೪



***139.* *ಸಂಗೀತ ಕಲಾನಿಧಿ ವಿದ್ವಾನ್ ಆರ್.ಕೆ. ಶ್ರೀಕಂಠನ್ ಹರಕೆ***

## ಆಧುನಿಕ ನಗರದಲ್ಲಿ ಪ್ರಾಚೀನ ಗುರುಕುಲ

**ಚಿತ್ರ-ಲೇಖನ : ಶ್ರೀದೇವಿ ರಾಜನ್, ಕನ್ನಡಪ್ರಭ, ೧೫ ಡಿಸೆಂಬರ್, ೨೦೦೪**

ರಾಜಧಾನಿ ಬೆಂಗಳೂರು ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ತೆರೆದುಕೊಂಡಿದೆ. ಹಲವಾರು ರಾಜ್ಯದ, ಹಲವಾರು ಭಾಷೆಯನ್ನು ಮಾತನಾಡುವ ಜನರು ಇಲ್ಲಿದ್ದಾರೆ. ಸಿಲಿಕಾನ್ ಸಿಟಿ ಎಂದು ಹೆಸರು ಪಡೆದಿದೆ ಬೆಂಗಳೂರು. ಕೇವಲ ಭಾರತೀಯರಿಗೆ ಮಾತ್ರವಲ್ಲದೆ ವಿದೇಶದವರಿಗೂ ಬೆಂಗಳೂರು ಅಚ್ಚುಮೆಚ್ಚು. ಎಲ್ಲಿ ನೋಡಿದರೂ ವಿದೇಶೀ ಸಂಸ್ಕೃತಿ ರಾರಾಜಿಸುತ್ತಿದೆ. ಹೋಟೆಲ್‌ಗಳು, ಪಬ್‌ಗಳು, ಲೈವ್ ಬ್ಯಾಂಡ್‌ಗಳು, ಪಂಜಾಬಿ ಡಾಬಾಗಳು, ಕಣ್ಣು ಕೋರೈಸುವ ದೀಪಗಳಿಂದ ಝಗಮಗಿಸುವ ದೊಡ್ಡ ದೊಡ್ಡ ಅಂಗಡಿಗಳು ಮಾಯಾ ನಗರಿಯಂತೆ ಎಲ್ಲರನ್ನೂ ಕೈಬೀಸಿ ಕರೆಯುತ್ತಿವೆ. ಇಂಥ ಪರಕೀಯ ಸಂಸ್ಕೃತಿಯ ದಾಳಿಗೆ ಸಿಲುಕಿರುವ ಬೆಂಗಳೂರಿನಲ್ಲಿ ಪ್ರಾಚೀನ ಸಂಸ್ಕೃತಿಯನ್ನು ಉಳಿಸಲು ಸದ್ದಿಲ್ಲದೆ ಕೆಲಸ ಮಾಡುತ್ತಿದೆ **ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆ.**

ಚಾಮರಾಜಪೇಟೆಯ ಪಂಪಮಹಾಕವಿ ರಸ್ತೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ವೇದ ಪಾಠಶಾಲೆಯ ಸಂಸ್ಥಾಪಕರು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ. ಚಿಕ್ಕಂದಿನಿಂದಲೂ ಸಂಸ್ಕೃತದ ಬಗ್ಗೆ ಅವರಿಗೆ ಅತೀವ ಕಾಳಜಿ. ಆದರೆ ಕಲಿಕೆಗೆ ಅನುಕೂಲದ ಕೊರತೆ. ತಾವು ಕಲಿಯಲಾಗದ್ದನ್ನು ಬೇರೆ ಮಕ್ಕಳಾದರೂ ಕಲಿಯಲೆಂಬ ಆಶೆ. ಅದಕ್ಕಾಗಿ ೧೯೮೪ರಲ್ಲಿ ಶ್ರೀ ಮಲ್ಲಿಕಾರ್ಜುನ ವೇದ ಪಾಠಶಾಲೆಯ ಪ್ರಾರಂಭ.

**ಶ್ರೀ ಮಲ್ಲಿಕಾರ್ಜುನ ವೇದಪಾಠಶಾಲೆ :** ೧೦ ಮತ್ತು ೧೨ ವರ್ಷದೊಳಗಿನ ಬ್ರಹ್ಮಚಾರಿಗಳಿಗೆ ಮಾತ್ರ ಇಲ್ಲಿ ಪ್ರವೇಶಾವಕಾಶ. ಜೂನ್ ತಿಂಗಳಲ್ಲಿ ಪ್ರವೇಶ ಪ್ರಕ್ರಿಯೆ ಆರಂಭ. ಯಾವುದೇ ಕಾರಣಕ್ಕೂ ಪಾಠಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ೩೦ಕ್ಕೆ ಮೀರದಂತೆ ನೋಡಿಕೊಳ್ಳುತ್ತಾರೆ. ಸಂಖ್ಯೆ ಅಧಿಕವಾಗಿ ಪಾಠಶಾಲೆ ಸಂತೆಯಂತಾಗಬಾರದೆಂಬುದು ಇದರ ಉದ್ದೇಶ. ಆದ್ದರಿಂದ ಸಾಮಾನ್ಯವಾಗಿ ಎರಡು ವರ್ಷಕ್ಕೊಮ್ಮೆ ಕೇವಲ ೧೦ ವಿದ್ಯಾರ್ಥಿಗಳಿಗೆ ಮಾತ್ರ ಇಲ್ಲಿ ಪ್ರವೇಶ ದೊರೆಯುತ್ತದೆ. ವಿದ್ಯಾರ್ಥಿ *ಈ* ಶಾಲೆಗೆ ಸೇರಲು ಹಲವಾರು ಪರೀಕ್ಷೆ (ಟೆಸ್ಟ್)ಗಳಲ್ಲಿ ಪಾಸಾಗುವುದು ಅವಶ್ಯ. ವಿದ್ಯಾರ್ಥಿಗೆ ಸಂಸ್ಕೃತ ಭಾಷೆಯ ಅಲ್ಪಜ್ಞಾನ ಮತ್ತು ಕಲಿಯುವ ಆಸಕ್ತಿ ಎರಡೂ ಇದ್ದರೆ ಉತ್ತಮ. ಉಪನಯನವಾಗಿಲ್ಲದಿದ್ದಲ್ಲಿ ಉಪನಯನವನ್ನೂ ಇಲ್ಲಿಯೇ ಮಾಡುವರು.

ಬೆಳಿಗ್ಗೆ ೫ ಗಂಟೆಗೆ ವಿದ್ಯಾರ್ಥಿಗಳ ದಿನಚರಿ ಆರಂಭ. ವಿದ್ಯಾರ್ಥಿಗಳು ತಮ್ಮ ಎಲ್ಲ ಕೆಲಸ ಕಾರ್ಯಗಳನ್ನು ತಾವೇ ಮಾಡಿಕೊಳ್ಳಬೇಕು. ಸ್ನಾನದನಂತರ ಪ್ರತಿ ದಿನ ಅಗ್ನಿಕಾರ್ಯ ಮಾಡಿ ಸಂಧ್ಯಾವಂದನೆ ಮಾಡಬೇಕು. ಬೆಳಿಗ್ಗೆ ೭ ರಿಂದ ೯ರವರೆಗೆ ಸಂಸ್ಕೃತ ಕಲಿಕೆ. ೯ ಗಂಟೆಗೆ ತಿಂಡಿ-ಕಾಫಿ. ೧೦-೧೨ರ ವರೆಗೆ ವೇದ ತರಗತಿ. ೧೨.೩೦ಕ್ಕೆ ಊಟ, ಪುನಃ ೩ ಗಂಟೆಯವರೆಗೂ ವೇದ ಪಾಠ. ಅನಂತರ ಅರ್ಧಗಂಟೆ ಭಗವದ್ಗೀತೆ ಪಠಣ. ಸಂಜೆ ೫ ಗಂಟೆಗೆ ಚಹಾ. ತರಗತಿಗಳು ಮುಗಿದನಂತರ ವಿದ್ಯಾರ್ಥಿಗಳು ತರಗತಿಗಳಲ್ಲಿ ಮಾಡಿದ ಪಾಠವನ್ನು ಅಭ್ಯಾಸ ಮಾಡಿಕೊಳ್ಳಬೇಕು. ಸರದಿಯಂತೆ ಪ್ರತಿದಿನ ಇಬ್ಬರು ಮಕ್ಕಳು ಅಡುಗೆಗಾಗಿ ತರಕಾರಿ ಹೆಚ್ಚಿ, ತೆಂಗಿನಕಾಯಿ ತುರಿದು ಕೊಡಬೇಕಾದುದು ಮಾತ್ರ ಅಗತ್ಯ. ರಾತ್ರಿ ೮ ಗಂಟೆಗೆ ಊಟ. ಯಾವುದಕ್ಕೂ ಹಣ ಕೊಡಬೇಕಾಗಿಲ್ಲ.

ಸಂಸ್ಕೃತ, ಭಗವದ್ಗೀತೆ, ಉಪನಿಷತ್ತುಗಳೊಂದಿಗೆ ಯಜುರ್ವೇದವನ್ನೂ ಇಲ್ಲಿ ಕಲಿಸಲಾಗುತ್ತದೆ. ಶೃಂಗೇರಿ ಸುರಸರಸ್ವತಿಯವರು ನಡೆಸುವ ಹಾಗೂ ಕರ್ನಾಟಕ ಸರ್ಕಾರ ನಡೆಸುವ ಸಂಸ್ಕೃತ ಪರೀಕ್ಷೆಯನ್ನು ವಿದ್ಯಾರ್ಥಿ ಪಾಸು ಮಾಡಬೇಕು. ಸಾಹಿತ್ಯ ಪರೀಕ್ಷೆ ಪಾಸು ಮಾಡಲು ಅಗತ್ಯವಾದಷ್ಟು ಇಲ್ಲಿ ಹೇಳಿಕೊಡಲಾಗುವುದು. ಇದಲ್ಲದೆ, ಆಸಕ್ತಿಯಿದ್ದ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲೂ ಅನುವು ಮಾಡಿಕೊಡಲಾಗುವುದು. ಸಾಹಿತ್ಯ ಪರೀಕ್ಷೆ ಪಾಸು ಮಾಡಿದವರು ಮಾಧ್ಯಮಿಕ ಶಾಲೆಯ ಸಂಸ್ಕೃತ ಶಿಕ್ಷಕರಾಗಬಹುದು. ಯಜುರ್ವೇದವನ್ನೂ ಕಲಿತಿರುವುದರಿಂದ ಪೌರೋಹಿತ್ಯವನ್ನೂ ಮಾಡಬಹುದು. *ಈ* ಎಲ್ಲಾ ಶಿಕ್ಷಣವೂ ಸಂಪೂರ್ಣ ಉಚಿತ. *ಈ*ವರೆಗೆ **೨೨** ವಿದ್ಯಾರ್ಥಿಗಳು ಇಲ್ಲಿನ ಕಲಿಕೆಯನ್ನು ಪೂರ್ಣಗೊಳಿಸಿ ಬದುಕಿಗೊಂದು ಮಾರ್ಗ ಕಂಡುಕೊಂಡಿದ್ದಾರೆ.

ಪ್ರಸ್ತುತ ೩೦ ವಿದ್ಯಾರ್ಥಿಗಳು *ಈ* ಪಾಠಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಕೇವಲ ಕರ್ನಾಟಕದಿಂದ ಮಾತ್ರವಲ್ಲದೆ, ಬನಾರಸಿನಿಂದಲೂ ವಿದ್ಯಾರ್ಥಿಗಳು ಬಂದು ಇಲ್ಲಿ ಕಲಿಯುತ್ತಿದ್ದಾರೆಂಬುದು ವಿಶೇಷ. ವೇದ - ಸಂಸ್ಕೃತ ಕಲಿಯುತ್ತಿರುವ *ಈ* ಮಕ್ಕಳ ಸಾಮಾನ್ಯ ಜ್ಞಾನ ಹೆಚ್ಚಲೂ ಇಲ್ಲಿ ಅವಕಾಶ ಇದೆ. ಬೇರೆ ಶಾಲೆಗಳಲ್ಲಿ ನಡೆಯುವಂತೆ ಪಠ್ಯೇತರ ಚಟುವಟಿಕೆಗಳೂ ಇಲ್ಲಿ ನಡೆಯುತ್ತವೆ. ಸಂಸ್ಕೃತ, ಸಾಹಿತ್ಯ, ವೇದ, ಉಪನಿಷತ್ತುಗಳಿಗೆ

ಸಂಬಂಧಿಸಿದಂತೆ ವಿವಿಧ ಶಾಲೆಗಳಲ್ಲಿ ನಡೆಸುವ ವಿವಿಧ ಸ್ಪರ್ಧೆಗಳಲ್ಲಿ ಈ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ರಾಜ್ಯಮಟ್ಟದ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಪ್ರತಿ ಪಾಡ್ಯದ ದಿನ ಅನಧ್ಯಯನ. ಅಂದು, ವಿದ್ಯಾರ್ಥಿಗಳು ತಮ್ಮಲ್ಲಿಯೇ ಗುಂಪುಗಳನ್ನಾಗಿ ಮಾಡಿಕೊಂಡು ಹಲವು ಸ್ಪರ್ಧೆಗಳನ್ನು ಶಾಲೆಯಲ್ಲಿ ಆಯೋಜಿಸುತ್ತಾರೆ. ಇದರಲ್ಲಿ ವಿಜೇತರಾದವರಿಗೆ ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ನಡೆಸುವ ಶಾಲಾ ವಾರ್ಷಿಕೋತ್ಸವ ದಿನದಂದು ಬಹುಮಾನವನ್ನು ಕೊಡಲಾಗುವುದು. ಮೇ ತಿಂಗಳು ಮಕ್ಕಳಿಗೆ ಮನೆಗೆ ಹೋಗಲು ರಜೆ. ಉಳಿದಂತೆ ಪದೇ ಪದೇ ಮನೆಗೆ ಹೋಗಿ ಬರಲು ಅವಕಾಶವಿಲ್ಲ.


ವಿದ್ಯಾರ್ಥಿ ಕಷ್ಟಪಟ್ಟು ಕಲಿತರೆ ಏಳು ವರ್ಷಗಳಲ್ಲಿ ಯಜುರ್ವೇದ ಪಾರಂಗತನಾಗಬಹುದು. ವಿದ್ಯಾರ್ಥಿಗಳು ಶಿಸ್ತಿನ ಜೀವನವನ್ನು ನಡೆಸಿ, ಕಷ್ಟಪಟ್ಟು ಕಲಿತು, ತಮ್ಮ ಬದುಕಿಗೆ ಒಂದು ಮಾರ್ಗವನ್ನು ಕಂಡುಕೊಳ್ಳುವುದರೊಂದಿಗೆ ಭಾರತೀಯ ಸಂಸ್ಕೃತಿಯನ್ನೂ ಉಳಿಸಬಹುದೆಂಬುದು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರೂ ಆಗಿರುವ ಬಿ.ಎನ್.ವಿ.ಯವರ ಅಭಿಪ್ರಾಯ.




***140. ವೇದಾಶೀರ್ವಾದ : ಪೂರ್ಣಕುಂಭ ಸ್ವಾಗತ : ನಿರಂತರ . . .***

# ೮. ಲೇಖಕರು

1. ಎ.ವಿ.ಪ್ರಸನ್ನ, ಕೆ.ಎ.ಎಸ್., ಬೆಂಗಳೂರು
2. ಎಸ್. ಟಿ. ನಾಗರಾಜ್
3. ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವರ್ಗ, ೩೧, ಪಂಪಮಹಾಕವಿ ರಸ್ತೆ, ಬೆಂಗಳೂರು-೪
4. ರು.ಕೃ. ಗೀತಾಮಣಿ, ಬೆಂಗಳೂರು
5. ಸುಮಾ ಜಗದೀಶ್, ಪ್ರಾಂಶುಪಾಲರು, ಜ್ಯೋತಿ ಕೇಂದ್ರೀಯ ವಿದ್ಯಾಲಯ, ಯಲಚೇನಹಳ್ಳಿ, ಕನಕಪುರ ರಸ್ತೆ, ಬೆಂಗಳೂರು-೫೬೦ ೦೭೮
6. ಜರಗನಹಳ್ಳಿ ಶಿವಶಂಕರ್, ಶುಭದಾ ಪ್ರಕಾಶನ, ಜರಗನಹಳ್ಳಿ, ಜೆ.ಪಿ.ನಗರ, ಬೆಂಗಳೂರು-78
7. ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯ, ರಂಗಭೂಮಿ, ನಂ.೭೯, ೧೩ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು - ೭೦. ದೂರವಾಣಿ: ೬೭೧೩೨೭೬ ಫ್ಯಾಕ್ಸ್: ೦೮೦-೬೭೧೧೮೦೨
8. ಡಾ. ಬಿ.ಎಸ್. ರಾಮಕೃಷ್ಣರಾವ್, ಕಾರ್ಯದರ್ಶಿ, ಶ್ರೀ ಸುರಸರಸ್ವತೀಸಭಾ, ಶ್ರೀ ಶೃಂಗೇರಿ ಶಂಕರಮಠ, ಬೆಂಗಳೂರು - ೪
9. ಧರ್ಮಭೂಷಣ ಕೋಟೇಶ್ವರ ಸೂರ್ಯನಾರಾಯಣರಾವ್, ಮಹಾಲಕ್ಷ್ಮಿ ಕೃಪಾ, ೨೫/೧, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು - ೧
10. ಜಿ.ಕೆ. ಗುಂಡುರಾವ್
11. ಜಿ.ಶ್ರೀಧರ್, ಡಿ-೨೬, ಜೀವನಭೀಮಾನಗರ, ಬೆಂಗಳೂರು - ೫೬೦ ೦೭೫
12. ನರಸಿಂಹನ್, ಅಧ್ಯಕ್ಷರು, ಬೆಟ್ಟದಪುರ ಸಂಕೇತಿ ಸಂಘ, ಬೆಂಗಳೂರು
13. ಹರಿಹರಪುರ ಬಿ.ಸುಬ್ರಹ್ಮಣ್ಯಂ, ಸಂಪಾದಕ ('ಸ್ವಯಂಪ್ರಕಾಶ' ಮಾಸಪತ್ರಿಕೆ), ಶ್ರೀಮಠ, ಹರಿಹರಪುರ
14. ಬಾ. ವೆಂ.ಶೇಷ, ಗೌ || ಕಾರ್ಯದರ್ಶಿ, ಅಬಲಾಶ್ರಮ, ಡಾ || ಡಿ.ವಿ.ಜಿ. ರಸ್ತೆ, ಬೆಂಗಳೂರು-4
15. ಬಿ.ಆರ್. ನಾಗರಾಜ್, ಕೌಶಿಕ ಸಂಕೇತಿ ಸಂಘ, ಜಯನಗರ, ಮೈಸೂರು
16. ಡಾ|| ಬಿ.ಎಸ್. ಪ್ರಣತಾರ್ತಿಹರನ್, ಕನ್ನಡ ಪ್ರಾಧ್ಯಾಪಕರು, ಹಾಸನ
17. ಪ್ರೊ||ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು.




# ಶತಮಾನಂ ಭವತಿ

*ಶತಮಾನೋತ್ಸವ ವಿಶೇಷಾಂಕ*

*ಉಭಯವೇದ ಪ್ರಯೋಗ ಪ್ರವೀಣ*

**ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿ ಅಭಿನಂದನ**

*ಸಂಪಾದಕ* : **ರಾಜಾರಾಮಮೂರ್ತಿ**

# ನಮ್ಮ ಮಾತು

*ಆತ್ಮೀಯ ಬಂಧುಗಳೇ,*

ಪಾಳ್ಯದ ವೇ. ಶ್ರೀ ವೆಂಕಟಕೃಷ್ಣ ಅವಧಾನಿಗಳ ಶತಮಾನೋತ್ಸವ ಶಾಂತಿಯ ಸುಸಂದರ್ಭದಲ್ಲಿ ಅವರನ್ನು ಕುರಿತಂತೆ *ಈ* ವಿಶೇಷ ಪುರವಣಿಯನ್ನು ಮೇ ೨೦೦೦ ಸಂಚಿಕೆಯೊಂದಿಗೆ ನೀಡುತ್ತಿದ್ದೇವೆ. ನೂರು ವರುಷಗಳ ಸಾರ್ಥಕ ಜೀವನ ನಡೆಸಿರುವ ಪೂಜ್ಯ ಅವಧಾನಿಗಳಿಗೆ *ಈ* ವಿಶೇಷ ಪುರವಣಿಯ ಮೂಲಕ ಪತ್ರಿಕೆ ತನ್ನ ನಮನಗಳನ್ನು ಸಲ್ಲಿಸುತ್ತಿದೆ.

ವ್ಯಕ್ತಿಯೊಬ್ಬನ ಜೀವನದಲ್ಲಿ ನೂರು ಸಂವತ್ಸರಗಳನ್ನು ಕಾಣುವುದು ಸಾಮಾನ್ಯ ಸುದ್ದಿಯಲ್ಲ. ಹೆಚ್ಚು ದಿನ ಬದುಕಿದಷ್ಟೂ ಹೆಚ್ಚು ಧರ್ಮಸಂಗ್ರಹವನ್ನು ಮಾಡಬಹುದಾದ್ದರಿಂದ, ದೇವರಲ್ಲಿ ಪ್ರಾರ್ಥಿಸುವಾಗಲೆಲ್ಲ ಮೊದಲಿಗೆ ಆಯುಷ್ಯವನ್ನು ಕೊಡುವಂತೆ ಬೇಡುತ್ತೇವೆ, ಅನಂತರ ಆರೋಗ್ಯ, ಕಡೆಗೆ ಐಶ್ವರ್ಯ!

ಆರೋಗ್ಯವಂತನಾಗಿದ್ದ ಮನುಷ್ಯ ಹೆಚ್ಚು ಕಾಲ ಬದುಕಬಲ್ಲ. ದೀರ್ಘಾಯುಷ್ಯಕ್ಕೆ ಆರೋಗ್ಯ ಯಾವಾಗಲೂ ಪೂರಕವೇ! ಶಾರೀರಿಕವಾಗಿಯೂ ಮಾನಸಿಕವಾಗಿಯೂ ವ್ಯಕ್ತಿ ಆರೋಗ್ಯವಾಗಿರಬೇಕಾದರೆ ಅರ್ಥ-ಕಾಮಗಳ ಹಿತ-ಮಿತ ಬಳಕೆಯ ಸಂಯಮಪೂರ್ಣ ಜೀವನದ ಅಗತ್ಯ ಇರುತ್ತದೆ. ಪೂಜ್ಯ ವೆಂಕಟಕೃಷ್ಣ ಅವಧಾನಿಗಳೂ ಆ ರೀತಿಯ ಸಂಯಮಪೂರ್ಣ ಗಾರ್ಹಸ್ಥ್ಯವನ್ನು ನಡೆಸಿರುವುದರಿಂದ ನೂರು ವಸಂತಗಳನ್ನು ಕಾಣುತ್ತಿದ್ದಾರೆ. ಅದು ಎಲ್ಲರಿಗೂ ಸುಲಭವಾಗಿ ಸಿಗುವ ಭಾಗ್ಯವಲ್ಲ.

ವ್ಯಕ್ತಿಯೊಬ್ಬ ಎಷ್ಟು ಕಾಲ ಬದುಕಿದ್ದಾನೆ ಎನ್ನುವುದರ ಜತೆಗೇ ಹೇಗೆ ಬದುಕಿದ್ದಾನೆ ಎಂಬುದೂ ಮುಖ್ಯವೇ ಆಗುತ್ತದೆ. ಪೂಜ್ಯ ಅವಧಾನಿಗಳು ಋಗ್ವೇದ-ಯಜುರ್ವೇದದಲ್ಲಿ ನಿಷ್ಣಾತರಾಗಿ, ಸಂಸ್ಕೃತ ಪಂಡಿತರಾಗಿ, ಉತ್ತಮ ಪುರೋಹಿತರಾಗಿ, ಪರೋಪಕಾರಿಗಳಾಗಿ ಸಾರ್ಥಕ ಬದುಕನ್ನು ನಡೆಸಿದ್ದಾರೆ. **ಇಂತಹವರು ನಮ್ಮ ಸಂಕೇತಿ ಮಂಡಳಿಯಲ್ಲಿ ಇವರೊಬ್ಬರೇ** ಎಂಬ ಕೀರ್ತಿಗೂ ಭಾಜನರಾಗಿದ್ದಾರೆ. ವಯೋವೃದ್ಧರೂ, ಜ್ಞಾನವೃದ್ಧರೂ, ಸಜ್ಜನರೂ ಆದ ಪೂಜ್ಯ ಅವಧಾನಿಗಳಿಗೆ *ಈ* ಸಂದರ್ಭದಲ್ಲಿ 'ಸಂಕೇತಿ ಸಂಗಮ' ಪತ್ರಿಕೆ - ಸಂಕೇತಿ ಮಹಾಜನತೆಯ ಪರವಾಗಿ ಶುಭ ಕೋರುತ್ತದೆ.

ಅವಧಾನಿಗಳನ್ನು ಕುರಿತ *ಈ* ಪುರವಣಿ ಬೆಳಕು ಕಾಣಲು ಸಂಪೂರ್ಣ ಸಹಕಾರವಿತ್ತ ಶ್ರೀವಿದ್ಯಾ ಪ್ರಕಾಶನ, ಮಲ್ಲೇಶ್ವರಂ, ಬೆಂಗಳೂರು; ಶ್ರೀ ಮತ್ತೂರು ಕೃಷ್ಣಮೂರ್ತಿ, ಬೆಂಗಳೂರು; ಹಾಗೂ ಶ್ರೀ ಟಿ.ಕೆ. ಸೂರ್ಯನಾರಾಯಣ ಶಾಸ್ತ್ರೀ, ಬೆಂಗಳೂರು ಅವರಿಗೆ ನಾವು ಆಭಾರಿಗಳಾಗಿದ್ದೇವೆ. ಅಗತ್ಯ ಮಾಹಿತಿಗಳನ್ನು ಒದಗಿಸಿ ಉಪಕರಿಸಿದ ಕೌಶಿಕ ಸಂಕೇತಿ ಸಂಘದ ಪದಾಧಿಕಾರಿಗಳಿಗೆ ಹಾಗೂ ಅವಧಾನಿಗಳ ಕುಟುಂಬವರ್ಗದವರಿಗೆ ಪತ್ರಿಕೆಯ ಕೃತಜ್ಞತೆಗಳು. ವಿಶೇಷ ಪುರವಣಿಗಾಗಿ ಜಾಹಿರಾತುಗಳನ್ನು ನೀಡಿದ ಬಂಧುಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

***ಸಂಪಾದಕ- ಪ್ರಕಾಶಕ***

# ೧. ಋಗ್ವೇದ ಸ್ವರೂಪನಿಗೆ ನಮೋ ನಮೋ

*ಮಾರ್ಕಂಡೇಯ ಅವಧಾನೀ*

**ಅಗ್ರತಃ ಚತುರೋ ವೇದಾಃ ಪೃಷ್ಠತಃ ಸಶರಂ ಧನುಃ |**
**ಇದಂ ಬ್ರಾಹ್ಮಂ ಇದಂ ಕ್ಷಾತ್ರಂ ಶಾಪಾದಪಿ ಶರಾದಪಿ ||**

ಧನುರ್ವೇದವಿದ ಮಹಾಬ್ರಾಹ್ಮಣ ಆಚಾರ್ಯ ದ್ರೋಣರ ಚಿತ್ರ ಇದು: ಮುಂಭಾಗದಲ್ಲಿ ೪ ವೇದಗಳು, ಹಿಂಭಾಗದಲ್ಲಿ ಬಾಣಸಹಿತ ಧನುಸ್ಸು - ಇತ್ತ ಬ್ರಹ್ಮತೇಜಸ್ಸು, ಅತ್ತ ಕ್ಷಾತ್ರ ಪೌರುಷ -ಶಾಪ ಕೊಡಬಲ್ಲೆ, ಬಾಣದಿಂದ ಕೊಚ್ಚಬಲ್ಲೆ -ಏನು ಮಾಡಲಿ? ಯಾವುದು ವಿಹಿತ, ಯಾವುದು ಬೇಕು ಅನ್ನುವಂತೆ. ನಿಮಗೆ ಋಗ್ವೇದ ಬೇಕೇ? ಯಜುರ್ವೇದವೇ? ಪೂರ್ವಪ್ರಯೋಗವೇ - ಮಹಾಶಾಂತಿಯೇ? ಪೌರಾಣಿಕವೇ, ವೇದೋಕ್ತವೇ ಏನು ಬೇಕು? ಯಾವುದು ಬೇಕು? ಹೀಗೆ ಕೇಳಬಲ್ಲ ಎದೆಗಾರಿಕೆ ಯಾರಿಗಿದೆ? ಒಬ್ಬರಿಗೆ ಮಾತ್ರ! ಶತಾಯುಷೀ ವೆಂಕಟಕೃಷ್ಣಾವಧಾನಿಗಳಿಗೆ. ಇವರೊಬ್ಬ ವ್ಯಕ್ತಿ ಅಲ್ಲ, ಶಕ್ತಿ. ಇದೊಂದು ವೇದನಿಧಿ, ಇದೊಂದು ಮಂತ್ರ ಭಂಡಾರವೇ ಸೈ. ಇದೊಂದು ಶಾಸ್ತ್ರಮಂಜೂಷ!

ಅವಧಾನಿಗಳಿಗೆ ನನ್ನನ್ನು ಕಂಡರೆ ಪುತ್ರವಾತ್ಸಲ್ಯ. ಅವರಿಗೆ ನಾನು ಚಿರಋಣಿ. ನನ್ನ ಮೊದಲ ಭೇಟಿ- ಅವರ ಅಳಿಯ ಹಾಗೂ ಸೋದರಳಿಯ ಬೊಂಬಾಯಿ ರಾಜೂನ ಉಪನಯನದಲ್ಲಿ. ಆಗ ನನಗೆ ಹದಿನೈದು ವರ್ಷ! ನಾನೇ ಉಪನಯನ ಮಾಡಿಸಿದೆ. ನಾನು ತಡವರಿಸದೆ ಹೇಳಿದ ಮಂತ್ರ - ಮಂತ್ರಾರ್ಥ, ಜಯಾದಿ ಕೇಳಿ ಹರ್ಷಿತರಾಗಿ ನನ್ನನ್ನು ಆಲಿಂಗಿಸಿದರು. ಅದು ನನಗೆ ಅವರು ತೊಡಿಸಿದ ವಜ್ರಕವಚ. ಅದೇ ರಾಜೂಗೆ ನಾನು ಅವರ ಕರಣಿಕರ ಪಾಠಶಾಲೆಯಲ್ಲಿ ವಿವಾಹವನ್ನೂ ಮಾಡಿಸಿದೆ. ಅಂದು ರಾತ್ರಿ ಶೇಷಹೋಮ ಮುಗಿಯಲು ಹನ್ನೆರಡು ಘಂಟೆ ಆಗಿ ನಮ್ಮೂರಿನ ಋತ್ವಿಜರೆಲ್ಲ ಮಲಗಲು ಹೋಗಿದ್ದರು. ನಾನೂ ಅವಧಾನಿಗಳೂ ಆ ರಾತ್ರಿಯನ್ನು ವೇದಜಿಜ್ಞಾಸೆಯಲ್ಲಿ ಕಳೆದೆವು. ನನಗೆ, ರಾಮನೊಡನೆ ಮಲಗಿದ್ದ ವಿಶ್ವಾಮಿತ್ರರ ಅನುಗ್ರಹದ ಅನುಭವವಾದದ್ದೂ ಅಂದೇ.

ಮತ್ತೆ ನನ್ನ- ಅವರ ಭೇಟಿ ಅವರ ಬೀಗಂದಿರು ಟಿ.ಕೃಷ್ಣಶಾಸ್ತ್ರಿಗಳ ಅರುವತ್ತನೇ ವರ್ಷದ ಶಾಂತಿಯಲ್ಲಿ ಹಾಗೂ ವೈಶ್ವದೇವ ಆರಂಭದಲ್ಲಿ. ಅವರು ಅಂದು 'ತಾಂಬೂಲ'ದಲ್ಲಿ ಋಗ್ವೇದ ಘನ ಹೇಳಿದ್ದರು - ಅವರ ತಮ್ಮಂದಿರೊಂದಿಗೆ. ನಾನು ರಾಜಾಶೀರ್ವಾದದಲ್ಲಿ (ಆಶೀರ್ವಾದ ಗದ್ಯದಲ್ಲಿ) ಅಂದು ನಡೆದದ್ದು ಎಲ್ಲವನ್ನೂ ಕಲ್ಪಿಸಿಕೊಂಡು, ಅಲ್ಲೇ ಆಗಲೇ ಹೇಳಿದೆ. ಅವಧಾನಿಗಳಿಗೆ ಆ ಸಭೆಯಲ್ಲಿ ಪುಟ್ಟ ಹುಡುಗನಾದ ನಾನು, ದಿಟ್ಟನಾಗಿ ಹೇಳಿದ್ದು ಬಹು ಸಂತೋಷವಾಗಿ, ಅವರ ಸೋದರಮಾವ, ಮಂತ್ರಮಂಜೂಷ ಪುಟ್ಟಶ್ಯಾಮ ಶಾಸ್ತ್ರಿಗಳಿಗೆ ಅಭಿಮಾನದಿಂದ ಬೆರಳು ಮಾಡಿ ತೋರಿಸಿದ್ದರು (ಅವರ ಸೋದರಮಾವ ನನಗೆ ಮಾತಾಮಹರೇ! ಅದು ಅವರಿಗೆ



**141.** *ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿಗಳು ಮತ್ತು ಶ್ರೀಮತಿ ಮಹಾಲಕ್ಷ್ಮಮ್ಮನವರು*



*142. ಶ್ರೀಮತಿ ಮಹಾಲಕ್ಷ್ಮಮ್ಮನವರು*

ತಿಳಿದಿತ್ತೋ ಇಲ್ಲವೋ ನಾನರಿಯೆ).

ಅವರ ಔದಾರ್ಯದ ಬಗ್ಗೆ ಒಂದು ಮಾತು ಹೇಳದಿರಲಾರೆ. ನಾನು ಹೊಟೇಲಿಗೆ ಹೋಗುತ್ತಿರಲಿಲ್ಲ. ಆಗ ರೇಷನ್ ಕಾಲ, ಎಷ್ಟು ಹಣ ಕೊಟ್ಟರೂ ಅಕ್ಕಿ, ಸೀಮೆಎಣ್ಣೆ, ಗೋಧಿ, ರವೆ, ಹಿಟ್ಟು ಸಿಕ್ಕುತ್ತಿರಲಿಲ್ಲ. ಅವರ ಬೀಗರ ತಮ್ಮ ಗಮಕಕೋವಿದ ಟಿ.ರಾಮಶಾಸ್ತ್ರಿಗಳಿಗೆ ಕಣ್ಣು ಅಪರೇಷನ್ ಆಗಬೇಕಾಗಿತ್ತು. ಅವರಿಗೆ ಡಯಾಬಿಟೀಸ್ ಇದ್ದುದರಿಂದ ಆಪರೇಷನ್‌ಗೆ ಎಂಟು-ಹತ್ತು ದಿನ ಕಾಯಬೇಕಾಯಿತು. ಆಗ ಅವಧಾನಿಗಳು, "ನಮ್ಮ ಮನೆಯಲ್ಲೇ ಇರಿ, ಏನೂ ಸಂಕೋಚ ಬೇಡ" ಅಂದರು. ಪುಣ್ಯಾತ್ಮ ಡಾ.ಕೃಷ್ಣಮೂರ್ತಿಗಳು ಉಚಿತವಾಗಿ ಆಪರೇಷನ್ ಮಾಡಿದರು. ಆದರೆ ಒಬ್ಬರ, ಒಂದು ಕಣ್ಣಿನ, ಒಂದು ದಿನದ ಆಪರೇಷನ್‌ಗೆ ಮೂರು ಜನ, ಹತ್ತು ದಿನ ಅವರ ಆತಿಥ್ಯದಲ್ಲಿ ಇರಬೇಕಾಯಿತು. ನಮಗೆ ಊರಿಂದ ಅಕ್ಕಿ ತರಲು ಸರ್ಕಾರದವರು ಅವಕಾಶ ಕೊಡುತ್ತಿರಲಿಲ್ಲ. ಪುಣ್ಯಾತ್ಮ ಹೇಗೆ ನಿಭಾಯಿಸಿದರೋ ದೇವರಿಗೇ ಗೊತ್ತು! ಶಾಸ್ತ್ರಿಗಳ ಕಣ್ಣು ಚೆನ್ನಾಯಿತು, ಮತ್ತೆ ನಾಡಿನಲ್ಲೆಲ್ಲ ಕಾವ್ಯ ಓದಿದರು ಅನ್ನಿ.

ಹೀಗೆ ಅವಧಾನಿಗಳ ಔದಾರ್ಯ, ವೈದುಷ್ಯ, ಪ್ರೀತಿ, ವಾತ್ಸಲ್ಯ ಎಷ್ಟು ಹೇಳಲಿ? ಇನ್ನೂ ಹತ್ತಾರು ಅಂಥ ಪ್ರಸಂಗಗಳು ನನ್ನನ್ನು 'ಹೇಳು' ಅಂತ ಬರುತ್ತಿವೆ: ಅವರ ಹಾಗೂ ಯಾದಾಳಂ ಸುಬ್ಬಯ್ಯ ಶ್ರೇಷ್ಠಿ ಅವರ ಪರಸ್ಪರ ಪ್ರೇಮ, ಅವರಿಗೆ ಇವರಲ್ಲಿದ್ದ ಗೌರವ, ನಾನು ವಿದ್ಯಾರ್ಥಿಯಾಗಿದ್ದಾಗ ಒಮ್ಮೆ ನಂಜನಗೂಡಿಗೆ ಬಂದಿದ್ದು, ರುದ್ರಹೋಮದಲ್ಲಿ ಭಾಗವಹಿಸಿದ್ದು ಇತ್ಯಾದಿ. ಎಲ್ಲಕ್ಕಿಂತ ಹೆಚ್ಚಾಗಿ *ಈ* ಇಪ್ಪತ್ತೊಂದನೇ ಶತಮಾನದಲ್ಲಿ ಅವರ ಶತಮಾನೋತ್ಸವದಲ್ಲಿ ಪಾಲ್ಗೊಳ್ಳುವ ಭಾಗ್ಯ ನಮ್ಮದಾಯಿತಲ್ಲ, ನಾವು ಧನ್ಯರು, ನಾವು ಭಾಗ್ಯಶಾಲಿಗಳು. ಅವರ ಅನುಗ್ರಹ ಸದಾ ನಮ್ಮ ಮೇಲಿರಲಿ.

## ೨. ಸಾರ್ಥಕ ಜೀವನ


***ಮತ್ತೂರು ಕೃಷ್ಣ ಮೂರ್ತಿ***

ಯಾರೇ ಆಗಲಿ ತಮ್ಮ ಪಾಲಿನ ಧರ್ಮ ಎಂದರೆ ಕರ್ತವ್ಯವನ್ನು ಕಟ್ಟುನಿಟ್ಟಾಗಿ ನಿರ್ವಹಿಸುತ್ತಾರೆಯೋ, ಅದು ಪರಹಿತಕ್ಕೂ ಆಗಿ, ತಮಗೂ ಸಮಾಧಾನ ಆಗುವಂತೆ ಇದ್ದರೆ ಅಂತಹವರು ಸಾರ್ಥಕ ಜೀವನವನ್ನು ನಡೆಸಿದಂತೆ ಆಗುತ್ತದೆ ಎಂಬುದು ಪುರಾತನ ಆರ್ಯೋಕ್ತಿ. ಪಾಳ್ಯ ವೆಂಕಟಕೃಷ್ಣ ಅವಧಾನಿಗಳು *ಈ* ಶ್ರೇಣಿಗೆ ಸೇರಿದವರು. ಪೌರೋಹಿತ್ಯದ ಮೂಲಕ ದೇವ-ಋಷಿ-ಪಿತೃಋಣವನ್ನು, ಸಮಾಜ ಋಣವನ್ನು ತೀರಿಸಬೇಕು ಎಂದು ಸಂಕಲ್ಪಿಸಿದರು. ವೇದಾಧ್ಯಯನ ಮಾಡಿ ಸಂಸ್ಕೃತ ಭಾಷೆಯನ್ನು ಕಲಿತು, ಅಗ್ನಿಹೋತ್ರವನ್ನು ಮಾಡುತ್ತ, ಷೋಡಶ ಸಂಸ್ಕಾರಗಳನ್ನು ಮಾಡಿಸುವ ವಿಧಾನವನ್ನು ಕಲಿತುಕೊಂಡರು. **ಕರಣಿಕರ ಪಾಠಶಾಲೆ** ಎಂಬ ಹೆಸರಿನ ಶಾಲೆಯನ್ನು ಬೆಳೆಸಿ, ವಿದ್ಯಾರ್ಥಿಗಳಿಗೆ ನಮ್ಮ ಸನಾತನ ಧರ್ಮದ ತಳಹದಿಯಾದ ವೇದವನ್ನು ಕಲಿಸಿದರು. ವಿವಾಹಿತರಾಗಿ ವಂಶವೃಕ್ಷವನ್ನು ಬೆಳೆಯಿಸಿದರು.

ನೂರಾರು-ಸಹಸ್ರಾರು ಮನೆಗಳಲ್ಲಿ ಪೌರೋಹಿತ್ಯ ನಡೆಸುವುದರ ಮೂಲಕ, ಧರ್ಮಕರ್ಮಗಳಲ್ಲಿ ಜಾಗೃತಿ ಮೂಡಿಸಿದರು. ಇಂದು ತಮ್ಮ ಸಾರ್ಥಕವೂ ಸಂಪೂರ್ಣವೂ ಆದ ೧೦೦ ವರ್ಷದ ಬಾಳುವೆಯನ್ನು, ತಮ್ಮ ಮಕ್ಕಳು ಮಮ್ಮಕ್ಕಳು, ಮರಿಮಕ್ಕಳಲ್ಲಿ ಕಂಡು ಸಂತಸ ಪಡುತ್ತಿದ್ದಾರೆ. ತಮ್ಮ ಸಾಧನೆಗೆ- ತಮ್ಮ ಕೈ

ಹಿಡಿದಂದಿನಿಂದಲೂ - ಸಂಪೂರ್ಣ ಸಹಕಾರ ನೀಡಿ ಸುಮಂಗಲಿಯಾಗಿ ಕಣ್ಣುಮುಚ್ಚಿದ ತಮ್ಮ ಸಹಧರ್ಮಿಣಿಯನ್ನು ನೆನೆನೆನೆದು, ವಿಯೋಗದ ಕಣ್ಣೀರಿನೊಂದಿಗೆ ಹರ್ಷದ ಕಣ್ಣೀರನ್ನೂ ಸುರಿಸುತ್ತಿದ್ದಾರೆ.

ನಮ್ಮ ಸಂಕೇತಿ ಜನಾಂಗದ ವರಪುತ್ರರಲ್ಲಿ ಒಬ್ಬರಾದ ವೇದಮೂರ್ತಿ ಶ್ರೀ ವೆಂಕಟಕೃಷ್ಣ ಅವಧಾನಿಗಳಿಗೆ ಸಾಷ್ಟಾಂಗ ಪ್ರಣಾಮಗಳು.



*143. ಶತಾಯುಷಿ ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿಗಳು*

## ೩. ಶತಾಯುಷಿಗಳೊಡನೆ ಒಂದು ಸಂಜೆ

*ಡಾ. ಕೆ.ಆರ್. ಶ್ರೀಕಂಠಯ್ಯ*

ಏಪ್ರಿಲ್ ತಿಂಗಳು ಹನ್ನೊಂದರಂದು ಸಂಜೆ ಕೌಶಿಕ ಸಂಕೇತಿ ಸಂಘದ ವತಿಯಿಂದ - ಅಧ್ಯಕ್ಷರಾದ ಪ್ರೊ. ವಿ.ಕೆ.ದೊರೆಸ್ವಾಮಿ, ಡಾ.ಎಚ್.ಕೃಷ್ಣಮೂರ್ತಿ, ಉಪಾಧ್ಯಕ್ಷರಾದ ಡಾ. ಕೆ.ಆರ್. ಶ್ರೀಕಂಠಯ್ಯ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಎಚ್.ಕೆ.ಕೇಶವನಾರಾಯಣ ಇವರುಗಳು ಪೂರ್ವಸಂದೇಶವಿಲ್ಲದೆ, ಬೆಂಗಳೂರು ಜಯನಗರ ಎಂಟನೇ ಬಡಾವಣೆಯಲ್ಲಿರುವ, ಪಾಳ್ಯದ ವೇ.ಬ್ರ.ಶ್ರೀ ವೆಂಕಟಕೃಷ್ಣ ಅವಧಾನಿಗಳನ್ನು ಭೇಟಿಯಾಗಲು ಹೋದೆವು. ಅವಧಾನಿಗಳು ತಮ್ಮ ಕೊಠಡಿಯಲ್ಲಿ ಮಲಗಿದ್ದರು. ಅವರ ಮಮ್ಮಗಳು ಕುಮಾರಿ ಚೈತ್ರ ಅವರನ್ನು ಹಜಾರಕ್ಕೆ ಕರೆತಂದಳು. ಬರುತ್ತಿದ್ದಂತೆಯೇ ನಮ್ಮಗಳನ್ನು ಸರಿಯಾಗಿ



*144. ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿಗಳು ಸಭೆಯನ್ನುದ್ದೇಶಿಸಿ ಮಾರ್ಗದರ್ಶನ ಮಾಡುತ್ತಿರುವುದು*

ಗುರುತಿಸಿ, ನಮ್ಮ ಆಗಮನಕ್ಕೆ ಸಂತೋಷ ವ್ಯಕ್ತಪಡಿಸಿದರು. ನಾವುಗಳು ನಮಸ್ಕಾರ ಮಾಡುವಾಗ್ಗೆ ಅಸ್ಖಲಿತ ವಾಣಿಯಲ್ಲಿ, **ಶತಮಾನಂ ಭವತಿ** ಇತ್ಯಾದಿಗಳಿಂದ ನಮ್ಮನ್ನು ಆಶೀರ್ವದಿಸಿದರು.

ಅವಧಾನಿಗಳ ಅನುಭವ, ಸ್ಮರಣಶಕ್ತಿ ಮತ್ತು ಪಾಂಡಿತ್ಯ ಅಸಾಧಾರಣ ವಾದದ್ದು. ಸ್ವಲ್ಪ ಹೊತ್ತು ನಾವುಗಳು ಅವರೊಡನೆ ಮಾತನಾಡಿದಾಗ, ಅವರು ಹೇಳಿದ ಕೆಲವು ನೆನಪುಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಅವಧಾನಿಗಳು ಜನಿಸಿದ್ದು ೧೯೦೫ ರಲ್ಲಿ ಹಾಸನ ಜಿಲ್ಲೆಯ ಪಾಳ್ಯಗ್ರಾಮದಲ್ಲಿ. ನಾಲ್ಕು ಜನ ಸಹೋದರರು ಮತ್ತು ಮೂವರು ಸಹೋದರಿಯರ ಪೈಕಿ ಇವರೇ ಹಿರಿಯರು. ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದನಂತರ ೧೯೧೨ರಲ್ಲಿ ಬೇಲೂರಿಗೆ ಬಂದು, ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸದ ಜತೆಗೆ, ಜೋಯಿಸರ ಬಳಿ ವೇದ, ಸಂಸ್ಕೃತಗಳನ್ನು ಅಭ್ಯಾಸ ಮಾಡಿದರು. ಅನಂತರ ಹತ್ತು ವರ್ಷಗಳು ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವೇದ - ಸಂಸ್ಕೃತಗಳ ಅಧ್ಯಯನ ನಡೆಯಿತು. ಪ್ರತಿಭಾವಂತರಾದ ಗುರುಗಳಿಂದ ಕಲಿತು ಪಾಂಡಿತ್ಯ ಪಡೆದರು. ೧೯೨೮ರಿಂದ ಐದು ವರ್ಷಗಳು ಚಿಕ್ಕಮಗಳೂರು ತಾಲ್ಲೋಕು ಕೂದವಳ್ಳಿಯಲ್ಲಿ ಅಧ್ಯಾಪನ ಮಾಡಿದರು. ೧೯೩೦ರಲ್ಲಿ ಇವರಿಗೆ ಸಂಸಾರದ ಹೊರೆ ಹೆಚ್ಚಾಯಿತು. ಇದರಿಂದಾಗಿ "೧೯೩೩ನೇ ಇಸ್ವಿ ಮಾರ್ಚಿ ಒಂದರಂದು ನಾನು ಬೆಂಗಳೂರಿಗೆ ಬಂದೆ" ಎನ್ನುತ್ತಾರೆ. ಅದೇ ಎರಡು ವರ್ಷಗಳ ಹಿಂದೆ ಮಾಗಡಿ ಕರಣಿಕರ ಪಾಠಶಾಲೆ ಪ್ರಾರಂಭವಾಗಿತ್ತು. ಅಲ್ಲಿ ಅಧ್ಯಾಪಕರಾಗಿ ಸೇರಿದರು. ಆಗ ಅವಧಾನಿಗಳಿಗೆ ಇಪ್ಪತ್ತೆಂಟರ ಪ್ರಾಯ. ಯಜುರ್ವೇದ ಪ್ರಯೋಗವನ್ನು ಸಹ ಆಗಲೇ ಅವಧಾನಿಗಳು ಅಭ್ಯಾಸ ಮಾಡಿದ್ದು. ಪಾಠಶಾಲೆಯ ಆವರಣದಲ್ಲಿಯೇ ಅವಧಾನಿಗಳ ವಾಸದ ಮನೆ. ೧೯೭೧ರವರೆಗೂ (ನಲವತ್ತೆಂಟು ವರ್ಷಗಳ ಕಾಲ) ಪಾಠಶಾಲೆಯಲ್ಲಿ ಅಧ್ಯಾಪನ ಮಾಡಿದರು. ಸಾವಿರಾರು ವಿದ್ಯಾರ್ಥಿಗಳು ಅವರ ಬಳಿ ವೇದ ಸಂಸ್ಕೃತಗಳನ್ನು ಅಧ್ಯಯನ ಮಾಡಿದ್ದಾರೆ.

೧೯೫೯-೬೦ರಲ್ಲಿ ಜಯನಗರ ಎಂಟನೇ ಬಡಾವಣೆಯಲ್ಲಿ ಹೌಸಿಂಗ್ ಬೋರ್ಡ್‌ನಿಂದ ಮನೆ ದೊರೆಯಿತು. ವಾಸವನ್ನು ಅಲ್ಲಿಗೆ ಬದಲಾಯಿಸಿದನಂತರ, ಪ್ರತಿದಿನ ಎರಡೂ ಹೊತ್ತೂ ಪಾಠಶಾಲೆಗೆ ನಡೆದೇ ಹೋಗಿ ಬರುತ್ತಿದ್ದರು. ಈಗಲೂ ತಮಗೆ ಸಹಾಯ ಮಾಡಿದವರನ್ನು ನೆನೆಯುವಾಗ ಅವಧಾನಿಗಳ ಕಂಠ ಗದ್ಗದಿತವಾಗುತ್ತದೆ. ತಮ್ಮ ಪುತ್ರಿಯರ ಮದುವೆಗಳಲ್ಲಿ ಮತ್ತು ಎಲ್ಲ ಸಂದರ್ಭಗಳಲ್ಲಿಯೂ ಅವರಿಗೆ ನೆರವು ನೀಡಿದ ಯಾದಾಳಂ ಕುಟುಂಬದವರ ಬಗ್ಗೆ ಅವರಿಗೆ ಅಪಾರ ಗೌರವ ಮತ್ತು ಕೃತಜ್ಞತೆ. ಅವರಿಗೆ ಸ್ವಂತ ಮನೆಯಾಗಲು ಸಹಾಯ ಮಾಡಿದ, ಹಿಂದೆ ರಾಜ್ಯದ ಮಂತ್ರಿಗಳಾಗಿದ್ದ ಎ.ಜಿ.ರಾಮಚಂದ್ರರಾಯರ ಅಳಿಯ ಚೀಫ್ ಇಂಜಿನಿಯರ್ ಆಗಿದ್ದ ಜೆ.ವಿ.ವೆಂಕಟರಾಂ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ವಿದ್ವಾನ್ ಹೆಚ್.ಎನ್. ರಂಗಸ್ವಾಮಿಗಳ ಸ್ನೇಹ, ಸಹಾಯ ಮತ್ತು ಔದಾರ್ಯವನ್ನು ಸ್ಮರಿಸುವಾಗ ಕಂಬನಿ ಮಿಡಿಯುತ್ತದೆ.

ಆಗಲೇ ಹೇಳಿದಂತೆ ಅವಧಾನಿಗಳ ಜ್ಞಾಪಕಶಕ್ತಿ ಅಸಾಧಾರಣವಾದುದು. ಈಗಲು ಸಹ ಅವರ ಹೇಳಿಕೆ ಮತ್ತು ನೆನಪುಗಳಲ್ಲಿ ಸ್ವಲ್ಪವೂ ಗೊಂದಲವಿಲ್ಲ. ೧೯೩೫ರಲ್ಲಿ ಡಾ.ಎಚ್.ಕೃಷ್ಣಮೂರ್ತಿಯವರ ತಾಯಿಯವರ ನಿಧನದನಂತರ, ಎಲ್ಲ ಶ್ರಾದ್ಧಗಳನ್ನೂ ಅವರೇ ನಡೆಸಿಕೊಟ್ಟಿದ್ದು ಅವರಿಗೆ ನೆನಪಿದೆ. ಡಾ.ಬಿ.ಕೆ.ನಾರಾಯಣರಾಯರು ನಿಧನರಾದದ್ದು ಆಷಾಢ ಬಹುಳ ಅಮಾವಾಸ್ಯೆ, ಮತ್ತು ನಾಚಾರಮ್ಮನವರು ನಿಧನರಾದದ್ದು ಚೈತ್ರ ಶುದ್ಧ ಸಪ್ತಮಿಯಂದು ಎಂದು ಜ್ಞಾಪಕದಿಂದಲೇ ಹೇಳುತ್ತಾರೆ. "ಕಳೆದ ವರ್ಷ ಯಾವುದೋ ಮದುವೆಯು ಪುರೋಹಿತರ ಅಭಾವದಿಂದ ನಿಲ್ಲಬೇಕಾದ ಪರಿಸ್ಥಿತಿ ಬಂದಾಗ ನಾನೇ ಪೌರೋಹಿತ್ಯ ಮಾಡಿದೆ" ಎಂದು ಹೆಮ್ಮೆಯಿಂದ ಹೇಳಿದರು. ಆಗಮ ರೀತಿಯಲ್ಲಿ ಪದ್ಮನಾಭನಗರದ ಶ್ರೀ ಲಕ್ಷ್ಮೀಕಾಂತಸ್ವಾಮಿಯ ಪ್ರತಿಷ್ಠೆ, ಸುಬ್ರಹ್ಮಣ್ಯಪುರದಲ್ಲಿ ಶ್ರೀವಲ್ಲೀ ದೇವಸೇನಾ ಸುಬ್ರಹ್ಮಣ್ಯ ಸ್ವಾಮಿಯವರ ಪ್ರತಿಷ್ಠೆ, ಮಲ್ಲಿಪಟ್ಟಣದ ಉಲುಮೇಶ್ವರ ಪ್ರತಿಷ್ಠಾಪನೆ, ಅನೇಕ ರಥೋತ್ಸವಾದಿಗಳನ್ನು ಆಗಮರೀತಿಯಲ್ಲಿ ನಡೆಸಿಕೊಟ್ಟಿದ್ದು, ಇವುಗಳನ್ನು ಸಮಾಧಾನದಿಂದ ಜ್ಞಾಪಿಸಿಕೊಳ್ಳುತ್ತಾರೆ.

ಅವಧಾನಿಗಳದ್ದು ಸುಖೀ ಕುಟುಂಬ. ಅವರಿಗೆ ಇಬ್ಬರು ಗಂಡುಮಕ್ಕಳು ಮತ್ತು ಐದು ಜನ ಹೆಣ್ಣುಮಕ್ಕಳು. ಎಲ್ಲರಿಗೂ ಮದುವೆಯಾಗಿ ಸುಖ ಸಂಸಾರ ನಡೆಸುತ್ತಿದ್ದಾರೆ. ಸುಮಾರು ಹದಿನೈದು ಮಮ್ಮಕ್ಕಳೂ ಅನೇಕ ಮರಿಮಕ್ಕಳೂ ಇದ್ದಾರೆ. ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ ಅವರ ಧರ್ಮಪತ್ನಿ ಮಹಾಲಕ್ಷ್ಮಮ್ಮನವರು ನಿಧನರಾದರು. ಆಗ, ಡಾ.ಕೃಷ್ಣಮೂರ್ತಿಯವರ ಸಲಹೆಯಂತೆ ಅವರ ನೇತ್ರಗಳನ್ನು ದಾನಮಾಡಲು ಅವಧಾನಿಗಳು ಒಪ್ಪಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಅವಧಾನಿಗಳು ತಪೋನಿಷ್ಠರು. ಎಷ್ಟೇ ಕೆಲಸಗಳಿದ್ದಾಗ್ಯೂ ಅವರ ನಿತ್ಯಕರ್ಮಗಳನ್ನೂ, ರುದ್ರಪಾರಾಯಣಗಳನ್ನೂ ತಪ್ಪದೇ ನಡೆಸಿಕೊಂಡು ಬರುತ್ತಿದ್ದಾರೆ. ಅವರು ಮಾಡುವ ಮತ್ತು ಮಾಡಿಸುವ ಕೆಲಸಗಳಲ್ಲಿ ಅವರಿಗೆ ಅಪಾರ ಶ್ರದ್ಧೆ. ಅತ್ಯಂತ ಸ್ವಾಭಿಮಾನಿಗಳು.

ಯಾವುದಕ್ಕೂ ಸಹ ಅವಲಂಬನೆಯಾಗಲೀ, ಬೇರೆಯವರಿಗೆ ಹೊರೆಯಾಗುವುದಾಗಲೀ ಅವರಿಗೆ ಸಲ್ಲದು. ಸ್ವಂತ ಮಕ್ಕಳೊಡನೆಯು ಸಹ ಇದೇ ಮನೋಭಾವ. ಯಾವುದೇ ಸಮಯದಲ್ಲಿಯೂ ಅವರು ತಾಳ್ಮೆ ಕಳೆದುಕೊಂಡವರಲ್ಲ. ಅವರ ಸಮಾಜಸೇವೆ ಅನುಕರಣೀಯವಾದುದು. ಸಾವಿರಾರು ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಿಸುವುದರ ಜತೆಗೆ ಬಡವ - ಬಲ್ಲಿದ ಭೇದವಿಲ್ಲದೆ ನಮ್ಮ ಸಮಾಜದ ಎಲ್ಲ ವರ್ಗದವರಿಗೂ ಪೌರೋಹಿತ್ಯ ನಡೆಸಿಕೊಟ್ಟಿದ್ದಾರೆ. ಧರ್ಮಸೂಕ್ಷ್ಮಗಳಲ್ಲಿ, ಸಮಾಜದ ಪದ್ಧತಿಗಳಲ್ಲಿ ಯಾವುದೇ ಸಮಸ್ಯೆ ಬಂದರು ಸಹ ಶಾಸ್ತ್ರ ಸಮ್ಮತವಾಗುವಂತೆ ಅದನ್ನು ಪರಿಹರಿಸಿಕೊಟ್ಟಿದ್ದಾರೆ.

ಅವಧಾನಿಗಳಿಗೆ ಕೌಶಿಕ ಸಂಕೇತಿ ಸಂಘದ ಬಗ್ಗೆ ಅಪಾರ ಅಭಿಮಾನ. ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ತುಂಬ ಮೆಚ್ಚುಗೆ. ವರ್ಷೇ ವರ್ಷೇ ಹಣಸಂಗ್ರಹಕ್ಕಾಗಿ ಹೋದಾಗ, ಅವರ ಮಕ್ಕಳು ಕೊಡುವ ಸಹಾಯಧನದ ಜತೆಗೆ, ತಮ್ಮದೂ ಸ್ವಲ್ಪ ದೇಣಿಗೆ ಕೊಟ್ಟರೇ ಅವರಿಗೆ ಸಮಾಧಾನ. ಎರಡು ವರ್ಷಗಳ ಹಿಂದೆ, ಹಾಸನದ ಕೌಶಿಕ ಸಂಕೇತಿ ವಿದ್ಯಾರ್ಥಿನಿಲಯಗಳ ಬೆಳ್ಳಿ ಮಹೋತ್ಸವ ಸಂದರ್ಭದಲ್ಲಿ ಸಂಘವು ಅವರಿಗೆ ಶಾಲುಹೊದಿಸಿ ಗೌರವಿಸಿ ಸಮಾಜದ ಕೃತಜ್ಞತೆಯನ್ನು ವ್ಯಕ್ತಪಡಿಸಿತು.


145. ಪೂಜಾನಿರತ ವೇ. ಬ್ರ. ಶ್ರೀ ವೆಂಕಟಕೃಷ್ಣಾವಧಾನಿಗಳು (೮೦)

ಪರೋಪಕಾರಿಯಾಗಿ ಸಾರ್ಥಕ ಜೀವನ ನಡೆಸಿದೆನೆಂಬುದೇ ಅವಧಾನಿಗಳಿಗಿರುವ ದೊಡ್ಡ ತೃಪ್ತಿ. ಅವರ ಜೀವನವು

**ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ**
**ಗ್ರಂಥಕೋಟಿಭಿಃ |**
**ಪರೋಪಕಾರಃ ಪುಣ್ಯಾಯ ಪಾಪಾಯ**
**ಪರಪೀಡನಮ್ ||**

ಎಂಬ ಉಕ್ತಿಗೆ ಅನುಗುಣವಾಗಿದೆ.

ಇಂತಹ ಮಹನೀಯರ ಜತೆ ಸ್ವಲ್ಪ ವೇಳೆ ಕಳೆದದ್ದೇ, ನಮ್ಮ ಪುಣ್ಯವಿಶೇಷವೆಂಬ ಧನ್ಯತಾ ಭಾವನೆ ನಮ್ಮಲ್ಲಿ ಮೂಡಿತು.

## ೪. ಪಾಳ್ಯದ ವೆಂಕಟಕೃಷ್ಣ ಅವಧಾನಿಗಳು - ನಾ ಕಂಡಂತೆ

*ಡಾ. ಎಚ್.ಕೃಷ್ಣಮೂರ್ತಿ*

ಪಾಳ್ಯದ ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿಗಳು ನಮ್ಮಲ್ಲಿ ಸಾಧಾರಣವಾಗಿ ಪಾಳ್ಯದ ಶಾಸ್ತ್ರಿಗಳೆಂದೇ ಪ್ರಸಿದ್ಧಿ. ನನ್ನ ಮತ್ತು ಅವರ ಪರಿಚಯ ಸುಮಾರು ಅರುವತ್ತು ವರ್ಷಗಳಿಗೂ ಮೀರಿದ್ದು. ಮೂವತ್ತರ ದಶಕದಲ್ಲಿ ಇವರು ಬೆಂಗಳೂರಿಗೆ ಬಂದು ನೆಲಸಿದರು. ಲಾಲ್‌ಬಾಗ್ ರಸ್ತೆಯಲ್ಲಿ ಟಿ.ಎಸ್. ನಾರಾಯಣರಾಯರ ಮನೆಯ ಹಿಂಬದಿಯ ಮನೆಯಲ್ಲಿ ಸ್ವಲ್ಪ ವರ್ಷಗಳು ಬಾಡಿಗೆಗೆ ಇದ್ದರು. ಮನೆ ಬಾಡಿಗೆ ನೆಪಮಾತ್ರ. ನಾರಾಯಣರಾಯರ ತಂದೆ ತಿಪ್ಪೂರು ಸುಬ್ಬರಾಯರಿಗೆ ಅವರ ಪೌರೋಹಿತ್ಯ ಅಚ್ಚುಮೆಚ್ಚು. ಕೆಲವು ವರ್ಷಗಳನಂತರ ಅವರು ಮನೆಯನ್ನು ಮಾಗಡಿ ಕರಣಿಕರ ಪಾಠಶಾಲೆಯ ಆವರಣಕ್ಕೆ ಬದಲಾಯಿಸಿದರು. ಆಗಿನ ಕಾಲದಲ್ಲಿ, ಅವರು ಮತ್ತು ಅವರ ಶ್ರೀಮತಿಯವರಾದ ಮಹಾಲಕ್ಷ್ಮಮ್ಮ ಅವರು (ವಿದ್ವಾನ್ ರಾಮೇಶ್ವರ ಅವಧಾನಿಗಳ ಸಹೋದರಿ) ಲಾಲ್‌ಬಾಗ್




*146. ಸುನೀಲ್‌ಗೆ ಉಪನಯನ : ಅಜ್ಜನ ಮಾರ್ಗದರ್ಶನ*

ಕಡೆ ಜತೆಯಾಗಿ ವಾಕಿಂಗ್ ಹೋಗುವುದನ್ನು ನೋಡುವುದೇ ಒಂದು ಸೊಗಸು.

ಹಂದನಹಾಲಿನ ಶ್ರೀನಿವಾಸ ಶಾಸ್ತ್ರಿಗಳು ನಮ್ಮ ಕುಲಪುರೋಹಿತರಾಗಿದ್ದರು. ಸುಮಾರು ೧೯೪೫ರಲ್ಲಿ ಅವರು ನಿಧನರಾದ ಅನಂತರ ನನ್ನ ಮತ್ತು ಅವಧಾನಿಗಳ ಸಂಬಂಧ ಹೆಚ್ಚಾಯಿತು. ಅಂದಿನಿಂದ ನಮ್ಮ ಮನೆಯ ಎಲ್ಲ ಕಾರ್ಯಗಳಿಗೂ ಅವಧಾನಿಗಳದ್ದೇ ಪೌರೋಹಿತ್ಯ.

ನನ್ನ ಹಿರಿಯಮಗ ಚಿ. ರಾಮಚಂದ್ರಮೂರ್ತಿಯ ಉಪನಯನವು, ಅವಧಾನಿಗಳು ನಮ್ಮಲ್ಲಿ ನಡೆಸಿಕೊಟ್ಟ ಮೊದಲ ಶುಭಕಾರ್ಯವೆಂದು ನನ್ನ ನೆನಪು. ಮುಂಜಿ ನಡೆದ ಎರಡನೆಯ ದಿನ ಸಂಜೆ ಅವಧಾನಿಗಳು ನಮ್ಮ ಮನೆಗೆ ಅಯಾಚಿತ್ ಆಗಮಿಸಿದರು. ನಾನು ಮಗನಿಗೆ ಸಾಯಂ ಸಂಧ್ಯಾವಂದನೆ ಮಾಡಿಸುತ್ತಿದ್ದೆ. ಅದು ಪೂರ್ಣವಾಗುವವರೆಗೂ ಅಲ್ಲಿಯೇ ಗಮನಿಸುತ್ತ ಕುಳಿತರು. ಆನಂತರ "ನಾನು ನಿಮ್ಮ ಮಗನಿಗೆ ಸಂಧ್ಯಾವಂದನೆ ಹೇಳಿಕೊಡಲು ನೀವು ತಿಳಿಸಲಿಲ್ಲವಲ್ಲ ಎಂಬ ಉದ್ದೇಶದಿಂದ ಇಲ್ಲಿಗೆ ಬಂದೆ. ನೀವು ಮಾಡಿಸುತ್ತಿರುವುದು ಸರಿಯಾಗಿದೆ. ತಪ್ಪದೇ ಮುಂದುವರಿಸಿ" ಎಂದು ಹೇಳಿದರು. ಅವರು ಮಾಡುತ್ತಿದ್ದ ಕೆಲಸಗಳಲ್ಲಿ ಅವರಿಗಿದ್ದ ಆಸಕ್ತಿ, ಶ್ರದ್ಧೆ ಮತ್ತು 'ಅವರ ಗೃಹಸ್ಥರ' ಬಗ್ಗೆ ಅವರಿಗಿದ್ದ ಕಾಳಜಿ ಹೀಗಿತ್ತು. ಅದಾದನಂತರ ನಮ್ಮಲ್ಲಿ ನಡೆದ ಎಲ್ಲ ಕಾರ್ಯಗಳನ್ನೂ ಬಹು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಈಗ ಎರಡು ವರ್ಷಗಳ ಹಿಂದೆ ನನ್ನ ಚಿಕ್ಕ ಮಮ್ಮಗ ಚಿ. ವಿನಯನ ಮದುವೆಯಲ್ಲಿಯೂ ಪಾಲ್ಗೊಂಡು, ತಮ್ಮ ಶಿಷ್ಯನ ಪೌರೋಹಿತ್ಯಕ್ಕೆ ಮಾರ್ಗದರ್ಶನವಮಾಡಿ ಎಲ್ಲರನ್ನೂ ಆಶೀರ್ವದಿಸಿದರು. ವಯೋಧರ್ಮದಿಂದ ದೇಹದಲ್ಲಿ ಶಕ್ತಿ ಕಡಮೆಯಾದರು ಸಹ "ಯಾವ ಕಾರಣಕ್ಕೂ ಡಾ.ಕೃಷ್ಣಮೂರ್ತಿಗಳ ಮನೆಯ ಕೆಲಸವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ" ಎಂದು, ಆಗ್ರಹ ಪಡಿಸುತ್ತಿದ್ದ ಮನೆಯವರಿಗೆ ಹೇಳಿ, ಬರುತ್ತಿದ್ದರು. ನಮ್ಮಗಳ ಮೇಲೆ ಶಾಸ್ತ್ರಿಗಳಿಗಿದ್ದ ಅಭಿಮಾನಕ್ಕೆ ಇದೇ ಪ್ರತ್ಯಕ್ಷ ಸಾಕ್ಷಿ.

ಅವಧಾನಿಗಳು ಋಗ್ವೇದ ಪಾರಂಗತರಾದರು ಸಹ, ಯಜುರ್ವೇದ ಪ್ರಯೋಗಗಳನ್ನೂ ಸಾಂಗವಾಗಿ ಕಲಿತಿದ್ದರು. ಪ್ರಯೋಗದಲ್ಲಿ ಬಹಳ ಅಚ್ಚುಕಟ್ಟು. ಯಾವುದೇ ಮಂತ್ರಲೋಪಕ್ಕೆ ಅವಕಾಶವಿಲ್ಲ. ಕಾಲಕ್ಕೆ ಸರಿಯಾಗಿ ಬರುತ್ತಿದ್ದರು. ಮುಹೂರ್ತಗಳನ್ನು ಆಯಾಕಾಲಕ್ಕೆ ಸರಿಯಾಗಿ ನಡೆಸಿಕೊಡುತ್ತಿದ್ದರು. ಪ್ರಯೋಗದ ಜತೆಗೆ ಅನೂಚಾನವಾಗಿ ಬಂದಿರುವ ಪದ್ಧತಿಗಳೂ,



*147. ಬ್ರಹ್ಮ ಯಜ್ಞದ ಸಮಯ*

ಧರ್ಮಸೂಕ್ಷ್ಮಗಳೂ ಅವರಿಗೆ ಕರತಲಾಮಲಕ. ಬ್ರಾಹ್ಮಣಧರ್ಮದಲ್ಲಿ ಅಚಲ ನಂಬಿಕೆ, ಪುರೋಹಿತನಿಗೆ ಇರಬೇಕಾದ ಕರ್ತವ್ಯನಿಷ್ಠೆ, ಅವರಿಗೆ ಮಾರ್ಗದರ್ಶಿಗಳಾಗಿದ್ದವು. ಅವರ ನಡವಳಿಕೆ **ಪುರೋಹಿತ** ಎಂಬ ಪದದ ಅನ್ವರ್ಥವಾಗಿತ್ತು.

ಈಗ ಅವಧಾನಿಗಳಿಗೆ ಶತಮಾನದ ಅಂಚಿನ ಪೂರ್ಣವಯಸ್ಸು. ದೇಹ ಕೃಶವಾಗಿದ್ದರೂ ಅವರ ತಂದೆತಾಯಿಗಳ ಶ್ರಾದ್ಧಗಳನ್ನು ಸ್ವಯಂ ಪೌರೋಹಿತ್ಯದಲ್ಲಿ ಸಾಂಗವಾಗಿ ನಡೆಸುತ್ತಾರೆ - ಹಿರಣ್ಯಶ್ರಾದ್ಧ ಅವರಿಗೆ ಇನ್ನೂ ಒಪ್ಪಿಗೆ ಇಲ್ಲ; ಕೈಲಾಗುವವರೆಗೂ ಹೀಗೆಯೇ ನಡೆಸಬೇಕೆಂಬುದು ಅವರ ಧೋರಣೆ. ಅವಧಾನಿಗಳು ಕಾಯೇನ-ವಾಚಾ-ಮನಸಾ ನಿಷ್ಠಾವಂತರು. ಅವರ ಜೀವನದ ಆದರ್ಶಗಳು- ಬ್ರಾಹ್ಮಣವರ್ಗಕ್ಕೆ, ವೈದಿಕ ಸಮೂಹಕ್ಕೆ ಮತ್ತು ಇಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾದ ದಾರಿದೀಪಗಳಾಗಿವೆ.

## ೫. ಮಾರ್ಗದರ್ಶೀ ಮಹರ್ಷಿಃ

*ರಾಮೇಶ್ವರಾವಧಾನೀ*

'ಚಂಪೂರಾಮಾಯಣ'ವನ್ನು ಬರೆದಿರುವ 'ಭೋಜರಾಜ'ನು ಆದಿಕವಿ ವಾಲ್ಮೀಕಿ ಮುನಿಗಳನ್ನು 'ಮಧುಮಯಫಣಿತೀನಾಂ (ಕವೀನಾಂ) ಮಾರ್ಗದರ್ಶೀ' 'ಕವಿಗಳಿಗೆ ದಾರಿದೀಪ'ವೆಂದು ವರ್ಣಿಸಿರುತ್ತಾನೆ. ವಾಲ್ಮೀಕಿಗಳು ಕವಿಗಳಿಗೆ ಮಾತ್ರವಲ್ಲ; ಲೋಕಕ್ಕೇ ಮಾರ್ಗದರ್ಶಿಗಳು. ಹಾಗೆಯೇ ಆದರ್ಶಜೀವನವನ್ನು ನಡೆಸುತ್ತಿರುವ ಮಾನ್ಯ ಶ್ರೀ ವೆಂಕಟಕೃಷ್ಣ ಅವಧಾನಿಗಳ ಬಗೆಗೆ ಕೆಲವು ವಿಷಯಗಳನ್ನು ಸಹೃದಯರ ಮುಂದಿಡುತ್ತೇನೆ.


### ಜನ್ಮಸ್ಥಳ

ಪಾಳ್ಯವು ಮಾನ್ಯರ ಜನ್ಮಸ್ಥಳ. ಈ ಗ್ರಾಮವು ಹಾಸನ-ಸಕಲೇಶಪುರ ರಸ್ತೆಯ ಮಧ್ಯದಲ್ಲಿದೆ. ಪಕ್ಕದಲ್ಲೇ ಒಂದು ಹಳ್ಳ. ಅದಕ್ಕೆ ಸಣ್ಣ ಅಡ್ಡಗಟ್ಟೆ. ಸುತ್ತಲೂ ಬತ್ತದ ಗದ್ದೆಗಳು. ಸ್ವಲ್ಪ ದೂರದಲ್ಲಿ ಕಾಫಿ ತೋಟಗಳು. ಊರ ಮುಂದೆ ಲಕ್ಷ್ಮೀಜನಾರ್ದನ ದೇವಸ್ಥಾನ. ಮುಖ್ಯರಸ್ತೆಯಿಂದ ಸುಮಾರು ಒಂದು ಮೈಲು ದೂರದಲ್ಲಿ ಈ ಗ್ರಾಮವಿದೆ. ರಸ್ತೆಯ ಪಕ್ಕದಲ್ಲಿ ಬಂಗಲೆಯೆಂದು ಹೆಸರಾಗಿರುವ ಗ್ರಾಮದ ಭಾಗವಿದೆ. ಇಲ್ಲೇ ಅಂಚೆ ಕಛೇರಿಯಿದೆ. ಇದು ನಾನು ಸುಮಾರು ಎಪ್ಪತ್ತೈದು ವರ್ಷಗಳ ಹಿಂದೆ ಕಂಡ ಊರಿನ ಚಿತ್ರ. ಈಗಲೂ ಹಾಗೆಯೇ ಇರಬಹುದು. ಬ್ರಾಹ್ಮಣರ ವಾಸಕ್ಕಾಗಿಯೇ ಹೇಳಿಮಾಡಿಸಿದಂತೆ ಇರುವ ಗ್ರಾಮ. ಇಲ್ಲಿ ಸಂಕೇತಿಗಳು, ಕರ್ನಾಟಕರು, ಮುಲುಕು ನಾಡಿನವರು ಹೀಗೆ ಬಗೆಬಗೆಯ ಬ್ರಾಹ್ಮಣರು ಒಂದೇ ಗುಂಪಿನವರಂತೆ ವಾಸವಾಗಿದ್ದಾರೆ.



*148. ಸುನೀಲ್ ವಿವಾಹ : ಹೋಮ : ಮೇಧಾವೀಧಾರಣ*

ಸಂಕೇತಿಗಳು ಹೆಚ್ಚಾಗಿ ವಾಸವಾಗಿರುವ ಗ್ರಾಮಗಳಿಂದ ಸ್ವಲ್ಪ ದೂರದಲ್ಲಿರುವ ಈ ಗ್ರಾಮಕ್ಕೆ ಯಾವಾಗ ಬಂದು ನೆಲಸಿದರೋ ತಿಳಿಯದು. ಸಂಕೇತಿಗಳಲ್ಲಿ ಕಡಮೆಯಾಗಿರುವ ಋಗ್ವೇದದವರೂ, ಪೂಮಗಾಮೆಯ ದೀಕ್ಷಿತರ ಯಾಗಗಳಲ್ಲಿ ಋತ್ವಿಜರಾಗಿದ್ದವರೂ, ಈಗ ಸುಮಾರು ತೊಂಬತ್ತಾರು ವರ್ಷಗಳ ಹಿಂದೆ ಇಲ್ಲಿಯ ಸಂಕೇತಿಗಳಲ್ಲಿ ಒಬ್ಬರಾಗಿದ್ದವರೂ ಆದ ಮಾನ್ಯ ಶ್ರೀ ಕಾಶೀಪತ್ಯವಧಾನಿಗಳ ಹಿರಿಯ ಮಗನಾಗಿ ಶ್ರೀ ವೆಂಕಟಕೃಷ್ಣಾವಧಾನಿಗಳು ಹುಟ್ಟಿದರು. ಅವರಿಗೆ ಮೂವರು ತಮ್ಮಂದಿರು, ಮೂವರು ತಂಗಿಯರು.



149. ಅವಧಾನಿಗಳಿಗೆ ೮೦ ವರ್ಷ ತುಂಬಿದಾಗ ಶಾಂತಿ : ಮಂಗಳಸ್ನಾನ

### ವಿದ್ಯಾಭ್ಯಾಸ

ಮೈಸೂರಿನ ಮಹಾರಾಜ ಪಾಠಶಾಲೆಯಲ್ಲಿ ಶ್ರೀಯುತರ ವಿದ್ಯಾಭ್ಯಾಸವಾಯಿತು. ಋಗ್ವೇದ ಕ್ರಮಾಂತ, ಸ್ಮಾರ್ತ ವಿದ್ವತ್ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ನಿತ್ಯಕರ್ಮಗಳಿಗೆ ಆವಶ್ಯಕವಾದ ಪ್ರಯೋಗ, ಜ್ಯೋತಿಷ್ಯ ಮುಂತಾದುವುಗಳನ್ನೂ ಅಭ್ಯಾಸ ಮಾಡಿದರು.

### ವಿವಾಹ

ಅವರ ಹದಿನಾರನೆಯ ವಯಸ್ಸಿನಲ್ಲಿ ಶ್ರೀಮತಿ ಮಹಾಲಕ್ಷ್ಮಿ (ನಮ್ಮ ಅಕ್ಕ)ಯವರನ್ನು ಮದುವೆಯಾದರು. ಅನಂತರ ಮಾನ್ಯ ಅವಧಾನಿಗಳಿಗೆ ಪಿತೃವಿಯೋಗವು ಸಂಭವಿಸಿತು. ಬಳಿಕ ಸಂಸಾರಭಾರವನ್ನು ಹೊರಬೇಕಾಯಿತು. ಊರಿನಲ್ಲಿ ಸ್ವಲ್ಪ ಭೂಮಿಯಿತ್ತು. ಪೌರೋಹಿತ್ಯವೂ ಬೆಂಬಲವಾಗಿತ್ತು. ಕೆಲವು ದಿನ ಜೀವನವು ಹೀಗೇ ಕಳೆಯಿತು.


### ಉಪಾಧ್ಯಾಯರಾಗಿ ಸೇವೆ

ಮೊದಲು ಕೆಲವು ಕಾಲ ಹೊಳಲ್ಕೆರೆಯಲ್ಲಿ ಉಪಾಧ್ಯಾಯರಾಗಿದ್ದರು. ಅನಂತರ ಚಿಕ್ಕಮಗಳೂರಿನ ಹತ್ತಿರ ಕೂದವಳ್ಳಿ ಪಾಠಶಾಲೆಯಲ್ಲಿ ಉಪಾಧ್ಯಾಯರಾದರು. ನಾನೂ ಅಲ್ಲಿ ಕೆಲವು ಕಾಲ ಜತೆಯಲ್ಲಿದ್ದೆ. ಅಲ್ಲಿ ಸಂಸ್ಕೃತ ವೇದಗಳನ್ನು ಬೋಧಿಸುತ್ತಿದ್ದರು. ಕಾಫಿ ಪ್ಲಾಂಟರುಗಳೂ ಇದ್ದ ಆ ಊರಿನಲ್ಲಿ ಉಪಾಧ್ಯಾಯರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು.

ಬೆಂಗಳೂರಿನಲ್ಲಿ ಶ್ರೀ ಮಾಗಡಿ ಕೃಷ್ಣಮೂರ್ತಿರಾಯರು ೧೯೩೦ರಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸಿದರು. ಅಲ್ಲಿ ಋಗ್ವೇದದ ಉಪಾಧ್ಯಾಯರಾಗಿದ್ದ ಶ್ರೀ ರಾಮಚಂದ್ರ ಭಟ್ಟರು ತಮ್ಮ ಊರಿಗೆ ಹೋದರು. ೧೯೩೨ರಲ್ಲಿ ಕರಣಿಕರ ಪಾಠಶಾಲೆಯಲ್ಲಿ ಮಾನ್ಯ ಅವಧಾನಿಗಳು ಋಗ್ವೇದದ ಅಧ್ಯಾಪಕರಾಗಿ ಸೇರಿದರು. ೧೯೩೩ರಲ್ಲಿ ನನ್ನನ್ನೂ ಪಾಠಶಾಲೆಗೆ ಕರೆದುಕೊಂಡು ಹೋದರು. ಪಾಠಶಾಲೆಯಲ್ಲಿ ದೀರ್ಘಕಾಲ ವಿದ್ಯಾಸೇವೆಯನ್ನು ಮಾಡಿದರು. ಇನ್ನೂ ಮನೆಯಲ್ಲಿ ಪಾಠ ಹೇಳುತ್ತಲೇ ಇದ್ದಾರೆ.

### ಸಮಾಜಸೇವೆ : ವೃತ್ತಿ, ಪ್ರವೃತ್ತಿ

ಮಾಗಡಿ ಕರಣಿಕ ಕೃಷ್ಣಮೂರ್ತಿರಾಯರು- ಪುರೋಹಿತರ ಅಭಾವದಿಂದ ಸಮಾಜಕ್ಕೆ ಆಗುತ್ತಿರುವ ತೊಂದರೆಯನ್ನು ಗಮನಿಸಿ, ಅದರ ಪರಿಹಾರಕ್ಕಾಗಿ ಪಾಠಶಾಲೆಯನ್ನು ಸ್ಥಾಪಿಸಿದರು. ಉತ್ತಮ ಪುರೋಹಿತರಿಗೆ ಆವಶ್ಯಕವಾದ ಪಠ್ಯಕ್ರಮವನ್ನು ಅಲ್ಲಿ ಇಡಲಾಗಿತ್ತು. ಇಂತಹ ಪಾಠಶಾಲೆಯಲ್ಲಿ ಸುಮಾರು ಐವತ್ತು ವರ್ಷಗಳ ಕಾಲ



150. ಮಂಗಳಸ್ನಾನದ ಇನ್ನೊಂದು ಕ್ಷಣ

ಶಿಷ್ಯರಿಗೆ ಪಾಠಹೇಳಿ, ಮಾನ್ಯ ಅವಧಾನಿಗಳು ಎಣಿಕೆಯಿಲ್ಲದಷ್ಟು ಪುರೋಹಿತರು ಶಾಲೆಯಿಂದ ಹೊರಬೀಳುವಂತೆ ಮಾಡಿರುತ್ತಾರೆ, ಅವರ ಶಿಷ್ಯರು ಎಲ್ಲೆಲ್ಲಿಯೂ ಕಾಣಬರುತ್ತಾರೆ.

ಸ್ವತಃ ಉತ್ತಮ ಪುರೋಹಿತರಾದ ಅವರ ಸಮಾಜಸೇವೆಯು ವರ್ಣನಾತೀತ. ಋಗ್ವೇದ-ಯಜುರ್ವೇದ ಪ್ರಯೋಗಗಳಲ್ಲಿ ನಿಷ್ಣಾತರು. ಆಂಧ್ರ, ಕರ್ಣಾಟಕ, ದ್ರಾವಿಡ ಪ್ರಯೋಗಗಳನ್ನೂ ಬಲ್ಲವರು. ಷೋಡಶ ಸಂಸ್ಕಾರಗಳ ಪ್ರಯೋಗಗಳೇ ಅಲ್ಲದೆ- ರಥೋತ್ಸವ, ದೇವಪ್ರತಿಷ್ಠೆ, ಶಾಂತಿಕ ಪೌಷ್ಟಿಕ ಕರ್ಮಗಳ ಪ್ರಯೋಗಗಳನ್ನೂ ಅಭ್ಯಾಸ ಮಾಡಿ ಯಶಸ್ವಿಯಾಗಿ ಆ ಕಾರ್ಯಗಳನ್ನು ನಿರ್ವಹಿಸಿದವರು. ಇವರ ಶಿಷ್ಯವರ್ಗವು ಬಲು ದೊಡ್ಡದು.

ಮಂತ್ರಿಗಳಾಗಿದ್ದ ಶ್ರೀ ಎ.ಜಿ.ರಾಮಚಂದ್ರರಾಯರು, ಅವರ ಅಳಿಯ ಶ್ರೀ ವೆಂಕಟರಾಮು (ಇಂಜಿನಿಯರ್), ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ವೆಂಕಟರಾಮಯ್ಯ, ಕೈಗಾರಿಕೋದ್ಯಮಿ ಶ್ರೀ ಎಂ.ಕೆ.ಮೂರ್ತಿ, ಸಂಗೀತದಿಗ್ಗಜ ಶ್ರೀ ಆರ್.ಆರ್.ಕೇಶವ ಮೂರ್ತಿ, ಆಡಿಟರ್ ಎಂ. ಸುಬ್ಬರಾವ್, ಅಧಿಕಾರಿಗಳಾಗಿದ್ದ ಶ್ರೀಎ.ಪಿ.ರಾವ್, ಪ್ರೊಫೆಸರ್ ಟಿ.ಎಸ್.ಸುಬ್ಬರಾಯರು, ಧರ್ಮಿಷ್ಠರಾಗಿದ್ದ ಯಾದಾಳಂ ಸುಬ್ಬಯ್ಯ ಶೆಟ್ಟರು, ರಾಜಜ್ಯೋತಿಷೀ ಶ್ರೀ ವೆಂಕಟರಾಮಯ್ಯ (ವೆಂಕಟರಾವ್) ಹೀಗೆ ಹಲವು ವೃತ್ತಿಗಳ ನಾಗರಿಕರು ಅವರ ಶಿಷ್ಯರಾಗಿದ್ದರು. ಯಾವ ಕೆಲಸವನ್ನಾದರೂ ನಿರ್ವಹಿಸಬಲ್ಲ ಅಸಾಧಾರಣ ಸಾಮರ್ಥ್ಯವು ಮಾನ್ಯರದು.

**ನಂದ ಗೋಕುಲ**

ಮಾನ್ಯರ ಮನೆಯು ಎಂದೆಂದಿಗೂ ನಂದಗೋಕುಲವೇ. ತಮ್ಮಂದಿರು, ತಂಗಿಯರು, ಹೆಣ್ಣುಮಕ್ಕಳು, ಗಂಡುಮಕ್ಕಳು, ಮಮ್ಮಕ್ಕಳು ಹೀಗೆ ಯಾವಾಗಲೂ ತುಂಬಿದ ಕುಟುಂಬವೇ. ನಾನು ಅಲ್ಲಿ ಆಶ್ರಯವನ್ನು ಪಡೆದಿದ್ದೆನು. ನಾನು ಈಗಿನ ಸ್ಥಿತಿಯನ್ನು ಪಡೆಯಲು ಅವರೇ ಮುಖ್ಯಕಾರಣ. ಇಳಿ ವಯಸ್ಸಿನಲ್ಲಿ ಪತ್ನೀ ವಿಯೋಗವಾಯಿತು. ಇಂದೂ ಅವರ ಮನೆ ನಂದಗೋಕುಲವೇ ಆಗಿದೆ. ಇಬ್ಬರು ಗಂಡು ಮಕ್ಕಳು, ಐದು ಜನ ಹೆಣ್ಣುಮಕ್ಕಳು, ಎಲ್ಲರೂ ಮಾನ್ಯರ ಆಶೀರ್ವಾದ ಬಲದಿಂದ ಸುಖವಾಗಿ ಬಾಳುತ್ತಿದ್ದಾರೆ. ಮಮ್ಮಗನೂ ಅಮೇರಿಕದಲ್ಲಿ ದೊಡ್ಡ ಹುದ್ದೆಯಲ್ಲಿರುತ್ತಾನೆ.

ಮಾನ್ಯ ಅವಧಾನಿಗಳ ಆಶೀರ್ವಾದವು ಬಹುಕಾಲ ನಮ್ಮೆಲ್ಲರ ಮೇಲೂ ಇರಲಿ. 'ಮಾನ್ಯರು ಬಹುಕಾಲ ನಮ್ಮೆಲ್ಲರ ಮಾರ್ಗದರ್ಶಿಗಳಾಗಿರುವಂತೆ ಪರಮಾತ್ಮನು ಅನುಗ್ರಹಿಸಲಿ' ಎಂದು ಪ್ರಾರ್ಥಿಸುತ್ತೇನೆ.



*151. ಹಿರಿಯಮಗ ಶ್ರೀ ಪಿ.ವಿ.ಶ್ರೀನಿವಾಸಮೂರ್ತಿ : ಮಗನ ವಿವಾಹ : ಔಪಾಸನ*

## ೬. ಪೂಜ್ಯ ಚಿಕ್ಕಪ್ಪನವರು

*ವಿಶ್ವಾಮಿತ್ರ*

**ವೇಂಕಟಕೃಷ್ಣಾವಧಾನೀತಿ ಸುವಿಖ್ಯಾತಸುತೇಜಸೇ |**
**ಶತಾಯುಷೇ ನಮಸ್ತುಭ್ಯಂ ಶಿಷ್ಯಾಣಾಂ ಹಿತಕಾಮಿನೇ ||**

ನಮ್ಮ ತಾಯಿಯವರ ತಂಗಿಯ ಯಜಮಾನರು - ನಮ್ಮ ಚಿಕ್ಕಪ್ಪನವರು - ಶತಾಯುಷಿ ವೇ||ವಿದ್ವಾನ್ ವೆಂಕಟಕೃಷ್ಣ ಅವಧಾನಿಗಳು.

ಸುಮಾರು ಅರುವತ್ತು (೬೦) ವರುಷಗಳ ಕೆಳಗೆ ನನ್ನನ್ನು ಬೆಂಗಳೂರಿಗೆ ಕರೆತಂದುದು ಶ್ರೀ ರಾಮೇಶ್ವರಾವಧಾನೀ (ಘರೀಮಾಮ), ಶ್ರೀ ವೆಂಕಟಕೃಷ್ಣ ಅವಧಾನೀ (ಚಿಕ್ಕಪ್ಪ) ಎಂಬ ಈ ಎರಡು ಶುಭನಾಮಗಳು. ಆಂಗ್ಲ ವಿದ್ಯಾಭ್ಯಾಸವನ್ನು ತೀರ್ಥರೂಪು ತಂದೆಯವರ ಸೂಚನೆಯಂತೆ ನಿಲ್ಲಿಸಿದ ನಾನು ವೇದಾಧ್ಯಯನಕ್ಕಾಗಿ ಮತ್ತೂರಿಗೆ ಹೋದೆನು. ಅಲ್ಲಿ ವೇದಮೂರ್ತಿ ಬ್ರಹ್ಮಶ್ರೀ ರಾಮಭದ್ರ ಶಾಸ್ತ್ರಿಗಳಿಂದ

ವೇದಾಧ್ಯಯನವನ್ನೂ, ವೇದಮೂರ್ತಿ ಬ್ರಹ್ಮಶ್ರೀ ಲಕ್ಷ್ಮೀಕಾಂತ ಉಪಾಧ್ಯಾಯರಿಂದ ಪ್ರಯೋಗಭಾಗವನ್ನೂ ಅಧ್ಯಯನ ಮಾಡುತ್ತಿದ್ದೆನು. ಈ ಮಧ್ಯದಲ್ಲಿ ಒಮ್ಮೆ ಊರಿಗೆ (ಕೌಶಿಕ) ಬಂದಾಗ ನನಗೆ, ಫೆರೀಮಾಮ ಮತ್ತು ಚಿಕ್ಕಪ್ಪನವರಿದ್ದ ಬೆಂಗಳೂರಿಗೆ ವಿದ್ಯಾಭ್ಯಾಸಕ್ಕಾಗಿ ಹೋಗಬೇಕೆನ್ನಿಸಿತು. ನಮ್ಮ ಚಿಕ್ಕಪ್ಪನವರ ಮನೆ ಬಸವನಗುಡಿಯ ಸೌತ್‌ಎಂಡ್ ರಸ್ತೆಯಲ್ಲಿದ್ದಿತು. ಹುಡುಕಿಕೊಂಡು ಮನೆಗೆ ಹೋದೊಡನೆ ಅತ್ಯಂತ ಆದರಪೂರ್ವಕವಾಗಿ ಚಿಕ್ಕಪ್ಪನವರು ಬರಮಾಡಿಕೊಂಡರು. ಇದನ್ನು ನಾನೆಂದಿಗೂ ಮರೆಯುವಂತೆಯೇ ಇಲ್ಲ.

ಮುಂದೆ ನಮ್ಮ ಚಿಕ್ಕಪ್ಪನವರ ಆಶ್ರಯದಲ್ಲಿ ನಾನು ಮಾಗಡಿ ಕರಣಿಕರ ಪಾಠಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ವೇದಾಭ್ಯಾಸವನ್ನೇ ಮಾಡಬೇಕೆನ್ನುವ ಆಶಯದಿಂದ ಬೆಂಗಳೂರಿಗೆ ಬಂದಿದ್ದ ಕಾರಣ ನನ್ನನ್ನು ಚಾಮರಾಜಪೇಟೆಯಲ್ಲಿರುವ ಚಾಮರಾಜೇಂದ್ರ ವೇದ ಮಹಾಪಾಠಶಾಲೆಗೆ ಸೇರಲು ನಮ್ಮ ಚಿಕ್ಕಪ್ಪನವರು ಪ್ರೋತ್ಸಾಹಿಸಿದರು. ಅಂತೆಯೇ ಅಲ್ಲಿಗೆ ನಾನು ಸೇರಿಕೊಂಡೆ. ಅಲ್ಲಿಂದ ಮುಂದೆ ವಾರಕ್ಕೆ ಒಂದು ಅಥವಾ ಎರಡು ಬಾರಿ ನಮ್ಮ ಚಿಕ್ಕಮ್ಮ ಹಾಗೂ ಚಿಕ್ಕಪ್ಪನವರನ್ನು ನೋಡಲು ಅವರ ಮನೆಗೆ ಹೋಗಿಬರುತ್ತಿದ್ದೆ. ತಾಯಿಯನ್ನು ಕಳೆದುಕೊಂಡು ಎಂಟು-ಹತ್ತು ವರ್ಷಗಳಾಗಿದ್ದರೂ ಮಾತೃವಾತ್ಸಲ್ಯವೇನೆಂಬುದನ್ನು ನಮ್ಮ ಚಿಕ್ಕಮ್ಮನವರಿಂದ ಅರಿತೆನು. ತೀರ್ಥರೂಪು ಚಿಕ್ಕಪ್ಪನವರೂ ಆಗಿಂದಾಗ್ಯೆ ಕೂರಿಸಿಕೊಂಡು ಬುದ್ಧಿವಾದವನ್ನು ಹೇಳಿ, ನನ್ನನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಬೋಧಿಸುತ್ತಿದ್ದರು.

ನನಗೆ ತಿಳಿದಿರುವಂತೆ ಋಗ್ವೇದ ಮತ್ತು ಯಜುರ್ವೇದ- ಈ ಎರಡೂ ಶಾಖೆಗಳ ಪೂರ್ವಾಪರ ಪ್ರಯೋಗ ಭಾಗಗಳಲ್ಲಿ ನಿಷ್ಣಾತರಾಗಿರುವವರೆಂದರೆ, ನಮ್ಮ ಜನಾಂಗದಲ್ಲಿ ವೇದಮೂರ್ತಿ ವೆಂಕಟಕೃಷ್ಣ ಅವಧಾನಿಗಳೊಬ್ಬರೇ ಎಂದು ನಿಖರವಾಗಿ ಹೇಳಬಹುದು. ಅವರು ಕರ್ಮನಿಷ್ಠರು. ತಮ್ಮ ಸೌಜನ್ಯದಿಂದಲೂ ಸಹಕಾರ ಮನೋಭಾವನೆ ಇರುವುದರಿಂದಲೂ ನೂರಾರು ಶಿಷ್ಯರನ್ನು ಪಡೆದಿರುತ್ತಾರೆ. ಅವರ ಈ ಇಳಿವಯಸ್ಸಿನಲ್ಲಿಯೂ ಅವರೇ ಪೌರೋಹಿತ್ಯಕ್ಕೆ ಬರಬೇಕೆಂಬುವ ಗೃಹಸ್ಥರು ಹಲವಾರು ಮಂದಿ ಇದ್ದಾರೆ. ಇದಕ್ಕೆ ಅವರ ಭಗವದಾರಾಧನೆ, ಸೌಜನ್ಯ, ನಿಸ್ಪೃಹತೆ, ಕರ್ಮನಿಷ್ಠೆ, ಸಹಕಾರ ಇತ್ಯಾದಿ ಗುಣಗಳೇ ಕಾರಣವೆಂಬುದರಲ್ಲಿ ಸಂಶಯವೇ ಇಲ್ಲ.

ಭಗವಂತನ ದಯೆಯಿಂದ ೧೯೭೭ರಲ್ಲಿ ಮಹಾಭಾರತದ ಮೊದಲನೆಯ ಸಂಪುಟದ ಬಿಡುಗಡೆಯಾಯಿತು. ಇದು ಸಾಮಾನ್ಯವಾಗಿ ನಮ್ಮವರೆಲ್ಲರಿಗೂ ಅನಿರೀಕ್ಷಿತ. ನಮ್ಮ ಚಿಕ್ಕಪ್ಪನವರು ಮಹಾಭಾರತದ ಒಂದನೆಯ ಸಂಪುಟ ಪ್ರಕಾಶನದಿಂದ ಹಿಡಿದು ಮೂವತ್ತೆರಡು ಸಂಪುಟಗಳ ಪ್ರಕಾಶನಕ್ಕೂ ಆಗಮಿಸುತ್ತಿದ್ದುದಲ್ಲದೆ ಆನಂದಭರಿತರಾಗಿ, ನಮ್ಮನ್ನು ಪ್ರೋತ್ಸಾಹಿಸುವ ಸಲುವಾಗಿ, ಪ್ರತಿ ಸಂಪುಟವನ್ನೂ ದುಡ್ಡುಕೊಟ್ಟು ಕೊಂಡುಕೊಂಡು ಹೋಗುತ್ತಿದ್ದರು. ಅವರು ವೇದಘೋಷವನ್ನೂ, ಆಶೀರ್ವಾದವನ್ನೂ ಎಂದೂ ತಪ್ಪಿಸಿದವರಲ್ಲ. ನಮ್ಮ ಚಿಕ್ಕಪ್ಪನವರು, ಭಾರತದರ್ಶನ ಪ್ರಕಾಶನ ಸಂಸ್ಥೆಯು ಪ್ರಕಟಿಸಿದ ರಾಮಾಯಣ, ಮಹಾಭಾರತ, ಭಾಗವತ ಸಂಪುಟಗಳನ್ನೂ ಕೊಂಡು ಹೋಗಿರುವುದು ಮಾತ್ರವಲ್ಲದೆ ಮೂರು - ನಾಲ್ಕು ಬಾರಿ ಇದರ ಅಧ್ಯಯನವನ್ನೂ ಮುಗಿಸಿ, ನಮ್ಮ ಕೆಲಸಕ್ಕೆ ಸಾರ್ಥಕತೆಯನ್ನುಂಟುಮಾಡಿದ್ದಾರೆ. ನಮ್ಮ ಚಿಕ್ಕಪ್ಪನವರ ಬಗ್ಗೆ ಎಷ್ಟು ಬರೆದರೂ ಅಲ್ಪವೇ ಎನಿಸುತ್ತದೆ. ತಿಳಿದಷ್ಟು ಮತ್ತು ಜ್ಞಾಪಕವಿದ್ದಷ್ಟು ವಿಷಯಗಳನ್ನು ಪರಿಚಯಿಸಿ ಅವಧಾನಿಗಳ ಪಾದಾರವಿಂದಗಳಲ್ಲಿ ಈ ಸವಿನುಡಿಗಳನ್ನು ಸಮರ್ಪಿಸುತ್ತಿದ್ದೇನೆ.



*152. ವಿವಾಹ : ಶ್ರೀನಿವಾಸಮೂರ್ತಿ, ಉಮಾ ಒಡನೆ (ವರ) ಸುನೀಲ್*

## ೭. ಮಾವ ಅಲ್ಲ, ತಂದೆ

***ಟಿ.ಕೆ. ಸೂರ್ಯನಾರಾಯಣ ಶಾಸ್ತ್ರೀ, ಶ್ರೀಲಕ್ಷ್ಮೀ ಶಾಸ್ತ್ರೀ ಮತ್ತು ಮಕ್ಕಳು***

ವಿದ್ಯಾಭ್ಯಾಸದಿಂದ ವಂಚಿತನಾಗಿ ಪತ್ರಿಕಾವೃತ್ತಿಯನ್ನು ಆರಿಸಿಕೊಂಡು ಜೀವನದಲ್ಲಿ ಏನಾದರೂ ಸಾಧಿಸಲೇಬೇಕೆಂಬ ಛಲದಿಂದ *ಈ* ಕ್ಷೇತ್ರದಲ್ಲಿ ಮೂವತ್ತು ವರ್ಷ ಕಷ್ಟಪಟ್ಟು ದುಡಿದು ನೆಮ್ಮದಿ ಕಾಣುವ ಹೊತ್ತಿಗೆ, ನಮ್ಮ ತಂದೆ ಜೋಡೀದಾರ್ ತರೀಕೆರೆ ಕೃಷ್ಣಶಾಸ್ತ್ರಿ ಅವರ ಆಕಸ್ಮಿಕ ಮರಣದಿಂದ ತತ್ತರಿಸಿ ದಿಕ್ಕು ಕಾಣದ ಸಂದರ್ಭದಲ್ಲಿ ಬೆಳಕಿನಂತೆ ಬಂದ ಮಾವನವರು ನನಗೆ ಧೈರ್ಯ ಹೇಳಿ ನನ್ನ ಜೀವನದಲ್ಲಿ ಬರಿದಾದ ಸ್ಥಾನವನ್ನು ತುಂಬಿಕೊಟ್ಟರು.

ಇನ್ನು ನನ್ನ ಎಲ್ಲ ಕಷ್ಟಗಳಿಗೂ ಸ್ಪಂದಿಸಿ, ಮಕ್ಕಳ ಮುಂದಿನ ಭವಿಷ್ಯ ಮತ್ತು ಅವರ ವಿದ್ಯಾಭ್ಯಾಸದ ಹೊರೆಯನ್ನು ಹೊತ್ತು, ತಂದೆಯಾಗಿ ಮಕ್ಕಳಿಗೆ ಮಾಡಬೇಕಾದ ನನ್ನ ಪಾಲಿನ ಕರ್ತವ್ಯದ ಹೊರೆಯನ್ನು ತಾವೇ ಹೊತ್ತರು.

ಮಾವನವರು ಮಾಡಿರುವ ಉಪಕಾರದ ಪಟ್ಟಿ ಬೆಳೆಯುತ್ತ ಹೋಗುತ್ತದೆಯೇ ಹೊರತು ಅದನ್ನು ತೀರಿಸುವ ಬಗೆ ಹೇಗೆ ಎಂಬ ಚಿಂತೆ ನಮ್ಮನ್ನು ಕಾಡುತ್ತಿದೆ.

ಅತ್ತೆಯವರನ್ನು *ಈ* ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಮನೆಯಲ್ಲಿ ತುಂಬ ಕಷ್ಟಪರಿಸ್ಥಿತಿ ಇದ್ದರೂ ಮನೆಗೆ ಬರುತ್ತಿದ್ದ ಅತಿಥಿಗಳನ್ನು ಆದರದಿಂದ ಸತ್ಕರಿಸುತ್ತಿದ್ದರೇ ಹೊರತು, ನನಗಿಲ್ಲವಲ್ಲ ಎಂದು ಯಾವತ್ತೂ ಕೊರಗುತ್ತಿರಲಿಲ್ಲ. ಇದೇ ಇವರಲ್ಲಿದ್ದ ದೊಡ್ಡಗುಣ.

ಹೆಚ್ಚಾಗಿ ನಮ್ಮ ಕಷ್ಟದ ಬಗ್ಗೆ ಸದಾ ಚಿಂತಿಸುತ್ತಿದ್ದ ಅತ್ತೆಯವರ ಕಣ್ಣಲ್ಲಿ ಅಂದು ಮಿಡಿದ ಕಣ್ಣೀರು ಇಂದಿಗೂ ನಮ್ಮ ಕಣ್ಣಿಗೆ ಕಟ್ಟಿದಂತಿದೆ. ಇದ್ದಷ್ಟು ದಿನ ಅತ್ತೆಯವರು ಪರೋಪಕಾರಿಗಳಾಗಿ ಬಾಳಿ, ತಾವು ಸತ್ತನಂತರ ತಮ್ಮ ಕಣ್ಣು ಬೇರೆಯವರಿಗೆ ಉಪಯೋಗವಾಗುವಂತಾಗಲಿ ಎಂದು ತಮ್ಮ ಕಣ್ಣನ್ನು ಅಂಧರಿಗೆ ದಾನವಾಡಿ ಬೆಳಕನ್ನು ನೀಡಿದ ಮಹಾಸಾಧ್ವಿಯೆಂದರೆ ತಪ್ಪಾಗಲಾರದು.

ಹಿಂದಿನಂತೆ, ಮುಂದೆ ಕೂಡ *ಈ* ಮಕ್ಕಳ ಮೇಲಿನ ಪ್ರೀತಿ, ವಾತ್ಸಲ್ಯ ನಿರಂತರವಾಗಿರಬೇಕೆಂದು ಮಾವನವರಲ್ಲಿ ಅತ್ಯಂತ ನಮ್ರತೆಯಿಂದ ಪ್ರಾರ್ಥಿಸುತ್ತೇನೆ.

ಶತವರ್ಷ ಕಾಣುತ್ತಿರುವ ಮಾವನವರಿಗೆ ಜೀವನದಲ್ಲಿ ಮನಸ್ಸಿಗೆ ನೆಮ್ಮದಿಯನ್ನೂ ಶಾಂತಿಯನ್ನೂ ಕೊಡಲೆಂದು ಭಗವಂತನಲ್ಲಿ ನಾವೆಲ್ಲ ಪ್ರಾರ್ಥಿಸುತ್ತೇವೆ.



***153. ಸೌಮ್ಯ ಅವರ ವಿವಾಹ : ಶ್ರೀಲಕ್ಷ್ಮಿ ಅವರು ಮಡಿಲು ತುಂಬುತ್ತಿರುವುದು***

## ೮. ಮಾರ್ಗದರ್ಶಕರಾಗಿ ತೀ. ಅಜ್ಜನವರು

*ಕೇಶವಪ್ರಸಾದ್*

ಸುಮಾರು ಇಪ್ಪತ್ತೈದು ವರ್ಷಗಳಿಂದ ನನ್ನ ಪೂಜ್ಯ ಅಜ್ಜನವರನ್ನು ಹತ್ತಿರದಿಂದ ನೋಡಿ ಮಾರ್ಗದರ್ಶನ ಪಡೆದು, ಅವರ ಬಗ್ಗೆ ಇಂದು ಬರೆಯಲು, ಮಮ್ಮಗನಾಗಿ ನನಗೆ ತುಂಬ ಹೆಮ್ಮೆಯೆನಿಸುತ್ತದೆ.

ಹಳ್ಳಿಯಿಂದ ಉನ್ನತ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಬಂದ ನನ್ನ ಇಂದಿನ ಸುಸ್ಥಿತಿಗೆ ಅಜ್ಜನವರ ಆಸರೆ, ಪೋಷಣೆ, ಕೆಲವೊಮ್ಮೆ ಅವರ ತೀಕ್ಷ್ಣ ನುಡಿಗಳು ಮತ್ತು ಆಶೀರ್ವಾದಗಳೇ ಕಾರಣ.

ಆಗಿನ ದಿನಗಳಲ್ಲಿ ತೀ. ಅಜ್ಜನವರಿಗಿದ್ದ ಹಲವಾರು ಜವಾಬ್ದಾರಿ-ಕರ್ತವ್ಯಗಳ ನಡುವೆ ನನ್ನ ಹೊರೆಯನ್ನು ಸ್ವೀಕರಿಸಬೇಕೆಂದೇನೂ ಇರಲಿಲ್ಲ. ಆದರೆ ಅವರಲ್ಲಿದ್ದ **ವಿದ್ಯಾರ್ಜನೆಗೆ ಪ್ರೋತ್ಸಾಹದ** ಗುಣವೇ ನನ್ನನ್ನು ಪೋಷಿಸಲು ಕಾರಣವಾಯಿತು.

ನಾ ಕಂಡಂತೆ ಅವರಲ್ಲಿ ಅನೇಕ ವಿಶಿಷ್ಟ ಗುಣಗಳಿದ್ದವು. ತಾವು ನಡೆದು ಬಂದ ಕಷ್ಟದ ದಾರಿಯನ್ನು ಮರೆಯದೆ, ತಮ್ಮನ್ನೇ ನಿರೀಕ್ಷಿಸಿ ಬಂದ ಹಲವಾರು ಸೋದರರಿಗೆ, ತಂಗಿಯರಿಗೆ, ಮಕ್ಕಳಿಗೆ, ಮಮ್ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಅವರು ನೀಡಿದ ನಿಃಸ್ವಾರ್ಥ ಸೇವೆ ಅವರ ವ್ಯಕ್ತಿತ್ವದ ಪ್ರಮುಖ ಲಕ್ಷಣ.

ಕೆಲವು ವರ್ಷಗಳ ಹಿಂದೆ, ನಮ್ಮೆಲ್ಲರ ನೆಚ್ಚಿನ ಅಜ್ಜನವರು ಆಸ್ಪತ್ರೆಯಲ್ಲಿದ್ದಾಗ ನಡೆದ ಒಂದು ಘಟನೆ ನಮ್ಮ ನೆನಪಿನಲ್ಲಿ ಎಂದಿಗೂ ಉಳಿಯುವಂಥದು. ವೈದ್ಯರ ಪ್ರಕಾರ ಅಂದು ಉಳಿದದ್ದು ಕೆಲವೇ ಘಂಟೆಗಳು. ಹಾಸಿಗೆಯ ಪಕ್ಕದಲ್ಲಿ ನಿಂತು ನಾವುಗಳು ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ಆದಿತ್ಯ ಹೃದಯವನ್ನು ಪಠಣ ಮಾಡುತ್ತಿದ್ದಾಗ, ನಾವು ಮಾಡುತ್ತಿದ್ದ ಕೆಲವು ತಪ್ಪುಗಳನ್ನು ತೀ.ಅಜ್ಜನವರು ಅಂದಿನ ಚಿಂತಾಜನಕ ಸ್ಥಿತಿಯಲ್ಲೂ ತಿದ್ದಿದ್ದು ನಮ್ಮನ್ನೆಲ್ಲಾ ಮಂತ್ರಮುಗ್ಧರನ್ನಾಗಿಸಿತು. ಬ್ರಹ್ಮಾನಂದವನ್ನು ಅನುಭವಿಸಿ, ಮೃತ್ಯುವನ್ನು ಗೆದ್ದು ಬಂದು ಅವರು ನಮಗೆಲ್ಲ ಇಂದಿಗೂ ಮಾರ್ಗದರ್ಶಕರಾಗಿದ್ದಾರೆ.

## ೯. ಸಹೃದಯರಾದ ಅವಧಾನಿಗಳು

*ಟಿ.ಎಲ್. ನಾಗಭೂಷಣ ರಾವ್*



*154. ಶ್ರೀಲಕ್ಷ್ಮಿ, ಲಲಿತ, ಅನ್ನಪೂರ್ಣ, ಸರಸ್ವತಿ, ಶಾಂತ*

ಪೂಜ್ಯರಾದ ಅವಧಾನಿಗಳಿಗೆ ನೂರು ವರುಷ ತುಂಬಿರುವ ಶುಭ ಘಳಿಗೆ ಇದು.

'ಗುರುಗಳನ್ನು ಗೌರವಿಸಬೇಕು. ಗುರುಪೂಜೆ ಮಾಡುವುದರಿಂದ ಆಯುಸ್ಸು, ಯಶಸ್ಸು ಮತ್ತು ಸಂಪತ್ತು ವೃದ್ಧಿಯಾಗುತ್ತದೆ' ಎಂದು **ಕ್ಷತ್ರಚೂಡಾಮಣಿ**ಯಲ್ಲಿ ಸುಭಾಷಿತ ಹೇಳುತ್ತದೆ. ಇಂದು ಅವರನ್ನು ಪೂಜಿಸಿ ಅವರ ಆಶೀರ್ವಾದ ಪಡೆಯುವ ಶುಭ ಘಳಿಗೆ ಬಂದಿರುವುದು ನಮಗೆ ಧನ್ಯತಾ ಮನೋಭಾವ ತಂದಿದೆ.

ಸುಮಾರು ೧೫ ವರ್ಷಗಳಿಂದ ನನಗೆ ಅವರ ಆಶೀರ್ವಾದ ದೊರಕಿದೆ. ನಮ್ಮ ಮನೆಯ ಅನೇಕ ಶುಭಕಾರ್ಯಗಳಿಗೆ ಬಂದಾಗಲೆಲ್ಲ ಬಂಧು ಬಳಗವನ್ನು ಆತ್ಮೀಯವಾಗಿ ಮಾತನಾಡಿಸಿ, ನಮ್ಮವರೊಳಗೆ ಒಬ್ಬರಾಗಿ,



*155. ಶಿವಸ್ವಾಮಿ-ನಾಗವೇಣಿ : ವಿವಾಹದ ೨೫ನೆಯ ವರ್ಷದ ಹಬ್ಬ*

ಅವರ ದೊಡ್ಡತನವನ್ನು ಪ್ರಕಟಿಸಿದ್ದಾರೆ. ನಾನು ಪತ್ರಿಕೋದ್ಯೋಗಿಯಾದ್ದರಿಂದ ಭೇಟಿಯಾದಾಗಲೆಲ್ಲ ಶ್ರೀಯುತರು ಅಂದಿನ ರಾಜಕೀಯವನ್ನು ಕುರಿತು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಕೆಲವು ವರ್ಷಗಳ ಹಿಂದೆ ನಾವುಗಳು ಗೋಕರ್ಣಕ್ಕೆ ಹೋಗಿದ್ದಾಗ ಶ್ರೀ ಅವಧಾನಿಗಳೂ ಬಂದಿದ್ದರು. ಯಾವಾಗಲೂ ಚಟುವಟಿಕೆಯ ಸಂಕೇತವಾಗಿರುವ ಶ್ರೀಯುತರು ಅಲ್ಲಿದ್ದ ನಾಲ್ಕು ದಿನಗಳೂ ಎರಡು ಹೊತ್ತೂ ಸಮುದ್ರಸ್ನಾನ ಮಾಡಿ ಸಂಧ್ಯಾವಂದನೆ ಮಾಡುತ್ತಿದ್ದರು. ಒಮ್ಮೆ ಎಲ್ಲರೂ ಸಮುದ್ರಸ್ನಾನಕ್ಕೆ ಹೊರಟಾಗ ನಮಗಿಂತ ಮುಂಚೆಯೇ ಅವಧಾನಿಗಳು ಅಲ್ಲಿಗೆ ಹೋಗಿ ಸಮುದ್ರದ ಅಲೆಗಳಿಗೆ ಮೈಯೊಡ್ಡಿ ಆನಂದದಿಂದ ನೀರಿನೊಳಗೆ ನಿಂತಿದ್ದ ಚಿತ್ರ ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ. ಅಂತಹ ಸಹೃದಯರ ದರುಶನವೇ ನಮ್ಮ ಪುಣ್ಯ.

ಅವಧಾನಿಗಳು ಹೊರಗೆ ಮಾತ್ರವಲ್ಲ, ಮನೆಯ ಒಳಗೂ ಆದರ್ಶವಾಗಿ ಬಾಳಿದರು. ಮಕ್ಕಳು ಎಂದೂ ಅವರಿಗೆ ಎದುರುಮಾತು ಆಡಲಿಲ್ಲ - ಅಂಜಿಕೆಯಿಂದ ಅಲ್ಲ, ಪ್ರೀತಿ ಮತ್ತು ಗೌರವದಿಂದ. ತಮ್ಮ ಪತ್ನಿ ಅನಾರೋಗ್ಯಪೀಡಿತರಾದುದರಿಂದ ಅವಧಾನಿಗಳು ಕುಟುಂಬದ ಕ್ಷೇಮಕ್ಕಾಗಿ 'ತಾಯಿ'ಯ ಸ್ಥಾನದಲ್ಲಿಯೂ ನಿಂತು ದುಡಿದರು. ಮನೆಯಲ್ಲಿ ಎಲ್ಲರಿಗಾಗಿ ಅಡುಗೆ ಮಾಡಿ ಇಟ್ಟು ಅನಂತರ ತಮ್ಮ ಕೆಲಸದ ಮೇಲೆ ಹೋಗುತ್ತಿದ್ದರು. ಮಕ್ಕಳ (ಬೆಳೆದ ಮಕ್ಕಳ) ಹುಟ್ಟುಹಬ್ಬಗಳಲ್ಲಿಯೂ ಅವರಿಗೆ ಅಭ್ಯಂಗ ಸ್ನಾನ ಮಾಡಿಸಿ, ಪಾಯಸದ ಅಡುಗೆ ಮಾಡಿ ಅವರನ್ನು ಸಂತೋಷದಲ್ಲಿಟ್ಟು, ತಾವೂ ಸಂತೋಷಪಡುತ್ತಿದ್ದರು. ಅವರ ವೈದಿಕತೆ ಎಷ್ಟು ಉನ್ನತವಾಗಿತ್ತೋ ಲೌಕಿಕತೆ ಅಷ್ಟೇ ಸಮರಸದ್ದಾಗಿತ್ತು.

'ಯಾರ ಮನಸ್ಸು ಸಂತೋಷವಾಗಿರುತ್ತದೋ ಅವರ ಮನೆಯಲ್ಲಿ ಚಿಂತಾಮಣಿ ಇದ್ದಷ್ಟೇ, ಕಲ್ಪವೃಕ್ಷ ಸಿಕ್ಕಷ್ಟೇ ಆನಂದ' ಎಂಬ **ರತ್ನ ಭಾಂಡಾಗಾರ**ದ ಸುಭಾಷಿತ ವಾಕ್ಯದಂತೆ ಇಂದು ಶ್ರೀಯುತರ ಮನೆಯಲ್ಲಿ ಆನಂದದ ಉತ್ಕರ್ಷವಾಗಿದೆ.

ಇಂತಹ ಹಿರಿಯ ಚೇತನಕ್ಕೆ ಮತ್ತೆ ನಮಿಸಿ, ಅವರು ನಮ್ಮೊಡನೆ ಇನ್ನೂ ದೀರ್ಘಕಾಲ ಇರಲಿ ಎಂದು ಪರಮಾತ್ಮನಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.



*156 ಶ್ರುತಿ, ಉಮಾ, ನಾಗವೇಣಿ, ಶಿವಸ್ವಾಮಿ, ಶ್ರೀನಿವಾಸಮೂರ್ತಿ, ಚೈತ್ರ*

# ೧೦. ನೂರರ ತರುಣ

*ಅನ್ನಪೂರ್ಣಾ*



***157.** ಕೇಶವಮೂರ್ತಿ, ಲಲಿತ, ನಾಗವೇಣಿ, ಶಿವಸ್ವಾಮಿ, ಶ್ರೀಲಕ್ಷ್ಮಿ, ಸೂರ್ಯನಾರಾಯಣಶಾಸ್ತ್ರಿ*

ವೃದ್ಧಾಪ್ಯ ದೇಹಕ್ಕೇ ಹೊರತು ಮನಸ್ಸಿಗಲ್ಲ ಎಂಬುದನ್ನು ಶ್ರೀಯುತರು ದಿನನಿತ್ಯ ತೋರಿಸುತ್ತಿದ್ದಾರೆ. ಈಗಲೂ ಯಾವುದಾದರೂ ಸಮಾರಂಭಕ್ಕೆ ಕರೆದುಕೊಂಡು ಹೋದರೆ ಮೊದಲಿನ ಶ್ರದ್ಧೆಯಿಂದ ಕೆಲಸ ನಿರ್ವಹಿಸಿ ಆಶೀರ್ವದಿಸುತ್ತಾರೆ. ಅವರನ್ನು ಭೇಟಿಯಾದಾಗ ಲೆಲ್ಲ ನಮ್ಮ ಮಕ್ಕಳು, ಮಮ್ಮಕ್ಕಳ ಹೆಸರನ್ನು ಮರೆಯದೆ ಕೇಳಿ, ಯೋಗಕ್ಷೇಮ ವಿಚಾರಿಸುವ ಅವರ ಔದಾರ್ಯ ಎಲ್ಲರಿಗೂ ಮಾರ್ಗದರ್ಶಕವಾದದ್ದು.

ಇಂತಹವರ ಶತಮಾನೋತ್ಸವ ಅವರನ್ನು ಬಲ್ಲ ಎಲ್ಲರಿಗೂ ಸಂತೋಷದ ಸಂಗತಿ. ಅವರು ಇನ್ನೂ ದೀರ್ಘಕಾಲ ನಮ್ಮೊಡನೆ ಇರಲಿ, ಅವರ ಆಶೀರ್ವಾದ ನಮಗೆ ಸದಾ ಸಿಕ್ಕುತ್ತಿರಲಿ.

ಒಂದು ಶತಮಾನವನ್ನು ಕಂಡಿರುವ ವೇ. ಬ್ರ. ಶ್ರೀ ಅವಧಾನಿಗಳು ನಮ್ಮ ಮನೆಯವರಿಗೆಲ್ಲ ಮೂವತ್ತು ವರುಷಗಳಿಂದ ಪರಿಚಿತರು. ಧರ್ಮಭೀರುಗಳಾಗಿದ್ದ ನಮ್ಮ ಮಾವ ಕಲ್ಲೂರು ನಾರಣಪ್ಪನವರಿಗೆ ಶ್ರೀ ಅವಧಾನಿಗಳ ವಿದ್ವತ್ತು, ಶಾಸ್ತ್ರಪಾಂಡಿತ್ಯ ಬಹಳ ಮೆಚ್ಚುಗೆಯಾಗಿತ್ತು. ಅವರು ನಮ್ಮ ಮನೆಯ ಎಲ್ಲ ಪೂಜೆ, ಹೋಮಗಳನ್ನೂ ಅವಧಾನಿಗಳಿಂದಲೇ ಮಾಡಿಸುತ್ತಿದ್ದರು. ತರುವಾಯ ಶ್ರೀ ರಾವ್ ಅವರು ಅವಧಾನಿಗಳಿಲ್ಲದೆ ಯಾವ ಪೂಜೆ, ಹೋಮಗಳನ್ನೂ ಬೇರೆಯವರಿಂದ ಮಾಡಿಸುತ್ತಿರಲಿಲ್ಲ. ರಾವ್ ಅವರಿಗೆ ಶ್ರೀ ಅವಧಾನಿಗಳ ಮಾತೆಂದರೆ ವೇದವಾಕ್ಯ.



***158.** ಶ್ರೀ ಚಂಡೀಹೋಮದ ಸಂದರ್ಭ : ಕೈಗಾರಿಕೋದ್ಯಮಿ ಶ್ರೀಗಂಗಾಧರಶೆಟ್ಟರು ಮತ್ತು ಮನೆಯವರಿಂದ ಸಂಮಾನ*

ಈ ಇಳಿವಯಸ್ಸಿನಲ್ಲೂ ಅವರ ಹುಮ್ಮಸ್ಸು ಎಳೆಯರನ್ನು ನಾಚಿಸುವಂತಹದು. ವಯಸ್ಸು,

# 11. "AJJA" - A Family Driving Force

***Kathyayani***

Ten years back, it was the GOURI Festival day. This was the first pooja which I had to perform with all the members in this family. It was a real festival scene which I can never forget. All the ladies were getting ready. Ajja was ready much ahead of us and was methodically instructing each and every one to prepare and perform the pooja with devotion. This event is being conducted and celebrated meticulously year after year.

If we look at how this is made possible, it is only due to the "Divine-Driving Force' - Shri Venkatakrishna Avadhani - our loving Ajja.

I am - one of his Grand Daughters-in-law and I am proud and fortunate to have been blessed to join this family.

Before marriage I was anxious how I will be received in a very religious and orthodox family. All members of the family including Ajja showered lots of love, affection and understanding which made me feel more homely.

Ajja to this day is loving and affectionate and he involves himself in all religious activities of the family. He makes sure, we all meet once a week in a divine atmosphere by chanting Vishnu Sahasranama, Lalitha Sahasra-nama and Bhajans and we all have dinner together.

Even for a picnic, he joins us happily and like a shell, he protects us with his prayers and mingles with children happily.

He reminds us about duties of parents and makes sure we perform to our children at right time and in right way.

I am indeed blessed to get an opportunity to write a few words about our divine Ajja. I pray God and Ajja to bless me to bring a good name for his family.



*159. ಶತಮಾನೋತ್ಸವ : ಪೂರ್ಣಕುಂಭ ಸ್ವಾಗತ*

## ೧೨. ಶ್ರೀ ಗುರುಭ್ಯೋ ನಮಃ

*ಎಚ್.ಆರ್. ಸುಬ್ರಹ್ಮಣ್ಯ ಶಾಸ್ತ್ರೀ*

ನನ್ನ ಪೂಜ್ಯ ಗುರುಗಳಾದ ವೇದಮೂರ್ತಿ ವಿದ್ವಾನ್ ವೆಂಕಟಕೃಷ್ಣಾವಧಾನಿಗಳು ಮಾಗಡಿ ಕರಣಿಕರ ಪಾಠಶಾಲೆಯಲ್ಲಿ ನನಗೆ ನಾಲ್ಕು ವರ್ಷಗಳ ಕಾಲ ಋಗ್ವೇದ ಆಶ್ವಲಾಯನ ಪೂರ್ವಪ್ರಯೋಗವನ್ನು ಚೆನ್ನಾಗಿ ಹೇಳಿಕೊಟ್ಟಿದ್ದಾರೆ. ಅವರು ಹೇಳಿಕೊಟ್ಟ ಪಾಠದಿಂದ ಇವತ್ತು ನಾನು ಪೌರೋಹಿತ್ಯವನ್ನು ಮಾಡಿಕೊಂಡು ಜೀವನ ನಡೆಸಿಕೊಂಡು ಬರುತ್ತಿದ್ದೇನೆ. ಇದಕ್ಕೆ ನಮ್ಮ ಗುರುಗಳ ಆಶೀರ್ವಾದ ಅನುಗ್ರಹಗಳೇ ಕಾರಣವೆಂದು ಭಾವಿಸಿರುತ್ತೇನೆ.

ನಮ್ಮ ಪೂಜ್ಯ ಗುರುಗಳು ನನ್ನಂಥ ನೂರಾರು ಶಿಷ್ಯರನ್ನು ತಯಾರುಮಾಡಿರುತ್ತಾರೆ. **ಯಥಾವೃಕ್ಷಸ್ಯ ಸಂಪುಷ್ಪಿತಸ್ಯ, ದೂರಾದ್ಗಂಧೋ ವಾತಿ ಏವಂ ಪುಣ್ಯಸ್ಯ ಕರ್ಮಣಃ...** ಎಂಬ ವೇದೋಕ್ತಿಯಂತೆ ಒಂದು ವೃಕ್ಷವು ಹೂ ಬಿಟ್ಟು, ಪರಿಮಳವನ್ನು ಸುತ್ತಲೂ ಹರಡಿ ತಾನೂ ಧನ್ಯವಾಗಿ, ಸುತ್ತಲೂ ಇರುವವರನ್ನೂ ಧನ್ಯರನ್ನಾಗಿ ಮಾಡುವಂತೆ ಪೂಜ್ಯಗುರುಗಳು, ನೂರಾರು ಶಿಷ್ಯರನ್ನು ಪೌರೋಹಿತ್ಯದಲ್ಲಿ ತಯಾರುಮಾಡಿ ಪುಣ್ಯಕರ್ಮಿಗಳಾಗಿದ್ದಾರೆ.

ಪೂಜ್ಯರ ಮತ್ತೊಂದು ವೈಶಿಷ್ಟ್ಯವೆಂದರೆ ಅವರು ಪುರೋಹಿತರಾಗಿದ್ದರು ಸಹ ಯಾರನ್ನೂ ಸಂಭಾವನೆ ಕೇಳಿದವರಲ್ಲ. ಅಂಥ ಉದಾರ ಹೃದಯಿಗಳು. ಬಹಳ ಕಷ್ಟದಿಂದ ಜೀವನವನ್ನು ನಡೆಸಿಕೊಂಡು ಬಂದಿರುತ್ತಾರೆ. ತಾವೂ ಪ್ರೀತಿ ವಿಶ್ವಾಸಗಳನ್ನು ತೋರಿಸಿ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದಾರೆ.

*ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ । ಭದ್ರಂ ಪಶ್ಯೇಮ ಅಕ್ಷಭಿರ್ಯಜತ್ರಾಃ । ಸ್ಥಿರೈರಂಗೈಸ್ತುಷ್ಟುವಾಗ್ಂ ಸಸ್ತನೂಭಿಃ । ವ್ಯಶೇಮ ದೇವಹಿತಂ ಯದಾಯುಃ ।*



**160. ಔಪಾಸನೆ**

ಎಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತ, ಆ ಭಗವಂತನು ಅವಧಾನಿಗಳಿಗೆ ಇನ್ನೂ ಹೆಚ್ಚು ಆಯುಸ್ಸನ್ನೂ, ಆರೋಗ್ಯವನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

## ೧೩. ಅನ್ವರ್ಥನಾಮ

*ಬಿ.ಎನ್.ಶ್ರೀಕಂಠಯ್ಯ*

ವೇದಮೂರ್ತಿ ಬ್ರಹ್ಮಶ್ರೀ ವೇಂಕಟಕೃಷ್ಣಾವಧಾನಿಗಳಿಗೆ **ಶತಾಭಿಷೇಕ ಮಹೋತ್ಸವ** ನಡೆಯಲಿರುವ ವಿಚಾರ ತಿಳಿದಾಗ, ನನಗಾದ ಸಂತೋಷ ಹೇಳತೀರದು. 'ಪುರೋಹಿತರು' ಎನ್ನುವ ಪದಕ್ಕೆ ಸರಿಯಾದ ಅರ್ಥನೀಡಿ ನಡೆದಿರುವ ಮಹಾವ್ಯಕ್ತಿ ನಮ್ಮ ಅವಧಾನಿಗಳು.

ಶ್ರೀ ಅವಧಾನಿಗಳ ಪರಿಚಯ, ಸುಮಾರು ಐವತ್ತು ವರ್ಷಗಳಿಂದ. ಅವರು ಕರಣಿಕರ ವೇದಪಾಠಶಾಲೆಯಲ್ಲಿ ಋಗ್ವೇದ ಪ್ರಾಧ್ಯಾಪಕರಾಗಿದ್ದ ಸಮಯ. ಅವರು ಋಗ್ವೇದ ಉಪಾಕರ್ಮವನ್ನು ಮಾಡಿಸುತ್ತಿದ್ದ ರೀತಿ ಮತ್ತು ಪ್ರಯೋಗಗಳಿಂದ ಆಕರ್ಷಿತನಾಗಿ ಪ್ರತಿವರ್ಷವೂ ಜಯನಗರದಿಂದ ಆ ಪಾಠಶಾಲೆಗೇ ಹೋಗುತ್ತಿದ್ದೆ.

ಹಸನ್ಮುಖರಾಗಿ ಸಮೀಪದಲ್ಲೇ ಕೂರಿಸಿಕೊಂಡು, ಆ ಕರ್ಮವನ್ನು ಕಿಂಚಿತ್ತೂ ಲೋಪವಿಲ್ಲದಂತೆ ಮಾಡಿಸುತ್ತಿದ್ದರು. ೧೯೫೭ನೇ ಇಸವಿಯಲ್ಲಿ ನಮ್ಮ ನೂತನ ಗೃಹದ 'ಗೃಹಪ್ರವೇಶ' ಸಮಾರಂಭವನ್ನೂ ಬಹು ಚೆನ್ನಾಗಿ ನೆರವೇರಿಸಿಕೊಟ್ಟರು. ಅವರು ಬರೆದು ಕೊಟ್ಟಿದ್ದ ಶಾಸ್ತ್ರದ ಸಾಮಾನುಗಳ ಪಟ್ಟಿಯಲ್ಲಿ 'ಆಚಾರ್ಯರ ಸಂಭಾವನೆ'ಯೇ ಇರಲಿಲ್ಲ. ಕೇಳಿದರೂ ಉತ್ತರವಿಲ್ಲ. ನನಗೆ ತೋಚಿದಷ್ಟು ಕೊಟ್ಟೆ. ನಾವು ಕೊಟ್ಟಿದ್ದನ್ನು ಸಂತೋಷದಿಂದ ಸ್ವೀಕರಿಸಿ, ಹೃದಯಾಂತರಾಳದಿಂದ ಆಶೀರ್ವದಿಸಿರುವ ಮಹನೀಯರು ಅವರು. 'ವೇದವಿಕ್ರಯ' ಮಾಡದೆ ತಮ್ಮ ಜೀವನವನ್ನು ನಡೆಸಿರುವವರು.

ನನ್ನ ಮಾತೃಶ್ರೀಯವರು ನಿಧನರಾದ ಸಂವತ್ಸರದಲ್ಲಿ, ಅವರ ಮನೆಯಲ್ಲಿಯೇ ನಡೆಯಬೇಕಾದ 'ಶ್ರೀ ವರಮಹಾಲಕ್ಷ್ಮಿ'ಯ ಪೂಜಾದಿಗಳು, ಊಟ ಉಪಚಾರಾದಿಗಳಿಗೆ ತೊಂದರೆ ಆಗುವುದನ್ನೂ ಲೆಕ್ಕಿಸದೆ, ಅವರು ಆ ದಿನದ ಕರ್ಮವನ್ನು ನಿರ್ವಹಿಸಿಕೊಟ್ಟಿದ್ದನ್ನು ನಾನು ಮರೆಯುವಂತಿಲ್ಲ. ಅವರ **ಶತಾಭಿಷೇಕ** ನೋಡುವ, ಅನುಭವಿಸುವ ಸುಯೋಗವನ್ನು ನೀಡಿರುವುದಕ್ಕಾಗಿ ಭಗವಂತನಿಗೆ ಅನಂತ ವಂದನೆಗಳು.


## ೧೪. ವೇ. ಬ್ರ. ಶ್ರೀ ಪಾಳ್ಯದ ವೆಂಕಟಕೃಷ್ಣಾವಧಾನಿಗಳು

***ಸಂದರ್ಶಕರು : ಸುಬ್ಬಣ್ಣ : ಸಂಕೇತಿ ಸಂಗಮ : ಸೆಪ್ಟಂಬರ್, '೯೯***

ಪಾಳ್ಯದ ವೇದಮೂರ್ತಿ ಶ್ರೀ ವೆಂಕಟಕೃಷ್ಣಾವಧಾನಿಗಳು ತಮ್ಮ ತೊಂಬತ್ತೈದನೇ ವಯಸ್ಸಿನಲ್ಲೂ ನಿಖರವಾಗಿ ತಮ್ಮ ಬಾಳಿನ ಕಳೆದ ದಿನಗಳನ್ನು ನೆನಪಿಸಿಕೊಂಡು, ಹಂಚಿಕೊಳ್ಳುವುದು ಸೋಜಿಗವೇ ಸರಿ. ಶತಾಯುಷಿಗಳಾಗಿ ಎಂದು ಸಂಪದದ ಪರವಾಗಿ ಆಶಯ ವ್ಯಕ್ತಪಡಿಸುತ್ತ, ಜ್ಞಾನವೃದ್ಧರೂ ವಯೋವೃದ್ಧರೂ ಆದ ಶ್ರೀಯುತರ ಆಶೀರ್ವಾದ ಪಡೆಯಲು ಹೋದಾಗ ಮೇಲಿನ ಮಾತು ನಿಜವೆನಿಸಿತು. ಬಾಳಿನ ಮುಸ್ಸಂಜೆಯಲ್ಲಿ, ಜೀವನದ ಕರ್ತವ್ಯಗಳನ್ನೆಲ್ಲ ಪೂರೈಸಿ, ಋಷಿ ಸದೃಶ ಜೀವನವನ್ನು ನಡೆಸುತ್ತಿರುವ ಅವಧಾನಿಗಳು, ಇಂದಿಗೂ ವೇದಾಧ್ಯಯನ ನಿರತರು. ಪೂಜ್ಯರು ಮಾತನಾಡಿದಾಗ ವೇದಮಾತೆಯೇ ನುಡಿಯುತ್ತಿದ್ದಾಳೆಂದು ಭಾಸವಾದರೆ ಆಶ್ಚರ್ಯವಿಲ್ಲ. ಜೀವನೋತ್ಸಾಹ, ಮಕ್ಕಳ ಮೇಲಿನ ಮಮತೆ, ಬಂಧುಗಳಿಂದ ಆದ ಉಪಕಾರಸ್ಮರಣೆ, ವಿದ್ಯಾರ್ಥಿಗಳ ಮೇಲಿನ ಅಚಲ ಪ್ರೀತಿ ಅವಧಾನಿಗಳ ಸದ್ಗುಣಗಳ ಪಟ್ಟಿಯಲ್ಲಿ ಕೆಲವು ಮಾತ್ರ. ಎಪ್ಪತ್ತು ವರ್ಷಗಳಿಗೂ ಮಿಗಿಲಾಗಿ, ವಿದ್ಯಾರ್ಥಿಗಳನ್ನು ಸಂಸ್ಕೃತ ವೇದಗಳಲ್ಲಿ ತಯಾರು ಮಾಡಿರುವುದು ಒಂದು ದಾಖಲೆಯೇ. ಸಾವಿರಾರು ವಿದ್ಯಾರ್ಥಿಗಳು ಅವಧಾನಿಗಳ ಕೃಪಾಶ್ರಯದಲ್ಲಿ ವಿದ್ಯಾವಂತರಾಗಿ ಇಂದು ದೇಶದ ಮೂಲೆಮೂಲೆಗಳಲ್ಲಿ ಸನಾತನಧರ್ಮಪ್ರಚಾರ ಕಾರ್ಯವನ್ನು ಕೈಗೊಂಡು ಸೇವೆಸಲ್ಲಿಸುತ್ತಿದ್ದಾರೆ. ತಮ್ಮ ಭಾವಮೈದುನರೂ ಆದ ವೇ. ಶ್ರೀ ರಾಮೇಶ್ವರ ಅವಧಾನಿಗಳು ಅಂತಹ ಸದ್ಗುಣಶೀಲ ಪರಂಪರೆಗೆ ಸೇರಿದ ವಿದ್ಯಾರ್ಥಿ ಎಂದು ಸ್ಮರಿಸುತ್ತಾರೆ. ಸನಾತನ ಧರ್ಮದ ಮೇಲಿನ ಅಸ್ಖಲಿತ ಶ್ರದ್ಧೆಯೇ ಇಂದು ಶ್ರೀ ವೆಂಕಟಕೃಷ್ಣ ಅವಧಾನಿಗಳನ್ನು ಸಮಾಜದಲ್ಲಿ ಉನ್ನತ ಮಟ್ಟದಲ್ಲಿ ಇರಿಸಿದೆ ಎಂದರೆ ತಪ್ಪಾಗಲಾರದು. ಎಲ್ಲರ ಹಿತವನ್ನೂ ಬಯಸುವ, ವೇದೋಕ್ತ



***161. ಮತ್ತೂರಿನ ವೇ. ಬ್ರ. ಶ್ರೀ ಲಕ್ಷ್ಮೀಕೇಶವ (ಮರಿಯಣ್ಣ ) ಅವರೊಂದಿಗೆ ಸಮಾಲೋಚನೆ***



**162. ಶತಾಯುಷಿಗೆ ಮಂಗಳಸ್ನಾನ**

ಹೊತ್ತು ಬಡತನದ ಬೇಗೆಯಲ್ಲಿ ಬೆಂದ ಜೀವ ಅವರದು. ತಮ್ಮ ತಂದೆಯವರ ಕಾಲಾನಂತರ ಪಾಳ್ಯಕ್ಕೆ ಹಿಂದಿರುಗಿ ಬಂದ ಸಂದರ್ಭ ಹಾಗೂ ಹಳ್ಳಿಗರ ಮನೆಗೆ ಪಂಚಾಂಗ ಶ್ರವಣಕ್ಕೆಂದು ಹೋಗುತ್ತಿದ್ದ ಸಂದರ್ಭಗಳನ್ನು ನೆನೆಸುತ್ತಾರೆ.

ಅವಧಾನಿಗಳ ಆರಂಭಿಕ ವಿದ್ಯಾಭ್ಯಾಸ ಪಾಳ್ಯಗ್ರಾಮಕ್ಕೆ ಹತ್ತಿರವಿರುವ **ಸಿಂಗಾಪುರ** ಎಂಬಲ್ಲಾಯಿತು. ಅಲ್ಲಿ ಓದಿದ್ದು ಮೂರನೇ ಇಯತ್ತೆಯವರೆಗೆ ಮಾತ್ರ. ಪಾಳ್ಯದಿಂದ ಮುಂದಿನ ಪಯಣ ಬೇಲೂರಿಗೆ. ಅಲ್ಲಿ ಬೇಲೂರು ರಾಮಾಜೋಯಿಸರಲ್ಲಿ ಶಿಕ್ಷಣ ಮುಂದುವರೆಯಿತು. ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರೂ ಆದರು. ಮುಂದಿನ ವಿದ್ಯಾಭ್ಯಾಸ ಮೈಸೂರಿನ ಪಾಠಶಾಲೆಯಲ್ಲಿ ನಡೆಯಿತು. "ಆಗಿನ ಕಾಲದ ವಿದ್ಯಾರ್ಥಿ-ಗುರು ಸಂಬಂಧವೇ ಬೇರೆ. ವಿದ್ಯಾರ್ಥಿಗಳಲ್ಲಿ ಸಹಜವಾದ ಭಕ್ತಿ, ನಯ, ವಿನಯಗಳಿದ್ದವು. ಗುರುಗಳೂ ತಮ್ಮ ಶಿಷ್ಯರನ್ನು ಪುತ್ರರಂತೆ ಮಮತೆಯಿಂದ ನೋಡಿಕೊಳ್ಳುತ್ತಿದ್ದರು. ನಮಗೆ ಕಲಿಸಿದ ಗುರುಗಳಲ್ಲಿ ದ್ವಿವೇದಿ ಸುಬ್ರಹ್ಮಣ್ಯ ಅವಧಾನಿಗಳು ಹಾಗೂ ಕೃಷ್ಣಾವಧಾನಿಗಳು

ಆಶೀರ್ವಚನವನ್ನು ನೀಡುವ ಅವಧಾನಿಗಳ ಕಳಕಳಿ ವಿಶೇಷವಾಗಿ ಯುವಜನಾಂಗದ ಮೇಲೆ. ತಮ್ಮ ಉದ್ಯೋಗಗಳಲ್ಲೇ ಇದ್ದು ನಮ್ಮವರು ವೇದಾಧ್ಯಯನ ನಿರತರೂ ಆಗಲೆಂದು ಹಿರಿಯರು ಬಯಸುತ್ತಾರೆ. ನಾವು ನಂಬಿರುವ ಗಾಯತ್ರೀ ಮಂತ್ರವೇ ನಮ್ಮ ಶ್ರೀರಕ್ಷೆ ಎಂದು ಅಭಿಮಾನದಿಂದ ಹೇಳುತ್ತಾರೆ.

ಶ್ರೀ ವೆಂಕಟಕೃಷ್ಣಾವಧಾನಿಗಳ ಜನನ ಆಲೂರು ತಾಲೂಕಿನ ಪಾಳ್ಯ ಗ್ರಾಮದಲ್ಲಿ, ೧೯೦೫ರಲ್ಲಿ ಆಯಿತು. ತಂದೆ ವೇ. ಶ್ರೀ ಕಾಶೀಪತಿ ಅವಧಾನಿಗಳು, ತಾಯಿ ಶ್ರೀಮತಿ ಸುಬ್ಬಮ್ಮ. ಅವಧಾನಿಗಳ ಅಜ್ಜಂದಿರು ಕೂಡ ವೇದಾಧ್ಯಯನ ಸಂಪನ್ನರು. **ಮೇಲಿನ ಏಳು ತಲೆಮಾರಿನವರೂ ವೇದವಿದ್ಯೆಗಾಗಿ ತಮ್ಮ ಬದುಕನ್ನು ಮುಡಿಪಿಟ್ಟರು** ಎಂದು ಶ್ರೀ ಅವಧಾನಿಗಳು ಹೆಮ್ಮೆಯಿಂದ ಸ್ಮರಿಸುತ್ತಾರೆ. ಅವಧಾನಿಗಳ ತಂದೆ ಹತ್ತಾರು ಮಹಾಯಾಗ ಯಜ್ಞಾದಿಗಳನ್ನು ನೆರವೇರಿಸಿದಂತಹವರು. ಹೆಬ್ಬಾಲೆಯಲ್ಲಿ, ಎಡತೊರೆಯಲ್ಲಿ ನಡೆದ ಮಹಾಯಜ್ಞಗಳ ಹೋತೃಗಳಾಗಿದ್ದವರು. ಕರ್ನಾಟಕದ ಆಚೆ ಕೊಯಮತ್ತೂರಿನಲ್ಲಿ **ಅಗ್ನಿಷ್ಟೋಮ ಯಾಗ** ನಡೆಸಿದ ಕೀರ್ತಿವಂತರು. ಚಿಕ್ಕ ವಯಸ್ಸಿನಲ್ಲೇ ಮನೆಯ ಜವಾಬ್ದಾರಿ



**163. ಪಾದಪೂಜೆಯ ಸಮಯ : ಶ್ರೀಲಕ್ಷ್ಮಿ ಅವರ ಸೊಸೆ ಕಾತ್ಯಾಯಿನಿ ಅವರು ಹಣೆಗೆ ಕುಂಕುಮ ಇಡುತ್ತಿರುವುದು**



*164. ಶಾಂತಾ, ಅನ್ನಪೂರ್ಣಾ ಅವರಿಂದ ಆರತಿ. ಅವಧಾನಿಗಳ ಪಕ್ಕದಲ್ಲಿ ಶ್ರೀನಿವಾಸಮೂರ್ತಿ ಮತ್ತು ಶಿವಸ್ವಾಮಿ*

ಪ್ರಮುಖರು. ಅವರ ಸಾನ್ನಿಧ್ಯದಲ್ಲೇ ನಾನು ಋಗ್ವೇದವನ್ನು ಪೂರ್ತಿಯಾಗಿ ಕ್ರಮಾಂತ ಅಧ್ಯಯನ ನಡೆಸಿದೆ" ಎನ್ನುತ್ತಾರೆ ಅವರು.

ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವೇದಾಧ್ಯಯನ ಮುಗಿಸಿ, ಸಂಸ್ಕೃತಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ ಉಪಾಧ್ಯಾಯರಾಗಿ, ವೇ. ಬ್ರ. ಶ್ರೀ ವೆಂಕಟಕೃಷ್ಣಾವಧಾನಿಗಳು ಹೊಳಲಕೆರೆಯಲ್ಲಿ ಆರು ತಿಂಗಳು ಸೇವೆ ಸಲ್ಲಿಸಿದರು. ಅನಿವಾರ್ಯವಾಗಿ ಪಾಳ್ಯಕ್ಕೆ ಹಿಂದಿರುಗಬೇಕಾಯಿತು. ಮುಂದೆ ಕೂದವಳ್ಳಿಯ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿ ಐದು ವರ್ಷಗಳ ಅವಧಿಯಲ್ಲಿ ನೂರಾರು ವಿದ್ಯಾರ್ಥಿಗಳನ್ನು ಸಂಸ್ಕೃತ-ವೇದಗಳಲ್ಲಿ ತಯಾರು ಮಾಡಿದರು. ಇಂದು ಕೂಡ ಕೂದವಳ್ಳಿಯಲ್ಲಿ ತಮ್ಮಿಂದ ಕಲಿತ ಶಿಷ್ಯರು ಪೌರೋಹಿತ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆಂದು ಅವಧಾನಿಗಳು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.

ಮಹಾಪುರುಷರ ಬಾಲ್ಯ ಕೆಲವೊಮ್ಮೆ ವೈಶಿಷ್ಟ್ಯಗಳಿಂದ ಕೂಡಿರುತ್ತದೆ. ಬಾಲ್ಯದಲ್ಲಿ ಲಭ್ಯವಾಗುವ ಒಂದು ಪ್ರಚೋದನೆ, ಉತ್ತೇಜನ ಜೀವನದ ಪಥವನ್ನೇ ಬದಲಾಯಿಸುತ್ತದೆ.

"ನಿಮ್ಮ ಬಾಲ್ಯದಲ್ಲಿ ಅತ್ಯಂತ ಪ್ರಭಾವ ಬೀರಿದ ವ್ಯಕ್ತಿಗಳ್ಯಾರಾದರೂ ಇದ್ದಾರೆಯೆ?" ಎಂದು ಕೇಳಿದೆ. ಅತ್ಯಂತ ಕೃತಜ್ಞತಾಭಾವದಿಂದ ಅವಧಾನಿಗಳು ನುಡಿದರು - "ನನ್ನ ಬಾಲ್ಯದಲ್ಲಿ ನನಗೆ ಅತ್ಯಂತ ಪ್ರಭಾವ ಬೀರಿದ ವ್ಯಕ್ತಿ ನನ್ನ ಸೋದರಮಾವನೇ, 'ಶೃಂಗೇರಿ ಪುಟ್ಟ ಶ್ಯಾಮಾಶಾಸ್ತ್ರಿ'ಗಳೆಂಬ ಪ್ರಸಿದ್ಧರಾದ ವಿದ್ಯಾನಿಧಿಗಳು. ನನ್ನನ್ನು, ವಿದ್ಯಾಭ್ಯಾಸ ಮಾಡಬೇಕೆಂದು ಆಗ್ರಹಪಡಿಸಿ ಉತ್ತೇಜಿಸಿದರು. ಆರಂಭದಲ್ಲಿ, ವೇದವಿದ್ಯೆಗೆ ನನ್ನನ್ನು ತೊಡಗಿಸಿದವರೂ ಅವರೇ. ಅವರ ಕೃಪಾಶೀರ್ವಾದವೇ ಇಂದು ನನ್ನನ್ನು *ಈ* ಮಟ್ಟಕ್ಕೆ ತಂದಿದೆ" ಎಂದು ಅವಧಾನಿಗಳು ವಿನಮ್ರರಾಗಿ ತಮ್ಮ ಬಾಲ್ಯವನ್ನು ನೆನೆಸಿಕೊಂಡರು.

ಕಳೆದ ಅರುವತ್ತೊಂಬತ್ತು ವರ್ಷಗಳಿಂದ ಬೆಂಗಳೂರಲ್ಲೇ ನೆಲೆಸಿರುವ ಶ್ರೀ ವೆಂಕಟಕೃಷ್ಣಾವಧಾನಿಗಳನ್ನು ಸಹಜವಾಗಿ ಎಂಬಂತೆ ಪ್ರಶ್ನಿಸಿದೆ - "ಅವಧಾನಿಗಳೆ, ಬೆಂಗಳೂರಿನಲ್ಲಿ ನಿಮ್ಮ ಆರಂಭಿಕ ಜೀವನ ಹೇಗಿತ್ತು?" ಎಂದು. ೧೯೩೮ರಷ್ಟು ಹಿಂದೆಯೇ ಅವಧಾನಿಗಳು



*165. ಪಾದಪೂಜೆ : ಶಿವಸ್ವಾಮಿ ಮತ್ತು ನಾಗವೇಣಿ ಅವರಿಂದ : ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಮಾರ್ಗದರ್ಶನ*

ಬೆಂಗಳೂರಿಗೆ ಬರುವಂತಾದುದು ಒಂದು ಯೋಗವೆಂದು ಅವರ ಉತ್ತರದಿಂದ ಜ್ಞಾತವಾಯಿತು. ಕ್ರಮಾಂತ ವಿದ್ವತ್ ಪರೀಕ್ಷೆಯಲ್ಲಿ (೧೯೩೮) ಉತ್ತೀರ್ಣರಾಗಿ ಬೆಂಗಳೂರಿನ ಕರಣಿಕರ ಸಂಸ್ಕೃತ ವೇದ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿ ತಮ್ಮ ತಾರುಣ್ಯದ ಜೀವನವನ್ನು ಆರಂಭಿಸಿದರು. ೧೯೪೨ರಲ್ಲಿ ಸ್ಮಾರ್ತ ಪ್ರಯೋಗ ಪರೀಕ್ಷೆಯೂ ಆಯಿತು. ೧೯೪೩ರಲ್ಲಿ ಋಗ್ವೇದ ಶ್ರೌತ ಪ್ರಯೋಗದ ಅಭ್ಯಾಸವೂ ನಡೆಯಿತು.



167. ಆರತಿ : ಶ್ರೀನಿವಾಸಮೂರ್ತಿ ಅವರಿಂದ

"ನಾನು ಬೆಂಗಳೂರಿಗೆ ಬಂದ ಮೇಲೆ ಯಜುರ್ವೇದ ಅಭ್ಯಾಸ ಮಾಡಿ, ಪ್ರಯೋಗ ಅಭ್ಯಾಸಮಾಡಿ, ಸಂಕೇತಿಗಳನ್ನು ಒಳಗೊಂಡಂತೆ ಬ್ರಾಹ್ಮಣ ಸಮುದಾಯದಲ್ಲಿ ಪೌರೋಹಿತ್ಯವನ್ನು ಮುಂದುವರೆಸಿಕೊಂಡು ಬಂದಿದ್ದೇನೆ. ಅನೇಕರು ನನ್ನಲ್ಲಿ ಕಲಿತು, ನಿಷ್ಣಾತರಾಗಿ ಪೌರೋಹಿತ್ಯವನ್ನು ಮುಂದುವರೆಸುತ್ತಿದ್ದಾರೆ. ಹೆಸರಾಂತ ದೇವಸ್ಥಾನಗಳಲ್ಲಿ ಅರ್ಚಕರಾಗಿದ್ದಾರೆ. ಇದುವರೆಗೆ ಸಾವಿರಾರು ಗೃಹಪ್ರವೇಶಗಳನ್ನು, ಮದುವೆ ಮುಂಜಿಗಳನ್ನು ನಡೆಸಿಕೊಟ್ಟಿದ್ದೇನೆ. ನೂರಾರು ನವಗ್ರಹ, ಮೃತ್ಯುಂಜಯ, ಸತ್ಯನಾರಾಯಣ ಉದ್ಯಾಪನೆಗಳೆಲ್ಲ ನಡೆದಿವೆ. ಎಡತೊರೆಯಲ್ಲಿ ರುದ್ರಹೋಮ ನಡೆಸಿದ್ದಾಗಿದೆ. ಅನೇಕ ರೀತಿಯ ಪೂಜೆ, ವ್ರತ, ಹೋಮ ಹವನಗಳು, ದೈವ ಕೃಪೆಯಿಂದ ನಡೆದಿವೆ" ಎಂದು ನೆನೆಸುತ್ತಾರೆ.

"ಹಿಂದಿನ ವಿದ್ಯಾರ್ಥಿಗಳಿಗೂ, ಇಂದಿನ ವಿದ್ಯಾರ್ಥಿಗಳಿಗೂ ಏನು ಅಂತರ? ಏನು ಸಾಮ್ಯ? ಉತ್ತಮ ವಿದ್ಯಾರ್ಥಿಗೆ ಇರಬೇಕಾದ ಕನಿಷ್ಠ ಅರ್ಹತೆಗಳು ಯಾವುವು?" ಎಂದು ಕೇಳಿದೆ.



166. ಶತಾಯುಷಿಗೆ ತುಲಾಭಾರ

"ಉತ್ತಮ ವಿದ್ಯಾರ್ಥಿ ಎನಿಸಿಕೊಳ್ಳಬೇಕಾದರೆ ನಯ, ವಿನಯಗಳು ಅವನಲ್ಲಿ ಮೂರ್ತಿವೆತ್ತಿರಬೇಕು. ಭಯ ಭಕ್ತಿ ತುಂಬಿರಬೇಕು. ಪ್ರಯೋಗ, ಶಾಸ್ತ್ರ ಸಂಬಂಧ ವಿಚಾರಗಳಲ್ಲಿ ಅತ್ಯಂತ ಶ್ರದ್ಧೆ ಇರಬೇಕಾದುದು ಅನಿವಾರ್ಯ. ಗುರುವಿನ ಕೃಪಾದೃಷ್ಟಿಗೆ ಬೀಳುವುದೇ ವಿದ್ಯಾರ್ಥಿಯ ಪರಮಗುರಿ. ಭಯ ಭಕ್ತಿಯಿಂದ ಗುರುವನ್ನು ಸೇವಿಸುವವನೇ ನಿಜವಾದ ವಿದ್ಯಾರ್ಥಿ" ಎಂದು ಅವಧಾನಿಗಳು ತಮ್ಮ ನಿಲುವನ್ನು ವ್ಯಕ್ತಪಡಿಸಿದರು.

"ಅವಧಾನಿಗಳೇ, ವೇದಾಧ್ಯಯನ ನಮ್ಮ ಕರ್ತವ್ಯ; ಆದರೆ ಕಾರಣಾಂತರಗಳಿಂದ ನಾವು ಇಂದು ಆಧುನಿಕ ವಿಜ್ಞಾನವನ್ನು ಕಲಿಯಬೇಕಾಗಿದೆ. ಎರಡು ವಿಷಯಗಳಲ್ಲೂ

ನಾವು ಸಮನ್ವಯ ನೀತಿಯನ್ನು ಅನುಸರಿಸುವುದು ಹೇಗೆ?" ಎಂದು ನಾನು ಪ್ರಶ್ನಿಸಿದೆ. ಅವಧಾನಿಗಳ ನಿಖರ ಪ್ರತಿಕ್ರಿಯೆ ನನ್ನನ್ನು ದಂಗು ಬಡಿಸಿತು.

"ಇಂದಿನ ವಿನೂತನ ಶಿಕ್ಷಣ ಪದ್ಧತಿಯಿಂದ ಸಂಸ್ಕೃತ ವೇದಗಳನ್ನು ಕಲಿಯಲು ಅಸಾಧ್ಯವಾಗಿರಬಹುದು. ಆದರೆ ನಾವು ಎರಡನ್ನೂ ಊರ್ಜಿತಗೊಳಿಸಿಕೊಳ್ಳಬಹುದು. ನಾವು ಉದ್ಯೋಗಕ್ಕಾಗಿ ಕಲಿತ ವಿದ್ಯೆ ಏನೇ ಇದ್ದರೂ, ಪ್ರತಿದಿನ ಸ್ನಾನ ಸಂಧ್ಯಾವಂದನೆಗಳನ್ನು ಮಾಡುವಂತಾಗಿ, ಶ್ರೀ ಗಾಯತ್ರೀ ದೇವಿಯ ಕೃಪೆಗೆ ಬೀಳುವಂತಾಗ ಬೇಕು. ಅವಕಾಶ ಸಿಕ್ಕಾಗಲೆಲ್ಲ ಮಂತ್ರ ಭಾಗಗಳನ್ನು ಕಲಿಯುವ ಆಸಕ್ತಿ ನಮ್ಮವರಲ್ಲಿರಬೇಕು."

"ಅನೇಕ ಕಾರಣಗಳಿಂದ ನಮ್ಮ ಪ್ರತಿಭಾವಂತ ಯುವಕರು ನೌಕರಿಗಾಗಿ ವಿದೇಶಗಳಿಗೆ ಹೋಗಿ ನೆಲೆಸುವ ಜಾಡು ಆರಂಭವಾಗಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂಬುದು ನನ್ನ ಮುಂದಿನ ಪ್ರಶ್ನೆ.

"ಸದ್ಯದ ಪರಿಸ್ಥಿತಿಯಲ್ಲಿ ನಮ್ಮವರು ವಿದೇಶಗಳಿಗೆ ಹೋಗುವುದು ಅನಿವಾರ್ಯದಂತಾಗಿರಬಹುದು. ಇದು ಸಹ್ಯ. ಆದರೆ ವಿದೇಶದಲ್ಲೇ



*168. ಸಮಸ್ತ ಸನ್ಮಂಗಳಾನಿ ಭವನ್ತು*

ನೆಲೆಸುವುದು ನನ್ನ ಮನಸ್ಸಿಗೆ ಹಿಡಿಸದ ವಿಚಾರ. ವಿದೇಶದಲ್ಲಿ ವಾಸಮಾಡುವಂತಾದರೆ ನಮ್ಮ ಮಾತೃಭೂಮಿಯ ಸೇವೆ ಸಲ್ಲಿಸಿದಂತಾಗುವುದೆ? ಕೈತುಂಬ ಸಂಪಾದಿಸಿ, ಅನಂತರ ದೇಶಸೇವೆ ಮಾಡುವುದು ಅತ್ಯುತ್ತಮ" ಎಂದು ಶ್ರೀ ಅವಧಾನಿಗಳು ಉತ್ತರಿಸಿದಾಗ, ಹಿಂದಿನ ತಲೆಮಾರಿನ ಪ್ರಜ್ಞಾವಂತ ಹಿರಿಯರು ಆಧುನಿಕ ವೈಚಾರಿಕತೆಗೆ ಸಹಜವಾಗಿ ಎಂಬಂತೆ ಹೊಂದಿಕೊಳ್ಳುವ ಅವರ ಶಕ್ತಿಯ ಅರಿವಾಯಿತು.

ಶ್ರೀ ಅವಧಾನಿಗಳ ಸುದೀರ್ಘ ಸೇವೆಯನ್ನು ಗುರುತಿಸಿ, ಅವರನ್ನು ಸನ್ಮಾನಿಸುತ್ತ ಕ್ರಿಯಾಶೀಲ ಸಮಾಜ ತನ್ನ ಋಣವನ್ನು ತೀರಿಸುತ್ತ ಬಂದಿದೆ. ಅವರನ್ನು ಅರಸುತ್ತ ಬಂದಿರುವ ಸನ್ಮಾನ ಬಿರುದುಗಳು ಹಲವು. ಚಾಮರಾಜಪೇಟೆಯ ಸೀತಾರಾಮಾಂಜನೇಯ ವೇದ ಪಾಠಶಾಲೆಯ ವತಿಯಿಂದ, ಶ್ರೀ ಶ್ರೀ ಶೃಂಗೇರಿ ಸ್ವಾಮಿಗಳ ಕೃಪಾಶೀರ್ವಾದದೊಂದಿಗೆ ದಯಪಾಲಿಸಿರುವ **ವೇದಶಿರೋಮಣಿ** ಬಿರುದು, ಶ್ರೀ ಶುಕ್ಲಯಜುಶ್ಶಾಖಾ ಟ್ರಸ್ಟ್‌ನವರು ನೀಡಿರುವ **ವೇದಮಾರ್ತಾಂಡ** ಬಿರುದು ಹೆಸರಿಸಲು ಕೆಲವು. 'ಶಂಕರಭಾಸ್ಕರ'ದ ವೇದಮೂರ್ತಿ ಕೆ.ಜಿ.ಸುಬ್ರಾಯಶರ್ಮರು, ಜ್ಯೋತಿ ಇಂಡಸ್ಟ್ರೀಸ್‌ನ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು, ಕೌಶಿಕ ಸಂಕೇತಿ ಸಂಘವೇ ಮುಂತಾದ ಸಂಘ ಸಂಸ್ಥೆಗಳು ಆದರಪೂರ್ವಕವಾಗಿ ನಡೆಸಿರುವ ಸನ್ಮಾನ ಸಮಾರಂಭಗಳ ಪಟ್ಟಿ ಬೆಳೆಯುತ್ತದೆ. ಅಭಿಮಾನದ ಮಹಾಪೂರವೇ ಹರಿದಿದೆ- ವಿದ್ಯಾರ್ಥಿಗಳಿಂದ, ಬಂಧುಗಳಿಂದ. ಕರ್ನಾಟಕ ಸರ್ಕಾರದ ವತಿಯಿಂದ ಬರುತ್ತಿರುವ ಗೌರವಧನ ಕೂಡ ಸಮಾಜದ ಕೃತಜ್ಞತೆಯ ಪ್ರತೀಕವೇ ಆಗಿದೆ.

"ಬಿಡುವಿನ ವೇಳೆಯನ್ನು ಹೇಗೆ ಕಳೆಯುತ್ತೀರಿ?" ಎಂದು ಅವಧಾನಿಗಳನ್ನು ಕೇಳಿದೆ. ಶ್ರೀಯುತರ ಉತ್ತರ ಚಕಿತಗೊಳಿಸಿತು. ಮೂವತ್ತೆರಡು ಸಂಪುಟಗಳ ಋಗ್ವೇದ ಭಾಷ್ಯವನ್ನು ಸಂಪೂರ್ಣವಾಗಿ ಓದಿ ಮುಗಿಸಿದ್ದಾರೆ. ಸುಮಾರು ಎಂಬತ್ತು ಲಕ್ಷ ರಾಮನಾಮ ಬರೆದಿದ್ದಾರೆ. ಪ್ರತಿದಿನವೂ ಗಂಟೆಗಳ ಕಾಲ ವೇದ ಮಂತ್ರಗಳನ್ನು ಹೇಳಿಕೊಳ್ಳುತ್ತಾರೆ. ಒಂದು ದಿನವೂ ತಪ್ಪದೆ ಏಕಾದಶ ರುದ್ರ ಪಾರಾಯಣ ಮಾಡುತ್ತಿರುವುದು ಅವಧಾನಿಗಳ ತಪಸ್ಸಿನ ಸಂಕೇತ.

ಶ್ರೀ ವೆಂಕಟಕೃಷ್ಣಾವಧಾನಿಗಳ ಮಡದಿ ತಮ್ಮ ಕಣ್ಣುಗಳನ್ನು ತ್ಯಾಗಮಾಡಿದ ಕರುಣಾಮಯಿ. ತಮ್ಮ ದೇಹತ್ಯಾಗಾನಂತರ ಕಣ್ಣುಗಳನ್ನು ದಾನ ಮಾಡಬೇಕೆಂಬ ಪ್ರೇರಣೆ ಅವರಿಗೆ ಹೇಗೆ ಉಂಟಾಯಿತೆಂದು ಅವಧಾನಿಗಳನ್ನು ಕೇಳಿದೆ. "ಕಣ್ಣುಗಳನ್ನು ದಾನಮಾಡಲು ದೈವವೇ ಪ್ರೇರಣೆ ನೀಡಿತು. ಹಿರಿಯ ನೇತ್ರತಜ್ಞರಾದ

ಡಾ.ಕೃಷ್ಣಮೂರ್ತಿಗಳ ಸಲಹೆಯ ಮೇರೆಗೆ ಕಣ್ಣುಗಳನ್ನು ದಾನಮಾಡಲು ನಿರ್ಧರಿಸಲಾಯಿತು. ಡಾ.ರಾಮಚಂದ್ರಮೂರ್ತಿಯವರು ಜೀವಂತ ಕಣ್ಣುಗಳನ್ನು, ದೃಷ್ಟಿಹೀನರಲ್ಲಿ ಇರಿಸಿ ಬೆಳಕು ಕಾಣುವಂತೆ ಮಾಡಿರುವುದು ಪವಾಡ ಸದೃಶ ಘಟನೆ. ದೃಷ್ಟಿ ಪಡೆದವರು ಇಂದೂ ಸುಖವಾಗಿದ್ದಾರೆ, ಆಗಾಗ ಬಂದು ವಿಚಾರಿಸುತ್ತಿರುತ್ತಾರೆ."

ಕೊನೆಯ ಪ್ರಶ್ನೆಯಾಗಿ ಅವಧಾನಿಗಳನ್ನು ಕೇಳಿದೆ- "ನಮ್ಮ ಯುವ ಜನಾಂಗಕ್ಕೆ ನಿಮ್ಮ ಸಮಯೋಚಿತ ಹಿತನುಡಿಗಳೇನು?" ಎಂದು. ಅಸ್ಖಲಿತ ವಾಣಿಯಲ್ಲಿ ಅವಧಾನಿಗಳು ಉತ್ತರಿಸಿದರು - "ನಮ್ಮವರು, ಸ್ನಾನ - ಸಂಧ್ಯಾವಂದನೆ ಮಾಡಿಕೊಂಡು - ತಮ್ಮ ಉದ್ಯೋಗ ಲೌಕಿಕವಿರಲಿ, ವೈದಿಕವಿರಲಿ, ಸನ್ಮಾರ್ಗದಲ್ಲಿ ಧರ್ಮಭೀರುಗಳಾಗಿ ನಡೆಯಬೇಕು. ನಮ್ಮ ಸನಾತನ ಧರ್ಮವನ್ನು ಶ್ರೀಮಂತಗೊಳಿಸಿ, ತಾವೂ ಉದ್ಧಾರವಾಗಬೇಕು. ಎಲ್ಲರೂ ಸುಪುತ್ರರಾಗಿ, ವಂಶೋದ್ಧಾರಕರಾಗಲಿ ಎಂದೇ ನನ್ನ ಆಸೆ, ಆಶಯ, ಆಶೀರ್ವಾದ"

ಪೂಜ್ಯರ ಪಾದ ಮುಟ್ಟಿ ನಮಸ್ಕರಿಸಿದಾಗ **ಓಂ ಶತಂ ಜೀವ ಶರದೋ ವರ್ಧಮಾನಃ...** ಎಂದು ವೇದಮಂತ್ರ ಪೂರ್ವಕವಾಗಿ ಆಶೀರ್ವದಿಸಿದರು. ಧನ್ಯತೆಯ ಭಾವದಿಂದ ಹೊರಬಂದೆ.



***169.*** *ಶತಾಯುಷಿ ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿಗಳ ಶತಮಾನೋತ್ಸವ ವಿಶೇಷಾಂಕ : ಸಂಪಾದನ : ಸೀತಾ, ಬಿ.ಎಸ್.ವಿ.ಸುಬ್ರಹ್ಮಣ್ಯ, ರಾಜಾರಾಮಮೂರ್ತಿ, ಮತ್ತೂರ್‌ಜೀ, ಪ್ರೊ.ಚಂದ್ರಶೇಖರ್ ಉಪಸ್ಥಿತಿ.*

# ಅನುಬಂಧ

## ೧. ಮೂಲಗ್ರಂಥದ ಪರಿವಿಡಿ

*ವೇದಮೂರ್ತಿ ಪಾಳ್ಯ ವೆಂಕಟಕೃಷ್ಣ ಅವಧಾನಿಗಳ ಶತಮಾನೋತ್ಸವ ವಿಶೇಷಾಂಕ*; ಸಂಕೇತಿ ಸಂಗಮ, ಹೊಸಹಳ್ಳಿ- ೫೭೭ ೨೦೨, ಶಿವಮೊಗ್ಗ ತಾಲ್ಲೂಕು;
ಸಂ.: ರಾಜಾರಾಮಮೂರ್ತಿ; ೧/೮ ಡೆಮ್ಮಿ, ಮೇ ೨೦೦೦, ಪು.16.



## ೨. ಶುಭಾಶಯಗಳು

### ಆಹ್ವಾನಪತ್ರಿಕೆ

**|| ಶುಭಮಸ್ತು ||**

**|| ಶ್ರೀ ವೆಂಕಟೇಶಾಯ ಮಂಗಳಂ ||**

**ಶುದ್ಧಸ್ಫಟಿಕಸಂಕಾಶಂ | ಶುದ್ಧವಿದ್ಯಾ ಪ್ರದಾಯಕಮ್ |**
**ಶುದ್ಧಂ ಸಚ್ಚಿತ್ಸದಾನಂದಂ | ಶುದ್ಧಂ ಪೂರ್ಣಮಹಂ ಭಜೇ ||**

|| *ಶತ ಸಂವತ್ಸರಜೀವಿನಃ ಶತಮಾನೋತ್ಸವಲಗ್ನಪತ್ರಿಕಾ* ||


ಸ್ವಸ್ತಿಶ್ರೀ ವಿಕ್ರಮ ಸಂವತ್ಸರದ ವೈಶಾಖ ಬಹುಳ ದಶಮೀ, ತಾ.೨೮.೫.೨೦೦೦ ಭಾನುವಾರ ಮಧ್ಯಾಹ್ನ ೧೨.೦೦ ಘಂಟೆಗೆ ಸಲ್ಲುವ ಶುಭ ಅಭಿಜಿನ್ ಮುಹೂರ್ತದಲ್ಲಿ ನಮ್ಮ ತೀರ್ಥರೂಪು ಪೂಜ್ಯ ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನಿಗಳು ಇವರಿಗೆ **ಶತಮಾನೋತ್ಸವ ಮಹಾಶಾಂತಿ**ಯನ್ನು ನಡೆಸಲು ಕುಲದೇವತಾ ಪ್ರೇರಣೆಯಿಂದ ಗುರುಹಿರಿಯರು ನಿಶ್ಚಯಿಸಿರುತ್ತಾರೆ.

*ಈ* ಮಂಗಳ ಪ್ರಸಂಗಕ್ಕೆ ತಾವೆಲ್ಲರೂ ಆಗಮಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ನಮ್ಮನ್ನು ಸಂತೋಷಪಡಿಸಬೇಕಾಗಿ ಪ್ರಾರ್ಥಿಸುತ್ತೇವೆ.

**ಕಾರ್ಯಕ್ರಮಗಳು :** ಬೆಳಿಗ್ಗೆ ೭.೦೦ ರಿಂದ - ನವಗ್ರಹ ಪುರಸ್ಸರ: ಬ್ರಹ್ಮ-ವಿಷ್ಣು-ರುದ್ರ, ಪುರುಷಸೂಕ್ತ, ಶ್ರೀಸೂಕ್ತ, ಮೃತ್ಯುಂಜಯ, ಆಯುಷ್ಯಾದಿ ಹೋಮಗಳು - ಶತಾಭಿಷೇಕ - ಶಾಂತಿ - ವಿಷ್ಣು ಸಹಸ್ರನಾಮ - ಸಾಮೂಹಿಕ ಪಾರಾಯಣ - ಪೂರ್ಣಾಹುತಿ, ಆಶೀರ್ವಾದ ಬಿನ್ನವತ್ತಳೆ ಮಧ್ಯಾಹ್ನ ೩.೦೦ ಗಂಟೆಗೆ

ಕೃತಜ್ಞತೆ: ವೇ. ರಾಮೇಶ್ವರ ಅವಧಾನಿಗಳು, ವೇ|| ಮಾರ್ಕಂಡೇಯ ಅವಧಾನಿಗಳು, ಶ್ರೀ ಮತ್ತೂರು ಕೃಷ್ಣಮೂರ್ತಿಗಳು.

## ೩. ವಂಶವೃಕ್ಷ
## ವೇದಮೂರ್ತಿ ವೆಂಕಟಕೃಷ್ಣ ಅವಧಾನಿ



## ೪. ವ್ಯಕ್ತಿ ವಿವರ

### ಪಾಳ್ಯದ ವೇ. ಬ್ರ. ಶ್ರೀ ವೆಂಕಟಕೃಷ್ಣ ಅವಧಾನೀ (ಪಾಳ್ಯದ ಶಾಸ್ತ್ರಿಗಳು)

**ಜನ್ಮಸ್ಥಳ:** ಪಾಳ್ಯ, ಆಲೂರು ತಾಲ್ಲೂಕು, ಹಾಸನಜಿಲ್ಲೆ (ಜನನ: ೧೯೦೫)

**ತಂದೆ:** ವೇ. ಬ್ರ. ಶ್ರೀ ಕಾಶೀಪತಿ ಅವಧಾನಿಗಳು (ಅನೇಕ ಮಹಾಯಜ್ಞಗಳ ಹೋತೃ, ಅಗ್ನಿಷ್ಟೋಮಯಾಗ ನಡೆಸಿದ ಕೀರ್ತಿವಂತರು.) ತಾಯಿ: ಶ್ರೀಮತಿ ಸುಬ್ಬಮ್ಮ

**ಪ್ರಾಥಮಿಕ ವಿದ್ಯಾಭ್ಯಾಸ:** ಪಾಳ್ಯ ಸಮೀಪದ ಸಿಂಗಾಪುರ; ಬೇಲೂರಿನಲ್ಲಿ ಎಲ್.ಎಸ್. (ಗುರು: ರಾಮಾಜೋಯಿಸರು)

**ವಿದ್ಯಾಭ್ಯಾಸ:** ಮೈಸೂರಿನ ಮಹಾರಾಜಾ ಸಂಸ್ಕೃತ ಪಾಠಶಾಲೆ: ಋಗ್ವೇದ ಕ್ರಮಾಂತ ವಿದ್ವತ್ (೧೯೩೮), ಸ್ಮಾರ್ತ ಪ್ರಯೋಗ ಪರೀಕ್ಷೆ (೧೯೪೨), ಋಗ್ವೇದ ಶ್ರೌತಪ್ರಯೋಗ (೧೯೪೩), ಜ್ಯೌತಿಷ (ಗುರುಗಳು: ದ್ವಿವೇದಿ ಸುಬ್ರಹ್ಮಣ್ಯ ಅವಧಾನಿಗಳು, ಕೃಷ್ಣಾವಧಾನಿಗಳು)

**ಪತ್ನಿ :** ಮಹಾಲಕ್ಷ್ಮಮ್ಮ (ವೇ. ಬ್ರ. ಶ್ರೀ ಪೂಮಗಾಮೆ ಶ್ರೀನಿವಾಸ ಅವಧಾನಿಗಳ ಮಗಳು, ವೇ. ಬ್ರ. ಶ್ರೀ ರಾಮೇಶ್ವರ ಅವಧಾನಿಗಳ ಸೋದರಿ) (ಜನನ: ೧೯೧೨, ನಿಧನ: ಮಾರ್ಚ್ ೮೧)

**ವೃತ್ತಿ:** ಹೊಳಲ್ಕೆರೆಯಲ್ಲಿ ಉಪಾಧ್ಯಾಯ, ಚಿಕ್ಕಮಗಳೂರು ಹತ್ತಿರದ ಕೂದವಳ್ಳಿಯ ಪಾಠಶಾಲೆಯಲ್ಲಿ ಸಂಸ್ಕೃತ ಮತ್ತು ವೇದ ಅಧ್ಯಾಪನ ೧೯೩೦ರ ದಶಕದಲ್ಲಿ ಬೆಂಗಳೂರಿಗೆ

ಕರಣಿಕರ ಪಾಠಶಾಲೆಯಲ್ಲಿ ಋಗ್ವೇದ ಅಧ್ಯಾಪನ ೧೯೩೨ (೫೦ ವರ್ಷಗಳ ಸೇವೆ)

ಋಗ್ವೇದ ಯಜುರ್ವೇದ ನಿಷ್ಣಾತ, (ಉಭಯ ಪ್ರಯೋಗ ಪರಿಣತ) ಸಂಸ್ಕೃತ ಪಂಡಿತ, ಉತ್ತಮ ಪುರೋಹಿತ, ಪರೋಪಕಾರಿ.


**ಪ್ರಶಸ್ತಿ:** ವೇದಶಿರೋಮಣಿ, ವೇದಮಾರ್ತಾಂಡ, ವೇದಪ್ರಕಾಂಡ

**ಶತಮಾನೋತ್ಸವ ಶಾಂತಿ ವಿಶೇಷಾಂಕ:** ಸಂಕೇತಿ ಸಂಗಮ, ಮೇ ೨೦೦೦. ಶತಮಾನೋತ್ಸವ ಆಚರಣೆ: ೨೮.೫.೨೦೦೦

**ಸಂಮಾನ:** ಶ್ರೀ ಶೃಂಗೇರಿ ಮಹಾಸನ್ನಿಧಾನ, ಶ್ರೀ ಶುಕ್ಲಯಜುಶ್ಶಾಖಾ ಟ್ರಸ್ಟ್, ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ

**ಸ್ವರ್ಗಸ್ಥರಾದುದು:** ೨.೨.೨೦೦೧

## ೫. ಹಸ್ತಾಕ್ಷರ



## ೬. ಪ್ರಶಸ್ತಿ / ಸಂಮಾನ

ಶ್ರೀಃ

*ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಗುರುಭ್ಯೋನಮಃ*

**ಶ್ರೀ ಶುಕ್ಲ ಯಜುಶ್ಶಾಖಾ ಟ್ರಸ್ಟ್**

**ಶ್ರೀ ಯಾಜ್ಞವಲ್ಕ್ಯಾಶ್ರಮ, ಚಾಮರಾಜಪೇಟೆ, ಬೆಂಗಳೂರು - ೧೮**

**ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳ ಜಯಂತೀ ಉತ್ಸವದ ಸಂದರ್ಭದಲ್ಲಿ**

### ಸನ್ಮಾನ ಪ್ರಶಸ್ತಿ ಪತ್ರ

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರ್ತಮಾನ ೧೯೦೫ನೆಯ ಶ್ರೀ ರುಧಿರೋದ್ಗಾರಿ ಸಂವತ್ಸರದ ಕಾರ್ತಿಕ ಶುದ್ಧ ಸಪ್ತಮೀ ಶುಕ್ರವಾರ ದಿನಾಂಕ ೧೧.೧೧.೧೯೮೩ *ಈ* ಶುಭ ದಿವಸ ಶ್ರೀ ಶ್ರೀ ಇತ್ಯಾದಿ ಬಿರುದಾಂಕಿತರಾಗಿರುವ . . . ರವರ ದಿವ್ಯ ಸಮ್ಮುಖದಲ್ಲಿ **ವೇ. ಶಾ. ಸಂ. ವಿದ್ವಾನ್ ವೆಂಕಟಕೃಷ್ಣಾವಧಾನಿ**ರವರಿಗೆ ಸಾರ್ವಜನಿಕರ ಸರ್ವತೋಮುಖವಾದ ಪುರೋಭಿವೃದ್ಧಿಗೆ ಕಾರಣವಾಗಿರುವ ನಿಮ್ಮ ವೇದಾಧ್ಯಯನಾಧ್ಯಾಪನಾದಿ ಪಾಂಡಿತ್ಯ ಪರಿಪೂರ್ಣ ಕರ್ತವ್ಯನಿಷ್ಠೆಯನ್ನೂ ಪ್ರಯೋಗ ನೈಪುಣ್ಯವನ್ನೂ ಶ್ಲಾಘಿಸಿ ನಿಮ್ಮ ಪಾಂಡಿತ್ಯಕ್ಕೆ ಅನ್ವರ್ಥವಾಗಿ

## ವೇದಪ್ರಕಾಂಡ

**ಎಂಬ ಪ್ರಶಸ್ತಿಯನ್ನಿತ್ತು ಸನ್ಮಾನಿಸಲಾಗಿದೆ. ಶ್ರೀ ಗುರುಗಳ ಅನುಗ್ರಹದಿಂದ ತಮಗೆ ಸರ್ವವಿಧ ಮಂಗಳ ಲಭಿಸಲೆಂದು ಹಾರೈಸುತ್ತಿರುವ**

*ಅಧ್ಯಕ್ಷರು*

*ಗೌ. ಕಾರ್ಯದರ್ಶಿಗಳು* *ಶ್ರೀ ಶುಕ್ಲ ಯಜುಶ್ಶಾಖಾ ಟ್ರಸ್ಟ್*

ಸಂಕೇತಿ ಸಮುದಾಯ ಬಳಗ ಸ್ವಸ್ತಿಶ್ರೀ ವಿಕ್ರಮ ಸಂವತ್ಸರದ ವೈಶಾಖ ಬಹುಳ ದಶಮಿ ತಾ.೨೮.೫.೨೦೦೦ ಭಾನುವಾರ ಮಧ್ಯಾಹ್ನ ೧೨ ಘಂಟೆಗೆ ಸಲ್ಲಿದ ಅಭಿಜಿನ್ ಮುಹೂರ್ತದಲ್ಲಿ ಶತಾಯುಷಿಯಾಗಿರುವ ವೇ|| ಬ್ರ|| ಶ್ರೀ ವೆಂಕಟಕೃಷ್ಣ ಅವಧಾನಿಗಳಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದ

### ಕೃತಜ್ಞತಾ ಪತ್ರ

*ಮಾನ್ಯರೇ,*

ಹಾಸನ ಜಿಲ್ಲೆಯ ಪಾಳ್ಯ ಗ್ರಾಮದಲ್ಲಿ ಕಾಶೀಪತಿ ಅವಧಾನಿ ಮತ್ತು ಸುಬ್ಬಮ್ಮನವರಿಗೆ ಜನಿಸಿ, ತಮ್ಮ ಬಾಲ್ಯ ಶಿಕ್ಷಣವನ್ನು ಬೇಲೂರಿನಲ್ಲಿ ನಡೆಸಿದಿರಿ. ಮುಂದೆ ಮೈಸೂರಿನ ಮಹಾರಾಜ ಪಾಠಶಾಲೆಯಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿದಿರಿ. ಋಗ್ವೇದ ಕ್ರಮಾಂತ, ಸ್ಮಾರ್ತ ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ನಿತ್ಯಕರ್ಮಗಳಿಗೆ ಆವಶ್ಯಕವಾದ ಪ್ರಯೋಗ, ಜ್ಯೋತಿಷ್ಯ ಶಾಸ್ತ್ರ ಮುಂತಾದವುಗಳನ್ನೂ ಅಭ್ಯಾಸ ಮಾಡಿದಿರಿ. ವಿದ್ಯಾಭ್ಯಾಸವಾದನಂತರ ಕೆಲಕಾಲ ತಾವು ಹೊಳಲ್ಕೆರೆಯಲ್ಲಿ ಉಪಾಧ್ಯಾಯರಾಗಿ, ಅನಂತರ ಚಿಕ್ಕಮಗಳೂರಿನ ಹತ್ತಿರ ಕೂದವಳ್ಳಿ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿ ಸಂಸ್ಕೃತ, ವೇದಗಳನ್ನು ಬೋಧಿಸುತ್ತಿದ್ದಿರಿ. ಮುಂದೆ ೧೯೩೨ನೇ ಇಸವಿಯಿಂದ, ಬೆಂಗಳೂರಿನಲ್ಲಿ ಮಾಗಡಿ ಕೃಷ್ಣಮೂರ್ತಿರಾಯರು ಸ್ಥಾಪಿಸಿದ್ದ ಕರಣಿಕರ ಪಾಠಶಾಲೆಯಲ್ಲಿ ಋಗ್ವೇದದ ಅಧ್ಯಾಪಕರಾಗಿ ನಲವತ್ತೆಂಟು ವರ್ಷಗಳ ಸುದೀರ್ಘ ವಿದ್ಯಾಸೇವೆಯನ್ನು ಮಾಡಿದ್ದೀರಿ. *ಈ*ಗಲೂ ಮನೆಯಲ್ಲಿ ಪಾಠವನ್ನು ಹೇಳುತ್ತಿದ್ದೀರಿ. ಹೀಗೆ ತಮ್ಮ ವೇದ ಸಂಸ್ಕೃತಗಳ ಜ್ಞಾನಾರ್ಜನೆಯಿಂದ ಸಾವಿರಾರು ವಿದ್ಯಾರ್ಥಿಗಳನ್ನು ಸಮಾಜಕ್ಕೆ ದೊರಕಿಸಿಕೊಟ್ಟಿದ್ದೀರಿ. ಸ್ವತಃ ಉತ್ತಮ ಪುರೋಹಿತರಾದ ತಮ್ಮ ಸಮಾಜಸೇವೆಯು ವರ್ಣನಾತೀತ. ತಾವು ಋಗ್ವೇದ, ಯಜುರ್ವೇದ ಪ್ರಯೋಗಗಳಲ್ಲಿ ನಿಷ್ಣಾತರು.

ಆಂಧ್ರ, ಕರ್ನಾಟಕ, ದ್ರಾವಿಡ ಪ್ರಯೋಗಗಳನ್ನು ಬಲ್ಲವರು. ಷೋಡಶ ಸಂಸ್ಕಾರಗಳ ಪ್ರಯೋಗಗಳೇ ಅಲ್ಲದೆ, ರಥೋತ್ಸವ, ದೇವಪ್ರತಿಷ್ಠೆ, ಶಾಂತಿಕ, ಪೌಷ್ಟಿಕ ಕರ್ಮಗಳ ಪ್ರಯೋಗಗಳನ್ನೂ ಯಶಸ್ವಿಯಾಗಿ ನಿರ್ವಹಿಸಿದ್ದೀರಿ. ಹಲವು ವೃತ್ತಿಗಳ ಹೆಸರಾಂತ ನಾಗರಿಕರು ತಮ್ಮ ಶಿಷ್ಯರಾಗಿದ್ದಾರೆ. ಯಾವ ಕೆಲಸವನ್ನಾದರೂ ನಿರ್ವಹಿಸಬಲ್ಲ ಅಸಾಧಾರಣ ಸಾಮರ್ಥ್ಯ ತಮ್ಮದು. ತಮ್ಮ ಹದಿನಾರನೇ ವಯಸ್ಸಿನಲ್ಲಿ ತಾವು ಶ್ರೀಮತಿ ಮಹಾಲಕ್ಷ್ಮಿಯವರನ್ನು ಮದುವೆಯಾದಿರಿ. ತಮ್ಮ ಮನೆಯು ಎಂದೆಂದಿಗೂ ನಂದಗೋಕುಲವೇ. ತಮ್ಮಂದಿರು, ತಂಗಿಯರು, ಹೆಣ್ಣುಮಕ್ಕಳು, ಗಂಡು ಮಕ್ಕಳು, ಮಮ್ಮಕ್ಕಳು ಹೀಗೆ ಅನೇಕರಿಗೆ ಆಶ್ರಯ ನೀಡಿ ಅವರ ಉನ್ನತಿಗೆ ಕಾರಣರಾಗಿದ್ದೀರಿ. ತಮ್ಮ ಆಶೀರ್ವಾದದ ಬೆಂಬಲದಿಂದ ಎಲ್ಲರೂ ಸುಖವಾಗಿ ಬಾಳುತ್ತಿದ್ದಾರೆ. ತಮ್ಮ ವಿದ್ವತ್ತು, ಪ್ರೌಢಿಮೆಗಳನ್ನು ಮೆಚ್ಚಿ ಅನೇಕ ಸಂಘ ಸಂಸ್ಥೆಗಳು ಮತ್ತು ಮಠಾಧಿಪತಿಗಳು ಪ್ರಶಸ್ತಿ, ಬಿರುದನ್ನು ಕೊಟ್ಟು ಗೌರವಿಸಿದ್ದಾರೆ. ತಮ್ಮೆಲ್ಲಾ ಸಾಧನೆ, ಸಾರ್ಥಕತೆಯ ಹಿಂದೆ ನಿಮ್ಮ ನೆರಳಿನಂತಿದ್ದು ಪರೋಕ್ಷವಾಗಿ ಸಹಕರಿಸುತ್ತಿದ್ದ ತಮ್ಮ ದಿವಂಗತ ಧರ್ಮಪತ್ನಿಯವರ ಸ್ಫೂರ್ತಿ ಮತ್ತು ಉತ್ತೇಜನಗಳು ಸ್ಮರಿಸುವಂಥದ್ದಾಗಿವೆ. ತಮ್ಮ ಆಶೀರ್ವಾದವು ಬಹುಕಾಲ ನಮ್ಮೆಲ್ಲರ ಮೇಲೂ ಇರಲಿ ಮತ್ತು ತಾವು ಬಹುಕಾಲ ನಮ್ಮೆಲ್ಲರ ಮಾರ್ಗದರ್ಶಿಗಳಾಗಿರುವಂತೆ ಪರಮಾತ್ಮನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

*ರಾಮೇಶ್ವರಾವಧಾನೀ*
*ಮಾರ್ಕಂಡೇಯ ಅವಧಾನೀ*
*ಮತ್ತೂರು ಕೃಷ್ಣ ಮೂರ್ತಿ*

*ಸಂಕೇತಿ ಬಂಧು ಮಿತ್ರರು*
*ಮತ್ತು*
*ಹಿತೈಷಿಗಳು.*

## ಮುನ್ನುಡಿ

ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳನ್ನು ಅನುಷ್ಠಾನಮಾಡುವುದಕ್ಕೆ ಉಪನಯನಸಂಸ್ಕಾರವೂ, ಅಲ್ಲಿ ಉಪದೇಶವಾಗುವ ಗಾಯತ್ರೀಮಂತ್ರದ ಉಪಾಸನೆಯ ರೂಪವಾದ ಸಂಧ್ಯಾವಂದನೆಯೂ ಮೂಲಕಾರಣವು. **ಸಂಧ್ಯಾಹೀನಃ ಅಶುಚಿಃ ನಿತ್ಯಮ್ ಅನರ್ಹಃ ಸರ್ವಕರ್ಮಸು** ಅರ್ಥಾತ್ ಸಂಧ್ಯಾವಂದನೆಯನ್ನು ಮಾಡದವನು ಅಶುಚಿಯೆಂದೂ, ಯಾವ ಶಾಸ್ತ್ರಕರ್ಮಕ್ಕೂ ಯೋಗ್ಯನಲ್ಲವೆಂದೂ ಶಾಸ್ತ್ರವು ತಿಳಿಸುತ್ತದೆ. ಹೀಗೆ ಎಲ್ಲರಿಗೂ ಅವಶ್ಯವಾಗಿರುವ ಸಂಧ್ಯಾವಂದನೆಯ ವಿಷಯವನ್ನು ತಿಳಿಸುವುದಕ್ಕಾಗಿ *ಈ* ಪುಸ್ತಕವನ್ನು ಪ್ರಕಟಿಸಲಾಗಿದೆ.

**ವಿಪ್ರೋ ವೃಕ್ಷಃ ತಸ್ಯ ಮೂಲಂ ಹಿ ಸಂಧ್ಯಾ ವೇದಃ ಶಾಖಾಃ ಧರ್ಮಕರ್ಮಾಣಿ ಪರ್ಣಾಃ |**

**ತಸ್ಮಾತ್ ಮೂಲಂ ಯತ್ನತೋ ರಕ್ಷಣೀಯಂ ಛಿನ್ನೇ ಮೂಲೇ ನೈವ ಶಾಖಾ ನ ಪರ್ಣಾಃ ||**

"ಬ್ರಾಹ್ಮಣನು ಒಂದು ಮರವಿದ್ದಂತೆ, ಆ ಮರದ ಬೇರೇ ಸಂಧ್ಯಾವಂದನೆಯು, ವೇದಗಳು ಕೊಂಬೆಗಳಿದ್ದಂತೆ, ಧರ್ಮಕರ್ಮಗಳು ಎಲೆಗಳಿದ್ದಂತೆ. ಆದ್ದರಿಂದ ಬೇರನ್ನು ಮುಖ್ಯವಾಗಿ ಪೋಷಿಸಬೇಕು. ಏಕೆಂದರೆ ಬೇರು ಹೋದಮೇಲೆ ಕೊಂಬೆಗಳೆಲ್ಲಿ ಮತ್ತು ಎಲೆಗಳೆಲ್ಲಿ?" ಇದೂ ಅಲ್ಲದೆ ಸಂಧ್ಯಾವಂದನೆಯಲ್ಲಿ ಉಪಾಸನೆ ಮಾಡುವ ಗಾಯತ್ರೀ ಮಂತ್ರವು ಮೂರು ವೇದಗಳ ಸಾರವು.

**ತ್ರಿಭ್ಯ ಏವ ತು ವೇದೇಭ್ಯಃ ಪಾದಂ ಪಾದಮ್ ಅದೂದುಹತ್ |**
**ತದಿತ್ಯೃಚೋಸ್ಯಾಸ್ಸಾವಿತ್ರ್ಯಾಃ ಪರಮೇಷ್ಠೀ ಪ್ರಜಾಪತಿಃ ||**

"ಪರಬ್ರಹ್ಮನು ಮೂರು ವೇದಗಳಿಂದಲೂ ಒಂದೊಂದು ಪಾದವನ್ನು ತೆಗೆದುಕೊಂಡು ಗಾಯತ್ರಿಯನ್ನು ಹೆಣೆದಿದ್ದಾನೆ". ಆದುದರಿಂದ ಇಂತಹ ಗಾಯತ್ರಿಯ ಉಪಾಸನೆಯು ಪರಮಶ್ರೇಷ್ಠವಾದದ್ದು. ಆದುದರಿಂದ ಇಂತಹ ಗಾಯತ್ರಿಯ ಉಪಾಸನಾರೂಪವಾಗಿರುವ ಸಂಧ್ಯಾವಂದನೆಯನ್ನು ಅಧಿಕಾರಿಗಳೆಲ್ಲರೂ ಅವಶ್ಯವಾಗಿ ಮಾಡಿ, ಅನಂತರ ಉಳಿದ ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳನ್ನು ಮಾಡಬೇಕು. ಸಂಧ್ಯಾವಂದನೆಯನ್ನು ಮಾಡದೆ ಯಾವ ಶಾಸ್ತ್ರವಿಹಿತ ಕರ್ಮಗಳನ್ನು ಮಾಡಿದರೂ, ಅವೆಲ್ಲವೂ ವ್ಯರ್ಥವೇ ಸರಿ. ಆದ್ದರಿಂದ ಎಲ್ಲರೂ ಸಂಧ್ಯಾವಂದನೆಯನ್ನು ಮಾಡಿ, ಅನಂತರ ಶಾಸ್ತ್ರವಿಹಿತವಾದ ಇತರ ಕರ್ಮಗಳನ್ನು ಮಾಡತಕ್ಕದ್ದು. ಇದರಿಂದ ಸಂಧ್ಯಾವಂದನೆಯ ಪ್ರಾಮುಖ್ಯವು ಗೊತ್ತಾಗುತ್ತದೆ.

ಕಳೆದ ಹತ್ತು ವರ್ಷಗಳಿಂದ ಶ್ರೀ ವಿಷ್ಣುಸಹಸ್ರನಾಮ ಮತ್ತು ಹಲವು ದೇವತಾಸ್ತೋತ್ರಗಳ ಸಾಮೂಹಿಕ ಪಾರಾಯಣವನ್ನು ಪ್ರತಿ ಶುಕ್ರವಾರ ಸಂಜೆ ಮತ್ತು ಕಳೆದ ಐದು ವರ್ಷಗಳಿಂದ ಶ್ರೀ ಲಲಿತಾಸಹಸ್ರನಾಮ ಪಾರಾಯಣವನ್ನು ಪ್ರತಿ ಮಂಗಳವಾರ ಮಧ್ಯಾಹ್ನ ನಿರಂತರವಾಗಿ ಸಂಘವು ನಡೆಸಿಕೊಂಡು

ಬರುತ್ತಿದೆ. ಎಲ್ಲರೂ ಸಂಧ್ಯಾವಂದನೆಯನ್ನು ಮಾಡಲಿ ಎಂಬುದೇ **ಋಗ್ವೇದ ನಿತ್ಯಸಂಧ್ಯೋಪಾಸನಂ** ಪುಸ್ತಕ ಪ್ರಕಟನೆಯ ಪರಮಗುರಿ.

ಈ ಪುಸ್ತಕವನ್ನು ಪ್ರಕಟಿಸಲು ಶ್ರಮಿಸಿದ **ವೇ. ಬ್ರ. ಶ್ರೀ ವೆಂಕಟಕೃಷ್ಣಾವಧಾನೀ, ವೇ. ಬ್ರ. ಶ್ರೀ ಎ.ಆರ್. ನಾಗೇಶ ಜೋಯಿಸ್, ಶ್ರೀ ಟಿ.ಬಿ. ಲಕ್ಷ್ಮಣರಾವ್ ಮತ್ತು ಶ್ರೀ ನಿತ್ಯಾನಂದ ಕ್ಯಾಂಪ್ಯೂಗ್ರಾಫಿಕ್ಸ್‌ನ ಶ್ರೀ ಬಿ.ಎನ್. ನಟರಾಜ್** ಇವರುಗಳಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

*ಶ್ರೀ ವಿಷ್ಣು ಸಹಸ್ರನಾಮ ಸತ್ಸಂಗ*

*ಋಗ್ವೇದ ನಿತ್ಯಸಂಧ್ಯೋಪಾಸನಂ ಪುಸ್ತಕದಿಂದ*

## ೭. ವರ್ತಮಾನ

### ಸಂಪಾದಕೀಯ : ಸಂಕೇತಿ ಸಂಗಮ : ಮೇ ೨೦೦೦

ವೇದಮೂರ್ತಿ ವೆಂಕಟಕೃಷ್ಣ ಅವಧಾನಿಗಳಿಗೆ ಶತಮಾನೋತ್ಸವ ಶಾಂತಿಯನ್ನು ನಡೆಸುತ್ತಿರುವುದು ಈ ತಿಂಗಳ ಹೊಸ ಸುದ್ದಿ. ವ್ಯಕ್ತಿಯೊಬ್ಬನ ಜೀವನದಲ್ಲಿ ನೂರು ಸಂವತ್ಸರಗಳನ್ನು ಕಾಣುವುದು ಸಾಮಾನ್ಯ ಸುದ್ದಿಯಲ್ಲ. ಹೆಚ್ಚುದಿನ ಬದುಕಿದಷ್ಟೂ ಹೆಚ್ಚು ಧರ್ಮಸಂಗ್ರಹವನ್ನು ಮಾಡಬಹುದಾದ್ದರಿಂದ, ದೇವರಲ್ಲಿ ಪ್ರಾರ್ಥಿಸುವಾಗಲೆಲ್ಲ ಮೊದಲಿಗೆ ಆಯುಷ್ಯವನ್ನು ಕೊಡುವಂತೆ ಬೇಡುತ್ತೇವೆ, ಅನಂತರ ಆರೋಗ್ಯ, ಕಡೆಗೆ ಐಶ್ವರ್ಯ! **ಜೀವನ್ ಭದ್ರಾಣಿ ಪಶ್ಯತಿ** (ಜೀವಿಸಿದ್ದಲ್ಲಿ ಒಳಿತನ್ನು ಕಾಣುತ್ತಾನೆ) ಎಂಬುದು ಆರ್ಯೋಕ್ತಿ. ಜಗತ್ತಿನ ಜೀವರಾಶಿಗಳಲ್ಲೆಲ್ಲ ಮನುಷ್ಯನಿಗೆ ಮಾತ್ರ ಬುದ್ಧಿಶಕ್ತಿ ಇರುವುದರಿಂದ, ಯುಕ್ತಾಯುಕ್ತ ವಿವೇಚನೆಯಿಂದ ಮೋಕ್ಷವನ್ನೂ ಪಡೆಯಬಲ್ಲ ಅವಕಾಶ ಮನುಷ್ಯಪ್ರಾಣಿಗೆ ಮಾತ್ರ. ಹೆಚ್ಚುಕಾಲ ಬದುಕಿದಷ್ಟೂ ಅಪಾರ ಧರ್ಮಸಂಗ್ರಹವನ್ನೂ ಲೌಕಿಕವಾಗಿ ಹೆಚ್ಚು ಅರ್ಥ-ಕಾಮಗಳ ಉಪಭೋಗವನ್ನೂ ಪಡೆಯುವ ಅವಕಾಶ ದೀರ್ಘಾಯುಷಿಗೆ ಅಧಿಕವಾಗಿರುವುದರಿಂದಲೇ **ಶರೀರಮಾದ್ಯಂ ಖಲು ಧರ್ಮ ಸಾಧನಮ್** ಎಂದು ಶಾಸ್ತ್ರಗಳು ಕೊಂಡಾಡಿರುವುದು; **ಜಂತೂನಾಂ ನರಜನ್ಮದುರ್ಲಭಮ್ ಅತಃ ಪುಂಸ್ತ್ವಂ ತತೋ ವಿಪ್ರತಾ** ಎಂದು ಆಚಾರ್ಯರು ಹೇಳಿರುವುದು; **ನಾತ್ಮಾನಮ್ ಅವಸಾದಯೇತ್** ಎಂದು ಗೀತಾಚಾರ್ಯ ಉಪದೇಶಿಸಿರುವುದು. ಪರೋಪಕಾರಕ್ಕಾಗಿ, ಸತ್ಕಾರ್ಯಗಳನ್ನು ಮಾಡುವುದಕ್ಕಾಗಿ, ಪುರುಷಾರ್ಥಗಳ ಗಳಿಕೆಗಾಗಿ, ಕಡೆಗೆ ಕೈವಲ್ಯಕ್ಕಾಗಿಯೂ ಶರೀರ ಪೋಷಣೆ ಅತ್ಯಗತ್ಯ.

ಆರೋಗ್ಯವಂತನಾಗಿದ್ದ ಮನುಷ್ಯ ಹೆಚ್ಚು ಕಾಲ ಬದುಕಬಲ್ಲ. ದೀರ್ಘಾಯುಷ್ಯಕ್ಕೆ ಆರೋಗ್ಯ ಯಾವಾಗಲೂ ಪೂರಕವೇ! ಶಾರೀರಿಕವಾಗಿಯೂ ಮಾನಸಿಕವಾಗಿಯೂ ವ್ಯಕ್ತಿ ಆರೋಗ್ಯವಾಗಿರಬೇಕಾದರೆ ಅರ್ಥ-ಕಾಮಗಳ ಹಿತ-ಮಿತ ಬಳಕೆಯ ಸಂಯಮಪೂರ್ಣ ಜೀವನದ ಅಗತ್ಯ ಇರುತ್ತದೆ. ಪೂಜ್ಯ ವೆಂಕಟಕೃಷ್ಣ ಅವಧಾನಿಗಳೂ ಆ ರೀತಿಯ ಸಂಯಮಪೂರ್ಣ ಗಾರ್ಹಸ್ಥ್ಯವನ್ನು ನಡೆಸಿರುವುದರಿಂದ ನೂರು ವಸಂತಗಳನ್ನು ಕಾಣುತ್ತಿದ್ದಾರೆ. ಅದು ಎಲ್ಲರಿಗೂ ಸುಲಭವಾಗಿ ಸಿಗುವ ಭಾಗ್ಯವಲ್ಲ.

ವ್ಯಕ್ತಿಯೊಬ್ಬ ಎಷ್ಟು ಕಾಲ ಬದುಕಿದ್ದಾನೆ ಎನ್ನುವುದರ ಜತೆಗೇ ಹೇಗೆ ಬದುಕಿದ್ದಾನೆ ಎಂಬುದೂ ಮುಖ್ಯವೇ ಆಗುತ್ತದೆ. ಪೂಜ್ಯ ಅವಧಾನಿಗಳು ಋಗ್ವೇದ-ಯಜುರ್ವೇದಗಳಲ್ಲಿ ನಿಷ್ಣಾತರಾಗಿ, ಸಂಸ್ಕೃತ ಪಂಡಿತರಾಗಿ, ಉತ್ತಮ ಪುರೋಹಿತರಾಗಿ, ಪರೋಪಕಾರಿಗಳಾಗಿ ಸಾರ್ಥಕ ಬದುಕನ್ನು ನಡೆಸಿದ್ದಾರೆ. ವಯೋವೃದ್ಧರೂ, ಜ್ಞಾನವೃದ್ಧರೂ, ಸಜ್ಜನರೂ ಆದ ಪೂಜ್ಯ ಅವಧಾನಿಗಳಿಗೆ ಈ ಸಂದರ್ಭದಲ್ಲಿ ಪತ್ರಿಕೆ - ಸಂಕೇತಿ ಮಹಾಜನತೆಯ ಪರವಾಗಿ ಶುಭ ಕೋರುತ್ತದೆ.

## ಅನಿಸಿಕೆಗಳು

### ಸಂಕೇತಿ ಸಂಗಮ : ಮೇ ೨೦೦೦

ಪೂಜ್ಯ ಶ್ರೀ ಅವಧಾನಿಗಳ ಪರಿಚಯ ನಮಗೆ ನಲವತ್ತೈದು ವರ್ಷಗಳದ್ದು. ಅವರ ಸಂಸ್ಕೃತಜ್ಞಾನ, ಪಾಂಡಿತ್ಯ ಮತ್ತು ಕಾರ್ಯಶ್ರದ್ಧೆ ಅಪಾರವಾದುದು. ಇಡೀ ಕರ್ನಾಟಕದಲ್ಲಿ ಎಲ್ಲರಿಗೂ ಅವರು ಚಿರಪರಿಚಿತರು. ಶೃಂಗೇರಿ ಮಹಾಸನ್ನಿಧಾನದವರು ಅವರನ್ನು ಗೌರವಿಸಿ ಸನ್ಮಾನಿಸಿದ್ದಾರೆ. ಅಲ್ಲದೆ ಅನೇಕ ಸಂಘ-ಸಂಸ್ಥೆಗಳವರು ಗೌರವಿಸಿದ್ದಾರೆ. ಅವರ ವೈದಿಕ ಧರ್ಮನಿಷ್ಠೆ ಅನೇಕ ಗೃಹಸ್ಥರಿಗೆ ಮಾರ್ಗದರ್ಶನ ನೀಡಿದೆ. ಅವರು ನಮ್ಮ

ಜಿಲ್ಲೆಯವರಾಗಿರುವುದು ನಮಗೊಂದು ಹೆಮ್ಮೆ. ಅವರ ವ್ಯಕ್ತಿತ್ವ **ನ ಭೂತೋ ನ ಭವಿಷ್ಯತಿ.**

ಶ್ರೀ ಅವಧಾನಿಗಳ ಒಂದು ನೂರನೇ ಹುಟ್ಟಿದ ಹಬ್ಬವನ್ನು ಆಚರಿಸುವುದು ನಮಗೆಲ್ಲ ಸಂತೋಷದ ವಿಷಯ. ಭಗವಂತನು ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲಿ ಎಂದು ತುಂಬು ಹೃದಯದಿಂದ ಆಶಿಸುತ್ತೇವೆ.

***ಶಾರದಾ ಮತ್ತು ಪಿರಿಯಣ್ಣಯ್ಯ***

**ಸಂಕೇತಿ ಸಂಗಮ : ಜೂನ್ ೨೦೦೦**

. . . ಮೇ ೨೦೦೦ದ ವಿಶೇಷ ಸಂಚಿಕೆ, ಸನ್ಮಾನ್ಯ ಶತಾಯುಷಿ ಶ್ರೀ ಪಾಳ್ಯ ವೆಂಕಟಕೃಷ್ಣಾವಧಾನಿಗಳ ಶತಮಾನೋತ್ಸವ ಸಂಚಿಕೆ ಬಹಳ ಚೆನ್ನಾಗಿ ಮೂಡಿಬಂದಿದೆ. ಇದು 'ಸಂಗಮ'ದ ಕಿರೀಟದಲ್ಲಿ ಇನ್ನೊಂದು ಗರಿ ಸೇರಿ ಶೋಭಿಸುವಂತಾಗಿದೆ, ಧನ್ಯವಾದಗಳು. ಆದರೆ 'ಶತಾಯುಷಿಗಳೊಡನೆ ಒಂದು ಸಂಜೆ' ಲೇಖನದಲ್ಲಿ ಸನ್ಮಾನ್ಯರು ಜನಿಸಿದ್ದು ೧೯೦೫ರಲ್ಲಿ ಎಂದಿದೆ. ಹಾಗಾದಲ್ಲಿ ಶತಮಾನೋತ್ಸವ ೨೦೦೫ರ ನಂತರ ಆಗಬೇಕಲ್ಲವೆ? ಬಹುಶಃ ಮುದ್ರಣ ದೋಷ ಇರಬಹುದು.

*-ಎನ್ಎನ್.ಮೂರ್ತಿ, ಬೆಂಗಳೂರು*

(ಅಧಿಕ ಮಾಸಗಳು ಸೇರಿ ಅವರಿಗೆ ಈಗ ೯೯ ವರ್ಷಗಳು ತುಂಬಿವೆ. ಅದರಿಂದಾಗಿ ನೂರನೇ ವರ್ಷವೆಂದು ಶತಮಾನೋತ್ಸವ ಶಾಂತಿಯನ್ನು ಆಚರಿಸಲಾಗುತ್ತಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ - ಸಂ.)

. . . ವೇದಮೂರ್ತಿ ಪಾಳ್ಯ ವೆಂಕಟಕೃಷ್ಣ ಅವಧಾನಿಗಳು ಸಂಕೇತಿ ಜನಾಂಗಕ್ಕೇ ಆದರ್ಶ ವ್ಯಕ್ತಿ. ಶತವರ್ಷ ಕಾಣುತ್ತಿರುವ ಅವಧಾನಿಗಳಿಗೆ ಜೀವನದಲ್ಲಿ ಸುಖ, ಶಾಂತಿ ನೀಡಲೆಂದು ಭಗವಂತನಲ್ಲಿ ನನ್ನ ಪ್ರಾರ್ಥನೆ.

***- ಹೆಚ್.ವಿ. ನರಸಿಂಹಮೂರ್ತಿ, ಬೆಂಗಳೂರು***

ಪಾಳ್ಯ ಶ್ರೀ ವೆಂಕಟಕೃಷ್ಣ ಅವಧಾನಿಗಳ ಜನ್ಮಶತಮಾನದ ಸಂದರ್ಭದಲ್ಲಿ ಬಂದ ಸಂಚಿಕೆ ತುಂಬ ಸುಂದರವಾಗಿದೆ. ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ನೀವು ಹೊರತಂದ ಸಂಚಿಕೆಯಿಂದ ಅವರ ವಿದ್ಯೆ, ಸೌಜನ್ಯಗಳ ಬಗ್ಗೆ ಅರಿತುಕೊಂಡು ಮೂಕವಿಸ್ಮಿತನಾದೆ. ಶ್ರೀ ಅವಧಾನಿಗಳವರಿಗೆ ಶತಶತ ಸಾಷ್ಟಾಂಗ ಪ್ರಣಾಮಗಳು, ಸಂಕೇತಿ ಸಂಗಮಕ್ಕೆ ಅನಂತ ಧನ್ಯವಾದಗಳು.

***- ಮತ್ತೂರು ವೇಣು, ಕದ್ರಾ***

. . . ಈ ಸಲದ ಅಂದರೆ ವೈಶಾಖ ಮಾಸದ ಸಂಚಿಕೆಯಂತೂ ಬಹಳ ಅಮೂಲ್ಯವಾದುದು, ಕಾರಣ ಜನಾಂಗದ ರತ್ನಪ್ರಾಯರಾದ ವೇ|| ವೆಂಕಟಕೃಷ್ಣ ಅವಧಾನಿಗಳ ಬಗ್ಗೆ ಲೇಖನಗಳು ಬಂದಿರುವುದು. ಮಾನ್ಯರು ವ್ಯಾಸ, ಆಂಜನೇಯ, ವಿಭೀಷಣ ಇತ್ಯಾದಿ ಚಿರಾಯುಷಿಗಳ ಸಾಲಿನಲ್ಲಿ ಚಿರಂಜೀವಿಗಳಾಗಿ ಸರ್ವದಾ ಬೆಳಗಲೆಂದು ದೇವರನ್ನು ಪ್ರಾರ್ಥಿಸೋಣ.

***- ಬಿ.ಕೆ. ವೆಂಕಟಕೃಷ್ಣಯ್ಯ, ಮೈಸೂರು.***

## ಸಂಕೇತಿ ಸಂಗಮ ವಿಶೇಷಾಂಕ : ಜುಲೈ ೨೦೦೦

ಇತ್ತೀಚೆಗೆ ಬೆಂಗಳೂರಿನಲ್ಲಿ ಋಗ್ವೇದ ಪ್ರಯೋಗ ಪ್ರವೀಣ ವೇದಮೂರ್ತಿ ಪಾಳ್ಯ ವೆಂಕಟಕೃಷ್ಣ ಅವಧಾನಿಗಳ **ಶತಮಾನೋತ್ಸವ ಸಮಾರಂಭವು** ವಿಜೃಂಭಣೆಯಿಂದ ನೆರವೇರಿತು. ಆ ಸಂದರ್ಭದಲ್ಲಿ ಕೌಶಿಕ ಸಂಕೇತಿ ಸಂಘದ ಪರವಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ಕೇಶವನಾರಾಯಣ ಅವರು ಮಾತನಾಡಿ, ಶಾಲು ಹೊದಿಸಿ, ಫಲ-ಪುಷ್ಪಗಳನ್ನು ಸಮರ್ಪಿಸಿ ಸನ್ಮಾನಿಸಿದರು. ಹಾಗೂ ಅದೇ ಸಂದರ್ಭದಲ್ಲಿ **ಸಂಕೇತಿ ಉಪಾಕರ್ಮ ಸಮಿತಿಯ** ಪರವಾಗಿಯೂ ಶ್ರೀ ಕೇಶವನಾರಾಯಣ ಅವರೇ ಮಾತನಾಡಿ, ಉಪಾಕರ್ಮ ಸಮಿತಿಯನ್ನು ಪ್ರಾರಂಭಿಸಲು ತಿಳಿಸಿ, ಮಾರ್ಗದರ್ಶನ ನೀಡಿದ ಶ್ರೀ ಅವಧಾನಿಗಳ ಸೇವೆಯನ್ನು ಸ್ಮರಿಸಿ, ಫಲ-ಪುಷ್ಪದೊಂದಿಗೆ ಕಿರು ಕಾಣಿಕೆ ನೀಡಿ ಗೌರವಿಸಿದರು.

## ಅಶ್ರುತರ್ಪಣ

### ಸಂಕೇತಿ ಸಂಗಮ : ಮಾರ್ಚ್ ೨೦೦೧

ನೂರು ವಸಂತಗಳ ಸುದೀರ್ಘ ಜೀವನದ ಅನೇಕ ಏಳು ಬೀಳುಗಳನ್ನು ಕಂಡ, ಜ್ಞಾನವೃದ್ಧರೂ ವಯೋವೃದ್ಧರೂ ಆದ, ಉಭಯವೇದ ಪ್ರಯೋಗ ಪ್ರವೀಣ, ವೇದಮೂರ್ತಿ ಪಾಳ್ಯ ವೆಂಕಟಕೃಷ್ಣ ಅವಧಾನಿಗಳು ೨.೨.೨೦೦೧ರಂದು ಶುಕ್ರವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಋಗ್ವೇದ-ಯರ್ಜುವೇದಗಳಲ್ಲಿ ನಿಷ್ಣಾತರಾಗಿ, ಸಂಸ್ಕೃತ ಪಂಡಿತರಾಗಿ, ಉತ್ತಮ ಪುರೋಹಿತರಾಗಿ, ಪರೋಪಕಾರಿಗಳಾಗಿ ಸಾರ್ಥಕ ಜೀವನವನ್ನು ನಡೆಸಿದ ಪೂಜ್ಯರು, **ಇಂತಹವರು ನಮ್ಮ ಸಂಕೇತಿ ಮಂಡಳಿಯಲ್ಲಿ ಇವರೊಬ್ಬರೇ** ಎಂಬ ಕೀರ್ತಿಯನ್ನು ಹೊಂದಿದ್ದರು. ಮಕ್ಕಳಾದ ಶ್ರೀನಿವಾಸಮೂರ್ತಿ, ಶಿವಸ್ವಾಮಿ, ಶ್ರೀಲಕ್ಷ್ಮೀ ಸೂರ್ಯನಾರಾಯಣ ಶಾಸ್ತ್ರೀ, ಲಲಿತಾ ಕೇಶವಮೂರ್ತಿ, ಸರಸ್ವತೀ ಕನಕಕೇಶವನ್, ಶಾಂತಾ ಮಂಜುನಾಥ ಮತ್ತು ಅನ್ನಪೂರ್ಣಾ ವೆಂಕಟೇಶ ಹಾಗೂ ಮಮ್ಮಕ್ಕಳು, ಮರಿಮಕ್ಕಳು, ಬಂಧುಗಳ ದೊಡ್ಡ ಪರಿವಾರವನ್ನು ಅಗಲಿ, ಪತ್ನಿ ಮಹಾಲಕ್ಷ್ಮಮ್ಮ ಅವರನ್ನು ಕೂಡಿಕೊಂಡಿದ್ದಾರೆ. ಪೂಜ್ಯರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪತ್ರಿಕೆ ಆಶಿಸುತ್ತದೆ.

### ಸುನಿಲ್, ಅಮೆರಿಕಾ : ಸಂಕೇತಿ ಸಂಗಮ : ಮಾರ್ಚ್ ೨೦೦೧

I am writing this to share my thoughts and feelings on hearing the sad news of passing away of Ajja, the Centurion Venkatakrishna Avadhani. When I first heard the news this morning, I was shocked. When I called up home the dam within me burst and I started crying. I don't think I have ever cried this much in my life.

Ajja was very savvy with money. He invested whatever little he saved very wisely and he very generously distributed all his savings to his children and grandchildren. He never used even 1paise of it for himself. He was very simple in his attire. He used to wear a simple white kacche panche and a white dhoti. Ajja was also very generous and unselfish. He gave shelter, guidance, financial and material support to a lot of his grandchildren, sister's children and brother's children. Ajja himself had a big family to support. Inspite of that, he happily gave shelter to so many of his relatives. Ajja himself performed the marriages of several of his sisters, sister's children and grandchildren by providing financial, physical and moral support. All these qualities of Ajja need to be applauded and commended greatly. I just hope that we all get a fraction of all these qualities.

Ajja was also an extremely dedicated, hard working person. He was very disciplined. He always used to be very punctual. If some one tells him that they will come to pick him up at 7.00am, Ajja would have planned everything properly and got up at the right time, finished his pooja and would have been ready to be picked up by 6.45am itself.

Ajja as a Vedic scholar was one of the best around. He could perform any pooja. Any mantra, whether it was Rig Veda or Yajur Veda - every mantra was on the tip of his tongue. All the other Vedic priests in Bangalore and elsewhere held him in very high esteem. Ajja might have performed more than 5000 marriages, upanayanams, gruha praveshams, homams etc.... what a wonderful service to Society!!! Ajja was also very fortunate to have Anna, Appa, Amma and Aunty who

treated and took care of him in his last few years with so much love and affection.

Ajja was a perfect example of how to lead a life: Loving, Caring, Generous, Orthodox, Unselfish, Disciplined, Hard working and Motivated.


We are all very fortunate and proud to say that he was our grandfather.

Let us pray to Swami for Ajja's Moksha.

*******

## ೮. ಲೇಖಕರು

1. ಮಾರ್ಕಂಡೇಯ ಅವಧಾನೀಗಳು, ವೇದವಿದ್ವಾಂಸರು, ಮತ್ತೂರು
2. ಮತ್ತೂರು ಕೃಷ್ಣಮೂರ್ತಿ, ಭಾರತೀಯ ವಿದ್ಯಾಭವನ, ಬೆಂಗಳೂರು
3. ಡಾ. ಕೆ.ಆರ್. ಶ್ರೀಕಂಠಯ್ಯ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು
4. ಡಾ. ಎಚ್.ಕೃಷ್ಣಮೂರ್ತಿ, ಪ್ರಭಾ ಐ ಕ್ಲಿನಿಕ್, ೮ನೇ ಬ್ಲಾಕ್, ಜಯನಗರ, ಬೆಂಗಳೂರು
5. ರಾಮೇಶ್ವರಾವಧಾನೀ, ವೇದವಿದ್ವಾಂಸರು, ಬೆಂಗಳೂರು
6. ವಿಶ್ವಾಮಿತ್ರ, ವ್ಯವಸ್ಥಾಪಕ ಸಂಪಾದಕ, ಭಾರತ ದರ್ಶನ, ಬೆಂಗಳೂರು-೨೮
7. ಟಿ.ಕೆ. ಸೂರ್ಯನಾರಾಯಣ ಶಾಸ್ತ್ರೀ, ಶ್ರೀಲಕ್ಷ್ಮೀ ಶಾಸ್ತ್ರೀ ಮತ್ತು ಮಕ್ಕಳು, ಪದ್ಮನಾಭನಗರ, ಬೆಂಗಳೂರು
8. ಕೇಶವಪ್ರಸಾದ್
9. ಟಿ.ಎಲ್. ನಾಗಭೂಷಣ ರಾವ್, ನಿವೃತ್ತ ಸಹಸಂಪಾದಕ, ಡೆಕ್ಕನ್ ಹೆರಾಲ್ಡ್
10. ಅನ್ನಪೂರ್ಣಾ, ರಾವ್ ಟುಟೋರಿಯಲ್ಸ್
11. Kathyayani
12. ಎಚ್.ಆರ್. ಸುಬ್ರಹ್ಮಣ್ಯ ಶಾಸ್ತ್ರೀ, ಪುರೋಹಿತರು, ತ್ಯಾಗರಾಜನಗರ, ಬೆಂಗಳೂರು
13. ಬಿ.ಎನ್.ಶ್ರೀಕಂಠಯ್ಯ, ೧ನೇ ಬ್ಲಾಕ್, ಜಯನಗರ, ಬೆಂಗಳೂರು
14. ಸುಬ್ಬಣ್ಣ, ಉಪನ್ಯಾಸಕರು, ಕೇಂದ್ರೀಯ ವಿದ್ಯಾಲಯ, ಎನ್.ಎ.ಎಲ್, ಬೆಂಗಳೂರು




# ತುಂಗ ಭದ್ರ

**ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿ**
**ಹಾಗೂ ಶ್ರೀ ಎಚ್.ಆರ್. ಕೇಶವಮೂರ್ತಿ**
**ಅಭಿನಂದನ**

*ಪ್ರಧಾನ ಸಂಪಾದಕರು*
**ರಾಜಾರಾಮಮೂರ್ತಿ**

# ತುಂಗ ಭದ್ರ

## ವ್ಯಾಖ್ಯಾನ ಚತುರ, ವೇದಮೂರ್ತಿ, ಮಾರ್ಕಂಡೇಯ ಅವಧಾನಿ

## ಹಾಗೂ

## ಗಮಕ ಗಂಧರ್ವ ಎಚ್.ಆರ್. ಕೇಶವಮೂರ್ತಿ

## ಅಭಿನಂದನಾ ಗ್ರಂಥ

*ಪ್ರಧಾನ ಸಂಪಾದಕರು*

**ರಾಜಾರಾಮಮೂರ್ತಿ**

*ಸಹಸಂಪಾದಕರು*

**ಕೇಶವ**

**ನಾಗರಾಜ ಎಸ್.**

**ವಾಸುದೇವ ಹೊ.ರಾ.**

*ಸಲಹೆಗಾರರು*

**ಪ್ರೊ|| ಎಲ್.ಎಂ.ಎಲ್.ಶಾಸ್ತ್ರಿ**

## ಗಮಕ ಕಲಾ ಪರಿಷತ್

**ಹೊಸಹಳ್ಳಿ- 577 202, ಶಿವಮೊಗ್ಗ ತಾಲ್ಲೂಕು**

*Thunga Bhadra: a Felicitation volume of Sri K.N. Markandeya Avadhani, Mattur and Sri H.R. Keshava Murthy, Hosahalli. Edited by the Board of Editors and Published by Gamaka Kala Parishath, Hosahalli, Shimoga Taluk - 577 202; 1994*



*ಮುದ್ರಣ:* **ಸಂಕೇತ, ಎನ್.ಟಿ. ರಸ್ತೆ, ಶಿವಮೊಗ್ಗ**

*ಪ್ರಕಾಶಕರು:* **ಎಚ್.ರಾಮಣ್ಣ**, ಅಧ್ಯಕ್ಷರು, ಅಭಿನಂದನಾ ಸಮಿತಿ
ಗಮಕ ಕಲಾ ಪರಿಷತ್, ಹೊಸಹಳ್ಳಿ - 577 202, ಶಿವಮೊಗ್ಗ ತಾಲ್ಲೂಕು

## ತುಂಗ ಭದ್ರ ಹೆಸರಿನಲ್ಲೇನಿದೆ ?

ತುಂಗ-ಭದ್ರ: *ಈ* ಎರಡು ಪದಗಳು ಸಂಸ್ಕೃತ ಸಾಹಿತ್ಯದಲ್ಲಿ ಬಹಳಷ್ಟು ಅರ್ಥಗಳನ್ನು ಒಳಗೊಂಡಿರುವ ಅಪೂರ್ವ ಪದಗಳು.

ತುಂಗ= ಉನ್ನತ, ಎತ್ತರ (*High, tall, elevated, lofty*), ಆದ್ಯ, ಪ್ರಾಮುಖ್ಯದ (*Prominent, chief, principal*), ದೃಢ (*Strong, passionate*), ಬುಧಗ್ರಹ (*The planet Mercury*).

ಭದ್ರ=ಒಳ್ಳೆಯ, ಸುಖಕರ, ಅಭಿವೃದ್ಧಿಶೀಲ (*Prosperous*), ಪವಿತ್ರ, ಮಂಗಳಕರ (*blessed*), ಸರ್ವೋನ್ನತ (*Chief*), ಅನುಕೂಲಕರ (*Favourable*), ದಯಾಪೂರ್ಣ (*Kind, Gracious*), ಸ್ನೇಹಮಯ, ಉತ್ತಮ ಹಾಡುಗಾರಿಕೆ ಕೌಶಲ್ಯ, ಆನಂದಕರ (*Pleasant, enjoyable, lovely*), ಹೊಗಳಿಕೆಗೆ ಯೋಗ್ಯ, (*Praiseworthy, desirable*), ಪ್ರಿಯ (*beloved, dear*).

*ಈ* ಅರ್ಥಗಳೂ ಮಾನನೀಯರಾದ ಶ್ರೀ ಎಚ್.ಆರ್. ಕೇಶವಮೂರ್ತಿ ಹಾಗೂ ಶ್ರೀ ಅವಧಾನಿಗಳಿಗೆ ನೂರಕ್ಕೆ ನೂರರಷ್ಟು ಅನ್ವರ್ಥವಾಗಿವೆ.

ತುಂಗಾ-ಭದ್ರಾ ನದಿಗಳು ಕರ್ನಾಟಕದ ಜೀವನದಿಗಳು. ತುಂಗೆಯು ಶ್ರೀ ಮೂರ್ತಿಯವರ ಹೊಸಹಳ್ಳಿ ಗ್ರಾಮವನ್ನು, ಭದ್ರೆಯು ಶ್ರೀ ಅವಧಾನಿಗಳ ಮತ್ತೂರು ಗ್ರಾಮವನ್ನು ಪೋಷಿಸುತ್ತಾ ಮುನ್ನಡೆಸುತ್ತಾ ಬಂದಿವೆ. ಹಾಗೆಯೇ ಮಾನನೀಯರಿಬ್ಬರೂ ಗಮಕ ಚೈತನ್ಯವನ್ನುಳಿಸುತ್ತ ಬೆಳೆಸುತ್ತ ಬಂದಿದ್ದಾರೆ. ತುಂಗಭದ್ರಾ ನದಿಯೂ ಕರ್ನಾಟಕ ಹಾಗೂ ಆಂಧ್ರಪ್ರದೇಶದ ಬಹುಭಾಗದಲ್ಲಿ ಹರಿದು ಇಲ್ಲಿನ ಜನತೆಯ ಜೀವನಾಧಾರವಾಗಿದೆ. ಮಹನೀಯರು ಕರ್ನಾಟಕದ ಎಲ್ಲೆಡೆ ಸಂಚರಿಸಿ ರಸಿಕ ಜನರಿಗೆ ಆನಂದವನ್ನೀಯುತ್ತ ಬಂದಿದ್ದಾರೆ.

*ಈ* ಹಿನ್ನೆಲೆಯಲ್ಲಿ ಮಾನನೀಯರಿಗೆ ಅನ್ವರ್ಥವಾಗುವ "ತುಂಗ ಭದ್ರ" ಹೆಸರನ್ನು ಸಂಭಾವನಾ ಗ್ರಂಥಕ್ಕೆ ಶೀರ್ಷಿಕೆಯಾಗಿ ಸ್ವೀಕರಿಸಿದ್ದೇವೆ.

**ಸಂ.**

# ನಿವೇದನೆ

ಹೊಸಹಳ್ಳಿಯ **ಗಮಕ ಗಂಧರ್ವ ಎಚ್.ಆರ್. ಕೇಶವಮೂರ್ತಿ** ಹಾಗೂ **ಮತ್ತೂರಿನ ವ್ಯಾಖ್ಯಾನ ಚತುರ ವೇದಮೂರ್ತಿ ಮಾರ್ಕಂಡೇಯ ಅವಧಾನಿಗಳಿಗೆ** ಅರುವತ್ತು ವರ್ಷ ತುಂಬಿದ ಸಂದರ್ಭದಲ್ಲಿ ಅಭಿನಂದನಾ ಗ್ರಂಥವೊಂದನ್ನು ಸಮರ್ಪಿಸಿ ಗೌರವಿಸಬೇಕೆಂಬ ನಮ್ಮ ಆಶಯ ಇದೀಗ *ಈ*ಡೇರಿದೆ. ಕಳೆದ ಸುಮಾರು ಮೂವತ್ತು ವರ್ಷಗಳಿಂದ ಗಮಕ ಕ್ಷೇತ್ರದಲ್ಲಿ ದುಡಿಯುತ್ತ ಬಂದ *ಈ* ಮಹನೀಯರಿಬ್ಬರೂ ನಾಡಿನಾದ್ಯಂತ ಸಂಚರಿಸಿ ವಾಚನ-ವ್ಯಾಖ್ಯಾನಗಳ ಸಾವಿರಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಗಮಕಕಲೆಯ ಉಳಿವು ಬೆಳವಿಗೆ ಕಾರಣರಾಗಿದ್ದಾರೆ. ಅದಕ್ಕಾಗಿ ನಿರಂತರ ಶ್ರಮಿಸುತ್ತ ಬಂದಿದ್ದಾರೆ. ಅವರ ಮತ್ತು ನಮ್ಮ ಗಮಕ ಕಲಾ ಪರಿಷತ್‌ನ ಸಂಬಂಧ ಕೂಡ ಪರಿಷತ್ ಅಸ್ತಿತ್ವಕ್ಕೆ ಬಂದ ದಿನದಿಂದ ನಿಕಟವಾಗಿದೆ. ಆದ್ದರಿಂದ ಅವರನ್ನು ಸನ್ಮಾನಿಸುವುದು ನಮ್ಮ ಒಂದು ಕರ್ತವ್ಯವೂ ಆಗಿದೆ.

ಶ್ರೀ ಎಚ್.ಆರ್. ಕೇಶವಮೂರ್ತಿಯವರು ಕಳೆದ ಮೂವತ್ತು ವರ್ಷಗಳಿಂದ ಗಮಕ ವಾಚನ ಮಾಡುತ್ತ ತಮ್ಮ ಮಧುರ ಕಂಠ ಹಾಗೂ ವಿದ್ವತ್ತಿನಿಂದ ನಾಡಿನ ಅಪಾರ ರಸಿಕರ ಮನಸ್ಸನ್ನು ಗೆದ್ದಿರುತ್ತಾರೆ. ಮತ್ತೂರು-ಹೊಸಹಳ್ಳಿ ಗ್ರಾಮಗಳಲ್ಲಿ ನೂರಾರು ಜನ ಶಿಷ್ಯರನ್ನು ಹೊಂದಿದ್ದು ವಾಚನ ಅಭ್ಯಾಸ ಮಾಡಿಸಿದ್ದಾರೆ. ಕಾವ್ಯಸುಧಾ ಶ್ರವಣದ ಅಭಿರುಚಿಯನ್ನು ಉಂಟುಮಾಡಿರುತ್ತಾರೆ.

ಗಮಕ ಕಲಾ ಪರಿಷತ್ ಅವರ ಕಂಠಶ್ರೀಯನ್ನು ಆಡಿಯೋ ಕ್ಯಾಸೆಟ್ ಮೂಲಕ ಹಿಡಿದಿಡುವ ಪ್ರಯತ್ನ ಮಾಡಿದೆ. ಪ್ರವಚನ ಚಕ್ರವರ್ತಿ ಲಕ್ಷ್ಮೀಕೇಶವ ಶಾಸ್ತ್ರಿಗಳ ಜೊತೆ ಒಂದು ವರ್ಷ ಕಾಲ ಕುಮಾರವ್ಯಾಸ ಭಾರತವನ್ನು ಪೂರ್ಣವಾಗಿ ವಾಚನ ಮಾಡಿ ರೆಕಾರ್ಡ್ ಮಾಡಿಸಿ ಕೊಟ್ಟಿರುತ್ತಾರೆ. ಅಲ್ಲದೆ ಜೈಮಿನಿ ಭಾರತದ "ಮಯೂರ ಧ್ವಜ" ಪ್ರಸಂಗ ಕುರಿತು ಒಂದು ಕ್ಯಾಸೆಟ್, ಶ್ರೀ ಮಾರ್ಕಂಡೇಯ ಅವಧಾನಿಗಳ ಜತೆ ಸಮಗ್ರ ಜೈಮಿನಿ ಭಾರತ ಹಾಗೂ ಹರಿಶ್ಚಂದ್ರಕಾವ್ಯ, ಶ್ರೀ ರಘುಪತಿಶಾಸ್ತ್ರಿಗಳ ಜತೆ ಜೈಮಿನಿಭಾರತದ 'ಸೀತಾಪರಿತ್ಯಾಗ' ಹಾಗೂ 'ಲವಕುಶ' ಕ್ಯಾಸೆಟ್ (ಇವು 1000ಕ್ಕೂ ಅಧಿಕ ಸಂಖ್ಯೆಯಲ್ಲಿ ಖರ್ಚಾಗಿದ್ದು ಗಮಕ ಕ್ಯಾಸೆಟ್ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ) ಧ್ವನಿಮುದ್ರಣ ಮಾಡಿಸಿ ಕೊಟ್ಟಿರುತ್ತಾರೆ.

ವೇದಮೂರ್ತಿ ಮಾರ್ಕಂಡೇಯ ಅವಧಾನಿಗಳು ಕನ್ನಡ-ಸಂಸ್ಕೃತ ಸಾಹಿತ್ಯ ಮಾತ್ರವಲ್ಲ, ವೇದಾಂತ ವಿಚಾರದಲ್ಲಿಯೂ ಪರಿಣತರಾಗಿದ್ದು ಗಮಕ ವ್ಯಾಖ್ಯಾನದ ಮೂಲಕವಾಗಿ ಧರ್ಮಪ್ರಸಾರ ಕಾರ್ಯವನ್ನೂ ಬಹುಮಟ್ಟಿಗೆ ಮಾಡುತ್ತ ಬಂದಿದ್ದಾರೆ. ಸಪ್ತಋಷಿ ಸಪ್ತಾಹ, ಪತಿವ್ರತಾ ಸಪ್ತಾಹ ಇತ್ಯಾದಿ ಕಾರ್ಯಕ್ರಮಗಳನ್ನು ಯೋಜಿಸಿ ಹಲವೆಡೆ ನಿರ್ವಹಿಸಿರುತ್ತಾರೆ. *ಈ* ಕಾರ್ಯಕ್ರಮಗಳಿಗೆ ಮೂಲಗ್ರಂಥವಿರುವುದಿಲ್ಲ. ಹಲವೆಡೆ ಬರುವ ಅಂಶಗಳನ್ನು ಒಂದೆಡೆ ಕಲೆಹಾಕಿ ಇಂಥ ಕಾರ್ಯಕ್ರಮ ನಡೆಸುವ ಯೋಜನೆ ಅವರ ಅಪಾರ ಶಾಸ್ತ್ರಪಾಂಡಿತ್ಯದ ದ್ಯೋತಕವಾಗಿದೆ. ಕಾವ್ಯದ ಜತೆಗೆ ಹಿನ್ನೆಲೆಯಾಗಿ ಕಾವ್ಯದ ಹುಟ್ಟಿಗೆ ಕಾರಣವಾಗುವ ಧಾರ್ಮಿಕ ಅಂಶಗಳನ್ನು ಗುರ್ತಿಸುತ್ತ ವ್ಯಾಖ್ಯಾನ ಮಾಡುವ ಅವರ ಕ್ರಮ ಅನನ್ಯವಾಗಿದೆ.

ಮಾನನೀಯರಿಬ್ಬರನ್ನೂ ಅಭಿನಂದಿಸಲು ಹೊಸಹಳ್ಳಿಯ ಶ್ರೀ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಇಪ್ಪತ್ತು ಜನರ ಒಂದು ಅಭಿನಂದನಾ ಸಮಿತಿಯನ್ನು ರಚಿಸಿದ್ದು, *ಈ* ಸಮಿತಿಯಲ್ಲಿ ಸಲಹೆಗಾರರಾಗಿ ಶ್ರೀ ಮತ್ತೂರು ಕೃಷ್ಣಮೂರ್ತಿ, ಭಾರತೀಯ ವಿದ್ಯಾಭವನ, ಲಂಡನ್; ಶ್ರೀ ಸಂತೋಷಕುಮಾರ ಗುಲ್ವಾಡಿ, ಸಂಪಾದಕರು, ತರಂಗ, ಮಣಿಪಾಲ ಹಾಗೂ ಡಾ. ಬಿ. ವೆಂಕಟ್‌ರಾವ್, ಉಷಾ ನರ್ಸಿಂಗ್ ಹೋಂ, ಶಿವಮೊಗ್ಗ ಅವರು ಮಾರ್ಗದರ್ಶನ ನೀಡಿರುತ್ತಾರೆ.

ಗಮಕ ಕಲೆ ಹಾಗೂ ಕಾವ್ಯ ವಿಮರ್ಶೆ ಕುರಿತ, ನೂರ್ಕಾಲ ಉಳಿಯುವಂತಹ ಕೃತಿಯೊಂದನ್ನು ಹೊರತರಲು ಆಶಿಸಿ ನಾಡಿನ ಹಲವು ವಿದ್ವಾಂಸರನ್ನು ಇದಕ್ಕಾಗಿ ಸಂಪರ್ಕಿಸಿದ್ದೇವೆ. ಕೃತಿ ನಮ್ಮ ನಿರೀಕ್ಷಣೆಯ ಮಟ್ಟದಲ್ಲಿ ಹೊರ ಬರಲು ಸಾಧ್ಯವಾಗದಿದ್ದರೂ ತೃಪ್ತಿಕರವಾಗಿ ಬಂದಿದೆ ಎಂಬ ಸಂತೋಷ ನಮಗಿದೆ. ಸುಮಾರು ಇನ್ನೂರು ಪುಟಗಳ ಮಿತಿಯಲ್ಲಿ ವ್ಯಕ್ತಿಪರಿಚಯಾತ್ಮಕ ಹನ್ನೆರಡು ಲೇಖನಗಳು ಮತ್ತು ಎರಡು ಕವನಗಳು, ಗಮಕ ಕಲೆ ಕುರಿತ ಏಳು ಲೇಖನಗಳು ಹಾಗೂ ಉಳಿದಂತೆ ಕಾವ್ಯವಿಮರ್ಶೆ ಇತ್ಯಾದಿ ಹನ್ನೆರಡು ಸಂಕೀರ್ಣ ಲೇಖನಗಳು ಇಲ್ಲಿವೆ.

ಸಂಭಾವನಾ ಗ್ರಂಥವನ್ನು ಹೊರತರಲು ಸುಮಾರು ೫೦,೦೦೦/- ರೂ.ಗಳಷ್ಟು ಹಣ ಸಂಗ್ರಹಿಸಿದ್ದೇವೆ. ಇಷ್ಟು ಹಣವನ್ನು ನೀಡಿದ ದಾನಿಗಳನ್ನು *ಈ* ಸಂದರ್ಭದಲ್ಲಿ ಹೃತ್ಪೂರ್ವಕ ಸ್ಮರಿಸುತ್ತೇವೆ. ಕಡಮೆ ಕಾಲಾವಕಾಶದಲ್ಲಿ ಲೇಖನವನ್ನು ಬರೆದುಕೊಟ್ಟು ಉಪಕರಿಸಿದ ಲೇಖಕರಿಗೆ ನಮ್ಮ ಕೃತಜ್ಞತೆಗಳು.

ಅಂದವಾಗಿ ಮುಖಪುಟ ಮುದ್ರಿಸಿಕೊಟ್ಟ ಬೆಂಗಳೂರಿನ ಲಕ್ಷ್ಮಿ ಮುದ್ರಣಾಲಯ ಹಾಗೂ ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ಸಂಕೇತ ಮುದ್ರಣಾಲಯ, ಶಿವಮೊಗ್ಗ ಅವರಿಗೆ ನಮ್ಮ ಧನ್ಯವಾದಗಳು.

***ರಾಜಾರಾಮಮೂರ್ತಿ***
*ಪ್ರಧಾನ ಸಂಪಾದಕ*

# ೧. ಚತುರ ಗಂಧರ್ವರ ಕೌಶಲ


*ಡಾ. ಟಿ.ಎಸ್. ಕೃಷ್ಣಮೂರ್ತಿ*

ಪಾವನ ತುಂಗೆಯ ಎಡಬಲಗಳಲ್ಲಿ ಶೋಭಿಸುತ್ತಿರುವ ಜೋಡಿ ಅಗ್ರಹಾರಗಳಾದ ಮತ್ತೂರು ಹೊಸಹಳ್ಳಿಗಳು ಬತ್ತ-ಅಡಕೆಗಳಿಗೆ ಪ್ರಸಿದ್ಧವಾಗಿರುವಂತೆಯೇ, ವೇದಪಾರಂಗತರಿಗೂ ಗಮಕಕಲಾ ನಿಪುಣರಿಗೂ ತೌರುಮನೆಯಾಗಿರುವುದು ಸುಪ್ರಸಿದ್ಧ ವಿಷಯವೇ ಆಗಿದೆ. ಗಮಕ ವಾಚನ-ವ್ಯಾಖ್ಯಾನ ಪಿತಾಮಹರೆಂದು ಪ್ರಥಿತಯಶರಾದ ಮತ್ತೂರು ರಾಮಶಾಸ್ತ್ರಿಗಳು ಹಾಗೂ ಪ್ರವಚನ ಚಕ್ರವರ್ತಿ ಇತ್ಯಾದಿ ಬಿರುದಾವಳಿಯನ್ನು ಪಡೆದ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳ ಹೆಸರುಗಳನ್ನು ಕನ್ನಡನಾಡಿನಲ್ಲಿ ಕೇಳದವರಾರು? ಇವರಿಬ್ಬರೂ ವಾಚನ-ವ್ಯಾಖ್ಯಾನಗಳಲ್ಲಿ ಪ್ರತಿಭಾವಂತ ಪರಿಣತರು ಮಾತ್ರರಾಗಿರದೆ ಸಂಸ್ಕೃತ-ಕನ್ನಡಗಳ ಪಾಂಡಿತ್ಯದಲ್ಲಿ ಸವ್ಯಸಾಚಿಗಳೂ ಆಗಿ ಕನ್ನಡ ಗಮಕ ಪ್ರಪಂಚದಲ್ಲಿ ಉನ್ನತ ಸ್ಥಾನವನ್ನು ಗಳಿಸಿಕೊಂಡವರು. ವೇದಮೂರ್ತಿ ಚನ್ನಿಗರಾಯ ಅವಧಾನಿಗಳು, ವೇದಮೂರ್ತಿ ಲಕ್ಷ್ಮೀರಮಣ ಅವಧಾನಿಗಳು, ವೇದಮೂರ್ತಿ ನಾರಾಯಣ ಅವಧಾನಿಗಳು ಮುಂತಾದವರು ಇಲ್ಲಿನ ಸಹೃದಯ ವೃಂದದಲ್ಲಿ ಸೇರಿದ್ದರು. ಎಲ್ಲರದೂ ವೈದಿಕ ಸಂಪ್ರದಾಯಸ್ಥ ಕುಟುಂಬಗಳೇ ಆದರೂ, ಅವರೆಲ್ಲರೂ ಸಂಸ್ಕೃತಕ್ಕಿಂತ ಕನ್ನಡಕ್ಕೇ ಹೆಚ್ಚು ಪ್ರೋತ್ಸಾಹ ಕೊಟ್ಟು, ಗಮಕ - ಪ್ರವಚನ ಕಲೆಯು ಬೆಳೆಯಲು ಕಾರಣರಾದುದು ಸಾಮಾನ್ಯ ಸಂಗತಿಯೇನಲ್ಲ. ಕನ್ನಡ ಸಾಹಿತ್ಯದಲ್ಲಿ ರತ್ನಪ್ರಾಯವೆಂದೆನಿಸಿರುವ ಕುಮಾರವ್ಯಾಸ ಭಾರತವೇ ಅವರಿಗೆ ಗಮಕ ಕಲೆಯ ಮುಖ್ಯಾಕರ್ಷಣೆ. ಇದನ್ನು 'ಕಾವ್ಯಕೆ ಗುರು' ಎಂದು ಕುಮಾರವ್ಯಾಸನೇ ನಿರ್ಧರಿಸಿ ಹೇಳಿದ್ದಾನೆ ಅಲ್ಲವೇ?

**ಕುಮಾರವ್ಯಾಸನು ಹಾಡಿದನೆಂದರೆ**
**ಕಲಿಯುಗ ದ್ವಾಪರವಾಗುವುದು**
**ಭಾರತ ಕಣ್ಣಲಿ ಕುಣಿವುದು ! ಮೈಯಲಿ**
**ಮಿಂಚಿನಹೊಳೆ ತುಳುಕಾಡುವುದು !**

ಎಂಬ ಮಾತಿನ ಯಾಥಾರ್ಥ್ಯವನ್ನು, ಅದನ್ನು ಮತ್ತೂರು ರಾಮಶಾಸ್ತ್ರಿಗಳು ವಾಚನ ಮಾಡಿದಾಗ, ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರಿಗಳು ವ್ಯಾಖ್ಯಾನಿಸಿದಾಗ, ಸಹೃದಯ ಶ್ರೋತೃವೃಂದ ಆಸ್ವಾದಿಸಿ ಅನುಭವ ಸಾಗರದಲ್ಲಿ ಮುಳುಗಿರುತ್ತಿದ್ದುದು, ಈಗ ಇತಿಹಾಸವೇ ಆಗಿದೆ. ಅವರಿಬ್ಬರದೂ ದೊಡ್ಡ ವ್ಯಕ್ತಿತ್ವ. ಕಲ್ಪವೃಕ್ಷದಂತೆ ಬೆಳೆದು ನಿಂತ ಆ ದಿವ್ಯಚೇತನರ ಕೃಪಾದೃಷ್ಟಿಯಲ್ಲಿ ಈ ಗ್ರಾಮಗಳಲ್ಲಿ ಗಮಕಕಲೆ ಅಮೃತವನ್ನೇ ಪಡೆಯಿತು. ಹತ್ತಾರು ಜನ ಪರಿಣತಿಯನ್ನು ಪಡೆದರು. ಅವರ ವ್ಯಕ್ತಿತ್ವದ ಆದರ್ಶದ ಮೇಲ್ಪಂಕ್ತಿಯಲ್ಲಿ ಇಲ್ಲಿನ ಭಾವೀ ಜನಾಂಗ ರೂಪುಗೊಂಡಿತು.

ಈ ಗಮಕ ವಾಚನ-ಪ್ರವಚನ ಕಲೆಯ ಪರಂಪರೆಯಲ್ಲೇ ಪಳಗಿ ಬೆಳೆದು ಬಂದು, ಮತ್ತೂರು ಹೊಸಹಳ್ಳಿಗಳಿಗೆ ಪ್ರಾಶಸ್ತ್ಯವನ್ನೂ ಪ್ರಶಸ್ತಿಯನ್ನೂ ತಂದಿರುವವರಲ್ಲಿ ಮುಖ್ಯರಾದವರು ಮತ್ತೂರು ಮಾರ್ಕಂಡೇಯ ಅವಧಾನಿಗಳು ಹಾಗೂ ಹೊಸಹಳ್ಳಿಯ



*170. ಪುಸ್ತಕಪ್ರಿಯ ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು*

ಕೇಶವಮೂರ್ತಿಗಳು. ಇಬ್ಬರೂ- ವ್ಯಾಖ್ಯಾನ ಲೋಕದ ಸೂರ್ಯನಾಗಿ ಬೆಳಗಿದ ಲಕ್ಷ್ಮೀಕೇಶವಶಾಸ್ತ್ರಿಗಳ ಶಿಷ್ಯರು. ಅವರಿಬ್ಬರ ಮೇಲೂ ಆ ಪ್ರಾತಃಸ್ಮರಣೀಯರ ಕೃಪಾದೃಷ್ಟಿ, ಅಭಯಹಸ್ತ ಮೂಡಿ ನಿಂತಿದೆ.

ಮಾರ್ಕಂಡೇಯ ಅವಧಾನಿಗಳ ಸಸ್ನೇಹ ಸಂಪರ್ಕ ನನಗೆ ದೊರೆತದ್ದು ಅವರ ತಮ್ಮಂದಿರೂ, ನನ್ನ ಪ್ರೀತಿ ವಾತ್ಸಲ್ಯಕ್ಕೆ ಭಾಜನರಾದವರೂ ಆದ ಮತ್ತೂರು ಚಂದ್ರಶೇಖರ ಅವರಿಂದ. ಆಗ ನಾನು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕನಾಗಿದ್ದೆ. ಚಂದ್ರಶೇಖರ ಅವರ ವಿವಾಹದ ಸಂದರ್ಭದಲ್ಲಿ ನಾನು ಹೊಸಹಳ್ಳಿಯಲ್ಲಿ ಎರಡು ದಿನವಿದ್ದೆ. ಚಂದ್ರಶೇಖರ ಅವರ ಮುಖಾಂತರ ಮಾರ್ಕಂಡೇಯ ಅವಧಾನಿಗಳ ಮೊದಲ ಪರಿಚಯವಾಯಿತು. ಅದು ನನ್ನ ಪಾಲಿಗೆ ದೊಡ್ಡ ಭಾಗ್ಯ. ಆಗ ಅವರ ಬಾಯಿಯಿಂದ ಸ್ಫುಟವಾಗಿ ಉದಾತ್ತಾನುದಾತ್ತ ಸ್ವರಿತವನ್ನು ಅನುಸರಿಸಿ ಮೂಡಿ ಬರುತ್ತಿದ್ದ ವೇದಮಂತ್ರಗಳನ್ನು ಕೇಳಿ ಆನಂದಪಟ್ಟವರಲ್ಲಿ ನಾನೂ ಒಬ್ಬ. ಪೌರೋಹಿತ್ಯಕ್ಕೆ ಗೌರವ ತರುವ ಆಚಾರ, ವಿಚಾರ, ಉಚ್ಚಾರಗಳು ಅವರಿಗೆ ಜನ್ಮಾಯತ್ತವಾಗಿ ಲಭಿಸಿವೆ. ಅವರ ಶಾಸ್ತ್ರ ಪ್ರಯೋಗ, ಕರ್ಮ ವಿವೇಕ, ಶ್ರೇಷ್ಠ ಪರಂಪರೆಗೆ ಸೇರಿದ್ದು. ಅವರ ದೈವಭಕ್ತಿ, ಸಾಧು ಸತ್ಪುರುಷರ ಹಾಗೂ ವಿದ್ಯಾವಂತರ ವಿಷಯವಾಗಿ ತೋರುವ ಗೌರವಭಾವ ನನ್ನನ್ನು ಬೆರಗುಗೊಳಿಸಿತು. ಅವರ ಕರ್ಮದ ನಿಷ್ಠುರದಷ್ಟೇ ಪೂಜ್ಯತೆಗೆ ತಲೆಬಾಗುವ ಈ ಗುಣ ಅನುಕರಣೀಯ. ಅಮೃತ ವೇದವಾಙ್ಮಯ ಅವರ ಬಾಯಿಯಲ್ಲಿ ರಸವಾಹಿನಿ. ಒಟ್ಟಿನಲ್ಲಿ ನಾನು ಅವರನ್ನು ಅಂದು ಕಂಡುದು ವೈದಿಕ ಶಾಸ್ತ್ರದ ಹಿನ್ನೆಲೆಯಲ್ಲಿ; ಪೌರೋಹಿತ್ಯ ಪ್ರಪಂಚದಲ್ಲಿ.

ನಾನು ಬೆಂಗಳೂರಿಗೆ ವರ್ಗವಾಗಿ ಬಂದ ಮೇಲೆ ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದ ಮತ್ತೂರು ಚಂದ್ರಶೇಖರ ಅವರು ಒಂದು ದಿನ ಬಂದು ಕೇಶವಮೂರ್ತಿಗಳೂ, ತಮ್ಮ ಅಣ್ಣಂದಿರಾದ ಮಾರ್ಕಂಡೇಯಾವಧಾನಿಗಳೂ ಸದಾಶಿವನಗರದಲ್ಲಿ ಗಮಕ ವಾಚನ-ಪ್ರವಚನಗಳನ್ನು, ಅಂದಿನಿಂದ ಪ್ರತಿಸಂಜೆ ಒಂದು ವಾರ ನಡೆಸುತ್ತಾರೆಂದೂ, ನಾನು ಆ ಸಂಜೆಯೇ ಅಲ್ಲಿಗೆ ಬರಬೇಕೆಂದೂ ಪ್ರೀತ್ಯಾದರ ತುಂಬಿದ ಆಹ್ವಾನವಿತ್ತರು. ಅದು ನನ್ನ ಪಾಲಿಗೆ ಒಂದು ವಿಧದಲ್ಲಿ ಒತ್ತಾಯವೇ ಆಗಿತ್ತು. ಕೃಷ್ಣಗಿರಿ ಕೃಷ್ಣರಾಯರು, ಸಂಗೋ ಬಿಂದುರಾಯರು, ಕಳಲೆ ಸಂಪತ್ಕುಮಾರಾಚಾರ್ಯರು, ಎಂ.ಎಸ್. ಅನಂತಪದ್ಮನಾಭರಾಯರು, ಎಂ.ರಾಘುವೇಂದ್ರರಾಯರು ಹಾಗೂ ಶಕುಂತಲಾಬಾಯಿ ಪಾಂಡುರಂಗರಾಯರು- ಇವರುಗಳ ಗಮಕ ವಾಚನವನ್ನು ಕೇಳಿ ಸಂತೋಷಗೊಂಡಿದ್ದ ನಾನು, ತಮ್ಮ ಜೀವನದ ಅಭೀಪ್ಸೆಯನ್ನೆಲ್ಲಾ ವೇದ, ತತ್ತ್ವ, ಅಧ್ಯಾತ್ಮ ಇತ್ಯಾದಿ ವಿಷಯ ವಲಯಗಳಲ್ಲಿ ಕೇಂದ್ರೀಕರಿಸಿಕೊಂಡಿರುವ ಪುರೋಹಿತವೃತ್ತಿಯ ಅವರಿಗೆ ಈ ಗಮಕಕಲೆ ಹೇಗೆ, ಎಷ್ಟರ ಮಟ್ಟಿಗೆ ಒಲಿದಿರಬಹುದು- ಎಂದು ತಿಳಿಯಲು ಸಕಾತರ ಕುತೂಹಲದಿಂದ ಹೋದೆ.

ಅದೊಂದು ಅಮೃತಕ್ಷಣ. ಮಣೆಯ ಮೇಲೆ ಕುಳಿತಿದ್ದ ಅವರು ನಗುಮುಖದಿಂದ ನನ್ನನ್ನು ಸ್ವಾಗತಿಸಿದರು. ಆಕರ್ಷಣೀಯ ಆಹ್ವಾನದಂತಿದ್ದ ಅವರ ಮುಗುಳು ನಗೆಯ ದಾಕ್ಷಿಣ್ಯಕ್ಕೆ ವಶನಾಗಿ ಅವರ ಸಮೀಪದಲ್ಲೇ ಮುಂದೆ ಕುಳಿತೆ. ಆಗಲೇ ನನಗೆ ಕೇಶವಮೂರ್ತಿಗಳ ಪರಿಚಯವೂ ಆದುದು. ಎಂತಹ ಗೌರವಕರವೂ, ಆನಂದಪ್ರದವೂ ಆದ ಕ್ಷಣ ಅದು! ಆ ಯುಗ್ಮದ ದರ್ಶನವೇ ಪಾವನತ್ವಕ್ಕೆ ದಾರಿ ಎನಿಸಿತು.

ಮಾರ್ಕಂಡೇಯಾವಧಾನಿಗಳ ವರ್ಣ ಶ್ಯಾಮಲ. ಬಿಳಿಯ ಕಚ್ಚೆ ಪಂಚೆ, ಶುಭ್ರವಾದ ಉತ್ತರೀಯ, ಕಿವಿಯಲ್ಲಿ ಕರ್ಣಕುಂಡಲ, ಹಣೆಯಲ್ಲಿ ತ್ರಿಪುಂಡ್ರ - ಮಧ್ಯೆ ಕುಂಕುಮ. ವೈದಿಕತತ್ತ್ವದ ವೀರಾಭಿಮಾನವೇ ಮೈತಳೆದಂತೆ ನಿಂತ ಶರೀರ. ಎಲ್ಲ ಬಹು ಶುಭ್ರ. ಮಾತು, ನಡಿಗೆ, ನೋಟ, ಎಲ್ಲ ಬಹು ಸ್ಪಷ್ಟ. ಪ್ರಾಸಂಗಿಕವಾಗಿ ಆಡುವ ಮಾತಿನಲ್ಲೂ ಖಚಿತತೆ. ಉಚ್ಚಾರಣೆಯಂತೂ ಸುಸ್ಫುಟ. ಅಭಿಪ್ರಾಯಗಳೂ ಅಷ್ಟೆ. ಗಂಭೀರವಾಗಿ ಪುಂಖಾನುಪುಂಖವಾಗಿ ಬರೆದೋದುವುದಕ್ಕಿಂತ ಚೆನ್ನಾಗಿ ಮೂಡಿ ನಿಲ್ಲಬಲ್ಲವು. ಆದರ್ಶ ವ್ಯಾಖ್ಯಾನಕಾರನಿಗೆ ಇರಬೇಕಾದ ಎಲ್ಲ ಗುಣಗಳನ್ನೂ ಅವರಲ್ಲಿ ಕಾಣಬಹುದು. ಅವೆಲ್ಲಕ್ಕಿಂತ ಮಿಗಿಲಾಗಿ ತೋರುವುದು ಅವರ ನಿರ್ದಿಷ್ಟ ಪಾಂಡಿತ್ಯ. ಪ್ರವಚನಕ್ಕೆ ಬೇಕಾದ ಸಂಸ್ಕೃತ, ಕನ್ನಡ, ಇಂಗ್ಲಿಷ್, ತಮಿಳು ಸಾಹಿತ್ಯಗಳ ಪಾಂಡಿತ್ಯ ಅವರಿಗೆ ಪೂರ್ವಸಿದ್ಧತೆಯನ್ನು ಉಂಟುಮಾಡಿದೆ. ಅವರ ಮನೆತನವೇ ವೇದಪಾಂಡಿತ್ಯಕ್ಕೆ ಹೆಸರಾದುದು. ಹೀಗಾಗಿ ಅವರಿಗೆ ವಂಶ ಪರಂಪರೆಯಿಂದಲೇ ಶ್ರುತಿ ಸ್ಮೃತಿಗಳ ಮೇಲೆ ಪ್ರಭುತ್ವ ಒದಗಿದೆ. ಕನ್ನಡ ಕಾವ್ಯಗಳ ಅಧ್ಯಯನದಿಂದ ವಿಮರ್ಶಾದೃಷ್ಟಿ ಸ್ಪಷ್ಟಗೊಂಡಿದೆ.

ಮಾರ್ಕಂಡೇಯ ಅವಧಾನಿಗಳು ಅಂದು ಜೈಮಿನಿ ಭಾರತದ ಪ್ರಸಂಗವೊಂದನ್ನು ಪ್ರವಚನ ಮಾಡಿದರು. ಲಲಿತ ಗದ್ಯ ಶೈಲಿಯಲ್ಲಿ ಮಾಧುರ್ಯದಿಂದ ಕೂಡಿದ ಅವರ ರಸವತ್ತಾದ ಕಥನಕ್ರಮ ನನಗೆ ತುಂಬ ರುಚಿಸಿತು. ತಮ್ಮ ವೃತ್ತಿಯ ಜತೆಗೆ ಬಾಳನ್ನು ಇಷ್ಟು ಸಮರ್ಥವಾಗಿ ಬಳಸಿಕೊಳ್ಳುತ್ತಿರುವವರು ವಿರಳ. ಅದಾದ ಮೇಲೆ ಹತ್ತಾರು ಸಲ ಅವರ ಪ್ರವಚನವನ್ನು ಕೇಳಿದ್ದೇನೆ. ಮೂಲ ಕಾವ್ಯ ಮತ್ತು ಕೃತಿಕಾರನ ಜತೆಗೆ ಸಮರಸವಾಗಿ ಜೀವಿಸುವ ನೈಪುಣ್ಯ ಅವರಿಗೆ ರೂಢಿಯಾಗಿದೆ. ತಮ್ಮ ವೇದಶಾಸ್ತ್ರ, ಪುರಾಣ, ಧರ್ಮಸೂತ್ರಾದಿ

ಗ್ರಂಥಗಳ ಅಗಾಧವಾದ ವಿದ್ವತ್ತನ್ನು ಬಳಸಿಕೊಂಡು ಹೃದಯಸ್ಪರ್ಶಿಯಾಗಿ ಶ್ರೋತೃಗಳಿಗೆ ಕವಿಹೃದಯವನ್ನು ತೋರಿಸಿ, ಕಾವ್ಯದ ಸಂಪೂರ್ಣ ಉಪಯೋಗವು ಅವರಿಗೆ ದೊರೆಯುವಂತೆ ಮಾಡಬಲ್ಲ ಕೌಶಲವು ಅವರಲ್ಲಿದೆ. ಮೇರುಕೃತಿಗಳ ವ್ಯಾಖ್ಯಾನಕ್ಕೆ ಆವಶ್ಯಕವಾದ ವ್ಯಾಕರಣಾದಿ ಶಾಸ್ತ್ರ ಸಂಸ್ಕಾರದಿಂದ ಕೂಡಿದ ಪದಸಂಪತ್ತಿ ತುಂಬಿದೆ ಅವರಲ್ಲಿ. ಅದನ್ನು ಉಸಿರಾಡುವಷ್ಟೇ ಅಪ್ರಯತ್ನಪೂರ್ವಕವಾದ ಸಹಜತೆಯಿಂದ ಬಳಸುತ್ತಾರೆ. ಇಷ್ಟಾದರೂ ಬಹುಶ್ರುತರೆಂಬ ಅಹಂಕಾರ ಲವಲೇಶವೂ ಅವರಲ್ಲಿಲ್ಲ. ಆದರೆ ಅವರ ಪ್ರವಚನವನ್ನು ಕೇಳುವವರಿಗೆ ಅದರ ಧಾಟಿ, ಆಳ, ಶುಭ್ರತೆ ಹೊಸತನ- ಇವೆಲ್ಲವೂ ಅರಿವಾಗಿ ಆ ಮಾತುಗಳ ಹಿಂದಿರುವ ವ್ಯಕ್ತಿಯ ಶುದ್ಧಜೀವನ, ಉದಾತ್ತತೆ, ನಾಡು-ನುಡಿಗಳ ಪ್ರೇಮ ಮನಸ್ಸಿನಲ್ಲಿ ಮೂಡಿ ನಿಲ್ಲುತ್ತವೆ. ಹೀಗೆ ಮಾರ್ಕಂಡೇಯಾವಧಾನಿಗಳು ಸಫಲ ಸಾರ್ಥಕ ವ್ಯಾಖ್ಯಾನಕಾರರಾಗಿ ಲಕ್ಷ್ಮೀಕೇಶವಶಾಸ್ತ್ರಿಗಳ ಆದರ್ಶದ ಮೇಲ್ಪಂಕ್ತಿಯಲ್ಲಿ ಖ್ಯಾತಿ ಪಾತ್ರರಾಗಿದ್ದಾರೆ. ಜನರ ಅಭಿರುಚಿ ಸುಸಂಸ್ಕೃತವಾಗುವಂತೆ ಮಾಡುತ್ತಿದ್ದಾರೆ.

ಇನ್ನು ಕೇಶವಮೂರ್ತಿಗಳು: ಮಾರ್ಕಂಡೇಯ ಅವಧಾನಿಗಳ ನೆನಪಾದೊಡನೆ ಕೇಶವಮೂರ್ತಿಗಳ ನೆನಪಾಗದೇ ಹೋಗುವುದಿಲ್ಲ.



*171. ಗಮಕ ಗಂಧರ್ವ ಎಚ್.ಆರ್.ಕೇಶವಮೂರ್ತಿ ಅವರು*

ಅವರ ವಾಚನ ಇವರ ವ್ಯಾಖ್ಯಾನದ ಜೊತೆಯಲ್ಲಿ ತಾನೆ! ನನಗೆ ಅವರ ಮೊದಲ ಪರಿಚಯವಾದದ್ದು ಹೊಸಹಳ್ಳಿಯಲ್ಲಿ; ಮಾರ್ಕಂಡೇಯಾವಧಾನಿಗಳ ತಮ್ಮಂದಿರಾದ ಚಂದ್ರಶೇಖರ ಅವರ ವಿವಾಹದ ಶುಭ ಸಂದರ್ಭದಲ್ಲಿ. ಅವರ ಪರಿಚಯ ಹೆಚ್ಚು ಆದದ್ದು ಲಕ್ಷ್ಮೀಕೇಶವಶಾಸ್ತ್ರಿಗಳ ಜತೆಯಲ್ಲಿ, ಪರಿಚಯ ಪಕ್ವವಾದದ್ದು ಅನೇಕ ಗಮಕ ಕಾರ್ಯಕ್ರಮಗಳಲ್ಲಿ. ಕೇಶವಮೂರ್ತಿಗಳ ಗಮಕ ವಾಚನ ಕಾರ್ಯಕ್ರಮಗಳ ಸಂಖ್ಯೆ, ವಿವರಗಳನ್ನು ಲೆಕ್ಕವಿಟ್ಟುಕೊಳ್ಳಲು ಸಾಧ್ಯವೆ? ಮತ್ತೂರು ಹೊಸಹಳ್ಳಿಗಳಲ್ಲಿ ಗಮಕಕಲೆ ಜೀವಂತವಾಗಿ ಸುಮಾರು ಐವತ್ತು-ಅರುವತ್ತು ವರ್ಷಗಳಿಂದ ಬೆಳೆಯುತ್ತಾ ಬಂದಿದೆ. ಮೇರುಕೃತಿಗಳ ರಸಸ್ಥಾನಗಳನ್ನು, ರಸಸ್ಯಂದಿಯಾಗಿ ವಾಚನಗೈದು ಸಹೃದಯರನ್ನು ತಣಿಸುತ್ತಿದ್ದವರಲ್ಲಿ ಶ್ರೇಷ್ಠರಾದವರು ಹೊಸಹಳ್ಳಿ ರಾಮಸ್ವಾಮಿಶಾಸ್ತ್ರಿಗಳು. ಅವರ ಗಮಕ ವಾಚನವೆಂದರೆ ಗಂಧರ್ವಲೋಕಕ್ಕೂ ಪ್ರಿಯ. ಅಂತಹವರ ಸುಪುತ್ರರಾಗಿ ಜನಿಸಿದವರೇ ಹೊಸಹಳ್ಳಿ ಕೇಶವಮೂರ್ತಿಗಳವರು. ಆಗರ್ಭ ಶ್ರೀಮಂತವಾಗಿ ಬಂದ ಕಲೆ, ಸದ್ಗುರುಗಳಾದ ಲಕ್ಷ್ಮೀಕೇಶವಶಾಸ್ತ್ರಿಗಳ ಕೃಪೆ, ಪ್ರಕೃತಿದತ್ತವಾದ ಪ್ರತಿಭೆ, ಇಂಪಾದ ಸುಲಕ್ಷಣ ಕಂಠಶ್ರೀ, ನೈಸರ್ಗಿಕ ಸಂಸ್ಕಾರ - ಮುಂತಾದ ಗುಣಲಕ್ಷಣಗಳು ಅವರಿಗೆ ಪೂರ್ವಸಿದ್ಧತೆಯನ್ನು ತಂದಿದ್ದವು. ತೀರ್ಥರೂಪರಾದ ತಂದೆಯವರ ಸೂಕ್ಷ್ಮಸಾಹಿತ್ಯ ಸಂವೇದನೆ, ಅಗಾಧ ಲೋಕಾನುಭವ ಅವರಲ್ಲಿಯೂ ಸ್ಥಾಯಿಯಾಗಿ ಗಟ್ಟಿಯಾಗಿ ಅಪ್ಪಿ ನಿಂತಿತು. ತುಂಬಿದ ತಮ್ಮ ಕಂಠಶ್ರೀ ಜತೆಗೆ ಕಾವ್ಯವಸ್ತುವಿನೊಡನೆ ತನ್ಮಯವಾಗಿ ವಾಚನ ಮಾಡುವ ಕಲೆ ವಿಶದಗೊಂಡಿತು. ಸುವರ್ಣಕ್ಕೆ ಸುಗಂಧ ಸೇರಿದಂತಾಯಿತು. ಕಾವ್ಯದ ರಸಾನುಭವವನ್ನು ಹೃದಯದಿಂದೆಬ್ಬಿಸಿ, ಧ್ವನಿಮಾಧುರ್ಯದ ಆರೋಹಣಾವರೋಹಣಗಳಲ್ಲಿ ಜುಣುಗಿಸಿ ಜಿಹ್ವಾಗ್ರದಲ್ಲಿ ನರ್ತಿಸುವಂತೆ ಮಾಡಿ ಮುಖದಲ್ಲಿ ಮೂಡಿಸಿ ಶ್ರೋತೃಗಳ ಕರ್ಣದ್ವಾರಗಳಿಂದ ರಸಾನುಭವವನ್ನು ಹೃದಯಸೀಮೆಗಿಳಿಸಿ, ತನ್ನೊಡನೆ ಶ್ರೋತೃವೃಂದವನ್ನೂ ಆನಂದದ ಚರಮಸೀಮೆಗೆ ಎಳೆದುಕೊಂಡು ನಡೆವುದೇ ಗಮಕಿಯ ಗಮ್ಯಸ್ಥಾನ. ಕೇಶವಮೂರ್ತಿಗಳ ಗಮಕ ವಾಚನವನ್ನು ಕೇಳಿದವರಿಗೆ *ಈ* ಅನುಭವ ಸಹಜವಾಗುತ್ತದೆ. 'ವಿಗಲಿತವೇದ್ಯಾಂತರಮಾನಂದದ' ಸವಿ ದೊರೆಯುತ್ತದೆ. ರಾಗ-ಸಾಹಿತ್ಯ-ಭಾವಗಳೇ ಗಮಕಿಯ ಮುಖ್ಯ ಲಕ್ಷಣಗಳಾದರೆ ಕೇಶವಮೂರ್ತಿಗಳು ಅವೆಲ್ಲವನ್ನೂ ವಾಚೋವಿಧೇಯವನ್ನಾಗಿಸಿಕೊಂಡಿರುವ ರೀತಿ ವಿಸ್ಮಯಾವಹವಾಗಿರುತ್ತದೆ. ಆದುದರಿಂದಲೇ ಅವರ ವಾಚನ ಜೀವಂತವಾಗಿ ಕಳಕಳಿಸುತ್ತಿರುತ್ತದೆ. ಕನ್ನಡದ ಪ್ರಖ್ಯಾತ ಕೃತಿಗಳೆಲ್ಲ ಅವರಿಗೆ ಕರತಲಾಮಲಕವಾಗಿವೆ.

ಶ್ರೀ ಕೇಶವಮೂರ್ತಿಗಳ ಗಮಕ ವಾಚನದ ಇನ್ನೊಂದು ದೊಡ್ಡ ಲಕ್ಷಣವೆಂದರೆ ವಸ್ತು, ಸನ್ನಿವೇಶ ಹಾಗೂ ಪಾತ್ರಗಳೊಡನೆ ತನ್ಮಯರಾಗುವ ಸಹೃದಯತೆ. ಯಾವ ಕಾವ್ಯ, ಯಾವ ಸನ್ನಿವೇಶ ಎಂಬುದನ್ನು ಸ್ಪಷ್ಟ ಮಾಡಿಕೊಂಡು ಆಯಾ ಸಂದರ್ಭಕ್ಕೆ, ರಸಕ್ಕೆ ಉಚಿತವಾದ ರಾಗ ಸಂಯೋಜನೆ, ಧ್ವನಿಗಳ ಏರಿಳಿತಗಳನ್ನು ಮೂಡಿಸುವುದು. ಜತೆಗೆ ತಮ್ಮ ಹಿರಿದಾದ ಇನಿದಾದ ಧ್ವನಿಯ ವಿನ್ಯಾಸದಿಂದಲೇ ಎಲ್ಲ ಪಾತ್ರಗಳೂ ತಾನಾಗಿ ಆಯಾ ಪಾತ್ರಗಳ ರಸಪೋಷಣೆಗೈದು ಶ್ರೋತೃಗಳ ಮನೋನೇತ್ರಗಳ ಮುಂದೆ ಬಂದು, ಕೂತು, ನಿಂತು, ಮಾತಾಡಿ, ಓಡಾಡಿ, ಕಾರ್ಯಭಾರ ವಹಿಸಿದಂತೆ ಅನುಭವವಾಗುತ್ತದೆ. ಹೀಗೆ ಶ್ರವ್ಯಕಾವ್ಯಗಳನ್ನೂ, ದೃಶ್ಯಕಾವ್ಯಗಳ ಕಾಂತಿಗೆ ಏರಿಸುವ ಗಾರುಡಿಗನ ಕಲೆ ಅವರಲ್ಲಿ ಅನ್ಯಾದೃಶವಾಗಿದೆ. ಇಂತಹ ಅವರ ಕಾವ್ಯವಾಚನದ ಸೊಬಗು ಕನ್ನಡ ನಾಡಿನಲ್ಲಿ ಈಗಾಗಲೇ ಮನೆಮಾತಾಗಿದೆ.

ಹೀಗೆ ಮಾರ್ಕಂಡೇಯಾವಧಾನಿಗಳು ಮತ್ತು ಕೇಶವಮೂರ್ತಿಗಳು ಮೂವತ್ತು-ನಲವತ್ತು ವರ್ಷಗಳಿಂದ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ನಾಡು ನುಡಿಗಳ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ನಾಡಿನ ಜನತೆಯ ರುಚಿಯನ್ನೂ, ಅಭಿರುಚಿಯನ್ನೂ ಸಂಸ್ಕರಿಸುತ್ತಾ ಸಮಾಜವನ್ನು ಸಂಪನ್ನಗೊಳಿಸುತ್ತಲಿದ್ದಾರೆ. ಸಂಭಾವಿತರೂ, ಸುಸಂಸ್ಕೃತರೂ ಅಕೃತ್ರಿಮ ಋಜುಸ್ವಭಾವದವರೂ ಆದ ಅವರಿಬ್ಬರೂ ಕನ್ನಡ ಗಮಕಕಲೆಯಲ್ಲಿ ಉನ್ನತ ಸ್ಥಾನ ಸಾಧಿಸಿದ್ದಾರೆ. ಈಗ ಇಬ್ಬರಿಗೂ ಅರುವತ್ತು ವರ್ಷ ತುಂಬಿದೆ.

ನಮ್ಮ ಸಂಪ್ರದಾಯದಲ್ಲಿ ಅರುವತ್ತಕ್ಕೆ ಒಂದು ಮಹತ್ತ್ವವಿದೆ. ಹಿಂದೂ ಸಂವತ್ಸರಗಳ ಸಂಖ್ಯೆ ಅರುವತ್ತು. ಈ ಸಂವತ್ಸರಗಳ ಚಕ್ರ ಒಂದು ಸಲ ಸುತ್ತಿರುವುದೇ ಇದರ ಮಹತ್ತ್ವ. ಸಾಧಾರಣವಾಗಿ ಅರುವತ್ತರ ಅನಂತರದ ಜೀವನ ಹೊಸದೇನನ್ನೂ ಸಾಧಿಸಲಾಗದ, ಕೇವಲ ಹಿಂದಿನ ವರ್ಷಗಳ ನಿಲುವು-ಸಾಧನೆಗಳ ಸ್ಮರಣೆಯ ಮೆಲುಕು ಹಾಕುವ ಕಾಲವೆಂಬ ಭಾವನೆಯಿದೆ. ಆದರೆ ಈ ಮಹನೀಯರ ಭಾವನೆ ಹಾಗಿರದು. ಅರುವತ್ತರ ಅನಂತರದ ಈ ಕಾಲ ಹೊಸ ಆಯಾಮವನ್ನು ಸಾಧಿಸುವ ಕಾಲವೆಂಬ ಭಾವನೆ ಅವರದಾಗಿರಬೇಕು. ನಾಡು-ನುಡಿಗಳ ಸೇವೆ ಹೆಚ್ಚಾಗಿ ಮಾಡಬೇಕೆಂಬ ಅಭೀಪ್ಸೆ ಅವರಲ್ಲಿ ಮೂಡಿರಬೇಕು.

ಈ ಶುಭ ಸಂದರ್ಭದಲ್ಲಿ ಅವರೀರ್ವರಿಗೂ ಸನ್ಮಾನ ಮಾಡಿ ಈ ಸಂಭಾವನಾ ಗ್ರಂಥವನ್ನು ಅರ್ಪಿಸುವ ಉದ್ಯಮದಲ್ಲಿ ತೊಡಗಿರುವ ಮತ್ತೂರು ಹೊಸಹಳ್ಳಿ ಗ್ರಾಮಗಳ ತರುಣ ವೃಂದದವರ ಯೋಜನೆ ಪ್ರಶಂಸಾರ್ಹ. ಪೂಜ್ಯರಾದ ಮತ್ತೂರು ಮಾರ್ಕಂಡೇಯಾವ-ಧಾನಿಗಳಿಗೂ, ಪೂಜ್ಯರಾದ ಎಚ್.ಆರ್. ಕೇಶವ ಮೂರ್ತಿಗಳಿಗೂ ಭಗವಂತನು ಆರೋಗ್ಯವನ್ನೂ ಪೂರ್ಣಾಯುಸ್ಸನ್ನೂ ಕರುಣಿಸಿ, ಅವರೀರ್ವರ ಗಮಕ-ವ್ಯಾಖ್ಯಾನ ಕಲೆಯ ಸವಿಯು ಕನ್ನಡ ಜನತೆಗೆ ಇನ್ನೂ ಹೆಚ್ಚು ಹೆಚ್ಚಾಗಿ ದೊರೆಯುವಂತೆ ಮಾಡಲಿ. ಶ್ರೀ ಮತ್ತು ಸರಸ್ವತಿಯರು ಈ ಸಮಾರಂಭಕ್ಕೆ ಶುಭವನ್ನು ಅನುಗ್ರಹಿಸಲಿ . . . **ಶತಂ ಜೀವ ಶರದೋ ವರ್ಧಮಾನಃ|** ಅವರ ಶತಮಾನೋತ್ಸವವನ್ನು ಆಚರಿಸುವ ಅವಕಾಶ ನಾಡಿಗೆ ದೊರೆಯಲಿ ಎಂದು ಪ್ರಾರ್ಥಿಸುತ್ತೇನೆ.




***172. 'ಅಪೂರ್ವ ಜೋಡಿ' ಶ್ರೀ ಎಚ್.ಆರ್. ಕೇಶವಮೂರ್ತಿ ಮತ್ತು ಶ್ರೀ ಮಾರ್ಕಂಡೇಯ ಅವಧಾನಿಗಳು***

## ೨. ಶುಭಾಶಯ

***ಮತ್ತೂರು ಕೃಷ್ಣಮೂರ್ತಿ***

ಗೆಳೆಯರಾದ ಕೇಶವಮೂರ್ತಿ - ಮಾರ್ಕಂಡೇಯ ಅವಧಾನಿಗಳಿಗೆ ಅರುವತ್ತು ತುಂಬುತ್ತದೆ ಎಂಬುದನ್ನು ನಂಬುವುದು ಸುಲಭಸಾಧ್ಯವಲ್ಲ. ನಮ್ಮ ದೇಶದಲ್ಲಿ ಅರುವತ್ತು ಎಂದರೆ ಇಳಿವಯಸ್ಸು ಎನ್ನುತ್ತಾರೆ. ವೃದ್ಧಾಪ್ಯ ಅಡರಿತು ಎನ್ನುತ್ತಾರೆ. ಆದರೆ ಅವರಿಬ್ಬರನ್ನು ನೋಡಿದಾಗ, ಹಾಗೆ ಅನಿಸುವುದಿಲ್ಲ. ಅವರಲ್ಲಿರುವ ಉತ್ಸಾಹ ಲವಲವಿಕೆ ಎಳೆಯರನ್ನೂ, ಯುವಕರನ್ನೂ ನಾಚಿಸುತ್ತದೆ ಎಂದು ಅರುವತ್ತು ವರ್ಷಗಳಿಂದ ಬಲ್ಲ ಅವರ ಬಗೆಗೆ ಧೈರ್ಯದಿಂದ ಹೇಳಬಲ್ಲೆ!




***173. ಹೊಸಹಳ್ಳಿಯಲ್ಲಿ ನಡೆದ ಗಮಕಕಲಾ ಪರಿಷತ್ತಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಮಾರ್ಕಂಡೇಯ ಅವಧಾನಿಗಳು, ಖ್ಯಾತ ಚಲನಚಿತ್ರ ನಟ ಶ್ರೀ ಶ್ರೀನಾಥ್, ಶ್ರೀ ಮತ್ತೂರು ಕೃಷ್ಣಮೂರ್ತಿಗಳು, ಶ್ರೀ ಕೇಶವಮೂರ್ತಿಗಳು.***

ಮಾರ್ಕಂಡೇಯ ಅವಧಾನಿಗಳು, ಕೇಶವಮೂರ್ತಿಗಳು ಮತ್ತೂರು-ಹೊಸಹಳ್ಳಿಯವರು. ಅನತಿ ದೂರದ ಬಂಧುಗಳು; ಇಬ್ಬರೂ ನಿತುಂದಿಲ ಗೋತ್ರದವರು. ವೇದಾಧ್ಯಯನ ಮಾಡುತ್ತಿದ್ದವರ, ಅಗ್ನಿಹೋತ್ರ ವೈಶ್ವದೇವಾದಿ ನಿತ್ಯಕರ್ಮ ನಿರತರ ಕುಟುಂಬದಲ್ಲಿ ಹುಟ್ಟಿರುವವರು. ನಿತ್ಯಕರ್ಮಗಳನ್ನು ತಪ್ಪದೇ ನಡೆಸುತ್ತಿರುವವರು. ಸುಸಂಸ್ಕಾರ ಸಂಪನ್ನರು. ವೇದಾಭ್ಯಾಸ ಮಾಡಿದ್ದಾರೆ, ಸಂಸ್ಕೃತ ಕಲಿತಿದ್ದಾರೆ. ಕನ್ನಡ ಸಾಹಿತ್ಯ, ಕಾವ್ಯ ಅಧ್ಯಯನ ಮಾಡಿದ್ದಾರೆ; ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ಹರಿಶ್ಚಂದ್ರ ಕಾವ್ಯ, ವಾಲ್ಮೀಕಿ ರಾಮಾಯಣ, ಮೂಲಭಾರತ ಮೊದಲಾದ ನಮ್ಮ ಸಾಹಿತ್ಯದ ನಿಷ್ಕೃಷ್ಟವಾದ ತಿಳಿವಳಿಕೆ ಇದೆ. ಅವರಿಬ್ಬರೂ ಒಂದೆರಡು ವರ್ಷಗಳ ಅಂತರದಲ್ಲಿ ಗಮಕ ಕ್ಷೇತ್ರಕ್ಕೆ ಕಾಲಿರಿಸಿ 'ಏಕದೇಹನ್ಯಾಯಿಗಳು, ಅಪೂರ್ವ ಜೋಡಿ' ಎನಿಸಿಕೊಂಡಿದ್ದಾರೆ.

ಅವರಿಬ್ಬರೂ ವಾಚನ-ವ್ಯಾಖ್ಯಾನ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ ಎಂದರೆ ಅತ್ಯುಕ್ತಿಯಾಗದು. ಮೂರ್ತಿಗಳು ಕಾವ್ಯವಾಚನ ಮಾಡುವುದನ್ನು ಕೇಳುವಾಗ ಶ್ರೋತೃಗಳು ತನ್ಮಯರಾಗಿರುತ್ತಾರೆ; ಅವಧಾನಿಗಳು ಅರ್ಥ ಹೇಳುವಾಗ ಕೇಳುಗರು ಭಾವಾವೇಶ ತಳೆಯುತ್ತಾರೆ.

ಗದುಗಿನ ಭಾರತಕ್ಕೆ, ತೊರವೆಯ ರಾಮಾಯಣಕ್ಕೆ, ಹರಿಶ್ಚಂದ್ರ ಕಾವ್ಯಕ್ಕೆ ಹಿಂದೆ- ಐವತ್ತು ವರ್ಷಗಳ ಹಿಂದೆ- ವ್ಯಾಖ್ಯಾನ, ಅರ್ಥ, ಅರ್ಥವಿವರಣೆ ಎಂಬುದು ರೂಢಿಯಲ್ಲಿರಲಿಲ್ಲ. ಬಿಂದೂರಾಯರು, ಮೈಸೂರು ಸಂಪತ್ಕುಮಾರಾಚಾರ್ಯರು ಮೊದಲಾದ ಕೆಲವರು ಚೆನ್ನಾಗಿ ಓದುತ್ತಿದ್ದರು ಎಂದು ಹಿರಿಯರಿಂದ ಕೇಳಿ ತಿಳಿದಿದ್ದೇನೆ. ಇಂದಿಗೂ ಸಹ ಕೆಲವರು ವಿದ್ವಾಂಸರು, ಸಂಗೀತಜ್ಞರು ಬರಿಯ ವಾಚನವನ್ನು ಕೇಳುತ್ತಾರೆ. ಅವರುಗಳು ಅನುಭವಿಸುವುದು ವಾಚನ ಮಾಡುವವರಲ್ಲಿರುವ ಸಂಗೀತ ಜ್ಞಾನವನ್ನೇ. ಬಹುಮಟ್ಟಿಗೆ ಇಷ್ಟಪಡುವವರು, ಕಥೆಯ ಭಾಗ ತಿಳಿದವರು ಮತ್ತು ಸಾಹಿತ್ಯಜ್ಞಾನ ಇದ್ದವರು.

ಆದರೆ ಕಾವ್ಯಕ್ಕೆ ವಿಶೇಷಾರ್ಥ ಕೊಟ್ಟು ಜನಸಾಮಾನ್ಯಕ್ಕೂ ತಿಳಿಯುವ



**174. ಶಿಷ್ಯೆಯರ ಸಾಧನೆಯೊಂದಿಗೆ ಹೆಮ್ಮೆಯಿಂದ ಶ್ರೀ ಕೇಶವಮೂರ್ತಿಗಳು**


ರೀತಿಯಲ್ಲಿ ಹೇಳುವುದು ಪರಿಣಾಮಕಾರಿಯಾಗಿರುತ್ತದೆ. *ಈ* ಅಗತ್ಯವನ್ನು ಮನಗಂಡು ಅರುವತ್ತು-ಎಪ್ಪತ್ತು ವರ್ಷಗಳ ಹಿಂದೆಯೇ ಮತ್ತೂರಿನ ಲಕ್ಷ್ಮೀಕೇಶವಶಾಸ್ತ್ರಿಗಳು, ಅದೇ ಊರಿನ ರಾಮಶಾಸ್ತ್ರಿಗಳನ್ನು ವಾಚನ ಮಾಡಲು ಜತೆ ಮಾಡಿಕೊಂಡು 'ವಾಚನ-ವ್ಯಾಖ್ಯಾನ' ಪದ್ಧತಿಗೆ ಅಡಿಪಾಯ ಹಾಕಿದರು ಎಂದರೆ ತಪ್ಪಾಗಲಿಕ್ಕಿಲ್ಲ.

ಇಂದು ರಾಜ್ಯದ ಹಲವೆಡೆ *ಈ* ಪದ್ಧತಿ ರೂಢಿಗೆ ಬಂದಿದೆ. ಮತ್ತೂರು-ಹೊಸಹಳ್ಳಿ ಗ್ರಾಮಗಳಲ್ಲಿಯೇ ಹಲವರು ಯುವಕ-ಯುವತಿಯರು ಅಭ್ಯಾಸ ಮಾಡಿಕೊಂಡಿದ್ದಾರೆ.

ವ್ಯಾಖ್ಯಾನ ಕಲೆಯಲ್ಲಿ ಶ್ರೀ ಮಾರ್ಕಂಡೇಯ ಅವಧಾನಿಗಳು ಹೆಸರು ಗಳಿಸಿದ್ದಾರೆ. ವೇದಾಧ್ಯಯನ, ಸಂಸ್ಕೃತ ವ್ಯಾಸಂಗ ಮಾಡಿರುವುದರ ಜತೆಗೆ ಅವರು ಮತ್ತೂರು-ಹೊಸಹಳ್ಳಿ ಗ್ರಾಮಗಳ ಪುರೋಹಿತರೂ, ಆಚಾರ್ಯರೂ ಆಗಿರುವುದರಿಂದ ಲೋಕಜೀವನವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಅಸಾಧಾರಣ ನೆನಪಿನಶಕ್ತಿ ಅವರಿಗೆ. ಎಲ್ಲಕ್ಕಿಂತ ಮಿಗಿಲಾಗಿ ನಾಲ್ಕು ಜನಕ್ಕೆ ನಮ್ಮ ಸಾಹಿತ್ಯ ವಾಙ್ಮಯವನ್ನು ತಿಳಿಯಹೇಳಬೇಕೆಂಬ ಕಳಕಳಿ.

ಕೇಶವಮೂರ್ತಿಗಳ ತಂದೆ ಶ್ರೀ ರಾಮಸ್ವಾಮಿಶಾಸ್ತ್ರಿಗಳೂ ಗಮಕಿಗಳೇ. ಅವರು ಓದಿ, ಲಕ್ಷ್ಮೀಕೇಶವಶಾಸ್ತ್ರಿಗಳು ವ್ಯಾಖ್ಯಾನ ಮಾಡುತ್ತಿದ್ದರೆಂಬ ನೆನಪು. ಅವರ ಮನೆಯಲ್ಲಿ ಎಲ್ಲರಿಗೂ ಸಂಗೀತ ಜ್ಞಾನವಿರುವುದು ಗಮನಾರ್ಹ ಸಂಗತಿ. ಆದರೆ ಕೇಶವಮೂರ್ತಿಗಳ ಗಮಕ ವಾಚನ ಮಾತ್ರ ಅನನುಕರಣೀಯ. ಅವರು ವಾಚನ ಮಾಡಿ, ಇವರ ಜತೆ ಕುಳಿತು ವ್ಯಾಖ್ಯಾನ ಮಾಡುವವರಿಗೆ ಎಂಟೆರ್ದೆ ಬೇಕು ಎಂದರೆ ಅತ್ಯುಕ್ತಿ ಆಗದು.

ಕವಿ ಕುಮಾರವ್ಯಾಸ ಹಾಗೂ ವಾಗ್ದೇವಿ ಇಬ್ಬರೂ ಅವರಲ್ಲಿ ಆವಿರ್ಭವಿಸಿ, ಅವರ ಕಂಠಶ್ರೀಯಿಂದ ಗಮಕವು ಹೊರಹೊಮ್ಮುವುದು. ಸಂಗೀತಶಿಕ್ಷಣವನ್ನು ಶಾಸ್ತ್ರೀಯವಾಗಿ ಕಲಿಯದ ಅವರು ಹಾಡುವುದನ್ನು ಕೇಳಿ, ಬಹುಮಂದಿ ಸಂಗೀತ ವಿದ್ವಾಂಸರೇ ತಲೆದೂಗಿ ಮೂಗಿನ ಮೇಲೆ ಬೆರಳಿಟ್ಟಿದ್ದಾರೆ. ಗಮಕಕಲೆ ಅವರಿಗೆ ಸಿದ್ಧಿಸಿದೆ. ಮುಖಭಾವದಲ್ಲಿ ರವಷ್ಟೂ ಭಾವನೆಗಳನ್ನು ವ್ಯಕ್ತಪಡಿಸದೆ, ನವರಸಗಳನ್ನು ಭಾವಪೂರ್ಣವಾಗಿ ವಾಚನ ಮಾಡುವ ಆ ಮಹಾನುಭಾವನಿಗೆ ಎಣೆಯಾದವರು ಬೇರೊಬ್ಬರು ಇರುವರೋ ಎಂಬುದು ಸಂದೇಹವೇ . . . ಸಕ್ಕರೆಯನ್ನು ಸವಿದವರು ಮಾತ್ರ ಸವಿಯನ್ನು ಬಲ್ಲರು ಎಂಬಂತೆ ಅವರ ವಾಚನವನ್ನು ಕೇಳಿಯೇ ಅನುಭವಿಸಬೇಕು.



**175. ನಡುವಯಸ್ಸಿನ ಶ್ರೀ ಮಾರ್ಕಂಡೇಯ ಅವಧಾನಿಗಳು, ಮತ್ತೂರು**

ವೇದಮೂರ್ತಿ ಬ್ರಹ್ಮಶ್ರೀ ಮಾರ್ಕಂಡೇಯ ಅವಧಾನಿಗಳೂ ಸಂಸ್ಕೃತ-ಸಾಹಿತ್ಯ ವಿದ್ವಾನ್ ಕೇಶವಮೂರ್ತಿಗಳೂ ಕರ್ನಾಟಕದ ಅನರ್ಘ್ಯರತ್ನಗಳ ಶ್ರೇಣಿಗೆ ಸೇರಿದ್ದಾರೆ. ನಾಡು-ನುಡಿ ಅವರಿಗೆ ಆಭಾರಿ; ಅಸಂಖ್ಯ ಶ್ರೋತೃಗಳಿಗೆ ಆನಂದ ನೀಡಿದ್ದಾರೆ. ಅವರನ್ನು ಬಲ್ಲ ಎಲ್ಲರೂ ಅವರಿಗೆ *ಈ* ಅರುವತ್ತನೆಯ ಜನ್ಮದಿನದ ಸಂದರ್ಭದಲ್ಲಿ ಶುಭಾಶಯ ಕೋರುತ್ತಾರೆ. ಅವರಿಬ್ಬರೂ ನೂರ್ಕಾಲ ಬಾಳಿ, ಬೆಳಗಿ, ತಮ್ಮ ವಾಚನ-ವ್ಯಾಖ್ಯಾನ ಕಲೆಯ ಮೂಲಕ ಜನಕೋಟಿಗೆ ನಮ್ಮ ವಿಶಿಷ್ಟ ಸಾಹಿತ್ಯ, ಕಾವ್ಯ, ಸಂಸ್ಕೃತಿ, ಪರಂಪರೆಯ ಪರಿಚಯ ಮಾಡಿಕೊಡಲಿ; ಭಗವಂತನು ಅವರಿಗೆ ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

## ೩. ವಸಿಷ್ಠಸ್ಸಮಾನಾನಾಂ ಭವತಿ

*ಬಸವಾನಿ ರಾಮಶರ್ಮಾ*

**ವಸಿಷ್ಠಸ್ಸಮಾನಾನಾಂ ಭವತಿ** ಎಂಬುದು ವೇದಗಳಲ್ಲಿ ಬಹು ಹೆಚ್ಚಿನ ಆಶೀರ್ವಾದ ಮಂತ್ರ. ಪ್ರತಿಷ್ಠಿತರಾದ ಸಮಾನರ ಮೇಲೆ ಪರಿಣಾಮ ಬೀರುವ ಪ್ರಭಾವೀ ಶಕ್ತಿಯೇ ವಸಿಷ್ಠತನ. *ಈ* ಮಂತ್ರದ **ಸಮಾನಾನಾಂ** ಎಂಬ ಪದವು ಮಹತ್ತ್ವಪೂರ್ಣವಾದುದು. ತಾನು ಪರಿಣಾಮ ಬೀರುವುದು ಸಾಮಾನ್ಯರ ಮೇಲಲ್ಲ. ವಿದ್ಯೆ, ವಯಸ್ಸು, ಗುಣಸಂಪತ್ತು, ಸ್ಥಾನಮಾನ, ಪದವಿ-ಪ್ರತಿಷ್ಠೆಗಳಲ್ಲಿ ತನಗೆ ಸಮಾನರಾದ ಪ್ರತಿಷ್ಠಿತ ಗೋಷ್ಠಿಯ ಮೇಲೆ. ಇಂತಹ ಪ್ರತಿಷ್ಠಿತ ಗೋಷ್ಠಿಯಲ್ಲಿ ಚರ್ಚಿಸುವ ಮಹತ್ತ್ವದ ವಿಷಯಗಳಲ್ಲಿ ಸಭಿಕರಿಗೆ ಹಲವು ಬಗೆಯ ಅಭಿಪ್ರಾಯಭೇದಗಳಿದ್ದರೂ ತನ್ನ ವಿವೇಚನಾ ಪೂರ್ಣವಾದ ಪರಿಣಾಮಕಾರೀ ವಾಣಿಯಿಂದ ಎಲ್ಲರ ಮನಸ್ಸನ್ನೂ ಗೆಲ್ಲುವ ಪ್ರಭಾವಶಾಲೀ ಶಕ್ತಿಯನ್ನೇ ವಸಿಷ್ಠತನವೆನ್ನುತ್ತಾರೆ. ಇಂತಹ ಪ್ರಭಾವಶಾಲೀ ಶಕ್ತಿಯುಳ್ಳವರನ್ನೇ ಪ್ರತಿಷ್ಠಿತ ಸಮಾನರು ಶ್ರೇಷ್ಠ ವ್ಯಕ್ತಿ ಎಂದು ಪರಿಗಣಿಸುತ್ತಾರೆ.

ಯಾವ ವಿಷಯದಲ್ಲೇ ಆಗಲಿ ಇಂತಹ ಪ್ರಭಾವಶಾಲಿಯಾದ ವಾಕ್ಕು ಆ ಗೋಷ್ಠಿಯಲ್ಲಿರುವವರೆಲ್ಲರಿಗೂ ತೃಪ್ತಿ - ಸಮಾಧಾನವನ್ನುಂಟುಮಾಡುತ್ತದೆ. ಆತನ ಪ್ರಭಾವೀ ವಾಣಿಯು ಎಲ್ಲರಿಗೂ ಹರ್ಷದಾಯಕವಾಗಿ, ಆತನ ವಾಣಿಯೇ ಗೋಷ್ಠಿಯ ಅಂತಿಮ ನಿರ್ಣಯವಾಗುತ್ತದೆ. *ಈ* ಪ್ರಭಾವಶಾಲೀ ಶಕ್ತಿಯ ಮಹಿಮೆಯನ್ನು ಕುರಿತೇ 'ವಸಿಷ್ಠಸ್ಸಮಾನಾನಾಂ ಭವತಿ' ಎಂದು ಶ್ರುತಿಗಳಲ್ಲಿ ವಿಶೇಷವಾಗಿ ವರ್ಣಿಸಲಾಗಿದೆ. *ಈ* ಪ್ರಭಾವೀ ಶಕ್ತಿಯು ಎಲ್ಲರಿಗೂ ದೊರಕದು. ತುಂಬ ವಿರಳವಾಗಿ, ದೈವಕೃಪೆಯಿಂದ ಲಭಿಸುವ ಶಕ್ತಿವಿಶೇಷವಿದು. *ಈ* ಪ್ರಭಾವೀ ಶಕ್ತಿಯು ದೈವದತ್ತವಾದುದಾದರೂ ಕೇವಲ ಪ್ರಭಾವೀ ಶಕ್ತಿಯು ಸರ್ವತ್ರ ಪ್ರಕಾಶಿಸದು. ಅರೆವಾಸಿ ಭಾಗ ಪ್ರಭಾವೀ ಶಕ್ತಿಯಿದ್ದರೆ, ಇನ್ನರ್ಧ ಭಾಗ ಸದ್ಗುಣಸಂಪತ್ತು ಜತೆಗೂಡಬೇಕು. ತೀಕ್ಷ್ಣ ಬುದ್ಧಿಶಾಲಿಯಾಗಿದ್ದವನೊಬ್ಬನು ಅವಿದ್ಯಾವಂತನಾಗಿದ್ದರೆ ಅವನ ಬುದ್ಧಿಬಲವು ಎಲ್ಲೆಡೆ ಬೆಳಗದು. ಬುದ್ಧಿಬಲದೊಂದಿಗೆ, ವಿದ್ಯಾಬಲವೂ ಸಮ್ಮಿಳಿತವಾಗಿದ್ದರೆ ಮಾತ್ರ ಆತನು ಜನರ ಗಮನ ಸೆಳೆಯಬಲ್ಲವನಾಗುತ್ತಾನೆ. ಅಂತೆಯೇ ದೈವದತ್ತ ಪ್ರಭಾವೀ ಶಕ್ತಿಯೊಂದಿಗೆ ವಿದ್ಯೆ, ಗುಣಸಂಪತ್ತು ಮತ್ತು ಸಂಸ್ಕೃತಿ ಸಂಪತ್ತೂ



***176. ಅವಧಾನಿಗಳೇ ! ದೇವತಾಪ್ರತಿಷ್ಠೆಯ ಆಚಾರ್ಯತ್ವ ತಮ್ಮದು***

ಪೂರ್ಣವಾಗಿ ಮಿಳಿತವಾಗಿದ್ದರೆ ಮಾತ್ರ ಆತನು ಜನತೆಯ ಮೇಲೆ ಪರಿಣಾಮ ಬೀರಲು ಶಕ್ತನಾಗುತ್ತಾನೆ. ಕೇವಲ ವಿದ್ಯೆ ಮತ್ತು ಗುಣಸಂಪತ್ತಿ ಇದ್ದೂ, ದೈವದತ್ತ ಪ್ರಭಾವೀ ಶಕ್ತಿ ಇಲ್ಲದವನು ಸಮಾನರ ಮೇಲೆ ಪರಿಣಾಮ ಬೀರಲು ಸಮರ್ಥನಾಗಲಾರ. ಗುಣಾತಿಶಯ ಪ್ರವೃದ್ಧನಾಗಿ ದೈವದತ್ತ ಪ್ರಭಾವೀ ಶಕ್ತಿಯುಳ್ಳಾತನನ್ನು ಕುರಿತೇ 'ವಸಿಷ್ಠಸ್ಸಮಾನಾನಾಂ ಭವತಿ' ಎಂದು ವರ್ಣಿಸಿರುವುದನ್ನು ನಾವು ಗಮನಿಸಬೇಕು.

ಈ ದೃಷ್ಟಿಯಿಂದ ನೋಡಿದರೆ ನಮ್ಮ ಮಿತ್ರರಾದ ಮತ್ತೂರಿನ ಮಾರ್ಕಂಡೇಯ ಅವಧಾನಿಗಳ ವಿಷಯದಲ್ಲಿ ಮೇಲಿನ ವೇದೋಕ್ತ ಆಶೀರ್ವಾದವು ಪೂರ್ಣವಾಗಿ ಫಲಿಸಿರುವುದನ್ನು ಸಹೃದಯರು ಕಾಣಬಹುದು.

**ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ** ಎಂಬಂತೆ ಶ್ರೀಮಾರ್ಕಂಡೇಯ ಅವಧಾನಿಗಳು ಅತ್ಯಂತ ಶುಚಿವಂತ ಕುಲೀನ ವಂಶದಲ್ಲಿ ಜನ್ಮತಾಳಿದರು. ಸುಸಂಸ್ಕೃತರಲ್ಲಿ ಗಣ್ಯರಾದ ವೇ. ಬ್ರ. ಶ್ರೀ ಕಡೇಮನೆ ನಾರಾಯಣ ಉಪಾಧ್ಯಾಯರು ಮತ್ತು ಶ್ರೀಮತಿ ಲಕ್ಷ್ಮೀದೇವಮ್ಮನವರ ಜ್ಯೇಷ್ಠಪುತ್ರರಾಗಿ ಜನಿಸಿದರು. ಸುಸಂಸ್ಕೃತರಾದ ಮಾತಾಪಿತೃಗಳ ಮಾರ್ಗದರ್ಶನದಲ್ಲಿ ಸಕಾಲಿಕ ಬಾಲ್ಯಶಿಕ್ಷಣದಿಂದ ಸಂಸ್ಕೃತಿಯ ಮುಖ್ಯಲಕ್ಷಣಗಳನ್ನು ಮೈಗೂಡಿಸಿಕೊಂಡೇ ಬೆಳೆದರು. ಮಕ್ಕಳು ಸುಸಂಸ್ಕೃತ ಮಾತಾಪಿತೃಗಳನ್ನು ಪಡೆದಿರುವುದೂ, ಬಾಲ್ಯದಲ್ಲಿಯೇ ಸಕಾಲದಲ್ಲಿ ಸಂಸ್ಕೃತಿಯ ಶಿಕ್ಷಣ ಪಡೆಯುವ ಅವಕಾಶ ಒದಗುವುದೂ ಅವರ ಅದೃಷ್ಟವೆನ್ನಬೇಕು. ಈ ದೃಷ್ಟಿಯಿಂದ ಅವಧಾನಿಗಳು ತುಂಬ ಭಾಗ್ಯಶಾಲಿಗಳು. ಬಾಲ್ಯದಲ್ಲಿಯೇ ಲೌಕಿಕ ವಿದ್ಯಾಭ್ಯಾಸದೊಂದಿಗೆ ಮನೆಯಲ್ಲಿ ಪಿತೃವರ್ಯರಿಂದ ವೈದಿಕವಿದ್ಯೆಯ ಪ್ರಾಥಮಿಕ ಪಾಠಗಳೂ ನಡೆದವು. ಮುಂದೆ ಶ್ರೀಯುತರು ನಂಜನಗೂಡಿನಲ್ಲಿ ವೇದ ಮತ್ತು ಸಂಸ್ಕೃತ ವಿದ್ಯಾಭ್ಯಾಸವನ್ನು ಪೂರೈಸಿ ಬಂದರು. ಅವರು ಪುರೋಹಿತರ ಮನೆಯವರಾದುದರಿಂದ ಹಾಗೂ ಅವರ ತಂದೆಯವರು ಸಮರ್ಥ ಪುರೋಹಿತರಾಗಿದ್ದುದರಿಂದ ಅವರು ತಂದೆಯವರಿಂದಲೇ ಕ್ರಮವಾಗಿ ಯಾಜುಷ ಪೂರ್ವಾಪರ ಪ್ರಯೋಗವನ್ನು ಕಲಿತು ವೃತ್ತಿಯಲ್ಲಿ ನಿಪುಣರೆನಿಸಿದ್ದಾರೆ. ಸ್ವತಃ ಕರ್ಮಶ್ರದ್ಧೆ, ಶಾಸ್ತ್ರನಿಷ್ಠೆ ಮತ್ತು ಮಂತ್ರಾರ್ಥ ಪರಿಜ್ಞಾನ ಉಳ್ಳ ಅವರು ಲೌಕಿಕ ಗೃಹಸ್ಥರ ಮೇಲೂ ವಿಶೇಷ ಪ್ರಭಾವ ಬೀರಬಲ್ಲವರಾಗಿದ್ದಾರೆ.




***177.** ಋಷಿಪಂಚಮೀ ಸಂದರ್ಭದಲ್ಲಿ ತುಂಗೆಯಲ್ಲಿ - ಮಹಾಮೃತ್ತಿಕಾ ಸ್ನಾನ*
*ಶ್ರೀ ಮಾರ್ಕಂಡೇಯ ದಂಪತಿಗಳು, ಶ್ರೀ ಸೀತಾರಾಮ ದಂಪತಿಗಳು, ಶ್ರೀ ಮತ್ತೂರು ಕೃಷ್ಣಮೂರ್ತಿ ದಂಪತಿಗಳು, ಶ್ರೀ ಕೃಷ್ಣಸ್ವಾಮಿ ದಂಪತಿಗಳು, ಶ್ರೀ ಗೋಪಾಲ ದಂಪತಿಗಳು*

ಶ್ರದ್ಧಾರಹಿತರಾದ ಗೃಹಸ್ಥರೊಡನೆ ಮೃದು ಮಾತಿನಿಂದಲೇ ಸಂದರ್ಭೋಚಿತ ಕರ್ಮದ ಮಹತ್ತ್ವ ಹಾಗೂ ಮಂತ್ರಾರ್ಥವನ್ನು ಸೂಕ್ಷ್ಮವಾಗಿ ಹೇಳಿ ಆ ಗೃಹಸ್ಥರು ಶ್ರದ್ಧಾವಂತರಾಗುವಂತೆ ಮಾಡಲು ಅವರು ಯತ್ನಿಸುತ್ತಾರೆ. 'ಅಸಂತುಷ್ಟೋ ದ್ವಿಜೋ ನಷ್ಟಃ' ಎಂಬ ಮುಖ್ಯ ವಾಕ್ಯವು ಸದಾ ಅವರ ಸ್ಮರಣೆಯಲ್ಲಿರುತ್ತದೆ. ಗೃಹಸ್ಥರು ಕೊಡುವ ಸಂಭಾವನೆಯಲ್ಲಿ ಅವರಿಗೆ ಎಂದೂ ಅಸಂತುಷ್ಟಿಯು ಸಂಭವಿಸದು. **'ಯಲ್ಲಭಸೇ ನಿಜಕರ್ಮೋಪಾತ್ತಂ; ವಿತ್ತಂ ತೇನ ವಿನೋದಯ ಚಿತ್ತಮ್'** ಎಂಬುದಾಗಿ ಶ್ರೀ ಶಂಕರಾಚಾರ್ಯರು ಹೇಳಿರುವಂತೆ ಗೃಹಸ್ಥರು ಕೊಟ್ಟದ್ದನ್ನೇ ಸಂತೋಷದಿಂದ ಸ್ವೀಕರಿಸಿ, ಹರ್ಷಭರಿತರಾಗಿ "ಓಹೋ, ನೀವು ಕೊಟ್ಟದ್ದು ಅಪಾರವಾಗಿದೆ" ಎಂದು ಹೇಳಿ ಗೃಹಸ್ಥರನ್ನು ಹರ್ಷಗೊಳಿಸುತ್ತಾರೆ. ವರಮಾನದ ನಿರೀಕ್ಷೆಯಿಲ್ಲದೇ ಕರ್ಮಶ್ರದ್ಧೆಯಿಂದ ಪೌರೋಹಿತ್ಯವನ್ನು ನಡೆಸುವ ವಿರಳ ಸಂಖ್ಯೆಯ ಪುರೋಹಿತರಲ್ಲಿ ಅವರು ಅತಿವಿರಳ ಗಣ್ಯರಾಗಿ ಇತ್ತೀಚೆಗೆ

ರಾಜ್ಯಾದ್ಯಂತ ಬೃಹತ್ ವೈದಿಕ ಕಾರ್ಯಕಲಾಪಗಳಲ್ಲಿಯೂ ಭಾಗವಹಿಸುತ್ತಿದ್ದಾರೆ.

ಅವರಿಗೆ ಧನದಾಹ, ಪ್ರತಿಷ್ಠಾದಾಹವಿಲ್ಲದಿದ್ದರೂ, ವಿದ್ಯಾದಾಹ ಮಾತ್ರ ಚೆನ್ನಾಗಿಯೇ ಇದೆ. ಆದ್ದರಿಂದಲೇ ಅವರು ಸದಾ ಅನೇಕ ಕಾವ್ಯ ನಾಟಕಗಳನ್ನೂ ಇತರ ಗ್ರಂಥಗಳನ್ನೂ ಓದಿ ತಮ್ಮ ಜ್ಞಾನ ಭಂಡಾರವನ್ನು ನಿರಂತರ ಬೆಳೆಸಿಕೊಳ್ಳುತ್ತಲೇ ಇದ್ದಾರೆ. ತಮ್ಮ ಗುಣಸಂಪತ್ತನ್ನು ದಿನೇ ದಿನೇ ವೃದ್ಧಿಪಡಿಸಿಕೊಳ್ಳುತ್ತಿದ್ದಾರೆ. ವಿದ್ಯೆ, ವಿನಯ, ಗುರುಹಿರಿಯರಲ್ಲಿ ಗೌರವ, ದೈವಭಕ್ತಿ, ಜನರಲ್ಲಿ ಸ್ನೇಹ ವಿಶ್ವಾಸದ ವರ್ತನೆ, ಯಾವ ಭೇದವೂ ಇಲ್ಲದೆ ಎಲ್ಲರೊಡನೆಯೂ ಒಂದಾಗಿ ಬೆರೆಯುವ ಗುಣ, ಸರಳ ಸಜ್ಜನಿಕೆಗಳಿಂದ ಜನಪ್ರಿಯರೆನಿಸಿದ್ದಾರೆ. ಕಪಟ ಕೃತ್ರಿಮಗಳು ಅವರ ಬಳಿ ಸುಳಿಯವು. ನಿಷ್ಕಪಟವಾದ ಅವರ ಸ್ನೇಹ-ವಿಶ್ವಾಸಕ್ಕೆ ಮಾರು ಹೋಗದವರಿಲ್ಲ. ಅತಿಥಿ ಸತ್ಕಾರವೆಂದರೆ ಅವರಿಗೆ ಅತಿ ಪ್ರಿಯವಾದ ಕಾರ್ಯ. ಹೃತ್ಪೂರ್ವಕ ಆದರದಿಂದ ಅವರು ನೀಡುವ ಸತ್ಕಾರವನ್ನು ಅತಿಥಿಗಳು ಎಂದೂ ಮರೆಯಲಾರರು. ಅವರ ಮನೆ ನಿತ್ಯಕಲ್ಯಾಣೋತ್ಸವದ ಮನೆ. ಅವರ ಮನೆಯಲ್ಲಿ ಅತಿಥಿ-ಅಭ್ಯಾಗತರ ಸಂದಣಿಯನ್ನು ನೋಡಿದರೆ ಅವರ ಮನೆ ನಿತ್ಯವೂ ಚಿಕ್ಕ ಮದುವೆಮನೆಯಂತೆ ಶೋಭಿಸುತ್ತಿರುವುದನ್ನು ಕಾಣಬಹುದು.

'ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್' ಎಂಬಂತೆ ಎಲ್ಲರನ್ನೂ ತಮ್ಮ ಕುಟುಂಬದವರಂತೆಯೇ ಕಾಣುವ ಅವರ ಹೃದಯ ವೈಶಾಲ್ಯವೂ ಹಲವು ಸಂದರ್ಭಗಳಲ್ಲಿ ಜನರನ್ನು ಅಚ್ಚರಿಗೊಳಿಸುತ್ತದೆ.

ತಮ್ಮ ಊರಿನಲ್ಲಿ ಹಾಗೂ ಇತರ ಹಲವೆಡೆಗಳಲ್ಲಿ ಕಾವ್ಯವಾಚನ ಪ್ರವಚನಗಳನ್ನು ಕೇಳಿ ಬಹುಶ್ರುತರಾಗಿದ್ದ ಶ್ರೀಯುತರು ತಾಯಿ ಶಾರದೆಯ ಪ್ರೇರಣೆಯಿಂದಲೋ ಎಂಬಂತೆ ಕಾವ್ಯ ಪ್ರವಚನಕ್ಕೆ ತೊಡಗಿದರು. ಕಾವ್ಯಪ್ರವಚನವೆಂಬುದು ಬಹುಮಹತ್ತ್ವದ ಕಲೆ. ಸಭೆಯಲ್ಲಿ ವಿಭಿನ್ನ ಅಭಿರುಚಿಯ ಸಾವಿರಾರು ಜನರಿರುತ್ತಾರೆ. ಯಾರಿಗೂ ಬೇಸರವಾಗದಂತೆ ಪ್ರವಚನ ಮಾಡುವುದು ಸಾಮಾನ್ಯರಿಂದ ಶಕ್ಯವಾಗದು. ಪಾಂಡಿತ್ಯ, ಲೋಕಜ್ಞಾನ, ಸರಸ



***178.*** *ನಿಂತಿರುವವರು : ಶ್ರೀ ನಾರಾಯಣಮೂರ್ತಿ, ಶ್ರೀ ಮಾರ್ಕಂಡೇಯ ಅವಧಾನಿಗಳು, ಶ್ರೀ ಸೀತಾರಾಮ ಅವಧಾನಿಗಳು, ಶ್ರೀ ಗೋಪಾಲ ಅವಧಾನಿಗಳು, ಪ್ರೊ. ಚಂದ್ರಶೇಖರ, ಡಾ. ನಂದಕುಮಾರ ಅವರು.*
*ಕುಳಿತಿರುವವರು : ಶ್ರೀ ಮತ್ತೂರು ಕೃಷ್ಣಮೂರ್ತಿಗಳು, ಶ್ರೀ ಶ್ರೀನಿವಾಸ ಅವಧಾನಿಗಳು, ಶ್ರೀ ನಂಜುಂಡಾವಧಾನಿಗಳು, ಶ್ರೀ ಕೇಶವಮೂರ್ತಿ ಘನಪಾಠಿಗಳು, ಶ್ರೀ ಚಿದಂಬರ ಜೋಯಿಸರು, ಶ್ರೀ ಎಂ.ಆರ್.ಶಂಕರಮೂರ್ತಿ ಅವರು.*

ಮನೋಲಹರಿ ಹಾಗೂ ದೈವಾನುಗ್ರಹವುಳ್ಳ ಪ್ರವಚನಕಾರನು ಮಾತ್ರ ಜನಪ್ರಿಯ ಪ್ರವಚನಕಾರನೆನಿಸುತ್ತಾನೆ. ಶ್ರೀಯುತರು ತಮ್ಮ ವಾಗ್ವೈಭವದಿಂದ ಕಾವ್ಯದ ಪಾತ್ರಗಳನ್ನು ಸಭಿಕರ ಕಣ್ಮುಂದೆ ನಿಲ್ಲಿಸಿ ಎಲ್ಲರನ್ನೂ ಹರ್ಷಗೊಳಿಸುತ್ತಾರೆ. ಅವರ ಪ್ರವಚನ ಖ್ಯಾತಿಯನ್ನರಿತ ಶೃಂಗೇರಿಯ ಶ್ರೀ ಜಗದ್ಗುರು ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಬೆಂಗಳೂರು ಶಂಕರಮಠದಲ್ಲಿ ಒಂದು ವಾರ ಕಾಲ ಅವರ ಭಾರತವಾಚನ ಕಾರ್ಯಕ್ರಮವನ್ನೇರ್ಪಡಿಸಿ ಅವರನ್ನು ವಿಶಿಷ್ಟ ರೀತಿಯಲ್ಲಿ ಗೌರವಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಪ್ರವಚನಪಟುಗಳಾದ ಅವರ ನವರಸಭರಿತ ವ್ಯಾಖ್ಯಾನ ಕೌಶಲವನ್ನು ಗುರುತಿಸಿ ನಾಡಿನ ಹಲವಾರು ಸಂಘ-ಸಂಸ್ಥೆಗಳವರು ಅವರನ್ನು ಸನ್ಮಾನಿಸಿ ತಮ್ಮ ಅಭಿಮಾನಗೌರವವನ್ನು ಸೂಚಿಸಿದ್ದಾರೆ.

ಭಾರತೀಯ ಸಂಸ್ಕೃತಿಯ ಶ್ರೇಷ್ಠ ಪ್ರಚಾರಕರೂ, ಆದರ್ಶ ಗೃಹಸ್ಥರೂ, ಸಮರ್ಥ ಪುರೋಹಿತರೂ, ಸಮಾಜದ ನೆಚ್ಚಿನ ಮಾರ್ಗದರ್ಶಕರೂ ಆಗಿರುವ ಶ್ರೀಯುತರು ಕಾರ್ಯೋತ್ಸಾಹದಲ್ಲಿ ನವ ಯುವಕರೇ ಆಗಿದ್ದಾರೆ. ಪ್ರಸ್ತುತ ಅರುವತ್ತೊಂದನೆಯ ವರ್ಷದಲ್ಲಿ ಪದಾರ್ಪಣ ಮಾಡುತ್ತಿರುವ ಅವರನ್ನು 'ವಸಿಷ್ಠಸ್ಸಮಾನಾನಾಂ ಭವತಿ' ಎಂದೇ ಆಶೀರ್ವದಿಸುವುದು ಸೂಕ್ತವಾದೀತಲ್ಲವೇ?


## ೪. ಪ್ರವೀಣರು

*ಗಮಕಿ ಎಂ. ರಾಘವೇಂದ್ರರಾವ್*

ಶಿವಮೊಗ್ಗೆಯ ಬಳಿ ತುಂಗಾ ತೀರದ ಎಡಬಲದ ದಂಡೆಗಳಲ್ಲಿರುವ ಮತ್ತೂರು ಮತ್ತು ಹೊಸಹಳ್ಳಿ ಎಂಬ ಎರಡು ಗ್ರಾಮಗಳು ಬಹಳ ಹಿಂದಿನ ಕಾಲದಿಂದಲೂ ವೇದಾಧ್ಯಯನ, ಕಾವ್ಯ-ಶಾಸ್ತ್ರ ವ್ಯಾಸಂಗ, ಸಂಗೀತಾಭ್ಯಾಸ ಇವುಗಳಿಗೆ ಆಗರವಾಗಿರುವ ಪುಣ್ಯಸ್ಥಳಗಳು.

ಹೊಸಹಳ್ಳಿ ಗ್ರಾಮವು ವೇದಾಧ್ಯಯನ, ಸಂಗೀತ, ಗಮಕ ವಾಚನ, ಪ್ರವಚನ ಮುಂತಾದ ಕಲಾಪ್ರಕಾರಗಳ ಅಧ್ಯಯನಕ್ಕೆ ಆಶ್ರಯ ನೀಡಿದ್ದರೆ, ಮತ್ತೂರು ಗ್ರಾಮವು ಇಂದಿಗೆ 'ಸಂಸ್ಕೃತ ಗ್ರಾಮ' ಎಂಬ ಕೀರ್ತಿಯನ್ನು ಗಳಿಸಿದೆ. ಮೇಲಾಗಿ, ಅಲ್ಲಿ ಸ್ವಲ್ಪ ಕಾಲಕ್ಕೆ ಹಿಂದೆ ಗಮಕ ವಿದ್ವಾನ್ ಮತ್ತೂರು ರಾಮಶಾಸ್ತ್ರಿಗಳೂ, 'ಪ್ರವಚನ ಚಕ್ರವರ್ತಿ' ಲಕ್ಷ್ಮೀಕೇಶವಶಾಸ್ತ್ರಿಗಳೂ ಕಂಗೊಳಿಸಿ ಇತ್ತೀಚೆಗೆ ಕಣ್ಮರೆಯಾಗಿದ್ದಾರೆ. ಅವರ ಶಿಷ್ಯ ಪರಂಪರೆಗೆ ಸೇರಿದ ವ್ಯಾಖ್ಯಾನ ಚತುರ, ವೇದಮೂರ್ತಿ ಶ್ರೀ ಮತ್ತೂರು ಮಾರ್ಕಂಡೇಯ ಅವಧಾನಿಗಳು ಆ ಪರಂಪರೆಯನ್ನು ಇಂದು ಎತ್ತಿ ಹಿಡಿದು ಕಲಾ ಸೇವೆ ಮಾಡುತ್ತಿದ್ದಾರೆ.

ನನ್ನ ಪರಮ ಮಿತ್ರರಾಗಿದ್ದ ಗಮಕ ವಿದ್ವಾನ್ ಶ್ರೀ ಕೆ.ಎಸ್. ವೆಂಕಟೇಶಯ್ಯನವರು *ಈ* ಹೊಸಹಳ್ಳಿಯಲ್ಲಿ ಹಲವು ವರ್ಷಗಳ ಕಾಲ ನೆಲೆಸಿ, ಅಲ್ಲಿನ ಯುವಕ ಯುವತಿಯರಿಗೆ ಸಮರ್ಥವಾದ ಗಮಕ ಶಿಕ್ಷಣವನ್ನು ನೀಡಿ, ಅನೇಕ ಶಿಷ್ಯರನ್ನು ತಯಾರು ಮಾಡಿದರು. *ಈ* ಶಿಷ್ಯರ ಮುಂಚೂಣಿಯಲ್ಲಿ ಅತ್ಯಂತ ಶ್ರದ್ಧಾಸಕ್ತಿಗಳಿಂದ *ಈ* ಕಲೆಯನ್ನು ಅಭ್ಯಾಸ ಮಾಡಿ ಮುಂದಕ್ಕೆ ಬಂದವರೆಂದರೆ ಶ್ರೀ ಎಚ್.ಆರ್.ಕೇಶವಮೂರ್ತಿಗಳು.



***179.** ಗಮಕಕೋಕಿಲ ಎಚ್.ಆರ್. ಕೇಶವಮೂರ್ತಿಯವರೊಂದಿಗೆ ಭಾರತವ್ಯಾಖ್ಯಾನ : ವ್ಯಾಖ್ಯಾನ ಚತುರ ಮಾರ್ಕಂಡೇಯ ಅವಧಾನಿಗಳು*

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಶ್ರೀ ವೆಂಕಟೇಶಯ್ಯನವರು ನಡೆಸಿದ ಆ ವರ್ಷದ ತರಗತಿಯ ಪರೀಕ್ಷೆಗೆ ನಾನು ಮತ್ತು ಡಾ.ಕೆ.ಎಂ.ಕೃಷ್ಣರಾವ್ ಅವರು ಪರೀಕ್ಷಕರಾಗಿ ಹೋಗಿದ್ದು, ಹೊಸಹಳ್ಳಿಯ ವಿದ್ಯಾರ್ಥಿಗಳ ಕಲಾಸಕ್ತಿಯನ್ನು ಕಂಡು ಮೂಕವಿಸ್ಮಿತರಾದೆವು! ಪರೀಕ್ಷೆಗೆ ಹಿಂದಿನ ರಾತ್ರಿ ಸುಮಾರು ಐದು ಜತೆ ಯುವ ದಂಪತಿಗಳು ಕುಳಿತು, ಒಬ್ಬರು ವಾಚನ ಮತ್ತೊಬ್ಬರು ಪ್ರವಚನವನ್ನು ನೀಡಿ ನಮ್ಮನ್ನು ಸಂತೋಷಪಡಿಸಿದರು.

ಮರುದಿನ ಬೆಳಗ್ಗೆ ನಾವು ಹೊಸಹಳ್ಳಿಯಿಂದ ಶಿವಮೊಗ್ಗಕ್ಕೆ ಬಂದೆವು. ಅಲ್ಲಿ ಮಧ್ಯಾಹ್ನ ದೇಶೀಯ ವಿದ್ಯಾಶಾಲೆಯಲ್ಲಿ ಪರೀಕ್ಷಾರ್ಥಿಗಳ ವಾಚನ ಪರೀಕ್ಷೆ ನಡೆಯಿತು. ಇದರಲ್ಲಿ ಕೇಶವಮೂರ್ತಿಗಳ ಗಮಕ ವಾಚನವು ಅತ್ಯಂತ ಆಕರ್ಷಕವೂ, ಮನೋಹರವೂ ಆಗಿತ್ತು. ಪರೀಕ್ಷಾಂತ್ಯದಲ್ಲಿ ನಾವು ವಿದ್ಯಾರ್ಥಿಗಳಿಗೆ ಹಿತವಚನಗಳ ರೂಪದಲ್ಲಿ ನಮ್ಮ ಅಭಿಪ್ರಾಯವನ್ನು ತಿಳಿಸಿ ಬೆಂಗಳೂರಿಗೆ ಮರಳಿದೆವು.

ಸುಮಾರು ೧೯೮೦-೮೨ರ ಮಧ್ಯೆ ನಾನು ಮೈಸೂರಿನಲ್ಲಿದ್ದಾಗ ಒಮ್ಮೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯದಲ್ಲಿ 'ಗಮಕ ಕಲೆ'ಯ ಮೇಲೆ ಒಂದು ಉಪನ್ಯಾಸವನ್ನು ನೀಡಲು ಕೊಡಗು ಜಿಲ್ಲೆಯ ವಿರಾಜಪೇಟೆಯ ಕಾವೇರಿ ಆಶ್ರಮಕ್ಕೆ ಹೋಗಿದ್ದೆನು. ಅದೇ ಸಂಜೆ ಅಲ್ಲಿ ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಕೇಶವಮೂರ್ತಿ ಹಾಗೂ ಶ್ರೀ ಮಾರ್ಕಂಡೇಯ ಅವಧಾನಿಗಳ ಗಮಕ ವಾಚನ-ಪ್ರವಚನವು ನಡೆಯಿತು. ಅವರ ಕಾರ್ಯಕ್ರಮವು ನನ್ನ ಉಪನ್ಯಾಸಕ್ಕೆ ಪೂರಕವಾಗಿದ್ದ ಕಾರಣ ಈ ಮಾದರಿಯಲ್ಲೇ ಗಮಕ ವಾಚನ ನಡೆದರೆ ಅದು 'ಶಾಸ್ತ್ರ ಸಮ್ಮತವೆನಿಸುವುದು' ಎಂದು ಸೋದಾಹರಣಪೂರ್ವಕ ಮಾತನಾಡಿದೆನು. ಈ ಕಾರ್ಯಕ್ರಮದಿಂದ ಸಭಿಕರಿಗೆಲ್ಲಾ ಆನಂದವುಂಟಾಯಿತು.

ಇದೇ ಕಲಾವಿದರ ಕಾರ್ಯಕ್ರಮವನ್ನು ಅನಂತರದ ದಿನಗಳಲ್ಲಿಯೂ ಹಲವು ಬಾರಿ ಕೇಳಿ ಸಂತೋಷಪಟ್ಟಿದ್ದೇನೆ. ಅವರಿಗೆ ಸನ್ಮಂಗಳ ಉಂಟಾಗಲೆಂದು ಹಾರೈಸುತ್ತೇನೆ.

## ೫. ಕೃಷ್ಣಾರ್ಜುನರು

***ನ. ಕೃಷ್ಣಪ್ಪ***

ಮತ್ತೂರು-ಹೊಸಹಳ್ಳಿ ಮೊದಲಿನಿಂದಲೂ ಜೋಡಿ ಹಳ್ಳಿಗಳು; ಸಂಸ್ಕೃತಕ್ಕೆ-ಸಂಗೀತಕ್ಕೆ-ವಿದ್ವತ್ತಿಗೆ-ಕೃಷಿಗೆ ಪ್ರಸಿದ್ಧವಾದವು. ಇತ್ತೀಚಿನ ದಿನಗಳಲ್ಲಿ ಹಿಂದುತ್ವ-ನಿಷ್ಠೆಗೂ ಆಧಾರವಾಗಿರುವ ಊರುಗಳು. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಮತ್ತೂರು ಎಂದರೆ ಹೊಸಹಳ್ಳಿಯೂ ಹೊಸಹಳ್ಳಿ ಎಂದರೆ ಮತ್ತೂರೂ ಸೇರುವುದೆಂಬ ಅವಿನಾಭಾವ ಎರಡರಲ್ಲೂ. ತುಂಗಾ ನದಿಯ ಎರಡು ದಡಗಳಲ್ಲಿ ಪರಸ್ಪರ ಎದುರಾಗಿ ಸದಾ ಜತೆಯಾಗಿರುವ ಈ ಗ್ರಾಮಗಳ ಜೀವನವೂ ಹಾಸುಹೊಕ್ಕಾಗಿದೆ.

**ಸಂಘ ಶಿಬಿರದಲ್ಲಿ ಗಮಕ**

ಮತ್ತೂರಿನಲ್ಲಿ ಕರ್ನಾಟಕ ಪ್ರಾಂತ ರಾ.ಸ್ವ.ಸಂಘದ ಕಾರ್ಯಕರ್ತರ ಶಿಬಿರ ಏರ್ಪಾಡಾಗಿತ್ತು. ಪೂಜ್ಯ ಬಾಳಾಸಾಹೇಬ ದೇವರಸ್, ಮಾನ್ಯ ಯಾದವರಾವ್‌ಜೀ, ಮಾನ್ಯ ರಜ್ಜುಭಯ್ಯಾ ಇತ್ಯಾದಿ ಹಿರಿಯರೆಲ್ಲ ಬರುವ ಸಂಭ್ರಮದ ಕಾರ್ಯಕ್ರಮ. ಅದರ ಸಂಯೋಜನೆಗೆಂದು ಬಂದಿದ್ದ ಶ್ರೀ ಅಜಿತಕುಮಾರ್ - ಆಗ ಸಹಪ್ರಾಂತ ಪ್ರಚಾರಕರು - ಒಮ್ಮೆ ಕಾರ್ಯಕರ್ತರೆದುರು ಒಂದು ಪ್ರಶ್ನೆಯಿಟ್ಟರು, "ಪ್ರಾಂತದ ಎಲ್ಲ ಕಾರ್ಯಕರ್ತರು ಸೇರಿದಾಗ, ಅವರಿಗೆ ಮತ್ತೂರು ಹೊಸಹಳ್ಳಿಯ ಪರವಾಗಿ ತೋರಿಸುವುದೇನೇನು?" ತಕ್ಷಣ ಒಬ್ಬೊಬ್ಬರೂ ಹೇಳಲಾರಂಭಿಸಿದರು, 'ಆತ್ಮೀಯತೆ' 'ಒಗ್ಗಟ್ಟು' 'ಸಂಸ್ಕೃತಮನೆ' ಇತ್ಯಾದಿ ಹೇಳಿ 'ಗಮಕ' ಎಂದೂ ಹೇಳಿದರು. ಆಗ ಅಜಿತ್ ನಸುನಗುತ್ತಾ, "ಕಮ್ಮಾರನ ಕುಲುಮೆಯಲ್ಲಿ ನೊಣಕ್ಕೇನು ಕೆಲಸ?" ಎಂದರು. ಸುತ್ತಲಿದ್ದವರಿಗೆ ಅವರ ಮಾತು ಕೂಡಲೇ ಅರ್ಥವಾಗಲಿಲ್ಲ. "ಏನು?" ಎಂದು ಕೇಳಿದರು. ಆಗ ಅಜಿತರು "ಇಲ್ಲಿ ಬರುವವರು ಸಂಘದ ಕಾರ್ಯಕರ್ತರು; ಸಂಗೀತ, ಸಾಹಿತ್ಯ-ಕಲೆಗಳನ್ನು ತುಂಬ ಹಚ್ಚಿಕೊಂಡವರಲ್ಲ. ಅವರಿಗೆ 'ಗಮಕ' ರುಚಿಸೀತೆ?" ಎಂದು ವಿವರಿಸಿದರು.

ಆದರೆ ಉಳಿದವರು ಬಿಡಲಿಲ್ಲ. "ಗಮಕ ಎಲ್ಲರಿಗೂ ರುಚಿಸುತ್ತೆ. ಅದರಲ್ಲೂ ಶ್ರೀ ಕೇಶವಮೂರ್ತಿಗಳ ಗಾಯನ, ಶ್ರೀ ಮಾರ್ಕಂಡೇಯ ಅವಧಾನಿಗಳ ವ್ಯಾಖ್ಯಾನ ಇದ್ದರೆ ಎಂತಹವರಾದರೂ ಮತ್ತೆ ಮತ್ತೆ ಬಯಸುತ್ತಾರೆ" ಎಂದರು. ಸ್ವಲ್ಪಕಾಲ ಚರ್ಚೆಯಾಗಿ- ಒಂದು ರಾತ್ರಿ ಭೋಜನದನಂತರ ಈ ಕಾರ್ಯಕ್ರಮ ನಡೆಸುವುದೆಂದು ನಿರ್ಧಾರವಾಯ್ತು. ಆ ಇಬ್ಬರು ಹಿರಿಯರೂ ಸಂತಸದಿಂದ ಒಪ್ಪಿದರು.

ನಿರ್ಧಾರವಾದುದಾದರೂ ಶ್ರೀ ಅಜಿತರಿಗೆ ಅನುಮಾನವೇ. ಅಂತಹ ಹಿರಿಯರು ಬಂದು ಇಲ್ಲಿ ಗಮಕ ಕಾರ್ಯಕ್ರಮ ನಡೆಸಿದರೆ, ಪ್ರಾಂತದ ನಾನಾ ಭಾಗದಿಂದ ಬಂದಿರುವ, ಕೃಷಿಕ, ಕಾರ್ಮಿಕರಿಂದ- ವೈದ್ಯ, ಅಧ್ಯಾಪಕರವರೆಗೆ ಎಲ್ಲ ತರಹವನ್ನೂ ಒಳಗೊಂಡ ಈ ಗುಂಪಿಗೆ ಸಮಾನ ಆಸಕ್ತಿ ಬರದೆ ಹೋದರೆ ? ಯಾರೋ ಬೇಸರಗೊಂಡು ಆಕಳಿಸಿದರೆ? ಎದ್ದು ಹೋದರೆ? ಅಥವಾ ಅಲ್ಲೇ ಕಾಲು ಚಾಚಿ ಮಲಗಿದರೆ? ಎಂಬ ಅನುಮಾನ ಮತ್ತೆ ಮತ್ತೆ ಕಾಡುತ್ತಿತ್ತು.

ಶಿಬಿರ ಪ್ರಾರಂಭವಾಯ್ತು. ಕಾರ್ಯಕ್ರಮದಲ್ಲಿ 'ಗಮಕ ಕಾರ್ಯಕ್ರಮ' ಎಂದಿದ್ದುದನ್ನು ಕಂಡು ಅನೇಕರು 'ಇದೇನು?' ಎಂದು ಕೇಳಲಾರಂಭಿಸಿದರು. ಅನೇಕರಿಗೆ ಆ ಶಬ್ದವೇ ಹೊಸದು. ವಿವರಿಸಿದಾಗ ಸಹಜವಾಗಿ ಕೆಲವರಿಗೆ ಕುತೂಹಲವಾದರೆ ಹಲವರಿಗೆ 'ನಮಗೇನೂ ಗೊತ್ತಾಗದು' ಎಂಬ ಭಾವ ಬರುತ್ತಿತ್ತು. ಹಾಗಾಗಿ ಕಾರ್ಯಕ್ರಮ ಪ್ರಾರಂಭ ಆದಾಗ ಅನೇಕರು ಹಿಂಭಾಗದಲ್ಲಿ ದೂರದಲ್ಲಿ ಕುಳಿತರು. ಅಂತೂ ಕಾರ್ಯಕ್ರಮ ಪ್ರಾರಂಭವಾಯ್ತು. ಶ್ರೀ ಕೇಶವಮೂರ್ತಿಯವರ ಚಿನ್ನದ ಎಳೆಯಂತಹ ಕಂಠಶ್ರೀ ಮತ್ತು ಶ್ರೀ ಮಾರ್ಕಂಡೇಯ ಅವಧಾನಿಗಳ ಮುತ್ತಿನಂತಹ ಭಾವಪೂರ್ಣ ವಿವರಣೆ ಎಲ್ಲರನ್ನೂ ಮುಂದಕ್ಕೆ ಸೆಳೆಯಿತು. ಕಾರ್ಯಕ್ರಮ ಮುಕ್ತಾಯವಾದಾಗಲಂತೂ "ಮುಗಿದೇ ಹೋಯಿತೇ?" ಎಂದವರನೇಕರು. ಅನೇಕರು ಬಂದು ಅವರ ಪಾದಗಳಿಗೆರಗಿ "ನಮ್ಮ ಊರಿಗೆ ಯಾವಾಗ ಬರುವಿರಿ?" ಎಂದು ಆಮಂತ್ರಿಸಿದರು. ಯಾರು ನಿದ್ರೆ ಹೋದಾರೆಂದು ಅನುಮಾನವಿತ್ತೋ ಅವರೇ ಮುಂದಿನ ಸಾಲಿನಲ್ಲಿ ಕುಳಿತು ಪ್ರತಿ ಕ್ಷಣವನ್ನೂ ಆನಂದಿಸಿದುದು ಅಂದಿನ ವಿಶೇಷ.



**180.** *ಉದಯ ಟಿವಿ : ಶ್ರೀ ಎಚ್.ಆರ್. ಕೇಶವಮೂರ್ತಿ ಮತ್ತು ಶ್ರೀ ಮತ್ತೂರು ಕೃಷ್ಣಮೂರ್ತಿಗಳ ಭಾರತ ವಾಚನ - ವ್ಯಾಖ್ಯಾನದ ಸಹಸ್ರದಿನೋತ್ಸವ : ಕೊಂಡಾಟ : ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳಿಂದ*

ಇದರ ಪರಿಣಾಮವಾಗಿ ಅನಂತರದ ದಿನಗಳಲ್ಲಿ ಗಮಕ ಕಾರ್ಯಕ್ರಮ ಬೆಳಗಾಂ ಜಿಲ್ಲೆಯ ರಾಮದುರ್ಗ, ಬೆಂಗಳೂರಿನ ಕೇಶವ ಶಿಲ್ಪ ಮುಂತಾದ ಸ್ಥಾನಗಳಲ್ಲದೆ ಸಂಘದ ಸಂಘಶಿಕ್ಷಾ ವರ್ಗದಲ್ಲಿಯೂ ನಡೆಯಿತು. ಗಮಕ ಕಲೆ ಕೇವಲ ವಿದ್ವಾಂಸರಿಗಲ್ಲ, ಸರ್ವಸಾಮಾನ್ಯರನ್ನೂ ಅದು ರಂಜಿಸುತ್ತದೆ ಎಂಬುದನ್ನು ಸಿದ್ಧಮಾಡಿತು. ಅಷ್ಟೇ ಅಲ್ಲ, ಗಮಕ ಕ್ಷೇತ್ರದ ಸಿದ್ಧ ತಪಸ್ವಿಗಳವರು ಎಂಬುದು ನಮ್ಮೆಲ್ಲರ ಗಮನಕ್ಕೆ ಬಂದಿತು.

**ವಿನಯದ ಮೂರ್ತಿ**
**ಶ್ರೀ ಕೇಶವಮೂರ್ತಿಗಳು**

ಶ್ರೀ ಕೇಶವಮೂರ್ತಿಗಳು ಗಮಕ ಗಂಧರ್ವರು. ಅವರ ಧ್ವನಿ, ಅದರಲ್ಲಿನ ಭಾವ, ಏರಿಳಿತಗಳು, ಎಲ್ಲಕ್ಕಿಂತ ಪ್ರಧಾನವಾಗಿ ಶ್ರೋತೃಗಳ ಹೃದಯ ತಂತಿಯನ್ನು ಮೀಟಿ ಸ್ಪಂದಿಸುವ ಅವರ ತನ್ಮಯತೆ, ಅವರನ್ನು ಬಹು ಮೇಲ್ಮಟ್ಟದ ವಿದ್ವಾಂಸರನ್ನಾಗಿಸಿವೆ. ಆದರೆ ಆ ವಿದ್ವತ್ತಿಗೂ ಕಿರೀಟದಂತೆ ಇರುವುದು ಅವರ ವಿನಯ. **ವಿದ್ಯಾ ದದಾತಿ ವಿನಯಮ್** ಎಂದು ಇಂತಹ ಹಿರಿಯರನ್ನು ಕಂಡೇ ಹೇಳಿರಬೇಕು. ಎಂತಹ ಕಿರಿಯನಾದರೂ ಅವರ ಬಳಿ ಧೈರ್ಯವಾಗಿ ಹೋಗಬಲ್ಲಷ್ಟು ಸುಲಭರು ಅವರು. ಅಷ್ಟೇ ಅಲ್ಲ, ಸುತ್ತಲಿನಲ್ಲಿ ಏನಾದರೂ ವಿಶೇಷವಿದ್ದಲ್ಲಿ ತಾವೇ ಹೋಗಿ ನೋಡಿ, ವಿಚಾರಿಸಿ ಆನಂದಿಸುವಷ್ಟು ಸರಳರು. **ವಿರಲಃ ಸರಳೋ ಜನಃ** ಎಂದು ಕವಿ ವರ್ಣಿಸಿದ್ದು ಇಂತಹವರನ್ನು.

ಇತ್ತೀಚೆಗೆ ಶಿವಮೊಗ್ಗೆಯ ಶ್ರೀ ಬಿ.ವಿ. ರಾಮಸ್ವಾಮಿಯವರು ಮಾನಸ ಸರೋವರ ಯಾತ್ರೆಯನ್ನು ಮುಗಿಸಿ ವಾಪಸಾದರು. ನನಗೆ ಅವರ ಪ್ರವಾಸದ ಕಥನ ಕೇಳುವ ಕುತೂಹಲ. ಆದರೆ ಇಬ್ಬರಿಗೂ



**181.** *ಶ್ರೀ ಎಚ್.ಆರ್.ಕೆ. ದಂಪತಿಗಳಿಗೆ ಸನ್ಮಾನ : ಭಾರತದ ಮಾಜಿ ಪ್ರಧಾನಿ ಶ್ರೀ ಎಚ್.ಡಿ.ದೇವೇಗೌಡ ಅವರಿಂದ.*

ಬಿಡುವಿರುವ ಸಮಾನ ಸಮಯಬೇಕಲ್ಲ? ಕೊನೆಗೆ ರಾತ್ರಿ ಹೊಸಹಳ್ಳಿಯಲ್ಲಿ ಮಲಗುವ ಮುನ್ನ ಪ್ರವಾಸದ ಅನುಭವ ಕೇಳುವುದು ಎಂದು ನಿರ್ಧಾರವಾಯ್ತು. ಅಲ್ಲಿಗೆ ತಲುಪಿದಾಗ ನಮಗೊಂದು ಆಶ್ಚರ್ಯ ಕಾದಿತ್ತು. ಶ್ರೀ ಕೇಶವಮೂರ್ತಿಗಳು ಅಲ್ಲಿ ನಮಗಾಗಿ ಕಾದಿದ್ದರು. ಸಾಗರಕ್ಕೆ ಹೋಗಬೇಕಾದವರು, "ಇಂದೇ ಸಾಗರದಲ್ಲೊಂದು ಕಾರ್ಯಕ್ರಮ ಇದೆ. ಇಲ್ಲಿ ಮಾನಸ ಸರೋವರ ಯಾತ್ರಾಕಥನ ಕೇಳುವುದಕ್ಕೂ ಆಸೆ. ಆದರೆ ನಿಲ್ಲಲಾಗುತ್ತಿಲ್ಲ. ದಯವಿಟ್ಟು ಕ್ಷಮಿಸಿ" ಎಂದು ಹೇಳಿ ಹೊರಟರು. ವಾಸ್ತವವಾಗಿ ಅವರ ಊರಿನಲ್ಲಿ ಅವರ ಅನುಕೂಲ ಯಾವಾಗ ಎಂದು ನಾನು ಕೇಳಬೇಕಿತ್ತು. ಹಾಗಾಗಿ ಕ್ಷಮಾಪ್ರಾರ್ಥಿಗಳು ನಾವಾಗಬೇಕಿತ್ತು. ಆದರೆ ವಿದ್ಯೆಯನ್ನು ಗುರುತಿಸುವ, ಸಾಧನೆಯನ್ನು ಗುರುತಿಸುವ ಆ ಹೃದಯ-ಹಿಮಾಲಯದೆದುರು ನಮ್ಮ ಮಸ್ತಕ ಸಹಜವಾಗಿ ಬಾಗಿ ಮೌನಕ್ಷಮೆ ಯಾಚಿಸಿತು.

**ಧರ್ಮಜ್ಞ, ನಯಜ್ಞ- ಶ್ರೀ ಮಾರ್ಕಂಡೇಯ ಅವಧಾನಿಗಳು**

*ಶತೇಷು ಜಾಯತೇ ಶೂರಃ ಸಹಸ್ರೇಷು ಚ ಪಂಡಿತಃ |*
*ವಿದ್ವಾನ್ ದಶಸಹಸ್ರೇಷು ದಾತಾ ಭವತಿ ವಾ ನ ವಾ ||*

"ನೂರಕ್ಕೊಬ್ಬ ಶೂರ, ಸಾವಿರಕ್ಕೊಬ್ಬ ಪಂಡಿತ, ಹತ್ತು ಸಹಸ್ರಕ್ಕೊಬ್ಬ ಜ್ಞಾನಿ ಹುಟ್ಟಬಹುದು. ಆದರೆ ಕೊಡುಗೈ ಆದವನು ಹುಟ್ಟಿದರೆ ಹುಟ್ಟಿದ, ಇಲ್ಲದಲ್ಲಿ ಇಲ್ಲ" ಎನ್ನುತ್ತದೆ ಸುಭಾಷಿತ.

ದಾತಾ- ಕೊಡುವವರೂ ಅನೇಕ ವಿಧ. ಅನ್ನ ಕೊಡುವವರಿದ್ದಾರೆ. ಹಣ ಕೊಡುವವರಿದ್ದಾರೆ. ಧೈರ್ಯ ಕೊಡುವವರು ಬಹಳ ಕಡಮೆ. ವಿವೇಕ ಕೊಡುವುದು ಇನ್ನಷ್ಟು ಕಷ್ಟ. ವಿವೇಕ ನೀಡುವವನಿಗೆ ತಾಳ್ಮೆ ಬೇಕು, ಸಮಾಜದ ಬಗ್ಗೆ ಪ್ರೇಮ ಇರಬೇಕು. ಎಲ್ಲರಿಗೂ ಒಳಿತಾಗಲಿ ಎಂಬ ಜನಹಿತದೃಷ್ಟಿ ಇರಬೇಕು.

ಮಾರ್ಕಂಡೇಯ ಅವಧಾನಿಗಳು ಧೈರ್ಯ-ವಿವೇಕ ನೀಡಬಲ್ಲವರು. ಗಮಕ ವ್ಯಾಖ್ಯಾನದಲ್ಲಂತೂ ಅವು ತುಂಬಿರುತ್ತವೆ. ಅದರಂತೆ ನಿತ್ಯ ಜೀವನದಲ್ಲೂ ಸರ್ವರಿಗೆ ವಿಶ್ವಾಸ ಮೂಡಿಸುವವರು ಅವರು. ಅವರ ವ್ಯಕ್ತಿತ್ವವೂ ಅಂತಹುದು.

ಅವರು ವ್ಯಾಖ್ಯಾನಕಾರರು ಎನ್ನುವುದು ಅವರ ವ್ಯಕ್ತಿತ್ವದ ಶತಾಂಶ ಮಾತ್ರ. ಅವರು ಪುರೋಹಿತರು, ವೇದವಿದರು, ಸ್ನೇಹ ಸ್ವಭಾವದವರು, ಆರ್ತತ್ರಾಣರು. ನೂರು ಜನಕ್ಕೆ, ನೂರು ಮುಖದಲ್ಲಿ ಅವರ ಜೀವನ ದಾರಿ ತೋರಿದೆ. ಆಗೊಮ್ಮೆ ಈಗೊಮ್ಮೆ ಮತ್ತೂರಿಗೆ ಬರುವ ನನ್ನಂತಹವರಿಗೆ ಅವರು ಧರ್ಮಜ್ಞರು, ಧರ್ಮನಿಷ್ಠ ಪ್ರಥಮ ವ್ಯಕ್ತಿ.

ನಮ್ಮ ದೇಶದಲ್ಲಿ ಇದೊಂದು ಸಂಧಿಕಾಲ. ಯುವಕರು ಪುರಾತನವಾದುದೆಲ್ಲವನ್ನೂ ಧಿಕ್ಕರಿಸುವ ವಾತಾವರಣದಿಂದಾಗಿ ಸಂಪ್ರದಾಯಸ್ಥರೆಲ್ಲ ಹಟದಿಂದ ತಮ್ಮದೇ ಸರಿ ಎಂಬ ನಿಷ್ಠುರ ನಿಲುಮೆಯನ್ನು ತಳೆವ ಸನ್ನಿವೇಶ ಇದೆ. ಹಾಗಾಗಿ ಸಾಮಾನ್ಯರಿಗೆ ಎಲ್ಲ ವಿಷಯಗಳಲ್ಲೂ ಗೊಂದಲ. ಪ್ರತಿ ಹೆಜ್ಜೆಗೂ ಸಮಸ್ಯೆ. ಹೇಗೆ ನಡೆದರೆ ಸರಿ? ಕೆಲವರ ಅಭಿಪ್ರಾಯದಲ್ಲಿ 'ಬಹುಜನರ ಅಭಿಪ್ರಾಯದಂತೆ ನಡೆಯೋಣ' ಎಂಬುದು ಸರಿ. ಇನ್ನು ಕೆಲವರು, 'ಆತ್ಮೀಯರು ಹೇಳಿದಂತೆ ನಡೆಯಿರಿ' ಎನ್ನುತ್ತಾರೆ ಅಥವಾ, 'ಸಮಾಜ ರಕ್ಷಣೆಗೆ, ವಿಕಾಸಕ್ಕೆ ಅನುಕೂಲವಾಗುವ ಧರ್ಮದಂತೆ ನಡೆಯುವುದೇ ಸರಿ' ಎನ್ನುವವರೂ ಇದ್ದಾರೆ.

ಮತ್ತೂರಿನ ಜನಕ್ಕೆ, ಹೊಸಹಳ್ಳಿಯ ಜನಕ್ಕೆ ಈ ಗೊಂದಲದ



*182. ಮಾರ್ಕಂಡೇಯ ಅವಧಾನಿಗಳಿಗೆ ಮಾಜಿ ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡರಿಂದ ಸನ್ಮಾನ ; ಬೆಂಗಳೂರಿನ ಮಾಜಿ ಮೇಯರ್ ಶ್ರೀ ಜಿ. ನಾರಾಯಣ ಅವರ ಉಪಸ್ಥಿತಿ*

ಕಾರಣವಿಲ್ಲ. ಎರಡೂ ಊರಲ್ಲಿ ಧರ್ಮಜ್ಞರಿದ್ದಾರೆ. ಅಜಾತಶತ್ರುಗಳವರು. ಅವರನ್ನನುಸರಿಸಬಹುದು. ಧರ್ಮಮೂರ್ತಿಗಳೂ ಹೌದು. ಕಾರುಣ್ಯಮೂರ್ತಿಗಳೂ ಹೌದು. ಅವರನ್ನು ಗಮನಿಸಿ ಅವರಂತೆ ಬಾಳಬಹುದು.

ಮತ್ತೂರಿನವರಿಗೆ ಮಾತ್ರ ಅಲ್ಲ. ದೂರದಲ್ಲಿರುವ ನಮ್ಮಂತಹವರಿಗೂ ಅವರು ದಾರಿ ದೀಪ - Lighthouse- ಕಡಲಲ್ಲಿ ಹಡಗುಗಳ ಸಂಚಾರಕ್ಕೆ ಯೋಗ್ಯ ದಾರಿ ತೋರುವ ದೀಪಸ್ತಂಭ. ಅವರು, 'ನನ್ನ ಬಳಿ ಬರಬೇಡಿ' ಎಂದು ಸುತ್ತ ಬೇಲಿ ಕಟ್ಟಿಲ್ಲ. ಅವರು, ದ್ವೀಪದಂತಾಗದೆ ದೀಪವಾಗಿ ದಾರಿ ತೋರಲು ನಿಂತಿದ್ದಾರೆ.

**ಧರ್ಮರಕ್ಷಣೆ**

ಆದರೆ ಇಂದಿನ ಸಂಧಿಕಾಲ ಇಂತಹ ವಿದ್ವಾಂಸರಿಗೂ, ಹೃದಯವಂತರಿಗೂ ಕಠಿಣ ಕಾಲ ಆಗುತ್ತಿದೆ. ಹಿಂದೆ ಭೀಷ್ಮ, ದ್ರೋಣ, ವಿದುರ ಮುಂತಾದವರು ಇಂತಹ ಪ್ರಸಂಗಗಳಲ್ಲಿ ಒಂದು ದಾರಿ ತುಳಿದರು. ಅದು ತಪ್ಪಾಯಿತು. ಹಾಗೆಂದು ಅವರ ಉದ್ದೇಶ, ಭಾವನೆಗಳು ತಪ್ಪಲ್ಲ. ಪರಿಣಾಮ ಮಾತ್ರ ತಪ್ಪಾಯ್ತು. ಸರ್ವರಿಗೂ ಒಳಿತಾಗಲೆಂದೇ ಅವರು ಆ ದಾರಿ ಅನುಸರಿಸಿದರಾದರೂ ಪರಿಣಾಮ ಚೆನ್ನಾಗದೆಂಬ ಅರಿವೂ ಅವರಿಗಿತ್ತು. ಶ್ರೀಕೃಷ್ಣನಾದರೋ ಬೇರೆಯ ದಾರಿಯಲ್ಲೇ ಹೊರಟ. ಧರ್ಮರಕ್ಷಣೆಯ ತನ್ನ ಕಾರ್ಯಕ್ಕೆ ಸಹಾಯವಾಗುವ ಪಾಂಡವರನ್ನು ರಕ್ಷಿಸುವುದೇ ತನ್ನ ಕರ್ತವ್ಯವೆಂದು ಭಾವಿಸಿದ. 'ಮಮ ಪ್ರಾಣಾ ಹಿ ಪಾಂಡವಾಃ' ಎಂದ, ಅವರನ್ನು ರಕ್ಷಿಸಲು ಏನೇನೋ ಮಾಡಿದ, ತನ್ನ ಪ್ರತಿಜ್ಞೆಯನ್ನು ಮುರಿದ, ಕೆಲವೊಮ್ಮೆ ಮಾಡಬಾರದ್ದನ್ನು ಮಾಡಿದ, ಮಾಡಿಸಿದ. ಈಗ ಯಾರೇ ಅವನನ್ನು ಟೀಕಿಸಿದರೂ ಅವನ ಕೃತಿ ಯೋಗ್ಯವಾದದ್ದು, ಸಫಲವಾದದ್ದು. ಅದಕ್ಕಾಗೇ ಅವನು 'ಶಾಶ್ವತ ಧರ್ಮ-ಗೋಪ್ತಾ'. ಪ್ರತಿಜ್ಞಾಪಾಲನೆ ಮಾಡಿ ತಾನು ಅಳಿದು ಉಳಿದವರನ್ನು ಉಳಿಸಲಾಗದ ಭೀಷ್ಮನಿಗಿಂತ ಪ್ರತಿಜ್ಞೆ ಮುರಿದು ಧರ್ಮವನ್ನು ಉಳಿಸಿ ಪಾಂಡವರನ್ನು ಉಳಿಸಿದ ಶ್ರೀಕೃಷ್ಣ-ಧರ್ಮದ ಮೂರ್ತಿ.

ಇಂದೂ ವಿದ್ವಾಂಸರೆದುರು ಆ ಸಂದಿಗ್ಧತೆ ಇದೆ. ಆದರೆ ಗಮಕದ ಈ ಕೃಷ್ಣಾರ್ಜುನರಿಗೆ ಆ ಗೊಂದಲವಿಲ್ಲ. ಧರ್ಮವನ್ನು, ಧರ್ಮರಕ್ಷಕರನ್ನು ಅವರ ಹೃದಯ ಗುರುತಿಸಿದೆ. ಅವರನ್ನು ರಕ್ಷಿಸಿ ಬೆಳೆಸುವಲ್ಲಿ ಅವರು ತತ್ಪರರು. ತಾತ್ಕಾಲಿಕವಾಗಿ ಗೊಂದಲ, ತೊಡಕು ಎಂದು ಕಂಡರೂ ಅದನ್ನು ಪರಿಹರಿಸಿ ದಾರಿ ತೋರುತ್ತಿದ್ದಾರೆ.

ಮತ್ತೂರಿನಲ್ಲಿ ಆಗಾಗ್ಗೆ ನಡೆವ ಯಜ್ಞಗಳು ಇಂತಹ ಧರ್ಮನಿಷ್ಠ ಜನರನ್ನು ಗುರುತಿಸುವ, ಬೆಳೆಸುವ ಸಂದರ್ಭಗಳು. ಈ ಭೂಮಿಯಲ್ಲಿ ಬೆಳೆವ ಪ್ರತಿಯೊರ್ವನೂ ಧರ್ಮರಕ್ಷಕನಾಗಬಲ್ಲ. ಹಾಗೆ ಬೆಳೆಯಲು ಅವನ ಕಣ್ಣಮುಂದೆ ಒಂದು ಆದರ್ಶವಿರಬೇಕು. ಹೇಗೆ ನಡೆದುಕೊಳ್ಳಬೇಕು ಎಂದು ತಿಳಿಯಲು ಅದರಂತೆ ನಡೆವ ಮೇಲ್ಪಂಕ್ತಿ ಇರಬೇಕು, ಹಾಗೂ ತಾನು ನಂಬಿದ ರೀತಿ ನಡೆಯುವ ವಿಶ್ವಾಸ ಬರಲು ಅದೇ ರೀತಿ ಕೆಲಸ ಮಾಡುವವರ ಸಹವಾಸಬೇಕು. ಈ ಮೂರನ್ನೂ ಮತ್ತೂರಿನ ಯಜ್ಞಗಳು ಒದಗಿಸುತ್ತವೆ. ಇಂತಹ ವಾತಾವರಣ ಅಲ್ಲಿ ಮೂಡಲು ನೂರಾರು ಜನ ದುಡಿಯುತ್ತಾರೆ ಎಂಬುದು ನಿಜ. ಆದರೂ ಅವರೆಲ್ಲರಿಗೆ ಪ್ರೇರಕ ಶಕ್ತಿ- ಆದರ್ಶದಲ್ಲಿ, ನಡವಳಿಕೆಯಲ್ಲಿ, ಆತ್ಮೀಯತೆಯಲ್ಲಿ-ಶ್ರೀ ಮಾರ್ಕಂಡೇಯ ಅವಧಾನಿಗಳೇ. ಸಣ್ಣ ಬಾಲಕನೊಬ್ಬ ತನ್ನ ತೊದಲು ನುಡಿಯಲ್ಲಿ ಸಲಹೆ ಕೊಟ್ಟರೂ ನಗುಮುಖದಿಂದ ಅದನ್ನು ಕೇಳಿ ಅವನಿಗೆ

ಸಮಾಧಾನವಾಗುವಂತೆ ತಿಳಿಸುವ ತಾಳ್ಮೆ ಹಾಗೂ ಅಕ್ಕರೆ ಅವರಲ್ಲಿ ಇರುವುದರಿಂದ ಎಲ್ಲರಿಗೂ ಅವರು ತುಂಬ ಸಮೀಪದವರು. ಅವರ ಜತೆ ಇದ್ದೆವು, ಅವರೊಡನೆ ಮಾತನಾಡಿದೆವು ಎಂಬುದೇ ಹೆಮ್ಮೆ ಎನಿಸುವಂತಹ ಉನ್ನತ ಧರ್ಮಮೂರ್ತಿ ಅವರು.

## ನಮ್ಮೆಲ್ಲರ ಆಸೆ

ಇಂತಹ ಅಪರೂಪದ ಇಬ್ಬರು ವ್ಯಕ್ತಿಗಳಿಗೆ ಅರುವತ್ತು ವರ್ಷ ತುಂಬಿತು ಎಂಬುದು ಅವರಿಂದ ಉಪಕೃತರಾದ ಸರ್ವರಿಗೆ ಆನಂದ ನೀಡುವ ಸಂಗತಿ. ಮಾನವನಿಗೆ ಮೂರು ರೀತಿಯ ವಯಸ್ಸು ಇದೆಯಂತೆ.

1) Physical - ಭೌತಿಕ ವಯಸ್ಸು - ಎಲ್ಲರೂ ಲೆಕ್ಕಹಾಕುವ 365 ದಿನಗಳ ವರ್ಷಗಳು- *ಈ* ಲೆಕ್ಕದಲ್ಲಿ ಅವರಿಗೆ ಅರುವತ್ತು ವರ್ಷ.
2) Physiological - ಶಾರೀರಿಕ ವಯಸ್ಸು. ಅವರ ಅಂಗಾಂಗಳಿಗೆ ಆಗಿದೆ ಎನ್ನಿಸುವ ವಯಸ್ಸು. ಅವರೀರ್ವರ ಚಟುವಟಿಕೆ, ಜೀವನದ ಎಲ್ಲ ಸಂಗತಿಗಳಲ್ಲಿ ಆಸಕ್ತಿ ಇರುವ ಅವರನ್ನು ಕಂಡಾಗ ಅವರಿನ್ನೂ ಮೂವತ್ತರ ತರುಣರು (ನಿವೃತ್ತಿಯ ಚಿಂತೆ ಅವರಿಗಿಲ್ಲ. ಆ ಚಿಂತೆ ಅವರಿಗೆ ಬಾರದಂತೆ ಇನ್ನೂ ದೃಢಗಾತ್ರರಾಗಲಿ ಎಂದು ಎಲ್ಲರ ಆಸೆ.)
3) Psychological - ಮಾನಸಿಕ ವಯಸ್ಸು - ಪ್ರತಿಯೊಬ್ಬರ ಹಿತವನ್ನೂ ಬಯಸುತ್ತಾ, ಬಾಲಸದೃಶ ಕುತೂಹಲದಿಂದ ಸರ್ವಜನಪ್ರಿಯರಾಗಿರುವ ಅವರ ಮನೋಭಾವ ಅವರನ್ನು ಹದಿನಾರರ ತರುಣರನ್ನಾಗಿ ಮಾಡುತ್ತದೆ.

ಮಾನವರೆಲ್ಲರ ಜೀವನದ ಗುರಿ ಬೆಳಕು ಎಂದು ಎಲ್ಲರೂ ಅರಿತಿದ್ದಾರೆ. ಆದರೆ ಆ ಗುರಿಯ ದಾರಿಯಲ್ಲಿ ಒಬ್ಬೊಬ್ಬರೂ ಒಂದೊಂದು ಮಜಲಿನಲ್ಲಿದ್ದಾರೆ.

* ಬೆಳಕನ್ನರಿಯದವರು
* ಬೆಳಕನ್ನು ಬಯಸುವವರು
* ಬೆಳಕನ್ನರಸುವವರು
* ಬೆಳಕನ್ನರಿತವರು
* ಬೆಳಕಾದವರು

ಮೇಲಿನ ಇಬ್ಬರೂ ಐದನೆಯ ಮಜಲಿನಲ್ಲಿದ್ದಾರೆ. ಅವರಿಗೆ ಇಂದಿನ ವರ್ಷ ಜೀವನದ ಮಧ್ಯಕಾಲ ಆಗಲಿ ಎಂದು ಪರಮಾತ್ಮನಲ್ಲಿ ನಮ್ಮೆಲ್ಲರ ಮನದಾಳದ ಶ್ರದ್ಧಾಪೂರ್ಣ ಪ್ರಾರ್ಥನೆ.



***183.** ಕರ್ನಾಟಕ ಗಮಕ ಕಲಾ ಪರಿಷತ್ತಿನಲ್ಲಿ ಸಂಮಾನ : ಶ್ರೀ ಟಿ.ಆರ್. ಅಶ್ವತ್ಥನಾರಾಯಣಶೆಟ್ಟರು (ಹೆಸರಾಂತ ವಾಣಿಜ್ಯೋದ್ಯಮಿ, ಶಿವಮೊಗ್ಗ. ಶಿವಮೊಗ್ಗ ಗಮಕ ಕಲಾ ಪರಿಷತ್ ಶಾಖೆಯ ಗೌ. ಅಧ್ಯಕ್ಷರು), ಗಮಕಿ ಶ್ರೀಮತಿ ಪ್ರಿಯದರ್ಶಿನಿ ಅಯ್ಯಂಗಾರ್ (ಚಿಕ್ಕಮಗಳೂರು ಗಮಕ ಸಮ್ಮೇಳನಾಧ್ಯಕ್ಷೆ), ಶ್ರೀ ಎಚ್.ಆರ್. ಕೇಶವಮೂರ್ತಿಗಳು, ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು.*

# ೬. ಗೌರವಾರ್ಪಣ

*ಪ್ರೊ. ಎ. ನರಹರಿ*

ಹಾಸನದ ಶ್ರೀ ಸೀತಾರಾಮಾಂಜನೇಯ ದೇವಸ್ಥಾನದಲ್ಲಿ ನಡೆದ ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿಯ ಸಪ್ತಾಹದ ಕೊನೆಯ ದಿನ ತಾ.೨೭.೬.೧೯೯೬ರಂದು ಗಮಕಿಗಳಾದ ಶ್ರೀ ಕೇಶವಮೂರ್ತಿಗಳು ಮತ್ತು ವ್ಯಾಖ್ಯಾನಕಾರ ಶ್ರೀ ಮಾರ್ಕಂಡೇಯ ಅವಧಾನಿಗಳಿಗೆ ಗೌರವಪೂರ್ಣವಾಗಿ ಸಲ್ಲಿಸಿದ ರಚನೆಗಳು.

**ಶ್ರೀ ಕೇಶವಮೂರ್ತಿಗಳಿಗೆ**

ಏನು ರಾಗವದೇನು ಧಾಟಿಯ
ದೇನು ಯಿಂಚರವೇನು ಕಲರವ
ವೇನು ಮಧುರವದೇನು ಗಮಕಿಯ ಗಾನ ಸುಧೆಯೇನು
ಏನು ಭಾವವದೇನು ನವರಸ
ವೇನು ಮೋಡಿಯದೇನು ಹಾಡಿದ
ನೇನು ಕರ್ಣಾಮೃತವದೇನದ ಹೇಳಲಿನ್ನೇನು ೧

ಕಾವ್ಯಕೆ ಗುರುವೆನಿಸಿ ರಚಿಸಿದಕೆ
ಜೀವ ತುಂಬುವ ಪುಣ್ಯಕಾರ್ಯದಿ
ಭಾವಪರವಶರಾಗಿ ಗಮಕಿಯ ಹಾಡ ಹರಿಸಿದಿರಿ
ಯಾವ ವರವಿದು ಕಂಠದಾನದ
ದಾವ ಪರಿಯಿದೆನುತ ಜನನುಡಿಯೆ
ಕಾವ ಕೇಶವಮೂರ್ತಿ ಸಾರ್ಥಕ ನಿಮ್ಮ ಹೆಸರೆಂಬೆ ೨

**ಶ್ರೀ ಮಾರ್ಕಂಡೇಯ ಅವಧಾನಿಗಳಿಗೆ**

ಭಳಿರೆ! ಭಾಪುರೆ! ಭಾಷೆಯೊಪ್ಪಿರೆ
ಭಲರೆ! ಬುಧಜನ ಶಿರವತೂಗಿರೆ
ತಲೆಗೆ ಹೊಳೆಯದ ವೊಳಪದಾರ್ಥವ ಹೊಕ್ಕು ಹೊರತೆಗೆದು
ಸಲಿಲ ಪಾನದ ಹಾಗೆ ನಿಜಪದ
ಬಲೆಯ ನೇಯುತ ಕವಿಯ ಕಾವ್ಯಕೆ
ನೆಲೆಯ ನೀಡುತ ಬುದ್ಧಿ ಪಾಕವ ಮಾಡಿ ಬಡಿಸಿದಿರಿ ೧


ಸಾವಿರದ ಮುನಿಯ ಹೆಸರದು ದಿಟ
ಸಾವಧಾನದವಧಾನಿಯು ದಿಟ
ಕಾವ್ಯಸುಧಾಮೃತಕೆ ನುಡಿಜೇನ ಸವರಿದವರು ದಿಟ
ಆವ ಪರಿಯಲಿ ನೋಡಿದೊಡೆ ದಿಟ-
ಸೇವೆ ಕವಿಗಣಕಾಗಿರಲು ದಿಟ-
ಭಾವದಂಚೆಯನು ಜನಗಣಮನಕೊಯ್ದು ತಾವು ದಿಟ ೨

# ೭. ಶ್ರೀಮುಖದಲ್ಲಿ ಶ್ರೀಮುಖ

***ಹಿರೇಮಗಳೂರು ಕಣ್ಣನ್***

ಶ್ರೀ ಕೇಶವ ಮಾರ್ಕಂಡೇಯ
ಕನ್ನಡ ಸರಸ್ವತಿಗೆ
ಲೋಚನದ್ವಯ.
ತುಟಿ ತೆರೆದರೆ ಸಾಕು
ಲಕ್ಷ್ಮೀಶ, ಕುಮಾರವ್ಯಾಸರ
ಸಾಕ್ಷಾತ್ಕಾರವಯ್ಯಾ!
ವ್ಯಾಸ ವಾಲ್ಮೀಕಿಯರಂತೆ
ಊರ್ವರ ಹೃದಯ - ಸದಯ
ಇವರಿಂದ ಕನ್ನಡಕೆ ಅಭಯ.
ಕೇಳುತ್ತಿದ್ದರೆ ಗಮಕ ಸುಧೆ
ಕವಿ ಕಾವ್ಯಗಳು ಪ್ರವೇಶಿಸಿದಂತೆ ಪರಕಾಯ.
ಕಂಚಿನ ದನಿಯ ರಂಗೂನ್
ಗಂಟೆಯ ನಾದ ಮಾಧುರ್ಯ
ವೇದಮಯ, ಮಂತ್ರಮಯ, ರುದ್ರಮಯ, ಚಮಕಮಯ,
ನಮಕ ಮಯ ಸರ್ವಂ ಗಮಕಮಯ.
ಲವಕುಶರ ಸಂಗೀತದಂತೆ
ಲಯಮಯ ಕುಶಲಮಯ

ಆಗುವುದು ಜೀವ ಸಾಕೇತ ಹೃದಯ.
ಹುಣ್ಣಿಮೆಗೆ ಸಮುದ್ರ ಉಕ್ಕೇರಿ
ಅಲೆ ದಡಕ್ಕಪ್ಪಳಿಸಿದಂತೆ ವೀರರಸ
ವರ್ಣನೆ ವರ್ಣಮಯ.
'ಶಿವ'ನೆ ಮೊಗ್ಗಾಗಿ ಅರಳಿ ಮತ್ತೇರಿ
ಹೊಸ'ಹಳ್ಳಿ'ಯಲ್ಲಿ ಮತ್ತುದಿಸಿಬಂದಂತೆ
ಮಾರ್ಕಂಡೇಯ ಕೇಶವ ಗಮಕಾಲಯ.
ಹೊಸ ಚಿಗುರು ಹಳೆ ಬೇರು ಬೆಸೆದಂತೆ
ಇಳೆಗೆ ನಮ್ಮೊಡನೆ *ಈ*
ಜೋಡಿ ಸಮನ್ವಯ !!
ವರ್ಷಕಾಲ 'ವರ್ಷ' ಹರ್ಷದಲಿ ಸುರಿದು
ಕೆರೆ ಕಟ್ಟೆ ತುಂಬಿ ಕೋಡಿಬಿದ್ದಂತೆ
ಕನ್ನಡ ಕಾವ್ಯ ಕೈಂಕರ್ಯ.
ಜೀವೇಮ ಶರದಶ್ಶತಂ . . . ನಂದಾಮ ಶರದಶ್ಶತಂ
ಮೋದಾಮ ಶರದಶ್ಶತಂ . . . ಭವಾಮ ಶರದಶ್ಶತಂ
ಎಂದು *ಈ* ಗಮಕ ಗಂಧರ್ವರಿಗೆ ಎಲ್ಲೆಡೆಯಿಂದ ವೇದಮಯ!



***184.** ಗಮಕ ಗಂಧರ್ವ ಶ್ರೀ ಎಚ್.ಆರ್. ಕೇಶವಮೂರ್ತಿಗಳ ವಾಚನಕ್ಕೆ ವ್ಯಾಖ್ಯಾನ ಶ್ರೀ ಮಾರ್ಕಂಡೇಯ ಅವಧಾನಿಗಳಿಂದ. ಊರ್ವಶೀ ಪ್ರಸಂಗ*

# ೮. ಗಮಕದ 'ವಾಗರ್ಥ'ರು

ಡಾ. ಜ್ಯೋತ್ಸ್ನಾ ಕಾಮತ್


ಶ್ರವಣ ಪರಂಪರೆಯೇ ಭಾರತೀಯ ಸಂಸ್ಕೃತಿಯ ಜೀವಾಳ. 'ಕೇಳಿ ಕಲಿ, ನೋಡಿ ಕಲಿ,' ಎಂಬುದನ್ನು ಜನಸಾಮಾನ್ಯರು ನಂಬಿದರೆ, 'ಕೆಲವಂ ಬಲ್ಲವರಿಂದ ಕಲ್ತು' ಎಂದು ಸೋಮೇಶ್ವರ ಕವಿ ಬೋಧಿಸಿದ. ನಮ್ಮ ದ್ರಷ್ಟಾರರು, 'ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' ಎಂಬ ಮಂತ್ರವನ್ನು ಆತ್ಮಸಾಕ್ಷಾತ್ಕಾರಕ್ಕಾಗಿ ಘೋಷಿಸಿದರು. ಸ್ವತಃ ಜೀವನದಲ್ಲಿ ರೂಢಿಸಿಕೊಂಡರು. ಹೀಗೆ ಕೇಳಿ, ತಿಳಿದುಕೊಳ್ಳುವ, ತಿಳಿದು ಬಾಳುವ ಕಲೆಯನ್ನು ಪಳಗಿಸಿಕೊಂಡ ನಮ್ಮ ಹಿರಿಯರು ಜನಸಾಮಾನ್ಯರ ತಿಳಿವಳಿಕೆಯನ್ನು ಹೆಚ್ಚಿಸುವ ಹಲವಾರು ಕಲೆಗಳನ್ನು ಬೆಳೆಸಿಕೊಂಡರು. ಕಥೆ, ಹರಿಕಥೆ, ಗಮಕ ಕಲೆ ಮುಂತಾದವುಗಳು ಇವುಗಳಲ್ಲಿ ಕೆಲವು.

ಪ್ರಾಚೀನ ಕಾಲದಿಂದ, ಈ ಶತಕದ ಪ್ರಾರಂಭದ ದಶಕಗಳವರೆಗೂ ಪರೋಕ್ಷ ಶಿಕ್ಷಣ ಮತ್ತು ಮನರಂಜನೆಯ ಮಾಧ್ಯಮವಾಗಿ ಗಮಕ ಕಲೆ ಬೆಳೆದು ಬಂದಿತು. ಅಕ್ಷರಾಭ್ಯಾಸ ಹೊಂದಿದವರಿಗೂ, ಅದರ ಸೌಕರ್ಯವಿಲ್ಲದವರಿಗೂ ಕೂಡಿಯೇ ಮನರಂಜನೆಯ ಜತೆಗೆ ಕವಿ-ಕಾವ್ಯ ಪರಿಚಯದ ಮಾಹಿತಿ ಒದಗಿಸುವ ಮಾಧ್ಯಮವಾಯಿತು. ಲಕ್ಷ್ಯವಿಟ್ಟು ಕೇಳಿಯೇ ಗದುಗಿನ ಭಾರತ, ಜೈಮಿನಿ ಭಾರತ, ಬಸವಪುರಾಣಾದಿ ಪ್ರಾಚೀನ ಕೃತಿಗಳನ್ನು ಅರಿತುಕೊಂಡು, ಸಂದರ್ಭಾನುಸಾರ ಅವನ್ನು ಉದ್ಧರಿಸಬಲ್ಲ, ನಿರಕ್ಷರಿಗಳಾದರೂ ಸುಸಂಸ್ಕೃತರಾದ ಹಳ್ಳಿಗರು ಎಲ್ಲೆಡೆ ಕಂಡು ಬರುತ್ತಿದ್ದರು. ಕಾರಣ, ಅವರಿಗೆಲ್ಲ ಕಾವ್ಯಾಸ್ವಾದದ ಸಾಂಗ ಪರಿಚಯ ನೀಡುತ್ತಿದ್ದವರು, ಸಾಹಿತ್ಯ-ಸಂಗೀತಗಳಲ್ಲಿ ಉತ್ತಮ ಕೃಷಿ ಮಾಡಿದ ಗಮಕಿಗಳೇ!

ಸಾಮಾನ್ಯ ಜನರ ಮನಸ್ಸನ್ನು ಅರಳಿಸುವುದೇ ಅಲ್ಲದೆ, ಅರಸರು ಮತ್ತು ಚಿಕ್ಕಪುಟ್ಟ ಸಾಮಂತರ ಓಲಗಗಳಲ್ಲೂ ಗಮಕಿಗಳು ಗೌರವದ ಸ್ಥಾನವನ್ನು ಹೊಂದಿರುತ್ತಿದ್ದರು. ಕವಿ, ಗಮಕಿ, ವಾದಿ, ವಾಗ್ಮಿಗಳು ರಾಜನ ದರ್ಬಾರದಲ್ಲಿ ಅಲಂಕಾರಪ್ರಾಯ ರಾಗಿರುತ್ತಿದ್ದು, ಕಂಠೀರವ ನರಸರಾಜ ಒಡೆಯರ ಓಲಗದಲ್ಲಿ ಸಂಸ್ಕೃತ - ಕನ್ನಡ ಕಾವ್ಯಗಳನ್ನು ವಾಚಿಸಬಲ್ಲ 'ಭಾರತಿ'ಗಳಿದ್ದರು. ಹಲವೆಡೆ ಪೌರಾಣಿಕರಿದ್ದರು. ಸಂದರ್ಭಾನುಸಾರವಾಗಿ ಕಾವ್ಯಗಳನ್ನು ವಾಚಿಸಿ ಜನಮನವನ್ನು ಸೂರೆಗೊಳ್ಳುವ ಕಲೆಯನ್ನು ಈ ಗಮಕಿಗಳೆಲ್ಲ ರಕ್ತಗತ ಮಾಡಿಕೊಂಡಿದ್ದರು. ಹೆಚ್ಚಾಗಿ ಆನುವಂಶಿಕವಾಗಿ ಬಂದ ಈ ಕಲೆ ಕಷ್ಟಸಾಧ್ಯವಾಗಿತ್ತು. ಹಲವಾರು ಸಂಸ್ಕೃತ - ಕನ್ನಡ ಕಾವ್ಯಗಳ ಆಳವಾದ ವ್ಯಾಸಂಗದ ಜತೆಗೆ ನವರಸಗಳನ್ನು ಮೂಡಿಸಲೂ ಸಹಾಯಕಾರಿಯಾಗಲು ಸಂಗೀತದ ಅಭ್ಯಾಸವು ಅತ್ಯವಶ್ಯವಾಗಿತ್ತು. ರಾಗಜ್ಞಾನದ ಸಾಧನೆಯಿಂದ ರಸ-ಭಾವಗಳ ಸಮನ್ವಯವನ್ನು ಕಾವ್ಯವಾಚನದ ಮೂಲಕ ಪ್ರದರ್ಶಿಸಿ, ಉತ್ತಮ ಗಮಕಿಯಾದವನು, ನೇರವಾಗಿ ಕೇಳುಗರ ಹೃದಯವನ್ನು ತಟ್ಟಬಲ್ಲವನಾಗಿದ್ದ. ಕಾವ್ಯ ರಸಾಸ್ವಾದನೆಯು ಪರಿಣಾಮಕಾರಿಯಾಗಲೆಂದು ಆತ ಸಂಗೀತವನ್ನು ಬಳಸುತ್ತಿದ್ದನೇ ಹೊರತು ತನ್ನ ಸಂಗೀತಜ್ಞಾನ ಪ್ರದರ್ಶನಕ್ಕಲ್ಲ. ಹೀಗಾಗಿ ಪಂಡಿತ - ಪಾಮರರೆಂಬ ಭೇದವೆಣಿಸದ ಸಂವೇದನಾಶೀಲ, ಸಾಹಿತ್ಯಪ್ರಿಯ ಗಮಕಿ ಸಾಮಾನ್ಯರಿಗೆ ತೀರ ಹತ್ತಿರದವನಾದ.



185. ಸಂಗೀತೋತ್ಸವದ ಉದ್ಘಾಟನೆಯ ಸಮಯ : ಶ್ರೀ ಎಚ್.ಆರ್. ಕೇಶವಮೂರ್ತಿ ಅವರ ಉಪಸ್ಥಿತಿ : ಶೃಂಗೇರಿ ಸಂಸ್ಥಾನದ ಆಡಳಿತಾಧಿಕಾರಿ ಶ್ರೀ ಗೌರಿಶಂಕರ್, ವಿದ್ವಾನ್ ಆರ್.ಕೆ. ಪದ್ಮನಾಭ, ವಿದ್ವಾನ್ ಎಚ್.ಕೆ. ವೆಂಕಟರಾಮ್



***186.* ಶಿವಮೊಗ್ಗದ ಉಷಾ ನರ್ಸಿಂಗ್ ಹೋಂನವರು ಶ್ರೀ ಮಾರ್ಕಂಡೇಯ ಅವಧಾನಿಗಳ ಅರುವತ್ತನೇ ಹುಟ್ಟುಹಬ್ಬದ ನೆನಪಿಗಾಗಿ ಕಟ್ಟಿಸಿದ ಧನ್ವಂತರಿ ಶ್ರೀ ಲಕ್ಷ್ಮೀನಾರಾಯಣ ದೇವಾಲಯ, ಶಿವಮೊಗ್ಗ**

ನನಗೆ ಇಂಥ ಅಪರೂಪದ ಕಲೆಯಾದ ಗಮಕದ ಬಗ್ಗೆ ಓದಿ, ಕಾವ್ಯ-ವಾಚನವನ್ನು ಬಾನುಲಿ ಮೂಲಕ ಕೇಳಿ ಪರಿಚಯವಿತ್ತು. ಆದರೆ ಗಮಕಿಗಳನ್ನು ಕಂಡು ಅವರ ವಾಚನವನ್ನು ಪ್ರತ್ಯಕ್ಷ ಆಸ್ವಾದಿಸುವ ಪ್ರಸಂಗಗಳು ಬಂದಿರಲಿಲ್ಲ. ೧೯೯೨ರ ರಾಜ್ಯೋತ್ಸವದ ಸಂದರ್ಭದಲ್ಲಿ ಬೆಂಗಳೂರು ಆಕಾಶವಾಣಿಯು 'ಗಮಕ ದುಂದುಭಿ' ಎಂಬ ಕಾವ್ಯ ವಾಚನ-ವ್ಯಾಖ್ಯಾನ ಕಾರ್ಯಕ್ರಮವನ್ನು ಏರ್ಪಡಿಸಿದಾಗ ಸನ್ಮಾನ್ಯ ಎಚ್.ಆರ್. ಕೇಶವಮೂರ್ತಿಯವರು ಪ್ರಸ್ತುತ ಪಡಿಸಿದ 'ದ್ರೋಣ ಪ್ರತಿಜ್ಞೆ'ಯ ಪ್ರಸಂಗವನ್ನು ಸಮಕ್ಷಮ ಕೇಳಿ ಆನಂದಿಸುವ ಅವಕಾಶ ಲಭಿಸಿತು. ಅವರ ಅಮೋಘ ಕಂಠಶ್ರೀಯ ಹರಹು, ಗಾನತನ್ಮಯತೆ, ಶ್ರುತಿ, ಗತಿ, ರಾಗ, ಗಮಕ, ವರ್ಣಗಳ ಜ್ಞಾನ, ಮುಖ್ಯವಾಗಿ ಆಯಾ ಪದ್ಯದ ಜೀವಾಳವನ್ನು ಎತ್ತಿ ತೋರಿಸುವ ಭಾವಾಭಿವ್ಯಕ್ತಿಯ ಪರಿಣತಿಯನ್ನು ಗಮನಿಸಿ ಬೆರಗಾಗಿ ಹೋಗಿದ್ದೆ. ಆಮೇಲೂ ಒಂದೆರಡು ಬಾರಿ ಅವರನ್ನು ಅನೌಪಚಾರಿಕವಾಗಿ ಭೇಟಿ ಮಾಡಿದಾಗ, ಅವರ ನಿರಾಡಂಬರ ಸರಳ ಜೀವನ, ಸೌಮ್ಯ ಸ್ವಭಾವ, ಕಾವ್ಯ ಪಾಂಡಿತ್ಯಗಳನ್ನು ಕಂಡುಕೊಳ್ಳುವ ಅವಕಾಶ ಸಿಕ್ಕಿತ್ತು.

ಶ್ರೀ ಕೇಶವಮೂರ್ತಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ಅವರ ವಾಚನಕ್ಕೆ ಯಾವ ಪೂರ್ವ ತಯಾರಿಯೂ ಬೇಕಿಲ್ಲ. ಎಂಥ ಸಂದರ್ಭದಲ್ಲೂ, ಯಾರೇ ವಿನಂತಿಸಿಕೊಂಡರೂ ಕೂಡಲೇ ಕಾವ್ಯ ಸಾಗರದಲ್ಲಿ ಧುಮುಕುತ್ತಾರೆ. ತಮ್ಮೊಂದಿಗೆ ಕೇಳುಗರನ್ನೂ, ಮೈಮರೆಸಿ ಬಿಡುತ್ತಾರೆ.  ಕಣ್ಣುಮುಚ್ಚಿಕೊಂಡು ಕೇಳುತ್ತಿದ್ದರೆ, ಅವರು ವಾಚಿಸುತ್ತಿರುವ ಭಾರತ ಪ್ರಸಂಗದ ಪಾತ್ರಗಳೇ ನಮ್ಮ ಕಣ್ಣೆದುರು ನಲಿಯುತ್ತಿರುತ್ತವೆ. ಅದೊಂದು, ಶಬ್ದಗಳಲ್ಲಿ ಮೂಡಿಸಲಾಗದ ಅಪೂರ್ವ ಅನುಭವ. "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು!" ಎಂಬುದು ಕುವೆಂಪು ವಾಣಿ. ಕೇಶವಮೂರ್ತಿ ಧ್ವನಿಯಲ್ಲಿ ಕುಮಾರವ್ಯಾಸ ವಾಣಿ ನಿಂತಿದೆ, ಅದನ್ನು ಕೇಳುತ್ತಿದ್ದರೆ ದ್ವಾಪರಯುಗ ಕಣ್ಣಿಗೆ ಕಟ್ಟುತ್ತದೆಂದರೆ ಅತಿಶಯೋಕ್ತಿಯಲ್ಲ.

ಸನ್ಮಾನ್ಯ ಮಾರ್ಕಂಡೇಯ ಅವಧಾನಿಗಳ ಪರಿಚಯವೂ ಆಕಾಶವಾಣಿಯ ಮೂಲಕವೇ ಲಭಿಸಿತ್ತು. ವೇದಕಾಲೀನ ಸಮಷ್ಟಿ ಜೀವನದ ಕುರಿತಾದ ಸೋದಾಹರಣ ಭಾಷಣದ ಧ್ವನಿಮುದ್ರಣ ಮಾಡಿಕೊಡುವಂತೆ ಅವರನ್ನು ವಿನಂತಿಸಿಕೊಂಡಿದ್ದೆ. ಪ್ರಕಾಂಡ ಪಂಡಿತರಾದ ಅವರು ಆಯಾ ಋಕ್ಕುಗಳನ್ನು ಸಾಂದರ್ಭಿಕವಾಗಿ ಆಯ್ಕೆ ಮಾಡಿ, ಅದರೊಟ್ಟಿಗೆ ತಂದ ಸಾಮಯಿಕತೆ ಅಚ್ಚರಿಗೊಳಿಸಿತ್ತು. ವೇದಾಧ್ಯಯನ ಅವರಿಗೆ ಉಸಿರಾಡಿದಷ್ಟು ಸುಲಭವಾದ ಸಾಧನೆಯೇ ಅಲ್ಲದೇ ಬಾಳಿನ ಒಂದು ಭಾಗವೂ ಆಗಿಬಿಟ್ಟಿದೆ. ಸಂಸ್ಕೃತವಾಙ್ಮಯದ ಎಲ್ಲ ಶಾಖೋಪಶಾಖೆಗಳ ಆಳವಾದ ಪರಿಚಯ ಅವರಿಗಿದೆ. ಯಾವ ಸಂದರ್ಭಕ್ಕೆ ಯಾವ ಮಂತ್ರ ಉಚಿತವೆಂದು ಕೇಳಿದರೆ ಕ್ಷಣಮಾತ್ರದಲ್ಲಿ ಉದ್ಧರಿಸಬಲ್ಲರು, ವ್ಯಾಖ್ಯಾನಿಸಬಲ್ಲರು.  ಅವರ ಪಾಂಡಿತ್ಯ ಆಳವಿದ್ದಷ್ಟೇ ವಿಶಾಲ. ಜತೆಗೆ ಸಾಮಯಿಕ ಸಮಸ್ಯೆಗಳಿಗೆ ಮಿಡಿಯುವ, ಅದಕ್ಕೆ ವೇದಕಾಲೀನ ಪರಿಹಾರ ಸೂಚಿಸುವ ಸಂವೇದನಶೀಲತೆಯೂ ಅವರಿಗಿದೆ.

ಗಮಕ ಕಲೆಯ ಸಂದರ್ಭದಲ್ಲಿ ಅವರು ಸಾಧಿಸಿಕೊಂಡ ವ್ಯಾಖ್ಯಾನ ಕಲೆಯೂ ಅಪೂರ್ವವಾಗಿದೆ.  ಮೂಲತಃ ಸಂಸ್ಕೃತದ ಘನವಿದ್ವಾಂಸರು. ಕನ್ನಡದಲ್ಲೂ ಅಷ್ಟೇ ನಿರರ್ಗಳವಾಗಿ ವ್ಯಾಖ್ಯಾನಿಸಬಲ್ಲರು. ಕೇಶವಮೂರ್ತಿಗಳ ಕಾವ್ಯವಾಚನ ಮತ್ತು ಅವಧಾನಿಗಳ ವ್ಯಾಖ್ಯಾನ, ಹಾಲು-ಜೇನು ಬೆರೆತಂತೆ. ಕವಿವಾಣಿಯನ್ನು 'ಉಗ್ಗಡಿಸುವ' ಮತ್ತು ಅದನ್ನು ಅರ್ಥೈಸುವ ವಿಶೇಷ ಶಕ್ತಿಯನ್ನು ಪಡೆದ *ಈ* ಪಂಡಿತದ್ವಯರು ಗಮಕ ಕಲೆಯ ವಾಗರ್ಥದ ಪ್ರತೀಕ.

ದುರ್ದೈವದ ಮಾತೆಂದರೆ ಅವರ ಪಾಂಡಿತ್ಯ ಮತ್ತು ವಿಶೇಷ ಪರಿಣತಿಗಳಿಗೆ ಸಲ್ಲಬೇಕಾದ ಗೌರವ-ಪ್ರಚಾರ-ಪ್ರಸಿದ್ಧಿಗಳು ಸಂದಿಲ್ಲ. ಸಾಂಪ್ರದಾಯಿಕ ಕಲೆಗಳಿಗೆ ಸರಕಾರಿ ಸಹಾಯ-ಪ್ರೋತ್ಸಾಹಗಳು ಅತ್ಯಲ್ಪ. ಹಿಂದೆ ಜನತೆಯೇ ಬಿಚ್ಚುಮನಸ್ಸಿನಿಂದ ತನ್ನದನ್ನಾಗಿಸಿಕೊಂಡ ಗಮಕದ ಶ್ರವಣಕಲೆ, ಈಗ ಅಸಡ್ಡೆ - ಅಲಕ್ಷ್ಯಗಳಿಗೆ ಗುರಿಯಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ, ದೂರದರ್ಶನ ವಿಶ್ವಜಾಲದ ಕೃತ್ರಿಮ ರಂಜನೆ ಮತ್ತು ಎರವಲು ಪಡೆದ ಸಾಂಸ್ಕೃತಿಕ ಮೋಜುಗಳ ಎದುರು ಗಮಕ ಕಲೆ ಉಪೇಕ್ಷೆಗೆ ಪಾತ್ರವಾಗಿದೆ. ಇಷ್ಟಾದರೂ, ಪ್ರತಿಫಲಾಪೇಕ್ಷೆ ಇಲ್ಲದೇ ತಮ್ಮ ವಿದ್ವತ್ತೆ-ಪರಿಣತಿಗಳ ಮೂಲಕ ಸುತ್ತಲ ಸಮಾಜಕ್ಕೆ ರಂಜನೆಯ ಜತೆಗೆ ಅರಿವು ನೀಡುತ್ತಿರುವ ವಿದ್ವಾಂಸದ್ವಯರಿಗೆ ವಂದನೆಗಳು.

## ೯. ಅಪರೂಪದ ಜೋಡಿ

*ಬಸವಾನಿ ರಾಮಶರ್ಮಾ*

ಕರ್ನಾಟಕದ ಕಾವ್ಯವಾಚನ-ಪ್ರವಚನ ರಂಗದಲ್ಲಿ ಹೊಸಹಳ್ಳಿಯ **ಗಮಕ ಕಲಾರತ್ನ ಶ್ರೀ ಎಚ್.ಆರ್. ಕೇಶವಮೂರ್ತಿ**ಗಳವರು ಮತ್ತು ಮತ್ತೂರಿನ **ಪ್ರವಚನ ಧುರೀಣ ಶ್ರೀ ಮಾರ್ಕಂಡೇಯ ಅವಧಾನಿ**ಗಳ ಜೋಡಿಯು ರಾಜ್ಯಾದ್ಯಂತ ತುಂಬಾ ಪ್ರಸಿದ್ಧವಾದ ಜೋಡಿ ಎನಿಸಿದೆ. **"ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ"** ಎಂಬಂತೆ ಎಲ್ಲಿ ಅವರ ಭಾರತ ವಾಚನ ಕಾರ್ಯಕ್ರಮವಿದ್ದರೂ ಶ್ರೀ ಅವಧಾನಿಗಳಿದ್ದರೆ ಶ್ರೀ ಮೂರ್ತಿಗಳಿರುತ್ತಾರೆ, ಶ್ರೀ ಮೂರ್ತಿಗಳಿದ್ದರೆ ಅವಧಾನಿಗಳಿರುತ್ತಾರೆ.

ಗಮಕಿ ಶ್ರೀ ಕೇಶವಮೂರ್ತಿಗಳವರು ಪ್ರಸಿದ್ಧ ಗಮಕ ವಿದ್ವಾನ್ ವೆಂಕಟೇಶಯ್ಯನವರ ಪ್ರಮುಖ ಶಿಷ್ಯರು. ಶಾಸ್ತ್ರೀಯ ಸಂಗೀತ ಪರಿಣತರಾಗಿ ಕ್ರಮವಾಗಿ ಅವರು ಗುರುಮುಖದಿಂದ ಗಮಕ ಕಲಾಭ್ಯಾಸ ಮಾಡಿದವರಾಗಿದ್ದಾರೆ. ಆದ್ದರಿಂದಲೇ ಗಮಕ ಕಲೆಯ ಸೂಕ್ಷ್ಮ- ಮರ್ಮರಹಸ್ಯವನ್ನರಿತು ತಮ್ಮ ವಾಚನ ಕೌಶಲದಿಂದ ಜನಮನವನ್ನು ರಂಜಿಸಿ ಕುಶಲ ಗಮಕಿಗಳೆಂದು ದೇಶಾದ್ಯಂತ ಖ್ಯಾತಿ ಗಳಿಸಿದ್ದಾರೆ. ಶ್ರೀಯುತರು ಕಾವ್ಯದ ರಸಭಾವಗಳಿಗೆ ತಕ್ಕಂತಹ ರಾಗವನ್ನು ಸಂಯೋಜಿಸಿಕೊಂಡು ಮೃದು-ಮಧುರವಾಗಿ ವಾಚಿಸುವುದನ್ನು ಕೇಳಿ ಶ್ರೋತೃಗಳು ಆಹ್ಲಾದಭರಿತರಾಗುತ್ತಾರೆ.



**187.** *ಶ್ರೀ ಗಿರೀಶ್ ಕಾಸರವಳ್ಳಿ ಅವರೊಂದಿಗೆ ಶ್ರೀ ಎಚ್‌ಆರ್‌ಕೆ ಅವರಿಗೆ ಸನ್ಮಾನ : ರಾಜ್ಯಪ್ರಶಸ್ತಿ ಬಂದ ಸಂದರ್ಭ : ಕರ್ನಾಟಕ ಗಮಕ ಕಲಾ ಪರಿಷತ್, ಶಿವಮೊಗ್ಗ ಶಾಖೆ*

ಶ್ರೀ ಅವಧಾನಿಗಳ ನವರಸಭರಿತವಾದ ವಾಗ್ವಿಲಾಸವು ಅನ್ಯಾದೃಶವಾದುದು. ಘನ ವಿದ್ವಾಂಸರಾಗಿ ವಿಶೇಷ ಕಾರ್ಯ ಗೌರವವುಳ್ಳವರಾದರೂ, ನಿರಂತರ ಅಧ್ಯಯನಶೀಲರಾಗಿ ನಿತ್ಯವೂ ತಮ್ಮ ಪ್ರವಚನದಲ್ಲಿ ಹೊಸ - ಹೊಸ ಸಂಗತಿಗಳನ್ನು ಸೂಚಿಸುತ್ತಾರೆ. ದೈವದತ್ತ ಪ್ರತಿಭೆ ಹಾಗೂ ಮಹಾವಾಗ್ಮಿತೆಯನ್ನು ಪಡೆದಿರುವ ಶ್ರೀಯುತರು ಪ್ರವಚನ ಪ್ರೌಢಿಮೆಯಲ್ಲಿ ಪೂರ್ಣ ಸಫಲತೆಯನ್ನು ಸಾಧಿಸಿ ಸರ್ವಜನಪ್ರಿಯ ವ್ಯಾಖ್ಯಾನಕಾರರಾಗಿದ್ದಾರೆ.

ಶ್ರೀಯುತರು ತಮ್ಮ ಚಮತ್ಕಾರವಾದ ಮಾತಿನ ಮೋಡಿಯಿಂದ ಕಥಾ ಪಾತ್ರಗಳಿಗೆ

'ಉಸಿರು ತುಂಬುತ್ತಾರೆ, ಜೀವಕಳೆ ನೀಡುತ್ತಾರೆ' - ಕಾವ್ಯದ ಪಾತ್ರಗಳು ನಮ್ಮ ಮುಂದೆ ತೀರಾ ಸನಿಹದಲ್ಲಿಯೇ ಸುಳಿದಾಡುವ ಅನುಭವವುಂಟಾಗುತ್ತದೆ. ಗದಾಧಾರಿ ಭೀಮಸೇನನು ಹತ್ತಿರ ಬಂದಂತೆ ಭಾಸವಾಗಿ ನಾವು ಗಾಬರಿಯಿಂದ ಮೇಲೇಳುವ ಭಾವವುಂಟಾಗುತ್ತದೆ. ಧರ್ಮಜನನ್ನು ಕಂಡಂತಾಗಿ ಗೌರವವುಂಟಾಗುತ್ತದೆ. ಶ್ರೀಕೃಷ್ಣನನ್ನು ಹತ್ತಿರ ಕಂಡಂತಾಗಿ ಒಡನೆಯೇ ಎದ್ದು ನಮಸ್ಕರಿಸುವ ತವಕ ತಲೆದೋರುತ್ತದೆ. ಅವಧಾನಿಗಳ ಹೃದಯಸ್ಪರ್ಶಿ ಮಾತುಗಾರಿಕೆಯಿಂದ ಕಥೆಯ ಪಾತ್ರಗಳೊಡನೆ ನಮಗೆ ನೇರ ಸಂಬಂಧವುಂಟಾಗಿ ನಾವು ಕಥಾಪ್ರಸಂಗದಲ್ಲಿ ತನ್ಮಯರಾಗುತ್ತೇವೆ. ಶ್ರೀ ಅವಧಾನಿಗಳ ಕಥನ ಕೌಶಲದಿಂದ ನಾವು ಕಾವ್ಯ ರಸಗಂಗೆಯಲ್ಲಿ ಮಿಂದು ಪುಲಕಿತರಾಗುತ್ತೇವೆ. ಈ ಅಪರೂಪದ ಜೋಡಿಯ ವಾಚನ-ಪ್ರವಚನ ಕೇಳುವ ಯೋಗವು ಶ್ರೋತೃಜನ ಸೌಭಾಗ್ಯವೆನಿಸುತ್ತದೆ.



***188.** ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಉಪನ್ಯಾಸ - ಹೊಸಹಳ್ಳಿಯ ರಾಮಮಂದಿರ. ಅಧ್ಯಕ್ಷರಾಗಿ, ಸಹೃದಯ ಶ್ರೋತೃವಾಗಿ ನಾಲ್ಕು ಮಾತು.*

'ಸಮಾನಶೀಲವ್ಯಸನೇಷು ಸಖ್ಯಮ್' ಎಂಬ ಕವಿವಾಣಿಯಂತೆ ಇವರೀರ್ವರೂ ಸಮಾನ ಮನಸ್ಕರು. ಸಮಾನ ವ್ಯವಸಾಯಿಗಳು. ಈರ್ವರೂ ವೇದಾಧ್ಯಯನ ಸಂಪನ್ನರು. ಸಂಸ್ಕೃತ, ಕನ್ನಡ ಭಾಷಾ ತಜ್ಞರು. ಸ್ನೇಹಶೀಲ ಸಹೃದಯರು. ನಿತ್ಯ ಸಾಹಿತ್ಯಾಧ್ಯಯನಶೀಲರು. ಸಾಹಿತ್ಯದ ಹವ್ಯಾಸವೊಂದಲ್ಲದೇ ಬೇರಾವ ಹವ್ಯಾಸ (ಚಟ)ಗಳಿಲ್ಲದ ಸರಳ-ಸಜ್ಜನ ಮಹನೀಯರು. ದೇಶಾದ್ಯಂತ ಕನ್ನಡ ಕಾವ್ಯ ಪ್ರಸಾರದ ಮೂಲಕ ಭಾರತೀಯ ಸಂಸ್ಕೃತಿ ಪ್ರಚಾರ ನಡೆಸುವುದೇ ಅವರ ಪರಮಧ್ಯೇಯವಾಗಿದೆ.

ಮಾನ್ಯ ಮತ್ತೂರು ಕೃಷ್ಣಮೂರ್ತಿಗಳ ನೇತೃತ್ವದಲ್ಲಿ ಈ ಜೋಡಿಯು ರಾಷ್ಟ್ರದ ರಾಜಧಾನಿ ದಿಲ್ಲಿಯಲ್ಲಿಯೂ, ಅಲಹಾಬಾದ್ ನಗರದಲ್ಲಿಯೂ, ಭಾರತ ವಾಚನವನ್ನು ಜಯಪ್ರದವಾಗಿ ನಡೆಸಿ ಅಲ್ಲಿಯ ಕನ್ನಡ ಬಾಂಧವರು ಹಾಗೂ ಕನ್ನಡೇತರ ಸಹೋದರರ ಗೌರವವನ್ನು ಪಡೆದಿರುವುದು ನಮಗೆ ಹೆಮ್ಮೆ ಎನಿಸದಿರದು.

ಸ್ವತಃ ತಾವು ಕಾವ್ಯ ವಾಚನ-ಪ್ರವಚನಕಾರರಾಗಿ ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸುವುದರ ಜತೆಗೆ ಈ ಕಲೆಯ ನಿರಂತರ ಪ್ರಗತಿಗಾಗಿ ವಾಚನ-ಪ್ರವಚನಕಾರರ ಪಡೆಯನ್ನು ನಿರ್ಮಿಸುತ್ತಿರುವುದಕ್ಕಾಗಿ, ಈ ಜೋಡಿಗೆ ಕನ್ನಡಿಗರೆಲ್ಲರ ಕೃತಜ್ಞತಾಪೂರ್ವಕ ಅಭಿನಂದನೆಗಳು ಸಲ್ಲುತ್ತವೆ.

## ೧೦. ಗಮಕಕಲಾರಾಧಕ

***ವೈ.ಕೆ. ಶ್ರೀಕಂಠಯ್ಯ***

ಗಮಕಕಲೆ ನಮ್ಮ ನಾಡಿನ ಪ್ರಾಚೀನ ಕಲೆಗಳಲ್ಲೊಂದು. ಈ ಕಲೆಗೆ ಅತ್ಯವಶ್ಯವಾದುದು ಸಂಗೀತ ಮತ್ತು ಸಾಹಿತ್ಯ ಜ್ಞಾನ. ಇವೆರಡನ್ನೂ ಸಮತೋಲನದಲ್ಲಿ ಬೆರೆಸಿ ನಿರೂಪಿಸಿದಾಗಲೇ, ಶ್ರೋತೃಗಳ ಮನಸ್ಸಿಗೆ ಆನಂದವೆನಿಸುವುದು. ಬರಿಯ ಸಂಗೀತವೇ ಪ್ರಧಾನವಾದಾಗ ಸಾಹಿತ್ಯ ಕುಂಠಿತವಾಗಬಹುದು. ಸಾಹಿತ್ಯ ಪ್ರಧಾನವಾದಾಗ ಸಂಗೀತ ನೀರಸವಾಗಬಹುದು. ಈ ಎರಡು ಭಾಗಗಳನ್ನೂ ಹಿತಮಿತವಾಗಿ ಬೆರೆಸಿ, ವಾಚನಕ್ಕೆ ಆಯ್ದುಕೊಂಡ ಕಥಾವಸ್ತುವನ್ನು ಮನಮುಟ್ಟುವಂತೆ ನಿರೂಪಿಸುವುದೇ ನಿಜವಾದ ಗಮಕಕಲೆ.

ಶ್ರೇಷ್ಠಕಾವ್ಯಗಳಲ್ಲಿ ಪದ್ಯರೂಪದಲ್ಲಿರುವ ಪ್ರಕರಣಗಳನ್ನು ಕೇಳುವವರ ಮನಮುಟ್ಟುವಂತೆ ಮಾಡುವ ಈ ಮಹಾಕಲೆಯನ್ನು ಅನೇಕರು ಕರಗತ ಮಾಡಿಕೊಂಡಿದ್ದಾರೆ. ಈ ಕಲೆಯ ಬೆಳವಣಿಗೆ, ಇತಿಹಾಸಗಳಲ್ಲಿ ಹೆಚ್ಚು ಅರಿವಿಲ್ಲದ ನಾನು, ನಾನು ಕಂಡು ಕೇಳಿದ

Fst01: D:\Sanketi Uma Mysore\Book 5 Photos    Proof 1  19.05.05

ಕೆಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಇದರಲ್ಲಡಗಿರುವ ಆನಂದದ ಮಹತ್ತನ್ನು ಅನುಭವಿಸಿದ್ದೇನೆ.

ಶಿವಮೊಗ್ಗ ಜಿಲ್ಲೆಯ ಮತ್ತೂರು ಮತ್ತು ಹೊಸಹಳ್ಳಿ ಗ್ರಾಮಗಳಲ್ಲಿ ಈ ಕಲೆಯನ್ನು ಕರಗತ ಮಾಡಿಕೊಂಡ ಕೆಲವು ಮಹನೀಯರನ್ನು ಸ್ಮರಿಸುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಮತ್ತೂರಿನ ರಾಮಶಾಸ್ತ್ರಿಗಳು ಮತ್ತು ಲಕ್ಷ್ಮೀಕೇಶವಶಾಸ್ತ್ರಿಗಳು ಅನುಕ್ರಮವಾಗಿ ವಾಚನ ಮತ್ತು ವ್ಯಾಖ್ಯಾನಕಾರರಾಗಿ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಸಂಚರಿಸಿ, ಈ ಕಲೆಯ ಮಹತ್ತನ್ನು ತಮ್ಮ ಅಸಾಧಾರಣ ಪ್ರತಿಭೆಯಿಂದ ಪ್ರಚುರಪಡಿಸಿ ಶ್ರೋತೃಗಳ ಮನವನ್ನು ಗೆದ್ದು ಮೆಚ್ಚುಗೆ ಪಡೆದಿದ್ದಾರೆ. ರಾಜ್ಯಪ್ರಶಸ್ತಿ ವಿಜೇತ ಗಮಕಿ ವೆಂಕಟೇಶಯ್ಯನವರು ಈ ಪ್ರಾಂತ್ಯದಲ್ಲಿ ಹಲವಾರು ಗಮಕಿಗಳಿಗೆ ತರಬೇತಿ ಇತ್ತು ಪ್ರಸಿದ್ಧರಾಗಿದ್ದಾರೆ. ಅಲ್ಲದೆ ಅವರು ಶಿವಮೊಗ್ಗದಲ್ಲೂ ಗಮಕ ತರಗತಿಗಳನ್ನು ಕೆಲವು ಕಾಲ ನಡೆಸಿದ ನೆನಪು ನನಗೆ ಚೆನ್ನಾಗಿದೆ.

ಅವರಿಂದ ಪ್ರಭಾವಿತರಾಗಿ ತರಬೇತಿ ಪಡೆದ ಶ್ರೀ ಎಚ್.ಆರ್.ಕೇಶವ ಮೂರ್ತಿಗಳು ಸುಪ್ರಸಿದ್ಧ ಗಮಕಿಗಳು, ಅವರಿಗಿರುವ ಸಂಗೀತ, ಸಾಹಿತ್ಯ ಮತ್ತು ಸಂಸ್ಕೃತ ಜ್ಞಾನ ಅಪಾರವಾದದ್ದು. ಅವರ ಮನೆತನದವರೆಲ್ಲರೂ ಸಂಗೀತಜ್ಞರು. ವಾಚನ ಮಾಡುವಾಗ ಯಾವ ಅಡೆತಡೆಗಳಿಲ್ಲದೆ ಅನೇಕ ಅಪರೂಪದ ರಾಗಗಳನ್ನು ಸಂದರ್ಭೋಚಿತವಾಗಿ ಪ್ರಯೋಗಿಸಿ ತಮ್ಮ ಕಂಠಮಾಧುರ್ಯದಿಂದ ಹಾಗೂ ವಿದ್ವತ್ಪ್ರತಿಭೆಯಿಂದ ಜನರನ್ನಾಕರ್ಷಿಸಿದ್ದಾರೆ. ಈಚೆಗೆ ಅನೇಕ ಉದಯೋನ್ಮುಖ ಕಲಾಭ್ಯಾಸಿಗಳಿಗೆ ತರಬೇತಿ ನೀಡುತ್ತಾ ಬಂದು, ಹೊಸಹಳ್ಳಿ ಗಮಕಕಲಾ ಪರಿಷತ್ತಿನಲ್ಲಿ ಸಕ್ರಿಯಪಾತ್ರ ವಹಿಸಿ ಈ ಕಲೆಯ ಉನ್ನತಿಗಾಗಿ ದುಡಿಯುತ್ತಿದ್ದಾರೆ. ಕುಮಾರವ್ಯಾಸ ಭಾರತದ ಸಂಪೂರ್ಣ ಧ್ವನಿಮುದ್ರಣ ಕಾರ್ಯ ನೆರವೇರಿದ ಸಂದರ್ಭದಲ್ಲಿ **ಗಮಕ ಗಂಧರ್ವ** ಎಂಬ ಬಿರುದನ್ನು ಅಲ್ಲಿಯ ವಿದ್ವಜ್ಜನರು ದಯಪಾಲಿಸಿದ್ದಾರೆ. ಇದಲ್ಲದೆ ಹಲವಾರು ಸಮಾರಂಭಗಳಲ್ಲಿ ಅವರಿಗೆ ಸನ್ಮಾನ ಮಾಡಲಾಗಿದೆ.

ಇಂತಹ ಕಲಾವಿದರನ್ನು ನಮ್ಮ ಸರ್ಕಾರದವರು ಇನ್ನೂ ಗುರ್ತಿಸಬೇಕಾಗಿದೆ. ನಿಗರ್ವಿಗಳೂ, ಸರಳ ಸಜ್ಜನಿಕೆಯಿಂದ ಸತ್ಸಂಪ್ರದಾಯಬದ್ಧರಾಗಿ, ಜನಾನುರಾಗಿಗಳಾಗಿರುವ ಅವರಿಗೆ ಅರುವತ್ತು ವರ್ಷ ತುಂಬಿದೆ. ಈ ಸಂದರ್ಭದಲ್ಲಿ, ಪರಮಾತ್ಮನು ಅವರಿಗೆ ಆಯುರಾರೋಗ್ಯಾದಿ ಸಕಲ ಭಾಗ್ಯಗಳನ್ನೂ ಕರುಣಿಸಿ ಗಮಕ ಕಲಾಕ್ಷೇತ್ರಕ್ಕೆ ದೀರ್ಘ ಕಾಲ ಸೇವೆ ಸಲ್ಲಿಸುವಂತೆ ಮಾಡಲೆಂದು ಪ್ರಾರ್ಥಿಸುತ್ತೇನೆ- ಅವರಿಗೆ ಸಲ್ಲಬೇಕಾದ ಗೌರವ ಪ್ರಶಸ್ತಿಗಳು ಅವರನ್ನೇ ಹುಡುಕಿಕೊಂಡು ಬರಲೆಂದೂ ಆಶಿಸುತ್ತೇನೆ.



***189.** ಗಾಯನ ಸಮಾಜ : ಎಚ್‌ಆರ್‌ಕೆ ಅವರಿಗೆ ಸನ್ಮಾನ : ೨೨.೧೦.೨೦೦೦ : ವಿದ್ವಾನ್ ಟಿ.ವಿ. ಶಂಕರನಾರಾಯಣ್, ಚೆನ್ನೈ ಅವರೊಂದಿಗೆ*

# ೧೧. ಭಾವ ನಿರೂಪಕರು

*ಮತ್ತೂರು ಅಶ್ವತ್ಥ ನಾರಾಯಣ ಅವಧಾನೀ*



**190.** *ಹರಿದಾಸ ಸಾಹಿತ್ಯ ಸಮ್ಮೇಳನದಲ್ಲಿ ಎಚ್.ಆರ್.ಕೆ.ಗೆ ಪ್ರಶಸ್ತಿ ಪ್ರದಾನ. ಅವರ ಬಲಕ್ಕೆ ಮಾರ್ಕಂಡೇಯ ಅವಧಾನಿಗಳು, ಎಡಕ್ಕೆ ಮಳಗಿ ಜಯತೀರ್ಥಾಚಾರ್ಯರು*

ಸಂಸ್ಕೃತ ಮೂಲದ ಮಹಾಭಾರತವನ್ನು ಗದುಗಿನ ನಾರಣಪ್ಪನು ಸಿರಿಗನ್ನಡದ ಭಾಮಿನಿ ಷಟ್ಪದಿಯ ಪದ್ಯಮಾಲೆಯಾಗಿ ಪೋಣಿಸಿದ್ದಾನೆ. ಈ ಕರ್ಣಾಟ ಕಥಾಮಂಜರಿ ಗ್ರಂಥವನ್ನು ಓದುಗರು ಕೇವಲ ತಮ್ಮ ಚರ್ಮಚಕ್ಷುಗಳಿಂದ ಪಠಿಸಿದರೆ ಕುಮಾರವ್ಯಾಸನ ಹೃದಯವು ಪೂರ್ಣವಾಗಿ ಅನುಭವಕ್ಕೆ ಬರುವುದಿಲ್ಲ. ಅದನ್ನೇ ಗಮಕದಲ್ಲಿ ವಾಚನ-ವ್ಯಾಖ್ಯಾನ ರೂಪದಲ್ಲಿ ಕೇಳಿದಾಗ ಹೃದಯಭಾಷೆಯ ಜೀವರಸವು ಸಂಪೂರ್ಣವಾಗಿ ಹೊರಹೊಮ್ಮುತ್ತದೆ. ಇಂತಹ ಸುಂದರ ಗಮಕ ವಾಚನ - ವ್ಯಾಖ್ಯಾನ ಕಲೆಯು ಅವತಾರವೆತ್ತಿ ಪ್ರಾಯಶಃ ೭೫-೮೦ ವರ್ಷಗಳಾಗಿರಬಹುದು. ಸದ್ಯ ಈ ಕಲೆಯು ಸಾಕಾರ ಪರಿಪೂರ್ಣಮೂರ್ತಿಯಾಗಿ ನಿಂತಿದ್ದಾಳೆ. ಅಂತಹ ಸಾಕ್ಷಾತ್ ಸದ್ಗುಣ ಸುಚರಿತ ಬ್ರಹ್ಮಮೂರ್ತಿಗಳನ್ನು ವೇ.ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳಲ್ಲೂ ಶ್ರೀ ಕೇಶವಮೂರ್ತಿಗಳಲ್ಲೂ ಪ್ರತ್ಯಕ್ಷತಃ ಕಾಣುತ್ತಿದ್ದೇವೆ.

ನಮ್ಮ ಸಂಸ್ಕೃತಿಯೇ ಮೂರ್ತಿವೆತ್ತಂತಿರುವ ಪೂಜ್ಯ ಅವಧಾನಿಗಳು ಹಾಗೂ ಮೂರ್ತಿಗಳು ಕುಮಾರವ್ಯಾಸ ಭಾರತವನ್ನು ಹಾಡಿ ಹೊಗಳಿ ನಲಿದಾಗ ನಮಗೆ ಆಗುವ ಆನಂದವು ಕೇವಲ ಅನುಭವ ಮಾತ್ರ ಗಮ್ಯವಾದುದು. ಭೀಷ್ಮಭಕ್ತಿಯಲ್ಲಿ ಭೀಷ್ಮನ ಯುದ್ಧವೈಚಿತ್ರ್ಯವು ಶಬ್ದರಾಗದಲ್ಲಿ ಮೈದೋರಿದರೆ, ವ್ಯಾಖ್ಯಾನ ಕೌಶಲ ಕೇಳಿದ ಮೇಲೆ ಕಣ್ಮುಂದೆ ನಡೆಯುತ್ತಿರುವಂತೆ ಕಟ್ಟಿಬಿಡುತ್ತದೆ. ಕರ್ಣಮುಕ್ತಿಯಲ್ಲಿ 'ಕರ್ಣನಾರೆಂದ' ಕೇಳಿದಾಗ ಕಣ್ಣೀರಿಟ್ಟ ಭ್ರಾತೃಭಾವಪೀಡಿತ ಶ್ರೋತೃಜನರು ಭಾವಪರವಶರಾಗಿ ಗಂಟಲು ಕಟ್ಟಿ ಮೂಕಚಿತ್ರಿತರಾಗುತ್ತಾರೆ. ಕೃಷ್ಣಸಂಧಿಯ ರಾಜಕೀಯ ಚಾತುರ್ಯ, ಕೃಷ್ಣಸಾರಥ್ಯದ ಅಪರಿಮಿತ ಭಕ್ತಿ, ದ್ರೌಪದಿಯ ಸ್ವಯಂವರದ ಪರಿಹಾಸ ಶೃಂಗಾರ, ಅಕ್ಷಯವಸ್ತ್ರ ಪ್ರದಾನದ ಸಂದರ್ಭದಲ್ಲಿ ಅನ್ಯಾಯ ಪ್ರತಿಭಟನೆ, ಒಂದೇ ಎರಡೇ - ಎಲ್ಲಾ ಭಾವಗಳೂ ನಮ್ಮೀ ಗಮಕಿ ವ್ಯಾಖ್ಯಾತೃಗಳಲ್ಲಿ ಪೂರ್ಣವಾಗಿ ರಸಭರಿತವಾಗಿ ಬರುತ್ತವೆ. ವಿಶೇಷವಾಗಿ, ಮೂರ್ತಿಯವರ ಸಾಹಿತ್ಯಪ್ರಜ್ಞೆ, ರಾಗಸಂಚಾರ, ರಸಭಾವಕ್ಕೆ ತಕ್ಕ ರಾಗ ಜೋಡಣೆ, ಗಂಡು ಶ್ರೀಕಂಠ - ಇವೆಲ್ಲವೂ ಅನುಪಮವೂ ಅದ್ವಿತೀಯವೂ ಆಗಿವೆ.

ಪೂಜ್ಯ ಪುರೋಹಿತ ಅವಧಾನಿಗಳ ವ್ಯಾಖ್ಯಾನವು ಔಚಿತ್ಯಪೂರ್ಣ, ಅರ್ಥಗರ್ಭಿತ, ರಸಪಾಕಯುಕ್ತವಾಗಿ ನಾನಾ ಉಪಕಥೆಗಳಿಂದ ರಂಜಿತವಾಗಿ ನಾಟಕ ರೂಪದ ನಾರಣಪ್ಪನ ಭಾರತವೇ ಅವತಾರವಾಯಿತೆಂದು ತೋರುತ್ತದೆ.

ಅವಧಾನಿಮೂರ್ತಿಗಳಿಬ್ಬರೂ ಸರಳರು, ಸುಲಭರು; ಶುಭ್ರ ವೈದಿಕ ವೇಷದಿಂದ ಕೂಡಿ ಬ್ರಹ್ಮ ತೇಜೋಯುಕ್ತರಾಗಿದ್ದಾರೆ. ಸಕಲ ಲೌಕಿಕ ವ್ಯವಹಾರಗಳಲ್ಲೂ ಪರಿಪೂರ್ಣ ಜ್ಞಾನ ಉಳ್ಳವರು. ಅವರೀರ್ವರ ದರ್ಶನವೇ ನಮಗೆ ಅತೀವ ಆನಂದಕರ. ಯಾವ ಭೇದಭಾವವಿಲ್ಲದೇ ಎಲ್ಲರನ್ನೂ ಮಧುರವಾಗಿ ಮಾತಾಡಿಸಿ, ಸತ್ಕರಿಸಿ, ಸಂತಸವೀವ ಅವರನ್ನು ನಮ್ಮವರೆಂದು ಭಾವಿಸುವವರು ಭಾಗ್ಯಶಾಲಿಗಳು. ಅಜಾತಶತ್ರುಗಳೂ,

ಬಂಧುಜನ ಬಲದಾಯಕರೂ, ಸರ್ವಭೂತ ಹಿತೈಷಿಗಳೂ ಆದ ಅವರ ವಾಣಿಗಳೇ ನಿಜವಾಗಿ ನಮ್ಮ ಸಂಸ್ಕೃತಿಯ ಹಾರ, ಮಣಿ ಮತ್ತು ಮುತ್ತುಗಳಾಗಿ ಶೋಭಿಸುತ್ತಿವೆ. ಇವುಗಳಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಅವರ ಮನೆ, ಆತಿಥ್ಯ ನೀಡುವುದರಲ್ಲಿ ಅಗ್ರಮಾನ್ಯವಾಗಿದೆ. ಪುರೋಹಿತರ ಸ್ಥಾನಕ್ಕೆ ತಕ್ಕ ಗೌರವ, ಯೋಗ್ಯತೆ, ಸದ್ಗುಣಗಳು ಅವಧಾನಿಗಳಲ್ಲಿ ಸದಾ ನೆಲೆಸಿವೆ. ಅವರ ಸನ್ನಿಧಿಯೇ ಆನಂದದಾಯಕ, ಪಾಪನಾಶಕ, ತಾಪಹಾರಕ. ಅವರಿಂದಲೇ ಗಮಕ ವಾಚನ ವ್ಯಾಖ್ಯಾನ ಹೆಮ್ಮರವಾಗಿ ಬೆಳೆದುನಿಂತಿದೆ.




*191. ಬೆಂಗಳೂರಿನ ಗಾಯನ ಸಮಾಜದಲ್ಲಿ ಸನ್ಮಾನ : ಮತ್ತೂರು ಶ್ರೀ ಕೃಷ್ಣಮೂರ್ತಿ ಮತ್ತು ಹೊಸಹಳ್ಳಿ ಶ್ರೀ ಕೇಶವಮೂರ್ತಿ ಅವರಿಗೆ. ಉಪಸ್ಥಿತಿ : ಪ್ರೊ.ಬಿ.ಕೆ. ಚಂದ್ರಶೇಖರ್, ಸಚಿವರು, ಕರ್ನಾಟಕ ಸರ್ಕಾರ ; ಗಾಯನ ಸಮಾಜದ ಅಧ್ಯಕ್ಷ ಕಮಲನಾಥ್*

## ೧೨. ವಾಚನ-ಪ್ರವಚನ ಪರಿಣತರು

*ಹೊಸಬಾಳೆ ಸೀತಾರಾಮರಾವ್*

ಈ ಕಾಲದಲ್ಲಿ ಸಕಲಜನರೂ ತಮ್ಮ ದಿನನಿತ್ಯದ ಗಡಿಬಿಡಿಯ ಜೀವನದಲ್ಲಿ, ಶಾಂತಿ, ಸಮಾಧಾನ, ತೃಪ್ತಿ ಇವುಗಳನ್ನು ಪಡೆಯಲು ಉತ್ಸುಕರಾಗಿದ್ದಾಗ್ಯೂ, ಸಮಯಾವಕಾಶವಿಲ್ಲದೆ ತೊಳಲುತ್ತಿರುತ್ತಾರೆ. ಹಾಗಿದ್ದರೂ ಈ ಮಧ್ಯೆಯೇ, ಕೆಲವರು ಸಂಗೀತ, ಸಾಹಿತ್ಯ ಹಾಗೂ ಕಾವ್ಯರಸಾಸ್ವಾದನೆ ಇವುಗಳ ಕಡೆ ಗಮನಕೊಟ್ಟು, ತಮ್ಮ ಜೀವನವನ್ನು ಸುಂದರವಾಗಿ, ಸಮೃದ್ಧವಾಗಿ ಮಾಡಿಕೊಳ್ಳುತ್ತಾರೆ. ಕಾವ್ಯಾಮೃತ ರಸಾಸ್ವಾದ, ಸಜ್ಜನ ಸಲ್ಲಾಪ ಇವೆರಡೇ ಮನುಷ್ಯನಿಗೆ ಜೀವನದಲ್ಲಿ ಮಾರ್ಗದರ್ಶನ ಮಾಡಿ ಜೀವೋತ್ಕರ್ಷವನ್ನುಂಟು ಮಾಡುವುದು ಎಂಬ ಹಿರಿಯರ ಅನುಭವೋಕ್ತಿಯು ನಿತ್ಯಸತ್ಯವಾಗಿರುತ್ತದೆ. ಆ ದೃಷ್ಟಿಯಿಂದ, ಹಿಂದಿನ ಮಹಾಕಾವ್ಯಗಳನ್ನು ಅಭ್ಯಾಸ ಮಾಡುವ, ವಾಚನಮಾಡುವ ಮತ್ತು ಕೇಳುವ ಅಭಿರುಚಿಯುಳ್ಳ ಸಹೃದಯವರ್ಗವು ವಿದ್ಯಾವಂತರಲ್ಲಿ ಬೆಳೆಯಬೇಕಾದದ್ದು ಅತ್ಯವಶ್ಯವಾಗಿದೆ. ಈ ಸಾರಸ್ವತ ಆಸ್ತಿಯನ್ನು ಉಳಿಸುವುದರಿಂದ, ಬಳಸುವುದರಿಂದ, ನಾವೂ ಉಳಿಯುತ್ತೇವೆ; ಸಾಂಸ್ಕೃತಿಕವಾಗಿ ಬೆಳೆಯುತ್ತೇವೆ. ಭಾರತೀಯರಾಗಲು ಅರ್ಹರಾಗುತ್ತೇವೆ.



**192.** *ತರುಣ ಮಾರ್ಕಂಡೇಯ*

"ರಾಮಚಾರಿತ್ರ ಪಠನಾಭ್ಯಾಸ ಯೋಗದಿಂ"ದ ಶ್ರೀರಾಮಪುತ್ರರಾದ ಕುಶಲವರು ಸರ್ವಶಕ್ತಿಯನ್ನೂ ಪಡೆದರು ಎಂಬ ವರಕವಿ ಲಕ್ಷ್ಮೀಶನ ವಾಣಿ ಹಾಗೂ "ವಿದ್ಯಾಪರಿಣತರ ಅಲಂಕಾರ" ಎಂಬ ವರಕವಿ ಕುಮಾರವ್ಯಾಸನ ಅಮರೋಕ್ತಿ ಇವೆರಡು, ನಮಗೆ-ಕನ್ನಡಿಗರಿಗೆ-ಶ್ರೀಮದ್ರಾಮಾಯಣ-ಮಹಾಭಾರತಗಳ ಬಗ್ಗೆ ಗೌರವ ಭಾವನೆಯನ್ನು ಸದಾ ನೆನಪುಂಟುಮಾಡುವ ನುಡಿಗಳಾಗಿವೆ. ಈ ಎರಡು ಮಹಾಕೃತಿಗಳನ್ನು ಆಧರಿಸಿ, ಬರೆದಂತಹ ಕನ್ನಡದ ಮಹಾಕಾವ್ಯಗಳನ್ನು ರಾಗಭಾವಬದ್ಧವಾಗಿ ವಾಚನ ಮಾಡಿ ಜನರಿಗೆ ಮುಟ್ಟಿಸುವಂತಹ ವಾಚನ ಕಲೆ- ಗಮಕ ಕಲೆ ಇಂದಿನ ಸನ್ನಿವೇಶದಲ್ಲಿ ಹೆಚ್ಚು ಆವಶ್ಯಕವಾಗಿದೆ ಎಂದೆನಿಸುತ್ತದೆ. ಈಗಿನ ಪ್ರಚಾರ ಮಾಧ್ಯಮದ ಹಾವಳಿಯಲ್ಲಿ ಗಮಕಕಲೆಯ ಪ್ರಸಾರವು ಕಷ್ಟವೆನಿಸಿದರೂ ನಾಡಿನಲ್ಲಿ ಅಲ್ಲಲ್ಲಿ ಸಹೃದಯ ಶ್ರೋತೃವರ್ಗವು ಇದ್ದೇ ಇದೆ. ಆದರೆ ಕನ್ನಡದ ಮಹಾಕಾವ್ಯಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ, ವಾಚನ ಮಾಡುವಂತಹ ಉತ್ತಮ ಗಮಕಿಗಳು, ಅವರೊಡನೆ ಒಳ್ಳೆಯ ರೀತಿಯಲ್ಲಿ ಅರ್ಥ ನಿರೂಪಣೆ ಮಾಡುವ ವಿದ್ವಾಂಸರು ಕಡಮೆಯಾಗುತ್ತಾ ಇದ್ದಾರೆ. ಆದರೂ ನಮ್ಮ ನಾಡಿನ ಕೆಲವು ಕಡೆಗಳಲ್ಲಿ ಉತ್ತಮ ಗಮಕ ಕಲಾವಂತರನ್ನು, ಉತ್ತಮ ವ್ಯಾಖ್ಯಾನಕಾರರನ್ನು ಕಾಣಬಹುದಾಗಿದೆ.

ಕನ್ನಡನಾಡಿನಲ್ಲಿ ಶಿವಮೊಗ್ಗ ಜಿಲ್ಲೆಯು ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇಲ್ಲಿ ಸಾಹಿತ್ಯ, ಸಂಗೀತ, ಗಮಕ ಮೊದಲಾದ ವಿಷಯಗಳಲ್ಲಿ ನಿಷ್ಣಾತರು ಇದ್ದರು, ಈಗಲೂ ಇದ್ದಾರೆ. ಅದರಲ್ಲೂ ತುಂಗಾ ತೀರದ ಆಚೆ-ಈಚೆ ಇರುವ ಹೊಸಹಳ್ಳಿ - ಮತ್ತೂರು ಗ್ರಾಮಗಳು ನಮ್ಮ ನಾಡಿನಲ್ಲೇ ಏನು, ರಾಷ್ಟ್ರದಲ್ಲಿಯೇ ಸುಸಂಸ್ಕೃತ ಗ್ರಾಮಗಳಾಗಿವೆ. ಅಲ್ಲಿಯ ಜನರು ವೇದಾಧ್ಯಯನ, ಸಂಸ್ಕೃತ, ಸಾಹಿತ್ಯ, ಸಂಗೀತ ಇವುಗಳಲ್ಲಿ ಪರಿಣತರು; ಹಾಗೆಯೇ ಗಮಕ-ವಾಚನ-ನಿರೂಪಣೆಗಳಲ್ಲಿಯೂ ಸಿದ್ಧಹಸ್ತರು. ನಾಲ್ಕೈದು ದಶಕಗಳ ಮೊದಲೇ, ಅಲ್ಲಿಯ ಪ್ರಸಿದ್ಧ ವಾಚನಕಾರರಾಗಿದ್ದ ಶ್ರೀ ರಾಮ ಶಾಸ್ತ್ರಿಗಳು, 'ಪ್ರವಚನ ಚಕ್ರವರ್ತಿ' ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ರಾಜ್ಯದ ಎಲ್ಲ ಕಡೆ ಈ ಕಲೆಯನ್ನು ಸಂಸ್ಕೃತಿ ಪ್ರಸಾರದ ದೃಷ್ಟಿಯಿಂದ ವ್ಯಾಪಕ ಪ್ರಚಾರ ಮಾಡಿ ಕೀರ್ತಿಯನ್ನು ಪಡೆದರು ಎಂಬುದು ಸರ್ವವಿದಿತವಾಗಿದೆ. ಈಗಲೂ ಆ ಗ್ರಾಮಗಳಲ್ಲಿ ಅದೇ



**193.** *ಪ್ರಶಸ್ತಿ: ಅತ್ತಿಮಬ್ಬೆ ಪ್ರತಿಷ್ಠಾನ : ಶ್ರೀ ಮತ್ತೂರು ಕೃಷ್ಣಮೂರ್ತಿಗಳು, ಶ್ರೀ ಎಚ್.ಆರ್. ಕೇಶವಮೂರ್ತಿಗಳು ; ಅಧ್ಯಕ್ಷ ಜಿ. ನಾರಾಯಣ್ ಅವರ ಉಪಸ್ಥಿತಿ*


ಪರಂಪರೆಯನ್ನು ನೋಡಬಹುದಾಗಿದೆ.

ಪ್ರಕೃತ, ಅರುವತ್ತು ವರುಷ ತುಂಬಿರುವ ಗಮಕ ಗಂಧರ್ವ ಶ್ರೀ ಹೊಸಹಳ್ಳಿ ಕೇಶವಮೂರ್ತಿಯವರು ಹಾಗೂ ವ್ಯಾಖ್ಯಾನ ಚತುರ ಮತ್ತೂರು ಶ್ರೀ ಮಾರ್ಕಂಡೇಯ ಅವಧಾನಿಗಳು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಮಹನೀಯರಾಗಿರುತ್ತಾರೆ.

ಶ್ರೀ ಕೇಶವಮೂರ್ತಿಯವರನ್ನು ನಾನು ಅನೇಕ ವರ್ಷಗಳಿಂದ ಬಲ್ಲೆ. ಪ್ರಸಿದ್ಧ ಗಮಕಿಗಳಾದ ಕೆ.ಎಸ್. ವೆಂಕಟೇಶಯ್ಯನವರು, ಅವರಿಗೆ ಮತ್ತು ನನಗೆ ಗಮಕ ವಿದ್ಯೆಯನ್ನು ಬೋಧಿಸಿದ ಗುರುಗಳು. ಶ್ರೀ ಕೇಶವಮೂರ್ತಿಯವರು ಸರಳರು, ಸಹೃದಯ ಸಜ್ಜನರು, ಸದಾಚಾರ ಸಂಪನ್ನರು. ಗಮಕವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಸಾಹಿತ್ಯಜ್ಞಾನವೂ ಚೆನ್ನಾಗಿದೆ. ಕೇಳುಗರ ಹೃದಯವನ್ನು ನೇರವಾಗಿ ಮುಟ್ಟುವಂತಹ ಇಂಪಾದ ವಾಚನ ಅವರದು. ಬಹಳ ಜನ ಶಿಷ್ಯರಿಗೆ ಈ ಕಲೆಯನ್ನು ಬೋಧಿಸಿ ತಯಾರು ಮಾಡಿದ್ದಾರೆ. ಇಡೀ ಕುಮಾರವ್ಯಾಸ ಭಾರತದ ಪದ್ಯಗಳನ್ನು, ಪ್ರವಚನ ಚಕ್ರವರ್ತಿ ಲಕ್ಷ್ಮೀಕೇಶವ ಶಾಸ್ತ್ರಿಗಳ ನಿರೂಪಣೆಯೊಂದಿಗೆ ಹಾಡಿ, ಧ್ವನಿ ಸುರುಳಿಗಳನ್ನು ತಯಾರಿಸಲು ಸಹಕರಿಸಿದ್ದು ಅವರ ವಾಚನದ ಹಿರಿಮೆಯನ್ನು ತೋರಿಸುತ್ತದೆ. ಅದು ಅವರಿಗೆ ಪರಮ ಪುಣ್ಯಾವಕಾಶವೂ ಆಗಿದ್ದು, ಗಮಕ ಕ್ಷೇತ್ರದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿದೆ.

ಶ್ರೀ ಮಾರ್ಕಂಡೇಯ ಅವಧಾನಿಗಳೂ ನನಗೆ ಅನೇಕ ವರ್ಷಗಳಿಂದ ಪರಿಚಿತರಾಗಿದ್ದಾರೆ. ಅವರ ನಿರೂಪಣೆಯನ್ನು ಕೇಳಿ ಮೆಚ್ಚಿದ್ದೇನೆ. ಗಮಕ ವಾಚನಕ್ಕೆ ಅವರ ನಿರೂಪಣೆ ಸ್ವಲ್ಪ ಹೆಚ್ಚು ಎಂದೆನಿಸಿದರೂ, ಅವರ ವಿದ್ವತ್ಪೂರ್ಣ ವಿವರಣೆಯು ಶೈಲಿ ಎಲ್ಲರಿಗೂ ಪ್ರಿಯವಾಗುತ್ತದೆ ಹಾಗೂ ಗಮಕ ಕಲಾ ಪ್ರಸಾರಕ್ಕೆ ಹೆಚ್ಚು ಪೂರಕವಾಗುತ್ತದೆ. ಒಮ್ಮೆ ಕೇಶವಮೂರ್ತಿ ಅವರ ವಾಚನ, ಶ್ರೀ ಅವಧಾನಿಗಳ ವ್ಯಾಖ್ಯಾನ. ಸಂದರ್ಭ ಜೈಮಿನಿ ಭಾರತದಲ್ಲಿ ಅರ್ಜುನ-ಬಭ್ರುವಾಹನರ ಕಾಳಗಕ್ಕೆ ಮೊದಲು. ಬಭ್ರುವಾಹನನ ಆಸ್ಥಾನದ ವರ್ಣನೆಯನ್ನು ಅವಧಾನಿಗಳು 'ಹಗಲು - ರಾತ್ರಿಗಳ ಭೇದವಿಲ್ಲದೆ ಮೃದು ಬೆಳಕಿನಿಂದ ನಿಯಂತ್ರಿಸಲ್ಪಟ್ಟಿತ್ತು' ಎಂಬುದನ್ನು ಹೃದಯಂಗಮವಾಗಿ ವರ್ಣಿಸಿದರು. ಆ ಕಥಾಭಾಗದ ವರ್ಣನೆ ಈಗಲೂ ಆಗಾಗ ನನ್ನ ನೆನಪಿಗೆ ಬರುತ್ತಿರುತ್ತದೆ. ಯಥೋಚಿತ ಸಂದರ್ಭಗಳಲ್ಲಿ ಹಾಗೆ ನಿರೂಪಣೆ ಮಾಡುವುದರಿಂದ ಕವಿಯ, ಕಾವ್ಯದ ಹಿರಿಮೆಯು ಕೇಳುಗರಿಗೆ ತಿಳಿಯುವಂತಾಗುತ್ತದೆ.

ಇಂತಹ ಇಬ್ಬರು ಗಮಕ ಕಲಾವಂತರಿಗೆ, ವಿದ್ವಾಂಸರಿಗೆ ಅರುವತ್ತು ವರ್ಷ ತುಂಬಿರುವ ಈ ಸಂದರ್ಭದಲ್ಲಿ, ಆ ಇಬ್ಬರು ಮಹನೀಯರನ್ನೂ ಯೋಗ್ಯರೀತಿಯಲ್ಲಿ ಸಂಮಾನಿಸಬೇಕಾದ್ದು ಗಮಕ ಕಲಾಭಿಮಾನಿಗಳೆಲ್ಲರ - ಸಹೃದಯ ಕನ್ನಡಿಗರೆಲ್ಲರ ಕರ್ತವ್ಯವಾಗಿದೆ.



*194. 'ಬ್ರಹ್ಮ ಭೂರ್ಭುವಸ್ಸುವರೋಂ' ಪ್ರಾತಃ ಸಂಧ್ಯಾವಂದನೆ*

ಶ್ರೀ ಕೇಶವಮೂರ್ತಿಗಳ ಮಧುರವಾಚನ, ಶ್ರೀ ಮಾರ್ಕಂಡೇಯ ಅವಧಾನಿಗಳ ವಿದ್ವತ್ಪೂರ್ಣ ನಿರೂಪಣೆ - ಈ ಗಮಕ ಕಲಾ ಸೇವೆಯು ಇನ್ನೂ ಬಹುಕಾಲ ನಡೆಯುವಂತಾಗಲಿ. ಯುವ ಗಮಕಿಗಳು ಅವರಿಂದ ಸ್ಫೂರ್ತಿಯನ್ನು ಪಡೆಯಲಿ, ಈ ಗಮಕ ಕಲಾರಾಧನೆಯ ಪರಂಪರೆಯು ತುಂಗಾ ನದಿಯಂತೆ ನಿರಂತರವಾಗಿ ಪ್ರವಹಿಸುವಂತಾಗಲಿ. ನಮ್ಮ ನಾಡು, ರಾಷ್ಟ್ರ, ಶ್ರೀಯುತರಿಬ್ಬರ ಕಲಾಸೇವೆಯನ್ನು ಗುರುತಿಸಿ, ಗೌರವಿಸುವಂತಾಗಲಿ. ಉಭಯ ವಿದ್ವಾಂಸರಿಗೆ ನನ್ನ ಅಭಿನಂದನೆಗಳು, ಅಭಿವಂದನೆಗಳು.

# ೧೩. ಮತ್ತೊಂದೂರಿಲ್ಲ

***ಸಂತೋಷಕುಮಾರ ಗುಲ್ವಾಡಿ***

**ಸಂಸ್ಕೃತ ಗ್ರಾಮ** ಎಂದೇ ಹೆಸರುವಾಸಿಯಾದ ಮತ್ತೂರಿನಂಥ ಊರು ಸುಮಾರು ೮,೦೦,೦೦೦ ಹಳ್ಳಿಗಳಿರುವ ನಮ್ಮ ದೇಶದಲ್ಲಿ ಇನ್ನೊಂದು ಇರಲಾರದು. ಮತ್ತೂರು ಒಂದು ವಿಶಿಷ್ಟ ಗ್ರಾಮ. ಅದಕ್ಕೆ ತನ್ನದೇ ಸೊಗಸು-ಸೊಗಡುಗಳಿವೆ.

ಮತ್ತೂರು ಮತ್ತು ಹೊಸಹಳ್ಳಿ - *ಈ* ಜೋಡಿ ಗ್ರಾಮಗಳ ಹೆಸರು ಕೇಳಿದೊಡನೆ ನನಗೆ ಉತ್ತರಾದಿ ಸಂಗೀತದ ಜುಗಲಬಂದಿಯ ನೆನಪಾಗುತ್ತದೆ. ಇಲ್ಲಿಯ ಸಂಸ್ಕೃತ ಪರಂಪರೆ ಒಂದೇ ಅಲ್ಲ, ವೈದಿಕ ಪದ್ಧತಿಯನ್ನು ಅನೂಚಾನವಾಗಿ ನಡೆಸಿಕೊಂಡು ಬಂದ ರೀತಿಯೂ ಗಮನಾರ್ಹ. *ಈ* ಜೋಡಿಗ್ರಾಮಗಳು ಬೇರೆಬೇರೆ ಕ್ಷೇತ್ರಗಳಲ್ಲಿ ಹಲವು ಪ್ರತಿಭಾವಂತರನ್ನು ಕೊಡುವಷ್ಟು ಶ್ರೀಮಂತ. ಫಲಸಂಪದ್ಭರಿತವಾದ ಕೃಷಿ ಜಮೀನು ಪಡೆದ ಊರವರು ಚೆನ್ನಾಗಿ ಉಂಡು ತಿಂದು, ಆಧುನಿಕ ನಾಗರಿಕತೆಯ ಹುಚ್ಚು ಓಟಕ್ಕೆ ಬಲಿಯಾಗದೆ, ಒಂದಿಷ್ಟು ಆರಾಮವಾಗಿ ಕವಳ ಹಾಕುತ್ತಾ, ಜೋಕುಗಳನ್ನು, ಚೇಷ್ಟೆಗಳನ್ನು ಸಂಸ್ಕೃತದಲ್ಲೇ ಮಾಡುತ್ತಾ ಕಾಲ ಕಳೆಯುವ ರೀತಿ ಆಪ್ಯಾಯಮಾನವಾದುದು. ಪೇಟೆವಾಸಿಗಳು ಮತ್ಸರಪಡುವಂಥ ರೀತಿಯ ಶಾಂತ ಬದುಕು ಇಲ್ಲಿಯದು.



*195. ವೇದಘೋಷ: ಶ್ರೀ ಮಾರ್ಕಂಡೇಯ ಅವಧಾನಿಗಳು ಮತ್ತು ಶಿಷ್ಯವರ್ಗ*

*ಈ* ಊರುಗಳ ಅತಿ ದೊಡ್ಡ ಕೊಡುಗೆ ಎನಿಸಬಹುದಾದ ಗಮಕ ಕಲೆಯಂತೂ ಏಕಮೇವಾದ್ವಿತೀಯವಾದುದು. ಇದರ ಸತ್ತ್ವ, ವಿಸ್ತಾರ, ಖುಷಿಯ ಮಹತ್ತ್ವ ದೆಹಲಿಯ ಸಂಗೀತ ನಾಟಕ ಅಕಾಡೆಮಿಯವರಿಗೆ, ಅಥವಾ ಬೆಂಗಳೂರಿನ ಸಂಗೀತ ವಿಮರ್ಶಕರಿಗೆ ಏಕೆ ತಿಳಿದಿಲ್ಲ ಎಂಬುದೇ ಆಶ್ಚರ್ಯ.

ಗಮಕಕಲಾ ಗಾರುಡಿಗರೆಂದೇ ಪ್ರಸಿದ್ಧರಾಗಿರುವ ಕೇಶವಮೂರ್ತಿಗಳು ಹಾಗೂ ಅದನ್ನು ಬಲು ಸುಂದರವಾಗಿ ಅರ್ಥೈಸುವ ಮಾರ್ಕಂಡೇಯ ಅವಧಾನಿಗಳು ಕರ್ನಾಟಕದ ವಿಸ್ತಾರಕ್ಕೆ ಇದನ್ನು ಬೆಳೆಸುವ ಅವಕಾಶ ಏಕೆ ಬಂದಿಲ್ಲವೋ? ಬಹುಶಃ ಆಧುನಿಕ ಪ್ರಪಂಚದ ಪ್ರಚಾರ, ಪಬ್ಲಿಕ್ ರಿಲೇಶನ್ಸ್ ಹೀಗೆ ಯಾವ ಉಪದ್ವ್ಯಾಪಗಳಿಗೂ ಹೋಗದೆ, ಕೇವಲ ತಮ್ಮ ಆನಂದಕ್ಕಾಗಿ, ಮನಸ್ಸಿನ ನೆಮ್ಮದಿಗಾಗಿ, ಊರಿನವರ ಖುಷಿಗಾಗಿ ಹಾಡುವ - ಅರ್ಥ ಹೇಳುವ *ಈ* ಪರಂಪರೆ ಉಳಿಯಬೇಕು, ಇನ್ನಷ್ಟು ಬೆಳೆಯಬೇಕು, ಬೆಳೆಸಬೇಕು, ಪ್ರಸಾರವಾಗಬೇಕು.

ಶಾಸ್ತ್ರೀಯ ಸಂಗೀತದ ಹಿನ್ನೆಲೆಯಲ್ಲೇ ಇರುವ ಗಮಕ ಕಲೆ ಹಾಗೂ ಸಾಹಿತ್ಯ - ಪುರಾಣ - ವೇದೋಪನಿಷತ್ತುಗಳ ನೆಲೆಗಟ್ಟಿರುವ ವ್ಯಾಖ್ಯಾನ ಕಲೆಗಳನ್ನು ಕ್ರಮಪ್ರಕಾರವಾಗಿ, ಪಾಠಪಟ್ಟಿಯಂತೆ ಕಲಿಸುವ ಒಂದು ವ್ಯವಸ್ಥೆಯನ್ನು ಮತ್ತೂರು ಹೊಸಹಳ್ಳಿ ಗ್ರಾಮದವರೇ ಏಕೆ ಮಾಡಬಾರದು? ಗುರುಕುಲ ಪದ್ಧತಿಯಲ್ಲಿ ಗಮಕ ಕಲೆಯ ಮತ್ತು ವ್ಯಾಖ್ಯಾನಕಾರರ ತರಗತಿಗಳನ್ನು ತೆರೆಯಬಹುದಲ್ಲವೇ ?

ಕೇಶವಮೂರ್ತಿ ಅವರ ಷಷ್ಟ್ಯಬ್ದಪೂರ್ತಿ ಸಮಾರಂಭ, ಸನ್ಮಾನ ಮತ್ತು ಮಾರ್ಕಂಡೇಯ ಅವಧಾನಿಗಳ ಸನ್ಮಾನ ಸಮಾರಂಭದಲ್ಲಿ, *ಈ* ಒಂದು ಸತ್ಸಂಕಲ್ಪ ಕಾರ್ಯಾಚರಣೆಗೆ ಬರಲಿ ಎಂದು ನಾನು ಹಾರೈಸುತ್ತೇನೆ. ಸರಕಾರವೇ ಮಾಡಬೇಕು, ಇತರರು ಮಾಡಬೇಕು ಎಂದು ಇನ್ನೊಬ್ಬರಿಗಾಗಿ ಕಾಯುವ ಬದಲು, ಮತ್ತೂರು-ಹೊಸಹಳ್ಳಿಯ




***196.*** *ಶ್ರೀ ಸಂತೋಷಕುಮಾರ ಗುಲ್ವಾಡಿ ದಂಪತಿಗಳನ್ನು ಆಶೀರ್ವದಿಸುತ್ತಿರುವುದು*

ಪ್ರತಿಭಾವಂತರು ಈ ಒಂದು ಕೆಲಸಕ್ಕೆ ಈ ಬಾರಿಯೇ ಶ್ರೀಕಾರ ಹಾಕಿದರೆ ಅದೊಂದು ಉತ್ತಮ ಹಾಗೂ ಅನುಕರಣೀಯ ಪರಂಪರೆ ಆದೀತು.

ಮತ್ತೂರಿನ ಅಸಂಖ್ಯ ಪ್ರತಿಭಾವಂತರು ನನ್ನ ಗಮನವನ್ನು ಸೆಳೆದರು. ಮತ್ತೂರು ಕೃಷ್ಣಮೂರ್ತಿಯವರು, ಅವರ ಅಣ್ಣ ಸಂಗೀತಗಾರ ಶಂಕರಮೂರ್ತಿಯವರು, ಡಾ.ನಂದಕುಮಾರ್, ಡಾ.ಸತ್ಯನಾರಾಯಣ-ಶಾಸ್ತ್ರಿ ಹೀಗೆ ಹಲವರಿಂದ ನನಗೆ ಮತ್ತೂರು ಹತ್ತಿರವಾಯಿತು, ಪ್ರಿಯವಾಯಿತು.

ಈ ಸಂಕೇತಿ ಬ್ರಾಹ್ಮಣರ ವಿಶಿಷ್ಟ ಭಾಷೆ, ಪದ್ಧತಿಗಳು, ಜೀವನ ಕ್ರಮಗಳು, ರುಚಿ ರುಚಿಯಾದ ಊಟ ತಿಂಡಿಗಳ ಪುಷ್ಕಳ ಪೊಗದಸ್ತು ಆಧುನಿಕ ರೀತಿಯಲ್ಲಿ ದಾಖಲೆಯಾಗಬೇಕು. ದೇಶದ ಹಲವು ಕಡೆಗಳಲ್ಲಿರುವ ಮತ್ತೂರು-ಹೊಸಹಳ್ಳಿಯ ಪ್ರತಿಭಾವಂತರು, ವಿಜ್ಞಾನಿಗಳು, ಸಂಗೀತಗಾರರು, ವಿದ್ವಾಂಸರು ಈ ಬಗ್ಗೆ ರಚನಾತ್ಮಕವಾಗಿ ಯೋಚಿಸಿ ಕಾರ್ಯಕ್ರಮಕ್ಕೆ ಇಳಿಯಬೇಕೆಂದು ನಾನು ಆಶಿಸುತ್ತೇನೆ; ವಿನಂತಿಸುತ್ತೇನೆ. ಈ ಕೆಲಸವನ್ನು ಸರಕಾರವೇ ಮಾಡಬೇಕು ಎಂಬುದು ಬಹುಶಃ ನಮ್ಮ ಹೊಣೆಯನ್ನು ತಪ್ಪಿಸಿಕೊಳ್ಳುವಂತೆ ಆಗುತ್ತದೆ. ಮತ್ತೂರು-ಹೊಸಹಳ್ಳಿಗಳ ಸ್ಮಂತಿಕೆ ಉಳಿಯಬೇಕಾದರೆ, ಅದು ಬೇರೆ ಎಲ್ಲ ಹಳ್ಳಿಗಳಂತೆ ಮತ್ತೊಂದೂರು ಆಗದೆ ವಿಶಿಷ್ಟವಾಗಿ ಚೈತನ್ಯಯುಕ್ತವಾಗಿ ಸ್ಪಂದಿಸಬೇಕಾದರೆ ಊರವರೇ ಮನಸ್ಸು ಮಾಡಬೇಕು. ಅದನ್ನು ಅನುಷ್ಠಾನಕ್ಕೆ ತರಬೇಕು. ಇದು ಮತ್ತೂರು-ಹೊಸಹಳ್ಳಿಯವರಲ್ಲಿ ನನ್ನ ವಿನಮ್ರ ಪ್ರಾರ್ಥನೆ.



***197.*** *ಗಮಕ ವಿದ್ವಾನ್ ಶ್ರೀ ತಿರುಮಲಾವಧಾನಿಗಳೊಂದಿಗೆ ವ್ಯಾಖ್ಯಾನ - ಶ್ರೀ ಮಾರ್ಕಂಡೇಯ ಅವಧಾನಿಗಳು*

# ೧೪. ಗಮಕ ಕೋಗಿಲೆ

*ಎಸ್. ನಾಗರಾಜ*

**ಮಲೆಗಳಲುಲಿಯುವ ಓ ಕೋಗಿಲೆಯೆ**
**ಬಲು ಚಲುವಿದೆ ನಿನ್ನೀ ಗಾನ**
**ಇಂಗ್ಲೀಷಿಗೆ ತರ್ಜುಮೆ ಮಾಡಿದರೆ**
**ದೊರೆವುದು ನೊಬೆಲ್ ಬಹುಮಾನ**



*198. ಸನ್ಮಾನ : ಶ್ರೀ ವಿದ್ಯಾಗಣಪತಿ ಸೇವಾಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿವಮೊಗ್ಗ*

ಕೋಗಿಲೆಯ ಉಲಿಯನ್ನು ಆಲಿಸಿದ ಕವಿ ಕುವೆಂಪು ಉದ್ಗರಿಸಿದ ರೀತಿ ಇದು. ಮಾನ್ಯ ಕೇಶವಮೂರ್ತಿಗಳ ಗಮಕ ವಾಚನವನ್ನು ಕೇಳುತ್ತಿದ್ದರೆ *ಈ* ನಾಲ್ಕು ಸಾಲುಗಳು ಪದೇ ಪದೇ ನನ್ನ ನೆನಪಿಗೆ ಬರುತ್ತವೆ. ಅದಕ್ಕೆ ಕಾರಣಗಳೆಂದರೆ, ಒಂದು, ಮಾನ್ಯ ಕೇಶವಮೂರ್ತಿಗಳು ಗಮಕ ಕಲಾ ಕ್ಷೇತ್ರದ ಕೋಗಿಲೆ ಎಂದು ಪ್ರಸಿದ್ಧರಾಗಿರುವುದು. ಮತ್ತೊಂದು, ಹೇಗೆ ಕೋಗಿಲೆಯ ಉಲಿಯನ್ನು ಇಂಗ್ಲಿಷಿಗೆ ಅನುವಾದಿಸಿದರೆ ನೊಬೆಲ್ ಬಹುಮಾನ ದೊರೆಯುತ್ತದೆ ಎಂದು ಕವಿ ಕುವೆಂಪು ಅಂದುಕೊಂಡಿದ್ದರೋ ಹಾಗೆ, ಮಾನ್ಯ ಕೇಶವಮೂರ್ತಿಗಳು ಗಮಕ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಬೇರಾವುದೇ ಜನಪ್ರಿಯ ಕಲಾಕ್ಷೇತ್ರದಲ್ಲಿ ಮಾಡಿದ್ದರೆ, ಅವರಿಗೆ ಅಂತಾರಾಷ್ಟ್ರೀಯ ಪುರಸ್ಕಾರ ದೊರೆಯುತ್ತಿತ್ತು ಎಂದು ನನಗೆ ಅನಿಸಿರುವುದು.

ಗಮಕ ಕಲೆಯು ಸಂಗೀತ ಮತ್ತು ಸಾಹಿತ್ಯಗಳ ಮಧುರ ಮಿಶ್ರಣ. *ಈ* ಮಿಶ್ರಣದಲ್ಲಿ ಸಂಗೀತದ ಪ್ರಮಾಣ ಎಷ್ಟಿರಬೇಕು, ಸಾಹಿತ್ಯದ ಪ್ರಮಾಣ ಎಷ್ಟಿರಬೇಕು ಎಂಬ ಬಗ್ಗೆ ವಿದ್ವಾಂಸರು ಹಲವು ಬಗೆಯಲ್ಲಿ ಚರ್ಚಿಸಿ ಹಲವು ಅಭಿಪ್ರಾಯಗಳನ್ನು ನೀಡಿದ್ದಾರೆ. ಆದರೆ ನನ್ನಂಥ ಪಾಮರನಿಗೆ ಇಂಥ ವಿದ್ವತ್ ಚರ್ಚೆಯಲ್ಲಿ ಆಸಕ್ತಿಯಿಲ್ಲ. ಗಮಕದಲ್ಲಿ ಸಂಗೀತ ಸಾಹಿತ್ಯಗಳು ಹೇಗೆ ಮಿಶ್ರಣಗೊಂಡಿರಬೇಕು ಎಂದು ಯಾರಾದರೂ ನನ್ನನ್ನು ಕೇಳಿದಲ್ಲಿ 'ಮಾನ್ಯ ಕೇಶವಮೂರ್ತಿಗಳ ವಾಚನದಲ್ಲಿ ಹೇಗಿದೆಯೋ ಹಾಗಿರಬೇಕು' ಎಂದು ಮಾತ್ರ ಹೇಳಬಲ್ಲೆ. ಮಾನ್ಯರಾದ ಕೇಶವಮೂರ್ತಿಗಳ ವಾಚನವನ್ನೇ ಆಧಾರವಾಗಿಟ್ಟುಕೊಂಡು ಗಮಕದ ವ್ಯಾಖ್ಯೆ, ವ್ಯಾಪ್ತಿಗಳನ್ನು ನಿರ್ಧರಿಸಿದರೆ ಹೆಚ್ಚು ಸಮರ್ಪಕವೇನೋ ಎನಿಸುವಷ್ಟು ಆದರ್ಶಪ್ರಾಯವಾಗಿದೆ ಅವರ ವಾಚನಕಲೆ.

ಮಾನ್ಯ ಕೇಶವಮೂರ್ತಿಗಳ ವಾಚನದ ಬಗ್ಗೆ ಬರೆಯುವಾಗ ಅವರ ಕಂಠಸಿರಿಯ ಬಗ್ಗೆ ಬರೆಯದಿರಲು ಸಾಧ್ಯವಿಲ್ಲ. ಕಂಠಸಿರಿ ಅವರಿಗೆ ದೈವದತ್ತವಾಗಿ ಬಂದ ವರ. ಸದಾ ಸವಿಗಾನವನ್ನೇ ನುಡಿಸುವ ಕೊಳಲನ್ನು ಅವರ ಕಂಠದಲ್ಲಿ ಆ ದೈವ ಅಳವಡಿಸಿದೆಯೇನೋ ಎನಿಸುತ್ತದೆ. ಕೋಗಿಲೆ ಹಾಡಲು ಚೈತ್ರವೇ ಬರಬೇಕು. ಆದರೆ *ಈ* ಗಮಕ ಕೋಗಿಲೆಗೆ ವರ್ಷದ ಹನ್ನೆರಡು ತಿಂಗಳೂ ಚೈತ್ರವೇ! ಹಗಲು-ರಾತ್ರಿಯೆನ್ನದೆ ಯಾವಾಗ ಕರೆದರೂ ಗಮಕ ವಾಚನಕ್ಕೆ ಅವರು ಸಿದ್ಧ. ಕಂಠದ ಆರೋಗ್ಯಕ್ಕಾಗಿ ಯಾವುದೇ ರೀತಿಯ ಪಥ್ಯ, ಆರೈಕೆಗಳನ್ನು ಮಾಡದಿದ್ದರೂ ಅವರ ಕಂಠ ಅವರೊಂದಿಗೆ ಸದಾ ಸಹಕರಿಸುತ್ತದೆ. ಹಾಗಾಗಿಯೇ *ಈ*ವರೆಗೆ ಅವರು ಯಾವ ಗಮಕ ಕಾರ್ಯಕ್ರಮವನ್ನೂ ಕಂಠದ ಅನಾರೋಗ್ಯದಿಂದಾಗಿ ತಪ್ಪಿಸಿಕೊಂಡಿಲ್ಲ.

ಇಷ್ಟಾದರೂ ಅವರ ಕಂಠಸಿರಿಯೇ ಅವರ *ಈ* ಮಟ್ಟದ ಸಾಧನೆಗೆ ಪೂರ್ಣಕಾರಣ ಎಂದು ಹೇಳಿದರೆ ಅದು ಅಪಚಾರವಾಗುತ್ತದೆ. ಕಂಠಸಿರಿಯಿಂದಲೇ ಎಲ್ಲ ಸಾಧನೆಯೂ ಸಾಧ್ಯವಾಗುವುದಿದ್ದಲ್ಲಿ, ಇಂದು ಕಂಠಸಿರಿ ಉಳ್ಳವರೆಲ್ಲ ಬಾಲಮುರಳಿಕೃಷ್ಣರೋ, ಲತಾ ಮಂಗೇಶಕರರೋ ಅಥವಾ ಕೇಶವಮೂರ್ತಿಗಳೋ ಆಗಿಬಿಡುತ್ತಿದ್ದರು. ತಮಗಿರುವ ಕಂಠಸಿರಿಯನ್ನು

ಕಲಾಮಾಧ್ಯಮವೊಂದಕ್ಕೆ ಅಳವಡಿಸಿ ಆ ಕಲೆಯ ಆವಶ್ಯಕತೆಗಳಿಗೆ ತಕ್ಕಂತೆ ಅದನ್ನು ದುಡಿಸಿಕೊಳ್ಳುವ ಕಲಾವಂತಿಕೆ ಇರುವವರು ಮಾತ್ರ *ಈ* ಎತ್ತರ ಮುಟ್ಟಲು ಸಾಧ್ಯ. ಕಂಠಸಿರಿ ಉಳ್ಳ ಒಬ್ಬ ಸಾಮಾನ್ಯನಿಗೂ, ಕಂಠಸಿರಿ ಉಳ್ಳ ಒಬ್ಬ ಮಹಾನ್ ಕಲಾವಿದನಿಗೂ ನಡುವಿನ ಅಂತರ ಇದೇ. ಇಂತಹ ಕಲಾತ್ಮಕತೆಯನ್ನು ಬಹು ಎತ್ತರದ ಮಟ್ಟದಲ್ಲಿ ಉಳ್ಳ ಮಹಾನ್ ಕಲಾವಿದರು ಮಾನ್ಯ ಕೇಶವಮೂರ್ತಿಗಳು.

ಗಮಕ ಕಲೆಯ ಬಹುಮುಖ್ಯ ಅಂಗಗಳು ಎರಡು: ಸಾಹಿತ್ಯ ಮತ್ತು ಸಂಗೀತ. ಹಾಗಾಗಿ ಗಮಕ ಕಲೆ ಉತ್ತಮವಾಗಿರಬೇಕಾದರೆ ಸಾಹಿತ್ಯ ಶುದ್ಧವಾಗಿರಬೇಕು ಹಾಗೂ ಸಂಗೀತ ಶುದ್ಧವಾಗಿರಬೇಕು. *ಈ* ಎರಡೂ ಅಂಶಗಳಲ್ಲಿ ಪ್ರಭುತ್ವ ಪಡೆದಿರುವ ಕೆಲವೇ ಗಮಕಿಗಳಲ್ಲಿ ಮಾನ್ಯ ಕೇಶವಮೂರ್ತಿಗಳೂ ಒಬ್ಬರು. ಯಾವುದೇ ಕಾವ್ಯ ಭಾಗವಾಗಲಿ, ವಾಚನ ಮಾತ್ರದಿಂದಲೇ ಅರ್ಥ ಸ್ಫುರಿಸುವಂತೆ ಸಾಹಿತ್ಯ ಶುದ್ಧವಾಗಿ ವಾಚಿಸುತ್ತಾರೆ. ಪದ ವಿಭಜನೆ ಮಾಡಿಕೊಳ್ಳುವ ರೀತಿ, ಅನ್ವಯಾರ್ಥ ಮಾಡಿ ವಾಚಿಸುವ ಪರಿ ಅನನುಕರಣೀಯ. ಸಾಹಿತ್ಯ ಕ್ಷೇತ್ರದಲ್ಲೇ ಹತ್ತಾರು ವರ್ಷ ಕೃಷಿ ಮಾಡಿದವರಾದರೂ ಹೊಸ ಕಾವ್ಯ ನೀಡಿದರೆ ಓದುವಲ್ಲಿ, ಪದ ವಿಭಾಗದಲ್ಲಿ ಎಡವಿಯಾರು, ಆದರೆ ಕೇಶವಮೂರ್ತಿಗಳು ಎಡುವುವವರಲ್ಲ. ತಾವು ಸ್ವತಃ ಕಾವ್ಯವನ್ನು ಅರ್ಥೈಸಿಕೊಂಡು ವಾಚಿಸುವುದರಿಂದ ಸಾಹಿತ್ಯ ಶುದ್ಧವಾಗಿರುತ್ತದೆ. ಅವರ ಸಾಹಿತ್ಯಪ್ರಭುತ್ವದ ಬಗ್ಗೆ ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಪುಸ್ತಕದಲ್ಲಿ ಮುದ್ರಣ ದೋಷವೇನಾದರೂ ಇದ್ದರೆ ತಿದ್ದಿಕೊಂಡು ವಾಚಿಸುತ್ತಾರೆಯೇ ಹೊರತು ತಪ್ಪು ವಾಚಿಸುವವರಲ್ಲ.



**199.** *ಎಚ್.ಆರ್.ಕೆ. : ರಾಜ್ಯಪ್ರಶಸ್ತಿಯ ಛಾಯಾಪ್ರತಿ*

ಅವರ ವಾಚನದಲ್ಲಿ ಸಾಹಿತ್ಯದಂತೆ ಸಂಗೀತ ಶುದ್ಧಿಯೂ ಸೇರಿರುವುದು ಒಂದು ವೈಶಿಷ್ಟ್ಯ. ಕೇವಲ ಹತ್ತಾರು ರಾಗಗಳನ್ನು ಮಾತ್ರ ಗಮಕಕ್ಕೆ ಅಳವಡಿಸಿ ವಾಚಿಸುತ್ತಿದ್ದ ಕಾಲದಲ್ಲಿ ಗಮಕ ಕ್ಷೇತ್ರವನ್ನು ಪ್ರವೇಶಿಸಿದ ಶ್ರೀಯುತರು ಅಕ್ಷರಶಃ ನೂರಾರು ರಾಗಗಳನ್ನು ಹೇಗೆ ಸಮರ್ಥವಾಗಿ ಗಮಕಕ್ಕೆ ಅಳವಡಿಸಬಹುದು ಎಂಬುದನ್ನು ಸಾಧಿಸಿ, ತೋರಿದ ಮಹನೀಯರು. ಶಾಸ್ತ್ರೀಯ ಸಂಗೀತಗಾರರೇ ಬಳಸಲು ಹಿಂಜರಿಯುವ ಕ್ಲಿಷ್ಟ ರಾಗಗಳನೇಕವನ್ನು ಗಮಕದಲ್ಲಿ ಸುಲಲಿತವಾಗಿ ಬಳಸಿ ಜನಪ್ರಿಯ ಗೊಳಿಸಿದ್ದಾರೆ. ಗಮಕಕಲಾ ಕ್ಷೇತ್ರಕ್ಕೆ ನೂರಾರು ರಾಗಗಳನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ರಾಗದ ಇಂಪಿನಿಂದಲೇ ಸಾವಿರಾರು ಅಭಿಮಾನಿಗಳನ್ನು ಗಮಕಕ್ಷೇತ್ರಕ್ಕೆ ಗೆದ್ದುಕೊಟ್ಟಿದ್ದಾರೆ. ಕಾವ್ಯಭಾಗದ ಭಾವಕ್ಕೆ ತಕ್ಕಂತೆ ರಾಗವನ್ನು ಅಳವಡಿಸುವ ಅವರ ರೀತಿ ಅದ್ಭುತವಾದುದು. ಪದ್ಯವೊಂದರಲ್ಲೇ ವಿವಿಧ ಭಾವಗಳು ಬಂದಾಗಲೂ, ಭಾವಕ್ಕೆ ತಕ್ಕಂತೆ ರಾಗವನ್ನು ಬದಲಿಸುವ ಪರಿ ಅನನ್ಯವಾದದ್ದು. ಗಮಕವಾಚನದಲ್ಲಿ ವಿಶಿಷ್ಟವಾದ ಶೈಲಿಯೊಂದನ್ನು ನಿರ್ಮಾಣ ಮಾಡಿದ ಸೃಜನಶೀಲರಿವರು. ಜತೆಯಲ್ಲಿಯೇ *ಈ* ಹೊಸಶೈಲಿಯ ಮುನ್ನಡೆಗೆ ಸಹಾಯವಾಗುವಂತೆ ನೂರಾರು ಗಮಕಿಗಳನ್ನು ತರಬೇತುಗೊಳಿಸಿದ ಕೀರ್ತಿಯೂ ಅವರಿಗೇ ಸಲ್ಲಬೇಕು. ಅವರು ಒಬ್ಬ ಶ್ರೇಷ್ಠ ಗಮಕಿ ಮಾತ್ರವಲ್ಲ! ಗಮಕ ವಾಚನದ ಹೊಸ ಪಂಥವೊಂದರ ಪ್ರವಾದಿ, ಕ್ರಾಂತಿಯೊಂದರ ಕೇಂದ್ರ, ಸೇನೆಯೊಂದರ ಸೇನಾನಿ!

ಇತರ ಹಿರಿಯ ಗಮಕಿಗಳ ಬಗ್ಗೆ ಗೌರವ ಭಾವವೂ, ಕಿರಿಯ ಗಮಕಿಗಳನ್ನು ಪ್ರೋತ್ಸಾಹಿಸುವ ಮನಸ್ಸೂ ಅವರಲ್ಲಿ ಮನೆಮಾಡಿವೆ.

ಹಾಗಾಗಿಯೇ ಕಳೆದ ಹದಿನೈದು ವರ್ಷಗಳಿಂದ ಹೊಸಹಳ್ಳಿಯ **ಗಮಕಕಲಾ ಪರಿಷತ್ತು**, ಇವರ ನೇತೃತ್ವದಲ್ಲಿ *ಈ* ಕೆಲಸವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ.

ಪ್ರಚಾರಕ್ಕಾಗಿ ಆಸೆಪಡದೆ, ಅವಕಾಶಕ್ಕಾಗಿ ಹಲ್ಲುಗಿಂಜದೆ, ಪ್ರಶಸ್ತಿ ಸನ್ಮಾನಗಳಿಗಾಗಿ ಓಲೈಸದೆ ತಮ್ಮ ಪಾಡಿಗೆ ತಾವು ಗಮಕಕಲಾ ಪ್ರಸಾರವನ್ನು ನಡೆಸಿಕೊಂಡು ಬಂದಿರುವ ಅವರ *ಈ* ಮನೋಭಾವವನ್ನು ಗಮನಿಸಿದಾಗ ಕವಿವಾಣಿಯೊಂದು ನೆನಪಾಗುತ್ತದೆ

ಇಂದು ನಾ ಹಾಡಿದರು
ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ
ಅದುವೆ ಬಹುಮಾನ
ಹಾಡು ಹಕ್ಕಿಗೆ ಬೇಕೆ
ಬಿರುದು ಸನ್ಮಾನ



***200.** ಸಂಮಾನ : ಕರ್ನಾಟಕ ಗಮಕ ಕಲಾ ಪರಿಷತ್ತು :*
*ಶ್ರೀ ಎಚ್.ಆರ್. ಕೇಶವಮೂರ್ತಿ ಮತ್ತು ಶ್ರೀಮತಿ ರಾಜೇಶ್ವರಿ : ಪರಸ್ಪರ ಮಾಲಾರ್ಪಣೆ*

## ೧೫. ರತ್ನಮಾಲಿಕಾ

*ಬಿ.ಎಸ್.ಎಸ್. ಕೌಶಿಕ್*

ಬಹುಮುಖದ ಕಾವ್ಯಗಳ, ಛಂದಸ್ಸಿನ ಪವಣರಿತು
ವಿಹಿತಮಾಗನ್ವಯಿಸಿ ಪಾಡುತ್ತ, ಕವಿಹೃದಯ-
ವಹುದೆನಿಸಿ, ರಸಸುಧೆಯ, ಕುಳಿತುಕೇಳುವ ಸಭೆಯ,
ಸಹೃದಯರಿಗಿಂಟಿಸುತ್ತ
ಅಹಹಯೆನಿಪುದ್ಗಾರ, ಶ್ರವಣಿಸಿಹರಿಂ ಪಡೆದು
ಮಹಪ್ರತಿಭೆಯಿಂ ಸೊಗಮೆರೆಸಿಹ ಕಲಾವಿದರು
ಬಹುಶ್ರುತರು, ಮಿತಭಾಷಿ, ಎಚ್.ಆರ್.ಕೇಶವಮೂರ್ತಿ ಗಮಕ
ಗಂಧರ್ವರಹುದು ೧

ಪದದರ್ಥ ವಾಕ್ಯಗಳ, ಅಂತರಾರ್ಥವನೆಲ್ಲ
ಹೃದಯ ಮುಟ್ಟುವ ತೆರದಿ ವಿವರಣೆಯಗೈದು, ಕವಿ-
ಹೃದಯ ಮರ್ಮವ ತಮ್ಮ ಬಹುಮುಖದ ಪ್ರತಿಭೆಯಿಂ,
ವಾಗ್ಜಾಲದಿಂ ರಂಜಿಸಿ
ಮುದದಿಂದ ಶ್ರವಣಿಸಿಹ, ಸಹೃದಯ ಸಭಾಸದರ
ಪದಪಿಗಾಯಾಯಾ ಪ್ರಸಂಗಗಳ ಯುಗಕೊಯ್ಯು
ಚದುರರ್ಮಾರ್ಕಂಡೇಯ ಅವಧಾನಿಗಳು ಇಹರು,
ವ್ಯಾಖ್ಯಾನ ವಾಚಸ್ಪತಿ ೨

ಗಮಕ ಗಂಧರ್ವ ಬಿರುದಾಂತಿರುವ ಎಚ್.ಆರ್.ಕೆ
ಕಮನೀಯ ವ್ಯಾಖ್ಯಾನ ವಾಕ್ಪಟು ಧುರಂಧರರು
ಸುಮನಸರು, ವರ ವೇದದಧ್ಯಯನ ಸಂಪನ್ನಮಾರ್ಕಂಡೇ
ಯಾವಧಾನಿಗಳ್
ರಮಣೀಯ ಕರುನಾಡ ಕಸ್ತೂರಿ ಕನ್ನಡಕೆ
ಸಮರು ತಮಗಿಲ್ಲದೊಲು ಸೇವೆಸಲಿಸಿಹುದಕ್ಕೆ
ಮಮತೆ ಗೌರವ ತೋರ್ಪ ಸಂಭಾವನಾ ಗ್ರಂಥ ಮೈಲಿಗಲ್
ಗಮಕಕಲೆಗೆ ೩

ಬಾಳಿನಲಿ ಬಹುಭಾಗವಾಗಳೆಯೆ, ಈರ್ವರದು
ಮೇಲೆನಿಸಿಹೀ ಗಮಕ ಕಲೆಯ ಪ್ರಸರಣಕಾಗಿ
ಭಾಳ ಸಾರ್ಥಕವಾದ ಕೈಂಕರ್ಯ ರೂಪದಲಿ ಕಳೆದಿರುವ ಪರ್ವಕಾಲ
ಭೂಲೋಕಕಿವರುಗಳು ಅವತಾರಗೈದೀಗ
ಮೇಳವಿಸಿ ಬಂದಿಹುದು ಷಷ್ಟ್ಯಬ್ದವುಭಯರನು
ಕಾಲಕಾಲನು ಶಿವನು, ಕೃಪೆಗೈದು ನೂರಬ್ದ ಸಂಪೂರ್ಣ
ಸೊಗಪೊರೆಯಲಿ ೪

ಮಾತುಗಾರಿಕೆಯಲ್ಲಿ, ವ್ಯವಹಾರ ಜಾಣ್ಮೆಯಲಿ
ಪ್ರೀತಿ ವಿಶ್ವಾಸಗಳ ವರ್ಧಿಸುವ ಕಲೆಯಲ್ಲಿ
ಆತುಮೋದ್ಧಾರಕ್ಕೆ ಬೇಕಾದ ಅಧ್ಯಯನ ಕೈಂಕರ್ಯ ಕರ್ಮಗಳಲಿ
ರೀತಿ ರೀತಿಯ ವೈದಿಕಾಚಾರ ಧರ್ಮದಲಿ
ಷ್ಟಾತು ಭೇಷ್, ಭಲ ಭಲಾ ಎಂದು ತೂಪಿರಿವಂತೆ
ಖ್ಯಾತಿಗಳಿಸಿಹ ಮತ್ತೂರ್ ಹೊಸಹಳ್ಳಿ ಸಂಕೇತಿವರ್ಗಕ್ಕೆ
ಶ್ರೇಯಮಕ್ಕೆ ೫



**201.** *ಶ್ರೀ ಎಚ್.ಆರ್. ಕೇಶವಮೂರ್ತಿಗಳು ಮತ್ತು ಶ್ರೀ ಮತ್ತೂರು ಕೃಷ್ಣಮೂರ್ತಿಗಳು : ಕುಮಾರವ್ಯಾಸ ಭಾರತದ ೨೦೦ ಕ್ಯಾಸೆಟ್‌ಗಳ ಲೋಕಾರ್ಪಣ - ಶ್ರೀ ಎಲ್.ಎಸ್. ಶೇಷಗಿರಿರಾಯರು, ಶ್ರೀ ಜಿ. ನಾರಾಯಣ ಅವರು ಶ್ರೀ ಎಚ್.ಡಿ. ದೇವೇಗೌಡ ಅವರು, ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು, ಶ್ರೀ ಹರಿಕೃಷ್ಣ ಪುನರೂರು*

# ೧೬. ವಂದ್ಯರು

***ಡಾ. ಬಿ.ಎಸ್. ಪ್ರಣತಾರ್ತಿಹರನ್***

ಭಾಷೆಯನ್ನು ವಿಮರ್ಶಕರು ವ್ಯಾಖ್ಯಾನಕಾರರು ಇಬ್ಬರೂ ಶಕ್ತವಾಗಿ ತಮ್ಮ ತಮ್ಮ ಕ್ಷೇತ್ರ ಮರ್ಯಾದೆಗೆ ತಕ್ಕಂತೆ ಬಳಸಿದ್ದಾರೆ. ಒಂದು ಸಿದ್ಧಾಂತವನ್ನೋ ತತ್ತ್ವವನ್ನೋ ಶೋಧಿಸುತ್ತದೆ; ಇನ್ನೊಂದು, ರಸವನ್ನು. ಒಂದು ಬೌದ್ಧಿಕವಾಗಿ ಮೇಲೇರಿ ಅವರೊಂದಿಗೆ ಏರಬಲ್ಲ ಜಾಣರಿಗೆ ಸೃಷ್ಟಿರಹಸ್ಯದ ದರ್ಶನ ಮಾಡಿಸಲೆತ್ನಿಸುತ್ತದೆ; ಚಿಂತನೆಗೆ ಹಚ್ಚುತ್ತದೆ. ಮತ್ತೊಂದು ಸಹೃದಯನ ಬೆನ್ನ ಮೇಲೆ ಕೈ ಹಾಕಿ ಮೈದಡವಿ ಅವನನ್ನೂ ತನ್ನ ಜತೆ ರಸಾಮೃತದಲ್ಲಿ ಈಜಲು ಸೆಳೆದುಕೊಳ್ಳುತ್ತದೆ. ಒಂದು ಯಾವಾಗಲೂ ಪ್ರಭು ಸಂಮಿತವೇ; ಮತ್ತೊಂದು, ಕಾಂತಾ ಸಂಮಿತವೇ. "ಪ್ರಯೋಗತ್ವಮನಾಪನ್ನೇ ಕಾವ್ಯೇ ನಾಸ್ವಾದಸಂಭವಃ" ಎಂದು ಬೇರೆ ಭಟ್ಟತೌತನು ಹೇಳುತ್ತಾನಲ್ಲ? ವ್ಯಾಖ್ಯಾನಕಾರನದೂ ವಾಚನಕಾರನದೂ ಅಂಥ, ಪ್ರಯೋಗ.



*202. ಬೆಂಗಳೂರು : ಮಲ್ಲೇಶ್ವರ : ಗಮಕ ರೂಪಕ ನಿವೇದಕರಾಗಿ ಮಾರ್ಕಂಡೇಯ ಅವಧಾನಿಗಳು, ಜತೆಗೆ ಎಚ್.ಆರ್. ಕೇಶವಮೂರ್ತಿಗಳು, ಮತ್ತೂರು ಕೃಷ್ಣಮೂರ್ತಿಗಳು ಮತ್ತು ಪದ್ಮಿ ನಿರಾಮಯಮೂರ್ತಿ*

ಮತ್ತೂರು-ಹೊಸಹಳ್ಳಿಯು ಸಾಂಸ್ಕೃತಿಕ ಲೋಕಕ್ಕೆ ಕೊಡುಗೆಯಾಗಿ ಕೊಟ್ಟ ಇಂಥ ಪ್ರಯೋಗಪಟುಗಳಲ್ಲಿ ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳೂ ಶ್ರೀ ಎಚ್.ಆರ್. ಕೇಶವಮೂರ್ತಿಗಳೂ ಬಹುಶ್ರುತರು. ನಾನು ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ನಮ್ಮ ಹಳ್ಳಿಯಲ್ಲಿ ನಡೆದ ಶ್ರೀ ಕೇಶವಮೂರ್ತಿಗಳ 'ವಾಚನ'ವನ್ನು ಕೇಳಿದ ನೆನಪು ನನಗಿದೆ. ನನ್ನ ವಯಸ್ಸಿನ, ಆಟದ ಪುಟ್ಟ ಹುಡುಗರೆಲ್ಲರೂ ಆ ವಾಚನವನ್ನು ತನ್ಮಯರಾಗಿ ಕೊನೆಯವರೆಗೂ ಕೇಳಿದ್ದೆವು. 'ವ್ಯಾಖ್ಯಾನ'ವನ್ನು ಯಾರೂ ಮಾಡಿರಲಿಲ್ಲ. ಆದರೂ ನಾವು ಆ ಹೊತ್ತು ಕಾವ್ಯರಸವನ್ನು ಸವಿದೆವು. ನಮ್ಮ ಹಳ್ಳಿಯ ವಿದ್ವಾಂಸರೂ, ಹಿರಿಯ ಕಲಾವಿದರೂ ಆ 'ವಾಚನ'ವನ್ನು ಮುಕ್ತಕಂಠದಿಂದ 'ಅಪೂರ್ವ'ವಾದುದೆಂದು ಹೊಗಳುತ್ತಿದ್ದರು. ಇದಾದ ಕಾಲು ಶತಮಾನಕ್ಕೂ ಹೆಚ್ಚು ಕಾಲ ಕಳೆದಮೇಲೆ ಒಮ್ಮೆ ಬಾನುಲಿಯಲ್ಲಿ ಬಲು ಪರಿಣಾಮಕಾರಿಯಾದ ಕಾವ್ಯವಾಚನವೊಂದು ಮೂಡಿಬರುತ್ತಿದ್ದುದು ಇದ್ದಕ್ಕಿದ್ದಂತೆ ನನ್ನ ಗಮನ ಸೆಳೆಯಿತು. ಪಕ್ಕದಲ್ಲಿದ್ದವರನ್ನು "ಯಾರಿವರು?" (ಇಷ್ಟು ಚೆನ್ನಾಗಿ ಓದುತ್ತಿದ್ದಾರೆ!) ಎಂದು ಕೇಳಿದೆ. "ಅಷ್ಟೂ ಗೊತ್ತಾಗಲಿಲ್ಲವೆ? ಹೊಸಹಳ್ಳಿಯ ಕೇಶವಮೂರ್ತಿಗಳು!" ಎಂಬ ಉತ್ತರ ಬಂತು. ಇದು ಪೂರ್ಣವಾಗಲು, ಇದಕ್ಕೆ ಸಂವಾದಿಯಾದ ಮತ್ತೊಂದು ಪ್ರಸಂಗವನ್ನು ತಿಳಿಸಬೇಕು. ಒಮ್ಮೆ, ಅಪರೂಪಕ್ಕೆ ಹಿಂದಿ ಚಲನಚಿತ್ರವೊಂದಕ್ಕೆ ಹೋಗಿ ಕುಳಿತಿದ್ದೆ. ಅಪೂರ್ವವಾದ ನಟನೊಬ್ಬ ಕಾಣಿಸಿದ. ಪಕ್ಕದಲ್ಲಿದ್ದವರನ್ನು "ಯಾರಿವರು?" (ಇಷ್ಟು ಚೆನ್ನಾಗಿ ನಟಿಸುತ್ತಿರುವಾತ!) ಎಂದೆ. "ಅಷ್ಟೂ ಗೊತ್ತಿಲ್ಲವೆ? ದಿಲೀಪಕುಮಾರ!" ಎಂದು, 'ಛೀ! ಗುಗ್ಗು!' ಎನ್ನುವ ಪಲುಕಿನೊಂದಿಗೆ ಆತ ನುಡಿದ. ಅಡ್ಡಿ ಇಲ್ಲ. ಇದು ಕಲಾವಿದರಿಗೆ ನಾನು ಮಾಡಿದ ಸನ್ಮಾನವೆಂದು ಈಗಲೂ ಗಂಭೀರವಾಗಿ ತಿಳಿದಿದ್ದೇನೆ.

ಸಾಹಿತ್ಯವೂ ಸೇರಿದಂತೆ, ಕಲಾಭಿರುಚಿ ಇದ್ದವನು ಮಾನವನಾಗಿ ವಿಕಾಸ ಹೊಂದುವ ಸೂಚನೆಯನ್ನೂ ಕೊಡುತ್ತಾನೆ. ನಾನು 'ಸಂಕೇತಿ' ಸಮುದಾಯವನ್ನು ಕುರಿತು ರಚಿಸಲಿದ್ದ ನಿಬಂಧಕ್ಕಾಗಿ ಕ್ಷೇತ್ರಕಾರ್ಯ ಮಾಡಲು ಮತ್ತೂರು-ಹೊಸಹಳ್ಳಿಗೆ ಹೋಗಬೇಕಿತ್ತು. ಅಲ್ಲಿನ ಉದ್ದಾಮ ವೇದಶಾಸ್ತ್ರ ಪಂಡಿತರು, ಅವರು



***203.** ಉದಯ ಟಿ.ವಿ. ಶುಭೋದಯ ಕಾರ್ಯಕ್ರಮವು ೧೦೦೦ ಕಂತುಗಳನ್ನು ಪೂರೈಸಿದ ಸಂದರ್ಭದಲ್ಲಿ ಸನ್ಮಾನ : ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ ಅವರಿಂದ*

ಸಂಸ್ಕೃತದಲ್ಲಿಯೇ ವ್ಯವಹರಿಸುವುದು... ಇವೆಲ್ಲವೂ ನನ್ನಲ್ಲಿ ಅಂಜಿಕೆ ಹುಟ್ಟಿಸಿದ್ದವು. ನನ್ನ ಅಜ್ಞಾನವನ್ನು ಪ್ರದರ್ಶಿಸಿಕೊಂಡು ನಗೆಪಾಟಲಿಗೀಡಾಗಬೇಕಾದ ಪೇಚಿಗೆ ಸಿಕ್ಕಿದೆನಲ್ಲಾ ಎಂದು ಮರುಗುತ್ತಿದ್ದೆ. ಒಮ್ಮೆ ಮತ್ತೂರಿನ ಶ್ರೀ ಜಗದೀಶ ಎಂಬ ಸಹೋದ್ಯೋಗಿ ಸನ್ಮಿತ್ರರ ಸಹಾಯ ಪಡೆದು ಆ ಊರಿಗೆ ಉತ್ತರಕುಮಾರನಂತೆ ಪ್ರವೇಶಿಸಿದೆ. ಮೊದಲು ಹೋದದ್ದು ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಮನೆಗೇ. ನಾನೇನೂ "ಆರೊಡನೆ ಕಾದುವೆನು ಕೆಲವರು ಹಾರುವರು . . . " ಎಂದು ಜಂಬ ಕೊಚ್ಚಿದ್ದವನಲ್ಲ. ಆದರೆ ರಣರಂಗದಲ್ಲಿ ಧೀರನಾಗಿರಲಿಲ್ಲ. ಅವಧಾನಿಗಳಿಗೆ ಅಭಿವಾದನ ಮಾಡಿ ನಾನು ಬಂದ ಉದ್ದೇಶ ತಿಳಿಸಿದೆ. ಅವರು ನನ್ನನ್ನು ಕೇವಲ ಪ್ರೀತಿಯಿಂದಲ್ಲ, ಗೌರವದಿಂದಲೂ ಕಂಡರು. ಎಷ್ಟೋ ದಿನಗಳ ಪರಿಚಯವಿದ್ದವರು ಮರಳಿ ಕಂಡಾಗ ತೋರಿಸುವ ಸಲುಗೆಯಿಂದ ನಡೆಸಿಕೊಂಡರು. ಮತ್ತೂರಿನ ಮನೆಗಳ ಮುಂದೆ ಕಾಲಿಟ್ಟರೆ, ಅನಂತರ ಆ ಜಾಗವನ್ನು ಸಗಣಿ ನೀರು ಹಾಕಿ ಶುದ್ಧಪಡಿಸುತ್ತಾರೇನೋ ಎಂದು ಚಿತ್ರ ಕಟ್ಟಿಕೊಂಡಿದ್ದವನು ನಾನು. ಅವಧಾನಿಗಳು ನನ್ನನ್ನು ಒಳಕೋಣೆಗೆ ಕರೆದೊಯ್ದರು. ತಾವೇ ಒಂದು ಮಣೆಯನ್ನು ತಂದು ನಾನು ಕೂರಬೇಕಾದ ಕಡೆ ಹಾಕಿದರು, ಕೂರುವಂತೆ ಆಹ್ವಾನಿಸಿದರು. ನಾನು ಕೂತ ಅನಂತರ ತಾವು ಕೂತರು. ನನಗೆ ಬೇಕಾದ ಮಾಹಿತಿಯನ್ನು ಬಹು ಪ್ರೀತಿಯಿಂದ ಒದಗಿಸಿದರು, ಸಹಭೋಜನಕ್ಕೇಳಿಸಿದರು. ಮತ್ತೆ ಮತ್ತೆ ಇದು ನಡೆಯಿತು. ಪ್ರತಿ ಬಾರಿ ಅದೇ ಪ್ರೀತಿ, ಅದೇ ಸಲುಗೆ, ಅದೇ ಗೌರವ. ಇದು ಸಣ್ಣ ಸಂಗತಿ; ಆದರೆ ಇದೇ ದೊಡ್ಡದು. ಮಾನವೀಯತೆಯ ಬಗೆಗೆ ರಂಜಕವಾಗಿಯೋ, ಆವೇಶಭರಿತರಾಗಿಯೋ ಮಾತಾಡಿಯೇ ದೊಡ್ಡವರೆನಿಸಿಕೊಳ್ಳಲು ತಿಣುಕುವವರನ್ನು ಇಂದು ಎಲ್ಲೆಲ್ಲಿಯೂ ಕಾಣಬಹುದು. ಆದರೆ ಅವಧಾನಿಗಳು ಮನುಷ್ಯರೇ ಆಗಿ ವರ್ತಿಸಿದ್ದರು. ಅವರ ವೇದಜ್ಞಾನ, ಪಾಂಡಿತ್ಯ, ಕಲೆ ಅವರನ್ನು ಮಾಗಿಸಿದ್ದುದು ಕಂಡಿತು. ನಮ್ಮ ಅಂತಿಮ ಆಶಯ ಇದೇ ತಾನೆ? - ಮನುಷ್ಯರಾಗುವುದು!? ಆ ಒಂದು ಕಾರಣಕ್ಕಾಗಿಯೇ ನಾವು ಗಮಕಿಗಳನ್ನೂ ವ್ಯಾಖ್ಯಾನಕಾರರನ್ನೂ ಗೌರವಿಸಬಹುದಾಗಿದೆ.

ವಾಚನಕಾರರೂ ವ್ಯಾಖ್ಯಾನಕಾರರೂ ಸತ್ಕಾವ್ಯಗಳನ್ನು ಉಳಿಸಿದ್ದಾರೆ. ಸಹೃದಯರ ಸಭೆಗಳನ್ನು ಕಟ್ಟಿ ಅಂಥ ಒಂದು ಸಾಹಿತ್ಯಾಸಕ್ತರ ಪಡೆಯನ್ನು ರೂಪಿಸಿದ್ದಾರೆ, ಸಾಹಿತ್ಯ ಪ್ರಸಾರ ಮಾಡಿದ್ದಾರೆ.



***204.** ಮಾರ್ಕಂಡೇಯ ಅವಧಾನಿಗಳು ಮಿತ್ರ ಮತ್ತೂರು ಕೃಷ್ಣಮೂರ್ತಿಗಳೊಂದಿಗೆ*

ಅರಸಿಕರಿಗೆ ಅಂಜಿ, ಅವರ ಮುಂದೆ ಕಾವ್ಯವನ್ನೊಪ್ಪಿಸುವ ಹಣೆಬರಹ ಬೇಡವೆಂದು ದೇವರಲ್ಲಿ ಮೊರೆಯಿಟ್ಟ ಕವಿಗಳು ಇಂಥ ಸಾಹಿತ್ಯ ಪ್ರಚಾರಕರಿಗೆ ಅದೆಷ್ಟು ಋಣಿಗಳಾಗಿರಬೇಡ?

ಕವಿಪ್ರತಿಭೆಯ ಸೃಷ್ಟಿಕಾರ್ಯಗಳು, ಸಹೃದಯ ಪ್ರತಿಭೆಯ ಅನುಸೃಷ್ಟಿಕಾರ್ಯ ಇವೆಲ್ಲದರ ಭಾರ ಹೊತ್ತು ಕಾವ್ಯ ಪ್ರಚಾರಕರಾಗಿ, ಕಾವ್ಯೋದ್ಧಾರಕರಾಗಿ ಕಾವ್ಯ ವರ್ಧಕರಾಗಿ ಕೆಲಸಮಾಡುತ್ತಿರುವ ವಾಚನಕಾರ ಮತ್ತು ವ್ಯಾಖ್ಯಾನಕಾರರನ್ನು ಯಾರಾದರೂ ವಂದಿಸತಕ್ಕುದೇ.

**ಲೀನಂ ವಸ್ತುನಿ ಯೇನ ಸೂಕ್ಷ್ಮಸುಭಗಂ ತತ್ತ್ವಂ ಗಿರಾಕೃಷ್ಯತೇ**
**ನಿರ್ಮಾತುಂ ಪ್ರಭವೇನ್ಮನೋಹರಮಿದಂ ವಾಚೈವ ಯೋ ವಾ ಬಹಿಃ |**
**ವಂದೇ ದ್ವಾವಪಿ ತಾವಹಂ ಕವಿವರೌ ವಂದೇತರಾಂ ತಂ ಪುನಃ**
**ಯೋ ವಿಜ್ಞಾತಪರಿಶ್ರಮೋಽಯಮನಯೋರ್ಭಾರಾವತಾರಕ್ಷಮಃ ||**

*('ವಾಚನ ವ್ಯಾಖ್ಯಾನ ವಿಮರ್ಶೆ' ಎಂಬ ಲೇಖನದಿಂದ)*

## ೧೭. ಸಾರ್ಥಕನಾಮ

***ಕೇಶವ***

ಸುಮಾರು ಮೂವತ್ತು ವರ್ಷಗಳ ಹಿಂದಿನ ಮಾತು. ಶಿವಮೊಗ್ಗದ ಕರ್ಣಾಟಕ ಸಂಘದಲ್ಲಿ ಗಮಕ ಕಾರ್ಯಕ್ರಮ. ಆಗಿನ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶ ಜಸ್ಟಿಸ್ ಹೊಂಬೇಗೌಡರು ಪ್ರಧಾನ ಅತಿಥಿಗಳಾಗಿ ಆಗಮಿಸಿದ್ದರು. 'ಕಿರಾತಾರ್ಜುನೀಯ' ಪ್ರಸಂಗದ ವಾಚನ - ವ್ಯಾಖ್ಯಾನ. ಇಪ್ಪತ್ತೆಂಟರ ತರುಣನೊಬ್ಬ ಕೋಮಲ ಕಂಠದಿಂದ ಇಂಪಾಗಿ ವಾಚಿಸುತ್ತಿದ್ದ. ಐವತ್ತೈದರ ಹರೆಯದವರೊಬ್ಬರು ಹಾವಭಾವಪೂರಿತರಾಗಿ ವ್ಯಾಖ್ಯಾನ ಮಾಡುತ್ತಿದ್ದರು. "**ಶಿವನಲಾ ಸಾಕ್ಷಾತ್ ಚತುರ್ದಶ ಭುವನ ಕರ್ತುವಲಾ . . .** " ಎಂದು ತಾರಕ ಸ್ಥಾಯಿಯಲ್ಲಿ ಗಮಕಿ 'ಕಾಪಿ' ರಾಗದಲ್ಲಿ ಹಾಡುತ್ತಿದ್ದಾಗ ನೆರೆದಿದ್ದ ಜನಸಮೂಹ ಮುಗ್ಧವಾಗಿ ಕೇಳುತ್ತಿತ್ತು.

ಜಸ್ಟಿಸ್ ಹೊಂಬೇಗೌಡರೂ ಅತ್ಯಂತ ಉತ್ಸುಕರಾಗಿ ಪಕ್ಕದಲ್ಲಿದ್ದ ಸೂಪರಿಂಟೆಂಡಿಂಗ್ ಇಂಜಿನಿಯರ್ ಸುಬ್ಬಯ್ಯನವರನ್ನು "ಯಾರೀತ?" ಎಂದು ಕೇಳಿದರು. ಅದಕ್ಕೆ ಸುಬ್ಬಯ್ಯನವರು, "ಇಲ್ಲೇ ಹತ್ತಿರದ ಮತ್ತೂರು-ಹೊಸಹಳ್ಳಿಯವರು. ಕೇಶವಮೂರ್ತಿ ಅಂತ ವಾಚನಕಾರರು; ವ್ಯಾಖ್ಯಾನಕಾರರು ಲಕ್ಷ್ಮೀಕೇಶವಶಾಸ್ತ್ರಿಗಳು" ಎಂದರು. ಹೊಂಬೇಗೌಡರು ಸಂತುಷ್ಟರಾಗಿ "ಸುಬ್ಬಯ್ಯ, ಈತನಿಗೆ ಒಳ್ಳೆ ಭವಿಷ್ಯವಿದೆ. ನನಗೆ ಅವರ ಪರಿಚಯ ಮಾಡಿಸಿ" ಎಂದರು. ಅದರಂತೆ ಗೆಸ್ಟ್‌ಹೌಸ್‌ನಲ್ಲಿ ಪರಿಚಯವಾಯಿತು. ಅನಂತರ ಮೂರು-ನಾಲ್ಕು ಬಾರಿ ಕೆಮ್ಮಣ್ಣುಗುಂಡಿಯಲ್ಲಿ ಹೊಂಬೇಗೌಡರ ಸಮಕ್ಷಮದಲ್ಲಿ ಕಾರ್ಯಕ್ರಮಗಳು ನಡೆದವು. ಅಂದು ಕಿರಿಯ ಗಮಕಿಯಾಗಿದ್ದು, ಹೊಂಬೇಗೌಡರಿಂದ ಶಹಬ್ಬಾಸ್ ಎನಿಸಿಕೊಂಡವರೇ ಇಂದಿನ ಗಮಕ ಲೋಕದ ಧ್ರುವತಾರೆ ಹೊಸಹಳ್ಳಿಯ ಶ್ರೀ.ಎಚ್.ಆರ್.ಕೇಶವ ಮೂರ್ತಿಗಳು.



**205.** *ಶ್ರೀ ಮಾರ್ಕಂಡೇಯ ಅವಧಾನಿಗಳು, ನೇತ್ರತಜ್ಞ ಡಾ. ಕೃಷ್ಣಮೂರ್ತಿ, ಲಂಡನ್‌ನಲ್ಲಿನ ಸಂಸ್ಕೃತಿ ರಾಯಭಾರಿ ಶ್ರೀ ಮತ್ತೂರು ಕೃಷ್ಣಮೂರ್ತಿ - ಗಮಕ ಗಂಧರ್ವ ಶ್ರೀ ಎಚ್.ಆರ್. ಕೇಶವಮೂರ್ತಿಗಳೊಂದಿಗೆ*

*

ಶ್ರೀ ಕೋ.ಚನ್ನಬಸಪ್ಪನವರು ನ್ಯಾಯಾಧೀಶರಾಗಿ ಶಿವಮೊಗ್ಗೆಯಲ್ಲಿದ್ದ

ಸಮಯ. ಅವರ ಸಮಕ್ಷಮದಲ್ಲಿ ಕಾವ್ಯವಾಚನದ ಏರ್ಪಾಡಾಯಿತು. ಕಾರ್ಯಕ್ರಮದನಂತರ ಕೋ. ಚನ್ನಬಸಪ್ಪನವರು "ಮುಂದಿನ ವಾರ ನಮ್ಮ ಮನೆಯಲ್ಲಿ ಕಾವ್ಯವಾಚನ ನಡೆಯಬೇಕು. ಕೆಲವೇ ಸ್ನೇಹಿತರನ್ನು ಕರೆಯುತ್ತೇನೆ. ಬರುತ್ತೀರಷ್ಟೇ?" ಎಂದರು. ಕೇವಲ ವಾಚನ ಸಾಕೆಂದುದರಿಂದ ಶ್ರೀ ಕೇಶವಮೂರ್ತಿಗಳು ಮಾತ್ರ ಹೋಗಿದ್ದರು. 'ಕರ್ಣಾವಸಾನ' ಕಥಾ ಭಾಗ. ಅದ್ಭುತ ಕಂಠಶ್ರೀಯಿಂದ ಶ್ರೀ ಎಚ್ಚಾರ್ಕೆ ವಾಚಿಸಿದರು. "ಕರ್ಣನಾರೋ?" ಎಂದು ಅರ್ಜುನ ಪ್ರಶ್ನಿಸುವ ಪದ್ಯಮಾಲಿಕೆ. ಅಭೇರಿಯಿಂದ ಪ್ರಾರಂಭಿಸಿ ಸಿಂಧುಭೈರವಿಯವರೆಗೆ ಶೋಕರಸದ ರಾಗಗಳ ಮಹಾಪೂರ. ಕೇಳುತ್ತಿದ್ದವರೆಲ್ಲ ಸುಶಿಕ್ಷಿತರು, ಸುಸಂಸ್ಕೃತರು, ಸಾಹಿತಿಗಳು. ಎಲ್ಲರ ಕಣ್ಣುಗಳೂ ಆನಂದಬಾಷ್ಪದಿಂದ ತುಂಬಿದ್ದವು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ಚನ್ನಬಸಪ್ಪನವರು ಶ್ರೀ ಕೇಶವಮೂರ್ತಿಗಳನ್ನು ಸನ್ಮಾನಿಸಿ **ಗಮಕ ಕಲಾ ಕೋಕಿಲ** ಎಂದು ಪ್ರಶಸ್ತಿ ನೀಡಿದಾಗ ಎಲ್ಲರಿಂದ ಚಪ್ಪಾಳೆಯ ಸುರಿಮಳೆ.

*

ಕಳೆದ ವರ್ಷ ಹೆಗ್ಗೋಡಿನಲ್ಲಿ 'ರಸಗ್ರಹಣ ಶಿಬಿರ'ದಲ್ಲಿ ಒಂದು ಗಮಕ ಕಾರ್ಯಕ್ರಮ ಏರ್ಪಾಡಾಗಿತ್ತು. ಶ್ರೀ ಕೇಶವಮೂರ್ತಿಗಳೂ, ಮತ್ತೊಬ್ಬ ಯುವವ್ಯಾಖ್ಯಾನಕಾರರೂ ಅಲ್ಲಿಗೆ ಹೋದಾಗ ವಿರಾಮದ ಸಮಯ; ಎಲ್ಲರೂ ಸಭಾಂಗಣದ ಹೊರಭಾಗದಲ್ಲಿ ಮಾತನಾಡುತ್ತ ನಿಂತಿದ್ದರು. ಕಚ್ಚೆ ಪಂಚೆಯುಟ್ಟು, ಮೇಲೊಂದು ವಸ್ತ್ರ ಹೊದ್ದು, ವೈದಿಕ ವೇಷದಲ್ಲಿದ್ದ ಕೇಶವಮೂರ್ತಿಗಳನ್ನು ಕಂಡವರು "ಯಾರೋ ಗಮಕ ಹಾಡುತ್ತಾರಂತೆ" ಎಂದು ಉದಾಸೀನತೆಯಿಂದಲೇ ಇದ್ದಂತಿತ್ತು. ಏಳು ಗಂಟೆಗೆ ಕಾರ್ಯಕ್ರಮ ಪ್ರಾರಂಭವಾದಾಗ ಕನ್ನಡದ ಹಿರಿಯ ಕಲಾವಿದ - ಸಾಹಿತಿಗಳಾದ ಡಾ.ಕೀರ್ತಿನಾಥ ಕುರ್ತಕೋಟಿ, ಡಾ.ಯು.ಆರ್.ಅನಂತಮೂರ್ತಿ, ಶ್ರೀ ಕೆ.ವಿ. ಸುಬ್ಬಣ್ಣ, ಡಾ.ಡಿ.ಆರ್.ನಾಗರಾಜ್, ಶ್ರೀ ಪ್ರಸನ್ನ ಮುಂತಾದವರು ಮುಂದಿನ ಸಾಲಿನಲ್ಲಿ ಕುಳಿತಿದ್ದರೆ ಹಿಂಭಾಗವೆಲ್ಲ ಭಣಭಣಗುಟ್ಟುತ್ತ ಖಾಲಿಯಾಗಿತ್ತು. ಶ್ರೀ ಕೇಶವಮೂರ್ತಿಗಳು "ಶ್ರೀ ವನಿತೆಯರಸನೆ" ಎಂದು ತಮ್ಮ ಕೋಕಿಲ ಸ್ವರದಿಂದ ಹಾಡತೊಡಗಿದಂತೆ ಎರಡು-ಮೂರು ಪದ್ಯಗಳಾಗುವುದರಲ್ಲಿ ಸಭಾಂಗಣ ತುಂಬಿತ್ತು. "ಅರಸುಗಳಿಗಿದು ವೀರ" ಪದ್ಯವನ್ನು ಶ್ರೀ ಕೇಶವಮೂರ್ತಿಗಳು ಆರು ರಾಗಗಳಲ್ಲಿ ಅತ್ಯಂತ ಸುಂದರವಾಗಿ ಹಾಡುತ್ತಿದ್ದಂತೆ ಚಪ್ಪಾಳೆಗಳ ಸುರಿಮಳೆಯಾಯಿತು. ಅಂದು ಶ್ರೀ ಕೀರ್ತಿನಾಥ ಕುರ್ತಕೋಟಿ ಅವರ ಅಪೇಕ್ಷೆಯಂತೆ 'ಕರ್ಣಾವಸಾನ' ಪ್ರಸಂಗವನ್ನೇ ಆರಿಸಲಾಗಿತ್ತು. ವಾಚನ ಅದ್ಭುತವಾಗಿತ್ತು. **"ಕೇಡ ಹೊತ್ತಿಸಿ . . ."** ಪದ್ಯವನ್ನು ಶ್ರೀ ಕೇಶವಮೂರ್ತಿಗಳು ಅಮೃತವರ್ಷಿಣಿಯಲ್ಲಿ ಹಾಡುತ್ತಾ, ಭಾವಪೂರ್ಣವಾಗಿ **"ನಾಡಕೊಳಿಸಿದ ಹಿಸುಣನಿವ . . . ಇವ . . . ಇವ"** ಎಂದು ಮೂರು ಬಾರಿ ತಿವಿಯುವಂತೆ ವಾಚಿಸಿದಾಗ ಎಲ್ಲರಿಗೂ ರೋಮಾಂಚನದ ಅನುಭವವಾಯಿತು. ಕೊನೆಯಲ್ಲಿ ವಂದನೆ ಸಲ್ಲಿಸಿದ ಡಾ.ಕುರ್ತಕೋಟಿಯವರು **"ನಿಜಕ್ಕೂ ಇದೊಂದು ರೋಚಕ ಅನುಭವ. ಈವರೆಗೂ ಇಂಥ ಗಮಕವಾಚನ ಕೇಳಿರಲಿಲ್ಲ"** ಎಂದು ಹೊಗಳಿದರು. ಎಲ್ಲರದೂ ಅದೇ ಅಭಿಪ್ರಾಯವೆಂಬಂತೆ ಪುನಃ ಚಪ್ಪಾಳೆಯ ಸುರಿಮಳೆಯಾಯ್ತು.




***206. ಚಿಕ್ಕಮಗಳೂರು : ಭಾರತ ವಾಚನ, ಸನ್ಮಾನ***

*

ಇಂಥ ನೂರಾರು ವಾಚನಕಾರ್ಯಕ್ರಮಗಳು ಶ್ರೀ ಎಚ್ಚಾರ್ಕೆ ಅವರ ಕೀರ್ತಿಪತಾಕೆಯನ್ನು ನಾಡಿನ ನಾನಾ ಭಾಗಗಳಲ್ಲಿ ಹಾರಿಸುತ್ತ ವಿಜೃಂಭಿಸುತ್ತಿವೆ. ಅವರಿಗೆ ಅಭಿಮಾನಿ ವೃಂದ ನೀಡಿದ **ಗಮಕ ಗಂಧರ್ವ** ಪ್ರಶಸ್ತಿ ನಿಜಕ್ಕೂ ಹದಿನಾರಾಣೆ ಸಾರ್ಥಕವೆನ್ನುವುದರಲ್ಲಿ ಸಂಶಯವಿಲ್ಲ.

# ೧೮. ಆದರ್ಶಕ್ಕೊಂದು ಉದಾಹರಣೆ

***ಸಂಕೇತಿ ಸಂಗಮ ವಿಶೇಷಾಂಕ: ಜುಲೈ, ೨೦೦೨***

ನಾನೀಗ ನಿಮಗೆ ಪರಿಚಯಿಸಲು ಹೊರಟಿರುವುದು 'ಕಡೇಮನೆ'ಯನ್ನು. "ಇದೇನು, ಕಡೇಮನೆ ಏಕೆ, ಮೊದಲ ಮನೆ ಸಿಗಲಿಲ್ಲವೆ?" ಎಂದು ಮೂಗು ಮುರಿಯಬೇಡಿ. ಹೆಸರಿಗೆ 'ಕಡೇಮನೆ' ಆದರೂ ಅವರು ಸದಾ 'ಮೊದಲ ಮಣೆ'ಯವರೇ! ಆ ಮನೆಯ ಕಿರಿಯರು ಬಂದರೂ ಉಳಿದೆಲ್ಲ ಹಿರಿಯರೂ ಅವರನ್ನು ಪ್ರತ್ಯುತ್ಥಾನ ಮಾಡಿ ಸ್ವಾಗತಿಸಿ ಮೊದಲ ಆಸನವನ್ನು ನೀಡಿ ಗೌರವಿಸುತ್ತಾರೆ; ಕಾಲು ಮುಟ್ಟಿ ನಮಸ್ಕರಿಸುತ್ತಾರೆ. ಈ ಮನೆಯ ಹಿರಿಯರೂ ಕಿರಿಯರೂ ಆ ಯೋಗ್ಯತೆಯನ್ನು ಸಂಪಾದಿಸಿರುವುದು ಅವರ ವಿಶೇಷ. ಸರಳ-ಸಜ್ಜನರನ್ನು ಗಣಿಸುವಾಗ ಆ ಮನೆಯ ಎಲ್ಲರೂ ಕಿರುಬೆರಳಿಗೇ ಬರುವುದು ಅವರ ತಾಯಂದಿರ ಭಾಗ್ಯ! **ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಮ್**। (ಪರರಿಗೆ ಸಂತೋಷವನ್ನುಂಟು ಮಾಡುವುದೇ ಶಿವಪೂಜೆ) ಎನ್ನುವುದು ಆ ಮನೆಯ ಎಲ್ಲರ ಬೀಜಮಂತ್ರ!

ಮತ್ತೂರಿನ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ಬೀದಿಯಲ್ಲಿ ಅಂದು ಅದು ಕಡೇ ಮನೆಯಾಗಿತ್ತು (ಈಗ ಮತ್ತೊಂದು ಮನೆ ಇದೆ). ಊರಿನಲ್ಲಿ ನಾಲ್ಕಾರು ಜನ 'ನಾರಾಯಣ'ರು ಇದ್ದುದರಿಂದ ಗುರುತಿಗಾಗಿ ಅವರನ್ನು 'ಕಡೇಮನೆ ನಾರಾಯಣ' ಎಂದರು. ಎಲ್ಲಕ್ಕೂ ಮೊದಲಿಗರಾದ್ದರಿಂದ ಅವರು ಅದನ್ನು ಪ್ರೀತಿಯಿಂದಲೇ ಸ್ವೀಕರಿಸಿದರು - ಅದೇ ನಿಂತಿತು. ಪೂರ್ವಾಪರ ಪ್ರಯೋಗ ನಿಷ್ಣಾತರಾಗಿದ್ದ ನಾರಾಯಣ ಅವಧಾನಿಗಳಿಗೆ ಬ್ರಾಹ್ಮಣ್ಯದ ಬಗೆಗೆ ಅಪಾರ ಶ್ರದ್ಧೆ. ಪೌರೋಹಿತ್ಯವನ್ನು ಬಹುಗಂಭೀರವಾಗಿ ಸ್ವೀಕರಿಸಿದ್ದ ಅವರು ತಮ್ಮ ಜೀವಿತದ ಕೊನೆಯವರೆಗೂ ಅಧ್ಯಯನ ಅಧ್ಯಾಪನಗಳಲ್ಲಿ ನಿರತರಾಗಿದ್ದರು. ತಮ್ಮ ಗೃಹಸ್ಥರು ತುಂಬ ಬಡವರೆಂದು ಕಂಡರೆ - **ಸಂಕೇತಿ ಪೌರೋಹಿತ್ಯ ಪರಂಪರೆಯಂತೆ** - ತಾವೇ ಮನೆಯಿಂದ ಸ್ವಲ್ಪ ಹಣ ತೆಗೆದುಕೊಂಡು ಹೋಗಿ, ಯಜಮಾನನಿಗೆ ತಿಳಿಯದಂತೆ ಅವರ ಡಬ್ಬಿಯಲ್ಲಿ ಹಾಕಿ, ಅದನ್ನೇ ದಕ್ಷಿಣೆಯಾಗಿ ಸ್ವೀಕರಿಸಿ "ಅನಂತವಾಗಿದೆ" ಎಂದು ಹೇಳಿ ಸಂತೃಪ್ತಿಯಿಂದ ಮನೆಗೆ ಮರಳುತ್ತಿದ್ದರಂತೆ! ರುಗ್ಣ ಶಯ್ಯೆಯಲ್ಲಿ ಮಲಗಿದ್ದಾಗಲೂ, "ಯಾರಾದರೂ ನನ್ನನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಕುಳ್ಳಿರಿಸಿ. ಅಪರ ಪ್ರಯೋಗವನ್ನು ಹೇಳಿಕೊಡುತ್ತೇನೆ; ಮುಂದೆ ಹೇಳಿಕೊಡುವವರೂ ಬಹುಶಃ ಸಿಗಲಾರರು" ಎಂದು ದುಃಖಿಸಿದ್ದರಂತೆ ನಾರಾಯಣ ಅವಧಾನಿಗಳು!

ಚಿರತೆಯ ಬಾಯಿಂದ ತಪ್ಪಿಸಿಕೊಂಡು ಬಂದು 'ದಂತಕಥೆ'ಯಾಗಿದ್ದ ಸಾವಿತ್ರಮ್ಮ ಹಾಗೂ ವೇ.ಶ್ರೀ ಕೇಶವಾವಧಾನಿಗಳ ಮಗಳು ಲಕ್ಷ್ಮೀದೇವಮ್ಮ ಕಡೇಮನೆಯ ಕಿರಿಯ ಸೊಸೆ. ವೇ. ನಾರಾಯಣ ಅವಧಾನಿಗಳಿಗೆ ಮೊದಲ ಪತ್ನಿಯಲ್ಲಿ ಸಂತಾನವಿಲ್ಲದಿದ್ದಾಗ, ಆಕೆ ಬದುಕಿದ್ದಾಗಲೇ ಲಕ್ಷ್ಮೀದೇವಮ್ಮ ಆ ಮನೆಯ ಗೃಹಿಣಿಯಾದರು. ಮಾದ್ರಿ-ಕುಂತಿಯರಂತೆ ಬಹು ಅನ್ಯೋನ್ಯತೆ ಇತ್ತು ಅವರಲ್ಲಿ. ತಂಗಿಯ ಮಕ್ಕಳನ್ನೇ ತನ್ನವರೆಂದು ಪ್ರೀತಿಸಿದರು ಆಕೆ; ಇವರೂ ಅವರಿಗೆ ಮಾತೃಸ್ಥಾನ ನೀಡಿ ಆಕೆಯ ಕಾಲಾನಂತರ 'ಸಾಪತ್ನಿಮಾತೃ'ವಿಗೂ 'ಪಾರ್ವಣಶ್ರಾದ್ಧ'ವನ್ನೇ ನಡೆಸಿಕೊಂಡು ಬರುತ್ತಿದ್ದಾರೆ.



***207. ಸೌ. ಲಕ್ಷ್ಮೀ ಕೇಶವರ ಪುಂಸವನ: ಮಾರ್ಕಂಡೇಯ ಅವಧಾನಿಗಳ ಮಾರ್ಗದರ್ಶನ***

ಲಕ್ಷ್ಮೀದೇವಮ್ಮನವರಿಗೆ ಕುಂತಿಯಂತೆ ಐವರು ಮಕ್ಕಳು - ಹಿರಿಯ ಮಗ ಅಶ್ವತ್ಥ, ಧರ್ಮಜನಂತೆ ಅಜಾತಶತ್ರು; ಎರಡನೆಯವನು

ಸೀತಾರಾಮ, ತಾಯಿಯನ್ನು ಹೊತ್ತು ಶುಶ್ರೂಷೆ ಗೈಯುವ ಭೀಮಬಲ! ಮೂರನೆಯಾತ ಗೋಪಾಲ, ಅರ್ಜುನನಂತೆ ಸುಂದರಾಕಾರ; ನಾಲ್ಕನೆಯವನು ಚಂದ್ರಶೇಖರ ನಕುಲನಂತೆ ವಿಚಾರಪರ; ಕಿರಿಯವನು ಸಹದೇವನಂತೆ ಸ್ಫುರದ್ರೂಪಿ, ಸಾಹಸಿ, ನಂದಕುಮಾರ. ಇಂದು ಆ ತಾಯಿಗೆ ತೊಂಬತ್ತು ವರ್ಷ; ಹತ್ತಾರು ಜನ ಮರಿಮಕ್ಕಳನ್ನು ಕಂಡ ಅವರಿಗೆ ಸುಮಾರು ಅಷ್ಟೇ ಬಾರಿ 'ಕನಕಾಭಿಷೇಕ' ಆಗಿದೆ! ಬಹುಶಃ ನಮ್ಮ ಸಂಕೇತಿ ಮಂಡಳಿಯಲ್ಲೇ ಇಂಥ ಉದಾಹರಣೆ ಇನ್ನೊಂದಿರಲಾರದು. ಐವರು ಸೊಸೆಯರು, ಹತ್ತಾರು ಮಂದಿ ಅವರ ಸೊಸೆಯರು - ಹೆಣ್ಣು ಮಕ್ಕಳು ಎಲ್ಲರೂ ಈ ಅಜ್ಜಿಯ ಆಜ್ಞಾಧಾರಕರು. ಕಡೇಮನೆಯ ಯಾಜಮಾನ್ಯ ಇಂದಿಗೂ ಈ ಮುತ್ತಜ್ಜಿಯ ಕೈಯಲ್ಲೇ! ಕಳೆದ ಹತ್ತಾರು ವರ್ಷಗಳಲ್ಲಿ ಅನೇಕ ಬಾರಿ ಅನಾರೋಗ್ಯದಿಂದ ನಡೆಯಲಾಗದ, ಏಳಲಾರದ ಸ್ಥಿತಿಗೆ ತಲುಪಿದ್ದರೂ ಮತ್ತೆ ಚೇತರಿಸಿಕೊಳ್ಳುವಂತೆ ಹರಸಾಹಸಮಾಡಿ, ಉಳಿಸಿಕೊಂಡ ಶ್ರೇಯಸ್ಸು ಕಡೇಮನೆಯ ಹಿರಿ-ಕಿರಿಯರದು. ಅವರು ಶತಮಾನೋತ್ಸವ ಕಾಣಲೆಂದೂ, ಆ ಸಮಯದಲ್ಲಿ ಮತ್ತೂರಿನಲ್ಲಿ ಸಂಕೇತಿಗಳೆಲ್ಲ ಸೇರುವಂತಾಗಲೆಂದೂ ಪತ್ರಿಕೆ ಹಾರೈಸುತ್ತದೆ.

ಕಡೇಮನೆಯ ಜ್ಯೇಷ್ಠ ಪುತ್ರ ಶ್ರೀ ಮಾರ್ಕಂಡೇಯ ಅವಧಾನಿಗಳಿಗೆ ಈಗ ಅರುವತ್ತೊಂಬತ್ತರ ತಾರುಣ್ಯ. ಹೊಸಹಳ್ಳಿಯ ಶ್ಯಾಮಾವಧಾನಿಗಳ ಮಗಳು ನಾಗವೇಣಿಯವರನ್ನು ವರಿಸಿದಾಗ ಇಪ್ಪತ್ತೊಂದರ ಹರೆಯ. ನಂಜನಗೂಡಿನ ಪಾಠಶಾಲೆಯಲ್ಲಿ ಶ್ರೀಕೃಷ್ಣ ಸೋಮಯಾಜಿಗಳ ಬಳಿಯಲ್ಲಿ ಪ್ರೌಢ ಸಂಸ್ಕೃತ - ವೇದಾಧ್ಯಯನ ಮಾಡಿರುವ ಅವರಿಗೆ ಪೂರ್ವಾಪರ ಪ್ರಯೋಗಗಳೆಲ್ಲ ಕರತಲಾಮಲಕ. ಮತ್ತೂರು ಹೊಸಹಳ್ಳಿಗಳ ನೂರಾರು ಮನೆಯವರು ಅವರ ಗೃಹಸ್ಥರು- ಅವರೆಲ್ಲರಿಗೂ ಇವರು ಅಕ್ಷರಶಃ ಪುರೋಹಿತರು! ಎಲ್ಲರನ್ನೂ ಪ್ರೀತಿಯಿಂದ ನುಡಿಸುವ, ನಡೆಸುವ ಅವರ ಬಗೆಗೆ ಪರಿಚಿತರಿಗೆಲ್ಲ ಅಪಾರ ಗೌರವ. ಶಿವಮೊಗ್ಗೆಯಲ್ಲೂ ಅನೇಕ ಗೃಹಸ್ಥರು ಅವರನ್ನು ಆಶ್ರಯಿಸಿದ್ದಾರೆ. ಶೃಂಗೇರಿಯ ಶಾರದಾ ಪೀಠದ ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳವರೂ, ಎಡತೊರೆಯ ಶ್ರೀ ಶ್ರೀ ಶಂಕರಭಾರತೀ ಪೂಜ್ಯಪಾದರೂ, ಮುಳಬಾಗಿಲಿನ ಶ್ರೀ ಶ್ರೀ ಕೃಷ್ಣಾನಂದ ತೀರ್ಥ ಸ್ವಾಮಿಗಳೂ ಅವಧಾನಿಗಳ ಬಗೆಗೆ ಪರಮಾನುಗ್ರಹದಿಂದಿದ್ದಾರೆ. ಬೆಕ್ಕಿನ ಕಲ್ಮಠದ ಸ್ವಾಮೀಜಿ ಅವರೂ, ರಾಮಕೃಷ್ಣಾಶ್ರಮದ ಗುರುಗಳೂ, ಆದಿ ಚುಂಚನಗಿರಿಯ ಸ್ವಾಮಿಗಳೂ ಅವಧಾನಿಗಳನ್ನು ಮೆಚ್ಚಿ ಸತ್ಕರಿಸಿದ್ದಾರೆ. ಮನೆಗೆ ಪಾಯ ತೋಡುವುದರಿಂದ ಮೊದಲ್ಗೊಂಡು ಗೃಹಪ್ರವೇಶದವರೆಗೆ, ವಧುಪರೀಕ್ಷೆಯಿಂದ ವಿವಾಹದವರೆಗೆ ಎಲ್ಲರಿಗೂ ಎಲ್ಲ ರೀತಿಯಿಂದಲೂ ಸಮುಚಿತವಾದ ಸಲಹೆ ನೀಡಬಲ್ಲ ಅಪರೂಪದ ವ್ಯಕ್ತಿ, ಅವಧಾನಿಗಳು. ಶಿವಮೊಗ್ಗದಲ್ಲಿ ನಡೆದ ಲಕ್ಷಮೋದಕ ಗಣಪತಿಹೋಮದಲ್ಲಿ ಪ್ರಧಾನ ಆಚಾರ್ಯತ್ವದ ಗೌರವಕ್ಕೆ ಪಾತ್ರರಾದವರು.



***208.*** *ಮಾ.ಶ್ರೀ ಲಕ್ಷ್ಮೀದೇವಮ್ಮ ಅವರೊಂದಿಗೆ ಐವರು ಪುತ್ರರು - ಪ್ರೊ. ಚಂದ್ರಶೇಖರ್, ಗೋಪಾಲ ಅವಧಾನಿಗಳು, ಸೀತಾರಾಮ ಅವಧಾನಿಗಳು, ಮಾರ್ಕಂಡೇಯ ಅವಧಾನಿಗಳು, ನಂದಕುಮಾರ : ಮತ್ತೂರ್‌ಜೀ, ಎಚ್.ಆರ್.ಕೆ. ಉಪಸ್ಥಿತಿ*

ಮಾರ್ಕಂಡೇಯ ಅವಧಾನಿಗಳಿಗೆ ಅರುವತ್ತು ತುಂಬಿದಾಗ ನಡೆದ 'ಷಷ್ಟ್ಯಬ್ದಪೂರ್ತಿ ಶಾಂತಿ' ಸಂದರ್ಭದಲ್ಲಿ ಬೆಂಗಳೂರು ರಾಮಕೃಷ್ಣಮಠದ ಶ್ರೀ ಶ್ರೀ ಪುರುಷೋತ್ತಮಾನಂದಜೀ ಅವರು ಆಗಮಿಸಿ ಫಲ-ಪುಷ್ಪಗಳಿಂದ ಅಭಿಷೇಕ ಮಾಡಿದ್ದರು. ಅದೇ ಸಂದರ್ಭದ

ಸವಿನೆನಪಿಗಾಗಿ ಶಿವಮೊಗ್ಗೆಯ ಖ್ಯಾತ ವೈದ್ಯದಂಪತಿಗಳಾದ ಡಾ.ಬಿ.ವೆಂಕಟರಾವ್ ಮತ್ತು ಡಾ.ಅರುಂಧತಿ ರಾವ್ ಅವರು ತಮ್ಮ "ಉಷಾ ನರ್ಸಿಂಗ್ ಹೋಂ" ಆವರಣದಲ್ಲಿ 'ಧನ್ವಂತರೀ ಲಕ್ಷ್ಮೀನಾರಾಯಣ ದೇವಸ್ಥಾನ'ವನ್ನು ಕಟ್ಟಿಸಿದ್ದಾರೆ! ಗಮಕ ಕಲಾ ಕ್ಷೇತ್ರದಲ್ಲಿ ಪ್ರಖ್ಯಾತ ವ್ಯಾಖ್ಯಾನಕಾರರಾದ ಅವಧಾನಿಗಳು ಶಿವಮೊಗ್ಗದಲ್ಲಿ ನಡೆದ ಅಖಿಲ ಕರ್ನಾಟಕ ನಾಲ್ಕನೇ ಗಮಕ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಹೊಸಹಳ್ಳಿಯ ಗಮಕ ಕಲಾ ಪರಿಷತ್ತು **ಪ್ರವಚನ ಚತುರ** ಅವಧಾನಿಗಳು ಹಾಗೂ **ಗಮಕ ಗಂಧರ್ವ** ಎಚ್.ಆರ್. ಕೇಶವ ಮೂರ್ತಿ ಅವರನ್ನು ಸಂಮಾನಿಸಿ 'ತುಂಗ ಭದ್ರ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದೆ.

ಅವಧಾನಿಗಳಿಗೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು. ಹಿರಿಯ ಮಗ ನಾರಾಯಣ ಮೂರ್ತಿ ಬಿ.ಇ., ಮುಗಿಸಿ ಎಸ್.ಬಿ.ಐ.ನಲ್ಲಿ ಅಧಿಕಾರಿಯಾದರೆ, ಎರಡನೆಯವನು ಲಕ್ಷ್ಮೀಕೇಶವ (ಮರಿಯಣ್ಣ) ತಂದೆಯಂತೆ ಪೂರ್ಣವೇದಾಧ್ಯಯನ ಮಾಡಿ ತೀವ್ರ ಧರ್ಮಾನುಯಾಯಿಯಾಗಿದ್ದಾನೆ. ಮೂರನೆಯ ಮಗ ಧ್ರುವಕುಮಾರ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯ ಉನ್ನತಸ್ಥಾನದಲ್ಲಿದ್ದು ಅನೇಕ ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗೆ ಉದ್ಯೋಗ ಕೊಡಿಸುವಲ್ಲಿ ನೆರವಾಗಿದ್ದಾನೆ. ಕಿರಿಯಮಗ ಉದಯಕುಮಾರ ವಿಪ್ರೋ ಕಂಪೆನಿಯಲ್ಲಿ ಉದ್ಯೋಗಿಯಾಗಿದ್ದಾನೆ. ಹಿರಿಯ ಮಗಳು ಸೀತಾ (ಕನಕ) ಮತ್ತೂರಿನ ಸಂಸ್ಕೃತ ಕಾರ್ಯಕರ್ತ ಶ್ರೀನಿಧಿಯನ್ನು ವರಿಸಿದ್ದರೆ, ಕಿರಿಯವಳು ಅನ್ನಪೂರ್ಣಾ ಹೊಸಹಳ್ಳಿಯ ಡಾ.ವಾಸುದೇವನ ಮಡದಿ.

ಲಕ್ಷ್ಮಣನಂತೆ ಭ್ರಾತೃಭಕ್ತಿ ಹೊಂದಿರುವ ಸೀತಾರಾಮ ಅವಧಾನಿಗಳು ಆಯಾಸವನ್ನೇ ಅರಿಯದ ಬಲಶಾಲಿ. ತಾಯ ಶುಶ್ರೂಷೆಯಲ್ಲಿ ಸದಾ ಮಗ್ನರಾಗಿರುವ ಅವರು ಪೌರೋಹಿತ್ಯದಲ್ಲಿ ಅಣ್ಣನ ಬಲಗೈ; ಬಿ.ಇ. ಓದದ ಇಂಜಿನಿಯರ್! ಅವರ ಧರ್ಮಪತ್ನಿ ರಾಜಲಕ್ಷ್ಮೀ ಶಿವಮೊಗ್ಗೆಯ ವೇ. ಶ್ರೀ ಕೇಶವಮೂರ್ತಿ (ಸೋಮನಾಥ) ಘನಪಾಠಿಗಳ ಮಗಳು. ಅವರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು. ಹಿರಿಯ ಮಗ ರಮೇಶ ಅವಧಾನಿ ಪೌರೋಹಿತ್ಯವನ್ನೂ ಬಲ್ಲ ಬ್ಯಾಂಕ್ ಉದ್ಯೋಗಿ. ಎರಡನೆಯ ಶಿವಕುಮಾರ ಪೂರ್ಣ ವೇದಾಧ್ಯಯನ ಸಂಪನ್ನ, ಯಜ್ಞದಲ್ಲಿ ಅಧ್ವರ್ಯುವಾಗಿ ಮಾತಾಮಹನ ಕೀರ್ತಿ ಉಳಿಸಿದಾತ! ಕಿರಿಯ ದತ್ತಾತ್ರೇಯ ಬೆಂಗಳೂರಿನಲ್ಲಿ ಉದ್ಯೋಗಿ. ಹಿರಿಯ ಮಗಳು ಇಂದಿರಾ ಬಿ.ಇ., ಮುಗಿಸಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ, ಮತ್ತೂರಿನ ಎಂ.ಆರ್.ಕುಮಾರಸ್ವಾಮಿಯನ್ನು ವರಿಸಿ ಬೆಂಗಳೂರಿನಲ್ಲಿದ್ದರೆ, ಕಿರಿಯವಳು ಅಪರ್ಣಾ ಸುಧಾಕರನ ಪತ್ನಿ.

ಲಕ್ಷ್ಮೀದೇವಮ್ಮನವರ ಮೂರನೇ ಮಗ ಗೋಪಾಲ ಅವಧಾನಿಗಳದು ಇನ್ನೊಂದು ಬಗೆ. ಬಿ.ಎಸ್ಸಿ.,ಬಿ.ಇ., ಮುಗಿಸಿದ ಅವರು ನೌಕರಿಗೆ ಸೇರದೆ ಕೃಷೀವಲರಾಗಿ - ಹಲಧರನೂ ಚಕ್ರಿಯೂ ಆಗಿ- ಊರಿನಲ್ಲೇ ಉಳಿದವರು. ಸೋದರಮಾವ ವೇ.ಸೂರ್ಯನಾರಾಯಣ ಅವಧಾನಿಗಳ ಪುತ್ರಿ ಸರೋಜಳನ್ನು ವರಿಸಿದ ಅವರಿಗೆ - ಆರತಿಗೊಬ್ಬಳು, ಕೀರ್ತಿಗೊಬ್ಬ! ಮಗಳು ಡಾ. ಕಿರಣಾ (ರತ್ನಾ) ಮತ್ತೂರಿನ ಗಮಕಿ ಎಂ.ಎಸ್.ಕುಮಾರಸ್ವಾಮಿಯನ್ನು ವರಿಸಿ ಮೈಸೂರಿನಲ್ಲಿದ್ದಾಳೆ. ಕಿರಿಯಪುತ್ರ ಶಶಾಂಕ ತಂದೆಯಂತೆ ಇಂಜಿನಿಯರ್- ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿದ್ದಾನೆ.

ನಾರಾಯಣ ಅವಧಾನಿಗಳ ನಾಲ್ಕನೇ ಮಗ ಚಂದ್ರಶೇಖರ ಲೌಕಿಕನಾಗಿರುವ ವೈದಿಕ. ಸಂಸ್ಕೃತದಲ್ಲಿ ಎಂ.ಎ., ಮಾಡಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿರುವ ಅವರು ಹೊಸಹಳ್ಳಿಯ ಪ್ರಖ್ಯಾತ ಜ್ಯೋತಿಷಿ ವೇ. ಶ್ರೀ ನಂಜುಂಡ ಅವಧಾನಿಗಳ ಮಗಳು ವಾಣಿಯನ್ನು ವರಿಸಿದ್ದಾರೆ. ಅವರ ಏಕಮಾತ್ರ ಪುತ್ರಿ ಶ್ರೀವಿದ್ಯಾ ಹೈಯರ್ ಪ್ರೈಮರಿ ಓದುತ್ತಿದ್ದಾಳೆ.

ಕಡೇಮನೆಯ ಕಿರಿಯ ಕುಮಾರ ನಂದ ಲಂಡನ್ ಭಾರತೀಯ ವಿದ್ಯಾಭವನದ ಮುಖ್ಯಸ್ಥ. ಸಂಸ್ಕೃತದಲ್ಲಿ ಎಂ.ಎ., ಮಾಡಿ ಡಾಕ್ಟೊರೇಟ್ ಪಡೆದು ವಿದೇಶಕ್ಕೆ ಹೋದರೂ ಹುಟ್ಟೂರ ಮೋಹ ಸ್ವಲ್ಪವೂ ಬಿಡದವ. ತನ್ನನ್ನು ಸಾಕಿದ ತನ್ನ ಚಿಕ್ಕಮ್ಮ (ತಾಯಿಯ ತಂಗಿ) ಸಾವಿತ್ರಮ್ಮನವರಿಗೆ ಅನಾರೋಗ್ಯವೆಂದು ಕೇಳಿ ಕೂಡಲೇ ಲಂಡನ್‌ನಿಂದ ಊರಿಗೆ ಹಾರುವಷ್ಟು ಭಾವಜೀವಿ. ಪತ್ನಿ ಜಾನಕಿ (ಮತ್ತೂರಿನ ನಾರಾಯಣಮೂರ್ತಿ ಅವರ ಮಗಳು) ಖ್ಯಾತ ಮತ್ತೂರು ಕೃಷ್ಣಮೂರ್ತಿಗಳ ಪಾಲಿತಪುತ್ರಿ. ಅವರಿಗೆ ಇಬ್ಬರು ಮಕ್ಕಳು. ಮಗ ರಘುನಂದನ ಆಕ್ಸ್‌ಫರ್ಡ್‌ನಲ್ಲಿ ಓದುತ್ತಿರುವ ಮತ್ತೂರಿನ ಅಪ್ಪಟ ಸಂಕೇತಿ! ಮಗಳು ಭರತನಾಟ್ಯ ಪ್ರವೀಣೆ ಸೀತಾಲಕ್ಷ್ಮಿ.

**ಕಡೇಮನೆ** ಮತ್ತೂರಿನ ಎಲ್ಲರ ಅಭಿಮಾನಕ್ಕೆ ಪಾತ್ರವಾದ ತೀರ್ಥಕ್ಷೇತ್ರ. ಸದಾಕಾಲ ಗಿಜಿಗುಡುತ್ತ, ಎಲ್ಲರನ್ನೂ ಮುಕ್ತವಾಗಿ ಸ್ವಾಗತಿಸುತ್ತಿರುವ *ಈ* 'ಅರಮನೆ'ಯಲ್ಲಿ ಅತಿಥಿ ಅಭ್ಯಾಗತರೇ ರಾಜರು! ಪ್ರತಿದಿನ ಹತ್ತಾರು ಹೊಸಬರು ಬಂದುಹೋಗುವ ಛತ್ರ. ಮನೆಯ ಹಿರಿಯೊಡತಿ, ಅವರ ಮಕ್ಕಳು, ಸೊಸೆಯರು, ಅವರ

ಸೊಸೆಯರು, ಅವರ ಮಕ್ಕಳು ಎಲ್ಲರೂ ಸುಸಂಸ್ಕೃತರು- ಎಲ್ಲರನ್ನೂ "ಬನ್ನಿ" ಎಂದು ನಗುತ್ತ ಸ್ವಾಗತಿಸುವವರೇ! ಅತಿಥಿಸೇವೆಯನ್ನು ವ್ರತವಾಗಿ ಸ್ವೀಕರಿಸಿರುವವರೇ! ಒಂದು ಕಾಲದಲ್ಲಿ ದುಡಿಯುವ ಕೈ ಕಡಿಮೆಯಿದ್ದು, ತುಂಬಿದ ಸಂಸಾರದಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದ್ದ ದಿನಗಳಲ್ಲೂ ಔದಾರ್ಯಕ್ಕೆ ಉದಾಹರಣೆಯಾಗಿ ಆತಿಥ್ಯಕ್ಕೆ ಹೆಸರಾಗಿದ್ದ ಕಡೇಮನೆ ಈಗ ಸರಸ್ವತಿ ಲಕ್ಷ್ಮಿಯರಿಂದ ಸಂಪನ್ನವಾಗಿದೆ. ವೇದನಿಧಿಗಳು, ಇಂಜಿನಿಯರು, ವೈದ್ಯರು, ಬ್ಯಾಂಕ್ ಅಧಿಕಾರಿಗಳು, ವಿಜ್ಞಾನಿಗಳು, ಕಲಾವಿದರು ಎಲ್ಲರಿಂದ ಪರಿಪುಷ್ಟವಾಗಿದೆ.

ಮೂರನೇ ತಲೆಮಾರಿನ ಹಲವರು ಬೆಂಗಳೂರಿನಲ್ಲಿ ಉದ್ಯೋಗಿಗಳು, ಅದಕ್ಕಾಗಿ ಕಡೇಮನೆಯ ನಾಲ್ಕು ಬ್ರಾಂಚ್ ಆಫೀಸ್‌ಗಳು ಮಲ್ಲೇಶ್ವರದಲ್ಲಿವೆ. ಮನೆಗಳು ನಾಲ್ಕಾದರೂ ಮನಸ್ಸು ಒಂದೇ ! ಅಣ್ಣ-ತಮ್ಮಂದಿರ ಮಕ್ಕಳಲ್ಲಿ ಪ್ರತ್ಯೇಕತೆ ಮೂಡದಿರಲು ಎರಡು-ಮೂರು ತಿಂಗಳಿಗೊಮ್ಮೆ ಪರಸ್ಪರ ಮನೆ ಬದಲಾಯಿಸಿ ಸರದಿಯಲ್ಲಿ ಎಲ್ಲರೂ ಎಲ್ಲರೊಡನೆಯೂ ಇರುವಂತೆ ನೋಡಿಕೊಳ್ಳುತ್ತಾರೆ. ಹತ್ತಾರು ಮನೆಗಳಿಂದ ಬಂದ ಸೊಸೆಯರೂ ಅಕ್ಕ-ತಂಗಿಯರಂತೆ ಹೊಂದಿಕೊಂಡು ಒಟ್ಟಾಗಿ ಇರುವ, ಸಾಗುವ, ಬಾಳುವ ಛಲ ಅವರದು. **ಕೂಡಿ ಬಾಳಿದರೆ ಸ್ವರ್ಗಸುಖ** ಎಂದರೇನೆಂಬುದನ್ನು ತಿಳಿಯಲು ಒಮ್ಮೆ ಬಂದು ನೋಡಬೇಕು ಕಡೇಮನೆಯನ್ನು! ಮೊದಲ ಮಣೆಗೇರುವ ಮಹಾನುಭಾವರ ಆಶ್ರಮವನ್ನು!



***209.** ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಪರಿವಾರದ ಚಿತ್ರ*

# ೧೯. ಮರೆಯಲಾಗದ ಮತ್ತೂರು

*ಮಿತ್ರವಿಂದಾ ಸುಬ್ರಹ್ಮಣ್ಯ : ಸಂಕೇತಿ ಸಂಗಮ : ಮಾರ್ಚ್, ೨೦೦೩*




*210. ಪುರೋಹಿತರಾಗಿ ವೇ. ಶ್ರೀ ಮಾರ್ಕಂಡೇಯ ಅವಧಾನಿಗಳು - ಶ್ರೀ ಮತ್ತೂರು ಕೃಷ್ಣ ಮೂರ್ತಿಗಳೊಂದಿಗೆ (ಮಹಾಮೃತ್ತಿಕಾ ಸ್ನಾನದನಂತರ ಮನೆಗೆ )*

. . . ನಮಗೆ ಶ್ರೀಯುತ ಮಾರ್ಕಂಡೇಯ ಅವಧಾನಿಗಳ ಮನೆಯಲ್ಲಿ ಸಾಕಷ್ಟು ಆತಿಥ್ಯ, ಸುಗ್ರಾಸ ಭೋಜನವಾಯಿತು. ಅವರು ಮತ್ತೂರಿನ ಕುಲಪುರೋಹಿತರು. ತುಂಬ ದೊಡ್ಡ ಕುಟುಂಬ, ತುಂಬಿದ ಮನೆ (ಎಲ್ಲ ರೀತಿಯಲ್ಲೂ); ವಯೋವೃದ್ಧರಾದ ತಾಯಿ, ಸುಮಾರು ೮೬-೮೭ ವರ್ಷದವರು; ಐದು ಜನ ಅಣ್ಣ ತಮ್ಮಂದಿರು. ಮಾರ್ಕಂಡೇಯ ಅವಧಾನಿಗಳು ಹಿರಿಯರು. ತಮ್ಮಂದಿರಿಗೆ ಅಣ್ಣನಲ್ಲಿ ತುಂಬ ಗೌರವ, ಅಣ್ಣನಿಗೆ ತಮ್ಮಂದಿರಲ್ಲಿ ತುಂಬ ಪ್ರೀತಿ; ಅನ್ಯೋನ್ಯವಾದ ಕುಟುಂಬ. ಅಣ್ಣ-ತಮ್ಮಂದಿರು, ಅವರ ಮಕ್ಕಳು ಸಹ ಒಳ್ಳೆ ವೇದಾಧ್ಯಯನ ಸಂಪನ್ನರು. ಅವಧಾನಿಗಳು ಗಮಕ ವ್ಯಾಖ್ಯಾನದಲ್ಲೂ ನಿಷ್ಣಾತರು, ಊರಿನಲ್ಲಿ ಅನೇಕರಿಗೆ ಈ ವಿದ್ಯೆಗಳನ್ನು ಕಲಿಸಿದ ಗುರುಗಳು. ಅವಧಾನಿಗಳ ತೀ. ತಂದೆಯವರು ಹೊಳೆನರಸೀಪುರದ ಸ್ವಾಮಿಗಳಿಗೂ, ದ್ವಾರಕಾಪೀಠದ ಸ್ವಾಮಿಗಳಿಗೂ ಸಂನ್ಯಾಸದೀಕ್ಷೆ ಕೊಟ್ಟಂತಹ ಮಹಾ ವಿದ್ವಾಂಸರು. ಮನೆಯ ಹಜಾರದಲ್ಲಿ, ದ್ವಾರಕಾಪೀಠಾಧೀಶರು ಅವರಿಗೆ ಗೌರವಿಸಿ ಕೊಟ್ಟ ಶಾಲು, ತಲೆಯ ಪಾಗಿನೊಡನೆ ಇರುವ ಅವರ ಫೋಟೋ ಹಾಕಿದ್ದಾರೆ. ಅದನ್ನು ಅವಧಾನಿಗಳು ತುಂಬ ಭಕ್ತಿ, ಅಭಿಮಾನಗಳಿಂದ ನಮಗೆ ತೋರಿಸಿದರು. ಅವರ ಮನೆ ಸುಮಾರು ನೂರು ವರ್ಷದ್ದು. ಹಳೆಯ ಕಟ್ಟಡದ ಜತೆಗೆ, ಸಂಸಾರ ಬೆಳೆದಂತೆ, ಆಧುನಿಕ ಸೌಲಭ್ಯಗಳಿಂದ ಕೂಡಿದ ಹೊಸ ಸೇರ್ಪಡೆಗಳಾಗಿ, ಮನೆ ಬೆಳೆದು ಬೆಳೆದು ತುಂಬ ದೊಡ್ಡ ಕಟ್ಟಡವಾಗಿದೆ. ಹಳೆಯ ಮನೆಯನ್ನು ತಾವೇ ಸ್ವತಃ ಕಟ್ಟಿದ್ದಾಗಿ ತಿಳಿಸಿದರು. ಕೆಲವು ಮರಗೆಲಸಗಳನ್ನೂ ಮನೆಯವರೇ ಮಾಡಿದ್ದಾಗಿ ತೋರಿಸಿದರು. ಆ ಕೆಲಸದ ಅಚ್ಚುಕಟ್ಟುತನ ನೋಡಿ ನಮಗೆ ಆಶ್ಚರ್ಯ ವಾಯಿತು. ಸಾಧಾರಣ ಎಲ್ಲ ಮನೆಗಳ ಕಟ್ಟಡವೂ ಹಳ್ಳಿಗಾಡಿನ ಮನೆಗಳೇ ಆದರೂ ಕೆಲಸ ಎಷ್ಟು ನಯವಾಗಿ ಕ್ರಮಬದ್ಧವಾಗಿತ್ತೆಂದರೆ, ಭಗವದ್ಗೀತೆಯಲ್ಲಿ ಕೃಷ್ಣ ಹೇಳಿರುವ 'ಮಾಡುವ ಕಾರ್ಯದಲ್ಲಿನ ಶ್ರದ್ಧೆಯೇ ನನ್ನ ಆರಾಧನೆ' ಎನ್ನುವ ಮಾತು ನೆನಪಾಯಿತು. ಅವರು ಎಲ್ಲ ಕೆಲಸಗಳಲ್ಲೂ ಅಭ್ಯಾಸ ಮಾಡಿಕೊಂಡಿರಬೇಕು ಎನ್ನಿಸಿ, ಅವರುಗಳು ನಿಜಕ್ಕೂ **ಕರ್ಮಯೋಗಿಗಳು** ಎನ್ನಿಸಿತು.

ಮಾರ್ಕಂಡೇಯ ಅವಧಾನಿಗಳು, ಮತ್ತೊಂದು ಅಪೂರ್ವವಾದ ಕೆಲಸವನ್ನು ಮತ್ತೂರಿನಲ್ಲಿ ಕೈಗೆತ್ತಿಕೊಂಡಿದ್ದಾರೆ: ನದೀತೀರದಲ್ಲಿ ವಿಶಾಲವಾದ ಬಯಲಿನಲ್ಲಿ, ಈಶ್ವರಲಿಂಗ, ಗಣಪತಿ ಮುಂತಾದ ದೇವರ ವಿಗ್ರಹಗಳು, ವ್ಯಾಸರೇ ಮುಂತಾದ ಮುನಿಗಳ, ಕುಮಾರವ್ಯಾಸನ ಮೂರ್ತಿಗಳನ್ನು ಕಲ್ಲಿನಲ್ಲಿ ಕಡೆಸಿ, ಸುತ್ತ ಹೂದೋಟ ಮಾಡಿ, ಒಂದು ದೇವವನದಂತೆ ಮಾಡಿ ಎಲ್ಲ ಜಾತಿಯ ಜನರೂ ತಾವೇ ಸ್ವತಃ ಈಶ್ವರನ ಪೂಜೆ ಮಾಡಲು ಅವಕಾಶ ಕಲ್ಪಿಸಿಕೊಡುವ ಪ್ರಯತ್ನ. ಸಮೀಪದಲ್ಲಿರುವ ನದಿಯಲ್ಲಿ ಸ್ನಾನಮಾಡಿ ಅಲ್ಲಿಂದಲೇ ಗಂಗೆ ತಂದು ಈಶ್ವರನಿಗೆ ಪೂಜೆ ಸಲ್ಲಿಸುವ ಒಂದು ಸುಂದರ ಅವಕಾಶ. ಎಂತಹ ಉದಾತ್ತ ಚಿಂತನೆ! ನಾವು ಕೂಡ ನದೀ ಸ್ನಾನ ಮಾಡಿ, ಅವಧಾನಿಗಳು, ಅವರ ತಮ್ಮ ಚಂದ್ರಶೇಖರ್ ಮತ್ತು ಮತ್ತೂರ್‌ಜೀಯವರು ಶ್ರೀ ರುದ್ರಮಂತ್ರ ಹೇಳುತ್ತ ಇದ್ದಾಗ ಈಶ್ವರನಿಗೆ ಅಭಿಷೇಕ ಪೂಜೆ ಮಾಡಿ ಸಂತೋಷಪಟ್ಟೆವು.

ನಾವು ಹಿಂದಿರುಗುವ ರಾತ್ರಿ ಹೊಸಹಳ್ಳಿಯ ಗಮಕ ವಿದ್ವಾನ್



***211. ಚಿ. ರಾ. ರಘು (ನಂದಕುಮಾರ್ ಅವರ ಮಗ) :***
***ಉಪನಯನ : ಸೂರ್ಯೋಪಸ್ಥಾನ***

ಶ್ರೀ ಕೇಶವಮೂರ್ತಿಗಳ ಮನೆಯಲ್ಲಿ ನಮಗೆ ಆತಿಥ್ಯ. ಅಲ್ಲೂ ಇಂತಹದೇ ವಾತಾವರಣ; ಅದೇ ಅನ್ಯೋನ್ಯ, ಸಮೃದ್ಧಿಯ ಜೀವನ; ಅದೇ ಆತ್ಮೀಯ ಆತಿಥ್ಯ, ಸರಳತೆ. ಅದೇ ನಾನು ಹೇಳಿದ ಕೊಂಡಿ, ಎಲ್ಲಿ ಹೋದರೂ ಬಿಡದೆ ಉಳಿಸಿಕೊಂಡಿರುವ ಅವರ ಪೂರ್ವಿಕರ ಮೌಲ್ಯಗಳು. ಅವರ ಊರಿನ ನೆಲದ ಒಂದು ಸುಗಂಧ ಇದು; ತುಂಬ ಶ್ಲಾಘನೀಯವಾದ ವಿಷಯ. ಹೊಸಹಳ್ಳಿ ಮತ್ತು ಮತ್ತೂರಿನ ಸಂಕೇತಿ ಜನಾಂಗದವರು ಹೆಚ್ಚು ಕಮ್ಮಿ ಒಂದಲ್ಲ ಒಂದು ರೀತಿ ಒಬ್ಬರಿಗೊಬ್ಬರು ಸಂಬಂಧಿಕರೇ. ಬಹುಶಃ ಇದು ಸಹ ಅವರುಗಳಿಗೆ ತಮ್ಮತನವನ್ನು ಬಿಡದೇ ಉಳಿಸಿಕೊಂಡು ಬರುವಲ್ಲಿ ಸಹಾಯಕವಾಗಿರಬಹುದು.

ಅಂತೂ ಮತ್ತೂರಿನ ನಮ್ಮ ಪ್ರವಾಸ ಮರೆಯಲಾಗದ ಒಂದು ಅನುಭವ, ಬಂಗಾರದ ಹೂವಿಗೆ ಪರಿಮಳವಿಟ್ಟಂತೆ.



***212. ಋಷಿ ಪಂಚಮೀ ಪೂಜಾ ಸಂದರ್ಭ***

# ೨೦. ಕುಮಾರವ್ಯಾಸ ಭಾರತದ ಧ್ವನಿಸುರುಳಿಗಳು

**(ಮತ್ತೂರ್‌ಜೀ ಅವರೊಂದಿಗಿನ ಸಂದರ್ಶನದ ಆಯ್ದ ಭಾಗ)**

***ಪ್ರೊ. ಎಂ.ಎನ್. ಚಂದ್ರಶೇಖರ್ : ಸಂಕೇತ ಸಂಪದ ವಿಶೇಷಾಂಕ : ಜುಲೈ '೯೯***

***ಚಂದ್ರಶೇಖರ್: ಮತ್ತೂರು ಕೃಷ್ಣಮೂರ್ತಿಗಳೇ! ಹಿಂದೆ ಹೊಸಹಳ್ಳಿಯ ಗಮಕ ಕಲಾ ಪರಿಷತ್ತು- ಪೂಜ್ಯ ಲಕ್ಷ್ಮೀಕೇಶವ ಶಾಸ್ತ್ರಿಗಳು ಮತ್ತು ಕೇಶವಮೂರ್ತಿಗಳಿಂದ ಕುಮಾರವ್ಯಾಸ ಭಾರತ ಧ್ವನಿಮುದ್ರಣವನ್ನು; ವೇದಮೂರ್ತಿ ಶ್ರೀ ಮಾರ್ಕಂಡೇಯ ಅವಧಾನಿಗಳ ಮತ್ತು***



*213. ಶ್ರೀ ಮಾರ್ಕಂಡೇಯ ಅವಧಾನಿಗಳು ಹೆಚ್.ಎಂ.ಟಿ. ಛೇರ್‌ಮನ್— ಶ್ರೀ ರಾಮಾನುಜ ಅವರೊಂದಿಗೆ. ನಡುವೆ ಮತ್ತೂರ್‌ಜೀ*

***ಕೇಶವಮೂರ್ತಿಗಳ ಕಂಠಶ್ರೀಯಲ್ಲಿ ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯಗಳ ಧ್ವನಿಮುದ್ರಣವನ್ನು ಹೊರತಂದಿದೆ. ಆದರೆ ಇಂದು ನೀವು ೨೦೦ ಗಂಟೆಗಳ ಕಾಲದ ಧ್ವನಿಸುರುಳಿಗಳನ್ನು ಹೊರತಂದಿದ್ದೀರಿ. ಇಂತಹ ಮಹಾನ್ ಕೆಲಸ ಸಾಧ್ಯವಾದದ್ದಾರೂ ಹೇಗೆ?***

**ಮತ್ತೂರ್‌ಜೀ:** ನನಗೆ ನೆನಪಿರುವಂತೆ:- ಲಂಡನ್‌ನಿಂದ ಬೆಂಗಳೂರಿಗೆ ಬಂದೆ. ಬೆಂಗಳೂರು ವಿದ್ಯಾಭವನದ ಕಾರ್ಯಕಾರೀ ನಿರ್ದೇಶಕನಾದೆ. ಒಂದು ದಿನ ಕೃಷ್ಣರಾಯಭಾರ ಭಾಗದ ಗಮಕ ವಾಚನ ವ್ಯಾಖ್ಯಾನ ಹೊಸಹಳ್ಳಿ ಕೇಶವಮೂರ್ತಿ ಮತ್ತು ನನ್ನಿಂದ ನಡೆಯುತ್ತಿತ್ತು. ಹೆಚ್.ಎಂ.ಟಿ.ಯಲ್ಲಿ ಉದ್ಯೋಗಿಯಾದ ಶ್ರೀ ಸಾಯಿಪ್ರಸಾದ್‌ರು, ಛೇರ್‌ಮನ್ ಆಗಿದ್ದ ಶ್ರೀ ರಾಮಾನುಜಂ ಅವರನ್ನು ಕರೆದುಕೊಂಡು ಬಂದಿದ್ದರು. ಅಂದಿನ ವಾಚನ ವ್ಯಾಖ್ಯಾನವನ್ನು ಕೇಳಿ, ಕುಮಾರವ್ಯಾಸನ ಬಗ್ಗೆ ಇದ್ದ ಅವರ ಅಭಿಮಾನ, ಗಮಕ ವಾಚನ ವ್ಯಾಖ್ಯಾನ ಕಲೆಯ ಬಗ್ಗೆ ಇದ್ದ ಅವರ ಪ್ರೀತಿ ನೂರ್ಮಡಿಯಾಯಿತಂತೆ. ರೆಕಾರ್ಡ್ ಮಾಡಿದ ಟೇಪನ್ನು ಹೆಚ್.ಎಂ.ಟಿ. ಮ್ಯಾನೇಜಿಂಗ್ ಕಮಿಟಿ ಸಮ್ಮುಖದಲ್ಲಿ ಕೇಳಿಸಿ ಕನ್ನಡದ ಸೇವೆಗೆ, ನಮ್ಮ ಸಂಸ್ಕೃತಿಯ ಸೇವೆಗೆ ಮುಂದಾಗಿ ಇಡೀ ಕುಮಾರವ್ಯಾಸ ಭಾರತವನ್ನು ಎಚ್.ಆರ್. ಕೇಶವಮೂರ್ತಿಗಳ ವಾಚನದೊಂದಿಗೆ ನನ್ನನ್ನು ವ್ಯಾಖ್ಯಾನ ಮಾಡಲು ಕೇಳಿದರು. ತತ್‌ಕ್ಷಣ ಆನಂದಬಾಷ್ಪಗಳೊಡನೆ ಒಪ್ಪಿಕೊಂಡೆವು. ಹೆಚ್.ಎಂ.ಟಿ. ಯವರ ಸಹಕಾರವೇ ಇದಕ್ಕೆ ಮುಖ್ಯ ಕಾರಣ.

**ವ್ಯಾಖ್ಯಾನದ ಕಲೆಗೆ ನೀವು ಹೇಗೆ ಯಾರಿಂದ ಪ್ರಚೋದಿತರಾದಿರಿ ?**

ಸುಮಾರು ೪೫-೫೦ ವರ್ಷದ ಮಾತು. ಪೂಜ್ಯ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿಗಳು ಮತ್ತು ಶ್ರೀ ರಾಮಶಾಸ್ತ್ರಿಗಳು ಮಲ್ಲೇಶ್ವರಂ ರಾಮಮಂದಿರದಲ್ಲಿ ಕುಮಾರವ್ಯಾಸಭಾರತದ ವಾಚನ-ವ್ಯಾಖ್ಯಾನ ಮಾಡುತ್ತಿದ್ದರು. ಲಕ್ಷ್ಮೀಕೇಶವಶಾಸ್ತ್ರಿಗಳು ವ್ಯಾಖ್ಯಾನ ಮಾಡುತ್ತಿದ್ದಾಗ ಆಯಾಪಾತ್ರಗಳ ಮಾತನ್ನು ಅಭಿನಯದ ಮೂಲಕ ಆ ಪಾತ್ರವೇ ಆಗಿ ತೋರಿಸುತ್ತಿದ್ದರು. ವೀರ-ಹಾಸ್ಯರಸಗಳ ಪ್ರವಾಹವೇ ಕೋಡಿ ಹರಿಯುತ್ತಿತ್ತು. ಅವರ ವ್ಯಾಖ್ಯಾನವನ್ನು ನೋಡಿ, ಕೇಳಿ ಮುಗ್ಧನಾದೆ. ಎಂದಾದರೂ ನಾನೂ ಅವರಂತೆ ಮಾಡಬೇಕೆಂಬ ಆಸೆ ಚಿಗುರಿತು. ಆಗ ನಾನು ರಾಜಾಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಏಪ್ರಿಲ್ ೨೫-೧೯೫೬, ಶಾಸ್ತ್ರಿಗಳ ಮನೆಯಲ್ಲಿ

ಅವರ ತಂದೆಯ ವೈದಿಕ. ಒಂದು ವಾರ ಅವರು ಊರಿಗೆ ಹೋಗಬೇಕಾಗಿತ್ತು. ನಮ್ಮ ಮನೆಗೆ ಬಂದು "ಚಿರಂಜೀವಿ ಕೃಷ್ಣಮೂರ್ತಿ, ನಾವು ಊರಿಗೆ ಹೋಗಬೇಕಾಗಿದೆ. ನೀನು ಮತ್ತು ಹೊಸಹಳ್ಳಿ ರಾಮಶಾಸ್ತ್ರಿ 'ಅಭಿಮನ್ಯುವಧೆ' ಮತ್ತು 'ಜಯದ್ರಥವಧೆ' ಪ್ರಸಂಗವನ್ನು ಮಾಡಿ" ಅಂತ ಹೇಳಿದರು. ನನಗೋ ತುಂಬ ಇಷ್ಟವಾಯಿತು. "ದೇವರೆ, ವಾರಕ್ಕೆ ಎರಡು ದಿನ ಇವರ ಮನೆಯಲ್ಲಿ ಹಬ್ಬಹರಿದಿನ ಬರಬಾರದೆ?" ಅಂದುಕೊಂಡೆ. *ಈ* ಪ್ರಸಂಗಗಳು ನನಗೆ ಅತಿ ಮೆಚ್ಚಿನ ಭಾಗ. ಒಂದು ವಾರ ಕಾಲ ನಾನು ಹೊಸಹಳ್ಳಿ ರಾಮಶಾಸ್ತ್ರಿ ಮಾಡಿದೆವು. ಒಂದು ವಾರ ಕಳೆದ ಮೇಲೆ ಶಾಸ್ತ್ರಿಗಳು ಊರಿಂದ ವಾಪಸ್ಸು ಬಂದ ಮೇಲೆ ರಾಮಮಂದಿರದ ಅಧ್ಯಕ್ಷರಾದ ಶ್ರೀ ಎಸ್.ಕೆ. ರಾಮಾನುಜ ಅಯ್ಯಂಗಾರ್ ಅವರು "ಲಕ್ಷ್ಮೀಕೇಶವಶಾಸ್ತ್ರಿಗಳೇ! ನಿಮ್ಮೂರಿನವರೇ ಆದ ಹೊ.ರಾಮಶಾಸ್ತ್ರಿ ಮತ್ತು ಮತ್ತೂರು ಕೃಷ್ಣಮೂರ್ತಿಗಳು ಬಲು ಚೆನ್ನಾಗಿ ನಿರ್ವಹಿಸಿದರು. ನಿಮ್ಮದಾದ ಮೇಲೆ ಒಂದು ತಿಂಗಳು *ಈ* ಜೋಡಿ ಕುಮಾರವ್ಯಾಸ ಭಾರತವನ್ನು ಮುಂದುವರೆಸುತ್ತಾರೆ" ಎಂದು ಪ್ರೋತ್ಸಾಹಿಸಿದ್ದು ನನ್ನ ಕಿವಿಯಲ್ಲಿ ಕೇಳಿಸುತ್ತಿದೆ. ಇದು ಹೆಚ್ಚಿನ ಪ್ರೋತ್ಸಾಹ ಕೊಟ್ಟಿತು. ಅಂದಿನಿಂದ ಮಹಾಭಾರತವನ್ನು ಓದಿ ಆಯಾ ಕಥಾಭಾಗದ ಬಗ್ಗೆ ಬರೆಯುವುದನ್ನು ರೂಢಿಸಿಕೊಂಡೆ.




***214.** ಬಸವಾನಿ, ಕಸ್ತೂರ್‌ಬಾ ಆಶ್ರಮ ಟ್ರಸ್ಟ್‌ನವರು ಗೌರವಿಸಿದ ಸಮಾರಂಭ :*
*ಮತ್ತೂರ್‌ಜೀ ಮತ್ತು ಡಾ. ಅಶೋಕ ಪೈ ದಂಪತಿಗಳೊಂದಿಗೆ ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು*

# ೨೧. ಇನ್ನೂರು ಧ್ವನಿಸುರುಳಿಯಲ್ಲಿ ಕುಮಾರವ್ಯಾಸ

**ಮತ್ತೂರ್‌ಜೀ-ಜೀವನಗಾಥೆ : ನಿರೂಪಣೆ : ಸುಮನಾ ವಿಶ್ವನಾಥ್**

. . . ಅಣ್ಣನವರ ಮರಣದ ನೆನಪು ಮತ್ತೆ ನನ್ನನ್ನು ಲಂಡನ್ನಿಗೆ ಕರೆದೊಯ್ದಿತ್ತು! ಅಣ್ಣನವರು ತೀರಿಕೊಂಡ ಎರಡು ವರ್ಷಗಳಲ್ಲೇ ನಾನು ನಿವೃತ್ತನಾಗಿ ಭಾರತಕ್ಕೆ ವಾಪಸ್ಸು ಬಂದೆ. ಈಗ ಅಣ್ಣನವರಿಗೆ ಸೇವೆ ಮಾಡುವ ಅದೃಷ್ಟ ನನಗಿಲ್ಲದಿದ್ದರೂ, ನಮ್ಮ ಅತ್ತಿಗೆಗೆ ನನ್ನ ಕೈಲಾದ ಸೇವೆ ಮಾಡುವ ಭಾಗ್ಯವಂತೂ ಇದೆ. ಇಂತಹ ಅಣ್ಣ-



***215.** ವಿಶ್ವಶಾಂತಿ ಯಾಗವನ್ನು ಮಾಡಿಸಿದ ಶ್ರೀಮತಿ ಪ್ರಿಯಂವದಾ ಬಿರ್ಲಾ ಅವರನ್ನು ಆಶೀರ್ವದಿಸುತ್ತಿರುವುದು*

ಅತ್ತಿಗೆಯರ ಸ್ಮರಣೆ ಮಾಡಿ, ಕುಮಾರವ್ಯಾಸ ಭಾರತದ ಟೇಪಿನ ಧ್ವನಿಮುದ್ರಣದ ಸಾಹಸಕ್ಕೆ ಹೊರಟಿದ್ದೆ!

'ಕುಮಾರವ್ಯಾಸ' ಭಾರತದ ಟೇಪಿನ ಧ್ವನಿ ಮುದ್ರಣ ಶ್ರೀ ಅರವಿಂದ ಸ್ಟುಡಿಯೋದಲ್ಲಿ ಪ್ರಾರಂಭವಾಗಿಯೇ ಹೋಯಿತು!! ಶ್ರೀ ಕೇಶವ ಮೂರ್ತಿಗಳು ಸಂಭ್ರಮದಿಂದ ಹೊಸಹಳ್ಳಿಯಿಂದ ಬಂದರು. ರೆಕಾರ್ಡಿಂಗ್ ಎನ್ನುವುದು ಅವರಿಗೆ ಹೊಸದು, ಆದ್ದರಿಂದ ಪ್ರಾರಂಭದಲ್ಲಿ ಕೆಲವು ದಿನಗಳು ಅವರಿಗೆ ಅವರ ಹಾಡುಗಾರಿಕೆಯನ್ನು ಸರಿ ಹೊಂದಿಸಿಕೊಳ್ಳುವುದು ಸ್ವಲ್ಪ ಕಷ್ಟವಾಯಿತು. ಸಾಲದ್ದಕ್ಕೆ ಅಲ್ಲಿ ಯಾರೂ ಶ್ರೋತೃಗಳೂ ಇರುತ್ತಿರಲಿಲ್ಲ. ನಾನು, ಕೇಶವಮೂರ್ತಿ, ರೆಕಾರ್ಡು ಮಾಡುವ ಹುಡುಗರು, ಅರವಿಂದರು ಇಷ್ಟೇ ಜನ ನಾವು ಸ್ಟುಡಿಯೋದಲ್ಲಿ ಇರುತ್ತಿದ್ದುದು. ಸಾಮಾನ್ಯವಾಗಿ ಹಾಡುವವರಿಗೆ ಪ್ರೇಕ್ಷಕ ಶ್ರೋತೃಗಳಿಲ್ಲದಿದ್ದರೆ ಹಾಡಲು ಸ್ಫೂರ್ತಿ ಎನಿಸದು! ಅದು ಎಲ್ಲ ಕಲಾವಿದರಲ್ಲಿ ಇರುವ ಗುಣ. ಅದು ಶ್ರೀ ಕೇಶವಮೂರ್ತಿಯವರಲ್ಲೂ ಇದ್ದು, ಅವರು ಈ ಹೊಸ ರೀತಿಯ ಹಾಡುಗಾರಿಕೆಗೆ ತಮ್ಮನ್ನು ತಾವು ಹೊಂದಿಸಿಕೊಳ್ಳಬೇಕಿತ್ತು. ಆದರೆ ಅವರು ನಾನು ನಿರೀಕ್ಷಿಸಿದುದಕ್ಕಿಂತಲೂ ಬಹಳ ಬೇಗ ಬದಲಾದ ವಾತಾವರಣಕ್ಕೆ, ರೆಕಾರ್ಡಿಂಗ್ ರೀತಿಗೆ ಹೊಂದಿಕೊಂಡು, ತಮ್ಮ ಉದ್ದಾಮ ಪಾಂಡಿತ್ಯವನ್ನು ಪ್ರದರ್ಶಿಸಲೂ ಪ್ರಾರಂಭಿಸಿದರು!! ನನಗೆ ಈ ವಿಷಯದಲ್ಲಿ ಅಷ್ಟು ಕಷ್ಟ ಎನಿಸಲಿಲ್ಲ. ಬಿ.ಬಿ.ಸಿ.ಯಲ್ಲಿ ಭಾಷಣಗಳನ್ನು ರೆಕಾರ್ಡು ಮಾಡುವಾಗ ನನಗೆ ಹೀಗೆ ಸ್ಟುಡಿಯೋದಲ್ಲಿ ಕುಳಿತು ಮಾತನಾಡುವುದು ಅಭ್ಯಾಸವಾಗಿತ್ತು. ಸ್ಟುಡಿಯೋದಲ್ಲಿ ನಾಲ್ಕಾರು ಜನ ಮಾತ್ರವೇ ಇದ್ದರೂ, ನಾವು ರೆಕಾರ್ಡು ಮಾಡಿದ್ದು ಪ್ರಪಂಚದಾದ್ಯಂತ ನೋಡುವವರು ಇರುತ್ತಾರೆ ಎನ್ನುವ ಅರಿವೂ ಹಾಗೆ ಭಾಷಣ ಮಾಡುವಾಗ ಯಾವ ಭಾವವೂ ತಪ್ಪಿ ಹೋಗದಂತೆ, ಎದುರಿಗೆ ಸಾವಿರಾರು ಮಂದಿ ಕುಳಿತು ಕೇಳುತ್ತಿರುವಂತೆ ಭಾವಿಸಿಯೇ ಮಾತನಾಡುವುದೂ ನನಗೆ ರೂಢಿಯಾಗಿತ್ತು. ಅಂತೂ ನಾವಿಬ್ಬರೂ ಬಹಳ ಉತ್ಸಾಹದಿಂದ ಕುಮಾರವ್ಯಾಸನ ಕಾವ್ಯದ ಯಾವ ಸ್ವಾರಸ್ಯವೂ ಬಿಟ್ಟು ಹೋಗದಂತೆ ಎಚ್ಚರವಹಿಸಿ, ಸಾಕಷ್ಟು ಸಿದ್ಧತೆ ನಡೆಸಿ ಧ್ವನಿಮುದ್ರಣ ಕಾರ್ಯದಲ್ಲಿ ನಮ್ಮನ್ನು ತೊಡಗಿಸಿಕೊಂಡೆವು. ನಾನು ಹಗಲು-ರಾತ್ರಿ ಎನ್ನದೆ ಪ್ರತಿ ಸನ್ನಿವೇಶಕ್ಕೂ ಸೂಕ್ತವಾದ, ಸಮಂಜಸವಾದ ವಿವರಣೆಗಳನ್ನು ಬರೆದುಕೊಳ್ಳುವುದು, ಅದರ ಪ್ರಕಾರ, ಅದಕ್ಕೆ ಪೂರಕವಾಗಿ ಪದ್ಯಗಳನ್ನು ಆರಿಸಿಕೊಳ್ಳುವುದು, ಶ್ರೀ ಕೇಶವಮೂರ್ತಿಯವರು ಅದಕ್ಕೆ ತಕ್ಕ ರಾಗ ಹಾಕಿ

ಹೃದಯಂಗಮವಾಗಿ ಹಾಡುವುದು... ಈ ಕೆಲಸ ಬಿಡುವಿಲ್ಲದೆ ಆಗಿ, ವಾರಕ್ಕೆ ಐದು-ಆರು ದಿನಗಳಂತೆ ರೆಕಾರ್ಡಿಂಗ್ ನಡೆದು ಸುಮಾರು ಮೂರು ವರ್ಷ, ಒಂಬತ್ತು ತಿಂಗಳ ಕಾಲ ಅವಿರತವಾಗಿ ಈ ಸ್ಟುಡಿಯೋ ಕಾರ್ಯಕ್ರಮ ನಡೆಯಿತು!! ನಿಜಕ್ಕೂ ಆಗ ದಿನಗಳು ಉರುಳಿದುದೇ ತಿಳಿಯುತ್ತಿರಲಿಲ್ಲ! ಬೆಳಗು ಆದದ್ದೇ ತಿಳಿಯುತ್ತಿದ್ದುದು, ರಾತ್ರಿ ಬಂದದ್ದೇ ತಿಳಿಯುತ್ತಿರಲಿಲ್ಲ! ಭವನದ ಕೆಲಸದ ಜತೆ ಜತೆಗೆ ಸಾಗುತ್ತಿದ್ದ ಈ ಕೆಲಸ ನನ್ನ ವಯಸ್ಸು, ಶರೀರಕ್ಕಾಗುವ ದಣಿವು ಎಲ್ಲವನ್ನೂ ಮರೆಸಿತ್ತು. ವಿದ್ಯಾಭವನವೂ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲವಷ್ಟೇ ಅದು. ಅದರಿಂದಾಗಿ ಭವನದ ಸಾಕಷ್ಟು ಕೆಲಸಗಳೂ ನನಗಾಗಿ ಕಾದಿರುತ್ತಿದ್ದವು. ಬೆಳಗ್ಗೆ ಒಂಬತ್ತರಿಂದ ಮಧ್ಯಾಹ್ನ ಒಂದು-ಎರಡು ಗಂಟೆಯ ತನಕ ರೆಕಾರ್ಡಿಂಗ್ ಮುಗಿಸಿ, ಮನೆಗೆ ಬಂದು, ಸೇರಿದುದಷ್ಟನ್ನು ತಿಂದ ಶಾಸ್ತ್ರ ಮಾಡಿ, ಅರ್ಧಗಂಟೆ ವಿರಾಮ ತೆಗೆದುಕೊಂಡು, ಮೂರರ ವೇಳೆಗೆ ಭವನಕ್ಕೆ ಹೋದರೆ, ಸಂಜೆ ಏಳರ ತನಕ ಅಲ್ಲಿನ ಕೆಲಸ! ಮತ್ತೆ ಅಲ್ಲಿಂದ ಬಂದು ಮನೆಯಲ್ಲಿ ಕುಳಿತು ಮಾರನೆಯ ದಿನದ ರೆಕಾರ್ಡಿಂಗ್‌ಗೆ ಬರೆದುಕೊಳ್ಳುವುದು... ರಾತ್ರಿ ಹನ್ನೊಂದರ ವೇಳೆಗೆ ಶರೀರ - 'ಇನ್ನು ನಾ ತಾಳಲಾರೆ' ಎಂದೂ, ಕೈ, - 'ನಾನಿನ್ನು ಬರೆಯಲಾರೆ' ಎಂದೂ ಮುಷ್ಕರ ಹೂಡಿದಾಗಲೇ ದಿಂಬಿಗೆ ತಲೆಯಾನಿಸಿದರೆ ನಿದ್ರಾದೇವಿ ಕ್ಷಣ ಮಾತ್ರದಲ್ಲಿ ನನ್ನನ್ನು ತನ್ನ ಮಡಿಲಿಗೆ ಹಾಕಿಕೊಳ್ಳುತ್ತಿದ್ದಳು... ಆ ತಾಯಿಯ ಕರುಣೆಯಿಂದ ದಿನದ ಆಯಾಸವೆಲ್ಲ ಪರಿಹಾರವಾದಂತಾಗಿ, ಬೆಳಗ್ಗೆ ನಾಲ್ಕಕ್ಕೇ ಮತ್ತೆ ಎಚ್ಚರ. ಮತ್ತೆ ಕಾವ್ಯ ಓದಿಕೊಳ್ಳುವುದು, ಪದ್ಯ ಆರಿಸುವುದು, ಸಂದರ್ಭಕ್ಕೆ ತಕ್ಕ ಮಾತುಗಳನ್ನು ಸೇರಿಸಿ ಒಂದೆಡೆ ಇಟ್ಟುಕೊಳ್ಳುವುದು.... ಒಂದೇ ಎರಡೇ!! ರೆಕಾರ್ಡಿಂಗ್ ಆಗುವಾಗ ಮಧ್ಯೆ ಎಲ್ಲೂ ತಪ್ಪುವಂತಿಲ್ಲ. ತಪ್ಪಿದರೆ ಮತ್ತೆ ಅದನ್ನು ಅಳಿಸಿ, ಹಿಂದೆ ಹೋಗಬೇಕು, ತಪ್ಪಾದ ಹಿಂದಿನ ಭಾಗದಿಂದಲೇ ಪ್ರಾರಂಭಿಸಬೇಕು. ಹಾಗೆ ತಪ್ಪಾಗಿ ಅಳಿಸುವಾಗ ಟೇಪು ನಷ್ಟ, ಅದರಿಂದ ದುಡ್ಡು ನಷ್ಟ. ಸ್ಟುಡಿಯೋದಲ್ಲಿ ಗಂಟೆಗೆ ಎಷ್ಟು ಎಂದು ನಿಗದಿ ಮಾಡುವ ಹಣದ ಮೊತ್ತ ಏರುತ್ತಿತ್ತು. ಹೀಗಾಗಿ ತಪ್ಪು ಮಾಡುವುದು 'ದುಬಾರಿ'ಯಾಗುತ್ತಿತ್ತು! ಅದಕ್ಕೇ, ಸಾಧ್ಯವಾದಷ್ಟೂ ತಪ್ಪಿಲ್ಲದೆ ಮಾಡಬೇಕಾದದ್ದು ಆವಶ್ಯಕವಾಗಿದ್ದಿತು.

ಅಂತೂ ಧ್ವನಿಮುದ್ರಣ ಮುಗಿಯಿತು. ಅರುವತ್ತು ನಿಮಿಷಗಳ ಇನ್ನೂರು ಕ್ಯಾಸೆಟ್ಟುಗಳು ಸಭಾಪರ್ವದಿಂದ ಮೊದಲಾಗಿ ಶಾಂತಿ ಪರ್ವದ ತನಕ ಎಲ್ಲ ಕಥಾಭಾಗವನ್ನೂ ಒಳಗೊಂಡಿದ್ದವು. ಒಂದು ಬೃಹತ್, ಮಹಾಕಾವ್ಯದ ಕ್ಯಾಸೆಟ್ ರೂಪ ಇದೇ ಮೊದಲ ಬಾರಿಗೆ ಮಾರುಕಟ್ಟೆಗೆ ಬಂದಿತ್ತು. ಇದು ಪ್ರಪ್ರಥಮ ಪ್ರಯೋಗವಾಗಿದ್ದು ಸಾಕಷ್ಟು ಕಾವ್ಯಪ್ರಿಯರ, ಕಥಾಶ್ರವಣ ಪ್ರಿಯರ, ಸಜ್ಜನರ, ಕುತೂಹಲ ಕೆರಳಿಸಿತ್ತು. ಈ ಕ್ಯಾಸೆಟ್ಟುಗಳ ಬಿಡುಗಡೆ ಸಮಾರಂಭವನ್ನು ಸಹ ಒಂದು ವಿಶೇಷ ರೀತಿಯಲ್ಲೇ ಮಾಡಬೇಕೆನ್ನುವ ಉದ್ದೇಶದಿಂದ, ಈ ಸಮಾರಂಭವನ್ನು ಗದುಗಿನ ವೀರನಾರಾಯಣನ ದಿವ್ಯ ಸನ್ನಿಧಿಯಲ್ಲಿ (ಕೋಳೀವಾಡ) ಏರ್ಪಡಿಸಲಾಯಿತು. ಅಲ್ಲಿ ಸುಪ್ರಸಿದ್ಧ ಚಲನಚಿತ್ರ ನಿರ್ದೇಶಕ ಶ್ರೀ ಜಿ.ವಿ. ಅಯ್ಯರ್ ಅವರು, ನಾನು - ಶ್ರೀ ಕೇಶವಮೂರ್ತಿ ಇಬ್ಬರಿಗೂ ವಾಚನಕಾರ - ವ್ಯಾಖ್ಯಾನಕಾರನ ವೇಷ ಹಾಕಿಸಿ ಒಂದು ಧಾರಾವಾಹಿ ಮಾಡುವ ಉದ್ದೇಶದಿಂದ, ಮೊದಲ ಒಂದು ಭಾಗವನ್ನು ಚಿತ್ರೀಕರಿಸಿಕೊಂಡರು. ಆದರೆ ಅದೇಕೋ ಆರ್ಥಿಕ ಮುಗ್ಗಟ್ಟಿನಿಂದಾಗಿ ಅವರ ಆ ಪ್ರಯತ್ನ ಅಲ್ಲಿಗೇ ನಿಂತಿತು. ಅಂತೂ ಆ ದಿನ ಬಹಳ ಸಂಭ್ರಮದಿಂದ ಎಲ್ಲಾ ಕಾರ್ಯಕ್ರಮಗಳೂ ನಡೆದವು. ಕ್ಯಾಸೆಟ್ಟುಗಳಿದ್ದ ಡಬ್ಬವನ್ನು ಗದುಗಿನ ನಾರಣಪ್ಪನ ಆರಾಧ್ಯದೈವ ವೀರನಾರಾಯಣನ ಪಾದದಲ್ಲಿಟ್ಟು, ಅವನ ಆಶೀರ್ವಾದ ಪಡೆದು ಬಿಡುಗಡೆ ಮಾಡಲಾಯಿತು.

ಈ ಎಲ್ಲರ ಹಾರೈಕೆ ಆಶೀರ್ವಾದಗಳನ್ನು ಪಡೆದ ಈ ಕ್ಯಾಸೆಟ್ಟುಗಳು ನಾವು ಕಥೆ ಮಾಡುವ ಸ್ಥಳಗಳಲ್ಲೆಲ್ಲ ಬಹಳ ಬೇಡಿಕೆ ಇದ್ದುವಾಗಿದ್ದು, ಬೇಗ ಬೇಗನೆ ಸಾಕಷ್ಟು ಮಾರಾಟವೂ ಆದವು. ಇನ್‌ಫೋಸಿಸ್‌ನ ಶ್ರೀ ನಾರಾಯಣಮೂರ್ತಿ ಹಾಗೂ ಸುಧಾ ಮೂರ್ತಿಯವರು ತುಂಬು ಅಭಿಮಾನದಿಂದ ನಮ್ಮ ಮನೆಗೆ ಬಂದರು. ಸುಮಾರು ನೂರು ಹಳ್ಳಿಗಳಿಗೆ, ಆಯಾ ಹಳ್ಳಿಗಳ ದೇವಸ್ಥಾನಗಳಲ್ಲಿ ಈ ಕ್ಯಾಸೆಟ್ಟುಗಳನ್ನು ಹಾಕಲು ಸಹಾಯವಾಗುವಂತೆ ಒಂದೊಂದು ಟೇಪ್ ರೆಕಾರ್ಡರ್ ಸಹಿತ ತಾವು ಈ ಕ್ಯಾಸೆಟ್ಟುಗಳ ನೂರು ಸೆಟ್‌ನ್ನು ಕೊಂಡು ಕಳುಹಿಸುವುದಾಗಿ ಅವರ ದೊಡ್ಡ ಯೋಜನೆಯನ್ನು ನಮಗೆ ತಿಳಿಸಿದಾಗ ನಮಗಾದ ಸಂತೋಷ ಅಷ್ಟಿಷ್ಟಲ್ಲ! ಅಲ್ಲವೇ ಮತ್ತೆ? ಅದೊಂದು ತಪಸ್ಸಾಗಿತ್ತು. ಶ್ರೀ ಕೇಶವಮೂರ್ತಿಯವರು ಹೆಚ್ಚು ಕಡಮೆ ನಾಲ್ಕು ವರ್ಷಗಳ ತನಕ ತಮ್ಮ ಊರು-ಮನೆ ಬಿಟ್ಟು ಈ ಕೆಲಸಕ್ಕಾಗಿಯೇ ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ್ದರು. ಅವರಿಗೂ ಸಾಕಷ್ಟು ಶ್ರಮವಾಗಿತ್ತು. ನನ್ನ ಕಾರ್ಯಕ್ರಮಗಳ ವಿವರದ ಬಗ್ಗೆ ನಾನು ಈಗಾಗಲೇ ನಿಮಗೆ ಹೇಳಿದ್ದೇನಷ್ಟೇ? ನಾವಿಬ್ಬರೂ ಹೀಗೆ ಅವಿರತವಾಗಿ ಶ್ರಮವಹಿಸಿ ಮಾಡಿದ ಈ ಅಸಾಧ್ಯವಾದ ಕೆಲಸದ ಸಾರ್ಥಕತೆಯನ್ನು ನಾವು ಕಾಣುವುದು ಬೇಡವೇ? ಅದು ಈಗ, ಹೀಗೆ ಸುಧಾಮೂರ್ತಿಯವರ ಯೋಜನೆಯಂತೆ, ಹಳ್ಳಿ ಹಳ್ಳಿಗಳಲ್ಲಿ ಅದನ್ನು ಕೇಳಿದಾಗ,

ಹಳ್ಳಿಯಲ್ಲಿ ಎಲ್ಲರನ್ನೂ ಅದು ಮುಟ್ಟಿದಾಗ ಅದರ ಸಾರ್ಥಕತೆ ಆಗುವುದಿತ್ತು. ಅಂತೂ ಅವರ *ಈ* ಯೋಜನೆ ನಮ್ಮ ಆಸೆಗೆ ಪೂರಕವಾಗಿದ್ದುದು ನಮಗೇ ಹೆಚ್ಚಿನ ಸಮಾಧಾನ ತಂದಿತ್ತು.

ಶ್ರೀ ಎನ್ ರಾಮಾನುಜ ಅವರು, ತಾವು ನುಡಿದು ಮಾತು ಕೊಟ್ಟಂತೆ *ಈ* ಕ್ಯಾಸೆಟ್ಟುಗಳ ಧ್ವನಿ ಮುದ್ರಣಕ್ಕಾದ ಒಟ್ಟಾರೆ ವೆಚ್ಚವನ್ನು ನಮಗೆ ತಮ್ಮ ಕಂಪನಿಯಾದ ಎಚ್.ಎಂ.ಟಿ.ಯ ವತಿಯಿಂದ ಕೊಡಿಸಿಯೇ ಬಿಟ್ಟರು! ಅವರ *ಈ* ಮಹಾನ್ ಸಹಾಯಕ್ಕೆ ನಾವು ವಂದಿಸಿದೆವು. *ಈ*ಗ ಅವರ ಆಪ್ತ ಗೆಳೆಯರ ಬಳಗದಲ್ಲಿ ನಾವೂ ಸೇರಿದುದಕ್ಕೆ ನಮಗೇ ಹೆಮ್ಮೆ ಎನಿಸಿತು. . .





***216. ಶ್ರೀ ಕಂಬದಮ್ಮನ ದೇವಸ್ಥಾನ ಮತ್ತು ಸಮುದಾಯ ಭವನದ ಉದ್ಘಾಟನೆ***

## ೨೨. ಮಾರ್ಕಂಡೇಯರ ಸ್ಮರಣಶಕ್ತಿ

***ಮತ್ತೂರ್‌ಜೀ ಜೀವನಗಾಥೆ* : ನಿರೂಪಣೆ : ಸುಮನಾ ವಿಶ್ವನಾಥ್**

. . . ವ್ಯಕ್ತಿಗಳಲ್ಲಿರುವ ಶಕ್ತಿಗಳಿಗೆ ಇವರು ಸಂನ್ಯಾಸಿ - ಇವರು ಸಂಸಾರಿ ಎನ್ನುವ ಭೇದ ಇರುವುದಿಲ್ಲ. ನನ್ನ ಗೌರವಾನ್ವಿತ ಮಿತ್ರ ಶ್ರೀ ಮತ್ತೂರು ಮಾರ್ಕಂಡೇಯ ಅವಧಾನಿಯವರಿಗೆ ನಾನು ಯಾವುದನ್ನೂ ಅಲ್ಲಲ್ಲಿಯೇ ಅನುವಾದ ಮಾಡಿ ಹೇಳುವುದು ಬಹಳ ಆಶ್ಚರ್ಯದ ಸಂಗತಿ. ಚಿಕ್ಕಮಗಳೂರಿನ 'ಗೀತಾಸತ್ಸಂಗ'ದವರು ಆಹ್ವಾನಿಸಲಾಗಿ ಒಮ್ಮೆ ಹಿಮಾಲಯದಿಂದ ಒಬ್ಬರು ಸ್ವಾಮಿಗಳು ಅಲ್ಲಿಗೆ ಬಂದಿದ್ದರು. ಹಿಂದೀ ಜನ ಅವರು. ಜೈಪುರ ಅವರ ಊರು ಎಂದು ನನ್ನ ನೆನಪು. ಆ ಸ್ವಾಮೀಜಿ ಭಗವದ್ಗೀತೆಯ ಮೇಲೆ ಮಾತನಾಡುವುದಿತ್ತು. ಶ್ರೀ ಕೋದಂಡರಾಮಶೆಟ್ಟಿ ಎನ್ನುವ ಸಜ್ಜನರು *ಈ* ಕಾರ್ಯಕ್ರಮವನ್ನೇರ್ಪಡಿಸಿದ್ದವರು. ಅವರು ನನ್ನನ್ನು ಬಹಳ ಚೆನ್ನಾಗಿ ಬಲ್ಲವರು. ನಾನು ಅನೇಕರ ಭಾಷಣಗಳನ್ನು ಅಲ್ಲಲ್ಲಿಯೇ ಅನುವಾದ ಮಾಡಿ ಹೇಳುವುದನ್ನು ಕೇಳಿದ್ದ ಅವರು ನನ್ನನ್ನೂ ಆ ಕಾರ್ಯಕ್ರಮಕ್ಕೆ ಆಹ್ವಾನಿಸಿ ನನಗೆ, "ಸರ್, ಸ್ವಾಮೀಜಿಯವರು ಗೀತೆಯ ಮೇಲೆ ಹಿಂದಿಯಲ್ಲಿ ಮಾತನಾಡಲಿದ್ದಾರೆ. ನೀವು ಅದನ್ನು ಅಲ್ಲಿಯೇ ಅನುವಾದ ಮಾಡಿ ಹೇಳುವಿರಾ? ಅದು ಜನರಿಗೆ ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ" ಎಂದರು. ನಾನು ಒಪ್ಪಿದೆ. ನನಗೆ ಮೊದಲು ಸ್ವಲ್ಪ ಭಯವೇ ಆಯಿತು. ನನಗೆ ಹಿಂದಿ ಇನ್ನೂ ಅಷ್ಟಾಗಿ ಬರುತ್ತಿರಲಿಲ್ಲ. ಮಾತನಾಡಿದುದು ಅರ್ಥವಾಗುತ್ತಿತ್ತು, ಆದರೂ 'ನೋಡೋಣ, ಪ್ರಯತ್ನಿಸೋಣ' ಎನಿಸಿತು. ಆ ದಿನ ಸ್ವಾಮೀಜಿಯ ಭಾಷಣಕ್ಕೆ ಬಹಳ ಜನ ಸೇರಿದ್ದರು. ಪ್ರವಚನ



217. ರಾಜ್ಯಪಾಲೆ ರಮಾದೇವಿ ಅವರ ಅತಿಥಿಗಳಾಗಿ ರಾಜಭವನದಲ್ಲಿ ಶ್ರೀ ನಾಗರಾಜಶೆಟ್ಟರು, ಮತ್ತೂರ್‌ಜೀ ಮತ್ತು ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು

ಪ್ರಾರಂಭವಾಯಿತು. ಆಗ ಅಲ್ಲಿಯೇ ನನ್ನ ಸನ್ಮಿತ್ರರಾದ ಶ್ರೀ ಮಾರ್ಕಂಡೇಯ ಅವಧಾನಿಗಳೂ ಇದ್ದರು. ನಾನು ಸ್ವಾಮೀಜಿಯ ಮಾತುಗಳನ್ನು ಅನುವಾದಿಸಲು ಸಿದ್ಧನಾದೆ. ಸ್ವಾಮೀಜಿ ಮೊದಲು ಒಂದು ವಾಕ್ಯ ಹೇಳಿದರು. ನಾನು ಅದನ್ನು ಕನ್ನಡಕ್ಕೆ ಅನುವಾದಿಸಿ ಹೇಳಿದೆ. ಅನಂತರ ಐದಾರು ವಾಕ್ಯಗಳನ್ನು ಹೇಳಿ, ಒಂದು ಶ್ಲೋಕವನ್ನೂ ಹೇಳಿ ನಿಲ್ಲಿಸಿದರು. ಅದನ್ನು ನಾನು ಕನ್ನಡದಲ್ಲಿ ಹೇಳಿದೆ. . . ಇದು ತತ್ತ್ವ ವಿಚಾರ. ಹಾಗೆ ಹೇಳುವುದು ಅಷ್ಟು ಸುಲಭದ ಕೆಲಸವಲ್ಲ ಎಂದು ಮೊದಲೇ ನನಗೆ ಸ್ವಲ್ಪ ಭಯವಿತ್ತು. ಆದರೂ ಹೇಗೋ ನಿಭಾಯಿಸಿದೆ. ಆದರೆ ಈ ಬಾರಿ ಸ್ವಾಮೀಜಿ ತಮ್ಮ ಮಾತು ಪ್ರಾರಂಭಿಸಿದವರು, ಮೂರ್‍ನಾಲ್ಕು ನಿಮಿಷಗಳಾದರೂ ನಿಲ್ಲಿಸುವ ಸೂಚನೆಯೇ ಕಾಣಲಿಲ್ಲ. ನನಗೋ ಗಾಬರಿಯಾಯಿತು. ಕೂಡಲೆ ನಾನು "ಸ್ವಾಮೀಜಿ... ಸ್ವಾಮೀಜಿ... ಕೃಪಾಕರ್‌ಕೆ ಆಪ್ ಠಹರೀಯೆ ತೋ ಸಹೀ....." (ಸ್ವಾಮೀಜಿ ದಯಮಾಡಿ ತಾವು ಸ್ವಲ್ಪ ನಿಲ್ಲಿಸಿ!) ಎಂದೆ. ಅದಕ್ಕೆ ಸ್ವಾಮೀಜಿ ಹಿಂದಿಯಲ್ಲಿ, "ಅದರ ಆವಶ್ಯಕತೆ ಇಲ್ಲ. ನಮಗೆ ಈಗ ತಿಳಿದಿದೆ. ನಾವು ಪೂರ್ತಿ ಪ್ರವಚನ ಮಾಡಿದರೂ, ಅದರಲ್ಲಿನ ಒಂದಂಶವನ್ನೂ ಬಿಡದೆ ನೀವು ಜನರಿಗೆ ಕನ್ನಡದಲ್ಲಿ ಸೊಗಸಾಗಿ ಹೇಳುತ್ತೀರಿ ಎಂದು ನಮಗೆ ಗೊತ್ತಾಗಿದೆ. ಆದ್ದರಿಂದ ನಾವು ಪೂರ್ತಿ ಮಾತನಾಡಿದ ಮೇಲೆಯೇ ನೀವು ಕನ್ನಡದಲ್ಲಿ ಹೇಳಿ... ನಮಗೆ ನಿಮ್ಮ ಸಾಮರ್ಥ್ಯ ಏನೆಂದು ತಿಳಿಯಿತು, ನೀವೇನೂ ಚಿಂತಿಸಬೇಡಿ" ಎಂದವರೇ ತಮ್ಮ ಮಾತು ಮುಂದುವರಿಸಿದರು. ನನಗೆ ಸ್ವಾಮೀಜಿಯ ಮಾತು ಕೇಳಿ ಬೆವರಿಟ್ಟಿತು. ಆದರೂ ಸಾವರಿಸಿಕೊಂಡು ಆ ದಿನ ಕೊನೆಯಲ್ಲಿ ನಾನು ಗುರುತು ಹಾಕಿಕೊಂಡುದರ ಸಂದರ್ಭಗಳನ್ನೆಲ್ಲ ನೆನೆದು ಸ್ವಾಮೀಜಿ ಹೇಳಿದ ಮಾತುಗಳೆಲ್ಲವನ್ನೂ ಹೇಳಿದೆ. ಅದು ಅಲ್ಲಿ ಎಲ್ಲರ ಮೆಚ್ಚುಗೆ ಗಳಿಸಿತು. ನನ್ನ ಮಿತ್ರ ಶ್ರೀ ಮಾರ್ಕಂಡೇಯ ಅವಧಾನಿಯವರಿಗಂತೂ ನನ್ನ ಈ ಸಾಹಸ ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಯಿತು.



218. ಮಾರ್ಕಂಡೇಯ ಅವಧಾನಿಗಳು ತಮ್ಮ ಪತ್ನಿ ಸೌ. ನಾಗವೇಣಿ ಅವರೊಂದಿಗೆ (ಇತ್ತೀಚಿನ ಛಾಯಾಚಿತ್ರ)



***219.** ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಷಷ್ಟ್ಯಿಪೂರ್ತಿ ಶಾಂತಿ ಸಂದರ್ಭದಲ್ಲಿ ವೇ. ನಂಜುಂಡ ಅವಧಾನಿಗಳಿಂದ ಆಶೀರ್ವಾದ*

ಇದಾದನಂತರ ನಮ್ಮ ಊರಿನಲ್ಲಿ ಒಂದು ಮದುವೆ ಸಮಾರಂಭ... ನನ್ನ ಪತ್ನಿಯ ಸೋದರಮಾವನ ಮನೆಯ ಮದುವೆಯದು. ಆ ದಿನ ರಾತ್ರಿ ಎಲ್ಲರೂ ಮಲಗಿದ್ದಾಗ, ನಾನೂ ಅವಧಾನಿಗಳೂ ಕತ್ತಲೆಯಲ್ಲಿ ತಡವುತ್ತ ಒಳ ಬಂದಾಗ, ಮಲಗಿದ್ದ ಯಾರದೋ ಕಾಲು ಅವರ ಕಾಲಿಗೆ ತಾಕಿತು. ಆ ಕಾಲನ್ನಷ್ಟೇ ನೋಡಿದ ಅವರು, "ಓಹೋ . . . ಇದು ನಮ್ಮ ಹುಡುಗಿಯದೇ ಕಾಲು!! ಇವಳು ಇಲ್ಲಿ ಮಲಗಿದ್ದಾಳೆಯೇ!" ಎಂದರು, ತಮ್ಮ, ತಮ್ಮನ ಮಗಳ ಕಾಲು ಅದು ಎಂದು ಗುರ್ತಿಸಿ! ನನಗೋ ಅತ್ಯಾಶ್ಚರ್ಯ!! "ಏನು? ನಿನಗೆ ಒಬ್ಬರ ಕಾಲು ಒಮ್ಮೆ ನೋಡಿದರೆ, ಅದು ಇಂಥ'ವರದೇ ಎಂದು ತಿಳಿಯುತ್ತದೆಯೇ? ಅವರ ಮುಖ ನೋಡದೆಯೇ ಗುರ್ತಿಸುತ್ತೀಯಾ? ಅದು ಹೇಗೆ?" ಎಂದೆ. "ಹೌದು, ಅದರಲ್ಲೇನು ಕಷ್ಟ! ನೋಡಿದರೆ ನೆನಪಿಟ್ಟುಕೊಳ್ಳುವುದು ಕಷ್ಟವೇ?" ಎಂದರು, ಅದು ಬಹಳ ಸುಲಭದ ಕೆಲಸ ಎನ್ನುವಂತೆ! ಮಾರನೆಯ ದಿನ ನಾನು ಮದುವೆಯ ಮನೆಯ ಎಲ್ಲರನ್ನೂ ಒಂದೆಡೆ ಸೇರಿಸಿ, ಒಂದು ಪರದೆಯನ್ನು ಉದ್ದಕ್ಕೆ ಇಳಿಬಿಟ್ಟು, ಅವಧಾನಿಯವರನ್ನು ಒಂದೆಡೆ ಕೂರಿಸಿ, ಮನೆ ಮಂದಿಯೆಲ್ಲ ಒಬ್ಬೊಬ್ಬರಾಗಿ ಬಂದು ಪರದೆಯ ಹಿಂದೆ ನಿಲ್ಲಲು ಹೇಳಿದೆ. ಅವಧಾನಿಯವರಿಗೆ, ಬಂದು ನಿಂತವರ ಮುಖ ಕಾಣದೆ, ಬರೀ ಪಾದಗಳು ಮಾತ್ರ ಕಾಣುತ್ತಿದ್ದವು. ಅಲ್ಲಿಗೆ ಬಂದ ಒಬ್ಬೊಬ್ಬರ ಪಾದಗಳನ್ನೂ ನೋಡಿದ ಅವಧಾನಿಯವರು, 'ಇದು ಇವರದೇ ಪಾದಗಳು' ಎಂದು ಹೇಳಿ, ಎಲ್ಲವನ್ನೂ ಗುರ್ತಿಸಿದರು! ಕೊನೆಯದಾಗಿ ಒಬ್ಬ ಹೆಂಗಸರು ಬಂದು ನಿಂತಾಗ, "ಓ..." ಎಂದು ಅವಧಾನಿಗಳು ನಕ್ಕು ನಾಚಿದರು! ಅವರು ಯಾರಿರಬಹುದು ಹೇಳಿ? ಅವರು.... ಅವರು ಅವಧಾನಿಗಳ ಪತ್ನಿಯೇ ಆಗಿದ್ದರು!! ಅವಧಾನಿಗಳ *ಈ* ಅಗಾಧ ನೆನಪಿನ ಶಕ್ತಿಯನ್ನು ನೋಡಿ ಬೆರಗು ಪಡುವ ಸರದಿ *ಈ*ಗ ನನ್ನದಾಗಿತ್ತು!

ಅವರು ಬೆಂಗಳೂರಿಗೆ ಬಂದಾಗಲೂ ಅಷ್ಟೆ. ನಾನು ನನ್ನ ಸ್ಕೂಟರಿನಲ್ಲಿ ಅವರನ್ನು ಕೂರಿಸಿಕೊಂಡು ಕರೆದೊಯ್ಯುವಾಗ ಎಲ್ಲವನ್ನೂ ಗಮನಿಸುತ್ತಿದ್ದ ಅವರು ತಾವು ಊರಿಗೆ ಹೋಗಿ, ಮತ್ತೊಮ್ಮೆ ಬೆಂಗಳೂರಿಗೆ ಬಂದಾಗ, ಮತ್ತೆ ನನ್ನ ಜತೆ ಸ್ಕೂಟರಿನಲ್ಲಿ ಕುಳಿತು ಬಂದರೆ ನಾವು ಓಡಾಡಿದ ಬೀದಿಗಳಲ್ಲಿ ಏನೇನು ಬದಲಾವಣೆಗಳಾಗಿವೆ, ಯಾವ ಕಟ್ಟಡ ಹೊಸದಾಗಿ ಎದ್ದಿದೆ, ಯಾವ ಕಟ್ಟಡ ನೆಲಸಮವಾಗಿದೆ, ಯಾವ ಅಂಗಡಿ *ಈ*ಗ ಅಲ್ಲಿಲ್ಲ, ಹೊಸದಾಗಿ ಯಾವುದು ಬಂದಿದೆ ಎಂದು ಎಲ್ಲವನ್ನೂ ಹೇಳುತ್ತಾ ಹೋಗುವುದಿತ್ತು! ಅಲ್ಲಿಯೇ ದಿನವೂ ಓಡಾಡುವ ನನಗೆ *ಈ* ಬದಲಾವಣೆಗಳು ಗೋಚರವೇ ಆಗುತ್ತಿರಲ್ಲಿಲ್ಲ! ಇದು ಅವರ ನೆನಪಿಗೆ ಇದ್ದಂಥ ಶಕ್ತಿ.

ಇಂಥ ಮಾರ್ಕಂಡೇಯ ಅವಧಾನಿಗಳು, ನನ್ನ ಹುಟ್ಟೂರಿನಲ್ಲಿ ನನಗೆ ಮನೆ ಇಲ್ಲ ಎಂದು, ತಮಗೆ ಸೇರಿದ್ದ ಒಂದು ಜಾಗದಲ್ಲಿ ನನಗೆ ಮನೆ ಕಟ್ಟಿಕೊಳ್ಳಲು ಹೇಳಿದರು. ಅಣ್ಣ-ತಮ್ಮಂದಿರಿಗೆಲ್ಲ ಸೇರಿದ ಜಾಗ ಅದಾಗಿದ್ದುದರಿಂದ, ನನ್ನಿಂದ ಆ ಜಾಗಕ್ಕೆ ಸ್ವಲ್ಪ ಹಣವನ್ನು ತೆಗೆದುಕೊಂಡ ಅವರು, "*ಈ* ಜಾಗದಲ್ಲಿ ಮೇಲೆ ನೀನು ಮನೆ ಕಟ್ಟಿಕೋ, ಕೆಳಗೆ ನಾನು ಒಂದು ದೊಡ್ಡದಾದ ಸಭಾಂಗಣದ ರೀತಿಯಲ್ಲಿ, ಯಜ್ಞ-ಯಾಗ ಮಾಡಲು ಸುಲಭವಾಗುವಂತೆ ಒಂದು ವಿಶಾಲವಾದ ಹಜಾರವನ್ನು ಮಾಡಿಕೊಳ್ಳುತ್ತೇನೆ. ನನಗೆ ಅಷ್ಟು

ಸಾಕು!" ಎಂದು ಉದಾರವಾಗಿ ಹೇಳಿ, ನಮ್ಮ ಮತ್ತೂರಿನಲ್ಲಿ ನಾನೂ ಮನೆ ಕಟ್ಟಿಕೊಂಡು, ಜೀವನದಲ್ಲಿ ಹುಟ್ಟಿದ ಊರಿನಲ್ಲಿ ಒಂದು ನೆಲೆ ಕಾಣುವ ಹಾಗೆ ಮಾಡಿದಂತಹ ಸಹೃದಯ! ಅವರಿಗೆ ನಾನು ಯಾವಾಗಲೂ ಋಣಿಯಾಗಿರಬೇಕು.

ಅವರು ನನ್ನ ಪ್ರೀತಿಯ ಮಿತ್ರರಾಗಿರುವುದು ನನಗೆ ನಿಜಕ್ಕೂ ಬಹಳ ಹೆಮ್ಮೆಯ ವಿಷಯ!!

## ೨೩. ಗಮಕಕ್ಕೆ ರಶ್ ತಂದ ಗಾರುಡಿಗ ಎಚ್.ಆರ್.ಕೇಶವಮೂರ್ತಿ

***ಡಾ. ಹೆಚ್.ವಿ.ಸತ್ಯನಾರಾಯಣ ಶಾಸ್ತ್ರೀ* : ಸಂಕೇತಿ ಸಂಗಮ ವಿಶೇಷಾಂಕ : ಜುಲೈ ೨೦೦೦**

ಸಂಕೇತಿಗಳು ಗಮಕ ಅರ್ಥಾತ್ ಭಾರತ ವಾಚನ ಕಲೆಯನ್ನು ತಮ್ಮದೆಂದುಕೊಂಡು ನೂರಾರು ವರ್ಷಗಳಿಂದ ಆ ಕಲೆಗಾಗಿ ಶ್ರಮಿಸಿದ್ದಾರೆ, ಉಳಿಸಿದ್ದಾರೆ, ಬೆಳೆಸಿದ್ದಾರೆ. ಗಮಕವನ್ನು ಆಲಿಸಲು ಬೆರಳೆಣಿಕೆಯಷ್ಟು ಶ್ರೋತೃಗಳಿರುವ ಸಂದರ್ಭವು ಬದಲಾಗಿ ಇಂದು ಸಹಸ್ರ ಸಂಖ್ಯೆಯಲ್ಲಿ ಜನರು ಗಮಕವನ್ನು ಆನಂದದಿಂದ ಆಲಿಸುತ್ತಿದ್ದಾರೆ. ಆ ಗಮಕದ ಹೆದ್ದಾರೆಯ ನಿರ್ಮಾಣದಲ್ಲಿ ಗಮಕ ಗಂಧರ್ವ ಶ್ರೀ ಎಚ್.ಆರ್. ಕೇಶವಮೂರ್ತಿ ಅವರ ನಾಲ್ಕು ದಶಕದ ತಪಸ್ಸೂ ಸೇರಿದೆ.

ವೇದ-ಶಾಸ್ತ್ರ-ಸಂಸ್ಕೃತ-ಸಾಹಿತ್ಯಗಳಲ್ಲಿ ನುರಿತ ಪರಂಪರೆಯ ವಂಶದಲ್ಲಿ ಜನನ, ಮನೋಹರ ರೂಪ, ಸ್ನೇಹಪೂರ್ಣ ವ್ಯಕ್ತಿತ್ವ, ಮಧುರ ಕಂಠಸ್ವರ- ಇವಿಷ್ಟೂ ಕೇಶವಮೂರ್ತಿಗಳ ಅಭಿಜಾತ ಆಸ್ತಿ. ಆಸ್ತಿಕ ಸಂಪ್ರದಾಯದ ಶಾಸ್ತ್ರೀಯ ಶಿಕ್ಷಣಗಳ ಹಾಗೆಯೇ ಆಧುನಿಕ ವ್ಯಾಸಂಗದಲ್ಲಿಯೂ ಇಂಟರ್ ಮೀಡಿಯಟ್‌ವರೆಗಿನ ವಿದ್ಯಾಭ್ಯಾಸ ಗಳಿಸಿದವರಿವರು. ಐವತ್ತು ವರ್ಷಕ್ಕೆ ಹಿಂದೆ ಮತ್ತೂರಿನ ಮಿಡಲ್ ಸ್ಕೂಲಿನಲ್ಲಿ ಮೂರ್ತಿ ಓದುತ್ತಿದ್ದಾಗಲೇ ಕಾರ್ಯಕ್ರಮವೇನಾದರೂ ನಡೆದಾಗ, ಸಂಗೀತ ಬಲ್ಲವರಾದ ಶ್ರೀ ಶಂಕರನಾಯಕ ಮಾಸ್ತರು ಹುರಿದುಂಬಿಸಿದಂತೆಯೇ ಪಠ್ಯಪುಸ್ತಕದಿಂದ ನಳಚರಿತ್ರೆ, ಕೋಳೂರು ಕೊಡಗೂಸು, ಚೂಡಾರತ್ನ ಇತ್ಯಾದಿ ಪಾಠಗಳನ್ನು ಸುಶ್ರಾವ್ಯವಾಗಿ ಓದುವುದೇ ಅವರಿಗೆ ಕಾವ್ಯವಾಚನ ವೃತ್ತಿಯ ಬುನಾದಿಯಾಯಿತು. ತಾರುಣ್ಯಕ್ಕೆ ಕಾಲಿಟ್ಟಾಗ ಸಹಧರ್ಮಿಣಿ ಶ್ರೀಮತಿ ರಾಜೇಶ್ವರಿಯೊಂದಿಗೆ ಹೊಸಹಳ್ಳಿಯಲ್ಲಿನ ಅವಿಭಕ್ತ ಕುಟುಂಬದಲ್ಲಿ ಪಾಂಡವರೈವರಂತಿದ್ದ ಸೋದರರ ಪೈಕಿ ಮಧ್ಯಮನಾಗಿ, ಕೃಷಿಕ ವೃತ್ತಿಯನ್ನು ಕೈಗೊಂಡರೂ ಕಲೆಯು ಆ ಸವ್ಯಸಾಚಿಯ ಬೆನ್ನುಬಿಡಲಿಲ್ಲ.

ಗದ್ದೆ ಬದುವಿನಲ್ಲಿ ಛತ್ರಿಯಡಿ 'ಮೂರ್ತಿ'ಯು ನಿಂತೇ, ಪದ್ಯಗಳನ್ನು ಗುನುಗುತ್ತಲೇ, ಆಳುಕಾಳುಗಳ ಉಸ್ತುವಾರಿಯೂ ಸಾಗಿತ್ತು. ನಲವತ್ತು ವರ್ಷಗಳು ಬಿಸಿಲಿಗೂ ಮಳೆಗೂ ಒಡ್ಡಿಕೊಂಡರೂ, ಬೇಲದ ಹಣ್ಣು ತಿಂದು ಕಾನಿಹಳ್ಳದ ನೀರು ಕುಡಿದರೂ ಜಗ್ಗದೆ, ತನ್ನ ಠೇಂಕಾರವುಳಿಸಿಕೊಂಡ ಮೂರ್ತಿಯ ಸ್ವರಕ್ಕೆ ಇಂದಿಗೂ ಕೋಗಿಲೆಯಿಂಚರವಿರುವುದೊಂದಾಶ್ಚರ್ಯ. ತಂದೆ ವೇ. ಶ್ರೀ ಪಟೇಲ್ ರಾಮಸ್ವಾಮಿ ಶಾಸ್ತ್ರಿಗಳೇ ತೇರು ಹಾಗೂ ಕಾರ್ತಿಕಗಳ ಅಷ್ಟಾವಧಾನ ಸೇವೆಯಲ್ಲಿ ಪುರಾಣ ವಾಚನ ಮಾಡುವುದು ವಾಡಿಕೆ. ನೆರೆಯೂರಿನ ಮತ್ತೂರು ಟಿ. ರಾಮಶಾಸ್ತ್ರಿ-ಲಕ್ಷ್ಮೀಕೇಶವಶಾಸ್ತ್ರಿಗಳು ಊರೂರು ಸುತ್ತುತ್ತ ಗಮಕ ವ್ಯಾಖ್ಯಾನ ಮಾಡುತ್ತಿದ್ದುದೂ ಮೂರ್ತಿಗೆ ಈ ಕಲೆಯ ಗೀಳು ಹತ್ತಲು ಕಾರಣ. ಅವರಿಗೆ ಗಮಕದ ಪ್ರೌಢಬೋಧನೆಯನ್ನು ನೆರವೇರಿಸಿದ ಗುರು ಶ್ರೀ ಕೆ.ಎಸ್.ವೆಂಕಟೇಶಯ್ಯನವರು ರಂಗಗೀತೆಗಳಲ್ಲಿಯೂ ನಿಷ್ಣಾತರು. ಮೂರ್ತಿಗಳು ಸ್ವತಃ ಸಾಧಿಸಿದ್ದುದೆಂದರೆ ಹೆಚ್ಚು ರಾಗಗಳಲ್ಲಿ ಹಾಡುವುದು ಹಾಗೂ ರಾಗಗಳಿಗೆ ಹೊಸ ಸಂಗತಿಗಳನ್ನು ಅಳವಡಿಸುವುದು. ಈ ಮುನ್ನ ಗಮಕಿಗಳು "ಹೆಚ್ಚು ರಾಗಗಳಲ್ಲಿ ವಾಚನ ಮಾಡಲು ನಾವೇನು ಶಾಸ್ತ್ರೀಯ ಸಂಗೀತಗಾರರೇ?" ಎನ್ನುತ್ತಿದ್ದುದುಂಟು! ಶ್ರೀ ಮೂರ್ತಿಯವರು ನೀಡಿದ ಕಾಯಕಲ್ಪದಿಂದಾಗಿಯೇ ಇಂದು ಗಮಕವೂ ಹೆಚ್ಚು ವ್ಯಾಪ್ತಿ ಹೊಂದಿದೆ, ಶ್ರೀಮಂತವಾಗಿದೆ. ಕಛೇರಿ, ರೇಡಿಯೋಗಳಲ್ಲಿ ಗಮನ ಸೆಳೆದ ಬಾಲಮುರಳಿಯ ಜನಸಂಮೋಹಿನಿ ರಾಗ, ಜೇಸುದಾಸರ ದರ್ಬಾರಿಯ ಹೊಸ ಸಂಗ್ತಿ, ಮರುದಿನವೇ ಮೂರ್ತಿಯವರ ಕಾವ್ಯವಾಚನದಲ್ಲಿ ಗದುಗಿನ ಭಾರತದ ಪದ್ಯಕ್ಕೆ ಹೊಂದಿಕೆಯಾಗುವುದು. ಹೀಗೆ ಶಾಸ್ತ್ರೀಯ ಸಂಗೀತಕ್ಕೂ- ಗಮಕಕ್ಕೂ ಹೊಸ ಛಾನೆಲ್ ನಿರ್ಮಿಸಿದುದು ಮೂರ್ತಿಯವರ ಹೆಗ್ಗಳಿಕೆ.

ಮೂರು ಬಾರಿ ಸಮಗ್ರ ಗದುಗಿನ ಭಾರತವನ್ನು ಅವರು ವಾಚನ ಮಾಡಿ (ಒಮ್ಮೆ ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನದಲ್ಲಿ, ಎರಡು ಬಾರಿ ಮತ್ತೂರು ಕೃಷ್ಣಮೂರ್ತಿಗಳ ಜತೆ) ಮುಗಿಸಿರುವುದು ಒಂದು ವಿಶ್ವದಾಖಲೆಯಾಗಿದ್ದೀತು! ಆ ಪೈಕಿ ಎರಡು ಆವೃತ್ತಿಗಳು ಧ್ವನಿಸುರುಳಿಗಳಾಗಿ ಗಮಕ ಪ್ರಿಯರಿಗೆ ಲಭ್ಯ, ಒಂದು ಆವೃತ್ತಿ ದೂರದರ್ಶನ ವೀಕ್ಷಕರಿಗೆ. ಕೇಶವಮೂರ್ತಿಗಳು ಕುಶಲ

Fct01: D:\Sanketi Uma Mysore\Book 5 Photos - Proof 1 19.05.05

ಸಂಘಟಕರೂ ಆಗಿದ್ದು ಅವರ ನೇತೃತ್ವದಲ್ಲಿಯೇ ಹೊಸಹಳ್ಳಿಯ ಗಮಕ ಕಲಾ ಪರಿಷತ್ತು ಇಪ್ಪತ್ನಾಲ್ಕು ವರ್ಷಗಳಿಂದಲೂ ಸತತವಾಗಿ ಪ್ರತಿವರ್ಷ ಖ್ಯಾತ ಗಮಕಿಗಳಿಗೆ ಸನ್ಮಾನ, ರಾಜ್ಯಮಟ್ಟದ ಗಮಕಸ್ಪರ್ಧೆ ಹಾಗೂ ಸಪ್ತಾಹ ಪರ್ಯಂತ ಉದಯೋನ್ಮುಖ ಕಲಾವಿದರಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಪ್ರಪ್ರಥಮ ಬಾರಿ ಸಮಗ್ರ ಭಾರತದ ಧ್ವನಿಮುದ್ರಣದಲ್ಲಿ ಅವರ ವಾಚನಕ್ಕೆ ವ್ಯಾಖ್ಯಾನ ನೀಡಿದ ವೇ. ಲಕ್ಷ್ಮೀಕೇಶವ ಶಾಸ್ತ್ರಿಗಳಿಗೆ 'ಪ್ರವಚನ ಚಕ್ರವರ್ತಿ' ಎಂಬ ಸಂಭಾವನ ಗ್ರಂಥವನ್ನು ಸಮರ್ಪಿಸಿದವರೂ ಅವರೇ. ಅಭಿಮಾನಿಗಳು ಅವರಿಗೆ ಮತ್ತು ವೇ.ಮಾರ್ಕಂಡೇಯ ಅವಧಾನಿಗಳಿಗೆ ಜೋಡಿಯಾಗಿ 'ತುಂಗ ಭದ್ರ' ಎಂಬ ಅಭಿನಂದನಾ ಗ್ರಂಥವನ್ನು ನೀಡಿ ಗೌರವಿಸಿದ್ದಾರೆ. ಹೆಚ್.ಎಂ.ಟಿ.ಯವರು ಪ್ರಕಾಶನಗೊಳಿಸಿದ ಕುಮಾರವ್ಯಾಸ ಭಾರತದ ಕ್ಯಾಸೆಟ್‌ಗಳಲ್ಲಿ ತಮ್ಮ ವಾಚನಕ್ಕೆ ವ್ಯಾಖ್ಯಾನ ಮಾಡಿ ನಾಡಿನಲ್ಲೆಲ್ಲ ಗಮಕ ಕಲೆಯನ್ನು ಜನಪ್ರಿಯಗೊಳಿಸಿದ ಶ್ರೀ ಮತ್ತೂರು ಕೃಷ್ಣಮೂರ್ತಿಗಳ ಬಹುಮುಖ ಸಾಧನೆಗಳು ಅನುಪಮವೆಂದು ಕೇಶವಮೂರ್ತಿಗಳು ಬಣ್ಣಿಸುತ್ತಾರೆ.

ಮೂರ್ತಿಯವರಿಗೆ ಸಂದ ಪ್ರಶಸ್ತಿ, ಸನ್ಮಾನ, ಪುರಸ್ಕಾರಗಳು ಹಲವಾರು- **ಗಮಕ ಕಲಾಕೋಕಿಲ, ಗಮಕ ಗಂಧರ್ವ, ಗಮಕ ಸಿಂಧು** ಇತ್ಯಾದಿ. ಅವರ ಅಗಾಧ ಅನುಭವದ ಇಣುಕು ನೋಟಕ್ಕಾಗಿ ಅವರನ್ನು ಸಂದರ್ಶಿಸಿದಾಗ ವ್ಯಕ್ತವಾದ *ಈ* ಅಂಶಗಳನ್ನು ಗಮನಿಸಬಹುದು : ಗಮಕಕ್ಕೆ ಹೇಳಿ ಮಾಡಿಸಿದ ಕೃತಿಯೆಂದರೆ ನಾರಣಪ್ಪನ ಭಾರತ; ಶಿಕ್ಷಕ, ಪಂಡಿತ, ಸಂಶೋಧಕ ವೃತ್ತಿಯವರಾದ ಶ್ರೀ ಎಂ.ಎಲ್.ಚನ್ನಕೇಶವ ಶಾಸ್ತ್ರೀ, ಡಾ. ಎ.ಎಸ್. ವೇಣುಗೋಪಾಲರಾವ್, ಶತಾವಧಾನಿ ಡಾ. ಆರ್. ಗಣೇಶ್, ಶ್ರೀ ರಘುಪತಿಶಾಸ್ತ್ರಿ ಮುಂತಾದವರ ವಿಮರ್ಶಾತ್ಮಕ ವಿಶ್ಲೇಷಣೆಯು ಕಾವ್ಯ ಸೌಂದರ್ಯದ ಆಸ್ವಾದನೆಯನ್ನುಂಟುಮಾಡುವುದು. ತರುಣ ಪೀಳಿಗೆಯ ರಾಜಾರಾಮಮೂರ್ತಿ, ಗೋಪಾಲ ಅವರಲ್ಲಿ ಸಾಹಿತ್ಯ ಅಧ್ಯಯನ ಹಾಗೂ ಸಮಕಾಲೀನ ಪ್ರಜ್ಞೆಗಳಿಂದ ಪರಿಪಕ್ವವಾದ ನಿಷ್ಕೃಷ್ಟತೆಯು ಗೋಚರಿಸುವುದು. ಹೀಗೆ ಒಬ್ಬರಲ್ಲಿರುವ ವಿನೂತನತೆಯನ್ನು ಇನ್ನೊಬ್ಬರಲ್ಲಿ ನಿರೀಕ್ಷಿಸದೆಯೂ ನಮಗೆ ರುಚಿಸುವ ಆಯಾಯಾ ಅಂಶಗಳನ್ನು ಪ್ರತಿ ಕಲಾವಿದರಿಂದಲೂ ಪಡೆಯುವುದು ಮತ್ತು ಕಲಾವಿದರಾದವರು ರೂಢಿಸಿಕೊಳ್ಳುವುದು ಮುಖ್ಯವಾಗುತ್ತದೆ. ವ್ಯಾಖ್ಯಾನದ ಸೊಗಡು, ವಾಚನಕಾರರ ಮೇಲೂ ಪ್ರಭಾವ ಬೀರಬಲ್ಲುದು. ಆದರೂ ನುರಿತ ಗಮಕಿಯು ಅಲ್ಲಿನ ಪರಿಮಿತಿಗಳಿಗೆ ಸಿಲುಕಿಕೊಳ್ಳದೆ (ವಿಶೇಷತಃ ತನ್ನಷ್ಟು ಪಳಗದ ಸಹ ಕಲಾವಿದರಿರುವಾಗ) ಪ್ರತಿ ಕಾರ್ಯಕ್ರಮದಲ್ಲಿಯೂ ತನ್ನ ಉತ್ಕೃಷ್ಟ



***220.** ಮಂಡ್ಯ : ಮೆರವಣಿಗೆಯಲ್ಲಿ : ಸನ್ಮಾನಿತ ಮಾರ್ಕಂಡೇಯ ಅವಧಾನಿಗಳು, ಎಚ್.ಆರ್. ಕೇಶವಮೂರ್ತಿಗಳು : ಜತೆಯಲ್ಲಿ ಮತ್ತೂರ್‌ಜೀ ಮತ್ತು ಪ್ರೊ. ಎ.ವಿ. ನರಸಿಂಹಮೂರ್ತಿ ಅವರು*


ರಂಜನೆಯನ್ನೇ ಜನರಿಗೆ ನೀಡಲು ಯತ್ನಿಸಬೇಕು.

ಅವರ ಶಿಷ್ಯವೃಂದವು ಹೊಸಹಳ್ಳಿ, ಮತ್ತೂರು, ಶಿವಮೊಗ್ಗ, ಭದ್ರಾವತಿ, ತರೀಕೆರೆ, ಬೆಂಗಳೂರು ಹೀಗೆ ಹಬ್ಬುತ್ತ ಇವರಿಂದ ತರಬೇತಿಗೊಂಡ ನೂರಾರು ಕಲಾವಿದರಿಂದು ನಾಡಿನಾದ್ಯಂತ ಗಮಕಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಗಾಯನದಲೆಗಳು ಕಾಶಿ, ಪ್ರಯಾಗ ಮುಂಬೈ, ಕಂಚಿ ಮುಂತಾದ ಹೊರರಾಜ್ಯಗಳನ್ನೂ ವ್ಯಾಪಿಸಿವೆ. ಆಕಾಶವಾಣಿ ಹಾಗೂ ದೂರದರ್ಶನದ ಕಲಾವಿದರಾಗಿಯೂ ಅವರು ಶ್ರೋತೃಗಳನ್ನು ರಂಜಿಸಿದ್ದಾರೆ. ಉದಯ ಟಿ.ವಿ.ಯಲ್ಲಿ (ಪ್ರತಿದಿನ ಬೆಳಗ್ಗೆ ಏಳು ಗಂಟೆಗೆ) ಪ್ರಸಾರವಾಗುತ್ತಿರುವ ಗಮಕವು ಈ ಕ್ಷೇತ್ರದ ಜನಪ್ರಿಯತೆಯಲ್ಲಿ ಹೊಸ ಅಧ್ಯಾಯವನ್ನೇ ತೆರೆದಿದೆ. ಗಮಕವನ್ನು ಕೆಲವೇ ಜನ ಕೇಳುವ ಕಾಲ ಮುಗಿದಿದೆ. ಬೆಂಗಳೂರಿನ ಶ್ರೀ ರಾಮಕೃಷ್ಣ ಮಠ, ಶ್ರೀ ಶಂಕರ ಮಠಗಳಲ್ಲಿ ಕೇಶವಮೂರ್ತಿಗಳ ವಾಚನ ಹಾಗೂ ಮತ್ತೂರು ಕೃಷ್ಣಮೂರ್ತಿಗಳ ವ್ಯಾಖ್ಯಾನ ಆಲಿಸಲು ಮಾಸಪರ್ಯಂತ ಪ್ರತಿನಿತ್ಯವೂ ಕೆಲವು ಸಹಸ್ರಗಳ ಸಂಖ್ಯೆಯಲ್ಲಿ ಜನರ ನೂಕುನುಗ್ಗಲಾದುದು ಗಮಕವು ಸೀಮೋಲ್ಲಂಘನ ಮಾಡಿದ ಶುಭಲಕ್ಷಣ! ಅವರ ಸರ್ವತೋಮುಖ ಪ್ರತಿಭೆಯಿಂದಾಗಿ ಸಂಸ್ಕೃತ ಹಾಗೂ ಕನ್ನಡದ ಎಲ್ಲ ಪ್ರಮುಖ ಕಾವ್ಯಗಳೂ ಮಧುರ ಪರಿಪಾಕವಾಗಿ ವಾಚನ ಮಾಧ್ಯಮದಲ್ಲಿ ಧ್ವನಿಸುರುಳಿಗಳಾಗಿ ಪಡಿಮೂಡಿವೆ.

## ೨೪. ನಾ ಕಂಡ ಮೂರ್ತಿ

***ಮಾರ್ಕಂಡೇಯ ಅವಧಾನೀ***

ಮೂರ್ತಿ ಹುಟ್ಟು ಗಮಕಿ. ಸ್ವರ್ಗೀಯ ವೇ.ಬ್ರ.ಶ್ರೀ ರಾಮಸ್ವಾಮಿ ಶಾಸ್ತ್ರಿಗಳ ವರಪುತ್ರ. ಅವರ ಪಿತೃವರ್ಯರಿಗೆ ವೇದ-ವೇದಾಂತ ಕಾವ್ಯ ಸಾಹಿತ್ಯಗಳ ಪರಿಣತಿಯೊಂದಿಗೆ ಇಂಪಾದ ಕೊರಲದನಿಯಿತ್ತು. ಅನೇಕ ಪುರಾಣಗಳನ್ನು ಅವರು ಇಂಪಾಗಿ ವಾಚಿಸಿಕೊಂಡು ಹೇಳಿದವರು. ಪ್ರವಚನ ಚಕ್ರವರ್ತಿ ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳೊಂದಿಗೆ ಅವರು, ಆರಂಭದ ದಿನಗಳಲ್ಲಿ ವಾಚನದ ಸಾಹಚರ್ಯ ವಿತ್ತಿದ್ದೂ ಉಂಟು. ಅಂತಹವರ ಮಗನಾದ ಮೂರ್ತಿ ಹುಟ್ಟು ಗಮಕಿಯಾದುದರಲ್ಲಿ ಆಶ್ಚರ್ಯವಿಲ್ಲ.




**221.** *ಅಭಿನಂದನಾ ಗ್ರಂಥ 'ತುಂಗ ಭದ್ರ' ಸಮರ್ಪಣಾ ಸಮಾರಂಭ : ಉಪಸ್ಥಿತಿ : ಎಚ್.ಆರ್.ಕೆ., ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು, ಡಾ. ವೆಂಕಟರಾವ್, ಡಾ.ಹಾಮಾನಾ, ಮತ್ತೂರ್‌ಜೀ, ಶ್ರೀ ರಾಮಣ್ಣನವರು (ಹೊಸಹಳ್ಳಿ ಗ್ರಾಮಾಧ್ಯಕ್ಷರು)*

ಮೂರ್ತಿ ನನ್ನ ಗೆಳೆಯ. ನಾನು ಮೂರ್ತಿಯೊಂದಿಗೆ ವ್ಯಾಖ್ಯಾನವನ್ನು ಆರಂಭಿಸಿ ಬಹುಶಃ ಮೂವತ್ತೈದು ವರ್ಷಗಳಾಗಿರಬಹುದು. ಆದರೆ ಅದಕ್ಕಿಂತ ಮೊದಲೇ ಮೂರ್ತಿಯು ಗಮಕಿಯಾಗಿ ಬೆಳೆಯುವ ಲಕ್ಷಣಗಳನ್ನು ಹೊಂದಿದ್ದ. ಪೂಜ್ಯ ಶಾಸ್ತ್ರಿಗಳ ವ್ಯಾಖ್ಯಾನಕ್ಕೆ ಪುಷ್ಟಿ ಕೊಡುವಂತೆ ವಾಚಿಸುತ್ತಿದ್ದ. ಅವರ ಬಾಲ್ಯದ ಕೂಡಾಡಿಗಳಾದ ಶ್ರೀರಾಮಶಾಸ್ತ್ರಿಗಳ ಕಂಠ ಕುಸಿಯತೊಡಗಿದಾಗ ಶಾಸ್ತ್ರಿಗಳ ಮುಂದೆ ನಿಂತ ಪ್ರಶ್ನೆ 'ತಮ್ಮ ವ್ಯಾಖ್ಯಾನಕ್ಕೆ ಮುಂದಿನ ಸಾರಥಿ ಯಾರು?' ಎಂಬುದು. ವೆಂಕಟೇಶಯ್ಯನವರ ಹಾಗೂ ಅನೇಕ ಉದಯೋನ್ಮುಖ ಕಲಾವಿದರ ವಾಚನ



***222.** ವಿಶ್ವಶಾಂತಿಗಾಗಿ, ಮಾನವನ ಒಳಿತಿಗಾಗಿ, ಮಾಡಿದ ಯಜ್ಞದಲ್ಲಿ ಪುರೋಹಿತರಾಗಿ ಪೂಜ್ಯ ವೇ. ಮಾರ್ಕಂಡೇಯ ಅವಧಾನಿಗಳು. ಹುತಂ ಚ ದತ್ತಂ ಚ ತಥೈವ ತಿಷ್ಠತಿ*

ಬಾಲ್ಯದ ಒಡನಾಡಿಯಾದ ಸೂರ್ಯನಾರಾಯಣ ಅವಧಾನಿ ಮುಂತಾದವರೂ ಗಮಕದಲ್ಲಿ ಒಂದೊಂದೇ ಮೆಟ್ಟಿಲುಗಳನ್ನೇರುತ್ತಿದ್ದರು. ೧೯೬೯ರ ಸುಮಾರಿನಲ್ಲಿ ಗಮಕಕ್ಕೆ ವಿಶಿಷ್ಟವಾದ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಯಿತು. ಮೂರ್ತಿ-ಸೂರ್ಯ ನಾರಾಯಣ ಹಾಗೂ ಮೂರ್ತಿ-ದತ್ತಾತ್ರಿಗಳ ಜೋಡಿವಾಚನ ಹಾಗೂ ನನ್ನ ವ್ಯಾಖ್ಯಾನದಲ್ಲಿ ಸಮಗ್ರ ಕುಮಾರವ್ಯಾಸ ಭಾರತ ಹಾಗೂ ಜೈಮಿನಿ ಭಾರತದ ಕಾರ್ಯಕ್ರಮ ಆರಂಭವಾಯಿತು. ನನ್ನ ಅನುಪಸ್ಥಿತಿಯಲ್ಲಿ ಗೋಪಾಲ ಹಾಗೂ ರಾಜಾರಾಮಮೂರ್ತಿ ವ್ಯಾಖ್ಯಾನಿಸುತ್ತಿದ್ದರು. ತಿಂಗಳುಗಟ್ಟಲೆ ಈ ಅವರಿಗೆ ಬೆಂಬಲವಾಗಿತ್ತಾದರೂ ಶಾಸ್ತ್ರಿಗಳು ತಮ್ಮ ವ್ಯಾಖ್ಯಾನ ವೈಖರಿಗೆ ಮುಕುಟವಿರಿಸಬಲ್ಲ ವಾಚನಕಾರನನ್ನು ಕಂಡದ್ದು ಮೂರ್ತಿಯಲ್ಲೇ! ಮೂರ್ತಿಯ ಸಾಹಚರ್ಯದಲ್ಲಿ ಶಾಸ್ತ್ರಿಗಳು ನೂರಾರು ಕಾರ್ಯಕ್ರಮಗಳನ್ನು ಜರುಗಿಸಿ ಅದ್ವಿತೀಯ ಗಮಕಿಯಾಗಿ ಬೆಳೆಯಲು ಹಾದಿ ತೋರಿದರು.

ಮೂರ್ತಿಯೊಡನೆ ವ್ಯಾಖ್ಯಾನವನ್ನಾರಂಭಿಸುವುದಕ್ಕಿಂತ ಮುಂಚೆಯೇ ನಾನು ಮತ್ತೂರು ತಿರುಮಲಾವಧಾನಿಗಳ ಜತೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿದ್ದ ನೆನಪು. ಮೂರ್ತಿಯೊಂದಿಗೆ ನಾನು ವ್ಯಾಖ್ಯಾನ ಆರಂಭಿಸುವ ಹೊತ್ತಿಗಾಗಲೇ ಆನುವಂಶಿಕವಾಗಿ ಬಂದ ಸಂಗೀತದ ಅಭಿಜ್ಞತೆ, ಕಂಠಸಿರಿ, ಸಾಹಿತ್ಯಜ್ಞಾನ, ಮೇಲಾಗಿ ಶ್ರೀ ವೆಂಕಟೇಶಯ್ಯನವರ ನೆಚ್ಚಿನ ಶಿಷ್ಯನಾಗಿ ಸಂಪಾದಿಸಿದ ಗಮಕಕಲೆಯ ಪ್ರೌಢಿಮೆಗಳಿಂದ ಮೂರ್ತಿ ಬಹು ಎತ್ತರಕ್ಕೆ ಬೆಳೆದಿದ್ದ. ಇಂತಹ ಗಮಕಿಯೊಂದಿಗೆ ನಾನು ವ್ಯಾಖ್ಯಾನವನ್ನು ಆರಂಭಿಸಿದುದೂ ನನ್ನ ಸುಯೋಗ.

ಈ ಹೊತ್ತಿಗಾಗಲೇ ನಮ್ಮೆರಡೂ ಗ್ರಾಮಗಳಲ್ಲಿ ಶಾಸ್ತ್ರಿಗಳ ವ್ಯಾಖ್ಯಾನ ಮತ್ತು ಮೂರ್ತಿಯ ವಾಚನಗಳ ಸವಿಯುಂಡು ಗಮಕದ ಬಗ್ಗೆ, ವಿಶೇಷವಾಗಿ ಯುವಕರಲ್ಲಿ ಆಸ್ಥೆ ಬೆಳೆಯಲಾರಂಭಿಸಿತ್ತು. ನಮ್ಮ



***223.** ಶ್ರೀ ಮಾರ್ಕಂಡೇಯ ಅವಧಾನಿಗಳು 'ಸಂನ್ಯಾಸಿ ವೇಷದಲ್ಲಿ' ಕಾಷಾಯವಸ್ತ್ರಮಾತ್ರೇಣ ಯತಿಃ ಪೂಜ್ಯೋ ನ ಸಂಶಯಃ - ಮತ್ತೂರಿನ ರಥೋತ್ಸವದ ಅವಭೃಥದಂದು*

ಕಾರ್ಯಕ್ರಮ ನಡೆದು ವಾಚನ ಹಾಗೂ ವ್ಯಾಖ್ಯಾನಾಭ್ಯಾಸಿಗಳಿಗೆ ಬೆಳೆಯಲು ಒಂದು ಒಳ್ಳೆಯ ಅವಕಾಶವನ್ನು ಒದಗಿಸಿಕೊಟ್ಟಿತು.

ಅನಂತರ ೧೯೭೩-೭೪ರಲ್ಲಿ ಮತ್ತೆ ಸೂರ್ಯನಾರಾಯಣ ಅವಧಾನಿ ಹಾಗೂ ಮೂರ್ತಿಗಳ ವಾಚನ ಹಾಗೂ ನನ್ನದೇ ವ್ಯಾಖ್ಯಾನದೊಂದಿಗೆ ಸಮಗ್ರ ಗದುಗಿನ ಭಾರತದ ಕಾರ್ಯಕ್ರಮ ನಡೆಯಿತು. *ಈ* ಎಲ್ಲ ಕಾರ್ಯಕ್ರಮಗಳಲ್ಲಿ ಆಕರ್ಷಣೆಯ ಕೇಂದ್ರಬಿಂದು ಮೂರ್ತಿಯೇ ಆಗಿದ್ದನೆಂಬುದರಲ್ಲಿ ಅತಿಶಯೋಕ್ತಿಯಿಲ್ಲ. ನಿರಂತರವಾಗಿ ರಾಗದ ಮಧ್ಯ, ತಾರ, ಮಂದ್ರಗಳಲ್ಲಿ ಸಂಚರಿಸುತ್ತಾ, ವ್ಯಾಖ್ಯಾನವನ್ನೇ ಬಯಸದ ಅವನ ವಾಚನಕ್ಕೆ ನೆಪ ಮಾತ್ರಕ್ಕೆ ವ್ಯಾಖ್ಯಾನಿಸುತ್ತಿದ್ದೆವು. ಸೂರ್ಯನಾರಾಯಣ ಅವಧಾನಿ ಉತ್ತಮವಾದ ಗಮಕಿಗಳಾಗಿದ್ದರೂ ಅನಾರೋಗ್ಯದ ದೆಸೆಯಿಂದ ಅವರಿಗೆ ಮೂರ್ತಿಯಷ್ಟು ಸಾಧನೆ ಮಾಡಲು ಅವಕಾಶವಾಗಲಿಲ್ಲ.

*ಈ* ನಡುವೆ ಚನ್ನಪಟ್ಟಣದಲ್ಲಿ ನಡೆದ ಕಾರ್ಯಕ್ರಮವೊಂದು ಅತ್ಯಂತ ವಿಶಿಷ್ಟವಾಗಿತ್ತು. ತಿಂಗಳ ಕಾಲ ನಡೆದ *ಈ* ಕಾರ್ಯಕ್ರಮದಲ್ಲಿ ಕುಮಾರವ್ಯಾಸ ಭಾರತವನ್ನು ಮೂರ್ತಿ ಹಾಗೂ ಸೂರ್ಯನಾರಾಯಣ ಅವಧಾನಿ ಅವರು ವಾಚಿಸಿದರೆ, ನನ್ನ ಗೆಳೆಯ ಮತ್ತೂರು ಕೃಷ್ಣಮೂರ್ತಿಯದು ವ್ಯಾಖ್ಯಾನ. ಪ್ರತಿದಿನ ಬೆಂಗಳೂರಿನಿಂದ ರೈಲಿನಲ್ಲಿ ಪ್ರಯಾಣ ಮಾಡಿ ಅಂತಹ ಕಾರ್ಯಕ್ರಮ ನಡೆಸಿದ್ದು ಅತಿ ದೊಡ್ಡ ಸಾಧನೆಯಾಗಿತ್ತು.

ಇತ್ತೀಚೆಗೆ ನಡೆದ ಸಮಗ್ರ ಕುಮಾರವ್ಯಾಸ ಭಾರತವನ್ನು ಧ್ವನಿ ಸುರುಳಿಗಳಲ್ಲಿ ಸೆರೆಹಿಡಿದಿದ್ದು **ನ ಭೂತೋ ನ ಭವಿಷ್ಯತಿ** ಎನ್ನುವಂತಹಾ ಸಾಧನೆ. ಇದರಲ್ಲಿ ಪೂಜ್ಯ ಶಾಸ್ತ್ರಿಗಳ ವ್ಯಾಖ್ಯಾನ-ಮೂರ್ತಿಯ ವಾಚನ ಒಂದರಿಂದೊಂದು ಅತಿಶಯವಾಗಿವೆ. ಎಂಟು ಒಂಬತ್ತು ತಿಂಗಳುಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ಶಾರೀರದ ಸ್ಥಿತಿಯನ್ನು ಒಂದೇ ರೀತಿ ಕಾಯ್ದಿಟ್ಟುಕೊಂಡು, ದಿನದಿಂದ ದಿನಕ್ಕೆ ಅಮೋಘವಾಗಿ ಮೂರ್ತಿ ವಾಚಿಸಿದ್ದು ಪವಾಡ ಸದೃಶ. ನಿರಂತರವಾದ ಸಾಧನೆ ಇಲ್ಲದಿದ್ದರೆ ಅದು ಖಂಡಿತ ಸಾಧ್ಯವಾಗುತ್ತಿರಲಿಲ್ಲ.

*ಈ* ನಡುವಿನ ಅಂತರದಲ್ಲಿ ನಾನು ಮೂರ್ತಿಯೊಂದಿಗೆ ನೂರಾರು ಕಾರ್ಯಕ್ರಮಗಳನ್ನು ನಡೆಸಿದ್ದೆ. ಎರಡು ವರ್ಷಗಳ ಹಿಂದೆ ನಡೆದ ಸಮಗ್ರ ಜೈಮಿನಿ ಭಾರತದ ಧ್ವನಿ ಮುದ್ರಣ - ಮೂರ್ತಿಯ ವಾಚನ ಹಾಗೂ ನನ್ನ ವ್ಯಾಖ್ಯಾನದಲ್ಲಿ ನಡೆದದ್ದು - ನಾವು ನಡೆಸಿದ್ದ ಎಲ್ಲ ಕಾರ್ಯಕ್ರಮಗಳಿಗೆ ಕಳಸವಿಟ್ಟಂತೆ. ಪಕ್ಕದಲ್ಲಿ ಕುಳಿತು ಪ್ರತಿದಿನ ಅವನ ವಾಚನದ ಸವಿ ಉಂಡವರಿಗೆ ಗೊತ್ತು, ಮೂರ್ತಿಯ ವಾಚನದ ಹಿರಿಮೆ. ಮೂರ್ತಿಯ ಭಾವರಸಪೂರ್ಣವಾದ ವಾಚನವನ್ನಾಲಿಸುತ್ತಿದ್ದರೆ, ವ್ಯಾಖ್ಯಾನ ನೀರಸವಾಗಬಹುದೆಂಬ ಭೀತಿ ಎಂತಹವರಿಗೂ ಮೂಡದಿರುವುದಿಲ್ಲ.

ನಮ್ಮ ಮೊದಲ ಕಾರ್ಯಕ್ರಮ ಯಾವಾಗ ನಡೆಯಿತೆಂಬುದು ನನಗೆ ಸರಿಯಾಗಿ ನೆನಪಿಲ್ಲ. ಅದು ಬೆಂಗಳೂರು ಮಲ್ಲೇಶ್ವರದ ರಾಮ ಮಂದಿರದ ಸಭೆಯೋ, ತರೀಕೆರೆಯ ಗಣಪತಿ ಸಭೆಯೋ, ಭದ್ರಾವತಿಯ ರಾಮೇಶ್ವರ ದೇವಾಲಯವೋ ಇರಬಹುದು.

ಒಮ್ಮೆ ನಾವಿಬ್ಬರೂ ಶೃಂಗೇರಿಗೆ ಹೋಗಿದ್ದಾಗ ಶ್ರೀಗಳವರನ್ನು ಕಂಡು ವಂದಿಸಿ ಸ್ವಲ್ಪಕಾಲ ಕಾವ್ಯವಾಚನ ಮಾಡುವುದಾಗಿ ಪ್ರಾರ್ಥಿಸಿದೆವು. ಆಗ ಗಣಪತಿ ವಿದ್ವತ್ ಸಭೆ ನಡೆಯುತ್ತಿತ್ತು. ಅದರ ಕಾರ್ಯಕ್ರಮಗಳು ಯಥಾಕಾಲದಲ್ಲಿ ನಡೆಯಬೇಕಾಗಿದ್ದುದರಿಂದ ನಮ್ಮ ಮನಸ್ಸಿಗೂ ನೋವಾಗದಂತೆ ಹತ್ತು ನಿಮಿಷಗಳ ಕಾಲ ಅವಕಾಶ ಕೊಟ್ಟರು. ಅದೇ ಪರಮಾನುಗ್ರಹವೆಂದು ಸಂತೋಷಪಟ್ಟೆವು. ಮಧ್ಯಾಹ್ನ ೨.೫೦ಕ್ಕೆ ಕಾರ್ಯಕ್ರಮ ಆರಂಭವಾಗಬೇಕಿತ್ತು. ಅನಾರೋಗ್ಯದ ಕಾರಣ ಪರಮಾಚಾರ್ಯರು ತಮ್ಮ ಅನುಪಸ್ಥಿತಿಯಲ್ಲಿಯೇ ಸಭೆ ಆರಂಭವಾಗುವಂತೆ ಅಪ್ಪಣೆ ಕೊಡಿಸಿದ್ದರು. ನಾವು ಖಿನ್ನರಾಗಿ ವೇದಿಕೆಯ ಮೇಲೆ ಕುಳಿತೆವು. ಮೂರ್ತಿ, "ಆನತ ಜಗವ ಕಾವುದೆಂದು" ಮೋಲುಗಡೆ ಹಾಡಲಾರಂಭಿಸಿದ. ಅವನ ಕಂಠದ ಸಿರಿಯನ್ನು ಕೇಳಿದ ಶ್ರೀ ಶ್ರೀಗಳವರು ಮಲಗಿದಲ್ಲೇ ಕೇಳಿ ನಮ್ಮ "ಸುಮನೋರಥವಿಳಿದು ಬಪ್ಪಂತೆ" ಬಂದರು. ಗಮಕ ವಾಚನವನ್ನು ಕೇಳುತ್ತ ಹತ್ತು ನಿಮಿಷದ ಅವಧಿಯನ್ನು ಅರ್ಧಗಂಟೆಗೆ ಏರಿಸಿದರು. "ದೇವ ನೀನೇ ಸಾಕು . . . . . ." ಎಂದು ಮೂರ್ತಿ ಓದಿದಾಗ ಆನಂದಬಾಷ್ಪ ಸುರಿಸುತ್ತ ನಮ್ಮನ್ನು ಹರಸಿದರು. ಪರಮಾಚಾರ್ಯರನ್ನು ಮರುಳು ಮಾಡಿದ ಮೂರ್ತಿಯ ಗಮಕದ ಮೋಡಿ ಯಾರನ್ನು ತಾನೇ ಮರುಳು ಮಾಡದಿರದು!

ಹೀಗೆಯೇ ವಿರಾಜಪೇಟೆಗೆ ನಾವಿಬ್ಬರೂ ನವರಾತ್ರಿಗೆ ಹೋಗಿದ್ದೆವು. ಮೂರ್ತಿ ಅದ್ಭುತವಾಗಿ ಓದಿದ, ನಾನೂ ವಿಸ್ತಾರವಾಗಿಯೇ ವ್ಯಾಖ್ಯಾನಿಸಿದೆ. ಒಂದು ಚೀಟಿ ಶ್ರೋತೃಗಳಿಂದ ಬಂತು. "ಕಾರ್ಯಕ್ರಮ ಇನ್ನೂ ಅರ್ಧ ಗಂಟೆ ಹೆಚ್ಚು ಸಮಯ ನಡೆಯಲಿ" ಎಂದಿರಬಹುದೆಂದು ಚೀಟಿಯನ್ನು ನೋಡಿದರೆ ಹಾಗೆಯೇ ಇತ್ತು....! ಆದರೆ 'ವಾಚನ ಮಾತ್ರ ಅರ್ಧ ಗಂಟೆ ಹೆಚ್ಚು ಮಾಡುವಿರಾ?' ಎಂದು ಬರೆದಿದ್ದರು! ನಾನು ಚೀಟಿಯನ್ನು

ಮೂರ್ತಿಯ ಕೈಗಿತ್ತು ಬೆವರೊರೆಸಿಕೊಂಡೆ. ಆದರೂ ಅದು ನನಗೆ ಅತ್ಯಂತ ಸಂತೋಷವನ್ನುಂಟುಮಾಡಿದ ಸಂಗತಿಯಾಗಿತ್ತು. ಮೂರ್ತಿಯ ಗಾನ ಅವರನ್ನು ಎಷ್ಟರ ಮಟ್ಟಿಗೆ ಮೋಡಿ ಮಾಡಿರಬಹುದು!

ಮೇಲಿನಂತೆಯೇ, "ನಿಮ್ಮ ಅನುವಾದ ಸೊಗಸಾಗಿದೆ. ನಾವು ಭಾರತ ವಾಚನಕ್ಕೆ ಕರೆದಿದ್ದೇವೆ. ಮುಂದೆ ವ್ಯಾಖ್ಯಾನ ಕಡಮೆ ಮಾಡಿ ವಾಚನಕ್ಕೆ ಹೆಚ್ಚು ಅವಕಾಶ ನೀಡಿ" ಮುಂತಾಗಿ ಬಂದ ಚೀಟಿಗಳಂತೂ ಅನೇಕ.

ಸಂಗೀತ ವಿದ್ವಾನ್ ಶಂಕರಮೂರ್ತಿಗಳಿಗೆ, ಮೂರ್ತಿಯ ರಾಗಗಳ ಬಗ್ಗೆ ತುಂಬಾ ಮೆಚ್ಚುಗೆ. ಸ್ವತಃ ಸಂಗೀತ ವಿದ್ವಾಂಸರಾದ ಅವರು ತಮ್ಮ ಸಂಗೀತಸಂಸ್ಥೆಯಾದ **ಗುರುಗುಹ ಗಾನನಿಲಯ**ಕ್ಕೆ ನಮ್ಮನ್ನು ಕರೆಯಿಸಿ ಡಾ. ಹೆಚ್.ಕೆ. ರಂಗನಾಥ್‌ರವರಂತಹ ಮಾನ್ಯರ ಸಮಕ್ಷಮ ನಮ್ಮ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದರು.

ಒಮ್ಮೆ ವಿದ್ವಾನ್ ಲಾಲ್‌ಗುಡಿ ಜಿ. ಜಯರಾಮನ್ ಅವರು ಹೊಸಹಳ್ಳಿಗೆ ಬಂದಾಗ ಮೂರ್ತಿ ಹೇಳಿದ ಒಂದು ಶ್ಲೋಕವನ್ನು ಕೇಳಿ, ಉತ್ಸುಕತೆಯಿಂದ ಪರಿಚಯ ಮಾಡಿಕೊಂಡು ಮತ್ತೊಮ್ಮೆ ಮೂರ್ತಿಯನ್ನು ಕರೆಸಿ ಹಾಡಿಸಿ ಕೇಳಿ, ಆನಂದಿಸಿ ಅಭಿನಂದಿಸಿದುದು ಅವಿಸ್ಮರಣೀಯ.

ಸಾಮಾನ್ಯವಾಗಿ ಯಾವ ತಂದೆಯೂ, ಮಗನ ಗುಣಗಳಿಂದ ಎಷ್ಟೇ ಸಂತೋಷಗೊಂಡರೂ, ಅದನ್ನು ಮನದಲ್ಲಿಯೇ ಅನುಭವಿಸುವರೇ ಹೊರತು ಬಾಯಿಬಿಟ್ಟು ಹೇಳಲಾರರು. ಆದರೆ ನಮ್ಮ ಮೂರ್ತಿಯ ಪಿತೃವರ್ಯರಾದ ಶ್ರೀ ರಾಮಸ್ವಾಮಿ ಶಾಸ್ತ್ರಿಗಳೇ ನಮ್ಮ ಕಾರ್ಯಕ್ರಮವನ್ನು ಕೇಳಿ ಇಬ್ಬರನ್ನೂ ಬಾಯಿತುಂಬ ಹೊಗಳಿಬಿಟ್ಟರು. "ಮೂರ್ತಿ ಅದೆಷ್ಟು ಚೆನ್ನಾಗಿ ಓದಿದ. ಯಾವ ರಾಗಗಳನ್ನು ಓದಿದ ಎಂದೇ ತಿಳಿಯಲಿಲ್ಲ. ಎಲ್ಲ ಹೊಸರಾಗಗಳು, ರಾಗಗಳ ಹೆಸರೇ ಗೊತ್ತಿಲ್ಲ. ಅಂತೂ ಕಾರ್ಯಕ್ರಮ ಬಹಳ ಚೆನ್ನಾಗಿತ್ತು..." ಹೀಗೆ ಮಗನನ್ನು ಹೊಗಳಬೇಕಾದರೆ ಮೂರ್ತಿಯ ವಾಚನ ಅದೆಷ್ಟು ಅದ್ಭುತವಾಗಿದ್ದಿರಬೇಕು?

ಮೂರ್ತಿಯ ವ್ಯಕ್ತಿತ್ವದ ಬಗೆಗೆ ಹೇಳಬೇಕಾದರೆ, ಪ್ರಚಾರಕ್ಕಾಗಿ ಆಸೆಪಡದ, ಪ್ರಶಸ್ತಿ ಸನ್ಮಾನಗಳಿಗಾಗಿ ಓಲೈಸದ ನಿಃಸ್ವಾರ್ಥನೀತ. ವಿನಯ, ಹಿರಿಯರಲ್ಲಿ ಗೌರವ, ಧರ್ಮಶ್ರದ್ಧೆ ಇವುಗಳನ್ನು ಯಾರಾದರೂ ಗುರುತಿಸಬಹುದು. ಒಬ್ಬ ಶ್ರೇಷ್ಠ ಗಮಕಿ



***224.*** *ಶ್ರೀ ಎಚ್. ಆರ್.ಕೇಶವಮೂರ್ತಿ ಹಾಗೂ ಮತ್ತೂರು ಕೃಷ್ಣಮೂರ್ತಿಗಳ ಗಮಕ ಕಾರ್ಯಕ್ರಮ : ರಾಮಕೃಷ್ಣಾಶ್ರಮದಲ್ಲಿ ವೇ. ಮಾರ್ಕಂಡೇಯ ಅವಧಾನಿಗಳು ; ಪಕ್ಕದಲ್ಲಿ ಎಚ್.ಎಂ.ಟಿ. ಛೇರ್‌ಮನ್ ಶ್ರೀ ರಾಮಾನುಜ ಅವರು*


ಮಾತ್ರವಲ್ಲದೆ ಗಮಕ ವಾಚನದ ಹೊಸ ಪಂಥವೊಂದರ ಆವಿಷ್ಕಾರ ಮಾಡಿದ ಕ್ರಾಂತಿಕಾರಿಯಾದ ಮೂರ್ತಿಯಲ್ಲಿ ಹಿರಿಯ ಗಮಕಿಗಳನ್ನು ಗೌರವಿಸುವ, ಕಿರಿಯರನ್ನು ಪ್ರೋತ್ಸಾಹಿಸುವ ಮನಸ್ಸು ಮನೆಮಾಡಿದೆ. ಕೀರ್ತಿಯನ್ನು ತಾನೇ ಅರಸುವುದಿರಲಿ, ಕೀರ್ತಿಯೇ ಬೆನ್ನುಹತ್ತಿ ಬಂದರೂ ಬೇಡವೆನ್ನುವ, ಕಲಾಸೇವೆಯನ್ನೇ ಗುರಿಯಾಗಿರಿಸಿ ಕೊಂಡಿರುವ ಗೆಳೆಯನನ್ನು ನಾನು ವರ್ಣಿಸುವುದಾದರೂ ಹೇಗೆ?

ವಸ್ತು, ಸನ್ನಿವೇಶ, ಪಾತ್ರಗಳೊಂದಿಗೆ ತನ್ಮಯನಾಗಿ, ಇನಿದಾದ ಧ್ವನಿ, ರಾಗ ಸಂಯೋಜನೆ, ಧ್ವನಿಯ ಏರಿಳಿತಗಳಿಂದ ಪಾತ್ರಗಳ ರಸಪೋಷಣೆಗೈದು, ಪಾತ್ರಗಳು ಶ್ರೋತೃವಿನ ಮನೋನೇತ್ರಗಳ ಮುಂದೆ ಬರುವಂತೆ ಮಾಡುವುದು ಮೂರ್ತಿಯ ವಾಚನದ ವೈಶಿಷ್ಟ್ಯ.

ಈತನ ವಾಚನದ ಸೊಬಗು, ಈಗಾಗಲೇ ಕನ್ನಡ ನಾಡಿನಲ್ಲಿ ಮನೆ ಮಾತಾಗಿದೆ. ಗೆಳೆಯನ ಗಮಕದ ಬಗ್ಗೆ ಹೇಳುತ್ತಾ, ವಿವಿಧೆಡೆಗಳಲ್ಲಿ ನಾವಿಬ್ಬರೂ ನಡೆಸಿರುವ ಗಮಕ ಕಾರ್ಯಕ್ರಮಗಳ ಪ್ರಸಂಗಗಳ ನೆನಪಿನ ಸುರುಳಿಗಳನ್ನು ಬಿಚ್ಚುತ್ತಾ ಹೋದರೆ ಬಹುಶಃ ಪುಟಗಳು ಸಾಲದೇ ಹೋಗಬಹುದು. ಮೂರ್ತಿಯ ಈ ಮೂವತ್ತೈದು, ನಲವತ್ತು ವರ್ಷಗಳ ಒಡನಾಟದಲ್ಲಿ ಅವನ ವ್ಯಕ್ತಿತ್ವದ, ಗಮಕ ಸಾಧನೆಯ ಹಲವು ಮುಖಗಳನ್ನು ಕಂಡಿದ್ದೇನೆ. ಮಿತ್ರನ ಕೀರ್ತಿ ಹರಡುತ್ತಾ, ಆತನ ಒಡನಾಟ ನಮಗೆಲ್ಲರಿಗೂ ಬಹುಕಾಲ ಸಿಗುವಂತಾಗಲಿ. ಆತನಿಗೆ ವಯೋಧರ್ಮದಿಂದ ಕಂಠ ಸಿರಿಯು ಕುಗ್ಗದೆ, ಚಿರಕಾಲ ಶ್ರೋತೃಗಳನ್ನು ಸಂತೋಷಪಡಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಬೇಡುತ್ತೇನೆ.

## ೨೫. ಅಶ್ವತ್ಥ - ನಾ ಕಂಡಂತೆ

*ಎಚ್.ಆರ್.ಕೇಶವಮೂರ್ತಿ*



**225.** *ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಪೂಜ್ಯ ಪಿತಾಶ್ರೀ ಕ.ನಾರಾಯಣ ಅವಧಾನಿಗಳು*

ಅಂದು ಹೊಸಹಳ್ಳಿಯಲ್ಲಿ 'ಲೆವಿ ಡೇ!'

ಆ ದಿನಗಳಲ್ಲಿ (೧೯೭೦ರ ದಶಕ) 'ಲೆವಿ ಡೇ' ಅದ್ದೂರಿಯ ಕಾರ್ಯಕ್ರಮ. ರೈತರು ತಾವು ಬೆಳೆದ ಬತ್ತದಲ್ಲಿ ಗೊತ್ತಾದ ಪಾಲನ್ನು ಸರ್ಕಾರಕ್ಕೆ ನಿಗದಿತ ದರದಲ್ಲಿ ಕೊಡಬೇಕಾಗಿತ್ತು. ಉಳಿದ ಬತ್ತವನ್ನು ತಮ್ಮಿಷ್ಟದಂತೆ ಮಾರಬಹುದಿತ್ತು. ಈ ರೀತಿಯಾಗಿ ಸರ್ಕಾರಕ್ಕೆ ಕೊಡಬೇಕಾದ ಧಾನ್ಯವನ್ನು ಸಾಮೂಹಿಕವಾಗಿ ಅರ್ಪಿಸುವ ಕಾರ್ಯಕ್ರಮವೇ 'ಲೆವಿ ಡೇ' ಸಮಾರಂಭ. ಆ ಕಾರ್ಯಕ್ರಮಕ್ಕೆ ಖುದ್ದಾಗಿ ಅಂದಿನ ಜಿಲ್ಲಾಧಿಕಾರಿ ಶ್ರೀ ಬಾಲಸುಬ್ರಹ್ಮಣ್ಯಂ, ಜಿಲ್ಲಾ ರಕ್ಷಣಾಧಿಕಾರಿ ಶ್ರೀ ಬಿ.ಎನ್. ಗರುಡಾಚಾರ್ ಇತ್ಯಾದಿ ಅಧಿಕಾರಿಗಳು ಆಗಮಿಸಿದ್ದರು. ನಮ್ಮ ಮಾವ ವೇ. ಶ್ರೀ ನಂಜುಂಡ ಅವಧಾನಿಗಳ ಅಧ್ಯಕ್ಷತೆಯಲ್ಲಿ ಸಮಾರಂಭ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಸಮರ್ಪಣಾ ಕಾರ್ಯಕ್ರಮವನ್ನು ನಡೆಸಲು ಒಬ್ಬರು ಎದ್ದು ನಿಂತರು. ಪ್ರಸ್ತಾವನೆಯ ನಾಲ್ಕು ಮಾತಾದ ಮೇಲೆ ಒಂದು ಕಥೆ ಹೇಳಲು ಪ್ರಾರಂಭಿಸಿದರು.

"ನಂದಗೋಕುಲದಲ್ಲಿ ಪುಟ್ಟ ಕೃಷ್ಣ ಬೆಳೆಯುತ್ತಿದ್ದಾಗ, ಒಂದು ದಿನ ಒಬ್ಬ ಬೈರಾಗಿ ಭಿಕ್ಷೆಗೆ ಬಂದನಂತೆ. ಯಶೋದೆ ಬೊಗಸೆಯಲ್ಲಿ ಅಕ್ಕಿ ಹಿಡಿದು ಭಿಕ್ಷುವಿಗೆ ನೀಡಲು ಹೊರಟಳು. ಪುಟ್ಟ ಕೃಷ್ಣ ತಾನೂ

ಹಾಕುವೆನೆಂದು, ತನ್ನ ಬೊಗಸೆಯಲ್ಲಿಯೂ ಸ್ವಲ್ಪ ಅಕ್ಕಿ ತುಂಬಿಕೊಂಡು ಹೊರಟ. ಮನೆಯಲ್ಲಿ ಅಕ್ಕಿಯ ರಂಗೋಲಿಯಾಯಿತು! ಬಾಗಿಲಿಗೆ ಬರುವ ವೇಳೆಗೆ ಪುಟ್ಟ ಕೈಗಳಲ್ಲಿ ಉಳಿದದ್ದು ನಾಲ್ಕು ಕಾಳು ಮಾತ್ರ. ಬೈರಾಗಿ ಪ್ರೀತಿಯಿಂದ ನಗುತ್ತ ಜೋಳಿಗೆ ಒಡ್ಡಿದ್ದ."

"ಮನೆಗೆ ಬಂದ ಬೈರಾಗಿ ಅಂದಿನ ಸಂಗ್ರಹವನ್ನು ಅಳೆದು ಬೇರೊಂದು ಪಾತ್ರೆಗೆ ತುಂಬತೊಡಗಿದ. ಆಶ್ಚರ್ಯ! ಎಷ್ಟು ಬಾರಿ ಅಳೆದು ಸುರಿದರೂ ಜೋಳಿಗೆ ಭರ್ತಿಯಾಗಿಯೇ ಇರುತ್ತಿತ್ತು. ಪುಟ್ಟ ಕೃಷ್ಣ ನೀಡಿದ್ದ ನಾಲ್ಕು ಕಾಳು ಅಕ್ಷಯವಾಗಿತ್ತು! ಹಾಗೆಯೇ ಈ ಅಗ್ರಹಾರದ ಜನ ನೀಡುತ್ತಿರುವ ಬತ್ತ ಅಲ್ಪವಾಗಿದ್ದರೂ, ಮಂತ್ರಪೂತವಾದ ಈ ಧಾನ್ಯ ಶ್ರೀಕೃಷ್ಣನ ನಾಲ್ಕು ಕಾಳಿನಂತೆ ಅಕ್ಷಯವಾಗಲಿ. ಸರ್ಕಾರದ ಬೊಕ್ಕಸ ತುಂಬಲಿ! ಈ ದೇಶದ ಅನ್ನದ ಸಮಸ್ಯೆ ನೀಗಲಿ ...!" ಎಂದಾಗ ಸಭಾಸದರಿಗೆ ರೋಮಾಂಚನ ವಾಯಿತು. ಚಪ್ಪಾಳೆಯ ಸುರಿಮಳೆ ಕರೆಯಿತು. ಅಧಿಕಾರಿ ವರ್ಗದವರೆಲ್ಲ ತುಂಬ ಮುದಗೊಂಡರು.

ಈ ರೀತಿ ಪ್ರಸಂಗಾವಧಾನತೆಯಿಂದ ಮಾತನಾಡಿ ಎಲ್ಲರನ್ನೂ ರಂಜಿಸಿದವರು ನಮ್ಮ (ಮತ್ತೂರು-ಹೊಸಹಳ್ಳಿ ಗ್ರಾಮಗಳ) ಪುರೋಹಿತರೂ ಪ್ರಖ್ಯಾತ ವ್ಯಾಖ್ಯಾನಕಾರರೂ ಆದ ವೇದಮೂರ್ತಿ ಶ್ರೀ ಮಾರ್ಕಂಡೇಯ ಅವಧಾನಿಗಳು. ನಮಗೆಲ್ಲ ಪ್ರೀತಿಯ ಗೆಳೆಯ ಅಶ್ವತ್ಥ.

ಮತ್ತೂರಿನ ಕಡೇಮನೆ ನಾರಾಯಣ ಅವಧಾನಿಗಳು ಆ ಕಾಲದಲ್ಲಿ ಪ್ರಖ್ಯಾತ ಪುರೋಹಿತರು. 'ಪುರೋಹಿತ ಶಾಹಿ' ಪದಕ್ಕೆ 'ಶಾಯಿ' (ಮಸಿ) ಬಳಿಯುವಂತೆ ಬಾಳಿದವರು! ಬಡವರ ಮನೆಗೆ ಪೌರೋಹಿತ್ಯಕ್ಕೆ ಹೋಗುವಾಗ ತಾವೇ ಮನೆಯಿಂದ ಹಣವನ್ನು ತೆಗೆದುಕೊಂಡು ಹೋಗಿ, ಅದನ್ನೇ ದಕ್ಷಿಣೆಯಾಗಿ ಸ್ವೀಕರಿಸಿ "ಅನಂತವಾಗಿದೆ ದಕ್ಷಿಣೆ. ನಾನು ಸಂತುಷ್ಟನಾಗಿದ್ದೇನೆ" ಎಂದು ಹರಸಿ ಮರಳುತ್ತಿದ್ದರಂತೆ! ತಂದೆಯಿಂದ ಬಂದ ಈ ಔದಾರ್ಯ ಅಶ್ವತ್ಥನಲ್ಲಿ ಇನ್ನೂ ಅಧಿಕವೆಂಬಂತಿದೆ. ಆತ ಅಜಾತಶತ್ರು. ಊರಿನ ಎಲ್ಲರಿಗೂ ಬೇಕಾದ ಆತ್ಮೀಯ. ಪೌರೋಹಿತ್ಯದಲ್ಲಿ, ವೇದದಲ್ಲಿ, ಶಾಸ್ತ್ರಗಳಲ್ಲಿ ಪ್ರವಚನದಲ್ಲಿ ಎಲ್ಲದರಲ್ಲೂ ಆತ ಅದ್ವಿತೀಯನೇ. ಜತೆಗೆ ಅಷ್ಟೇ ನಿಗರ್ವಿ. ಶಿವಮೊಗ್ಗೆಯ ಉಷಾ ನರ್ಸಿಂಗ್ ಹೋಂನ ವೈದ್ಯ ದಂಪತಿಗಳಾದ ಡಾ.ಬಿ. ವೆಂಕಟರಾವ್ ಹಾಗೂ ಡಾ. ಅರುಂಧತಿರಾವ್ ಅವರು (ಅಲ್ಪ ಪರಿಚಿತರಾಗಿದ್ದರೂ) ತಮ್ಮ ನರ್ಸಿಂಗ್ ಹೋಂ ಆವರಣದಲ್ಲಿ ನಿರ್ಮಿಸಿರುವ 'ಶ್ರೀ ಧನ್ವಂತರೀ ಲಕ್ಷ್ಮೀನಾರಾಯಣ' ದೇವಸ್ಥಾನವನ್ನು 'ಮಾರ್ಕಂಡೇಯ ಅವಧಾನಿಗಳ ಷಷ್ಟ್ಯಬ್ದಪೂರ್ತಿಯ ನೆನಪಿಗಾಗಿ' ಎಂದು ಹೆಸರಿಸುವಷ್ಟು ಪ್ರಭಾವೀ ವ್ಯಕ್ತಿತ್ವ ಆತನದು!

ಲಕ್ಷ್ಮೀಶನ ಕಾವ್ಯಕ್ಕೆ ಅರ್ಥ ಹೇಳುವುದೆಂದರೆ ತುಂಬಾ ಕಷ್ಟದ ಕೆಲಸ. ಕೆಲ ಪದ್ಯಗಳಂತೂ ಅರ್ಥವೇ ಆಗುವುದಿಲ್ಲ. ಮೂವತ್ತು ವರ್ಷಗಳ ಹಿಂದಿನ ಮಾತು. ಹೊಸಹಳ್ಳಿಯಲ್ಲಿ 'ಮಯೂರಧ್ವಜ' ಭಾಗವನ್ನು ನಿವೇದಿಸಬೇಕಿತ್ತು. ಅರ್ಥವಾಗದ ಪದ್ಯಗಳನ್ನು ವಾಚಿಸುವಾಗ ನನಗೆ ಭಯವಾಗುತ್ತಿತ್ತು. ಆದರೂ ಬುದ್ಧಿವಂತಿಕೆಯಿಂದ ಅನ್ವಯ ತೋರಿಸದೆ ಪದ್ಯವನ್ನು ಬಡಬಡನೆ ಓದಿ ಮುಗಿಸುತ್ತಿದ್ದೆ. ಆದರೆ ವ್ಯಾಖ್ಯಾನಕಾರ ಹಾಗೆ ಮಾಡುವಂತಿಲ್ಲವಲ್ಲ! ನಾನು "ಹರಿಸಂದನನ



*226. ಸರ್ವೋಚ್ಚ ನ್ಯಾಯಮೂರ್ತಿ ಶ್ರೀ ಎಂ.ಎನ್. ವೆಂಕಟಾಚಲ ಅವರೊಂದಿಗೆ ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳು*

**ದಿವ್ಯ ಹರಿಮಯ ವರೂಥವಮಂ...**" ಎಂದು ಹಂಸಧ್ವನಿಯಲ್ಲಿ ಸರಾಗವಾಗಿ ವಾಚಿಸಿದೆ. ಆ ಪದ್ಯದಲ್ಲಿ ಹದಿನಾಲ್ಕು ಬಾರಿ 'ಹರಿ' ಶಬ್ದದ ಪ್ರಯೋಗವಾಗಿದೆ. ಪ್ರತಿ ಬಾರಿಯೂ ಅರ್ಥ ವ್ಯತ್ಯಾಸ. ಆ ಪದ್ಯವನ್ನು ಅಶ್ವತ್ಥ ತುಂಬ ಚೆನ್ನಾಗಿ ಬಿಡಿಸಿ ಅರ್ಥ ಹೇಳಿದ್ದ. ಅನಂತರ "ಹರ ಶರ ಪ್ರಥಮಾವತಾರಲೋಚನೆ....." ಎಂಬ ಪದ್ಯ. ಅದಕ್ಕೆ ಅಶ್ವತ್ಥ ಹೇಳಿದ್ದ ವಿದ್ವತ್ಪೂರ್ಣ ವ್ಯಾಖ್ಯಾನವನ್ನು ನಾನೆಂದೂ ಮರೆಯಲಾರೆ. ಸವತಿಯರ ಜಗಳ ಕುರಿತ ವರ್ಣನೆಗೆ ಹರ-ಸ್ಮರರನ್ನು ಉಪಮಿಸಿ ರೂಪಕಮಾಲೆಯನ್ನು ನೆಯ್ದು, ತ್ರಿಪುರ ದಹನದ ಕಥೆಯನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಆ ಪದ್ಯದ ಸ್ವಾರಸ್ಯವನ್ನು ಬಿಡಿಸುತ್ತಿದ್ದ ಅಶ್ವತ್ಥನ ರೀತಿ ಮನೋಜ್ಞವಾಗಿತ್ತು. ಸಭೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ (ಆದರೆ ವಾಚ್ಯವಾಗದಂತೆ) ಆ ಶೃಂಗಾರವನ್ನು ನಿರೂಪಿಸಿದ್ದ ಆತ.

ಅಶ್ವತ್ಥ ಅತ್ಯಂತ ವಿನಯ ಸಂಪನ್ನ. ಊರಿನ ಎಲ್ಲ ಹಿರಿಯರಿಗೂ ಕಾಲು ಮುಟ್ಟಿ ನಮಸ್ಕರಿಸಿ ಅದೆಷ್ಟು ಅಭ್ಯಾಸವಾಗಿದೆಯೆಂದರೆ ನಮ್ಮ ಎರಡೂರಿನ ೧೨೦ ಮನೆಯ ಎಲ್ಲರನ್ನೂ ಕೇವಲ ಕಾಲು ನೋಡಿಯೇ ಗುರುತಿಸಬಲ್ಲ! ಲಕ್ಷ್ಮಣ, ಸೀತೆಯ ಕಾಲಂದುಗೆಯನ್ನು ಪ್ರತಿನಿತ್ಯ ನಮಸ್ಕರಿಸುವಾಗ ನೋಡಿ ಕಂಡುಹಿಡಿದ ಹಾಗೆ ಅಶ್ವತ್ಥನು ಸಹ. ಇದು ಕೇವಲ ಹಾಸ್ಯಕ್ಕಾಗಿ ಹೇಳುವ ಮಾತಲ್ಲ. ಪ್ರತ್ಯಕ್ಷ ಪರೀಕ್ಷೆಯಿಂದ ಕಂಡುಕೊಂಡ ಸತ್ಯ. ಊರಿನ ಹಿರಿಯರು, ಹೆಂಗಸರು- ಅವರ ಸಂತಾನ ಎಲ್ಲರನ್ನೂ ಹೆಜ್ಜೆಯನ್ನು ನೋಡಿಯೇ ಗುರುತಿಸಬಲ್ಲ ಸ್ಮರಣ ಶಕ್ತಿ- ಮೇಧಾಶಕ್ತಿ ಆತನದು!

ಒಂದು ವಿಚಾರವನ್ನು ನಿಮ್ಮ ಮುಂದೆ ನಿವೇದಿಸದಿದ್ದರೆ *ಈ* ಲೇಖನ ಅಪೂರ್ಣವೆನಿಸೀತು. ಬಾಲ್ಯದಲ್ಲಿ ನಾವು ಮೂವರು ಆತ್ಮೀಯ ಗೆಳೆಯರು: ನಾನು, ಅಶ್ವತ್ಥ ಹಾಗೂ ರಾಜು. ನಮ್ಮ ಸ್ನೇಹ ಎಷ್ಟಿತ್ತೆಂದರೆ ಒಬ್ಬರನ್ನು ಬಿಟ್ಟು ಒಬ್ಬರು ಇರುತ್ತಿರಲಿಲ್ಲ. ನಮ್ಮ ಗಮಕಕಾರ್ಯಕ್ರಮ ಎಲ್ಲಿ ನಡೆದರೂ ರಾಜು ಬರಲೇ ಬೇಕು - ಅಲ್ಲ - ಬಂದೇ ಬರುತ್ತಿದ್ದ; 'ಅಶ್ವತ್ಥಾಮನ ಆಸನ'ದಲ್ಲಿ ಶ್ರುತಿ ನುಡಿಸುತ್ತ ಕುಳಿತು ಆಸ್ವಾದಿಸುತ್ತಿದ್ದ. ಕಾರ್ಯಕ್ರಮ ಮುಗಿದನಂತರ ಅವನೇ ವಿಮರ್ಶಕ! ಎಲ್ಲವನ್ನೂ ವಿಮರ್ಶಿಸಿ ಮುಂದಿನ ಕಾರ್ಯಕ್ರಮಕ್ಕೆ ಸೂಚನೆ ನೀಡುತ್ತಿದ್ದ. ನಮ್ಮೊಂದಿಗೆ ಕಾರ್ಯಕ್ರಮದಲ್ಲಿ ಕುಳಿತು, ಗಮಕ ಅವನ ಶೀಲವೂ ಶೈಲಿಯೂ ಆಗಿಬಿಟ್ಟಿತ್ತು. ಮಾತು ಮಾತಿಗೆ ಕುಮಾರವ್ಯಾಸನ ಪದ್ಯಗಳ ಸಾಲು ಸಾಲು ಉದಾಹರಣೆ ನೀಡುತ್ತಿದ್ದ. ನಾವೆಲ್ಲಾದರೂ ಅವನನ್ನು ಮರೆತು ನಾಲ್ಕು ಹೆಜ್ಜೆ ಮುಂದೆ ಹೋದರೆ, "**ಬಡ ವಿರಾಟನ ಕೇಳ್ವರಾರೀ ದ್ರೋಣ ಸಮರದಲಿ!**" ಎಂದು, ಏನನ್ನಾದರೂ ಮಾಡಲು ಒಲ್ಲೆನೆಂದರೆ, "**ಕೊಳುಗುಳಕೆ ಪವಮಾನನಂದನನಳುಕಿದನು!**" ಎಂದು, ನೀತಿ ಹೇಳಲು ಹೋದರೆ, "**ಹೇಳು ಹೇಳಿನ್ನೊಮ್ಮೆ ಧರ್ಮವ ಕೇಳಿದರಿಯೆವು**" ಎಂದು ನಾರಣಪ್ಪನನ್ನು ಉದಾಹರಿಸುತ್ತಿದ್ದ. ಕೇವಲ ಕೇಳ್ಮೆಯಿಂದಲೇ ಆತ ವಿದ್ವತ್ತನ್ನು ಸಂಪಾದಿಸಿದ್ದ. ಆತನ ಅಭಿಮಾನಕ್ಕೆ ಮಣಿದು ನಾವು ಅಭ್ಯಾಸಕ್ಕೆ ಕುಳಿತುಕೊಳ್ಳುತ್ತಿದ್ದೆವು. ಇಂದಿನ ನಮ್ಮ ಸಾಧನೆಯ ಹಿಂದೆ ಆತನ ಪಾತ್ರ ಅಪಾರ!

ಅಶ್ವತ್ಥನ ಬಗ್ಗೆ ಎಷ್ಟು ಹೊಗಳಿದರೂ ಕಡಮೆಯೇ; ಆದರೆ ನನ್ನ ಬಗ್ಗೆಯೂ ಅಶ್ವತ್ಥ ಹೀಗೇ ಹೊಗಳಿ ಬರೆದಿರಬಹುದು. ಅದನ್ನು ಓದಿದವರು 'ಪರಸ್ಪರಂ ಪ್ರಶಂಸಂತಿ' ಎಂದು ಹಾಸ್ಯ ಮಾಡಬಾರದಲ್ಲ! ಆದ್ದರಿಂದ ಇಲ್ಲಿಗೆ ಸಾಕು ಮಾಡುತ್ತೇನೆ. ಅಶ್ವತ್ಥನಂತಹ ವ್ಯಕ್ತಿಗಳು ಕೋಟಿಗೊಬ್ಬರು ಇದ್ದಾರೆಯೋ-ಏನೋ?!

ವಾಚನ - ವ್ಯಾಖ್ಯಾನ ಪರಂಪರೆ ಉಳಿಯಲಿ ನಿರಂತರ
ಗಮಕ ಕಲೆ ಆಗಲಿ ತುಂಬಿಹರಿವ ತುಂಗ ಭದ್ರ


******

# ಅನುಬಂಧ


## ೧. ಮೂಲಗ್ರಂಥದ ಪರಿವಿಡಿ

***ತುಂಗ ಭದ್ರ* : ವ್ಯಾಖ್ಯಾನ ಚತುರ ವೇದಮೂರ್ತಿ ಮಾರ್ಕಂಡೇಯ ಅವಧಾನಿ ಹಾಗೂ ಗಮಕ ಗಂಧರ್ವ ಎಚ್.ಆರ್. ಕೇಶವಮೂರ್ತಿ ಅಭಿನಂದನಾ ಗ್ರಂಥ; ಪ್ರಧಾನ ಸಂಪಾದಕರು: ರಾಜಾರಾಮಮೂರ್ತಿ; ಗಮಕ ಕಲಾ ಪರಿಷತ್, ಹೊಸಹಳ್ಳಿ-೫೭೭ ೨೦೨, ಶಿವಮೊಗ್ಗ ತಾಲ್ಲೂಕು; ೧/೮ ಡೆಮ್ಮಿ, ೧೯೯೪; ಪು.XII + 183**

## ೨. ಗಮಕ ಕೋಕಿಲ ಶ್ರೀ ಎಚ್.ಆರ್. ಕೇಶವಮೂರ್ತಿ ಅವರ ಹಸ್ತಾಕ್ಷರ



## ವ್ಯಾಖ್ಯಾನ ಚತುರ ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿ ಅವರ ಹಸ್ತಾಕ್ಷರ



# ೩. ಮಾನ್ಯ ಶ್ರೀ ಎಚ್.ಆರ್. ಕೇಶವಮೂರ್ತಿಗಳ ವಂಶವೃಕ್ಷ

ಸುಬ್ರಹ್ಮಣ ಅವಧಾನಿಗಳು + ಲಕ್ಷ್ಮೀದೇವಮ್ಮ

- ರಾಮಸ್ವಾಮಿ ಶಾಸ್ತ್ರಿಗಳು + ಲಕ್ಷ್ಮೀದೇವಮ್ಮ
  - ವೇ.ಬ್ರ.ಹೆಚ್.ಆರ್.ಸುಬ್ಬರಾಯಶಾಸ್ತ್ರಿ (ವೇದವಿದ್ವಾಂಸರು) + ಲೀಲಾವತಿ
    1. ಡಾ.ರಾಮಸ್ವಾಮಿ(ಕೆನಡಾ)+ಲಕ್ಷ್ಮೀ
    2. ಲತಾ + ಅನಂತರಾಮ್
    3. ತಾರಾ + ಕೇಶವಮೂರ್ತಿ
    4. ಪ್ರಭಾ + ಸುರೇಶ್
    5. ಡಾ.ಶ್ರೀಕಾಂತ್(ಕೆನಡಾ) + ಸುಧಾ
  - ವೇ.ಬ್ರ.ಹೆಚ್.ಆರ್.ರಾಮಶಾಸ್ತ್ರೀ (ವೇದ, ಸಂಗೀತ ಗಮಕ ವಿದ್ವಾಂಸರು) + ಗೌರಮ್ಮ
    - ಗೀತಾ + ದತ್ತಾತ್ರಿ
    - ಸುಧಾ + ರಾಮಸ್ವಾಮಿ
    - ರಾಜಾರಾಂ(ಅಮೆರಿಕಾ) ಅನೂರಾಧ
  - ಭವಾನಮ್ಮ +ಸುಬ್ಬರಾಯಶಾಸ್ತ್ರಿ
    - ಐದು ಜನ ಮಕ್ಕಳು
  - ಎಚ್.ಆರ್.ಕೇಶವಮೂರ್ತಿ (ಗಮಕ ವಿದ್ವಾನ್, ರಾಜ್ಯ ಪ್ರಶಸ್ತಿ ಪುರಸ್ಕೃತರು) + ರಾಜೇಶ್ವರಿ
    - ಉಷಾ +ವೆಂಕಟರಾಮ್ (ಲಾಲ್‌ಗುಡಿ ಜಿ. ಜಯರಾಮನ್ ಅವರ ಶಿಷ್ಯರು)
      - ಜಯರಾಂ (ಕಂಪ್ಯೂಟರ್ ತಜ್ಞ)
      - ರಘುರಾಂ (ಲಾಲ್‌ಗುಡಿ ಜಿ ಜಯರಾಮನ್ ಮತ್ತು ಜಿ.ಜೆ.ಆರ್.ಕೃಷ್ಣನ್ ಅವರ ಶಿಷ್ಯ; ಬಿ.ಇ.ಕಂಪ್ಯೂಟರ್)
  - ಎಚ್.ಆರ್.ಕೃಷ್ಣಮೂರ್ತಿ(B.E) (ನಿವೃತ್ತ ಪ್ರಾಧ್ಯಾಪಕರು) +ವಿಜಯಾ
    - ಡಾ. ಮೋಹನ್ (ಲಂಡನ್) + ಡಾ. ರಮ್ಯ
  - ಎಚ್.ಆರ್.ಚಿಂತಾಮಣಿ (ನಿವೃತ್ತ ಹೈಸ್ಕೂಲ್ ಉಪಾಧ್ಯಾಯರು) +ವಿಜಯಾ
    - ಶೋಭಾ
    - ರಮೇಶ್ ಬಿ.ಇ. (ಅಮೆರಿಕಾ)
    - ಶಶಿ
  - ಸೀತಮ್ಮ +ಗೋಪಾಲಶಾಸ್ತ್ರಿ
    - ಐವರು ಪುತ್ರಿಯರು
- ಚನ್ನಿಗರಾಯ ಅವಧಾನಿಗಳು +ಲಕ್ಷ್ಮೀದೇವಮ್ಮ
  - ಸುಂದರಮ್ಮ +ಕೃಷ್ಣಮೂರ್ತಿ
  - ಸುಬ್ರಹ್ಮಣ್ಯ +ಲಕ್ಷ್ಮೀ
  - ಭಾಸ್ಕರ +ನಾಗಲಕ್ಷ್ಮಿ
  - ಭಾಗ್ಯ +ಸತ್ಯನಾರಾಯಣ
  - ಸಾವಿತ್ರಿ +ಸುಬ್ರಹ್ಮಣ್ಯ
  - ಅನಂತಸುಬ್ರಹ್ಮಣ್ಯ +ಆಶಾ

# ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ವಂಶವೃಕ್ಷ

- ಬ್ರಹ್ಮೀಭೂತ ನಾರಾಯಣ ಅವಧಾನಿ (ಮೂಲಪುರುಷ)
  - ನಾರಾಯಣ ಅವಧಾನಿ (ಸಂತಾನವಿಲ್ಲ)
    - ರಾಮ ಅವಧಾನಿ (ದತ್ತು)
      - ನಾರಾಯಣ ಅವಧಾನಿ
        ಲಕ್ಷ್ಮಮ್ಮ, ಲಕ್ಷ್ಮೀದೇವಿ
        (ಮಕ್ಕಳಿಲ್ಲ)
        - ಮಾರ್ಕಂಡೇಯ ಅವಧಾನೀ +ನಾಗವೇಣೀ
          - ನಾರಾಯಣಮೂರ್ತಿ + ಮಂಗಳಾ
          - ಲಕ್ಷ್ಮೀಕೇಶವ ಅವಧಾನೀ + ಲಕ್ಷ್ಮೀ
          - (ಮರಿಯಣ್ಣ)
          - ಸೀತಾ(ಕನಕ) + ನಿಧಿ
          - ಧ್ರುವಕುಮಾರ+ಪುಷ್ಪ
          - ಉದಯಕುಮಾರ+ಮಾಲತೀ
          - ಅನ್ನಪೂರ್ಣಾ+ವಾಸುದೇವ
        - ಸೀತಾರಾಮ ಅವಧಾನೀ +ರಾಜಲಕ್ಷ್ಮೀ
          - ರಮೇಶ ಅವಧಾನೀ + ಗೌರೀ
          - ಇಂದಿರಾ + ಕುಮಾರ
          - ಶಿವಕುಮಾರ+ ಗಾಯತ್ರೀ
          - ದತ್ತಾತ್ರೀ+ರಮಾ
          - ಸುಪರ್ಣಾ + ಸುಧಾಕರ
        - ಗೋಪಾಲ ಅವಧಾನೀ +ಸರೋಜಾ
          - ರತ್ನಾ + ಕುಮಾರ (ಕಿರಣ)
          - ಶಶಾಂಕ + ರೂಪಾ
        - ಚಂದ್ರಶೇಖರ +ವಾಣೀ
          - ಶ್ರೀವಿದ್ಯಾ
        - ನಂದಕುಮಾರ (ಲಂಡನ್) +ಜಾನಕೀ
          - ರಘುನಂದನ
          - ಸೀತಾಲಕ್ಷ್ಮೀ
      - ಲಕ್ಷ್ಮೀದೇವಿ +ನಾರಾಯಣ ಶಾಸ್ತ್ರಿ
      - ನಾಗಮ್ಮ +ಕೃಷ್ಣ ಅವಧಾನೀ
      - ಸಾವಿತ್ರಿ +ರಾಮಶಾಸ್ತ್ರಿ
      - ಶ್ರೀಕೇಶವ +ಗೌರಮ್ಮ ( ಕಾಶೀ)
  - ಕೃಷ್ಣ ಅವಧಾನೀ
    - ರಾಮ ಅವಧಾನೀ
      ನಾರಾಯಣ ಅವಧಾನಿಗಳಿಗೆ
      ದತ್ತು
    - ಸುಬ್ರಹ್ಮಣ್ಯ ಅವಧಾನೀ
      - ಕೃಷ್ಣಸ್ವಾಮಿ
        - ರಾಜಣ್ಣ(ಸುಬ್ರಹ್ಮಣ್ಯ)
          - ವಿವೇಕಕೃಷ್ಣಾ
          - ವಸುಧಾ
          - ವಾಗೀಶ್ವರಿ

# ೪. ವ್ಯಕ್ತಿ ವಿವರ

## ಗಮಕ ಗಂಧರ್ವ ಎಚ್.ಆರ್. ಕೇಶವಮೂರ್ತಿ ಅವರು

* ೨೨-೨-೧೯೩೪ರ ಶ್ರೀಮುಖ ಸಂವತ್ಸರ : ಮಾಘ ಶುದ್ಧ ದಶಮಿಯಂದು ಜನನ. ತಂದೆ ವೇ.ಶ್ರೀ ರಾಮಸ್ವಾಮಿಶಾಸ್ತ್ರಿಗಳು. ತಾಯಿ ಶ್ರೀಮತಿ ಲಕ್ಷ್ಮೀದೇವಮ್ಮ.
* ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳ ವಿದ್ಯಾಭ್ಯಾಸ - ಕ್ರಮವಾಗಿ ಹೊಸಹಳ್ಳಿ, ಮತ್ತೂರು ಮತ್ತು ತರೀಕೆರೆಗಳಲ್ಲಿ. ಸಹ್ಯಾದ್ರಿ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ದರ್ಜೆಯ ವಿದ್ಯಾಭ್ಯಾಸ. ಅನಂತರ ವ್ಯವಸಾಯದ ಆಕರ್ಷಣೆಯಿಂದ ವಿದ್ಯಾಭ್ಯಾಸಕ್ಕೆ ವಿದಾಯ.
* ಪೂಜ್ಯ ರಾಮಶಾಸ್ತ್ರಿಗಳ ಹಾಗೂ ತಂದೆಯವರಾದ ವೇ. ಶ್ರೀ ರಾಮಸ್ವಾಮಿ ಶಾಸ್ತ್ರಿಗಳ ವಾಚನ ಕೇಳಿ ಗಮಕದಲ್ಲಿ ಆಸಕ್ತಿ ಮೂಡಿ ಅಭ್ಯಾಸ ಆರಂಭ, ದೈವದತ್ತ ಶಾರೀರದ ಸೊಬಗಿನಿಂದ ಕೇಳುಗರನ್ನು ಮುಗ್ಧರನ್ನಾಗಿಸುತ್ತಾ ಹತ್ತಾರು ಕಡೆ ಕಾರ್ಯಕ್ರಮ ನೀಡಿದ್ದು.
* ೧೯೫೦ರಲ್ಲಿ ಶ್ರೀಮತಿ ರಾಜೇಶ್ವರಿ ಅವರೊಂದಿಗೆ ವಿವಾಹ.
* ಮಾನ್ಯ ವೆಂಕಟೇಶಯ್ಯನವರ ಮಾರ್ಗದರ್ಶನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿದ್ದ 'ಪ್ರವೇಶ', 'ಪ್ರೌಢ' ಪರೀಕ್ಷೆಗಳಿಗಾಗಿ ಅಭ್ಯಾಸ.
* ೧೯೬೯-೭೦ ಹಾಗೂ ೧೯೭೩-೭೪ರಲ್ಲಿ ಸಮಗ್ರ ಕುಮಾರವ್ಯಾಸ, ಜೈಮಿನಿ ಭಾರತಗಳ ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳು.
* ಬಳ್ಳಾರಿ ಜಿಲ್ಲೆಯ ಎಮ್ಮಿಗನೂರಿನಲ್ಲಿ ನಿರಂತರ ಹದಿನೈದು ವರ್ಷಗಳು ನಡೆಸಿದ ಸಾಪ್ತಾಹಿಕ ಕಾರ್ಯಕ್ರಮ.
* ಬೆಂಗಳೂರಿನ ಪ್ರಸಿದ್ಧ ಉದ್ಯಮಿಗಳಾದ ಶ್ರೀನಿವಾಸಯ್ಯನವರ ಮನೆಯಲ್ಲಿ ಅನೇಕ ವರ್ಷಗಳು ನಡೆದ ಸಾಪ್ತಾಹಿಕ ಕಾರ್ಯಕ್ರಮಗಳು (ಇವರ ಮನೆಯಲ್ಲೇ ಭಾರತದ ಮಾನ್ಯ ಉಪರಾಷ್ಟ್ರಪತಿಗಳಾಗಿದ್ದ ಬಿ.ಡಿ. ಜತ್ತಿ ಅವರೂ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರೂ ಇವರ ಕಾರ್ಯಕ್ರಮವನ್ನು ಕೇಳಿ ಆನಂದಿಸಿ ಶ್ಲಾಘಿಸಿದ್ದು ಒಂದು ವಿಶೇಷ)
* ಕರ್ನಾಟಕದ ಚೀಫ್ ಜಸ್ಟಿಸ್ ಹೊಂಬೇಗೌಡರು, ಕರ್ನಾಟಕ ಸಂಘದಲ್ಲಿ ಒಮ್ಮೆ ಪೂಜ್ಯ ಶಾಸ್ತ್ರಿಗಳು ಹಾಗೂ ಕೇಶವಮೂರ್ತಿಗಳ ಕಾರ್ಯಕ್ರಮ ಕೇಳಿ ಸಂತೋಷಗೊಂಡು ತಾವು ಕೆಮ್ಮಣ್ಣುಗುಂಡಿಗೆ ಬಂದಾಗಲೆಲ್ಲ ಶಿವಮೊಗ್ಗದಿಂದ ಅವರನ್ನು ಕರೆಸಿಕೊಂಡು ನಡೆಸುತ್ತಿದ್ದ ಕಾರ್ಯಕ್ರಮಗಳು.
* ಬೆಂಗಳೂರಿನ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಪುರುಷೋತ್ತಮಾನಂದಜೀ ಅವರ ಸಮ್ಮುಖ ನಡೆದ ಕಾರ್ಯಕ್ರಮ.
* ಮುಂಬಯಿಯ ಬಿರ್ಲಾ ಅವರ ನಿವಾಸದಲ್ಲಿ ಮತ್ತೂರು ಕೃಷ್ಣಮೂರ್ತಿ ಅವರ ವ್ಯಾಖ್ಯಾನದೊಂದಿಗೆ ನಡೆದ 'ನಾರಾಯಣೀಯಮ್' ಸಂಸ್ಕೃತ ಭಾಗವತ ಕಾವ್ಯದ ವಾಚನ ಕಾರ್ಯಕ್ರಮ.
* ಪ್ರಯಾಗದಲ್ಲಿ ಬಿರ್ಲಾ ಅವರ ನಿವಾಸದಲ್ಲಿ ನಡೆದ ಮೂಲಭಾರತ, ರಾಮಾಯಣ ಹಾಗೂ ಕುಮಾರವ್ಯಾಸ ಭಾರತ ವಾಚನ - ವ್ಯಾಖ್ಯಾನ ಕಾರ್ಯಕ್ರಮಗಳು. (ಭಾಷೆ ಬೇರೆಯಾದರೂ ಕೇಶವಮೂರ್ತಿಗಳ ಗಾನರಸದಲ್ಲಿ ಮಿಂದು, ಬಿರ್ಲಾ ಕುಟುಂಬದವರು ಕುಮಾರವ್ಯಾಸ ಭಾರತವನ್ನು ಸವಿದದ್ದು ಒಂದು ವಿಶೇಷ)
* ಹಳೆ ಕರ್ನಾಟಕದ ಎಲ್ಲ ತಾಲ್ಲೂಕುಗಳಲ್ಲಿ ನಡೆದಿರುವ ಕಾರ್ಯಕ್ರಮಗಳು.
* ಹೆಗ್ಗೋಡಿನಲ್ಲಿ 'ನೀನಾಸಂ' ಆಶ್ರಯದಲ್ಲಿ ಅನೇಕ ಪ್ರಸಿದ್ಧ ಕವಿಗಳ, ಸಾಹಿತಿಗಳ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮಗಳು.
* ತೊಂಡನೂರಿನ ಹೊಯ್ಸಳ ಸಾಮ್ರಾಜ್ಯೋತ್ಸವದಲ್ಲಿ ನಡೆದ ಕಾರ್ಯಕ್ರಮ.
* ಶಿವಮೊಗ್ಗ ಶೃಂಗೇರಿ ಮಠದಲ್ಲಿ ನಡೆದ 'ಶಂಕರ ವಿಜಯ' ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳು.
* ಶೃಂಗೇರಿ ಶ್ರೀ ಶ್ರೀಗಳವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮಗಳು.
* ದೆಹಲಿಯ ಕರ್ನಾಟಕ ಭವನ, ಕೃಷ್ಣ ದೇವಸ್ಥಾನ ಹಾಗೂ ಕನ್ನಡ ಶಾಲೆಗಳಲ್ಲಿ ನಡೆದ ಕಾರ್ಯಕ್ರಮಗಳು.
* ಪರಮ ಪೂಜ್ಯ ವ್ಯಾಖ್ಯಾನ ಚಕ್ರವರ್ತಿ ಲಕ್ಷ್ಮೀಕೇಶವಶಾಸ್ತ್ರಿಗಳೊಂದಿಗೆ ಹೊಸಹಳ್ಳಿ ಗಮಕ ಕಲಾ ಪರಿಷತ್ತಿನ ಆಶ್ರಯದಲ್ಲಿ ಎಂಟು ತಿಂಗಳ ಕಾಲ ನಡೆದ ನಿರಂತರ ಕಾರ್ಯಕ್ರಮದಲ್ಲಿ 'ಪೂರ್ಣ ಕುಮಾರವ್ಯಾಸ ಭಾರತ'ವನ್ನು ಧ್ವನಿ ಸುರುಳಿಗಳಲ್ಲಿ ಮುದ್ರಿಸಿದ್ದು.
* ಮತ್ತೂರು ಶ್ರೀ ರಘುಪತಿಶಾಸ್ತ್ರಿ ಅವರ ವ್ಯಾಖ್ಯಾನದೊಂದಿಗೆ ೧೯೮೦-೮೧ರಲ್ಲಿ ಶಿಳ್ಗೆ ಎಲೆಕ್ಟ್ರಾನಿಕ್ಸ್‌ರವರು ಮಾಡಿದ 'ಸೀತಾಪರಿತ್ಯಾಗ-ಲವಕುಶ' ಧ್ವನಿ ಸುರುಳಿಗೆ ವಾಚನ (ಈ ಕ್ಯಾಸೆಟ್‌ಗಳು ಒಂದು ಸಾವಿರ ಸಂಖ್ಯೆಯನ್ನೂ ಮೀರಿ ಮಾರಾಟವಾಗಿ ಗಮಕದ ಇತಿಹಾಸದಲ್ಲಿ ಅಪೂರ್ವ ದಾಖಲೆಯಾಗಿದೆ!).
* ವ್ಯಾಖ್ಯಾನ ಚತುರ ವೇ. ಶ್ರೀ ಮಾರ್ಕಂಡೇಯ ಅವಧಾನಿಗಳ ವ್ಯಾಖ್ಯಾನದೊಂದಿಗೆ ಧ್ವನಿಸುರುಳಿಗಳಲ್ಲಿ ಮುದ್ರಿಸಲು ಪೂರ್ಣ ಜೈಮಿನಿ ಭಾರತದ ವಾಚನ.
* ಶಿವಮೊಗ್ಗ, ತರೀಕೆರೆ, ಭದ್ರಾವತಿಗಳಲ್ಲಿ ಗಮಕ ತರಗತಿಗಳನ್ನು ನಡೆಸಿರುವುದಲ್ಲದೆ ಸ್ವಗೃಹದಲ್ಲಿಯೂ ನಿರಂತರವಾಗಿ ಪಾಠ ಹೇಳಿಕೊಡುತ್ತಾ ನೂರಾರು ಗಮಕಿಗಳನ್ನು ಸಿದ್ಧಗೊಳಿಸಿರುವುದು.
* ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳು, ಮತ್ತೂರು ಕೃಷ್ಣಮೂರ್ತಿ, ಎಂ.ಎಲ್.ಚನ್ನಕೇಶವ ಶಾಸ್ತ್ರಿ, ಎಂ.ಎಲ್.ರಘುಪತಿ ಶಾಸ್ತ್ರಿ, ರಾಜಾರಾಮಮೂರ್ತಿ, ಹೆಚ್.ಎಸ್. ಗೋಪಾಲ, ಎಲ್.ಎಂ.ಎಲ್. ಶಾಸ್ತ್ರಿ, ಡಾ.ವೇಣುಗೋಪಾಲರಾವ್ ಇವರೆಲ್ಲರ ವ್ಯಾಖ್ಯಾನದೊಂದಿಗೆ ವಾಚನವನ್ನು ನಡೆಸಿರುವ ಖ್ಯಾತಿ.

* ೧೯೬೮ರಲ್ಲಿ ಸೆಷನ್ಸ್ ಜಡ್ಜ್ ಆಗಿದ್ದ ಶ್ರೀ ಕೋ.ಚನ್ನಬಸಪ್ಪ ಅವರು ಅನೇಕ ಬಾರಿ ಕೇಶವಮೂರ್ತಿಗಳವರ ಕಾರ್ಯಕ್ರಮಗಳನ್ನು ನಡೆಸಿ, ಕೇಳಿ, ಆನಂದಿಸಿ 'ಗಮಕ ಕಲಾ ಕೋಕಿಲ' ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು.
* ೧೯೮೫ರಲ್ಲಿ ಸಮಗ್ರ ಕುಮಾರವ್ಯಾಸ ಭಾರತದ ಧ್ವನಿಮುದ್ರಣ ಮುಕ್ತಾಯ ಸಮಾರಂಭದಲ್ಲಿ ಹೊಸಹಳ್ಳಿಯ ಗಮಕ ಕಲಾ ಪರಿಷತ್ತಿನಿಂದ "ಗಮಕ ಗಂಧರ್ವ" ಪ್ರಶಸ್ತಿ ಪ್ರದಾನ
* ಶೃಂಗೇರಿಯಲ್ಲಿ 'ಸಪ್ತಋಷಿ ಸಪ್ತಾಹ'; ಸಂಸ್ಕೃತ ಮೂಲದಿಂದ ಆಯ್ದ ಭಾಗಗಳ ವಾಚನ-ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಶ್ರೀ ಶ್ರೀಗಳವರಿಂದ ಶಾಲು ಹೊದಿಸಿ ಸನ್ಮಾನ.
* ಕರ್ನಾಟಕ ಗಮಕ ಕಲಾ ಪರಿಷತ್ತಿನ ಆಶ್ರಯದಲ್ಲಿ ೧೯೯೨-೯೩ರ ಸಾಲಿನಲ್ಲಿ ನಡೆದ ಸನ್ಮಾನ.
* ಇಪ್ಪತ್ತೈದು ವರ್ಷಗಳಿಂದ ಹೊಸಹಳ್ಳಿಯ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವುದು.
* ಹೊಸಹಳ್ಳಿಯ ಗ್ರಾಮಾಧ್ಯಕ್ಷರಾಗಿ ೧೦ ವರ್ಷಗಳ ಸಾರ್ಥಕ ಸೇವೆ.
* ಹೊಸಹಳ್ಳಿಯ ಕಲಾಭಿಮಾನಿ ಸೋದರರಾದ ಶ್ರೀ ಹೆಚ್.ವಿ.ಕೇಶವರಾವ್ ಮತ್ತು ಶ್ರೀ ಹೆಚ್.ವಿ.ಕೃಷ್ಣರಾವ್ ಅವರ ಮನೆಯಲ್ಲಿ ಮೂರು-ನಾಲ್ಕು ವರ್ಷಗಳ ಕಾಲ ವೇ.ಲಕ್ಷ್ಮೀಕೇಶವಶಾಸ್ತ್ರಿಗಳು ಹಾಗೂ ಮಾರ್ಕಂಡೇಯ ಅವಧಾನಿಗಳ ಜತೆ ನಡೆಸಿಕೊಟ್ಟ ಕಾರ್ಯಕ್ರಮಗಳು.

# ವ್ಯಕ್ತಿ ವಿವರ

## ವ್ಯಾಖ್ಯಾನಚತುರ ವೇದಮೂರ್ತಿ ಮಾರ್ಕಂಡೇಯ ಅವಧಾನಿ ಅವರು

* ದಿನಾಂಕ ೧೮-೧೧-೩೩ರ ಶ್ರೀಮುಖ ಸಂವತ್ಸರದ ಮಾರ್ಗಶಿರ ಶುದ್ಧಪಾಡ್ಯದಂದು ಶ್ರೀಮತಿ ಲಕ್ಷ್ಮೀದೇವಮ್ಮ ಅವರ ಗರ್ಭಾಂಬುಧಿಯಲ್ಲಿ ಜನನ; ತಂದೆ ವೇ. ಶ್ರೀ ನಾರಾಯಣ ಅವಧಾನಿಗಳು.
* ಮತ್ತೂರಿನಲ್ಲಿ ಬಾಲ್ಯದ ವಿದ್ಯಾಭ್ಯಾಸ ಹಾಗೂ ಪೌರೋಹಿತ್ಯದಿಂದ ಉಪಾಧ್ಯಾಯರೆಂದೇ ಹೆಸರಾಗಿದ್ದ ತಂದೆಯವರಲ್ಲೇ ವೇದ ಹಾಗೂ ಸಪ್ರಯೋಗ ಧರ್ಮಶಾಸ್ತ್ರದ ಬಾಲ್ಯಪಾಠ.
* ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳು ಹಾಗೂ ವೇ. ಶ್ರೀ ಚಿದಂಬರ ಜೋಯಿಸರಲ್ಲಿ ಸಂಸ್ಕೃತ ಬಾಲ್ಯಪಾಠ.
* ವೇ. ಶ್ರೀ ಶ್ರೀನಿವಾಸ ಅವಧಾನಿಗಳು ಹಾಗೂ ವೇ. ಶ್ರೀ ಕೇಶವಮೂರ್ತಿ ಅವಧಾನಿಗಳಲ್ಲಿ ಸಂಸ್ಕೃತದ ಪ್ರೌಢಪಾಠ.
* ವೇ. ಶ್ರೀ ಸುಬ್ರಾಯ ಅವಧಾನಿಗಳ (ಈಗಿನ ಅದ್ವೈತಾನಂದರ) ಬಳಿಯಲ್ಲಿ ಜ್ಯೋತಿಷ್ಯ ಹಾಗೂ ವೇದಾಭ್ಯಾಸ
* ನಂಜನಗೂಡಿನ ವೇ. ಶ್ರೀ ಕೃಷ್ಣಸೋಮಯಾಜಿಗಳ ಬಳಿ ಮೂರು ವರ್ಷಗಳ ಕಾಲ ಸಂಸ್ಕೃತ ಹಾಗೂ ವೇದಗಳ ಅಧ್ಯಯನ.
* ೧೯೫೪ರ ಚೈತ್ರ ಶುದ್ಧ ತ್ರಯೋದಶಿಯಂದು ಶ್ರೀಮತಿ ನಾಗವೇಣಿ ಅವರೊಂದಿಗೆ ವಿವಾಹ.
* ಶಾಸ್ತ್ರಿಗಳ ವ್ಯಾಖ್ಯಾನಕ್ಕೆ ಮನಸೋತು ತಾವೂ ವ್ಯಾಖ್ಯಾನಕಾರನಾಗಬೇಕೆಂಬ ಉತ್ಸುಕತೆಯಲ್ಲಿ ಅಭ್ಯಾಸ-ಹತ್ತಾರುಕಡೆ ಕಾರ್ಯಕ್ರಮಗಳು.
* ಇತ್ತೀಚಿನ ವರ್ಷಗಳಲ್ಲಿ ಅಜಸ್ರಾಗ್ನಿಧಾರಕರಾದ ಶಿವಮೊಗ್ಗದ ವೇ.ಶ್ರೀ ಕೇಶವಮೂರ್ತಿ ಘನಪಾಠಿಗಳಲ್ಲಿ, ಉಳಿದಿದ್ದ ವೇದ ಭಾಗಗಳನ್ನು ಅಧ್ಯಯನ ಮಾಡಿ, ಧ್ವನಿ ಮುದ್ರಿಕೆಯ ಮೂಲಕ ಅಭ್ಯಾಸ ಮಾಡಿದುದು.
* ೧೯೬೯-೭೦, ೧೯೭೩-೭೪ರಲ್ಲಿ ಸಮಗ್ರ ಭಾರತ ವಾಚನ ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಮುಖ್ಯಪಾತ್ರ.
* ಬೆಂಗಳೂರಿನ ಪ್ರಸಿದ್ಧ ಉದ್ಯಮಿಗಳಾದ ಶ್ರೀನಿವಾಸಯ್ಯನವರ ಮನೆಯಲ್ಲಿ ಅನೇಕ ವರ್ಷಗಳು ನಡೆದ ಸಾಪ್ತಾಹಿಕ ಕಾರ್ಯಕ್ರಮ- (ಇವರ ಮನೆಯಲ್ಲೇ ಭಾರತದ ಮಾನ್ಯ ಉಪರಾಷ್ಟ್ರಪತಿಗಳಾಗಿದ್ದ ಬಿ.ಡಿ. ಜತ್ತಿ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ ಇವರುಗಳು ಇವರ ಕಾರ್ಯಕ್ರಮ ಕೇಳಿ ಸಂತಸಪಟ್ಟಿದ್ದರು ಎನ್ನುವುದು ಹೆಮ್ಮೆಯ ವಿಷಯ.)
* ಬೆಂಗಳೂರಿನ ರಾಮಕೃಷ್ಣಾಶ್ರಮದ ಸ್ವಾಮಿ ಶ್ರೀಯುತರಾದ ಪುರುಷೋತ್ತಮಾನಂದಜೀ ಅವರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮ (ಅವಧಾನಿಗಳ ವ್ಯಾಖ್ಯಾನದಿಂದ ಅತ್ಯಂತ ಪ್ರಭಾವಿತರಾಗಿದ್ದ ಸ್ವಾಮಿ ಪುರುಷೋತ್ತಮಾನಂದಜೀ ಅವರು ಇವರ ಷಷ್ಟ್ಯಬ್ದಪೂರ್ತಿಯ ಅಂಗವಾದ ಶಾಂತಿಯ ಸಂದರ್ಭದಲ್ಲಿ ಆಗಮಿಸಿ ಹೂಹಣ್ಣುಗಳಿಂದ ಅಭಿಷೇಕ ಮಾಡಿದ್ದರು)
* ದೆಹಲಿಯ ಕರ್ನಾಟಕ ಭವನ, ಕೃಷ್ಣ ದೇವಸ್ಥಾನ ಹಾಗೂ ಕನ್ನಡ ಶಾಲೆಗಳಲ್ಲಿ ಕೇಶವಮೂರ್ತಿಗಳೊಂದಿಗೆ ನಡೆದ ಕಾರ್ಯಕ್ರಮ.
* ಕಾಶಿ-ಜಬ್ಬಲ್‌ಪುರ ಕರ್ನಾಟಕ ಸಂಘಗಳಲ್ಲಿ ಮಿತ್ರ ಸೂರ್ಯನಾರಾಯಣ ಅವಧಾನಿಗಳ ವಾಚನದೊಂದಿಗೆ ನಡೆದ ಕಾರ್ಯಕ್ರಮಗಳು.
* ಹಿಂದಿನ ದ್ವಾರಕಾ ಶಂಕರಾಚಾರ್ಯರ ಸಮ್ಮುಖ ಪೂಜ್ಯ ರಾಮಶಾಸ್ತ್ರಿಗಳು ಹಾಗೂ ಮಿತ್ರ ತಿರುಮಲ ಅವಧಾನಿ ಅವರ ಜತೆಯಲ್ಲಿ ನಡೆಸಿದ ಕಾರ್ಯಕ್ರಮಗಳು.
* ಉಡುಪಿ ಪೇಜಾವರ ಮಠದಲ್ಲಿ ಮಿತ್ರ ಸೂರ್ಯನಾರಾಯಣ ಅವಧಾನೀ ಅವರ ಜೊತೆಯಲ್ಲಿ ನಡೆಸಿದ ಕಾರ್ಯಕ್ರಮ.

* ಶಿವಮೊಗ್ಗದ ಶಂಕರಮಠದಲ್ಲಿ ಅನೇಕ ವರ್ಷಗಳು ಶಂಕರ ಜಯಂತಿಯ ಸಂದರ್ಭದಲ್ಲಿ ನಡೆಸಿದ ಶಂಕರವಿಜಯ ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳು.
* ಹೊಸಹಳ್ಳಿಯ ಗಮಕ ಕಲಾ ಪರಿಷತ್ತಿನ ಆಶ್ರಯದಲ್ಲಿ ನಡೆಸಲಾದ ಜೈಮಿನಿಭಾರತ ಸಮಗ್ರ ಧ್ವನಿಸುರುಳಿಯ ಮುದ್ರಣ ಕಾರ್ಯಕ್ರಮದಲ್ಲಿ ಮಿತ್ರ ಕೇಶವಮೂರ್ತಿಗಳ ವಾಚನದೊಂದಿಗೆ ದೀರ್ಘಕಾಲ ನಡೆಸಿದ ಕಾರ್ಯಕ್ರಮಗಳು.
* ತೊಂಡನೂರಿನ ಹೊಯ್ಸಳ ಸಾಮ್ರಾಜ್ಯೋತ್ಸವದಲ್ಲಿ ನ್ಯಾ. ಮೂ. ಶ್ರೀ ಇ.ಎಸ್. ವೆಂಕಟರಾಮಯ್ಯ ಅವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮ.
* ಶಿವಮೊಗ್ಗದ ಲಕ್ಷಗಣಪತಿ ಹೋಮದಲ್ಲಿ ಪ್ರಧಾನ ಆಚಾರ್ಯ ಸ್ಥಾನದ ಗೌರವ.
* ಸಕಲೇಶಪುರದ ಕನ್ನಿಕಾಪರಮೇಶ್ವರೀ ದೇವಾಲಯದ ಪ್ರತಿಷ್ಠಾಪನೆಯಲ್ಲಿ ಪ್ರಧಾನ ಪಾತ್ರ.
* ಮತ್ತೂರಿನಲ್ಲಿ ನಡೆದ ಅತಿರುದ್ರ, ಚಂಡಿ, ಗಣಪತಿ, ತೇರಾಕೋಟಿ ಮಹಾಯಾಗ ಹಾಗೂ ಬಿರ್ಲಾ ಪರಿವಾರದವರು ಮಾಡಿಸಿದ ಲಕ್ಷ್ಮೀನಾರಾಯಣ ಹೋಮದ ಪ್ರಧಾನ ಆಚಾರ್ಯರಾಗಿ ಜವಾಬ್ದಾರಿ.
* ಹೊಸಹಳ್ಳಿ ಕೇಶವ ದೇವಾಲಯದ ಶಿಖರ ಪ್ರತಿಷ್ಠೆಯಲ್ಲಿ ಪ್ರಧಾನ ಪುರೋಹಿತರಾಗಿ ಕಾರ್ಯನಿರ್ವಹಣೆ.
* ಶಿವಮೊಗ್ಗದ ಉಷಾ ನರ್ಸಿಂಗ್ ಹೋಂನ '**ಧನ್ವಂತರಿ ಲಕ್ಷ್ಮೀನಾರಾಯಣ ದೇವಾಲಯ**'ದ ಪ್ರತಿಷ್ಠಾಪನೆಯಲ್ಲಿ ಪ್ರಧಾನ ಆಚಾರ್ಯತ್ವ (*ಈ* ದೇವಾಲಯವನ್ನು ಡಾ. ವೆಂಕಟರಾವ್ ಅವರು ಪೂಜ್ಯ ಮಾರ್ಕಂಡೇಯ ಅವಧಾನಿಗಳ ಷಷ್ಟ್ಯಬ್ದಪೂರ್ತಿಯ ಸವಿನೆನಪಿಗಾಗಿಯೇ ಕಟ್ಟಿಸಿರುವುದು ಒಂದು ವಿಶೇಷ)
* ಕಾಶಿ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ 'ವ್ಯಾಖ್ಯಾನ ಚತುರ ' ಪ್ರಶಸ್ತಿ.
* ಶಿವಮೊಗ್ಗದ ಶ್ರೀ ಶಂಕರಮಠದಲ್ಲಿ ನಡೆದ ಸನ್ಮಾನ
* ಶೃಂಗೇರಿಯಲ್ಲಿ ನಡೆದ ಸಪ್ತರ್ಷಿ ಸಪ್ತಾಹದಲ್ಲಿ ಪೂಜ್ಯ ಪರಮಾಚಾರ್ಯರಿಂದ ಶಾಲು ಹೊದೆಸಿ ಸನ್ಮಾನ.
* ಹೊಸಹಳ್ಳಿಯ ಗಮಕ ಕಲಾ ಪರಿಷತ್ತಿನ ಆಶ್ರಯದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ 'ಪ್ರವಚನ ಚತುರ ' ಪ್ರಶಸ್ತಿ ಇತ್ಯಾದಿ...
* ಹೊಸಹಳ್ಳಿಯ ಕಲಾಭಿಮಾನಿ ಸೋದರರಾದ ಶ್ರೀ ಹೆಚ್.ವಿ.ಕೇಶವರಾವ್ ಮತ್ತು ಶ್ರೀ ಹೆಚ್.ವಿ.ಕೃಷ್ಣರಾವ್ ಅವರ ಮನೆಯಲ್ಲಿ ಮೂರು-ನಾಲ್ಕು ವರ್ಷಗಳ ಕಾಲ ಪ್ರತಿ ಏಕಾದಶಿಯಂದು ಶ್ರೀ ಎಚ್.ಆರ್.ಕೇಶವಮೂರ್ತಿ ಅವರೊಡನೆ ನಡೆಸಿಕೊಟ್ಟ ಭಾಗವತ ಕಾವ್ಯವಾಚನ-ವ್ಯಾಖ್ಯಾನ ಕಾರ್ಯಕ್ರಮಗಳು.

**ತಂದೆ:** ಮಾರ್ಕಂಡೇಯ ಅವಧಾನಿಗಳ ತಂದೆ ವೇ. ಬ್ರ. ಶ್ರೀ ನಾರಾಯಣಾವಧಾನಿಗಳು (ನಾರಾಯಣ ಉಪಾಧ್ಯಾಯರು): ೨೦ನೆಯ ಶತಮಾನದ ಮೊದಲ ದಶಕದಲ್ಲಿಯೇ ವೈದಿಕರ ಮಗನೊಬ್ಬ ನಾಲ್ಕನೆಯ ತರಗತಿಯವರೆಗೆ ಓದಿದ್ದು ವಿಶೇಷ; ಗುರು, ಚಿಂತಾಮಣಿ ಅವಧಾನಿಗಳು. ಅನಂತರ ಚನ್ನಕೇಶವಶಾಸ್ತ್ರಿಗಳಲ್ಲಿ ಸಂಸ್ಕೃತ ಕಾವ್ಯ, ನಾಟಕ, ಪುರಾಣ; ಗಂಗಾಧರ ಜೋಯಿಸರಲ್ಲಿ ಸಪ್ರಯೋಗ ಧರ್ಮಶಾಸ್ತ್ರ, ಜ್ಯೋತಿಷ; ತಂದೆ ರಾಮಾವಧಾನಿಗಳು ಮತ್ತು ನಂಜಪ್ಪಾವಧಾನಿಗಳಲ್ಲಿ ಯಜುರ್ವೇದ ಅಧ್ಯಯನ. *ಈ* ಹಿಂದಿನ ದ್ವಾರಕಾ ಜಗದ್ಗುರುಗಳಿಗೂ ಹೊಳೆನರಸೀಪುರದ ಶ್ರೀಯುತ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳಿಗೂ ಸಂನ್ಯಾಸವಾದಾಗ ಶ್ರೀ ನಾರಾಯಣಾವಧಾನಿಗಳೇ ಪ್ರಧಾನ ಪುರೋಹಿತರು. ಅನೇಕ ದೇವಕಾರ್ಯ, ರುದ್ರಹೋಮ, ಚಂಡಿಕಾಶಾಂತಿ, ಪುರುಷಸೂಕ್ತ ಹೋಮ, ಗಣಪತಿ ಹೋಮಗಳು, ದೇವತಾ ಪ್ರತಿಷ್ಠಾಕಾರ್ಯಗಳಲ್ಲಿಯೂ ಪ್ರಧಾನ ಆಚಾರ್ಯರಾಗಿದ್ದವರು. ಅವರ ಪಾಂಡಿತ್ಯಕ್ಕಾಗಿ ತಮಿಳುನಾಡಿನ ಮಧುರೈನ ಪಂಡಿತಮಂಡಲಿಯಿಂದ ಸನ್ಮಾನಿತರಾಗಿದ್ದವರು. ಪಂಡಿತರಿರಲಿ, ಸಾಮಾನ್ಯ ಬಾಲಕರಿರಲಿ, ಸುಲಭವಾಗಿ ಬೆರೆಯುತ್ತಿದ್ದ ಸರಳಜೀವಿ; ಆಜಾನುಬಾಹು, ಸುಂದರ, ಪಂಡಿತ; ಪುರಾಣವಾಚನ ಪ್ರವೀಣ, ಶ್ರೋತೃಗಳು ಮಂತ್ರಮುಗ್ಧರಾಗುವಂತೆ ಪ್ರವಚನ ಮಾಡಬಲ್ಲ ಪ್ರಭಾವಶಾಲೀ ನಿರೂಪಕ. ಅವರ ಪತ್ನಿ ಲಕ್ಷ್ಮೀದೇವಿಯವರು, ತಮಗೆ ಹುಟ್ಟಿದ ಮಕ್ಕಳೆಲ್ಲ ಸಾವಪ್ಪಿದಾಗ ಪತಿಗೆ ಇನ್ನೊಂದು ಮದುವೆ ಮಾಡಿಸಿದರು, ಆ ದಾಂಪತ್ಯದಲ್ಲಿ ಹುಟ್ಟಿದ ಮಕ್ಕಳನ್ನೆಲ್ಲ ತಮ್ಮ ಮಕ್ಕಳಂತೆಯೇ ಸಲಹಿದರು, ಮಹಾಮಾತೆ ಎಂದು ಮಾನ್ಯರಾದರು.

**ತಾಯಿ:** ಮಾರ್ಕಂಡೇಯ ಅವಧಾನಿಗಳ ತಾಯಿ ಲಕ್ಷ್ಮೀದೇವಿಯವರು (ಇಬ್ಬರು ಮಾತೆಯರೂ ಲಕ್ಷ್ಮೀದೇವಿಯವರೇ) ಎಲ್ಲ ಯಾತ್ರೆಗಳನ್ನೂ ಮಾಡಿದ್ದರು. ಸ್ತ್ರೀಯರು ಮಾಡಬಹುದಾದ ಎಲ್ಲಾ ವ್ರತ ಉದ್ಯಾಪನೆ ಮಾಡಿದ್ದರು. ಮನೆಗೆ ಬಂದವರಿಗೆ ಏನಾದರೂ ಕೊಡದೆ ತೃಪ್ತಿ ಇಲ್ಲ ಆಕೆಗೆ, ಸಾಕ್ಷಾತ್ ಅನ್ನಪೂರ್ಣೆ; ಸಣ್ಣ ಹಬ್ಬವೇ ಆದರೂ ಊರಿಗೆಲ್ಲ ಸಂತರ್ಪಣೆ ಮಾಡುವ ತವಕ ಅವರಿಗೆ. ಮನೆಗೆ ಬಂದವರು ಯಾರೇ ಆದರೂ, ಕಣವೋ ಸೀರೆಯೋ ಪಾತ್ರೆಯೋ ರೂಪಾಯಿಯೋ ಕೊಟ್ಟು ಫಲತಾಂಬೂಲ ನೀಡಿ ಕಳಿಸುತ್ತಿದ್ದರು. ತಾವೇ ಬಿದ್ದು ತೊಡೆ ಮುರಿದುಕೊಂಡು ಯಾತನೆ ಪಡುತ್ತಿದ್ದಾಗಲೂ ಸಾಯುವ ಅರ್ಧ ಗಂಟೆಗೆ ಮುನ್ನವೂ - ಮಗನ ತೋಳಿಗೆ ಅಮೃತಾಂಜನ ಹಚ್ಚಿ ಉಪಚರಿಸಿದ ಸಾಧ್ವಿ.

**ಧರ್ಮಪತ್ನಿ:** ಶ್ರೀಮತಿ ನಾಗವೇಣಿ: ಹೊಸಹಳ್ಳಿಯ ವೇ.ಶ್ಯಾಮಾವಧಾನಿಗಳು ಮತ್ತು ಲಕ್ಷ್ಮೀದೇವಿ ದಂಪತಿಗಳ ಮಗಳು; ಎಲ್.ಎಸ್.ವರೆಗೆ ಶಿಕ್ಷಣ; ೧೯೫೪ರಲ್ಲಿ ವಿವಾಹ; ಪತಿಯೊಂದಿಗೆ ಕಾಶೀ, ಪ್ರಯಾಗ, ಗಯಾ, ಹರಿದ್ವಾರ, ಹೃಷೀಕೇಶ, ಗೋಕರ್ಣ, ಉಡುಪಿ, ಸುಬ್ರಹ್ಮಣ್ಯ, ಶೃಂಗೇರಿ ಯಾತ್ರೆ; ಪತಿಯ ಅರುವತ್ತು ವರ್ಷದ ಶಾಂತಿ, ಎಪ್ಪತ್ತು ವರ್ಷದ ಶಾಂತಿ, ಋಷಿ ಪಂಚಮಿ, ಶ್ರವಣದ್ವಾದಶೀ ವ್ರತಗಳಲ್ಲಿ ಭಾಗಿಯಾದ ಪುಣ್ಯಜೀವಿ; ಅವಧಾನಿಗಳು ನಿರ್ಮಿಸುತ್ತಿರುವ ಗಣಪತಿ ಶಿವಮಂದಿರ, ತುಂಗಭದ್ರಾ ಸಂಗಮ, ಸಪ್ತರ್ಷಿಧಾಮ, ತಪೋವನಕ್ಕೆ ಪ್ರೇರಕಶಕ್ತಿ.

## ೫. ಪ್ರಶಸ್ತಿ / ಸಂಮಾನ

### ಗಮಕ ಗಂಧರ್ವ ಶ್ರೀ ಎಚ್.ಆರ್.ಕೇಶವಮೂರ್ತಿಗಳಿಗೆ ಸಂದ ಸಂಮಾನ

### ಗಮಕ ಕಲಾ ಪರಿಷತ್

**ಹೊಸಹಳ್ಳಿ ೫೭೭ ೨೦೨; ಶಿವಮೊಗ್ಗ ತಾ.**

### ಪ್ರಶಸ್ತಿ ಪತ್ರ

**ಶ್ರೀ ಎಚ್.ಆರ್. ಕೇಶವಮೂರ್ತಿ** ಅವರಿಗೆ

ದಿನಾಂಕ ೦೭.೦೬.೧೯೮೫ ರಂದು ಶುಕ್ರವಾರ, ಸಮಗ್ರ ಕುಮಾರವ್ಯಾಸ ಭಾರತ ಪ್ರವಚನ ಹಾಗೂ ಧ್ವನಿಮುದ್ರಣದ ಮಂಗಳ ಕಾರ್ಯಕ್ರಮದ ಅಂಗವಾಗಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ

**'ಗಮಕ ಗಂಧರ್ವ'**

ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

| | | |
|---|---|---|
| *ಮುಖ್ಯ ಅತಿಥಿಗಳು* | *ಅಧ್ಯಕ್ಷರು* | *ಅಧ್ಯಕ್ಷರು* |
| ***ಶ್ರೀ ಕೆ.ಎಚ್.ಶ್ರೀನಿವಾಸ್*** | ***ಶ್ರೀ ಡಿ. ರವಳಪ್ಪ*** | ***ಎಚ್.ರಾಮಣ್ಣ*** |
| *ವಿಧಾನಸಭಾ ಸದಸ್ಯರು* | *ಉಪಾಧ್ಯಕ್ಷರು, ನಗರಸಭೆ* | *ಸಮಗ್ರ ಕುಮಾರವ್ಯಾಸ ಭಾರತ* |
| | *ಶಿವಮೊಗ್ಗ* | *ಪ್ರವಚನ ಸಮಿತಿ* |

### ಶ್ರೀ ರಾಮಮಂದಿರ ಅಸೋಸಿಯೇಷನ್

**ಶ್ರೀರಾಮದೇವರ ದೇವಸ್ಥಾನ, ಮಾಡಲ್‌ಹೌಸ್ ಬ್ಲಾಕ್, ಬಸವನಗುಡಿ, ಬೆಂಗಳೂರು-೦೪**

. . . ತಮ್ಮ ಹಿರಿಮೆಗೆ, ಪಾಂಡಿತ್ಯಕ್ಕೆ, ಅದ್ಭುತ ರೀತಿಯ ಕಾವ್ಯವಾಚನಕ್ಕೆ ಮೆಚ್ಚುಗೆ ಸೂಚಿಸಿ ಬೆಂಗಳೂರು ಬಸವನಗುಡಿಯ ಮಾಡಲ್ ಹೌಸ್ ಸ್ಟ್ರೀಟ್, ಶ್ರೀರಾಮ ಮಂದಿರ ಅಸೋಸಿಯೇಷನ್ (ರಿ.) ಸಂಸ್ಥೆಯವರು **ಗಮಕ ಕೇಸರಿ** ಎಂಬ ಬಿರುದನ್ನು ನೀಡಿ ಸನ್ಮಾನಿಸಲು ಹೆಮ್ಮೆ ಪಡುತ್ತೇವೆ.

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

**ಕರ್ನಾಟಕ ಸಂಗೀತ - ನೃತ್ಯ ಅಕಾಡಮಿ**

ಬೆಂಗಳೂರು

### ಪ್ರಶಸ್ತಿ ಪತ್ರ

೧೯೯೪-೯೫

**ಶ್ರೀ ಎಚ್.ಆರ್. ಕೇಶವಮೂರ್ತಿ**

ಅವರಿಗೆ

**ಗಮಕ ಕ್ಷೇತ್ರದಲ್ಲಿ**

ಸಲ್ಲಿಸಿರುವ ಅಮೋಘ ಸೇವೆಗಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ೧೯೯೮-೯೯ರ ಪ್ರಶಸ್ತಿಯನ್ನು **ಕರ್ನಾಟಕ ಕಲಾ ತಿಲಕ** ಬಿರುದಿನೊಂದಿಗೆ ನೀಡಿ ಗೌರವಿಸಿದೆ.

*೩ನೇ ಅಕ್ಟೋಬರ್, ೧೯೯೮*

*ಬೆಂಗಳೂರು* — ***ಪಂ|| ಆರ್.ಡಿ. ಶೇಷಾದ್ರಿ ಗವಾಯಿ***, *ಅಧ್ಯಕ್ಷರು*

***ದುರ್ಗಾ ಸಿ. ಆವರ್ತಿ***

*ರಿಜಿಸ್ಟ್ರಾರ್*

## ಅತ್ತಿಮಬ್ಬೆ ಪ್ರತಿಷ್ಠಾನ ಟ್ರಸ್ಟ್ (ರಿ.)

### ಕನ್ನಡ ಲೇಖಕಿಯರ ಪರಿಷತ್ತು

೩೮೦೦; ಮನುಶ್ರೀ; ೧೩ನೇ ಅಡ್ಡರಸ್ತೆ, ಬನಶಂಕರಿ, ೨ನೇ ಹಂತ, ಬೆಂಗಳೂರು-೭೦. ದೂ:೬೭೧೬೨೫೮/೬೭೧೭೦೩೬

ವೇ||ಬ್ರ||ಶ್ರೀ ಹೊಸಹಳ್ಳಿ ಆರ್. ಕೇಶವಮೂರ್ತಿ ಅವರಿಗೆ **ಗಮಕ ಸಿಂಧು** ಎಂಬ ಬಿರುದು ನೀಡಿ ಭಕ್ತಿಪೂರ್ವಕವಾಗಿ ಅರ್ಪಿಸಿದ ಸನ್ಮಾನ ಪತ್ರ

| | | |
|---|---|---|
| *ಬೆಂಗಳೂರು* | ***ಸು.ರಂಗಸ್ವಾಮಿ*** | ***ಪಿ.ಮನೋಹರಿ ಪಾರ್ಥಸಾರಥಿ*** |
| *೩.೬.೨೦೦೦* | *ಸಂಸ್ಥಾಪಕ ಕಾರ್ಯದರ್ಶಿ* | *ಸಂಸ್ಥಾಪಕ ನಿರ್ದೇಶಕರು* |

## ಬೆಂಗಳೂರು ಗಾಯನ ಸಮಾಜ

### ಶ್ರೀ ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು

### ೩೨ನೇ ಸಂಗೀತ ಸಮ್ಮೇಳನ - ಅಕ್ಟೋಬರ್ ೨೦೦೦

೨೨ನೇ ಅಕ್ಟೋಬರ್ ೨೦೦೦ದ ಭಾನುವಾರ ಬೆಳಗ್ಗೆ ೧೦ ಗಂಟೆಗೆ ನಡೆದ ವಿದ್ವತ್ ಸಭೆಯಲ್ಲಿ ಗೌರವಿಸಲ್ಪಟ್ಟ

### ವಿದ್ವಾನ್ ಹೊಸಹಳ್ಳಿ ಕೇಶವಮೂರ್ತಿ

### ಪ್ರಶಸ್ತಿ ವಾಚನ

*ಮಾನ್ಯರೇ,*

ನಮ್ಮ ದೇಶದ ಒಬ್ಬ ಪ್ರಮುಖ ಗಮಕ ವಿದ್ವಾಂಸರಾದ ನಿಮ್ಮನ್ನು ಗಾಯನ ಸಮಾಜದ ಮೂವತ್ತೆರಡನೇ ಸಂಗೀತ ಸಮ್ಮೇಳನದ ಅಂಗವಾಗಿ **ವರ್ಷದ ಕಲಾವಿದರು** ಎಂದು ಗುರುತಿಸಲು ಸಂತೋಷಿಸುತ್ತೇವೆ. ನೀವು ಕುಮಾರವ್ಯಾಸ, ಜೈಮಿನಿಭಾರತಗಳ ವಾಚನ-ವ್ಯಾಖ್ಯಾನಗಳನ್ನು ಹಲವಾರು ಕಡೆ ಮಾಡಿ ಹೆಸರು ಮಾಡಿರುತ್ತೀರಿ. ಬೆಂಗಳೂರಿನ ರಾಮಕೃಷ್ಣಾಶ್ರಮ, ಶಂಕರಮಠ ಮತ್ತು ಮುಂಬೈನಲ್ಲೂ, ದೆಹಲಿಯಲ್ಲೂ ವ್ಯಾಖ್ಯಾನಗಳನ್ನೂ, ಸಾಪ್ತಾಹಿಕ ಕಾರ್ಯಕ್ರಮಗಳನ್ನೂ ಕೊಟ್ಟಿರುತ್ತೀರಿ. ಇದಲ್ಲದೇ ಮತ್ತೂರಿನ ಶ್ರೀ ಕೃಷ್ಣಮೂರ್ತಿಯವರೊಂದಿಗೆ ಸಮಗ್ರ ಕುಮಾರವ್ಯಾಸಭಾರತ ಹಾಗೂ ಶಾಂತಿಪರ್ವದ ಕಾರ್ಯಕ್ರಮವನ್ನು ಧ್ವನಿಸುರುಳಿಗಳಲ್ಲಿ ಮುದ್ರಿಸಿರುತ್ತೀರಿ. ನಿಮ್ಮ ಪ್ರತಿಭೆಯನ್ನು ಗಮನಿಸಿ ನಿಮಗೆ **ಗಮಕ ಗಂಧರ್ವ, ಗಮಕ ಸಿಂಧು,** (ಕರ್ನಾಟಕ ಸಂಗೀತ-ನೃತ್ಯ ಅಕಾಡಮಿಯಿಂದ) **ಗಮಕ ಕಲಾ ತಿಲಕ** ಎಂಬ ಪ್ರಶಸ್ತಿಗಳು ಸಂದಿವೆ. ಇದಲ್ಲದೆ ದೂರದರ್ಶನದಲ್ಲೂ ನಿಮ್ಮ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ನೀವು ಹೊಸಹಳ್ಳಿ ಗಮಕಕಲಾ ಪರಿಷತ್ತಿನ ಅಧ್ಯಕ್ಷರಾಗಿಯೂ ಕಳೆದ ಇಪ್ಪತ್ತೆರಡು ವರ್ಷಗಳಿಂದ ಸೇವೆ ಮಾಡುತ್ತಿರುವಿರಿ. ಹೀಗೆ ಗಮಕ ಕಲಾ ಸೇವೆ ಮಾಡುತ್ತಿರುವ ನಿಮಗೂ ನಿಮ್ಮ ಕುಟುಂಬವರ್ಗದವರಿಗೂ ಕಲಾಧಿದೇವತೆಯಾದ ಶ್ರೀ ಶಾರದೆಯು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಅನುಗ್ರಹಿಸಲಿ ಮತ್ತು ನಿಮ್ಮ *ಈ* ಸೇವೆಯು ಇನ್ನೂ ಮುಂದುವರಿಯುವಂತೆ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ. *ತಮ್ಮವರೇ ಆದ*

*ಬೆಂಗಳೂರು* — *ಬೆಂಗಳೂರು ಗಾಯನ ಸಮಾಜದ ಪರವಾಗಿ*

*೨೨.೧೦.೨೦೦೦* — ***ಕಮಲನಾಥ್,*** *ಅಧ್ಯಕ್ಷರು*

## ಶ್ರೀ ವಾಲ್ಮೀಕಿ ಗಮಕ ಪಾಠಶಾಲಾ, ಮೈಸೂರು

## ಸನ್ಮಾನ ಪತ್ರ

ಕಲ್ಯಾಣನಗರ ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿರುವ ಶ್ರೀ ರಾಮಮಂದಿರದ ಸಭಾಂಗಣದಲ್ಲಿ ದಿನಾಂಕ ೧೪.೧೨.೨೦೦೧ರ ಶುಕ್ರವಾರದಂದು ರಾಜ್ಯಮಟ್ಟದ, ರಾಷ್ಟ್ರಮಟ್ಟದ, ಅಂತರರಾಷ್ಟ್ರೀಯ ಮಟ್ಟದ, ಖ್ಯಾತರಾದ ಬಹುಮುಖದ ವಿದ್ವನ್ಮಣಿಗಳನ್ನು ರಾಜಸನ್ಮಾನಿತ, ಗಮಕ ರತ್ನಾಕರ ಶ್ರೀ ಬಿ.ಎಸ್.ಎಸ್. ಕೌಶಿಕ್‌ರವರು, ಸಾಂಪ್ರದಾಯಿಕವಾಗಿ ಸನ್ಮಾನಿಸಿದಾಗ

**ವೇ. ಬ್ರ. ಶ್ರೀ ಎಚ್.ಆರ್. ಕೇಶವಮೂರ್ತಿಗಳವರಿಗೆ**

### ಗಮಕ ಗಾಯಕ ಶಿಖಾಮಣಿ

ಎಂಬ ಬಿರುದನ್ನು ನಮನಪೂರ್ವಕವಾಗಿ ಅರ್ಪಿಸಲಾಗಿದೆ.

*ಸನ್ಮಾನ ಸಭೆಯ ಗೌ. ಅಧ್ಯಕ್ಷರು*
***ಬಿ.ಎನ್.ವಿ. ಸುಬ್ರಹ್ಮಣ್ಯಂ***
*ಅಖಿಲ ಕರ್ನಾಟಕ ಬ್ರಾಹ್ಮಣ ಸಭೆಯ ಗೌ. ಅಧ್ಯಕ್ಷರು*

***ಬಿ.ಎಸ್.ಎಸ್. ಕೌಶಿಕ್***
*ಶಾಲೆಯ ಸ್ಥಾಪಕರು ಮತ್ತು*
*ಅಧ್ಯಾಪಕರು*

## ಕರ್ನಾಟಕ ಗಮಕ ಕಲಾ ಪರಿಷತ್

**ಬೆಂಗಳೂರು**

**ಶಿವಮೊಗ್ಗ ಜಿಲ್ಲಾ ಶಾಖೆ**

## ಪ್ರಶಸ್ತಿ ಪತ್ರ

೧೨ನೇ ಜನವರಿ ೨೦೦೨ರಂದು ಶನಿವಾರ ಶಿವಮೊಗ್ಗೆಯ ರಾಘವೇಂದ್ರಸ್ವಾಮಿ ಕಲ್ಯಾಣಮಂಟಪದಲ್ಲಿ ನಡೆದ ಪರಿಷತ್ತಿನ ಪ್ರಥಮ ಜಿಲ್ಲಾ ಗಮಕ ಕಲಾ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಹೊಸಹಳ್ಳಿ ಆರ್. ಕೇಶವಮೂರ್ತಿ ಇವರಿಗೆ

### ಗಮಕ ರತ್ನ

ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

*ಅಧ್ಯಕ್ಷರು*
*ಕರ್ನಾಟಕ ಗಮಕ ಕಲಾ ಪರಿಷತ್ತು*

## ರಾಜ್ಯಪ್ರಶಸ್ತಿ ಪ್ರದಾನ ಸ್ಮರಣಿಕೆ

**ಕರ್ನಾಟಕ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು**

ರಾಜ್ಯಪ್ರಶಸ್ತಿ ಪ್ರದಾನ ಸಮಾರಂಭ

*ದಿ. ೧.೧೧.೨೦೦೨* *ರವೀಂದ್ರ ಕಲಾಕ್ಷೇತ್ರ*

ಮಾನ್ಯಮುಖ್ಯಮಂತ್ರಿಗಳಾದ

### ಎಸ್.ಎಮ್. ಕೃಷ್ಣ ಅವರಿಂದ ಪ್ರಶಸ್ತಿ ಪ್ರದಾನ

*|| ಶ್ರೀ ವಿದ್ಯಾಗಣಪತಯೇ ನಮಃ ||*

ಹೊಯ್ಸಳ ಕರ್ನಾಟಕ ಸೇವಾ ಟ್ರಸ್ಟ್(ರಿ.), ಮಂಡ್ಯ; ಇವರ ಆಶ್ರಯದಲ್ಲಿ ಮಂಡ್ಯ ನಗರದ ಶ್ರೀ ವಿದ್ಯಾಗಣಪತಿ ದೇವಾಲಯದ ಹೊಯ್ಸಳ ಸಭಾಂಗಣದಲ್ಲಿ ದಿನಾಂಕ ೦೧.೧೨.೨೦೦೨ ರಿಂದ ದಿನಾಂಕ ೩೧.೧೨.೨೦೦೨ರವರೆಗೆ, ನೆರವೇರಿದ ಯಶಸ್ವೀ - 'ಕುಮಾರವ್ಯಾಸ ಭಾರತ'ದ 'ವಿರಾಟಪರ್ವ' ವಾಚನ-ವ್ಯಾಖ್ಯಾನ ಮಾಲೆಯ ಮಂಗಳದ ಶುಭದಿನ. ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರಿಂದ ಸನ್ಮಾನಿತರಿಗೆ ಸಮರ್ಪಿಸಲಾದ **ಸನ್ಮಾನಪತ್ರ.** ಮಂಡ್ಯ ನಗರದಲ್ಲಿ ತಾವು ಕಳೆದ ಒಂದು ತಿಂಗಳಿನಿಂದ ನಡೆಸಿಕೊಟ್ಟ ಕುಮಾರವ್ಯಾಸ ಭಾರತದ 'ವಿರಾಟಪರ್ವ' ವಾಚನ-ವ್ಯಾಖ್ಯಾನ ಕಾರ್ಯಕ್ರಮದ ಮಂಗಳದ ಶುಭ ದಿನದಂದು **'ಗಮಕ ಗಾರುಡಿಗ'** ಎಂಬ ಬಿರುದನ್ನಿತ್ತು ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ತ್ರಿಲೋಕನಾಥ್ ಚತುರ್ವೇದಿಯವರ ಅಮೃತ ಹಸ್ತದಿಂದ ಸನ್ಮಾನಿಸುತ್ತಿರುವ *ಈ* ಸುಮಹೂರ್ತದಲ್ಲಿ ತಮಗೆ ವಿದ್ಯಾಗಣಪತಿಯು ಆಯುರಾರೋಗ್ಯ ಭಾಗ್ಯಗಳನ್ನು ಕರುಣಿಸಲಿ. ತಮ್ಮ ಕೀರ್ತಿ ದಿಗಂತದವರೆಗೂ ವ್ಯಾಪಿಸಲಿ ಎಂದು ಪ್ರಾರ್ಥಿಸುತ್ತಾ ಹೊಯ್ಸಳ ಕರ್ನಾಟಕ ಸೇವಾ ಟ್ರಸ್ಟ್ (ರಿ.) ಮಂಡ್ಯ ಹಾಗೂ ಮಂಡ್ಯ ನಗರದ ಆಸ್ತಿಕ ಮಹಾಜನತೆಯ ಪರವಾಗಿ *ಈ* ಸನ್ಮಾನ ಪತ್ರವನ್ನು ಸಮರ್ಪಿಸುತ್ತಿದ್ದೇವೆ.

*ಮಂಡ್ಯ*
*ದಿನಾಂಕ: ೩೧.೧೨.೨೦೦೨*

*ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಟ್ರಸ್ಟಿಗಳು*
*ಹೊಯ್ಸಳ ಕರ್ನಾಟಕ ಸೇವಾ ಟ್ರಸ್ಟ್ (ರಿ.)*

ಸ್ಥಾಪನೆ : 1905

*ನಾದೋಪಾಸನಕಿ ಶಂಕರ ನಾರಾಯಣ ವಿಧುಲು ವೆಲಿಸಿರಿ*

## ಬೆಂಗಳೂರು ಗಾಯನ ಸಮಾಜ ರಿಜಿಸ್ಟರ್ಡ್

## ಬಿರುದು ಪತ್ರ

ತುಂಗೆಯಾ ಮಡಿಲಲಿ ಹುಟ್ಟಿ, ಸಂಗೀತ ಸರಸತಿಯ ಅಂಶವನು ಹೊತ್ತು
ಮಾಡಿದರೂ ಸಂಗೀತದ ಅಭ್ಯಾಸವನು
ಮನಸು ಸೆಳೆದುದು ಗಮಕ ಕಲೆಯ ಕಡೆಗೆ.
ಕಾವ್ಯ ಯಾವುದೇ ಇರಲಿ, ಗಮಕಿ ಓದುವ ಚೆಂದ
ಪದಪದಗಳ ರಸವನು ಸಹೃದಯತಾನು
ಹೀರಿಕೊಳುವಂತೆ; ಕಾವ್ಯ ಸಂಗೀತವ ಮೇಳೈಸಿ ಹಾಡುವಿರಿ
**ಶ್ರೀ ಹೊಸಹಳ್ಳಿ ಕೇಶವಮೂರ್ತಿ**
ಕುಣಿಯಲೇ ಸರಸತಿಯು ತೃಪ್ತಿ ಸಂತಸದಿಂದೆ
ಉಸಿರಾಟ ಗಮಕವಾಗಿಹ ನಿಮಗೆ
**ಗಮಕ ಫಲ್ಗುಣ**
ಎಂಬ ಸಾರ್ಥಕ ಬಿರುದನ್ನು ಸಮರ್ಪಿಸುವಲ್ಲಿ
ಗಾಯನ ಸಮಾಜದ ಹೆಗ್ಗಳಿಕೆ ಇಲ್ಲಿ,

*ಬೆಂಗಳೂರು*
*೧೨.೦೧.೦೪*

*ಬೆಂಗಳೂರು ಗಾಯನ ಸಮಾಜದ ಸದಸ್ಯರ ಪರವಾಗಿ*
***ಕಮಲನಾಥ್***
*ಅಧ್ಯಕ್ಷರು, ಬೆಂಗಳೂರು ಗಾಯನ ಸಮಾಜ*

## ವ್ಯಾಖ್ಯಾನಚತುರ ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳಿಗೆ ಸಂದ ಸಂಮಾನ

### ಶೃಂಗೇರಿ ಶಂಕರಮಠ, ಶಿವಮೊಗ್ಗ

***ಪೂಜ್ಯ ಶ್ರೀ ಕಡೇಮನೆ ಮಾರ್ಕಂಡೇಯ ಅವಧಾನಿಗಳನ್ನು ಸಂಮಾನಿಸಿ ಅರ್ಪಿಸಿದ***

### ಮಾನಪತ್ರ

*ಅವಧಾನಿಗಳೆ,*

ಶ್ರೀಮುಖ ಸಂವತ್ಸರದ ಮಾರ್ಗಶೀರ್ಷ ಶುದ್ಧ ಪ್ರತಿಪತ್ ದಿ.೧೮.೧೧.೩೩ ರಂದು ಜನಿಸಿದ ತಮ್ಮ ಬದುಕು ಆದರ್ಶಪ್ರಾಯವಾಗಿದೆ.

*ಶ್ರೋತ್ರಿಯರೆ,*

. . . ಜನರಲ್ಲಿ ಧಾರ್ಮಿಕ ಶ್ರದ್ಧೆ ಬೆಳೆಯಲು ಪೋಷಕರಾಗಿರುವುದು ಸರ್ವವಿದಿತವೇ ಆಗಿದೆ. ಶಿವಮೊಗ್ಗೆಯ ನಮ್ಮ ಶಂಕರಮಠದಲ್ಲಿ ನಡೆದ ಅತಿರುದ್ರಾದಿ ಮಹಾಯಾಗ, ಲಕ್ಷಮೋದಕ ಹೋಮಗಳಲ್ಲಿ ಪೂಜ್ಯ ವೇ. ಮೂ. ಕೇಶವಮೂರ್ತಿ ಘನಪಾಠಿಗಳಿಗೆ ಬಲಭುಜವಾಗಿ ನಿಂತು ತಾವು ವಹಿಸಿದ ಪಾತ್ರ ಯಾರಿಗೆ ತಾನೇ ಮರೆಯಲಾದೀತು? ಕಳೆದ ಹದಿನೈದು ವರ್ಷಗಳಿಂದ ನಮ್ಮ ಶೃಂಗೇರಿ ಶಂಕರಮಠದಲ್ಲಿ ನಡೆಸುತ್ತಿರುವ ಸೇವೆಗೆ ನಾವು ನಿಮಗೆ ಕೃತಜ್ಞರು. ವೇದಜಡ, ಶುಷ್ಕ ಪಂಡಿತ ಇತ್ಯಾದಿ ವಾಕ್ಯಗಳನ್ನು ಹುಸಿ ಮಾಡಿ . . . **ಕರ್ಮಣಿ ಸರದೊಳ್ ಚಂಬವಳಮಂ ಕೋದಂತೆ** ಮಂತ್ರಾರ್ಥಗಳ ವಿವರಣೆ ಇವೆಲ್ಲ ತಮ್ಮನ್ನು ವ್ಯಾಖ್ಯಾನ ಲೋಕದ ದಿಗ್ಗಜರನ್ನಾಗಿಸಿವೆ. ಜತೆಗೆ ಗಮಕಕಲಾ ಕೋಕಿಲ ಕೇಶವಮೂರ್ತಿಗಳ ಕಂಠಶ್ರೀಯೂ ಸೇರಿದರೆ ನಮಗೆ ಊಟ, ನಿದ್ದೆಯ ಪರಿವೆಯೂ ಇರುವುದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

*ಧರ್ಮಮೂರ್ತಿಗಳೇ,*

. . . ತಮ್ಮಂಥಾ ಶ್ವೇತವಸನದ ಸಂನ್ಯಾಸಿಗಳಿರುವುದರಿಂದಲೇ ಲೋಕದಲ್ಲಿ ಕಾಲಕಾಲಕ್ಕೆ ಮಳೆ-ಬೆಳೆಗಳಾಗುತ್ತಿರುವುದೆಂದು ದೃಢವಾಗಿ ನಂಬಿದ್ದೇವೆ.

*ಮಾರ್ಕಂಡೇಯರೇ,*

ತಮ್ಮ ಐವತ್ತೈದು ವರ್ಷಗಳ ಬಾಳು ಅರ್ಥಪೂರ್ಣವೂ ಸಫಲವೂ ಆಗಿದೆ. ತಮಗೂ, ತಮ್ಮ ಕುಟುಂಬ ವರ್ಗಕ್ಕೂ ಆ ಭಗವಂತನು ಸಕಲ ಸನ್ಮಂಗಳಗಳನ್ನು ದಯಪಾಲಿಸಲಿ ಎಂದು ಹಾರೈಸಿ ಶ್ರೀ ಶಾರದಾ ಶಂಕರರ ಸಂಮುಖದಲ್ಲಿ *ಈ* ಸಂಮಾನ ಪತ್ರವನ್ನು ಸಮರ್ಪಿಸುತ್ತಿದ್ದೇವೆ.

*೨೪.೪.೮೮* — ***ಶ್ರೀ ಶಂಕರ ಸೇವಾ ಸಮಿತಿ***

*ಭಾನುವಾರ* — *ಶೃಂಗೇರಿ ಶಂಕರಮಠ, ಶಿವಮೊಗ್ಗ*

### ಗಮಕ ಕಲಾ ಪರಿಷತ್

*ಹೊಸಹಳ್ಳಿ-೫೭೭ ೨೦೨ ; ಶಿವಮೊಗ್ಗ ತಾಲ್ಲೂಕು*

### ಪ್ರಶಸ್ತಿ ಪತ್ರ

**ವೇದಮೂರ್ತಿ ಬ್ರಹ್ಮಶ್ರೀ ಮಾರ್ಕಂಡೇಯ ಅವಧಾನಿ ಇವರಿಗೆ**

ದಿನಾಕ ೪.೨.೯೧ ರಂದು ಸೋಮವಾರ ೧೨ನೇ ವಾರ್ಷಿಕ ಗಮಕಸಪ್ತಾಹ ಹಾಗೂ ಜೈಮಿನಿಭಾರತ ಧ್ವನಿಮುದ್ರಣದ ಮಂಗಳ ಕಾರ್ಯಕ್ರಮದ ಅಂಗವಾಗಿ ನಡೆದ ಸನ್ಮಾನ ಸಮಾರಂಭದಲ್ಲಿ

***ವ್ಯಾಖ್ಯಾನ ಚತುರ***

ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ

*ಮುಖ್ಯ ಅತಿಥಿಗಳು*
***ಪ್ರೊ|| ವಸಂತ ಕುಷ್ಟಗಿ***
*ಪ್ರಾಚಾರ್ಯರು, ಗುಲ್ಬರ್ಗಾ*

*ಸಮಾರಂಭದ ಅಧ್ಯಕ್ಷರು*
***ಡಿ.ಹೆಚ್. ಶಂಕರಮೂರ್ತಿ***
*ವಿಧಾನ ಪರಿಷತ್ ಸದಸ್ಯರು, ಶಿವಮೊಗ್ಗ*

*ಅಧ್ಯಕ್ಷರು*
***ಎಚ್.ಆರ್.ಕೇಶವಮೂರ್ತಿ***
*ಗಮಕ ಕಲಾ ಪರಿಷತ್, ಹೊಸಹಳ್ಳಿ*

## ಲಲಿತ ಕಲಾ ಸಂಘ

**ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ-೪, ತುಮಕೂರು.**

*ಮಾನ್ಯರೆ,*

**ವ್ಯಾಖ್ಯಾನ ಚತುರರೆಂದೇ** ಖ್ಯಾತಿ ಪಡೆದಿರುವ ಗೌರವಾನ್ವಿತ ಶ್ರೀ **ವೇದಮೂರ್ತಿ ಮಾರ್ಕಂಡೇಯ ಅವಧಾನಿಗಳೇ** . . . ಸಂಸ್ಕೃತ, ವೇದ ಉಪನಿಷತ್ತುಗಳ ಹಿನ್ನೆಲೆಯಿಂದ ಬಂದ ನೀವು ಭಾರತ ಸಂಸ್ಕೃತಿ, ಸಾಹಿತ್ಯ, ವೇದ, ಪುರಾಣ ಮತ್ತು ಮಹಾಕಾವ್ಯಗಳನ್ನು ಆಳವಾಗಿ ಅಧ್ಯಯನ ಮಾಡಿ ಜ್ಞಾನಶಕ್ತಿಯನ್ನು ಬೆಳೆಸಿಕೊಂಡಿದ್ದೀರಿ. ಪೌರೋಹಿತ್ಯ ಉಪಾಧ್ಯಾಯರೆಂದೇ ಹೆಸರಾಗಿದ್ದ ತಂದೆಯವರಲ್ಲಿ ವೇದ ಹಾಗೂ ಸಪ್ರಯೋಗ ಧರ್ಮಶಾಸ್ತ್ರದ ಬಾಲ್ಯಪಾಠವನ್ನು ಕಲಿತು ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳು, ವೇ. ಚಿದಂಬರ ಜೋಯಿಸರಲ್ಲಿ ಸಂಸ್ಕೃತ ಬಾಲ್ಯಪಾಠವನ್ನೂ, ವೇ. ಶ್ರೀ ಶ್ರೀನಿವಾಸ ಅವಧಾನಿಗಳು ಮತ್ತು ಕೇಶವಮೂರ್ತಿ ಅವಧಾನಿಗಳಲ್ಲಿ ಪ್ರೌಢಪಾಠವನ್ನೂ ಕಲಿತವರಾಗಿದ್ದೀರಿ. ವೇ. ಶ್ರೀ ಸುಬ್ರಾಯ ಅವಧಾನಿಗಳ ಬಳಿಯಲ್ಲಿ ಜ್ಯೋತಿಷ್ಯ ಹಾಗೂ ವೇದಾಭ್ಯಾಸವನ್ನು ಮತ್ತು ನಂಜನಗೂಡಿನ ವೇ. ಶ್ರೀಕೃಷ್ಣಸೋಮಯಾಜಿಗಳ ಬಳಿ ಮೂರು ವರ್ಷಗಳ ಕಾಲ ಸಂಸ್ಕೃತ ವೇದ ಅಧ್ಯಯನವನ್ನು ಮಾಡಿ ಪಾಂಡಿತ್ಯವನ್ನು ಪಡೆದವರಾಗಿರುತ್ತೀರಿ. ೧೯೫೪ರಲ್ಲಿ ಶ್ರೀಮತಿ ನಾಗವೇಣಿ ಅವರನ್ನು ಬಾಳ ಸಂಗಾತಿಯನ್ನಾಗಿ ಸ್ವೀಕರಿಸಿದನಂತರ ಶಾಸ್ತ್ರಿಗಳ ವ್ಯಾಖ್ಯಾನಕ್ಕೆ ಮನಸೋತು ತಾವೂ ವ್ಯಾಖ್ಯಾನಕಾರರಾಗಬೇಕೆಂಬ ಉತ್ಸುಕತೆಯ ಅಭ್ಯಾಸದಲ್ಲಿ ತೊಡಗಿದ್ದೀರಿ. ಹತ್ತಾರು ಕಡೆ ಯಶಸ್ವಿಕಾರ್ಯಕ್ರಮಗಳನ್ನು ನೀಡಿದ ಪ್ರತಿಭೆ ನಿಮ್ಮದಾಗಿರುತ್ತದೆ. ಅಜಸ್ರಾಗ್ನಿಧಾರಕರಾದ ಶಿವಮೊಗ್ಗ ವೇ. ಕೇಶವಮೂರ್ತಿ ಘನಪಾಠಿಗಳಲ್ಲಿ ವೇದಾಧ್ಯಯನ ಮಾಡಿ, ಧ್ವನಿಮುದ್ರಿಕೆಯ ಮೂಲಕ ಅಭ್ಯಾಸ ಮಾಡಿರುವುದು ತಮ್ಮ ಪಾಂಡಿತ್ಯಕ್ಕೆ ಕೀರ್ತಿ ಕಳಸವಿಟ್ಟಂತಾಗಿದೆ. ೧೯೬೯-೭೦, ೭೩-೭೪ ರಲ್ಲಿ ಸಮಗ್ರ ಭಾರತ ವಾಚನ ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಮುಖ್ಯ ಪಾತ್ರವನ್ನು ವಹಿಸಿ ಬೆಂಗಳೂರಿನ ಪ್ರಸಿದ್ಧ ಉದ್ಯಮಿಗಳಾದ ಶ್ರೀನಿವಾಸಯ್ಯನವರ ಮನೆಯಲ್ಲಿ ಅನೇಕ ವರ್ಷಗಳು ಸಾಪ್ತಾಹಿಕ ಕಾರ್ಯಕ್ರಮವನ್ನು ನೀಡಿದ ಹೆಗ್ಗಳಿಕೆ ನಿಮ್ಮದಾಗಿರುತ್ತದೆ. ಭಾರತದ ಮಾನ್ಯ ಉಪರಾಷ್ಟ್ರಪತಿಗಳಾಗಿದ್ದ ಬಿ.ಡಿ. ಜತ್ತಿ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ ಇವರುಗಳು ತಮ್ಮ ಕಾರ್ಯಕ್ರಮಗಳನ್ನು ಕೇಳಿ ಸಂತಸಪಟ್ಟಿದ್ದರು ಎನ್ನುವುದು ಹೆಮ್ಮೆಯ ವಿಷಯ. ಕಲಿಕೆಯಲ್ಲಿಯೇ ಅದ್ವಿತೀಯ ಪಾಂಡಿತ್ಯವನ್ನು ಪಡೆದ ತಾವು ಬೆಂಗಳೂರಿನ ರಾಮಕೃಷ್ಣಾಶ್ರಮದ ಸ್ವಾಮಿ ಶ್ರೀ ಪುರುಷೋತ್ತಮಾನಂದಜಿ ಅವರ ಸಮ್ಮುಖದಲ್ಲಿ ನೀಡಿದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಶ್ರೋತೃಗಳು ಕಾರ್ಯಕ್ರಮವನ್ನು ಆಲಿಸಿ ಹೂ-ಹಣ್ಣುಗಳಿಂದ ಅಭಿಷೇಕ ಮಾಡಿದ್ದರು ಎಂಬುವುದು ತಮಗೆ ದಕ್ಕಿರುವ ಇನ್ನೊಂದು ಕಳಸವಾಗಿರುತ್ತದೆ. ದೆಹಲಿಯ ಕರ್ನಾಟಕ ಭವನ, ಕೃಷ್ಣ ದೇವಸ್ಥಾನ ಹಾಗೂ ಕನ್ನಡ ಶಾಲೆಗಳಲ್ಲಿ ಕೇಶವಮೂರ್ತಿಗಳೊಂದಿಗೆ ಕಾರ್ಯಕ್ರಮ ನೀಡಿ, ಕಾಶಿ-ಜಬಲ್‌ಪುರ್ ಕರ್ನಾಟಕ ಸಂಘಗಳಲ್ಲಿ ಹಾಗೂ ಇಂದಿನ ದ್ವಾರಕಾ ಶಂಕರಾಚಾರ್ಯ ಸಮ್ಮುಖ ಪೂಜ್ಯ ರಾಮಶಾಸ್ತ್ರಿಗಳು ಹಾಗೂ ಮಿತ್ರ ತಿರುಮಲಾವಧಾನಿಯವರ ಜತೆಯಲ್ಲಿ ನೀಡಿದ ಕಾರ್ಯಕ್ರಮಗಳು ಯಶಸ್ಸಿಗೆ ಸಿಕ್ಕಿಸಿದ ಮತ್ತೊಂದು ಗರಿ. ಉಡುಪಿ, ಪೇಜಾವರ, ಶಿವಮೊಗ್ಗದ ಶಂಕರಮಠ, ಹೊಸಹಳ್ಳಿಯ ಗಮಕ ಕಲಾ ಪರಿಷತ್ತಿನ ಆಶ್ರಯದಲ್ಲಿ ನಡೆಸಲಾದ ಜೈಮಿನಿ ಭಾರತದ ಸಮಗ್ರ ಧ್ವನಿಸುರುಳಿಯ ಮುದ್ರಣ ಕಾರ್ಯಕ್ರಮದಲ್ಲಿ ಮಿತ್ರ ಕೇಶವಮೂರ್ತಿಗಳ ವಾಚನದೊಂದಿಗೆ ದೀರ್ಘಕಾಲ ನಡೆಸಿದ ಕಾರ್ಯಕ್ರಮಗಳು, ತೊಂಡೂರಿನ ಹೊಯ್ಸಳ ಸಾಮ್ರಾಜ್ಯೋತ್ಸವದಲ್ಲಿ ನ್ಯಾಯಮೂರ್ತಿ ಶ್ರೀ ಇ.ಎಸ್.ವೆಂಕಟರಾಮಯ್ಯ ಅವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮಗಳು ತಮ್ಮ ವ್ಯಾಖ್ಯಾನ ಚತುರತೆಗೆ ಸಂದ ಗೌರವಗಳಾಗಿವೆ. ಮತ್ತೂರಿನಲ್ಲಿ ನಡೆದ ಅತಿರುದ್ರ, ಚಂಡಿ, ಗಣಪತಿ, ತೇರಾಕೋಟಿ ಮಹಾಯಾಗ ಹಾಗೂ ಬಿರ್ಲಾ ಪರಿವಾರದವರು ಮಾಡಿಸಿದ ಲಕ್ಷ್ಮೀನಾರಾಯಣ ಹೋಮದ ಪ್ರಧಾನ ಆಚಾರ್ಯತ್ವದ ಜವಾಬ್ದಾರಿ ಹೊತ್ತಿರುತ್ತೀರಿ. ಹೊಸಹಳ್ಳಿ ಕೇಶವ ದೇವಾಲಯದ ಶಿಖರ ಪ್ರತಿಷ್ಠೆಯಲ್ಲಿ ಪ್ರಧಾನ ಪುರೋಹಿತರಾಗಿ ಕಾರ್ಯನಿರ್ವಹಿಸಿದ್ದೀರಿ. ಶಿವಮೊಗ್ಗದ ಉಷಾ ನರ್ಸಿಂಗ್ ಹೋಮ್‌ನ ಧನ್ವಂತರಿ ಲಕ್ಷ್ಮೀನಾರಾಯಣ ದೇವಾಲಯದ ಪ್ರತಿಷ್ಠಾಪನೆಯಲ್ಲಿ ಪ್ರಧಾನ ಆಚಾರ್ಯತ್ವ ವಹಿಸಿದ್ದೀರಿ. *ಈ* ಎಲ್ಲಾ ಕಾರ್ಯಸಾಧನೆಗಳಿಂದ ತಮಗೆ ಕಾಶಿ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ **ವ್ಯಾಖ್ಯಾನ ಚತುರ** ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ. ಶಿವಮೊಗ್ಗದಲ್ಲಿ ಶ್ರೀ ಶಂಕರಮಠದಲ್ಲಿ ಸಂದ ಸನ್ಮಾನ, ಶೃಂಗೇರಿಯಲ್ಲಿ ನಡೆದ ಸಪ್ತರ್ಷಿ ಸಪ್ತಾಹದಲ್ಲಿ ಪೂಜ್ಯ ಪರಮಾಚಾರ್ಯರಿಂದ ಸಂದ ಸನ್ಮಾನ ಮತ್ತು ಹೊಸಹಳ್ಳಿಯ ಗಮಕ ಕಲಾ ಪರಿಷತ್ತಿನ ಆಶ್ರಯದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ **ಪ್ರವಚನ ಚತುರ** ಪ್ರಶಸ್ತಿ ಮುಂತಾದುವುಗಳು ದೊರೆತಿರುವುದು ತಮ್ಮ ಪಾಂಡಿತ್ಯಕ್ಕೇ ಸಂದ ಅಭೂತಪೂರ್ವ ಗೌರವವಾಗಿರುತ್ತದೆ. ತಾವು ಒಬ್ಬ ಶ್ರದ್ಧಾವಂತ ಕಾಯಕ ಜೀವಿ. ಸದಭಿರುಚಿಯ ಸುಸಂಸ್ಕೃತ ನಡವಳಿಕೆ, ಸಾಹಿತ್ಯಜ್ಞಾನ, ಧರ್ಮಜಿಜ್ಞಾಸೆ, ಬಹುಭಾಷಾ ಪರಿಣತಿ, ಇವು ದೇಶದ ಸಾಂಸ್ಕೃತಿಕ ಜಗತ್ತನ್ನು ಬೆಳೆಸಿರುವುದಕ್ಕೆ ವಿನಿಯೋಗವಾಗಿರುವುದು ನಮ್ಮೆಲ್ಲರಿಗೂ ಸಂತೋಷ ತಂದ ವಿಚಾರವಾಗಿದೆ. ನಿಮ್ಮ *ಈ* ಸೇವೆ ಇನ್ನೂ ಹೆಚ್ಚು ಫಲಪ್ರದವಾಗಲಿ ಎಂದು ಆಶಿಸುತ್ತೇವೆ.

*ದಿನಾಂಕ ೩೦.೧೧.೧೯೯೭*

***ಡಾ. ಜಿ. ವೆಂಕಟೇಶುಲು***
*ಅಧ್ಯಕ್ಷರು, ಲಲಿತ ಕಲಾ ಸಂಘ*
*ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ, ತುಮಕೂರು*

## ಶ್ರೀ ವಾಲ್ಮೀಕಿ ಗಮಕ ಪಾಠಶಾಲಾ, ಮೈಸೂರು

## ಸನ್ಮಾನ ಪತ್ರ

ತಾ.೨೧.೭.೦೧ ರಂದು ಶನಿವಾರ, ಹಾಸನ ಜಿಲ್ಲೆಯಲ್ಲಿರುವ ವೇದಗ್ರಾಮ ಅಗ್ರಹಾರದ ಶ್ರೀ ರಾಮಮಂದಿರದಲ್ಲಿ, ಹಲವಾರು ವಯೋವೃದ್ಧರಾಗಿರುವ ವೇದಾಧ್ಯಯನ ಸಂಪನ್ನರನ್ನೂ, ಮಹಾದಾನಿಗಳನ್ನೂ, ಸಮಾಜಸೇವಾ ಧುರೀಣರನ್ನೂ ಹಾಗೂ ಲಲಿತಕಲಾ ಪರಿಣತರನ್ನೂ, ರಾಜ ಸನ್ಮಾನಿತ ಗಮಕ ರತ್ನಾಕರ ಶ್ರೀ ಬಿ.ಎಸ್.ಎಸ್. ಕೌಶಿಕ್‌ರವರು ಸಾಂಪ್ರದಾಯಿಕವಾಗಿ ಸನ್ಮಾನಿಸಿದಾಗ:

**. . . ವೇ. ಬ್ರ. ಶ್ರೀ ಮಾರ್ಕಂಡೇಯಾವಧಾನಿಗಳವರಿಗೆ ವೇದಾಧ್ಯಯನ ವ್ಯಾಖ್ಯಾನ ವಾಚಸ್ಪತಿ** ಎಂಬ ಬಿರುದನ್ನು ನಮನಪೂರ್ವಕವಾಗಿ ಅರ್ಪಿಸಲಾಗಿದೆ..

*ಸನ್ಮಾನ ಸಭೆಯ ಗೌ. ಅಧ್ಯಕ್ಷರು*
*ಶ್ರೀ ಚಂದ್ರಶೇಖರಶರ್ಮಾವಧಾನಿಗಳು*

*ಶಾಲೆಯ ಸ್ಥಾಪಕ ಮತ್ತು ಅಧ್ಯಾಪಕ*
***ಬಿ.ಎಸ್.ಎಸ್. ಕೌಶಿಕ್***

## ಶ್ರೀ ಸರ್ವಸಿದ್ಧಿ ವಿನಾಯಕಸ್ವಾಮಿ ಸೇವಾ ಸಮಿತಿ (ರಿ.)

*ವಿನಾಯಕ ವೃತ್ತ, ರಾಮಣ್ಣ ಶ್ರೇಷ್ಠಿ ಪಾರ್ಕ್, ಶಿವಮೊಗ್ಗ*

### ೭೫ನೇ ವರ್ಷದ ಅಮೃತ ಮಹೋತ್ಸವದ ಸಮಾರೋಪ ಸಮಾರಂಭದಂದು

**ಪದ್ಮಭೂಷಣ ರಾಜರ್ಷಿ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರು**
*ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ*

**ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮಿಗಳವರು**
*ಆನಂದಪುರ, ಶಿವಮೊಗ್ಗ*

**ಶ್ರೀ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರು,** ಆದಿಚುಂಚನಗಿರಿ ಶಾಖಾ ಮಠಾಧೀಶರು, ಶಿವಮೊಗ್ಗ

***ಇವರುಗಳ ದಿವ್ಯಸಾನ್ನಿಧ್ಯದಲ್ಲಿ***

ದಿನಾಂಕ ೧೬.೧೧.೨೦೦೪ರ ಮಂಗಳವಾರ

**ವ್ಯಾಖ್ಯಾನಚತುರ ವೇದಮೂರ್ತಿ ಬ್ರಹ್ಮಶ್ರೀ ಮಾಕಂಡೇಯ ಅವಧಾನೀ,** ಮತ್ತೂರು

ಇವರಿಗೆ ಸನ್ಮಾನಿಸಿ ಅರ್ಪಿಸಿದ

## ಸನ್ಮಾನ ಪತ್ರ

*ಪೂಜ್ಯ ಅವಧಾನಿಗಳೆ, ವ್ಯಾಖ್ಯಾನ ಚತುರರೆ,*

ಆದರ್ಶ ಪುರೋಹಿತರಾದ ತಾವು ಇಂದು ಕರ್ನಾಟಕದ ಅಗ್ರಮಾನ್ಯ ವ್ಯಾಖ್ಯಾನಕಾರರಲ್ಲಿ ಒಬ್ಬರೆನಿಸಿದ್ದೀರಿ. ಮಾನ್ಯ ಉಪರಾಷ್ಟ್ರಪತಿ ಬಿ.ಡಿ. ಜತ್ತಿ, ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ, ಮುಖ್ಯ ನ್ಯಾಯಮೂರ್ತಿ ಇ.ಎಸ್.ವೆಂಕಟರಾಮಯ್ಯ, ಸ್ವಾಮಿ ಪುರುಷೋತ್ತಮಾನಂದಜೀ, ಶೃಂಗೇರಿ-ಉಡುಪಿ-ಕಾಂಚಿ ಜಗದ್ಗುರುಗಳು ಮೊದಲಾದ ಅನೇಕ ಮಹನೀಯರು ತಮ್ಮ ವ್ಯಾಖ್ಯಾನವನ್ನು ಮೆಚ್ಚಿ ಸನ್ಮಾನಿಸಿರುವುದು ತಮ್ಮ ವಿದ್ವತ್ತಿನ ದ್ಯೋತಕವಾಗಿದೆ.

*ಅಜಾತಶತ್ರುಗಳೆ,*

ಮತ್ತೂರು-ಹೊಸಹಳ್ಳಿ ಗ್ರಾಮಗಳ ಪುರೋಹಿತರಾದ ತಾವು ಶಿವಮೊಗ್ಗ ಹಾಗೂ ಕರ್ನಾಟಕದ ಹಲವೆಡೆ ಪೌರೋಹಿತ್ಯವನ್ನು ನಡೆಸಿ ಖ್ಯಾತನಾಮರಾಗಿದ್ದೀರಿ. **'ಯದೃಚ್ಛಾಲಾಭಸಂತುಷ್ಟ'**ರಾದ ತಾವು ಎಂದೂ ಲೋಭಕ್ಕೆ ಎಡೆಗೊಡದೆ ನಡೆದ ರೀತಿ ಎಲ್ಲರ ಮೆಚ್ಚುಗೆ ಪಡೆದಿದೆ. ಅದರಿಂದಾಗಿ *ಈ* ಪ್ರಾಂತದ ಯಾವ ಧಾರ್ಮಿಕ ಕಾರ್ಯಕ್ರಮದಲ್ಲೂ ತಾವು ಮೊದಲಿಗರಾಗಿದ್ದೀರಿ. ಎಲ್ಲರನ್ನೂ ಸಮಾನವಾಗಿ ಕಾಣುತ್ತ, ಪ್ರೀತಿಯಿಂದ

ನುಡಿಸುತ್ತ, ಎಲ್ಲರ ಶ್ರೇಯಕ್ಕಾಗಿ ಚಿಂತಿಸುವ ತಮ್ಮಂತಹವರು ಇಂದು ವಿರಳರಲ್ಲಿ ವಿರಳರೇ ಸರಿ. ತಮ್ಮ ಭೀಮರಥ ಶಾಂತಿಯ ಸಂದರ್ಭದಲ್ಲಿ ತಾವು ಮತ್ತೂರಿನ ಪ್ರಶಾಂತ ಸ್ಥಳದಲ್ಲಿ ರಮಣೀಯವಾಗಿ ನಿರ್ಮಿಸಿರುವ **ಸರ್ವಧರ್ಮ ದೇವಾಲಯ** ತಮ್ಮ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ಇಂಥ ದೇವಾಗಾರವನ್ನು ನಿರ್ಮಿಸಿ ತಾವು ಎಲ್ಲರ ಗೌರವಕ್ಕೆ ಪಾತ್ರರಾಗಿದ್ದೀರಿ; ನಿಜಕ್ಕೂ **ಅಜಾತಶತ್ರು**ಗಳೆನಿಸಿದ್ದೀರಿ.

*ವಾಕ್ಚತುರರೆ,*

ಪ್ರಸಂಗಕ್ಕೆ ತಕ್ಕಂತೆ ಔಚಿತ್ಯಪೂರ್ಣವಾಗಿ ವ್ಯಾಖ್ಯಾನಿಸುವ ತಮ್ಮ ಪ್ರತಿಭೆ ಅನನ್ಯ ಸಾಧಾರಣವಾದುದು. ಸದಾ ಕೇಳುತ್ತಲೇ ಇರಬೇಕೆನಿಸುವ ತಮ್ಮ ಉಕ್ತಿಕೌಶಲವು ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದೆ. ತಮಗೆ ಈ ರಾಜ್ಯದ, ರಾಷ್ಟ್ರದ ಎಲ್ಲ ಗೌರವಗಳೂ ದೊರಕುವಂತಾಗಲಿ; ತಮ್ಮ ಸಾಧನೆಯ ಮಾರ್ಗದಲ್ಲಿ ಸಹನೆಯಿಂದ ಅನುಸರಿಸುತ್ತಿರುವ ತಮ್ಮ ಧರ್ಮಪತ್ನಿ ಶ್ರೀಮತಿ ನಾಗವೇಣಿ ಹಾಗೂ ಕುಟುಂಬ ವರ್ಗದ ಎಲ್ಲರಿಗೂ ಶ್ರೀ ಸರ್ವಸಿದ್ಧಿ ವಿನಾಯಕಸ್ವಾಮಿಯು ಸಕಲ ವಿಧವಾದ ಸನ್ಮಂಗಲವನ್ನೂ ನೀಡಲಿ ಎಂದು ದಿವ್ಯಶ್ರೀಗಳವರ ಸಮಕ್ಷಮದಲ್ಲಿ ಹಾರೈಸುತ್ತೇವೆ.

*ದಿನಾಂಕ: ೧೬.೧೧.೨೦೦೪* — *ಅಧ್ಯಕ್ಷರು ಮತ್ತು ಸದಸ್ಯರು*
*ಶಿವಮೊಗ್ಗ* — *ಶ್ರೀಸರ್ವಸಿದ್ಧಿ ವಿನಾಯಕಸ್ವಾಮಿ ಸೇವಾ ಸಮಿತಿ (ರಿ.)*

# ೬. ವರ್ತಮಾನ

## ಸಂಪಾದಕೀಯ : ಸಂಕೇತಿ ಸಂಗಮ : ಅಕ್ಟೋಬರ್ '೯೯

. . . ಇದೆಲ್ಲಕ್ಕೂ ಮಕುಟಪ್ರಾಯವಾಗಿ **ಕಿರುತೆರೆ**ಯ ಮೇಲೆ ಗಮಕವನ್ನು ಮಿಂಚಿಸಿದ ಕೀರ್ತಿ ಮತ್ತೂರು ಕೃಷ್ಣಮೂರ್ತಿ ಹಾಗೂ ಎಚ್.ಆರ್.ಕೇಶವಮೂರ್ತಿ ಅವರದು. ಸಂಪೂರ್ಣ ಕುಮಾರವ್ಯಾಸ ಭಾರತವನ್ನು ವಾಚನ-ವ್ಯಾಖ್ಯಾನ ರೂಪದಲ್ಲಿ ಪ್ರತಿದಿನ ಬೆಳಗ್ಗೆ ಉದಯ ಟಿ.ವಿ. ಪ್ರಸಾರ ಮಾಡುತ್ತಿದೆ. ಬೃಹತ್ತಾದ ಕಾವ್ಯವೊಂದು **ರೂಪಮುದ್ರಿತವಾಗಿ** ಪ್ರಕಾಶಗೊಳ್ಳುತ್ತಿರುವುದು ಇತಿಹಾಸದಲ್ಲಿ ಇದೇ ಮೊದಲು. ಈ ಹಿಂದೆ ಇದೇ ಕಾವ್ಯ ಸಮಗ್ರವಾಗಿ ಎರಡು ಬಾರಿ ಧ್ವನಿಮುದ್ರಿತವಾಗಿದ್ದು ಎರಡು ಬಾರಿಯೂ 'ಗಮಕ ಗಂಧರ್ವ' ಕೇಶವಮೂರ್ತಿ ಅವರೇ ವಾಚನ ಮಾಡಿರುವುದು ವಿಶೇಷ (ವ್ಯಾಖ್ಯಾನ-ಒಮ್ಮೆ ಲಕ್ಷ್ಮೀಕೇಶವ ಶಾಸ್ತ್ರಿಗಳು, ಇನ್ನೊಮ್ಮೆ ಮತ್ತೂರು ಕೃಷ್ಣಮೂರ್ತಿಗಳು).

## ಧ್ವನಿ ಸುರುಳಿಗಳಲ್ಲಿ ಕುಮಾರವ್ಯಾಸ ಭಾರತ : ಸಂಕೇತಿ ಸಂಗಮ : ಅಕ್ಟೋಬರ್ ೯೯

ಭಾರತೀಯ ವಿದ್ಯಾಭವನದ ಬೆಂಗಳೂರು ಕೇಂದ್ರವು ಹಿಂದೂಸ್ತಾನ್ ಮೆಷಿನ್ ಟೂಲ್ಸ್ ಸಂಸ್ಥೆಯ ಸಹಯೋಗ ಹಾಗೂ ಸಹಾಯದಿಂದ ಕುಮಾರವ್ಯಾಸ ಭಾರತದ ಹತ್ತು ಪರ್ವಗಳು ಮತ್ತು ಮೂಲಭಾರತದ ಶಾಂತಿಪರ್ವ ಮತ್ತು ಅನುಶಾಸನಪರ್ವ ಒಳಗೊಂಡಂತೆ ಹನ್ನೆರಡು ಪರ್ವಗಳನ್ನು ಶ್ರೀ ಹೊಸಹಳ್ಳಿ ಕೇಶವಮೂರ್ತಿಯವರ ಗಮಕ ವಾಚನ ಮತ್ತು ಶ್ರೀ ಮತ್ತೂರು ಕೃಷ್ಣಮೂರ್ತಿಯವರ ವ್ಯಾಖ್ಯಾನದಿಂದ ಒಡಗೂಡಿದ ಇನ್ನೂರು ಧ್ವನಿಸುರುಳಿಗಳಲ್ಲಿ ಹೊರತಂದಿದೆ.

ಈ ಕುಮಾರವ್ಯಾಸ ಭಾರತದ ವಾಚನ ಮತ್ತು ವ್ಯಾಖ್ಯಾನ ಹೊಂದಿರುವ ಇನ್ನೂರು ಧ್ವನಿಸುರುಳಿಗಳ ಒಂದು ಸೆಟ್ಟಿನ ಬೆಲೆ ರೂ.೬೪೦೦/-.

ಅಂಚೆ ಮುಖಾಂತರ ಕೊಂಡುಕೊಳ್ಳಲು ಇಚ್ಛಿಸುವವರು, ರೂ.೧೦೦/- ಅಂಚೆ ವೆಚ್ಚವನ್ನು ಸೇರಿಸಿ, ರೂ.೬೫೦೦/-ಕ್ಕೆ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಕ್ರಾಸ್ಡ್ ಚೆಕ್ಕನ್ನು ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - ೫೬೦ ೦೦೧ ಹೆಸರಿಗೆ ಬರೆದು ಕಳುಹಿಸಿದಲ್ಲಿ ಒಂದು ವಾರದೊಳಗೆ ತಮ್ಮ ಮನೆಯ ಬಾಗಿಲಿಗೆ ಬರುವಂತೆ ಕಳುಹಿಸಿಕೊಡಲಾಗುವುದು.

(ದೋಷವಿರುವ ಧ್ವನಿಸುರುಳಿಗಳ ಬಗ್ಗೆ, ಖರೀದಿಸಿದ ಆರು ತಿಂಗಳೊಳಗಾಗಿ, ಭವನದ ಗಮನಕ್ಕೆ ತಂದಲ್ಲಿ ಭವನದ ಖರ್ಚಿನಿಂದಲೇ ದೋಷವಿಲ್ಲದ ಧ್ವನಿಸುರುಳಿಗಳನ್ನು ಕಳುಹಿಸಿ ಕೊಡಲಾಗುವುದು.)

## ಶಿವಮೊಗ್ಗ ಜಿಲ್ಲಾ ಗಮಕ ಸಮ್ಮೇಳನ : ಸಂಕೇತಿ ಸಂಗಮ : ಫೆಬ್ರವರಿ ೨೦೦೨

ಶಿವಮೊಗ್ಗದಲ್ಲಿ ಜನವರಿ ಹನ್ನೆರಡರಂದು ನಡೆದ ಪ್ರಥಮ ಶಿವಮೊಗ್ಗ ಜಿಲ್ಲಾ ಗಮಕ ಸಮ್ಮೇಳನಾಧ್ಯಕ್ಷರಾಗುವ ಗೌರವ **ಗಮಕ ಸಿಂಧು** ಹೊಸಹಳ್ಳಿ ಕೇಶವಮೂರ್ತಿಗಳಿಗೆ ದೊರೆತಿದ್ದು ಸಂಕೇತಿಗಳೆಲ್ಲ ಹೆಮ್ಮೆ ಪಡುವಂತಾಗಿದೆ. ಪುರಾತನ ಕಲಾಪರಂಪರೆಯಾದ ಗಮಕವನ್ನು ಉಳಿಸಿ-ಬೆಳೆಸುವ ದೃಷ್ಟಿಯಿಂದ ಅದನ್ನು ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಬೇಕು ಎಂದು ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರೆ ನೀಡಿದರು. ಶಿವಮೊಗ್ಗ ಜಿಲ್ಲಾ ಗಮಕ ಕಲಾ ಪರಿಷತ್ತು ಆಯೋಜಿಸಿದ್ದ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಅವರು, ಯುವಪೀಳಿಗೆಯು ನಮ್ಮ ಶ್ರೇಷ್ಠ ಪರಂಪರೆ, ಸಂಸ್ಕೃತಿಯಿಂದ ವಿಮುಖವಾಗುತ್ತಿರುವ ಹಿನ್ನೆಲೆಯಲ್ಲಿ *ಈ* ಪರಂಪರೆಗಳನ್ನು ಉಳಿಸಿ-ಬೆಳೆಸುವ ದೃಷ್ಟಿಯಿಂದ ರಚನಾತ್ಮಕ ಹಾಗೂ ದೃಢ ನಿರ್ಧಾರಗಳನ್ನು ಕೈಗೊಳ್ಳುವುದು ಅತೀ ಅಗತ್ಯವಾಗಿದೆ ಎಂದರು. ಒಂದು ದಿನದ *ಈ* ಸಮ್ಮೇಳನವನ್ನು ಉದ್ಘಾಟಿಸಿದ ಹಿರಿಯ ಗಮಕಿ ಪ್ರಿಯದರ್ಶಿನಿ ಅಯ್ಯಂಗಾರ್‌ರವರು, ಮನಸ್ಸನ್ನು ಚೇತೋಹಾರಿಯಾಗಿಸುವ, ಬುದ್ಧಿಮತ್ತೆಯನ್ನು ಹೆಚ್ಚಿಸುವ ಗಮಕ ಕಲೆಯನ್ನು ಮಕ್ಕಳಲ್ಲಿ ರೂಢಿಸುವುದರಿಂದ ಅವರಲ್ಲಿ ಜ್ಞಾನವೃದ್ಧಿಯಾಗುತ್ತದೆ ಎಂದರು. ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಡಾ. ಎ.ಎಸ್. ವೇಣುಗೋಪಾಲ ರಾವ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕತ್ತಿಗೆ ಚನ್ನಪ್ಪ, ಕೈಗಾರಿಕೋದ್ಯಮಿ ಟಿ.ವಿ. ನಾರಾಯಣಶಾಸ್ತ್ರೀ ಹಾಗು ಶ್ರೀ ಗಿರಿಮಾಜಿ ರಾಜಗೋಪಾಲ್ ಆಗಮಿಸಿ, *ಈ* ಕಲಾಪರಂಪರೆಯನ್ನು ಉಳಿಸಿ ಬೆಳೆಸುವ ಚಿಂತನೆಗಳನ್ನು ಗಮಕ ಕಲಾಭಿಮಾನಿಗಳ ಮುಂದಿಟ್ಟರು. ಶಿವಮೊಗ್ಗದ ಪ್ರಮುಖ ಬೀದಿಗಳಲ್ಲಿ ನಡೆದ ಸಮ್ಮೇಳನಾಧ್ಯಕ್ಷರ ಶೋಭಾಯಾತ್ರೆ ಸಾರ್ವಜನಿಕರ ಗಮನವನ್ನು ಗಮಕದತ್ತ ಸೆಳೆಯುವಲ್ಲಿ ಸಫಲವಾಯಿತು. ಸಮ್ಮೇಳನದಲ್ಲಿ ನಡೆದ ವಿವಿಧ ಗೋಷ್ಠಿಗಳಿಗೆ ಶ್ರೀ ಹೊಸಬಾಳೆ ಸೀತಾರಾಮರಾವ್, ಪ್ರೊ. ಪಾಂಡುರಂಗ ಉಡುಪ, ವೇ. ಶ್ರೀ ಮಾರ್ಕಂಡೇಯ ಅವಧಾನಿ ಅವರುಗಳು ಅಧ್ಯಕ್ಷರಾಗಿ ಸಮ್ಮೇಳನದಲ್ಲಿ ಭಾಗವಹಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬರಗೂರು ರಾಮಚಂದ್ರಪ್ಪ ಅವರು ಗೋಷ್ಠಿಯೊಂದರಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಗಮಕವನ್ನು ಜನಪ್ರಿಯಗೊಳಿಸುವ ಬಗೆಗೆ ಮಾತನಾಡಿದರು. ಜಿಲ್ಲಾಸಮ್ಮೇಳನ ಯಶಸ್ವಿಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ ಜಿಲ್ಲಾಪರಿಷತ್ ಗೌರವಾಧ್ಯಕ್ಷ ಶ್ರೀ ಟಿ.ಆರ್. ಅಶ್ವತ್ಥನಾರಾಯಣ್, ಕಾರ್ಯಾಧ್ಯಕ್ಷ ಹೊಸಹಳ್ಳಿ ರಾಜಾರಾಮಮೂರ್ತಿ, ಉಪಾಧ್ಯಕ್ಷ ಪ್ರೊ. ಎಲ್.ಎಂ.ಎಲ್.ಶಾಸ್ತ್ರೀ, ಕಾರ್ಯದರ್ಶಿ ಶ್ರೀಮತಿ ಸಿ.ವಿ. ಶ್ರೀಮತಿ, ಖಜಾಂಚಿ ಡಾ. ಎ.ಎಸ್.ವತ್ಸಲಾ, ಸಂಚಾಲಕ ಶ್ರೀ ಎಚ್.ಆರ್.ಸುಬ್ರಹ್ಮಣ್ಯಶಾಸ್ತ್ರೀ ಇವರುಗಳು ವಿಶೇಷ ಅಭಿನಂದನೆಗೆ ಅರ್ಹರು.

## ಕ್ರಾಂತಿಪುರುಷರಿಗೆ ಸನ್ಮಾನ : ಸಂಕೇತಿ ಸಂಗಮ : ಫೆಬ್ರವರಿ, ೨೦೦೨

ಕನ್ನಡದ ಕವಿ ಕುಮಾರವ್ಯಾಸ ಜಯಂತಿ ಪ್ರಯುಕ್ತ ವ್ಯಾಖ್ಯಾನ ಭಾಸ್ಕರ ಮತ್ತೂರು ಕೃಷ್ಣಮೂರ್ತಿ ಹಾಗು ಗಮಕ ಗಂಧರ್ವ ಹೊಸಹಳ್ಳಿ ಕೇಶವಮೂರ್ತಿ ದಂಪತಿಗಳನ್ನು ಸಾಂಪ್ರದಾಯಿಕ ರೀತಿಯಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಉದಯ ಟಿ.ವಿ.ಯಲ್ಲಿ ಪ್ರಸಾರವಾಗುತ್ತಿರುವ ಕುಮಾರವ್ಯಾಸ ಭಾರತ ವಾಚನ ವ್ಯಾಖ್ಯಾನ ಕಾರ್ಯಕ್ರಮ ೧೦೦೦ ಕಂತು ಪೂರೈಸಿದ ಸಂದರ್ಭವೂ ಜತೆಗೂಡಿ ಸಮಾರಂಭಕ್ಕೊಂದು ವಿಶೇಷ ಮೆರುಗು ತಂದಿತ್ತು.

ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ ೬.೧.೦೨, ಭಾನುವಾರ ಏರ್ಪಡಿಸಿದ್ದ ಸುಂದರ ಸಮಾರಂಭದಲ್ಲಿ ಮಾಜಿ ಪ್ರಧಾನಿ ಶ್ರೀ ಎಚ್.ಡಿ.ದೇವೇಗೌಡ ಅವರು ವಿದ್ವಾಂಸರಿಗೆ ಶಾಲು ಹೊದೆಸಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ದೇವೇಗೌಡ ಅವರು, "ಹೆಮ್ಮೆಯ ಕವಿ ಕುಮಾರವ್ಯಾಸನನ್ನು ಕನ್ನಡಿಗರ ಮನೆಮನೆಗೆ ಮುಟ್ಟಿಸಿದ ಕೀರ್ತಿ *ಈ* ಇಬ್ಬರು ವಿದ್ವಾಂಸರಿಗೆ ಸಲ್ಲಬೇಕು. ಕುಮಾರವ್ಯಾಸ ಭಾರತ ಧ್ವನಿಸುರುಳಿಗಳ ಮೂಲಕ ಕ್ರಾಂತಿಯನ್ನೇ ಮಾಡಿದ ಇವರು ಟಿ.ವಿ. ಮೂಲಕವೂ ಮನೆ ಮನಗಳನ್ನು ತಲುಪಿದರು" ಎಂದು ಅಭಿನಂದಿಸಿದರು. "ನಮ್ಮ ಹೆಗ್ಗಳಿಕೆಯ ಕವಿಗಳಾದ ಪಂಪ ಹಾಗೂ ಕುಮಾರವ್ಯಾಸರ ಹಾಗೆಯೇ *ಈ* ಇಬ್ಬರೂ ತೋರುತ್ತಾರೆ. ಭಾರತೀಯ ಸಂಸ್ಕೃತಿಯ ಬಗ್ಗೆ ಯುವಜನರು ಆಸಕ್ತಿ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಹೊಸ ಎಚ್ಚರವನ್ನು ಮೂಡಿಸಿದ ಇಂಥವರ ಸೇವೆ ಎಂದೆಂದೂ ಸ್ಮರಣೀಯ" ಎಂದು ಬಣ್ಣಿಸಿದರು.

"'ಇಂಗ್ಲೆಂಡಿನ ಪ್ರಸಿದ್ಧ ಕವಿ, ಚಿಂತಕ, ಶಿಕ್ಷಣತಜ್ಞ ಮ್ಯಾಥ್ಯೂ ಆರ್ನಾಲ್ಡ್ ಸಂಸ್ಕೃತಿಯನ್ನು ವರ್ಣಿಸಲು ಒಂದು ಸೊಗಸಾದ ಇಂಗ್ಲಿಷ್ ಪದಬೃಂದವನ್ನು ಬಳಸಿದ - Sweetness and Light - ಮಾಧುರ್ಯ ಮತ್ತು ಪ್ರಭೆ. ಕುಮಾರವ್ಯಾಸನ ಮೇರುಕೃತಿಯ ಮಾಧುರ್ಯವನ್ನು ಶ್ರೀ ಕೇಶವಮೂರ್ತಿಗಳು ಕೇಳಿಸುತ್ತಾರೆ, ಆ ಕೃತಿಯ ಪ್ರಭೆಯನ್ನು ಶ್ರೀ ಮತ್ತೂರು ಕೃಷ್ಣಮೂರ್ತಿಗಳು ಕಾಣಿಸುತ್ತಾರೆ. ಒಟ್ಟಾಗಿ ಶ್ರೋತೃಗಳಿಗೆ ಹಬ್ಬ," ಹೀಗೆಂದವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ವಿಮರ್ಶಕ ಪ್ರೊ. ಎಲ್.ಎಸ್.ಶೇಷಗಿರಿರಾವ್ ಅವರು. ಇದೊಂದು ಶ್ರೇಷ್ಠ ಕನ್ನಡ ಕೆಲಸ ಎಂದು ಅವರು ವ್ಯಾಖ್ಯಾನಿಸಿದರು.

ಮತ್ತೂರು ಮಾರ್ಕಂಡೇಯ ಅವಧಾನಿ ಅವರು ಅಭಿನಂದನಾ ಭಾಷಣ ಮಾಡಿ ಕಲಾವಿದರಿಬ್ಬರನ್ನೂ ಮುಕ್ತಕಂಠದಿಂದ ಪ್ರಶಂಸಿಸಿದರು. ಕರ್ನಾಟಕ

ಗಮಕಕಲಾ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ.ನಾರಾಯಣ ಪ್ರಾಸ್ತಾವಿಕ ಮಾತುಗಳನ್ನಾಡಿ ಸರ್ವರನ್ನೂ ಸ್ವಾಗತಿಸಿದರು.

### ಸಮಾರಂಭ ಕುರಿತು

ಮಹಾಭಾರತ, ರಾಮಾಯಣ ಮುಂತಾದ ಕಾವ್ಯಗಳು ನಮ್ಮ ನಿತ್ಯಜೀವನದ ನೈತಿಕ ಮಟ್ಟವನ್ನು ಹೆಚ್ಚಿಸಲು ಯಾವ ರೀತಿ ಮಾರ್ಗದರ್ಶನ ಮಾಡಬಲ್ಲವು ಎಂಬುದರ ಅರಿವು ಇಂತಹ ಕಾರ್ಯಕ್ರಮಗಳಿಂದ ಉಂಟಾಗುವುದು. ವಿದ್ವಾನ್ ಸರ್ವತ್ರ ಪೂಜ್ಯತೇ ಎಂಬ ಮಾತಿಗೆ ಇವರಿಬ್ಬರ ಜೀವನ ಸಾಧನೆಯೇ ಸಾಕ್ಷಿ. *ಈ* ರೀತಿಯ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿರುವವರಿಗೆ ಹಣಕಾಸಿನ ಖರ್ಚಿಲ್ಲ, ರೇಷನ್ ಕಾರ್ಡ್ ಬೇಕಿಲ್ಲ, ಬ್ಲಾಕ್ ಮಾರ್ಕೆಟ್ ಸರಕಲ್ಲ, ಮನದೊಳಗೆ ಇಹುದಲ್ಲ ಎಂಬ ಆನಂದದ ಅರಿವು ಉಂಟಾಗುವುದು ಖಚಿತ.

ಒಟ್ಟಿನಲ್ಲಿ ಮತ್ತೂರು ಮತ್ತು ಹೊಸಹಳ್ಳಿ *ಈ* ಗ್ರಾಮಗಳನ್ನು ಭಾರತದ ಭೂಪಟದ ಮೇಲೆ ಗುರುತು ಮಾಡಿಸಿರುವ *ಈ* ಇಬ್ಬರು ಮಹಾನ್ ವ್ಯಕ್ತಿಗಳಿಗೆ ನಮೋ! ನಮೋ!

**ಪ್ರೊ. ವಿ.ಕೆ. ದೊರೆಸ್ವಾಮಿ**
*ಕೌ.ಸಂ.ಸಂ.ದ ಮಾಜಿ ಅಧ್ಯಕ್ಷರು*

### ಕಲಾವಿದರನ್ನು ಕುರಿತು

ಅರುವತ್ತೆಂಟು ವರ್ಷ ವಯಸ್ಸಿನ ಶ್ರೀ ಹೊಸಹಳ್ಳಿ ಕೇಶವಮೂರ್ತಿಗಳು ಬಾಲ್ಯದಲ್ಲಿಯೇ ಸಂಸ್ಕೃತ, ವೇದ ಮತ್ತು ಪುರಾಣಗಳನ್ನು ಕಲಿತವರು. ಸಂಗೀತವನ್ನು ಅಭ್ಯಾಸ ಮಾಡಿದವರು. ಅವರಿಗೆ ದೈವದತ್ತವಾದ ಮಧುರ ಶಾರೀರವಿದೆ, ಶಾಸ್ತ್ರಜ್ಞಾನವಿದೆ, ಸಹೃದಯತೆ ಇದೆ, ಪಾತ್ರಗಳ ಮತ್ತು ಸನ್ನಿವೇಶಗಳ ಭಾವಗಳನ್ನು ತಾವು ಅನುಭವಿಸಿ ಇತರರೂ ಅನುಭವಿಸುವಂತೆ ಗಮಕವಾಚನ ಮಾಡಬಲ್ಲ ಸಾಮರ್ಥ್ಯವಿದೆ.

ಎಪ್ಪತ್ತೆರಡರ ತರುಣ ಶ್ರೀ ಮತ್ತೂರು ಕೃಷ್ಣಮೂರ್ತಿಯವರು ಹಲವು ಕ್ಷೇತ್ರಗಳಲ್ಲಿ ಹಿರಿಯ ಸಾಧಕರು. **ತರುಣ** ಎನ್ನುವ ಪದವನ್ನು ಯೋಚನೆ ಮಾಡಿಯೇ ಬಳಸುತ್ತಿದ್ದೇನೆ. ಅವರ ಅನುಭವದ ಶ್ರೀಮಂತಿಕೆ, ಮಾತಿನ ಸೊಗಸು - ಪರಿಪಕ್ವತೆಗಳಿಂದ ಅವರು ಎಪ್ಪತ್ತೆರಡು ವರ್ಷಗಳ ವಯಸ್ಸಿನ ಹಿರಿಯರು ಎನ್ನಿಸುತ್ತದೆ ಅಷ್ಟೇ: ಪ್ರವಾಸಗಳು, ಸಭೆಗಳು, ಗಮಕವ್ಯಾಖ್ಯಾನ ಸಭೆಗಳು, ಆಡಳಿತದ ನಿರ್ವಹಣೆ, ಹೊಸ ಯೋಜನೆಗಳ ನೀಲಿನಕ್ಷೆಗಳ ಸಿದ್ಧತೆ, ಪ್ರಾರಂಭವಾದ ಯೋಜನೆಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವಿಕೆ, ಪ್ರಕಟಣೆಗಳ ಸರಣಿಗಳು, ದೂರದರ್ಶನದ ಕಾರ್ಯಕ್ರಮಗಳು, ಭಾಷಣಗಳು, ಬಂದವರೊಡನೆ ಮಾತುಕತೆಗಳು, ಅಧ್ಯಯನ, ಎಲ್ಲವನ್ನೂ ಅವರು ನಿರ್ವಹಿಸುವ ಶೈಲಿಯನ್ನು ಕಂಡಾಗ ದೇವರು ಅವರಿಗೆ ದಿವಸಕ್ಕೆ ಎಪ್ಪತ್ತೆರಡು ಗಂಟೆಗಳನ್ನು ಅನುಗ್ರಹಿಸಿದ್ದಾನೋ ಎಂದು ಅನುಮಾನವಾಗುತ್ತದೆ. *ಈ* ಎಪ್ಪತ್ತೆರಡರ ಚೈತನ್ಯದ ಚಿಲುಮೆಯು ಇಪ್ಪತ್ತೆರಡರ ಯುವಕರನ್ನು ಬೆರಗು ಮಾಡುತ್ತದೆ.

***ಪ್ರೊ.ಎಲ್.ಎಸ್. ಶೇಷಗಿರಿರಾವ್***
*ನಾಡಿನ ಹೆಸರಾಂತ ವಿಮರ್ಶಕರು*

## ರಾಜ್ಯೋತ್ಸವದ ಮಕುಟ : ಸಂಕೇತಿ ಸಂಗಮ : ನವೆಂಬರ್ ೨೦೦೨

ಹೊಸಹಳ್ಳಿಯ ಗಮಕಕಲಾ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ, **ಗಮಕ ಸಿಂಧು, ಗಮಕ ಗಂಧರ್ವ, ಗಮಕ ಕಲಾ ಕೋಕಿಲ, ಗಮಕ ಗಾನ ವಾರಿಧಿ, ಕರ್ನಾಟಕ ಕಲಾ ತಿಲಕ, ಗಮಕ ಕೇಸರಿ** ಇತ್ಯಾದಿ ಬಿರುದಾಂಕಿತರಾದ ಎಚ್.ಆರ್. ಕೇಶವಮೂರ್ತಿ ಇವರು ಘನ ಕರ್ನಾಟಕ ಸರ್ಕಾರವು ನೀಡುವ "ಕನ್ನಡ ರಾಜ್ಯೋತ್ಸವ - ೨೦೦೨"ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿರುವ ಸುದ್ದಿ ಇದೀಗ ತಾನೆ ಪ್ರಕಟವಾಗಿದೆ. ಇದು ಸಂಕೇತಿಗಳೆಲ್ಲರಿಗೆ ಅತ್ಯಂತ ಹರ್ಷದ ಸುದ್ದಿಯಾಗಿದೆ.

ಗಮಕ ಕ್ಷೇತ್ರದಲ್ಲಿ ಎಚ್.ಆರ್.ಕೆ. ಅವರ ಸಾಧನೆಗಳು ಹಲವಾರು. ಸುಮಾರು ಐವತ್ತು ವರ್ಷಗಳಿಂದ ಗಮಕದ ತಪಸ್ಸಿನಲ್ಲಿ ತೊಡಗಿರುವ *ಈ* **ಗಾನಋಷಿ**ಗೆ ಗಮಕವೇ ಸರ್ವಸ್ವ. ೧೯೮೫ರಲ್ಲಿ ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳೊಂದಿಗೆ, ಅನಂತರ ೧೯೮೫ರಲ್ಲಿ ಪೂಜ್ಯ ಮತ್ತೂರು ಕೃಷ್ಣಮೂರ್ತಿಗಳೊಂದಿಗೆ ಕುಮಾರವ್ಯಾಸ ಭಾರತದ ಸಮಗ್ರ ಧ್ವನಿಮುದ್ರಿಕೆಗೆ ಕಂಠದಾನ ಮಾಡಿರುವ ಶ್ರೀಯುತರ ಸಾಧನೆ **ಗಿನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್**‌ಗೆ ಸೇರಬಹುದಾದ್ದು. ಜತೆಗೆ ಪೂಜ್ಯ ಮಾರ್ಕಂಡೇಯ ಅವಧಾನಿಗಳೊಂದಿಗೆ ಜೈಮಿನಿ ಭಾರತದ ಧ್ವನಿಮುದ್ರಿಕೆಯಲ್ಲಿ ಪಾಲ್ಗೊಂಡಿರುವ ಕೇಶವಮೂರ್ತಿಗಳು ಇದೀಗ ಸತತ ನಾಲ್ಕು ವರ್ಷಗಳಿಂದ ಉದಯ ಟಿ.ವಿ.ಯ **ಶುಭೋದಯ** ಕಾರ್ಯಕ್ರಮದಲ್ಲಿ ಮತ್ತೂರ್‌ಜೀ ಅವರೊಡನೆ ಕಿರುತೆರೆಯಲ್ಲಿ ಮಿಂಚುತ್ತಿದ್ದಾರೆ.

ಹೊಸಹಳ್ಳಿಯ ಹಿರಿಯ ವಿದ್ವಾಂಸರಾದ ವೇದಮೂರ್ತಿ ರಾಮಸ್ವಾಮಿ ಶಾಸ್ತ್ರೀ ಹಾಗೂ ಶ್ರೀಮತಿ ಲಕ್ಷ್ಮೀದೇವಮ್ಮ ಇವರ ಸುಪುತ್ರರಾದ ಎಚ್.ಆರ್.ಕೆ. ಅವರು *ಈ* ಹಿಂದೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಹಾಗೂ ಇತರ ಅನೇಕ ಸಂಘ ಸಂಸ್ಥೆಗಳಿಂದ ಸಂಮಾನಿತರಾಗಿದ್ದು ಅವೆಲ್ಲಕ್ಕೂ ಮಕುಟಪ್ರಾಯವಾಗಿ ಇಂದು **ರಾಜ್ಯೋತ್ಸವ ಪುರಸ್ಕಾರ** ದೊರಕಿರುವುದು ಅತ್ಯಂತ ಯೋಗ್ಯವಾಗಿದೆ. *ಈ* ಸುಸಂದರ್ಭದಲ್ಲಿ ಮಾನನೀಯ ಎಚ್.ಆರ್. ಕೇಶವಮೂರ್ತಿ ಹಾಗೂ ಅವರ ಪತ್ನಿ ಶ್ರೀಮತಿ ರಾಜೇಶ್ವರೀ ಅವರಿಗೆ ಅನೇಕ ಶುಭಕಾಮನೆಗಳನ್ನು ಪತ್ರಿಕೆ ಸಲ್ಲಿಸುತ್ತದೆ.

## ಪ್ರಶಸ್ತಿ ಕುರಿತು ಪ್ರತಿಕ್ರಿಯೆಗಳು

ಕಳೆದ ಎಂಟು ವರ್ಷಗಳಿಂದ ನಾನು ಹೊಸಹಳ್ಳಿ ಕೇಶವಮೂರ್ತಿಯವರೊಂದಿಗೆ ಅನೇಕ ಗಮಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇನೆ. ಅವರ ವಾಚನವೊಂದು ಅದ್ಭುತ ಪ್ರತಿಸೃಷ್ಟಿ. ಗಮಕ ಕಲೆಗೆ ಘನತೆ, ಗೌರವ ತಂದುಕೊಟ್ಟ ಬಹು ಎತ್ತರದ ಕಲಾವಿದರವರು. ಅವರ ಕಲಾ ಸೇವೆಗೆ *ಈ* ಪ್ರಶಸ್ತಿ ಎಂದೋ ದೊರೆಯಬೇಕಿತ್ತು. *ಈ*ಗಲಾದರೂ ನಮ್ಮ ಘನ ಸರಕಾರ ಅವರ ಸೇವೆಯನ್ನು ಗುರುತಿಸಿರುವುದು ಸಮಾಧಾನ, ಸಂತಸ ತಂದಿದೆ.

*ಬೆಂಗಳೂರು* ***ಮತ್ತೂರು ಕೃಷ್ಣ ಮೂರ್ತಿ***

ಗಮಕ ಕಲೆ ಇಂದು *ಈ* ಮಟ್ಟದಲ್ಲಿ ಜನರನ್ನು ತಲುಪಿರುವುದು ಹಾಗೂ ಜನಾದರ ಗಳಿಸಿರುವುದು ಕೇಶವಮೂರ್ತಿಗಳಂಥ ಗಮಕಿಗಳಿಂದ. ಮೂರ್ತಿ **ಕಲಾಬ್ರಹ್ಮ**! ಕಳೆದ ಐದು ದಶಕಗಳಿಂದ ಗಮಕ ಸೇವೆಯಲ್ಲಿ ಅಹರ್ನಿಶಿ ತೊಡಗಿಕೊಂಡಿರುವ ಅವರು ಗಮಕ ವಾಚನಕ್ಕೆ ಹೊಸ ದೃಷ್ಟಿನೀಡಿ ದಿಕ್ಕುತೋರಿದ ಅನುಪಮ ಕಲಾವಿದ. ತಡವಾಗಿಯಾದರೂ ಬಂದ **ರಾಜ್ಯೋತ್ಸವ ಪ್ರಶಸ್ತಿ** ಸಂತಸ ನೀಡಿದೆ. ರಾಷ್ಟ್ರಮಟ್ಟದಲ್ಲೂ ಇವರ ಸೇವೆ ಗುರುತಿಸಲ್ಪಡಬೇಕು.

*ಮತ್ತೂರು* ***ಮಾರ್ಕಂಡೇಯ ಅವಧಾನೀ***

## ಎಚ್ಚಾರ್ಕೆ ಅವರಿಗೆ ಸನ್ಮಾನಗಳ ಸರಮಾಲೆ : ಸಂಕೇತಿ ಸಂಗಮ : ಜನವರಿ ೨೦೦೩

ಇತ್ತೀಚೆಗೆ ಗಮಕಕ್ಷೇತ್ರದಲ್ಲಿ ರಾಜ್ಯಪ್ರಶಸ್ತಿಯನ್ನು ಪಡೆದ ಹೊಸಹಳ್ಳಿಯ ಖ್ಯಾತ ಗಮಕಿ **ಗಮಕ ಗಂಧರ್ವ** ಎಚ್.ಆರ್. ಕೇಶವಮೂರ್ತಿ ಅವರಿಗೆ ಅಭಿನಂದನೆಗಳ, ಸನ್ಮಾನಗಳ ಮಹಾಪೂರ ಎಲ್ಲೆಡೆಯಿಂದ ಹರಿದುಬರುತ್ತಿದೆ.

ಶಿವಮೊಗ್ಗದ ಶ್ರೀಶೃಂಗೇರಿ ಶಂಕರಮಠ, ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಕೃಷ್ಣದೇವರಾಯ ಕನ್ನಡ ಸಂಘ, ಕರ್ನಾಟಕ ಗಮಕಕಲಾ ಪರಿಷತ್ತಿನ ಶಿವಮೊಗ್ಗ ಜಿಲ್ಲಾ ಶಾಖೆ, ಬೆಂಗಳೂರಿನ ಭಾರತೀಯ ವಿದ್ಯಾಭವನ ಇತ್ಯಾದಿ ಸಂಘ-ಸಂಸ್ಥೆಗಳು ಕಳೆದ ತಿಂಗಳು ಹಾರ್ದಿಕವಾಗಿ ಅಭಿನಂದಿಸಿ ಸನ್ಮಾನಿಸಿದವು.

ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಗಿರೀಶ್ ಕಾಸರವಳ್ಳಿ ಅವರೊಂದಿಗೆ ನಡೆದ ಅಭಿನಂದನಾ ಸಮಾರಂಭದಲ್ಲಿ ನಾಡಿನ ಖ್ಯಾತ ಬರಹಗಾರ ನಾ.ಡಿಸೋಜ, ಅಭಿನಂದನಾ ಭಾಷಣ ಮಾಡಿದರು. ಕರ್ನಾಟಕ ಗಮಕಕಲಾ ಪರಿಷತ್ತಿನ ಶಿವಮೊಗ್ಗ ಜಿಲ್ಲಾಶಾಖೆಯ ಗೌರವಾಧ್ಯಕ್ಷರಾದ ಶ್ರೀ ಟಿ.ಆರ್. ಅಶ್ವತ್ಥನಾರಾಯಣ ಅಧ್ಯಕ್ಷತೆ ವಹಿಸಿದ್ದರು. ನಗರದ ಹದಿನೆಂಟು ಪ್ರತಿಷ್ಠಿತ ಸಂಘ ಸಂಸ್ಥೆಗಳು ಸಹಯೋಗ ನೀಡಿದ್ದ *ಈ* ಅದ್ದೂರಿಯ ಅಭಿನಂದನಾ ಸಮಾರಂಭದಲ್ಲಿ ಶಿವಮೊಗ್ಗೆಯ ಜಿಲ್ಲಾಧಿಕಾರಿ ಶ್ರೀ ತುಷಾರಗಿರಿನಾಥ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅನಂತರ ನಡೆದ ಕಾವ್ಯವಾಚನ ಕಾರ್ಯಕ್ರಮದಲ್ಲಿ ಮತ್ತೂರಿನ ಶ್ರೀ ಅನಂತನಾರಾಯಣ ವಾಚನ ಮಾಡಿದರೆ ಪ್ರೊ|| ಎಂ.ಎಲ್. ಚನ್ನಕೇಶವ ಶಾಸ್ತ್ರೀ ವ್ಯಾಖ್ಯಾನ ಮಾಡಿದರು.

ಬೆಂಗಳೂರಿನ ಭಾರತೀಯ ವಿದ್ಯಾಭವನದ ನ್ಯಾ. ಇ.ಎಸ್. ವೆಂಕಟರಾಮಯ್ಯ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಪತ್ರಕರ್ತರೂ, ಮುತ್ಸದ್ದಿಗಳೂ, ವಿಚಾರವೇತ್ತರೂ ಆದ ಶ್ರೀ ದೇಶಹಳ್ಳಿ ಜಿ. ನಾರಾಯಣ ಅವರು ವಹಿಸಿದ್ದರು. ಶ್ರೀ ಮತ್ತೂರು ಕೃಷ್ಣಮೂರ್ತಿಯವರು ಪ್ರಾಸ್ತಾವಿಕ ಭಾಷಣ ಮಾಡಿದರೆ ವಿದ್ವಾನ್ ಮಾರ್ಕಂಡೇಯ ಅವಧಾನಿಗಳು ಅಭಿನಂದನಾ ಭಾಷಣ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಜಿ. ನಾರಾಯಣ ಅವರು ಶ್ರೀ ಕೇಶವಮೂರ್ತಿಯವರ ಸೇವೆಯನ್ನು ಕೊಂಡಾಡಿ ಪ್ರಾಸಂಗಿಕವಾಗಿ ಸಂಕೇತಿಗಳನ್ನು ಕುರಿತು ತುಂಬ ಒಳ್ಳೆಯ ಮಾತುಗಳನ್ನು ಹೇಳಿ ಸಂಕೇತಿ ಪತ್ರಿಕೆಯಾದ **ಸಂಗಮ**ವನ್ನು ಬಾಯಿ ತುಂಬ ಹೊಗಳಿದರು - "ಇದೊಂದು ಉತ್ತಮ ಪತ್ರಿಕೆಯಾಗಿದ್ದು ಸಂಕೇತಿಗಳೆಲ್ಲರೂ ಇದರ ಚಂದಾದಾರರಾಗಿ, ಸದಸ್ಯರಾಗಿ, ಪೋಷಕರಾಗಿ *ಈ* ಪತ್ರಿಕೆಯನ್ನು ಬೆಳೆಸಬೇಕೆಂದು" ಕರೆ ನೀಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ

ಶ್ರೀ ಎಚ್ಚಾರ್ಕೆ ಅವರೊಂದಿಗೆ **ಸಂವಾದ** ಏರ್ಪಡಿಸಲಾಗಿತ್ತು. ಕಾವ್ಯವಾಚನ ಕಾರ್ಯಕ್ರಮದಲ್ಲಿ ಮತ್ತೂರಿನ ಡಾ. ಸನತ್ಕುಮಾರ ವಾಚನವನ್ನೂ ಶ್ರೀ ರಾಜಾರಾಮಮೂರ್ತಿ ವ್ಯಾಖ್ಯಾನವನ್ನೂ ನಡೆಸಿಕೊಟ್ಟರು. ಆತ್ಮೀಯ ವಾತಾವರಣದಲ್ಲಿ ನಡೆದ *ಈ* ಸಮಾರಂಭ ಎಲ್ಲರಿಗೂ ಖುಷಿ ಕೊಟ್ಟಿತು.

## ೪. ಅಭಿಪ್ರಾಯಗಳು

ನಾನು ದಾವಣಗೆರೆಯಲ್ಲಿದ್ದಾಗ ರಾಮಭದ್ರಶಾಸ್ತ್ರಿಗಳು ನನಗೆ ಆಪ್ತರಾಗಿದ್ದರು. ಅವರ ಅಣ್ಣಂದಿರೂ ಪ್ರವಚನ ಚಕ್ರವರ್ತಿ ಬಿರುದಾಂಕಿತರೂ ಆಗಿದ್ದ ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನವನ್ನು ಕೇಳಿ ಆನಂದಿಸಿದ್ದೆ. ಹಲವು ವರ್ಷಗಳನಂತರ, ಹೊಸಹಳ್ಳಿಯಲ್ಲಿ ಒಂದು ರಾತ್ರಿ ಲಕ್ಷ್ಮೀಕೇಶವಶಾಸ್ತ್ರಿಗಳು, ಶ್ರೀಗಳಾದ ಎಚ್.ಆರ್.ಕೇಶವಮೂರ್ತಿಗಳು, ಎಚ್.ಎಸ್. ಗೋಪಾಲ್, ರಾಜಾರಾಮಮೂರ್ತಿ ಇವರೊಡನೆ ನಡೆಸಿದ ಸಂವಾದ ನನಗೆ ಬಹು ಲಾಭದಾಯಕವಾಯಿತು. ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ವ್ಯಾಖ್ಯಾನವನ್ನು ನಾನು ದಾವಣಗೆರೆಯಲ್ಲಿ ಕೇಳಿದ್ದೆ. ಅವರು ಮತ್ತಿತರ ಅನೇಕ ಸಜ್ಜನರ ಉದ್ಯಮದಿಂದಾಗಿ ಇಂದು ಮತ್ತೂರು ಹೊಸಹಳ್ಳಿ ಗಮಕ ಕಲೆಯ ನಂದನವನವಾಗಿದೆ.

('ಕೆಲವು ನೆನಪುಗಳು' ಎಂಬ ಲೇಖನದಿಂದ) **ಅ. ರಾ. ಸೇ.**

ಗಮಕವೆಂದರೆ ಸಂಗೀತ - ಸಾಹಿತ್ಯಗಳ ರಸಾಯನ. ಇದರಲ್ಲಿ ಸಂಗೀತ - ಸಾಹಿತ್ಯಗಳು ಹಾಲುಸಕ್ಕರೆಯಂತೆ ಸುಮಧುರವಾಗಿ ಬೆರೆತಿರಬೇಕು. ಯಾವುದು ಹೆಚ್ಚಾದರೂ ಗಮಕದ ಅಂದ ಕೆಡುತ್ತದೆ.

(ತುಂಗ ಭದ್ರ) **ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರೀ**

ಒಮ್ಮೆ ಬಳ್ಳಾರಿ ಜಿಲ್ಲೆಯ ಎಮ್ಮಿಗನೂರಿನ, ಅಧಿಕಾರಿಗಳೂ ವಿದ್ವಾಂಸರೂ ಆದ ಶ್ರೀ ಕೆ. ರಂಗರಾಯರು ನನಗೆ ಹೇಳಿದ್ದರು: "ಡಾಕ್ಟರೇ, ನಮ್ಮ ಕೇಶವಮೂರ್ತಿಗಳು ಸಾಕ್ಷಾತ್ ವಸಿಷ್ಠ ಸ್ವರೂಪರು. ಅವರ ಪುರಾಣ ವಾಚನ (ಗಮಕ) ನಮಗೆ ಹೋಳಿಗೆ ಊಟಕ್ಕಿಂತ ಹೆಚ್ಚು ಪ್ರಿಯ. ನಿನ್ನೆಗೆ *ಈ* ವರ್ಷದ ಕಾರ್ಯಕ್ರಮ ಮುಗಿಯಿತು. ಮತ್ತೆ ಅವರ ವಾಚನ ಕೇಳಲು ಇನ್ನೂ ೩೬೪ ದಿನ ಕಾಯಬೇಕು. ನಾಳೆಗೆ ೩೬೩ ದಿನ, ಹೀಗೆ ದಿನ ಎಣಿಸುತ್ತ ಕಾಯುತ್ತಿರುತ್ತೇವೆ. ನೀವು ಹೊಸಹಳ್ಳಿಯ ಜನ ಪುಣ್ಯವಂತರು. ನಿತ್ಯ ನೋಡಬಹುದು, ಕೇಳಬಹುದು!"

(ತುಂಗ ಭದ್ರ) **ಡಾ. ವೆಂಕಟೇಶಮೂರ್ತಿ**

ಶ್ರೀ ಎಚ್.ಆರ್. ಕೇಶವಮೂರ್ತಿ ಅವರಿಗೆ ಅಭಿನಂದನೆ ಸಲ್ಲಿಸುವ ಯೋಜನೆಯ ವಿಚಾರ ತುಂಬ ಸಂತೋಷದಾಯಕ. ಅವರ ವಾಚನವನ್ನು ಕೇಳಿ ಮೆಚ್ಚಿರುವುದು ಮಾತ್ರವಲ್ಲ, ಮುಗ್ಧನಾಗಿದ್ದೇನೆ ನಾನು. ಆತ ಅದ್ಭುತ ಕಲಾವಿದರು.

(ತುಂಗ ಭದ್ರ) **ಪ್ರಸನ್ನ ಹೆಗ್ಗೋಡು**

ನಮ್ಮ ಕಾಲದ ಶ್ರೇಷ್ಠ ಗಮಕಿಗಳಾದ ಶ್ರೀ ಎಚ್.ಆರ್. ಕೇಶವಮೂರ್ತಿ ಹಾಗೂ ವ್ಯಾಖ್ಯಾನಕಾರರಾದ ಶ್ರೀ ಮಾರ್ಕಂಡೇಯ ಅವಧಾನಿ ಅವರು ತಮ್ಮ ಸಾರ್ಥಕ ಜೀವನಯಾತ್ರೆಯಲ್ಲಿ ಅರುವತ್ತರ ಮೈಲಿಗಲ್ಲನ್ನು ತಲುಪುತ್ತಿದ್ದಾರೆ. *ಈ* ಸಂದರ್ಭದಲ್ಲಿ ಅವರೀರ್ವರನ್ನು ಅಭಿನಂದಿಸುವುದು ಸಂತೋಷದ ಅವಕಾಶ, ಹಿಗ್ಗಿನ ಅವಕಾಶ. ತಮ್ಮ ಗಾಯನ ವ್ಯಾಖ್ಯಾನ ಕೌಶಲದಿಂದ *ಈ* ಇಬ್ಬರೂ ನಮ್ಮ ವಿಶಿಷ್ಟ ಕಲೆಯಾದ ಗಮಕಕ್ಕೆ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಆ ಮೂಲಕ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಗೆ ತಮ್ಮದೇ ಆದ ಅಮೋಘ ಕೊಡುಗೆಯನ್ನು ನೀಡುತ್ತಿದ್ದಾರೆ.

('ಗಮಕ ವಾಚನ - ವ್ಯಾಖ್ಯಾನ' ಎಂಬ ಲೇಖನದಿಂದ) **ನೀಲತ್ತಹಳ್ಳಿ ಕಸ್ತೂರಿ**

ಮುಖ್ಯವಾಗಿ ಆಧುನಿಕ ಮಹಾಕಾವ್ಯಗಳ ವಾಚನ ಕೈಂಕರ್ಯದಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್, ಶ್ರೀಮತಿ ಸುಕನ್ಯಾ ಪ್ರಭಾಕರ ಹಾಗೂ ಶ್ರೀ ಹೊಸಬಾಳೆ ಸೀತಾರಾಮರಾಯರು, ಶ್ರೀಯುತ ಹೊಸಹಳ್ಳಿ ಕೇಶವಮೂರ್ತಿಗಳು ಅಮೋಘ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಶಕುಂತಲಾಬಾಯಿಯವರ ಕಂಠಶ್ರೀಯ ಓಜಸ್ಸು, ಕೇಶವಮೂರ್ತಿಗಳ ಮಾಧುರ್ಯ, ರಾಯರ ಮಾರ್ದವತೆ, ಸುಕನ್ಯಾರ ಕಂಠದ ಲಾಲಿತ್ಯ ಅವು

ಸ್ವತಂತ್ರ-ವಿಶಿಷ್ಟ ಶೈಲಿಗಳನ್ನೇ ನಿರ್ಮಿಸುವಷ್ಟು ಸ್ವೋಪಜ್ಞವಾಗಿವೆ.
('ಆಧುನಿಕ ಮಹಾಕಾವ್ಯಗಳು ಮತ್ತು ಗಮಕ' ಎಂಬ ಲೇಖನದಿಂದ) **ಡಾ. ಎ.ಎಸ್. ವೇಣುಗೋಪಾಲರಾವ್**

ತರೀಕೆರೆಯ ದೇವಸ್ಥಾನದಲ್ಲಿ ಭಾರತವಾಚನ ಹಲವು ವರ್ಷಗಳಿಂದ ನಡೆಯುತ್ತಿದೆ. ಮೊದಲು ಲಕ್ಷ್ಮೀಕೇಶವಶಾಸ್ತ್ರಿಗಳು ವ್ಯಾಖ್ಯಾನಕ್ಕೆ ಬರುತ್ತಿದ್ದರು; ಅವರೊಂದಿಗೆ ವಾಚನಕ್ಕೆ ಮತ್ತೂರಿನ ಟಿ. ರಾಮಶಾಸ್ತ್ರಿಗಳು, ಕೆ.ಎಸ್.ವೆಂಕಟೇಶಯ್ಯನವರು, ತಿರುಮಲಾವಧಾನಿಗಳು, ಬೆಂಗಳೂರಿನ ಎಸ್.ವಾಸುದೇವರಾಯರು, ಹೊಸಹಳ್ಳಿಯ ಎಚ್.ಆರ್. ಕೇಶವಮೂರ್ತಿಗಳು, ಸೂರ್ಯನಾರಾಯಣ ಅವಧಾನಿಗಳು, ರಾಮಸ್ವಾಮಿ ಇತ್ಯಾದಿ ಹಲವರು ಬರುತ್ತಿದ್ದರು. ವಾಚನಕಾರರು ಬದಲಾಗುತ್ತಿದ್ದರೂ ವ್ಯಾಖ್ಯಾನಕಾರರು ಒಬ್ಬರೇ ! ಶ್ರೀ ಶಾಸ್ತ್ರಿಗಳು ಸೂರ್ಯ, ವಾಚನಕಾರರು ಗ್ರಹಗಳು. ಸ್ಥಿರ ಸೂರ್ಯನ ಸುತ್ತ ಚಲಿಸುವ ಗಮಕಿ ಗ್ರಹಗಳು!

ಕಾಲ ಬದಲಾಯಿತು. ಈಗ ವ್ಯಾಖ್ಯಾನದ ಜಾಗವನ್ನು ವಾಚನ ಆಕ್ರಮಿಸಿದೆ. ಶ್ರೀ ಕೇಶವಮೂರ್ತಿಗಳು ಈಗಿನ ಸೂರ್ಯ; ವ್ಯಾಖ್ಯಾನಕಾರರು ಬದಲಾಗುತ್ತಿರುತ್ತಾರೆ. ಸ್ಥಿರ ಗಮಕಿ ಸೂರ್ಯನ ಸುತ್ತ ಚಲಿಸುವ ವ್ಯಾಖ್ಯಾತೃ ಗ್ರಹಗಳು ! ಒಮ್ಮೆ ಲಕ್ಷ್ಮೀಕೇಶವಶಾಸ್ತ್ರಿಗಳು, ಇನ್ನೊಮ್ಮೆ ರಘುಪತಿ ಶಾಸ್ತ್ರಿಗಳು, ಮಾರ್ಕಂಡೇಯ ಅವಧಾನಿಗಳು, ರಾಜಾರಾಮಮೂರ್ತಿ, ಗೋಪಾಲ ಮುಂತಾದವರು.
(ತುಂಗ ಭದ್ರ) **ತರೀಕೆರೆ ಎನ್. ಮಂಜುನಾಥ್**

ಹಿರಿಯರೂ ಪೂಜ್ಯರೂ ಆದ ಕೀರ್ತಿಶೇಷ ವೇ|| ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನ ವೈಖರಿಯು ಗಮಕಿಗಳಿಗೆ ಮಾರ್ಗದರ್ಶನದ ಲಾಭ ನೀಡುತ್ತಿತ್ತು. ಸಮಕಾಲೀನರೂ, ಸಂಪ್ರದಾಯಬದ್ಧರೂ ಆದ ವೇ|| ಮಾರ್ಕಂಡೇಯ ಅವಧಾನಿಗಳ ಸಾಹಚರ್ಯವು ಬೆಂಬಲವಾಗಿರುತ್ತದೆ. ಆಧುನಿಕರೂ ಬಹು ಭಾಷಾ ದೇಶಜ್ಞರೂ ಆದ ಮತ್ತೂರು ಕೃಷ್ಣಮೂರ್ತಿಗಳ ಅಭಿನಯಪೂರ್ಣ ವಾಗ್ಮಿತೆಯಿಂದ ಅಕ್ಷರಶಃ ಸಾವಿರಾರು ಅಭಿಮಾನಿಗಳು ಹುಟ್ಟಿದ್ದು, ಈ ಕಲೆಗೆ ತಾರಾಮೌಲ್ಯವನ್ನು ತಂದಿದೆ ಎಂದರೆ ಕಿಂಚಿತ್ತೂ ಅತಿಶಯೋಕ್ತಿಯಲ್ಲ! ದೇವಸ್ಥಾನಗಳಲ್ಲಿ ಕಂಬಕ್ಕೆ ಒಬ್ಬರಂತೆ ವಿರಳವಾಗಿ ಕುಳಿತು ಕೇಳುತ್ತಿದ್ದ ಬೆರಳೆಣಿಕೆಯ ಶ್ರೋತೃವೃಂದವನ್ನು ನಾಲ್ಕಂಕೆಗೆ ಏರಿಸಿದ ಶ್ರೀ ಮತ್ತೂರರ ಮೋಡಿ ವಿಶಿಷ್ಟವಾದುದು.
(ಸಂಕೇತಿ ಸಂಗಮ : ವಿಶೇಷಾಂಕ, ಜುಲೈ ೨೦೦೦) ***ಎಚ್.ಆರ್. ಕೇಶವಮೂರ್ತಿ***

*ಕರ್ನಾಟಕದ ಅತಿ ಭವ್ಯವಾದ ಒಂದು ಸಂಸ್ಕೃತಿ-ಪರಂಪರೆಯನ್ನು ಪೋಷಿಸಿ, ಪ್ರಸರಣಗೊಳಿಸುತ್ತಿರುವ ಈ ಮಹನೀಯರಿಗೆ ಮನಸಾರೆ ಅಭಿನಂದಿಸುವ ತಮ್ಮೊಂದಿಗೆ ನಾನೂ ಇದ್ದೇನೆ ಎಂದು ಹೇಳಬಲ್ಲೆ. ಗಮಕ, ಕರ್ನಾಟಕಕ್ಕೆ ವಿಶಿಷ್ಟವಾದ ಜನಸಂಪರ್ಕ ಸಾಧನ; ಜನಸಂಸ್ಕರಣ ಸಾಧನ; ಜನರಂಜನ ಹಾಗೂ ಬೋಧನ ಸಾಧನ. ಕುಮಾರವ್ಯಾಸನ ಮಹತ್‌ಕೃತಿ ಇಂಥ ಗಮಕಿ-ವ್ಯಾಖ್ಯಾನಕಾರರ ಕಾರಣ ಕನ್ನಡದ ನೆಲದಲ್ಲಿ ಕುಣಿಕುಣಿದು ತೋರಿಸಿಕೊಳ್ಳುತ್ತಿದೆ. ನುಡಿದಂತೆ ನಡೆಯುತ್ತಿರುವ ಈ ಮಹನೀಯರಿಗೆ ನನ್ನ ವಂದನೆ*

***ಡಾ. ಎಚ್.ಕೆ. ರಂಗನಾಥ್***

## ಮತ್ತು - ಮುತ್ತು

*ಗಮಕಿಗಳ ಗಾಯನವು ತಂದಿರಲು ಮತ್ತು*
*ಸುಮತಿಗಳ ವರ್ಣನವು ತೆರೆದಂತೆ ಮುತ್ತು*
*ಬಳ್ಳಿಗಳು ಹಬ್ಬಿ ಬೆಳುದಿಂಗಳರಮನೆಗೆ*
*ಆಗುವುದು ಕರ್ಣರಸಾಯನದ ಹಿರಿಯ ಹೊತ್ತು*

***ಪೂಮಗಾಮೆ ಗೋಪಿ***

# ೮. ಲೇಖಕರು

1. ಡಾ. ಟಿ.ಎಸ್. ಕೃಷ್ಣಮೂರ್ತಿ, ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು, ೮೫, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೩
2. ಮತ್ತೂರು ಕೃಷ್ಣಮೂರ್ತಿ, ಭಾರತೀಯ ವಿದ್ಯಾಭವನ, ಬೆಂಗಳೂರು.
3. ಬಸವಾನಿ ರಾಮಶರ್ಮಾ, ಪತ್ರಿಕೋದ್ಯಮಿ, ಬಸವಾನಿ ಅಂಚೆ, ತೀರ್ಥಹಳ್ಳಿ ತಾ., ಶಿವಮೊಗ್ಗ ಜಿಲ್ಲೆ
4. ಗಮಕಿ ಎಂ. ರಾಘವೇಂದ್ರರಾವ್, ಉಪಾಧ್ಯಕ್ಷರು, ಕರ್ನಾಟಕ ಗ.ಕ.ಪ., ಬೆಂಗಳೂರು
5. ನ. ಕೃಷ್ಣಪ್ಪ, ದಕ್ಷಿಣಾಂಚಲ ಕ್ಷೇತ್ರೀಯ ಪ್ರಚಾರಕರು, ರಾ. ಸ್ವ. ಸಂಘ, ಕೇಶವ ಕೃಪ, ಶಂಕರಪುರಂ, ಬೆಂಗಳೂರು-೪.
6. ಪ್ರೊ. ವಿ. ನರಹರಿ, ಪ್ರಾಂಶುಪಾಲರು, ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ
7. ಹಿರೇಮಗಳೂರು ಕಣ್ಣನ್, ಅರ್ಚಕರು, ಕೋದಂಡರಾಮ ದೇವಾಲಯ, ಚಿಕ್ಕಮಗಳೂರು
8. ಡಾ. ಜ್ಯೋತ್ಸ್ನಾ ಕಾಮತ್, ನಿವೃತ್ತ ನಿರ್ದೇಶಕರು, ಆಕಾಶವಾಣಿ, ೧೧೦, ಶಶಿಕಿರಣ್, ೧೮ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೫೫.
10. ವೈ.ಕೆ. ಶ್ರೀಕಂಠಯ್ಯ, ವಾಗ್ಗೇಯಕಾರರು, ಶಿವಮೊಗ್ಗ.
11. ಮತ್ತೂರು ಅಶ್ವತ್ಥನಾರಾಯಣ ಅವಧಾನೀ, ಸಂಸ್ಕೃತ ವಿದ್ವಾಂಸರು, ಮತ್ತೂರು ಪೋಸ್ಟ್, ಶಿವಮೊಗ್ಗ.
12. ಹೊಸಬಾಳೆ ಸೀತಾರಾಮರಾವ್, ಖ್ಯಾತ ಗಮಕಿಗಳು, ಹೊಸಬಾಳೆ, ಸಾಗರ
13. ಸಂತೋಷಕುಮಾರ ಗುಲ್ವಾಡಿ, ಸಂಪಾದಕರು, ತರಂಗ, ಮಣಿಪಾಲ, ದ.ಕ.
14. ಎಸ್. ನಾಗರಾಜ, ಸಿಂಡಿಕೇಟ್ ಬ್ಯಾಂಕ್, ತುಮ್ಮಿನಕಟ್ಟೆ, ಧಾರವಾಡ ಜಿಲ್ಲೆ.
15. ಬಿ.ಎಸ್.ಎಸ್. ಕೌಶಿಕ್, ಖ್ಯಾತ ಗಮಕಿಗಳು, ನಂ.೧೩/೩೩, ೩ನೇ ಅಡ್ಡರಸ್ತೆ, ನಾಗಸಂದ್ರ, ಬೆಂಗಳೂರು-೨೮.
16. ಡಾ. ಬಿ.ಎಸ್. ಪ್ರಣತಾರ್ತಿಹರನ್, ಕನ್ನಡ ಪ್ರಾಧ್ಯಾಪಕರು, ೩೦೫೫, ೪ನೇ ಅಡ್ಡರಸ್ತೆ, ಗೋಕುಲಂ, ಮೈಸೂರು
17. ಕೇಶವ, ಸಹ ನಿರ್ದೇಶಕರು, ಯೋಜನಾ ಇಲಾಖೆ, ಬೆಂಗಳೂರು.
18. ಮಿತ್ರವಿಂದಾ ಸುಬ್ರಹ್ಮಣ್ಯ ೬೫, ಶುಭದಾ, ೩ನೇ ಮೈನ್, ಪೂರ್ಣಪ್ರಜ್ಞಾ ಲೇಔಟ್, ಬನಶಂಕರಿ ೩ನೇ ಹಂತ, ಕತ್ರಿಗುಪ್ಪೆ, ಬೆಂಗಳೂರು.
19. ಪ್ರೊ. ಎಂ.ಎನ್. ಚಂದ್ರಶೇಖರ್, ಸಂಸ್ಕೃತ ವಿಭಾಗ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು.
20. ಸುಮನಾ ವಿಶ್ವನಾಥ್, ಗಮಕಕಲಾ ಪರಿಷತ್, ಹೊಸಹಳ್ಳಿ, ಶಿವಮೊಗ್ಗ.
21. ಡಾ. ಹೆಚ್.ವಿ.ಸತ್ಯನಾರಾಯಣ ಶಾಸ್ತ್ರೀ, ಭಾರತೀಯ ವಿದ್ಯಾಭವನ, ಲಂಡನ್
22. ಮಾರ್ಕಂಡೇಯ ಅವಧಾನೀ, ವ್ಯಾಖ್ಯಾನಕಾರರು, ಮತ್ತೂರು ಪೋಸ್ಟ್, ಶಿವಮೊಗ್ಗ ತಾಲ್ಲೂಕು.
23. ಎಚ್.ಆರ್. ಕೇಶವಮೂರ್ತಿ, ಗಮಕಿಗಳು, ಹೊಸಹಳ್ಳಿ-೫೭೭ ೨೦೨, ಶಿವಮೊಗ್ಗ ತಾಲ್ಲೂಕು.

# ಅನುಬಂಧ

# ೧. ಸಾಮಾಜಿಕಪ್ರಜ್ಞೆಗೆ ನಮಸ್ಕಾರ

## ಅಸಾಮಾನ್ಯ ವಿದ್ವಾಂಸ, ಪ್ರವಚನಪಟು
## ವೇ. ಬ್ರ. ಶ್ರೀ ಕೆ.ಜಿ. ಸುಬ್ರಹ್ಮಣ್ಯ ಶಾಸ್ತ್ರೀ

**ಜಯಂತಿ ತೇ ಸುಕೃತಿನಃ ರಸಸಿದ್ಧಾಃ ಕವೀಶ್ವರಾಃ |**
**ನಾಸ್ತಿ ಯೇಷಾಂ ಯಶಃ ಕಾಯೇ ಜರಾಮರಣಜಂ ಭಯಮ್ ||**

ಇಪ್ಪತ್ತನೆಯ ಶತಮಾನದವರೆಗೂ ವೇದಶಾಸ್ತ್ರಗಳನ್ನು ವಂಶಪಾರಂಪರ್ಯವಾಗಿ ಅಧ್ಯಯನ ಮಾಡುತ್ತಾ ಬಂದುದು ಸಂಕೇತಿ ಸಮುದಾಯದ ಸಾಮಾನ್ಯ ಲಕ್ಷಣ. ಈ ಪರಂಪರೆಯ ಇನ್ನೊಂದು ಅಂಗವೆಂದರೆ ಸಂಗೀತ. ವೇದ - ಸಂಸ್ಕೃತ - ಸಂಗೀತ ಇವು ಮೂರು ಸಂಕೇತಿ ಸಮುದಾಯದ ಹೆಗ್ಗುರುತೆಂದು ಹೇಳಬಹುದು. ವೇದಾಧ್ಯಯನಕ್ಕೆ ಬಸವಾಪಟ್ಟಣ, ಶಾಸ್ತ್ರಾಧ್ಯಯನಕ್ಕೆ ಕಟ್ಟೇಪುರ ಮತ್ತು ಸಂಗೀತಾಭ್ಯಾಸಕ್ಕೆ ರುದ್ರಪಟ್ಟಣ ಬಹಳ ಪ್ರಸಿದ್ಧವಾಗಿದ್ದ ದಿನಗಳು ಅವು. ಕಟ್ಟೇಪುರದ ಪರಂಪರೆಯಿಂದ ಬಂದ ಒಬ್ಬ ಮಹಾನ್ ಸಂಸ್ಕೃತ ವಿದ್ವಾಂಸರೆಂದರೆ ಕೆ.ಜಿ. ಶಾಸ್ತ್ರಿಗಳೆಂದೇ ಜನಜನಿತರಾಗಿದ್ದ ವೇ.ಬ್ರ. ಶ್ರೀ ಕಟ್ಟೇಪುರ ಗಂಗಾಧರಶಾಸ್ತ್ರಿ ಸುಬ್ರಹ್ಮಣ್ಯಶಾಸ್ತ್ರಿಗಳವರು.

ಸುಬ್ರಹ್ಮಣ್ಯಶಾಸ್ತ್ರಿಗಳು ಹುಟ್ಟಿದ್ದು (ಜ.೧೯೦೧) ಹಾಸನಜಿಲ್ಲೆಯ ಕಾವೇರೀತೀರದ ಅಗ್ರಹಾರ ಕಟ್ಟೇಪುರದಲ್ಲಿ. ತಂದೆ ಗಂಗಾಧರ ಶಾಸ್ತ್ರಿಯವರೂ, ತಾಯಿ ಮೀನಾಕ್ಷಮ್ಮನವರ ತಂದೆ ಫೆರಿಶಾಸ್ತ್ರಿಗಳೂ (ಅಯ್ಯಾಶಾಸ್ತ್ರಿ ಅಥವಾ ಹಂ.ವೆಂಕಟಸುಬ್ಬಾಶಾಸ್ತ್ರಿ) ಸಂಸ್ಕೃತ ವಿದ್ವಾಂಸರು; ಚಿಕ್ಕಜ್ಜ ಚಿನ್ನಣ್ಣ ಶಾಸ್ತ್ರಿಗಳು ಪ್ರಸಿದ್ಧ ಜ್ಯೋತಿಷಿಕರು; ತಂದೆಯ ಅಣ್ಣ ಮುತ್ತಣ್ಣಾವಧಾನಿಗಳು ಕರ್ಮಠ ವೈದಿಕರು. ಹೀಗೆ ವೇದ-ಸಂಸ್ಕೃತಗಳ ವಾತಾವರಣದಲ್ಲಿ ಜನಿಸಿದ ಬಾಲಕ ಸುಬ್ರಹ್ಮಣ್ಯನಿಗೆ ಅವು ಜನ್ಮಸಂಸ್ಕಾರದಿಂದಲೇ ಲಬ್ಧವಾಗಿದ್ದವು. ಒಂದು ವರ್ಷದ ಮಗುವಾಗಿದ್ದಾಗಲೇ ತಂದೆಯನ್ನೂ, ಎಂಟು ವರ್ಷದ ಎಳೆವಯಸ್ಸಿನಲ್ಲೇ ತಾಯಿಯನ್ನೂ ಕಳೆದುಕೊಂಡ ಸುಬ್ರಹ್ಮಣ್ಯ ಬೆಳೆದದ್ದು ಫೆರಿಶಾಸ್ತ್ರಿಗಳ ಆಶ್ರಯದಲ್ಲಿ; ಹಾಗಾಗಿ ಅವರ ವ್ಯಕ್ತಿತ್ವವನ್ನು ರೂಪಿಸಿದ್ದು ಫೆರಿಶಾಸ್ತ್ರಿಗಳ ಪ್ರಭಾವ.

ಸುಬ್ರಹ್ಮಣ್ಯನ ಪ್ರಾಥಮಿಕ ಶಿಕ್ಷಣ ಆದದ್ದು ಕೊಣನೂರಿನಲ್ಲಿ. ಆತನಿಗೆ ಪ್ರೌಢಶಿಕ್ಷಣ ಕೊಡಿಸಲು ಫೆರಿಶಾಸ್ತ್ರಿಗಳು ಕಟ್ಟೇಪುರವನ್ನು ಬಿಟ್ಟು ಮೈಸೂರಿಗೇ ಬಂದು ನೆಲೆಸಿದರು. ಪ್ರೌಢಶಿಕ್ಷಣವನ್ನು ಮಹಾರಾಜಾ ಹೈಸ್ಕೂಲಿನಲ್ಲಿ ಮುಗಿಸಿದ ಸುಬ್ರಹ್ಮಣ್ಯ ಬಿ.ಎ.,ಗಾಗಿ ಓದಿದ್ದು ಮಹಾರಾಜಾ ಕಾಲೇಜಿನಲ್ಲಿ. ಸಂಸ್ಕೃತ ಆತನ ಐಚ್ಛಿಕ ವಿಷಯಗಳಲ್ಲೊಂದಾಗಿತ್ತು. ಸಂಸ್ಕೃತಕ್ಕಾಗಿ ಇಟ್ಟಿದ್ದ ನವೀನಂ ರಾಮಾನುಜಾಚಾರ್ಯ ಚಿನ್ನದ ಪದಕ ಮತ್ತು ಪೂರ್ಣಕೃಷ್ಣಮೂರ್ತಿ ಚಿನ್ನದ ಪದಕಗಳು ಆತನಿಗೆ ಲಭಿಸಿದವು. ಅದೇ ವರ್ಷ (೧೯೨೪) ಸಂಸ್ಕೃತ ಪಾಠಶಾಲೆಯಲ್ಲಿ ಸಾಹಿತ್ಯದಲ್ಲಿ ವಿದ್ವತ್ಪರೀಕ್ಷೆಯನ್ನೂ ಕೊಟ್ಟು ಉತ್ತೀರ್ಣನಾದದ್ದು ಆತನ ಅದ್ಭುತ ಮೇಧಾಶಕ್ತಿಗೆ ಸಾಕ್ಷಿ. ಅಧ್ಯಾಪಕರಾಗಿ ದೊರೆತವರೂ ಸಾಮಾನ್ಯರಲ್ಲ- ಸಿ.ಆರ್.ನರಸಿಂಹಶಾಸ್ತ್ರಿ, ಹಾಸನದ ನರಸಿಂಹಶಾಸ್ತ್ರಿ ಅವರಂಥವರು.

ಅದು ಬಿ.ಎ., ಪದವಿ ಪಡೆದವರು ಬಹಳ ವಿರಳವಾಗಿದ್ದ ಕಾಲ; ಕೆ.ಜಿ. ಶಾಸ್ತ್ರಿಗಳಿಗಿದ್ದ ವಿದ್ವತ್ತೂ ದೊಡ್ಡದಾಗಿತ್ತು. ಮೈಸೂರಿನಲ್ಲಿ ನೌಕರಿ ಹಿಡಿಯುವ ಎಲ್ಲ ಸಾಧ್ಯತೆಗಳೂ ಇದ್ದವು. ಆದರೆ ಅವರು ತಮ್ಮ ಅಜ್ಜನ ಜತೆ ಕಟ್ಟೇಪುರಕ್ಕೆ ಹಿಂದಿರುಗಿದರು; ೧೯೨೮ರಲ್ಲಿ ರಾಮನಾಥಪುರಕ್ಕೆ ಬಂದರು. ಕೊನೆಯ ಕೆಲವು ವರ್ಷಗಳು ಮಕ್ಕಳ ಆಶ್ರಯದಲ್ಲಿರಲು ನಗರಗಳಿಗೆ ಹೋದುದನ್ನು ಬಿಟ್ಟರೆ ಅವರ ದೀರ್ಘ ಬದುಕಿನ ಸಾಧನಾಕ್ಷೇತ್ರವಾದದ್ದು ರಾಮನಾಥಪುರ.

ಸ್ಥಿತಿವಂತರಾಗಿದ್ದ ಶಾಸ್ತ್ರಿಗಳಿಗೆ ಜೀವನನಿರ್ವಹಣೆಗಾಗಿ ಸರ್ಕಾರಿ ನೌಕರಿಯನ್ನು ಆಶ್ರಯಿಸಬೇಕಾದ ಅಗತ್ಯವಿರಲಿಲ್ಲ. ಆದರೆ ಕೊಣನೂರಿನ ಖಾಸಗಿ ಪದವಿ ಕಾಲೇಜಿನಲ್ಲಿದ್ದ ಅಧ್ಯಾಪಕರ ಕೊರತೆಯನ್ನು ತುಂಬಲು ಸಂತೋಷದಿಂದ ಮುಂದಾದರು. ಅಧ್ಯಾಪಕವೃತ್ತಿ ಆರ್ಥಿಕವಾಗಿ ಅವರಿಗೆ ಬೇಕಿರಲಿಲ್ಲವಾದರೂ ಪ್ರವೃತ್ತಿಯನ್ನು ತಣಿಸಲು ಅದು ಅವಕಾಶ ಮಾಡಿತು. ಹತ್ತಾರು ವರ್ಷ ಅಲ್ಲಿ ಅಧ್ಯಾಪನ ಮಾಡಿದರು, ನೂರಾರು

ವಿದ್ಯಾರ್ಥಿಗಳಲ್ಲಿ ಸಂಸ್ಕೃತದ ಅಭಿರುಚಿಯನ್ನು ಬೆಳೆಸಿದರು; ತೃಪ್ತಿಯನ್ನೂ ಆನಂದವನ್ನೂ ಪಡೆದರು. ಪ್ರತಿನಿತ್ಯ ಬೆಳಗ್ಗೆ ಕಾಲೇಜಿಗೆ ಹೋಗುವುದಕ್ಕೆ ಮುಂಚೆ ಇಲ್ಲವೇ ಸಂಜೆ ಕಾಲೇಜಿನಿಂದ ಬಂದ ಬಳಿಕ ಗುಂಪು ಗುಂಪು ವಿದ್ಯಾರ್ಥಿಗಳಿಗೆ (ಇವರಲ್ಲಿ ಬಾಲಪಾಠದವರೂ ಪ್ರೌಢಪಾಠದವರೂ ಇರುತ್ತಿದ್ದರು) ಸಂಸ್ಕೃತವನ್ನು ಹೇಳಿಕೊಡುತ್ತಿದ್ದರು. ವೇ. ಬ್ರ. ಶ್ರೀ ದೀಕ್ಷಿತ್ ಸುಬ್ಬಕೃಷ್ಣ ಅವಧಾನಿಗಳು, ವೇ. ಬ್ರ. ಶ್ರೀ ವೆಂಕಟೇಶ ಅವಧಾನಿಗಳು, ಡಾ. ನರಸಿಂಹಮೂರ್ತಿ, ಮತ್ತಿಗೋಡು ನಂಜುಂಡ ಸ್ವಾಮಿ, ಡಾ. ಬಿ.ಚನ್ನಕೇಶವ ಇವರೆಲ್ಲ ಅವರಿಂದ ಉನ್ನತ ಶಿಕ್ಷಣ ಪಡೆದ ಪ್ರಮುಖರು.

ಶಾಸ್ತ್ರಿಗಳ ಜನಪ್ರಿಯತೆಗೆ ವಿದ್ವತ್ತು ಒಂದು ಕಾರಣವಾದರೆ, ಇನ್ನೊಂದು ಅವರ ಪುರಾಣಪ್ರವಚನ ಸಾಮರ್ಥ್ಯ. ರಾಮಾಯಣವಾಗಲೀ ಪುರಾಣಗಳಿಂದ ಆರಿಸಿದ ಪ್ರಹ್ಲಾದಚರಿತೆ, ಗಜೇಂದ್ರಮೋಕ್ಷದಂತಹ ಪ್ರಸಂಗಗಳಾಗಲೀ, ಅಂತ್ಯೇಷ್ಟಿಯ ಸಮಯದಲ್ಲಿ ವಾಚನ ಮಾಡುವ ಗರುಡಪುರಾಣವಾಗಲೀ ಶಾಸ್ತ್ರಿಗಳ ಬಾಯಿಂದ ಕೇಳಿದರೇ ಸೊಗಸು. ನಾಲ್ಕೈದು ಶ್ಲೋಕಗಳನ್ನು ಪಠಿಸಿದ ಬಳಿಕ ಮೂಲಕ್ಕೆ ಸ್ವಲ್ಪವೂ ಚ್ಯುತಿಯುಂಟಾಗದಂತೆ ಅವುಗಳ ಅರ್ಥ ಎಲ್ಲರಿಗೂ ತಿಳಿಯುವಂತೆ ಸುಲಭವಾದ ಕನ್ನಡದಲ್ಲಿ ವಿವರಿಸುತ್ತಿದ್ದ ಅವರ ರೀತಿ ಅವರಿಗೇ ವಿಶಿಷ್ಟವಾದುದು. ರಾಮೋತ್ಸವದ ರಾಮಾಯಣ ಪಾರಾಯಣಕ್ಕೆ ಗೊತ್ತು ಮಾಡಿಕೊಳ್ಳಲು ಹಳ್ಳಿಗಳ ನಡುವೆ ಮೇಲಾಟ ನಡೆದು ತಿಂಗಳುಗಟ್ಟಲೆ ಮೊದಲೇ ಅವರನ್ನು ಒಪ್ಪಿಸಿಕೊಳ್ಳುತ್ತಿದ್ದರೆಂದರೆ ಅವರ ಪಾರಾಯಣಕಲೆಯ ಮೇಲ್ಮೆಯನ್ನು ಅರ್ಥಮಾಡಿಕೊಳ್ಳಬಹುದು. ಸಂತರ್ಪಣೆಗಳಲ್ಲೂ ಶಾಸ್ತ್ರಿಗಳು ಇದ್ದರೆಂದರೆ ಸಾಕು, ಸುಶ್ರಾವ್ಯವಾದ ಶ್ಲೋಕ ನಿಶ್ಚಿತ. ಅವರಿಗೆ ಸಾವಿರಾರು ಶ್ಲೋಕಗಳು ಕಂಠಸ್ಥವಾಗಿದ್ದವು. ಒಮ್ಮೆ ಒಂದೆಡೆ ಹೇಳಿದ ಶ್ಲೋಕವನ್ನು ಅವರು ಇನ್ನೊಮ್ಮೆ ಇನ್ನೊಂದೆಡೆ ಹೇಳುತ್ತಿರಲಿಲ್ಲ. ಆ ಶ್ಲೋಕಗಳ ಮೂಲವನ್ನೂ ಅವರಿಂದಲೇ ಕೇಳಿ ತಿಳಿಯಬೇಕಾಗುತ್ತಿತ್ತು. ಉಪಯುಕ್ತಮಂತ್ರಗಳನ್ನೂ ಅವರು ಗುರುಮುಖೇನ ಕಲಿತಿದ್ದರು. ಘನಸ್ವಸ್ತಿಯನ್ನಂತೂ ಬಹಳ ತಾದಾತ್ಮ್ಯಭಾವದಿಂದ ಕೇಳಿ ಆನಂದ ಪಡುತ್ತಿದ್ದರು.

ಅವರ ವೈವಾಹಿಕ ಜೀವನವೂ ಸುಖಮಯವಾಗಿತ್ತು. ಬಿ.ಎ. ವಿದ್ಯಾರ್ಥಿಯಾಗಿದ್ದಾಗಲೇ ಅವರು ವಿವಾಹವಾದದ್ದು ಅರಕಲಗೂಡು ತಾಲ್ಲೂಕು ಅಗ್ರಹಾರದ ವೇ. ಶ್ರೀ ಸುಬ್ರಹ್ಮಣ್ಯಾವಧಾನಿಗಳ ಪುತ್ರಿ ಗಂಗಮ್ಮನವರನ್ನು (೧೯೨೦-೨೧). ಸ್ಫುರದ್ರೂಪಿಗಳಾಗಿದ್ದ ಗಂಗಮ್ಮನವರು ನೋಡಿದೊಡನೆ ಗೌರವ ಹುಟ್ಟಿಸುವಂತಹ ಆದರ್ಶ ಭಾರತೀಯ ನಾರಿಯ ಪ್ರತಿರೂಪದಂತಿದ್ದರು. ಒಬ್ಬ ಪುತ್ರಿ ಮತ್ತು ಏಳು ಗಂಡುಮಕ್ಕಳ ತುಂಬು ಸಂಸಾರ ಅವರದು. ಗಂಡು ಮಕ್ಕಳಲ್ಲಿ ನಾಲ್ವರು ಎಂಜಿನಿಯರ್‌ಗಳು, ಇಬ್ಬರು ವೈದ್ಯರು, ಒಬ್ಬರು ವಿಜ್ಞಾನ ಪದವೀಧರರು ಹಾಗೂ ಸಮಾಜಸೇವಕರು.

ಶಾಸ್ತ್ರಿಗಳಿಗೆ ಭಗವಂತನು ಅತ್ಯಂತ ಕರುಣಾಮಯಿಯಾಗಿದ್ದನು. ಅವರದು ಸಂತೃಪ್ತಿಯ ಸಾಂಸಾರಿಕ ಜೀವನವಾಗಿತ್ತು. ರಾಮನಾಥಪುರದ ರಾಮೇಶ್ವರ ದೇವಸ್ಥಾನದ ಬಳಿ ಮೇಲುಬೀದಿಯಿಂದ ಕೆಳಬೀದಿಯವರೆಗೆ ಸುಮಾರು ಅರ್ಧ ಫರ್ಲಾಂಗ್‌ನಷ್ಟು ಉದ್ದಕ್ಕೆ ಚಾಚಿದ್ದ ಅವರ ಮನೆ ಏಕಕಾಲದಲ್ಲಿ ನೂರಾರು ಜನ ಕುಳಿತು ಊಟ ಮಾಡುವಷ್ಟು ವಿಶಾಲವಾಗಿತ್ತು. ನಾಗರಪಂಚಮಿ, ತಿಂಗಳಷಷ್ಠಿ, ಅಕ್ಷತದಿಗೆಗಳು ಬಂತೆಂದರೆ ಸಾಕು ಅವರ ಮನೆ ಜೇನುಗೂಡಾಗಿ ಬಿಡುತ್ತಿತ್ತು. ಶಾಸ್ತ್ರಿಗಳ ಮನೆಯವರು ಎಂದೂ ಅತಿಥಿಗಳ ಸೇವೆಯನ್ನು ಮಾಡಿ ದಣಿದವರಲ್ಲ. ಅವರ ಮನೆಗೆ ಹೋದವರಿಗೆ ಪ್ರೀತಿಯ ಸ್ವಾಗತ, ಆದರಾತಿಥ್ಯ ತಪ್ಪದೇ ಕಾದಿರುತ್ತಿತ್ತು. ತೀರ್ಥಕ್ಷೇತ್ರವಾದ್ದರಿಂದ ಸಾಮಾನ್ಯವಾಗಿ ರಾಮನಾಥಪುರಕ್ಕೆ ಹೋಗುವವರು ವರ್ಷವಿಡೀ ಇರುತ್ತಿದ್ದರು. ಇಂತಹವರಲ್ಲಿ ಬಹಳ ಮಂದಿಗೆ ಶಾಸ್ತ್ರಿಗಳ ಮನೆಯೇ ಆಶ್ರಯದಾಣವಾಗುತ್ತಿತ್ತು. ಶಾಸ್ತ್ರಿಗಳಂತೆಯೇ ಅವರ ಮಕ್ಕಳು ಮಮ್ಮಕ್ಕಳು ಸಹ ಉದಾರಿಗಳಾಗಿದ್ದು ದಾನಧರ್ಮಗಳಲ್ಲಿ ನಿರತರಾಗಿದ್ದಾರೆ. ಪಾರಂಪರಿಕ ವಿದ್ಯೆಯನ್ನು ರೂಢಿಸಿಕೊಳ್ಳದಿದ್ದರೂ ಆಧುನಿಕ ವಿದ್ಯಾಭ್ಯಾಸಕ್ಕೆ ಮಾರುಹೋದ ಅವರ ಮಕ್ಕಳೆಲ್ಲ ಒಬ್ಬರಿಗಿಂತ ಒಬ್ಬರು ಪ್ರತಿಭಾವಂತರು, ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಹೆಸರುಗಳಿಸಿದವರು.

೧೯೭೨ನೇ ಸಾಲಿನ ಜನವರಿ ಮೂರರಂದು ಶಾಸ್ತ್ರಿಗಳು ಇಹಲೋಕದ ವ್ಯಾಪಾರವನ್ನು ಮುಗಿಸಿ ಪರಮಾತ್ಮನ ಪಾದಾರವಿಂದಗಳನ್ನು ಸೇರಿದರು. ಸಂಸ್ಕೃತ ವಿದ್ವಾಂಸರಾಗಿ, ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪುರಾಣಿಕರಾಗಿ, ಶಾಸ್ತ್ರಿಗಳು ರಾಮನಾಥಪುರದ ಸುತ್ತಮುತ್ತಲಿನ ಹತ್ತಾರು ಗ್ರಾಮಗಳಲ್ಲಿ ನೂರಾರು, ಸಾವಿರಾರು ಜನರ ಮನವನ್ನು ಗೆದ್ದವರು. ಈಗಲೂ ರಾಮನಾಥಪುರಕ್ಕೆ ಹೋಗಿ ಹಿಂದೆ ಅವರು ವಾಸವಿದ್ದ ಮನೆಯ ಬಳಿ ಸುಳಿದಾಡುವ, ಶಾಸ್ತ್ರಿಗಳ ಪರಿಚಯವಿದ್ದವರಿಗೆ ಅವರ ಸವಿನೆನಪು ಮನಸ್ಸಿಗೆ ಮುದಕೊಡದೆ ಇರುವುದಿಲ್ಲ. ಇಂತಹ ಶಾಸ್ತ್ರಿಗಳ ಬಾಳು ನಿಜಕ್ಕೂ ಧನ್ಯ.

**ವಿದ್ವತ್ತ್ವಂಚ ನೃಪತ್ತ್ವಂಚ ನೈವ ತುಲ್ಯಂ ಕದಾಚನ |**
**ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ ||**

***ಡಾ. ಬಿ. ಚನ್ನಕೇಶವ***

## ವೇ. ಬ್ರ. ಶ್ರೀ ಕೆ.ಜಿ. ಸುಬ್ರಹ್ಮಣ್ಯಶಾಸ್ತ್ರಿಗಳ ವಂಶಾವಳಿ

ಕಟ್ಟೇಪುರ ಸುಬ್ಬಾವಧಾನೀ
- ಗಂಗಾಧರ ಶಾಸ್ತ್ರೀ + ಮೀನಾಕ್ಷಮ್ಮ

ಕಟ್ಟೇಪುರ ಅಯ್ಯಾಶಾಸ್ತ್ರೀ (ಹಂ.ವೆಂಕಟಸುಬ್ಬಾಶಾಸ್ತ್ರೀ)
- ಮೀನಾಕ್ಷಮ್ಮ

ಸುಬ್ರಹ್ಮಣ್ಯಶಾಸ್ತ್ರೀ+ಗಂಗಮ್ಮ ← ಸುಬ್ರಹ್ಮಣ್ಯಾವಧಾನೀ(ಅಗ್ರಹಾರ) + ನಾಗಮ್ಮ (ಬಸವಾಪಟ್ಟಣ)

1.ಕೆ.ಎಸ್.ಶಾಮಣ್ಣ
+ ಲೀಲಾವತಿ
- 1.ಆರ್.ಎಸ್.ವಿಜಯಲಕ್ಷ್ಮಿ
- 2.ಆರ್.ಎಸ್.ಸುಜಯಲಕ್ಷ್ಮಿ
- 3.ಆರ್.ಎಸ್.ಬಾಲಸುಬ್ರಹ್ಮಣ್ಯ

2 ಆರ್.ಎಸ್.ಕೇಶವಮೂರ್ತಿ
(ರಾಜಣ್ಣ)
+ನಾಗರತ್ನ
- 1.ಆರ್.ಕೆ.ಕುಮಾರ್
- 2.ಡಾ.ಆರ್.ಕೆ.ಅಮೃತಾ
- 3.ಡಾ.ಆರ್.ಕೆ.ನಟೇಶ್

3.ಆರ್.ಎಸ್.ಜಯಲಕ್ಷ್ಮಿ
+ಶ್ರೀನಿವಾಸಮೂರ್ತಿ
- 1.ಎ.ಎಸ್.ಪದ್ಮಾವತಿ
- 2.ಎ.ಎಸ್.ಸುಂದರೇಶ

4. ಡಾ.ಆರ್.ಎಸ್.ಚಂದ್ರಶೇಖರಮೂರ್ತಿ
+ಕೆ.ಕೆ. ವಿಜಯಲಕ್ಷ್ಮಿ
- 1.ಡಾ.ಮೀರಾ
- 2.ಡಾ.ರಘು
- 3.ಅಪರ್ಣಾ

5.ಆರ್.ಎಸ್.ರಾಮನಾಥ್
+ಸುವರ್ಣಲಕ್ಷ್ಮಿ
- 1.ಆರ್.ಆರ್.ಜಯಶ್ರೀ
- 2.ಆರ್.ಆರ್.ರಾಜಶ್ರೀ
- 3.ಆರ್.ಆರ್.ಶ್ರೀಕಾಂತ್
- 4.ಆರ್.ಆರ್.ಗೋಪೀನಾಥ್

6.ಎ.ಕೆ.ಸುಂದರೇಶನ್
+ರಾಧಾ
- 1.ಡಾ.ಎ.ಎಸ್.ಅರವಿಂದ್
- 2.ಎ.ಎಸ್.ಶ್ಯಾಮಲಾ

7.ಆರ್.ಎಸ್.ಶ್ರೀಧರ್
+ವೇದವತಿ
- 1.ಆರ್.ಎಸ್.ಮಂಜುನಾಥ್
- 2.ಆರ್.ಎಸ್.ಮಧು

8.ಆರ್.ಎಸ್.ಕೃಷ್ಣಮೂರ್ತಿ
+ರೋಸಲಿ
- 1.ಆರ್.ಕೆ.ಸುಮಾ
- 2.ಆರ್.ಕೆ. ಸ್ಮಿತಾ

## ವಿಶ್ವಕುಟುಂಬದ ಗೌರವಾನ್ವಿತ ಸದಸ್ಯ
## ಡಾ. ಆರ್.ಎಸ್. ಚಂದ್ರಶೇಖರಮೂರ್ತಿ

ಚಿಕಿತ್ಸೆಯ ಬಹುಕ್ಷೇತ್ರಗಳಲ್ಲಿ ಪರಿಣತರಾದ ಮೇಧಾವೀ ವೈದ್ಯ ಡಾ.ಚಂದ್ರಶೇಖರಮೂರ್ತಿ, ಎಂ.ಡಿ., ಎಫ್.ಆರ್.ಸಿ.ಎಸ್.(ಇಂಗ್ಲೆಂಡ್), ಎಫ್.ಆರ್.ಸಿ.ಎಸ್.(ಎಡಿನ್‌ಬರೊ), ಎಫ್.ಎ.ಸಿ.ಎಸ್., ಡಿಪ್ಲೊಮೇಟ್ ಅಮೆರಿಕನ್ ಬೋರ್ಡ್ ಆಫ್ ಸರ್ಜರಿ, ಹೈ ಡೆಸರ್ಟ್ ಮೆಡಿಕಲ್ ಗ್ರೂಪ್, ಹೆರಿಟೇಜ್ ಹೆಲ್ತ್ ಕೇರ್, ಕ್ಯಾಲಿಫೋರ್ನಿಯಾ, ಯು.ಎಸ್.ಎ., ಅವರು ಹುಟ್ಟಿದ್ದು ಹಾಸನ ಜಿಲ್ಲೆಯ ಕಟ್ಟೇಪುರಗ್ರಾಮದ ಗಂಗಾಧರಶಾಸ್ತ್ರಿಗಳ ವಂಶದಲ್ಲಿ; ವೈದ್ಯರಾಗಿ ರೂಪುಗೊಂಡುದು ಮೈಸೂರಿನಲ್ಲಿ; ವಿಸ್ತೃತ ಅಧ್ಯಯನದ ಮೂಲಕ ವೃತ್ತಿನೈಪುಣ್ಯದ ಎತ್ತರಗಳನ್ನೇರಿ ತಮ್ಮ ಅಮೂಲ್ಯ ವೈದ್ಯಕೀಯ ಸೇವೆ ಸಲ್ಲಿಸಿದ್ದು ಭಾರತ, ಇಂಗ್ಲೆಂಡ್ ಮತ್ತು ಅಮೆರಿಕಾದಲ್ಲಿ! ಇದೀಗ ಅವರು ಅಮೆರಿಕದ ಘನ ಸೇನೆಯಲ್ಲಿ ಕರ್ನಲ್.

ಅದು ೧೯೭೮ರ ಕಾಲ; ಡಾ. ಮೂರ್ತಿ NORTH CAROLINA STATEನ SPRUCEPINE CITY ಯಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದ ಸಮಯ. ಅಮೆರಿಕದ ಅಧ್ಯಕ್ಷ ರೇಗನ್ ಆ ಪ್ರಾಂತ್ಯದ ಪ್ರವಾಸದಲ್ಲಿದ್ದರು; ಡಾ.ಮೂರ್ತಿ SURGEON ON DUTY ಆಗಿ ವಿಶ್ವದ ಅತಿಪ್ರತಿಷ್ಠಿತ ಅಧ್ಯಕ್ಷರ ವೈದ್ಯಕೀಯ ನಿರ್ವಹಣೆಗಾಗಿ ನಿಯುಕ್ತರಾದರು. ವೃತ್ತಿನೈಪುಣ್ಯಕ್ಕೆ ಮರ್ಯಾದೆ ಸಂದ ಸನ್ನಿವೇಶ! ಅಂಥ ಗೌರವ ಅವರಿಗೆ ಹಲವು ಬಾರಿ ಸಂದಿದೆ. ೧೯೯೧ರಲ್ಲಿ ಅವರು U.S. ARMY RESERVESನ ಗೌರವಾನ್ವಿತ ಸದಸ್ಯರಾಗಿದ್ದರು; SPECIAL SURGEON ಆಗಿ ಸೇವೆ ಸಲ್ಲಿಸಿದರು; CHARGE OF SURGICAL DEPARTMENT ಆಗಿಯೂ ಇದ್ದರು. NASHVILLE MEDICAL COLLEGEನಲ್ಲಿ SURGERY ಮತ್ತು ANATOMY ವಿಭಾಗಗಳ ಉಪಪ್ರಾಧ್ಯಾಪಕರಾಗಿದ್ದ ಅವರನ್ನು ಅಮೆರಿಕ ಸರ್ಕಾರ ಕೊಲ್ಲಿಯುದ್ಧಕ್ಕೆ ಕಳಿಸಿಕೊಟ್ಟಿತು. OPERATION DESERT SHIELD ಮತ್ತು OPERATION DESERT STORMಗಳಲ್ಲಿ ಸರ್ಜಿಕಲ್ ವಿಭಾಗದ ಮುಖ್ಯಸ್ಥರಾಗಿ ಆರು ತಿಂಗಳು ಸಲ್ಲಿಸಿದ ಅನುಪಮ ಸೇವೆಗಾಗಿ ಸರ್ಕಾರ ಅವರಿಗೆ ಸುವರ್ಣಪದಕ ನೀಡಿ ಗೌರವಿಸಿತು! ಕರ್ತೃತ್ವಶಾಲಿಗಳಿಗೆ ಗುರುತರಜವಾಬ್ದಾರಿಗಳೂ ಗೌರವ ಪ್ರಶಸ್ತಿಗಳೂ ಕಾದಿರುತ್ತವೆ!

ಡಾ. ಚಂದ್ರಶೇಖರಮೂರ್ತಿ (ಜ. ೧೯೩೩) ಅವರದು ವಿದ್ವಾಂಸರ ವಂಶ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರೂಪುಗೊಂಡುದು ಹಾಸನ ಜಿಲ್ಲೆಯ ಕಟ್ಟೇಪುರ ಎಂಬ ಅಗ್ರಹಾರ. ದೇಶದ ಅತಿಶ್ರೇಷ್ಠ ವಿದ್ವಾಂಸರನ್ನು ಒಂದೆಡೆ ಸೇರಿಸಬೇಕೆಂಬ ಮಹತ್ವಾಕಾಂಕ್ಷೆಯಿಂದಲೇ ರೂಪುಗೊಂಡುದು ಅದು. ಅಲ್ಲಿನ ಪ್ರಸಿದ್ಧ ವಿದ್ವಾಂಸ ಗಂಗಾಧರಶಾಸ್ತ್ರಿಗಳ ಏಕೈಕ ಪುತ್ರ ಕೆ.ಜಿ.ಸುಬ್ರಹ್ಮಣ್ಯ ಶಾಸ್ತ್ರಿಗಳು. ಅವರಾದರೋ ಒಂದೇ ಕಾಲಕ್ಕೆ (೧೯೨೪) ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿ ಬಿ.ಎ., ಪದವಿಯನ್ನೂ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಓದಿ ಸಾಹಿತ್ಯ ವಿದ್ವಾನ್ ಪದವಿಯನ್ನೂ ಪಡೆದರು; ನವೀನಂ ರಾಮಾನುಜಾಚಾರ್ಯ ಸುವರ್ಣಪದಕದಿಂದಲೂ ಮರ್ಯಾದಿತರಾದರು. ಸಾಹಿತ್ಯ, ವೇದ, ಶಾಸ್ತ್ರಗಳಲ್ಲಿ ನೈಪುಣ್ಯ ಪಡೆದರು; ಶಾಲಾ ಕಾಲೇಜುಗಳಲ್ಲಿ ಅಧ್ಯಾಪನ ಮಾಡಿದರು; ಮನೆಯಲ್ಲಿ ಗುರುಕುಲ ನಡೆಸಿದರು; ಪುರಾಣ ಪ್ರವಚನಗಳ ಚಕ್ರವರ್ತಿಯಾದರು; ಶಂಕರರ ಮತ್ತು ಅವರ ತತ್ತ್ವಜ್ಞಾನದ ಬಗೆಗಿನ ಅಧಿಕಾರವಾಣಿ ಎನಿಸಿದರು. ಅವರು ಕೈ ಹಿಡಿದದ್ದು ಅಗ್ರಹಾರದ ವೇದಪಾರಂಗತ ಸುಬ್ರಹ್ಮಣ್ಯಾವಧಾನಿಗಳ ಮಗಳು ಗಂಗಮ್ಮನವರನ್ನು. ಈ ದಂಪತಿಗಳ ಏಳು ಗಂಡು ಮಕ್ಕಳಲ್ಲಿ ಮೂರನೆಯವರಾಗಿ ಹುಟ್ಟಿದವರು ಡಾ.ಮೂರ್ತಿ ಅವರು.

ಡಾ.ಮೂರ್ತಿಯವರ ಸಾಧನಾಯುಗದ ಕಥೆಯೂ ಸ್ಫೂರ್ತಿದಾಯಕವಾದದ್ದು: ಹಾಸನದ ಅರಳೇಪೇಟೆ ಪ್ರಾಥಮಿಕ ಶಾಲೆಯಿಂದ ಬಂದು ಬಸವಾಪಟ್ಟಣದ ಮಾಧ್ಯಮಿಕ ಶಾಲೆಯಲ್ಲಿ ಸೀತಾರಾಮಯ್ಯ ಎಂಬ ಅಧ್ಯಾಪಕರ ಗರಡಿಗೆ ಸೇರಿದಾಗಲೇ ಅವರ ಪ್ರತಿಭೆಯ ಕಣ್ಣು ಕುಡಿಯೊಡೆದಿತ್ತು. ಆ ಕಾಲಕ್ಕೆ ಅವರ ತಂದೆಯವರ ಗುರುಕುಲದ ವಿದ್ಯಾರ್ಥಿಯಾಗಿದ್ದವರು ಪಿ.ವಿ.ಶ್ರೀಕಂಠಯ್ಯನವರು; ಅವರು ಕೊಣನೂರಿನ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದವರು. ತಮ್ಮ ಗುರುಗಳಾದ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಸಲ್ಲಿಸಬಹುದಾದ ಸಾರ್ಥಕ ಗುರುದಕ್ಷಿಣೆ ಎಂದರೆ ಜಾಣಬಾಲಕ

ಚಂದ್ರಶೇಖರನನ್ನು ತಮ್ಮ ಗರಡಿಯಲ್ಲಿ ಪಳಗಿಸುವುದು ಎಂದು ಅವರಿಗೆ ತೋರಿತು. ಗುರುಗಳನ್ನು ಕಾಡಿ ಬೇಡಿ ಆ ಬಾಲಕನನ್ನು ತಮ್ಮ ಶಾಲೆಗೆ ಸೆಳೆದುಕೊಂಡರು. ಅಲ್ಲಿಂದ ಮುಂದಿನದು ತಡೆಯಿಲ್ಲದ ಓಟ: ಮೈಸೂರಿನ ಬನುಮಯ್ಯ ಪ್ರೌಢಶಾಲೆ; ಹಾಸನದಲ್ಲಿ ಇಂಟರ್, ರಾಜ್ಯಕ್ಕೆ ಒಂಬತ್ತನೆಯ ರ್‍ಯಾಂಕ್; ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದು, ೧೯೫೬ಕ್ಕೆ ವೈದ್ಯ ಪದವಿ. ಆಗ ಚಂದ್ರಶೇಖರ್‌ಗೆ ೨೩ ವರ್ಷ ವಯಸ್ಸು. ಆಗಲೇ ಮಂಗಳೂರಿನ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನಲ್ಲಿ ಪೆಥಾಲಜಿ ಅಧ್ಯಾಪನ; ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಮೂರು ವರ್ಷ ಅನಾಟಮಿ ಅಧ್ಯಾಪನ; ೧೯೬೦ರಲ್ಲಿ ಲಂಡನ್‌ಗೆ ಪಯಣ, ಮೂರು ವರ್ಷಗಳ ಅಧ್ಯಯನ, ಅನುಭವ, ಎರಡು F R C S., ಪದವಿಗಳೊಂದಿಗೆ ಭಾರತಕ್ಕೆ ಮರುಯಾನ; ಇಡೀ ಮೈಸೂರು ರಾಜ್ಯದಲ್ಲಿನ 'YOUNGEST FRCS SPECIALIST' ಎಂಬ ಹೊಗಳಿಕೆಗೆ ಭಾಜನ; ಹುಬ್ಬಿ ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ ಮತ್ತು ಸರ್ಜರಿ ಎರಡೂ ವಿಭಾಗಗಳಿಗೆ ಉಪಪ್ರಾಧ್ಯಾಪಕರಾಗಿ ಆಯ್ಕೆ; ಹೀಗೆ ಎರಡು FACULTYಗಳಿಗೆ ಆಯ್ಕೆಯಾದ ಮೊದಲ ಮತ್ತು ಕೊನೆಯ ಪ್ರಾಧ್ಯಾಪಕ ಎಂಬ ದಾಖಲೆಯ ಸ್ಥಾಪನೆ! ಅಲ್ಲಿಂದ ಮುಂದೆ ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಮೆಡಿಕಲ್ ಕಾಲೇಜು, ಮತ್ತೆ ಹುಬ್ಬಿ; ತಡೆಯಿಲ್ಲದ ಉನ್ನತಿಯನ್ನರಸಿ ಇಂಗ್ಲೆಂಡಿಗೆ; ಯುರಾಲಜಿ ಮತ್ತು ಆರ್ತೋಪೀಡಿಕ್ ನೈಪುಣ್ಯ ಸಾಧನೆ; ಯು.ಪಿ.ಎಸ್.ಸಿ. ಮೂಲಕ ಸರ್ಜಿಕಲ್ ಸ್ಪೆಷಲಿಸ್ಟ್ , ಡಿವಿಷನಲ್ ಮೆಡಿಕಲ್ ಆಫೀಸರ್, ಕೇಂದ್ರೀಯ ರೈಲ್ವೆ ಆಸ್ಪತ್ರೆಯ ಮುಖ್ಯಸ್ಥರಾಗಿ ಆಯ್ಕೆಯಾದಾಗ ಭಾರತದಲ್ಲೇ ಇದ್ದು ಅಧ್ಯಾಪನ ಮಾಡಬೇಕೆಂಬ ಕನಸನ್ನು ನನಸಾಗಿಸಿಕೊಳ್ಳಲು ಮರುಯಾನ; ಅಹಮದಾಬಾದ್‌ನಲ್ಲಿ ನಡೆದ OFFICERS' TRAINING ಸಮಯದಲ್ಲಿ BEST STUDENT GOLD MEDAL ಪ್ರಾಪ್ತಿ. ಆದರೇನು? ಆಕಾಶ ಹಿಡಿಯ ಹೊರಟ ಪ್ರತಿಭಾವಂತನಿಗೆ ಜುಗುಪ್ಸೆ ತಂದ ಅಸೂಯೆ, ಆಲಸ್ಯ, ತೊಡರುಗಾಲುಗಳ ಸರಣಿ "ಅಮೆರಿಕೆಗೆ ಹೋದರೆ ಆದೀತು" ಎಂದು ಯೋಚಿಸುವಂತೆ ಮಾಡಿತು.

ಅಮೆರಿಕೆಯ ನೆಲದಲ್ಲಿ ಕಾಲಿಟ್ಟಾಗ ಡಾ. ಚಂದ್ರಶೇಖರಮೂರ್ತಿ ಅವರಿಗೆ ವಯಸ್ಸು ನಲವತ್ತು. ಅವರ ಆವರೆಗಿನ ಅಧ್ಯಯನ, ಸ್ನಾತಕೋತ್ತರ ಅಧ್ಯಾಪನ, ನಡೆಸಿದ್ದ ಶಸ್ತ್ರಚಿಕಿತ್ಸೆಗಳ ವರದಿ ಯಾವುದೂ ನೆರವಿಗೆ ಬರಲಿಲ್ಲ- ಅಮೆರಿಕದ ನೆಲದಲ್ಲಿ. ಮೊದಲಿನಿಂದ ಸಾಮಾನ್ಯ ವಿದ್ಯಾರ್ಥಿಯಂತೆ ಆರು ವರ್ಷ ಅಧ್ಯಯನ ಮಾಡಿದರು; ಶೇ.೯೯ ಅಂಕ ಗಳಿಸಿದರು; ಇಡೀ ಅಮೆರಿಕೆಯಲ್ಲಿ ಮೊದಲ ಸ್ಥಾನ ಅವರದಾಗಿತ್ತು. ಭಾರತೀಯನಾದ ಅವರ ಬಗೆಗಿನ ತಾರತಮ್ಯವೂ ಮಾಯವಾಗಿತ್ತು. ಥೊರಾಸಿಕ್, ಕಾರ್ಡಿಯಾಕ್, ವಾಸ್ಕ್ಯುಲಾರ್ ಎಲ್ಲದರ GENERAL SURGEON ಆಗಿ ಅವರು ಬೆಳೆದಿದ್ದರು. FLORIDA, CAMPA CITYಯ ಮೆಡಿಕಲ್ ಕಾಲೇಜಿನಲ್ಲಿ ASSISTANT Prof. of SURGERY; CHIEF OF SURGERY RESIDENTIAL PROGRAMME; VETERANS' ADMINISTRATION HOSPITALನಲ್ಲಿ CHIEF SURGEON, HOD.OF SURGERY; ಲಾಸ್ ಏಂಜಲೀಸ್ ಆಸ್ಪತ್ರೆಯಲ್ಲಿ ಜನರಲ್ ಸರ್ಜರಿ, ಥೊರಾಸಿಕ್ ಮತ್ತು ವಾಸ್ಕ್ಯುಲಾರ್ ಸರ್ಜರಿಯ ವಿವಿಧ ವಿಭಾಗಗಳ SURGEON- ಹೀಗೆ ಅವರ ಸೇವೆ ತಡೆಯಿಲ್ಲದೆ ಸಾಗಿತು; ಅಮೆರಿಕ ಅವರನ್ನು ಗುರುತಿಸಿತು.

ಮೈಸೂರಿನಲ್ಲಿ ೧೯೪೭-೪೮ರ ಸಮಯದಲ್ಲಿ ನಡೆದ ಸ್ವರಾಜ್ಯದ ಆಂದೋಲನದಲ್ಲಿ ಭಾಗಿಯಾಗಿದ್ದ ಚಂದ್ರಶೇಖರಮೂರ್ತಿಯವರು ರಾಮಸ್ವಾಮಿ ಅಯ್ಯರ್‌ರ ಮರಣಕ್ಕೆ ಸಾಕ್ಷಿಯಾಗಿ ಅಲ್ಲಿಯೇ ಸತ್ಯಾಗ್ರಹದಲ್ಲಿ ತೊಡಗಿದ್ದವರು. ಅವರಿಗೆ ಅಧ್ಯಯನ, ಅಧ್ಯಾಪನ ಮತ್ತು ಅರ್ಪಣಾಭಾವಗಳ ಪ್ರೇರಣೆ ದೊರೆತದ್ದು ತಂದೆ ಕೆ.ಜಿ. ಸುಬ್ರಹ್ಮಣ್ಯಶಾಸ್ತ್ರಿಗಳಿಂದ. ಅವರ ಅರ್ಧಶತಮಾನದ ಗೆಳೆಯ ಮೈಸೂರು ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಜಿ.ಸುಬ್ರಹ್ಮಣ್ಯಂ ಹೇಳುವಂತೆ ಆ ಕಾಲೇಜಿನ ಅನಾಟಮಿ ವಿಭಾಗಕ್ಕೆ ಜೀವಕಳೆ ಬಂದದ್ದೇ ಚಂದ್ರಶೇಖರಮೂರ್ತಿ ಅವರಿಂದ; ಯಾವ ಶಸ್ತ್ರಚಿಕಿತ್ಸೆಯೂ- ಅದು ಅವರಿಗೆ ಸಂಬಂಧಿಸದ ಕ್ಷೇತ್ರದ್ದಾದರೂ - ಮೂರ್ತಿಯವರಿಗೆ ಒಂದು ಸವಾಲಾಗಿರಲಿಲ್ಲ; ಅವರೊಬ್ಬ ಬಹುಮುಖ ಪ್ರತಿಭೆಯಾಗಿಯೇ ಮೊದಲಿನಿಂದಲೂ ಬೆಳೆದು ಬಂದವರು. ಚಂದ್ರಶೇಖರಮೂರ್ತಿಯವರು ತಮ್ಮ ಇಪ್ಪತ್ನಾಲ್ಕನೆಯ ವಯಸ್ಸಿನಲ್ಲಿ ವಿವಾಹವಾದದ್ದು ಸ್ವಾತಂತ್ರ್ಯ ಹೋರಾಟಗಾರರೂ ಸಮಾಜಸೇವಕರೂ ಆದ ಕೊಣನೂರು ಕೇಶವಮೂರ್ತಿಗಳ ಮಗಳು ಕೆ.ಕೆ. ವಿಜಯಲಕ್ಷ್ಮಿ ಅವರನ್ನು. ಅವರೇ ಕೃತಜ್ಞತೆಯಿಂದ ನೆನೆಯುವಂತೆ ಅವರ ಎಲ್ಲ ಸಾಧನೆಗಳ ಹಿಂದೆ ವಿಜಯಲಕ್ಷ್ಮಿ ಅವರ ತ್ಯಾಗ ಮತ್ತು ಸಹಕಾರ ಇದ್ದೇ ಇದೆ. ಕಲ್ಲು ಶಿಲ್ಪವಾಗಲು ಉಳಿಯ ಏಟು ಒಂದೇ ಸಾಲದು, ಸೌಂದರ್ಯಕ್ಕೆ ಮುದ್ರೆಯೊತ್ತುವ ಕಣ್ಣುಗಳೂ ಬೇಕು. ಅದೆಲ್ಲವನ್ನೂ ಪಡೆದ ಅದೃಷ್ಟಶಾಲಿ ಡಾ.ಚಂದ್ರಶೇಖರಮೂರ್ತಿ.

**ಡಾ. ಬಿ.ಎಸ್. ಪ್ರಣತಾರ್ತಿಹರನ್**

# ಡಾ. ಚಂದ್ರಶೇಖರಮೂರ್ತಿ ಅವರ ವಂಶವೃಕ್ಷ

**ಕಟ್ಟೇಪುರ ಗಂಗಾಧರಶಾಸ್ತ್ರೀ**

**ಕೆ.ಜಿ.ಸುಬ್ರಹ್ಮಣ್ಯಶಾಸ್ತ್ರೀ + ಗಂಗಮ್ಮ (ಅಗ್ರಹಾರ ಸುಬ್ರಹ್ಮಣ್ಯಾವಧಾನೀ ಅವರ ಮಗಳು)**

(೧೯೦೧-೧೯೯೩) (೧೯೦೭-೧೯೯೮)

- ಕೆ.ಎಸ್.ಶಾಮಣ್ಣ +ಕೆ.ಎಸ್.ಲೀಲಾವತಿ
- ಆರ್.ಎಸ್.ಕೇಶವಮೂರ್ತಿ (ಆರ್.ಎಸ್.ರಾಜಣ್ಣ) +ಎಸ್.ವಿ.ನಾಗರತ್ನ
- ಡಾ.ಆರ್.ಎಸ್.ಚಂದ್ರಶೇಖರಮೂರ್ತಿ +ಕೆ.ಕೆ.ವಿಜಯಲಕ್ಷ್ಮಿ
- ಆರ್.ಎಸ್.ರಾಮನಾಥ +ಸುವರ್ಣಲಕ್ಷ್ಮಿ
- ಎ.ಕೆ.ಸುಂದರೇಶನ್ (ಸೋದರಮಾವ ಎ.ಎಸ್.ಕೃಷ್ಣಪ್ಪ ಅವರಿಗೆ ದತ್ತು, ಅಗ್ರಹಾರ) + ರಾಧಾ
- ಆರ್.ಎಸ್.ಶ್ರೀಧರ +ವೇದವತಿ
- ಡಾ.ಆರ್.ಎಸ್.ಕೃಷ್ಣಮೂರ್ತಿ +ರೋಸಲಿ

ಡಾ.ಆರ್.ಎಸ್.ಚಂದ್ರಶೇಖರಮೂರ್ತಿ +ಕೆ.ಕೆ.ವಿಜಯಲಕ್ಷ್ಮಿ:

- ಡಾ.ಮೀರಾ (ಮೀನಾಕ್ಷಿ), ಎಂಬಿಬಿಎಸ್, ಕಂಪ್ಯೂಟರ್ ಸೈನ್ಸ್ ಕನ್ಸಲ್ಟೆಂಟ್, (ಮೆಡಿಕಲ್ ಫೀಲ್ಡ್ ) ಜ: ೧೯೫೮
  + ರಾಮಮೂರ್ತಿ, ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಎಂಜಿನಿಯರ್; ಮೆನೇಜರ್, ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ವಿಂಗ್, BELL LABS, AT&T
- ಡಾ. ರಘು, ನೇತ್ರ ಪರಿಣತ, ಜ: ೧೯೬೪
- ಅಪರ್ಣಾ, M.Public Health, ಅಧಿಕಾರಿ, ಫ್ರೆಂಚ್ ಫಾರ್ಮಸ್ಯುಟಿಕಲ್ ಕಂಪನಿ

# ಪೋಷಕರು

## ಶ್ರೀಮತಿ ಎಚ್.ಎನ್. ಅನಸೂಯಮ್ಮ, ಶ್ರೀ ವೈ.ಎನ್. ಸತ್ಯನಾರಾಯಣ

ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು ಎಳ್ಳೇಶಪುರ ಗ್ರಾಮದ ಎನ್. ನರಸಿಂಹಯ್ಯ ಮತ್ತು ನಾಗಮ್ಮ ದಂಪತಿಗಳ ಮಗ ವೈ.ಎನ್. ಸತ್ಯನಾರಾಯಣ (೭೦) ಅವರು ೩೭ ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ಹಾಸನದಲ್ಲಿ ನೆಲೆಸಿದ್ದಾರೆ. ಅಜ್ಜ: ನಾರಣಪ್ಪ (ಮರಿಯಪ್ಪ) ೧೬ ಹಳ್ಳಿಯ ಜೋಯಿಸಗಿರಿ ಮತ್ತು ದೇವರಪೂಜೆ ಮಾಡಿದವರು, ನಾಟಕ ಕಲಿಸಿದವರು, ಪ್ರಸಾಧನ ಮಾಡಿದವರು, ಕೃಷಿಕರು. ತಂದೆ ಕೂಡ ಶಾಲಾಮಾಸ್ತರಾಗಿದ್ದವರು; ಕಾವ್ಯವಾಚನ, ಜೋಯಿಸಿಕೆ ಮಾಡಿದವರು. ತಾಯಿ ಎಲೆ ಹಚ್ಚಿ ಮಾರಿ ಸಂಸಾರಕ್ಕೆ ನೆರವಾಗಿದ್ದರು, ಸಂಪ್ರದಾಯದ ಹಾಡುಗಾರ್ತಿ. ವೈಎನ್‌ಎಸ್ ಕೂಡ ಅಜ್ಜನ ಪ್ರಭಾವದಿಂದ ಶಿವಜಲಂಧರ (ಜಲಂಧರ), ಜಗಜ್ಯೋತಿ ಬಸವೇಶ್ವರ (ಬಿಜ್ಜಳ, ರಾಹು), ಕುರುಕ್ಷೇತ್ರ (ಭೀಮ), ಮಾಗಡಿ ಕೆಂಪೇಗೌಡ (ಬೈರೇಗೌಡ) ಇತ್ಯಾದಿ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ವಕೀಲರ ಸಹಾಯಕ, ಪುಲೀಸ್ ಆಗಿ ವೃತ್ತಿ ಜೀವನ ಆರಂಭಿಸಿದ ವೈಎನ್‌ಎಸ್ (ವಾಧೂಲಸ, ಯಜುರ್ವೇದ, ಆಪಸ್ತಂಬ) ಕಳೆದ ೧೨ ವರ್ಷಗಳಿಂದ ಕೌಶಿಕ ಸಂಕೇತಿ ಸಂಘಕ್ಕಾಗಿ ದುಡಿಯುತ್ತಿದ್ದು *ಈ*ಗ ಹಾಸನ ವಿಭಾಗದ ಖಜಾಂಚಿ. ದೊಡ್ಡತಿರುಪತಿ ಶ್ರೀ ಲಕ್ಷ್ಮೀವೆಂಕಟರಮಣ ಮನೆದೇವರು; ನಡೆದುಕೊಳ್ಳುತ್ತಿರುವುದು ಮಾವಿನಕೆರೆ ವೆಂಕಟಾಚಲಪತಿಗೆ. ಪತ್ನಿ ಅನಸೂಯಮ್ಮ ಹಾನಗಲ್ಲು ನಾರಾಯಣ (+ಸುಂದರಮ್ಮ) ಅವರ ಮಗಳು; ಅಜ್ಜ ಮುತ್ತಣ್ಣನವರು ಶಾನುಭೋಗರು, ಕೃಷಿಕರು; ತಾಯಿಯ ತಾಯಿ ಬೀಸಮ್ಮ ಹಾಗೂ ಅವರ ತಾಯಿ 'ಫೆರಿ ಅಮ್ಮ' ಹಾಡುಗಾರ್ತಿಯರಾಗಿದ್ದವರು. ಮಕ್ಕಳು: ವೈ.ಎಸ್. ನರಸಿಂಹಮೂರ್ತಿ (ಮುರಳಿ) (+ನಂದಿನಿಮೂರ್ತಿ), ವೈ.ಎಸ್.ಕುಸುಮ (+ಎಚ್.ಎಸ್. ರಮೇಶ್)

## ಶ್ರೀಮತಿ ವಾಣೀ, ಪ್ರೊ. ಎಂ.ಎನ್. ಚಂದ್ರಶೇಖರ್

ಮತ್ತೂರು ನಾರಾಯಣ ಅವಧಾನೀ ಚಂದ್ರಶೇಖರ್ (ಜ: ೨೬.೯.೧೯೪೮) ಸದ್ಯ ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರು. ಸಂಸ್ಕೃತದಲ್ಲಿ ಎಂ.ಎ., ಪದವಿ ಪಡೆದ ಅನಂತರ ೧೯೭೨ರಿಂದ ೧೯೮೭ರವರೆಗೆ ಕಾಡುಗೋಡಿಯ ಶ್ರೀ ಸತ್ಯಸಾಯಿ ಕಾಲೇಜಿನಲ್ಲಿ; ೧೯೮೭ರಿಂದ ಮುಂದಕ್ಕೆ ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜತೆಗೆ ಭಾರತೀಯ ವಿದ್ಯಾಭವನದ ಬಿರ್ಲಾ ಫೌಂಡೇಶನ್‌ನ ಸಂಸ್ಕೃತ ವಿಭಾಗದ ಗೌರವ ನಿರ್ದೇಶಕರು; ಉಚಿತ ಸಂಸ್ಕೃತ ತರಗತಿಗಳನ್ನೂ ವೇದ ತರಗತಿಗಳನ್ನೂ ನಡೆಸುತ್ತಿದ್ದಾರೆ. ತಾಯಿ: ಲಕ್ಷ್ಮೀದೇವಿ. ಪತ್ನಿ: ಹೊಸಹಳ್ಳಿಯ ನಂಜುಂಡ ಅವಧಾನಿಗಳು ಮತ್ತು ಲಕ್ಷ್ಮೀದೇವಮ್ಮ ಅವರ ಮಗಳು ವಾಣೀ ಅವರು ಗಮಕ ಮತ್ತು ಸಂಗೀತದಲ್ಲಿ ಪರಿಶ್ರಮವುಳ್ಳ ಗೃಹಿಣಿ.

## ಶ್ರೀಮತಿ ಎಸ್. ಮೀರಾ, ಶ್ರೀ ಶ್ರೀಧರ್

ಶ್ರೀಧರ್ ಬಸವಾಪಟ್ಟಣ (ಜ: ೧೯೬೫) ಬಿ.ಇ. (ಮೈಸೂರು ವಿ.ವಿ.), ಎಂ.ಎಸ್. (ಯು.ಎಸ್.ಎ), ಸದ್ಯ ಅಮೆರಿಕಾದಲ್ಲಿ ಇಂಜಿನಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಂದೆ: ಬಿ.ಆರ್. ಅನಂತನಾರಾಯಣ ಬೆಂಗಳೂರಿನ 'ಮೈಕೋ'ದಲ್ಲಿ ಲೆಕ್ಕಾಧಿಕಾರಿ (Accounts Officer) ಆಗಿದ್ದರು; ಅವರ ತಂದೆ ರಾಮಸ್ವಾಮಯ್ಯ (+ ಲಕ್ಷ್ಮೀನರಸಮ್ಮ), ತಂದೆಯ ತಂದೆ ಅನಂತಯ್ಯ (+ ಮೀನಾಕ್ಷಮ್ಮ) ಮೂಲತಃ ಒಡ್ಡರಹಳ್ಳಿಯ ಜೋಡೀದಾರ್ ಮನೆತನದವರು, ಕಾಲಕ್ರಮದಲ್ಲಿ ಬಸವಾಪಟ್ಟಣಕ್ಕೆ ವಲಸೆ ಬಂದು ಕೃಷಿಕರಾಗಿ ಬಾಳಿದವರು. ತಾಯಿ: ಭಾಗ್ಯಲಕ್ಷ್ಮಿ ಅವರು 'ಮೈಸೂರು ಚಿನ್ನಪ್ಪ' (ಮೂಲತಃ ಹನ್ಯಾಳಿನವರು;ಕಳೆದ ತಲೆಮಾರಿನಲ್ಲಿ ಬಸವಾಪಟ್ಟಣಕ್ಕೆ ವಲಸೆ ಬಂದು ಕೃಷಿಕರಾಗಿ ಜೀವನ ನಡೆಸಿದವರು; ಮೂಲನಾಮ

ಶ್ರೀನಿವಾಸಯ್ಯ)ನವರ ಮಗಳು. ಪತ್ನಿ: ಬೆಂಗಳೂರಿನ ಶ್ರೀನಿವಾಸನ್ ಅವರ ಮಗಳು ಎಸ್. ಮೀರಾ (ಜ: ೧೯೭೦) ಬಿ.ಇ. (ಬೆಂಗಳೂರು ವಿ.ವಿ.), ಎಂ.ಎಸ್(ಕೆನಡಾ), ಸದ್ಯ ಯು.ಎಸ್.ಎ.ನಲ್ಲಿ ಉದ್ಯೋಗಿ. ಮಕ್ಕಳು: ಅಶ್ವಿನ್, ವಿವೇಕ್.

## ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ಕೆ.ವಿ. ನಾಗರಾಜ್

ಮೈಸೂರಿನ ಕೆ.ವಿ. ನಾಗರಾಜ್ (ಜ.೧೯೫೭) ಅವರ ತಂದೆ: ಕೊಂಡಗುಳದ ಸುಬ್ಬರಾಯ ಮತ್ತು ಸುಬ್ಬಮ್ಮನವರ ಮಗ ಸಾಹಿತ್ಯರತ್ನ ವೆಂಕಟರಾಮಯ್ಯನವರು - ನಿವೃತ್ತ ಹಿಂದಿ ಪಂಡಿತರು; ಕವಿ, ಲೇಖಕ. ತಾಯಿ: ಹಂದನಹಾಲಿನ ಅನಂತರಾಮಯ್ಯ ಮತ್ತು ಗುಂಡಕ್ಕನವರ ಮಗಳು ಕಲಾವತಿ. ನಾಗರಾಜ್ ಮೈಸೂರಿನ ದಳವಾಯಿ ಪಾಠಶಾಲೆ, ಮಹಾರಾಜ ಜೂನಿಯರ್ ಕಾಲೇಜ್ ಮತ್ತು ಯುವರಾಜಾ ಕಾಲೇಜಿನಲ್ಲಿ ಓದಿ ಬಿ.ಎಸ್‌ಸಿ., ಪದವೀಧರರಾದರು; ಮುಂಬಯಿಯ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಪಡೆದರು. ಕಸ್ತೂರಿ ಕೆಮಿಕಲ್ಸ್ ಫ್ಯಾಕ್ಟರಿಯಲ್ಲಿ ಕೆಮಿಸ್ಟ್ ಆಗಿ ಉದ್ಯೋಗ ಪ್ರಾರಂಭಿಸಿ ಮುಂದೆ ಸಿಂಡಿಕೇಟ್ ಬ್ಯಾಂಕಿನ ಉದ್ಯೋಗಿಯಾದರು. ಹವ್ಯಾಸ: ಚದುರಂಗ, ಕ್ರಿಕೆಟ್; ಒಳ್ಳೆಯ ಪುಸ್ತಕಗಳನ್ನು ಓದುವುದು; ಸಾಧ್ಯವಾದಷ್ಟು ಸಮಾಜಸೇವೆ. ಪತ್ನಿ ಸುಬ್ಬಲಕ್ಷ್ಮಿ: ಹಾನಗಲ್‌ನ ನಾಗಣ್ಣ ಮತ್ತು ರುಕ್ಮಿಣಿ ಅವರ ಮಗಳು; ಬಸವಾಪಟ್ಟಣ, ಹಾಸನ, ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ ಬಿ.ಎಸ್‌ಸಿ., ಬಿ.ಇಡಿ., ಪದವಿ ಪಡೆದರು; ಮೈಸೂರಿನ ಭಗಿನೀ ಸೇವಾ ಸಮಾಜ ಪ್ರೌಢಶಾಲೆಯಲ್ಲಿ ಗಣಿತ ಮತ್ತು ವಿಜ್ಞಾನವನ್ನು ಬೋಧಿಸುವ ಅಧ್ಯಾಪಕಿ ಆದರು. ಮಕ್ಕಳು: ಶ್ರೀನಿವಾಸ ಪ್ರಸಾದ್ (೧೧), ಅನಘ (೧).

## ಶ್ರೀಮತಿ ಸಂಪತ್‌ಲಕ್ಷ್ಮಿ, ಶ್ರೀ ಸಿ.ಆರ್. ನಾಗರಾಜ್

ಸಿ.ಆರ್. ನಾಗರಾಜ್ (೬೧), ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದು ಅನಂತರ AMIE., ಮಾಡಿದರು. Border Roads Organisationನಲ್ಲಿ ವೃತ್ತಿ ಪ್ರಾರಂಭಿಸಿ, ಭಾರತದ ಅನೇಕ ಪ್ರಾಂತಗಳಲ್ಲಿ ೩೮ ವರ್ಷಗಳ ಕಾಲ ಸೇವೆ ಸಲ್ಲಿಸಿ, ಗೋವ PWDಯಿಂದ ನವಂಬರ್ ೨೦೦೦ದಲ್ಲಿ ನಿವೃತ್ತಿ ಪಡೆದು ಈಗ ಮೈಸೂರಿನಲ್ಲಿ ವಾಸವಾಗಿದ್ದಾರೆ. ತಂದೆ ವಿ. ರಾಮಸ್ವಾಮಯ್ಯ (ಮರಿಯಪ್ಪ), ಚಿಲ್ಕುಂದ, ಹುಣಸೂರು ತಾಲ್ಲೂಕ್, ಮೈಸೂರು ಜಿಲ್ಲೆ; ವೃತ್ತಿ: ವ್ಯವಸಾಯ. ತಾಯಿ: ಸೀತಾಲಕ್ಷ್ಮಿ. ತಂದೆಯ ತಂದೆ: ವೆಂಕಟರಾಮಯ್ಯ, ಚಿಲ್ಕುಂದ. ತಾಯಿಯ ತಂದೆ: ಶ್ರೀನಿವಾಸಯ್ಯ, ಬಸವಾಪಟ್ಟಣ. ಪತ್ನಿ: ಸಂಪತ್‌ಲಕ್ಷ್ಮಿ, ಕುಪ್ಪಹಳ್ಳಿ (೧೯೭೨ರಲ್ಲಿ ಅಕಾಲ ಮರಣ); ಶ್ಯಾನುಭೋಗ್ ವೆಂಕಟಸುಬ್ಬಯ್ಯ ಮತ್ತು ಸುಶೀಲಮ್ಮನವರ ಮಗಳು. ಮಗಳು: ವೀಣಾ ಎನ್, ಅಳಿಯ: ನಾರಾಯಣ ವಿ. ಸುಬ್ಬರಾವ್, ಮಮ್ಮಗ ಪ್ರಮಥ ಅಮೆರಿಕಾದಲ್ಲಿದ್ದಾರೆ.

## ಶ್ರೀಮತಿ ವೀಣಾ ಎನ್, ಶ್ರೀ ನಾರಾಯಣ ಸುಬ್ಬರಾವ್

ಎನ್.ಎನ್. ಮೂರ್ತಿ (ಶಾಮಣ್ಣ) ಮತ್ತು ಶಾಂತಲಕ್ಷ್ಮಿಯವರ ಏಕೈಕ ಪುತ್ರ ನಾರಾಯಣ ವಿ. ಸುಬ್ಬರಾವ್ (೩೬) ಬೆಂಗಳೂರಿನ ಆರ್.ವಿ. ಕಾಲೇಜಿನಿಂದ ತಾಂತ್ರಿಕ ಪದವಿ ಪಡೆದು (ಬಿ.ಇ.), ಅಮೆರಿಕಾದಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸ (ಎಂ.ಎಸ್.,) ಮುಗಿಸಿ, ಅಲ್ಲಿಯೇ (ಯು.ಎಸ್.ಎ.) ಎನ್.ಜೆ. ಎಟಿ ಅಂಡ್ ಟಿ. ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಂದೆಯ ತಂದೆ ಚೀರನಹಳ್ಳಿ ನಾರಾಯಣರಾವ್, ಕೆ.ಆರ್. ನಗರ ತಾಲ್ಲೂಕ್, ಮೈಸೂರು ಜಿಲ್ಲೆ; ವೃತ್ತಿ: ವ್ಯವಸಾಯ. ಪತ್ನಿ: ವೀಣಾ ಎನ್; ತಂದೆ: ಸಿ.ಆರ್. ನಾಗರಾಜ್, ತಾಯಿ: ಸಂಪತ್‌ಲಕ್ಷ್ಮಿ; ತಂದೆಯ ತಂದೆ ವಿ. ರಾಮಸ್ವಾಮಯ್ಯ, ಚಿಲ್ಕುಂದ, ಹುಣಸೂರು ತಾಲ್ಲೂಕ್, ಮೈಸೂರು ಜಿಲ್ಲೆ. ವೀಣಾ Chartered Accountant ಆಗಿ ನ್ಯೂಯಾರ್ಕ್‌ನ WSL ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಗ ಪ್ರಮಥ ವೆಂಕಟನಾರಾಯಣ (೫).

## ಶ್ರೀಮತಿ ಪೂರ್ಣಿಮಾ, ಶ್ರೀ ಐ.ಎನ್. ವೆಂಕಟಸುಬ್ಬರಾವ್

ಐಚನಹಳ್ಳಿಯ ಜಮೀನ್ದಾರ್ ಗುಂಡಪ್ಪ ಅವರ ಮಗ ಡಾ. ಐ.ಜಿ. ನರಸಿಂಹಯ್ಯ; ಅವರ ಮಗ ಐ.ಎನ್. ವೆಂಕಟಸುಬ್ಬರಾವ್ (ಜ.೮.೬.೧೯೩೫). ಐ.ಎನ್.ವಿ. ಅವರ ತಾಯಿ: 'ಮಂಡ್ಯದ ಚಿನ್ನಣ್ಣ' ಅವರ ಮಗಳು ಗೌರಮ್ಮ. ೧೯೫೮ರಲ್ಲಿ ದಾವಣಗೆರೆ ಕಾಲೇಜಿನಿಂದ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದ ಐ.ಎನ್.ವಿ.ಯವರು ದಕ್ಷಿಣ ಕನ್ನಡ ವೃತ್ತದಲ್ಲಿ ಸೂಪರಿಂಟೆಂಡಿಂಗ್ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿದರು. ಕೆರೆ, ಮೇಲು ಕಾಲುವೆ, ಸೇತುವೆಗಳು, ರಸ್ತೆಗಳು, ಕಟ್ಟಡಗಳನ್ನು ಕಟ್ಟಿಸಿದರು. ಅವುಗಳಲ್ಲಿ ಮೈಸೂರಿನ ಕಲಾಮಂದಿರ; ತುಮಕೂರಿನ ಡಿ.ಸಿ. ಆಫೀಸ್ ಕಟ್ಟಡ, ಆಸ್ಪತ್ರೆ, ಕೋರ್ಟು, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಗಣನೀಯವಾದವು. ೩೫ ವರ್ಷ ಸೇವೆ ಸಲ್ಲಿಸಿದ ಐ.ಎನ್.ವಿ. ೧೯೯೩ರಲ್ಲಿಮಂಗಳೂರಿನಲ್ಲಿ ನಿವೃತ್ತರಾದರು. ಡಾ|| ಎಚ್.ಆರ್.ಮುತ್ತಣ್ಣ ಮತ್ತು ಮಾಲತಿಮಣಿ ಅವರ ಮಗಳು ಎಚ್.ಎಂ. ಪೂರ್ಣಿಮಾ ಅವರೊಂದಿಗೆ ವಿವಾಹವಾದದ್ದು ೧೯೫೬ರಲ್ಲಿ. ಫುಟ್‌ಬಾಲ್, ಬಾಲ್ ಬ್ಯಾಡ್‌ಮಿಂಟನ್, ಖೋಖೋ, ಕಬಡ್ಡಿ, ಟೆನಿಸ್ ಆಟಗಾರರಾದ ಐಎನ್‌ವಿ ಅವರ ಮಕ್ಕಳು: ಐ.ವಿ. ವೆಂಕಟೇಶ್, ಐ.ವಿ. ನಾಗೇಂದ್ರ, ಐ.ವಿ. ಹರಿಣಿ.

## ಶ್ರೀಮತಿ ಜಯಶ್ರೀ ಶಾಸ್ತ್ರಿ, ಶ್ರೀ ಹನಸೋಗೆ ಎಸ್. ಶಾಸ್ತ್ರಿ

ಹನಸೋಗೆ ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಜಯಶ್ರೀ ಶಾಸ್ತ್ರಿ ಅವರು ಅಮೆರಿಕದ ಮಿಷಿಗನ್ ಪ್ರಾಂತದ ಟ್ರಾಯ್‌ನಲ್ಲಿ ವಾಸವಾಗಿದ್ದಾರೆ. ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್‌ನ ಖ್ಯಾತ ಗಣಿತ ಉಪಾಧ್ಯಾಯರಾಗಿದ್ದ ಎಚ್.ಎಸ್.ಶಿವರಾಂ ಮತ್ತು ಪದ್ಮಾ ಶಿವರಾಂ ಅವರ ಸುಪುತ್ರರಾಗಿ ಜನಿಸಿದ ಹನಸೋಗೆ ಎಸ್. ಶಾಸ್ತ್ರಿ ಅವರು ಸದ್ಯ ಮಿಷಿಗನ್‌ನ ಯಜಕಿನಲ್ಲಿ ಎಂಜಿನಿಯರಾಗಿ ಸೇವಾನಿರತರಾಗಿದ್ದಾರೆ. ಹನಸೋಗೆ ಸುಬ್ಬರಾವ್ ಮತ್ತು ಸರೋಜಮ್ಮ ಅವರ ಮಗಳು ಜಯಶ್ರೀ ಶಾಸ್ತ್ರಿ ಅವರು ಕೂಡ ಮಿಷಿಗನ್‌ನಲ್ಲಿ ಸೀನಿಯರ್ ಬಿಸಿನೆಸ್ ಸಿಸ್ಟಂಸ್ ಅನಾಲಿಸ್ಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಕೇತಿಗಳ ಸಾಂಸ್ಕೃತಿಕ ಪರಂಪರೆಯ ಉಳಿವು ಬೆಳವಿಗಾಗಿ NASA ಸಂಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ೨೦೦೦-೨೦೦೨ರ ಅವಧಿಯಲ್ಲಿ NASAದ ಮೊದಲ (ಮಹಿಳಾ) ಅಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಮಗಳು ಸಂಗೀತಾ ಕ್ಲಿನಿಕಲ್ ಮೆಸೇಜ್ ಥೆರಪಿಸ್ಟ್ ಆಗಿರುವುದಲ್ಲದೆ ಕಥಕ್ ನೃತ್ಯ ಕಲಾವಿದೆಯೂ ಆಗಿದ್ದಾರೆ. ಇನ್ನೊಬ್ಬ ಮಗಳು ಸುಚೇತಾ ಷಿಕಾಗೋದ ನಾರ್ತ್‌ವೆಸ್ಟರ್ನ್ ಯೂನಿವರ್ಸಿಟಿಯಲ್ಲಿ ಮೊದಲ ವರ್ಷದ ವೈದ್ಯಕೀಯ ವಿದ್ಯಾರ್ಥಿನಿ. ತಮ್ಮ ಮುದ್ದು ಮಕ್ಕಳ ಬಗೆಗೆ ಅಭಿಮಾನವಿರುವಂತೆಯೇ ಶಾಸ್ತ್ರಿ ದಂಪತಿಗಳಿಗೆ ಸಂಕೇತಿ ಅಧ್ಯಯನ ಯೋಜನೆಯಲ್ಲಿ ಭಾಗವಹಿಸಲೂ ಹೆಮ್ಮೆ.

## ಶ್ರೀಮತಿ ಪಂಕಜ, ಪ್ರೊ. ಕೆ.ಎಸ್. ಕೃಷ್ಣಮೂರ್ತಿ

ಪ್ರೊ|| ಕೇರಳಾಪುರ ಶಾಮಣ್ಣ ಕೃಷ್ಣಮೂರ್ತಿ ಎಂ.ಎ., ರಾ.ಭಾ. ವಿಶಾರದ್ (ಹಿಂದಿ), ನಿವೃತ್ತ ಕನ್ನಡ ಪ್ರಾಧ್ಯಾಪಕರು. ತಂದೆ ಕೆ. ಶಾಮಣ್ಣ, ತಾಯಿ ಕಾವೇರಮ್ಮ. ವಾಧೂಲಸ ಗೋತ್ರ, ಯಜುರ್ವೇದ, ಆಪಸ್ತಂಬ ಸೂತ್ರ. ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ದೀರ್ಘ ಸೇವೆ; ಕನ್ನಡ ಲೇಖಕ. ಆಕಾಶವಾಣಿಗಾಗಿಯೂ ಲೇಖನಗಳನ್ನು ಬರೆದಿರುತ್ತಾರೆ. ಪತ್ನಿ: ಶ್ರೀಮತಿ ಪಂಕಜ ಕೃಷ್ಣಮೂರ್ತಿ, ಹೇಮಗಿರಿ ಕುಪ್ಪಹಳ್ಳಿಯ ನಿವೃತ್ತ ಶಾನುಭೋಗರಾದ ಶ್ರೀ ಕೆ.ವಿ. ವೆಂಕಟಸುಬ್ಬಯ್ಯ ಅವರ ಮಗಳು. ವಿಳಾಸ: ಸುಕೃತ, ೬೧, ದೇಸಾಯಿ ಗಾರ್ಡನ್, ಕೋಣನ ಕುಂಟೆ ಕ್ರಾಸ್, ವಸಂತಪುರ ಮುಖ್ಯ ರಸ್ತೆ, ಬೆಂಗಳೂರು - ೫೬೦ ೦೬೨.

## ಶ್ರೀಮತಿ ನಿರಂಜಿನಿ, ಶ್ರೀ ಕೆ.ಎಸ್. ಬಾಲಚಂದ್ರ

ಕೇರಳಾಪುರದ ಪ್ರೊ|| ಕೆ.ಎಸ್. ಕೃಷ್ಣಮೂರ್ತಿ ಅವರ ಮಗ ಶ್ರೀ ಕೆ.ಎಸ್. ಬಾಲಚಂದ್ರ (ಜ:೨೦.೧.೧೯೫೦) ಬಿ.ಇ. (ಎನ್.ಐ.ಇ.), ಎಂ.ಟೆಕ್., (ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜು, ಭೂಪಾಲ್) ಅವರು ನಾಗಾರ್ಜುನ ಪವರ್ ಕಾರ್ಪೊರೇಷನ್‌ನ ಟೆಕ್ನಿಕಲ್ ಡೈರೆಕ್ಟರಾಗಿದ್ದಾರೆ. ಟಾಟಾ

ಕನ್‌ಸಲ್ಟಿಂಗ್ ಇಂಜಿನಿಯರ್ಸ್‌ನಲ್ಲಿ ಪ್ರಾರಂಭಿಕ ಸೇವೆ ಸಲ್ಲಿಸಿ, ಅನಂತರ, ರಾಷ್ಟ್ರೀಯ ಥರ್ಮಲ್ ಪವರ್ ಕಾರ್ಪೊರೇಷನ್‌ನಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರಾಗಿ ಸಲ್ಲಿಸಿದ ಸೇವೆಗಾಗಿ ಮೆಚ್ಚುಗೆಗೆ ಪಾತ್ರರಾಗಿ, ಇದೀಗ ಮಂಗಳೂರಿನಲ್ಲಿ ಸ್ಥಾಪಿಸಲಾಗುತ್ತಿರುವ ಶಾಖೋತ್ಪನ್ನ ವಿದ್ಯುತ್ ಕಾರ್ಖಾನೆಯ ನಿರ್ಮಾಣ ಕಾರ್ಯದಲ್ಲಿ ನಿರತರಾಗಿದ್ದಾರೆ. ಅವರದು ವಾಧೂಲಸ ಗೋತ್ರ, ಯಜುರ್ವೇದ, ಆಪಸ್ತಂಬ ಸೂತ್ರ. ಪತ್ನಿ: ಶ್ರೀಮತಿ ನಿರಂಜಿನಿ: ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿದ್ದ ಟಿ.ಎಸ್.ರಾಮಕೃಷ್ಣಶಾಸ್ತ್ರಿಗಳ (ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಟಿ.ಎಸ್.ಸುಬ್ಬರಾಯ ಅವರ ಸೋದರ) ಮಗಳು; ತಂದೆಯ ತಂದೆ: ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದ ಟಿ.ಎನ್.ಸುಬ್ಬರಾಯ ಶಾಸ್ತ್ರಿಗಳು ಸಂಸ್ಕೃತ ಮತ್ತು ಕನ್ನಡದಲ್ಲಿ ಹೆಸರಾಂತ ವಿದ್ವಾಂಸರಾಗಿದ್ದರು.

## ಶ್ರೀಮತಿ ವಾಸಂತಿ, ಶ್ರೀ ಜಿ. ಮಯೂರಸಿಂಹ

ಜಿ.ಮಯೂರಸಿಂಹ M.E. IISc, Bangalore, CQA. USA. ಅವರು ಎಕ್ಸಿಕ್ಯುಟಿವ್ ಇಂಜಿನಿಯರ್ ಪಿ. ಗಣಪತಿ ಮತ್ತು ಪದ್ಮಿನಿ ಅವರ ಹಿರಿಯ ಪುತ್ರ. ಉದ್ದಕ್ಕೂ ಪ್ರಥಮ ಶ್ರೇಣಿಯ ವಿದ್ಯಾರ್ಥಿ, ಅಂತಿಮ ಬಿ.ಇ.ನಲ್ಲಿ ೯ನೆಯ ರ್‍ಯಾಂಕ್. *ಈ*ಗ ಅಮೆರಿಕದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ಚಿತ್ರಕಲೆಯಲ್ಲಿ ಬಾಲ್ಯದಿಂದಲೂ ಆಸಕ್ತಿ, ಅಮೆರಿಕದಲ್ಲಿ ಮಾಸ್ಟರ್ಸ್ ಕೋರ್ಸ್ ಮತ್ತು ಹಲವು ಕಡೆ ಚಿತ್ರಕಲಾ ಪ್ರದರ್ಶನ, ಪ್ರಶಂಸೆ. ಕರ್ನಾಟಕ ಸಂಗೀತ ಮತ್ತು ಉಪಯುಕ್ತ ಮಂತ್ರಗಳ ಅಧ್ಯಯನ, ಅನುಷ್ಠಾನ. ಮುತ್ತಜ್ಜ ಒಡ್ಡರಹಳ್ಳಿಯ ಜೋಡಿದಾರ್ ನರಸಿಂಗರಾಯರು; ಅಜ್ಜ ಎ.ಪಿ.ರಾವ್ ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರಾಗಿದ್ದವರು. ಪತ್ನಿ: ವಾಸಂತಿ: ತಂದೆ ಹಾಸನದ ಭಾರತೀ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಮುಖ್ಯ ಲೆಕ್ಕಾಧಿಕಾರಿ ಕೆ.ಎನ್. ಗುಂಡೂರಾವ್; ತಾಯಿ ಸರೋಜಮ್ಮನವರು. ಪಾಕಶಾಸ್ತ್ರ, ಇಂಟೀರಿಯರ್ ಡೆಕೊರೇಷನ್‌ನಲ್ಲಿ ವಿಶೇಷ ಆಸಕ್ತಿ. ಕೇಶವಿನ್ಯಾಸ ಪ್ರವೀಣೆ, ಕರಕುಶಲ ಕಲಾವಿದೆ. ಅಮೆರಿಕದಲ್ಲೂ ಕಲಾ ಪ್ರದರ್ಶನ, ಪ್ರಶಂಸೆ; ಕವಯಿತ್ರಿ. ಮಕ್ಕಳು: ನೀಹಾರಿಕ ಸಿಂಹ(೮), ನಿಶಾಂತ್‌ಸಿಂಹ(೨).

## ಶ್ರೀಮತಿ ಗೀತಾ, ಶ್ರೀ ಕೆ.ವಿ. ನಟೇಶ್

(ಜ.೬.೧೨.೧೯೪೫) ಮೂಲತಃ ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆ ತಾಲ್ಲೂಕು ಕುಪ್ಪಹಳ್ಳಿ ಗ್ರಾಮದವರು; ತಂದೆ: ಕುಪ್ಪಹಳ್ಳಿ ವೆಂಕಟರಮಣಯ್ಯನವರು, ದತ್ತು ತಂದೆ: ಗದ್ದೆ ಹೊಸೂರು ಕೇಶವಯ್ಯನವರು. ಎಂ.ಎ., ಬಿ.ಇಡಿ.(ಕನ್ನಡ), ಮತ್ತು ಹಿಂದಿ ವಿದ್ವಾನ್ ಆದ ನಟೇಶ್ ೧೯೬೭ರಲ್ಲಿ ಪ್ರೌಢಶಾಲಾ ಅಧ್ಯಾಪಕರಾಗಿ ಸೇವೆಗೆ ಸೇರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಬಡ್ತಿ ಪಡೆದು ೨೦೦೩ರಲ್ಲಿ ನಿವೃತ್ತರಾದರು; ಸದ್ಯ ಚನ್ನರಾಯಪಟ್ಟಣದಲ್ಲಿ ನೆಲೆಸಿರುವ ಅವರು ಕೌಶಿಕ ಸಂಕೇತಿ ಸಂಘದ ಹಾಸನ ವಿಭಾಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೭೦ರಿಂದ ಸಂಘದಲ್ಲಿ ಸಕ್ರಿಯ ಪಾತ್ರ ವಹಿಸುತ್ತಿರುವ ಅವರ ಒಟ್ಟು ಸೇವಾನುಭವ ೩೪ ವರ್ಷಗಳದ್ದು! ಹರಿತ್ಸ ಗೋತ್ರದ ಅವರು ವಿವಾಹವಾದದ್ದು ಅರಕಲಗೂಡು ತಾಲ್ಲೂಕು ಅಗ್ರಹಾರದ ಸುಬ್ಬರಾಯಸ್ವಾಮಿ ಅವರ ಮಗಳು ಶ್ರೀಮತಿ ಗೀತಾ ಅವರನ್ನು. ಮಕ್ಕಳು: ಕೇಶವಪ್ರಸಾದ್, ಮುರಳಿ, ವಾಣಿ ರಾಜೇಶ್.

## ಟಿ.ಬಿ.ಎಸ್. ವಠಾರ ಟ್ರಸ್ಟ್ (ರಿ.)

ಟಿ.ಬಿ.ಎಸ್. ಎಂದರೆ ತಿಪ್ಪಾಭಟ್ಟ ಸುಬ್ಬರಾಯರು (ಅಪ್ಪಪ್ಪ ಸುಬ್ಬರಾಯರು). ಅವರು ಅರಕಲಗೂಡು ತಾಲ್ಲೂಕು ಬಸವಾಪಟ್ಟಣದಲ್ಲಿ ವಾಸಿಸುತ್ತಿದ್ದರು. ಅವರಿಗೆ ಏಳು ಜನ ಗಂಡುಮಕ್ಕಳು. ಆ ಕುಟುಂಬದಲ್ಲಿದ್ದ ಪ್ರೀತಿ, ವಾತ್ಸಲ್ಯ, ಸಹಬಾಳ್ವೆ ಆದರ್ಶಪ್ರಾಯವಾದುದು. ಆ ಕುಟುಂಬ ಬೆಳೆದು ದೊಡ್ಡದಾದಂತೆ ಅದಕ್ಕೆ 'ಏಳುಮನೆ ವಠಾರ' ಎಂದೇ ಹೆಸರಾಯಿತು. 'ವಠಾರತ್ತೇವ' ಎಂಬುದು ಸಂಕೇತಿಗಳಲ್ಲಿ ಚಿರಪರಿಚಿತವಾದ ಉಲ್ಲೇಖವಾಯಿತು. ಅವರೆಲ್ಲರೂ ಅಡಕೆ ತುಡಿಕೆ, ವ್ಯಾಪಾರ, ವ್ಯವಸಾಯ, ದೇವಾತಾರ್ಚನೆ ವೃತ್ತಿಗಳನ್ನು ಅವಲಂಬಿಸಿದ್ದರು. ಆ ವಂಶದ

ಎಲ್ಲರೂ ಒಳ್ಳೆಯ ವಿದ್ಯಾಭ್ಯಾಸ, ಉತ್ತಮ ಸಂಸ್ಕಾರ, ಎಂಥ ಪರಿಸ್ಥಿತಿಯನ್ನೂ ನಿಭಾಯಿಸುವ ಧೈರ್ಯ, ಛಲ ಉಳ್ಳವರು. ಹೊಸ ಪೀಳಿಗೆಯವರು ಈಗ ವಿಜ್ಞಾನಿಗಳೂ, ವೈದ್ಯರೂ, ಎಂಜಿನಿಯರುಗಳೂ, ಉಪನ್ಯಾಸಕರೂ, ಆಡಳಿತಾತ್ಮಕ ಅಧಿಕಾರಸ್ಥರೂ ಆಗಿದ್ದಾರೆ. ಅವರೆಲ್ಲ ಕ್ರಿಯಾಶೀಲರು. ವೇದ, ಸಂಗೀತ, ನೃತ್ಯ, ಸಾಹಿತ್ಯ, ವ್ಯವಸಾಯದಲ್ಲಿ ನೈಪುಣ್ಯ ಸಾಧಿಸಿದ್ದಾರೆ. ಪಾಕಪ್ರವೀಣರೂ ಅವರಲ್ಲಿ ಇದ್ದಾರೆ. ಈ ವಂಶಸ್ಥರ ಸಂಖ್ಯೆ ಈಗ ೪೦೬. ಆದರೆ ಈಗ ಎಲ್ಲ ಚದುರಿದ್ದಾರೆ. ದೂರದೂರದ ಪಟ್ಟಣಗಳಲ್ಲಿ ನೆಲೆಸಿದ್ದಾರೆ. ಆಧುನಿಕ ಒತ್ತಡಗಳು ನಂಟಿನ ಅಂಟನ್ನು ಶಿಥಿಲಗೊಳಿಸುವ ಅಪಾಯ ಒಡ್ಡಿವೆ. ಅದಕ್ಕಾಗಿ ವಠಾರದ ಮಕ್ಕಳಲ್ಲಿ ಒಬ್ಬರಾದ ಡಾ. ರಾಮಕೃಷ್ಣ ಅವರು ರೂಪಿಸಿದ ಪರಿಹಾರವೇ ಈ ಟ್ರಸ್ಟ್ . ೨೦೦೨ರ ಅಕ್ಟೋಬರ್ ೨೭ರಂದು ಅದು ಚಾಲನೆಗೊಂಡಿದೆ. ಟ್ರಸ್ಟಿನ ಉದ್ದೇಶ ಹಿರಿಯರು ಬೆಳೆಸಿಕೊಂಡು ಬಂದ ಆಚಾರ, ವಿಚಾರ, ಸಂಸ್ಕೃತಿ, ಪ್ರೀತಿ, ವಾತ್ಸಲ್ಯ ಇವುಗಳನ್ನೆಲ್ಲ ಉಳಿಸಿ ಬೆಳೆಸುವುದು; ಮಕ್ಕಳು ಸ್ವಾವಲಂಬಿಗಳಾಗಿ ಬೆಳೆಯುವಂತೆ ಉತ್ತೇಜಿಸುವುದು, ನಿಧಿಯೊಂದನ್ನು ಸ್ಥಾಪಿಸಿ ಸಾಂದರ್ಭಿಕ ನೆರವು ನೀಡುವುದು, ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರುವವರಿಗೆ ಜಾತಿಮತ ಭೇದವಿಲ್ಲದೆ ನೆರವು ನೀಡುವುದು.

# ಸಂಪಾದಕರು

## ಶ್ರೀ ಎಚ್.ಆರ್. ಕೇಶವಮೂರ್ತಿ

**ಪ್ರವಚನ ಚಕ್ರವರ್ತಿ:** ಸಂಪಾದಕರು: ಹೊಸಹಳ್ಳಿ ರಾಮಸ್ವಾಮಿ ಶಾಸ್ತ್ರಿ ಕೇಶವಮೂರ್ತಿ (ಜ.೨೨.೨.೧೯೩೪); ತಾಯಿ: ಲಕ್ಷ್ಮೀದೇವಮ್ಮ. ಇಂಟರ್ ಮುಗಿಸಿ ಕೃಷಿ ಕಾಯಕಕ್ಕೆ ಮರಳಿದ ಕೇಶವಮೂರ್ತಿ ಅವರು ಖ್ಯಾತ ಗಮಕಿ ಕುಪ್ಪಹಳ್ಳಿ ವೆಂಕಟೇಶಯ್ಯನವರ ಶಿಷ್ಯರಾಗಿ 'ಗಮಕ ಗಂಧರ್ವ'ರಾಗಿ ಬೆಳೆದರು. ಹೊಸಹಳ್ಳಿಯ ಗ್ರಾಮಾಧ್ಯಕ್ಷರಾಗಿ ಹತ್ತು ವರ್ಷ ಸೇವೆ ಸಲ್ಲಿಸಿದ ಅವರು, ಹತ್ತಿರ ಹತ್ತಿರ ಎರಡು ದಶಕಗಳ ಕಾಲದಿಂದ ಗಮಕ ಕಲಾಪರಿಷತ್ತಿನ ಅಧ್ಯಕ್ಷರೂ ಆಗಿದ್ದಾರೆ; ಅವರ ಗಮಕ ವಾಚನದ ಸಮ್ಮೋಹಕ ಶಕ್ತಿಗೆ ವಶರಾಗದವರಿಲ್ಲ. ವಿವಾಹವಾದದ್ದು ೧೯೫೦ರಲ್ಲಿ ಹೊಸಹಳ್ಳಿಯ ನಂಜುಂಡಾವಧಾನಿಗಳ ಮಗಳು ಶ್ರೀಮತಿ ರಾಜೇಶ್ವರೀ ಅವರನ್ನು. ನಂಜುಂಡಾವಧಾನಿಗಳೂ ಹೊಸಹಳ್ಳಿ ಗ್ರಾಮದ ಅಧ್ಯಕ್ಷರಾಗಿದ್ದವರು, ಖ್ಯಾತ ಜ್ಯೋತಿಷಿ ಕೂಡ ಆಗಿದ್ದವರು.

## ಶ್ರೀ ಎಲ್.ವಿ. ಸೀತಾರಾಮ್

**ನಿಗಮ ಕೌಮುದಿ:** ಪ್ರಧಾನ ಸಂಪಾದಕರು: ಲಿಂಗದಹಳ್ಳಿ ವೆಂಕಟರಮಣ ಅವಧಾನೀ ಸೀತಾರಾಮ್. ವಾಧೂಲಸ, ಯಜುರ್ವೇದ, ಆಪಸ್ತಂಬ. ಎಂ.ಎ. (ಕನ್ನಡ), ಪ್ರೌಢಶಾಲಾ ಅಧ್ಯಾಪಕರು. ನಿವೃತ್ತರಾದ ಮೇಲೂ ಎಲ್ಲ ಜಾತಿಗಳ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ನೀಡಿ, ಊಟ ಹಾಕಿ ಪಾಠವನ್ನೂ ಹೇಳುವ ಕಾಯಕದ ಮುಂದುವರಿಕೆ. ತಂದೆ: ಪುರೋಹಿತರು. ತಾಯಿ ಲಿಂಗದಹಳ್ಳಿಯ ಮಹಾಲಕ್ಷ್ಮಮ್ಮ ಸಂಪ್ರದಾಯದ ಹಾಡುಗಳಲ್ಲಿ ಸಿದ್ಧಹಸ್ತರು. ಪತ್ನಿ ಭಾಗ್ಯಲಕ್ಷ್ಮಿ: ತಂದೆ ರಾಮಾಜೋಯಿಸ್ ಬೀರೂರು ಮೂಲದವರು; ಸಂಗೀತ ಅಧ್ಯಾಪಕರು, ನಟರು, ಸಿನೆಮಾದ ಹಿನ್ನೆಲೆ ಸಂಗೀತಕ್ಕೆ ಪಿಟೀಲು ವಾದಕರು; ಕೌಂಡಿನ್ಯ, ಯಜುರ್ವೇದ, ಆಪಸ್ತಂಬ.

## ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ

**ಜ್ಯೋತಿಶ್ರೀ:** ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಎಂ.ಎಸ್‌ಸಿ. (ಭೌತಶಾಸ್ತ್ರ), ಅವರು ನಿವೃತ್ತ ಪ್ರಾಧ್ಯಾಪಕರು. ನರಸಿಂಹರಾಜಪುರ ಪೂರ್ವಿಕರ ನೆಲೆ. ತಂದೆ: ಎಚ್.ಶೇಷಭಟ್ಟ, ತಾಯಿ: ಚಿನ್ನಮ್ಮ; ಆತ್ರೇಯಸ ಗೋತ್ರ, ಋಗ್ವೇದ, ಆಶ್ವಲಾಯನಸೂತ್ರ. ಪ್ರೊ|| ಭಟ್ಟರು ಉತ್ತಮ

ವಾಗ್ಮಿ. ಡಿವಿಜಿ ಅವರ ಕಗ್ಗದ ಬಗೆಗೆ ಸಾವಿರಕ್ಕೂ ಹೆಚ್ಚು ಉಪನ್ಯಾಸ ನೀಡಿದ ಕೀರ್ತಿ ಅವರದು. ಪತ್ನಿ: ಎ. ಪುಷ್ಪವಲ್ಲಿ ಬಿ.ಎ., ಆರಗದವರು; ಸಂಗೀತ, ಸಾಹಿತ್ಯದಲ್ಲಿ ಆಸಕ್ತಿ.

## ಶ್ರೀ ರಾಜಾರಾಮಮೂರ್ತಿ

**ಶತಮಾನಂ ಭವತಿ ಮತ್ತು ತುಂಗ ಭದ್ರ:** ಸಂಪಾದಕರು: ಹೊಸಹಳ್ಳಿ ಲಕ್ಷ್ಮೀರಮಣ ಅವಧಾನೀ ರಾಜಾರಾಮಮೂರ್ತಿ. ನಿತುಂದಿಲ, ಯಜುರ್ವೇದ, ಆಪಸ್ತಂಬ. ತಂದೆ: ಲಕ್ಷ್ಮೀರಮಣ ಅವಧಾನಿಗಳು ಔಪಾಸನಾಗ್ನಿ ಧಾರಕರು, ೧೯೬೧ರಲ್ಲಿ ಅಷ್ಟಗ್ರಹಕೂಟವಾದಂದಿನಿಂದ ದೈವಾಧೀನರಾಗುವವರೆಗೆ ಪ್ರತಿ ಸೋಮವಾರ ಏಕಾದಶವಾರ ರುದ್ರಾಭಿಷೇಕವನ್ನೂ ಪ್ರದೋಷ ಪೂಜೆಯನ್ನೂ ನಿರಂತರವಾಗಿ ನಡೆಸಿದವರು, ಶಿವಮೊಗ್ಗ ಜಿಲ್ಲೆ ಬಸವಾಪಟ್ಟಣದಲ್ಲಿ ನಡೆದ ಬೃಹತ್ ಯಾಗದಲ್ಲಿ ಪ್ರಧಾನಾಚಾರ್ಯರಾಗಿದ್ದವರು, ಅಶ್ವತ್ಥಪುರದಲ್ಲಿನ ಸಹಸ್ರ ಚಂಡೀಯಾಗದಲ್ಲಿ ಆಚಾರ್ಯರಾಗಿದ್ದವರು, ೧೯೭೩ರಲ್ಲಿ ದೆಹಲಿಯಲ್ಲಿ ನಡೆದ 'ಅಖಿಲ ಭಾರತ ವೇದ ಸಮ್ಮೇಳನ'ಕ್ಕೆ ಆಹ್ವಾನಿತರಾಗಿ ಪಾಂಡಿತ್ಯ ಪ್ರದರ್ಶನ ಮಾಡಿದವರು, ಮತ್ತೂರು ಹೊಸಹಳ್ಳಿಗಳ ನಡುವೆ ನದಿಗೆ ಸೋಪಾನ ಮತ್ತು ಜಪಸ್ಥಾನ ನಿರ್ಮಾಣ ಕಾರ್ಯದಲ್ಲಿ ಮುಂದಾಳಾಗಿದ್ದವರು. ತಾಯಿ: ಅನ್ನಪೂರ್ಣಮ್ಮ. ರಾಜಾರಾಮಮೂರ್ತಿ ಎಂ.ಎ., (ಕನ್ನಡ), ಮುದ್ರಕರು, ಲೇಖಕರು, ವ್ಯಾಖ್ಯಾನಕಾರರು; 'ಸಂಕೇತಿ ಸಂಗಮ' ಮಾಸಪತ್ರಿಕೆಯ ಸಂಪಾದಕರು; ಪತ್ನಿ ಎಳ್ಳೇಶಪುರ ಗೋಪಾಲಕೃಷ್ಣಯ್ಯ (ಮತ್ತು ರುಕ್ಮಿಣಿ) ಅವರ ಮಗಳು ವಿಜಯಲಕ್ಷ್ಮಿ: ಸಮಾಜಸೇವಕಿ, ಗ್ರಾಮ ಪಂಚಾಯಿತಿ ಸದಸ್ಯೆ, ಸ್ವಸಹಾಯ ಸಂಘದ ಮುಖ್ಯಸ್ಥೆ, ಎಲ್ಐಸಿ ಪ್ರತಿನಿಧಿ.

## ಪೂಮಗಾಮೆ ಗೋಪಿ (ಶ್ರೀ ನಾಗೇಶ್ ಎಸ್.)

**ಸಂಕೇತಿ: ಅಭಿನಂದನ:** ಸಂಪಾದಕರು: (ಪೂಮಗಾಮೆ) ಶ್ರೀನಿವಾಸಮೂರ್ತಿ ನಾಗೇಶ್ (ಪೂಮಗಾಮೆ ಗೋಪಿ) (ಜ.೧೯೬೭) ಕನ್ನಡದಲ್ಲಿ ಎಂ.ಎ., ಹಿಂದಿಯಲ್ಲಿ ರಾಷ್ಟ್ರಭಾಷಾ ಪ್ರವೀಣ್, ಡಿ.ಎಂ.ಇ (ಎ.ಇ.), ಬಿ.ಲಿಬ್.ಸೈನ್ಸ್., ಸದ್ಯ ಹಾಸನದ ಸರ್ಕಾರಿ ಕಲಾ ಕಾಲೇಜಿನ ಗ್ರಂಥಾಲಯ ನಿರ್ವಾಹಕರು. ಕಂಪ್ಯೂಟರ್ ತರಪೇತಿ ಪಡೆದು ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ನಾಗೇಶ್ ಎಲಿಜಿಬಿಲಿಟಿ ಫಾರ್ ಲೆಕ್ಚರರ್‌ಶಿಪ್ ಸರ್ಟಿಫಿಕೇಟ್ [UGC(NET)] ಕೂಡ ಪಡೆದಿದ್ದಾರೆ. ಹಾಸನದ ರಿಮ್ಯಾಂಡ್ ಹೋಂನಲ್ಲಿ ನೈತಿಕ ಶಿಕ್ಷಣದ ಅಧ್ಯಾಪಕ; ಹಾಸನದ ಎನ್.ಡಿ.ಆರ್.ಕೆ. ನರ್ಸಿಂಗ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ; ಹಾಸನದ ಸುನೀತಾ ಬಾಲಕಿಯರ ಪ್ರೌಢಶಾಲೆಯಲ್ಲಿ ಗಣಿತದ ಅಧ್ಯಾಪಕ; ವಿವಿಧ ಔದ್ಯಮಿಕ ಸಂಸ್ಥೆಗಳಲ್ಲಿ ಮೆಕ್ಯಾನಿಕ್, ಫೋರ್‌ಮನ್, ವರ್ಕ್‌ಷಾಪ್ ಸೂಪರ್‌ವೈಸರ್- ಹೀಗೆ ಅವರದು ವೈವಿಧ್ಯಪೂರ್ಣವಾದ ಉದ್ಯೋಗಾನುಭವ. ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ, ತಮಿಳು ಭಾಷೆಗಳಲ್ಲಿ ಪರಿಶ್ರಮ ಉಳ್ಳ ನಾಗೇಶ್ ಬಹುಮುಖ ಹವ್ಯಾಸಗಳನ್ನು ಉಳ್ಳವರು; ಹತ್ತನೆಯ ತರಗತಿಯವರೆಗೆ ಬಡಮಕ್ಕಳಿಗೆ ಉಚಿತವಾಗಿ ಪಾಠ ಹೇಳಿಕೊಡುವುದೂ ಅವುಗಳಲ್ಲಿ ಒಂದು. ಪ್ರಥಮ ಚಿಕಿತ್ಸೆಯಲ್ಲಿ ತರಬೇತಿ ಹೊಂದಿರುವ ಅವರು ಅಗತ್ಯ ಉಳ್ಳವರಿಗೆ ಸೇವೆ ಒದಗಿಸುತ್ತಾರೆ; ಪದ್ಯ, ಲೇಖನ, ನಾಟಕ ಬರೆಯುತ್ತಾರೆ; ಚೆಸ್ ಮತ್ತು ಕೇರಂ ಆಡುತ್ತಾರೆ; ಒಳ್ಳೆಯ ಭಾಷಣಗಳಿಗೂ ಭಕ್ತಿಗೀತೆಗಳಿಗೂ ಕಿವಿ ತೆರೆದಿಡುತ್ತಾರೆ; ಆಟೊಮೊಬೈಲ್ ರಿಪೇರಿ ಮಾಡುತ್ತಾರೆ; ಚಿತ್ರ ಕಲೆಯಲ್ಲೂ ಸಾಧನೆ ಮಾಡಿದ್ದಾರೆ; ರಸಪ್ರಶ್ನೆಯ ಸ್ಪರ್ಧೆಗಳನ್ನು ನಡೆಸಿದ್ದಾರೆ. ಪೂಮಗಾಮೆಯ ಮೂಲದ ನಿವೃತ್ತ ಅಧ್ಯಾಪಕ ಶ್ರೀ ಎಂ. ಶ್ರೀನಿವಾಸಮೂರ್ತಿ (ವಾಧೂಲಸ, ಯಜುರ್ವೇದ, ಆಪಸ್ತಂಬ) ಮತ್ತು ಶ್ರೀಮತಿ ಪದ್ಮಾ ಅವರ ಪುತ್ರರಾದ ಅವರು ಕ್ರಿಯಾಶೀಲರು, ಚಿಂತಕರು, ತಮಗೆ ಒದಗಿ ಬಂದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವಂಥವರು. ಪತ್ನಿ: ಹಾಸನದ ಪಕ್ಕದ ಚನ್ನಪಟ್ಟಣದ ಕೇಶವಮೂರ್ತಿ ಮತ್ತು ಪಾರ್ವತಿ ಅವರ ಎರಡನೇ ಮಗಳು ಶ್ರೀಮತಿ ವಿದ್ಯಾ. ಅವರ ಸಹಕಾರದಿಂದ ನಾಗೇಶ್ ಪ್ರಸ್ತುತ ಕೃತಿಯನ್ನು ಮಾದರಿಯಾಗಿ ಸಂಪಾದಿಸಿಕೊಟ್ಟಿದ್ದಾರೆ.

# ೨. ಗ್ರಂಥದ ಬಗೆಗೆ
## ಸಂಕೇತಿ: ಅಭಿನಂದನ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

**ಡಾ. ಕೆ. ಅನಂತರಾಮು**
ನಿವೃತ್ತ ಕನ್ನಡ ಪ್ರಾಧ್ಯಾಪಕರು

'ಸಂಕೇತಿ: ಅಭಿನಂದನ' ಎಂಬ *ಈ* ಮಹಾಸಂಪುಟವು ಆರು ಜನ ಸಂಕೇತಿ ಮಹನೀಯರಿಗೆ ಬೇರೆ ಬೇರೆ ಕಾಲದೇಶಗಳಲ್ಲಿ ಅರ್ಪಿಸಿದ ಅಭಿನಂದನ ಸಂಪುಟಗಳನ್ನು ತನ್ನಲ್ಲಿ ಅಡಕಮಾಡಿಕೊಂಡಿದೆ. ಎಲ್ಲೆಲ್ಲಿಯೋ ಚೆಲ್ಲಿ ಮರೆಯಾಗಿ ಹೋಗಬಹುದಾದ ಆ ಬಿಡಿಬಿಡಿ ಸಂಪುಟಗಳನ್ನು ಆಯ್ದುತಂದು ಒಂದರೊಳಗೇ ಐಕ್ಯಗೊಳಿಸಿರುವ *ಈ* ಅದ್ವೈತ ಒಂದು ದೊಡ್ಡ ಸಾಧನೆ. *ಈ* ಮಹಾಸಂಪುಟವು ಒಳಗೊಂಡಿರುವ ಮಹನೀಯರ ಅನನ್ಯವಾದ ಸಾಧನೆಸಿದ್ಧಿಗಳನ್ನು ಅವಲೋಕಿಸುತ್ತ ಹೋದಂತೆಲ್ಲ ನಾವು ರೋಮಾಂಚನಗೊಳ್ಳುತ್ತೇವೆ. *ಈ* ಸಮುದಾಯದಲ್ಲಿ ಇಬ್ಬರು *ಈ*ಗಿಲ್ಲ; ಆದರೂ 'ಅಳಿಸಲಾರದ ಹೆಜ್ಜೆಗುರುತುಗಳನ್ನು ಹೇಗೆ ಮೂಡಿಸಿ ಹೋಗಿದ್ದಾರಪ್ಪಾ' ಎಂದು ನಾವು ವಿಸ್ಮಯಾಭಿಭೂತರಾಗುತ್ತೇವೆ. ತೆಂಗಿನಮರದಿಂದ ಉದುರಿಬೀಳುವ ಗರಿಯೊಂದು ತನ್ನ ಗುರುತನ್ನು ಬಿಟ್ಟೇ ಉದುರುತ್ತದೆ. ಇನ್ನು ಮಾನವರಾದ ನಾವು ಏನಾದರೂ ಸತ್ಕಾರ್ಯದ ಒಂದಿಷ್ಟು ಗುರುತುಗಳನ್ನು *ಈ* ಜಗತ್ತಿನಲ್ಲಿ ಬಿಟ್ಟು ಉದುರಬೇಡವೇ! *ಈ* ಮಹಾಸಂಪುಟದಲ್ಲಿ ಸೇರ್ಪಡೆಯಾಗಿದ್ದು, ಇನ್ನೂ ನಮ್ಮ ನಡುವೆ ಓಡಾಡಿಕೊಂಡಿರುವ ಪುಣ್ಯಪುರುಷರು ಇಲ್ಲಿಂದ ಮುಂದಕ್ಕೆ ಏನೂ ಮಾಡದೆ ಸುಮ್ಮನಿದ್ದರೂ ನಡೆಯುತ್ತದೆ; ಏಕೆಂದರೆ ಅವರೆಲ್ಲ *ಈ*ಗಾಗಲೇ ತಮ್ಮ ಕೀರ್ತಿಧ್ವಜವನ್ನು ಕನ್ನಡದ ಬಾನಿನಲ್ಲಿ ಹಾರಿಸಿಬಿಟ್ಟಿದ್ದಾರೆ.

*ಈ* ಬಗೆಯ ಮಹಾಸಂಪುಟವೊಂದನ್ನು ರೂಪಿಸುವ ಕಲ್ಪನೆಯೇ ಮಹೋನ್ನತವಾದುದು. 'ಹಾಗೆ ಕಲ್ಪಿಸಿಕೊಳ್ಳುವುದು ಸುಲಭ' ಎಂದು ಭಾವಿಸಬಹುದಾದರೂ ಅದನ್ನು ಕೃತಿರೂಪಕ್ಕೆ ಇಳಿಸುವುದೇನೂ ಸುಲಭಸಾಧ್ಯವಾದ ಕಾರ್ಯವಲ್ಲ. ಇಂತಹ ದುಸ್ಸಾಧ್ಯವಾದ ಕಾರ್ಯವೊಂದನ್ನು ಕೈಗೆತ್ತಿಕೊಂಡು ಡಾ. ಪ್ರಣತಾರ್ತಿಹರನ್ ತಮ್ಮ ಪ್ರಧಾನ ಸಂಪಾದಕತ್ವದಲ್ಲಿ, ಅದನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮೇಲುನೋಟಕ್ಕೆ *ಈ* ಮಹಾಸಂಪುಟವು ನಾಲ್ಕೈದು ಬಿಡಿಬಿಡಿ ಸಂಪುಟಗಳ ಸಂಕಲನವೆಂದು ತೋರುತ್ತದೆಯಾದರೂ ಅದನ್ನು ಇಷ್ಟು ಅಚ್ಚುಕಟ್ಟಾಗಿ ಸಂಯೋಜಿಸಿ, ಸಂಕಲಿಸಿ, ಸೂಕ್ತವಾಗಿ ಸಂಪಾದಿಸಿ ಹೊರತಂದಿರುವುದು ಅಮೋಘವಾದ ವಿಚಾರ. ಸಂಕೇತಿ ಸಂಸ್ಕೃತಿಯನ್ನು ಕಣ್ಮುಂದೆ ತಂದು ನಿಲ್ಲಿಸಲು ಡಾ. ಪ್ರಣತಾರ್ತಿಹರನ್ *ಈ*ಶ್ವರಾರ್ಪಣ ಭಾವದಿಂದ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ. ಆ ದಿಕ್ಕಿನಲ್ಲಿ ಸಾಗುವಾಗ ತಮಗಾದ ನೋವು ನಿರಾಸೆಗಳನ್ನೆಲ್ಲ ನೀಲಕಂಠನಂತೆ ತಾವೇ ನುಂಗಿಕೊಂಡು, ಸಂಕೇತಿಬಂಧುಗಳಿಗೆ ಅಮೃತವನ್ನೇ ಉಣಬಡಿಸಿದ್ದಾರೆ.

ಹುಚ್ಚು ಸಾಂಕ್ರಾಮಿಕವಲ್ಲದಿದ್ದರೂ ತಮ್ಮ ಹುಚ್ಚನ್ನೇ ಶ್ರೀ ಪೂಮಗಾಮೆ ಗೋಪಿಯವರಿಗೂ ಡಾ. ಹರನ್ ಅವರು ಹಚ್ಚಿ *ಈ* ಮಹಾಸಂಪುಟದ ಸಂಪಾದಕತ್ವವನ್ನೆಲ್ಲ ಅವರಿಗೆ ವಹಿಸಿಕೊಟ್ಟಿರುವುದು ಒಂದು ಮಹತ್ತ್ವದ ಬೆಳವಣಿಗೆ. ಇನ್ನೀಗ *ಈ* ಸಂಕೇತಿ ಸಂಸ್ಕೃತಿಯನ್ನು ದಾಖಲೀಕರಿಸುವ ಸೊಡರು ನಂದುವುದಿಲ್ಲವೆಂಬ ಭರವಸೆ ಮೂಡಿದಂತಾಗಿದೆ. ಇಂತಹ ಸಂಕೀರ್ಣ ಸಂಪುಟವೊಂದನ್ನು ಸಮರ್ಪಕವಾಗಿ ಸಂಪಾದಿಸಿರುವ ಪೂಮಗಾಮೆ ಗೋಪಿಯವರನ್ನೂ ನಾನು ಅಭಿನಂದಿಸುತ್ತೇನೆ.

ಸಂಕೇತಿಗಳನ್ನು ಮಾತ್ರವಲ್ಲ, ಸಂಸ್ಕೃತಿ ಪ್ರೇಮಿಗಳಾದ ಸಮಸ್ತ ಕನ್ನಡಿಗರನ್ನೂ *ಈ* ಸಂಪುಟವು ಆಕರ್ಷಿಸುವುದರಲ್ಲಿ ಎರಡು ಮಾತಿಲ್ಲ.

ಸರ್ಕಾರಿ ವಿಜ್ಞಾನ ಕಾಲೇಜು
ಹಾಸನ

**ಡಾ. ಬಿ.ಎಸ್.ನರಹರಿ**
ಭೌತಶಾಸ್ತ್ರ ಪ್ರಾಧ್ಯಾಪಕರು

'ಸಂಕೇತಿ ಅಧ್ಯಯನ' ಮಾಲಿಕೆಯ ಮೊದಲೆರಡು ಸಂಪುಟಗಳು ಸಂಶೋಧನಾ ಕೃತಿಗಳು, ಮೂರನೆಯದು ಕೃತಿಸಂಚಯ. ಸಂಶೋಧನಾತ್ಮಕ ಕೃತಿಗಳಿಗೆ ಆದ್ಯತೆ ಇರಬೇಕೆಂಬುದು ಓದುಗರ ಸಹಜ ನಿರೀಕ್ಷೆ. ಕ್ರೋಡೀಕರಣವು ಒಂದು ರೀತಿಯಲ್ಲಿ ಪುನರ್ ಪ್ರಕಾಶನ. ಆದರೂ ಪ್ರಕೃತ ಸಂಪುಟವು ಪಡೆದುಕೊಂಡ ನೂತನ ಸ್ವರೂಪವು *ಈ* ಮಾದರಿಯ ಸಾಹಿತ್ಯದ ಹೊಸಸಾಧ್ಯತೆಯನ್ನು ತೋರಿಸಿಕೊಟ್ಟಿದೆ. ಇದರಲ್ಲಿ ಸೇರಿರುವ ಐದೂ ಗ್ರಂಥಗಳನ್ನು ಒಂದೆಡೆ ಅವಲೋಕಿಸುವ ಸೌಲಭ್ಯ, ವ್ಯಕ್ತಿಚಿತ್ರಣಗಳನ್ನು ರೂಪಿಸುವವರಿಗೆ ಲಭ್ಯವಾದ 'ಮಾದರಿ', ಅಂಥ ಹೆಚ್ಚಿನ ಸಾಹಸಕ್ಕೆ ಪ್ರೇರಣೆ ಮತ್ತು ಪ್ರಚೋದನೆ-ಇಲ್ಲಿನ ಅತಿಶಯದ ಸಾಧನೆಗಳು. ಒಬ್ಬ ವ್ಯಕ್ತಿಯ ಬಗೆಗಿನ ಇಷ್ಟೊಂದು ಮಾಹಿತಿ ಒಂದೆಡೆ ದೊರೆಯುತ್ತದೆ ಎನ್ನುವುದು ದೊಡ್ಡ ಪ್ರಯೋಜನವೇ ಸರಿ. ಇಂಥ ಆಕರಗಳು ಸಂಶೋಧನೆಗೆ ಬೇಕಾದ ಪೂರಕ ಸಾಮಗ್ರಿ ಎಂಬುದೂ ನಿಜ. ಸಂಕೇತಿ ಅಧ್ಯಯನ ಯೋಜನೆಯಲ್ಲಿ ಪಾಲ್ಗೊಂಡ ವಿವಿಧ ವಿದ್ವಾಂಸರು ಗ್ರಂಥಗಳನ್ನು ಸಿದ್ಧಪಡಿಸಿದ ಕಾಲಾನುಕ್ರಮದಲ್ಲಿ ಸಂಪುಟಗಳು ಪ್ರಕಾಶನಗೊಳ್ಳುತ್ತವೆ ಎಂಬುದೂ ಅರ್ಥವಾಗುವ ಸಂಗತಿ.

ಇಲ್ಲಿ ಚಿತ್ರಿತರಾದವರೆಲ್ಲ ತಮ್ಮ ಬದುಕನ್ನು ಒಂದು ದೊಡ್ಡ ಉದ್ದೇಶಕ್ಕಾಗಿ ಸಮರ್ಪಿಸಿಕೊಂಡು ಉನ್ನತವಾಗಿ ಬಾಳಿದ ಮಹನೀಯರು. ಅವರ

ಬಾಳು ಒಂದು ತಪಶ್ಚರ್ಯೆಯಂತೆ ಕಾಣುತ್ತದೆ. ಅದರಲ್ಲಿ ಅವರು ಆತ್ಮಾನಂದ ಕಂಡಿದ್ದಾರೆ. ಅವರಲ್ಲಿ ಯಾರೂ ಭಾಷಣ ಬಿಗಿದವರಲ್ಲ, ಲೇಖನಗಳ ಮೂಲಕ ತಮ್ಮನ್ನು ವೈಭವೀಕರಿಸಿಕೊಂಡು ಇತರರನ್ನು ಕೀಳುಗೈದವರಲ್ಲ; ಬದಲಿಗೆ ಎಲ್ಲರೂ ಒಂದು ಉನ್ನತಿಯನ್ನು ಬಾಳಿ ತೋರಿಸಿದವರು. ಹೀಗೆ ಹಿರಿಯ ಸಾಧನೆ ಮಾಡಿದ ಹಲವು ಹತ್ತು ಗಣ್ಯರು ಈಗಲೂ ನಮ್ಮೊಡನೆ ಇದ್ದಾರೆ ಎನ್ನುವುದು ಹೆಮ್ಮೆಯ ಮತ್ತು ಹರ್ಷದ ಸಂಗತಿ. ಅವರೆಲ್ಲರ ವ್ಯಕ್ತಿಚಿತ್ರ ಹೀಗೆಯೇ ಮೂಡಿ ಬರಲಿ; ಅವು ಮುಂಬರುವ ಪೀಳಿಗೆಗಳಿಗೆ ದಾರಿದೀಪಗಳಾಗಿ ಬೆಳಗಲಿ. ಒಂದು ಸಂಸ್ಕೃತಿಯ ಸ್ವರೂಪವನ್ನು ಕಟ್ಟಿಕೊಡಲು ಅಪಾರ ಶ್ರಮ ವಹಿಸುತ್ತಿರುವ ಸಮುದಾಯ ಅಧ್ಯಯನ ಕೇಂದ್ರಕ್ಕೆ ಎಲ್ಲ ಯಶಸ್ಸೂ ಸಿಗಲಿ.

ಶೇಷಾದ್ರಿಪುರಂ ಕಾಲೇಜು
ಬೆಂಗಳೂರು

**ಪ್ರೊ. ಎಂ.ಎನ್. ಚಂದ್ರಶೇಖರ**
ಸಂಸ್ಕೃತ ಪ್ರಾಧ್ಯಾಪಕರು

**"ಸೋತ್ಸಾಹಾನಾಂ ನಾಸ್ತ್ಯಸಾಧ್ಯಮ್"**

. . . ಇಲ್ಲಿ ಚಿತ್ರಿತರಾದ ಗಣ್ಯರ ಜೀವನ ಮತ್ತು ಅವರ ಸಾಧನೆಗಳ ವಿವರಗಳು ಸ್ಫೂರ್ತಿದಾಯಕವಾಗಿವೆ. ದಿನಗಳೆದಂತೆ ಈ ಗ್ರಂಥದ ಸಾಂಸ್ಕೃತಿಕ ಮೌಲ್ಯ ಅಧಿಕವಾಗುತ್ತ ಹೋಗುತ್ತದೆ . . .

## ಸಂಕೇತಿ: ಶತಮಾನದ ಪತ್ರಗಳು

*ಕನ್ನಡ ಪುಸ್ತಕ ಪ್ರಾಧಿಕಾರ*
*ಬೆಂಗಳೂರು*

***ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್***
*ಅಧ್ಯಕ್ಷರು*

ನೀವು ಪ್ರೀತಿಯಿಂದ ಕಳಿಸಿದ **ಸಂಕೇತಿ: ಶತಮಾನದ ಪತ್ರಗಳು** ಕೈ ಸೇರಿತು. ನನಗೆ ತುಂಬಾ ಸಂತೋಷವಾಯಿತು. ನಾನು ಹಿಂದಿನ ಸಂಪುಟವನ್ನು ಓದಿ, ನೋಡಿ ಬೆರಗುಪಟ್ಟಿದ್ದೆ. ಇಂಥ ಸಂಪುಟವು ಕರ್ನಾಟ ಸಂಸ್ಕೃತಿಯ ಮೂಲರೂಪವನ್ನು ತಿಳಿಯಲು ಅನುವು ಮಾಡಿಕೊಡುತ್ತದೆ. ಸಂಕೇತಿ ಸಮುದಾಯ ಕುರಿತ ಈ ಗ್ರಂಥಗಳು ಅಧ್ಯಯನಕ್ಕೆ ಮಾತ್ರವಲ್ಲ ಮೂಲ ತಿಳಿವಳಿಕೆಗೂ ಬೇಕಾದುವೇ ಸರಿ. ಪ್ರತಿಯೊಂದು ಸಮುದಾಯಗಳ ಬಗೆಗೂ ಈ ಬಗೆಯ ಹೊತ್ತಗೆಗಳು ಬೇಕು. ನಾನು ನಿಮ್ಮ ಪಿಹೆಚ್.ಡಿ., ಪ್ರಬಂಧ ಬಂದಾಗ ಬಹು ಕುತೂಹಲದಿಂದ ಓದಿದ್ದೆ. ಈಗ ಇನ್ನಷ್ಟು ಹೊಸ ಪರಿಕರಗಳ ಜತೆ ಪುಷ್ಟಗೊಂಡ ಗ್ರಂಥ ಕಂಡ ಮೇಲೆ ನನಗೆ ಅಭಿಮಾನ ತಂದಿತು; ನನಗೆ ನಿಜಕ್ಕೂ ಸಂತೋಷವಾಗಿದೆ.

ನಾನು ಈ ಎರಡನೆಯ ಸಂಪುಟದ ಮೇಲೆ ಕಣ್ಣಾಡಿಸಿದಂತೆಲ್ಲ, ವೈದಿಕ ವಿಚಾರಗಳ ಬಗೆಗೂ, ಓದಿನ ಕ್ರಮದ ಬಗೆಗೂ, ಸಾಮಾಜಿಕ ಸ್ಥಾನಮಾನದ ಬಗೆಗೂ, ಶಿಕ್ಷಣ-ನೀತಿ ಕ್ರಮಗಳ ಬಗೆಗೂ, ಭಾಷೆಯ ಬಳಕೆಯ ಬಗೆಗೂ - ಇನ್ನೆಷ್ಟೋ ವಿಧಗಳಲ್ಲಿ ಅಧ್ಯಯನ ಮಾಡಲು ಸಕಲ-ಸಾಮಗ್ರಿಗಳು ಈ ಸಂಪುಟದಲ್ಲಿ ಅಡಕಗೊಂಡಿವೆ. ಅವುಗಳನ್ನು ಜೋಡಿಸಿರುವ ರೀತಿ, ಅಲ್ಲಲ್ಲಿ ನೀವು ಒದಗಿಸಿರುವ ಟಿಪ್ಪಣಿಗಳು ಅಧ್ಯಯನದ ಶಿಸ್ತನ್ನು ಎತ್ತಿತೋರಿಸುತ್ತವೆ. ಈ ಸಂಪುಟವು ಸಾಹಿತ್ಯದ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸಮಾಜಶಾಸ್ತ್ರದ ಬಹು ವ್ಯಾಸಂಗಿಗಳಿಗೆ ಬಹು ಉಪಯುಕ್ತ ಆಕರ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ. ಈ ಸಂಪುಟಗಳ ನಿರ್ವಹಣೆಯಲ್ಲಿ, ಸಂಪಾದಕತ್ವದಲ್ಲಿ ನಿಮ್ಮ ಸೂಕ್ಷ್ಮ ತಿಳಿವಳಿಕೆ, ಸಜ್ಜನಿಕೆ, ಅಪಾರ ವಿದ್ವತ್ತುಗಳು ಎದ್ದು ಕಾಣುತ್ತಿವೆ. ನಿಮಗೂ ಇದಕ್ಕೆ ನೆರವಾಗುತ್ತಿರುವ ಸಂಕೇತಿ ಸಮಾಜದ ಸರ್ವಶ್ರೇಷ್ಠರಿಗೂ ನನ್ನ ಕೃತಜ್ಞತೆಗಳು. ನಿಮಗೆ ಎಲ್ಲ ರೀತಿಯ ಶುಭಗಳು ಸಲ್ಲಲಿ.

***ತರಂಗ, ಏಪ್ರಿಲ್, ೧೫, ೨೦೦೪*** ***ಜ.ಕಾ.***

## ಗ್ರಂಥಾಂತರಂಗ

೯೦೦ ವರ್ಷಗಳ ಹಿಂದೆ ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ನೆಲೆಸಿ ಇಲ್ಲಿಯವರೇ ಆಗಿಬಿಟ್ಟಿರುವ 'ಸಂಕೇತಿ' ಬ್ರಾಹ್ಮಣ ಸಮುದಾಯದ ಕೆಲವು ಕುಟುಂಬಗಳು ಕಳೆದೊಂದು ಶತಮಾನದ ಅವಧಿಯಲ್ಲಿ ಬರೆದುಕೊಂಡ ಸಾವಿರಾರು ಪತ್ರಗಳ ಪೈಕಿ ೫೫೫ ಪತ್ರಗಳನ್ನು ಇಲ್ಲಿ ಕ್ರಮವತ್ತಾಗಿ ಎಂದರೆ,

ವಸ್ತು ವಿಷಯಗಳಿಗನುಗುಣವಾಗಿ ಸಂಗ್ರಹಿಸಿ ಕೊಡಲಾಗಿದೆ. ಒಂದು ಶತಮಾನದ ಅವಧಿಯಲ್ಲಿ *ಈ* ತಮಿಳು ಬ್ರಾಹ್ಮಣರು ಕಂಡ ಸಾಮಾಜಿಕ, ಧಾರ್ಮಿಕ, ಆರ್ಥಿಕ ಪಲ್ಲಟಗಳು, ಅವುಗಳಿಗೆ ಅವರ ಸಮಸಾಮಯಿಕ ಪ್ರತಿಕ್ರಿಯೆಗಳು *ಈ* ಪತ್ರಗಳಲ್ಲಿ ಬಿಂಬಿತವಾಗಿವೆ. *ಈ* ಪತ್ರಗಳು ಕನ್ನಡ ಪತ್ರಸಾಹಿತ್ಯ ಪ್ರಪಂಚಕ್ಕೆ ಅಮೂಲ್ಯ ಕೊಡುಗೆ. *ಈ* ಸಮುದಾಯದ ನೂರಾರು ಸಾಮಾನ್ಯರು, ವೈದಿಕ ಜೀವನಮಾರ್ಗದಲ್ಲಿ ತಾವು ಕಂಡುಂಡ ನೂರಾರು ಅನುಭವದ ತುಣುಕುಗಳು, ತಳಮಳ - ತಳ್ಳಂಕಗಳು, ತನ್ನ ಜೀವನಾನುಭವವನ್ನು ತಾನೇ ರೂಪಿಸಿಕೊಳ್ಳಬೇಕು ಎಂಬಂಥ ನಿಲುವುಗಳು, ತತ್ತ್ವಜಿಜ್ಞಾಸೆ, ಒಬ್ಬರಿಗೊಬ್ಬರು ನೀಡಿಕೊಂಡ ಸಾಂತ್ವನ - ಸಮಾಧಾನಗಳು ಇಲ್ಲಿನ ಪತ್ರಗಳಲ್ಲಿ ಜೀವಂತವಾಗಿ ದಾಖಲಾಗಿವೆ.

***Mysore*** ***H.S. Ananthanarayana***
*Professor of Linguistics (Retd.)*

Sanketi: Letters of the century is well planned, neatly designed and ably executed; and it will remain a very informative volume in every Sanketi family. I read a letter here and a letter there of the first part but every word of the second part. I must say that I thoroughly enjoyed reading these letters. The paper, get up and the printing are all tastefully selected.

The fieldwork for collecting letters appears to have been done mostly in a few villages of Hassan district. Although 3-4 Sanketi settlements are recognised, no effort is made to collect samples from Mysore district (Bettadapura), Kadur district (Lingadahalli) and Shimoga district (Mattur, Hosahalli). Similarly, sufficient care is not taken to include samples from different age groups and professional groups. It would have been fully representative of the community if more centres had been included for collection.

Of the 435 letters arranged in 18 sections, 18 letters (including some e-mail letters) are in English, 25 in Sanskrit, and the rest in Kannada. Six letters are not dated. There are 39 letters from a single family (not very desirable). Section 15 appears to be an addendum to the other sections. In sum, the letters present a beautiful picture of the Sanketi society and there is ample material for a good linguistic analysis of the speech.

The second part arranged in three sections includes 120 letters, the third section comprising only a single letter. The letters are all authored by a single person and the recipients of the letters are also single persons in each case.

Mr. Srikanthakumaraswamy, the author of the letters in the second part, combines in himself both the traditional learning of vedas and shastras and also western education. He has logically and scientifically explained many things of our religion, rituals, beliefs and the way people conduct themselves. Doubts which arise in the minds of many are clarified in easily understandable language; rituals and customs are explained in proper perspective. Blind beliefs are shunned. This part must be read therefore by everyone, sanketis and non-sanketis alike.

However, from the point of view of the present volume it cannot be said that right judgement is made in including so many letters of one person, occupying about half the space in the volume. There is plenty of repetition between the first two sections and also within each section. It would have been more proper to have included only a few letters representing this type, for this volume. Because of the usefulness of the matter discussed, these letters could be brought out in a separate volume.

*ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ*
*ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬*

***ಡಾ. ಅಂಬಳಿಕೆ ಹಿರಿಯಣ್ಣ***
*ಜಾನಪದ ಪ್ರಾಧ್ಯಾಪಕರು*

. . . ಅನಾರೋಗ್ಯದ ನಡುವೆಯೂ *ಈ* ಪ್ರಮಾಣದ ಕೆಲಸದಲ್ಲಿ ತೊಡಗಿಸಿಕೊಂಡಿದ್ದೀರಿ. ನಿಮ್ಮ ಬಗೆಗೆ ನನ್ನ ವಿಶ್ವಾಸ - ಅಭಿಮಾನ ಇಮ್ಮಡಿಗೊಂಡಿದೆ. ನಿಮಗೆ ಎಲ್ಲ ಶುಭವಿರಲಿ.

*ಬೆಂಗಳೂರು*
*೧೮.೦೭.೦೪*

***ಸಾಪ್ತಾಹಿಕ ವಿಜಯ***
*ವಿಜಯ ಕರ್ನಾಟಕ*

... ಸಾವಿರದ ಒಂದು ಪತ್ರಗಳ ಕಥೆ ಬರೀ ಸಂಕೇತಿ ಸಮುದಾಯಕ್ಕಷ್ಟೇ ಸೀಮಿತಗೊಂಡಿದೆ ಎಂಬುದನ್ನು ಕ್ಷಣಕಾಲ ಮರೆತು ನೋಡಿದರೆ, *ಈ* ಪತ್ರಗಳು ಒಂದು ಕಾಲಘಟ್ಟದ ಬದುಕಿನ ಚಿತ್ರವನ್ನು ಮೂಡಿಸುವ ರೀತಿ ಅನನ್ಯ. ಪತ್ರಗಳು ಇಲ್ಲಿ ಪಾತ್ರಗಳಾಗಿವೆ; ಇಷ್ಟನ್ನು ಹೇಳಿ ಅಷ್ಟನ್ನು ಊಹೆಗೆ ಬಿಟ್ಟು ವಿಶಿಷ್ಟ ಸಾಹಿತ್ಯ ಕೃತಿಗಳಾಗಿ ಪರಿಣಮಿಸಿವೆ...

*RDES, ಉಪನಿರ್ದೇಶಕರವರ ಕಛೇರಿ*
*ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆ, ಹಾಸನ*

***ಡಾ. ಕೆ. ಕೃಷ್ಣಮೂರ್ತಿ***
*ಸಹಾಯಕ ನಿರ್ದೇಶಕರು*

. . . ಸದಾಕಾಲ ಸವಿಯಬಹುದಾದಷ್ಟು ಸವಿಯ ಖನಿಯನ್ನು ಸಾವಿರದ ಒಂದು ಪತ್ರಗಳ ಕಥೆ ಮುಖಾಂತರ ನೀಡಿದ್ದೀರಿ. ಬಹಳ ಸಂತೋಷ. ಧೈರ್ಯ ಮತ್ತು ನಾಜೂಕುತನದಿಂದ ಹೊಸ ಸಾಹಿತ್ಯ ಪ್ರಕಾರಕ್ಕೆ ಮೂರ್ತರೂಪ ಕೊಟ್ಟಿದ್ದೀರಿ. ಚಾಚಾ ನೆಹರೂ, ಮೂರ್ತಿರಾಯರು, ಗೋಕಾಕರ ಸಾಹಿತ್ಯಮಾಲೆಯನ್ನು ಪ್ರಸ್ತಾಪಿಸಿ ಹೊಸ ಪ್ರಕಾರದ ಮೂರ್ತರೂಪದ ಚಿತ್ರಕ್ಕೆ ನಿಮ್ಮದೇ ಆಕರ್ಷಕ ಬಣ್ಣ ಸಕಾಲಿಕವಾಗಿ ನವಿರಾಗಿ ಮೂಡಿಸುವುದರಲ್ಲಿ ಸಫಲರಾಗಿದ್ದೀರಿ.

. . . "ಸಾವಿರದ ಒಂದು ಪತ್ರಗಳ ಕಥೆ" ಶೀರ್ಷಿಕೆಯೂ ಪ್ರಚೋದಾತ್ಮಕವಾಗಿದೆ. "ಮಣ್ಣಿನ ಜತೆ ಓಡಾಟ, ಗಿಡದ ಜತೆ ಉಸಿರಾಟ" ಎಂಬ ಘೋಷಣೆ ತಮ್ಮ "ಸಂಕೇತಿ ಕೃಷಿ" ಬೃಹತ್ ಹೊತ್ತಗೆಯ ಸಂಕೇತ ಎಂದು ನಾನು ಭಾವಿಸಿ ಅದನ್ನು ಆಸ್ವಾದಿಸಲು ತುದಿಗಾಲಲ್ಲಿ ನಿಂತಿದ್ದೇನೆ. ಹಲವಾರು ವರ್ಷಗಳು ಅವರ ಕೃಷಿಯ ಒಡನಾಟದಲ್ಲಿ ಇದ್ದ ನನಗೆ ಆ ಕುರಿತು ಅಪಾರ ಗೌರವ, ಆದರ, ಅಭಿಮಾನವಿದೆ. ಆ ವಿಚಾರದಲ್ಲಿ ಅವರುಗಳಿಗೆ ಇರುವ ಮಮತೆ, ಪ್ರೀತಿ, 'ಕೃಷಿಯು ಹಣ ಗಳಿಸುವ ಕಾರ್ಖಾನೆಯಲ್ಲ, ನೆಮ್ಮದಿಯ ನಿರ್ಲಿಪ್ತತೆಯ ತೃಪ್ತಿಯ ತಪೋಭೂಮಿ' ಎನ್ನುವ ಅವರುಗಳ ಭಾವನೆಗಳಿಗೆ ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳು.

*ಕೆ.ಆರ್.ಸಾಗರ*

***ಪಿ.ಗಣಪತಿ***
*ನಿವೃತ್ತ ಎಕ್ಸಿಕ್ಯುಟಿವ್ ಇಂಜಿನಿಯರ್*

. . . ಸಂಕೇತಿ ಅಧ್ಯಯನದ ಎರಡನೆಯ ಸಂಪುಟವನ್ನು ಓದಿ ಮುಗಿಸಿದೆ. ಬಹಳ ಅತ್ಯುತ್ತಮವಾಗಿದೆ. ನಿಮ್ಮ ಶ್ರಮಕ್ಕೆ ಧನ್ಯವಾದಗಳು ಹಾಗೂ ಚಿರಋಣಿ. ಒಂದು ಅಮೂಲ್ಯವಾದ ಸಾಧನೆ. ವಿಶೇಷವಾಗಿ ಪೂಜ್ಯ ಶ್ರೀ ಶ್ರೀಕಂಠಕುಮಾರಸ್ವಾಮಿಗಳ ಕ್ರಾಂತಿಕಾರಿ ಪತ್ರಗಳು ಅಮೋಘ. *ಈ* ಕಾಲದ ಗೃಹಸ್ಥರ ಹಲವಾರು ಬವಣೆ ಹಾಗೂ ಅನುಮಾನಗಳ ಮನಸ್ಸಿನ ತೊಳಲಾಟಕ್ಕೆ ಪರಿಹಾರ ಸಿಕ್ಕುತ್ತದೆ. ಆದರೂ ಕೆಲವು ವಿಷಯಗಳಲ್ಲಿ ಆಧುನಿಕ ಗೃಹಸ್ಥರಿಗೆ ಅವರ ಅನಿಸಿಕೆಗಳು ಮಲಗುವವನಿಗೆ ಹಾಸಿಗೆ ಹಾಸಿದಂತಾಗುವುದೇನೋ ಎಂಬ ಶಂಕೆ ಉಂಟಾಗುತ್ತದೆ. ಇವುಗಳನ್ನು ಮುಖತಃ ಮಾತನಾಡಬೇಕು . . .

ಮತ್ತೂರು

**ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನೀ**

. . . ಇದು ಭಾರೀ ಸಾಹಸವೇ ಸೈ. ಬೇರೆಯವರಿಂದ ಸಾಧ್ಯವಿಲ್ಲದ್ದು. ನಿಮ್ಮ ಎರಡೂ ಪುಸ್ತಕ ಅಲ್ಲಲ್ಲಿ ನೋಡಿದೆ. ತುಂಬಾ ಚೆನ್ನಾಗಿ ಬಂದಿದೆ. ಹಳೇ ಪತ್ರಗಳ ಆ ಶೈಲಿ, ಆಶೀರ್ವಾದ, ನಮಸ್ಕಾರ, ಕೋಪ, ಪ್ರೀತಿ, ವಿನೋದ ನೋಡಿದಾಗ ಆನಂದವಾಗುತ್ತೆ. ನಿಮಗೆ ಈ ಯೋಚನೆ ಹೇಗೆ ಬಂತು? ಗಾಂಧೀಜೀ ಪತ್ರದಿಂದಲೇ? . . .

United Kingdom **Dr. R.S.S. Krishnamurthy, MBBS.,**
General Medical Practitioner

I tried to go through the enormous work in bringing out our 'SANKETHI ADHYAYANA' and I felt that it is an authentic reflection of our culture and people. The quality of information is of highest standard. The amount of information is abundant. The outcome is very appealing.
I sincerely thank and I am grateful to Mr. Pranatharthiharan and to all others who are responsible for this great gift to our community.

## ಸಂಕೇತಿ: ಒಂದು ಅಧ್ಯಯನ

*Bangalore* ***R.S. Lakshmikanta***

... The book is very good and we have to carefully preserve it as whoever sees it, would like to take it for reading

*ಮಾರ್ಚ್, 2004* ***ಅನಾಮಿಕ***
*ಸಂಕೇತಿ ಸಂಗಮ*

. . . ಶ್ರೀ ಪ್ರಣತಾರ್ತಿಹರನ್ ಹೊರತಂದಿರುವ 'ಸಂಕೇತಿ: ಒಂದು ಅಧ್ಯಯನ' ಸಂಕೇತಿಗಳನ್ನು ಕುರಿತು ಯಾರಾದರೂ ಓದಿದಲ್ಲಿ ಅಚ್ಚರಿ ಮೂಡಿಸಿ *ಈ* ಜನಾಂಗಕ್ಕೆ ಗೌರವ ನೀಡುವುದರಲ್ಲಿ ಅನುಮಾನವಿಲ್ಲ. ಅಷ್ಟರಮಟ್ಟಿಗೆ *ಈ* ಪ್ರಾಚೀನ ಜನಾಂಗದ ವೈವಿಧ್ಯಮಯ ಬದುಕು ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ . . .

*ಹಾಸನ* ***ಕೆ.ಎಸ್. ಗಿರಿಜಾಂಬಾ***
*16.2.2003* *ಸಂಪಾದಕರು, ವಿಪ್ರವಾಹಿನಿ*

ಸಮುದಾಯ ಅಧ್ಯಯನ ಕೇಂದ್ರದ *ಈ* ಕಾಯಕ ಶ್ಲಾಘನೀಯವಾದುದು. ಬ್ರಾಹ್ಮಣ ಸಮುದಾಯದಲ್ಲಿ ಸುಮಾರು 64 ಉಪಪಂಗಡಗಳಿದ್ದು ಆ ಎಲ್ಲ ಉಪಪಂಗಡಗಳ ಇತಿಹಾಸವನ್ನು ದಾಖಲಿಸುವ ಕೆಲಸವಾಗಬೇಕು.

*ಬೆಂಗಳೂರು* ***ಬಿ.ಕೆ. ವಿಶ್ವನಾಥರಾವ್***
*ಶಿಕ್ಷಣತಜ್ಞರು*

'ಸಂಕೇತಿ: ಒಂದು ಅಧ್ಯಯನ' ಕೃತಿಯು ಸಂಕೇತಿಗಳ ಬಗೆಗೆ ಸಮಗ್ರ ಮಾಹಿತಿಯನ್ನೊಳಗೊಂಡ ವಿಶ್ವಕೋಶವೇ ಆಗಿದೆ.

*ಮೈಸೂರು* ***ಪ್ರೊ.ಜಿ.ಟಿ.ನಾರಾಯಣರಾವ್***
***ನಿವೃತ್ತ ಪ್ರಾಧ್ಯಾಪಕರು***

... ಪ್ರೀತಿ ಶ್ರದ್ಧೆ ಸಮವಾಗಿ ಬೆರೆತಾಗ ಹರನ್ ಮೈದಳೆಯುವರೇ! ಇಂಥ ಮೌಲಿಕ ಕೃತಿಸಮುಚ್ಚಯದ 'ಸಂಕೇತಿ ಒಂದು ಅಧ್ಯಯನ' ಮತ್ತು 'ಶತಮಾನದ ಪತ್ರಗಳು' ಹಿನ್ನೆಲೆಯ ಚೇತನವನ್ನು ಬಾಕಿ ಹೇಗೆ ಬಣ್ಣಿಸಲಿ...

# ಸಮುದಾಯ ಅಧ್ಯಯನ ಕೇಂದ್ರ

## ಪೋಷಕರ ವಿವರ

### ಮಹಾಸಂಪುಟ ಪ್ರಾಯೋಜಕರು

ಶ್ರೀಮತಿ ಕೆ. ಕೆ. ವಿಜಯಲಕ್ಷ್ಮಿ, ಡಾ. ಆರ್. ಎಸ್. ಚಂದ್ರಶೇಖರಮೂರ್ತಿ, ಯು.ಎಸ್.ಎ.
ಶ್ರೀಮತಿ ಗಂಗಮ್ಮ, ವಿದ್ವಾನ್ ಕೆ.ಜಿ.ಸುಬ್ರಹ್ಮಣ್ಯ ಶಾಸ್ತ್ರೀ, ರಾಮನಾಥಪುರ
ಶ್ರೀಮತಿ ಬಿ.ವಿ. ಸೀತಾ, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು
ಭಾರತೀಯ ವಿದ್ಯಾಭವನ ಶಾಖೆಯ ಅಭಿಮಾನಿಗಳು, ಲಂಡನ್
ಶ್ರೀಮತಿ ಪಾರ್ವತಮ್ಮ, ವಿದ್ವಾನ್ ಬಿ.ಎಸ್. ಸುಬ್ಬರಾಯ ಶಾಸ್ತ್ರೀ, ಬಸವಾಪಟ್ಟಣ
ಶ್ರೀಮತಿ ಸುಂದರಮಣಿ, ಶ್ರೀ ನಟೇಶ್ ಮಗ್ಗೆ, ಯು.ಎಸ್.ಎ.
ಡಾ. ಸುಪ್ರಿಯಾ, ಡಾ. ಎಸ್. ಶ್ರೀಧರ್, ಯು.ಎಸ್.ಎ.
ಶ್ರೀಮತಿ ವಿನಯ, ಡಾ. ಜಯ್.ಕೆ. ರಂಗಪ್ಪ, ಯು.ಎಸ್.ಎ.

### ಮಹಾದಾನಿಗಳು

ಶ್ರೀಮತಿ ರಾಜಲಕ್ಷ್ಮೀ, ಮತ್ತೂರು ಶ್ರೀ ಕೃಷ್ಣಮೂರ್ತಿ, ಬೆಂಗಳೂರು

### ಮಹಾಪೋಷಕರು

ಶ್ರೀಮತಿ ಕಮಲಮ್ಮ, ಶ್ರೀ ಕೆ. ನಾಗರಾಜ್, ಬೆಂಗಳೂರು
ಶ್ರೀಮತಿ ಜಯಲಕ್ಷ್ಮೀ, ಶ್ರೀ ಕೆ. ಸುಬ್ಬರಾಯನ್, ಬೆಂಗಳೂರು
ಶ್ರೀಮತಿ ಸಾವಿತ್ರಮ್ಮ, ಶ್ರೀ ವೈ.ಎನ್. ನರಸಿಂಗರಾವ್, ಮೈಸೂರು
ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ, ಶ್ರೀ ಎಂ.ಎಸ್. ರಾಮರಾವ್, ಮೈಸೂರು
ಶ್ರೀಮತಿ ಲಕ್ಷ್ಮೀ, ಶ್ರೀ ಎಚ್.ಕೆ. ವೆಂಕಟರಾಮಯ್ಯ, ಮೈಸೂರು
ಶ್ರೀಮತಿ ಶಾರದಾಬಾಯಿ, ಶ್ರೀ ಹರಿ ಆಚಾರ್ಯ, ಮಂಡ್ಯ
ಶ್ರೀಮತಿ ಎಚ್.ಎನ್. ಅನಸೂಯಮ್ಮ, ಶ್ರೀ ವೈ.ಎನ್.ಸತ್ಯನಾರಾಯಣ, ಹಾಸನ
ಶ್ರೀಮತಿ ಎಂ.ಎಸ್. ರುಕ್ಮಿಣಿ, ಶ್ರೀ ಎಚ್.ಆರ್.ಸೂರ್ಯನಾರಾಯಣ, ಮೈಸೂರು

### ಪೋಷಕರು

ಶ್ರೀಮತಿ ಶಾಂತಾ, ಶ್ರೀ ಕೆ. ಲಕ್ಷ್ಮಣರಾವ್, ಮೈಸೂರು
ಶ್ರೀಮತಿ ಲಕ್ಷ್ಮೀಕಿರಣ, ಶ್ರೀ ಜಿ.ಆನಂದಕುಮಾರ್, ಮೈಸೂರು
ಶ್ರೀಮತಿ ಕೆ.ಎನ್. ಸುಶೀಲಮ್ಮ, ಶ್ರೀ ಆರ್.ಎಸ್. ವಾಸುದೇವಮೂರ್ತಿ, ಮೈಸೂರು
ಶ್ರೀಮತಿ ಎಂ.ಗಾಯತ್ರಿ, ಶ್ರೀ ದೇವರಾಜು, ಮಂಡ್ಯ
ಶ್ರೀಮತಿ ಸಾವಿತ್ರಮ್ಮ, ಶ್ರೀ ಎಸ್.ಸತ್ಯನಾರಾಯಣರಾವ್, ಮಂಡ್ಯ
ಶ್ರೀಮತಿ ಲಲಿತಮ್ಮ, ಶ್ರೀ ಎಚ್.ಕೆ.ಸುಬ್ಬಣ್ಣ, ಹಾಸನ

ಶ್ರೀಮತಿ ಸುಕನ್ಯಾ, ಶ್ರೀ ಲಕ್ಷ್ಮೀಶ, ಹಾಸನ
ಶ್ರೀಮತಿ ಭಾಗ್ಯ, ಶ್ರೀ ಸೂರ್ಯನಾರಾಯಣ, ಹಾಸನ
ಶ್ರೀಮತಿ ಸತ್ಯವತಿ, ಶ್ರೀ ಹರವೆ ಕೇಶವಮೂರ್ತಿ, ಮೈಸೂರು
ಡಾ|| ಆರ್. ಇಂದಿರಾ, ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು), ಮೈಸೂರು
ಶ್ರೀಮತಿ ಕೆ.ಎಸ್.ನಾಗಮ್ಮ, ಶ್ರೀ ಬಿ.ಕೆ. ವಿಶ್ವನಾಥರಾವ್, ಬೆಂಗಳೂರು
ಶ್ರೀಮತಿ ಸರಳ, ಶ್ರೀ ಬಿ.ಕೆ. ರಾಮಚಂದ್ರ, ಬಸವಾಪಟ್ಟಣ
ಶ್ರೀಮತಿ ವಾಣಿ, ಪ್ರೊ|| ಎಂ.ಎನ್.ಚಂದ್ರಶೇಖರ್, ಬೆಂಗಳೂರು
ಶ್ರೀಮತಿ ಎಸ್.ಮೀರಾ, ಶ್ರೀ ಶ್ರೀಧರ್, ಯು.ಎಸ್.ಎ.
ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ಕೆ.ವಿ. ನಾಗರಾಜ್, ಮೈಸೂರು
ಶ್ರೀಮತಿ ಸಂಪತ್‌ಲಕ್ಷ್ಮಿ, ಶ್ರೀ ಸಿ.ಆರ್. ನಾಗರಾಜ್, ಮೈಸೂರು
ಶ್ರೀಮತಿ ವೀಣಾ ಎನ್, ಶ್ರೀ ನಾರಾಯಣ ಸುಬ್ಬರಾವ್, ಅಮೆರಿಕಾ
ಶ್ರೀಮತಿ ಪೂರ್ಣಿಮಾ, ಶ್ರೀ ಐ.ಎನ್. ವೆಂಕಟಸುಬ್ಬರಾವ್, ಐಚನಹಳ್ಳಿ
ಶ್ರೀಮತಿ ಎಚ್.ಎಂ. ಜಯಶ್ರೀ ಶಾಸ್ತ್ರಿ, ಶ್ರೀಹನಸೋಗೆ ಎಸ್.ಶಾಸ್ತ್ರಿ, ಯುಎಸ್‌ಎ
ಶ್ರೀಮತಿ ಪಂಕಜ, ಪ್ರೊ|| ಕೆ.ಎಸ್. ಕೃಷ್ಣಮೂರ್ತಿ, ಕೇರಳಾಪುರ
ಶ್ರೀಮತಿ ನಿರಂಜಿನಿ, ಶ್ರೀ ಕೆ.ಎಸ್. ಬಾಲಚಂದ್ರ, ಕೇರಳಾಪುರ
ಶ್ರೀಮತಿ ವಾಸಂತಿ, ಶ್ರೀ ಜಿ. ಮಯೂರಸಿಂಹ, ಯುಎಸ್‌ಎ
ಶ್ರೀಮತಿ ಗೀತಾ, ಶ್ರೀ ಕೆ.ವಿ. ನಟೇಶ್, ಚನ್ನರಾಯಪಟ್ಟಣ
ಟಿ.ಬಿ.ಎಸ್. ವಠಾರ ಟ್ರಸ್ಟ್ (ರಿ.), ಬಸವಾಪಟ್ಟಣ
ಶ್ರೀಮತಿ ಆರ್.ಎಸ್. ಸಾವಿತ್ರಿ, ಶ್ರೀ ಬಿ.ವಿ. ವೆಂಕಟನಾರಾಯಣ, ಮೈಸೂರು

## ದಾನಿಗಳು

ಶ್ರೀಮತಿ ಪ್ರಭಾಮೂರ್ತಿ, ಶ್ರೀ ಬಿ.ಕೆ. ಕೇಶವಮೂರ್ತಿ, ಮೈಸೂರು
ಶ್ರೀಮತಿ ಸರೋಜ, ಶ್ರೀ ಎಚ್.ಆರ್. ಹಿರಿಯಣ್ಣ, ಮೈಸೂರು
ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ನಾಗೇಶ್, ಬೆಂಗಳೂರು
ಶ್ರೀಮತಿ ಕೆ.ಎಸ್.ಲೀಲಾವತಿ, ಶ್ರೀ ಕೆ.ಎಸ್. ಶಾಮಣ್ಣ, ಮೈಸೂರು
ಶ್ರೀಮತಿ ಲಕ್ಷ್ಮಿ, ಶ್ರೀ ಎಚ್.ಕೆ. ಸತ್ಯನಾರಾಯಣ, ಮೈಸೂರು
ಶ್ರೀಮತಿ ಪಾರ್ವತಿ, ಶ್ರೀ ಪಿ.ಆರ್. ಹರಿಹರನ್, ಮೈಸೂರು
ಶ್ರೀಮತಿ ರಾಧಾ, ಶ್ರೀ ಆರ್.ಎಸ್. ಅನಂತನಾರಾಯಣ, ಬೆಂಗಳೂರು
ಶ್ರೀಮತಿ ಶಶಿಕಲಾ, ಶ್ರೀ ವೆಂಕಟೇಶಮೂರ್ತಿ, ಮೈಸೂರು
ಶ್ರೀಮತಿ ಲೀಲಾವತಿ, ಶ್ರೀ ಜಿ.ಕೆ. ನರಸಿಂಹಮೂರ್ತಿ, ಮಂಡ್ಯ
ಶ್ರೀಮತಿ ಸುಧಾ, ಶ್ರೀ ಎ.ಎಸ್.ಅರುಣಕುಮಾರ್, ಮಂಡ್ಯ
ಶ್ರೀಮತಿ ಪ್ರೇಮಲತಾ, ಶ್ರೀ ಎಂ.ಆರ್.ರಾಮಶೇಷ, ಮಾದಾಪುರ
ಶ್ರೀಮತಿ ಐ.ವಿ.ರಮಾಮಣಿ, ಶ್ರೀ ಕೆ.ಎಸ್.ನಾಗರಾಜ, ಪಿರಿಯಾಪಟ್ಟಣ
ಶ್ರೀಮತಿ ಲಲಿತಮ್ಮ, ಶ್ರೀ ಕೇಶವಮೂರ್ತಿ, ಕೊಣನೂರು

# ಸಮುದಾಯ ಅಧ್ಯಯನ ಕೇಂದ್ರ

**ಗೌರವಾಧ್ಯಕ್ಷರು**

ಬಿ. ಎನ್. ವಿ. ಸುಬ್ರಹ್ಮಣ್ಯ

**ಅಧ್ಯಕ್ಷರು**

ಆರ್. ವಿ. ಶ್ರೀನಿವಾಸಯ್ಯ

**ಕಾರ್ಯದರ್ಶಿ**

ಡಾ|| ಪ್ರಣತಾರ್ತಿಹರನ್

***ಖಜಾಂಚಿ***

ಎಚ್. ಎನ್. ರಘುನಾಥ್

***ಪುಸ್ತಕ ಸಲಹಾ ಸಮಿತಿ***

ಪ್ರೊ|| ಎ. ವಿ. ನರಸಿಂಹಮೂರ್ತಿ
ಪ್ರೊ|| ಜಿ. ಅಶ್ವತ್ಥನಾರಾಯಣ
ಡಾ. ಎಂ. ಎಲ್. ಲಲಿತಮ್ಮ
ಎನ್. ಎಸ್. ಶಾರದಾ ಪ್ರಸಾದ್
ಡಾ|| ಟಿ. ವಿ. ಸತ್ಯನಾರಾಯಣ
ವಿದ್ವಾನ್ ಎಚ್. ವಿ. ನಾಗರಾಜರಾವ್
ವಿದ್ವಾನ್ ಡಾ|| ಆನಂದತೀರ್ಥ ನಾಗಸಂಪಿಗೆ
ಡಾ|| ಮೀರಾಮೂರ್ತಿ
ಡಾ|| ಕೆ. ಅನಂತರಾಮು
ಕೆ. ರಾಘವೇಂದ್ರರಾವ್

***ಸಂಚಾಲನ ಸಮಿತಿ***

ಬಿ. ವಿ. ವೆಂಕಟನಾರಾಯಣ
ಎಸ್. ಕೆ. ಲಕ್ಷ್ಮೀನಾರಾಯಣ (ಬಾಬು)
ಕೇಶವಮೂರ್ತಿಹರವೆ
ಡಾ. ಎ.ಎಸ್. ಚಂದ್ರಶೇಖರ್
ಆರ್.ಎಸ್. ಅನಂತನಾರಾಯಣ
ಎಂ. ಕೆ. ವಿಜಯಲಕ್ಷ್ಮಿ
ಡಾ|| ಬಿ. ವಿ. ಸುಧಾಮಣಿ
ಡಾ|| ವಿಜಯಾಹರನ್
ಎಸ್. ನಾಗೇಶ್ (ಪೂಮಗಾಮೆ ಗೋಪಿ)

ಜ್ಞಾನಗಂಗೆಗೆ ದಂಡೆಗಳಿಲ್ಲ ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು. ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮ ಗುಣಸಂಪನ್ನರಾಗುವುದು. ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ, ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ. ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಇದೀಗ ಓದುಗರ ಮುಂದಿರುವುದು ಈಗಾಗಲೇ ಸಾರ್ವಜನಿಕರು ಕೆಲ ಗಣ್ಯರಿಗೆ ಸಮರ್ಪಿಸಿರುವ ಅಭಿನಂದನ ಗ್ರಂಥಗಳ ಸಂಕಲನ. ಇಲ್ಲಿ ರೂಪಿತವಾಗಿರುವುದು ಜೀವನಚರಿತ್ರೆಯಲ್ಲ, ಬದಲಿಗೆ ಬಾಳಿನ ಆಶಯಚಿತ್ರ. ಇಲ್ಲಿ ಬದುಕಿನ ಪೂರ್ಣವಿವರವಿಲ್ಲ ; ಬದಲಿಗೆ ಒಂದು ಬಾಳಿನ ಒಂದೋ ಹಲವೋ ಆದರ್ಶಗಳ ಗುಣಗಾನವಿದೆ ; ಅದು ಸಂಭ್ರಮ, ಉಲ್ಲಾಸ, ಕೊನೆಗೆ ಆರಾಧನೆಯ ಪ್ರಭಾವಲಯವನ್ನು ಒಡಮೂಡಿಸಿಕೊಂಡಿದೆ. ಇಲ್ಲಿರುವುದು ದತ್ತಾಂಶಗಳ ವೈಭವವಲ್ಲ, ಒಂದೇ ಗುರಿಗಾಗಿ ಮಾಡಿದ ತಪಸ್ಸಿನ ಪ್ರಭಾವಲಯ.

ಪ್ರಣತಾರ್ತಿಹರನ್

ಪ್ರಧಾನ ಸಂಪಾದಕ

ಸಮುದಾಯ ಅಧ್ಯಯನ ಕೇಂದ್ರ

ಮೈಸೂರು